ಶ್ರೀಃ.

ಶ್ರೀ ಕೃಷ್ಣ ಪರಬ್ರಹ್ಮಣೇ ನಮಃ.

ಟೀಕಾ ತಾತ್ಪರ್ಯ ಸಹಿತ

ಶ್ರೀ ಭಾಗವತ ಮಹಾ ಪುರಾಣ

ಪ್ರಥಮ ದ್ವಿತೀಯ ಸ್ಕಂಧಗಳು.



ಮೋಟಗಾನಹಳ್ಳಿ

ರಾಮಶೇಷಶಾಸ್ತ್ರಿಗಳಿಂದ

ಪ್ರಕಟವಾಯಿತು.

ಬೆಂಗಳೂರು

ಕೆ. ಎಸ್. ಕೃಷ್ಣಯ್ಯರ್ ಬಿ. ಎ., ಯವರ

" ಐರಿಷ್ " ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

೧೯೧೬ನೆಯ ಮಾರ್ಚಿ ತಿಂಗಳು.

ವಿಷಯಾನುಕ್ರಮಣಿಕೆ

ಅಧ್ಯಾಯ ಸಂಖ್ಯೆ.	ವಿಷಯ.	ಪುಟಸಂಖ್ಯೆ.
	ಪ್ರಥಮ ಸ್ಕಂಧ	
	ಮಂಗಳ ಶ್ಲೋಕಗಳು.	೧
೧.	ಶೌನಕಾದಿಋಷಿಗಳು ಸೂತಪೌರಾಣಿಕನನ್ನು ಬೆಸಗೊಳ್ಳುವುದು	೯
೨.	ಸೂತನು ಶೌನಕಾದಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುವುದು	೧೫
೩.	ಭಗವಂತನು ಮಾಡಿದ ಅವತಾರಗಳು	೨೮
೪.	ವ್ಯಾಸಮುನಿಯು ಭಾಗವತವನ್ನು ರಚಿಸುವುದಕ್ಕೆ ಕಾರಣ	೪೧
೫.	ನಾರದಮುನಿಯು ವ್ಯಾಸಮುನಿಯನ್ನು ಸಂತೈಸಿದುದು	೫೧
೬.	ಹರಿಕೀರ್ತನದಿಂದ ನಾರದಮುನಿಗುಂಟಾದ ಮಹಿಮೆ	೬೮
೭.	ಅರ್ಜುನನು ಅಶ್ವತ್ಥಾಮಾಚಾರ್ಯನನ್ನು ಅವಮಾನಗೊಳಿಸಿದುದು	೮೦
೮.	ಶ್ರೀಕೃಷ್ಣಮೂರ್ತಿಯು ಪರೀಕ್ಷಿದ್ರಾಜನನ್ನು ಬದುಕಿಸಿದುದು	೯೭
೯.	ಭೀಷ್ಮನು ಧರ್ಮರಾಜನಿಗೆ ಧರ್ಮೋಪದೇಶಮಾಡಿ ಶ್ರೀಕೃಷ್ಣನನ್ನು ಸ್ತುತಿಸಿ ಮುಕ್ತನಾದುದು	೧೧೩
೧೦	ಶ್ರೀಕೃಷ್ಣಮೂರ್ತಿಯು ದ್ವಾರಕೆಗೆ ಪ್ರಯಾಣಮಾಡಿದುದು	೧೨೯
೧೧	ಶ್ರೀಕೃಷ್ಣಮೂರ್ತಿಯು ದ್ವಾರಕಾನಗರವನ್ನು ಸೇರಿದುದು	೧೪೨
೧೨	ಪರೀಕ್ಷಿನ್ಮಹಾರಾಜನ ಜನನ	೧೫೫
೧೩	ವಿದುರನ ಮಾತಿನಿಂದ ಧೃತರಾಷ್ಟ್ರನು ವಾನಪ್ರಸ್ಥನಾದುದು	೧೬೬
೧೪	ಧರ್ಮರಾಜನು ಉತ್ಪಾತಗಳನ್ನು ಕಾಣುವುದು	೧೮೫
೧೫	ಪಾಂಡವರು ಸ್ವರ್ಗಾರೋಹಣವನ್ನು ಮಾಡುವುದು	೧೯೭
೧೬	ಪರೀಕ್ಷಿನ್ಮಹಾರಾಜನ ರಾಜ್ಯಭಾರ	೨೧೬
೧೭	ಪರೀಕ್ಷಿದ್ರಾಜನು ವೈರಾಗ್ಯವನ್ನು ಪಡೆಯುವುದು	೨೨೭
೧೮	ಪರೀಕ್ಷಿದ್ರಾಜನಿಗೆ ಶಾಪಬಂದುದು	೨೪೧
೧೯	ಪರೀಕ್ಷಿನ್ಮಹಾರಾಜನು ಪ್ರಾಯೋಪವೇಶಮಾಡಿದುದು	೨೫೭
	ದ್ವಿತೀಯ ಸ್ಕಂಧ	
೧.	ವಿರಾಡ್ರೂಪಧ್ಯಾನ.	೧
೨.	ಅಂತರ್ಯಾಮಿ ಧ್ಯಾನಕ್ರಮ	೧೫
೩.	ಭಗವತ್ಕಥೆಯನ್ನು ಕೇಳುವುದರಲ್ಲಿ ಆಸಕ್ತಿಯು	೩೭
೪.	ಸೃಷ್ಟಿಮೊದಲಾದವುಗಳನ್ನು ಪ್ರಶ್ನೆಮಾಡುವುದು	೪೧
೫.	ವಿರಾಟ್ ಸೃಷ್ಟಿ.	೫೦
೬.	ಪುರುಷ ಸೂಕ್ತಾರ್ಥವು	೬೪
೭.	ಭಗವಂತನ ಲೀಲಾವತಾರಗಳು	೮೨
೮.	ಪರೀಕ್ಷಿನ್ಮಹಾರಾಜನ ಪ್ರಶ್ನೆಗಳು	೧೦೭
೯.	ಶ್ರೀ ಹರಿಯು ಬ್ರಹ್ಮನಿಗುಪದೇಶಿಸಿದ ಭಾಗವತವು	೧೧೬
,,	ಮೂಲ ಭಾಗವತ	೧೨೭
೧೦.	ಶ್ರೀಭಾಗವತ ಮಹಾಪುರಾಣ ವಿವರಣೆ	೧೩೩

ಪ್ರಥಮ ದ್ವಿತೀಯ ಸ್ಕಂಧಗಳ ವಿಷಯಾನುಕ್ರಮಣಿಕೆ ಸಮಾಪ್ತ

ಶ್ರೀ.

ಶ್ರೀ ಕೃಷ್ಣಾಯ ನಮಃ

ಈ ಗ್ರಂಥವು ಅನೇಕ ವ್ಯಾಖ್ಯಾನಗಳ ಸಹಾಯವನ್ನು ಪಡೆದು ಟೀಕಿಸಲ್ಪಟ್ಟಿರುವುದರಿಂದ ಟಿಪ್ಪಣಿಗಳಲ್ಲಿರುವ ಆ ಆ ವ್ಯಾಖ್ಯಾನಾಭಿಪ್ರಾಯಗಳನ್ನು ತಿಳಿಯುವುದಕ್ಕಾಗಿ ವಾಚಕ ಮಹಾಶಯರು ಇದರಡಿ ವಿವರಿಸಿರುವ ವ್ಯಾಖ್ಯಾನಗಳ ಹೆಸರುಗಳನ್ನೂ ಅವುಗಳ ಸಂಕೇತಾಕ್ಷರಗಳನ್ನೂ ಸಹ ನೆನಪಿನಲ್ಲಿಡಬೇಕು.

(೧) ಭಾ. ಭಾವಾರ್ಥದೀಪಿಕಾ = ಶ್ರೀಧರಸ್ವಾಮಿಕೃತ (ಅದ್ವೈತವ್ಯಾಖ್ಯಾನ)
(೨) ವೀ. ಭಾಗವತಚಂದ್ರಿಕಾ = ವೀರರಾಘವಾಚಾರ್ಯಕೃತ (ವಿಶಿಷ್ಟಾದ್ವೈತವ್ಯಾಖ್ಯಾನ)
(೩) ವಿ. ಪದರತ್ನಾವಲೀ = ವಿಜಯಧ್ವಜತೀರ್ಥಕೃತ (ದ್ವೈತವ್ಯಾಖ್ಯಾನ)
(೪) ಸಿ. ಸಿದ್ಧಾಂತದೀಪಿಕಾ = ಶ್ರೀಶುಕದೇವಕೃತ (ಭಾಗವತಮತವ್ಯಾಖ್ಯಾನ)
(೫) ಸು. ಸುಬೊಧಿನೀ = ಶ್ರೀವಲ್ಲಭಾಚಾರ್ಯಕೃತ (ವಲ್ಲಭಮತವ್ಯಾಖ್ಯಾನ)
(೬) ದೀ. ದೀಪಿನೀ = ಶ್ರೀರಾಧಾರಮಣದಾಸಕೃತ
(೭) ಕ್ರ. ಕ್ರಮಸಂದರ್ಭ = ಶ್ರೀಗೋಸ್ವಾಮಿಕೃತ
(೮) ಸಾ. ಸಾರಾರ್ಥದರ್ಶಿನೀ = ಶ್ರೀವಿಶ್ವನಾಥಚಕ್ರವರ್ತಿಕೃತ

: ಶ್ರೀ ಕೃ ಷ್ಣಾ ರ್ಪ ಣ ಮ ಸ್ತು . :



ಶ್ರೀಃ.

ಶ್ರೀ ಕೃಷ್ಣಪರಬ್ರಹ್ಮಣೇನಮಃ.

ಟೀ ಕಾ ತಾ ತ್ಪ ಯ ರ್ ಸ ಹಿ ತ

ಶ್ರೀ ಭಾಗವತ ಮಹಾಪುರಾಣ.

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ ॥
ಇಂದೀವರದಳಶ್ಯಾಮ ಮಿಂದಿರಾನಂದಕಂದಳಂ ।
ವಂದಾರುಜನಮಂದಾರಂ ವಂದೇಹಂ ಯದುನಂದನಂ ॥

ಮ॥ ಜನ್ಮಾದ್ಯಸ್ಯ ಯತೋನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್ ।
ತೇನೇ ಬ್ರಹ್ಮಹೃದಾ ಯ ಆದಿಕವಯೇ ಮುಹ್ಯಂತಿ ಯತ್ಸೂರಯಃ ॥
ತೇಜೋವಾರಿಮೃದಾಂ ಯಥಾವಿನಿಮಯೋ ಯತ್ರ ತ್ರಿಸರ್ಗೋಮೃಷಾ ।
ಧಾಮ್ನಾಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥೧॥

ಅರ್ಥೇಷು - ಆಕಾಶಾದಿ ಪದಾರ್ಥಗಳಲ್ಲಿ, ಅನ್ವಯಾತ್ - ಸದ್ರೂಪವಾಗಿ ನೆಲಸಿರುವದರಿಂದಲೂ, ಇತರತಶ್ಚ-(ಸುಳ್ಳಾದ ಆಕಾಶಪುಷ್ಪಾದಿಗಳಲ್ಲಿ) ಇಲ್ಲದಿರುವುದರಿಂದಲೂ, ಅಥವಾ ಅನ್ವಯಾತ್-(ಮೃತ್ಸುವರ್ಣಾದಿಗಳಂತೆ) ಕಾರಣವಾಗಿರುವುದರಿಂದಲೂ, ಇತರತಶ್ಚ-(ಘಟಕುಂಡಲಾದಿಗಳಂತೆ) ಕಾರ್ಯವಾಗಿರುವುದರಿಂದಲೂ, ಅಥವಾ ಅನ್ವಯಾತ್-ಅನ್ವಯ ವ್ಯಾಪ್ತಿಯಿಂದಲೂ, ಇತರತಶ್ಚ-ವ್ಯತಿರೇಕವ್ಯಾಪ್ತಿಯಿಂದಲೂ, ಅಸ್ಯ-ಇಂದ್ರಿಯಗೋಚರವಾದ ಈ ಪ್ರಪಂಚದ, ಜನ್ಮಾದಿ, ಜನ್ಮ-ಉತ್ಪತ್ತಿಯೇ, ಆದಿ-ಮೊದಲಾದವುಗಳು (ಅಂದರೆ ಹುಟ್ಟು, ಬಾಳು, ಸಾವುಗಳು) ಯತಃ-ಯಾವ ಪರಮೇಶ್ವರನಿಂದ, (ಉಂಟಾಗಿರುವುವೋ) ಯಃ-ಯಾವನು, ಅಭಿಜ್ಞಃ-ಸರ್ವಜ್ಞನೋ, ಯಃ-ಯಾವನು, ಸ್ವರಾಟ್-ತನ್ನಿಂದ ತಾನೇ ಹೊಳೆಯುವನೋ, ಯತ್-ಯಾವ ವೇದದಲ್ಲಿ, ಸೂರಯಃ-ಮಹಾಜ್ಞಾನಿಗಳೂ, ಮುಹ್ಯಂತಿ-ಮೋಹಗೊಳ್ಳುವರೋ ಬ್ರಹ್ಮ-ಅಂತಹ ವೇದವನ್ನು, ಆದಿಕವಯೇ-ಆದಿಪುರುಷನಾದ ಚತುರ್ಮುಖ ಬ್ರಹ್ಮನಿಗೆ, ಹೃದಾ-ಮನಸ್ಸಿನಿಂದಲೇ, ಯಃ-ಯಾವನು, ತೇನೇ-ಪ್ರಕಾಶಗೊಳಿಸಿದನೋ, ಅಥವಾ ಯತ್-ಯಾವ ಬ್ರಹ್ಮವಸ್ತುವಿನಲ್ಲಿ, ಸೂರಯಃ-ಜ್ಞಾನಿಗಳೂ, ಮುಹ್ಯಂತಿ,ಮರುಳಾಗುವರೋ, ಯತ್ರ-ಯಾವ ಪರಮೇಶ್ವರನಲ್ಲಿ, ತ್ರಿಸರ್ಗಃ, ತ್ರಿ-ಆತ್ಮಮಾಯಾಗುಣಗಳಾದ, ತಮೋರಜಸ್ಸತ್ವಗಳ, ಸರ್ಗಃ-ಭೂತ, ಇಂದ್ರಿಯ, ದೇವತಾರೂಪವಾದ ಸೃಷ್ಟಿಯು, ತೇಜೋವಾರಿಮೃದಾಂ-ತೇಜಸ್ಸು, ಜಲ, ಭೂಮಿ ಇವುಗಳ, ವಿನಿಮಯೋಯಥಾ-ಬದಲಾ

ವಣಿಯಂತೆ, ಅಮೃಷಾ-ಸತ್ಯವಾದದ್ದೋ, ಅಥವಾ ಯತ್ರತ್ರಿಸರ್ಗಃಮೃಷಾ-ಈ ಸೃಷ್ಟಿಯೆಂಬುದು ಯಾವ ಪರಮಾತ್ಮನಲ್ಲಿ ಸುಳ್ಳಾಗಿರುವುದೋ, ಸ್ವೇನ-ತನ್ನ, ಧಾಮ್ನಾ-ತೇಜಸ್ಸಿನಿಂದ, ಸದಾ-ಯಾವಾಗಲೂ, ನಿರಸ್ತ-ಹೋಗಲಾಡಿಸಲ್ಪಟ್ಟ, ಕುಹಕಂ-ಮಾಯಾಪ್ರಪಂಚವುಳ್ಳ, ಸತ್ಯಂ-ನಾಶರಹಿತನಾದ, ಪರಂ-ಪರಮೇಶ್ವರನನ್ನು, ಧೀಮಹಿ-ಧ್ಯಾನಿಸುತ್ತೇವೆ.

ಭಾಗವತಚಕೋರಚಂದ್ರಿಕೆ.

ಕಂ॥ ವೆಲ್ಲಾಲವಂಶಮೌಕ್ತಿಕ । ನುಲ್ಲಾಸಿತಸಕಲಸುಜನ ತಲ್ಲಜಹೃದಯಂ ।
ಸಲ್ಲಾಲಿತಕವಿತಾವಿಭ । ವೋಲ್ಲಸಿತಂ ರಾಮಶೇಷಕವಿ ಕವಿಮಾನ್ಯಂ ॥
ಮುನ್ನಿನ ಪರಮಾಚಾರ್ಯರ । ಮನ್ನಿಸುತವರೊರೆದ ಸಂಪ್ರದಾಯಕ್ರಮದಿಂ ।
ಸನ್ನುತಭಾಗವತಾರ್ಥವ । ಕನ್ನಡಸವಿನುಡಿಗಳಿಂದ ವಿವರಿಪನೀಗಳ್ ॥

ಶ್ರೀಮನ್ನಾರಾಯಣ ಮೂರ್ತಿಯ ಅಂಶದಿಂದವತರಿಸಿದ ಭಗವಂತನಾದ ವೇದವ್ಯಾಸಮುನಿಯು ಅನೇಕ ಶಾಸ್ತ್ರಗಳನ್ನೂ, ಪುರಾಣಗಳನ್ನೂ, ಪ್ರಬಂಧಗಳನ್ನೂ ವಿರಚಿಸಿದನು. ಯಾವುದರಿಂದಲೂ ಆತನಿಗೆ ಮನಶ್ಶಾಂತಿಯುಂಟಾಗಲಿಲ್ಲ. ಸಂತೋಷವೂ ತೋರಲಿಲ್ಲ. ಇಂತು ಚಿಂತಿಸುತ್ತಿರಲು ಒಂದುದಿನ ಭಾಗವತೋತ್ತಮನಾದ ನಾರದಮಹಾಮುನಿಯು ಬಂದು, ವ್ಯಾಸಮಹರ್ಷಿಯ ಸ್ಥಿತಿಯನ್ನು ತಿಳಿದು, ಮನಶ್ಶಾಂತಿ ಸಂತೋಷಗಳಿಗೆ ಭಗವದ್ಗುಣವರ್ಣನವೇ ಮುಖ್ಯಸಾಧನವೆಂದುಪದೇಶಿಸಿ ತೆರಳಿದನು. ಬಳಿಕ ಕೃಷ್ಣದ್ವೈಪಾಯನಮುನಿಯು ನಾರದೋಪದೇಶವನ್ನನುಸರಿಸಿ, ಭಗವಂತನ ಗುಣವರ್ಣನವೇ ಪ್ರಧಾನವಾಗಿರುವ ಭಾಗವತವೆಂಬ ಭಕ್ತಿಶಾಸ್ತ್ರವನ್ನು ವಿರಚಿಸಲು ಸಂಕಲ್ಪಿಸಿದನು. ಅಷ್ಟರಲ್ಲಿಯೇ "ಭಗವಂತನೊಬ್ಬನಿರುವನೆಂಬುದನ್ನು ನಿರ್ಧರಿಸಿ ತಿಳಿಸಿದ ಹೊರತು ಗ್ರಂಥಾರಂಭವು ಯುಕ್ತವಲ್ಲ. ಕಲಿದೋಷದಿಂದ ದೈವವೇ ಇಲ್ಲವೆಂದು ತಿಳಿಯುವವರಿಗೆ ಈ ಗ್ರಂಥದಲ್ಲಿ ಪ್ರವೃತ್ತಿಯುಂಟಾಗುವುದಿಲ್ಲ. ಆದುದರಿಂದ ಮೊದಲು ಜಗತ್ಕಾರಣನಾದ ಪರಮೇಶ್ವರನೊಬ್ಬನುಂಟೆಂಬುದನ್ನು, ವೇದಶಾಸ್ತ್ರ ಪ್ರಮಾಣಗಳಿಂದಲೂ, ಯುಕ್ತಿಯಿಂದಲೂ ದೃಢಪಡಿಸಬೇಕು" ಎಂದಾತನ ಮನಸ್ಸಿನಲ್ಲಿ ಹೊಳೆಯಿತು. ಅದರಂತೆಯೇ ಬಾದರಾಯಣ ಮುನೀಂದ್ರನು ಈ ಶ್ಲೋಕದ ಪೂರ್ವಾರ್ಧದಿಂದ ಜಗತ್ಕಾರಣವಾದ ವಸ್ತುವನ್ನು ಸ್ಥಿರಪಡಿಸಿ, ಮನುಷ್ಯಪ್ರಯತ್ನವು ನಿರ್ವಿಘ್ನವಾಗಿ ನೆರವೇರಬೇಕಾದರೆ ದೈವಾನುಗ್ರಹವೇ ಮುಖ್ಯ ಕಾರಣವಾದುದರಿಂದ, ಕಾರ್ಯಾರಂಭದಲ್ಲಿ ಮಂಗಳಾಚರಣೆಯನ್ನು ಮಾಡಲೇಬೇಕೆಂಬ ಸಂಪ್ರದಾಯವನ್ನು ಲೋಕಕ್ಕೆ ತಿಳಿಯಪಡಿಸುವುದಕ್ಕಾಗಿ ಉತ್ತರಾರ್ಧದಿಂದ ಪರಮಾತ್ಮನ ಧ್ಯಾನರೂಪವಾದ ಮಂಗಳವನ್ನು ಮಾಡುತ್ತಾನೆ.

"ಯಾವನು ಸರ್ವವ್ಯಾಪಕನೂ, ಸರ್ವಜ್ಞನೂ, ಸ್ವಪ್ರಕಾಶನೂ, ಮಾಯಾತೀತನೂ ಆಗಿರುವನೋ, ಯಾವನಿಂದ ಈ ಪ್ರಪಂಚವು ಹುಟ್ಟಿ, ಬೆಳೆದು ನಾಶವನ್ನು ಪಡೆಯುವು

ದೋ, ಅಂತಹ ಜಗತ್ಕಾರಣನಾದ ಪರಮೇಶ್ವರನನ್ನು ಧ್ಯಾನಿಸುತ್ತೇವೆ" ಎಂಬುದೇ ಈ ಶ್ಲೋಕದ ಮುಖ್ಯತಾತ್ಪರ್ಯವು.

ಜಗತ್ಕಾರಣ ವಸ್ತುವು ಉಂಟೆಂಬಂಶವು ಈ ಶ್ಲೋಕದಲ್ಲಿ ಹಲವು ಬಗೆಗಳಿಂದ ನಿರೂಪಿಸಲ್ಪಡುವುದು.

1 ಒಂದು ವಿಚಿತ್ರವಸ್ತುವನ್ನು ಕಂಡಕೂಡಲೇ ಅದನ್ನು ನಿರ್ಮಾಣಮಾಡಿದ ಶಿಲ್ಪಿಯೂ, ಅವನ ಸಾಮರ್ಥ್ಯಾದಿಗಳೂ ಸಹ ನೋಟಕರ ಮನಸ್ಸಿನಲ್ಲಿ ಹೊಳೆಯುವಂತೆ, ವಿಚಿತ್ರ ರಚನೆಯುಳ್ಳ ಈ ಜಗತ್ತನ್ನು ಪರ್ಯಾಲೋಚಿಸುವ ಪ್ರತಿಪುರುಷನ ಮನಸ್ಸಿನಲ್ಲಿಯೂ, "ಇದಕ್ಕೆ ಒಬ್ಬ ಕರ್ತೃವಿರಬೇಕು. ಇಲ್ಲದಿದ್ದರೆ, ಗಾಳಿಬೀಸುವುದು, ಬೆಂಕಿಯುರಿಯುವುದು, ನೀರು ಹರಿಯುವುದು ಇವೇ ಮೊದಲಾದ ಪ್ರಪಂಚವ್ಯಾಪಾರಗಳು ಇಷ್ಟು ಕ್ರಮವಾಗಿ ನಡೆಯುತ್ತಿರಲಿಲ್ಲ" ಎಂದು ತೋರುವುದು. ಆದುದರಿಂದ ಜಗತ್ಕಾರಣವಾದ ಒಂದು ವಸ್ತುವುಂಟು.

2 ಲೋಕದಲ್ಲಿ ಪ್ರತಿವಸ್ತುವೂ * ಸತ್ತು, ಅಸತ್ತು ಎಂಬ ಎರಡು ಭಾಗಗಳುಳ್ಳದ್ದು. ಅವುಗಳಲ್ಲಿ ಅಸತ್ತುಗಳಾದ ನಾಮರೂಪಗಳೇ ಜನ್ಮಾದಿಗಳಿಗೆ ಒಳಪಟ್ಟಿರುವುವಲ್ಲದೆ ಸತ್ತಲ್ಲ. ಹೊಲವಿದೆ, ಮನೆಯಿದೆ, ಎಂಬಲ್ಲಿ ಹೊಲಮನೆಗಳೆಂಬ ಹೆಸರುಗಳೂ, ಅವುಗಳ ಆಕಾರಗಳೂ ಕೆಟ್ಟುಹೋದರೂ ಅವುಗಳಲ್ಲಿರುವ ಸತ್ತು ಮಾತ್ರ ಕೆಡುವುದಿಲ್ಲ. ಮತ್ತು ಈ ಸತ್ತು ಇಲ್ಲದವಸ್ತುವೇ ಇಲ್ಲ. ಮೊಲದಕೊಂಬು, ಬಂಜೆಯಮಗ, ಇವನ್ನು ವಸ್ತುಗಳೆಂದು ಯಾರೂ ಹೇಳುವುದಿಲ್ಲ. ಇವಕ್ಕೆ "ಇದೆ" ಎಂಬ ವ್ಯವಹಾರವೂ ಇಲ್ಲ. ಆದುದರಿಂದ ಆಕಾಶಾದಿ ಪದಾರ್ಥಗಳಲ್ಲಿ ಸದ್ರೂಪದಿಂದಿರುತ್ತಲೂ, ಅಪ್ರಸಿದ್ಧಗಳಾದ ಆಕಾಶಪುಷ್ಪಾದಿಗಳಲ್ಲಿ ಇಲ್ಲದೆಯೂ ಇರುವ ಸತ್ಯವಸ್ತುವೇ ಜಗತ್ಕಾರಣವು.

3 ಚಿನ್ನದಿಂದ ಮಾಡಲ್ಪಟ್ಟ ಒಡವೆಗಳಿಗೆ ಚಿನ್ನವೇ ಕಾರಣವೆನಿಸುವಂತೆ, ಪರಮಾತ್ಮನ ¶ ವಿವರ್ತವಾದ ಪ್ರಪಂಚಕ್ಕೆ ಪರಮಾತ್ಮನೇ ಕಾರಣವು. ಮತ್ತು ನಾಮರೂಪಗಳಿಂದ ವಿಕಾರವನ್ನು ಪಡೆದ ಒಡವೆಗಳು ಚಿನ್ನದ ಕಾರ್ಯಗಳೆನಿಸಿಕೊಳ್ಳುವಂತೆ, ಈ ಪ್ರಪಂಚವು ಪರಮಾತ್ಮನ ಕಾರ್ಯವಾಗಿರುವುದು. ಅಂದರೆ ಬಂಗಾರವು ನಿಜರೂಪದಿಂದ ಕಾರಣವಾಗಿಯೂ, ನಾಮರೂಪಗಳ ವಿಕಾರದಿಂದ ಕಾರ್ಯವಾಗಿಯೂ ಕಂಡುಬರುವಂತೆ, ಪರಮಾತ್ಮನು ಸದ್ರೂಪದಿಂದ ಕಾರಣನಾಗಿಯೂ, ಪ್ರಪಂಚರೂಪದಿಂದ ಕಾರ್ಯವಾಗಿಯೂ ಇರುವನೆಂದು ಭಾವವು. ಯಾವುದಕ್ಕೆ ಅವಯವಗಳುಂಟೋ ಅದಕ್ಕೆ ಹುಟ್ಟುಸಾವುಗಳುಂಟು. ಯಾವುದಕ್ಕೆ ಹುಟ್ಟುಸಾವುಗಳುಂಟೋ ಅದಕ್ಕೆ ಅವಯವಗಳುಂಟು. ಹೀಗೆಂಬುದೇ ಅನ್ವಯವ್ಯಾಪ್ತಿಯು. ಯಾವುದಕ್ಕೆ ಅವಯವಗಳಿಲ್ಲವೊ ಅದಕ್ಕೆ ಹುಟ್ಟುಸಾವುಗಳಿಲ್ಲ,ಯಾವುದಕ್ಕೆ ಹುಟ್ಟುಸಾವುಗಳಿಲ್ಲವೊ ಅದಕ್ಕೆ ಅವಯವಗಳಿಲ್ಲ. ಇದೇ ವ್ಯತಿ

* ನೆಲೆ—ನಾಶವಿಲ್ಲದ್ದು. ¶ ರೂಪಾಂತರ.

ರೇಕವ್ಯಾಪ್ತಿಯು. ಈ ಎರಡು ನ್ಯಾಯಗಳಿಂದಲೂ $ ಸಾವಯವವೆನಿಸಿಕೊಂಡು, ಜನ್ಮಾದಿಗಳಿಗೊಳಗಾಗಿರುವ ಈ ಪ್ರಪಂಚವು, ಮತ್ತೊಂದು ನಿತ್ಯವಸ್ತುವಿನಿಂದಲೇ ಉಂಟಾಗಿರಬೇಕು. ಆದಕಾರಣ ಈ ಮೂರು ವಿಧಗಳಿಂದಲೂ ಈ ಜಗತ್ತಿಗೆ ಕಾರಣವಾದ ಒಂದು ವಸ್ತುವುಂಟೆಂದು ನಿಶ್ಚಯವಾಯಿತು. ಹೀಗೆ ಯುಕ್ತಿಗಳಿಂದ ನಾಸ್ತಿಕಾದಿಗಳನ್ನೊಪ್ಪಿಸಿ, ಪ್ರಮಾಣವಾಕ್ಯಗಳಿಂದ ಆಸ್ತಿಕರನ್ನು ಸಮ್ಮತಿಗೊಳಿಸುತ್ತಾನೆ. ಯಾವುದರಿಂದೀ ಭೂತಗಳುಂಟಾಗುವುವೋ, ಯಾವುದರಿಂದ ಬದುಕುವುವೋ, ಯಾವುದರಲ್ಲಿ ಲಯವನ್ನು ಪಡೆಯುವುವೋ, ಅದೇ ಬ್ರಹ್ಮವಸ್ತುವೆಂದು ತಿಳಿ. ಎಂಬ † ವೇದವಾಕ್ಯದಿಂದಲೂ, ಸೃಷ್ಟ್ಯಾದಿಯಲ್ಲಿ ಸಕಲ ಭೂತಗಳೂ ಯಾವುದರಿಂದುಂಟಾಗುವುವೋ, ಮರಳಿ ಮಹಾಪ್ರಳಯದಲ್ಲಿ ಎಲ್ಲಿ ಲಯವನ್ನು ಪಡೆಯುವುವೋ ಅದೇ ಬ್ರಹ್ಮವು ಎಂಬ * ಗೀತಾವಾಕ್ಯದಿಂದಲೂ ಜಗತ್ಕಾರಣವಾದ ವಸ್ತುವುಂಟೆಂಬುದೇ ಸಿದ್ಧಾಂತವಾಯಿತು.

ಇನ್ನು ಆ ಜಗತ್ಕಾರಣ ವಸ್ತುವೆಂಥಾದ್ದೆಂಬ ವಿಚಾರವು ಮಾಡಲ್ಪಡುವುದು. ಈ ವಿಷಯದಲ್ಲಿ ಬರುವ ಆಕ್ಷೇಪ ಸಮಾಧಾನಗಳು ಯಾವುವೆಂದರೆ (1) ಪ್ರಪಂಚವೆಂಬುದು ತ್ರಿಗುಣಾತ್ಮಕವಾದುದರಿಂದ ಪ್ರಧಾನವೇ ಜಗತ್ತಿಗೆ ಕಾರಣವು, ಎಂದರೆ "ಅಭಿಜ್ಞಃ" ಎಂಬ ವಿಶೇಷಣದಿಂದ ಜಗತ್ಕಾರಣವಸ್ತುವು ಸರ್ವಜ್ಞವೆಂದುಹೇಳಲ್ಪಡುವುದು. ಸರ್ವಜ್ಞತ್ವವೆಂದರೆ ಎಲ್ಲವನ್ನೂ ತಿಳಿಯುವುದೆಂದು ಅರ್ಥವು. ಆ ತಿಳಿವಳಿಕೆಯು ಚೇತನ ಧರ್ಮವೇ ಹೊರತು ಜಡಧರ್ಮವಲ್ಲ. ಮತ್ತು ಆಕಾರಣ ವಸ್ತುವು ಈ ಲೋಕಗಳನ್ನು ಲೋಕಪಾಲಕರನ್ನು ಸೃಜಿಸಬೇಕೆಂದು ಆಲೋಚಿಸಿತು ಎಂಬ §ಶ್ರುತಿ ವಾಕ್ಯದಿಂದಲೂ, ಜಗತ್ಕಾರಣವು ಚೇತನವೆಂದುಸ್ಪಷ್ಟವಾಗುವುದು. ಅಲ್ಲದೆ "ಈಕ್ಷತೇರ್ನಾಶಬ್ದಂ" ಎಂಬ ಬ್ರಹ್ಮಸೂತ್ರದಿಂದಲೂ ಜಡವಾದ ಪ್ರಧಾನಕ್ಕೆ ಈಕ್ಷಿತೃತ್ವ (ತಿಳಿವಳಿಕೆಯು) ವಿಲ್ಲವಾದುದರಿಂದ ಅದು ಜಗತ್ಕಾರಣವಲ್ಲವೆಂದು ನಿರಾಕರಿಸಲ್ಪಟ್ಟಿದೆ. ಆದುದರಿಂದ ಪ್ರಧಾನವು ಜಗತ್ಕಾರಣವಲ್ಲ. (2) ಆದರೆ ಜ್ಞಾನಾದಿಗುಣಗಳುಳ್ಳ ಜೀವನೇ ಜಗತ್ಕಾರಣವಾಗಲಿ. ಎಂದರೆ, ಮೂಲದಲ್ಲಿ "ಸ್ವರಾಟ್" ಎಂದು ಪ್ರಯೋಗಿಸಿರುವುದರಿಂದ ಆ ಕಾರಣ ವಸ್ತುವು ಸ್ವತಸ್ಸಿದ್ಧ ಜ್ಞಾನವುಳ್ಳದ್ದೆಂದು ಅರ್ಥವಾಗುವುದು. ಜೀವನ ಜ್ಞಾನವೆಂಬುದು ಪರಾಧೀನವಾದುದರಿಂದ ಅವನು ಜಗತ್ಕಾರಣವಲ್ಲ. (3)ಹಾಗಾದರೆ—ಹಿರಣ್ಯಗರ್ಭನಾದ ಚತುರ್ಮುಖನೇ ಎಲ್ಲಕ್ಕೂ ಆದಿಯೆಂದು ¶ ವೇದದಲ್ಲಿಹೇಳಲ್ಪಟ್ಟಿರುವುದರಿಂದ ಹಿರಣ್ಯಗರ್ಭನೇ ಜಗತ್ಕಾರಣವಾಗಿರಲಿ

$ ಭಾಗಿಸುವುದಕ್ಕೆ ಅರ್ಹವಾದುದು. † ಶ್ರು॥ ಯತೋವಾ ಇಮಾನಿ ಭೂತಾನಿ ಜಾಯಂತೆ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ ತದ್ವಿಜಿಜ್ಞಾಸಸ್ವ, ತದ್ಬ್ರಹ್ಮೇತಿ ॥ * ಶ್ಲೋ। ಯತಃ ಸರ್ವಾಣಿ ಭೂತಾನಿ ಭವಂತ್ಯಾದಿಯುಗಾಗಮೇ। ಯಸ್ಮಿಂಶ್ಚ ಪ್ರಳಯಂ ಯಾಂತಿ ಪುನರೇವ ಯುಗಕ್ಷಯೇ॥

§ ಶ್ರು "ಸ ಈಕ್ಷತ ಇಮಾ ಲೋಕಾಲ್ಲೋಕಪಾಲಾನಸೃಜಾಇತಿ"

¶ "ಹಿರಣ್ಯಗರ್ಭ ಸ್ಸಮವರ್ತತಾಗ್ರೇ"

ಎಂದರೆ—ಎಂತಹ ಮಹಾಪಂಡಿತರನ್ನಾದರೂ ಮರುಳುಮಾಡುವ ವೇದಗಳನ್ನು, ಪರಮಾತ್ಮನೇ ಆದಿಯಲ್ಲಿ ಚತುರ್ಮುಖಬ್ರಹ್ಮನಿಗೆ ಮನಸ್ಸಿನಲ್ಲಿಯೇ ಹೊಳೆಯುವಂತೆ ಅನುಗ್ರಹಿಸಿದನೆಂದು § ಶ್ರುತ್ಯರ್ಥವಾಗುವುದರಿಂದ, ಆ ಬ್ರಹ್ಮನೂ ಜಗತ್ಕಾರಣವಲ್ಲ. ಇಂತು ಜಗತ್ಕಾರಣವಾದದಲ್ಲಿ ಬರುವ ಆಕ್ಷೇಪಗಳನ್ನು ನಿರಾಕರಿಸಿ, ಈಗ ತತ್ವಸ್ವರೂಪವು ವಿಚಾರಿಸಲ್ಪಡುವುದು.

ಇಲ್ಲಿಯವರೆಗೆ ದೃಶ್ಯದಿಂದ ಅದೃಶ್ಯವನ್ನು ಕಂಡು ಹಿಡಿಯುವ ಸುಲಭಮಾರ್ಗವನ್ನನುಸರಿಸಿ, ಜಗತ್ಕಾರಣವಾದ ಪರತತ್ವವನ್ನು ಸಾಧಿಸುವುದಕ್ಕಾಗಿ ಜಗತ್ತುಂಟೆಂದು ಒಪ್ಪಬೇಕಾಯಿತು. ಈಗ ಜಗತ್ತೂ ಸತ್ಯವಲ್ಲ. ಪರತತ್ವವೊಂದೇ ಸತ್ಯವೆಂದು ನಿರೂಪಿಸಲ್ಪಡುವುದು. ಹೇಗೆಂದರೆ—ಲೋಕದಲ್ಲಿ ತೇಜೋಮಯವಾದ ಮರೀಚಿಕೆ (ಬಿಸಲ್ಗುದುರೆ) ಯನ್ನು ನೀರೆಂದೂ, ಜಲಮಯವಾದ ಮಂಜುಗಡ್ಡೆಯನ್ನು ಕಲ್ಲೆಂದೂ, ಕೆಂಪುಮಣಿ ಮೊದಲಾದ ಕಲ್ಲುಗಳನ್ನು ತೇಜಸ್ಸೆಂದೂ, (ಕೆಂಡ)ತಿಳಿಯುವುದುಂಟಷ್ಟೆ. ಮರೀಚಿಕೆಯನ್ನು ನೀರೆಂದು ತಿಳಿಯುವಾಗ, ಮರೀಚಿಕೆಯೇ ನೀರಾಗಿ ಕಾಣುವುದೇ ಹೊರತು, ನೀರು ಬೇರೇ ಇಲ್ಲ. ಇದರಂತೆ ಪರಮಾತ್ಮವಸ್ತುವೇ ಜಗತ್ತಾಗಿ ಕಾಣುವುದಲ್ಲದೆ ಜಗತ್ತು ಬೇರೇ ಇಲ್ಲ. ಮತ್ತು ಮರೀಚಿಕೆಯಲ್ಲಿ ಇಲ್ಲದ ನೀರು ಆರೋಪಿಸಲ್ಪಡುವಂತೆ, ಪರಮಾತ್ಮನಲ್ಲಿ ಈ ಪ್ರಪಂಚವು ಆರೋಪಿಸಲ್ಪಟ್ಟಿದೆ. ಆದಕಾರಣ ಮಿಥ್ಯಾಪ್ರಪಂಚಕ್ಕೆ ಅಧಿಷ್ಠಾನವಾಗಿ, ಅಸತ್ಪದಾರ್ಥಗಳಿಗೆ ಸತ್ವವನ್ನು ಕೊಡುತ್ತಾ, ಮಾಯಾತೀತವೆನಿಸಿರುವ ಪರಮಾತ್ಮ ವಸ್ತುವೊಂದೇ ಸತ್ಯವೆಂದು ಸಿದ್ಧಾಂತವು.

ಈ ಶ್ಲೋಕದಲ್ಲಿ ಗಾಯತ್ರೀ ಬೀಜಾಕ್ಷರಗಳಾದ,"ತತ್"ಎಂಬುದಕ್ಕೆ ಪ್ರತಿಯಾಗಿ ಸತ್ಯಂ ಎಂದೂ, "ದೇವಸ್ಯ, ಸವಿತುಃ" ಎಂಬುದಕ್ಕೆ ಪ್ರತಿಯಾಗಿ, "ಜನ್ಮಾದ್ಯಸ್ಯಯತಃ" ಎಂದೂ "ವರೇಣ್ಯಂ" ಎಂಬುದಕ್ಕೆ ಪ್ರತಿಯಾಗಿ,"ಪರಂ-ಅಭಿಜ್ಞಃ"ಎಂದೂ, "ಭರ್ಗಃ" ಎಂಬುದಕ್ಕೆ ಪ್ರತಿಯಾಗಿ, "ಸ್ವರಾಟ್" ಎಂದೂ, "ಧಿಯಃ" ಎಂಬುದಕ್ಕೆ ಬದುಲಾಗಿ, "ಹೃದಾ" ಎಂದೂ, ನಃ-ಎಂಬುದಕ್ಕೆ ಬದುಲು, "ಆದಿಕವಯೇ" ಎಂದೂ "ಧೀಮಹಿ" ಎಂಬುದಕ್ಕೆ ಬದುಲಾಗಿ "ಧೀಮಹಿ" ಎಂದೂ ಅದೇ ಅರ್ಥವುಳ್ಳ ಪ್ರತಿಪದಗಳು ಪ್ರಯೋಗಿಸಲ್ಪಟ್ಟು, ಗಾಯತ್ರಿಯ ಅರ್ಥವನ್ನು ವಿವರಿಸುವುದರಿಂದ ಈ ಪುರಾಣವು ಗಾಯತ್ರೀ ಪರಬ್ರಹ್ಮ ವಿದ್ಯೆಯನ್ನು ಬೋಧಿಸುವುದೆಂದು ಹೇಳಿದಂತಾಯಿತು. ಯಾಕೆಂದರೆ.

ಯತ್ರಾಧಿಕೃತ್ಯ ಗಾಯತ್ರೀಂ ವರ್ಣ್ಯತೇ ಧರ್ಮವಿಸ್ತರಃ ।
ವೃತ್ರಾಸುರವಧೋಪೇತಂ ತದ್ಭಾಗವತ ಮಿಷ್ಯತೆ ॥ (ಮತ್ಸ್ಯಪುರಾಣ)

ಯಾವ ಪುರಾಣದಲ್ಲಿ ಗಾಯತ್ರಿಯನ್ನು ಅಧಿಕರಿಸಿ ಧರ್ಮಗಳು ವರ್ಣಿಸಲ್ಪಡುವುವೋ ವೃತ್ರಾಸುರ ಸಂಹಾರಕಥೆಯು ಎಲ್ಲಿ ವಿವರಿಸಲ್ಪಟ್ಟಿರುವುದೋ ಅದೇ ಭಾಗವತವೆಂದು ತಿಳಿಯತಕ್ಕದ್ದು.

---

§ "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ"

ಗ್ರಂಥೋಷ್ಟಾದಶಸಾಹಸ್ರೋ ದ್ವಾದಶಸ್ಕಂಧಸಮ್ಮಿತಃ ।
ಹಯಗ್ರೀವಬ್ರಹ್ಮವಿದ್ಯಾ ಯತ್ರವೃತ್ರವಧ ಸ್ತಥಾ ।
ಗಾಯತ್ರ್ಯಾಚ ಸಮಾರಂಭ ಸ್ತದ್ವೈ ಭಾಗವತಂ ವಿದುಃ ॥ (ಪ್ರರಾಣಾಂತರ)

ಹದಿನೆಂಟು ಸಾವಿರ ಗ್ರಂಥ ಸಂಖ್ಯೆಯಿಂದಲೂ, ಹನ್ನೆರಡು ಸ್ಕಂಧಗಳಿಂದಲೂ ಯುಕ್ತವಾಗಿ, ಹಯಗ್ರೀವ ಬ್ರಹ್ಮವಿದ್ಯೆಯನ್ನೂ, ಗಾಯತ್ರೀ ವಿವರಣೆಯನ್ನೂ, ವೃತ್ರವಧವನ್ನೂ ಪ್ರಕಾಶಗೊಳಿಸುವ ಗ್ರಂಥವೇ ಭಾಗವತವೆನಿಸಲ್ಪಡುವುದು. ಮತ್ತು

ಅಂಬರೀಷಶುಕಪ್ರೋಕ್ತಂ ನಿತ್ಯಂ ಭಾಗವತಂ ಶೃಣು ।
ಪಠಸ್ವ ಸ್ವಮುಖೇನಾಪಿ ಯದೀಚ್ಛಸಿ ಭವಕ್ಷಯಂ ॥ (ಪದ್ಮಪುರಾಣ)

ಅಯ್ಯಾ ಅಂಬರೀಷನೇ? ನೀನು ಪಾಪವಿಮುಕ್ತನಾಗಬೇಕಾದರೆ, ನಿತ್ಯವೂ ಬಿಡದಂತೆ ಶುಕಮುನಿಯಿಂದ ವಿರಚಿತವಾದ ಭಾಗವತವನ್ನು ಕೇಳು. ಅಥವಾ ನೀನಾದರೂ ಓದಿಕೋ.

ಇತ್ಯಾದಿ ಪ್ರಮಾಣಗಳಿಂದ ಗಾಯತ್ರಿಯೆಂಬ ಪರಬ್ರಹ್ಮ ವಿದ್ಯೆಯನ್ನು ಪ್ರತಿಪಾದಿಸುವ ಭಾಗವತವೆಂಬ ಮಹಾಪುರಾಣವು ಇದೇ ಹೊರತು ಮತ್ತೊಂದಲ್ಲ.

ಮೂ॥ ಧರ್ಮಃ ಪ್ರೋಜ್ಝಿತಕೈತವೋತ್ರ ಪರಮೋ ನಿರ್ಮತ್ಸರಾಣಾಂ ಸತಾಂ ।
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಂ ॥
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂವಾ ಪರೈ ರೀಶ್ವರಃ ।
ಸದ್ಯೋ ಹೃದ್ಯವರುಧ್ಯತೇತ್ರ ಕೃತಿಭಿ ಶ್ಶುಶ್ರೂಷುಭಿ ಸ್ತತ್ಕ್ಷಣಾತ್ ॥೨॥

ಅತ್ರ—ಈ ನನ್ನ ಬುದ್ಧಿಸ್ಥವಾದ, ಮಹಾಮುನಿಕೃತೇ, ಮಹಾಮುನಿ- ಶ್ರೀಮನ್ನಾರಾಯಣಮೂರ್ತಿಯಿಂದ, ಕೃತೇ-ಸಂಗ್ರಹವಾಗಿ ಮಾಡಲ್ಪಟ್ಟಿದ್ದ, ಶ್ರೀಮದ್ಭಾಗವತೇ, ಶ್ರೀಮತ್-ಮುಮುಕ್ಷುಗಳಿಗೆ ಅತಿರಮಣೀಯ್ಯವಾದ, ಭಾಗವತೇ-ಭಾಗವತದಲ್ಲಿ,@ ನಿರ್ಮತ್ಸರಾಣಾಂ-ಮತ್ಸರವಿಲ್ಲದಿರುವ, ಸತಾಂ-ಭೂತದಯೆಯುಳ್ಳ ಸತ್ಪುರುಷರ, ಪ್ರೋಜ್ಝಿತಕೈತವಃ, ಪ್ರೋಜ್ಝಿತ-ಸಂಪೂರ್ಣವಾಗಿ ಬಿಡಲ್ಪಟ್ಟ, ಕೈತವಃ-ಫಲಾಭಿಸಂಧಿಯೆಂಬ ಕಪಟವುಳ್ಳದ್ದಾದುದರಿಂದಲೇ, ಪರಮಃ-ಸರ್ವೋತ್ತಮವಾದ, ಧರ್ಮಃ-ಭಗವದಾರಾಧನ ರೂಪವಾದ ಧರ್ಮವು,(ವಿವರಿಸಲ್ಪಡುವುದು)ಅತ್ರ-ಈ ಭಾಗವತದಲ್ಲಿ, ತಾಪತ್ರಯೋನ್ಮೂಲನಂ, ತಾಪ-¶ಆಧ್ಯಾತ್ಮಿಕ †ಆಧಿಭೌತಿಕ §ಆಧಿದೈವಿಕ ಎಂಬತಾಪಗಳ,ತ್ರಯ-ಮೂರನ್ನು,ಉನ್ಮೂಲನಂ-ನಾಶಗೊಳಿಸುವ,ಶಿವದಂ-ಪರಮ ಸುಖವನ್ನು ಕೊಡುವ, ವಾಸ್ತವಂ-ಪರಮಾರ್ಥವಾದ,ವಸ್ತು-ತತ್ವವು,ವೇದ್ಯಂ-ತಿಳಿಯತಕ್ಕುದಾಗಿರುವುದು. ಅಥವಾ "ವಸ್ತುನಃ ಇದಂವಾಸ್ತವಂ" ಎಂಬ ವ್ಯುತ್ಪತ್ತಿಯಿಂದ, ವಸ್ತುವಿನ ಅಂಶವಾದ ಜೀವನೂ, ವಸ್ತುವಿನ ಶಕ್ತಿಯಾದ ಮಾಯೆಯೂ, ವಸ್ತುವಿನ ಕಾರ್ಯವಾದ ಜಗತ್ತೂ ಇವೆಲ್ಲವೂ ವಸ್ತುಗಳೇ ಎನಿಸಿಕೊಂಡಿದ್ದರೂ ಆ ಆತ್ಮ ವಸ್ತುವು ಇವುಗಳಿಗಿಂತಲೂ ಬೇರೆ, ಎಂದು ತಿಳಿಯತಕ್ಕದ್ದು. ಅಪರೈಃ-ಇತರ ಶಾಸ್ತ್ರಗಳಿಂದ, ಅಥವಾ ಆಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಮಾರ್ಗಗಳಿಂದ, ಈಶ್ವರಃ-ಪರಮೇಶ್ವರನು, ಸದ್ಯಃ-ತತ್ಕ್ಷಣದಲ್ಲಿಯೇ, ಹೃದಿ-ಮನಸ್ಸಿನಲ್ಲಿ, ಅವರುಧ್ಯತೇ ಕಿಂವಾ-ಸ್ಥಿರಗೊಳಿಸಲ್ಪಡು

@ ಪರರಶ್ರೇಯಸ್ಸನ್ನು ಸೈರಿಸದಿರುವುದು ಮತ್ಸರವು ¶ ಶರೀರ ಮನಸ್ಸುಗಳಿಗುಂಟಾಗುವ ನೋವು
† ಬೆಂಕಿ ನೀರು ಮೊದಲಾದವುಗಳಿಂದುಂಟಾಗುವ ಬಾಧೆ § ಅಕಸ್ಮಾತ್ತಾಗಿ ಸಂಭವಿಸುವ ತೊಂದರೆ

ವನೇ? ಇಲ್ಲ. ಅತ್ರ-ಈ ಭಾಗವತದಲ್ಲಿ, ಕೃತಿಭಿಃ-ಪುಣ್ಯಶಾಲಿಗಳಾದುದರಿಂದಲೇ, ಶುಶ್ರೂಷುಭಿಃ-ಕೇಳಬೇಕೆಂದುಬಯಸುವವರಿಂದ, ತತ್‌ಕ್ಷಣಾತ್-ಆ ಕ್ಷಣದಲ್ಲಿಯೇ, ಅವರುಧ್ಯತೆ-ಸ್ಥಿರಗೊಳಿಸಲ್ಪಡುತ್ತಾನೆ.

ಈಗ ಶ್ರೋತೃಗಳಿಗೆ ರುಚಿಯನ್ನುಂಟುಮಾಡುವುದಕ್ಕಾಗಿ, ಸರ್ವಶಾಸ್ತ್ರಗಳಿಗಿಂತಲೂ ಈ ಭಾಗವತ ಶಾಸ್ತ್ರವೇ ಶ್ರೇಷ್ಠವೆಂದು ನಿರೂಪಿಸಲ್ಪಡುವುದು. ಎಂತೆಂದರೆ-ಲೋಕದಲ್ಲಿ ಶಾಸ್ತ್ರಗಳು ಕರ್ಮ, ಜ್ಞಾನ, ದೇವತೆಗಳೆಂಬ ಮೂರು ವಿಷಯಗಳನ್ನು ಬೋಧಿಸತಕ್ಕವುಗಳಾಗಿರುವವು. ಅವುಗಳಲ್ಲಿ ಕರ್ಮಕಾಂಡವನ್ನು ಬೋಧಿಸುವ ಶಾಸ್ತ್ರಗಳು, ಶ್ರೌತಸ್ಮಾರ್ತಾದಿ ಕರ್ಮಗಳನ್ನೂ, ಅವುಗಳಿಂದುಂಟಾಗುವ ಫಲಗಳನ್ನೂ ತಿಳಿಯಪಡಿಸುವುವು. ಜ್ಞಾನಕಾಂಡವನ್ನು ಪ್ರತಿಪಾದಿಸುವ ವೈಶೇಷಿಕಾದಿ ಶಾಸ್ತ್ರಗಳು, ದ್ರವ್ಯಾದಿ ಪದಾರ್ಥಸ್ವರೂಪವನ್ನೂ, ಅವುಗಳ ತಿಳುವಳಿಕೆಯಿಂದುಂಟಾಗುವ ಫಲವನ್ನೂ ವಿವರಿಸುವುವು. ದೇವತಾಕಾಂಡವನ್ನು ನಿರೂಪಿಸುವ ಶಾಸ್ತ್ರಗಳು ಆಯಾ ದೇವತೆಗಳನ್ನೂ, ಅವರುಪಾಸನೆಯಿಂದ ಪಡೆಯಬಹುದಾದ ಫಲಗಳನ್ನೂ ಪ್ರತಿಪಾದಿಸುವುವು. ಈ ಭಾಗವತ ಶಾಸ್ತ್ರವು ಮೋಕ್ಷಪದವಿಯಲ್ಲಿಯೂ ಆಸೆಯನ್ನುಂಟುಮಾಡದ ಸರ್ವೋತ್ತಮವಾದ ಭಕ್ತಿಯೆಂಬ ಧರ್ಮವನ್ನು ವರ್ಣಿಸುವುದೇ ಹೊರತು ಕರ್ಮಕಾಂಡದಂತೆ ಸ್ವರ್ಗಾದಿ ಫಲಗಳನ್ನು ಬೋಧಿಸುವುದಿಲ್ಲ. ದ್ವೇಷಾಸೂಯೆಗಳನ್ನು ತೊರೆದು, ಭೂತದಯೆಯುಳ್ಳ ಮಹಾತ್ಮರಲ್ಲದೆ ಈ ಧರ್ಮಕ್ಕೆ ಇತರರು ಅಧಿಕಾರಿಗಳೂ ಅಲ್ಲ. ಮತ್ತು ಇಲ್ಲಿ ಪ್ರತಿಪಾದಿಸಲ್ಪಡುವ ಆತ್ಮತತ್ವವೆಂಬುದು ಆಧ್ಯಾತ್ಮಿಕಾದಿ ತಾಪತ್ರಯವನ್ನು ಹೋಗಲಾಡಿಸುವುದಾಗಿಯೂ, ಜೀವಮಾಯಾಪ್ರಪಂಚಗಳಿಗಿಂತ ವಿವಿಕ್ತವಾಗಿಯೂ, ನಿರತಿಶಯಾನಂದವನ್ನು ಕೊಡತಕ್ಕದಾಗಿಯೂ, ಪರಮಾರ್ಥ ಸತ್ಯವಾಗಿಯೂ ಇರುವುದೇ ಹೊರತು, ದ್ರವ್ಯಗುಣಾದಿಗಳಂತೆ ಅನಿತ್ಯವೂ ಅಲ್ಲ. ಇತರ ಶಾಸ್ತ್ರಗಳನ್ನು ಕೇಳುವವರು ಬಹುಕಾಲದಮೇಲೆ ಅತಿ ಪ್ರಯಾಸದಿಂದ ಭಗವದ್ಭಕ್ತಿಯನ್ನು ಪಡೆದಾರು. ಈ ಶಾಸ್ತ್ರವು ಹಾಗಲ್ಲ. ಶ್ರವಣಮಾಡಿದ ಕೂಡಲೇ ಭಕ್ತಿಯನ್ನುಂಟುಮಾಡುವುದು. ಜನ್ಮಾಂತರದಲ್ಲಿ ಸುಕೃತವಿಶೇಷವನ್ನು ಮಾಡಿದ್ದ ಹೊರತು ಈ ಶಾಸ್ತ್ರವನ್ನು ಕೇಳಬೇಕೆಂಬ ಕೋರಿಕೆಯುಂಟಾಗುವುದಿಲ್ಲ. ಆದುದರಿಂದ ಈಗ ವಿವರಿಸಿದ ಕಾಂಡತ್ರಯದ ಅರ್ಥವನ್ನೂ ಯಥಾಸ್ಥಿತಿಯಿಂದ ಪ್ರತಿಪಾದಿಸುವ ಈ ಭಾಗವತ ಶಾಸ್ತ್ರವೇ ಸರ್ವಶಾಸ್ತ್ರಗಳಿಗಿಂತಲೂ ಶ್ರೇಷ್ಠವಾದುದಾದಕಾರಣ ನಿತ್ಯವೂ ಇದನ್ನೇ ಶ್ರವಣಮಾಡಿ ಧನ್ಯರಾಗಬೇಕೆಂದು ಭಾವವು.

ಮೂ|| ನಿಗಮಕಲ್ಪತರೋರ್ಗಳಿತಂ ಫಲಂ ಶುಕಮುಖಾದಮೃತ ದ್ರವಸಂಯುತಂ|
ಪಿಬತ ಭಾಗವತಂ ರಸ ಮಾಲಯಂ ಮುಹುರಹೋ ರಸಿಕಾ ಭುವಿ ಭಾವುಕಾಃ||೩||

ಹೇರಸಿಕಾಃ-ಅಯ್ಯಾ ರಸಿಕರಿರಾ! ಭಾವುಕಾಃ-ರಸವಿಶೇಷವನ್ನು ಭಾವಿಸುವುದರಲ್ಲಿ ಚತುರರಿರಾ! ಶುಕಮುಖಾತ್,ಶುಕ-ಗಿಳಿಯ ಅಥವಾ ಶುಕಮುನಿಯ, ಮುಖಾತ್-ಮುಖದೆಸೆಯಿಂದ, ಭುವಿ-ಭೂಮಿಯಲ್ಲಿ, ಗಳಿತಂ-ಜಾರಿಬಿದ್ದುದರಿಂದಲೇ, ಅಮೃತ ದ್ರವಸಂಯುತಂ, ಅಮೃತ-ಅಮೃತದಂತಿರುವ, ದ್ರವ-ರಸದಿಂದ, ಸಂಯುತಂ-ಕೂಡಿರುವ ಅಥವಾ ಅಮೃತ-ಮರಣಾಭಾವದ [illegible] ದ್ರವ-ಪರತತ್ವದಿಂದ,ಸಂಯು

ತಂ-ಕೂಡಿರುವ, ರಸಂ-ರಸರೂಪವಾದ, ನಿಗಮಕಲ್ಪತರೋಃ, ನಿಗಮ-ವೇದಗಳೆಂಬ, ಕಲ್ಪತರೋಃ-ಕಲ್ಪವೃಕ್ಷದ,ಭಾಗವತಂ-ಭಾಗವತವೆಂಬ ಹೆಸರುಳ್ಳ,ಇದಂ-ಈ, ಫಲಂ-ಫಲವನ್ನು,ಆಲಯಂ-ಕೈವಲ್ಯದಲ್ಲಿಯೂ ಬಿಡದೆ, ಮುಹುಃ-ಬಾರಿಬಾರಿಗೂ, ಪಿಬತ-ಪಾನಮಾಡಿರಿ. ಅಂದರೆ ಸೇವಿಸಿರಿ, ಅಹೋ-ಆಶ್ಚರ್ಯವು.

ಈ ಭಾಗವತವೆಂಬುದು ಸಕಲ ಶಾಸ್ತ್ರಗಳಿಗಿಂತಲೂ ಶ್ರೇಷ್ಠವೆಂಬುದು ಮಾತ್ರವೇ ಅಲ್ಲ. ಎಲ್ಲ ಶಾಸ್ತ್ರಗಳಿಗೂ ಫಲರೂಪವಾದುದು. ಮತ್ತು ಈ ಫಲವು, ಸಾಧಾರಣವಾಗಿ ಲಭಿಸತಕ್ಕುದೂ ಅಲ್ಲ. ಹೇಗೆಂದರೆ—ಈ ಫಲವು, ಸಚ್ಚಿದಾನಂದಸ್ವರೂಪನಾದ ಪರಮಾತ್ಮನೆಂಬ ಬೀಜದಿಂದ ಜನಿಸಿ, ಚತುರ್ಮುಖಬ್ರಹ್ಮನ ನಿರ್ಮಲವಾದ ಬುದ್ಧಿಯೆಂಬ ಪಾತಿಯಲ್ಲಿ ಮೊಳೆತು, ಮಹರ್ಷಿಗಳ ಮಂತ್ರದರ್ಶನವೆಂಬ ಜಲಸೇಚನದಿಂದ ಬೆಳೆಯುತ್ತಾ, ಋಕ್ಕು, ಯಜುಸ್ಸು, ಸಾಮ, ಅಥರ್ವಣಗಳೆಂಬ ಕವಲೊಡೆದು, ವಿದ್ಯಾಸ್ಥಾನಗಳೆಂಬ ಚಿಗುರುಗಳಿಂದಲೂ, ವೇದಾಂತಗಳೆಂಬ ಪುಷ್ಪಗಳಿಂದಲೂ ರಮಣೀಯ್ಯವೆನಿಸಿದ, ಸರ್ವಪುರುಷಾರ್ಥ ಸಾಧನವಾದ ವೇದವೆಂಬ ಕಲ್ಪವೃಕ್ಷದಿಂದ ಜನಿಸಿತು. ಶ್ರೀಮನ್ನಾರಾಯಣಮೂರ್ತಿಯು ಇದನ್ನು ಕೊಯ್ದು ಮೊದಲು ವೈಕುಂಠಕ್ಕೆ ತೆಗೆದುಕೊಂಡು ಹೋದನು. ಬಳಿಕ ನಾರದಮುನಿಯು ಆ ಫಲವನ್ನು ತಂದು ನನಗಿತ್ತನು. ನಾನದನ್ನು ಶುಕಮುಖದಲ್ಲಿಟ್ಟೆನು. ಗಿಳಿಯು ಕುಟುಕಿದ ಹಣ್ಣಿನಲ್ಲಿ ರುಚಿಯು ಹೆಚ್ಚುವುದೆಂಬುದು ಲೋಕಪ್ರಸಿದ್ಧವಾಗಿಯೇ ಇರುವುದಷ್ಟೆ. ಹಾಗೆಯೇ ಈ ಭಾಗವತ ಫಲವೂ ಶುಕಮುನಿಯ ಮುಖಸಂಪರ್ಕದಿಂದ ನಿರತಿಶಯವಾದ ಆನಂದರಸವನ್ನು ಕೊಡತಕ್ಕುದಾಗಿರುವುದು. ಇಂತಹ ಅಲಭ್ಯವಾದ ಫಲವು ಶುಕಮುನಿಯಿಂದ ಶಿಷ್ಯಪ್ರಶಿಷ್ಯರ ಮೂಲಕ ಭೂಲೋಕಕ್ಕಿಳಿದಿರುವುದು. ಈ ಫಲವು ಒಡೆದಿರುವುದಲ್ಲ. ರಸವು ಸುರಿದು ಹೋಗಿಲ್ಲ. ಇತರಫಲಗಳಂತೆ ಈ ಹಣ್ಣಿನಲ್ಲಿ ಸಿಪ್ಪೆ,ಬೀಜ,ಹೊಟ್ಟು ಮೊದಲಾದ ಬಿಸುಡತಕ್ಕ ಭಾಗಗಳಿಲ್ಲ.ಈ ಫಲವನ್ನು ಎಷ್ಟು ಸೇವಿಸಿದರೂ ಬೇಸರವಾಗುವುದಿಲ್ಲ. ಹಣ್ಣೆಲ್ಲಾ ರಸವೇ ಆಗಿರುವುದು.ಅಯ್ಯಾ ರಸವಿಶೇಷಗಳ ರುಚಿಯನ್ನು ಬಲ್ಲ ರಸಿಕರಿರಾ! ಇಂತಹ ಅಪೂರ್ವಫಲವು ದೊರೆತಿರುವುದು. ಇದರ ರುಚಿಯನ್ನು ಅರಿತವರು ಮೋಕ್ಷಸಾಮ್ರಾಜ್ಯದಲ್ಲಿಯೂ ಬಿಡಲಾರರು.ಆದುದರಿಂದ ನೀವು ಇದನ್ನು ಬಿಡದೆ ಬಾರಿಬಾರಿಗೂ ಸೇವಿಸಿ ಧನ್ಯರಾಗಿರಿ ಎಂದು ತಾತ್ಪರ್ಯವು.

ಇಂತು ನಿರಂತರಾಯವಾಗಿ ಗ್ರಂಥಸಮಾಪ್ತಿಯಾಗಲೆಂದು, ಮೇಲಣ ಮೂರು ಶ್ಲೋಕಗಳಿಂದ ವಿಶಿಷ್ಟದೇವತಾನುಸ್ಮರಣರೂಪವಾದ ಮಂಗಳವನ್ನಾಚರಿಸಿ, ಈ ಗ್ರಂಥದಲ್ಲಿ ಶ್ರೋತೃಗಳಿಗೆ ಪ್ರವೃತ್ತಿಯುಂಟಾಗುವುದಕ್ಕಾಗಿ, ಇಲ್ಲಿ ನಿರೂಪಿಸಲ್ಪಡುವ ವಿಷಯವು ಭಕ್ತಿಯೆಂತಲೂ, ಶಮದಮಾದಿಗಳಿಂದ ನಿರ್ಮಲಚಿತ್ತರಾದ ಮುಮುಕ್ಷುಗಳೇ ಇದಕ್ಕೆ ಅಧಿಕಾರಿಗಳೆಂತಲೂ, ಶ್ರವಣಾದಿಗಳೇ ಸಮ್ಮಂಧವೆಂತಲೂ, ಆತ್ಮಸಾಕ್ಷಾತ್ಕಾರವೇ ಪ್ರಯೋಜನವೆಂತಲೂ ಅಧಿಕಾರ ಚತುಷ್ಟಯವನ್ನು ಪ್ರತಿಪಾದಿಸಿ, ಸದ್ಗತಿಯನ್ನು ಪಡೆಯಲಪೇಕ್ಷಿಸುವವರಿಗೆ ಈ ಗ್ರಂಥವೇ ಸುಲಭಮಾರ್ಗವೆಂದು ತೋರಿಸಿ, ಗ್ರಂಥವು ಪ್ರಾರಂಭಿಸಲ್ಪಡುವುದೆಂತೆಂದರೆ:—

ಓಂ ನಮಃ ಪರಮಾತ್ಮನೇ.

ಮೂ॥ * ನೈಮಿಶೇ ನಿಮಿಷಕ್ಷೇತ್ರೇ ಋಷಯಃ ಶೌನಕಾದಯಃ । † ಸತ್ರಂ ಸ್ವ
ರ್ಗಾಯ ಲೋಕಾಯ ಸಹಸ್ರಸಮ ಮಾಸತ ॥೪॥ ತ ಏಕದಾತು ಮುನ
ಯಃ ಪ್ರಾತರ್ಹುತ ಹುತಾಶನಾಃ।ಸತ್ಕೃತಂ ಸೂತ ಮಾಸೀನಂ ಪಪ್ರಚ್ಛು ರಿದ
ಮಾದರಾತ್ ॥೫॥ ಋಷಯಃ ॥ ತ್ವಯಾ ಖಲು ಪುರಾಣಾನಿ ಸೇತಿಹಾಸಾನಿ

ಅರ್ಥ—ಅನಿಮಿಷ-ನಿತ್ಯಜ್ಞಾನಿಯಾದ ಮಹಾವಿಷ್ಣುವಿಗೆ, ಕ್ಷೇತ್ರೇ-ವಾಸಸ್ಥಾನವಾದ, ನೈಮಿಶೇ-ನೈಮಿಶ ಅಥವಾ ನೈಮಿಷವೆಂಬ ಹೆಸರುಳ್ಳ ಅರಣ್ಯದಲ್ಲಿ, ಶೌನಕಾದಯಃ, ಶೌನಕ-ಶೌನಕಋಷಿಯೇ, ಆದಯಃ-ಮೊದಲಾಗಿಉಳ್ಳ, ಮುನಯಃ-ಮಹರ್ಷಿಗಳು, ಸ್ವರ್ಗಾಯಲೋಕಾಯ, ಸ್ವರ್ಗಾಯ-ಶ್ರೀವಿಷ್ಣುವೆಂಬ, (ದೇವತೆಗಳಿಂದ ಹೊಗಳಲ್ಪಡುವವನು) ಲೋಕಾಯ--ಲೋಕವನ್ನು ಪಡೆಯುವುದಕ್ಕಾಗಿ, ಸಹಸ್ರಸಮಂ-ಸಾವಿರಸಂವತ್ಸರಗಳು ನಡೆಯುತಕ್ಕ, ಸತ್ರಂ-ಸತ್ರವೆಂಬಯಾಗವನ್ನು ಕುರಿತು, ಆಸತ-ಕುಳಿತು ಕೊಂಡರು. ಅಥವಾ ಮಾಡುತ್ತಿದ್ದರು ॥೪॥ ಏಕದಾ-ಒಂದುದಿನ, ತೇ-ಆಶೌನಕನೇ ಮೊದಲಾದ, ಮುನಯಃ-ಋಷಿಗಳು, ಪ್ರಾತಃ-ಪ್ರಾತಃಕಾಲದಲ್ಲಿ, ಹುತಹುತಾಗ್ನಯಃ, ಹುತ-ಹಾಲು, ತುಪ್ಪ ಮೊದಲಾದ ಹೋಮದ್ರವ್ಯಗಳಿಂದ, ಹುತ-ಹೋಮಮಾಡಲ್ಪಟ್ಟ, ಅಗ್ನಯಃ-ಶ್ರೌತಸ್ಮಾರ್ತಾಗ್ನಿಗಳುಳ್ಳವರಾಗಿ, ಸತ್ಕೃತಂ-ಮರ್ಯಾದೆಗೊಳಿಸಲ್ಪಟ್ಟ, ಆಸೀನಂ-ಸುಖವಾಗಿಕುಳಿತುಕೊಂಡಿರುವ, ಸೂತಂ-ಸೂತಪೌರಾಣಿಕನನ್ನು ಕುರಿತು, ಇದಂ-ಮುಂದಣ ಸಂಗತಿಯನ್ನು ಆದರಾತ್-ವಿಶ್ವಾಸದಿಂದ, ಪಪ್ರಚ್ಛುಃ-ಪ್ರಶ್ನೆಮಾಡಿದರು ॥೫॥

ಸೂಚನೆ॥ ಕಂ॥ ಶೌನಕಮುಖಮುನಿಪತಿಗಳ್ । ಕಾನನದೈತಂದಸೂತನಂ ಪೂಜಿಸುತಂ ।
ಸಾನುನಯದೆ ಬೆಸಗೊಂಡರ । ದೀನತರ್ಾವಾರು ಪ್ರಶ್ನೆಗಳನೀತೆರದಿಂ ॥
ಆವುದು ಶಾಸ್ತ್ರದಸಾರವು । ದಾವುದು ಹರಿಕೃತ್ಯವೆಂತು ಸೃಷ್ಟಿವಿಧಾನಂ ।
ಆವ್ರವವತಾರಕಥೆಗಳ । ದಾವ್ರದುಹರಿವೃತ್ತಿದರ್ಮವಾವುದು ಮುನಿಪಾ ॥೧॥

ತಾತ್ಪರ್ಯ —ವಿಷ್ಣುಕ್ಷೇತ್ರವಾದ ನೈಮಿಶಾರಣ್ಯದಲ್ಲಿ ಶೌನಕಾದಿ ಮಹರ್ಷಿಗಳು ಸಾವಿರವರ್ಷ ನಡೆಯುತಕ್ಕ ಒಂದು ಸತ್ರಯಾಗವನ್ನು ಮಾಡುತ್ತಿದ್ದರು ॥೪॥ ಆ ಮುನಿಗಳು ಒಂದು ದಿನ ಬೆಳಗ್ಗೆ ಸಂಧ್ಯಾವಂದನೆ ಅಗ್ನಿಹೋತ್ರ ಮೊದಲಾದನಿತ್ಯಕರ್ಮಗಳನ್ನು ನೆರವೇರಿಸಿಕೊಂಡವರಾಗಿ, ಮರ್ಯಾದೆಯನ್ನು ಹೊಂದಿ ಕುಳಿತಿರುವ ಸೂತಪೌರಾಣಿಕನನ್ನು ಇಂತುಬೆಸಗೊಂಡರು ॥೫॥ ಎಲೈ ಪಾಪರಹಿತನಾದಸೂತನೆ, ಲೋಕದಲ್ಲಿ ಇತಿಹಾ

ಟಿಪ್ಪಣಿ—(*) ಮನಸ್ಸೆಂಬಚಕ್ರದ ನೇಮಿಯನ್ನು ನಾಶಗೊಳಿಸುವುದು (ಮನಸ್ಸನ್ನುಸ್ಥಿರಗೊಳಿಸುವುದು) ಪೂರ್ವದಲ್ಲಿ ಋಷಿಗಳುತಪೋಯೋಗ್ಯವಾದ ಪ್ರದೇಶವಾವುದೆಂದು ಕೇಳಲು, ಬ್ರಹ್ಮನು ಮನಸ್ಸೆಂಬ ಚಕ್ರದನೇಮಿಯು ಎಲ್ಲಿನಾಶವಾಗುವುದೋ ಅದುತ್ತಮವೆಂದುಹೇಳಿ, ಒಂದು ಮನಶ್ಚಕ್ರವನ್ನು ಮಾಡಿ ಬಿಟ್ಟನು. ಋಷಿಗಳು ಪರೀಕ್ಷಿಸಲು ಅದನ್ನು ಹಿಂಬಾಲಿಸಿದರು. ಅದರ ನೇಮಿಯು (ಪಟ್ಟಿಯು) ಈವನದಲ್ಲಿ ನಾಶವಾಯಿತು (ವಾಯುಪುರಾಣ) ಈ ವನಕ್ಕೆ ನೈಮಿಷವೆಂಬ ಹೆಸರು ಬರುವದಕ್ಕೂ ಕಾರಣವುಂಟು ಭಗವಂತನು ಗೌರಮುಖನೆಂಬ ಋಷಿಯನ್ನುಕುರಿತು ಹೇಳುತ್ತಾನೆ "ಅಯ್ಯ ಗೌರಮುಖನೇ ಈ ವನದಲ್ಲಿ ನಿಮಿಷಮಾತ್ರದೊಳಗಾಗಿ ಅಸಂಖ್ಯಾತವಾದ ದೈತ್ಯಬಲವನ್ನು ಸಂಹರಿಸಿದೆನಾದ್ದರಿಂದ ಇದಕ್ಕೆ ನೈಮಿಷವೆಂದುಹೆಸರಾಯಿತು" (ವರಾಹಪುರಾಣ) †ಋತ್ವಿಜರೇ ಯಜಮಾನರಾಗಿರುವಯಾಗ

ಚಾ ನಘ । ಆಖ್ಯಾತಾನ್ಯಪ್ಯಧೀತಾನಿ ಧರ್ಮಶಾಸ್ತ್ರಾಣಿ ಯಾನ್ಯುತ ॥೬॥ ಯಾನಿ ವೇದವಿದಾಂ ಶ್ರೇಷ್ಠೋ ಭಗವಾನ್ ಬಾದರಾಯಣಃ। ಅನ್ಯೇಚ ಮುನಯ ಸ್ಸೂತ ಪರಾಪರವಿದೋ ವಿದುಃ ॥೭॥ ವೇತ್ಥ ತ್ವಂ ಸೌಮ್ಯ ತತ್ಸರ್ವಂ ತತ್ವತ ಸ್ತದನುಗ್ರಹಾತ್।ಬ್ರೂಯು ಸ್ಸ್ನಿಗ್ಧಸ್ಯ ಶಿಷ್ಯಸ್ಯ ಗುರವೋ ಗುಹ್ಯಮಪ್ಯುತ॥೮॥ ತತ್ರ ತತ್ರಾಂಜಸಾಯುಷ್ಮನ್ ಭವತಾ ಯದ್ವಿನಿಶ್ಚಿತಂ। ಪುಂಸಾ ಮೇಕಾಂತತ ಶ್ಶ್ರೇಯ ಸ್ತನ್ನ ಶ್ಶಂಸಿತು ಮರ್ಹಸಿ ॥೯॥ ಪ್ರಾಯೇಣಾ

ಹೇಅನಘ-ಎಲೈಪಾಪರಹಿತನಾದಸೂತನೆ, ತ್ವಯಾ-ನಿನ್ನಿಂದ, ಸೇತಿಹಾಸಾನಿ-ಭಾರತಾದಿ ಇತಿಹಾಸಗಗಳಿಂದಕೂಡಿದ, ಪುರಾಣಾನಿ-ಪುರಾಣಗಳು, ಉತ-ಮತ್ತು, ಯಾನಿಶಾಸ್ತ್ರಾಣಿ-ಯಾವಯಾವಶಾಸ್ತ್ರಗಳುಂಟೋ ಅವುಗಳೂ, ಅಧೀತಾನಿ, ಅಧ್ಯಯನಮಾಡಲ್ಪಟ್ಟಿರುವವು, ಆಖ್ಯಾತಾನ್ಯಪಿಖಲು-ವ್ಯಾಖ್ಯಾನವೂ ಮಾಡಲ್ಪಟ್ಟಿರುವುದಷ್ಟೆ, ॥೬॥ ಹೇಸೂತ-ಎಲೈಸೂತನೆ, ವೇದವಿದಾಂ-ವೇದಾರ್ಥವನ್ನು ತಿಳಿದವರಲ್ಲಿ, ಶ್ರೇಷ್ಠಃ-ಅಗ್ರೇಸರನಾದ, ಭಗವಾನ್ ಷಡ್ಗುಣೈಶ್ವರ್ಯಸಂಪನ್ನನಾದ, ಬಾದರಾಯಣಃ-ವೇದವ್ಯಾಸಮುನಿಯು, ಯಾನಿ-ಯಾವುಗಳನ್ನು, ವೇದ-ಬಲ್ಲನೋ, ಪರಾಪರವಿದಃ, ಪರ-ನಿರ್ಗುಣಬ್ರಹ್ಮಸ್ವರೂಪವನ್ನು, ಅಪರ-ಸಗುಣಬ್ರಹ್ಮಸ್ವರೂಪವನ್ನೂ, ವಿದಃ-ತಿಳಿದಿರುವ, ಅನ್ಯೇ-ಇತರರಾದ, ಮುನಯಶ್ಚ-ಮುನಿಗಳೂ, ಯಾನಿ-ಯಾವಸಂಗತಿಗಳನ್ನು ವಿದುಃ-ಬಲ್ಲರೋ ॥೭॥ ಗುರವಃ-ಗುರುಗಳಾದವರು, ಸ್ನಿಗ್ಧಸ್ಯ-ಪ್ರೇಮಾಸ್ಪದನಾದ, ಶಿಷ್ಯಸ್ಯ--ಶಿಷ್ಯನಿಗೆ, ಗುಹ್ಯಮಪಿ--ರಹಸ್ಯವಾದುದನ್ನೂ, ಬ್ರೂಯುಃ-ಹೇಳುವರು. ಆದುದರಿಂದ, ಹೇಸೌಮ್ಯ-ಎಲೈಸಾಧುವಾದ ಸೂತನೆ, ತತ್ಸರ್ವಂ-ಅದೆಲ್ಲವನ್ನೂ, ತದನುಗ್ರಹಾತ್, ತತ್-ಅವರ, ಅನುಗ್ರಹಾತ್-ಅನುಗ್ರಹದ ದೆಸೆಯಿಂದ, ತ್ವಂ-ನೀನು ವೇತ್ಥ-ತಿಳಿದಿರುವೆ ॥೮॥ ಹೇ ಆಯುಷ್ಮನ್-ಎಲೈ ಆಯುಷ್ಮಂತನೆ, ತತ್ರತತ್ರ-ಆ ಆ ವೇದಶಾಸ್ತ್ರಾದಿಗಳಲ್ಲಿ ಅಂಜಸಾ-ಯಥಾರ್ಥವಾಗಿ, ಪುಂಸಾಂ-ಪುರುಷರಿಗೆ, ಏಕಾಂತತಃ-ನಿರ್ದೋಷವಾದ, ಶ್ರೇಯಃ-ಶ್ರೇಯಸ್ಸೆಂದು, ಭವತಾ-ನಿನ್ನಿಂದ, ಯತ್-ಯಾವುದು, ವಿನಿಶ್ಚಿತಂ-ನಿಶ್ಚಯಿಸಲ್ಪಟ್ಟಿರುವುದೊ, ತತ್--ಅದನ್ನು ನಃ-ನಮಗೆ, ಶಂಸಿತುಂ-ಹೇಳುವುದಕ್ಕೆ ಅರ್ಹಸಿ-ಅರ್ಹನಾಗುತ್ತಿ ॥೯॥

ಹೇಸಾಧೋ-ಎಲೈ ಸಜ್ಜನಶಿರೋಮಣಿಯಾದ ಸೂತನೇ, ಅಸ್ಮಿನ್-ಈ, ಕಲೌಯುಗೇ-ಕಲಿಯುಗದಲ್ಲಿ, ಜನಾಃ-ಜನಗಳು, ಪ್ರಾಯೇಣ-ಬಹಳವಾಗಿ, ಅಲ್ಪಾಯುಷಃ - ಸ್ವಲ್ಪವಾದ ಆಯುಸ್ಸುಳ್ಳವರಾಗಿಯೂ, ಮಂದಾಃ-ಸೋಮಾರಿಗಳಾಗಿಯೂ, ಸುಮಂದಮತಯಃ-ಮಂದಬುದ್ಧಿಯುಳ್ಳವರಾಗಿಯೂ,

---

ಸಗಳು,ಪುರಾಣಗಳು, ಧರ್ಮಶಾಸ್ತ್ರಗಳು, ಯಾವವಿರುವವೋ ಅವೆಲ್ಲವನ್ನೂ ನೀನು ಓದಿರುವುದಲ್ಲದೇ ಅವುಗಳಿಗೆ ವ್ಯಾಖ್ಯಾನಗಳನ್ನೂ ಮಾಡಿರುವೆ ॥೬॥ ವೇದಾರ್ಥಜ್ಞರಲ್ಲಿ ಶ್ರೇಷ್ಠನಾದ ವೇದವ್ಯಾಸಮುನಿಯು ಯಾವುಗಳನ್ನು ಬಲ್ಲನೋ,ಮತ್ತು ಸಗುಣ ನಿರ್ಗುಣಗಳೆಂಬ ಎರಡು ತತ್ವಗಳನ್ನೂ ತಿಳಿದಇತರ ಮಹರ್ಷಿಗಳು ಯಾವ ಸಂಗತಿಗಳನ್ನು ಬಲ್ಲರೋ ॥೭॥ ಗುರುಗಳು ಪ್ರಿಯರಾದಶಿಷ್ಯರಿಗೆ ಗುಟ್ಟುಗಳನ್ನೂ ಹೇಳುವುದರಿಂದ, ನೀನು ಅವೆಲ್ಲವನ್ನೂ ಬಲ್ಲೆ ॥೮॥ ಆದುದರಿಂದ ಎಲೈ ಆಯುಷ್ಮಂತನೇ, ನೀನು ಓದಿಕೇಳಿ ತಿಳಿದಿರುವುದರಲ್ಲಿ ಪುರುಷರಿಗೆ ನಿಜವಾಗಿ ಯಾವುದು ನಿರ್ದುಷ್ಟವಾದ ಶ್ರೇಯಸ್ಸೆಂದು ನಿಶ್ಚಯಿಸಿರುವೆಯೋ ಅದನ್ನು ನಮಗೆ ತಿಳುಹಿಸು ॥೯॥ ಎಲೈ ಸಾಧುವೆ ಈಕಲಿಯುಗದಲ್ಲಿ ಜನರು ಬಹಳವಾಗಿ

ಲ್ಪಾಯುಷಸ್ಸ್ಯಧೋ ಕಲಾವಸ್ಮಿನ್ಯುಗೇ ಜನಾಃ । ಮಂದಾ ಸ್ಸುಮಂದ
ಮತಯೋ ಮಂದಭಾಗ್ಯಾ ಹ್ಯುಪದ್ರುತಾಃ ॥೧೦॥ ಭೂರೀಣಿ ಭೂರಿಕ
ರ್ಮಾಣಿ ಶ್ರೋತವ್ಯಾನಿ ವಿಭಾಗಶಃ । ಅತ ಸ್ಸಾಧೋತ್ರಯತ್ಸಾರಂ ಸಮು
ದ್ಧೃತ್ಯ ಮನೀಷಯಾ ॥೧೧॥ ಬ್ರೂಹಿ ಭದ್ರಾಯ ಭೂತಾನಾಂ ಯೇನಾ
ತ್ಮಾ ಸಂಪ್ರಸೀದತಿ । ಸೂತ ಜಾನಾಸಿ ತತ್ಸರ್ವಂ ಭಗವಾನ್ ಸಾತ್ವತಾಂ
ಪತಿಃ ॥೧೨॥ ದೇವಕ್ಯಾಂ ವಸುದೇವಸ್ಯ ಜಾತೊ ಯತ್ರಚಿಕೀರ್ಷಯಾ ।
ತನ್ನ ಶ್ಯುಶ್ರೂಷಮಾಣಾನಾ ಮರ್ಹಸ್ಯಂಗಾನುವರ್ಣಿತುಂ ॥೧೩॥ ಯಸ್ಯಾ

ಮಂದಭಾಗ್ಯಾಃ - ದರಿದ್ರರಾಗಿಯೂ, ಉಪದ್ರುತಾಃ - ರೋಗಾದಿಗಳಿಂದಲೂ ಜೀವನಕ್ಕಿಲ್ಲದುದರಿಂದಲೂ ಪೀಡಿತರಾಗಿಯೂ ಇರುವರು. ॥ ೧೦ ॥ ವಿಭಾಗಶಃ- * ಪ್ರಕೃತಿ ‡ ವಿಕೃತಿಭೇದಗಳಿಂದ, ಭೂರಿಕರ್ಮಾಣಿ, ಭೂರಿ-ಬಹಳವಾಗಿ ಆಚರಿಸಬೇಕಾದ, ಕರ್ಮಾಣಿ-ಕ್ರಿಯೆಗಳುಳ್ಳ, ಭೂರೀಣಿ-ಕರ್ಮಗಳು ಬಹಳವಾಗಿರುವವು. ಶ್ರೋತವ್ಯಾನಿ-ಕೇಳಲ್ಪಡತಕ್ಕವುಗಳು, ಭೂರೀಣಿ-ಬಹಳವಾಗಿರುವುವು, ಅತಃ-ಆದುದರಿಂದ, ಸಾಧೋ-ಎಲೈಸತ್ಪುರುಷನೆ, ಅತ್ರ-ಈ ಶಬ್ದಸಮುದ್ರದಲ್ಲಿ, ಯತ್-ಯಾವುದು, ಸಾರಂ-ಮುಖ್ಯವಾದುದೋ, ಮನೀಷಯಾ-ನಿನ್ನ ಬುದ್ಧಿಯಿಂದ, ಸಮುದ್ಧೃತ್ಯ-ಅದನ್ನು ತೆಗೆದು, ಯೇನ-ಯಾವುದರಿಂದ, ಆತ್ಮಾ-ಮನಸ್ಸೆಂಬುದು, ಸಂಪ್ರಸೀದತಿ-ಸಂಪೂರ್ಣವಾಗಿ ಪ್ರಸನ್ನವಾಗುವುದೋ, ಭೂತಾನಾಂ-ಪ್ರಾಣಿಗಳ, ಭದ್ರಾಯ-ಕ್ಷೇಮಕ್ಕಾಗಿ, ಬ್ರೂಹಿ-ಹೇಳು. ಹೇಸೂತ-ಎಲೈಸೂತನೇ, ಭಗವಾನ್-ನಿರತಿಶಯಗಳಾದ ಐಶ್ವರ್ಯಾದಿ ಗುಣಗಳಿಂದ ಕೂಡಿದ, ಸಾತ್ವತಾಂ-ಭಕ್ತರಿಗೆ, ಪತಿಃ-ಪಾಲಕನಾದ ಭಗವಂತನು, ಯತ್ರ-ಯಾವಕಾರ್ಯವನ್ನು, ಚಿಕೀರ್ಷಯಾ-ಮಾಡುವ ಸಂಕಲ್ಪದಿಂದ, ವಸುದೇವಸ್ಯ-ವಸುದೇವನ, ದೇವಕ್ಯಾಂ-ಪತ್ನಿಯಾದ ದೇವಕಿಯಲ್ಲಿ, ಜಾತಃ-ಹುಟ್ಟಿದನೋ, ತತ್ಸರ್ವಂ-ಅದೆಲ್ಲವನ್ನೂ, ತ್ವಂ-ನೀನು, ಜಾನಾಸಿ-ತಿಳಿದಿರುವೆ. ಆದುದರಿಂದ ಹೆಅಂಗ-ಎಲೈ ಪ್ರಿಯನಾದಸೂತನೆ, ತತ್-ಆ ಸಂಗತಿಯನ್ನು, ಶುಶ್ರೂಷಮಾಣಾನಾಂ-ಕೇಳಲಪೇಕ್ಷೆಯುಳ್ಳ, ನಃ-ನಮಗೆ, ಅನುವರ್ಣಿತುಂ - ತಿಳುಹಿಸುವುದಕ್ಕೆ, ಅರ್ಹಸಿ-ಯೋಗ್ಯನಾಗುತ್ತಿ ॥ ೧೩ ॥ ಯಸ್ಯ-ಯಾವ ಪರಮೇಶ್ವರನ, ಅವತಾರಃ-ಅವತಾರವು, ಭೂತಾನಾಂ-ಪ್ರಾಣಿಗಳ

ಅಲ್ಪಾಯುಗಳಾಗಿಯೂ, ಅಲಸರಾಗಿಯೂ, ಅಲ್ಪ ಬುದ್ಧಿಗಳಾಗಿಯೂ, ದರಿದ್ರರಾಗಿ, ರೋಗಾದಿಗಳಿಂದಲೂ, ಜೀವನಕ್ಕಿಲ್ಲದುದರಿಂದಲೂ ಪೀಡಿತರಾಗಿಯೂ ಇರುವರು ॥೧೦॥ ಮಾಡಬೇಕಾದ ಕರ್ಮಗಳು ಬಹಳವಾಗಿರುವವು. ಕೇಳತಕ್ಕ ವಿಷಯಗಳು ಎಷ್ಟೋ ಇರುವವು ಆದುದರಿಂದ ಎಲೈ ಸಾಧುವೇ ಇವುಗಳಲ್ಲಿ ಸಾರವಾದುದನ್ನು ನಿನ್ನ ಬುದ್ಧಿಯಿಂದ ನಿಶ್ಚಯಿಸಿ, ಯಾವುದರಿಂದ ಬುದ್ಧಿಯು ಪ್ರಸನ್ನವಾಗುವುದೋ, ಎಲ್ಲರಿಗೂ ಶ್ರೇಯಸ್ಸುಂಟಾಗುವುದೋ ಅದನ್ನು ಹೇಳು ॥೧೧॥ ಭಕ್ತರಕ್ಷಕನಾದ ಭಗವಂತನು ಯಾವಕಾರ್ಯವನ್ನುಮಾಡುವುದಕ್ಕಾಗಿ ವಸುದೇವನ ಪತ್ನಿಯಾದ ದೇವಕಿಯಲ್ಲಿ ಅವತರಿಸಿದನೋ, ಯಾವನ ಅವತಾರವೆಂಬುದು ಪ್ರಾಣಿಗಳಿಗೆ ಕ್ಷೇಮವನ್ನೂ ಸಮೃದ್ಧಿಯನ್ನೂ ಉಂಟುಮಾಡುವುದೋ, ಅದನ್ನು ನೀನು ಬಲ್ಲೆಯಾದುದರಿಂದ ಕೇಳಬೇಕೆಂದು

* ಅಮಾವಾಸ್ಯೆ, ಪೂರ್ಣಿಮೆ ಮೊದಲಾದವುಗಳಲ್ಲಿ ಮಾಡುವ ಇಷ್ಟಿ ಮೊದಲಾದವುಗಳು.

‡ ಅಗ್ನಿಷ್ಟೋಮಮೊದಲಾದ ಯಜ್ಞಗಳು. § ಪಾ-ಸಭ್ಯ

ವತಾರೋ ಭೂತಾನಾಂ ಕ್ಷೇಮಾಯ ವಿಜಯಾಯಚ । ಆಪನ್ನ ಸ್ಸಂಸೃತಿಂ ಘೋರಾಂ ಯನ್ನಾಮ ವಿವಶೋ ಗೃಣನ್ ॥೧೪॥ ತತ ಸ್ಸದ್ಯೋ ವಿಮುಚ್ಯೇತ ಯದ್ಬಿಭೇತಿ ಸ್ವಯಂ ಭಯಂ । ಯತ್ಪಾದಸಂಶ್ರಯಾ ಸ್ಸೂತ ಮುನಯಃ ಪ್ರಶಮಾಯನಾಃ ॥೧೫॥ ಸದ್ಯಃಪುನಂತ್ಯುಪಸ್ಪೃಷ್ಟಾ ಸ್ಸ್ವರ್ಧುನ್ಯಾಪೋನುಸೇವಯಾ । ಕೋವಾ ಭಗವತ ಸ್ತಸ್ಯ ಪುಣ್ಯಶ್ಲೋಕೇಡ್ಯಕರ್ಮಣಃ ॥೧೬॥ ಶುದ್ಧಿಕಾಮೋ ನಶೃಣುಯಾ ದ್ಯಶಃ ಕಲಿಮಲಾಪಹಂ । ತಸ್ಯ ಕರ್ಮಾಣ್ಯು

ಕ್ಷೇಮಾಯ-ಕ್ಷೇಮಕ್ಕಾಗಿಯೂ, ವಿಜಯಾಯಚ-ಅಭಿವೃದ್ಧಿಗಾಗಿಯೂ ಆಗಿರುವುದೋ, ಘೋರಾಂ-ಭಯಂಕರವಾದ, ಸಂಸೃತಿಂ-ಸಂಸಾರವನ್ನು, ಆಪನ್ನಃ-ಹೊಂದಿದವನು, ವಿವಶಃ-ತಿಳಿವಳಿಕೆಯಿಲ್ಲದೆ (ಅಕಸ್ಮಾತ್ತಾಗಿ) ಯನ್ನಾಮ-ಯಾವ ಭಗವಂತನ ಹೆಸರನ್ನು, ಗೃಣನ್-ಹೊಗಳಿದವನಾಗಿ, ॥ ೧೪ ॥ ತತಃ-ಅನಂತರದಲ್ಲಿ, ಸದ್ಯಃ-ತತ್‌ಕ್ಷಣದಲ್ಲಿಯೇ, ವಿಮುಚ್ಯೇತ-ಬಿಡಲ್ಪಡುವನೋ, ಯತ್-ಯಾವಕಾರಣದಿಂದ, ಭಯಂ-ಭಯವೆಂಬುದು, (ಮೃತ್ಯು) ಸ್ವಯಂ-ತಾನೇ, ಬಿಭೇತಿ-ಭಯಪಡುವುದೋ, ಯತ್ಪಾದಸಂಶ್ರಯಾಃ, ಯತ್-ಯಾವ ಪರಮಾತ್ಮನ, ಪಾದ-ಪಾದವೇ, ಸಂಶ್ರಯಾಃ-ಆಶ್ರಯವಾಗಿ ಉಳ್ಳವರಾಗಿರುವುದರಿಂದಲೇ, ಪ್ರಶಮಾಯನಾಃ, ಪ್ರಶಮ-ಶಾಂತಿಯೇ, ಆಯನಾಃ-ಮಾರ್ಗ ಅಥವ ಆಶ್ರಯವಾಗಿಉಳ್ಳ, ಮುನಯಃ-ಋಷಿಗಳು, ॥ ೧೫ ॥ ಉಪಸ್ಪೃಷ್ಟಾಃ - ಸನ್ನಿಧಿಮಾತ್ರದಿಂದ ಸೇವಿಸಲ್ಪಟ್ಟವರಾಗಿ, ಸದ್ಯಃ - ಆಗಲೇ, ಪುನಂತಿ - ಪರಿಶುದ್ಧಗೊಳಿಸುವರೋ, ಸ್ವರ್ಧುನ್ಯಾಪಃ = ಸ್ವರ್ಧುನೀ-ಗಂಗೆಯ, ಆಪಸ್ತು-ಉದಕಗಳಾದರೋ, ಅನುಸೇವಯಾ - ಸ್ನಾನಾದಿಗಳಿಂದ ಸೇವಿಸಲ್ಪಟ್ಟು, ಪುನಂತಿ - ಪಾವನಗೊಳಿಸುವುವೋ ಪುಣ್ಯಶ್ಲೋಕೇಡ್ಯಕರ್ಮಣಃ = ಪುಣ್ಯಶ್ಲೋಕ-ಸತ್ಪುರುಷರಿಂದ, ಈಡ್ಯ-ಹೊಗಳಲ್ಪಡುವ, ಕರ್ಮಣಃ ಕಾರ್ಯಗಳುಳ್ಳ, ತಸ್ಯ-ಆ, ಭಗವತಃ-ಭಗವಂತನ, ॥ ೧೬ ॥ ಕಲಿಮಲಾಪಹಂ= ಕಲಿ-ಸಂಸಾರದ, ಮಲ-ದುಃಖಗಳನ್ನು, ಅಪಹಂ - ನಾಶಗೊಳಿಸುವ, ಯಶಃ - ಸಚ್ಚರಿತ್ರೆಯನ್ನು, ಶುದ್ಧಿಕಾಮಃ= ಶುದ್ಧಿ-ಪಾರಿಶುಧ್ಯವನ್ನು, ಕಾಮಃ-ಬಯಸುವ, ಕೋವಾ-ಯಾವನುತಾನೇ, ನಶೃಣುಯಾತ್-ಕೇಳದೇ ಇದ್ದಾ

ತವಕಿಸುತ್ತಿರುವ ನಮಗೆ ಅದನ್ನು ವಿಶದವಾಗಿ ತಿಳುಹುವನಾಗು ॥೧೩॥ ಎಂದು ಶೌನಕಾದಿಗಳು ಮರಳಿ ಭಗವನ್ಮಹಿಮೆಯನ್ನು ವರ್ಣಿಸುತ್ತಾ ಅದನ್ನು ಕೇಳುವುದರಲ್ಲಿ ತಮಗಿರುವ ಕುತೂಹಲವನ್ನು ತಿಳಿಯಪಡಿಸುವುದೆಂತೆಂದರೆ:- ಭಯಂಕರವಾದ ಸಂಸಾರ ಸಮುದ್ರದಲ್ಲಿ ಮುಳುಗಿರುವವನು ಹಠಾತ್ತಾಗಿ ಯಾವನ ನಾಮೋಚ್ಚಾರಣೆಯನ್ನು ಮಾಡಿದಕೂಡಲೆ ಕಡೆಹಾಯುವನೋ, ಮೃತ್ಯುವು ಕೂಡಾ ಯಾವನಿಗೆ ಭಯಪಡುವುದೋ, ಯಾವನ ಪಾದಗಳನ್ನು ನಂಬಿರುವ ಪರಮ ಶಾಂತರಾದ ಮಹರ್ಷಿಗಳು ದರ್ಶನಮಾತ್ರದಿಂದ ಆಗಲೇ ಪಾವನ ಗೊಳಿಸುವರೋ, ಭಗವಂತನ ಪಾದಾರವಿಂದದಿಂದುದ್ಭವಿಸಿದ ಲೋಕಪಾವನಿಯಾದಗಂಗೆಯೂ ಯಾರಭಕ್ತರಂತೆ ತತ್‌ಕ್ಷಣವೇ ಪಾವನಗೊಳಿಸಲಾರದೊ, ಅಂದರೆ ಗಂಗೆಗಿಂತಲೂ ಭಗವದ್ಭಕ್ತರು ಶ್ರೇಷ್ಠರೆಂದುಭಾವವು) ಸತ್ಪುರುಷರಿಂದ ಹೊಗಳಲ್ಪಟ್ಟ ಮಹಾಕಾರ್ಯಗಳುಳ್ಳ ಆಭಗವಂತನ ಸಂಸಾರದುಃಖಗಳ್ನು ನಾಶಗೊಳಿಸುವ ಸಚ್ಚರಿತ್ರೆಯನ್ನು, ಪಾಪಗಳನ್ನು ಕಳೆದುಕೊಳ್ಳಲಪೇಕ್ಷಿಸುವ ಯಾವನುತಾನೇ ಕೇಳಲಾರನು? ಎನ್ನುತ್ತಾ ಋಷಿಗಳು ಮತ್ತೊಂದು ಪ್ರಶ್ನೆಯನ್ನು ಮಾಡುತ್ತಾರೆ. ನಾರದಾದಿಗಳಿಂ

ದಾರಾಣಿ ಪರಿಗೀತಾನಿ ಸೂರಿಭಿಃ ॥೧೭॥ ಬ್ರೂಹಿ ನಶ್ಶ್ರದ್ದಧಾನಾನಾಂಲೀಲ ಯಾ ದಧತಃ ಕಲಾಃ । ಅಥಾಖ್ಯಾಹಿ ಹರೇ ರ್ಧೀಮನ್ನವತಾರಕಥಾ ಶ್ಶುಭಾಃ॥೧೮॥ಲೀಲಾ ವಿದಧತ ಸ್ಸ್ವೈರಮೀಶ್ವರಸ್ಯಾತ್ಮಮಾಯಯಾ । ವಯಂ ತು* ನವಿತೃಪ್ಯಾಮ ಉತ್ತಮಶ್ಲೋಕವಿಕ್ರಮೈಃ ॥೧೯॥ ಯಚ್ಛೃಣ್ವತಾಂ ರಸಜ್ಞಾನಾಂ ಸ್ವಾದು ಸ್ವಾದು ಪದೇಪದೇ । ಕೃತವಾನ್ಕಿಲ ವೀರ್ಯಾಣಿ ರಾಮೇಣಸಹ ಕೇಶವಃ ॥೨೦॥ ಅತಿಮರ್ತ್ಯಾನಿ ಭಗವಾನ್ ಗೂಢಃ ಕಪಟ

ನು ? ॥ ೧೭ ॥ ಲೀಲಯಾ-ವಿಲಾಸದಿಂದ, ಕಲಾಃ-ಬ್ರಹ್ಮರುದ್ರಾದಿ ರೂಪಗಳನ್ನು, ಧಧತಃ-ಧರಿಸಿರುವ, ತಸ್ಯ-ಆ ಭಗವಂತನ, ಸೂರಿಭಿಃ-ನಾರದಾದಿ ಮಹಾಜ್ಞಾನಿಗಳಿಂದ, ಪರಿಗೀತಾನಿ-ಹೊಗಳಲ್ಪಟ್ಟ, ಉದಾರಾಣಿ-ಉತ್ಕೃಷ್ಟಗಳಾದ, ಕರ್ಮಾಣಿ - ಪ್ರಪಂಚಸೃಷ್ಟಿ ಮೊದಲಾದ ಕರ್ಮಗಳನ್ನು, ಶ್ರದ್ಧಧಾನಾನಾಂ-ಕೇಳಬೇಕೆಂಬ ಶ್ರದ್ಧೆಯುಳ್ಳ, ನಃ-ನಮಗೆ, ಬ್ರೂಹಿ-ಹೇಳು ॥ ೧೮ ॥ ಹೇಧೀಮನ್-ಎಲೈ ಪಂಡಿತನಾದ ಸೂತನೆ, ಅಥ-ಆಬಳಿಕ, ಆತ್ಮಮಾಯಯಾ, ಆತ್ಮ-ತನ್ನ, ಮಾಯಯಾ-ಮಾಯೆಯಿಂದ, ಸ್ವೈರಂ-ಸ್ವೇಛೆಯಾಗಿ, ಲೀಲಾಃ-ಲೀಲೆಗಳನ್ನು, ವಿದಧತಃ-ಮಾಡಿದ, ಹರೇಃ-ಹರಿಪರಮಾತ್ಮನ, ಶುಭಾಃ-ಲೋಕಕ್ಕೆ ಮಂಗಳಕರಗಳಾದ, ಅವತಾರಕಥಾಃ = ಅವತಾರ-ಮತ್ಸ್ಯಕೂರ್ಮಾದ್ಯವತಾರಗಳಿಂದುಂಟಾದ, ಕಥಾಃ-ಕಥೆಗಳನ್ನು, ಆಖ್ಯಾಹಿ-ಹೇಳು. ವಯಂತು-ನಾವಾದರೆ, ಉತ್ತಮಶ್ಲೋಕವಿಕ್ರಮೈಃ = ಉತ್ತಮ-ತಮಸ್ಸನ್ನು [ಅಜ್ಞಾನ] ಹೋಗಲಾಡಿಸುವ, ಶ್ಲೋಕ - ಸಚ್ಚರಿತ್ರೆಯುಳ್ಳ ಭಗವಂತನ, ವಿಕ್ರಮೈಃ- ಚರಿತ್ರೆಗಳಿಂದ, ನವಿತೃಪ್ಯಾಮಃ-ತೃಪ್ತಿಯನ್ನು ಹೊಂದುವದಿಲ್ಲ. ॥ ೧೯ ॥ ಯತ್ - ಯಾವ ಭಗವತ್ಕಥೆಯನ್ನು, ಶೃಣ್ವತಾಂ-ಕೇಳುವವರಿಗೆ, ಪದೇಪದೇ-ಪ್ರತಿಪದದಲ್ಲಿಯೂ, ಸ್ವಾದುಸ್ವಾದು-ಅತಿರುಚಿಯುಂಟೋ, ಗೂಢಃ-ಸ್ವರೂಪವನ್ನು ಪ್ರಕಾಶಗೊಳಿಸದ, ಕಪಟಮಾನುಷಃ-ಮನುಷ್ಯರೂಪವನ್ನು ಪಡೆದಿರುವ, ಭಗವಾನ್-ಷಡ್ಗುಣಗಳಿಂದೊಡಗೂಡಿದ, ಕೇಶವಃ - ಶ್ರೀ ಕೃಷ್ಣನು, ರಾಮೇಣಸಹ - ಬಲರಾಮನೊಡನೆ, ಅತಿಮರ್ತ್ಯಾನಿ-ಮನುಷ್ಯ

ದ ಸ್ತುತಿಸಲ್ಪಟ್ಟಿರುವ ಆ ಭಗವಂತನ ಉತ್ತಮಗಳಾದ ಕಾರ್ಯಗಳನ್ನು ಕೇಳಬೇಕೆಂದು ಕುತೂಹಲವುಳ್ಳ ನಮಗೆ ತಿಳುಹಿಸು ಮತ್ತು ಮಾಯೆಯಿಂದ ಸ್ವೇಛ್ಛಾನುಸಾರವಾಗಿ ಲೀಲೆಗಳನ್ನು ನಡೆಯಿಸಿದ ಭಗವಂತನ ಪರಮ ಮಂಗಳಗಳಾದ ಅವತಾರಕಥೆಗಳನ್ನು ಹೇಳು ॥೧೮॥ ಮನುಷ್ಯಾವತಾರವನ್ನು ಪಡೆದು ಸ್ವರೂಪವನ್ನು ಮರೆಮಾಚಿಕೊಂಡಿರುವ ಶ್ರೀಕೃಷ್ಣ ಭಗವಂತನು ಅಣ್ಣನಾದ ಬಲರಾಮನಿಂದೊಡಗೂಡಿ ಮಾಡಿದ ಗೋವರ್ಧನೋದ್ಧಾರವೇ ಮೊದಲಾದ ಅಮಾನುಷ ಕರ್ಮಗಳನ್ನು ಕೇಳುವವರಿಗೆ ಮಾತುಮಾತಿಗೂ ರುಚಿಯೆಂಬುದು ಹೆಚ್ಚುವುದು. ಆದುದರಿಂದ ಭಗವಂತನ ಚರಿತ್ರೆಯನ್ನು ಕೇಳುವುದರಲ್ಲಿ ನಮಗೆಂದಿಗೂ ತೃಪ್ತಿಯಿಲ್ಲ॥೨೦॥ಆದರೆ ನಾವುಗಳು ಯಾಜನಾಧ್ಯಾಪ

ಟಿಪ್ಪಣಿ:—*ಲೋಕದಲ್ಲಿ ತೃಪ್ತಿಯೆಂಬುದು ಮೂರು ವಿಧ. (೧) ಹೊಟ್ಟೆಯು ತುಂಬುವದು (೨) ರುಚಿಯನ್ನು ತಿಳಿಯದಿರುವುದು. (೩) ರುಚಿಯಿಲ್ಲದೇ ಹೋಗುವುದು. ಈ ಮೂರು ವಿಧಗಳೂ ಭಗವತ್ಕಥೆಯಲ್ಲಿ, ಸಂಬಂಧಿಸುವುದಿಲ್ಲ. (೧) ಕೇಳುವ ಋಷಿಗಳ ಕಿವಿಗಳು ಆಕಾಶವಾದುದರಿಂದ ತುಂಬಲಾಗುವುದಿಲ್ಲ (೨) ರಸಜ್ಞರಾದುದರಿಂದ ರುಚಿಯು ತಿಳಿಯದಿರುವುದಿಲ್ಲ. (೩) ಕಬ್ಬಿನಂತೆ ಬರುತ್ತಾ ಬರುತ್ತಾ ನಿಸ್ಸಾರವಲ್ಲವಾದುದರಿಂದ ರುಚಿಕೆಡುವುದಿಲ್ಲ. ಆದುದರಿಂದ ತೃಪ್ತಿಯುಂಟಾಗುವದಿಲ್ಲ.

ಮಾನುಷಃ|ಕಲಿಮಾಗತ ಮಾಜ್ಞಾಯ ಕ್ಷೇತ್ರೇಸ್ಮಿನ್ ವೈಷ್ಣವೇ ವಯಂ||೨೧||
ಆಸೀನಾ ದೀರ್ಘಸತ್ರೇಣ ಕಥಾಯಾಂ ಸಕ್ಷಣಾ ಹರೇಃ | ತ್ವಂ ನಸ್ಸಂದರ್ಶಿ
ತೋ ಧಾತ್ರಾ ದುಸ್ತರಂ ನಿಸ್ತಿತೀರ್ಷತಾಂ ||೨೨|| ಕಲಿಂ ಸತ್ವಹರಂಪುಂ
ಸಾಂ ಕರ್ಣಧಾರ ಇವಾರ್ಣವಂ | ಬ್ರೂಹಿ ಯೋಗೀಶ್ವರೇ ಕೃಷ್ಣೇ ಬ್ರ
ಹ್ಮಣ್ಯೇ ಧರ್ಮವರ್ಮಣಿ ||೨೩|| ಸ್ವಾಂಕಾಷ್ಠಾಮಧುನೋಪೇತೇ ಧರ್ಮಃ
ಕಂಶರಣಂಗತಃ || ಇತಿಪ್ರಥಮೋಧ್ಯಾಯಃ

ಶಕ್ತಿಯನ್ನು ಅತಿಕ್ರಮಿಸಿದ, ವೀರ್ಯಾಣಿ - ಗೋವರ್ಧನೋದ್ಧರಣವೇ ಮೊದಲಾದ ಅದ್ಭುತಕರ್ಮ ಗಳನ್ನು, ಕೃತವಾನ್ಕಿಲ -ಮಾಡಿದನಷ್ಟೆ.||೨೦||ಕಲಿಂ-ಕಲಿಯುಗವನ್ನು ಅಥವಾಕಲಿಪುರುಷನನ್ನು, ಆಗ ತಂ-ಬಂದವನನ್ನಾಗಿ, ಆಜ್ಞಾಯ-ತಿಳಿದು, ವಯಂ-ನಾವು, ಅಸ್ಮಿನ್ - ಈ, ವೈಷ್ಣವೇ-ವಿಷ್ಣುಸ್ಥಾನವಾದ, ಕ್ಷೇತ್ರೇ-ದೇವಭೂಮಿಯಲ್ಲಿ, ಹರೇಃ-ವಿಷ್ಣುವಿನ, ಕಥಾಯಾಂ-ಚರಿತ್ರೆಯನ್ನು·ಕೇಳುವುದರಲ್ಲಿ, ಸಕ್ಷಣಾಃ-ಸಾ ವಧಾನರಾಗಿ,ದೀರ್ಘಸತ್ರೇಣ, ದೀರ್ಘ-ಬಹುಕಾಲ ನಡೆಯತಕ್ಕ, ಸತ್ರೇಣ-ಯಾಗವನ್ನು ಮಾಡುವನೆವದಿಂದ, ಆಸೀನಾಃ-ಕುಳಿತಿರುವೆವು || ೨೧ || ಪುಂಸಾಂ-ಪುರುಷರ, ಸತ್ವಹರಂ, ಸತ್ವ-ಸಾತ್ವಿಕಗುಣಗಳನ್ನು,ಹರಂ-ಅಪಹರಿಸುವ, ದುಸ್ತರಂ-ದಾಟಲಶಕವಾದ ಕಲಿಂ-ಕಲಿಯನ್ನು, ನಿಸ್ತಿತೀರ್ಷತಾಂ-ಸಂಪೂರ್ಣವಾಗಿ ದಾಟಲ ಪೇಕ್ಷಿಸುತ್ತಿರುವ, ನಃ-ನಮಗೆ, ತ್ವಂ-ನೀನು, ಅರ್ಣವಂ-ಸಮುದ್ರವನ್ನು, ದಾಟಬೇಕೆಂದಿರುವವರಿಗೆ ಕರ್ಣ ಧಾರಇವ-ನಾವಿಕನಂತೆ, ಧಾತ್ರಾ-ದೈವದಿಂದ, ಸಂದರ್ಶಿತಃ-ತೋರಿಸಲ್ಪಟ್ಟವನಾದೆ. ||೨೨|| ಯೋಗೀಶ್ವರೆ, ಯೋಗಿ-ಯೋಗಿಗಳಿಗೆ, ಈಶ್ವರೆ-ಒಡೆಯನಾದ, ಬ್ರಹ್ಮಣ್ಯೇ-ಪರಬ್ರಹ್ಮಸ್ವರೂಪನಾದ, ಧರ್ಮವರ್ಮಣಿ, ಧ ರ್ಮ-ಧರ್ಮಕ್ಕೆ, ವರ್ಮಣಿ-ಕವಚದಂತಿರುವ[ರಕ್ಷಕನಾದ]ಕೃಷ್ಣೇ-ಕೃಷ್ಣಮೂರ್ತಿಯು, ಸ್ವಾಂ-ತನ್ನ, ಕಾಷ್ಠಾಂ-ನಿಜಸ್ವರೂಪವನ್ನು, ಉಪೇತೆ-ಹೊಂದಲು, ಅಧುನಾ-ಈಗ, ಧರ್ಮಃ-ಧರ್ಮವು, ಕಂ-ಯಾ ರನ್ನು, ಶರಣಂ-ಮರೆಯನ್ನು, ಗತಃ-ಹೊಕ್ಕಿತು.|| ಪ್ರಥಮಾಧ್ಯಾಯಂ ಸಂಪೂರ್ಣಂ || ೨೩ ||

ನಾದಿಗಳಲ್ಲಿ ನಿರತರಾಗಿರುವುದರಿಂದ ಅವಕಾಶವೆತ್ತಣದೆಂಬೆಯೇನೋ ! ಅಯ್ಯಾ ಸೂತ ನೇ ಕಲಿಪ್ರವೇಶವಾಯಿತೆಂಬುದನ್ನು ತಿಳಿದು ವಿಷ್ಣುಸಾಯುಜ್ಯವನ್ನು ಪಡೆಯಬೇಕೆಂ ದು ಈ ವೈಷ್ಣವಕ್ಷೇತ್ರದಲ್ಲಿ ಭಗವಂತನ ಸತ್ಕಥಾಶ್ರವಣದಲ್ಲಿ ಬದ್ಧಾದರರಾಗಿ, ಸತ್ರ ಯಾಗನೆಂಬ ವ್ಯಾಜದಿಂದ ಕಾಲವನ್ನು ಕಳೆಯುತ್ತಾ ಕುಳಿತಿದ್ದೆವು. ಅಷ್ಟರಲ್ಲಿಯೆ ಸಕಲಪ್ರಾಣಿಗಳ ಸತ್ವಶಕ್ತಿಯನ್ನೂ ನಾಶಗೊಳಿಸುತ್ತಿರುವ ಈ ಕಲಿಯನ್ನು ಸಂಪೂ ರ್ಣವಾಗಿ ದಾಟಬೇಕೆಂದಿರುವ ನಮ್ಮ ಬಳಿಗೆದೈವವೇ ನಿನ್ನನ್ನು ಕರತಂದಿತಾದುದರಿಂದ ನಿನ್ನಾಗಮನವು ಸಮುದ್ರದಲ್ಲಿ ಬಿದ್ದವರಿಗೆ ನಾವಿಕನು ದೊರತಂತಾಯಿತು ||೨೨|| ಅಲ್ಲದೆ ಪರಬ್ರಹ್ಮಸ್ವರೂಪನಾಗಿಯೂ, ಯೋಗೀಶ್ವರನಾಗಿಯೂ, ಧರ್ಮಪಾಲಕನಾಗಿ ಯೂ ಇದ್ದ ಶ್ರೀಕೃಷ್ಣಮೂರ್ತಿಯು ತನ್ನ ನಿಜಸ್ವರೂಪವನ್ನು ಪಡೆಯಲು ಈಗ ಧರ್ಮವು ಯಾರನ್ನು ಮರೆಹೊಕ್ಕಿತು ? ಕೃಷ್ಣನು ಈ ಲೋಕವನ್ನು ಬಿಟ್ಟು ಹೊರಡಲು ಧರ್ಮರಕ್ಷಕರು ಯಾರು? ಎಂದು ಬೆಸಗೊಂಡರೆಬಲ್ಲಿಗೆ ಭಾಗವತಚಂದ್ರಿಕೆಯೊಳ್

ಮೊದಲನೆಯ ಅಧ್ಯಾಯಂ ಮುಗಿದುದು ||೨೩

ಓಂ ನಮಃ ಪರಮಾತ್ಮನೇ

ಇತಿ ಸಂಪೃಷ್ಟಸಂಪ್ರಶ್ನೋ ವಿಪ್ರಾಣಾಂ ರೌಮಹರ್ಷಣಿಃ। ಪ್ರತಿಪೂಜ್ಯ ವಚ ಸ್ತೇಷಾಂ ಪ್ರವಕ್ತು ಮುಪಚಕ್ರಮೇ ॥೧॥ ಸೂತಃ॥ ಯಂ ಪ್ರವ್ರಜಂತ ಮನುಪೇತ ಮಪೇತ ಕೃತ್ಯಂ ದ್ವೈಪಾಯನೋ ವಿರಹಕಾತರ ಆಜುಹಾವ । ಪುತ್ರೇ * ತಿತನ್ಮಯತಯಾ ತರವೋಽಭಿನೇದು ಸ್ತಂ ಸರ್ವಭೂತಹೃ

ಅರ್ಥ--ಇತಿ-ಈರೀತಿಯಾಗಿ, ಸಂಪೃಷ್ಟಸಂಪ್ರಶ್ನಃ, ಸಂಪೃಷ್ಟ-ಚೆನ್ನಾಗಿ ಕೇಳಲ್ಪಟ್ಟ, ಸಂಪ್ರಶ್ನಃ-ಉತ್ತಮಪ್ರಶ್ನೆಗಳುಳ್ಳ, ರೌಮಹರ್ಷಣಿಃ-ರೋಮಹರ್ಷಣನ ಮಗನಾದ ಉಗ್ರಶ್ರವನೆಂಬ ಸೂತನು, ತೇಷಾಂ-ಆ, ವಿಪ್ರಾಣಾಂ-ಶೌನಕನೇಮೊದಲಾದ, ಬ್ರಾಹ್ಮಣರ, ವಚಃ-ಮಾತನ್ನು, ಪ್ರತಿಪೂಜ್ಯ-ಮನ್ನಿಸಿ, ಪ್ರವಕ್ತುಂ-ಹೇಳುವುದಕ್ಕೆ, ಉಪಚಕ್ರಮೇ-ಪ್ರಾರಂಭಿಸಿದನು. ॥೧॥ ಸೂತಃ-ಸೂತನು ಹೇಳುವುದೆಂತೆಂದರೆ--ದ್ವೈಪಾಯನಃ-ದ್ವೀಪವೇ ಜನ್ಮಸ್ಥಾನವಾಗುಳ್ಳ ವ್ಯಾಸಮುನಿಯು, ವಿರಹಕಾತುರಃ, ವಿರಹ-ಪುತ್ರವಿಯೋಗದಿಂದ, ಕಾತರಃ-ಭಯಗೊಂಡವನಾಗಿ, ಪ್ರವ್ರಜಂತಂ-(ಸರ್ವವನ್ನು ತ್ಯಜಿಸಿ) ಹೊರಟು ಹೋದ, ಅಪೇತಕೃತ್ಯಂ ಅಪೇತ-ತಪ್ಪಿಹೋದ, ಕೃತ್ಯಂ-ಕಾರ್ಯಗಳುಳ್ಳವನಾದುದರಿಂದಲೇ (ಅಂದರೆ ಯಾವಾಗಲೂ ಬ್ರಹ್ಮನಿಷ್ಠನಾಗಿರುವುದರಿಂದ ಕರ್ಮಮಾರ್ಗದಲ್ಲಿ ಪ್ರವರ್ತಿಸದಿರುವವನು) ಅನುಪೇತಂ-ಉಪನಯನಕ್ಕೆ ಅನರ್ಹನಾಗಿರುವ (ಅತಿಬಾಲನು) ಅಥವಾ ಯಾರಿಂದಲೂ ಹಿಂಬಾಲಿಸಲ್ಪಡದಿರುವ [ಒಂಟಿಯಾಗಿರುವ] ಯಂ-ಯಾವ ಶುಕಮುನಿಯನ್ನು, ಪುತ್ರಾ-ಮಗನೇ, ಇತಿ-ಎಂದು, ಆಜುಹಾವ-ಕೂಗಿಕೊಂಡನೋ, ಯದಾ-ಯಾವಾಗ ತರವಃ-ಅಲ್ಲಿರುವ ವೃಕ್ಷಗಳು, ತನ್ಮಯತಯಾ-ಆ ಶುಕಮುನಿಯ ರೂಪವುಳ್ಳವುಗಳಾದುದರಿಂದ, ಅಭಿನೇದುಃ -ಪ್ರತ್ಯುತ್ತರವನ್ನಿತ್ತವೋ, ಸರ್ವಭೂತಹೃದಯಂ, ಸರ್ವ-ಎಲ್ಲಾ, ಭೂತ-ಪ್ರಾಣಿಗಳ, ಹೃತ್-ಮನಸ್ಸನ್ನೂ, ಅಯಂ-ಯೋಗಶಕ್ತಿಯಿಂದ ಪ್ರವೇಶಿಸಿರುವ, ತಂ-ಆ, ಮುನಿಂ - ಶುಕಮುನಿಯನ್ನು, ಆನತಃ-

ಸೂಚನೆ॥ ಸೂತಂ ಹರಿಗುಣಕಥನ । ಖ್ಯಾತಂ ವಿದಿತಂಗಮಾರ್ಥಜಾತಂ ಪೂತಂ ॥
ನೀತಿಪ್ರಶ್ನೆಗಳೊಳ್ ಸವಿ । ವಾತಿಂ ನಾಲ್ಕಕ್ಕೆ ನುಡಿವನುತ್ತರ ಮೀಗಳ್ ॥೨॥

ತಾತ್ಪರ್ಯ—ಪೂರ್ವಾಧ್ಯಾಯದಲ್ಲಿ ವಿವರಿಸಿದಂತೆ ಶೌನಕಾದಿಗಳು ಕೇಳಿದ ಪ್ರಶ್ನೆಗಳಿಗಾನಂದಗೊಂಡು ಸೂತಪೌರಾಣಿಕನು ಅವುಗಳಿಗೆ ಪ್ರತ್ಯುತ್ತರವನ್ನು ಹೇಳಲಾರಂಭಿಸುವುದಕ್ಕೆ ಮೊದಲು ಗುರುದೇವತಾನಮಸ್ಕಾರವನ್ನು ಮಾಡುತ್ತಾನೆ. ॥೧॥ ವ್ಯಾಸಮಹರ್ಷಿಯ ಪ್ರಭಾವದಿಂದ ಶುಕಗರ್ಭದಲ್ಲಿ ಜನಿಸಿದವನೇ ಶುಕಮುನಿಯು. ಅತನು ಬ್ರಹ್ಮನಿಷ್ಠನಾಗಿಯೇ ಹುಟ್ಟಿದುದರಿಂದ ಉಪನಯನಕ್ಕೂ ಅರ್ಹವಲ್ಲದ ಕೇವಲ ಬಾಲ್ಯದಲ್ಲಿಯೇ ಸರ್ವಸಂಗಪರಿತ್ಯಾಗಮಾಡಿ, ಕರ್ಮಮಾರ್ಗಕ್ಕೆ ಸಿಕ್ಕದೆ ಒಂಟಿಯಾಗಿಹೊರಟುಹೋದನು. ಆಗ ವ್ಯಾಸಮುನಿಯು ಸರ್ವಜ್ಞನಾಗಿದ್ದರೂ, ಮಗನ ಅಗಲಿಕೆಯನ್ನು ಸಹಿಸಲಾರದೇ ಹಿಂಬಾಲಿಸಿ ಹೋಗುತ್ತಾ ಬೆಟ್ಟಗುಟ್ಟಗಳೆಲ್ಲ ಪ್ರತಿಧ್ವನಿಕೊಡುವಂತೆ "ಮಗುಶುಕನೇ" ಎಂದು ಗಟ್ಟಿಯಾಗಿ ಕೂಕೊಂಡನು. ಬಳಿಕ ಶುಕಮುನಿಯು ಸರ್ವಾತ್ಮಕನಾದ್ದರಿಂದ

* ಟಿಪ್ಪಣಿ ಮೂಲದಲ್ಲಿ ಈ ಗುರುತುಮಾತ್ರ ಇದ್ದಲ್ಲಿ ವ್ಯಾಕರಣದೋಷವಿದ್ದರೂ ಋಷಿಪ್ರಯೋಗವಾದುದರಿಂದ ದೋಷವಲ್ಲವೆಂದು ತಿಳಿಯಬೇಕು.

ದಯಂ ಮುನಿ ಮಾನತೋಽಸ್ಮಿ ॥೨॥ ಯಸ್ಸ್ವಾನುಭಾವಮಖಿಲಶ್ರುತಿಸಾರಮೇಕ ಮಧ್ಯಾತ್ಮದೀಪ ಮತಿತೀರ್ಷತಾಂ ತಮೋಽಂಧಂ । ಸಂಸಾರಿಣಾಂ ಕರುಣಯಾಹ ಪುರಾಣಗುಹ್ಯಂತಂ ವ್ಯಾಸಸೂನು ಮುಪಯಾಮಿ ಗುರುಂ ಮುನೀನಾಂ॥೩॥ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ।ದೇವೀಂ ಸರಸ್ವತೀಂ ವ್ಯಾಸಂ ತತೋ ಜಯ ಮುದೀರಯೇ ॥೪॥ ಮುನಯಸ್ಸಾಧು ಪೃಷ್ಟೋಽಹಂ ಭವದ್ಭಿರ್ಲೋಕಮಂಗಳಂ । ಯತ್ಕೃತಃ ಕೃಷ್ಣ

ನಮಸ್ಕರಿಸುವವನು, ಅಸ್ಮಿ-ಆಗುತ್ತೇನೆ. ॥೨॥ ಅಂಧಂ-ದಟ್ಟವಾದ, ತಮಃ - ಸಂಸಾರವೆಂಬ ಕತ್ತಲೆಯನ್ನು, ಅತಿತೀರ್ಷತಾಂ - ದಾಟಲಪೇಕ್ಷಿಸುತ್ತಿರುವ, ಸಂಸಾರಿಣಾಂ-ಸಂಸಾರಿಗಳಿಗೆ, ಯಃ-ಯಾವಮಹಾತ್ಮನು, ಸ್ವಾನುಭಾವಂ, ಸ್ವ - ಅಸಾಧಾರಣವಾದ, ಅನುಭಾವಂ - ಮಹಿಮೆಯುಳ್ಳ, ಅಖಿಲಶ್ರುತಿಸಾರಂ, ಅಖಿಲ-ಸಮಸ್ತಗಳಾದ,ಶ್ರುತಿ-ವೇದಗಳಿಗೂ, ಸಾರಂ-ಸಾರಭೂತವಾದ, ಏಕಂ-ಅಸದೃಶವಾದ, ಅಧ್ಯಾತ್ಮದೀಪಂ, ಅಧ್ಯಾತ್ಮ-(ಕಾರ್ಯಕಾರಣಸಂಘಾತರೂಪವಾದ, ಶರೀರಾದಿಗಳನ್ನು ಅಧಿಕರಿಸಿರುವ) ಆತ್ಮತತ್ವಕ್ಕೆ, ದೀಪಂ-ಪ್ರಕಾಶಕವಾಗಿರುವ, ಪುರಾಣಗುಹ್ಯಂ, ಪುರಾಣ-ಪುರಾಣಗಳಲ್ಲಿ, ಗುಹ್ಯಂ - ರಹಸ್ಯವಾದಭಾಗವತವನ್ನು, ಕರುಣಯಾ-ದಯೆಯಿಂದ, ಆಹ-ಹೇಳುತ್ತಾನೋ, ಮುನೀನಾಂ-ಮನನಶೀಲರಾದ ಋಷಿಗಳಿಗೆ, ಗುರುಂ-ಗರುವಾದ, ತಂ-ಆ, ವ್ಯಾಸಸೂನುಂ-ವ್ಯಾಸಪುತ್ರನಾದ ಶುಕಮುನಿಯನ್ನು, ಉಪಯಾಮಿ-ಮರೆ ಹೊಗುವೆನು (ವಂದಿಸುವೆನು) ॥೩॥ ನಾರಾಯಣಂ-ನಾರಾಯಣ ಮೂರ್ತಿಯನ್ನೂ, ನರೋತ್ತಮಂ-ನರರಲ್ಲಿಶ್ರೇಷ್ಠನಾದ, ನರಂಚೈವ - ನರಾವತಾರನಾದ ಅರ್ಜುನನನ್ನೂ, ಸರಸ್ವತೀಂದೇವೀಂಚೈವ - ಸರಸ್ವತೀದೇವಿಯನ್ನೂಕೂಡಾ, ನಮಸ್ಕೃತ್ಯ - ನಮಸ್ಕರಿಸಿ, ತತಃ-ಆಬಳಿಕ, ಜಯಂ-[ಸಂಸಾರವನ್ನು ಜಯಿಸುವ] ಭಾಗವತಗ್ರಂಥವನ್ನು, ಉದೀರಯೇ - ಹೇಳುತ್ತೇನೆ. ॥೪॥ ಹೇಮುನಯಃ-ಅಯ್ಯಾಋಷಿಗಳಿರಾ, ಯತ್-ಯಾವ ನಿಮ್ಮಪ್ರಶ್ನೆಯು, ಲೋಕಮಂಗಳಂ-ಜಗತ್ತಿಗೆ ಮಂಗಳವನ್ನುಂಟುಮಾಡತಕ್ಕುದೋ,ಯೇನ-ಯಾವನಿಮ್ಮ ಪ್ರಶ್ನೆಯಿಂದ, ಆತ್ಮಾ-ಬುದ್ಧಿಯು, ಸುಪ್ರಸೀದತಿ-ಸಂಪೂರ್ಣವಾಗಿ ಪ್ರಸನ್ನವಾಗುವುದೋ.ಕೃಷ್ಣಸಂಪ್ರಶ್ನಃ,ಕೃಷ್ಣ-ಅಂತಹ ಕೃಷ್ಣವಿಷಯಕವಾದ,ಸಂಪ್ರಶ್ನಃ-ಪ್ರಶ್ನೆಯು,

ಅಯ್ಯಾ ಮುನಿಯೇ ಇದೇನು ಅಜ್ಞಾನ ? ಶುಕನಾರು ? ನೀನಾರು ? ಎಂದು ವೃಕ್ಷರೂಪದಿಂದುತ್ತರವನ್ನು ಕೊಟ್ಟನು. ಆದುದರಿಂದ ಅಂತಹ ಆತ್ಮಾರಾಮನಾದ ಶುಕಮುನಿಯನ್ನು ನಮಸ್ಕರಿಸುವೆನು. ಮತ್ತು ಯಾವಮಹಾತ್ಮನು ಈ ಜನನ ಮರಣರೂಪವಾದ ಸಂಸಾರವೆಂಬ ಕಗ್ಗತ್ತಲೆಯನ್ನು ದಾಟಬೇಕೆಂದಿರುವ ಸಂಸಾರಿಗಳಲ್ಲಿ ಕನಿಕರಿಸಿ, ಅಸಾಧಾರಣಮಹಿಮೆಯುಳ್ಳದ್ದಾಗಿಯೂ, ಸಕಲ ವೇದಸಾರವಾಗಿಯೂ, ಅಸದೃಶವಾಗಿಯೂ, ಆತ್ಮತತ್ವಪ್ರಕಾಶಕವಾಗಿಯೂ, ಇರುವ ಸಕಲ ಪುರಾಣಗಳಲ್ಲಿಯೂ ರಹಸ್ಯವಾದ ಭಾಗವತಪುರಾಣವನ್ನು ಹೇಳಿದನೋ, ಅಂತಹ ವ್ಯಾಸಪುತ್ರನಾದ ಶುಕಮುನಿಯನ್ನು ವಂದಿಸುತ್ತೇನೆ. ಎಂದು ಗುರುವನ್ನು ನಮಸ್ಕರಿಸಿ, ಬಳಿಕ ನರನಾರಾಯಣರನ್ನೂ, ಸರಸ್ವತಿಯನ್ನೂ ವಂದಿಸಿ, ಸೂತಪುರಾಣಿಕನು ಗ್ರಂಥವನ್ನಾರಂಭಿಸುತ್ತಾನೆ. ಅಯ್ಯಾ ಮುನಿಗಳಿರಾ-- ಲೋಕಕ್ಕೆ ಮಂಗಳಕರವಾಗಿಯೂ, ಬುದ್ಧಿಯನ್ನು ನಿರ್ಮಲಗೊಳಿಸುವುದಾಗಿಯೂ ಇರುವ ಕೃಷ್ಣನ ವಿಷಯವಾದ ಒಳ್ಳೆಯ ಪ್ರಶ್ನೆಯನ್ನು ಕೇಳಿದಿರಿ ನೀವು ಮೊದಲು ಕೇಳಿದ್ದ

ಸಂಪ್ರಶ್ನೋ ಯೇನಾತ್ಮಾ ಸುಪ್ರಸೀದತಿ ॥೫॥ ಸವೈ ಪುಂಸಾಂ ಪರೋ ಧ
ರ್ಮೋ ಯತೋ ಭಕ್ತಿರಧೋಕ್ಷಜೇ । ಅಹೈತುಕ್ಯಪ್ರತಿಹತಾ ಯಯಾತ್ಮಾ
ಸುಪ್ರಸೀದತಿ ॥೬॥ ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।
ಜನಯತ್ಯಾಶು ವೈರಾಗ್ಯಂ ಜ್ಞಾನಂಚ ಯದಹೈತುಕಂ ॥೭॥ ಧರ್ಮಃ ಸ್ವನ
ುಷ್ಠಿತಃ ಪುಂಸಾಂ ವಿಷ್ವಕ್ಸೇನಕಥಾಸು ಯಃ । ನೋತ್ಪಾದಯೇ ದ್ಯದಿ

ಯತ್ - ಯಾವಕಾರಣದಿಂದ, ಕೃತಃ - ಮಾಡಲ್ಪಟ್ಟಿತೋ, ಆದುದರಿಂದ, ಅಹಂ - ನಾನು, ಭವದ್ಭಿಃ ನಿಮ್ಮಿಂದ, ಸಾಧು-ಚೆನ್ನಾಗಿ, ಪೃಷ್ಟಃ-ಕೇಳಲ್ಪಟ್ಟೆನು. ॥೫॥ ಯಯಾ-ಯಾವಭಕ್ತಿಯಿಂದ, ಆತ್ಮಾ-ಬುದ್ಧಿಯು, ಸುಪ್ರಸೀದತಿ-ನಿರ್ಮಲವಾಗುವುದೋ, ಅಹೈತುಕೀ-ಫಲಾಭಿ ಸಂಧಿಯಿಲ್ಲದ, ಅಪ್ರತಿಹತಾ-ವಿಘ್ನಾದಿಗಳಿಂದ ತಡೆಯಲ್ಪಡದ, ಭಕ್ತಿಃ-ಶ್ರವಣಾದಿರೂಪವಾದ ಭಕ್ತಿಯು, ಅಧೋಕ್ಷಜೇ-ವಿಷ್ಣುವಿನಲ್ಲಿ, ಯತಃ- ಯಾವಧರ್ಮದಿಂದುಂಟಾಗುವುದೋ, ಸವೈ-ಅದೇ. ಪುಂಸಾಂ - ಪುರುಷರಿಗೆ, ಪರಃ-ಉತ್ತಮವಾದ, ಧರ್ಮಃ-ಧರ್ಮವು, ॥೬॥ ಭಗವತಿ-ಭಗವಂತನಾದ, ವಾಸುದೇವೇ-ವಸುದೇವಪುತ್ರನಾದ ಶ್ರೀಕೃಷ್ಣನಲ್ಲಿ, ಪ್ರಯೋಜಿತಃ-ಇಡಲ್ಪಟ್ಟ, ಭಕ್ತಿಯೋಗಃ-ಭಕ್ತಿಯೆಂಬುದು, ಆಶು-ಬೇಗನೆ, ವೈರಾಗ್ಯಂ-ಇತರವಿಷಯಗಳಲ್ಲಿ ವಿರಕ್ತಿಯನ್ನು, ಯತ್-ಯಾವುದು, ಅಹೈತುಕಂ-ಯುಕ್ತಿ ಮೊದಲಾದವುಗಳಿಗೆ ಸಾಧ್ಯವಾಗದೇ, ವೇದಾಂತದಿಂದಲೇ ತಿಳಿಯಲ್ಪಡತಕ್ಕದೋ, ಜ್ಞಾನಂಚ-(ಅಂತಹ ಭಗವತ್ಸಾಕ್ಷಾತ್ಕಾರರೂಪವಾದ) ಜ್ಞಾನವನ್ನೂ ಸಹ, ಜನಯತಿ-ಉಂಟುಮಾಡುತ್ತದೆ ॥೭॥ ಯಃ-ಯಾವುದು, ಧರ್ಮಃ-ಧರ್ಮವೆಂದು ಹೆಸರುಗೊಳ್ಳುವುದೋ, ಸಃ-ಅದು, ಪುಂಸಾಂ - ಪುರುಷರಿಗೆ, ವಿಷ್ವಕ್ಸೇನಕಥಾಸು, ವಿಷ್ವಕ್ಸೇನ-

---

ಶಾಸ್ತ್ರಸಾರವಾವುದೆಂಬ ಪ್ರಶ್ನೆಯೂ ಇದರಲ್ಲಿ ಸೇರಿಹೋಯಿತು. ಆದಕಾರಣ ಉತ್ತರವನ್ನು ಹೇಳುತ್ತೇನೆ ಕೇಳಿರಿ. ಸಕಲ ವೇದಶಾಸ್ತ್ರಗಳಿಗೂ ಸಾರಭೂತವಾದುದು ಧರ್ಮವು. ಅದು ಪ್ರವೃತ್ತಿಲಕ್ಷಣವೆಂತಲೂ, ನಿವೃತ್ತಿಲಕ್ಷಣವೆಂತಲೂ ಎರಡುವಿಧವಾಗಿರುವುದು. ಅವುಗಳಲ್ಲಿ ಸ್ವರ್ಗಾದಿ ಫಲಗಳನ್ನು ಅಪೇಕ್ಷಿಸಿಮಾಡಲ್ಪಡುವ ಧರ್ಮವು ಪ್ರವೃತ್ತಿಧರ್ಮವೆನಿಸುವುದು. ಪ್ರತಿಫಲವನ್ನು ಬಯಸದೆ ವಿಘ್ನಾದಿಗಳಿಂದ ಕೆಡದೆ, ಮನಸ್ಸನ್ನುನಿರ್ಮಲಗೊಳಿಸಿ ಪುರುಷರಿಗೆ ಭಗವದ್ವಿಷಯಕವಾದ ಭಕ್ತಿಯನ್ನುಂಟುಮಾಡುವುದೇನಿವೃತ್ತಿಧರ್ಮವು. (ಇದೇಪರಧರ್ಮವು) ॥೬॥ "ಬ್ರಾಹ್ಮಣರು ವೇದಾಧ್ಯಯನಾದಿಗಳಿಂದ ಜ್ಞಾನವನ್ನು ಪಡೆಯುತ್ತಾರೆ" ಎಂಬ *ಶ್ರುತ್ಯನುಸಾರವಾಗಿ ಧರ್ಮವು ಜ್ಞಾನಕ್ಕೆ ಅಂಗವಾಗಬಹುದು, ಧರ್ಮದಿಂದ ಭಕ್ತಿಯುಂಟಾಗುವುದೆಂತು ? ಎಂದರೆ ಭಗವಂತನಾದ ವಾಸುದೇವನಲ್ಲಿ ಇಡಲ್ಪಟ್ಟ ಭಕ್ತಿಯೆಂಬುದು,ಆಭಗವಂತನಿಗಿಂತಲೂ ಬೇರೇ ವಿಷಯಗಳಲ್ಲಿ ವೈರಾಗ್ಯವನ್ನೂ, ಶುಷ್ಕತರ್ಕಾದಿಗಳಿಗೆ ಗೋಚರವಾಗದೆ,ಉಪನಿಷತ್ಪ್ರತಿಪಾದ್ಯವಾಗಿಯೂ, ಬ್ರಹ್ಮಸಾಕ್ಷಾತ್ಕಾರರೂಪವಾಗಿಯೂ ಇರುವ ಜ್ಞಾನವನ್ನೂ, ಉಂಟುಮಾಡುವುದಾದುದರಿಂದ ಎಲ್ಲಕ್ಕೂ ಭಕ್ತಿಯೇ ದ್ವಾರವು ॥೭॥ ಯಾವಧರ್ಮವು ಪುರುಷರಿಗೆ ಭಗವತ್ಕಥೆಗಳಲ್ಲಿ ಆಸಕ್ತಿ

---

* ಶ್ರು 'ತಮೇತಂ ವೇದಾನುವಚನೇನ ಬ್ರಾಹ್ಮಣಾವಿವಿದಿಷಂತಿ, ಯಜ್ಞೇನ ದಾನೇನ ತಪಸಾನಾಶಕೇನ'

ರತಿಂಶ್ರಮ ಏವಹಿ ಕೇವಲಂ॥೮॥ *ಶ್ರುತ ಮಪ್ಯೌಪನಿಷದಂ ದೂರೇ ಹರಿಕ
ಥಾಮೃತಾತ್।ಯ ನ್ನಸಂತಿ ದ್ರವಚ್ಚಿತ್ತಪ್ರೇಮಾಶ್ರುಪುಲಕೋದ್ಗಮಾಃ ॥೯॥

ವಿಷ್ವಕ್ಸೇನ, ಕಥಾಸು-ಚರಿತ್ರೆಗಳಲ್ಲಿ, ರತಿಂ-ಆಸಕ್ತಿಯನ್ನು, ನೋತ್ಪಾದಯೇದ್ಯದಿ-ಉಂಟುಮಾಡದೇಹೋದರೆ, ಸ್ವನುಷ್ಠಿತೋಪಿ - ಚೆನ್ನಾಗಿ ಆಚರಿಸಲ್ಪಟ್ಟರೂ, ಕೇವಲಂಶ್ರಮಏವಹಿ-ಆಯಾಸಮಾತ್ರವೇ ಆಗುವುದಷ್ಟೆ ॥೮॥ ಯತ್-ಯಾವ ಮನುಷ್ಯನಿಗೆ, ಹರಿಕಥಾಮೃತಾತ್, ಹರಿ-ಶ್ರೀ ಕೃಷ್ಣಮೂರ್ತಿಯ ಕಥಾ-ಕಥೆಗಳೆಂಬ, ಅಮೃತಾತ್-ಅಮೃತಪಾನದಿಂದ, ದ್ರವಚ್ಚಿತ್ತಪ್ರೇಮಾಶ್ರುಪುಲಕೋದ್ಗಮಾಃ-ದ್ರವತ್-ಕರಗುವ, ಚಿತ್ತ-ಮನಸ್ಸೂ, ಪ್ರೇಮಾಶ್ರು-ಆನಂದ ಬಾಷ್ಪಗಳೂ, ಪುಲಕೋದ್ಗಮಾಃ-ರೋಮಾಂಚಗಳೂ, ನಸಂತಿ - ಉಂಟಾಗುವುದಿಲ್ಲವೋ, ಅವನಿಗೆ, ಔಪನಿಷದಂ - ಉಪನಿಷತ್ತುಗಳಲ್ಲಿ ಹೇಳಲ್ಪಟ್ಟಿರುವ ಆತ್ಮತತ್ವವು, ಶ್ರುತಮಪಿ - ಕೇಳಲ್ಪಟ್ಟರೂ ದೂರೇ-ಮರೆಯಾಗಿಯೇ ಇರುವುದು, ಅಥವಾ ಔಪನಿಷದಂ-ಉಪನಿಷತ್ತುಗಳಲ್ಲಿರುವ ತತ್ವಮಸ್ಯಾದಿ ಮಹಾವಾಕ್ಯಗಳು, ಶ್ರುತಮಪಿ-ಕೇಳಲ್ಪಟ್ಟರೂ, ಹರಿಕಥಾಮೃತಾತ್-ಹರಿಕಥೆಯೆಂಬ ಅಮೃತವನ್ನುಸುರಿಸುವ ಈ ಭಾಗವತಕ್ಕಿಂತಲೂ, ದೂರೇ-ದೂರದಲ್ಲಿಯೇ, (ಉಪನಿಷದ್ವಾಕ್ಯಗಳೂ ಇದಕ್ಕೆಸಮನಲ್ಲ) ಯಾಕೆಂದರೆ ಯತ್-ಯಾವ ಉಪನಿಷದ್ವಾಕ್ಯಗಳಿಂದ, ದ್ರವಚ್ಚಿತ್ತಪ್ರೇಮಾಶ್ರುಪುಲಕೋದ್ಗಮಾಃ- ಮನಸ್ಸು ಕರಗುವುದು, ಆನಂದಬಾಷ್ಪಗಳು ಬರುವುದು,

ಯನ್ನುಂಟುಮಾಡುವುದಿಲ್ಲವೋ, ಆಧರ್ಮವನ್ನು ಎಷ್ಟು ಚೆನ್ನಾಗಿ ನಡೆಯಿಸಿದರೂಆಯಾಸವೇ ಫಲವು. ಆದಕಾರಣ ಭಕ್ತಿಯನ್ನುಂಟುಮಾಡದ ಧರ್ಮವು ಧರ್ಮವೇಅಲ್ಲ. ಅಂತಹ ಧರ್ಮಗಳಿಗೂ ಸ್ವರ್ಗಾದಿ ಫಲಗಳುಂಟಲ್ಲಾ! ಎಂದರೆ ನಶ್ವರಗಳಾದುದರಿಂದ ಅವುಗಳು ಫಲಗಳೇಅಲ್ಲ.'ಕರ್ಮಾಚರಣೆಯಿಂದಲೂ ಶಾಶ್ವತಪುಣ್ಯವುಂಟು' ಎಂಬ †ಶ್ರುತಿಯಿಂದ ಸ್ವರ್ಗಾದಿಫಲಗಳೂ ನಿತ್ಯವೆಂದೇ ಹೇಳಲ್ಪಟ್ಟಿರುವವಲ್ಲಾ! ಎಂದರೆ, ಕರ್ಮಗಳಲ್ಲಿ ಆಭಿಮುಖ್ಯವನ್ನುಂಟುಮಾಡುವುದಕ್ಕಾಗಿ ಅಂತುಹೇಳಿದ್ದರೂ 'ಕರ್ಮದಿಂದ ಸಂಪಾದಿಸಲ್ಪಟ್ಟ ಈಲೋಕದಂತೆಯೇ ಪುಣ್ಯದಿಂದ ಸಂಪಾದಿಸಲ್ಪಟ್ಟಪರಲೋಕವೂ ನಿತ್ಯವಲ್ಲ,ಎಂದು ಯುಕ್ತಿಯುಕ್ತವಾಗಿ ಬೋಧಿಸುತ್ತಿರುವ §ಶ್ರುತಿಯು ಸ್ವರ್ಗಾದಿಫಲಗಳನ್ನು ನಶ್ವರಗಳೆಂದೇ ಹೇಳುವುದಾದುದರಿಂದ ಮೋಕ್ಷವನ್ನುಳಿದ ಫಲಗಳೆಲ್ಲವೂ ನಶ್ವಗಳೇ॥೮॥ ವೇದಾಂತ ಶ್ರವಣಾದಿಗಳಿಂದಲೇ ತತ್ವಸಾಕ್ಷಾತ್ಕಾರವಾಗುವುದು. ಭಕ್ತಿಯಿಂದ ಪ್ರಯೋಜನವೇನು? ಎಂದರೆ-ಭಗವತ್ಕಥಾಮೃತಪಾನವನ್ನು ಮಾಡಿ ಯಾವ ಪುರುಷನು ಮನಸ್ಸು ಕರಗದೆಯೂ, ಆನಂದಬಾಷ್ಪಗಳನ್ನು ಸುರಿಸದೆಯೂ, ರೋಮಾಂಚವಾಗದೆಯೂ ಇರುವನೋ, ಅವನು ಎಷ್ಟು ಶ್ರವಣಾದಿಗಳನ್ನು ಮಾಡಿದರೂ ಅವನಿಗೆ ಆತ್ಮಸಾಕ್ಷಾತ್ಕಾರವಾಗುವುದಿಲ್ಲ. ಆದಕಾರಣ ಭಕ್ತಿಯೇ ಮುಖ್ಯವು. ಅಥವಾ ವೇದಾಂತ ಶ್ರವಣಾದಿಗಳನ್ನು ಮಾಡಿದುದರಿಂದಾಗಲಿ, ಆ ಉಪನಿಷದ್ವಾಕ್ಯಗಳಿಂದಲೇ ಆಗಲಿ, ರೋಮಾಂಚ ಆನಂದಬಾಷ್ಪ ಮೊದಲಾದವು ಉಂಟಾಗುವುದಿಲ್ಲವಾದುದರಿಂದ, ಅವುಗಳು ಈ ಪುರಾಣಕ್ಕೆ ಸಮನಲ್ಲ. ॥೯॥ ಹೀಗೆ ನಿವೃತ್ತಿಧರ್ಮವೆಂ

* ಈ ಶ್ಲೋಕವು ಕೆಲವು ಕೋಶಗಳಲ್ಲಿಲ್ಲ. † ಶ್ರು "ಅಕ್ಷಯ್ಯಗ್ ಹವೈಚಾತುರ್ಮಾಸ್ಯಯಾಜಿನಸ್ಸುಕೃತಂಭವತಿ" § "ತದ್ಯಥೇಹಕರ್ಮಚಿತೋಲೋಕಃ ಕ್ಷೀಯತೇ ಏವಮೇವಾಮುತ್ರಪುಣ್ಯಚಿತೋಲೋಕಃ ಕ್ಷೀಯತೇ"

ಧರ್ಮಸ್ಯಹ್ಯಪವರ್ಗಸ್ಯ ನಾರ್ಥೋರ್ಥಾಯೋಪಕಲ್ಪತೇ।ನಾರ್ಥಸ್ಯ ಧರ್ಮೈಕಾಂತಸ್ಯ ಕಾಮೋ ಲಾಭಾಯ ಹಿ ಸ್ಮೃತಃ ॥೧೦॥ ಕಾಮಸ್ಯ ನೇಂದ್ರಿಯಪ್ರೀತಿ ಲಾರ್ಭೋ ಜೀವೇತ ಯಾವತಾ।ಜೀವಸ್ಯ ತತ್ವಜಿಜ್ಞಾಸಾ ನಾರ್ಥೋ

ರ್ಥೋವಾಂಛಗಳುಬ್ಬುವುದು ಇವು, ನಸಂತಿ - ಉಂಟಾಗುವುದಿಲ್ಲವೋ ॥೯॥ ಅಪವರ್ಗಸ್ಯ-ಮೋಕ್ಷವೇ ಅವಧಿಯಾಗುಳ್ಳ, ಧರ್ಮಸ್ಯ-ಧರ್ಮದ, ಅರ್ಥಾಯ-ಪ್ರಯೋಜನಕ್ಕಾಗಿ, ಅರ್ಥಃ-ಧನಾದಿಗಳು, ನೋಪಕಲ್ಪತೇ-ಯೋಗ್ಯವಾಗುವುದಿಲ್ಲ, ಹಾಗೆಯೇ, ಧರ್ಮೈಕಾಂತಸ್ಯ-ಇಂತಹ ಧರ್ಮಕ್ಕೆ ವಿರುದ್ಧವಲ್ಲದ, ಅರ್ಥಸ್ಯ-ಧನಾದಿಗಳಿಗೆ, ಕಾಮಃ-ಕಾಮವು ಲಾಭಾಯ-ಫಲವಾಗಿ, ನಸ್ಮೃತಃ-ಹೇಳಲ್ಪಟ್ಟಿರುವುದಿಲ್ಲ; ಅಥವಾ ಅರ್ಥಃ-ಧನಾದಿಗಳು, ಅಪವರ್ಗಸ್ಯ-ಮೋಕ್ಷಕ್ಕೆ ಸಾಧನಭೂತವಾದ, ಧರ್ಮಸ್ಯ-(ಭಾಗವತಶಾಸ್ತ್ರದಲ್ಲಿ ಮುಖ್ಯವಿಷಯವಾಗಿ ಹೇಳಲ್ಪಟ್ಟಿರುವ ಭಕ್ತಿರೂಪವಾದ) ಧರ್ಮಕ್ಕೆ, ಅರ್ಥಾಯ-ಫಲರೂಪವಾದ ಮೋಕ್ಷಕ್ಕಾಗಿ, ನೋಪಕಲ್ಪತೆ-ಅರ್ಹವಾಗುವುದಿಲ್ಲ, ಹಾಗೆಯೇ, ಧರ್ಮೈಕಾಂತಸ್ಯ-ಧರ್ಮವಿರೋಧವಿಲ್ಲದ, (ಬ್ರಾಹ್ಮಣವೃತ್ತಿಯನ್ನನುಸರಿಸಿ, ಯಾಗಾದಿಕರ್ಮಗಳನ್ನು ಮಾಡುವುದಕ್ಕಾಗಿ ಯಾಜನ ಅಧ್ಯಾಪನ ಪ್ರತಿಗ್ರಹಗಳಿಂದ ಸಂಪಾದಿಸಲ್ಪಟ್ಟ) ಅರ್ಥಸ್ಯ-ಧನಾದಿಗಳಿಗೆ, ಅರ್ಥಃ-ಫಲರೂಪಗಳಾದ ಯಜ್ಞಾದಿಗಳು, ಅಪವರ್ಗಸ್ಯ ಧರ್ಮಸ್ಯ ಅರ್ಥಾಯನೋಪಕಲ್ಪತೇ-ಮುಕ್ತಿಗೆ ಅರ್ಹವಾಗುವುದಿಲ್ಲ. ಹಾಗೆಯೇ, ಕಾಮೋಪಿ-ಕಾಮವೂಕೂಡ, ಮುಕ್ತಿಗೆ ಯೋಗ್ಯವಾಗುವುದಿಲ್ಲ ॥೧೦॥ ಕಾಮಸ್ಯ-ವಿಷಯಭೋಗಕ್ಕೆ ಇಂದ್ರಿಯಪ್ರೀತಿಃ, ಇಂದ್ರಿಯ-ಚಕ್ಷುರಾದಿ ಇಂದ್ರಿಯಗಳ, ಪ್ರೀತಿಃ-ಪ್ರೀತಿಯು, ನ-ಫಲವಲ್ಲ. ಯಾವತಾ-ಎಷ್ಟರಿಂದ, ಜೀವೇತ-ಬದುಕುವನೋ, ಲಾಭಃ - ಅಷ್ಟೇಲಾಭವು, ಜೀವಸ್ಯ-ಜೀವನಕ್ಕೆ, (ಬದುಕುವಿಕೆಗೆ) ತತ್ವಜಿಜ್ಞಾಸಾ, ತತ್ವ-ಆತ್ಮತತ್ವದ, ಜಿಜ್ಞಾಸಾ-ವಿಚಾರವೇ (ಫಲವು) ಇಹ-ಈ ಲೋಕದಲ್ಲಿ,

---

ಬುದು ವಿಷ್ಣುವಿನಲ್ಲಿ ಭಕ್ತಿಯನ್ನೂ, ಇತರವಿಷಯಗಳಲ್ಲಿ ವೈರಾಗ್ಯವನ್ನೂ, ಆತ್ಮಸಾಕ್ಷಾತ್ಕಾರವನ್ನೂ ಸಹ ಉಂಟುಮಾಡುವುದರಿಂದ ಇದೇ ಪರಮಧರ್ಮವು. ಈ ವಿಷಯದಲ್ಲಿ ಕೆಲವರು ಧರ್ಮಕ್ಕೆ ಅರ್ಥವುಫಲವು. ಅರ್ಥಕ್ಕೆ ಕಾಮವು ಫಲವು. ಕಾಮಕ್ಕೆ ಇಂದ್ರಿಯಪ್ರೀತಿಯು ಫಲವು. ಆ ಇಂದ್ರಿಯಪ್ರೀತಿಗೆ ಮರಳಿ ಧರ್ಮವೇ ಫಲವು ಎಂದು ಹೇಳುವರು. ಅದುಸರಿಯಲ್ಲ. ಮೋಕ್ಷಫಲವನ್ನೂ ಸಂಪಾದಿಸಿಕೊಡುವ ಧರ್ಮಕ್ಕೆ ಧನಾದಿಗಳು ಫಲಗಳಾಗಲಾರವು. ಹಾಗೆಯೇ ಧರ್ಮವಿರೋಧವಿಲ್ಲದ ಅರ್ಥಕ್ಕೂ ಕಾಮವು ಫಲವಲ್ಲ. ಅಥವಾ ಧನಾದಿಗಳಾಗಲಿ, ಮತ್ತು ಧರ್ಮವಿರೋಧವಿಲ್ಲದೇ ಬ್ರಾಹ್ಮಣವೃತ್ತಿಯನ್ನನುಸರಿಸಿ, ಯಜ್ಞಗಳನ್ನು ಮಾಡಿಸುವುದು, ವೇದಗಳನ್ನು ಕಲಿಸುವುದು, ದಾನವನ್ನು ಪಡೆಯುವುದು, ಇವುಗಳಿಂದ ಸಂಪಾದಿಸಿದ ಧನದಿಂದ ಮಾಡಲ್ಪಟ್ಟ ಯಜ್ಞಾದಿರೂಪವಾದ ಧರ್ಮವಾಗಲಿ, ಮತ್ತು ಕಾಮವಾಗಲಿ, ಯಾವುದೂ ಮುಕ್ತಿಸಾಧನವಾದ ಭಕ್ತಿಯೋಗದಿಂದುಂಟಾಗುವ ಮೋಕ್ಷಫಲವನ್ನುಂಟುಮಾಡಲಾರದು ॥೧೦॥ ಮತ್ತು ಕಾಮಕ್ಕೆ ಇಂದ್ರಿಯಪ್ರೀತಿಯು ಫಲವಲ್ಲ. ಮನುಷ್ಯನು ಬದುಕುವುದಕ್ಕೆಷ್ಟುಬೇಕೋ ಅಷ್ಟೇ ಕಾಮವನ್ನು ಸೇವಿಸಬೇಕು. ಹೆಚ್ಚಾಗಿ ವಿಷಯಗಳನ್ನು ಬಯಸಿದರೆ, ಅನರ್ಥಕ್ಕೆ ಗುರಿಯಾಗುವನು. ಬದುಕಿರುವುದಕ್ಕೂ ಸಹ ಆತ್ಮವಿಚಾರವೇ ಫಲವಲ್ಲದೆ ಕರ್ಮಾಚರಣೆಯಿಂದುಂಟಾಗುವ ಧರ್ಮವು ಫಲವಲ್ಲ. ಆದಕಾರಣ ಧರ್ಮಕ್ಕೆ ಭಕ್ತಿ

ಯಶ್ಚೇಹ ಕರ್ಮಭಿಃ ॥೧೧॥ ವದಂತಿ ತತ್ತ್ವವಿದ ಸ್ತತ್ತ್ವಂ ಯದ್ ಜ್ಞಾನ
ಮದ್ವಯಂ। ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ॥೧೨॥ †ಸತ್ತಾ
ಮಾತ್ರಂತು ಯತ್ಕಿಂಚಿತ್ಸದ ಸತ್ವವಿಶೇಷಣಂ। ಉಭಾಭ್ಯಾಂ ಭಾಷ್ಯತೇ ಸಾ
ಕ್ಷಾತ್ ಭಗವಾನ್ ಕೇವಲ ಸ್ಸಮಃ॥ ತಚ್ಛ್ರದ್ದಧಾನಾ ಮುನಯೋ ಜ್ಞಾನವೈ
ರಾಗ್ಯಯುಕ್ತಯಾ । ಪಶ್ಯಂತ್ಯಾತ್ಮನಿ ಚಾತ್ಮಾನಂ ಭಕ್ತ್ಯಾ ಶ್ರುತಿಗೃಹೀತ
ಯಾ ॥೧೩॥ ಅತಃ ಪುಂಭಿ ರ್ದ್ವಿಜಶ್ರೇಷ್ಠಾ ವರ್ಣಾಶ್ರಮವಿಭಾಗಶಃ । ಸ್ವನು

ಕರ್ಮಭಿಃ-ಕರ್ಮಗಳನ್ನು ಮಾಡುವುದರಿಂದ, ಯಶ್ಚ-ಯಾವ ಧರ್ಮವೆಂಬುದು ಪ್ರಸಿದ್ಧವಾಗಿರುವುದೊ ಸಃ-ಆ ಧರ್ಮವು, ಅರ್ಥಃ-ಪ್ರಯೋಜನವು, ನ-ಅಲ್ಲ ॥೧೧॥ ತತ್ತ್ವವಿದಃ-ತತ್ತ್ವವನ್ನು ಬಲ್ಲಮಹಾತ್ಮರು, ತತ್-ಆ ಧರ್ಮವನ್ನೇ, ತತ್ತ್ವಂ-ತತ್ತ್ವವನ್ನಾಗಿ, ವದಂತಿ-ಹೇಳುತ್ತಾರೆ, ಅದ್ವಯಂ-ಭೇದರಹಿತವಾದ, ಜ್ಞಾನಂ-ಜ್ಞಾನವೆಂಬುದು, ಯತ್-ಯಾವುದುಂಟೋ, ಅದೇ, ಬ್ರಹ್ಮೇತಿ-ಬ್ರಹ್ಮನೆಂತಲೂ, ಪರಮಾತ್ಮೇತಿ-ಪರಮಾತ್ಮನೆಂತಲೂ, ಭಗವಾನಿತಿ - ಭಗವಂತನೆಂತಲೂ, ಶಬ್ದ್ಯತೆ - ಕರೆಯಲ್ಪಡುತ್ತದೆ. ॥ ೧೨ ॥ ಕಿಂಚಿತ್-ಅನಿರ್ವಾಚ್ಯವೆನಿಸಿ, ಸತ್ತಾಮಾತ್ರಂ-ಸತ್ತಾಸ್ವರೂಪವಾಗಿದ್ದರೂ, ಸದಸತ್ವವಿಶೇಷಣಂ, ಸತ್-ನೆಲೆಯಾದುದೆಂದೂ, ಅಸತ್-ನೆಲೆಯಿಲ್ಲದುದೆಂದೂ, ವಿಶೇಷಣಂ-ವರ್ಣಿಸಲ್ಪಡುವ, ಯತ್-ಯಾವವಸ್ತುವು ಉಭಾಭ್ಯಾಂ-ಆಸ್ತಿಕರಿಂದಲೂ, ನಾಸ್ತಿಕರಿಂದಲೂ, ಇದೆ, ಇಲ್ಲ ಎಂದು ಭಾಷ್ಯತೇ - ಹೇಳಲ್ಪಡುವುದೋ, ತತ್-ಆ ವಸ್ತುವೇ, ಕೇವಲಃ-ಅಸಂಗನಾದ, ಸಮಃ-ಸಮನಾದ, ಭಗವಾನ್-ಭಗವಂತನೆನಿಸುವನು ॥ ಶ್ರದ್ಧಧಾನಾಃ-ಶ್ರದ್ಧಾವಂತರಾದ, ಮುನಯಃ-ಋಷಿಗಳು, ಜ್ಞಾನವೈರಾಗ್ಯಯುಕ್ತಯಾ, ಜ್ಞಾನ-ಶಾಸ್ತ್ರದಿಂದುಂಟಾದ ಪರೋಕ್ಷಜ್ಞಾನದಿಂದಲೂ, ವೈರಾಗ್ಯ-ಇತರವಿಷಯಗಳಲ್ಲಿ ವೈರಾಗ್ಯದಿಂದಲೂ, ಯುಕ್ತಯಾ-ಕೂಡಿರುವ, ಶ್ರುತಗೃಹೀತಯಾ, ಶ್ರುತ-ವೇದಾಂತ ಶ್ರವಣದಿಂದ, ಗೃಹೀತಯಾ-ಹೊಂದಲ್ಪಟ್ಟ, ಭಕ್ತ್ಯಾ-ಭಕ್ತಿಯಿಂದ, ತತ್-ಆ, ಆತ್ಮಾನಂ-ಪರಮಾತ್ಮನನ್ನು, ಆತ್ಮನಿ-ತಮ್ಮಲ್ಲಿಯೇ, ಪಶ್ಯಂತಿ-ನೋಡುತ್ತಾರೆ.

ಯೇ ಫಲವಲ್ಲದೆ ಅರ್ಥಕಾಮಗಳಲ್ಲ ॥೧೧॥ ಬದುಕಿರುವುದಕ್ಕೆ ತತ್ತ್ವಜಿಜ್ಞಾಸೆಯೇ ಫಲವು. ತತ್ತ್ವಜಿಜ್ಞಾಸೆಯೆಂದರೆ ಧರ್ಮಜಿಜ್ಞಾಸೆಯೆಂದೇ ಅರ್ಥವು. ಧರ್ಮವೇ ತತ್ತ್ವವು. ಆದುದರಿಂದ ತತ್ತ್ವವೇತ್ತರಾದವರು ಆಧರ್ಮವನ್ನೇ ತತ್ತ್ವವೆಂದು ಹೇಳುವರು. ಭೇದಶೂನ್ಯವಾದ ಜ್ಞಾನವೇ ಆ ತತ್ತ್ವಸ್ವರೂಪವು. ಅದನ್ನು ಕೆಲವರು ಬ್ರಹ್ಮನೆಂತಲೂ, ಕೆಲವರು ಪರಮಾತ್ಮನೆಂತಲೂ, ಕೆಲವರು ಭಗವಂತನೆಂತಲೂ ಹೇಳುವರು. ಶಬ್ದಗಳಲ್ಲಿ ವ್ಯತಾಸವಿರುವುದೇ ಹೊರತು ತತ್ತ್ವದಲ್ಲಿ ವ್ಯತ್ಯಾಸವಿಲ್ಲ ॥೧೨॥ ವರ್ಣಿಸುವುದಕ್ಕಾಗದೆ ಸತ್ತಾಮಾತ್ರವೆನಿಸಿರುವ ಯಾವವಸ್ತುವನ್ನು ಆಸ್ತಿಕರು ಉಂಟೆಂದೂ, ನಾಸ್ತಿಕರು ಇಲ್ಲವೆಂದೂ ಹೇಳುತ್ತಿರುವರೋ, ಆ ವಸ್ತುವನ್ನೇ ಭಗವಂತನೆಂದು ತಿಳಿಯಬೇಕು. ಆ ತತ್ತ್ವವನ್ನು ತಿಳಿಯಬೇಕಾದರೆ ಸಂಪೂರ್ಣವಾದ ಭಕ್ತಿಯೇ ಕಾರಣವು. ಶ್ರದ್ಧಾವಂತರಾದ ಮಹರ್ಷಿಗಳು ಶಾಸ್ತ್ರಜ್ಞಾನದಿಂದಲೂ, ವಿಷಯವೈರಾಗ್ಯದಿಂದಲೂ ಕೂಡಿದ ಭಗವತ್ಕಥಾಶ್ರವಣದಿಂದ ಸಂಪಾದಿಸಿದ ಭಕ್ತಿಯಿಂದಲೇ, ಆ ತತ್ತ್ವವನ್ನು ತಿಳಿಯುತ್ತಾರೆ ॥೧೩॥ ಅಯ್ಯಾ ಬ್ರಾಹ್ಮಣಾಗ್ರಣಿಗಳಿರಾ ಆದುದರಿಂದ ಮನುಷ್ಯರು ತಮ್ಮತಮ್ಮ ವರ್ಣಾ

† ಈ ಶ್ಲೋಕವು ಆರ್ಷವಲ್ಲ.

ಷ್ಠಿತಸ್ಯ ಧರ್ಮಸ್ಯ ಸಂಸಿದ್ಧಿರ್ಹರಿತೋಷಣಂ ॥೧೪॥ ತಸ್ಮಾದೇಕೇನ ಮ
ನಸಾ ಭಗವಾನ್ ಸಾತ್ವತಾಂ ಪತಿಃ। ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ
ಪೂಜ್ಯಶ್ಚ ನಿತ್ಯಶಃ॥೧೫॥ ಯದನುಧ್ಯಾಸಿನಾ ಯುಕ್ತಾಃ ಕರ್ಮಗ್ರಂಥಿನಿಬಂ
ಧನಂ । ಛಿಂದಂತಿ ಕೋವಿದಾ ಸ್ತಸ್ಯ ಕೋನ ಕುರ್ಯಾತ್ಕಥಾರತಿಂ ॥೧೬॥
ಶುಶ್ರೂಷೋಃ ಶ್ರದ್ದಧಾನಸ್ಯ ವಾಸುದೇವಕಥಾ ರತಿಃ । ಸ್ಯಾನ್ಮಹತ್ಸೇವ
ಯಾ ವಿಪ್ರಾಃ ಪುಣ್ಯತೀರ್ಥನಿಷೇವಣಾತ್ ॥೧೭॥ ಶೃಣ್ವತಾಂ ಸ್ವಕಥಾಃ

ಹೇದ್ವಿಜಶ್ರೇಷ್ಠಾಃ-ಅಯ್ಯಾ ದ್ವಿಜಶ್ರೇಷ್ಠರಿರಾ! ಅತಃ-ಆದುದರಿಂದ, ಪುಂಭಿಃ-ಪುರುಷರಿಂದ, ವರ್ಣಾಶ್ರಮ ವಿಭಾಗಶಃ, ವರ್ಣ-ಬ್ರಾಹ್ಮಣಾದಿವರ್ಣಗಳ, ಆಶ್ರಮ-ಬ್ರಹ್ಮಚರ್ಯಾದಿ ಆಶ್ರಮಗಳ ವಿಭಾಗಶಃ-ಕ್ರಮ ದಿಂದ, ಸ್ವನುಷ್ಠಿತಸ್ಯ-ಚೆನ್ನಾಗಿ ಆಚರಿಸಲ್ಪಟ್ಟ, ಧರ್ಮಸ್ಯ-ಧರ್ಮಕ್ಕೆ, ಹರಿತೋಷಣಂ, ಹರಿ-ಭಗವಂ ತನ,ತೋಷಣಂ-ಮುಹೋಲ್ಲಾಸವೇ, ಸಂಸಿದ್ಧಿಃ-ಫಲವು ॥೧೪॥ ತಸ್ಮಾತ್-ಆದುದರಿಂದ,। ಏಕೇನ-ಏಕಾ ಗ್ರವಾದ, ಮನಸಾ-ಮನಸ್ಸಿನಿಂದ ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ, ಸಾತ್ವತಾಂ- ಭಕ್ತರಿಗೆ, ಪತಿಃ-ರಕ್ಷಕನಾದ ಭಗವಂತನನ್ನು, ಶ್ರೋತವ್ಯಃ-ಶ್ರವಣಮಾಡಬೇಕು, ಕೀರ್ತಿತವ್ಯಃ-ಹೊಗಳಬೇಕು. ಧ್ಯೇಯಃ-ಧ್ಯಾನಿಸಬೇಕು, ನಿತ್ಯಶಃ-ನಿತ್ಯದಲ್ಲಿಯೂ, ಪೂಜ್ಯಃ-ಪೂಜಿಸಬೇಕು, ॥೧೫॥ ಯದನುಧ್ಯಾಸಿನಾ- ಯತ್-ಯಾವಪರಮಾತ್ಮನ, ಅನುಧ್ಯಾ - ಧ್ಯಾನವೆಂಬ, ಅಸಿನಾ-ಕತ್ತಿಯಿಂದ, ಯುಕ್ತಾಃ-ಕೂಡಿರುವ, ಕೋವಿದಾಃ-ಜಾಗರೂಕರಾದವಿವೇಕಿಗಳು, ಗ್ರಂಥಿನಿಬಂಧನಂ, ಗ್ರಂಥಿ-ಅಹಂಕಾರವನ್ನು, ನಿಬಂಧನಂ- ಉಂಟುಮಾಡುವ, ಕರ್ಮ-ಕರ್ಮವನ್ನು, ಛಿದಂತಿ-ಕತ್ತರಿಸುವರೋ, ತಸ್ಯ-ಆ ಭಗವಂತನ, ಕಥಾರತಿಂ ಕಥಾ-ಕಥೆಯಲ್ಲಿ, ರತಿಂ-ಆಸಕ್ತಿಯನ್ನು, ಕಃ-ಯಾವನು, ನಕುರ್ಯಾತ್-ಮಾಡುವುದಿಲ್ಲ? ॥೧೬॥ ಹೇ ವಿಪ್ರಾಃ - ಅಯ್ಯಾ ಬ್ರಾಹ್ಮಣರಿರಾ! ಪುಣ್ಯತೀರ್ಥನಿಷೇವಣಾತ್, ಪುಣ್ಯ - ಸದ್ಗತಿಯನ್ನುಂಟುಮಾಡುವ, ತೀರ್ಥ-ಗಂಗಾದಿತೀರ್ಥೋದಕಗಳ, ನಿಷೇವಣಾತ್-ಸ್ನಾನಾದಿಗಳಿಂದುಂಟಾದ, ಮಹತ್ಸೇವಯಾ, ಮಹತ್- ಮಹಾತ್ಮರ, ಸೇವಯಾ-ಸೇವೆಯಿಂದ, ಶುಶ್ರೂಷೋಃ - ಕೇಳಲಪೇಕ್ಷೆಯುಳ್ಳ, ಶ್ರದ್ದಧಾನಸ್ಯ-ಶ್ರದ್ಧಾಳು ವಿಗೆ, ವಾಸುದೇವಕಥಾರತಿಃ, ವಾಸುದೇವ - ಶ್ರೀಕೃಷ್ಣನ, ಕಥಾ-ಕಥೆಗಳಲ್ಲಿ, ರತಿಃ-ಆಸೆಯು, ಸ್ಯಾತ್-

ಶ್ರಮಗಳಿಗನುಸಾರವಾಗಿನಡೆಯಿಸುವ ಧರ್ಮಗಳಿಗೆ ಭಗವನ್ಮುಖೋಲ್ಲಾಸವೇಫಲವು॥೧೪ ಭಕ್ತಿಯಿಲ್ಲದ ಧರ್ಮಾಚರಣೆಗೆ ಶ್ರಮವೇ ಫಲವೆಂದು ಹಿಂದೆ ಹೇಳಿದೆಯಷ್ಟೆ. ಆದಕಾರಣ ಭಕ್ತಿಪಾಲಕನಾದ ಭಗವಂತನನ್ನು, ಕೇಳುವಾಗ, ಹೊಗಳುವಾಗ, ಧ್ಯಾನಿಸುವಾಗ, ಪೂಜಿ ಸುವಾಗ ಎಲ್ಲಕಾಲಗಳಲ್ಲಿಯೂ ಬೇರೇ ವಿಷಯಗಳನ್ನು ಧ್ಯಾನಿಸದೇ ಒಂದೇಮನಸ್ಸಿನಿಂದಿ ರಬೇಕು. ॥೧೫॥ ಇಂತು ಏಕಾಗ್ರಚಿತ್ತರಾಗಿ ಭಗವಂತನ್ನು ಧ್ಯಾನಿಸಿದ ಮಹಾತ್ಮರು ಕರ್ಮಬಂಧದಿಂದ ಬಿಡುಗಡೆಯನ್ನು ಪಡೆಯುವರು. ಅಂದರೆ ಕೈವಲ್ಯವನ್ನು ಹೊಂದು ವರು. ಭಕ್ತಿಯುಕ್ತವಾದ ಭಗವದ್ಧ್ಯಾನಕ್ಕೆ ಇಂತಹ ಮೋಕ್ಷಫಲವಿರುವಾಗ, ಯಾರುತಾ ನೇ ಆ ಭಗವಚ್ಚರಿತ್ರೆಯನ್ನು ಬಯಸಲಾರರು? ॥೧೬॥ ಇಂತುಭಗವಚ್ಚರಿತ್ರೆಯು ಕರ್ಮ ಬಂಧವನ್ನು ನಾಶಗೊಳಿಸುವುದಾಗಿದ್ದರೂ, ಪುಣ್ಯವಂತರಿಗಲ್ಲದೆ ಇತರರಿಗೆ ರುಚಿಸುವು ದಿಲ್ಲ. ಇದರಲ್ಲಿ ರುಚಿಯುಂಟಾಗಬೇಕಾದರೆ ಮನುಷ್ಯನು ಮೊದಲು ಗಂಗಾದಿ ಪುಣ್ಯ ತೀರ್ಥಗಳಲ್ಲಿ ಸ್ನಾನಪಾನಗಳನ್ನು ಮಾಡಿ ಪಾಪಗಳನ್ನು ಕಳೆದುಕೊಳ್ಳಬೇಕು. ಅಂತವ

ಕೃಷ್ಣಃ ಪುಣ್ಯಶ್ರವಣ ಕೀರ್ತನಃ। ಹೃದ್ಯಂತಸ್ಥೋ ಹ್ಯಭದ್ರಾಣಿ ವಿಧುನೋತಿ ಸುಹೃತ್ಸತಾಂ ॥೧೮॥ ನಷ್ಟಪ್ರಾಯೇಷ್ವಭದ್ರೇಷು* ನಿತ್ಯಂ ಭಾಗವತ ಸೇವಯಾ । ಭಗವತ್ಯುತ್ತಮ ಶ್ಲೋಕೇ ಭಕ್ತಿರ್ಭವತಿ ನೈಷ್ಠಿಕೀ ॥೧೯॥ ತದಾ ರಜಸ್ತಮೋಭಾವಾಃ ಕಾಮಲೋಭಾದಯಶ್ಚ ಯೇ । ಚೇತ ಏತೈರನಾವಿದ್ಧಂ ಸ್ಥಿತಂಸತ್ವೇ ಪ್ರಸೀದತಿ ॥೨೦॥ ಏವಂ ಪ್ರಸನ್ನಮನಸೋ ಭಗ

ಉಂಟಾಗುವುದು. ॥೧೭॥ ಪುಣ್ಯಶ್ರವಣಕೀರ್ತನಃ, ಪುಣ್ಯ - ಪುಣ್ಯಕರಗಳಾದ, ಶ್ರವಣಕೀರ್ತನಃ-ಶ್ರವಣಕೀರ್ತನಗಳುಳ್ಳ, ಸತಾಂ-ಸಜ್ಜನರಿಗೆ, ಸುಹೃತ್-ಹಿತಕಾರಿಯಾದ, ಕೃಷ್ಣಃ-ಶ್ರೀಕೃಷ್ಣನು, ಸ್ವಕಥಾಃ-ತನ್ನ ಚರಿತ್ರೆಗಳನ್ನು, ಶೃಣ್ವತಾಂ - ಕೇಳುವವರ ಅಂತಸ್ಥಃ - ಹೃದಯದಲ್ಲಿರುವವನಾಗಿ, ಹೃದಿ-ಅವರಹೃದಯಗಳಲ್ಲಿರುವ, ಅಭದ್ರಾಣಿ- ಅಮಂಗಳಗಳನ್ನು, (ಕಾಮಕ್ರೋಧಾದಿವಾಸನೆಗಳನ್ನು) ವಿಧುನೋತಿ-ನಾಶಗೊಳಿಸುತ್ತಾನೆ, ॥೧೮॥ ಅಭದ್ರೇಷು - ಪಾಪಗಳು, ನಷ್ಟಪ್ರಾಯೇಷು - ಬಹಳಮಟ್ಟಿಗೆ ನಾಶವಾಗಲು, ನಿತ್ಯಂ-ಯಾವಾಗಲೂ, ಭಾಗವತಸೇವಯಾ, ಭಾಗವತ-ಭಗವದ್ಭಕ್ತರ, ಅಥವಾ ಭಾಗವತಶಾಸ್ತ್ರದ, ಸೇವಯಾ-ಸೇವೆಯಿಂದ, ಉತ್ತಮಶ್ಲೋಕೆ, ಉತ್ತಮ-ಉತ್ತಮರಿಂದ, ಶ್ಲೋಕೆ-ಹೊಗಳಲ್ಪಡುವ, ಭಗವತಿ-ಭಗವಂತನಲ್ಲಿ, ನೈಷ್ಠಿಕೀ - ನಿಶ್ಚಲವಾದ, ಭಕ್ತಿಃ-ಭಕ್ತಿಯು, ಭವತಿ-ಉಂಟಾಗುತ್ತದೆ, ॥೧೯॥ ತದಾ-ಆಗ ರಜಃ-ರಜಸ್ಸು, ತಮಃ-ತಮಸ್ಸು, ಭಾವಾಃ-ಆ ರಜಸ್ತಮಸ್ಸುಗಳಿಂದುಂಟಾದ, ಯೇ-ಯಾವ, ಕಾಮಲೋಭಾದಯಃ, ಕಾಮ-ಕಾಮವೂ, ಲೋಭ-ದುರಾಸೆಯೂ, ಆದಯಃ-ಮೊದಲಾದವುಗಳುಂಟೋ, ಏತೈಃ-ಇವುಗಳಿಂದ, ಅನಾವಿದ್ಧಂ - ತಿರಸ್ಕರಿಸಲ್ಪಡದ, ಚೇತಃ-ಮನಸ್ಸು ಸತ್ವೇ-ಸತ್ವದಲ್ಲಿ, ಸ್ಥಿತಂ-ಇರತಕ್ಕುದಾಗಿ, ಪ್ರಸೀದತಿ- ಶಾಂತಿಯನ್ನು ಪಡೆಯುತ್ತದೆ, ॥೨೦॥ ಏವಂ-ಹೀಗೆ, ಭಗವದ್ಭಕ್ತಿಯೋಗತಃ, ಭಗವತ್-ಭಗವಂತನಲ್ಲಿರುವ, ಭಕ್ತಿಯೋಗತಃ-ಭಕ್ತಿಯೋಗದಿಂದ, ಪ್ರಸ

ನಿಗೆ ಮಹಾತ್ಮರ ಸೇವೆಯು ಲಭಿಸುವುದು. ಅದರಿಂದ ಅವರ ನಡವಳಿಗಳಲ್ಲಿ ಶ್ರದ್ಧೆಯುಂಟಾಗುವುದು. ಆ ಶ್ರದ್ಧೆಯಿಂದ ಶ್ರವಣೇಚ್ಛೆಯು, ಆದರಿಂದ ರುಚಿಯು, ಉಂಟಾಗುವುದು॥೧೭॥ ಹೀಗೆ ಭಗವತ್ಕಥೆಯಲ್ಲಿ ರುಚಿಯುಂಟಾದಬಳಿಕ ಸತ್ಪುರುಷರಿಗೆ ಪರಮಪ್ರಿಯನಾದ ಶ್ರೀಕೃಷ್ಣನು, ಶ್ರವಣಕೀರ್ತನೆಗಳಿಂದ ಪುಣ್ಯವನ್ನು ಕೊಡತಕ್ಕವನಾದುದರಿಂದ, ತನ್ನ ಚರಿತ್ರೆಯನ್ನು ಕೇಳುವವರ ಮನಸ್ಸಿನಲ್ಲಿ ನೆಲೆಗೊಂಡು ಅವರ ಹೃದಯದಲ್ಲಿರುವ ಪಾಪಗಳನ್ನೆಲ್ಲಾ ಪರಿಹರಿಸುವನು. ॥೧೮॥ ಆ ಪಾಪಗಳು ಜ್ಞಾನೋತ್ಪತ್ತಿಯಾಗುವವರೆಗೂ ನಿಶ್ಶೇಷವಾಗಿ ನಾಶವಾಗದಿದ್ದರೂ ಬಹಳ ಮಟ್ಟಿಗೆ ನಾಶವಾಗುವುವು. ಬಳಿಕ ನಿರಂತರವಾಗಿ ಭಗವದ್ಭಕ್ತರನ್ನಾಗಲಿ ಭಾಗವತಶಾಸ್ತ್ರವನ್ನಾಗಲಿ ಬಿಡದಂತೆ ಸೇವಿಸುತ್ತಿದ್ದರೆ ಉತ್ತಮಶ್ಲೋಕನಾದ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯುಂಟಾಗುವುದು ॥೧೯॥ ಅನಂತರದಲ್ಲಿ ಅವನ ಮನಸ್ಸಿನಲ್ಲಿದ್ದ ರಜಸ್ತಮೋಗುಣಗಳೂ ಅವುಗಳಿಂದುಂಟಾಗಿದ್ದ ಕಾಮಕ್ರೋಧಾದಿ ಕಲ್ಮಷಗಳೂ ನಷ್ಟಗಳಾಗಿರುವುದರಿಂದ ಚಿತ್ತವಿಕ್ಷೇಪಕ್ಕೆ ನಿಮಿತ್ತವಿರುವುದಿಲ್ಲ. ಯಾವಾಗ ಚಿತ್ತಕ್ಕೆ ವಿಕ್ಷೇಪಗಳಿಲ್ಲವೋ ಆಗಲೇ ಅದು ಶುದ್ಧಸತ್ವದಲ್ಲಿ ನಿಲ್ಲುವುದು. ಪ್ರಸನ್ನವೂ ಆಗುವುದು. ॥೨೦॥ ಈರೀತಿಯಾಗಿ ಭಗವಂತನಲ್ಲಿರುವ ಭಕ್ತಿಯಿಂದ ಮನ

(ಪಾ) ಸದ್ಭಾಗವತ. ಸತ್-ಉತ್ತಮ.

ವದ್ಭಕ್ತಿಯೋಗತಃ । ಭಗವತ್ತತ್ವವಿಜ್ಞಾನಂ ಮುಕ್ತಸಂಗಸ್ಯ ಜಾಯತೇ॥
ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ॥ ಕ್ಷೀಯಂತೇ ಚಾ
ಸ್ಯಕರ್ಮಾಣಿ ದೃಷ್ಟಏವಾತ್ಮನೀಶ್ವರೇ॥೨೧॥ ಅತೋವೈ ಕವಯೋ ನಿತ್ಯಂ
ಭಕ್ತಿಂ ಪರಮಯಾ ಮುದಾ ॥ ವಾಸುದೇವೇ ಭಗವತಿ ಕುರ್ವಂತ್ಯಾತ್ಮಪ್ರ
ಸಾದಿನೀಂ॥೨೨॥ಸತ್ವಂ ರಜಸ್ತಮ ಇತಿ ಪ್ರಕೃತೇರ್ಗುಣಾಸ್ತೈರ್ಯುಕ್ತಃ
ಪರಃ ಪುರುಷ ಏಕ ಇಹಾಸ್ಯಧತ್ತೇ ॥ ಸ್ಥಿತ್ಯಾದಯೇ ಹರಿವಿರಿಂಚಹರೇತಿ

ನ್ನಮನಸಃ-ಪ್ರಸನ್ನ- ನಿರ್ಮಲವಾದ ಮನಸಃ-ಮನಸ್ಸುಳ್ಳವನಾದುದರಿಂದಲೇ, ಮುಕ್ತಸಂಗಸ್ಯ ಮುಕ್ತ-ಬಿಡಲ್ಪಟ್ಟ, ಸಂಗಸ್ಯ-ವಿಷಯಾಭಿಲಾಷೆಯುಳ್ಳ ಪುರುಷನಿಗೆ, ಭಗವತ್ತತ್ವವಿಜ್ಞಾನಂ, ಭಗವತ್ - ಭಗವಂತನ, ತತ್ವ-ನೆಲೆಯ, ವಿಜ್ಞಾನಂ - ತಿಳಿವಳಿಕೆಯು, ಜಾಯತೇ - ಉಂಟಾಗುವುದು. ॥೨೦॥ ಆತ್ಮನಿ-ಸ್ವರೂಪಭೂತನಾದ, ಈಶ್ವರೇ-ಪರಮೇಶ್ವರನು, ದೃಷ್ಟೇಏವ - ಕಾಣಲ್ಪಟ್ಟಕೂಡಲೇ, ಅಸ್ಯ-ಈ ಜ್ಞಾನಿಯ, ಹೃದಯಗ್ರಂಥಿಃ, ಹೃದಯ-ಹೃದಯವೆಂಬ, ಗ್ರಂಥಿಃ - (ಜಡಚೇತನಮಿಶ್ರವಾದ) ಅಹಂಕಾರ ಗ್ರಂಥಿಯು, ಭಿದ್ಯತೆ-ಒಡೆಯುತ್ತದೆ, ಸರ್ವಸಂಶಯಾಃ, ಸರ್ವ- ಎಲ್ಲಾ, ಸಂಶಯಾಃ-ತಪ್ಪುತಿಳಿವಳಿಕೆಗಳು, ಛಿದ್ಯಂತೆ-ಕತ್ತರಿಸಲ್ಪಡುತ್ತದೆ, ಕರ್ಮಾಣಿ-ಆಗಾಮಿ ಸಂಚಿತಕರ್ಮಗಳೆಲ್ಲಾ, ಕ್ಷೀಯಂತೆ - ನಾಶವಾಗುತ್ತವೆ ॥೨೧॥ ಅತಃ - ಆದುದರಿಂದ, ಕವಯಃ -ಪಂಡಿತರು, ನಿತ್ಯಂ - ಯಾವಾಗಲೂ, ಪರಮಯಾ-ಅಧಿಕವಾದ, ಮುದಾ-ಸಂತೋಷದಿಂದ, ಭಗವತಿ-ಭಗವಂತನಾದ, ವಾಸುದೇವೇ-ಕೃಷ್ಣನಲ್ಲಿ, ಆತ್ಮಪ್ರಸಾದಿನೀಂ, ಆತ್ಮ-ಮನಸ್ಸನ್ನು ಪ್ರಸಾದಿನೀಂ-ನಿರ್ಮಲಗೊಳಿಸುವ, ಭಕ್ತಿಂ-ಭಕ್ತಿಯನ್ನು, ಕುರ್ವಂತಿ-ಮಾಡುತ್ತಾರೆ ॥೨೨॥ ಸತ್ವಂ-ಸತ್ವಗುಣವು, ರಜಃ - ರಜೋಗುಣವು, ತಮಃ - ತಮೋಗುಣವು, ಇತಿ-ಹೀಗೆಂಬುವು, ಪ್ರಕೃತೇಃ - ಪ್ರಕೃತಿಯ, ಗುಣಾಃ - ಗುಣಗಳಾಗಿರುವುವು, ತೈಃ-ಆಗುಣಗಳಿಂದ, ಯುಕ್ತಃ - ಕೂಡಿರುವ, ಪರಃ-ಶ್ರೇಷ್ಠನಾದ, ಪುರುಷಃ - ಪರಮಾತ್ಮನು, ಏಕಃ-ಒಬ್ಬನೇ, ಇಹ-ಈ ಸೃಷ್ಟಿಯಲ್ಲಿ, ಅಸ್ಯ-ಈಪ್ರಪಂಚದ, ಸ್ಥಿತ್ಯಾದಯಃ, ಸ್ಥಿತಿ-ಸ್ಥಿತಿಯೇ, ಆದಯಃ - ಮೊದಲಾದವುಗಳಿಗಾಗಿ, ಹರಿವಿರಿಂಚಹರೇತಿ-ಹರಿ, ಬ್ರಹ್ಮ, ಶಿವ, ಎಂದು, ಸಂಜ್ಞಾಃ -ಹೆಸರುಗಳನ್ನು, ಧತ್ತೇ-ಪಡೆಯುತ್ತಾನೆ, ತತ್ರ-ಆಮೂವರಲ್ಲಿ, ನೃಣಾಂ-ಮನುಷ್ಯರಿಗೆ, ಸತ್ವತನೋಃ - ಸತ್ವಮೂರ್ತಿಯಾದ ವಿಷ್ಣುವಿ

ಸ್ಸು ಪ್ರಸನ್ನವಾಗಿ ವಿಷಯಾಸಕ್ತಿಯು ತೊಲಗುವುದು. ಅಂತು ನಿಸ್ಸಂಗನಾದವನಿಗೆ ಆತ್ಮಸಾಕ್ಷಾತ್ಕಾರವಾಗುವುದು ॥೨೦॥ ಸ್ವರೂಪಭೂತನಾದ ಆ ಪರಮೇಶ್ವರನ ಸಾಕ್ಷಾತ್ಕಾರವೆಂಬುದುಂಟಾದ ಕೂಡಲೇ ಅಹಂಕಾರ ಗ್ರಂಥಿಯು ಶಿಥಿಲವಾಗಿ ಸರ್ವಸಂಶಯಗಳೂ ತೊಲಗುವುವು. ಪ್ರಾರಬ್ಧಕರ್ಮ ಹೊರತು ಮಿಕ್ಕಕರ್ಮಗಳೆಲ್ಲಾ ನಾಶವಾಗುವುವು ॥೨೧॥ ಆದುದರಿಂದಲೇ ಜ್ಞಾನಿಗಳಾದವರು ನಿರಂತರದಲ್ಲಿಯೂ, ಅತ್ಯಂತ ಸಂತೋಷದಿಂದ ಕೂಡಿದವರಾಗಿ ಭಗವಂತನಾದ ಶ್ರೀಕೃಷ್ಣಮೂರ್ತಿಯಲ್ಲಿ, ಬುದ್ಧಿಯನ್ನು ನಿರ್ಮಲಗೊಳಿಸುವ ಭಕ್ತಿಯನ್ನಿಟ್ಟುಕೊಂಡಿರುವರು ॥೨೨॥ ಈ ಪ್ರಪಂಚದ ಸೃಷ್ಟಿಸ್ಥಿತಿಲಯಗಳನ್ನು ಮಾಡುವುದಕ್ಕಾಗಿ, ಪರಮಾತ್ಮನೊಬ್ಬನೇ ಬ್ರಹ್ಮ ವಿಷ್ಣು ಮಹೇಶ್ವರರೆಂಬ ಬೇರೆಬೇರೆಯಾದ ಹೆಸರುಗಳನ್ನು ಪಡೆದಿರುವನು. ಈ ಮೂವ್ವರಲ್ಲಿ ಸತ್ವಮೂರ್ತಿಯಾದ ವಿಷ್ಣುವಿನಿಂದಲೇ ಸರ್ವರಿಗೂ ಶ್ರೇಯಸ್ಸುಂಟಾಗುವುದು. ಆದುದರಿಂದ ತ್ರಿಮೂರ್ತಿಗಳೂ ಒಂದೇಆಗಿದ್ದರೂ

ಸಂಜ್ಞಾಃ ಶ್ರೇಯಾಂಸಿ ತತ್ರಖಲು ಸತ್ವತನೋ ರ್ನೃಣಾಂ ಸ್ಯುಃ॥೨೪॥ಪಾರ್ಥಿ
ವಾದ್ದಾರುಣೋ ಧೂಮ ಸ್ತಸ್ಮಾ ದಗ್ನಿ ಸ್ತ್ರಯೀಮಯಃ ॥ ತಮಸಸ್ತು ರಜ
ಸ್ತಸ್ಮಾತ್ಸತ್ವಂ ಯದ್ಬ್ರಹ್ಮದರ್ಶನಂ ॥೨೫॥ ಭೇಜಿರೇ ಮುನಯೋ ಥಾ
ಗ್ರೇ ಭಗವಂತ ಮಧೋಕ್ಷಜಂ ॥ ಸತ್ವಂ ವಿಶುದ್ಧಂ ಕ್ಷೇಮಾಯ ಕಲ್ಪಂತೇ
ಯೇನು ತಾನಿಹ ॥೨೬॥ ಮುಮುಕ್ಷವೋ ಘೋರರೂಪಾನ್ ಹಿತ್ವಾ ಭೂತ
ಪತೀ ನಥ ॥ ನಾರಾಯಣಕಳಾ ಶ್ಶಾಂತಾ ಭಜಂತೇ ಹ್ಯನಸೂಯವಃ ॥೨೭॥

ನಿಂದಲೇ, ಶ್ರೇಯಾಂಸಿ-ಶುಭಫಲಗಳು, ಸ್ಯುಃಖಲು-ಉಂಟಾಗುವವಷ್ಟೆ, ॥೨೪॥ ಪಾರ್ಥಿವಾತ್-ಪೃಥಿವೀಸಂಬಂಧವಾದ, ದಾರುಣಃ-ಕಟ್ಟಿಗೆಯಿಂದ, ಧೂಮಃ-ಹೊಗೆಯು, ತಸ್ಮಾತ್-ಆಹೊಗೆಯಿಂದ, ತ್ರಯೀಮಯಃ, ತ್ರಯೀ-ವೇದೋಕ್ತಕರ್ಮಗಳಿಂದ, ಮಯಃ-ಪ್ರಚುರವಾದ, ಅಗ್ನಿಃ-ಅಗ್ನಿಯು, ಉಂಟಾಗುವುದು (ಹೀಗೆಯೆ) ತಮಸಃ-ತಮೋಗುಣದಿಂದ, ರಜಃ-ರಜೋಗುಣವು, ತಸ್ಮಾತ್-ಆರಜೋಗುಣದಿಂದ, ಯತ್--ಯಾವುದು, ಬ್ರಹ್ಮದರ್ಶನಂ--ಬ್ರಹ್ಮನನ್ನು ಪ್ರಕಾಶಗೊಳಿಸುವುದೋ, ತತ್--ಆ, ಸತ್ವಂ-ಸತ್ವಗುಣವೂ, ಉಂಟಾಗುವುದು. ॥೨೫॥ ಅಥ-ಆದುದರಿಂದ, ಅಗ್ರೇ-ಪೂರ್ವದಲ್ಲಿ, ಮುನಯಃ-ಮುನಿಗಳು, ಸತ್ವಂ-ಸತ್ವಸ್ವರೂಪನಾದ, ವಿಶುದ್ಧಂ-ಪಾಪರಹಿತನಾದ, ಅಧೋಕ್ಷಜಂ, ಅಧಃ-ತಿರಸ್ಕರಿಸಲ್ಪಟ್ಟ, ಅಕ್ಷಜಂ-ಇಂದ್ರಿಯಜನ್ಯಜ್ಞಾನವುಳ್ಳ, ಭಗವಂತಂ-ವಿಷ್ಣುವನ್ನು, ಭೇಜಿರೇ-ಮರೆಹೊಕ್ಕರು. ಇಹ-ಈ ಸಂಸಾರದಲ್ಲಿ, ಯೇ-ಯಾರು, ತಾನ್-ಅವರನ್ನು, ಅನು-ಅನುಸರಿಸುವರೋ, ತೇ-ಅವರು, ಕ್ಷೇಮಾಯ-ಸದ್ಗತಿಗಾಗಿ, ಕಲ್ಪಂತೆ-ಅರ್ಹರಾಗುತ್ತಾರೆ, ॥೨೬॥ ಅನಸೂಯವಃ-ಅಸೂಯೆಯಿಲ್ಲದ,ಮುಮುಕ್ಷವಃ-ಮೋಕ್ಷವನ್ನು ಬಯಸುವವರು, ಘೋರರೂಪಾನ್-ಘೋರ-ಭಯಂಕರವಾದ, ರೂಪಾನ್-ಆಕಾರವುಳ್ಳ, ಭೂತಪತೀನ್-ಪಿತೃಭೂತಾದಿಗಳನ್ನು, ಹಿತ್ವಾ-ಬಿಟ್ಟು, ಅಥ-ಆಮೇಲೆ, ಶಾಂತಾಃ-ಸತ್ವಪ್ರಧಾನಗಳಾದ, ನಾರಾಯಣಕಳಾಃ, ನಾರಾಯಣ-ನಾರಾಯಣಮೂರ್ತಿಯ, ಕಳಾಃ-ಅವತಾರಗಳನ್ನು, ಭಜಂತೇ-

---

ಅವರಲ್ಲಿ ವಿಷ್ಣುವೇ ಶ್ರೇಷ್ಠನು ॥೨೪॥ ಭೂಮಿಯಲ್ಲಿ ಹುಟ್ಟಿದ ನಿಶ್ಚಲವಾದ ಕಾಷ್ಠವನ್ನು ಮಥಿಸುವುದರಿಂದ ಚಂಚಲವಾದ ಹೊಗೆಯುಂಟಾಗುವುದು. ಅದರಿಂದ ಪ್ರಕಾಶವಾಗಿಯೂ ವೇದೋಕ್ತಕರ್ಮಗಳಿಗೆ ಸಾಧನವಾಗಿಯೂ ಇರುವ ಅಗ್ನಿಯು ಹುಟ್ಟುವುದು. ಹೀಗೆಯೇ ಎಲ್ಲವನ್ನೂ ಲಯಗೊಳಿಸುವ ತಮಸ್ಸಿನಿಂದ ಪ್ರಪಂಚಜ್ಞಾನವನ್ನು ವೃದ್ಧಿಗೊಳಿಸುವ ರಜೋಗುಣವೂ, ಅದರಿಂದ ಪರಬ್ರಹ್ಮತತ್ವವನ್ನು ಪ್ರಕಾಶಪಡಿಸುವ ಸತ್ವಗುಣವೂ ಉಂಟಾಗುವುದು. ಆದಕಾರಣ ಗುಣಗಳ ತಾರತಮ್ಯದಿಂದ ಫಲತಾರತಮ್ಯವುಂಟು.॥೨೫॥ ಪೂರ್ವದಲ್ಲಿದ್ದ ಮಹರ್ಷಿಗಳು ಪ್ರಕೃತಿಸಂಬಂಧವಿಲ್ಲದೆಯೂ, ಇಂದ್ರಿಯಾದಿಗಳಿಗಗೋಚರನಾಗಿಯೂ, ಶುದ್ಧ ಸತ್ವಸ್ವರೂಪನಾಗಿಯೂ ಇರುವ ಭಗವಂತನನ್ನು ಭಜಿಸಿದರು. ಈಗಲೂ ಆ ಮಹಾತ್ಮರನ್ನು ಯಾರು ಅನುಸರಿಸುವರೋ ಅವರೇ ಸಂಸಾರಬಂಧದಿಂದ ಮುಕ್ತರಾಗಿ ಕ್ಷೇಮವನ್ನು ಪಡೆಯುವರು ॥೨೬॥ ಆದುದರಿಂದ ಅಸೂಯೆಯಿಲ್ಲದ ಮುಮುಕ್ಷುಗಳು ಭೂತ. ಯಕ್ಷ ಮೊದಲಾದ ಕ್ಷುದ್ರದೇವತೆಗಳನ್ನು ಭಜಿಸದೆಯೂ, ಇತರ ದೇವತೆಗಳನ್ನು ದೂಷಿಸದೆಯೂ, ಪರಮಶಾಂತಗಳಾದ ನಾರಾಯಣಮೂರ್ತಿಯ ಅವತಾರಗಳನ್ನೇ ಭಜಿಸಬೇಕು. ॥೨೭॥ ರಜಸ್ತಮಸ್ಸ್ವಭಾವವುಳ್ಳವರಾದುದರಿಂದಲೇ

ರಜಸ್ತಮಃಪ್ರಕೃತಯಃ ಸಮಶೀಲಾ ಭಜಂತಿವೈ । ಪಿತೃಭೂತಪ್ರಜೇಶಾ ದೀನ್ ಶ್ರಿಯೈಶ್ವರ್ಯಪ್ರಜೇಪ್ಸವಃ ॥೨೮॥ ವಾಸುದೇವಪರಾ ವೇದಾ ವಾಸುದೇವಪರಾ ಮಖಾಃ । ವಾಸುದೇವಪರಾ ಯೋಗಾ ವಾಸುದೇವಪರಾಃಕ್ರಿಯಾಃ ॥ ೨೯ ॥ ವಾಸುದೇವಪರಂ ಜ್ಞಾನಂ ವಾಸುದೇವಪರಂ ತಪಃ ॥ ವಾಸುದೇವಪರೋ ಧರ್ಮೋ ವಾಸುದೇವಪರಾ ಗತಿಃ ॥೩೦॥ ಸಏವೇದಂಸಸರ್ಜಾಗ್ರೇ ಭಗವಾನಾತ್ಮಮಾಯಯಾ ॥ ಸದಸದ್ರೂಪಯಾ ಚಾಸೌ ಗುಣ

ಧ್ಯಾನಿಸುತ್ತಾರೆ. ॥೨೭॥ ರಜಸ್ತಮಃಪ್ರಕೃತಯಃ, ರಜಃ-ರಜೋಗುಣವು, ತಮಃ - ತಮೋಗುಣವು, ಪ್ರಕೃತಯಃ-ಸ್ವಭಾವವಾಗಿಉಳ್ಳವರಾದುದರಿಂದಲೇ, ಸಮಶೀಲಾಃ, ಸಮ-ಪಿತೃಭೂತಪ್ರಜೇಶರೊಡನೆ ಸಮಾನವಾದ, ಶೀಲಾಃ-ನಡವಳಿಯುಳ್ಳ, ಶ್ರಿಯಾ-ಸಂಪತ್ತಿನೊಡನೆ, ಐಶ್ವರ್ಯಪ್ರಜೇಪ್ಸವಃ, ಐಶ್ವರ್ಯ-ದೊರೆತನವನ್ನೂ, ಪ್ರಜಾ-ಸಂತಾನವನ್ನೂ, ಈಪ್ಸವಃ-ಅಪೇಕ್ಷಿಸುವವರಾಗಿ, ಪಿತೃಭೂತಪ್ರಜೇಶಾದೀನ್, ಪಿತೃ-ಪಿತೃದೇವತೆಗಳನ್ನೂ, ಭೂತ ಕ್ಷುದ್ರದೇವತೆಗಳನ್ನೂ, ಪ್ರಜೇಶ-ರಾಜರೇ, ಆದೀನ್-ಮೊದಲಾದವರನ್ನೂ, ಭಜಂತಿವೈ-ಭಜಿಸುತ್ತಾರೆ. ॥೨೮॥ ವೇದಾಃ--ವೇದಗಳು, ವಾಸುದೇವಪರಾಃ, ವಾಸುದೇವ-ವಿಷ್ಣುವೇ, ಪರಾಃ-ಉದ್ದೇಶ್ಯವಾಗಿಉಳ್ಳವುಗಳು, ಮಖಾಃ-ಯಾಗಗಳು, ವಾಸುದೇವಪರಾಃ, ವಿಷ್ಣುವಿನಲ್ಲಿಯೇತಾತ್ಪರ್ಯವುಳ್ಳವುಗಳ , ಯೋಗಾಃ-ಯೋಗಶಾಸ್ತ್ರಗಳೂ, ವಾಸುದೇವಪರಾಃ, ಕ್ರಿಯಾಃ ಸಕಲಕರ್ಮಗಳೂ, ವಾಸುದೇವಪರಾಃ. ॥೨೯॥ ಜ್ಞಾನಂ-ಜ್ಞಾನಶಾಸ್ತ್ರವೂ, ವಾಸುದೇವಪರಂ, ತಪಃ-ತಪಸ್ಸು ವಾಸುದೇವಪರಂ, ಧರ್ಮಃ-ಧರ್ಮಶಾಸ್ತ್ರವೂ, ವಾಸುದೇವಪರಃ, ಗತಿಃ-ಸ್ವರ್ಗಾದಿಫಲಗಳೂ, ವಾಸುದೇವಪರಾ - ವಾಸುದೇವನೇ ಉದ್ದೇಶ್ಯವಾಗುಳ್ಳದ್ದು ॥೩೦॥ ಅಗ್ರೇ-ಸೃಷ್ಟಿಗಿಂತಮೊದಲು, ಅಗುಣಃ--ನಿರ್ಗುಣನಾದರೂ, ವಿಭುಃ-ಸರ್ವವ್ಯಾಪಕನಾದ, ಸಃ ಅಸೌ-ಆ ಈ, ಭಗವಾನ್ - ಭಗವಂತನಾದ ವಾಸುದೇವಮೂರ್ತಿಯು, ಸದಸದ್ರೂಪಯಾ-(*) ಕಾರ್ಯಕಾರಣರೂಪವಾದ, ಗುಣಮಯ್ಯಾ-ಸತ್ವರಜಸ್ತಮಸ್ಸುಗಳೆಂಬಮೂರು

ತಮ್ಮ ದೇವತೆಗಳಿಗೆ ಸಮಾನವಾದ ಸ್ವಭಾವವುಳ್ಳ ಜನರು ಪ್ರಭುತ್ವವನ್ನು, ಸಂತಾನಾದಿಗಳನ್ನೂ ಐಶ್ವರ್ಯವನ್ನೂ ಬಯಸಿ, ಭೂತಾದಿಗಳನ್ನು ಆರಾಧಿಸುವರು ॥೨೮॥ ವೇದಗಳು ವಾಸುದೇವನನ್ನೇ ಹೊಗಳುವುವು. ವಾಸುದೇವಪ್ರೀತಿಗಾಗಿಯೇ ಯಜ್ಞಗಳನ್ನು ಮಾಡುವರು. ಯಮನಿಯಮಾದಿ ಕ್ರಿಯೆಗಳನ್ನು ಬೋಧಿಸುವ ಯೋಗಶಾಸ್ತ್ರವೂ ಆ ವಿಷ್ಣುವನ್ನೇ ಹೊಂದುವುದಕ್ಕುಪಾಯವು. ಶ್ರೌತಸ್ಮಾರ್ತಾದಿ ಕರ್ಮಗಳೂ ಆತನ ಆರಾಧನವೇ ಆಗಿರುವುವು. ಜ್ಞಾನಶಾಸ್ತ್ರದಲ್ಲಿ ವಿವರಿಸಲ್ಪಡುವ ತಪಸ್ಸೂ, ವಿಷ್ಣುಪ್ರಿತಿಗಾಗಿಯೇ ಉಂಟಾಗಿರುವುದು. ದಾನ, ವ್ರತ, ಮೊದಲಾದವುಗಳನ್ನು ಬೋಧಿಸುವ ಧರ್ಮಶಾಸ್ತ್ರವೂ ಆತನನ್ನು ಆರಾಧಿಸುವ ಉಪಾಯವೇ. ಕರ್ಮಾಚರಣೆಯಿಂದುಂಟಾಗುವ ಸ್ವರ್ಗಾದಿ ಫಲಗಳು ಆನಂದಾತ್ಮಕಗಳಾದುದರಿಂದ ವಾಸುದೇವಪರಗಳೇ ಆಗಿರುವುವು. ಹೀಗೆ ಸಕಲಶಾಸ್ತ್ರಗಳೂ ಭಗವದಾರಾಧನೆಗಾಗಿಯೇ ಹೊರಟಿರುವುವಾದುದರಿಂದ, ಮೋಕ್ಷದಾಯಕನಾದ ವಾಸುದೇವಮೂರ್ತಿಯನ್ನೇ ಭಜಿಸಬೇಕು. ॥೩೦॥ ಸರ್ವವ್ಯಾಪಕನಾದ ಆ ಭಗವಂ

* ಕಾರ್ಯ—ಬಂದರಿಂದುಂಟಾಗುವುದು. ಕಾರಣ—ಮತ್ತೊಂದನ್ನುಂಟುಮಾಡುವುದು.

ಮಯ್ಯಾ ಗುಣೋವಿಭುಃ ॥೩೦॥ ತಯಾ ವಿಲಸಿತೇಷ್ವೇಷು ಗುಣೇಷು ಗುಣವಾನಿವ ॥ ಅಂತಃ ಪ್ರವಿಷ್ಟ ಆಭಾತಿ ವಿಜ್ಞಾನೇನವಿಜೃಂಭಿತಃ ॥ ೩೧ ॥ ಯಥಾಹ್ಯ ವಹಿತೋ ವಹ್ನಿ ದಾರುಷ್ವೇಕ ಸ್ವಯೋನಿಷು ॥ ನಾನೇವಾ ಭಾತಿ ವಿಶ್ವಾತ್ಮಾ ಭೂತೇಷು ಚ ತಥಾ ಪುಮಾನ್॥೩೨॥ಅಸೌ ಗುಣಮಯೈರ್ಭಾವೈ*ಭೂತಸೂಕ್ಷ್ಮೇಂದ್ರಿಯಾತ್ಮಭಿಃ । ಸ್ವನಿರ್ಮಿತೇಷು ನಿರ್ವಿಷ್ಟೋ

ಗುಣಗಳಿಂದೊಡಗೂಡಿದ, ಆತ್ಮಮಾಯಯಾ, ಆತ್ಮ-ತನ್ನ, ಮಾಯಯಾ-ಮಾಯಾಶಕ್ತಿಯಿಂದ, ಇದಂ-ಈಪ್ರಪಂಚವನ್ನು, ಸಸರ್ಜ-ಸೃಜಿಸಿದನು, ॥೩೦॥ ವಿಜ್ಞಾನೇನ-ಚೈತನ್ಯಸ್ವರೂಪದಿಂದ, ವಿಜೃಂಭಿತಃ-ಸರ್ವೋತ್ಕೃಷ್ಟನಾಗಿದ್ದರೂ, ತಯಾ - ಆ ಮಾಯೆಯಿಂದ, ವಿಲಸಿತೇಷು--ಹೊರಪಟ್ಟ, ಏಷು - ಈ, ಗುಣೇಷು-ಆಕಾಶವೊದಲಾದ ಭೂತಗಳಲ್ಲಿ, ಅಂತಃ-ಒಳಗೆ, ಪ್ರವಿಷ್ಟಃ-ಹೊಕ್ಕವನಾಗಿ, ಗುಣವಾನಿವ-ಗುಣಗಳಿಗೊಳಗಾದವನಂತೆ, ಆಭಾತಿ-ಪ್ರಕಾಶಿಸುತ್ತಾನೆ, ॥೩೧॥ ವಹ್ನಿಃ - ಅಗ್ನಿಯು, ಸ್ವಯೋನಿಷು, ಸ್ವ-ತನ್ನನ್ನುಪ್ರಕಾಶಗೊಳಿಸುವುದಕ್ಕೆ, ಯೋನಿಷು - ಕಾರಣಗಳಾದ, ದಾರುಷು-ಕಾಷ್ಠಗಳಲ್ಲಿ, ಅವಹಿತಃ-ಇಡಲ್ಪಟ್ಟದ್ದಾಗಿ, ಏಕೋಪಿ-ಒಂದೇ ಆಗಿದ್ದರೂ, ಯಥಾ - ಹೇಗೆ, ನಾನೇವ - ಅನೇಕಗಳಂತೆ, ಆಭಾತಿ - ಹೊಳೆಯುವುದೋ, ತಥಾ - ಹಾಗೆ, ಪುಮಾನ್ - ಪರಮಾತ್ಮನು, ಏಕೋಪಿ-ಒಬ್ಬನಾದರೂ, ವಿಶ್ವಾತ್ಮಾ-ಪ್ರಪಂಚಸ್ವರೂಪನಾಗಿ, ಭೂತೇಷು - ಭೂತಗಲ್ಲಿ, ನಾನೇವ-ಅನೇಕರಂತೆ, ಆಭಾತಿ-ಹೊಳೆಯುತ್ತಾನೆ, ॥೩೨॥ ಅಸೌ - ಈ ವಿಷ್ಣುವು, ಗುಣಮಯೈಃ - ಗುಣಗಳಿಂದುಂಟಾಗಿರುವ, ಭೂತಸೂಕ್ಷ್ಮೇಂದ್ರಿಯಾತ್ಮಭಿಃ, (*) ಭೂತಸೂಕ್ಷ್ಮ-ಸೂಕ್ಷ್ಮಭೂತಗಳು, ಇಂದ್ರಿಯ-ಇಂದ್ರಿಯಗಳು, ಆತ್ಮಭಿಃ ಮನಸ್ಸು ಇವುಗಳೆಂಬ, ಭಾವೈಃ - ತತ್ವಗಳಿಂದ, ಸ್ವನಿರ್ಮಿತೇಷು, ಸ್ವ-ತನ್ನಿಂದಲೇ, ನಿರ್ಮಿತೇಷು-ನಿರ್ಮಿಸಲ್ಪಟ್ಟ, ಭೂತೇಷು-ನಾಲ್ಕುವಿಧಗಳಾದ ಭೂತಗಳಲ್ಲಿ, ನಿರ್ವಿಷ್ಟಃ - ನೆಲಸಿದವನಾಗಿ, ತದ್ಗುಣಾನ್

ತನು ಸ್ವಯಂನಿರ್ಗುಣನಾಗಿ ಚೈತನ್ಯಸ್ವರೂಪದಿಂದಿದ್ದರೂ, ಗುಣಮಯವಾಗಿ ಕಾರ್ಯಕಾರಣರೂಪದಿಂದ ತೋರುತ್ತಾಯಿರುವ ತನ್ನ ಮಾಯೆಯಿಂದ, ಸೃಷ್ಟ್ಯಾದಿಯಲ್ಲಿ ಈ ಜಗತ್ತಿನಲ್ಲಿರುವ ಗುಣಮಯಗಳಾದ ಪದಾರ್ಥಗಳು ಹೊರಪಡಲು ಆ ಪರಮಾತ್ಮನುಲೀಲಾರ್ಥವಾಗಿ ಅವುಗಳಲ್ಲಿ ಒಳಹೊಕ್ಕು "ಈ ಪದಾರ್ಥಗಳು ನನ್ನವು" ಎಂದು ಅಭಿಮಾನವುಳ್ಳವನಂತೆ ಇರುವನೇ ಹೊರತು ನಿಜವಾಗಿ ಅಲ್ಲ. ॥೩೧॥ ತನ್ನನ್ನು ಹೊರಪಡಿಸುವ ಕಾಷ್ಠಗಳಲ್ಲಿ ಅಡಗಿರುವ ಅಗ್ನಿಯೆಂಬುದು ಒಂದೇಆಗಿದ್ದರೂ, ಆ ಕಾಷ್ಠಗಳನ್ನನುಸರಿಸಿ ನಾನಾರೂಪವಾಗಿ ಕಾಣುವಂತೆ, ಸರ್ವಾತ್ಮಕನಾದ ವಾಸುದೇವಮೂರ್ತಿಯು ಒಬ್ಬನೇ ಆಗಿದ್ದರೂ, ಭೂತಗಳಲ್ಲಿ ಅಂತರ್ಯಾಮಿಯಾಗಿ ಅನೇಕ ರೂಪದಿಂದ ಕಾಣುವನು. ॥೩೨॥ ಈ ಪರಮಾತ್ಮನು ತನ್ನಿಂದಲೇ ನಿರ್ಮಿಸಲ್ಪಟ್ಟ ಜರಾಯುಜಾದಿ ಭೂತಗಳಲ್ಲಿ ಅಡಗಿದವ

* ಈಗ ನಾವು ತಿಳಿದಿರುವ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಎಂಬಿವು ಪಂಚಭೂತಗಳು, ಇವುಗಳಲ್ಲಿ ಪ್ರತಿ ಒಂದರಲ್ಲಿಯೂ ಮಿಕ್ಕ ನಾಲ್ಕು ಭೂತಗಳು ಮಿಶ್ರವಾಗಿರುವುವು. ಆದುದರಿಂದ ಇವಕ್ಕೆ ಪಂಚೀಕೃತಭೂತ (ಮಿಶ್ರಭೂತ) ಗಳೆಂದು ಹೆಸರು. ಹೀಗೆ ಮಿಶ್ರವಾಗದೆ ಶುದ್ಧಗಳಾಗಿರುವ ಭೂತಗಳಿಗೆ ಅಪಂಚೀಕೃತಭೂತ ಅಥವಾ ಭೂತಸೂಕ್ಷ್ಮಗಳೆಂದು ಹೆಸರು.

ಭುಂಙ್ಕ್ತೇ † ಭೂತೇಷು ತದ್ಗುಣಾನ್ ॥೩೪॥ ಭಾವಯತ್ಯೇಷ ಸತ್ತ್ವೇನ ಲೋಕಾನ್
ವೈ ಲೋಕಭಾವನಃ । ಲೀಲಾವತಾರಾನುರತೋ ದೇವತಿರ್ಯಙ್ನರಾದಿಷು ॥೩೫॥

ಇತಿ ದ್ವಿತೀಯೋಽಧ್ಯಾಯಃ.

ತತ್ - ಆಭೂತಗಳಿಗನುಗುಣಗಳಾದ, ಗುಣಾನ್ - ವಿಷಯಗಳನ್ನು, ಭುಂಙ್ಕ್ತೇ - ಅನುಭವಗೊಳಿಸುತ್ತಾನೆ, ॥೩೪॥ ಲೋಕಭಾವನಃ, ಲೋಕ-ಲೋಕಗಳನ್ನು, ಭಾವನಃ-ಸೃಷ್ಟಿಮಾಡಿದವನಾದುದರಿಂದಲೇ, ದೇವತಿರ್ಯಙ್ನರಾದಿಷು, ದೇವ-ದೇವತೆಗಳು, ತಿರ್ಯಕ್-ಪಶ್ವಾದಿಗಳು, ನರ-ಮನುಷ್ಯರು, ಆದಿಷು-ಮೊದಲಾದವರಲ್ಲಿ, ಲೀಲಾವತಾರಾನುರತಃ, ಲೀಲಾ-ಲೀಲಾರ್ಥಗಳಾದ, ಅವತಾರ-ಮತ್ಸ್ಯಾದ್ಯವತಾರಗಳಲ್ಲಿ, ಅನುರತಃ-ಆಸಕ್ತನಾಗಿರುವ, ಏಷಃ - ಈಹರಿಯು, ಸತ್ತ್ವೇನ - ಸತ್ವಗುಣದಿಂದಕೂಡಿದವನಾಗಿ, ಲೋಕಾನ್-ಲೋಕಗಳನ್ನು, ಭಾವಯತಿ-ಕಾಪಾಡುತ್ತಾನೆ. ॥೩೫॥

ದ್ವಿತೀಯಾಧ್ಯಾಯಂ ಸಮಾಪ್ತಂ.

ನಾಗಿ ಭೂತಸೂಕ್ಷ್ಮ, ಇಂದ್ರಿಯ, ಮನಸ್ಸುಗಳೆಂಬ ತತ್ವಗಳಿಂದ, ಆ ಭೂತಗಳಿಗನುಗುಣಗಳಾದ ವಿಷಯಗಳನ್ನು ಅನುಭವಗೊಳಿಸುವನು. (ಲೋಕದಲ್ಲಿ ಸಕಲ ಭೂತಗಳೂ ಪರಮಾತ್ಮನ ಪ್ರೇರಣೆಯಿಂದಲೇ ಪ್ರಪಂಚವಿಷಯಗಳನ್ನು ಅನುಭವಿಸುವುವು.) ॥೩೪॥ ಮತ್ತು ಈ ಪರಮಾತ್ಮನು ಲೋಕಕರ್ತನಾದುದರಿಂದ ದೇವತೆಗಳು, ಪಶುಗಳು, ಮನುಷ್ಯರು ಮೊದಲಾದವರಲ್ಲಿ ಲೀಲೆಗಾಗಿ ಅವತಾರಗಳನ್ನು ಮಾಡಿ ಸತ್ವಗುಣದಿಂದ ಲೋಕಗಳನ್ನು ಸಂರಕ್ಷಿಸುವನು. ಎಂದು ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ಎರಡನೆಯ ಅಧ್ಯಾಯಂ ಮುಗಿದುದು.

† ಜಗತ್ತಿನಲ್ಲಿರುವ ವಸ್ತುಗಳೆಲ್ಲಾ ಭೂತಗಳೇ. ಇವು ನಾಲ್ಕು ವಿಧಗಳಾಗಿರುವುವು (i) ಜರಾಯುಜ-ಜರಾಯುವೆಂಬ ಚೀಲದೊಡನೆ ಗರ್ಭದಿಂದ ಹುಟ್ಟುವ ಮನುಷ್ಯರು. (ii) ಅಂಡಜ-ಮೊಟ್ಟೆಯಿಂದ ಹುಟ್ಟುವ ಪ್ರಾಣಿಗಳು - ಪಕ್ಷಿಗಳು. (iii) ಸ್ವೇದಜ-ಬೆವರಿನಿಂದ ಹುಟ್ಟುವುವು-ಹೇನುಗಳು. ಉದ್ಭಿಜ್ಯ-ನೆಲವನ್ನು ಬಗೆದುಕೊಂಡು ಹುಟ್ಟುವುವು-ಗಿಡಬಳ್ಳಿಗಳು.

— ಓಂನಮಃ ಪರಮಾತ್ಮನೇ. —

ಸೂತಃ॥ ಜಗೃಹೇ ಪೌರುಷಂ ರೂಪಂ ಭಗವಾನ್‡ಮಹದಾದಿಭಿಃ। ಸಂಭೂತಂ
* ಷೋಡಶಕಳ ಮಾದೌ ಲೋಕಸಿಸೃಕ್ಷಯಾ ॥೧॥ ಯಸ್ಯಾಂಭಸಿ ಶಯಾ
ನಸ್ಯ ಯೋಗನಿದ್ರಾಂ ವಿತನ್ವತಃ । ನಾಭಿಹ್ರದಾಂಬುಜಾ ದಾಸೀದ್ಬ್ರಹ್ಮಾ

ಅರ್ಥ॥ ಭಗವಾನ್ - ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನು, ಆದೌ - ಸೃಷ್ಟಿಗಿಂತಮೊದಲು, ಲೋಕಸಿಸೃಕ್ಷಯಾ-ಲೋಕ-ಪ್ರಪಂಚವನ್ನು, ಸಿಸೃಕ್ಷಯಾ-ಸೃಷ್ಟಿಸಬೇಕೆಂಬ ಇಚ್ಛೆಯಿಂದ, ಮಹದಾದಿಭಿಃ, ಮಹತ್-ಮಹತ್ತತ್ವವೇ, ಆದಿಭಿಃ - ಮೊದಲಾದವುಗಳಿಂದ, ಸಂಭೂತಂ - ಉಂಟಾದ, ಷೋಡಶಕಳಂ - ಹದಿನಾರು ಅವಯುವಗಳುಳ್ಳ, ಪೌರುಷಂ-ಪುರುಷನೆಂಬ, (ವಿರಾಟ್) ರೂಪಂ-ಅವತಾರವನ್ನು, ಜಗೃಹೇ-ಧರಿಸಿದನು, ॥೧॥ ಅಂಭಸಿ-ಏಕಾರ್ಣವದಲ್ಲಿ, ಶಯಾನಸ್ಯ - ಮಲಗಿರುವ, ಯೋಗನಿದ್ರಾಂ, ಯೋಗ-ಆತ್ಮಧ್ಯಾನರೂಪವಾದ, ನಿದ್ರಾಂ-ನಿದ್ರೆಯನ್ನು, ವಿತನ್ವತಃ-ಮಾಡುತ್ತಿರುವ, ಯಸ್ಯ-ಯಾವವಿರಾಟ್ಪುರುಷನ, ನಾಭಿಹ್ರದಾಂಬುಜಾತ್-ನಾಭಿ-ಹೊಕ್ಕುಳೆಂಬ, ಹ್ರದ-ಸರೋವರದಲ್ಲಿಹುಟ್ಟಿದ

—❁ ಭಗವಂತನು ಮಾಡಿದ ಅವತಾರಗಳು. ❁—

ಕಂದಂ॥ ಪುರುಷಾದ್ಯವತಾರಂಗಳ । ನುರುವಿಕ್ರಮ ನವರೊಳೆಸಗಿದನಘಚರಿತವಂ ॥
ನಿರವಿಪನಿಂದೀತೆರದಿಂ । ಹರಿಗುಣಕಥನಾವದಾತಚೇತಂ ಸೂತಂ॥

ತಾತ್ಪರ್ಯ—ಪೂರ್ವಾಧ್ಯಾಯದಲ್ಲಿ ಶೌನಕಾದಿಗಳು ಮಾಡಿದ ಪ್ರಶ್ನೆಗಳೊಳಗೆ (ಅಥಾಖ್ಯಾಹಿಹರೇರ್ಧೀಮನ್ನವತಾರಕಥಾಶ್ಶುಭಾಃ)ಎಂಬ ಪ್ರಶ್ನೆಯನ್ನನುಸರಿಸಿ,ಸೂತನು ಈ ಅಧ್ಯಾಯದಲ್ಲಿ ಭಗವಂತನು ಮಾಡಿದ ನಾನಾವತಾರಗಳ ಚರಿತ್ರೆಗಳನ್ನು ಹೇಳತೊಡಗಿ, ಮೊದಲು ಪುರುಷಾವತಾರ ಕಥೆಯನ್ನು ವರ್ಣಿಸುವುದೆಂತೆನೆ—ಅಯ್ಯಾ ಮುನಿಗಳಿರಾ! ಪೂರ್ವದಲ್ಲಿ ಭಗವಂತನಾದ ಶ್ರೀಮನ್ನಾರಾಯಣಮೂರ್ತಿಯು, ಲೀಲಾರ್ಥವಾಗಿ ಪ್ರಪಂಚವನ್ನು ನಿರ್ಮಾಣಮಾಡಲೆಳಸಿ ಮೂಲಪ್ರಕೃತಿ, ಅವ್ಯಕ್ತ, ಮೊದಲಾದ ಹೆಸರುಗಳನ್ನು ಪಡೆದಿರುವ, ತನ್ನ ಮಾಯಾಶಕ್ತಿಯ ವಿಕಾರಗಳಾದ, ಮಹತ್ತು, ಅಹಂಕಾರ, ಪಂಚತನ್ಮಾತ್ರಗಳೆಂಬ ತತ್ವಗಳಿಂದುಂಟಾದ, ಏಕಾದಶೇಂದ್ರಿಯಗಳು, ಪಂಚಭೂತಗಳು, ಎಂಬ ಹದಿನಾರು ಅವಯುವಗಳುಳ್ಳ ಪ್ರಪಂಚಸ್ವರೂಪವಾದ ಪುರುಷಾವತಾರವನ್ನು ಪಡೆದನು.॥೧ ಆ ವಿರಾಟ್ಪುರುಷನು ಏಕಾರ್ಣವವಾದ ಜಲದಮೇಲೆ ಮಲಗಿ, ಆತ್ಮಾನುಸಂಧಾನವೆಂಬ ಯೋಗನಿದ್ರೆಯನ್ನು ಮಾಡುತ್ತಿರುವಾಗ, ಆತನ ನಾಭೀಕಮಲದಿಂದ,ಮರೀಚಿ ಮೊದಲಾದ

‡ ಸೂಕ್ಷ್ಮವಾಗಿದ್ದ ಮೂಲಪ್ರಕೃತಿಯು ಭಗವಂತನ ಸಂಕಲ್ಪದಿಂದ ವಿಸ್ತರಿಸಿ ಮಹತ್ತೆನಿಸುವುದು. ಅದೇಪ್ರಕೃತಿಯಲ್ಲಿ ಪರಮಾತ್ಮಚೈತನ್ಯವು ಪ್ರತಿಫಲಿಸಿ "ನಾನು" ಎಂದು ತಿಳಿದರೆ ಅದು ಅಹಂಕಾರವೆನಿಸುವುದು. ಪಂಚತನ್ಮಾತ್ರಗಳೇ ಸೂಕ್ಷ್ಮಭೂತಗಳು.

* ಕಣ್ಣು, ಮೂಗು, ಕಿವಿ, ನಾಲಗೆ, ಚರ್ಮಗಳೆಂಬ ಜ್ಞಾನೇಂದ್ರಿಯಗಳು, ಮಾತು, ಕೈ, ಕಾಲು, ಗುದ, ಉಪಸ್ಥಗಳೆಂಬ ಕರ್ಮೇಂದ್ರಿಯಗಳು, ಮನಸ್ಸು ಸೇರಿ ಹನ್ನೊಂದು ಇಂದ್ರಿಯಗಳು. ನೆಲ, ನೀರು, ಬೆಂಕಿ, ಗಾಳಿ, ಆಕಾಶಗಳೆಂಬ ಭೂತಗಳೈದು. ಈ ಹದಿನಾರೂ ಷೋಡಶಕಳೆಗಳು.

ವಿಶ್ವಸೃಜಾಂ ಪತಿಃ ॥೨॥ ಯಸ್ಯಾವಯವಸಂಸ್ಥಾನೈಃ ಕಲ್ಪಿತೋ ಲೋಕ
ವಿಸ್ತರಃ । ತದ್ವೈ ಭಗವತೋ ರೂಪಂ ವಿಶುದ್ಧಂ ಸತ್ವಮೂರ್ಜಿತಂ ॥೩॥
ಪಶ್ಯಂತ್ಯದೋರೂಪ ಮದಭ್ರಚಕ್ಷುಷ ಸ್ಸಹಸ್ರಪಾದೋರುಭುಜಾನ
ನಾದ್ಭುತಂ । ಸಹಸ್ರಮೂರ್ಧಶ್ರವಣಾಕ್ಷಿನಾಸಿಕಂ ಸಹಸ್ರಮೌಳ್ಯಂಬರ
ಕುಂಡಲೋಲ್ಲಸತ್॥೪॥ ಏತನ್ನಾನಾವತಾರಾಣಾಂ ನಿಧಾನಂ ಬೀಜ ಮವ್ಯ

ಅಂಬುಜಾತ್-ಕಮಲದಿಂದ, ವಿಶ್ವಸೃಜಾಂ-ಲೋಕವನ್ನು ನಿರ್ಮಿಸಿದ ಮರೀಚಿಮೊದಲಾದವರಿಗೆ, ಪತಿಃ-ಒಡೆಯನಾದ, ಬ್ರಹ್ಮಾ-ಚತುರ್ಮುಖನು, ಆಸೀತ್-ಹುಟ್ಟಿದನೋ ॥೨॥ ಯಸ್ಯ-ಯಾವ ವಿರಾಟ್‌ಪುರುಷನ, ಅವಯವಸಂಸ್ಥಾನೈಃ, ಅವಯವ - ಶರೀರಾವಯವಗಳ, ಸಂಸ್ಥಾನೈಃ -- ಬದಲಾವಣೆಗಳಿಂದ, ಲೋಕವಿಸ್ತರಃ, ಲೋಕ-ದೇವಮನುಷ್ಯಾದಿಲೋಕಗಳ, ವಿಸ್ತರಃ-ವಿಸ್ತಾರವು, ಕಲ್ಪಿತಃ-ನಿರ್ಮಿಸಲ್ಪಟ್ಟಿತೋ, ತದ್ವೈ-ಅದೇ, ಭಗವತಃ-ಭಗವಂತನ, ವಿಶುದ್ಧಂ-ರಜಸ್ಸುಮೊದಲಾದವುಗಳಿಂದ ಮಿಶ್ರವಾಗದ, ಊರ್ಜಿತಂ - ನಿರತಿಶಯವಾದ, ಸತ್ವಂ - ಸತ್ವಮಯವಾದ, ರೂಪಂ-ಅವತಾರವು, ॥೩॥ ಅದಭ್ರಚಕ್ಷುಷಃ, ಅದಭ್ರ-ಅಧಿಕ (ಜ್ಞಾನರೂಪ)ವಾದ ಚಕ್ಷುಷಃ-ದೃಷ್ಟಿಯುಳ್ಳ ಮಹಾಯೋಗಿಗಳು, ಸಹಸ್ರಪಾದೋರುಭುಜಾನನಾದ್ಭುತಂ, ಸಹಸ್ರ-ಸಾವಿರಾರು, ಪಾದ-ಪಾದಗಳು, ಊರು - ತೊಡೆಗಳು, ಆನನ - ಮುಖಗಳು, ಇವುಗಳಿಂದ, ಅದ್ಭುತಂ - ಆಶ್ಚರ್ಯಕರವಾದ, ಸಹಸ್ರ—ನಾಸಿಕಂ, ಸಹಸ್ರ - ಸಾವಿರಾರು, ಮೂರ್ಧ-ತಲೆಗಳು, ಶ್ರವಣ-ಕಿವಿಗಳು, ಅಕ್ಷಿ-ಕಣ್ಣುಗಳು, ನಾಸಿಕಂ-ಮೂಗುಗಳೂ ಉಳ್ಳ, ಸಹಸ್ರ—ಲ್ಲಸತ್, ಸಹಸ್ರ-ಸಾವಿರಾರು, ಮೌಳಿ - ಕಿರೀಟಗಳು, ಅಂಬರ-ವಸ್ತ್ರಗಳು, ಕುಂಡಲ - ಕಡಕುಗಳು, ಇವುಗಳಿಂದ, ಉಲ್ಲಸತ್ - ಹೊಳೆಯುತ್ತಿರುವ, ಅದಃ - ಈ, ರೂಪಂ - ವಿರಾಡ್ರೂಪವನ್ನು, ಪಶ್ಯಂತಿ-ನೋಡುತ್ತಾರೆ ॥೪॥ ಯಸ್ಯ - ಯಾವವಿರಾಟ್ಪುರುಷನ, ಅಂಶಾಂಶೇನ, ಅಂಶ -- ಅವಯವರೂಪನಾದ ಬ್ರಹ್ಮನ, ಅಂಶೇನ - ಅಂಶಭೂತರಾದ ಮರೀಚಿ ಮೊದಲಾದವರಿಂದ, ದೇವತಿರ್ಯಙ್ನರಾದಯಃ, ದೇವ-ದೇವತೆಗಳು, ತಿರ್ಯಕ್-ಪಶುಪಕ್ಷ್ಯಾದಿಗಳು, ನರ-ಮನುಷ್ಯರು, ಆದಯಃ-ಮೊದಲಾದವರು, ಸೃಜ್ಯಂತೇ-ಸೃಷ್ಟಿಸಲ್ಪಡುವರೋ, ಏತತ್-ಈ ರೂಪವು, ನಾನಾವತಾರಾಣಾಂ, ನಾನಾ-ಅನೇಕಗಳಾದ, ಅವತಾ

ನವಬ್ರಹ್ಮರಿಗೆ ಅಧಿಪತಿಯಾದ, ಚತುರ್ಮುಖ ಬ್ರಹ್ಮನುದಯಿಸಿದನು. ॥೨॥ ಶುದ್ಧಸತ್ವವೆನಿಸಿ, ನಿರತಿಶಯ ಮಹಿಮೆಯುಳ್ಳ ಆ ವಿರಾಟ್ಪುರುಷನ, ಅವಯವಗಳಾದ ಪಂಚಭೂತ ಮೊದಲಾದವುಗಳಿಂದ, ಈ ಪ್ರಪಂಚವು ವಿಸ್ತೃತವಾಯಿತು. ॥೩॥ ಅಸಂಖ್ಯಾಕಗಳಾದ ಕಾಲು, ತೊಡೆ, ತೋಳುಗಳಿಂದಲೂ, ಅಪರಿಮಿತಗಳಾದ ತಲೆ,ಕಿವಿ, ಕಣ್ಣು, ಮೂಗುಗಳಿಂದಲೂ, ಎಣಿಸುವುದಕ್ಕಾಗದ ಕಿರೀಟ ವಸ್ತ್ರಭೂಷಣಾದಿಗಳಿಂದಲೂ, ಆಶ್ಚರ್ಯವೆನಿಸಿ ಪ್ರಕಾಶಿಸುತ್ತಿರುವ ಆ ಮಹಾ ಪುರುಷರೂಪವನ್ನು ನೋಡಬೇಕಾದರೆ ಜ್ಞಾನರೂಪವಾದ ದಿವ್ಯಚಕ್ಷುಸ್ಸುಳ್ಳ ಮಹಾಯೋಗಿಗಳೇ ಶಕ್ತರಲ್ಲದೆ ಇತರರುಶಕ್ತರಲ್ಲ. ॥೪॥ ನಾರಾಯಣ ಮೂರ್ತಿಯ ಈ ಪುರುಷರೂಪವು ಮಿಕ್ಕ ಅವತಾರಗಳಂತೆ ಹುಟ್ಟಿ ಲಯವಾಗುವುದಲ್ಲ. ಇದು ಎಲ್ಲ ಅವತಾರಗಳಿಗೂ ತವರುಮನೆಯಾಗಿರುವುದು ಮತ್ತು ಎಲ್ಲಾ ಅವತಾರಗಳೂ ಕಡೆಗೆ ಇದರಲ್ಲಿಯೇ ಲೀನವಾಗುವುವು. ಈ ಅವತಾರಕ್ಕೆ ನಾಶವಿಲ್ಲ. ಈ ಪರಮಪುರುಷನ ಅಂಶಾಂಶರಾದ ಬ್ರಹ್ಮಮರೀಚಿ ಮೊದಲಾದವರೇ ಈ ಪ್ರಪಂಚವನ್ನು ಸೃಜಿಸುವರು.

ಯಂ। ಯಸ್ಯಾಂಶಾಂಶೇನ ಸೃಜ್ಯಂತೇ ದೇವ ತಿರ್ಯಙ್ನರಾದಯಃ॥೫॥ ಸ ಏವ ಪ್ರಥಮಂ ದೇವಃ ಕೌಮಾರಂ ಸರ್ಗ ಮಾಸ್ಥಿತಃ। ಚಚಾರ ದುಶ್ಚರಂ ಬ್ರಹ್ಮಾ ಬ್ರಹ್ಮಚರ್ಯ ಮಖಂಡಿತಂ॥೬॥ ದ್ವಿತೀಯಂತು ಭವಾಯಾಸ್ಯ ರಸಾತಲಗತಾಂ ಮಹೀಂ। ಉದ್ಧರಿಷ್ಯನ್ನು ಪಾಧತ್ತ ಯಜ್ಞೇಶ ಸ್ಸೌಕರಂ ವಪುಃ॥೭॥ ತೃತೀಯಮೃಷಿಸರ್ಗಂ ವೈ ದೇವರ್ಷಿತ್ವ ಮುಪೇತ್ಯಸಃ। ತಂತ್ರಂ ಸಾತ್ವತಮಾಚಷ್ಟ ನೈಷ್ಕರ್ಮ್ಯಂ ಕರ್ಮಣಾಂ ಯತಃ॥೮॥ ತುರ್ಯೇ ಧರ್ಮಕಳಾಸರ್ಗೇ ನರ

ರಾಣಾಂ-ಅವತಾರಗಳಿಗೆ, ನಿಧಾನಂ-ಪ್ರವೇಶಸ್ಥಾನವು, ಬೀಜಂ - ಉತ್ಪತ್ತಿಸ್ಥಾನವು, ಅವ್ಯಯಂ-ನಾಶರಹಿತವೂ, ಆಗಿರುವುದು ॥೫॥ ಸಏವದೇವಃ-ಆ ವಿರಾಡ್ರೂಪವನ್ನು ಪಡೆದ ನಾರಾಯಣಮೂರ್ತಿಯೇ, ಕೌಮಾರಂ-ಕೌಮಾರವೆಂಬ ಹೆಸರುಳ್ಳ, ಪ್ರಥಮಂ-ಮೊದಲನೆಯದಾದ, ಸರ್ಗಂ - ಅವತಾರವನ್ನು, ಆಸ್ಥಿತಃ-ಹೊಂದಿ, ಬ್ರಹ್ಮಾ - ಬ್ರಾಹ್ಮಣನಾಗಿ, ಅಖಂಡಿತಂ - ಅಸ್ಖಲಿತವಾದ, ದುಶ್ಚರಂ - ಇತರರಿಂದಾಚರಿಸುವುದಕ್ಕಾಗದ, ಬ್ರಹ್ಮಚರ್ಯಂ - ಬ್ರಹ್ಮಚರ್ಯವ್ರತವನ್ನು, ಚಚಾರ - ನಡೆಯಿಸಿದನು, ॥೬॥ ಯಜ್ಞೇಶಃ, ಯಜ್ಞ-ಯಜ್ಞಗಳಿಗೆ, ಈಶಃ-ಅಧಿಪತಿಯಾದ ನಾರಾಯಣಮೂರ್ತಿಯು, ಅಸ್ಯ-ಈ ಪ್ರಪಂಚದ, ಭವಾಯ-ಉತ್ಪತ್ತಿಗಾಗಿ, ರಸಾತಲಗತಾಂ, ರಸಾತಲ-ಪಾತಾಳವನ್ನು, ಗತಾಂ-ಹೊಂದಿದ್ದ, ಮಹೀಂ-ಭೂಮಿಯನ್ನು, ಉದ್ಧರಿಷ್ಯನ್ - ಉದ್ಧರಿಸುವವನಾಗಿ, ದ್ವಿತೀಯಂ - ಎರಡನೆಯದಾದ, ಸೌಕರಂ-ಆದಿವರಾಹಮೂರ್ತಿಯ, ವಪುಃ-ಅವತಾರವನ್ನು, ಉಪಾಧತ್ತ-ಧರಿಸಿದನು ॥೭॥ ಸಃ-ಆ ಭಗವಂತನು, ತೃತೀಯಂ-ಮೂರನೆಯದಾದ, ಋಷಿಸರ್ಗಂ-ಋಷ್ಯವತಾರದಲ್ಲಿ, ದೇವರ್ಷಿತ್ವಂ-ದೇವರ್ಷಿಯಾದ ನಾರದನರೂಪವನ್ನು ಉಪೇತ್ಯ-ಹೊಂದಿ, ಯತಃ-ಯಾವುದರಿಂದ, ಕರ್ಮಣಾಂ-ಕರ್ಮಗಳ, ನೈಷ್ಕರ್ಮ್ಯಂ-ಬಂಧರಾಹಿತ್ಯವು, ಭವತಿ-ಆಗುವುದೋ, ತತ್-ಅಂತಹ, ಸಾತ್ವತಂ-ವಿಷ್ಣುಸಂಬಂಧವಾದ, ತಂತ್ರಂ-ಪಾಂಚರಾತ್ರಾಗಮವನ್ನು, ಆಚಷ್ಟ-ಹೇಳಿದನು ॥೮॥ ತುರ್ಯೇ - ನಾಲ್ಕನೆಯದಾದ, ಧರ್ಮಕಳಾಸರ್ಗೇ, ಧರ್ಮ-ಧರ್ಮನ, ಕಳಾ-ಹೆಂಡತಿಗೆ, ಸರ್ಗೇ-ಪುತ್ರರೂಪವಾದ ಅವತಾರದಲ್ಲಿ, ನರನಾರಾಯಣೌ-ನರನಾರಾಯಣರೆಂಬ, ಋಷೀ-ಋಷಿಗಳು, ಭೂತ್ವಾ-ಆಗಿ, ಶಮದಮೋಪೇತಂ, ಶಮ-ಶಾಂತಿಯಿಂದಲೂ, ದಮ-ಇಂದ್ರಿಯನಿಗ್ರಹದಿಂದಲೂ, ಉಪೇತಂ-ಕೂಡಿರುವ, ದುಶ್ಚರಂ-ಆಚರಿಸಲಸಾಧ್ಯವಾದ, ತಪಃ-ತಪಸ್ಸನ್ನು, ಅಕರೋತ್-

---

ಇದೇ ವಿರಾಡವತಾರವು ॥೫॥ ಆ ಭಗವಂತನೇ ಮೊದಲನೆಯ ಅವತಾರದಲ್ಲಿ ಸನಕ, ಸನಂದನ, ಸನತ್ಸುಜಾತ, ಸನತ್ಕುಮಾರರೆಂಬ, ಬ್ರಾಹ್ಮಣರ ರೂಪದಿಂದ ಅವತರಿಸಿ, ಅಖಂಡಿತ ಬ್ರಹ್ಮಚರ್ಯವನ್ನು ನಡೆಯಿಸಿದನು. ಇದಕ್ಕೆ ಕೌಮಾರಾವತಾರವೆಂದು ಹೆಸರು. ॥೬॥ ಎರಡನೆಯವತಾರದಲ್ಲಿ ಈ ಪ್ರಪಂಚವನ್ನು ಕಾಪಾಡಲೆಳಸಿ ಪಾತಾಳಕ್ಕಿಳಿದಿದ್ದ ಭೂಮಿಯನ್ನುದ್ಧರಿಸುವುದಕ್ಕಾಗಿ ಆ ಭಗವಂತನು ಆದಿ ವರಾಹರೂಪವನ್ನೆತ್ತಿದನು ॥೭॥ ಮೂರನೆಯವತಾರದಲ್ಲಿ ದೇವರ್ಷಿಯಾದ ನಾರದನಾಗಿ ಕರ್ಮಬಂಧವನ್ನು ಹೋಗಲಾಡಿಸುವ,ವೈಷ್ಣವ ತಂತ್ರವೆಂಬ ಪಾಂಚರಾತ್ರಾಗಮವನ್ನು ವಿರಚಿಸಿದನು॥೮॥ ನಾಲ್ಕನೆಯವತಾರದಲ್ಲಿ ಧರ್ಮನಪತ್ನಿಯಾದ ಮೂರ್ತಿದೇವಿಯಲ್ಲಿ, ನರನಾರಾಯಣರೆಂಬ ಋಷಿಗಳಾಗಿ ಅವತರಿಸಿ, ಇತರರಾಚರಿಸಲಾರದ, ಶಮದಮಾದಿಗಳನ್ನುಂಟುಮಾಡುವ ತಪಸ್ಸನ್ನು ಮಾಡಿದನು॥೯॥ ಸಿದ್ಧಪುರುಷರಲ್ಲಿ ಅಗ್ರೇಸರನಾದ ಕಪಿಲಮುನಿಯ ರೂಪದಿಂದ ಐದನೆಯವತಾರವನ್ನು

ನಾರಾಯಣಾವೃಷೀ। ಭೂತ್ವಾಚಶಮದಮೋಪೇತ ಮಕರೋದ್ದುಶ್ಚರಂ ತಪಃ
॥೯॥ ಪಂಚಮಃ ಕಪಿಲೋ ನಾಮ ಸಿದ್ಧೇಶಃ ಕಾಲವಿಪ್ಲುತಂ। ಪ್ರೋವಾಚಾಸು
ರಯೇ ಸಾಂಖ್ಯಂ ತತ್ವಗ್ರಾಮ ವಿನಿರ್ಣಯಂ ॥೧೦॥ ಷಷ್ಠೇ ಅತ್ರೇ ರಪತ್ಯತ್ವಂ
ವೃತಃ ಪ್ರಾಪ್ತೋನಸೂಯಯಾ। ಆನ್ವೀಕ್ಷಕೀ ಮಲರ್ಕಾಯ ಪ್ರಹ್ಲಾದಾದಿ
ಭ್ಯಊಚಿವಾನ್ ॥೧೧॥ ತತ ಸ್ಸಪ್ತಮ ಆಕೂತ್ಯಾಂ ರುಚೇ ರ್ಯಜ್ಞೋಭ್ಯ
ಜಾಯತ। ಸಯಾಮಾದ್ಯೈ ಸ್ಸುರಗಣೈ ರಪಾ ತ್ಸ್ವಾಯಂಭುವಾಂತರಂ॥೧೨॥
ಅಷ್ಟಮೇ ಮೇರುದೇವ್ಯಾಂತು ನಾಭೇ ರ್ಜಾತ ಉರುಕ್ರಮಃ। ದರ್ಶಯನ್ವ

ಮಾಡಿದನು ॥೯॥ ಪಂಚಮಃ-ಐದನೆಯವತಾರವನ್ನು ಮಾಡಿದ, ಸಿದ್ಧೇಶಃ-ತಪಸ್ಸಿದ್ಧರಿಗೆ ಅಧಿಪತಿಯಾದ, ಕಪಿಲೋನಾಮ-ಕಪಿಲನೆಂಬುವನು, ಕಾಲವಿಪ್ಲುತಂ, ಕಾಲ-ಕಾಲದಿಂದ, ವಿಪ್ಲುತಂ-ಶಿಥಿಲವಾಗಿದ್ದ, ತತ್ವಗ್ರಾಮವಿನಿರ್ಣಯಂ, ತತ್ವ-ಪೃಥಿವಿಮೊದಲಾದ ಇಪ್ಪತ್ತುನಾಲ್ಕು ತತ್ವಗಳ, ಗ್ರಾಮ-ಸಮೂಹವನ್ನು, ವಿನಿರ್ಣಯಂ-ನಿಶ್ಚಯಗೊಳಿಸುವ, ಸಾಂಖ್ಯಂ-ಸಾಂಖ್ಯ ಶಾಸ್ತ್ರವನ್ನು, ಅಸುರಯೇ-“ಆಸುರಿ”ಯೆಂಬ ಬ್ರಾಹ್ಮಣನಿಗೆ, ಪ್ರೋವಾಚ-ಹೇಳಿದನು॥೧೦॥ ಷಷ್ಠೇ, ಆರನೆಯವತಾರದಲ್ಲಿ, ಅತ್ರೇಃ-ಅತ್ರಿಋಷಿಯ, ಅಪತ್ಯತ್ವಂ-ಮಗನಾಗುವಿಕೆಯನ್ನು. ವೃತಃ-ವರಿಸಲ್ಪಟ್ಟವನಾಗಿ, ಅನಸೂಯಯಾ-ಅನಸೂಯಾದೇವಿಯಿಂದ, ಪ್ರಾಪ್ತಃ-ಮಗನಾಗಿ ಹೊಂದಲ್ಪಟ್ಟು, ಅಲರ್ಕಾಯ-ಅಲರ್ಕನೆಂಬರಾಜನಿಗೂ, ಪ್ರಹ್ಲಾದಾದಿಭ್ಯಃ-ಪ್ರಹ್ಲಾದನೇ ಮೊದಲಾದವರಿಗೂ, ಆನ್ವೀಕ್ಷಕೀಂ-ಆತ್ಮವಿದ್ಯೆಯನ್ನು, ಅಥವಾ ಜೀವೇಶ್ವರರ ವಿಚಾರವನ್ನು ಮಾಡುವ ತರ್ಕವಿದ್ಯೆಯನ್ನು, ಊಚಿವಾನ್ ಉಪದೇಶಮಾಡಿದನು ॥೧೧॥ ತತಃ-ಅನಂತರದಲ್ಲಿ, ರುಚೇಃ-ರುಚಿಯಿಂದ, ಆಕೂತ್ಯಾಂ-ಆಕೂತಿದೇವಿಯಲ್ಲಿ, ಯಜ್ಞಃ-ಯಜ್ಞನೆಂಬದಾಗಿ, ಸಪ್ತಮಃ-ಏಳನೆಯವತಾರವುಳ್ಳವನಾಗಿ, ಅಜಾಯತ-ಹುಟ್ಟಿದನು, ಸಃ-ಆ ಯಜ್ಞನು, ಯಾಮಾದ್ಯೈಃ-ಯಾಮ-ಯಾಮರೆಂಬ ಹೆಸರುಳ್ಳ ತನ್ನ ಮಕ್ಕಳೇ, ಆದ್ಯೈಃ-ಮೊದಲಾದ, ಸುರಗಣೈಃ, ಸುರ-ದೇವತೆಗಳ, ಗಣೈಃ-ಸಮೂಹಗಳಿಂದ, ಸ್ವಾಯಂಭುವಾಂತರಂ-ಸ್ವಾಯಂಭುವವೆಂಬ ಮನ್ವಂತರವನ್ನು, ಅಪಾತ್-ಪರಿಪಾಲಿಸಿದನು ॥೧೨॥ ಅಷ್ಟಮೇ-ಎಂಟನೆಯವತಾರದಲ್ಲಿ, ಉರುಕ್ರಮಃ, ಉರು-ಅಸದೃಶವಾದ, ಕ್ರಮಃ-ಪರಾಕ್ರಮವುಳ್ಳ, ವಿರಾಟ್ಪುರುಷನು,

ಮಾಡಿ, ಕಾಲಕ್ರಮದಿಂದ ಶಿಥಿಲವಾಗಿದ್ದ ತತ್ವಗಳನ್ನು, ನಿರ್ಣಯಮಾಡುವ ಸಾಂಖ್ಯಶಾಸ್ತ್ರವನ್ನು ಆಸುರಿಯೆಂಬ ಬ್ರಾಹ್ಮಣನಿಗುಪದೇಶಿಸಿದನು॥೧೦॥ ಆರನೆಯವತಾರದಲ್ಲಿ ಅತ್ರಿಮಹರ್ಷಿಯ ಪ್ರಾರ್ಥನಾನುಸಾರವಾಗಿ ಆತನ ಪತ್ನಿಯಾದ ಅನಸೂಯಾದೇವಿಯ ಗರ್ಭದಲ್ಲಿ ಜನಿಸಿ, ಅಲರ್ಕನೆಂಬ ರಾಜನಿಗೂ, ಪ್ರಹ್ಲಾದನೇ ಮೊದಲಾದ ಭಕ್ತರಿಗೂ ತತ್ವ ವಿಚಾರರೂಪವಾದ ಆತ್ಮವಿದ್ಯೆಯನ್ನುಪದೇಶಿಸಿದನು. ಇದಕ್ಕೆ ದತ್ತಾತ್ರೇಯಾವತಾರವೆಂದು ಹೆಸರು ॥೧೧॥ ಬಳಿಕ ಏಳನೆಯವತಾರದಲ್ಲಿ ಆ ಭಗವಂತನು ರುಚಿಯೆಂಬವನಿಂದ ಆಕೂತಿದೇವಿಯಲ್ಲಿ ಯಜ್ಞನೆಂಬ ನಾಮದಿಂದವತರಿಸಿ, ಯಾಮರೆಂಬ ಹೆಸರುಳ್ಳ ತನ್ನಮಕ್ಕಳೇ ಮೊದಲಾದ ದೇವಗಣಗಳಿಂದೊಡಗೂಡಿ, ಸ್ವಾಯಂಭುವವೆಂಬ ಮನ್ವಂತರದಲ್ಲಿ ಇಂದ್ರಪಟ್ಟವನ್ನು ವಹಿಸಿ, ಮೂರುಲೋಕಗಳನ್ನೂ ಪರಿಪಾಲಿಸಿದನು. ಇದಕ್ಕೆ ಯಜ್ಞಾವತಾರವೆಂದು ಹೆಸರು॥೧೨॥ ಎಂಟನೆಯವತಾರದಲ್ಲಿ ಆಗ್ನೀಧ್ರನಿಗೆ ಅಥವಾ ಇಂದ್ರನಿಗೆ, ಮಗನಾದ ನಾಭಿಯಿಂದ ಮೇರುದೇವಿಯ ಗರ್ಭದಲ್ಲವತರಿಸಿ, ಮನೋನಿಗ್ರಹಾದಿಗಳಲ್ಲಿ ಧೀರರಾದ ಜ್ಞಾನಿಗ

ರ್ತ್ಮ ಧೀರಾಣಾಂ ಸರ್ವಾಶ್ರಮ ನಮಸ್ಕೃತಂ ॥ ೧೩ ॥ ಋಷಿಭಿರ್ಯಾಚಿ
ತೋಭೇಜೇ ನವಮಂ ಪಾರ್ಥಿವಂ ವಪುಃ । * ದುಗ್ಧೇಮಾ ಮೋಷಧೀ
ರ್ವಿಪ್ರಾ ಸ್ತೇನಾಯಂಸಉಶತ್ತಮಃ ॥೧೪॥ ರೂಪಂ ಸಜಗೃಹೇ ಮಾತ್ಸ್ಯಂ
ಚಾಕ್ಷುಷಾಂತರಸಂಪ್ಲವೇ । ನಾವ್ಯಾರೋಪ್ಯ ಮಹೀ ಮಯ್ಯಾ ಮಪಾದ್ವೈ
ವಸ್ವತಂ ಮನುಂ ॥೧೫॥ ಸುರಾಸುರಾಣಾಮುದಧಿಂ ಮಥ್ನತಾಂ ಮಂದ
ರಾಚಲಂ । ದಧ್ರೇ ಕಮಠರೂಪೇಣ ಪೃಷ್ಠ ಏಕಾದಶೇವಿಭುಃ ॥ ೧೬ ॥

ಧೀರಾಣಾಂ-ಧೀರರಾದವರಿಗೆ, ಸರ್ವಾಶ್ರಮನಮಸ್ಕೃತಂ, ಸರ್ವ-ಎಲ್ಲಾ, ಆಶ್ರಮ-ಬ್ರಹ್ಮಚರ್ಯವೊದಲಾದ ಆಶ್ರಮದವರಿಂದ, ನಮಸ್ಕೃತಂ-ವಂದಿಸಲ್ಪಡುವ, ವರ್ತ್ಮ-ಪರಮಹಂಸಮಾರ್ಗವನ್ನು, ದರ್ಶಯನ್-ತೋರಿಸುವವನಾಗಿ, ನಾಭೇಃ-(ಅಗ್ನೀಧ್ರನಿಗೆ ಅಥವಾ ಇಂದ್ರನಿಗೆ ಮಗನಾದ) ನಾಭಿಯಿಂದ, ಮೇರುದೇವ್ಯಾಂ - ಮೇರುದೇವಿಯಲ್ಲಿ, ಜಾತಃ- ಜನಿಸಿದನು ॥ ೧೩ ॥ ವಿಪ್ರಾಃ-ಎಲೈ ಬ್ರಾಹ್ಮಣರಿರಾ ! ಋಷಿಭಿಃ ಋಷಿಗಳಿಂದ, ಯಾಚಿತಃ - ಪ್ರಾರ್ಥಿಸಲ್ಪಟ್ಟವನಾಗಿ, ನವಮಂ-ಒಂಬತ್ತನೆಯದಾದ, ಪಾರ್ಥಿವಂ-ಪೃಥುರಾಜನ, ವಪುಃ-ಅವತಾರವನ್ನು, ಭೇಜೆ-ಹೊಂದಿದನು. ಸಃ-ಆ ಪೃಥುವು, ಇಮಾಂ-ಈ ಭೂಮಿಯನ್ನು, ಓಷಧೀಃ-ಬಳ್ಳಿಮೊದಲಾದವುಗಳನ್ನು, (ಅ, ದುಗ್ಧ-ಕರೆದನು. ತೇನ-ಅದರಿಂದ, ಅಯಂ-ಈ ಅವತಾರವು, ಉಶತ್ತಮಃ-ಬಹಳರಮಣೀಯವಾದುದು ॥ ೧೪॥ ಸಃ-ಆ ವಿಷ್ಣುವು. ಚಾಕ್ಷುಷಾಂತರ ಸಂಪ್ಲವೇ, ಚಾಕ್ಷುಷಾಂತರ-ಚಾಕ್ಷುಷಮನ್ವಂತರದಲ್ಲಿ ಉಂಟಾದ, ಸಂಪ್ಲವೇ-ಪ್ರಳಯದಲ್ಲಿ. ಮಾತ್ಸ್ಯಂ - ಮತ್ಸ್ಯಸಂಬಂಧವಾದ, ರೂಪಂ-ಆಕೃತಿಯನ್ನು, ಜಗೃಹೇ-ಗ್ರಹಿಸಿದನು. ಮಹೀಮಯ್ಯಾಂ-ಭೂರೂಪವಾದ, ನಾವಿ-ಹಡಗಿನಲ್ಲಿ, ಆರೋಪ್ಯ-ಹತ್ತಿಸಿ, ವೈವಸ್ವತಂ-ಸೂರ್ಯಪುತ್ರನಾದ, ಮನುಂ-ಮನುವನ್ನು, ಅಪಾತ್-ಕಾಪಾಡಿದನು ॥ ೧೫॥ ಏಕಾದಶೇ-ಹನ್ನೊಂದನೆಯ ಅವತಾರದಲ್ಲಿ, ವಿಭುಃ-ಸರ್ವಾಂತರ್ಯಾಮಿಯಾದ ಹರಿಯು, ಸುರಾಸುರಾಣಾಂ-ದೇವದಾನವರು, ಉದಧಿಂ-ಸಮುದ್ರವನ್ನು, ಮಥ್ನತಾಂ-ಕಡೆಯುತ್ತಿರುವಾಗ, ಕಮಠರೂಪೇಣ, ಕಮಠ-ಆಮೆಯ, ರೂಪೇಣ-ರೂಪದಿಂದ, ಪೃಷ್ಠೇ-ಬೆನ್ನಿನಲ್ಲಿ, ಮಂದರಾಚಲಂ-ಮಂದರಪರ್ವತವನ್ನು, ದಧ್ರೇ-ಧರಿಸಿದನು ॥ ೧೬ ॥

ಳಗೆ,ಅತ್ಯಾಶ್ರಮವೆನಿಸುವ ಪರಮಹಂಸಮಾರ್ಗವನ್ನುಪದೇಶಿಸಿದನು ಇದೇ ಋಷಭಾವತಾರವು ॥೧೩॥ ಒಂಬತ್ತನೆಯವತಾರದಲ್ಲಿ ಋಷಿಗಳ ಪ್ರಾರ್ಥನೆಯಮೇರೆ ಪೃಥುವೆಂಬ ರಾಜನರೂಪದಿಂದವತರಿಸಿ, ಗೋರೂಪವನ್ನು ಪಡೆದ ಈ ಭೂಮಿಯಿಂದ ಓಷಧಿಗಳು ಮೊದಲಾದ ಸಕಲ ವಸ್ತುಗಳನ್ನು ಕರೆದನು. ಆದುದರಿಂದೀಅವತಾರವು ಶ್ರೇಷ್ಠವೆನಿಸಿತು. ಇದು ಪೃಥುವಿನವತಾರವು ॥೧೪॥ ಹತ್ತನೇಯವತಾರದಲ್ಲಿ ಆ ನಾರಾಯಣಮೂರ್ತಿಯು ಚಾಕ್ಷುಷಮನ್ವಂತರದಲ್ಲಿ ಉಂಟಾದ ಜಲಪ್ರಳಯದಲ್ಲಿ, ಮತ್ಸ್ಯಾವತಾರವನ್ನು ಮಾಡಿ ಭೂರೂಪವಾದ ನಾವೆಯಲ್ಲಿ ವೈವಸ್ವತಮನುವನ್ನುಕುಳ್ಳಿರಿಸಿ ಕಾಪಾಡಿದನು ॥೧೫॥ ಸರ್ವಾಂತರ್ಯಾಮಿಯಾದ ಆ ಭಗವಂತನು ಹನ್ನೊಂದನೆಯವತಾರದಲ್ಲಿ, ಅಮೃತವನ್ನು ಸಂಪಾದಿಸುವುದಕ್ಕಾಗಿ ದೇವದಾನವರು ಕ್ಷೀರಸಮುದ್ರವನ್ನುಕಡೆಯುತ್ತಿರುವಾಗ, ಆಮೆಯರೂಪವನ್ನುವಹಿಸಿ,ತನ್ನ ಬೆನ್ನಿನಮೇಲೆ ಮಂದರಾಚಲವನ್ನುಹೊತ್ತು ಭಕ್ತರನ್ನುಪಾಲಿಸಿದನು॥೧೬

ಧಾನ್ವಂತರಂ*ದ್ವಾದಶಮಂ*ತ್ರಯೋದಶಮ ಮೇವಚಾ । ಅಪಾಯಯತ್‡ಸ್ಸು
ರಾನನ್ಯಾ ನ್ಮೋಹಿನ್ಯಾ ಮೋಹಯನ್ ಸ್ತ್ರಿಯಾ॥೧೭॥ ಚತುರ್ದಶಂ ನಾರಸಿಂ
ಹಂ ಬಿಭ್ರದ್ದೈತ್ಯೇಂದ್ರ ಮೂರ್ಜಿತಂ । ದದಾರ ಕರಜೈ †ರೂರಾ ವೇರ
ಕಾನ್ ಕಟಕೃದ್ಯಥಾ ॥೧೮॥ *ಪಂಚದಶಂ ವಾಮನಕಂ ಕೃತ್ವಾಗಾದಧ್ವರಂ
ಬಲೇಃ । ಪದತ್ರಯಂ ಯಾಚಮಾನಃ ಪ್ರತ್ಯಾದಿತ್ಸು ಸ್ತ್ರಿವಿಷ್ಟಪಂ ॥೧೯॥ ಅವ
ತಾರೇ *ಷೋಡಶಮೇ §ಪಶ್ಯನ್ ‖ಧರ್ಮದ್ರುಹೋ ನೃಪಾನ್।ತ್ರಿಸ್ಸಪ್ತಕೃತ್ವಃ

ದ್ವಾದಶಮಂ - ಹನ್ನೆರಡನೆಯದಾದ, ಧಾನ್ವಂತರಂ - ಧನ್ವಂತರಿಯವತಾರದಲ್ಲಿಯೂ, ತ್ರಯೋದಶಮಂ-ಹದಿಮೂರನೆಯ ಮೋಹಿನಿಯವತಾರದಲ್ಲಿಯೂ, ಅನ್ಯಾನ್-ಇತರರಾದ ರಾಕ್ಷಸರನ್ನು, ಮೋಹಿನ್ಯಾ-ಮೋಹಿನಿಯೆಂಬ, ಸ್ತ್ರಿಯಾ - ಸ್ತ್ರೀರೂಪದಿಂದ, ಮೋಹಯನ್-ಮರಳುಮಾಡಿದವನಾಗಿ, ಸುರಾನ್-ದೇವತೆಗಳನ್ನು, ಅಪಾಯಯತ್-ಅಮೃತವನ್ನು ಕುಡಿಸಿದನು. ॥೧೭॥ ಚತುರ್ದಶಂ-ಹದಿನಾಲ್ಕನೆಯದಾದ, ನಾರಸಿಂಹಂ - ನೃಸಿಂಹಾವತಾರವನ್ನು, ಬಿಭ್ರತ್ - ಪಡೆದವನಾಗಿ, ಕಟಕೃತ್. ಕಟ-ಚಾಪೆಗಳನ್ನು, ಕೃತ್ - ಹೆಣೆಯುವ ಮೇದರವನು, ಏರಕಾನ್ಯಥಾ - ಜಂಡುಹುಲ್ಲಿನಂತೆ, ಊರ್ಜಿತಂ-ಬಲಶಾಲಿಯಾದ, ದೈತ್ಯೇಂದ್ರಂ, ದೈತ್ಯ-ರಾಕ್ಷಸರಿಗೆ, ಇಂದ್ರಂ-ಒಡೆಯನಾದ ಹಿರಣ್ಯಕಶಿಪುವನ್ನು, ಊರೌ-ತನ್ನ ತೊಡೆಯಮೇಲೆ, ಕರಜೈಃ-ಉಗುರುಗಳಿಂದ, ದದಾರ-ಸೀಳಿದನು, ॥೧೮॥ ತ್ರಿವಿಷ್ಟಪಂ-ದೇವರಾಜ್ಯವನ್ನು, ಪ್ರತ್ಯಾದಿತ್ಸುಃ-ಕಿತ್ತುಕೊಳ್ಳಲಪೇಕ್ಷಿಸಿ, ಚತುರ್ದಶಂ-ಹದಿನಾಲ್ಕನೆಯದಾದ, ವಾಮನಕಂ-ವಾಮನಾವತಾರವನ್ನು, ಕೃತ್ವಾ ಮಾಡಿ, ಪದತ್ರಯಂ ಮೂರಡಿಗಳ ನೆಲವನ್ನು, ಯಾಚಮಾನಃ-ಬೇಡುವವನಾಗಿ, ಬಲೇಃ-ಬಲಿಚಕ್ರವರ್ತಿಯ, ಅಧ್ವರಂ-ಯಾಗಶಾಲೆಗೆ, ಅಗಾತ್-ಹೋದನು, ॥೧೯॥ ಷೋಡಶಮೇ-ಹದಿನಾರನೆಯದಾದ, ಅವತಾರೇ-ಪರಶುರಾಮಾವತಾರದಲ್ಲಿ, ಧರ್ಮದ್ರುಹಃ - ಧರ್ಮನಾಶಕರಾದ, ನೃಪಾನ್-ರಾಜರನ್ನು, ಪಶ್ಯನ್-ನೋಡುವವನಾಗಿ, ಕುಪಿತಃ - ಕೋಪಗೊಂಡು, ತ್ರಿಸ್ಸಪ್ತಕೃತ್ವಃ-ಇಪ್ಪತ್ತೊಂದಾವೃತ್ತಿ. ಮಹೀಂ-ಭೂಮಿಯನ್ನು. ನಿಃಕ್ಷತ್ರಾಂ-ಕ್ಷತ್ರಿಯರಿಲ್ಲದುದನ್ನಾಗಿ, ಅಕರೋತ್-ಮಾಡಿ

ಹನ್ನೆರಡನೆಯವತಾರದಲ್ಲಿ ಧನ್ವಂತರಿಯಾಗಿ ಜನಿಸಿ ಕ್ಷೀರಸಮುದ್ರದಿಂದ ಅಮೃತಕಲಶವನ್ನು ತಂದನು. ಹದಿಮೂರನೆಯವತಾರದಲ್ಲಿ ಮೋಹಿನಿಯರೂಪದಿಂದ ರಾಕ್ಷಸರನ್ನು ಮರುಳುಮಾಡಿ ದೇವತೆಗಳಿಗೆಮಾತ್ರ ಅಮೃತವನ್ನಿತ್ತನು ॥ ೧೭ ॥ ಹದಿನಾಲ್ಕನೆಯವತಾರದಲ್ಲಿ ನೃಸಿಂಹರೂಪವನ್ನುಪಡೆದು, ಮೇದರವನು ಚಾಪೆಯನ್ನು ಹೆಣೆಯುವುದಕ್ಕಾಗಿ ಜಂಡುಹುಲ್ಲನ್ನು ಸೀಳುವಂತೆ, ಮದೋನ್ಮತ್ತನಾದ ಹಿರಣ್ಯಕಶಿಪುವೆಂಬ ದೈತ್ಯಪತಿಯನ್ನು ತನ್ನ ತೊಡೆಯಮೇಲೆಹಾಕಿಕೊಂಡು ಉಗುರುಗಳಿಂದೆದೆಯನ್ನು ಬಗೆದು ಸಂಹರಿಸಿದನು. ಹದಿನೈದನೆಯವತಾರದಲ್ಲಿ ವಾಮನನಾಗಿ(ಕುಳ್ಳನು)ಬಲಿಗಿದ್ದ ಸ್ವರ್ಗಾಧಿಪತ್ಯವನ್ನು ಕಿತ್ತು ಇಂದ್ರನಿಗೆ ಕೊಡಲೆಳಸಿ, ಮೂರಡಿಗಳ ನೆಲವನ್ನು ಬೇಡುವುದಕ್ಕಾಗಿ ಬಲಿಚಕ್ರವರ್ತಿಯ ಯಜ್ಞಶಾಲೆಗೆ ಹೋದನು ॥೧೯॥ ಹದಿನಾರನೆಯವತಾರದಲ್ಲಿ ಪರಶುರಾಮನೆನಿಸಿ, ಬ್ರಾಹ್ಮಣರಿಗೆ ದ್ರೋಹವನ್ನೆಣಿಸಿದ ಕ್ಷತ್ರಿಯರನ್ನು ಕಂಡು ಬಹಳವಾಗಿ ಕೋಪಗೊಂಡು ಇಪ್ಪ

ಪಾ-ದ್ವಿಜಮುಖ್ಯಃ. ‡ ಸುಧಾ-ಅಮೃತ. †ವಕ್ಷಸಿ-ಎದೆಯಲ್ಲಿ, § ಪಾ= ಯುಙ್ಕ್ಷನ್-ಸಂಹರಿಸಿ.
‖ಪಾ = ಬ್ರಹ್ಮದ್ರುಹಃ-ಬ್ರಾಹ್ಮಣದ್ರೋಹಿಗಳು.

ಕುಪಿತೋ ನಿಃಕ್ಷತ್ರಾಂ ಮಕರೋ ನ್ಮಹೀಂ ॥೨೦॥ ತತ ಸ್ಸಪ್ತದಶೇ ಜಾತ ಸ್ಸತ್ಯವತ್ಯಾಂ ಪರಾಶರಾತ್ । ಚಕ್ರೇ ವೇದತರೋ ಶ್ಶಾಖಾ ದೃಷ್ಟ್ವಾ ಪುಂಸೋಲ್ಪಮೇಧಸಃ ॥೨೧॥ ನರದೇವತ್ವ ಮಾಪನ್ನ ಸ್ಸುರಕಾರ್ಯಚಿಕೀರ್ಷ ಯಾ । ಸಮುದ್ರನಿಗ್ರಹಾದೀನಿ ಚಕ್ರೇ ವೀರ್ಯಾಣ್ಯತಃಪರಂ ॥ ೨೨ ॥ ಏಕೋನವಿಂಶೇ * ವಿಂಶತಿಮೇ ವೃಷ್ಣಿಷು ಪ್ರಾಪ್ಯ ಜನ್ಮನೀ। ರಾಮಕೃಷ್ಣಾ ವಿತಿ ಭುವೋ ಭಗವಾ ನಹರದ್ಭರಂ ॥೨೩॥ ತತಃ ಕಲೌ ಸಂಪ್ರವೃತ್ತೇ ಸ ಮ್ಮೋಹಾಯ ಸುರದ್ವಿಷಾಂ । ಬುದ್ಧೋನಾಮ್ನಾ ಜಿನಸುತಃ ಕೀಕಟೇಷು

ದನು. ॥೨೦॥ ತತಃ-ಆಬಳಿಕ, ಸಪ್ತದಶೇ-ಹದಿನೇಳನೆಯವತಾರದಲ್ಲಿ, ಪರಾಶರಾತ್ - ಪರಾಶರಮುನಿಯಿಂದ, ಸತ್ಯವತ್ಯಾಂ - ಸತ್ಯವತೀದೇವಿಯಲ್ಲಿ, ಜಾತಃ-ಹುಟ್ಟಿದವನಾಗಿ, ಅಲ್ಪಮೇಧಸಃ - ಮಂದಬುದ್ಧಿಯುಳ್ಳ, ಪುಂಸಃ-ಪುರುಷರನ್ನು, ದೃಷ್ಟ್ವಾ-ನೋಡಿ, ವೇದತರೋಃ-ವೇದವೆಂಬ ವೃಕ್ಷಕ್ಕೆ, ಶಾಖಾಃ-ಕೊಂಬೆಗಳನ್ನು, ಚಕ್ರೇ-ಮಾಡಿದನು. ॥೨೧॥ ಅತಃಪರಂ-ಆಮೇಲೆ ಹದಿನೆಂಟನೆಯವತಾರದಲ್ಲಿ, ಸುರಕಾರ್ಯಚಿಕೀರ್ಷಯಾ, ಸುರ-ದೇವತೆಗಳ, ಕಾರ್ಯ - ಕಾರ್ಯವನ್ನು, ಚಿಕೀರ್ಷಯಾ - ಮಾಡಲಪೇಕ್ಷೆಯಿಂದ ನರದೇವತ್ವಂ - ರಾಜಪುತ್ರನಾದ ಶ್ರೀರಾಮನವತಾರವನ್ನು, ಆಪನ್ನಃ-ಪಡೆದವನಾಗಿ, ಸಮುದ್ರನಿಗ್ರಹಾದೀನಿ, ಸಮುದ್ರ-ಸಮುದ್ರರಾಜನ, ನಿಗ್ರಹ - ಜಯವೇ, ಆದೀನಿ-ಮೊದಲಾದ. ವೀರ್ಯಾಣಿ-ಪರಾಕ್ರಮಗಳನ್ನು, ಚಕ್ರೇ-ಮಾಡಿದನು, ॥೨೨॥ ಭಗವಾನ್-ಭಗವಂತನು, ಏಕೋನವಿಂಶೆ-ಹತ್ತೊಂಬತ್ತನೆಯವತಾರದಲ್ಲಿ, ವಿಂಶತಿತಮೇ - ಇಪ್ಪತ್ತನೆಯವತಾರದಲ್ಲಿಯೂ, ರಾಮಕೃಷ್ಣೌ - ಬಲರಾಮನು, ಕೃಷ್ಣನು, ಇತಿ-ಹೀಗೆಂದು, ವೃಷ್ಣಿಷು-ಯಾದವರಲ್ಲಿ, ಜನ್ಮನೀ - ಅವತಾರಗಳನ್ನು, ಪ್ರಾಪ್ಯ-ಹೊಂದಿ, ಭುವಃ - ಭೂಮಿಯ, ಭರಂ - ಭಾರವನ್ನು, ಅಹರತ್ - ಹೋಗಲಾಡಿಸಿದನು, ॥ ೨೩ ॥ ತತಃ-ಇಪ್ಪತ್ತೊಂದನೆಯವತಾರದಲ್ಲಿ, ಕಲೌ-ಕಲಿಯುಗವು, ಸಂಪ್ರವೃತ್ತೇ - ಪ್ರಾಪ್ತವಾಗಲು. ಸುರದ್ವಿಷಾಂ-ಸುರ-ದೇವತೆಗಳ, ದ್ವಿಷಾಂ - ಶತ್ರುಗಳಾದ ರಾಕ್ಷಸರನ್ನು, ಸಮ್ಮೋಹಾಯ, ಮೋಹಗೊಳಿಸುವುದಕ್ಕಾಗಿ, ಅಜಿನಸುತಃ,ಅಜಿನ-ಅಜಿನನಿಗೆ, ಸುತಃ-ಪುತ್ರನಾಗಿ, ಅಥವಾ ಜಿನಸುತಃ, ಜಿನನಿಗೆ ಪುತ್ರನಾಗಿ, ನಾಮ್ನಾ-ಹೆಸರಿನಿಂದ ಬುದ್ಧಃ-ಬುದ್ಧನೆನಿಸಿ, ಕೀಕಟೇಷು-ಕೀಕಟವೆಂಬ ಮಧ್ಯಗಯಾಪ್ರಾಂತದಲ್ಲಿ, ಭವಿಷ್ಯತಿ-ಅವತ

ತ್ತೊಂದುಸಲ ಹುಡಿಕಿ ಹುಡಿಕಿ ಭೂಮಿಯಲ್ಲಿಯೇ ಯಿಲ್ಲದಂತೆ ಕ್ಷತ್ರಿಯರನ್ನು ನಿರ್ಮೂಲ ಮಾಡಿದನು ॥೨೦॥ ಅನಂತರ ಹದಿನೇಳನೆಯವತಾರದಲ್ಲಿ ಪರಾಶರಮುನಿಯಿಂದ ಸತ್ಯವತೀ ಗರ್ಭದಲ್ಲಿ ವ್ಯಾಸರೂಪವಾಗವತರಿಸಿ, ಮಂದಬುದ್ಧಿಗಳಾದ ಪುರುಷರಿಗಾಗಿ ವೇದವೆಂಬ ವೃಕ್ಷಕ್ಕೆ ಶಾಖೋಪಶಾಖೆಗಳನ್ನು ವಿಂಗಡಿಸಿದನು ॥ ೨೧ ॥ ಹದಿನೆಂಟನೆಯವತಾರದಲ್ಲಿ ದೇವತೆಗಳಿಗೆ ಕ್ಷೇಮವನ್ನುಂಟುಮಾಡುವುದಕ್ಕಾಗಿ, ಶ್ರೀರಾಮನಾಗಿಜನಿಸಿ, ಸಮುದ್ರ ಜಯ, ಸೇತುಬಂಧನ, ರಾವಣಸಂಹಾರವೇಮೊದಲಾದ ಅದ್ಭುತಕಾರ್ಯಗಳನ್ನು ಮಾಡಿದನು ॥ ೨೨ ॥ ಹತ್ತೊಂಬತ್ತನೆಯವತಾರದಲ್ಲಿ ಬಲರಾಮನಾಗಿಯೂ, ಇಪ್ಪತ್ತನೆಯವತಾರದಲ್ಲಿ ಶ್ರೀ ಕೃಷ್ಣನಾಗಿಯೂ ಯಾದವರಲ್ಲಿ ಜನಿಸಿ, ಕಂಸಾದಿಗಳನ್ನು ಸಂಹರಿಸಿ ಭೂಭಾರವನ್ನಿಳುಹಿದನು ॥ ೨೩ ॥ ಆ ಬಳಿಕ ಕಲಿಕಾಲವು ಪ್ರಾಪ್ತವಾಗಲು ದೇವಶತ್ರುಗಳಾದ ರಾಕ್ಷಸರನ್ನು ಮರುಳುಮಾಡುವುದಕ್ಕಾಗಿ, ಜಿನಪುತ್ರನೆನಿಸಿ ಬುದ್ಧನಾಮದಿಂದ

ಭವಿಷ್ಯತಿ॥೨೪॥ಅಥಾಸೌಯುಗಸಂಧ್ಯಾಯಾಂ ದಸ್ಯುಪ್ರಾಯೇಷು ರಾಜಸು।
ಜನಿತಾ ವಿಷ್ಣುಯಶಸೋ ನಾಮ್ನಾ ಕಲ್ಕಿ ರ್ಜಗದ್ಗುರುಃ ॥೨೫॥ ಅವತಾರಾ
ಹ್ಯಸಂಖ್ಯೇಯಾ ಹರೇ ಸ್ಸತ್ವನಿಧೇ ರ್ದ್ವಿಜಾಃ। ಯಥಾ ವಿದಾಸಿನಃ ಕುಲ್ಯಾ
ಸ್ಸರಸಸ್ಸ್ಯು ಸ್ಸಹಸ್ರಶಃ ॥೨೬॥ ಋಷಯೋ ಮನವೋ ದೇವಾ ಮನುಪುತ್ರಾ
ಮಹೌಜಸಃ।ಕಳಾ ಸ್ಸರ್ವೇ ಹರೇರೇವ ಸಪ್ರಜಾಪತಯ ಸ್ಸ್ಮೃತಾಃ ॥
ಏತೇ*ಂಶಾಂಶಕಳಾಃ ಪುಂಸಃ ಕೃಷ್ಣ ಸ್ತು ಭಗವಾಂ ತ್ಸ್ವಯಂ । ಇಂದ್ರಾರಿ

ರಿಸುವನು. ॥೨೪॥ ಅಥ-ಅನಂತರದಲ್ಲಿ, ಅಸೌ-ಈ, ಜಗದ್ಗುರುಃ-ಭಗವಂತನು, ಯುಗಸಂಧ್ಯಾಯಾಂ-ಯುಗ-ಕಲಿಯುಗ ಕೃತಯುಗಗಳ, ಸಂಧ್ಯಾಯಾಂ - ಮಧ್ಯಕಾಲದಲ್ಲಿ, ರಾಜಸು - ರಾಜರು, ದಸ್ಯುಪ್ರಾಯೇಷು-ಚೋರವೃತ್ತಿಯನ್ನವಲಂಬಿಸಲು, ನಾಮ್ನಾ - ಹೆಸರಿನಿಂದ, ಕಲ್ಕಿಃ-ಕಲ್ಕಿಯೆನಿಸಿ, ವಿಷ್ಣುಯಶಸಃ-ವಿಷ್ಣುಯಶಸ್ಸೆಂಬ ಬ್ರಾಹ್ಮಣನಿಂದ, ಜನಿತಾ-ಹುಟ್ಟುವನು. ॥೨೫॥ ದ್ವಿಜಾಃ-ಅಯ್ಯಾ ಬ್ರಾಹ್ಮಣರಿರಾ ! ಅವಿದಾಸಿನಃ - ಅಕ್ಷಯವಾದ ಜಲವುಳ್ಳ, ಸರಸಃ - ಸರೋವರದಿಂದ, ಸಹಸ್ರಶಃ-ಸಾವಿರಾರು, ಕುಲ್ಯಾಃ - ಕಾಲುವೆಗಳು, ಯಥಾ-ಹೇಗೆ, ಸ್ಯುಃ - ಉಂಟಾಗುವುವೋ, ತಥಾ-ಹಾಗೆಯೇ, ಸತ್ವನಿಧೇಃ-ಸತ್ವನಿಧಿಯಾದ, ಹರೇಃ-ಹರಿಯಿಂದ, ಅಸಂಖ್ಯೇಯಾಃ ಲೆಕ್ಕವಿಲ್ಲದ, ಅವತಾರಾಃ - ಅವತಾರಗಳು, ಸ್ಯುಃ-ಆಗುವುವು. ॥೨೬॥ ಋಷಯಃ - ಋಷಿಗಳು, ಮುನಯಃ-ಮುನಿಗಳು, ದೇವಾಃ-ದೇವತೆಗಳು, ಮಹೌಜಸಃ, ಮಹಾ-ಅಧಿಕವಾದ, ಓಜಸಃ-ಪರಾಕ್ರಮವುಳ್ಳ, ಮನುಪುತ್ರಾಃ-ಮನುಪುತ್ರರು, ಸಪ್ರಜಾಪತಯಃ-ನವಬ್ರಹ್ಮರಿಂದೊಡಗೂಡಿದ, ಸರ್ವೇ - ಎಲ್ಲರೂ, ಹರೇಃ - ಶ್ರೀಹರಿಯ, ಕಳಾಏವ-ಅಂಶಭೂತರೆಂದೇ, ಸ್ಮೃತಾಃ-ಹೇಳಲ್ಪಟ್ಟಿರುವರು, ॥೨೭॥ ಏತೇ-ಈ ಅವತಾರಗಳು, ಪುಂಸಃ-ಪರಮಾತ್ಮನ, ಅಂಶಾಂಶಕಳಾಃ ಅಂಶ-ಅಂಶಭೂತನಾದ ವಿರಾಟ್ಪುರುಷನ, ಅಂಶ-ಅಂಶಗಳಾದ, ಕಳಾಃ-ಕಳೆಗಳು, ಕೃಷ್ಣಸ್ತು - ಕೃಷ್ಣನಾದರೆ, ಸ್ವಯಂ - ಸಾಕ್ಷಾತ್ತಾಗಿ, ಭಗವಾನ್ - ಭಗವಂತನೇ. ಇವರು, ಇಂದ್ರಾರಿವ್ಯಾಕುಲಂ, ಇಂದ್ರ-

ಕೀಕಟವೆಂಬ ಗಯಾಪ್ರಾಂತದ ಮಧ್ಯಭಾಗದಲ್ಲಿ ಜನಿಸುವನು॥ ೨೪ ॥ ಇಪ್ಪತ್ತೆರಡನೆಯವತಾರದಲ್ಲಿ ಜಗದೀಶ್ವರನಾದ ಭಗವಂತನು ಕಲಿಯುಗದ ಕಡೆಯಲ್ಲಿ ರಾಜರಾದವರೂ ಚೋರವೃತ್ತಿಯನ್ನ ಆಶ್ರಯಿಸುವುದನ್ನು ಕಂಡು, ವಿಷ್ಣುಯಶನೆಂಬ ಬ್ರಾಹ್ಮಣನಲ್ಲಿ ಕಲ್ಕಿಯೆಂಬ ಹೆಸರಿನಿಂದವತರಿಸಿ, ದುಷ್ಟನಿಗ್ರಹವನ್ನು ಮಾಡುವನು ॥೨೫॥ ಅಯ್ಯಾ ಶೌನಕಾದಿಗಳಿರಾ ! ಲೋಕದಲ್ಲಿ ಅಗಾಧವಾದ ಜಲವುಳ್ಳ ಮಹಾಸರಸ್ಸಿನಿಂದ ಸಾವಿರಾರು ಕಾಲುವೆಗಳು ಹೊರಟು ಪ್ರವಹಿಸುವಂತೆ, ಸತ್ವನಿಧಿಯಾದ ಶ್ರೀ ನಾರಾಯಣಮೂರ್ತಿಯಿಂದ ಅಸಂಖ್ಯಾತಗಳಾದ ಅವತಾರಗಳುಂಟಾಗಿರುವುವು. ಸನಕಾದಿ ಋಷಿಗಳು, ವೈವಸ್ವತನೇ ಮೊದಲಾದ ಮನುಗಳು, ಮಹಾಶೂರರಾದ ಮನುಪುತ್ರರು. ಮರೀಚಿಮೊದಲಾದ ನವಬ್ರಹ್ಮರು, ಇವರೆಲ್ಲರೂ ಆ ಭಗವಂತನ ಅಂಶಭೂತರೇ ॥ ೨೭ ॥ ಇಲ್ಲಿಯವರೆಗೆ ಹೇಳಲ್ಪಟ್ಟ ಅವತಾರಗಳಲ್ಲಿ ಕೆಲವು ಕಳಾರೂಪಗಳು, ಕೆಲವು ಅಂಶರೂಪಗಳು ಆಗಿರುವುವು. ಅಂದರೆ ಧರ್ಮಗಳನ್ನುದ್ಧರಿಸುವುದಕ್ಕೆ ತಕ್ಕಮಟ್ಟಿಗೆ ಸನಕಾದಿಗಳಲ್ಲಿ ಜ್ಞಾನವೂ, ಪೃಥುಮೊದಲಾದವರಲ್ಲಿ ಶಕ್ತಿಯೂ ಉಂಟಾಯಿತು. ಶ್ರೀ ಕೃಷ್ಣನಾದರೋ ಸಾಕ್ಷಾ

* ಪಾ. ಪಾ- ಸ್ವಾಂಶ - ತನ್ನ ಅಂಶದ.

ವ್ಯಾಕುಲಂ ಲೋಕಂ ಮೃಡಯಂತಿ ಯುಗೇಯುಗೇ ॥೨೮॥ ಜನ್ಮ ಗುಹ್ಯಂ ಭಗವತೋ ಯ ಏತತ್ಪ್ರಯತೋ ನರಃ । ಸಾಯಂಪ್ರಾತ ರ್ಗೃಣನ್ ಭಕ್ತ್ಯಾ ದುಃಖಗ್ರಾಮಾ ದ್ವಿಮುಚ್ಯತೇ ॥೨೯॥ †ಏತದ್ರೂಪಂ ಭಗವತೋ ಹ್ಯರೂಪಸ್ಯ ಚಿದಾತ್ಮನಃ । ಮಾಯಾಗುಣೈ ರ್ವಿರಚಿತಂ ಮಹದಾದಿಭಿರಾತ್ಮನಿ ॥೩೦॥ ‡ಯಥಾ ನಭಸಿ ಮೇಘೌಘೋ ರೇಣುರ್ವಾ ಪಾರ್ಥಿವೋ ನಿಲೇ।

ಇಂದ್ರನಿಗೆ, ಅರಿ-ಶತ್ರುಗಳಾದ ದಾನವರಿಂದ, ವ್ಯಾಕುಲಂ-ಕೋಟಲೆಗೊಳಿಸಲ್ಪಟ್ಟ, ಲೋಕಂ-ಪ್ರಪಂಚವನ್ನು, ಯುಗೇಯುಗೇ-ಪ್ರತಿಯುಗದಲ್ಲಿಯೂ, ಮೃಡಯಂತಿ-ಸುಖಪಡಿಸುವರು. ॥೨೮॥ ಯಃ-ಯಾವ, ನರಃ - ಮನುಷ್ಯನು, ಪ್ರಯತಃ - ಶುಚಿರ್ಭೂತನಾಗಿ, ಸಾಯಂ - ಸಾಯಂಕಾಲದಲ್ಲಿಯೂ, ಪ್ರಾತಃ-ಪ್ರಾತಃಕಾಲದಲ್ಲಿಯೂ, ಭಗವತಃ-ಭಗವಂತನ, ಗುಹ್ಯಂ-ರಹಸ್ಯವಾದ, ಏತತ್ - ಈ, ಜನ್ಮ-ಅವತಾರಗಳನ್ನು, ಭಕ್ತ್ಯಾ-ಭಕ್ತಿಯಿಂದ, ಗೃಣನ್ - ಹೊಗಳುವವನು, ಭವತಿ - ಆಗುತ್ತಾನೋ, ಸಃ-ಆಪುರುಷನು, ದುಃಖಗ್ರಾಮಾತ್, ದುಃಖ-ಜನನಮರಣಾದಿದುಃಖಗಳ, ಗ್ರಾಮಾತ್-ಸಮುದಾಯರೂಪವಾದ ಸಂಸಾರದಿಂದ, ವಿಮುಚ್ಯತೇ-ಬಿಡಲ್ಪಡುತ್ತಾನೆ ॥೨೯॥ ಅರೂಪಸ್ಯ-ರೂಪರಹಿತನಾದ, ಚಿದಾತ್ಮನಃ, ಚಿತ್-ಜ್ಞಾನವೇ, ಆತ್ಮನಃ-ಸ್ವರೂಪವಾಗಿಉಳ್ಳ, ಭಗವತಃ-ಷಡ್ಗುಣೈಶ್ವರ್ಯಸಂಪನ್ನನಾದ, ವಿರಾಡ್ಜೀವನಿಗೆ, ಮಹದಾದಿಭಿಃ, ಮಹತ್-ಮಹತ್ತತ್ವವೇ, ಆದಿಭಿಃ-ಮೊದಲಾದ, ಮಾಯಾಗುಣೈಃ, ಮಾಯಾ-ಮೂಲಪ್ರಕೃತಿಯ, ಗುಣೈಃ-ಗುಣಗಳಿಂದ, ಆತ್ಮನಿ-ಪರಮಾತ್ಮನಲ್ಲಿಯೇ, ಏತತ್-ಈ, ರೂಪಂ-ಸ್ಥೂಲಶರೀರವು, ವಿರಚಿತಂ-ಮಾಡಲ್ಪಟ್ಟಿತು. ॥೩೦॥ ನಭಸಿ-ಆಕಾಶದಲ್ಲಿ, ಮೇಘೌಘಃ-ಮೋಡಗಳಸಮೂಹವು, ಅನಿಲೇ-ವಾಯುವಿನಲ್ಲಿ, ಪಾರ್ಥಿವಃ-ಪೃಥಿವೀಸಂಬಂಧವಾದ, ರೇಣುಃ - ಧೂಳಿಯು, ಯಥಾ-ಹೇಗೆ

ನ್ನಾರಾಯಣನೇಹೊರತು ಅಂಶವಲ್ಲ. ಈ ಸಕಲಾವತಾರಗಳೂ ಪ್ರತಿಯುಗದಲ್ಲಿಯೂ ದುಷ್ಟನಿಗ್ರಹವನ್ನು ಮಾಡಿ ಲೋಕಗಳನ್ನು ಸಂತೋಷ ಪಡಿಸುವುವು. ॥ ೨೮ ॥ ಯಾವ ಪುರುಷನು ನಿತ್ಯವೂ ಪ್ರಾತಸ್ಸಾಯಂಕಾಲಗಳಲ್ಲಿ ಪರಿಶುದ್ಧನಾಗಿ ಭಗವಂತನ ರಹಸ್ಯವಾದ ಈ ಅವತಾರಚರಿತ್ರೆಯನ್ನು ಭಕ್ತಿಯಿಂದ ಪಾರಾಯಣಮಾಡುತ್ತಾನೋ ಅವನು ದುಃಖರೂಪವಾದ ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುವನು ॥ ೨೯ ॥ ಜೀವನಿಗೆ ಸ್ಥೂಲಸೂಕ್ಷ್ಮಗಳೆಂಬ ಶರೀರಗಳ ಸಂಬಂಧವಿರುವವರೆಗೂ ಸಂಸಾರದಿಂದ ಬಿಡುಗಡೆಯಾಗುವುದಿಲ್ಲವಾದುದರಿಂದ ಅಜ್ಞಾನದಿಂದುಂಟಾಗಿರುವ ದೇಹಸಂಬಂಧವನ್ನು ಭಗವತ್ಕಥಾಶ್ರವಣಾದಿಗಳಿಂದುಂಟಾಗುವ ವಿದ್ಯೆಯಿಂದ ನಾಶಗೊಳಿಸಬೇಕು. ಷಡ್ಗುಣೈಶ್ವರ್ಯ ಸಂಪನ್ನನಾಗಿಯೂ, ರೂಪರಹಿತನಾಗಿಯೂ, ಚಿದೇಕರಸನಾಗಿಯೂ, ಇರುವ ಜೀವನಿಗೆ, ಮಾಯಾಗುಣಗಳಾದ ಮಹದಾದಿಗಳಿಂದ ಪರಮಾತ್ಮನಲ್ಲಿ ಈ ಸ್ಥೂಲರೂಪವು ಕಲ್ಪಿತವಾಯಿತು. ನಿಜಸ್ಥಿತಿಯನ್ನರಿಯದ ಅಜ್ಞಾನಿಗಳು ವಾಯುಮಂಡಲವನ್ನು ಆಶ್ರಯಿಸಿರುವ ಮೇಘಗಳನ್ನು ಆಕಾಶದಲ್ಲಿಯೂ, ಧೂಳಿಯಲ್ಲಿರುವ ಬಣ್ಣಗಳನ್ನು ಗಾಳಿಯಲ್ಲಿಯೂ, ಆರೋಪಿಸುವಂತೆ

ವಿ-† ಮಾಯಾಗುಣಗಳಿಂದ ವಿರಚಿತವಾದ ಈ ವಿರಾಡ್ರೂಪವು ಪರಮಾತ್ಮನಿಗೆ ಪ್ರತಿಮಾಸ್ಥಾನೀಯ್ಯವು.

ವಿ-‡ ಈ ಜಡವಾದ ಬ್ರಹ್ಮಾಂಡದ ಸ್ವರೂಪವನ್ನು ಪರಮಾತ್ಮನಲ್ಲಿ ಆರೋಪಿಸುವುದು ಭ್ರಾಂತಿಯಾದುದರಿಂದ ಈ ಬ್ರಹ್ಮಾಂಡವು ಪರಮಾತ್ಮನಿಗೆ ಪ್ರತಿಮಾಸ್ಥಾನವೇ ಹೊರತು ಸ್ವರೂಪವಲ್ಲ.

ಏವಂ ದ್ರಷ್ಟರಿ ದೃಶ್ಯತ್ವ ಮಾರೋಪಿತ ಮಬುದ್ಧಿಭಿಃ ॥೩೧॥ ಅತಃಪರಂ
ಯದವ್ಯಕ್ತ ಮವ್ಯೂಢಗುಣ ಬೃಂಹಿತಂ । ಅದೃಷ್ಟಾಶ್ರುತವಸ್ತುತ್ವಾ ತ್ಸಜೀ
ವ್ರೋ ಯತ್ಪುನರ್ಭವಃ॥೩೨॥ *ಯತ್ರೇಮೇ ಸದಸದ್ರೂಪೇ ಪ್ರತಿಷಿದ್ಧೇ ಸ್ವ
ಸಂವಿದಾ। ಅವಿದ್ಯಯಾತ್ಮನಿ ಕೃತೇ ಇತಿ ತದ್ಬ್ರಹ್ಮದರ್ಶನಂ॥೩೩॥ ‡ಯದ್ಯೇ

ಆರೋಪಿಸಲ್ಪಡುವುದೋ, ಏವಂ-ಹೀಗೆಯೇ; ಅಬುದ್ಧಿಭಿಃ-ಅಜ್ಞಾನಿಗಳಿಂದ ದ್ರಷ್ಟರಿ-ದೃಗ್ರೂಪನಾದ ಪರಮಾತ್ಮನಲ್ಲಿ, ದೃಶ್ಯತ್ವಂ - ದೃಶ್ಯತ್ವಾದಿಗುಣಗಳುಳ್ಳಶರೀರವು, ಆರೋಪಿತಂ - ಆರೋಪಿಸಲ್ಪಟ್ಟಿತು ॥೩೧॥ ಅವ್ಯೂಢಗುಣಬೃಂಹಿತಂ, ಅವ್ಯೂಢ-ರೂಪವನ್ನುಪಡೆಯದ, ಗುಣ-ಹಸ್ತಪಾದಾದಿಗಳಿಂದ. ಬೃಂಹಿತಂ-ಮಾಡಲ್ಪಟ್ಟುದಾದುದರಿಂದಲೇ; ಯತ್ - ಯಾವುದು, ಅವ್ಯಕ್ತಂ - ಸೂಕ್ಷ್ಮವಾದುದೋ, ಅದೃಷ್ಟಾಶ್ರುತವಸ್ತುತ್ವಾತ್-ಅದೃಷ್ಟ - ಕಾಣಲ್ಪಡದೆಯೂ, ಅಶ್ರುತ--ಕೇಳಲ್ಪಡದೆಯೂ ಇರುವ, ವಸ್ತುತ್ವಾತ್-ವಸ್ತುವಾಗಿರುವುದರಿಂದ, ಸಜೀವಃ - ಜೀವನೇ ಉಪಾಧಿಯಾಗುಳ್ಳದ್ದೋ, ಯತ್ - ಯಾವಜೀವೋಪಾಧಿಯಾದ ಲಿಂಗಶರೀರದಿಂದ, ಪುನರ್ಭವಃ - ಪುನರ್ಜನ್ಮವುಂಟಾಗುವುದೋ ಅತಃ - ಈಸ್ಥೂಲಶರೀರಕ್ಕಿಂತಲೂ, ಪರಂ - ಬೇರೆಯಾದ, ಸೂಕ್ಷ್ಮ ಅಥವಾ ಲಿಂಗಶರೀರವೂ ಪರಮಾತ್ಮನಲ್ಲಿ ಆರೋಪಿಸಲ್ಪಟ್ಟಿತು ॥೩೨॥ ಅವಿದ್ಯಯಾ - ಅಜ್ಞಾನದಿಂದ, ಆತ್ಮನಿ-ಆತ್ಮನಲ್ಲಿ, ಕೃತೇ - ಕಲ್ಪಿಸಲ್ಪಟ್ಟುದರಿಂದಲೇ, ಸದಸದ್ರೂಪೇ, ಸತ್ - ಕಾರ್ಯವಾದ ಸ್ಥೂಲಶರೀರವು, ಅಸತ್ - ಕಾರಣವಾದ ಸೂಕ್ಷ್ಮಶರೀರವು, ರೂಪೆ-ಇವುಗಳ ರೂಪಗಳುಳ್ಳ ಎರಡು ಶರೀರಗಳೂ, ಯತ್ರ - ಯಾವಾಗ, ಸ್ವಸಂವಿದಾ, ಸ್ವ-ತನ್ನ, ಸಂವಿದಾ-ಸಮ್ಯಜ್ಞಾನದಿಂದ, ಪ್ರತಿಷಿದ್ಧೇ-ಹೋಗಲಾಡಿಸಲ್ಪಡುವುವೋ, ಇತಿ - ಈಕಾರಣದಿಂದ, ತತ್-ಆಗ, ಜೀವಃ-ಜೀವನು, ದರ್ಶನಂ-ಜ್ಞಾನಸ್ವರೂಪನಾದ, ಬ್ರಹ್ಮ-ಬ್ರಹ್ಮನೇ, ಭವತಿ-ಆಗುತ್ತಾನೆ॥೩೩॥ ವೈಶಾರದೀ-ವಿಶಾರದ (ಸರ್ವಜ್ಞ) ನಾದ, ಪರಮೇಶ್ವರನ ಸಂಬಂಧಯಾದ, ದೇವೀ-ಸಂಸಾರಚಕ್ರದಿಂದ,

---

ದ್ರಷ್ಟೃವಾದ ಭಗವಂತನಲ್ಲಿ ದೃಶ್ಯವಾದ ಶರೀರವನ್ನು ಆರೋಪಿಸುವರು ॥ ೩೧ ॥ ಈ ಸ್ಥೂಲಶರೀರಕ್ಕಿಂತಲೂ ಬೇರೆಯಾದ ಮತ್ತೊಂದು ಶರೀರವೂ ಪರಮಾತ್ಮನಲ್ಲಿ ಮಾಯೆಯಿಂದ ಕಲ್ಪಿತವಾಗಿರುವುದು. ಆ ಶರೀರಕ್ಕೆ ಕೈ, ಕಾಲು, ಮೊದಲಾದ ಅವಯವಗಳು ಕಾಣುವುದಿಲ್ಲ. ಅದನ್ನು ಕಂಡವರಿಲ್ಲ. ಕೇಳಿದವರಿಲ್ಲ. ಪುನರ್ಜನ್ಮಕ್ಕೆ ಕಾರಣವಾಗಿರುವುದರಿಂದ ಇಲ್ಲವೆಂದು ಹೇಳಲಾಗುವುದಿಲ್ಲ. ಜೀವನಭಿಮಾನಕ್ಕೆ ಮುಖ್ಯಪಾತ್ರವದು. ಇದೇ ಸೂಕ್ಷ್ಮ ಅಥವಾ ಲಿಂಗಶರೀರವೆನ್ನಲ್ಪಡುವುದು ॥೩೨ ॥ “ಸ್ಥೂಲಸೂಕ್ಷ್ಮಗಳೆಂಬ ಈ ಎರಡು ಶರೀರಗಳೂ ಪರಮಾತ್ಮನಲ್ಲಿ ಅವಿದ್ಯೆಯಿಂದ ಕಲ್ಪಿತಗಳೇಹೊರತು ಸತ್ಯವಲ್ಲ” ಎಂದು ಯಾವಾಗ ತನ್ನ ಸಮ್ಯಜ್ಞಾನದಿಂದ ತಿಳಿದುಕೊಳ್ಳುವನೋ ಆಗಲೇ ಆ ಜೀವನು ಜ್ಞಾನಸ್ವರೂಪನಾದ ಪರಮಾತ್ಮನೆನಿಸುವನು ॥ ೩೩ ॥ ಈ ಸಂಸಾರವೆಂಬ ಚಕ್ರದಿಂದ

ವಿ-* “ಈ ಸ್ಥೂಲ ಸೂಕ್ಷ್ಮರೂಪಗಳು ಅನಾದಿಯಾಗಿ ಪರಮಾತ್ಮನಲ್ಲಿಲ್ಲ. ಇವು ಅಜ್ಞಾನದಿಂದ ಜೀವನಲ್ಲಿ ಕಲ್ಪಿತಗಳಾಗಿರುವುವು” ಎಂಬ ಜ್ಞಾನವೇ ಜೀವನಿಗೆ ಬಂಧನಿವರ್ತಕವು.

ವಿ-‡ “ಅಪರೋಕ್ಷಜ್ಞಾನಪನ್ನತ್ವ ಇವನನ್ನು ಸಂಸಾರದಿಂದ ಬಿಡಿಸುತ್ತೇನೆ” ಎಂದು ಭಗವದಿಚ್ಛೆಯುಂಟಾದರೆ ಜೀವನ್ಮುಕ್ತನಾಗಿ ಪರಮಾತ್ಮನನ್ನು ಹೊಂದುತ್ತಾನೆ.

ಷೋಪರತಾ ದೇವಿ ಮಾಯಾವೈಶಾರದೀ ಮತಿಃ । ಸಂಪನ್ನ ಏವೇತಿ ವಿದು
ರ್ಮಹಿಮ್ನಿ ಸ್ವೇ ಮಹೀಯತೇ ॥ ೩೪ ॥ ಏವಂ ಜನ್ಮಾನಿ ಕರ್ಮಾಣಿಹ್ಯ
ಕರ್ತುರಜನಸ್ಯಚ। ವರ್ಣಯಂತಿಸ್ಮ ಕವಯೋ ವೇದಗುಹ್ಯಾನಿ ಹೃತ್ಪತೇಃ॥
ಸವಾ ಇದಂ ವಿಶ್ವ ಮಮೋಘಲೀಲ ಸ್ಸೃಜತ್ಯವತ್ಯತ್ತಿ ನಸಜ್ಜತೇ ಸ್ಮಿನ್ ।
ಭೂತೇಷು ಚಾಂತರ್ಹಿತ ಆತ್ಮತಂತ್ರ ಷಾಡ್ವರ್ಗಿಕಂ ಜಿಘ್ರತಿ ಷಡ್ಗುಣೇಶಃ॥
ನಚಾಸ್ಯ ಕಶ್ಚಿನ್ನಿಪುಣೇನ ಧಾತುರವೈತಿ ಜಂತುಃ ಕುಮನೀಷ ಊತೀಃ। ನಾ
ಮಾನಿ ರೂಪಾಣಿ ಮನೋವಚೋಭಿ ಸ್ಸಂತನ್ವತೋ ನಟಚರ್ಯಾಮಿವಾ

ಕ್ರೀಡಿಸುತ್ತಿರುವ, ಏಷಾ-ಈ, ಮಾಯಾ-ಮಾಯೆಯು ಮತಿಃ-ವಿದ್ಯೆಯಾಗಿ, ಉಪರತಾಯದಿ-ಸೂಕ್ಷ್ಮನಾದರೆ, ತದಾ-ಆಗ, ಸಂಪನ್ನ ಏವ-ಬ್ರಹ್ಮಸ್ವರೂಪವನ್ನು ಪಡೆದವನೆಂದೇ, ವಿದುಃ - ತಿಳಿಯುತ್ತಾರೆ, ಹಾಗಾದಲ್ಲಿ ಸ್ವೇ-ತನ್ನ, ಮಹಿಮ್ನಿ-ಪರಮಾನಂದರೂಪದಲ್ಲಿ, ಮಹೀಯತೆ-ಪೂಜಿಸಲ್ಪಡುತ್ತಾನೆ ॥೩೪॥ ಕವಯಃ-ಪಂಡಿತರು, ಅಕರ್ತುಃ, ಕರ್ತೃತ್ವವಿಲ್ಲದ, ಅಜನಸ್ಯ-ಜನ್ಮವಿಲ್ಲದ, ಹೃತ್ಪತೇಃ-ಅಂತರ್ಯಾಮಿಯಾದ ಭಗವಂತನಿಗೆ, ಜನ್ಮಾನಿ-ಅವತಾರಗಳು, ಕರ್ಮಾಣಿ-ಪ್ರಪಂಚವ್ಯಾಪಾರಗಳೂ, ಏವಂ-ಜೀವನಿಗಿರುವಂತೆಯೇ ಮಾಯಾಕಲ್ಪಿತಗಳೆಂದು, ವರ್ಣಯಂತಿ-ಹೇಳುತ್ತಾರೆ ॥೩೫॥ ಅಮೋಘಲೀಲಃ, ಅಮೋಘ-ಸಾರ್ಥಕವಾದ, ಲೀಲಃ-ವಿಲಾಸವುಳ್ಳ, ಸವಾ-ಆಪರಮಾತ್ಮನೇ, ಇದಂ - ಈ, ವಿಶ್ವಂ-ಪ್ರಪಂಚವನ್ನು, ಸೃಜತಿ-ಸೃಷ್ಟಿಸುತ್ತಾನೆ, ಅವತಿ-ರಕ್ಷಿಸುತ್ತಾನೆ, ಅತ್ತಿ-ಲಯಗೊಳಿಸುತ್ತಾನೆ, ಅಸ್ಮಿನ್-ಈ ಪ್ರಪಂಚದಲ್ಲಿ ನಸಜ್ಜತೇ-ಸೇರುವುದಿಲ್ಲ, ಷಡ್ಗುಣೇಶಃ, ಷಟ್-ಆರಾದ, ಗುಣ-ಇಂದ್ರಿಯಗಳಿಗೆ, ಈಶಃ - ನಿಯಾಮಕನಾದುದರಿಂದಲೇ, ಆತ್ಮತಂತ್ರಃ-ಸ್ವತಂತ್ರನಾದ ಆಪರಮಾತ್ಮನು, ಭೂತೇಷು - ಭೂತಗಳಲ್ಲಿ, ಅಂತರ್ಹಿತಃ-ಅಂತರ್ಯಾಮಿಯಾಗಿ, ಷಾಡ್ವರ್ಗಿಕಂ-ಆರು ಇಂದ್ರಿಯಗಳ ವಿಷಯಗಳನ್ನು, ಜಿಘ್ರತಿ - ಮೂಸಿನೋಡುತ್ತಾನೆ, ॥೩೬॥ ಮನೋವಚೋಭಿಃ, ಮನಃ-ಬುದ್ಧಿವೃತ್ತಿಗಳಿಂದಲೂ, ವಚೋಭಿಃ--ಮಾತುಗಳಿಂದಲೂ, ರೂಪಾಣಿ-ರೂಪಗಳನ್ನೂ, ನಾಮಾನಿ-ಹೆಸರುಗಳನ್ನೂ, ಸಂತನ್ವತಃ--ವಿಸ್ತರಿಸುತ್ತಿರುವ,

ಆಡುತ್ತಿರುವ ಆ ಭಗವಂತನ ಮಾಯೆಯು, ವಿದ್ಯಾರೂಪವಾಗಿ ಪರಿಣಮಿಸಿ ಜೀವನಿಗುಪಾಧಿಗಳಾದ ದೇಹದ್ವಯವನ್ನೂ ನಾಶಗೊಳಿಸಿ, ಕಾಷ್ಠವಿಲ್ಲದಗ್ನಿಯಂತೆ ಯಾವಾಗ ತಾನೂ ನಾಶವಾಗುವುದೋ ಆಗಲೇ ಆಜೀವನು ಬ್ರಹ್ಮಸ್ವರೂಪವನ್ನು ಪಡೆದು ಪರಮಾನಂದರೂಪದಿಂದಿರುವನೆಂದು ಜ್ಞಾನಿಗಳು ಹೇಳುವರು ॥ ೩೪ ॥ ಜೀವನಿಗೆ ಸ್ಥೂಲಸೂಕ್ಷ್ಮಶರೀರಗಳು ಕಲ್ಪಿತಗಳಾಗಿರುವಂತೆಯೇ, ಜನ್ಮವಿಲ್ಲದ ಭಗವಂತನಿಗೆ ಅವತಾರಗಳೂ, ಕರ್ತೃತ್ವವೇ ಇಲ್ಲದ ಭಗವಂತನಿಗೆ ಕರ್ಮಗಳೂಸಹ, ಮಾಯಾಕಲ್ಪಿತಗಳೆಂದು ಪಂಡಿತರು ಹೇಳುವರು ॥ ೩೫ ॥ ಹೀಗೆ ಜೀವೇಶ್ವರರಿಗೆ ಸಾಮ್ಯವಿದ್ದರೂ ಈಶ್ವರನೇ ಸ್ವತಂತ್ರನು. ಆ ಪರಮೇಶ್ವರನು ಲೀಲಾರ್ಥವಾಗಿ ಈ ಪ್ರಪಂಚವನ್ನು ಸೃಜಿಸಿ, ಪಾಲಿಸಿ, ಲಯಗೊಳಿಸುವವನಾಗಿದ್ದರೂ ತಾನು ಅದರಲ್ಲಿ ಸೇರುವುದಿಲ್ಲ. ಇಂದ್ರಿಯನಿಯಾಮಕನಾದುದರಿಂದಲೇ ಸ್ವತಂತ್ರನೆನಿಸಿ, ಸಕಲಭೂತಗಳಲ್ಲಿಯೂ, ಅಂತರ್ಯಾಮಿಯಾಗಿ, ಆಸಕ್ತನಾಗದೆಯೇ ಇಂದ್ರಿಯವಿಷಯಗಳನ್ನು ಅನುಭವಿಸುವನು ॥೩೬॥ ವೇಷಧಾರಿಯಾದ ನಟನು ಮರುಳುಮಾಡುವಂತೆ ಧರಿಸುವ ವೇಷಾದಿಗಳ ಮರ್ಮವನ್ನು ಮೂಢರಾದವರು ಹೇಗೆ ತಿಳಿಯುವ

ಜ್ಞಃ ॥೩೭॥ ಸವೇದ ಧಾತುಃ ಪದವೀಂ ಪರಸ್ಯ ದುರಂತವೀರ್ಯಸ್ಯ ರಥಾಂಗಪಾಣೇಃ । ಯೋಽಮಾಯಯಾ ಸಂತತಯಾನುವೃತ್ತ್ಯಾ ಭಜೇತ ತತ್ಪಾದಸರೋಜಗಂಧಂ॥೩೮॥ ಅಥೇಹ ಧನ್ಯಾ ಭಗವಂತ ಇತ್ಥಂ ಯದ್ವಾಸುದೇವೇಽಖಿಲಲೋಕನಾಥೇ । ಕುರ್ವಂತಿ ಸರ್ವಾತ್ಮಕಮಾತ್ಮಭಾವಂ ನಯತ್ರ ಭೂಯಃ ಪರಿವರ್ತ ಉಗ್ರಃ ॥೩೯॥ ಇದಂ ಭಾಗವತಂನಾಮ ಪುರಾಣಂ ಬ್ರಹ್ಮ

ಅಸ್ಯ-ಈ, ಧಾತುಃ-ಸೃಷ್ಟಿಕರ್ತನ, ಊತೀಃ-ಲೀಲೆಗಳನ್ನು, ಕುಮನೀಷಃ, ಕು - ಕುತ್ಸಿತವಾದ, ಮನೀಷ-ಬುದ್ಧಿಯುಳ್ಳ, ಕಶ್ಚಿತ್-ಯಾವ, ಜಂತುಃ ಪ್ರಾಣಿಯೂ, ನಿಪುಣೇನ-ಯುಕ್ತಿ ಮೊದಲಾದವುಗಳ ಜಾಣತನದಿಂದ, ಅಜ್ಞಃ-ಮೂಢನು, ನಟಚರ್ಯಾಮಿವ, ನಟ-ನಟನ, ಚರ್ಯಾಮಿವ--ನಡವಳಿಕೆಯ ನ್ನೋಪಾದಿಯಲ್ಲಿ, ನಾವೈತಿ-ತಿಳಿಯುವುದಿಲ್ಲ, ॥೩೭॥ ಯಃ-ಯಾವನು, ಅಮಾಯಯಾ - ಋಜುವಾದ ನಡವಳಿಕೆಯಿಂದ, ಸಂತತಯಾ-ನಿರಂತರವಾದ, ಅನುವೃತ್ತ್ಯಾ - ಅನುಸರಣೆಯಿಂದ, ತತ್ಪಾದಸರೋಜಗಂಧಂ, ತತ್-ಆಭಗವಂತನ, ಪಾದ-ಪಾದಗಳೆಂಬ, ಸರೋಜ-ಕಮಲಗಳ, ಗಂಧಂ-ವಾಸನೆಯನ್ನು, ಭಜೇತ-ಅನುಭವಿಸುತ್ತಾನೋ, ಸಃ-ಅಂತಹ ಭಕ್ತನು, ಪರಸ್ಯ--ಶ್ರೇಷ್ಠನಾದ, ದುರಂತವೀರ್ಯಸ್ಯ, ದುರಂತ-ಅಪಾರವಾದ, ವೀರ್ಯಸ್ಯ-ಪರಾಕ್ರಮವುಳ್ಳ, ರಥಾಂಗಪಾಣೇಃ, ರಥಾಂಗ-ಚಕ್ರಾಯುಧವೇ,ಪಾಣೇಃ-ಹಸ್ತದಲ್ಲುಳ್ಳ, ಧಾತುಃ-ಭಗವಂತನ, ಪದವೀಂ-ಮಾರ್ಗವನ್ನು, ವೇದ-ತಿಳಿಯುತ್ತಾನೆ. ॥೩೮॥ ಹೇ ಭಗವಂತಃ-ಅಯ್ಯಾಸರ್ವಜ್ಞರಾದ ಶೌನಕಾದಿಗಳಿರಾ! ಅಥ-ಆದುದರಿಂದ, ಇಹ-ಈಲೋಕದಲ್ಲಿ, (ನೀವೇ) ಧನ್ಯಾಃ-ಕೃತಾರ್ಥರು, ಯತ್-ಯಾವಕಾರಣದಿಂದ, ಅಖಿಲಲೋಕನಾಥೇ, ಅಖಿಲ-ಎಲ್ಲಾ, ಲೋಕ-ಲೋಕಗಳಿಗೂ, ನಾಥೇ-ನಾಯಕನಾದ, ವಾಸುದೇವೇ-ಶ್ರೀ ಕೃಷ್ಣನನಲ್ಲಿ, ಸರ್ವಾತ್ಮಕಂ - ನಿಶ್ಚಲವಾದ, ಆತ್ಮಭಾವಂ--ಮನೋಭಾವವನ್ನು, ಕುರ್ವಂತಿ - ಮಾಡುವರೋ, ಯತ್ರ - ಯಾವ ಮನೋಭಾವವಿದ್ದಲ್ಲಿ, ಭೂಯಃ-ಮರಳಿ, ಉಗ್ರಃ-ಗರ್ಭವಾಸಮೊದಲಾದದುಃಖವುಳ್ಳ, ಪರಿವರ್ತಃ-ಜನನ ಮರಣ ರೂಪವಾದ ಸಂಸಾರಚಕ್ರವು, ನ-ಉಂಟಾಗುವುದಿಲ್ಲವೋ ॥೩೯॥ ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ, ಋಷಿಃ-ವ್ಯಾಸಮುನಿಯು, ಬ್ರಹ್ಮಸಮ್ಮಿತಂ, ಬ್ರಹ್ಮ-ವೇದಗಳೊಡನೆ, ಸಮ್ಮಿತಂ - ಸಮಾನವಾದ, ಉತ್ತಮ

ದಿಲ್ಲವೋ, ಹಾಗೆ ಸಂಕಲ್ಪಮಾತ್ರದಿಂದಲೇ ಅನಂತಾವತಾರಗಳನ್ನೂ ಅನಂತನಾಮಗಳನ್ನೂ ತಳೆದಿರುವ ಸೃಷ್ಟಿಕರ್ತನಾದ ಪರಮಾತ್ಮನಲೀಲೆಗಳನ್ನು ಮಂದಬುದ್ಧಿಗಳಾದ ಪ್ರಾಣಿಗಳು ಯುಕ್ತಿಮೊದಲಾದವುಗಳಿಂದ ಗ್ರಹಿಸಲಾರರು ॥೩೭॥ ಹೀಗೆ ಭಗವನ್ಮಹಿಮೆಯು ಅಗೋಚರವಾಗಿದ್ದರೂ, ಯಾವನು ನಿಷ್ಕಪಟವಾಗಿ, ನಿರಂತರವಾದ ಅನುವೃತ್ತಿಯಿಂದ ಭಗವಂತನ ಪಾದಕಮಲಗಳಲ್ಲಿರುವ ಮಕರಂದವನ್ನು ಪಾನಮಾಡುವನೋ, ಅಂತಹ ಭಕ್ತನು ಮಾತ್ರ, ಅಪಾರಮಹಿಮನಾದ ಆ ಪರಮೇಶ್ವರನ ಲೀಲೆಗಳನ್ನು ತಿಳಿಯುತ್ತಾನೆ ॥ ೩೮ ॥ ಅಯ್ಯಾಮಹಾತ್ಮರಿರಾ ! ಇಂತಹ ಪ್ರಶ್ನೆಗಳಿಂದ ಸರ್ವಲೋಕಶರಣ್ಯನಾದ ಶ್ರೀ ವಾಸುದೇವಮೂರ್ತಿಯಲ್ಲಿಅನನ್ಯವಾದಭಕ್ತಿಯನ್ನಿಟ್ಟಿರುವಿರಾದುದರಿಂದ ನೀವೇಧನ್ಯರು, ಇದುಸಾಮಾನ್ಯವಲ್ಲ. ಇಂತಹ ಭಕ್ತಿಯನ್ನು ಭಗವಂತನಲ್ಲಿಟ್ಟವರಿಗೆ, ಭಯಂಕರವಾದ ಗರ್ಭವಾಸಾದಿದುಃಖಗಳಿಂದೊಡಗೂಡಿದ ಜನನ ಮರಣರೂಪವಾದ ಸಂಸಾರವೆಂಬುದು ಮರಳಿ ಉಂಟಾಗುವುದಿಲ್ಲ ॥೩೯॥ ಈ ಶಾಸ್ತ್ರವು ಹೊಸದಲ್ಲ. ಭಗವಂತನಾದ ಬಾದರಾಯಣಮುನಿ

ಸಮ್ಮಿತಂ । ಉತ್ತಮಶ್ಲೋಕಚರಿತಂ ಚಕಾರ ಭಗವಾನ್ ಋಷಿಃ ॥೪೦॥ ನಿಶ್ರೇಯಸಾಯ ಲೋಕಸ್ಯ ಧನ್ಯಂ ಸ್ವಸ್ತ್ಯಯನಂ ಮಹತ್ । ತದಿದಂ ಗ್ರಾಹಯಾಮಾಸ ಸುತ ಮಾತ್ಮವಿದಾಂವರಂ ॥೪೧॥ ಸರ್ವವೇದೇತಿಹಾಸಾನಾಂ ಸಾರಂ ಸಾರಂ ಸಮುದ್ಧೃತಂ । ಸತು ಸಂಶ್ರಾವಯಾಮಾಸ ಮಹಾರಾಜಂ ಪರೀಕ್ಷಿತಂ ॥೪೨॥ ಪ್ರಾಯೋಪವಿಷ್ಟಂ ಗಂಗಾಯಾಂ ಪರೀತಂ ಪರಮರ್ಷಿಭಿಃ । ತತ್ರ ಕೀರ್ತಯತೊ ವಿಪ್ರಾವಿಪ್ರರ್ಷೇರ್ಭೂರಿತೇಜಸಃ ॥ ಅಹಂಚಾಧ್ಯಗಮಂ ತತ್ರ ನಿವಿಷ್ಟಸ್ತದನುಗ್ರಹಾತ್। ಯೂಯಂ ವ್ಯವಸಿತಾ

ಶ್ಲೋಕಚರಿತಂ, ಉತ್ತಮಶ್ಲೋಕ-ಭಗವಂತನ, ಚರಿತಂ-ಚರಿತ್ರೆಯುಳ್ಳ, ಭಾಗವತಂ-ಭಾಗವತವೆಂದು, ನಾಮ-ಪ್ರಸಿದ್ಧವಾದ, ಇದಂ-ಈ, ಪುರಾಣಂ-ಪುರಾಣವನ್ನು, ಚಕಾರ-ಮಾಡಿದನು ॥೪೦॥ ಲೋಕಸ್ಯ, ಜಗತ್ತಿನ, ನಿಶ್ರೇಯಸಾಯ - ಕ್ಷೇಮಕ್ಕಾಗಿ ಧನ್ಯಂ -- ಪುರುಷಾರ್ಥಗಳನ್ನು ಕೊಡತಕ್ಕದಾಗಿಯೂ ಸ್ವಸ್ತ್ಯಯನಂ- ಮಂಗಳಕರವಾಗಿಯೂ, ಮಹತ್-ಶ್ರೇಷ್ಠವಾಗಿಯೂ ಇರುವ, ತದಿದಂ-ಅಂಥಾ ಈಭಾಗವತಪುರಾಣವನ್ನು, ಆತ್ಮವಿದಾಂ-ಆತ್ಮವೇತ್ತರಲ್ಲಿ, ವರಂ-ಶ್ರೇಷ್ಠನಾದ, ಸುತಂ-ಮಗನಾದ ಶುಕಮುನಿಯಿಂದ, ಗ್ರಾಹಯಾಮಾಸ-ಓದಿಸಿದನು ॥೪೧॥ ಸತು-ಆಶುಕಮುನಿಯು, ಗಂಗಾಯಾಂ-ಗಂಗೆಯಲ್ಲಿ, ಪ್ರಾಯೋಪವಿಷ್ಟಂ, ಪ್ರಾಯ - ಉಪವಾಸದಿಂದ, ಉಪವಿಷ್ಟಂ - ಕುಳಿತುಕೊಂಡಿರುವ, ಪರಮರ್ಷಿಭಿಃ ಶ್ರೇಷ್ಠರಾದ ಋಷಿಗಳಿಂದ, ಪರೀತಂ - ಪರಿವೃತನಾದ. ಮಹಾರಾಜಂ - ರಾಜಶ್ರೇಷ್ಠನಾದ, ಪರೀಕ್ಷಿತಂ-ಪರೀಕ್ಷಿದ್ರಾಜನಿಗೆ, ಸರ್ವವೇದೇತಿಹಾಸಾನಾಂ, ಸರ್ವ-ಎಲ್ಲಾ, ವೇದ-ವೇದಗಳಲ್ಲಿಯೂ, ಇತಿಹಾಸಾನಾಂ ಇತಿಹಾಸಗಳಲ್ಲಿಯೂ, ಸಮುದ್ಧೃತಂ--ತೆಗೆಯಲ್ಪಟ್ಟ, ಸಾರಂಸಾರಂ - ಮುಖ್ಯ ಮುಖ್ಯ ತತ್ವಗಳನ್ನು, ಶ್ರಾವಯಾಮಾಸ-ಶ್ರವಣಮಾಡಿಸಿದನು, ವಿಪ್ರಾಃ-ಅಯ್ಯಾ ಬ್ರಾಹ್ಮಣರಿರಾ ! ತತ್ರ-ಆ ಪರೀಕ್ಷಿತನಬಳಿಯಲ್ಲಿ, ಕೀರ್ತಯತಃ-ಹೇಳುತ್ತಿರುವ, ಭೂರಿತೇಜಸಃ, ಭೂರಿ-ಅಧಿಕವಾದ. ತೇಜಸಃ-ತೇಜಸ್ಸುಳ್ಳ, ವಿಪ್ರರ್ಷೇಃ, ಬ್ರಹ್ಮರ್ಷಿಯಾದ ಶುಕಮುನಿಯಿಂದ, ತತ್ರ-ಅಲ್ಲಿ, ನಿವಿಷ್ಟಃ-ಕುಳಿತುಕೊಂಡು, ತದನುಗ್ರಹಾತ್, ತತ್-

ಯು ಭಗವಚ್ಚರಿತ್ರದಿಂದಯುಕ್ತವಾಗಿ,ವೇದಸಮಾನವೆನಿಸಿರುವ ಈ ಭಾಗವತ ಶಾಸ್ತ್ರವನ್ನು ವಿವರಿಸಿದನು ॥೪೦॥ ಅನಂತರದಲ್ಲಿ ಲೋಕಕ್ಕೆ ಶ್ರೇಯಸ್ಸನ್ನುಂಟುಮಾಡುವುದಕ್ಕಾಗಿ ಪುರುಷಾರ್ಥಪ್ರದವಾಗಿಯೂ ಮಂಗಳಕರವಾಗಿಯೂ ಇರುವ ಇದನ್ನು ತನ್ನ ಮಗನಾದ ಮಹಾಯೋಗಿಯೆನಿಸಿದ ಶುಕಮುನಿಗೆ ಕಲಿಸಿದನು ॥೪೧॥ ಆ ಶುಕಮುನಿಯು ಸಕಲ ವೇದಶಾಸ್ತ್ರಗಳಲ್ಲಿ ಸಾರವನ್ನು ತೆಗೆದು ಮಾಡಿರುವ ಈ ಭಾಗವತವನ್ನು, ಗಂಗಾಮಧ್ಯದಲ್ಲಿ ಪ್ರಾಯೋಪವೇಶವನ್ನುಮಾಡಿ,ಋಷಿಗಳಿಂದೊಡಗೂಡಿರುವ ಪರೀಕ್ಷಿನ್ಮಹಾರಾಜನಿಗೆ ವಿವರಿಸಿ ತಿಳಿಸಿದನು. ಆತನು ಪುರಾಣಹೇಳುವಾಗ ನಾನಲ್ಲಿ ಕುಳಿತಿದ್ದು ಆತನ ಅನುಗ್ರಹದಿಂದ ಇದನ್ನು ತಿಳಿದುಕೊಂಡೆನು. ಅಯ್ಯಾ ಮಹರ್ಷಿಗಳಿರಾ ! ನೀವು ಈ ವಿಚಾರದಲ್ಲಿ ವ್ಯವಸಾಯವನ್ನು ಮಾಡಿದವರಾಗಿಯೂ, ಶ್ರದ್ಧೆಯುಳ್ಳವರಾಗಿಯೂ, ಇರುವುದರಿಂದ ನಾನೀಪುರಾಣವನ್ನು ತಿಳಿದಷ್ಟರಲ್ಲಿ ನನ್ನ ಬುದ್ಧಿಗೆ ತೋರಿದಮಟ್ಟಿಗೆ ನಿಮಗೆ ತಿಳಿಸುತ್ತೇನೆ. ಭಗವಂತನಾದ ಶ್ರೀ ಕೃಷ್ಣಮೂರ್ತಿಯು ತನ್ನ ನೆಲೆಯನ್ನು ಪಡೆದಕೂಡಲೆ ಧರ್ಮ, ಜ್ಞಾನ,

ವಿಪ್ರಾ ಜಿಜ್ಞಾಸಾಯಾಂಚ ನಿಷ್ಠಿತಾಃ ॥೪೪॥ ಸೋಽಹಂ ವಃ ಶ್ರಾವಯಿಷ್ಯಾ
ಮಿ ಯಥಾಧೀತಂ ಯಥಾಮತಿ। ಕೃಷ್ಣೇ ಸ್ವಧಾಮೋಪಗತೇ ಧರ್ಮಜ್ಞಾನಾ
ದಿಭಿ ಸ್ಸಹ । ಕಲೌ ನಷ್ಟದೃಶಾ ಮೇಷ ಪುರಾಣಾರ್ಕೋಽಧುನೋದಿತಃ ॥

ಇತಿ ತೃತೀಯೋಽಧ್ಯಾಯಃ

ಆ ಶುಕನ, ಅನುಗ್ರಹಾತ್ - ಅನುಗ್ರಹದಿಂದ, ಅಹಂಚ - ನಾನೂ, ಅಧ್ಯಗಮಂ - ತಿಳಿದುಕೊಂಡೆನು. ವಿಪ್ರಾಃ-ಅಯ್ಯಾ ಬ್ರಾಹ್ಮಣರಿರಾ! ಯೂಯಂ-ನೀವು, ವ್ಯವಸಿತಾಃ - ಪ್ರಯತ್ನ ಮಾಡತಕ್ಕವರೂ, ಜಿಜ್ಞಾಸಾಯಾಂ--ವಿಚಾರದಲ್ಲಿ, ನಿಷ್ಠಿತಾಃ - ನೆಲೆಯನ್ನು ಪಡೆದವರೂ ಆಗಿರುವಿರಿ. ॥೪೪॥ ಸೋಽಹಂ. ಆ ನಾನು, ಯಥಾಧೀತಂ - ಕಲಿತಿರುವಷ್ಟರಲ್ಲಿ, ಯಥಾಮತಿ - ನನ್ನಬುದ್ಧಿಗೆ ತೋರಿದಮಟ್ಟಿಗೆ, ವಃ-ನಿಮಗೆ, ಶ್ರಾವಯಿಷ್ಯಾಮಿ - ಶ್ರವಣಮಾಡಿಸುತ್ತೇನೆ, ಕೃಷ್ಣೇ - ಶ್ರೀಕೃಷ್ಣನು, ಧರ್ಮಜ್ಞಾನಾದಿಭಿ ಸ್ಸಹ, ಧರ್ಮ. ಜ್ಞಾನ, ಮೊದಲಾದವುಗಳೊಡನೆ, ಸ್ವಧಾಮ-ತನ್ನ ನೆಲೆಯನ್ನು, ಉಪಗತೇ-ಹೊಂದಲು, ಕಲೌ-ಕಲಿಯುಗದಲ್ಲಿ ನಷ್ಟದೃಶಾಂ-ವಿವೇಕವೆಂಬ ಕಣ್ಣಿಲ್ಲದಜನರಿಗೆ, ಏಷಃ-ಈ, ಪುರಾಣಾರ್ಕಃ-ಭಾಗವತ ಪುರಾಣವೆಂಬ ಸೂರ್ಯನು, ಅಧುನಾ-ಈಗ, ಉದಿತಃ-ಹುಟ್ಟಿದನು. ॥೪೫॥

ತೃತೀಯಾಧ್ಯಾಯಂ ಸಮಾಪ್ತಂ.

ಮೊದಲಾದವು ಕ್ಷೀಣವಾಗಲು, ಈ ಕಲಿಯುಗದಲ್ಲಿ ಸಂಸಾರವೆಂಬ ಕಗ್ಗತ್ತಲೆಯಲ್ಲಿ ಸಿಕ್ಕಿ ಜ್ಞಾನವೆಂಬಕಣ್ಣನ್ನು ಕಳೆದುಕೊಂಡ ಜನರ ಕ್ಷೇಮಕ್ಕಾಗಿ ಈ ಭಾಗವತಪುರಾಣವೆಂಬ ಸೂರ್ಯನುದಯಿಸಿದನು, ಎಂದು ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ,

—ಭಾಗವತ ಚಕೋರ ಚಂದ್ರಿಕೆಯೊಳ್ ಮೂರನೆಯಧ್ಯಾಯಂ ಮುಗಿದುದು—

ಓಂ ನಮಃ ಪರಮಾತ್ಮನೇ.

ವ್ಯಾಸಃ:-ಇತಿ ಬ್ರುವಾಣಂ ಸಂಸ್ತೂಯ ಮುನೀನಾಂ ದೀರ್ಘಸತ್ರಿಣಾಂ । ವೃದ್ಧಃ
ಕುಲಪತಿ ಸ್ಸೂತಂ ಬಹ್ವೃಚ ಶ್ಶೌನಕೋಽಬ್ರವೀತ್ ॥೧॥ ಶೌನಕಃ। ಸೂತ

ದೀರ್ಘಸತ್ರಿಣಾಂ, ದೀರ್ಘ - ಸಾವಿರಾರುವರ್ಷನಡೆಯುವ, ಸತ್ರಿಣಾಂ - ಯಾಗವನ್ನು ಮಾಡುವ, ಮುನೀನಾಂ-ಋಷಿಗಳಮಧ್ಯದಲ್ಲಿ, ವೃದ್ಧಃ-ವಯೋವೃದ್ಧನಾಗಿಯೂ, ಕುಲಪತಿಃ, ಕುಲ - ಋಷಿಮಂಡಲಿಗೆ, ಪತಿಃ-ನಿಯಾಮಕನಾಗಿಯೂ, ಬಹ್ವೃಚಃ-ಋಗ್ವೇದಿಯಾಗಿಯೂಇರುವ, ಶೌನಕಃ - ಶೌನಕ ಮುನಿಯು, ಇತಿ-ಹೀಗೆಂದು, ಬ್ರುವಾಣಂ-ಹೇಳುತ್ತಿರುವ, ಸೂತಂ - ಸೂತಪೌರಾಣಿಕನನ್ನು, ಸಂಸ್ತೂಯ-ಹೊಗಳಿ, ಅಬ್ರವೀತ್-ಹೇಳಿದನು, ॥೧॥ ಶೌನಕಃ-ಶೌನಕನು ಹೇಳುತ್ತಾನೆ, ಮಹಾಭಾಗ - ಮಹಾ

ವ್ಯಾಸಮುನಿಯು ಭಾಗವತವನ್ನು ರಚಿಸುವುದಕ್ಕೆ ಕಾರಣ.

ಕಂ॥ ಘನತಪದಿಂ ಶಾಸ್ತ್ರ ಸ್ರುವ । ಜನದಿಂದಂ ಶಾಂತಿಯೊಂದದಾವ್ಯಾಸಮುನೀಂ ॥
ದ್ರನ ಚಿಂತಿಸಿ ಭಾಗವತಂ । ಜನಿಸುವುದಕೆ ಹೇತುವೆನುತೆ ಪೇಳಲ್ಪಡುಗುಂ॥

ಆನಂತರದಲ್ಲಿ ಸತ್ರಯಾಗವನ್ನು ಮಾಡುವ ಋಷಿಮಂಡಲಿಯಲ್ಲಿ ವೃದ್ಧನಾಗಿಯೂ ಕುಲಪತಿಯಾಗಿಯೂ,ಋಗ್ವೇದಿಯಾಗಿಯೂ ಇರುವ ಶೌನಕಋಷಿಯು,ಮೇಲೆ ಹೇಳಿದಂತೆ

ಸೂತ ಮಹಾಭಾಗವದ ನೋ ವದತಾಂವರ । ಕಥಾಂ ಭಾಗವತೀಂ ಪುಣ್ಯಾಂ ಯದಾಹ ಭಗವಾಂ ಚ್ಛುಕಃ ॥ ೨ ॥ ಕಸ್ಮಿನ್ ಯುಗೇ ಪ್ರವೃತ್ತೇಯಂ ಸ್ಥಾನೇ ವಾ ಕೇನ ಹೇತುನಾ । ಕುತ ಸ್ಸಂಚೋದಿತಃ ಕೃಷ್ಣಃ ಕೃತವಾಂ ತ್ಸಂಹಿತಾಂ ಮುನಿಃ ॥೩॥ ತಸ್ಯ ಪುತ್ರೋ ಮಹಾಯೋಗೀ ಸಮದೃಙ್ನಿರ್ವಿ ಕಲ್ಪಕಃ । ಏಕಾಂತಮತಿ ರುನ್ನಿದ್ರೋ ಗೂಢೋ ಮೂಢಇವೇಹತೇ ॥ ೪ ॥ ಕಥ ಮಾಲಕ್ಷಿತಃ ಪೌರೈ ಸ್ಸಂಪ್ರಾಪ್ತಃ ಕುರುಜಾಂಗಲಾನ್ । ಉನ್ಮತ್ತ

ಮಹಿಮನಾದ, ವದತಾಂ - ವಾಗ್ಮಿಗಳಲ್ಲಿ, ವರ - ಶ್ರೇಷ್ಠನಾದ, ಸೂತ - ಸೂತಮುನಿಯೆ ! ಭಗವಾನ್ ಪೂಜ್ಯನಾದ, ಶುಕಃ-ಶುಕಮುನಿಯು, ಯತ್-ಯಾವಕಥೆಯನ್ನು, ಆಹ - ಹೇಳುತ್ತಾನೋ, ಭಾಗವತೀಂ - ಭಗವಂತನನ್ನು ಉದ್ದೇಶಿಸಿ ಮಾಡಿರುವ, ಪುಣ್ಯಾಂ - ಪುಣ್ಯವನ್ನುಂಟುಮಾಡುವ, ಕಥಾಂ-ಆಕಥೆಯನ್ನು, ನಃ - ನಮಗೆ, ವದ-ಹೇಳು ॥ ೧ ॥ ಇಯಂ - ಈ ಭಾಗವತಕಥೆಯು, ಕಸ್ಮಿನ್-ಯಾವ, ಯುಗೇ-ಯುಗದಲ್ಲಿ, ಸ್ಥಾನೇ-ಯಾವಸ್ಥಾನದಲ್ಲಿ, ಕೇನ-ಯಾವ, ಹೇತುನಾ-ಕಾರಣದಿಂದ, ಪ್ರವೃತ್ತಾ-ಉಂಟಾಯಿತು ? ಕೃಷ್ಣಃಮುನಿಃ - ವ್ಯಾಸಮುನಿಯು, ಕುತಃ-ಯಾರಿಂದ, ಸಂಚೋದಿತಃ-ಪ್ರೇರಿಸಲ್ಪಟ್ಟವನಾಗಿ, ಸಂಹಿತಾಂ-ಈಭಾಗವತ ಸಂಹಿತೆಯನ್ನು, ಕೃತವಾನ್-ಮಾಡಿದನು ? ॥೩॥ ಮಹಾಯೋಗೀ-ಯೋಗೀಶ್ವರನಾದ, ಸಮದೃಕ್, ಸಮ-ಬ್ರಹ್ಮವನ್ನು, ದೃಕ್-ನೋಡುವವನಾದುದರಿಂದಲೇ, ನಿರ್ವಿಕಲ್ಪಕಃ-ಭೇದರಹಿತನಾಗಿಯೂ, ಏಕಾಂತಮತಿಃ, ಏಕ - ಒಂದೇಕಡೆಯಲ್ಲಿ, ಅಂತ - ಸಮಾಪ್ತಿಯುಳ್ಳ-ಮತಿಃ-ಬುದ್ಧಿಯುಳ್ಳವನಾಗಿಯೂ, ಉನ್ನಿದ್ರಃ-ಮಾಯೆಯೆಂಬ ನಿದ್ದೆಯಿಂದೆಚ್ಚತ್ತವನಾಗಿಯೂ, ಗೂಢಃ-ಗುಪ್ತನಾಗಿಯೂ, ಮೂಢಇವ-ಮೂಢನಂತೆ, ಈಹತೇ - ಇರಲಪೇಕ್ಷಿಸುವವನಾಗಿಯೂ ಇರುವ, ತಸ್ಯ, ಆವ್ಯಾಸಮುನಿಯ ಪುತ್ರಃ-ಮಗನಾದಶುಕಮುನಿಯು ॥ ೪ ॥ ಕುರುಜಾಂಗಲಾನ್, ಕುರು-ಕುರುದೇಶಗಳನ್ನೂ, ಜಾಂಗಲಾನ್ - ಜಾಂಗಲದೇಶಗಳನ್ನೂ, ಸಂಪ್ರಾಪ್ತಃ - ಹೊಂದಿದವನಾಗಿ, ಗಜಸಾಹ್ವಯೇ, ಹಸ್ತಿನಾವತಿಯಲ್ಲಿ, ಉನ್ಮತ್ತಮೂಕಜಡವತ್, ಉನ್ಮತ್ತ - ಹುಚ್ಚನಂತೆಯೂ, ಮೂಕ - ಮೂಗನಂತೆಯೂ, ಜಡವತ್ - ಮೂಢನಂತೆಯೂ, ವಿಚರನ್ - ಸಂಚರಿಸುವ, ಆ ಶುಕಮುನಿಯು, ಪೌರೈಃ-

---

ಭಾಗವತ ಕಥೆಯನ್ನು ಹೇಳುತ್ತೇನೆಂದು ಪೇಳಿದ ಸೂತಪೌರಾಣಿಕನನ್ನು ಹೊಗಳಿ, ಇಂತು ಹೇಳುತ್ತಾನೆ ॥೧॥ ಅಯ್ಯಾ ಪೌರಾಣಿಕರಲ್ಲಿ ಶ್ರೇಷ್ಠನಾದ ಸೂತನೆ! ಮಹಾತ್ಮನಾದ ಶುಕುಮುನಿಯು ವಿವರಿಸಿದ ಭಾಗವತ ಕಥೆಯನ್ನು ನಮಗೆ ತಿಳುಹಿಸು ॥೨॥ ಈ ಕಥೆಯು ಯಾವ ಯುಗದಲ್ಲಿ ಯಾವ ಸ್ಥಳದಲ್ಲಿ, ಏತಕ್ಕಾಗಿ ಉಂಟಾಯಿತು ? ವ್ಯಾಸಮುನಿಯು ಯಾರಿಂದ ಪ್ರೇರಿತನಾಗಿ ಈ ಪುರಾಣವನ್ನು ವಿರಚಿಸಿದನು ? ॥೩॥ ಅಲ್ಲದೆ ಇದನ್ನು ವ್ಯಾಸಮುನಿಯು ಶುಕನಿಗೆ ಕಲಿಸಿದನೆಂದು ಹೇಳಿದೆ. ಅದು ಆಶ್ಚರ್ಯವಾಗಿರುವುದು. ಏಕೆಂದರೆ ಆ ಶುಕನು ಮಹಾಯೋಗಿಯು, ಬ್ರಹ್ಮಜ್ಞಾನಿಯು, ಭೇದರಹಿತನು ನಿಶ್ಚಲಬುದ್ಧಿಯುಳ್ಳವನು, ಮಾಯೆಗೆ ಸಿಕ್ಕುವವನಲ್ಲ ತನ್ನ ಮಹಿಮೆಯನ್ನು ಹೊರಪಡಿಸುವವನೂ ಅಲ್ಲ, ಯಾವಾಗಲೂ ಮೂಢನಂತೆ ಇರುವವನು ॥೪॥ ಇಂತಹ ಆ ಶುಕಮುನಿಯು ಹುಚ್ಚನಂತೆ ಚೇಷ್ಟೆಯನ್ನು ಮಾಡುತ್ತಾ, ಮೂಗನಂತೆ ಮಾತಾಡದೆಯೂ, ಜಡನಂತೆ ಹಾಸ್ಯಾಸ್ಪದನಾಗಿ ಕುರುಜಾಂಗಲ ದೇಶಗಳಲ್ಲಿಯೂ, ಹಸ್ತಿನಾವತಿಯಲ್ಲಿ

ಮೂಕಜಡವ ದ್ವಿಚರನ್ ಗಜಸಾಹ್ವಯೇ ॥ ೫ ॥ ದೃಷ್ಟ್ವಾನುಯಾಂತ ಮೃಷಿಮಾತ್ಮಜಮಪ್ಯನಗ್ನಂ ದೇವ್ಯೋ ಹ್ರಿಯಾ ಪರಿದಧುರ್ನಸುತಸ್ಯಚಿತ್ರಂ। ತದ್ವೀಕ್ಷ್ಯ ಪೃಚ್ಛತಿ ಮುನೌ ಜಗದು ಸ್ತವಾಸ್ತಿ ಸ್ತ್ರೀಪುಂಭಿದಾ ನತು ಸುತಸ್ಯ ವಿವಿಕ್ತದೃಷ್ಟೇಃ ॥ ೬ ॥ ಕಥಂವಾ ಪಾಂಡವೇಯಸ್ಯ ರಾಜರ್ಷೇ ರ್ಮುನಿನಾ ಸಹ । ಸಂವಾದ ಸ್ಸಮಭೂತ್ತಾತ ಯತ್ರೈಷಾ ಸಾತ್ವತೀ ಶ್ರುತಿಃ॥ ೭ ॥ ಸ * ಗೋದೋಹನಮಾತ್ರಂ ಹಿ ಗೃಹೇಷು ಗೃಹಮೇಧಿನಾಂ।

ಆಪಟ್ಟಣಿಗರಿಂದ, ಕಥಂ- ಹೇಗೆ, ಅಲಕ್ಷಿತಃ-ಕಾಣಲ್ಪಲ್ಪಟ್ಟನು ? ॥ ೫ ॥ ಆತ್ಮಜಂ - ಮಗನಾದ, ಅನುಯಾಂತಂ-ಹಿಂಬಾಲಿಸುತ್ತಿರುವ, ಋಷಿಂ - ವ್ಯಾಸಮುನಿಯನ್ನು, ಅನಗ್ನಮಪಿ - ಬೆತ್ತಲೆಯಿಲ್ಲದಿದ್ದರೂ, ದೃಷ್ಟ್ವಾ-ಕಂಡು, ದೇವ್ಯಃ ದೇವತಾಸ್ತ್ರೀಯರು, ಹ್ರಿಯಾ-ನಾಚಿಕೆಯಿಂದ, ಪರಿದಧುಃ-ವಸ್ತ್ರಗಳನ್ನುಟ್ಟರು, ಸುತಸ್ಯ - ಮಗನಾದಶುಕನು, ನಗ್ನಸ್ಯಾಪಿ-ಬೆತ್ತಲೆಯಿದ್ದರೂ, ನಪರಿದಧುಃ-ವಸ್ತ್ರಗಳನ್ನುಡಲಿಲ್ಲ. ಚಿತ್ರಂ - ಆಶ್ಚರ್ಯವು, ತತ್ - ಅದನ್ನು, ಅವೇಕ್ಷ್ಯ-ಕಂಡು, ಮುನೌ - ವ್ಯಾಸಮುನಿಯು, ಪೃಚ್ಛತಿಸತಿ-ಕಾರಣವನ್ನುಕೇಳಲು, (ಅವರು) ತವ-ನಿನಗೆ, ಸ್ತ್ರೀಪುಂಭಿದಾ-ಹೆಣ್ಣು ಗಂಡೆಂಬಭೇದವು, ಅಸ್ತಿ-ಉಂಟು, ವಿವಿಕ್ತದೃಷ್ಟೇಃ, ವಿವಿಕ್ತ-ಪರಿಶುದ್ಧವಾದ, ಅಥವಾ ಜಗದ್ವಿಲಕ್ಷಣವಾದ ಬ್ರಹ್ಮನಲ್ಲಿಯೇ ದೃಷ್ಟೇಃ-ದೃಷ್ಟಿಯುಳ್ಳ, ಸುತಸ್ಯತು-ಮಗನಾದ ಶುಕನಿಗಾದರೋ, ನ-ಇಲ್ಲ, ಎಂದು ಜಗದುಃ-ಹೇಳಿದರು ॥ ೬ ॥ ತಾತ-ಅಪ್ಪಾ ಸೂತನೆ ! ಪಾಂಡವೇಯಸ್ಯ - ಪಾಂಡವ ಪುತ್ರನಾದ, ರಾಜರ್ಷೇಃ-ರಾಜರ್ಷಿಯಾದ ಪರೀಕ್ಷಿತ್ತಿಗೆ, ಮುನಿನಾಸಹ. ಶುಕಮುನಿಯೊಡನೆ, ಸಂವಾದಃ-ಸಂಭಾಷಣೆಯು, ಕಥಂ-ಹೇಗೆ ಸಮಭೂತ್-ನಡೆಯಿತು ! ಯತ್ರ-ಯಾವ ಸಂವಾದದಲ್ಲಿ, ಏಷಾ-ಈ, ಸಾತ್ವತೀ - ಭಗವಂತನಸಂಬಂಧಿಯಾದ, ಶ್ರುತಿಃ-ಭಕ್ತಿ ಶಾಸ್ತ್ರವು ಉಂಟಾಯಿತೋ ॥ ೭ ॥ ಮಹಾಭಾಗಃ - ಮಹಾತ್ಮನಾದ ಆ ಶುಕ ಮುನಿಯು, ಗೃಹಮೇಧಿನಾಂ - ಗೃಹಸ್ಥರ, ಗೃಹೇಷು-ಮನೆಗಳಲ್ಲಿ, ತದಾಶ್ರಮಂ - ಅವರ ಮನೆಗಳನ್ನು ತೀರ್ಥೀಕುರ್ವನ್-ಪವಿತ್ರಗೊಳಿಸತಕ್ಕವನಾಗಿ, ಗೋದೋಹನಮಾತ್ರಂ-ಆಕಳಹಾಲನ್ನು ಕರೆಯುವಷ್ಟ

ಯೂ ಸಂಚರಿಸುತ್ತಿರುವಾಗ, ಅಲ್ಲಿಯುವರು ಅವನನ್ನು ಎಂತು ಕಂಡುಹಿಡಿದರು ? ॥೫॥ ಮತ್ತು ಸಮದೃಷ್ಟಿಯುಳ್ಳವನೆಂದರೆ ಆತನೇ ಅಲ್ಲವೆ ? ನಗ್ನನಾಗಿ ಓಡಿಹೋದ ಯಾವ ಮಗನನ್ನು ಹಿಂಬಾಲಿಸುತ್ತಿರುವ ವ್ಯಾಸಮುನಿಯು ವಸ್ತ್ರಧಾರಿಯಾಗಿದ್ದರೂ ದಾರಿಯಲ್ಲಿ ಜಲಕ್ರೀಡೆಯನ್ನು ಮಾಡುತ್ತಿದ್ದ ಅಪ್ಸರಸ್ತ್ರೀಯರು ಆತನನ್ನು ಕಂಡು ನಾಚಿಕೆಗೊಂಡು ವಸ್ತ್ರಗಳನ್ನುಟ್ಟರೋ, ಯೌವ್ವನಸ್ಥನಾದ ಶುಕನು ಬೆತ್ತಲೆಯಿದ್ದರೂ ನಾಚಿಕೆಪಡಲಿಲ್ಲವೊ, ಅದನ್ನು ಕಂಡು ವ್ಯಾಸಮುನಿಯು ಕಾರಣವನ್ನು ಬೆಸಗೊಳಲು, ಆ ಸ್ತ್ರೀಯರು, ಎಲೈ ವ್ಯಾಸಮುನಿಯೇ ಗಂಡು ಹೆಣ್ಣೆಂಬ ಭೇದಜ್ಞಾನವು ನಿನಗಿರುವುದೇ ಹೊರತು ಸಮದೃಷ್ಟಿಯುಳ್ಳ ನಿನ್ನ ಮಗನಿಗಿಲ್ಲವೆಂದು ಹೇಳಿದರೋ, ॥೬॥ ಅಂತಹ ಶುಕಮುನಿಯು ಪರೀಕ್ಷಿದ್ರಾಜನಿಗೆ ಈ ಭಾಗವತ ಕಥೆಯನ್ನು ಹೇಳಿದ್ದೆಂತು ? ॥೭॥ ಅಲ್ಲದೆ ಆ ಮಹಾತ್ಮನೆಂದು ಗೃಹಸ್ಥರ ಮನೆಗಳಿಗೆ ಬಂದರೂ, ಅವುಗಳನ್ನು ಪವಿತ್ರಗೊಳಿಸುವುದಕ್ಕಾಗಿ

* ದೋ-ದೋಹನೀವ್ಯಾಖ್ಯಾ, ಹದಿನೈದುಕಲೆಗಳಕಾಲ.

ಅವೇಕ್ಷತೇ ಮಹಾಭಾಗ ಸ್ತೀರ್ಥೀಕುರ್ವಂ ಸ್ತದಾಶ್ರಮಂ ॥ ೮ ॥ ಅಭಿಮನ್ಯುಸುತಂ ಸೂತ ಪ್ರಾಹು ರ್ಭಾಗವತೋತ್ತಮಂ । ತಸ್ಯ ಜನ್ಮ ಮಹಾಶ್ಚರ್ಯಂ ಕರ್ಮಾಣೀಚ ಗೃಣೀಹಿ ನಃ ॥೯॥ ಸಸಮ್ರಾ ಟ್ಕಸ್ಯವಾ ಹೇತೋಃ ಪಾಂಡೂನಾಂ ಮಾನವರ್ಧನಃ । ಪ್ರಾಯೋಪವಿಷ್ಟೋ ಗಂಗಾಯಾ ಮನಾದೃತ್ಯಾಧಿರಾಟ್ಶ್ರಿಯಂ ॥೧೦॥ ನಮಂತಿ ಯತ್ಪಾದನಿಕೇ ಮಾತ್ಮನ ಶ್ಶಿವಾಯ ಚಾನೀಯ ಧನಾನಿ ಶತ್ರವಃ । ಕಥಂಸವೀರ ಶ್ಶ್ರಿಯ ಮಂಗ ದುಸ್ತ್ಯಜಾಂ ಯುವೈಷತೋ ತ್ಸ್ರಷ್ಟುಮಹೋ ಸಹಾಸುಭಿಃ ॥ ೧೦ ॥ ಶಿವಾಯ ಲೋಕಸ್ಯ ಭವಾಯ ಭೂತಯೇ ಯ ಉತ್ತಮಶ್ಲೋಕಪರಾಯಣಾ ಜನಾಃ।

ಕಾಲವು, 'ನಿರೀಕ್ಷತೆ-ನಿರೀಕ್ಷಿಸುವನೋ, ಆಹಾರಾರ್ಥವಾಗಿ, ನ-ಅಲ್ಲವೋ ॥ ೮ ॥ ಸೂತ-ಎಲೈಸೂತನೆ ! ಅಭಿಮನ್ಯುಸುತಂ, ;ಅಭಿಮನ್ಯು-ಅಭಿಮನ್ಯುವಿಗೆ, ಸುತಂ-ಮಗನಾದ ಪರೀಕ್ಷಿತ್ತನ್ನು, ಭಾಗವತೋತ್ತಮಂ-ಭಗವದ್ಭಕ್ತರಲ್ಲಿ ಶ್ರೇಷ್ಠನನ್ನಾಗಿ, ಪ್ರಾಹುಃ - ಹೇಳುತ್ತಾರೆ, ತಸ್ಯ - ಅವನ, ಮಹಾಶ್ಚರ್ಯಂ-ಬಹಳ ಆಶ್ಚರ್ಯವನ್ನುಂಟುಮಾಡುವ, ಜನ್ಮ-ಜನ್ಮವನ್ನು,- ಕರ್ಮಾಣೀಚ-ಕರ್ಮಗಳನ್ನೂ, ನಃ ನಮಗೆ ಗೃಣೀಹಿ-ಹೇಳು ॥ ೯ ॥ ಪಾಂಡೂನಾಂ - ಪಾಂಡವರ, ಮಾನವರ್ಧನಃ- ಕೀರ್ತಿಯನ್ನು ಬೆಳೆಯಿಸುವ, ಸಃ-ಆ, ಸಮ್ರಾಟ್-ಚಕ್ರವರ್ತಿಯು, ಅಧಿರಾಟ್ಶ್ರಿಯಂ-ಚಕ್ರವರ್ತಿ ಪದವಿಯನ್ನು, ಅನಾದೃತ್ಯ-ಅಸಡ್ಡೆಗೈದು, ಕಸ್ಯವಾ-ಯಾವ, ಹೇತೋಃ-ಕಾರಣದಿಂದ, ಗಂಗಾಯಾಂ - ಗಂಗೆಯಲ್ಲಿ, ಪ್ರಾಯೋಪವಿಷ್ಟಃ-ಪ್ರಾಯೋಪವೇಶವನ್ನುಮಾಡಿದನು ? ॥ ೧೦ ॥ ಶತ್ರವಃ-ಶತ್ರುಗಳು, ಆತ್ಮನಃ-ತಮ್ಮ, ಶಿವಾಯ-ಕ್ಷೇಮಕ್ಕಾಗಿ, ಧನಾನಿಚ-ಧನರತ್ನಾದಿಗಳನ್ನು, ಆನೀಯ - ತಂದು, ಯತ್ಪಾದನಿಕೇತಂ, ಯತ್ - ಯಾವನ, ಪಾದ-ಪಾದಗಳ, ನಿಕೇತಂ-ಪೀಠವನ್ನು, ನಮಂತಿ-ವಂದಿಸುವರೋ, ಅಂಗ-ಪ್ರಿಯನಾದಸೂತನೆ! ಯುವಾ ಯೌವ್ವನಸ್ಥನಾದ, ವೀರಃ - ಶೂರನಾದ, ಸಃ - ಆ ಪರೀಕ್ಷಿದ್ರಾಜನು, ಅಸುಭಿಸ್ಸಹ - ಪ್ರಾಣಗಳೊಡನೆ, ದುಸ್ತ್ಯಜಾಂ-ವಿರಕ್ತರಿಂದಲೂ ಬಿಡಲಾಗದ, ಶ್ರಿಯಂ-ಸಂಪತ್ತನ್ನು, ಉತ್ಸ್ರಷ್ಟುಂ-ಬಿಡುವುದಕ್ಕೆ, ಕಥಂ-ಹೇಗೆ, ಐಷತ-ಬಯಸಿದನು ? ಅಹೋ-ಆಶ್ಚರ್ಯವು ॥ ೧೧ ॥ ಯೇ-ಯಾವ, ಜನಾಃ-ಜನರು, ಉತ್ತಮಶ್ಲೋಕಪರಾಯಣಾಃ, ಉತ್ತಮಶ್ಲೋಕ-ಭಗವಂತನೇ, ಪರಾಯಣಾಃ-ಪ್ರಾಪ್ಯಸ್ಥಾನವಾಗಿಉಳ್ಳವರೋ,

ಗೋದೋಹನ ಮಾತ್ರನಿಲ್ಲುವನೇ ಹೊರತು ಬಿಕ್ಷಾರ್ಥಿಯಾಗಿ ನಿಲ್ಲತಕ್ಕವನಲ್ಲ. ಇಂತವನು ಸಾವಕಾಶವಾಗಿ ಕುಳಿತು ಈ ಪುರಾಣವನ್ನು ವಿವರಿಸಿದ್ದೆಂತು ? ॥೮॥ ಇದಕ್ಕನುಗುಣವಾಗಿ ಈ ಪುರಾಣವನ್ನು ಕೇಳಿದ ಮಹಾಭಾಗವತೋತ್ತಮನಾದ ಪರೀಕ್ಷಿದ್ರಾಜನ ಜನ್ಮಕರ್ಮಗಳೂ ಆಶ್ಚರ್ಯಕರಗಳಾಗಿರುವುವು ॥೯॥ ಪಾಂಡವರಿಗಿಂತಲೂ ಕೀರ್ತಿಶಾಲಿಯಾದ ಆ ಚಕ್ರವರ್ತಿಯು ಸಕಲ ಸಂಪತ್ತನ್ನೂ ನಿರಾಕರಿಸಿ ಗಂಗೆಯಲ್ಲಿ ಪ್ರಾಯೋಪವೇಶವನ್ನು ಮಾಡಿದುದೇಕೆ ? ॥೧೦॥ ಸಕಲ ಶತ್ರುರಾಜರೂ ಧನಕನಕಾದಿಗಳನ್ನು ತಂದು ಕಾಣಿಕೆಗೊಟ್ಟು ಪಾದಪೀಠಕ್ಕೆರಗುತ್ತಿದ್ದುದರಿಂದ ಆತನು ಮಹಾಶೂರನೇ ಹೊರತು ಕೈಲಾಗದವನಲ್ಲ, ಇಂತವನು ಎಂತಹ ವಿರಕ್ತರಿಗೂ ಬಿಡುವುದಕ್ಕಾಗದ ಅಖಂಡೈಶ್ವರ್ಯವನ್ನೂ, ಪ್ರಾಣಗಳನ್ನೂ ಸಹ ಯೌವನದಲ್ಲಿಯೇ ಬಿಡಬೇಕೆಂದು ನಿಶ್ಚಯಿಸಲು ಕಾರಣವೇನು ? ॥೧೧॥ ಭಗವದ್ಭಕ್ತಿಪರಾಯಣರಾದ ಜನರು ವಿರಕ್ತರಾಗಿ

ಜೀವಂತಿ ನಾತ್ಮಾರ್ಥ ಮಸೌ ಪರಾಶ್ರಯಂ ಮುಮೋಚ ನಿರ್ವಿದ್ಯ ಕುತಃ ಕಳೇಬರಂ॥೧೧॥ ತತ್ಸರ್ವಂ ನ ಸ್ಸಮಾಚಕ್ಷ್ವ ಪೃಷ್ಟೋ † ಯದಿಹ ಕಿಂಚನ ಮನ್ಯೇ ತ್ವಾಂ ವಿಷಯೇ ವಾಚಾಂ ಸ್ನಾತ ‡ ಮನ್ಯತ್ರ ಛಾಂದಸಾತ್॥೧೨॥ ಶ್ರೀಸೂತಃ॥ ದ್ವಾಪರೇ ಸಮನುಪ್ರಾಪ್ತೇ ತೃತೀಯೇ ಯುಗಪರ್ಯಯೇ। ಜಾತಃ ಪರಾಶರಾ ದ್ಯೋಗೀ ವಾಸವ್ಯಾಂ ಕಳಯಾ ಹರೇಃ ॥ ೧೪ ॥ ಸ ಕದಾಚಿ ತ್ಸರಸ್ವತ್ಯಾ ಉಪಸ್ಪೃಶ್ಯ ಜಲಂ ಶುಚಿ । ವಿವಿಕ್ತ ಏಕ ಆಸೀನ

ತೇ-ಅವರು, ಲೋಕಸ್ಯ-ಪ್ರಪಂಚದ, ಶಿವಾಯ-ಕ್ಷೇಮಕ್ಕಾಗಿಯೂ, ಭವಾಯ - ಅಭಿವೃದ್ಧಿಗಾಗಿಯೂ ಭೂತಯೇಚ-ಐಶ್ವರ್ಯಕ್ಕಾಗಿಯೂ ಸಹ, ಜೀವಂತಿ-ಬದುಕುವರು, ಆತ್ಮಾರ್ಥಂ - ತಮ್ಮ ಸುಖಕ್ಕಾಗಿ ನ-ಬದುಕುವವರಲ್ಲ, ಅಸೌ- ಈ ಪರೀಕ್ಷಿದ್ರಾಜನು, ಪರಾಶ್ರಯಂ, ಪರ-ಇತರರಿಗೆ, ಆಶ್ರಯಂ-ಆಶ್ರಯವಾಗಿರುವ, ಕಳೇಬರಂ-ಶರೀರವನ್ನು, ನಿರ್ವಿದ್ಯ-ವಿರಕ್ತನಾಗಿ. ಕುತಃ-ಏತಕ್ಕೆ, ಮುಮೋಚ-ಬಿಟ್ಟನು? ॥ ೧೧ ॥ ಇಹ-ಈ ವಿಷಯದಲ್ಲಿ, ಯತ್ಕಿಂಚನ-ಯಾವುದನ್ನು, ಪೃಷ್ಟಃ-ಕೇಳಲ್ಪಟ್ಟಿರುವೆಯೋ, ತತ್ಸರ್ವಂ-ಅದೆಲ್ಲವನ್ನೂ ನಃ-ನಮಗೆ, ಸಮಾಚಕ್ಷ್ವ-ಹೇಳು, ಏಕೆಂದರೆ, ಛಾಂದಸಾತ್ - ವೇದಕ್ಕಿಂತಲೂ, ಅನ್ಯತ್ರ-ಬೇರೆ, ವಾಚಾಂ-ವಾಕ್ಯಗಳ, ವಿಷಯೇ-ವಿಷಯದಲ್ಲಿ, ತ್ವಾಂ-ನಿನ್ನನ್ನು, ಸ್ನಾತಂ - ಪಂಡಿತನನ್ನಾಗಿ, ಮನ್ಯೇ - ತಿಳಿಯುತ್ತೇನೆ ॥೧೨॥ ಸೂತಃ-ಸೂತನು ಹೇಳುತ್ತಾನೆ, ತೃತೀಯೇ-ಮೂರನೆಯದಾದ, ದ್ವಾಪರೇ-ದ್ವಾಪರಯುಗವು, ಸಮನುಪ್ರಾಪ್ತೇ-ಪ್ರಾಪ್ತವಾಗಲು, ಯುಗಪರ್ಯಯೇ, ಯುಗ - ದ್ವಾಪರಯುಗದ, ಪರ್ಯಯೇ - ಕಡೆಯಲ್ಲಿ. ಯೋಗೀ-ಯೋಗಾಭ್ಯಾಸ ನಿಪುಣನಾದ ವ್ಯಾಸಮುನಿಯು, ಪರಾಶರಾತ್ - ಪರಾಶರಮುನಿಯಿಂದ, ವಾಸವ್ಯಾಂ-ಉಪರಿಚರವಸುವಿನಮಗಳಾದ ಸತ್ಯವತೀದೇವಿಯಲ್ಲಿ, ಹರೇಃ-ವಿಷ್ಣುವಿನ, ಕಳಯಾ - ಅಂಶದಿಂದ, ಜಾತಃ-ಹುಟ್ಟಿದನು ॥೧೪॥ ಸಃ-ಆವ್ಯಾಸಮುನಿಯು, ಕದಾಚಿತ್-ಒಂದುದಿನ, ಸರಸ್ವತ್ಯಾಃ-ಸರಸ್ವತೀನದಿಯ. ಶುಚಿ-ಪರಿಶುದ್ಧವಾದ, ಜಲಂ-ಉದಕವನ್ನು, ಉಪಸ್ಪೃಶ್ಯ-ಆಚಮನವನ್ನುಮಾಡಿ,

ದ್ದರೂ ಪ್ರಪಂಚ ಕ್ಷೇಮಕ್ಕೂ ಅಭಿವೃದ್ಧಿಗಾಗಿಯೂ, ಐಶ್ವರ್ಯಕ್ಕಾಗಿಯೂ ಬದುಕಿರುವರೇ ಹೊರತು ತಮ್ಮ ಸುಖಕ್ಕಾಗಿ ಅಲ್ಲ. ಹೀಗಿರುವಲ್ಲಿ ಈ ರಾಜನು ಇತರರಿಗೆ ಆಶ್ರಯವಾಗಿದ್ದ ಕಳೇಬರವನ್ನು ಏತಕ್ಕೆ ಬಿಟ್ಟನು ? ॥ ೧೨ ॥ ನೀನು ವೇದಗಳು ಹೊರತು ಮಿಕ್ಕ ಸಕಲ ಪುರಾಣೇತಿಹಾಸಗಳ ಅರ್ಥಗಳನ್ನು ವಿವರಿಸುವುದರಲ್ಲಿ ನಿಪುಣನೆನಿಸಿ ಪಟ್ಟಾಭಿಷಿಕ್ತನಾಗಿರುವುದರಿಂದ ನಾವು ಕೇಳಿದುದೆಲ್ಲವನ್ನೂ ತಿಳುಹುವನಾಗು, ಎಂದು ಬೆಸಗೊಳಲು, ಸೂತಪೌರಾಣಿಕನು ಹೇಳುವುದೆಂತೆನೆ ॥೧೪॥ ಅಯ್ಯಾ ಋಷಿಗಳಿರಾ! ಕೇಳಿರಿ. ಮೂರನೆಯ ದ್ವಾಪರಯುಗದ ಕಡೆಯಲ್ಲಿ ಪರಾಶರಮುನಿಯಿಂದ, ಉಪರಿಚರವಸುವೆಂಬ ರಾಜನಮಗಳಾದ ಸತ್ಯವತಿಯ ಗರ್ಭದಲ್ಲಿ, ಶ್ರೀವಿಷ್ಣುವು ವ್ಯಾಸಮುನಿಯ ರೂಪದಿಂದವತರಿಸಿದನು ॥೧೪॥ ಆವ್ಯಾಸಮುನಿಯು ಒಂದು ದಿನ ನಿರ್ಮಲವಾದ ಸರಸ್ವತೀನದಿಯ ಜಲದಲ್ಲಿ ಸ್ನಾನಾದಿಕೃತ್ಯಗಳನ್ನು ಮಾಡಿಕೊಂಡು ಏಕಾಂತದಲ್ಲಿ ಒಂಟಿಯಾಗಿ ಕುಳಿತುಕೊಂಡು ಸೂರ್ಯೋದಯ ಸಮಯದಲ್ಲಿ, ಯಾರಿಗೂ ತಿಳಿಯದಿರುವ ವೇಗವುಳ್ಳ

† ಪಾ-ಮುದಪಿ, ಯದೇನಿ, ‡ ಸೂತನು ದ್ವಿಜನಲ್ಲವಾದುದರಿಂದ ಅವನಿಗೆ ವೇದಾಧಿಕಾರವಿಲ್ಲ.

ಉದಿತೇ ರವಿಮಂಡಲೇ ॥ ೧೪ ॥ ಪರಾಪರಜ್ಞಃ ಸ್ಸಋಷಿಃ ಕಾಲೇನಾವ್ಯಕ್ತ
ರಂಹಸಾ । ಯುಗಧರ್ಮವ್ಯತಿಕರಂ ಪ್ರಾಪ್ತಂ ಭುವಿ ಯುಗೇಯುಗೇ॥೧೫॥
ಭೌತಿಕಾನಾಂಚ ಭಾವಾನಾಂ ಶಕ್ತಿಹ್ರಾಸಂಚ ತತ್ಕೃತಂ । ಅಶ್ರದ್ದಧಾನಾನ್
ನಿಸ್ಸತ್ವಾನ್ ದುರ್ಮೇಧಾನ್ ಹ್ರಸಿತಾಯುಷಃ॥೧೬॥ § ದುರ್ಬಲಾಂಶ್ಚ ಜನಾನ್
ವೀಕ್ಷ್ಯ ಮುನಿ ರ್ದಿವ್ಯೇನ ಚಕ್ಷುಷಾ । ಸರ್ವವರ್ಣಾಶ್ರಮಾಣಾಂ ಯದ್ದ
ಧ್ಯೌಹಿತ ¶ ಮನುತ್ತಮಂ॥೧೭॥ಚಾತುರ್ಹೋತ್ರಂ ಕರ್ಮಶುದ್ಧಂ ಪ್ರಜಾ
ನಾಂ ವೀಕ್ಷ್ಯ ವೈದಿಕಂ । ವ್ಯದಧಾ ದ್ಯಜ್ಞಸಂತತ್ಯೈ ವೇದ ಮೇಕಂ
ಚತುರ್ವಿಧಂ ॥ ೧೮ ॥ ಋಗ್ಯಜುಸ್ಸಾಮಾ*ಥರ್ವಾಖ್ಯಾ ವೇದಾಶ್ಚತ್ವಾರ

ವಿವಿಕ್ತೇ-ನಿರ್ಜನಪ್ರದೇಶದಲ್ಲಿ, ಏಕಃ-ಒಂಟಿಯಾಗಿ, ಆಸೀನಃ-ಕುಳಿತುಕೊಂಡು, ರವಿಮಂಡಲೇ-ಸೂರ್ಯ ಮಂಡಲವು, ಉದಿತೇಸತಿ-ಹುಟ್ಟಲು, ॥೧೪॥ ಪರಾಪರಜ್ಞಃ, ಪರ-ಕಳೆದುಹೋದುದನ್ನೂ, ಅಪರ-ಮುಂದೆಬರುವದನ್ನೂ, ಜ್ಞಃ-ತಿಳಿದಿರುವ, ಅಥವಾ, ಪರ-ಬ್ರಹ್ಮಸ್ವರೂಪವನ್ನೂ, ಅಪರ-ಇತರ ತತ್ವಗಳನ್ನೂ, ಜ್ಞಃ-ತಿಳಿದಿರುವ, ಸಋಷಿಃ ಆದ್ವೈಪಾಯನ ಮುನಿಯು, ಅವ್ಯಕ್ತರಂಹಸಾ, ಅವ್ಯಕ್ತ - ತಿಳಿಯದೇಯಿರುವ, ರಂಹಸಾ-ವೇಗವುಳ್ಳ, ಕಾಲೇನ - ಕಾಲದಿಂದ, ಯುಗೇಯುಗೇ-ಪ್ರತಿಯುಗದಲ್ಲಿಯೂ, ಭುವಿ-ಭೂಮಿಯಲ್ಲಿ, ಪ್ರಾಪ್ತಂ-ಬರುತ್ತಿರುವ, ಯುಗಧರ್ಮವ್ಯತಿಕರಂ. ಯುಗ-ಯುಗಗಳ, ಧರ್ಮ ಧರ್ಮಗಳ, ವ್ಯತಿಕರಂ-ಸಾಂಕರ್ಯವನ್ನು ॥ ೧೬ ॥ ಮುನಿಃ-ವ್ಯಾಸಮುನಿಯು, ದಿವ್ಯೇನ-ದೇವಯೋಗ್ಯವಾದ, ಚಕ್ಷುಷಾ-ದೃಷ್ಟಿಯಿಂದ, ತತ್ಕೃತಂ, ತತ - ಆಕಾಲದಿಂದ,ಕೃತಂ - ಮಾಡಲ್ಪಟ್ಟ, ಭೌತಿಕಾನಾಂ-ಪಂಚಭೂತಗಳಿಂದುಂಟಾದ, ಭಾವಾನಾಂ-ಪ್ರಾಣಿಗಳ, ಶಕ್ತಿಹ್ರಾಸಂ-ಬಲಹೀನತೆಯನ್ನೂ, ಅಶ್ರದ್ದಧಾನಾನ್-ಶ್ರದ್ಧೆಯಿಲ್ಲದೆಯೂ, ನಿಸ್ಸತ್ವಾನ್-ಸತ್ವವಿಲ್ಲದೆಯೂ,ದುರ್ಮೇಧಾನ್-ದುರ್ಬುದ್ಧಿಯುಳ್ಳವರಾಗಿಯೂ ಹ್ರಸಿತಾಯುಷಃ-ಅಲ್ಪಾಯುಗಳಾಗಿಯೂ, ದುರ್ಬಲಾನ್ - ಧರ್ಮಕ್ಕೆ ಬೇಕಾದಶಕ್ತಿಯಿಲ್ಲದವರಾಗಿಯೂ, ಇರುವ, ಜನಾನ್-ಜನರನ್ನು, ವೀಕ್ಷ್ಯ-ನೋಡಿ, ಸರ್ವವರ್ಣಾಶ್ರಮಾಣಾಂ, ಸರ್ವ- ಎಲ್ಲಾ, ವರ್ಣ-ಬ್ರಾಹ್ಮಣಾದಿ ವರ್ಣಗಳಿಗೂ, ಆಶ್ರಮಾಣಾಂ-ಬ್ರಹ್ಮಚರ್ಯಾದ್ಯಾಶ್ರಮಗಳಿಗೂ, ಯತ್-ಯಾವುದು, ಅನುತ್ತಮಂ-ಸರ್ವೋತ್ತಮವಾದ, ಹಿತಂ-ಹಿತವೋ, ತತ್-ಅದನ್ನು, ದಧ್ಯೌ - ಯೋಚಿಸಿದನು ॥೧೭॥೧೮॥ ಪ್ರಜಾನಾಂ-ಪ್ರಜೆಗಳ, ವೈದಿಕಂ - ವೇದೋಕ್ತವಾದ, ಚಾತುರ್ಹೋತ್ರಂ - ಹೋತೃಮೊದಲಾದನಾಲ್ಕು ಮಂದಿ ಯಿಂದ ಮಾಡಲ್ಪಡತಕ್ಕ, ಶುದ್ಧಂ-ಹಿಂಸೆಯಿಂದೊಡಗೂಡಿದ್ದರೂ ಪಾಪರಹಿತವಾಗಿರುವ, ಕರ್ಮ-

ಕಾಲದಿಂದ ಪ್ರತಿಯುಗದಲ್ಲಿಯೂ, ಭೂಲೋಕದಲ್ಲಿ ಉಂಟಾಗುತ್ತಿರುವ ಧರ್ಮಸಾಂಕರ್ಯವನ್ನೂ ॥೧೫॥ ಪೃಥಿವೀ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚಭೂತಗಳಿಂದುಂಟಾಗಿರುವ ಪ್ರಾಣಿಕೋಟಿಗಳು ನಾಸ್ತಿಕರಾಗಿಯೂ, ಸತ್ವಗುಣವಿಲ್ಲದೆಯೂ, ದುರ್ಬುದ್ಧಿಗಳಾಗಿಯೂ, ಅಲ್ಪಾಯುಗಳಾಗಿಯೂ, ದುರ್ಬಲರಾಗಿಯೂ, ಇರುವುದನ್ನೂ ಕಂಡು, ಸಕಲ ವರ್ಣಾಶ್ರಮದವರಿಗೂ ಯಾವುದತ್ಯಂತ ಹಿತವೆಂಬುದನ್ನು ಯೋಚಿಸಿದನು ॥೧೮॥ ಬಳಿಕ ಬ್ರಹ್ಮ, ಅಧ್ವರ್ಯು, ಹೋತೃ, ಉದ್ಗಾತೃಗಳೆಂಬ ನಾಲ್ಕು ಮಂದಿ

§ ಪಾ-ದುರ್ಭಗಾನ್-ನಿರ್ಭಾಗ್ಯರಾದ. ¶ ಅಮೋಘದೃಕ್-ದಿವ್ಯದೃಷ್ಟಿಯುಳ್ಳ.

ಉದ್ಧೃತಾಃ । ಇತಿಹಾಸಃ ಪುರಾಣಂಚ ಪಂಚಮೋ ವೇದ ಉಚ್ಯತೇ॥೧೯॥
ತತ್ರರ್ಗ್ವೇದಧರಃ ಪೈಲಃ ಸಾಮಗೋ ಜೈಮಿನಿಃ ಕವಿಃ । ವೈಶಂಪಾಯನ
ಏವೈಕೋ ನಿಷ್ಣಾತೋ ಯಜುಷಾಂಗಣೇ ॥ ೨೦ ॥ ಅಥರ್ವಾಂಗಿರಸಾ
ಮಾಸೀ*ತ್ಸುಮಂತು ರ್ದಾರುಣೋ ಮುನಿಃ। ಇತಿಹಾಸಪುರಾಣಾನಾಂ ಪಿತಾ
ಮೇ ‡ ರೋಮಹರ್ಷಣಃ ॥ ೨೧ ॥ ತ ಏವ ಋಷಯೋ ವೇದಂ ಸ್ವಂಸ್ವಂ
ವ್ಯಸ್ಯ ನ್ನನೇಕಧಾ । ಶಿಷ್ಯೈಃ ಪ್ರಶಿಷ್ಯೈ ಸ್ತಚ್ಛಿಷ್ಯೈ ರ್ವೇದಾ ಸ್ತೇ ಶಾಖಿ
ನೋಽಭವನ್॥ತ ಏವ ವೇದಾ ದುರ್ಮೇಧೈ ರ್ಧಾರ್ಯಂತೇ ಪುರುಷೈ ರ್ಯಥಾ।

ಯಜ್ಞಾದಿ ಕರ್ಮವನ್ನು, ವೀಕ್ಷ್ಯ-ನೋಡಿ, ಯಜ್ಞಸಂತತ್ಯೈ. ಯಜ್ಞ - ಯಜ್ಞಗಳ, ಸಂತತ್ಯೈ-ವಿಸ್ತಾರಕ್ಕಾಗಿ. ಏಕಂ-ಒಂದಾದ, ವೇದಂ-ವೇದವನ್ನು, ಚತುರ್ವಿಧಂ-ನಾಲ್ಕುವಿಧವಾಗಿ, ವ್ಯದಧಾತ್-ಮಾಡಿದನು ॥೧೯॥ ಋಗ್ಯಜುಸ್ಸಾಮಾಥರ್ವಾಖ್ಯಾಃ, ಋಕ್, ಯಜುಸ್ಸು, ಸಾಮ, ಅಥರ್ವಗಳೆಂಬ, ಆಖ್ಯಾಃ-ಹೆಸರುಗಳುಳ್ಳ, ಚತ್ವಾರಃ-ನಾಲ್ಕು; ವೇದಾಃ-ವೇದಗಳು, ಉದ್ಧೃತಾಃ-ವಿಂಗಡಿಸಲ್ಪಟ್ಟವು, ಯಃ ಯಾವುದು, ಪಂಚಮಃ-ಐದನೆಯ, ವೇದಃ-ವೇದವೆಂದು, ಉಚ್ಯತೇ- ಹೇಳಲ್ಪಡುವುದೋ, ಇತಿಹಾಸಃ-ಆ ಭಾರತಮೊದಲಾದ ಇತಿಹಾಸಗಳೂ, ಪುರಾಣಂಚ-ಭಾಗವತ ಮೊದಲಾದ ಪುರಾಣಗಳು, ವಿಂಗಡಿಸಲ್ಪಟ್ಟವು, ॥೨೦॥ ತತ್ರ - ಅವುಗಳಲ್ಲಿ, ಋಗ್ವೇದಧರಃ - ಋಗ್ವೇದವನ್ನು ಕಲಿತವನು, ಪೈಲಃ - ಪೈಲನು ಸಾಮಗಃ-ಸಾಮವೇದವನ್ನು ಕಲಿತವನು, ಕವಿಃ-ಪೂರ್ವಮೀಮಾಂಸಾ ಶಾಸ್ತ್ರವನ್ನು ವಿರಚಿಸಿದ, ಜೈಮಿನಿಃ-ಜೈಮಿನಿಯು, ಯಜುಷಾಂ-ಯಜುಸ್ಸುಗಳ, ಗಣೇ-ಸಮೂಹದಲ್ಲಿ, ನಿಷ್ಣಾತಃ-ಪಂಡಿತನಾದವನು, ವೈಶಂಪಾಯನಃ-ವೈಶಂಪಾಯನನು, ಏಕಏವ-ಒಬ್ಬನೇ, ॥ ೨೧ ॥ ಅಥರ್ವಾಂಗಿರಸಾಂ-ಅಥರ್ವಶಾಖೆಗಳೊಳಗೆ, ದಾರುಣಃ ಆಭಿಚಾರಿಕ ಕರ್ಮಗಳನ್ನು ಮಾಡುವುದರಿಂದ ಕ್ರೂರನಾದ, ಸುಮಂತುಃ - ಸುಮಂತುವೆಂಬ ಮುನಿಯು; ಆಸೀತ್ - ಸಮರ್ಥನಾದನು, ಇತಿಹಾಸಪುರಾಣಾನಾಂ-ಇತಿಹಾಸಪುರಾಣಗಳಲ್ಲಿ, ಮೇ-ನನ್ನ, ಪಿತಾ-ತಂದೆಯಾದ, ರೋಮಹರ್ಷಣಃ-ರೋಮಹರ್ಷಣನು,ಸಮರ್ಥನಾದನು ॥೨೨॥ ತೇ-ಆ, ಋಷಯಏವ-ಋಷಿಗಳೇ ಸ್ವಂಸ್ವಂ-ತಮ್ಮತಮ್ಮ, ವೇದಂ-ವೇದವನ್ನು, ಅನೇಕಧಾ - ಹಲವುವಿಧವಾಗಿ, ವ್ಯಸ್ಯ-ಭಾಗ

ಋತ್ವಿಜರಿಂದ ಮಾಡಲ್ಪಡತಕ್ಕುದಾಗಿಯೂ, ಪಶುವಿಶಸನಹಿಂಸೆಯಿಂದ ಕೂಡಿದ್ದರೂ,ಪಾಪ ರಹಿತವಾಗಿಯೂ, ಇರುವ ಕರ್ಮಕಾಂಡವನ್ನು ವಿಸ್ತರಿಸುವುದಕ್ಕಾಗಿ, ಒಂದಾಗಿದ್ದ ವೇದವನ್ನು, ಋಕ್ಕು, ಯಜುಸ್ಸು, ಸಾಮ, ಅಥರ್ವಣಗಳೆಂದು ನಾಲ್ಕು ಸಂಗತವಾಗಿ ವಿಂಗಡಿಸಿದನು ॥೧೯॥ ಮತ್ತು ಐದನೆಯ ವೇದವೆಂದು ಕರೆಯಲ್ಪಡುವ, ರಾಮಾಯಣ ಭಾರತಮೊದಲಾದ ಇತಿಹಾಸಗಳನ್ನು, ಭಾಗವತ ಮೊದಲಾದ ಹದಿನೆಂಟು ಪುರಾಣಗಳನ್ನು ವಿಂಗಡಿಸಿಟ್ಟನು ॥೨೦॥ ಅವುಗಳಲ್ಲಿ ಪೈಲನೆಂಬವನು ಋಗ್ವೇದವನ್ನೂ, ಕರ್ಮಕಾಂಡ, ಪ್ರವರ್ತಕವಾದ ಪೂರ್ವಮೀಮಾಂಸಾ ಶಾಸ್ತ್ರವನ್ನು ವಿರಚಿಸಿದ ಜೈಮಿನಿಯು ಸಾಮವೇದವನ್ನೂ, ವೈಶಂಪಾಯನನು ಯಜುರ್ವೇದವನ್ನೂ, ಅಭಿಚಾರಿಕ ಕ್ರಿಯೆಗಳಲ್ಲಿ (ಶೂನ್ಯಮೊದಲಾದುವು) ನಿಪುಣನಾದ ಸುಮಂತುವು ಅಥರ್ವಣವೇದವನ್ನೂ॥೨೧॥ ನನ್ನ ತಂದೆಯಾದ ರೋಮಹರ್ಷಣನು ಇತಿಹಾಸ ಪುರಾಣಗಳನ್ನೂ ಕಲಿತರು ॥೨೨॥

* ಆರಾಧಮಾಡುವವನು. ‡ ಭಗವದನುಭವದಿಂದ ರೋಮಾಂಚನಾದಿಯುಳ್ಳವನು.

ಏವಂಚಕಾರ ಭಗವಾನ್ ವ್ಯಾಸಃ ಕೃಪಣವತ್ಸಲಃ॥ ೨೩ ॥ ಸ್ತ್ರೀಶೂದ್ರದ್ವಿಜ
ಬಂಧೂನಾಂ ತ್ರಯೀ ನಶ್ರುತಿಗೋಚರಾ । ಕರ್ಮಶ್ರೇಯಸಿ ಮೂಢಾನಾಂ
ಶ್ರೇಯ ಏವಂಭವೇದಿಹ ॥ ೨೪ ॥ ಇತಿ ಭಾರತ ಮಾಖ್ಯಾನಂ ಕೃಪಯಾ
ಮುನಿನಾ ಕೃತಂ । ಏವಂ ಪ್ರವೃತ್ತಸ್ಯ ಸದಾ ಭೂತಾನಾಂ ಶ್ರೇಯಸಿ
ದ್ವಿಜಾಃ ॥ ೨೫ ॥ ಸರ್ವಾತ್ಮಕೇನಾಪಿ ಯದಾ ನಾತುಷ್ಯದ್ಧೃದಯಂ ತತಃ ।
ನಾತಿಪ್ರಸೀದದ್ಧೃದಯ ಸ್ಸರಸ್ವತ್ಯಾ ಸ್ತಟೇ ಶುಚೌ ॥ ೨೬ ॥ ವಿತರ್ಕಯ
ನ್ವಿತರ್ಕಸ್ಥ ಇದಂಚೋವಾಚ ಧರ್ಮವಿತ್ । ಧೃತವ್ರತೇನಹಿ ಮಯಾ ಛಂ:

See after Page no. 64

ಮಾಡಿದರು, ತೇ-ಆ, ವೇದಾಃ-ವೇದಗಳು, ಶಿಷ್ಯೈಃ-ಶಿಷ್ಯರಿಂದಲೂ, ಪ್ರಶಿಷ್ಯೈಃ-ಶಿಷ್ಯರ ಶಿಷ್ಯರಿಂದಲೂ ತಚ್ಛಿಷ್ಯೈಃ-ಅವರಶಿಷ್ಯರಿಂದಲೂ ಸಹ, ಶಾಖಿನಃ-ಅನೇಕ ಶಾಖೆಗಳು, ಅಭವನ್-ಆದವು ॥೨೩॥ ಕೃಪಣ ವತ್ಸಲಃ, ಕೃಪಣ-ದೀನರಲ್ಲಿ, ವತ್ಸಲಃ-ಪ್ರೀತಿಯುಳ್ಳ, ಭಗವಾನ್-ಪೂಜ್ಯನಾದ ವ್ಯಾಸಃ-ವ್ಯಾಸಮುನಿಯು, ತೇ-ಆ, ವೇದಾಏವ-ವೇದಗಳೇ, ದುರ್ಮೇಧೈಃ-ಮಂದಮತಿಗಳಾದ, ಪುರುಷೈಃ-ಪುರುಷರಿಂದ, ಯಥಾ-ಹೇಗೆ, ಧಾರ್ಯಂತೆ-ಧರಿಸಲ್ಪಡುವುವೋ, ಏವಂ-ಈರೀತಿಯಾಗಿ, ಚಕಾರ-ಮಾಡಿದನು ॥೨೪॥ ತ್ರಯೀ-ವೇದಗಳು, ಸ್ತ್ರೀಶೂದ್ರದ್ವಿಜಬಂಧೂನಾಂ, ಸ್ತ್ರೀ-ಹೆಂಗಸರ, ಶೂದ್ರ-ಶೂದ್ರರ, ದ್ವಿಜಬಂಧೂನಾಂ ಬ್ರಹ್ಮ ಕ್ಷತ್ರಿಯ ವೈಶ್ಯರಲ್ಲಿ ಅಧಮರ, ಅಥವಾ ಬ್ರಾಹ್ಮಣಾಧಮರ, ಶ್ರುತಿಗೋಚರಾ, ಶ್ರುತಿ-ಕಿವಿಗಳಿಗೆ, ಗೋಚರಾ-ವಿಷಯವಾದುದು, ನ-ಅಲ್ಲ, ಆದುದರಿಂದ, ಕರ್ಮಶ್ರೇಯಸಿ, ಕರ್ಮ-ಕರ್ಮರೂಪವಾದ, ಶ್ರೇಯಸಿ-ಶ್ರೇಯಸ್ಸಾಧನವಲ್ಲಿ, ಮೂಢಾನಾಂ-ಮೂಢರಾದ ಸ್ತ್ರೀಶೂದ್ರಾದಿಗಳಿಗೆ, ಏವಂ-ಈವಿಧದಿಂದ, ಇಹ-ಈಲೋಕದಲ್ಲಿ, ಶ್ರೇಯಃ-ಶ್ರೇಯಸ್ಸು, ಭವೇತ್-ಆಗಲಿ ॥ ೨೫ ॥ ಇತಿ-ಹೀಗೆಂದು, ಮುನಿನಾ-ವ್ಯಾಸಮುನಿಯಿಂದ, ಕೃಪಯಾ - ದಯೆಯಿಂದ, ಭಾರತಂ-ಭಾರತವೆಂಬ, ಆಖ್ಯಾನಂ - ಇತಿಹಾಸವು, ಕೃತಂ-ಮಾಡಲ್ಪಟ್ಟಿತು, ದ್ವಿಜಾಃ-ಅಯ್ಯಾ ಬ್ರಾಹ್ಮಣರಿರಾ ! ಏವಂ-ಹೀಗೆ, ಸದಾ-ಯಾವಾಗಲೂ, ಭೂತಾನಾಂ-ಭೂತಗಳ, ಶ್ರೇಯಸಿ-ಶ್ರೇಯಸ್ಸಿನ ವಿಷಯದಲ್ಲಿ, ಪ್ರವೃತ್ತಸ್ಯ - ಪ್ರವರ್ತಿಸಿದ ವ್ಯಾಸಮುನಿಯ, ಹೃದಯಂ-ಚಿತ್ತವು, ಸರ್ವಾತ್ಮಕೇನಾಪಿ - ಎಲ್ಲವಿಧಗಳಿಂದಲೂ, ಯದಾ - ಯಾವಾಗ, ನಾತುಷ್ಯತ್-

ಬಳಿಕ ಆ ಋಷಿಗಳು ತಾವು ತಾವು ಕಲಿತವೇದವನ್ನು ತಮ್ಮ ಶಿಷ್ಯಪ್ರಶಿಷ್ಯರಿಗೆ ಕ್ರಮವಾಗಿ ವಿಭಾಗಿಸಿ ಬೋಧಿಸಲು, ಆ ವೇದಗಳು ಅವರವರ ಹೆಸರುಗಳಿಂದಲೇ ಪ್ರಸಿದ್ಧಿಯನ್ನು ಹೊಂದಿ, ಹಲವು ಶಾಖೆಗಳಾಗಿ ಏರ್ಪಟ್ಟವು ॥೨೩॥ ದೀನದಯಾಳು ವಾಗಿಯೂ, ಭಗವದಂಶಸಂಭೂತನಾಗಿಯೂ ಇರುವ ವ್ಯಾಸಮುನಿಯು, ಇಂತು ಒಂದಾಗಿದ್ದ ವೇದರಾಶಿಯನ್ನು, ಕಲಿಯುಗದ ಮಂದಮತಿಗಳಾದ ಮಾನವರು ಕಲಿತು ನೆನಪಿನಲ್ಲಿಡುವುದಕ್ಕೆ ಅನುಕೂಲವಾಗಿರುವಂತೆ, ಹಲವು ಪರಿಯಿಂದ ವಿಂಗಡಿಸಿದನು ॥೨೪॥ ಬಳಿಕ ಸ್ತ್ರೀಯರಿಗೂ, ಶೂದ್ರರಿಗೂ, ಬ್ರಹ್ಮಕ್ಷತ್ರಿಯ ವೈಶ್ಯರಲ್ಲಿ ಪತಿತರಾದವರಿಗೂ, ಕರ್ಮಮಾರ್ಗವನ್ನೂ ಸದಾಚಾರವನ್ನೂ ಪ್ರತಿಪಾದಿಸುವ ವೇದಗಳ ಶ್ರವಣಮನನಾದಿಗಳಲ್ಲಿ ಅಧಿಕಾರವಿಲ್ಲವಾದುದರಿಂದ, ಅವರೆಂತು ಕಡೆ ಹಾಯುವರೆಂದು ಕನಿಕರಿಸಿ, ಇದರಿಂದವರಿಗೆ ಶ್ರೇಯಸ್ಸುಂಟಾಗಲೆಂದು, ಆ ಮಹರ್ಷಿಯು ದಯಮಾಡಿ ಭಾರತೇತಿಹಾಸವನ್ನು ವಿರಚಿಸಿದನು, ॥ ೨೫ ॥ ಇಂತು ಎಷ್ಟು ವಿಧದಿಂದ ಪ್ರಾಣಿಗಳಿಗೆ

ಕ್ರಮಃ । ಯದ್ವಾಕ್ಯತೋ ಧರ್ಮಇತೀತರಸ್ಥಿತೋ ನಮನ್ಯತೇ ತಸ್ಯ
ನಿವಾರಣಂ ಜನಃ॥೧೫॥*ವಿಚಕ್ಷಣಃ ಕೋಽರ್ಹತಿವೇದಿತುಂ ವಿಭೋ ರನಂತ

ಸ್ವಭಾವರಕ್ತಸ್ಯ, ಸ್ವಭಾವ - ತನ್ನಷ್ಟಕ್ಕೆತಾನೇ ಕಾಮ್ಯಕರ್ಮಾದಿಗಳಲ್ಲಿ, ರಕ್ತಸ್ಯ-ಅನುರಕ್ತರಾದ ಪಾಮರರಿಗೆ, ಧರ್ಮಕೃತೇ-ಧರ್ಮವೆಂದು, ಅನುಶಾಸತಃ - ಉಪದೇಶಿಸಿದ ನಿನಗೆ, ಮಹಾನ್-ಅಧಿಕವಾದ, ವ್ಯತಿಕ್ರಮಃ - ಶಾಸ್ತ್ರವನ್ನುಲ್ಲಂಘಿಸಿದ ದೋಷವುಂಟಾಗಿರುವುದು. ಏಕೆಂದರೆ ! ಯದ್ವಾಕ್ಯತಃ, ಯತ್-ಯಾವನಿನ್ನ, ವಾಕ್ಯತಃ - ಮಾತಿನಿಂದ, ಧರ್ಮಇತಿ-ಇದೇ ಮುಖ್ಯಧರ್ಮವೆಂದು, ಸ್ಥಿತಃ-ತಿಳಿದುಕೊಂಡಿರುವ, ಇತರಃ-ಮೂಢರಾದ, ಜನಃ-ಜನರು, ತಸ್ಯ-ಆ ಕಾಮ್ಯಕರ್ಮಾದಿಗಳಿಗೆ, ನಿವಾರಣಂ-(ತತ್ವಜ್ಞರಾಗಲಿ, ವೇದಶಾಸ್ತ್ರಗಳೇ ಆಗಲಿ ಯಾರು ತಡೆಯುವುದನ್ನೂ, ನಮನ್ಯತೇ - ದಿಟವೆಂದು ನಂಬುವುದಿಲ್ಲ ॥ ೧೫ ॥ ವಿಚಕ್ಷಣಃ-ನಿಪುಣನಾದ, ಕಃ - ಯಾವನೋ ಒಬ್ಬನು, ನಿವೃತ್ತಿತಃ - ಸಕಲಕರ್ಮತ್ಯಾಗದಿಂದ, ಅನಂತಪಾರಸ್ಯ, ಅನಂತ - ಕಾಲದಿಂದುಂಟಾಗುವ ನಾಶವೂ, ಪಾರಸ್ಯ-ಸ್ಥಲದಿಂದುಂಟಾಗುವ ದಡವೂ ಸಹ ಇಲ್ಲದಿರುವ, ವಿಭೋಃ - ಸರ್ವವ್ಯಾಪಕನಾದ ಭಗವಂತನ, ಸುಖಂ - ನಿರತಿಶಯಾನಂದ ಮಯವಾದ ರೂಪವನ್ನು, ವೇದಿತುಂ - ತಿಳಿಯುವುದಕ್ಕೆ, ಅರ್ಹತಿ-ಶಕ್ತನಾಗುತ್ತಾನೆ, ತತಃ-ಆದುದರಿಂದ, ಗುಣೈಃ-ಸತ್ವಾದಿಗುಣಗಳಿಂದ, ಪ್ರವರ್ತಮಾನಸ್ಯ - ವರ್ತಿಸುತ್ತಿರುವ, ಅನಾತ್ಮನಃ-ದೇಹಾ

ಭಗವಚ್ಚರಿತ್ರವನ್ನು ಬಣ್ಣಿಸದೆ, ಧರ್ಮಗಳನ್ನು ವಿವರಿಸಿದುದು ವ್ಯರ್ಥವೂ ಅಲ್ಲದೆ, ಅದರಿಂದ ನಿನಗೆ ದೋಷವೂ ಪ್ರಾಪ್ತವಾಯಿತು. ಸ್ವಭಾವವಾಗಿಯೇ ಧರ್ಮಾರ್ಥಕಾಮಗಳಲ್ಲಿ ಮಗ್ನರಾಗಿರುವ ಪಾಮರರಿಗೆ ನಿಂದ್ಯಗಳಾದ “ಕಾಮ್ಯಕರ್ಮಗಳನ್ನೇ ಆಚರಿಸಬೇಕು” ಎಂದುಪದೇಶಿಸಿದ ನಿನ್ನವಾಕ್ಯದಿಂದ, ಆ ಮೂಢಜನರು ಕಾಮ್ಯಕರ್ಮಾಚರಣೆಯೇ ಮುಖ್ಯಧರ್ಮವೆಂದು ತಿಳಿದು, ಅದು ಮುಖ್ಯವಲ್ಲವೆಂದು ತತ್ವಜ್ಞರಾದವರೆಷ್ಟು ವೇದಶಾಸ್ತ್ರಪ್ರಮಾಣಗಳನ್ನಿತ್ತರೂ, ಅವುಗಳನ್ನು ನಂಬದೆ, ಮಹಾಪಂಡಿತನು ಹೇಳಿದುದರಿಂದಿದೇ ಮುಖ್ಯಧರ್ಮವು” ಎಂದು ಸ್ಥಾಪಿಸತೊಡಗುವುರಲ್ಲದೆ † “ಗೃಹಸ್ಥಧರ್ಮಗಳನ್ನು ನಡೆಯಿಸುವುದಕ್ಕೆ ಕೈಲಾಗದ ಕುಂಟರು, ಕುರುಡರು, ಎಳವರು,ಮೊದಲಾದವರಿಗೋಸ್ಕರವೇ ನೀವು ಹೇಳಿದ, ಬ್ರಹ್ಮಚರ್ಯವು, ಸನ್ಯಾಸವು ಉಕ್ತವಾಗಿರುವುವಲ್ಲದೆ ನಮಗಲ್ಲವೆಂದು” ವಾದಿಸುವರು. § ಗೀತಾವಚನದಂತೆ ಪಾಮರರಬುದ್ಧಿಯನ್ನು ಮರುಳುಗೊಳಿಸಿದುದರಿಂದ ಶಾಸ್ತ್ರವನ್ನುಲ್ಲಂಘಿಸಿದ ಅನ್ಯಾಯವು ನಿನಗುಂಟಾಯಿತು ॥೧೫॥ ಮಹಾತ್ಮ

* ಸಿ= ಸಿದ್ಧಾಂತ ಪ್ರದೀಪ-ವೇದೇರಾಮಾಯಣೇಚೈವಭಾರತೇ ಪಂಚರಾತ್ರಕೇ। ಆದಾವಂತೇಚ ಮಧ್ಯೇಚ ಹರಿಸ್ಸರ್ವತ್ರಗೀಯತೇ, ಎಂದು ಭಗವಂತನು ಸಕಲ ಪುರಾಣಗಳಲ್ಲಿಯೂ ಹೊಗಳಲ್ಪಡುತ್ತಿದ್ದರೂ, ಕರ್ಮಗಳಲ್ಲಿ ಆಸಕ್ತನಾದವನಿಗೆ ಭಗವದ್ಭಜನಕ್ಕವಕಾಶವಿರುವುದಿಲ್ಲ. ಮತ್ತು ಶ್ರು-ನಕರ್ಮಣಾನಪ್ರಜಯಾಧನೇನ... ಎಂಬ ಶ್ರುತಿಯಲ್ಲಿ ಹೇಳಿದಂತೆ ನಿವೃತ್ತಿಮಾರ್ಗದಿಂದ ಭಜಿಸಿದವನಿಗೆ ಶ್ರೇಯಸ್ಸುಂಟಾಗುವುದಾದುದರಿಂದ, ಕರ್ಮಗಳ ತೊಡಕಿಲ್ಲದ, ಭಕ್ತಿಪ್ರಧಾನವಾದ ಶಾಸ್ತ್ರವನ್ನುರಚಿಸಿ ಪಾಮರರನ್ನುದ್ಧರಿಸು.

† ಸ್ಮೃತಿ-ತಕ್ಷ್ಯೈವಂ ಶಕ್ಯತೇ ವಕ್ತುಂಯೇಂಧ ಪಂಗ್ವಾದಯೋ ನರಾಃ । ಗೃಹಸ್ಥತ್ವಂ ನಶಕ್ಷ್ಯಂತಿ ಕರ್ತುಂ ತೇಷಾ ಮಯಂ ವಿಧಿಃ । ನೈಷ್ಠಿಕಬ್ರಹ್ಮಚರ್ಯಂಚ ಪರಿವ್ರಾಜಕತಾಪಿವಾ।ತೈರವಶ್ಯಂಗೃಹೀತವ್ಯಾ ತೇನಾದಾವೇತದುಚ್ಯತೆ॥ § ನಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ ॥

ಪಾರಸ್ಯನಿವೃತ್ತಿತಸ್ಸುಖಂ । ಪ್ರವರ್ತಮಾನಸ್ಯ ಗುಣೈ ರನಾತ್ಮನ ಸ್ತತೋ
*ಭವಾನ್ ದರ್ಶಯ ಚೇಷ್ಟಿತಂ ವಿಭೋಃ॥ ತ್ಯಕ್ತ್ವಾ ಸ್ವಧರ್ಮಂ ಚರಣಾಂ
ಬುಜಂ ಹರೇ ರ್ಭಜನ್ನಪಕ್ವೋಽಥ ಪತೇತ್ತತೋಯದಿ।ಯತ್ರ ಕ್ವವಾ ಭದ್ರ
ಮಭೂ ದಮುಷ್ಯ ಕಿಂ ಕೋವಾರ್ಥ ಆಪ್ತೋ ಭಜತಾಂ ಸ್ವಧರ್ಮತಃ॥೧೭॥
ತಸ್ಯೈವ ಹೇತೋಃ ಪ್ರಯತೇತ ಕೋವಿದೋ ನಲಭ್ಯತೇ ಯದ್ಭ್ರಮತಾ

ಭಿಮಾನವುಳ್ಳ, ಮೂಢಜನರಿಗೆ, ಭವಾನ್-ನೀನು, ಅಥವಾ ಭಗವನ್ ಅಯ್ಯಾ-ಷಡ್ಗುಣೈಶ್ವರ್ಯಸಂಪನ್ನನೆ? ವಿಭೋಃ-ಭಗವಂತನ, ಚೇಷ್ಟಿತಂ-ಲೀಲೆಗಳನ್ನು, ದರ್ಶಯ - ಪ್ರಕಾಶಗೊಳಿಸು ॥೧೬॥ ಸ್ವಧರ್ಮಂ, ಸ್ವ-ತನ್ನ, ಧರ್ಮಂ-ವರ್ಣಾಶ್ರಮಧರ್ಮಗಳನ್ನು, ತ್ಯಕ್ತ್ವಾ-ಬಿಟ್ಟು, ಹರೇಃ-ಶ್ರೀಹರಿಯ, ಚರಣಾಂಬುಜಂ-ಪಾದಕಮಲವನ್ನು, ಭಜನ್-ಭಜಿಸುವವನು, ಅಥ-ಆಬಳಿಕ, ಅಪಕ್ವಃ - ಪೂರ್ಣಜ್ಞಾನವನ್ನು ಪಡೆಯದೆ, ತತಃ-ಆ ಭಗವದ್ಭಜನೆಯಿಂದ, ಯದಿಪತೇತ್-ಬಿದ್ದುಹೋದರೆ, ಆಗ್ಯೂ ತೊಂದರೆಯಿಲ್ಲ. ಯತ್ರ ಕ್ವವಾ-ಯಾವನೀಚಜನ್ಮದಲ್ಲಿದ್ದರೂ, ಅಮುಷ್ಯ-ಈ ಭಕ್ತಿರಸಿಕನಿಗೆ, ಅಭದ್ರಂ-ಕೇಡು, ಅಭೂತ್ಕಿಂ-ಆದುದೇನು ? ಅಭಜತಾಂ-ಭಗವಂತನನ್ನು ಧ್ಯಾನಿಸದವರಿಂದ, ಸ್ವಧರ್ಮತಃ-ತಮ್ಮ ಧರ್ಮಗಳನ್ನು ನಡೆಯಿಸಿದುದರಿಂದ, ಕೋವಾ-ಯಾವ, ಅರ್ಥಃ-ಪ್ರಯೋಜನವು; ಆಪ್ತಃ-ಹೊಂದಲ್ಪಟ್ಟಿತು ? ॥೧೭॥ ಕೋವಿದಃ-ಪಂಡಿತನು, ಉಪರಿ - ಮೇಲೆ ಬ್ರಹ್ಮಪರ್ಯಂತವೂ, ಅಥವಾ ಸ್ವರ್ಗಾದಿಲೋಕಗಳಲ್ಲಿಯೂ, ಅಧಃ-

ರಾದ ಕೆಲವರು ಮಾತ್ರ ಸಕಲಕರ್ಮತ್ಯಾಗದಿಂದ,ಅಪಾರಮಹಿಮನಾದ, ಭಗವಂತನ, ನಿರತಿಶಯಾನಂದಸ್ವರೂಪವನ್ನು ತಿಳಿಯಬಲ್ಲರೇ ಹೊರತು, ಕಾಮ್ಯಕರ್ಮಗಳಲ್ಲಿ ಆಸಕ್ತರಾದವರು ತಿಳಿಯಲಾರರು. ಆದುದರಿಂದ ದೇಹಾಭಿಮಾನಕ್ಕೊಳಪಟ್ಟು, ಸತ್ತ್ವರಜಸ್ತಮೋಗುಣಗಳಿಂದ, ಆಯಾಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವ, ಜನಗಳ ಕ್ಷೇಮಕ್ಕಾಗಿ, ಆ ಭಗವಂತನ ಲೀಲೆಗಳನ್ನು ಬಣ್ಣಿಸು, ಭಗವಂತನ ಚರಿತ್ರೆಯು ಪ್ರವೃತ್ತಿಮಾರ್ಗದಂತೆ ಬಂಧಕವಾಗಲಾರದು ॥೧೬॥ ಭಗವದ್ಭಕ್ತನಾದ ಪುರುಷನು ಸ್ವಧರ್ಮವಾದ, ನಿತ್ಯನೈಮಿತ್ತಿಕಾದಿಗಳ ಅನುಷ್ಠಾನವನ್ನು ಬಿಟ್ಟು, ಭಗವದ್ಭಜನೆಯನ್ನು ಮಾಡುತ್ತಾ ಕೃತಕೃತ್ಯನಾಗುವಷ್ಟರಲ್ಲಿಯೇ,ಮನಸ್ಥೈರ್ಯಾದಿಗಳಿಲ್ಲದೆ,ಭಕ್ತಿಮಾರ್ಗವನ್ನುಳಿದು ಮೃತನಾದರೂ ಕೆಡುವುದಿಲ್ಲ. ಅಂತಹ ಪುರುಷನು ಯಾವಕೀಳು ಜನ್ಮದಲ್ಲಿ ಜನಿಸಿದ್ದರೂ ಆ ಭಕ್ತಿವಾಸನೆಯಿಂದ ಉತ್ತಮಗತಿಯನ್ನು ಪಡೆಯುವನೇ ಹೊರತು, ಅವನಿಗೆಂದಿಗೂ ಚ್ಯುತಿಯುಂಟಾಗುವುದಿಲ್ಲ ಭಗವದ್ಭಜನವನ್ನು ಮಾಡದೆ ಸ್ವಧರ್ಮಾನುಷ್ಠಾನವನ್ನು ಮಾತ್ರಮಾಡಿದವರಿಗೆ ಅದರಿಂದ ಯಾವ ಫಲವೂ ಉಂಟಾಗಲಾರದು. ಅದು ಹೇಗೆಂದರೆ ಭಗವಂತನಲ್ಲಿ ಭಕ್ತಿಯನ್ನಿಡದೆ ಭಗವತ್ಪ್ರೀತಿಗೆ ಪಾತ್ರರಾಗಲಾರರು, ಭಗತ್ಪ್ರೀತಿಯಿಲ್ಲದೆ ಪಾಪನಿವೃತ್ತಿಯಾಗುವುದಿಲ್ಲ. ಪಾಪನಿವೃತ್ತಿಯಾಗದೇ ಇದ್ದಲ್ಲಿ ಕರ್ಮಾನುಷ್ಠಾನವೂ ವ್ಯರ್ಥವಾಗುವುದು, ಅದು ಕೆಟ್ಟಕೂಡಲೇ ಕರ್ಮಭ್ರಷ್ಟನಾಗುವನು.ಆದುದರಿಂದ ಕೇವಲಕರ್ಮಮಾರ್ಗದಿಂದ ಪ್ರಯೋಜನವಿಲ್ಲ ॥೧೭॥ ‡ ವೇದದಲ್ಲಿ ಹೇಳಿರುವಂತೆ ಕರ್ಮಾನುಷ್ಠಾನವನ್ನು ಮಾಡಿದವರಿಗೆ ಪಿತೃ

* ಪಾ, ಭಗವನ್. ‡ ಶ್ರು-ಕರ್ಮಣಾ ಪಿತೃಲೋಕಃ

ಮುಪರ್ಯಧಃ। ತಲ್ಲಭ್ಯತೇ*ದುಃಖವದನ್ಯತಃ ಸುಖಂ ಕಾಲೇನ ಸರ್ವತ್ರ ಗಭೀರ ರಂಹಸಾ॥೧೮॥ ನವೈ ಜನೋ ಜಾತು ಕಥಂಚನ ವ್ರಜೇನ್ಮುಕುಂದ ಸೇವ್ಯನ್ಯವದಂಗ ಸಂಸೃತಿಂ। ಸ್ಮರನ್ ಮುಕುಂದಾಂಘ್ರ್ಯುಪಗೂಹನಂ ಪುನರ್ವಿಹಾತು ಮಿಚ್ಛೇನ್ನ †ರಸಗ್ರಹೋ ಜನಃ॥೧೯॥ ಇದಂಚ ವಿಶ್ವಂ ಭಗವಾ

ಕೆಳಗೆ ಸ್ಥಾವರಗಳವರೆಗೂ ಅಥವಾ ನರಕಾದಿಗಳಲ್ಲಿಯೂ, ಭ್ರಮತಾಂ-ಅಲೆದಾಡುತ್ತಿರುವ ಜೀವಿಗಳಿಂದ, ಯತ್-ಯಾವುದು, ನಲಭ್ಯತೇ-ಹೊಂದಲ್ಪಡುವುದಿಲ್ಲವೋ, ತಸ್ಯೈವಹೇತೋಃ-ಅಂತಹ ನಿತ್ಯಸುಖಕ್ಕಾಗಿಯೇ, ಪ್ರಯತೇತ-ಪ್ರಯತ್ನಿಸಬೇಕು, ಸರ್ವತ್ರ-ಸ್ವರ್ಗ ನರಕ ಮೊದಲಾದೆಲ್ಲೆಡೆಗಳಲ್ಲಿಯೂ, ಗಭೀರರಂಹಸಾ, ಗಭೀರ-ಗಂಭೀರವಾದ, ರಂಹಸಾ-ವೇಗವುಳ್ಳ, ಕಾಲೇನ-ಕಾಲದಿಂದ, ತತ್-ಆ, ಸುಖಂ-ವಿಷಯಸುಖವು, ಅನ್ಯತಏವ-ಪೂರ್ವಕರ್ಮಸಂಸ್ಕಾರಗಳಿಂದಲೇ, ಲಭ್ಯತೇ-ಹೊಂದಲ್ಪಡುತ್ತದೆ॥೧೮॥ಮುಕುಂದಸೇವೀ, ಮುಕುಂದ-ಶ್ರೀಹರಿಯನ್ನು, ಸೇವೀ-ಸೇವಿಸುವ, ನವೈಜನಃ-ಆ ಜನವು, ಜಾತು-ಯಾವಾಗಲೂ, ಕಥಂಚನ-ಎಂತಹ ಕೀಳುಜನ್ಮದಲ್ಲಿದ್ದರೂ, ಅನ್ಯವತ್-ಕೇವಲ ಕರ್ಮನಿಷ್ಠರಂತೆ, ಸಂಸೃತಿಂ-ಸಂಸಾರವನ್ನು, ನವ್ರಜೇತ್-ಹೊಂದುವುದಿಲ್ಲ, ಅಂಗ-ಆಶ್ಚರ್ಯವು, ರಸಗ್ರಹಃ, ರಸ-ಭಕ್ತಿರಸದಿಂದ, ಗ್ರಹಃ-ವಶಗೊಳಿಸಲ್ಪಟ್ಟ, ಅಥವಾ ರಸ-ಭಗವಂತನ ಪಾದಕಮಲಮಕರಂದರಸವನ್ನು, ಗ್ರಹಃ-ಅನುಭವಿಸುವ, ಜನಃ-ಜನವು, ಮುಕುಂದಾಂಘ್ರ್ಯುಪಗೂಹನಂ, ಮುಕುಂದ-ಶ್ರೀವಿಷ್ಣುವಿನ, ಅಂಘ್ರಿ-ಪಾದಗಳ, ಉಪಗೂಹನಂ-ಆಲಿಂಗನವನ್ನು, ಪುನಃ-ಬಾರಿಬಾರಿಗೂ, ಸ್ಮರನ್-ಸ್ಮರಿಸುವವನಾಗಿ, ವಿಹಾತುಂ - ಬಿಡುವುದಕ್ಕೆ, ನೇಚ್ಛೇತ್ - ಬಯಸುವುದಿಲ್ಲ ॥೧೯॥ ಯತಃ-ಯಾವ ಭಗವಂತನಿಂದ, ಜಗತ್ಸ್ಥಾನನಿರೋಧಸಂಭವಾಃ, ಜಗತ್-ಪ್ರಪಂಚದ, ಸ್ಥಾನ-ನೆಲೆಯು

ಲೋಕಪ್ರಾಪ್ತಿಯಾಗುವುದಾಗಿದ್ದರೂ ಅದನ್ನು ಮುಖ್ಯಫಲವೆಂದೆಣಿಸಬಾರದು, ವಿಷಯಸುಖವೆಂಬುದು ಕಾಲಾನುಸಾರವಾಗಿ, ಸ್ವರ್ಗನರಕಾದಿ ಸಕಲ ಪ್ರದೇಶಗಳಲ್ಲಿಯೂ, ದುಃಖದಂತೆ ಪ್ರಾರ್ಥಿಸಲ್ಪಡದೆಯೇ ಪ್ರಾಪ್ತವಾಗುವುದಾದುದರಿಂದ, ಮೇಲ್ಗಡೆ ಬ್ರಹ್ಮಲೋಕದವರೆಗೂ ಇರುವ ದೇವಾದಿ ಸುಖಜೀವಿಗಳಾಗಲಿ, ಕೆಳಗಡೆ ನರಕದವರೆಗೂ ಇರುವ ಸ್ಥಾವರಾದಿ ದುಃಖಜೀವಿಗಳಾಗಲಿ, ಯಾವ ನಿತ್ಯವಸ್ತುವನ್ನು ಪಡೆಯಲಾರರೋ, ಪಂಡಿತನಾದವನು ಅಂತಹ ಮಹಾಲಾಭಕ್ಕಾಗಿ ಪ್ರಯತ್ನಿಸಬೇಕು. ॥೧೮॥ ಭಗವದ್ಭಕ್ತನಾದವನು ಎಂತಹ ನೀಚಯೋನಿಯಲ್ಲಿ ಜನಿಸಿದರೂ ಅವನೆಂದಿಗೂ ಕರ್ಮಿಗಳಂತೆ ಸಂಸಾರ ಬಂಧಕ್ಕೊಳಗಾಗುವುದಿಲ್ಲ. ಭಕ್ತಿರಸದ ರುಚಿಯನ್ನು ತಿಳಿದು ಭಗವಚ್ಚರಣಾರವಿಂದ ಮಕರಂದವನ್ನು ಸವಿಯುತ್ತಿರುವ ಪುರುಷನು ಗೀತಾವಾಕ್ಯದಂತೆ ಆ ಭಗವಂತನ ಪಾದಾಲಿಂಗನ ಸುಖವನ್ನು ಸ್ಮರಿಸಿಕೊಂಡು ಎಂದಿಗೂ ಬಿಡುವುದಕ್ಕೆ ಬಯಸುವುದಿಲ್ಲ. ಆ ಭಗವಂತನ ಸ್ವರೂಪವನ್ನು ಹೇಳುವೆನು ಕೇಳು.॥೧೯॥ ಯಾವನಿಂದ ಈ ಜಗತ್ತಿನ ಉತ್ಪತ್ತಿ

* ಅಪ್ರಾರ್ಥಿತಾನಿ ದುಃಖಾನಿ ಯಥೈವಾಯಾಂತಿ ದೇಹಿನಾಂ। ಸುಖಾನ್ಯಪಿ ತಥಾ ಮನ್ಯೇ ದೈವಮತ್ರಾತಿರಿಚ್ಯತೇ॥

† ಯತತೇ ಚ ತತೋ ಭೂಯಸ್ಸಂಸಿದ್ಧೌ ಕುರುನಂದನ। ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ॥

@ನಿವೇತರೋ ಯತೋ ಜಗತ್‌ಸ್ಥಾನನಿರೋಧಸಂಭವಾಃ । ತದ್ಧಿ ಸ್ವಯಂ ವೇದ ಭವಾಂಸ್ತಥಾಪಿ ಮೇ ಪ್ರಾದೇಶಮಾತ್ರಂ ಭವತಃ ಪ್ರದರ್ಶಿತಂ॥೨೦॥ ತ್ವಮಾತ್ಮನಾತ್ಮಾನ ಮವೇಹ್ಯ ಮೋಘದೃಕ್ಪರಸ್ಯಪುಂಸಃ ಪರಮಾತ್ಮನಃ ಕಳಾಂ । ಅಜಂ ಪ್ರಜಾತಂ ಜಗತ ಶ್ಶಿವಾಯ ತನ್ಮಹಾನುಭಾವಾಭ್ಯುದಯೋಧಿ

ನಿರೋಧ-ನಾಶವು, ಸಂಭವಾಃ-ಉತ್ಪತ್ತಿಯು ಉಂಟಾಗಿರುವುವೋ, ಇದಂ-ಈ, ವಿಶ್ವಂ-ಪ್ರಪಂಚವು, ಭಗವಾನ್ - ಆ ಭಗವಂತನೇ ಹೊರತು, ಇತರಃನ- ಆತನಿಗಿಂತಲೂ ಬೇರೆಯಲ್ಲ. ಅಥವಾ ಇತರಇವ-ಬೇರೆಯಾಗಿರುವಂತೆ ತೋರುವಜೀವನೂ, ಭಗವಾನೇವ-ಭಗವಂತನೇ ಆಗಿರುವನು, ಅಥವಾ ಇತರಇವ-ವ್ಯಾಸನೆಂಬ ನಾಮಾಂತರವನ್ನು ಪಡೆದು ಇತರನಂತೆತೋರುವ ಭಗವಂತನೇ ಆಗಿರುವುದರಿಂದ, ಭವಾನ್-ನೀನು, ತತ್-ಸಕಲ ಪ್ರಪಂಚವೂ ಬ್ರಹ್ಮಸ್ವರೂಪವೇ ಆಗಿರುವುದೆಂಬ ತತ್ವವನ್ನು, ಸ್ವಯಂ-ನೀನಾಗಿಯೇ,ವೇದಹಿ-ತಿಳಿದಿರುವೆಯಷ್ಟೆ, ತಥಾಪಿ-ಇಂತು ನೀನು ಸರ್ವಜ್ಞನಾಗಿದ್ದರೂ, ಭವತಃ-ನಿನಗೆ, ಪ್ರಾದೇಶಮಾತ್ರಂ-ಸ್ವಲ್ಪ ಸಂಗತಿಯುಮಾತ್ರ, ಪ್ರದರ್ಶಿತಂ-ನಿರೂಪಿಸಲ್ಪಟ್ಟಿತು, ॥೨೦॥ ಹೇ ಅಮೋಘದೃಕ್, ಅಮೋಘ-ಸಫಲವಾದ, ದೃಕ್-ಜ್ಞಾನವುಳ್ಳ ವ್ಯಾಸಮುನಿಯೆ? ಪರಮಾತ್ಮನಃ-ಸರ್ವಾಂತರ್ಯಾಮಿಯಾದ, ಪರಸ್ಯಪುಂಸಃ-ಪರಮೇಶ್ವರನ, ಕಳಾಂ-ಅಂಶಭೂತನಾದುದರಿಂದಲೇ, ಅಜಂ-ಜನ್ಮರಹಿತನಾದ, ಆತ್ಮಾನಂ-ನಿನ್ನನ್ನು,ತ್ವಂ-ನೀನು ಆತ್ಮನಾ-ಮನಸ್ಸಿನಿಂದ, ಜಗತಃ-ಲೋಕದ, ಶಿವಾಯ-ಕ್ಷೇಮಕ್ಕಾಗಿ, ಪ್ರಜಾತಂ - ಹುಟ್ಟಿದವನನ್ನಾಗಿ, ಅವೇಹಿ-ತಿಳಿ, ತತ್-ಆದುದರಿಂದ, ಮಹಾನುಭಾವಾಭ್ಯುದಯಃ, ಮಹಾನುಭಾವ-ಮಹಾಮಹಿಮೆಯುಳ್ಳ ಭಗವಂತನ, ಅಭ್ಯುದಯಃ-ಲೀಲೆಯು, ಅಧಿಗಣ್ಯತಾಂ-ಅಧಿಕವಾಗಿ ವರ್ಣಿಸಲ್ಪಡಲಿ ॥೨೧॥ ಉತ್ತಮ

ಸ್ಥಿತಿಲಯಗಳುಂಟಾಗಿರುವುವೋ ಅವನೇ ಈ ಪ್ರಪಂಚಸ್ವರೂಪನಾದ ಭಗವಂತನು, ಬೇರೆಯಾಗಿ ತೋರುತ್ತಿರುವ ಜೀವಾತ್ಮನೂ ಭಗವತ್ಸ್ವರೂಪವೇ ಆಗಿರುವುದರಿಂದ ಚೇತನಾ ಚೇತನಾತ್ಮಕವಾದ ಪ್ರಪಂಚವು ಆತನಿಗಿಂತಲೂ ಬೇರೆಯಲ್ಲ ಹೀಗಿದ್ದರೂ ಆತನು ಪ್ರಪಂಚಕ್ಕಿಂತಲೂ ಬೇರೆಯಾಗಿಯೇ ಇರುವನು. * ಸರ್ವವೂ ಬ್ರಹ್ಮವೇ ಎಂಬ ಶ್ರುತಿವಚನದಂತೆ ಆತನೊಬ್ಬನೇ ಸತ್ಯವಾದ ತತ್ವವೆಂದುತಿಳಿ. ಪ್ರಪಂಚವ್ಯಾಪಾರಗಳೆಲ್ಲವೂ ಅವನ ಲೀಲೆಗಳೇ ಆ ತತ್ವವನ್ನು ನೀನು ಚೆನ್ನಾಗಿ ಬಲ್ಲವನಾಗಿದ್ದರೂ, ‡ ವೇದದಲ್ಲಿ ಹೇಳುವಂತೆ ಸಂಪ್ರದಾಯಸಿದ್ಧಿಗಾಗಿ, ನಾನು ನಿನಗೆ ಸ್ವಲ್ಪಮಾತ್ರ ಹೇಳಿರುವೆನು ॥೨೦॥ ಅಯ್ಯಾ ಸಫಲಜ್ಞಾನಶಾಲಿಯಾದ ಬಾದರಾಯಣನೆ ! ನೀನು ಸಾಧಾರಣನಲ್ಲ, ಸರ್ವಾಂತರ್ಯಾಮಿಯಾದ ಪರಮೇಶ್ವರನಿಗಂಶಭೂತನಾಗಿ, ಜನ್ಮಾದಿಗಳಿಲ್ಲದಿದ್ದರೂ ಲೋಕಕ್ಷೇಮಕ್ಕಾಗಿ ಅವತರಿಸಿದ ಭಗವಂತನೆಂದು ತಿಳಿ,ಹೀಗಿರುವುದರಿಂದ ಆ ಮಹಾನುಭಾವನಾದ ಹರಿಪರಮಾ

@ [೧] ವೀ. ಪರಮಾತ್ಮನು ಪ್ರಪಂಚವೇ ಆಗಿದ್ದರೂ ಪ್ರಪಂಚಕ್ಕಿಂತಬೇರೆಯಾಗಿರುವನು [೨] ವಿ. ಪ್ರಪಂಚಕ್ಕಿಂತ ವಿಲಕ್ಷಣನಾದ ಪರಮಾತ್ಮನು ಪ್ರಪಂಚದಂತೆ ಕಾಣುವನೇ ಹೊರತು ಪ್ರಪಂಚವಲ್ಲ. [೩] ಸು-ಸುಬೋಧಿನೀ, ಪ್ರಪಂಚದ ಪ್ರತಿವಸ್ತುವಿನಲ್ಲಿಯೂ ಪರಮಾತ್ಮದೃಷ್ಟಿಯನ್ನೇ ಇಡಬೇಕು[೪] ವಿಶ್ವ-ವಿಶ್ವನಾಥವ್ಯಾಖ್ಯಾ. ಭಗವಂತನಂತೆ ಈ ಜಗತ್ತು ಸಚ್ಚಿದಾನಂದವೆನಿಸಿ ತೋರುತ್ತಿರುವುದೇಹೊರತು, ನಿಜವಾಗಿ ಸಚ್ಚಿದಾನಂದಾತ್ಮಕವಲ್ಲ. ಭಗವಂತನಲ್ಲಿರುವ ಸಚ್ಚಿದಾನಂದಗಳು ನಿತ್ಯಗಳು. ಜಗತ್ತಿನಲ್ಲಿರುವ ಸಚ್ಚಿದಾನಂದಗಳು ಕ್ಷಣಿಕಗಳು. ಆದುದರಿಂದ ಭಗವಂತನು ಪ್ರಪಂಚವಲ್ಲ.

* ಶ್ರು-ಸರ್ವಂಖಲ್ವಿದಂ ಬ್ರಹ್ಮ ‡ ಶ್ರು-ಆಚಾರ್ಯವಾನ್ ಪುರುಷೋವೇದ

ಗೃಣ್ಯತಾಂ ॥೨೧॥ ಇದಂಹಿ ಪುಂಸ ಸ್ತಪಸ ಶ್ರುತಸ್ಯ ಸ್ವಿಷ್ಟಸ್ಯ ಪೂರ್ತಸ್ಯ
* ಸುಸೂಕ್ತದತ್ತಯೋಃ। ಅವಿಚ್ಯುತೋರ್ಥಃ ಕವಿಭಿ ರ್ನಿರೂಪಿತೋ ಯದು
ತ್ತಮಶ್ಲೋಕಗುಣಾನುವರ್ಣನಂ॥೨೨॥ ಅಹಂ ಪುರಾತೀತಭವೇ ಭವಂ ಸು
ತೋ ದಾಸ್ಯಾಸ್ತು ಕಸ್ಯಾಶ್ಚನ ವೇದವಾದಿನಾಂ। ನಿರೂಪಿತೋ ಬಾಲಕ ಏವ
ಯೋಗಿನಾಂ ಶುಶ್ರೂಷಣೇ ಪ್ರಾವೃಷಿ ನಿರ್ವಿವಕ್ಷತಾಂ ॥೨೩॥ ತೇ ಮಯ್ಯ
ಪೇತಾಖಿಲಬಾಲಚಾಪಲೇ ದಾಂತೇ ಧೃತಕ್ರೀಡನಕೇನು ವರ್ತಿನಿ । ಚಕ್ರುಃ

ಶ್ಲೋಕ-ಭಗವಂತನ, ಗುಣ- ಗುಣಗಳ, ಅನುವರ್ಣನಂ - ಹೊಗಳಿಕೆಯು, ಯತ್ - ಯಾವುದುಂಟೋ, ಇದಂಹಿ-ಇದೇ, ಪುಂಸಃ-ಪ್ರಾಣಿಯ, ತಪಸಃ-ನಿದಿಧ್ಯಾಸನರೂಪವಾದ ತಪಸ್ಸಿಗೂ, ಶ್ರುತಸ್ಯ-ಶಾಸ್ತ್ರಾಭ್ಯಾಸಕ್ಕೂ, ಇಷ್ಟಸ್ಯ-ಅಗ್ನಿಷ್ಟೋಮಾದಿ ಯಾಗಗಳನ್ನು ಮಾಡುವುದಕ್ಕೂ, ಪೂರ್ತಸ್ಯ- ಬಾವಿ, ಕೆರೆ, ತೋಪು ಮೊದಲಾದವುಗಳನ್ನು ಪ್ರತಿಷ್ಠೆಮಾಡುವುದಕ್ಕೂ, ಸುಸೂಕ್ತ - ಸವಿನುಡಿಗಳಿಂದ ಹೊಗಳುವುದಕ್ಕೂ, ದತ್ತಯೋಃ - ಮಹಾದಾನಗಳನ್ನು ಮಾಡುವುದಕ್ಕೂ ಸಹ, ಕವಿಭಿಃ - ಪಂಡಿತರಿಂದ, ಅವಿಚ್ಯುತಃ-ನಾಶರಹಿತವಾದ, ಅರ್ಥಃ - ಫಲವೆಂದು, ನಿರೂಪಿತಃ - ಹೇಳಲ್ಪಟ್ಟಿರುವುದು ॥ ೨೨ ॥ ಪುರಾ - ಪೂರ್ವದಲ್ಲಿ, ಅತೀತಭವೇ-ಹಿಂದಣಜನ್ಮದಲ್ಲಿ, ಅಹಂ-ನಾನು, ವೇದವಾದಿನಾಂ - ವೇದಪಾಠಕರ, ಕಸ್ಯಾಶ್ಚನ - ಒಬ್ಬ, ದಾಸ್ಯಾಃ-ದಾಸಿಗೆ, ಸುತಃ-ಮಗನು, ಅಭವಂ-ಆಗಿದ್ದೆನು, ಬಾಲಕಏವ ನಾನು, ಹುಡುಗನಾಗಿರುವಾಗಲೇ ಪ್ರಾವೃಷಿ- ಮಳೆಗಾಲವೆನಿಸಿದ ಚಾತುರ್ಮಾಸ್ಯದಲ್ಲಿ, ನಿರ್ವಿವಕ್ಷತಾಂ - ಒಂದೆಡೆಯಲ್ಲಿ ವಾಸಮಾಡಲಪೇಕ್ಷಿಸಿದ, ಯೋಗಿನಾಂ-ಯತಿಗಳ, ಶುಶ್ರೂಷಣೇ-ಸೇವೆಯಲ್ಲಿ, ನಿರೂಪಿತಃ-ನೇಮಿಸಲ್ಪಟ್ಟೆನು ॥೨೩॥ ಅಪೇತಾಖಿಲಬಾಲಚಾಪಲೇ, ಅಪೇತ-ಬಿಡಲ್ಪಟ್ಟಿರುವ, ಅಖಿಲ-ಸಮಸ್ತವಾದ, ಬಾಲಚಾಪಲೇ-ಹುಡುಗಾಟಗಳುಳ್ಳ, ಅಧೃತಕ್ರೀಡನಕೇ, ಅಧೃತ-ಧರಿಸಲ್ಪಡದಿರುವ, ಕ್ರೀಡನಕೇ-ಆಟದ ಸಾಮಾನುಗಳುಳ್ಳ, ಅಥವಾ ಧೃತಕ್ರೀಡನಕೇಪಿ, ಧೃತ-ಧರಿಸಲ್ಪಟ್ಟ, ಕ್ರೀಡನಕೇಪಿ-ಆಟದ ಸಾಮಗ್ರಿಯುಳ್ಳವನಾಗಿದ್ದರೂ, ದಾಂತೇ-ಜಿತೇಂದ್ರಿಯನಾದ, ಅನುವರ್ತಿನಿ-ಅನುಸರಿಸಿರುವ, ಶುಶ್ರೂಷಮಾಣೇ-ಸೇವಿಸುತ್ತಿರುವ, ಅಲ್ಪಭಾಷಿಣಿ-ಮಿತಭಾಷಿಯಾದ, ಮಯಿ-ನನ್ನಲ್ಲಿ, ತುಲ್ಯದರ್ಶನಾಯದ್ಯಪಿ - ಸಮಬುದ್ಧಿಯುಳ್ಳವರಾಗಿದ್ದರೂ, ತೇಮುನಯಃ-ಆ

ತ್ಮನ ಲೀಲೆಗಳನ್ನು ವಿಸ್ತಾರವಾಗಿ ಬಣ್ಣಿಸು ॥೨೧॥ ಸರ್ವಸ್ತುತ್ಯನಾದ ಭಗವಂತನ ಚರಿತ್ರೆಯನ್ನು ವರ್ಣಿಸುವುದೇ, ಪುರುಷನ ತಪಸ್ಸಿಗೂ ಶಾಸ್ತ್ರಾಭ್ಯಾಸಕ್ಕೂ, ಯಜ್ಞಯಾಗಾದಿಗಳಿಗೂ, ವಾಪೀಕೂಪಾದಿ ಪೂರ್ತಕರ್ಮಗಳಿಗೂ, ಸವಿನುಡಿಗಳಿಗೂ, ದಾನಧರ್ಮಗಳಿಗೂ ಮುಖ್ಯವಾದ ಫಲವೆಂದು ಪಂಡಿತರು ಹೇಳುವರು ॥೨೨॥ ಆ ಭಗವತ್ಕಥಾಶ್ರವಣಾದಿಗಳ ಫಲವು ಪ್ರಾಪ್ತವಾಗಬೇಕಾದರೆ ಸತ್ಸಂಗವುಂಟಾಗಬೇಕು, ಈ ವಿಷಯದಲ್ಲಿ ಒಂದು ಇತಿಹಾಸವನ್ನು ಹೇಳುವೆನು ಕೇಳು. ನಾನು ಪೂರ್ವಜನ್ಮದಲ್ಲಿ, ವೇದಪಾಠಕರಾದ ಬ್ರಾಹ್ಮಣರಿಗೆ ದಾಸಿಯಾಗಿದ್ದ ಒಬ್ಬ ಸ್ತ್ರೀಗೆ ಪುತ್ರನಾಗಿ ಹುಟ್ಟಿದೆನು. ನಾನು ಬಾಲನಾಗಿರುವಾಗಲೇ ಮಳೆಗಾಲದ ಚಾತುರ್ಮಾಸ್ಯ ವ್ರತಕ್ಕಾಗಿ ಒಂದು ಕಡೆಯಲ್ಲಿ ನೆಲಸಬೇಕೆಂದು ಬಂದ ಯತಿಗಳ ಶುಶ್ರೂಷೆಗಾಗಿ ನೇಮಿಸಲ್ಪಟ್ಟೆನು ॥೨೩॥ ನಾನು ಆಟಗಳನ್ನಾಡುವ ವಯಸ್ಸಿನಲ್ಲಿದ್ದರೂ ಆಟದ ಸಾಮಾನುಗಳನ್ನು ಬಿಸುಟು, ಹುಡುಗಾಟವಾಡದೆ, ಇಂದ್ರಿಯಗಳನ್ನಡಗಿಸಿ, ಮಿತಭಾಷಿಯಾಗಿ, ಅನುಸರಿಸಿಕೊಂಡು ಶುಶ್ರೂಷೆಮಾಡುತ್ತಿರಲು,

* ಪಾ-ಬುದ್ಧಿ ಅಥವಾ ಬುದ್ಧ-ಜ್ಞಾನ,

ಕೃಪಾಂ ಯದ್ಯಪಿ ತುಲ್ಯದರ್ಶನಾಃ ಶುಶ್ರೂಷಮಾಣೇ ಮುನಯೋಲ್ಪಭಾಷಿಣಿ॥೨೪॥ಉಚ್ಛಿಷ್ಟಲೇಪಾನನುಮೋದಿತೋ ದ್ವಿಜೈಸ್ಸಕೃತ್ಸ್ಮಭುಂಜೇ ತದಪಾಸ್ತಕಿಲ್ಬಿಷಃ। ಏವಂ ಪ್ರವೃತ್ತಸ್ಯ ವಿಶುದ್ಧಚೇತಸಸ್ತದ್ಧರ್ಮಏವಾತ್ಮರುಚಿಃ ಪ್ರಜಾಯತೇ॥೨೫॥ತತ್ರಾನ್ವಹಂ ಕೃಷ್ಣಕಥಾಃ ಪ್ರಗಾಯತಾಮನುಗ್ರಹೇಣಾ ಶೃಣವಂ ಮನೋಹರಾಃ। ತಾಃ ಶ್ರದ್ಧಯಾಮೇನು * ಸವಂ ವಿಶೃಣ್ವತಃ ಪ್ರಿಯಶ್ರವಸ್ಯಂಗ ಮಮಾಭವದ್ರತಿಃ ॥೨೬॥ ತಸ್ಮಿಂಸ್ತದಾ ಲಬ್ಧ

ಋಷಿಗಳು, ಕೃಪಾಂ-ದಯೆಯನ್ನು, ಚಕ್ರುಃ-ಮಾಡಿದರು ॥೨೪॥ ಸಕೃತ್-ಒಂದೊಂದುವೇಳೆ, ದ್ವಿಜೈಃ-ಆ ಬ್ರಾಹ್ಮಣರಿಂದ, ಉಚ್ಛಿಷ್ಟಲೇಪಾನ್ - ಉಚ್ಛಿಷ್ಟ-ತಿಂದುಮಿಕ್ಕಿರುವ, ಲೇಪಾನ್-ಪಾತ್ರೆಯಲ್ಲಿ ಕಚ್ಚಿಕೊಂಡಿರುವ ಅನ್ನವನ್ನು, ಅನುಮೋದಿತಃ-ಭುಜಿಸೆಂದು ಆಜ್ಞಾಪಿಸಲ್ಪಟ್ಟವನಾಗಿ, ಭುಂಜೇಸ್ಮ-ಊಟಮಾಡುತ್ತಿದ್ದೆನು. ತದಪಾಸ್ತಕಲ್ಮಷಃ, ತತ್-ಆ ಉಚ್ಛಿಷ್ಟ ಭೋಜನದಿಂದ, ಅಪಾಸ್ತ-ಕಳೆಯಲ್ಪಟ್ಟ, ಕಿಲ್ಬಿಷಃ-ಪಾಪವುಳ್ಳವನು,(ಜಾತಃ-ಆದೆನು,)ಏವಂ-ಇಂತು ಉಚ್ಛಿಷ್ಟಭೋಜನಾದಿಗಳಲ್ಲಿ, ಪ್ರವೃತ್ತಸ್ಯ-ಆಸಕ್ತನಾಗಿರುವುದರಿಂದಲೇ, ವಿಶುದ್ಧಚೇತಸಃ ವಿಶುದ್ಧ-ಪರಿಶುದ್ಧನಾದ, ಚೇತಸಃ-ಮನಸ್ಸುಳ್ಳನನಗೆ-ತದ್ಧರ್ಮಏವ, ತತ್-ಆ ಋಷಿಗಳ, ಧರ್ಮಏವ-ಭಗವದ್ಭಜನರೂಪವಾದ ಧರ್ಮದಲ್ಲಿಯೇ, ಆತ್ಮರುಚಿಃ-ಮನಃಪ್ರೀತಿಯು, ಪ್ರಜಾಯತೇಸ್ಮ-ಉಂಟಾಯಿತು, ॥೨೫॥ ತತ್ರ-ಅಲ್ಲಿಅನ್ವಹಂ-ಪ್ರತಿದಿನವೂ, ಮನೋಹರಾಃ-ರಮಣೀಯಗಳಾದ, ಕೃಷ್ಣಕಥಾಃ-ಕೃಷ್ಣನ ಚರಿತ್ರೆಗಳನ್ನು, ಪ್ರಗಾಯತಾಂ-ಭಕ್ತಿಯಿಂದ ಗಾನಮಾಡುತ್ತಿರುವ ಋಷಿಗಳ, ಅನುಗ್ರಹೇಣ-ಪ್ರಸಾದದಿಂದ, ಅಶೃಣವಂ ಕೇಳಿದೆನು. ಅನುಸವಂ ಅಥವಾ ಅನುಪದಂ-ಯಾವಾಗಲೂ, ಶ್ರದ್ಧಯಾ-ಭಕ್ತಿಯಿಂದ, ತಾಃ-ಆ ಕಥೆಗಳನ್ನು, ವಿಶೃಣ್ವತಃ-ಕೇಳುತ್ತಿರುವ, ಮಮ-ನನಗೆ. ಪ್ರಿಯಶ್ರವಸಿ, ಪ್ರಿಯ - ಪ್ರಿಯನಾದಭಗವಂತನ ಶ್ರವಸಿ-ಚರಿತ್ರ ಶ್ರವಣದಲ್ಲಿ, ರತಿಃ-ಪ್ರೀತಿಯು, ಅಭವತ್-ಆಯಿತು, ಅಂಗ-ಆಶ್ಚರ್ಯವು ॥೨೬॥ ಹೇಮಹಾಮತೇ-ಎಲೈ ವಿಶಾಲಬುದ್ಧಿಯುಳ್ಳ ವ್ಯಾಸನೆ? ಪ್ರಿಯಶ್ರವಸಿ, ಪ್ರಿಯ-ಪ್ರಿಯನಾದ ಭಗವಂತನ, ಶ್ರವಸಿ-ಚರಿತ್ರೆಯ ಶ್ರವಣದಲ್ಲಿ,ಲಬ್ಧರುಚೇಃ, ಲಬ್ಧ-ಹೊಂದಲ್ಪಟ್ಟ,ರುಚೇಃ-ಪ್ರೀತಿಯುಳ್ಳ,ಮಮ-ನನ್ನ,ಮತಿಃ-ಬುದ್ಧಿಯು ಅಥವಾ ಭಕ್ತಿಯು ತದಾ-ಆಗ,ಅಸ್ಖಲಿತಾ-ನಿಶ್ಚಲವಾಯಿತು ಅಥವಾ ದೃಢವಾಯಿತು.(ಅಹಂ-ನಾನು)ಯಯಾ-ಯಾವನಿಶ್ಚಲಬುದ್ಧಿಯಿಂದ ಅಥವಾಯಾವ ದೃಢಭಕ್ತಿಯಿಂದ,ಪರೇ-

ಅವರು ಸಮಬುದ್ಧಿಯುಳ್ಳವರಾದರೂ, ನನ್ನಲ್ಲಿ ಪರಮಾನುಗ್ರಹವನ್ನು ಮಾಡಿದರು ॥೨೪॥ ಆ ಮಹಾತ್ಮರೊಂದೊಂದು ವೇಳೆಯಲ್ಲಿ ತಾವು ತಿಂದು ಮಿಕ್ಕ,ಪಾತ್ರೆಯಲ್ಲಿ ಅಂಟಿಕೊಂಡಿರುವ ಎಂಜಲನ್ನವನ್ನು ಭುಜಿಸುವಂತೆ ಅನುಗ್ರಹಮಾಡುತ್ತಿದ್ದರು. ನಾನವರಾಜ್ಞೆಯಂತೆ ಆ ಅನ್ನವನ್ನುಂಡು ಪಾಪಗಳನ್ನು ಕಳೆದುಕೊಂಡೆನು. ಹೀಗೆ ಪಾಪನಿವೃತ್ತಿಯಾದಬಳಿಕ ನನಗೆ ಅವರು ಮಾಡುವ ಭಗವದ್ಭಜನದಲ್ಲಿಯೇ ಪ್ರೀತಿಯುಂಟಾಗುತ್ತಾ ಬಂತು ॥ ೨೫॥ ಅನಂತರದಲ್ಲಿ ಪ್ರತಿದಿನವೂ ಆನಂದದಿಂದ ಮನೋಹರಗಳಾದ ಭಗವಚ್ಚರಿತ್ರೆಗಳನ್ನು ಹೊಗಳುತ್ತಿರುವ ಆ ಮಹಾತ್ಮರ ಅನುಗ್ರಹದಿಂದ, ನಾನೂ ಶ್ರವಣಮಾಡುತ್ತಾ ಬಂದೆನು. ಭಕ್ತಿಪೂರ್ವಕವಾಗಿ ಕೇಳುತ್ತಬರಲು, ಆ ಹರಿಕಥೆಯಲ್ಲಿ ನನಗೆ ಬಹಳರುಚಿಯುಂಟಾಯಿತು ॥೨೬॥ ಅಯ್ಯಾಮಹಾ ಪ್ರಜ್ಞನಾದ ಬಾದರಾಯಣನೆ? ಇಂತು ಸರ್ವಲೋಕ ಪ್ರಿ

* ಪಾ-ಅನುಪದಂ.

ರುಚೇರ್ಮಹಾಮತೇಃ ಪ್ರಿಯಶ್ರವಸ್ಯಸ್ಖಲಿತಾ ಮತಿರ್ಮಮಾಯಯಾ ಮ
ಯ್ಯೈತತ್ಸದಸತ್ಸ್ವಮಾಯಯಾ *ಪಶ್ಯೇ ಮಯಿ ಬ್ರಹ್ಮಣಿ ಕಲ್ಪಿತಂ ಪರೇ ॥
ಇತ್ಥಂ ಶರತ್ಪ್ರಾವೃಷಿಕಾವೃತೂ ಹರೇರ್ವಿಶೃಣ್ವತೋ ಮೇಽನುಸವಂ ಯ
ಶೋಽಮಲಂ।ಸಂಕೀರ್ತ್ಯಮಾನಂ ಮುನಿಭಿರ್ಮಹಾತ್ಮಭಿರ್ಭಕ್ತಿಃಪ್ರವೃತ್ತಾ
ತ್ಮರಜಸ್ತಮೋಪಹಾ ॥೨೮॥ ತಸ್ಯೈವಂ ಮೇಽನುರಕ್ತಸ್ಯ ಪ್ರಶ್ರಿತಸ್ಯ ಹತೈ

ಪ್ರಪಂಚಾತೀತವಾದ, ಬ್ರಹ್ಮಣಿ - ಬ್ರಹ್ಮಸ್ವರೂಪನಾದ, ಮಯಿ - ನನ್ನಲ್ಲಿ, ಸದಸತ್, ಸತ್ - ಸ್ಥೂಲವಾಗಿಯೂ, ಅಸತ್ - ಸೂಕ್ಷ್ಮವಾಗಿಯೂ ಇರುವ ಅಥವಾ ಸದಸತ್ - ಸತ್ಯವಾಗಿ ತೋರಿದರೂ ಅಸತ್ಯವಾಗಿರುವ ಏತತ್ - ಈ ಶರೀರದ್ವಯವೂ, ಸ್ವಮಾಯಯಾ, ಸ್ವ - ತನ್ನ, ಮಾಯಯಾ- ಅವಿದ್ಯೆಯಿಂದ, ಕಲ್ಪಿತಂ- ಕಲ್ಪಿಸಲ್ಪಟ್ಟದ್ದನ್ನಾಗಿ, ಪಶ್ಯೇ - ನೋಡುತ್ತೇನೋ ॥೨೭॥ ಇತ್ಥಂ- ಹೀಗೆ ಶರತ್ಪ್ರಾವೃಷಿಕೌ, ಶರತ್-ಶರತ್ಕಾಲವೂ, ಪ್ರಾವೃಷಿಕೌ-ವರ್ಷಾಕಾಲವೂ, ಋತೂ-ಎರಡು ಋತುಗಳಲ್ಲಿಯೂ ಅನುಸವಂ-ಪ್ರತಿಕ್ಷಣದಲ್ಲಿಯೂ, ಮಹಾತ್ಮಭಿಃ- ಮಹಾಮಹಿಮರಾದ, ಮುನಿಭಿಃ-ಋಷಿಗಳಿಂದ, ಸಂಕೀರ್ತ್ಯಮಾನಂ-ಹೊಗಳಲ್ಪಡುತ್ತಿರುವ, ಹರೇಃ-ಶ್ರೀ ಕೃಷ್ಣನ, ಅಮಲಂ-ನಿರ್ಮಲವಾದ, ಯಶಃ-ಕೀರ್ತಿಯನ್ನು, ವಿಶೃಣ್ವತಃ-ಕೇಳುತ್ತಿರುವ, ಮೇ-ನನಗೆ, ಆತ್ಮರಜಸ್ತಮೋಪಹಾ, ಆತ್ಮ-ನನ್ನ, ರಜಃ-ರಜೋಗುಣವನ್ನು, ತಮಃ-ತಮೋಗುಣವನ್ನು, ಅಪಹಾ - ಹೋಗಲಾಡಿಸುವ, ಭಕ್ತಿಃ-ಭಕ್ತಿಯು, ಪ್ರವೃತ್ತಾ- ಉಂಟಾಯಿತು ॥೨೮॥ ಏವಂ-ಹೀಗೆ ತ್ವಂ ಪದಾರ್ಥವನ್ನು ಶೋಧಿಸಿರುವ, ಅನುರಕ್ತಸ್ಯ-ಋಷಿಗಳ ಸೇವೆಯಲ್ಲಿ ಪ್ರೀತಿಯುಳ್ಳ, ಪ್ರಶ್ರಿತಸ್ಯ-ವಿನೀತನಾದ, ಹತೈನಸಃ, ಹತ-ನಷ್ಟವಾದ, ಏನಸಃ - ಪಾಪಗಳುಳ್ಳ,

-ಯನಾದ ಭಗವಂತನ ಚರಿತ್ರೆಯಲ್ಲಿ ನಿರತಿಶಯ ಪ್ರೀತಿಯುಂಟಾದ ಕೂಡಲೇ, ಪ್ರಪಂಚಾತೀತವಾದ ಪರಬ್ರಹ್ಮನೇ ನಾನೆಂತಲೂ, ಕಾರ್ಯಕಾರಣರೂಪವಾದ ಈ ಸ್ಥೂಲಸೂಕ್ಷ್ಮ ಶರೀರಗಳು ಅಂದರೆ ಈ ಪಿಂಡಾಂಡ ಬ್ರಹ್ಮಾಂಡಗಳು ನನ್ನಲ್ಲಿ ಅಜ್ಞಾನದಿಂದ ಕಲ್ಪಿತಗಳಾಗಿರುವುವೇ ಹೊರತು ವಾಸ್ತವನಲ್ಲವೆಂತಲೂ ತಿಳಿದುಕೊಂಡೆನು ॥೨೭॥ ಈ ರೀತಿಯಾಗಿ ಚಾತುರ್ಮಾಸ್ಯದ ನಾಲ್ಕು ತಿಂಗಳೂ ಎಡೆಬಿಡದೆ ಆ ಪರಮಹಂಸರು ಗಾನಮಾಡುತ್ತಿರುವ ಭಗವಂತನ ನಿರ್ಮಲಚರಿತ್ರೆಯನ್ನು ಶ್ರವಣ ಮಾಡುತ್ತಾ ಬರಲು, ತ್ವಂಪದಾರ್ಥಸ್ವರೂಪವನ್ನು ತಿಳಿದುವರಿಂದ, ಅಂತಃಕರಣದಲ್ಲಿರುವ ರಾಜಸಗಳಾದ ಅಹಂಕಾರಾದಿಗಳನ್ನು, ತಾಮಸಗಳಾದ ನಿದ್ರಾಲಸ್ಯಾದಿಗಳನ್ನೂ, ಹೋಗಲಾಡಿಸುವ ದೃಢತರವಾದ ಭಕ್ತಿಯುಂಟಾಯಿತು. ॥೨೮॥ ಈ ಪ್ರಕಾರವಾಗಿ ತ್ವಂಪದಾರ್ಥವೆನಿಸಿದ ಜೀವಸ್ವರೂಪವನ್ನು ಪರಿಶೋಧಿಸಿ, ಆ ಮಹರ್ಷಿಗಳ ಸೇವೆಯಿಂದ ಪಾಪರಹಿತನಾಗಿ, ಬಾಲನಾಗಿದ್ದರೂ ಜಿತೇಂದ್ರಿಯನಾಗಿಯೂ

* (೧) ವಿ—ಪರಮಾತ್ಮನಿಗೆ ವಿಧೇಯನಾದ ನನ್ನಲ್ಲಿ ಕಾರ್ಯಕಾರಣ ರೂಪವಾದ ಈ ಪ್ರಪಂಚವು ಮಾಯೆಯಿಂದ ಕಲ್ಪಿತವೇ ಹೊರತು ಸತ್ಯವಲ್ಲ, ವೆಂಬುದನ್ನೂ, ಶರೀರ ಜೀವರಿಗಿರುವ ಭೇದವನ್ನೂ ಜೀವೇಶ್ವರರಿಗಿರುವ ಸಂಬಂಧವನ್ನೂ ತಿಳಿದೆನು.

(೨) ವಿ—ನಾನು ಅಖಂಡೋಪಾಸನೆಯಿಂದ, ನನ್ನಲ್ಲಿ ಅಂತರ್ಯಾಮಿಯಾಗಿರುವ ಭಗವಂತನೇ ಈ ಜಗತ್ತನ್ನು ಹುಟ್ಟಿಸಿ, ಬೆಳೆಯಿಸಿ ಸಂಹರಿಸುವನೆಂದರಿದೆನು.

(೩) ಸಂ—ಪ್ರಪಂಚಕ್ಕಿಂತ ಬೇರೆಯಾದ ಬ್ರಹ್ಮಾನುಭವವುಂಟಾಯಿತು.

ನಃ। ಶ್ರದ್ದಧಾನಸ್ಯ ಬಾಲಸ್ಯ ದಾಂತಸ್ಯಾನುಚರಸ್ಯಚ॥೨೯॥ಜ್ಞಾನಂ ‡ಗುಹ್ಯ
ತಮಂ ಯತ್ತತ್ಸಾಕ್ಷಾ ದ್ಭಗವತೋದಿತಂ। ಅನ್ವವೋಚ ನ್ಗಮಿಷ್ಯಂತಃ
ಕೃಪಯಾ ದೀನವತ್ಸಲಾಃ ॥ ೩೦ ॥ ಯೇನೈವಾಹಂ ಭಗವತೋ ವಾಸು
ದೇವಸ್ಯ ವೇಧಸಃ। ಮಾಯಾನುಭಾವ ಮವಿದಂ ಯೇನ ಗಚ್ಛಂತಿ ತತ್ಪದಂ॥

ಶ್ರದ್ದಧಾನಸ್ಯ ಶ್ರದ್ಧೆಯುಳ್ಳ, ಬಾಲಸ್ಯ-ಹುಡುಗನಾದ, ದಾಂತಸ್ಯ-ಜಿತೇಂದ್ರಿಯನಾದ, ಅನುಚರಸ್ಯ-ಅನುಸರಿಸಿಕೊಂಡಿರುವ, ತಸ್ಯ-ಆ, ಮೇ-ನನಗೆ, ದೀನವತ್ಸಲಾಃ,ದೀನ-ಕಷ್ಟಪಡುವವರಲ್ಲಿ, ವತ್ಸಲಾಃ-ಕನಿಕರವುಳ್ಳ ಆ ಋಷಿಗಳು, ಗಮಿಷ್ಯಂತಃ ಪ್ರಯಾಣಮಾಡುವರಾಗಿ, ಯತ್-ಯಾವ ಶಾಸ್ತ್ರವು, ಸಾಕ್ಷಾತ್-ನೇರವಾಗಿ ಭಗವತಾ-ನಾರಾಯಣಮೂರ್ತಿಯಿಂದ, ಉದಿತಂ-ಉಂಟಾದುದೋ, ತತ್-ಅಂತಹ ಗುಹ್ಯತಮಂ-ಅತ್ಯಂತರಹಸ್ಯವಾದ, ಜ್ಞಾನಂ-ಭಕ್ತಿರೂಪವಾದ ಭಾಗವತ ಶಾಸ್ತ್ರವನ್ನು, ಅನ್ವವೋಚನ್-ಉಪದೇಶಿಸಿದರು ॥೩೦ ಅಹಂ-ನಾನು, ಯೇನೈವ-ಯಾವ ಭಕ್ತಿಯಿಂದಲೇ, ಭಗವತಃ - ಷಡ್ಗುಣೈಶ್ವರ್ಯ ಸಂಪನ್ನನಾದ, ವಾಸುದೇವಸ್ಯ- ಸರ್ವಾಂತರ್ಯಾಮಿಯಾದ, ವೇಧಸಃ – ಸೃಷ್ಟಿಕರ್ತನಾದ ಭಗವಂತನ, ಮಾಯಾನುಭಾವಂ, ಮಾಯಾ-ಮಾಯೆಯ, ಅನುಭಾವಂ-ಮಹಿಮೆಯನ್ನು, ಅವಿದಂ-ತಿಳಿದೆನೋ, ಯೇನ-ಯಾವ ಭಕ್ತಿಯಿಂದ, ತತ್ಪದಂ-ಆ ಪರಮ ಪದವನ್ನು,ಗಚ್ಛಂತಿ-ಪಡೆಯುವರೋ॥೩೧॥ಹೇಬ್ರಹ್ಮನ್-ಎಲೈ ಬ್ರಾಹ್ಮಣನೆ? ಈಶ್ವರೇ-ಸಕಲನಿಯಾಮಕನಾಗಿದ್ದರೂ,ಬ್ರಹ್ಮಣಿ-ಸ್ವರೂಪಚ್ಯುತಿ ಯಿಲ್ಲದ ಭಗವಂತನಲ್ಲಿ, ಕರ್ಮ-ಕರ್ಮವುಭಾವಿತಮಿತಿಯತ್-ಸಮರ್ಪಿಸಲ್ಪಡುವ ದಾವುದುಂಟೋ, ಏತತ್-ಈ ಈಶ್ವರಾರ್ಪಣವೆಂಬ,ತಾಪತ್ರಯಚಿಕಿತ್ಸಿತಂ

ಶ್ರದ್ಧಾವಂತನಾಗಿಯೂ, ಇರುವ ನನ್ನನ್ನು ಕಂಡು ದೀನದಯಾಳುಗಳಾದ ಆ ಮಹಾತ್ಮರು ಕನಿಕರಗೊಂಡು, ತಾವು ಮುಂದಕ್ಕೆ ಪ್ರಯಾಣಮಾಡುವ ಸಮಯದಲ್ಲಿ, ಸಾಕ್ಷಾನ್ನಾರಾಯಣಮೂರ್ತಿಯಿಂದಲೇ ಪೂರ್ವದಲ್ಲಿ ಬ್ರಹ್ಮದೇವನಿಗುಪದೇಶಿಸಲ್ಪಟ್ಟ, ಅತ್ಯಂತರಹಸ್ಯವಾದ ಜ್ಞಾನಶಾಸ್ತ್ರವನ್ನು ಉಪದೇಶಿಸಿದರು ॥೩೦॥ ಯಾವ ಜ್ಞಾನದಿಂದ ನಾನು ಸರ್ವಾಂತರ್ಯಾಮಿಯಾಗಿಯೂ, ಸಕಲ ಜಗತ್ಕರ್ತನಾಗಿಯೂ ಇರುವ ಶ್ರೀವಾಸುದೇವಮೂರ್ತಿಯ ಮಾಯಾಮಹಿಮೆಯನ್ನು ತಿಳಿದುಕೊಂಡೆನೋ,*ಮಹಾತ್ಮರಾದವರೂ ಯಾವ ಜ್ಞಾನದಿಂದ ಆ ಪರಮೇಶ್ವರನ ಸಾಯುಜ್ಯಪದವಿಯನ್ನು ಪಡೆಯುವರೋ, ಅಂತಹ ದಿವ್ಯಜ್ಞಾನವನ್ನು ಉಪದೇಶಿಸಿದರು ॥೩೧॥ ಅಯ್ಯಾ ಬ್ರಾಹ್ಮಣೋತ್ತಮನಾದ ವ್ಯಾಸಮುನಿಯೇ! ಸಕಲ ಜಗನ್ನಿಯಾಮಕನಾಗಿದ್ದರೂ, ನಿರ್ವಿಕಾರನೆನಿಸಿರುವ ಆ ಭಗವಂತನಲ್ಲಿ ಫಲಾಭಿಸಂಧಿಯಿಲ್ಲದೆ ಸಮರ್ಪಿಸಲ್ಪಟ್ಟ ಕರ್ಮವು ಆಧ್ಯಾತ್ಮಿಕಾದಿ ತಾಪತ್ರಯವನ್ನು

‡ ಜ್ಞಾನವೆಂಬುದು ೩ ವಿಧ. (1)ಮೋಕ್ಷಸಾಧನಗಳಾದ ಧರ್ಮಗಳ ತತ್ವವನ್ನುತಿಳಿಯುವುದುಗುಹ್ಯ. (2) ಧರ್ಮತತ್ವಜ್ಞಾನದಿಂದ ಸ್ಥೂಲಸೂಕ್ಷ್ಮ ಶರೀರಗಳಿಗಿಂತಲೂ ಬೇರೆಯಾದ ಆತ್ಮವಸ್ತುವನ್ನು ತಿಳಿಯುವುದು ಗುಹ್ಯತರ, (3) ಆ ಆತ್ಮಜ್ಞಾನದಿಂದ ಪರಮಾತ್ಮ ತತ್ವವನ್ನು ತಿಳಿಯುವುದು ಗುಹ್ಯತಮ.

* ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿತೇ !

ದಾಂಸಿ ಗುರವೋಽಗ್ನಯಃ ॥ ೨೭ ॥ ಮಾನಿತಾ ನಿರ್ವ್ಯಳೀಕೇನ ಗೃಹೀತಂ ಚಾನುಶಾಸನಂ। ಭಾರತವ್ಯಪದೇಶೇನ ಹ್ಯಾಮ್ನಾಯಾರ್ಥಃ ಪ್ರದರ್ಶಿತಃ॥೨೮॥ ದೃಶ್ಯತೇ ಯತ್ರ ಧರ್ಮಾದಿಃ ಸ್ತ್ರೀಶೂದ್ರಾದಿಭಿ ರಪ್ಯುತ । ತಥಾಪಿ ಬತ ಮೇ * ದೈಹ್ಯೋ ಹ್ಯಾತ್ಮಾ ಚೈವಾತ್ಮನಾ ವಿಭುಃ ॥ ೨೯ ॥ ಅಸಂಪನ್ನ ಇವಾಭಾತಿ ಬ್ರಹ್ಮವರ್ಚಸ್ಯ † ಸತ್ತಮಃ । ಕಿಂವಾ ಭಾಗವತಾ ಧರ್ಮಾ ನಪ್ರಾಯೇಣ ನಿರೂಪಿತಾಃ ॥೩೦॥ ಪ್ರಿಯಾಃ ಪರಮಹಂಸಾನಾಂ ತಏವ

ಸಂತೋಷಿಸಲಿಲ್ಲವೋ, ತತಃ-ಆಗ, ನಾತಿಪ್ರಸೀದದ್ಧೃದಯಃ-ಸಂಪೂರ್ಣವಾಗಿ ಪ್ರಸನ್ನವಾಗದ ಮನಸ್ಸುಳ್ಳವನಾಗಿ, ಶುಚೌ-ಪರಿಶುದ್ಧವಾದ, ಸರಸ್ವತ್ಯಾಃ - ಸರಸ್ವತೀನದಿಯ, ತಟೇ-ದಡದಲ್ಲಿ, ॥ ೨೭ ॥ ವಿವಿಕ್ತಸ್ಥಃ - ನಿರ್ಜನಪ್ರದೇಶದಲ್ಲಿ ಕುಳಿತುಕೊಂಡು, ಧರ್ಮವಿತ್-ಧರ್ಮಸ್ವರೂಪವನ್ನು ಬಲ್ಲವ್ಯಾಸಮುನಿಯು, ಇದಂಚ-ಈ ಮುಂದಣ ಸಂಗತಿಯನ್ನು, ಉವಾಚ-ಹೇಳಿದನು ॥ ೨೮ ॥ ಧೃತವ್ರತೇನ, ಧೃತ-ಧರಿಸಲ್ಪಟ್ಟ, ವ್ರತೇನ-ನಿಯಮವುಳ್ಳ, ಮಯಾ-ನನ್ನಿಂದ, ಛಂದಾಂಸಿ-ವೇದಗಳೂ, ಗುರವಃ - ಗುರುಗಳೂ, ಅಗ್ನಯಃ-ಅಗ್ನಿಗಳೂ, ನಿರ್ವ್ಯಳೀಕೇನ-ನಿಷ್ಕಪಟದಿಂದ, ಮಾನಿತಾಃ - ಗೌರವಿಸಲ್ಪಟ್ಟವು, ಅನುಶಾಸನಂಚ-ಗುರುಗಳಾಜ್ಞೆಯೂ, ಗೃಹೀತಂ-ನಡೆಯಿಸಲ್ಪಟ್ಟಿತು, ಯತ್ರ-ಯಾವುದರಲ್ಲಿ, ಸ್ತ್ರೀಶೂದ್ರಾದಿಭಿರಪಿ, ಸ್ತ್ರೀಯರಿಂದಲು ಶೂದ್ರಾದಿಗಳಿಂದಲೂ, ಧರ್ಮಾದಿಃ - ಧರ್ಮಮೊದಲಾದ ಪುರುಷಾರ್ಥಗಳ ಸ್ವರೂಪವು, ದೃಶ್ಯತೇ -- ಕಾಣಲ್ಪಡುವುದೋ, ಅಂತಹ, ಭಾರತವ್ಯಪದೇಶೇನ--ಭಾರತವೆಂಬನೆವದಿಂದ, ಆಮ್ನಾಯಾರ್ಥಃ, ಆಮ್ನಾಯ-ವೇದಗಳ, ಅರ್ಥಃ-ಅರ್ಥವು, ಪ್ರದರ್ಶಿತಃ-ತೋರಿಸಲ್ಪಟ್ಟಿತು, ॥ ೨೯ ॥ ತಥಾಪಿ - ಆದರೂ, ಬ್ರಹ್ಮವರ್ಚಸ್ಯ ಸತ್ತಮಃ, ಬ್ರಹ್ಮವರ್ಚಸ್ಯ-ಬ್ರಹ್ಮವರ್ಚಸ್ಸನ್ನು ಪಡೆದವರಲ್ಲಿ, ಸತ್ತಮಃ-ಶ್ರೇಷ್ಠನಾದ, ವಿಭುಃ-ಸರ್ವವ್ಯಾಪಕನಾದ, ಮೇ-ನನ್ನ, ದೈಹ್ಯಃ - ದೇಹದಲ್ಲಿರುವ, ಆತ್ಮಾ-ಜೀವನು, ಆತ್ಮನಾ-ತನ್ನ ಸ್ವರೂಪದೊಡನೆ, ಅಸಂಪನ್ನ ಇವ, ಸೇರದವನಂತೆ, ಆಭಾತಿ- ತೋರುತ್ತಾನೆ. ಪ್ರಾಯೇಣ-ಬಹಳವಾಗಿ, ಪರಮ ಹಂಸಾನಾಂ-ಪರಮಹಂಸರಿಗೆ, ಪ್ರಿಯಾಃ - ಇಷ್ಟಗಳಾದ, ಭಾಗವತಾಃ-

ಶ್ರೇಯಸ್ಸಾಗಲೆಂದು ಪ್ರವರ್ತಿಸಿದರೂ, ಕರ್ಮವಿಷಯದಲ್ಲಿ ಆ ಮುನಿಯಮನಸ್ಸಿಗೆ ಶಾಂತಿಯೆಂಬುದುಂಟಾಗಲಿಲ್ಲ. ಆಗ ವ್ಯಾಸಮಹರ್ಷಿಯು ಪವಿತ್ರವಾದ ಸರಸ್ವತೀನದಿಯ ದಡದಲ್ಲಿ ಒಂದು ಏಕಾಂತಸ್ಥಳದಲ್ಲಿ ಒಂಟಿಯಾಗಿ ಕುಳಿತುಕೊಂಡು ಇಂತು ಚಿಂತಿಸಿದನು, "ನಾನು ನಿಯಮವನ್ನು ಮಾಡಿ ನಿಷ್ಕಪಟವಾಗಿ ವೇದಾಧ್ಯಯನವನ್ನು ಮಾಡಿದೆನು, ಗುರುಗಳನ್ನು ಸೇವಿಸಿದೆನು. ಅಗ್ನಿಪರಿಚರ್ಯೆಯನ್ನು ಮಾಡಿದೆನು, ಗುರ್ವಾಜ್ಞೆಯನ್ನು ನಡೆಯಿಸಿದೆನು. ಮತ್ತು ಸ್ತ್ರೀ ಶೂದ್ರಾದಿಗಳೂ ಕೂಡಾ ಸಕಲ ಧರ್ಮಗಳನ್ನೂ ತಿಳಿಯುವಂತೆ ಭಾರತವೆಂಬ ಹೆಸರನ್ನಿಟ್ಟು, ಸಕಲ ವೇದಾರ್ಥಗಳನ್ನೂ ಪ್ರಕಾಶಗೊಳಿಸಿದೆನು ಆದರೂ ವಿಭುವಾಗಿಯೂ, ಬ್ರಹ್ಮವರ್ಚಸ್ವಿಯಾಗಿಯೂ ಇರುವ ನನ್ನ ಜೀವನು ನಿಜ

* (೧) ಪಿ--ನನ್ನ ಪ್ರತ್ಯಗಾತ್ಮನು ಅಂತಃಕರಣದೊಡನೆ ಅಥವಾ ನನ್ನ ಅಂತಃಕರಣವು ಬ್ರಹ್ಮವರ್ಚಸ್ಸಿನೊಡನೆ ಸೇರಿದಂತೆ ಕಾಣುವುದಿಲ್ಲ. (೨) ಪಿ--ನನ್ನ ಆತ್ಮನು ತನ್ನ ಅವತಾರ ಪ್ರಯೋಜನವನ್ನು ಪಡೆಯದವನಂತಿರುವನು. † ಪಾ-ಅಸತ್ತಮಃ, ಮತ್ತು, ಉತ್ತಮಃ.

ಹ್ಯಚ್ಯುತಪ್ರಿಯಾಃ । ತಸ್ಯೈವಂ ಖಿಲ ಮಾತ್ಮಾನಂ ಮನ್ಯಮಾನಸ್ಯ ಖಿದ್ಯತಃ
ಕೃಷ್ಣಸ್ಯ ನಾರದೋಽಭ್ಯಾಗಾ ದಾಶ್ರಮಂ ಪ್ರಾಗುದಾಹೃತಂ । ತಮಭಿಜ್ಞಾ
ಯ ಸಹಸಾ ಪ್ರತ್ಯುತ್ಥಾಯಾಗತಂ ಮುನಿಃ ॥೩೨॥ ಪೂಜಯಾಮಾಸ ವಿಧಿ
ವಾನ್ನಾರದಂ ಸುರಪೂಜಿತಂ॥

ಇತಿ ಚತುರ್ಥೋಽಧ್ಯಾಯಃ

ಭಗವದ್ಭಕ್ತರ, ಧರ್ಮಾಃ-ನಡವಳಿಗಳು, ನಿರೂಪಿತಾನಕಿಂವಾ-ನಿರೂಪಿಸಲ್ಪಡಲಿಲ್ಲವೋಏನೊ ॥ ೩೧ ॥ ಹಿ-ಏಕೆಂದರೆ, ತಏವ-ಅಧರ್ಮಗಳೇ, ಅಚ್ಯುತಪ್ರಿಯಾಃ-ವಿಷ್ಣುವಿಗೆ ಪ್ರೀತಿಕರಗಳು, ಏವಂ - ಹೀಗೆ, ಆತ್ಮಾನಂ-ತನ್ನನ್ನು, ಖಿಲಂ-ಶೂನ್ಯವನ್ನಾಗಿ, ಮನ್ಯಮಾನಸ್ಯ-ತಿಳಿಯುತ್ತಿರುವನಾದುದರಿಂದಲೇ, ಖಿದ್ಯತಃ-ಚಿಂತಿಸುತ್ತಿರುವ, ಕೃಷ್ಣಸ್ಯ-ವ್ಯಾಸಮುನಿಯ, ಪ್ರಾಕ್-ಮೊದಲು, ಉದಾಹೃತಂ - ಹೇಳಲ್ಪಟ್ಟ, ಆಶ್ರಮಂ-ಆಶ್ರಮವನ್ನು ಕುರಿತು, ನಾರದಃ-ನಾರದಮುನಿಯು, ಅಭ್ಯಾಗಾತ್ - ಬಂದನು, ಮುನಿಃ-ವ್ಯಾಸಮುನಿಯು, ಆಗತಂ,ಬಂದ, ತಂ-ಆ ನಾರದನನ್ನು, ಅಭಿಜ್ಞಾಯ - ತಿಳಿದು, ಸಹಸಾ-ಬೇಗನೇ, ಪ್ರತ್ಯುತ್ಥಾಯ-ಎದುರುಗೊಂಡು, ಸುರಪೂಜಿತಂ-ದೇವತೆಗಳಿಂದ ಪೂಜಿಸಲ್ಪಟ್ಟ, ನಾರದಂ-ನಾರದನನ್ನು ವಿಧಿವತ್-ಶಾಸ್ತ್ರಪ್ರಕಾರವಾಗಿ, ಪೂಜಯಾಮಾಸ-ಪೂಜೆಮಾಡಿದನು ॥

ಚತುರ್ಥಾಧ್ಯಾಯಂ ಸಮಾಪ್ತಂ.

ಸ್ವರೂಪವನ್ನು ಪಡೆದಂತೆ ತೋರುವುದಿಲ್ಲ. ॥೨೬-೩೧॥ ಪರಮ ಹಂಸರಿಗೆ ಪ್ರಿಯಗಳಾದ ಭಾಗವತ ಧರ್ಮಗಳನ್ನು ಬಹಳ ಮಟ್ಟಿಗೆ ನಾನು ಪ್ರತಿಪಾದಿಸಿದಂತೆ ಕಾಣುವುದಿಲ್ಲ. ಅವುಗಳೇ ಅಲ್ಲವೆ ಭಗವಂತನಿಗೆ ಪ್ರಿಯಗಳು ? ಅಂತವುಗಳನ್ನೇ ನಾನು ಹೇಳದಿರಬಹುದು'' ಎಂದು ಶೂನ್ಯಮನಸ್ಕನಾಗಿ ಚಿಂತಿಸುತ್ತಿರಲು, ಆಗೈಸರಿಯಾಗಿ ನಾರದಮುನಿಯು ಅಲ್ಲಿಗೆ ಬಂದನು, ಕೂಡಲೇ ವ್ಯಾಸಋಷಿಯು ತಟ್ಟನೆ ಎದುರುಗೊಂಡು ಆತನಿಗೆ ಶಾಸ್ತ್ರ ಪ್ರಕಾರವಾಗಿ, ಪೂಜೆಯನ್ನು ಮಾಡಿದನು, ಎಂದು ಸೂತನು ಶೌನಕಾದಿಗಳಿಗೆ ಹೇಳಿದ ನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

ನಾಲ್ಕನೆಯ ಅಧ್ಯಾಯಂ ಮುಗಿದುದು.

ಓಂ ನಮಃ ಪರಮಾತ್ಮನೇ.

ಶ್ರೀ ಸೂತಃ ॥ ಅಥ ತಂ ಸುಖಮಾಸೀನ ಉಪಾಸೀನಂ ಬೃಹಚ್ಛ್ರವಾಃ । ದೇವರ್ಷಿಃ ಪ್ರಾಹ ವಿಪ್ರರ್ಷಿಂ ವೀಣಾಪಾಣಿ ಸ್ಸ್ಮಯನ್ನಿವ ॥ ೧ ॥ ಶ್ರೀನಾರದಃ ॥ ಪಾರಾಶರ್ಯ ಮಹಾಭಾಗ ಭವತಃ ಕಚ್ಚಿದಾತ್ಮನಾ । ಪರಿತುಷ್ಯತಿ ಶಾರೀರ ಆತ್ಮಾ ಮಾನಸ ಏವವಾ ॥ ೨ ॥ ಜಿಜ್ಞಾಸಿತಂ ಸುಸಂಪನ್ನ ಮಪಿತೇ ಮಹದದ್ಭುತಂ । ಕೃತವಾನ್ ಭಾರತಂ ಯಸ್ತ್ವಂ ಸರ್ವಾರ್ಥಪರಿಬೃಂಹಿತಂ ॥೩॥ ಜಿಜ್ಞಾಸಿತ ಮಧೀತಂಚ ಬ್ರಹ್ಮ ಯತ್ತತ್ಸನಾತನಂ।

ಶ್ರೀಸೂತಃ-ಸೂತಪೌರಾಣಿಕನು ಹೇಳುತ್ತಾನೆ.—ಅಥ-ಅನಂತರದಲ್ಲಿ, ಬೃಹಚ್ಛ್ರವಾಃ, ಬೃಹತ್-ಅಧಿಕವಾದ, ಶ್ರವಾಃ-ಕೀರ್ತಿಯುಳ್ಳ, ವೀಣಾಪಾಣಿಃ - ವೀಣೆಯನ್ನು ಕೈಯಲ್ಲಿಟ್ಟಿರುವ, ದೇವರ್ಷಿಃ-ನಾರದಮುನಿಯು, ಸುಖಂ-ಸುಖವಾಗಿ, ಆಸೀನಃ - ಕುಳಿತುಕೊಂಡವನಾಗಿ, ಉಪಾಸೀನಂ - ಸೇವಿಸುತ್ತಿರುವ ಅಥವಾ ಸಮೀಪದಲ್ಲಿ ಕುಳಿತಿರುವ, ವಿಪ್ರರ್ಷಿಂ - ಬ್ರಹ್ಮರ್ಷಿಯಾದ ವ್ಯಾಸಮುನಿಯನ್ನು ಕುರಿತು, ಸ್ಮಯನ್ನಿವ-ನಸುನಕ್ಕು, ಪ್ರಾಹ-ಹೇಳುತ್ತಾನೆ ॥೧॥ ಶ್ರೀನಾರದಃ - ನಾರದಮುನಿಯು ಹೇಳುವುದೆಂತೆನೆ—ಮಹಾಭಾಗ-ಮಹಾತ್ಮನಾದ, ಪಾರಾಶರ್ಯ-ಪರಾಶರ ಪುತ್ರನಾದ ವ್ಯಾಸಮುನಿಯೆ ? ಭವತಃ-ನಿನ್ನ, ಶಾರೀರಃ-ಶರೀರಾಭಿಮಾನಿಯಾದ, ಆತ್ಮಾ-ಜೀವನು, ಆತ್ಮನಾ-ಆಶರೀರದಿಂದ, ಪರಿತುಷ್ಯತಿಕಚ್ಚಿತ್-ಸಂತೋಷಿಸುವನೆ ? ಮಾನಸಃ - ಮನೋಭಿಮಾನಿಯಾದ, ಆತ್ಮಾ-ಜೀವನು, ಆತ್ಮನಾ-ಆಮನಸ್ಸಿನಿಂದ, ಪರಿತುಷ್ಯತಿಕಚ್ಚಿತ್-ಸಂತೋಷಿಸುವನೇ ? ॥೨॥ ಯಃ ತ್ವಂ - ಯಾವನೀನು, ಮಹತ್ - ವಿಸ್ತಾರವಾಗಿಯೂ, ಅದ್ಭುತಂ-ಆಶ್ಚರ್ಯಕರವಾಗಿಯೂ, ಸರ್ವಾರ್ಥಪರಿಬೃಂಹಿತಂ, ಸರ್ವ-ಎಲ್ಲಾ, ಅರ್ಥ-ಪುರುಷಾರ್ಥ ಅಥವಾ ವೇದಾರ್ಥಗಳಿಂದ, ಪರಿಬೃಂಹಿತಂ - ತುಂಬಿರುವ, ಭಾರತಂ-ಭಾರತವನ್ನು, ಕೃತವಾನ್ - ಮಾಡಿದೆಯೋ, ಆದುದರಿಂದ, ತೇ-ನಿನ್ನಿಂದ, ಜಿಜ್ಞಾಸಿತಂ-ತಿಳಿಯಬೇಕೆಂದಿದ್ದ ಧರ್ಮಾದಿಗಳೆಲ್ಲವೂ, ಸುಸಂಪನ್ನಂ-ಚೆನ್ನಾಗಿ ತಿಳಿಯಲ್ಪಟ್ಟಿತೆ ? ಅಪಿ-ಅದನ್ನು ಚೆನ್ನಾಗಿ ಆಚರಿಸಿದೆಯಾ ? ॥೩॥ ಯತ್ - ಯಾವುದು, ಸನಾತನಂ-

---

—ನಾರದಮುನಿಯು ವ್ಯಾಸಮುನಿಯನ್ನು ಸಂತೈಸಿದ್ದು.—

ಕಂ॥ ಐದನೆಯಧ್ಯಾಯದಿ ಮಧು । ಸೂದನಕೀರ್ತನಮೆ ಸರ್ವಧರ್ಮಾಧಿಕಮೆಂ ।
ದಾದರಿಸಿ ವ್ಯಾಸಮುನಿಯು । ಪೇದವ ನಾರಿಸುವ ನಿಂದು ನಾರದಮುನಿಪಂ ॥

ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳುತ್ತಾನೆ.—ಅಯ್ಯಾ ಋಷಿಗಳಿರಾ ! ಅನಂತರದಲ್ಲಿ ಜಗದ್ವಿಖ್ಯಾತಿಯನ್ನು ಪಡೆದ ದೇವರ್ಷಿಯಾದ ನಾರದಮುನಿಯು ವೀಣೆಯನ್ನು ಕೈಯಲ್ಲಿ ಹಿಡಿದು ಸುಖವಾಗಿ ಕುಳಿತುಕೊಂಡು, ಸಮೀಪದಲ್ಲಿ ಕುಳಿತಿರುವ ವ್ಯಾಸಮುನಿಯನ್ನು ಕುರಿತು ॥ ೧ ॥ ಅಯ್ಯಾ ಪರಾಶರ ಪುತ್ರನಾದ ದ್ವೈಪಾಯನನೇ! ನಿನ್ನ ಶರೀರಕ್ಕೆ ರೋಗಾದ್ಯುಪದ್ರವಗಳಿಲ್ಲದೆ ನೆಮ್ಮದಿಯಾಗಿರುವುದೆ ? ದುಃಖಾದಿಗಳಿಲ್ಲದೆ ನಿನ್ನಮನಸ್ಸು ಸ್ತಿಮಿತವಾಗಿರುವುದೇ ? ಈ ಶರೀರಮನೋದುಃಖಗಳಿಲ್ಲದೆ ನಿನ್ನಜೀವನು ಆತ್ಮಾನಂದವನ್ನನುಭವಿಸುತ್ತಿರುವನೆ ? ॥ ೨ ॥ ನೀನು ಸಕಲ ಪುರುಷಾರ್ಥಸಾಧಕವಾದ ಮಹಾಭಾರತವನ್ನು ವಿರಚಿಸಿದವನಾದುದರಿಂದ ತಿಳಿಯಬೇಕೆಂದಿದ್ದ ಧರ್ಮಾದಿಗಳೆಲ್ಲವನ್ನೂ ತಿಳಿದು ಆಚರಿಸಿದೆಯಾ ? ॥೩॥ ಸನಾತನವಾದ ಪರ

ತಥಾಪಿ ಶೋಚಸ್ಯಾತ್ಮಾನ ಮಕೃತಾರ್ಥಇವ ಪ್ರಭೋ ॥ ೪ ॥ ಶ್ರೀ ವ್ಯಾಸಃ॥ ಅಸ್ತ್ಯೇವ ಮೇ ಸರ್ವಮಿದಂ ತ್ವಯೋಕ್ತಂ ತಥಾಪಿ ನಾತ್ಮಾ ಪರಿತುಷ್ಯತೇ ಮೇ । ತನ್ಮೂಲ ಮವ್ಯಕ್ತ ಮಗಾಧಬೋಧಂ ಪೃಚ್ಛಾಮಹೇ ತ್ವಾತ್ಮಭವಾತ್ಮಭೂತಂ ॥೫॥ ಸವ್ವೈ ಭವಾನ್ ವೇದ ಸಮಸ್ತಗುಹ್ಯ ಮುಪಾಸಿತೋ ಯತ್ಪುರುಷಃ ಪುರಾಣಃ । ಪರಾಪರೇಶೋ ಮನಸೈವ ವಿಶ್ವಂ ಸೃಜತ್ಯವತ್ಯತ್ತಿ ಗುಣೈ ರಸಂಗಃ ॥ ೬ ॥ ತ್ವಂ ಪರ್ಯಟ

ನಿತ್ಯವೋ, ತತ್-ಆ, ಬ್ರಹ್ಮ-ಬ್ರಹ್ಮವು, ಜಿಜ್ಞಾಸಿತಂ-ವಿಚಾರಿಸಲ್ಪಟ್ಟಿತು, ಅಧೀತಂಚ-ಹೊಂದಲ್ಪಟ್ಟದ್ದೂ ಆಯಿತು, ತಥಾಪಿ-ಆದರೂ, ಪ್ರಭೋ-ಮಹಾತ್ಮನೆ ! ಅಕೃತಾರ್ಥಇವ-ಅಜ್ಞಾನಿಗಳಂತೆ, ಆತ್ಮಾನಂ-ಜೀವನನ್ನು ಕುರಿತು, ಶೋಚಸಿ - ಚಿಂತಿಸುತ್ತಿರುವೆ ॥೪॥ ತ್ವಯಾ ನಿನ್ನಿಂದ, ಉಕ್ತಂ-ಹೇಳಲ್ಪಟ್ಟ, ಇದಂ-ಪೂರ್ವೋಕ್ತವಾದ, ಸರ್ವಂ - ಎಲ್ಲವೂ, ಮೇ-ನನಗೆ, ಅಸ್ತ್ಯೇವ - ಇರಲೇ ಇರುವುದು, ತಥಾಪಿ-ಆದರೂ, ಮೇ-ನನ್ನ, ಆತ್ಮಾ - ಶರೀರವೂ, ಜೀವನೂ ಸಹ, ನಪರಿತುಷ್ಯತೇ - ಸಂತೋಷಿಸುವುದಿಲ್ಲ. (ಆದುದರಿಂದ) ಅವ್ಯಕ್ತಂ-ಸ್ಪಷ್ಟವಾಗದಿರುವ,ತನ್ಮೂಲಂ-ಆ ಸಂತೋಷವಿಲ್ಲದುದಕ್ಕೆ ಕಾರಣವನ್ನು,ಆತ್ಮಭವಾತ್ಮಭೂತಂ, ಆತ್ಮಭವ-ಬ್ರಹ್ಮನ,ಆತ್ಮ-ಶರೀರದಿಂದ, ಭೂತಂ-ಹುಟ್ಟಿದುದರಿಂದಲೇ, ಅಗಾಧಬೋಧಂ, ಅಗಾಧ-ಅಧಿಕವಾದ, ಬೋಧಂ ತಿಳಿವಳಿಕೆಯುಳ್ಳ, ತ್ವಾ-ನಿನ್ನನ್ನು, ಪೃಚ್ಛಾಮಹೇ-ಬೆಸಗೊಳ್ಳುತ್ತೇವೆ ॥೫॥ ಯಃ-ಯಾವಪರಮಾತ್ಮನು, ಗುಣೈಃ - ಸತ್ವರಜಸ್ತಮೋಗುಣಗಳಿಂದ, ಅಸಂಗಃ - ಸೋಂಕಿಲ್ಲದವನಾಗಿ, ಮನಸೈವ - ಸಂಕಲ್ಪಮಾತ್ರದಿಂದಲೇ, ಗುಣೈಃ - ಮಾಯಾಗುಣಗಳಿಂದ, ವಿಶ್ವಂ - ಪ್ರಪಂಚವನ್ನು, ಸೃಜತಿ-ಸೃಷ್ಟಿಸುವನೋ, ಅವತಿ - ಕಾಪಾಡುವನೋ, ಅತ್ತಿ - ನಾಶಗೊಳಿಸುವನೋ, ಅಂತಹ, ಪುರಾಣಃ-ಅನಾದಿಯಾಗಿರುವ, ಪರಾಪರೇಶಃ, ಪರ-ಕಾರಣಗಳಿಗೂ, ಅಪರ-ಕಾರ್ಯಗಳಿಗೂ, ಅಥವಾ ಪರ-ಉತ್ತಮರಾದ ಬ್ರಹ್ಮರುದ್ರಾದಿಗಳಿಗೂ,ಅಪರ-ಅವರಿಗಿಂತಲೂ ಕೀಳಾದ ಇಂದ್ರಾದಿಗಳಿಗೂ, ಈಶಃ-ನಿಯಾಮಕನಾದ, ಪುರುಷಃ - ಪರಮೇಶ್ವರನು, ಯತ್-ಯಾವಕಾರಣದಿಂದ, ಉಪಾಸಿತಃ-ಧ್ಯಾನಿಸಲ್ಪಟ್ಟನೋ, ಸಃ-ಅಂತಹ, ಭವಾನ್-ನೀನು, ಸಮಸ್ತಗುಹ್ಯಂ ಸಮಸ್ತ-ಎಲ್ಲಾ, ಗುಹ್ಯಂ-ರಹಸ್ಯಗಳನ್ನು, ವೇದ-ತಿಳಿದಿರುವೆ ॥೬॥ ತ್ವಂ-

ತತ್ವವನ್ನು ವಿಚಾರಮಾಡಿರುವುದಲ್ಲದೆ ಅದನ್ನು ಪಡೆದೂ ಯಿರುವೆ. ಹೀಗಿದ್ದರೂ ಪಾಮರಜನಗಳಂತೆ ನೀನಿಂತು ಚಿಂತಿಸಲು ನಿಮಿತ್ತವೇನು ? ಎಂದು ಬೆಸಗೊಂಡನು ॥೪॥ ವ್ಯಾಸಮುನಿಯು ಆ ಮಾತನ್ನು ಕೇಳಿ, ಅಯ್ಯಾ ನಾರದ ಮುನೀಂದ್ರನೇ ! ನೀನು ಬಣ್ಣಿಸಿದ ಗುಣಗಳೆಲ್ಲವೂ ನನ್ನಲ್ಲಿರುವುವು. ಹೀಗಿದ್ದರೂ ನನ್ನ ಶರೀರಕ್ಕೂ ಸುಖವಿಲ್ಲ. ಜೀವಾತ್ಮನಿಗೂ ಸಂತೋಷವಿಲ್ಲ. ಇಂತು ನನ್ನ ಶರೀರವು ಅಂತರಾತ್ಮನೂ ಸಹ ಬಳಲುತ್ತಿರುವುದಕ್ಕೆ ಕಾರಣವೂ ತಿಳಿಯಲಿಲ್ಲ. ನೀನು ಬ್ರಹ್ಮಪುತ್ರನಾಗಿಯೂ, ನಿರತಿಶಯಜ್ಞಾನಸಂಪನ್ನನಾಗಿಯೂ ಇರುವುದರಿಂದ ನೀನೇ ಇದರ ಕಾರಣವನ್ನು ತಿಳುಹಬೇಕೆಂದು ಬೇಡುವೆನು ॥ ೫ ॥ ಅಯ್ಯಾ ದೇವಮುನಿಯೇ ! ಯಾವನು ಮಾಯಾಗುಣಗಳಾದ ಸತ್ವರಜಸ್ತಮಸ್ಸುಗಳಿಗೊಳಗಾಗದೆ, ಅಸಂಗನಾಗಿದ್ದುಕೊಂಡು, ಸಂಕಲ್ಪಮಾತ್ರದಿಂದಲೇ ಆ ಮಾಯಾಗುಣಗಳಿಂದ ಪ್ರಪಂಚವನ್ನು, ಸೃಜಿಸಿ, ಪಾಲಿಸಿ, ಸಂಹರಿಸುವನೋ, ಅಂತಹ ಸಕಲಜಗನ್ನಿಯಾಮಕನಾದ ಆದ್ಯಂತಗಳಿಲ್ಲದ ಪರಮೇಶ್ವರನನ್ನು ಚೆನ್ನಾಗಿ ಆರಾ

ನ್ನರ್ಕಇವ ತ್ರಿಲೋಕೀ ಮಂತಶ್ಚರೋ ವಾಯುರಿವಾತ್ಮಸಾಕ್ಷೀ । ಪರಾಪರೇಬ್ರಹ್ಮಣಿ ಧರ್ಮತೋ ವ್ರತೈ ಸ್ನಾತಸ್ಯ ಮೇ ನ್ಯೂನ ಮಲಂ ವಿಚಕ್ಷ್ವ ॥ ೭ ॥ ಶ್ರೀ ನಾರದಃ । ಭವತಾನುದಿತಪ್ರಾಯಂ ಯಶೋ ಭಗವತೋಽಮಲಂ । ಯೇನೈವಾಸೌ ನತುಷ್ಯೇತ ಮನ್ಯೇ ತದ್ದರ್ಶನಂ ಖಿಲಂ ॥ ೮ ॥ ಯಥಾ ಧರ್ಮಾದಯ ಶ್ಚಾರ್ಥಾ ಮುನಿವರ್ಯಾನು

ನೀನು, ತ್ರಿಲೋಕೀಂ-ಮೂರುಲೋಕಗಳನ್ನೂ, ಪರ್ಯಟನ್-ಸಂಚರಿಸುತ್ತಾ, ಅರ್ಕಇವ-ಸೂರ್ಯನಂತೆ, (ಎಲ್ಲವನ್ನೂ ನೋಡುತ್ತಿರುವೆ) ಯೋಗಶಕ್ತಿಯಿಂದ, ವಾಯುರಿವ-ಪ್ರಾಣವಾಯುವಿನಂತೆ, ಅಂತಶ್ಚರಃ-(ಎಲ್ಲಾ ಪ್ರಾಣಿಗಳ) ಒಳಗೆ ಸಂಚರಿಸುತ್ತಾ, ಆತ್ಮಸಾಕ್ಷೀ - ಆತ್ಮ-ಬುದ್ಧಿವೃತ್ತಿಗಳಿಗೆ, ಅಥವಾ ಅವರು ಮಾಡುವ ಪಾಪಪುಣ್ಯಗಳಿಗೆ, ಸಾಕ್ಷೀ-ನೋಟಕನಾಗಿರುವೆ, ಧರ್ಮತಃ-ಯೋಗದಿಂದಲೂ, ವ್ರತೈಃ-ವ್ರತಗಳಿಂದಲೂ, ಪರಾಪರೇ, ಪರ-ಪರಬ್ರಹ್ಮನಲ್ಲಿಯೂ, ಅಪರೇ-ವೇದದಲ್ಲಿಯೂ, ಸ್ನಾತಸ್ಯ ನಿಪುಣನಾಗಿರುವ, ಮೇ-ನನಗೆ, ಅಲಂ-ಬಹಳವಾಗಿ, ಯತ್-ಯಾವುದು, ನ್ಯೂನಂ - ಕಡಿಮೆಯಾಗಿರುವುದೋ, ತತ್-ಅದನ್ನು, ವಿಚಕ್ಷ್ವ-ಯೋಚಿಸಿಹೇಳು ॥೭॥ ಶ್ರೀನಾರದಃ-ನಾರದನು ಹೇಳುತ್ತಾನೆ,—ಭವತಾ-ನಿನ್ನಿಂದ, ಭಗವತಃ-ಭಗವಂತನ, ಅಮಲಂ-ನಿರ್ಮಲವಾದ, ಯಶಃ-ಚರಿತ್ರೆಯು, ಅನುದಿತಪ್ರಾಯಂ-ಹೇಳಲ್ಪಟ್ಟಂತೆಯೇ ಆಗಲಿಲ್ಲ, ಯೇನೈವ-ಯಾವಧರ್ಮಾದಿಗಳ ಜ್ಞಾನದಿಂದ, ಅಥವಾ ಯಾವಶಾಸ್ತ್ರದಿಂದ, ಅಸೌ-ಆ ಭಗವಂತನು, ನತುಷ್ಯೇತ-ಸಂತೋಷಿಸುವುದಿಲ್ಲವೋ, ತತ್-ಆ, ದರ್ಶನಂ-ಜ್ಞಾನವನ್ನು, ಖಿಲಂ-ಹೀನ ಅಥವಾ ಅಸಂಪೂರ್ಣವನ್ನಾಗಿ, ಮನ್ಯೇ-ತಿಳಿಯುತ್ತೇನೆ॥೮॥ ಹೇಮುನಿವರ್ಯ-ಎಲೈ ಋಷಿಶ್ರೇಷ್ಠನಾದ ವ್ಯಾಸನೆ? [ನಿನ್ನಿಂದ] ಯಥಾ-ಹೇಗೆ, ಧರ್ಮಾದಯಃ, ಧರ್ಮ-ಧರ್ಮವೇ, ಆದಯಃ-ಮೊದಲಾದ, ಅರ್ಥಾಃ-ಪುರುಷಾರ್ಥಗಳೂ, ಚ-ಆ ಪುರುಷಾರ್ಥಗಳನ್ನು ಸಂಪಾದಿಸುವುದಕ್ಕೆ ಬೇಕಾದ ಸಾಧನಗಳೂ ಸಹ, ಅನುವರ್ಣಿತಾಃ-ಮುಖ್ಯವಾಗಿ ವಿವರಿಸಲ್ಪಟ್ಟವೋ, ತಥಾ-ಆ ಧರ್ಮಾದಿ ಪುರುಷಾರ್ಥಗಳಂತೆ, ವಾಸುದೇವಸ್ಯ-ವಾಸುದೇವನ, ಮಹಿಮಾ-ಮಹಿಮೆಯು,

ಧಿಸಿರುವೆಯಾದ‌ದರಿಂದ ನೀನು ಸಕಲ ರಹಸ್ಯಗಳನ್ನೂ ತಿಳಿದಿರುವೆ ॥ ೬ ॥ ಮತ್ತು ನೀನು ಮೂರುಲೋಕಗಳಲ್ಲಿಯೂ ಸಂಚರಿಸುತ್ತಾ ಸೂರ್ಯನಂತೆ ಸರ್ವಸಾಕ್ಷಿಯಾಗಿರುತ್ತಿ. ಅಲ್ಲದೆ ಯೋಗಮಹಿಮೆಯಿಂದ ಪ್ರಾಣವಾಯುವಿನಂತೆ ಸಕಲಪ್ರಾಣಿಗಳ ಒಳಗೂ ಹೊರಗೂ ಸಹ ಸಂಚರಿಸುತ್ತಾ, ಆಪ್ರಾಣಿಗಳ, ಬುದ್ಧಿ ವೃತ್ತಿಗಳಿಗೂ ಅವರು ಮಾಡುವ ಪಾಪಪುಣ್ಯಗಳಿಗೂ ಸಾಕ್ಷಿಯಾಗಿದ್ದೀಯೆ. ಆದಕಾರಣ ಜ್ಞಾನಾದಿಗಳಿಂದ ಪರಮಾತ್ಮವಿಷಯದಲ್ಲಿಯೂ, ವೇದಾಧ್ಯಯನ, ವೇದೋಕ್ತ ಕರ್ಮಾನುಷ್ಠಾನ, ಮೊದಲಾದ ಧರ್ಮಗಳಿಂದ ಶಬ್ದಬ್ರಹ್ಮವಾದ ವೇದದಲ್ಲಿಯೂ, ಪಂಡಿತನಾಗಿರುವ ನನಗೆ ಯಾವ ವಿಷಯದಲ್ಲಿ ನ್ಯೂನತೆ ಯಿರುವುದೋ ಅದನ್ನು ನೀನೂಹಿಸಿ ಹೇಳಬೇಕೆಂದು ಬೇಡಿದನು॥೭॥ ಅದನ್ನು ಕೇಳಿ ನಾರದಮುನಿಯು ಅಯ್ಯಾ ಬಾದರಾಯಣನೆ ? ಷಡ್ಗುಣೈಶ್ವರ್ಯಸಂಪನ್ನನಾದ ವಾಸುದೇವಮೂರ್ತಿಯ ನಿಷ್ಕಳಂಕವಾದ ಚರಿತ್ರೆಯನ್ನು ನೀನು ಬಣ್ಣಿಸಿದಂತೆಯೇ ತೋರುವುದಿಲ್ಲ. ಯಾವ ಧರ್ಮಾದಿಗಳ ಜ್ಞಾನದಿಂದಾಗಲಿ, ಶಾಸ್ತ್ರದಿಂದಾಗಲಿ, ಪರಮೇಶ್ವರನು ಮೆಚ್ಚುವುದಿಲ್ಲವೋ, ಅಂತಹ ಜ್ಞಾನವೂ ಶಾಸ್ತ್ರವೂ ಸಹ, ವ್ಯರ್ಥವೆಂದೇ ತಿಳಿಯತಕ್ಕದು ॥೮॥ ಎಲೈ ಮುನಿಪುಂಗವನಾದ ದ್ವೈಪಾಯನನೇ ! ನೀನು ಯಾವ ರೀತಿ

ವರ್ಣಿತಾಃ । ನತಥಾ ವಾಸುದೇವಸ್ಯ ಮಹಿಮಾ ಹ್ಯನುವರ್ಣಿತಃ ॥ ೯ ॥ ನಯದ್ವಚಶ್ಚಿತ್ರಪದಂ ಹರೇರ್ಯಶೋ ಜಗತ್ಪವಿತ್ರಂ ಪ್ರಗೃಣೀತ ಕರ್ಹಿಚಿತ್ । ತದ್ವಾಯಸಂ ತೀರ್ಥ ಮುಶಂತಿ ಮಾನಸಾ ನ ಯತ್ರ ಹಂಸಾ ನಿರಮಂ § ತ್ಯುಶಿಕ್ಕ್ಷಯಾಃ ॥ ೧೦ ॥ ತದ್ವಾಗ್ವಿಸರ್ಗೋ ಜನತಾಘವಿಪ್ಲವೋ ಯಸ್ಮಿನ್ ಪ್ರತಿಶ್ಲೋಕ ಮಬದ್ಧವತ್ಯಪಿ । ನಾಮಾನ್ಯನಂತಸ್ಯ

ನಹ್ಯನುವರ್ಣಿತಃ-ಪ್ರಧಾನವಾಗಿ ವರ್ಣಿಸಲ್ಪಡಲಿಲ್ಲವಷ್ಟೆ ? ॥೯॥ ಚಿತ್ರ-ಯಮಕ, ಅನುಪ್ರಾಸ, ಶ್ಲೇಷ, ಅಲಂಕಾರ ಮೊದಲಾದ ಚಿತ್ರಗಳಿಂದೊಡಗೂಡಿದ, ಪದಮಪಿ - ಶಬ್ದಪ್ರಯೋಗವುಳ್ಳದ್ದಾದರೂ, ಯತ್-ಯಾವ, ವಚಃ-ಮಾತು, ಜಗತ್ಪವಿತ್ರಂ, ಜಗತ್-ಲೋಕವನ್ನು, ಪವಿತ್ರಂ-ಪರಿಶುದ್ಧಮಾಡುವ, ಹರೇಃ-ಶ್ರೀಕೃಷ್ಣಮೂರ್ತಿಯ, ಯಶಃ-ಕೀರ್ತಿಯನ್ನು, ನಪ್ರಗೃಣೀತ-ಹೊಗಳುವುದಿಲ್ಲವೋ, ಮಾನಸಾಃ-ಸತ್ವಪ್ರಧಾನವಾದ ಮನಸ್ಸುಳ್ಳ, ಅಥವಾ ಮಾನಸಸರೋವರದಲ್ಲಿ ವಾಸಿಸುವ, ಹಂಸಾಃ-ಪರಮಹಂಸರಾದ ಜ್ಞಾನಿಗಳು, ಅಥವಾ ರಾಜಹಂಸಗಳು, ಯತ್ರ-ಯಾವುದರಲ್ಲಿ, ಕರ್ಹಿಚಿತ್ - ಒಮ್ಮೆಯಾದರೂ, ನನಿರಮಂತಿ-ರಮಿಸುವುದಿಲ್ಲವೋ ತತ್ - ಆ ಮಾತನ್ನು, ಉಶಿಕ್ಕ್ಷಯಾಃ, ಉಶಿಕ್ - ರಮಣೀಯವಾದ ಬ್ರಹ್ಮವೇ, ಕ್ಷಯಾಃ-ನೆಲೆಯಾಗಿರುವ, ಅಥವಾ ಉಶಿ-ಕಾಮವನ್ನು, ಕ್ಷಯಾಃ-ನಾಶಗೊಳಿಸುವ ಜ್ಞಾನಿಗಳು, ವಾಯಸಂ-ಕಾಗೆಗಳು ಮುಳುಗುವ, ಅಥವಾ ಕಾಗೆಗಳಿಗೆ ಸಮಾನರಾದ ಕಾಮುಕರಾನಂದಿಸುವ, ತೀರ್ಥಂ-ತೀರ್ಥವನ್ನಾಗಿ, ಉಶಂತಿ-ತಿಳಿಯುತ್ತಾರೆ ॥೧೦॥ ಸಾಧವಃ-ಸತ್ಪುರುಷರು, ಯತ್ - ಯಾವ ಭಗವನ್ನಾಮಗಳನ್ನು, ಶೃಣ್ವಂತಿ-(ಹೇಳುವವರು ದೊರೆತಾಗ ಕುತೂಹಲದಿಂದ) ಕೇಳುವರೋ, ಗೃಣಂತಿ-(ಕೇಳುವವರು ದೊರೆತಾಗ ಪಾಪಪರಿಹಾರವಾಗುವಂತೆ) ಹೊಗಳುವರೂ, ಗಾಯಂತಿ-[ಯಾರೂ ದೊರೆಯದ ಕಾಲದಲ್ಲಿ

ಯಿಂದ ಧರ್ಮ, ಅರ್ಥಮೊದಲಾದ ಪುರುಷಾರ್ಥಗಳನ್ನು ಮುಖ್ಯಗಳಾಗಿ ವಿವರಿಸಿದೆಯೋ, ಅದೇಮೇರಗೆ ಶ್ರೀ ವಾಸುದೇವಮೂರ್ತಿಯ ಮಹಿಮೆಯನ್ನು ಮುಖ್ಯವೆಂದು ವರ್ಣಿಸಿರುವುದಿಲ್ಲ ॥೯॥ ಆದುದರಿಂದ ಭಗವದ್ವಿಷಯಕವಲ್ಲದ ಜ್ಞಾನವೆಂತು ವ್ಯರ್ಥವೋ,ಹಾಗೆಯೇ ಭಗವಂತನ ಮಹಿಮೆಯನ್ನು ಹೊಗಳದ ವಾಕ್ಕುಗಳ ಚಾತುರ್ಯವೂ ವ್ಯರ್ಥವೇ. ಎಂತೆಂದರೆ:—ಮಾನಸ ಸರೋವರದಲ್ಲಿ ವಿಹರಿಸುವ ರಾಜಹಂಸಗಳು, ಸುಗಂಧದಿಂದ ಮಗಮಗಿಸುವ ಕಮಲಕಾಂಡಗಳನ್ನು ಮೆಲ್ಲುವುದನ್ನು ಬಿಟ್ಟು, ಹಲವು ಬಗೆಗಳಾದೆಂಜಲನ್ನಗಳಿಂದ ತುಂಬಿದ್ದರೂ ಕಾಗೆಗಳಂತೆ ಎಂಜಲು ಗುಂಡಿಗಳಲ್ಲಿ ಎಂತು ವಿಹರಿಸುವುದಿಲ್ಲವೋ, ಹಾಗೆ, ಯಾವ ವಚನ ರಚನೆಯು, ಶೃಂಗಾರಾದಿ ರಸಗಳಿಂದಲೂ, ಶಬ್ದಾರ್ಥಾಲಂಕಾರಗಳಿಂದಲೂ, ವಿಚಿತ್ರವಾಗಿದ್ದರೂ ಕಾಗೆಗಳಂತಹ ಕಾಮುಕರಿಗೆ ವಿಹಾರಸ್ಥಾನವಾಗಿ ಲೋಕಪಾವನವಾದ ಭಗವನ್ಮಹಿಮೆಯನ್ನು ಬಣ್ಣಿಸುವುದಿಲ್ಲವೋ, ಆ ವಾಕ್ಕನ್ನು ಸಾತ್ವಿಕರಾಗಿಯೂ, ಬ್ರಹ್ಮನಿಷ್ಠರಾಗಿಯೂ ಇರುವ ಮಹಾತ್ಮರು ವಾಯಸ ತೀರ್ಥದಂತೆ ನಿರರ್ಥಕವೆಂದರಿಯುವರು.ಆದುದರಿಂದ ಕಾಮುಕರಿಗೆ ರುಚಿಕರವಾದ ಅಸತ್ಕಾವ್ಯದಲ್ಲಿ ಜ್ಞಾನಿಗಳಗೆಂದಿಗೂ ರುಚಿಯುಂಟಾಗುವುದಿಲ್ಲ ॥೧೦॥ ಭಗವಂತನ ಮಹಿಮೆಯನ್ನು ವರ್ಣಿಸುವ ವಾಕ್ಕಿನಲ್ಲಿ

§ ಪಾ-ಉಶಿಕ್ಷಯಾಃ.

ಯಶೋಂಕಿತಾನಿ ಯಚ್ಛೃಣ್ವಂತಿ ಗಾಯಂತಿ ಗೃಣಂತಿ ಸಾಧವಃ ॥೧೧॥
ನೈಷ್ಕರ್ಮ್ಯ ಮಪ್ಯಚ್ಯುತಭಾವವರ್ಜಿತಂ ನಶೋಭತೇ ಜ್ಞಾನ ಮಲಂ
ನಿರಂಜನಂ। ಕುತಃ ಪುನಃಶಶ್ವದದಭ್ರಮೀಶ್ವರೇ ನಚಾರ್ಪಿತಂ ಕರ್ಮ ಯದ
ಪ್ಯಕಾರಣಂ ॥ ೧೨ ॥ ಅತೋ ಮಹಾಭಾಗ ಭವಾನಮೋಘದೃಕ್ಛುಚಿ
ಶ್ರವಾ ಸ್ಸತ್ಯರತೋ ¶ ಧೃತವ್ರತಃ । ಉರುಕ್ರಮಸ್ಯಾಖಿಲಬಂಧ ಮು

ತಾವೇ ಆನಂದದಿಂದ] ಗಾನಮಾಡುವರೋ, ಅಂತಹ, ಅನಂತಸ್ಯ-ನಾಶರಹಿತನಾದ ಭಗವಂತನ, ಯಶೋಂಕಿತಾನಿ, ಯಶಃ-ಕೀರ್ತಿಯಿಂದ, ಅಂಕಿತಾನಿ- ಗುರ್ತುಮಾಡಲ್ಪಟ್ಟ, ನಾಮಾನಿ-ಭಗವನ್ನಾಮಗಳು, ಅಬದ್ಧವತ್ಯಪಿ-ತಪ್ಪುಗಳಿಂದೊಡಗೂಡಿದ್ದರೂ, ಯಸ್ಮಿನ್ - ಯಾವವಾಕ್ಕಿನಲ್ಲಿ, ಪ್ರತಿಶ್ಲೋಕಂ-ಪ್ರತಿಶ್ಲೋಕದಲ್ಲಿಯೂ, ಇರುವುವೋ, ತದ್ವಾಗ್ವಿಸರ್ಗಃ, ತತ್-ಆ, ವಾಕ್-ವಾಕ್ಕುಗಳ, ವಿಸರ್ಗಃ-ಪ್ರಯೋಗವೇ, ಜನತಾ-ಜನಸಮೂಹದ, ಅಘ-ಪಾಪಗಳನ್ನು, ವಿಪ್ಲವಃ-ನಾಶಗೊಳಿಸುವುದು ॥೧೧॥ ನೈಷ್ಕರ್ಮ್ಯಂ-ಕರ್ಮಗಳೆಂಬ ಕಶ್ಮಲಗಳಿಗೆ ಸಮ್ಬಂಧಿಸದ,ನಿರಂಜನಂ-ನಿರುಪಾಧಿಕವಾದ,ಜ್ಞಾನಮಪಿ-ಅಪರೋಕ್ಷಜ್ಞಾನವೂ, ಅಚ್ಯುತಭಾವವರ್ಜಿತಂ,ಅಚ್ಯುತ-ನಾಶರಹಿತನಾದ ನಾರಾಯಣಮೂರ್ತಿಯಲ್ಲಿ, ಭಾವ-ಭಕ್ತಿಯಿಂದ, ವರ್ಜಿತಂಚೇತ್-ಬಿಡಲ್ಪಟ್ಟರೆ, ಅಲಂ-ಚೆನ್ನಾಗಿ, ನಶೋಭತೆ-ಪ್ರಕಾಶಿಸುವುದಿಲ್ಲ, ಶಶ್ವತ್-ಸಾಧನಕಾಲದಲ್ಲಿಯೂ ಫಲಕಾಲದಲ್ಲಿಯೂ ಸಹ, ಅದಭ್ರಂ-ದುಃಖರೂಪವಾದ ಯಾವ ಕಾಮ್ಯಕರ್ಮವುಂಟೋ, ಅಕಾರಣಂ - ಫಲಾಭಿಸಂಧಿಯಿಲ್ಲದ, ಯದಪಿ-ಯಾವನಿತ್ಯಕರ್ಮವುಂಟೋ, ತತ್‌ಕರ್ಮ - ಆನಿತ್ಯಕಾಮ್ಯಕರ್ಮಗಳು, ಈಶ್ವರೇ-ಭಗವಂತನಲ್ಲಿ, ಅರ್ಪಿತಂನಚೇತ್-ಒಪ್ಪಿಸಲ್ಪಡದೇ ಹೋದರೆ, ಕುತಃಪುನಃ-ಶೋಭಿಸುವುದಿಲ್ಲವೆಂದು ಹೇಳತಕ್ಕದೇನು ? ॥೧೨॥ ಹೇಮಹಾಭಾಗ-ಎಲೈ ಮಹಾಮಹಿಮನಾದ ಪಾರಾಶರ್ಯನೆ! ಅತಃ-ಆದುದರಿಂದ, ಅಮೋಘದೃಕ್, ಅಮೋಘ-ಯಥಾರ್ಥವಾದ ಅಥವಾ ಸರ್ವೋಪಕಾರಕವಾದುದರಿಂದ ಸಫಲವಾದ,

ಯಾವ ಚಾತುರ್ಯ ವಿಲ್ಲದಿದ್ದರೂ ಪವಿತ್ರವೆಂದೇ ತಿಳಿಯಬೇಕು. ಮಹಾತ್ಮರಾದ ಸತ್ಪುರುಷರು ಯಾವ ಭಗವನ್ನಾಮಗಳನ್ನು ಹೇಳುವವರು ದೊರೆತಾಗ ಕುತೂಹಲದಿಂದ ಕೇಳುತ್ತಲೂ, ಕೇಳುವವರು ದೊರೆತಾಗ ಪಾಪಕಳೆಯುವಂತೆ ಹೇಳುತ್ತಲೂ, ಅವರೀರ್ವರೂ ದೊರೆಯದಾಗ ತಾವೇ ಆನಂದದಿಂದ ಗಾನಂಗೈಯುತ್ತಲೂ ಇರುವರೋ, ಅಂತಹ ಭಗವನ್ನಾಮಗಳನ್ನು ಪ್ರತಿಶ್ಲೋಕದಲ್ಲಿಯೂ ಅಡಗಿಸಿಕೊಂಡಿರುವ ವಾಕ್ಕಿನಲ್ಲಿ ಎಷ್ಟು ತಪ್ಪುಗಳಿದ್ದರೂ, ಆ ವಾಕ್ಕೇ ಲೋಕಪಾವನವೂ ಪಾಪನಿವರ್ತಕವೂ ಎನಿಸುವುದು ॥೧೧॥ ಕರ್ಮಸಂಬಂಧವೇ ಇಲ್ಲದೆ ಪರಬ್ರಹ್ಮಸ್ವರೂಪವೆನಿಸಿ ನಿರುಪಾಧಿಕವಾದ, ಅಪರೋಕ್ಷಜ್ಞಾನವೂ ಪರಮೇಶ್ವರನಲ್ಲಿ ಭಕ್ತಿರಹಿತವಾದರೆ ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನವಾಗುವುದಿಲ್ಲ. ಇಂತಿರುವಾಗ, ಸಂಪಾದಿಸುವಾಗಲೂ ಅನುಭವಿಸುವಾಗಲೂ ಕೂಡ ದುಃಖರೂಪವಾಗಿರುವ ಕಾಮ್ಯಕರ್ಮಗಳಾಗಲಿ, ಫಲಾಪೇಕ್ಷೆಯಿಲ್ಲದೆ ಮಾಡಲ್ಪಡುವ ನಿತ್ಯಕರ್ಮಗಳೇ ಆಗಲಿ ಈಶ್ವರಾರ್ಪಿತಗಳಾಗದೆ ಹೋದರೆ ಶೋಭಿಸುವುದಿಲ್ಲವೆಂದು ಮತ್ತೆ ಬೇರೆ ಹೇಳುವುದೇಕೆ ? ॥ ೧೨ ॥ ಅಯ್ಯಾ ಮಹಾತ್ಮನಾದ ವ್ಯಾಸಮುನಿಯೇ ಹಿಂದೆ ಹೇಳ

¶ ಪಾ-ದೃಢವ್ರತಃ.

ಕ್ತಯೇ ಸಮಾಧಿನಾನುಸ್ಮರ ಯದ್ವಿಚೇಷ್ಟಿತಂ ॥ ೧೩ ॥ ತತೋಽನ್ಯಥಾ
ಕಿಂಚನ ಯದ್ವಿವಕ್ಷತಃ ಪೃಥಗ್ದೃಶ ಸ್ತತ್ಕೃತರೂಪನಾಮಭಿಃ। ನ ಕರ್ಹಿ
ಚಿತ್ಕ್ವಾಪಿಚ ದುಃಸ್ಥಿತಾ ಮತಿ ರ್ಲಭೇತ ವಾತಾಹತನೌರಿವಾಸ್ಪದಂ ॥೧೪॥
ಜುಗುಪ್ಸಿತಂ ಧರ್ಮಕೃತೇ ಸುಶಾಸತಸ್ಸ್ವಭಾವರಕ್ತಸ್ಯ ಮಹಾನ್ವ್ಯತಿ-

See after page no. 48

ದೃಕ್-ಜ್ಞಾನವುಳ್ಳ, ಶುಚಿಶ್ರವಾಃ, ಶುಚಿ-ಪರಿಶುದ್ಧವಾದ, ಶ್ರವಾಃ - ಕೀರ್ತಿಯುಳ್ಳ, ಸತ್ಯರತಃ, ಸತ್ಯ-ಸತ್ಯದಲ್ಲಿ, ಸತ್ಯವಾದ ಬ್ರಹ್ಮವಸ್ತುವಿನಲ್ಲಿ, ರತಃ-ಆಸಕ್ತನಾದ, ಧೃತವ್ರತಃ, ಧೃತ-ಧರಿಸಲ್ಪಟ್ಟ, ವ್ರತಃ-ವ್ರತಗಳುಳ್ಳ. ಅಥವಾ ದೃಢವ್ರತಃ - ಸರ್ವರನ್ನೂ ಉದ್ಧರಿಸಬೇಕೆಂಬ ದೃಢಸಂಕಲ್ಪರೂಪವಾದ ವ್ರತವುಳ್ಳ, ಭವಾನ್-ನೀನು, ಅಖಿಲಬಂಧಮುಕ್ತಯೇ, ಅಖಿಲ-ಸಕಲರ, ಬಂಧ-ಸಂಸಾರರೂಪವಾದ ಬಂಧದ, ಮುಕ್ತಯೇ-ಬಿಡುಗಡೆಗಾಗಿ, ಸಮಾಧಿನಾ - ಚಿತ್ತೈಕಾಗ್ರ್ಯದಿಂದ, ಅಥವಾ ಯೋಗಮಹಿಮೆಯಿಂದ, ಉರುಕ್ರಮಸ್ಯ, ಉರು-ಅಧಿಕವಾದ, ಕ್ರಮಸ್ಯ-ಪರಾಕ್ರಮವುಳ್ಳ, ವಾಸುದೇವನ, ವಿಚೇಷ್ಟಿತಂ-ಲೀಲೆಯು, ಯತ್ ಯಾವುದುಂಟೋ, ತತ್ ಅದನ್ನು, ಅನುಸ್ಮರ - ಸ್ಮರಿಸಿಕೊಂಡು ವರ್ಣಿಸು ॥ ೧೩ ॥ ತತಃ-ಆ ಭಗವಂತನ ಲೀಲೆಗಿಂತಲೂ. ಪೃಥಗ್ದೃಶಃ, ಪೃಥಕ್-ಪ್ರತ್ಯೇಕವಾದ, ದೃಶಃ - ದೃಷ್ಟಿಯುಳ್ಳವನಾದುದರಿಂದಲೇ, ಅನ್ಯಥಾ-ಬೇರೆವಿಧವಾಗಿ, ಯತ್ಕಿಂಚನ-ಯಾವುದೋ ಒಂದನ್ನು, ವಿವಕ್ಷತಃ - ಹೇಳಬೇಕೆಂದು ಬಯಸುವವನ, ಮತಿಃ ಬುದ್ಧಿಯು, ತತ್ಕೃತರೂಪನಾಮಭಿಃ, ತತ್-ಅವನು ಹೇಳಬೇಕೆಂಬ ಕೋರಿಕೆಯಂತೆ, ಕೃತ-ಹೊಳೆಯುತ್ತಿರುವ, ರೂಪ-ರೂಪಗಳಿಂದಲೂ, ನಾಮಭಿಃ-ನಾಮಗಳಿಂದಲೂ, ಕರ್ಹಿಚಿತ್ ಒಂದುಕಾಲದಲ್ಲಿಯಾದರೂ, ಕ್ವಾಪಿಚ-ಒಂದು ಕಡೆಯಲ್ಲಿಯೂ, ದುಸ್ಥಿತಾ-ನಿಲುಕಡೆಯಿಲ್ಲದೆ, ವಾತಾಹತಾ, ವಾತ-ಗಾಳಿಯಿಂದ, ಆಹತಾ-ಹೊಡೆಯಲ್ಪಟ್ಟ, ನೌರಿವ-ಹಡಗಿನಂತೆ, ಆಸ್ಪದಂ-ಅವಕಾಶವನ್ನು ನಲಭೇತ-ಪಡೆಯುವುದಿಲ್ಲ. ॥ ೧೪ ॥ ಜುಗುಪ್ಸಿತಂ - ನಿಂದ್ಯವಾದ ಕಾಮ್ಯಕರ್ಮವೊದಲಾದವುಗಳನ್ನು,

ದಂತೆ ಭಕ್ತಿಶೂನ್ಯಗಳಾದ ಅಪರೋಕ್ಷಜ್ಞಾನ,ವಾಕ್ಚಾತುರ್ಯ,ಕರ್ಮ ಕೌಶಲಗಳೆಲ್ಲವೂ, ವ್ಯರ್ಥಗಳೇ, ಆದಕಾರಣ ಸರ್ವರಿಗೂ ಉಪಕಾರಮಾಡಬೇಕೆಂದು ಪ್ರವರ್ತಿಸಿರುವುದರಿಂದ ನಿನ್ನ ಜ್ಞಾನವು ಸಾರ್ಥಕವು. ನಿನ್ನಕೀರ್ತಿಯು ಪಾವನವು. ನೀನು ಸತ್ಯವಾದಿಯು. ಬ್ರಹ್ಮನಿಷ್ಠನು. ಸರ್ವರನ್ನು ಉದ್ಧರಿಸಬೇಕೆಂಬ ವ್ರತವನ್ನು ಹಿಡಿದಿರುವೆ. ಇಷ್ಟು ಗುಣಸಂಪನ್ನನಾಗಿರುವುದರಿಂದ ನೀನು ಸಕಲರನ್ನೂ ಸಂಸಾರವೆಂಬ ಸೆರೆಮನೆಯಿಂದ ಬಿಡಿಸುವುದಕ್ಕಾಗಿ, ಯೋಗದೃಷ್ಟಿಯಿಂದ ಆ ಭಗವಂತನ ಲೀಲೆಗಳನ್ನು ತಿಳಿದು ಬಣ್ಣಿಸುವವನಾಗು ॥ ೧೩ ॥ ಆ ಭಗವಂತನ ಗುಣವರ್ಣವನ್ನುಳಿದು, ಬೇರೇವಿಷಯಗಳಲ್ಲಿ ಬುದ್ಧಿಯುಳ್ಳವನಾದುದರಿಂದ ಪ್ರಕಾರಾಂತರವಾಗಿ ಇತರವಿಷಯಗಳನ್ನು ಬಣ್ಣಿಸುವುದಕ್ಕಾಗಿ ಹೊರಟು, ಆ ವರ್ಣನೆಗೆ ತಕ್ಕಂತೆ ಊಹಿಸಿಕೊಂಡ ಹಲವು ಬಗೆಗಳಾದ ನಾಮರೂಪಗಳಿಂದ ಒಂದೆಡೆಯಲ್ಲಿಯೂ, ನೆಲೆಯಾಗಿ ನಿಲ್ಲದೆ "ನಿಶ್ಚಯ ಸ್ವಭಾವವುಳ್ಳ ಬುದ್ಧಿಯೊಂದೇ ಶ್ರೇಯಸ್ಸಾಧನವಲ್ಲದೆ, ನಂಬಿಕೆಯಿಲ್ಲದಹವುಲೋಚನೆಗಳಿಂದ ಪ್ರಯೋಜನವಿಲ್ಲವೆಂಬ" * ಗೀತಾವಾಕ್ಯದಲ್ಲಿ ಹೇಳಿರುವ ಹಾಗೆ ನಿನ್ನ ಬುದ್ಧಿಯು ಬಿರುಗಾಳಿಗೆದುರಾದ ಹಡಗಿನಂತೆ ತಡಬಡಿಸುತ್ತಿರುವುದು ॥೧೪॥ ಮತ್ತು ನೀನು ಭಾರತಾದಿಗ್ರಂಥಗಳಲ್ಲಿ

* ಗೀ—ವ್ಯವಸಾಯಾತ್ಮಿಕಾಬುದ್ಧಿ ರೇಕೇಹಕುರುನಂದನ ।
ಬಹುಶಾಖ್ಯಾಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ॥

ಏತತ್ಸಂಸೂಚಿತಂ ಬ್ರಹ್ಮನ್ ತಾಪತ್ರಯಚಿಕಿತ್ಸಿತಂ । ಯದೀಶ್ವರೇ ಭಗವತಿ ಕರ್ಮ ಬ್ರಹ್ಮಣಿ ಭಾವಿತಂ ॥೩೨॥ *ಆಮಯೋ ಯಶ್ಚ ಭೂತಾನಾಂ ಜಾಯತೇ ಯೇನ ಸುವ್ರತ । ತದೇವ ಹ್ಯಾಮಯದ್ರವ್ಯಂ ನಪುನಾತಿ ಚಿಕಿತ್ಸಿತಂ ॥ ೩೩ ॥ ಏವಂ ನೃಣಾಂ ಕ್ರಿಯಾಯೋಗಾಃ ಸರ್ವೇ ಸಂಸೃತಿ

ತಾಪ-ಆಧ್ಯಾತ್ಮಿಕಾದಿತಾಪಗಳ, ತ್ರಯ-ಮೂರಕ್ಕು, ಚಿಕಿತ್ಸಿತಂ-ಔಷಧವೂ, ಸಂಸೂಚಿತಂ-ಚೆನ್ನಾಗಿಸೂಚಿಸಲ್ಪಟ್ಟಿತು ॥ ೩೨ ॥ ಭೂತಾನಾಂ-ಜೀವಿಗಳಿಗೆ, ಯಶ್ಚ ಆಮಯಃ-ಯಾವರೋಗವು,ಯೇನ-ಯಾವತುಪ್ಪ ಮೊದಲಾದ ಪದಾರ್ಥಗಳಿಂದ, ಜಾಯತೇ-ಉಂಟಾಗುವುದೋ, ತದೇವ-ರೋಗಕ್ಕೆ ಮುಖ್ಯಕಾರಣವಾದ, ಆಮಯದ್ರವ್ಯಂ-ಆ ರೋಗ ಪದಾರ್ಥವೇ, ತಂ-ಆಮಯಂ-ಆರೋಗವನ್ನು, ನಪುನಾತಿ-ಹೋಗಲಾಡಿಸುವುದಿಲ್ಲ. ಆದರೆ ಚಿಕಿತ್ಸಿತಂಸತ್ - ಬೇರೇಪದಾರ್ಥಗಳೊಡನೆ ಬೆರಸಿದರೆ, ಪುನಾತ್ಯೇವ-ಹೋಗಲಾಡಿಸುವುದೇದಿಟ ॥ ೩೩ ॥ ಏವಂ-ಹೀಗೆ, ಸರ್ವೇ-ಎಲ್ಲಾ, ಕ್ರಿಯಾಯೋಗಾಃ, ಫಲಾಪೇಕ್ಷೆಯಿಂದ ಮಾಡಲ್ಪಟ್ಟ ಯಜ್ಞಾದಿಕರ್ಮಗಳು, ನೃಣಾಂ-ಪುರುಷರಿಗೆ,ಸಂಸೃತಿಹೇತವಃ, ಸಂಸೃತಿ-ಜನನ ಮರಣಾತ್ಮಕವಾದ ಸಂಸಾರಕ್ಕೆ,ಹೇತವಃ-ಕಾರಣಗಳು, (ಆಗುತ್ತವೆ) ತಏವ-ಆ ಕರ್ಮಗಳೇ, ಪರೇ-ಪರಮಾತ್ಮನಲ್ಲಿ, ಅಕಲ್ಪಿ

ನಿರ್ಮೂಲಗೊಳಿಸುವುದೆಂಬ ರಹಸ್ಯವೂ ಅವರಿಂದ ನನಗೆ ತಿಳುಹಿಸಲ್ಪಟ್ಟಿತು. ॥೩೨॥ ಸಂಸಾರಕ್ಕೆ ಕಾರಣವಾದ ಕರ್ಮವು ತಾಪತ್ರಯವನ್ನು ಹೋಗಲಾಡಿಸುವ ವಿಷಯದಲ್ಲಿ ನಿನಗೊಂದು ದೃಷ್ಟಾಂತವನ್ನು ಹೇಳುವೆನು ಕೇಳು. ತುಪ್ಪಮೊದಲಾದ ಅಜೀರ್ಣಪದಾರ್ಥಗಳನ್ನು ವಿಶೇಷವಾಗಿ ಸೇವಿಸಿದುದರಿಂದುಂಟಾದ ರೋಗಗಳನ್ನು ಆ ಪದಾರ್ಥಗಳು ನಾಶಗೊಳಿಸಲಾರವಾಗಿದ್ದರೂ ಇತರ ಪದಾರ್ಥಗಳೊಂದಿಗೆ ಸೇರಿದಾಗ ಆ ತುಪ್ಪಮೊದಲಾದವುಗಳೇ ಆ ರೋಗಗಳನ್ನು ನಾಶಗೊಳಿಸುವುವು. ಹೀಗೆಯೇ ಸಂಸಾರಹೇತುವಾದ ಕರ್ಮವೆಂಬುದು ಭಗವದರ್ಪಿತವಾದಲ್ಲಿ, ಸಕಲ ಕರ್ಮಗಳನ್ನೂ ನಾಶಗೊಳಿಸುವುದು. ಫಲಾಪೇಕ್ಷೆಯಿಂದ ಕರ್ಮಗಳನ್ನು ಮಾಡಿದಲ್ಲಿ, ಆ ಫಲಗಳನ್ನು ಅನುಭವಿಸುವುದಕ್ಕಾಗಿ ಜನ್ಮವನ್ನೆತ್ತಲೇಬೇಕು. ಜನ್ಮವನ್ನು ಪಡೆದಮೇಲೆ ಸಂಸಾರವೆಂಬುದು ತಪ್ಪುವುದಿಲ್ಲ. ಮತ್ತು ಆ ಕರ್ಮಗಳು ಈಶ್ವರಾರ್ಪಿತಗಳಾಗದೇ ಹೋದಲ್ಲಿ, ಈಶ್ವರಪ್ರೀತಿಯುಂಟಾಗುವುದಿಲ್ಲ. ಅದಿಲ್ಲದ ಬಳಿಕ ಪಾಪದಿಂದ ಬಿಡುಗಡೆಯಿಲ್ಲ. ಪಾಪನಿವೃತ್ತಿಯಾಗದಿದ್ದರೆ ನರಕವೆಂಬುದು ಸಿದ್ಧವಾಗಿಯೇ ಇರುವುದು. ಆದಕಾರಣ ಕರ್ಮಫಲದಲ್ಲಿ ಆಸೆಯನ್ನಿಡಬಾರದು. ಮಾಡಿದ ಕರ್ಮಗಳನ್ನು ಭಗವಂತನಿಗರ್ಪಿಸದೆಯೂ ಇರಬಾರದು ॥೩೩॥ ಭಗವಂತನಿಗರ್ಪಿಸದಿರುವ ಕರ್ಮವು ಹೇಗೆ ಸಂಸಾರಕ್ಕೆ ಕಾರಣವಾಗಿ ನರಕವನ್ನುಂಟುಮಾಡುವುದೋ, ಹಾಗೆಯೇ ಈಶ್ವರಾರ್ಪಿತವಾದ ಕರ್ಮವು ಮೊದಲು ಸತ್ಸಂಗವನ್ನೂ, ಬಳಿಕ ಅವರ ಕೃಪೆಯನ್ನೂ, ಅವರ ನಡವಳಿಕೆಯಲ್ಲಿ ಶ್ರದ್ಧೆಯನ್ನೂ, ಆಮೇಲೆ ಭಗವತ್ಕಥೆಯನ್ನು ಕೇಳುವುದರಲ್ಲಿ ಆದರವನ್ನೂ, ಆ ಭಗವಂತನಲ್ಲಿ ಪ್ರೀತಿಯನ್ನೂ, ಅವರಿಂದ ದೇಹ

ಟಿ—* ರೋಗವನ್ನುಂಟು ಮಾಡುವ ಅಪಥ್ಯವಸ್ತುಗಳನ್ನು ಔಷಧದಂತೆ ಸೇವಿಸಿದರೂ ಅವು ಹೇಗೆ ರೋಗವನ್ನು ಹೋಗಲಾಡಿಸಲಾರವೋ ಹಾಗೆಯೇ ಕರ್ಮಗಳು ಸಂಸಾರದುಃಖಗಳನ್ನು ಕಳೆಯಲಾರವು.

ಹೇತವಃ । ತಏವಾತ್ಮವಿನಾಶಾಯ ಕಲ್ಪಂತೇಕಲ್ಪಿತಾಃಪರೇ ॥೩೪॥ ಯದತ್ರ ಕ್ರಿಯತೇ ಕರ್ಮ ಭಗವತ್ಪರಿತೋಷಣಂ । ಜ್ಞಾನಂಯತ್ತದಧೀನಂಹಿ ಭಕ್ತಿಯೋಗಸಮನ್ವಿತಂ ॥ ೩೫ ॥ ಕುರ್ವಾಣಾ ಯತ್ರಕರ್ಮಾಣಿ ಭಗವಚ್ಛಿಕ್ಷಯಾಸಕೃತ್ । ಗೃಣಂತಿ ಗುಣನಾಮಾನಿ ಕೃಷ್ಣಸ್ಯಾನುಸ್ಮರಂತಿಚ ॥ ನಮೋ ಭಗವತೇ ತುಭ್ಯಂ ವಾಸುದೇವಾಯ ಧೀಮಹಿ । ಪ್ರದ್ಯುಮ್ನಾಯಾ

ತಾಶ್ಚೇತ್-ಸಮರ್ಪಿಸಲ್ಪಡದೇಹೋದರೆ, ಆತ್ಮವಿನಾಶಾಯ, ಆತ್ಮ-ತನ್ನ, ವಿನಾಶಾಯ - ವಿನಾಶಕ್ಕಾಗಿ, ಕಲ್ಪಂತೆ-ಸಮರ್ಥಗಳಾಗುತ್ತವೆ ॥೩೪॥ ಭಗವತ್ಪರಿತೋಷಣಂ-ಭಗವಂತನನ್ನು ಸಂತೋಷ ಗೊಳಿಸುವ, ಕರ್ಮ - ಕರ್ಮವು, ಕ್ರಿಯತೇಯತ್ - ಮಾಡಲ್ಪಡುವುದಾವುದುಂಟೋ, ಭಕ್ತಿಯೋಗಸ ಮನ್ವಿತಂ-ಭಕ್ತಿಯೋಗ-ಭಕ್ತಿಯೋಗದಿಂದ, ಸಮನ್ವಿತಂ-ಕೂಡಿರುವ, ಜ್ಞಾನಂಯತ್ - ಜ್ಞಾನವಾವುದುಂಟೋ, ಅದು ತದಧೀನಂಹಿ, ತತ್-ಆ ಕರ್ಮಕ್ಕೆ, ಅಧೀನಂಹಿ-ಬಳಪಟ್ಟಿರುವುದಷ್ಟೆ ॥೩೫॥ ಯತ್ರ-ಯಾವಾಗ (ಜ್ಞಾನಯೋಗವು ದೊರೆತಾಗ) ಭಗವಚ್ಛಿಕ್ಷಯಾ, ಭಗವತ್ - ಭಗವಂತನ, ಶಿಕ್ಷಯಾ - ಆಜ್ಞಾರೂಪವಾದಶಾಸ್ತ್ರದಿಂದ, ಅಸಕೃತ್-ನಿತ್ಯವೂ, ಕರ್ಮಾಣಿ- ನಿತ್ಯನೈಮಿತ್ತಿಕಾದಿ ಕರ್ಮಗಳನ್ನು, ಕುರ್ವಾಣಾಃ - ಮಾಡುವವರು, ಭವಂತಿ-ಆಗುತ್ತಾರೋ, ತದಾ-ಆಗ, ಕೃಷ್ಣಸ್ಯ-ಶ್ರೀ ಕೃಷ್ಣನ, ಗುಣನಾಮಾನಿ-ಗುಣಗಳನ್ನು ಹೊರಪಡಿಸುವ ನಾಮಗಳನ್ನು, ಗೃಣಂತಿ - ಹೊಗಳುತ್ತಾರೆ, ಅನುಸ್ಮರಂತಿಚ - ಧ್ಯಾನವನ್ನೂ ಮಾಡುತ್ತಾರೆ ॥೩೬॥ ಭಗವತೇ-ಷಡ್ಗುಣೈಶ್ವರ್ಯ ಸಂಪನ್ನನಾಗಿಯೂ, ವಾಸುದೇವಾಯ-ವಾಸುದೇವ ರೂಪ

ದ್ವಯುಕ್ಕಿಂತ ವಿವಿಕ್ತವಾದ ಆತ್ಮಜ್ಞಾನವನ್ನೂ, ನಿಶ್ಚಲವಾದ ಭಕ್ತಿಯನ್ನೂ, ಅನಂತರದಲ್ಲಿ ಭಗವತ್ಸ್ವರೂಪ ಜ್ಞಾನವನ್ನೂ, ಆ ಬಳಿಕ ಆ ಭಗವಂತನ ಕೃಪೆಯಿಂದ ಸರ್ವಜ್ಞತ್ವಾದಿ ಭಗವಂತನ ಗುಣಾಭಿರ್ಭಾವವನ್ನೂ ಸಹ ಉಂಟುಮಾಡುವುದು ॥೩೪॥ ಭಗವಂತನನ್ನುದ್ದೇಶಿಸಿ ಮಾಡಲ್ಪಟ್ಟ ಕರ್ಮದಿಂದ ಸುಪ್ರೀತನಾದ ಭಗವಂತನು, *ಆತನ ವಚನಾನುಸಾರವಾಗಿ ತನ್ನ ಪಾದಕಮಲಗಳಲ್ಲಿ ಮನಸ್ಸನ್ನಿಟ್ಟು ನಿರಂತರವೂ ಪ್ರೀತಿಪೂರ್ವಕವಾಗಿ ಧ್ಯಾನಿಸುವುದೆಂಬ ಭಕ್ತಿಯೋಗಕ್ಕೆ ಸಾಧನವಾಗಿಯೂ, ದೇಹಾದಿವಿಲಕ್ಷಣವಾಗಿಯೂ ಇರುವ ಆತ್ಮಜ್ಞಾನವನ್ನುಂಟುಮಾಡುವನು. ಅದರಿಂದಪರಮಪುರುಷಾರ್ಥವು ದೊರೆಯುವುದು. ಆದಕಾರಣ, ಭಕ್ತಿಯೋಗದಿಂದ ಜ್ಞಾನವೂ, ಜ್ಞಾನದಿಂದ ಕರ್ಮನಾಶವೂ ಉಂಟಾಗುವುದಲ್ಲದೆ, ಕರ್ಮದಿಂದ ಕರ್ಮನಾಶವಾಗಲಾರದೆಂದು ಹೇಳುವುದು ಸರಿಯಲ್ಲ, ಆ ಭಕ್ತಿಯೋಗಕ್ಕೂ, ಭಗವದರ್ಪಿತವಾಗಿ ಮಾಡಲ್ಪಟ್ಟಕರ್ಮವೇ ಕಾರಣವು. ॥೩೫॥ ಅಲ್ಲದೆ ಮಹಾತ್ಮರಾದವರೂ ಇದೇ ಸದಾಚಾರವನ್ನು ಅನುವರ್ತಿಸಿರುವರು. ಅವರು ಯಾವಾಗ §ಭಗವದಾಜ್ಞಾ ಪ್ರಕಾರವಾಗಿ ಫಲವನ್ನಾಶಿಸದೆ ಮಾಡುವರೋ ಕರ್ಮಗಳನ್ನು ಆಗ ಭಗವಂತನ ಗುಣಗಳನ್ನೂ ಬಣ್ಣಿಸಿಕೊಂಡು ಧ್ಯಾನಮಾಡುವರು ಅದೆಂತೆಂದರೆ ॥೩೬॥ ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣರೆಂಬ ಚತುರ್ವ್ಯೂಹಾತ್ಮಕನಾಗಿ ನಿತ್ಯ

* ದದಾಮಿಬುದ್ಧಿಯೋಗಂತಂಯೇನಮಾಮುಪಯಾಂತಿತೇ । § ಯತ್ಕರೋಷಿಯದಶ್ನಾಸಿಯಜ್ಜುಹೋಷಿ ದದಾಸಿಯತ್ । ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಂ ॥ (ಗೀತಾ)

ನಿರುದ್ಧಾಯ ನಮಸ್ಸಂಕರ್ಷಣಾಯಚ ॥೩೭॥ ಇತಿ ಮೂರ್ತ್ಯಭಿಧಾನೇನ
ಮಂತ್ರಮೂರ್ತಿಂ *ಅಮೂರ್ತಿಕಂ। ಯಜತೇ ಯಜ್ಞಪುರುಷಂ ಸಸಮ್ಯಗ್ದ
ರ್ಶನಃ ಪುಮಾನ್ ॥೩೮॥ ಇಮಂ ಸ್ವನಿಗಮಂ ಬ್ರಹ್ಮನ್ನವೇತ್ಯ ಮದನುಷ್ಠಿ
ತಂ । ಅದಾನ್ಮೇಜ್ಞಾನ ಮೈಶ್ವರ್ಯಂ ಸ್ವಸ್ಮಿನ್ ಭಾವಂಚ ಕೇಶವಃ ॥೩೯॥
ತ್ವಮಪ್ಯದಭ್ರಶ್ರುತ ವಿಶ್ರುತಂ ವಿಭೋಃ ಸ್ಸಮಾಪ್ಯತೇ ಯೇನ ವಿದಾಂ

ನಾಗಿಯೂ, ಪ್ರದ್ಯುಮ್ನಾಯ-ಪ್ರದ್ಯುಮ್ನ ರೂಪನಾಗಿಯೂ- ಅನಿರುದ್ಧಾಯ-ಅನಿರುದ್ಧರೂಪನಾಗಿಯೂ ಸಂಕರ್ಷಣಾಯಚ-ಸಂಕರ್ಷಣರೂಪನಾಗಿಯೂ ಇರುವ, ತುಭ್ಯಂ-ನಿನಗೆ, ನಮಃ-ಮನಸ್ಸಿನಿಂದ ನಮಸ್ಕಾರವನ್ನು, ಧೀಮಹಿ-ಧ್ಯಾನರೂಪದಿಂದ ಮಾಡುತ್ತೇವೆ ॥೩೭॥ ಯಃಪುಮಾನ್-ಯಾವಪುರುಷನು, ಮೂರ್ತ್ಯಭಿಧಾನೇನ, ಮೂರ್ತಿ - ನಾಲ್ಕುಮೂರ್ತಿಗಳ, ಅಭಿಧಾನೇನ-ಹೆಸರುಗಳುಳ್ಳ, ಇತಿ-ಈಮಂತ್ರದಿಂದ, ಅಮೂರ್ತಿಕಂ-ಮಂತ್ರದಲ್ಲಿ ಹೇಳಲ್ಪಟ್ಟ ಮೂರ್ತಿಗಿಂತಲೂ ಬೇರೆ ರೂಪವಿಲ್ಲದ, ಅಥವಾ ಅಮೂರ್ತಕಂ-ಅಪರಿಚ್ಛಿನ್ನವಾದ ಪ್ರಮಾಣವುಳ್ಳ, ಮಂತ್ರಮೂರ್ತಿಂ - ಮಂತ್ರೋಕ್ತವಾದ ಮೂರ್ತಿಯುಳ್ಳ, ಯಜ್ಞಪುರುಷಂ-ಯಜ್ಞಫಲಗಳನ್ನು ಕೊಡುವ ಅಥವಾ ರುಚಿಯಮಗನಾದ ಯಜ್ಞನೆಂಬ, ಪರಮಾತ್ಮನನ್ನು, ಯಜತೇ-ಪೂಜಿಸುವನೋ, ಸಃ-ಅವನು, ಸಮ್ಯಗ್ದರ್ಶನಃ, ಸಮ್ಯಕ್-ಸಮೀಚೀನವಾದ, ದರ್ಶನಃ-ಜ್ಞಾನವುಳ್ಳವನು ಆಗುತ್ತಾನೆ ॥ ೩೮ ॥ ಹೇ ಬ್ರಹ್ಮನ್-ಎಲೈಬ್ರಾಹ್ಮಣನೇ ! ಕೇಶವಃ-ಶ್ರೀಹರಿಯು, ಇಮಂ-ಈ, ಸ್ವನಿಗಮಂ, ಸ್ವ-ತನ್ನ, ನಿಗಮಂ-ಉಪದೇಶವನ್ನು, ಅಥವಾ ಸ್ವನಿಗಮಂ--ತನ್ನಲ್ಲಿ ಪರ್ಯವಸನ್ನವಾದ, ಇಮಂ-ಫಲಾಭಿಸಂಧಿಯಿಲ್ಲದ ಈ ಕರ್ಮಯೋಗವನ್ನು, ಮದನುಷ್ಠಿತಂ, ಮತ್ - ನನ್ನಿಂದ, ಅನುಷ್ಠಿತಂ-ಆಚರಿಸಲ್ಪಟ್ಟದ್ದನ್ನಾಗಿ, ಅವೇತ್ಯ-ತಿಳಿದು, ಮೇ-ನನಗೆ, ಜ್ಞಾನಂ-ತತ್ವಜ್ಞಾನವನ್ನೂ, * ಐಶ್ವರ್ಯಂ ಅಣಿಮಾದ್ಯಷ್ಟೈಶ್ವರ್ಯವನ್ನೂ, ಸ್ವಸ್ಮಿನ್-ತನ್ನಲ್ಲಿ, ಭಾವಂಚ-ಭಕ್ತಿಯನ್ನೂ, ಅದಾತ್-ಕೊಟ್ಟನು. ॥ ಹೇ ಅದಭ್ರಶ್ರುತ, ಅದಭ್ರ-ಅಧಿಕವಾದ, ಶ್ರುತ-ಜ್ಞಾನವುಳ್ಳವ್ಯಾಸಮುನಿಯೆ! ಯೇನ-ಯಾವುದರಿಂದ, ವಿದಾಂ-

---

ಶ್ವರ್ಯ ಸಂಪನ್ನನಾದ ಭಗವಂತನೇ ! ನಿನಗೆ ನಮಸ್ಕಾರವು ॥೩೭॥ ಎಂಬ ನಾಲ್ಕುಮೂರ್ತಿಗಳನ್ನು ಹೊಗಳುವ ಈ ಮಂತ್ರದಿಂದ ಮಂತ್ರವ್ಯತಿರಿಕ್ತ ಮೂರ್ತಿರಹಿತನಾಗಿರುವ, ಮಂತ್ರಮೂರ್ತಿಯೆನಿಸಿದ ಯಜ್ಞಪುರುಷನಾದ ಆ ಪರಮಾತ್ಮನನ್ನು ಯಾವನು ಪೂಜಿಸುವನೋ ಆ ಪುರುಷನೇ ತತ್ವಜ್ಞಾನಿಯು. ಆದಕಾರಣ ಹರಿಭಜನಕೀರ್ತನೆಗಳನ್ನು ಗೈದವರು ಭಕ್ತಿಯನ್ನು ಮಾತ್ರವೇ ಅಲ್ಲದೆ ತತ್ವಜ್ಞಾನವನ್ನೂ ಪಡೆಯುವರು ॥೩೮॥ ಎಲೈ ಬ್ರಾಹ್ಮಣ ಶ್ರೇಷ್ಠನಾದ ದ್ವೈಪಾಯನನೆ ! ನಾನೀರೀತಿಯಾಗಿ ಮಾಡುತ್ತಿರಲು, ಆ ನಾರಾಯಣಮೂರ್ತಿಯು ತನ್ನ ಆಜ್ಞಾನುಸಾರವಾಗಿ ನಾನು ಫಲಾಭಿಸಂಧಿಯಿಲ್ಲದೆ ಕರ್ಮಗಳನ್ನು ಮಾಡುತ್ತಿರುವುದನ್ನು ತಿಳಿದು, ಉತ್ತಮವಾದ ಜ್ಞಾನಯೋಗವನ್ನೂ, ಅಣಿಮಾದ್ಯಷ್ಟೈಶ್ವರ್ಯಗಳನ್ನೂ, ತನ್ನಲ್ಲಿ ಭಕ್ತಿಯೋಗವನ್ನೂ ನನಗೆ ದಯಪಾಲಿಸಿದನು ॥೩೯॥ ಆದುದರಿಂದ ಎಲೈ ಅಧಿಕಪ್ರಖ್ಯಾತನಾದ ವ್ಯಾಸಮುನೀಂದ್ರನೇ!. ಯಾವ ಭಗವಚ್ಚರಿತ್ರ

ಪಾ--ಅಮೂರ್ತಕಂ,

* (೧) ಅಣಿಮ, ಮಹಿಮ, ಗರಿಮ, ಲಘಿಮ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ.

(೨) ಟೀ—ಐಶ್ವರ್ಯಂ, ಜ್ಞಾನಂ--ಈಶ್ವರವಿಷಯಕವಾದ ಜ್ಞಾನವನ್ನು,

ಬುಭುತ್ಸಿತಂ । ಪ್ರಖ್ಯಾಹಿ ದುಃಖೈರ್ಮುಹು ರರ್ದಿತಾತ್ಮನಾಂ ಸಂಕ್ಲೇಶ
ನಿರ್ವಾಣ ಮುಶಂತಿನಾನ್ಯಥಾ ॥೪೦॥

—: ಇತಿ ಪಂಚಮೋಧ್ಯಾಯಃ: —

ವಿದ್ವಾಂಸರ, ಬುಭುತ್ಸಿತಂ - ತಿಳಿಯಲಪೇಕ್ಷೆಯು, ಸಮಾಪ್ಯತೇ - ಸಂಪೂರ್ಣಮಾಡಲ್ಪಡುವುದೋ, ವಿಭೋಃ-ಭಗವಂತನ, ವಿಶ್ರುತಂ-ಪ್ರಸಿದ್ಧವಾದ, ಆ ಯಶಸ್ಸನ್ನು, ಪ್ರಖ್ಯಾಹಿ-ಪ್ರಚಾರಗೊಳಿಸು, ಯತ್-ಏಕೆಂದರೆ, ದುಃಖೈಃ - ದುಃಖಗಳಿಂದ, ಮುಹುಃ-ಬಾರಿಬಾರಿಗೂ, ಅರ್ದಿತಾತ್ಮನಾಂ, ಅರ್ದಿತ - ಪೀಡಿಸಲ್ಪಟ್ಟ, ಆತ್ಮನಾಂ-ಮನಸ್ಸುಳ್ಳವರಿಗೆ, ಅನ್ಯಥಾ-ಬೇರೆವಿಧದಿಂದ, ಸಂಕ್ಲೇಶನಿರ್ವಾಣಂ, ಸಂಕ್ಲೇಶ-ಸಕಲ ದುಃಖಗಳ, ನಿರ್ವಾಣಂ-ಶಾಂತಿಯನ್ನು, ನೊಶಂತಿ-ತಿಳಿಯುವುದಿಲ್ಲ. ॥ ೪೦ ॥

—ಪಂಚಮಾಧ್ಯಾಯಂ ಸಮಾಪ್ತಂ—

ದಿಂದ ವಿದ್ವಾಂಸರ ಕೋರಿಕೆಗಳು ನೆರವೇರುವವೋ, ಯಾವುದನ್ನುಳಿದು ದುಃಖಗಳಿಂದ ಬಾರಿಬಾರಿಗೂ ಪೀಡಿತರಾದ ಜನಗಳ ದುಃಖಶಾಂತಿಯು ಬೇರೆ ವಿಧದಿಂದಾಗಲಾರದೋ, ಅಂತಹ ಭಗವಂತನ ಗುಣಗಳನ್ನು ಪ್ರಚಾರಗೊಳಿಸೆಂದು ನಾರದಮುನಿಯುಪದೇಶಂಗೈದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್

ಐದನೆಯ ಅಧ್ಯಾಯಂ ಮುಗಿದುದು.

—ಓಂ ನಮಃ ಪರಮಾತ್ಮನೆ—

ಶ್ರೀಸೂತಃ॥ಏವಂ ನಿಶಮ್ಯ ಭಗವಾನ್ ದೇವರ್ಷೇರ್ಜನ್ಮ ಕರ್ಮಚ ॥
ಭೂಯಃ ಪಪ್ರಚ್ಛ ತಂ ಬ್ರಹ್ಮನ್ ವ್ಯಾಸ ಸ್ಸತ್ಯವತೀಸುತಃ॥೧॥ಶ್ರೀವ್ಯಾಸಃ॥

ಶ್ರೀ ಸೂತಃ-ಸೂತನುಹೇಳುತ್ತಾನೆ, ಬ್ರಹ್ಮನ್-ಎಲೈ ಬ್ರಾಹ್ಮಣನಾದ ಶೌನಕನೇ! ಸತ್ಯವತೀಸುತಃ-ಸತ್ಯವತಿಯಪುತ್ರನಾದ, ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ, ವ್ಯಾಸಃ - ವ್ಯಾಸಮುನಿಯು, ಏವಂ-ಹಿಂದೆಹೇಳಿದಮೇರೆ, ದೇವರ್ಷೇಃ-ನಾರದಮುನಿಯ, ಜನ್ಮ-ಉತ್ಪತ್ತಿಯನ್ನು, ಕರ್ಮಚ-ಕಾರ್ಯಗಳನ್ನೂ ನಿಶಮ್ಯ - ಕೇಳಿ, ಭೂಯಃ-ಮರಳಿ, ತಂ-ಆ ನಾರದಮುನಿಯನ್ನು, ಪಪ್ರಚ್ಛ - ಕೇಳಿದನು ॥ ೧ ॥

—ಹರಿಕೀರ್ತನದಿಂದ ನಾರದನಿಗುಂಟಾದ ಮಹಿಮೆ—

ಕಂ॥ ಸೂಚನೆ॥ ಆರನೆಯಧ್ಯಾಯದೊಳಾ । ನಾರದಮುನಿ ಕೃಷ್ಣಮುನಿಯ ನಂಬುಗೆಗೊಳಿಸಲ್॥
ಶೌರಿಯ ಕೀರ್ತನದಿಂ ತನ । ಗೋರಂದದೆ ದೊರೆದ ಭಾಗ್ಯಮಂ ಬಣ್ಣಿಸುವಂ ॥

ಸೂತಪೌರಾಣಿಕನು ಶೌನಕಾದಿಗಳನ್ನು ಕುರಿತು ಹೇಳುವುದೆಂತೆಂದರೆ:-ಅಯ್ಯಾ ಶೌನಕನೆ! ಅನಂತರದಲ್ಲಿ ಷಡ್ಗುಣೈಶ್ವರ್ಯ ಸಂಪನ್ನನಾಗಿಯೂ,ಸತ್ಯವತೀ ಪುತ್ರನಾಗಿಯೂ ಇರುವ ವ್ಯಾಸಮುನಿಯು, ಈ ರೀತಿಯಾಗಿ, ಆ ದೇವರ್ಷಿಯಾದ ನಾರದಮುನಿಯು ಹುಟ್ಟಿದ ಚರಿತ್ರೆಯನ್ನೂ, ಆತನು ಮಾಡಿದ ಕೆಲಸಗಳನ್ನೂ ಕೇಳಿ, ಮರಳಿ ಬೆಸಗೊಳುತ್ತಾನೆ॥೧॥ಅಯ್ಯಾ ಮುನಿಯೆ! ನಿನಗೆ ತತ್ವೋಪದೇಶವನ್ನು ಮಾಡಿದ ಯತಿಗಳು

ಭಿಕ್ಷುಭಿ ರ್ವಿಪ್ರವಸಿತೇ ವಿಜ್ಞಾನಾದೇಷ್ಟೃಭಿಸ್ತವ। ವರ್ತಮಾನೋ ವಯಸ್ಯಾದ್ಯೇ ತತಃ ಕಿಮಕರೋದ್ಭವಾನ್ ॥೨॥ ಸ್ವಾಯಂಭುವ ಕಯಾ ವೃತ್ತ್ಯಾ ವರ್ತಿತಂ ತೇ ಪರಂವಯಃ।ಕಥಂಚೇದ ಮುದಸ್ರಾಕ್ಷೀಃ ಕಾಲೇ ಪ್ರಾಪ್ತೇ ಕಳೇಬರಂ ॥ ೩ ॥ ಪ್ರಾಕ್ಕಲ್ಪವಿಷಯಾ ಮೇತಾಂ ಸ್ಮೃತಿಂ ತೇ ಸುರಸತ್ತಮ । ನಹ್ಯೇವ ವ್ಯವಧಾತ್ಕಾಲ ಏಷಸರ್ವನಿರಾಕೃತಿಃ ॥೪॥ ಶ್ರೀನಾರದಃ ಭಿಕ್ಷುಭಿ ರ್ವಿಪ್ರವಸಿತೇ ವಿಜ್ಞಾನಾ ದೇಷ್ಟೃಭಿ ರ್ಮಮ । ವರ್ತಮಾನೋವಯಸ್ಯಾದ್ಯೇ ತತ ಏತದಕಾರ *ಷಂ ॥೫॥ ಏಕಾತ್ಮಜಾ ಮೇ ಜನನೀ ಯೋಷಿನ್ಮೂಢಾಚ ಕಿಂಕರೀ। ಮಯ್ಯಾತ್ಮಜೇ ನನ್ಯಗತೌ ಚಕ್ರೇ ಸ್ನೇಹಾನುಬಂಧನಂ॥೬॥ ಸಾ ಸ್ವತಂತ್ರಾ ನಕಲ್ಪಾಸೀ *ದ್ಯೋಗಕ್ಷೇಮಂ ಮಮೇಚ್ಛತೀ।

ಶ್ರೀವ್ಯಾಸಃ - ವ್ಯಾಸಮುನಿಯು ಹೇಳುತ್ತಾನೆ, ತವ-ನಿನಗೆ, ವಿಜ್ಞಾನಾದೇಷ್ಟೃಭಿಃ, ವಿಜ್ಞಾನ-ತತ್ವಜ್ಞಾನವನ್ನು, ಆದೇಷ್ಟೃಭಿಃ-ಉಪದೇಶಿಸಿದ, ಭಿಕ್ಷುಭಿಃ-ಯತಿಗಳಿಂದ, ವಿಪ್ರವಸಿತೇ-ಪ್ರಯಾಣಮಾಡಲ್ಪಡಲು ಆದ್ಯೇ-ಮೊದಲನೆಯ, ವಯಸಿ-ವಯಸ್ಸಿನಲ್ಲಿ, ವರ್ತಮಾನಃ-ಇರುವ, ಭವಾನ್ - ನೀನು, ಕಿಂ-ಏನನ್ನು, ಅಕರೋತ್-ಮಾಡಿದೆ ॥೨॥ ಹೇಸ್ವಾಯಂಭುವ-ಎಲೈಬ್ರಹ್ಮಪುತ್ರನಾದ ನಾರದನೆ! ತೇ-ನಿನ್ನಿಂದ, ಪರಂ-ಕಡೆಯ, ವಯಃ - ವಯಸ್ಸು, ಕಥಂ-ಹೇಗೆ, ವರ್ತಿತಂ - ಕಳೆಯಲ್ಪಟ್ಟಿತು, ಕಾಲೇ-ಅವಸಾನಕಾಲವು, ಪ್ರಾಪ್ತೇ-ಬರಲು, ಇದಂ - ದಾಸೀಪುತ್ರರೂಪವಾದ, ಕಳೇಬರಂ-ಶರೀರವನ್ನು, ಕಥಂ-ಹೇಗೆ, ಉದಸ್ರಾಕ್ಷೀಃ-ಬಿಟ್ಟವನಾದೆ? ॥ ೩ ॥ ಹೇಸುರಸತ್ತಮ-ಎಲೈ ದೇವತೆಗಳಲ್ಲಿ ಶ್ರೇಷ್ಠನಾದ ನಾರದನೆ! ಸರ್ವನಿರಾಕೃತಿಃ, ಸರ್ವ-ಸರ್ವವನ್ನು, ನಿರಾಕೃತಿಃ-ನಾಶಗೊಳಿಸುವ, ಏಷಃ-ಕಲ್ಪಾಂತರವನ್ನು ಸೂಚಿಸುವ, ಕಾಲಃ-ಕಾಲವು, ಪ್ರಾಕ್ಕಲ್ಪವಿಷಯಾಂ-ಹಿಂದಣಕಲ್ಪಕ್ಕೆ ಸಂಬಂಧಿಸಿದ, ಏತಾಂ-ಈ, ತೇ-ನಿನ್ನ, ಸ್ಮೃತಿಂ-ಜ್ಞಾಪಕವನ್ನು, ಕಥಂಹಿ-ಹೇಗೆ, ನವ್ಯವಧಾತ್-ಹೋಗಲಾಡಿಸಲಿಲ್ಲ ॥ ೪ ॥ ಶ್ರೀನಾರದಃ-ನಾರದಮುನಿಯು ಹೇಳುತ್ತಾನೆ, ಮಮ-ನನಗೆ, ವಿಜ್ಞಾನಾದೇಷ್ಟೃಭಿಃ-ತತ್ವೋಪದೇಶವನ್ನು ಮಾಡಿದ, ಭಿಕ್ಷುಭಿಃ-ಯೋಗಿಗಳಿಂದ, ವಿಪ್ರವಸಿತೇ-ಪ್ರಯಾಣಮಾಡಲ್ಪಡಲು, ಆದ್ಯೇವಯಸಿ-ಬಾಲ್ಯದಲ್ಲಿ, ವರ್ತಮಾನಃ-ಇರುವ ನಾನು, ತತಃ-ಆಬಳಿಕ, ಏತತ್-ಇದನ್ನು, ಅಕಾರಷಂ-ಮಾಡಿದೆನು ॥ ೫ ॥ ಏಕಾತ್ಮಜಾ-ಏಕಪುತ್ರಳಾದ, ಮೂಢಾ-ತಿಳಿವಳಿಕೆಯಿಲ್ಲದ, ಕಿಂಕರೀ-ದಾಸಿಯಾದ, ಮೇ-ನನಗೆ, ಜನನೀ-ತಾಯಿಯಾದ, ಯೋ

ಹೊರಟುಹೋದ ಬಳಿಕ, ಬಾಲನಾಗಿರುವ ನೀನೇನು ಮಾಡಿದೆ ? ॥೨॥ ನಿನ್ನ ಉಳಿದ ಜೀವಿತಕಾಲವನ್ನು ಯಾವ ವೃತ್ತಿಯಿಂದ ಕಳೆದೆ ? ಅವಸಾನ ಕಾಲದಲ್ಲಿ ನಿನಗೆ ಬಂದಿದ್ದ ದಾಸೀಪುತ್ರ ಕಳೇಬರವನ್ನೆಂತು ಬಿಟ್ಟೆ ? ॥೩॥ ಸರ್ವಪದಾರ್ಥಗಳನ್ನೂ ನಾಶಗೊಳಿಸುವ ಈ ಕಾಲವು ನಿನಗುಂಟಾಗಿರುವ ಪೂರ್ವಕಲ್ಪದ ಸ್ಮರಣೆಯನ್ನು ಮಾತ್ರ ಹೋಗಲಾಡಿಸದಿರುವುದೆಂತು ? ॥೪॥ ಎಂದು ಬೆಸಗೊಳಲು ನಾರದಮುನಿಯು, ಎಲೈ ವ್ಯಾಸನೆ! ನನಗೆ ಜ್ಞಾನೋಪದೇಶವನ್ನು ಮಾಡಿದ ಸನ್ಯಾಸಿಗಳು ಹೊರಟುಹೊದ ಬಳಿಕ ಬಾಲನಾದ ನಾನು ಮಾಡಿದುದನ್ನು ಹೇಳುವೆನು ಕೇಳು ॥೫॥ ಮೂಢಳಾಗಿಯೂ ಬ್ರಾಹ್ಮಣದಾಸಿ

* ಯೋಗ= ದೊರಕಿಲ್ಲದಿದ್ದ ವಸ್ತುವುದೊರೆಯುವುದು. ಕ್ಷೇಮ= ಇರುವುದನ್ನು ಕಾಪಾಡುವುದು ಬೆಳೆಸುವುದು, ತಕ್ಕವರಿಗೆ ದಾನಮಾಡುವುದು.

ಈಶಸ್ಯಹಿ ವಶೇ ಲೋಕೋ ಯೋಷಾ ದಾರುಮಯೀ ಯಥಾ॥೭॥ ಅಹಂಚ ತದ್ಬ್ರಹ್ಮಕುಲಊಷಿವಾಂಸ್ತದಪೇಕ್ಷಯಾ । ದಿಗ್ದೇಶಕಾಲಾವ್ಯುತ್ಪನ್ನೋ ಬಾಲಕಃ ಪಂಚಹಾಯನಃ ॥೮॥ ಏಕದಾ ನಿರ್ಗತಾಂ ಗೇಹಾ ದ್ದುಹಂತೀಂ ನಿಶಿ ಗಾಂ ಪಥಿ। ಸರ್ಪೋಽದಶತ್ಪದಾ ಸ್ಪೃಷ್ಟಃ ಕೃಪಣಾಂ ಕಾಲಚೋದಿತಃ॥೯॥ ತದಾ ತದಹಮೀಶಸ್ಯಭಕ್ತಾನಾಂ ಶಮಭೀಪ್ಸತಃ । ಅನುಗ್ರಹಂ

ಷಿತ್-ಆಸ್ತ್ರೀಯು, ಅನನ್ಯಗತೌ - ಬೇರೆ ದಿಕ್ಕಿಲ್ಲದ, ಆತ್ಮಜೇ-ಮಗನಾದ, ಮಯಿ-ನನ್ನಲ್ಲಿ, ಸ್ನೇಹಾನುಬಂಧನಂ-ಹೆಚ್ಚಾದಪ್ರೀತಿಯನ್ನು, ಚಕ್ರೇ-ಮಾಡಿದಳು, ॥ ೬ ॥ ದಾರುಮಯೀ-ಮರದಿಂದಮಾಡಲ್ಪಟ್ಟ, ಯೋಷಾಯಥಾ-ಬೊಂಬೆಯಂತೆ, ಲೋಕಃ-ಪ್ರಪಂಚವು, ಈಶಸ್ಯ-ಸರ್ವನಿಯಾಮಕನಾದ ಭಗವಂತನ, ವಶೇಹಿ-ವಶದಲ್ಲಿರುವುದಷ್ಟೆ! ಆದುದರಿಂದ ಅಸ್ವತಂತ್ರಾ-ಪರಾಧೀನಳಾದ, ಸಾ - ಆಸ್ತ್ರೀಯು, ಮಮ-ನನ್ನ, ಯೋಗಕ್ಷೇಮಂ-ಯೋಗಕ್ಷೇಮವನ್ನು, ಇಚ್ಛತೀ-ಬಯಸುವವಳಾದರೂ, ನಕಲ್ಪಾ - ಅಸಮರ್ಥಳಾಗಿ, ಆಸೀತ್-ಇದ್ದಳು ॥ ೭ ॥ ದಿಗ್ದೇಶಕಾಲಾವ್ಯುತ್ಪನ್ನಃ, ದಿಕ್-ಪೂರ್ವ-ಪಶ್ಚಿಮ ಮೊದಲಾದ ದಿಕ್ಕುಗಳನ್ನು, ದೇಶ-ಕಾಶಿ, ಕಾಂಚಿ, ಮೊದಲಾದ ದೇಶಗಳನ್ನು, ಕಾಲ - ಚೈತ್ರ ವೈಶಾಖಮೊದಲಾದ ಕಾಲವನ್ನೂ, ಅವ್ಯುತ್ಪನ್ನಃ - ತಿಳಿಯದಿರುವ, ಪಂಚಹಾಯನಃ - ಐದುವರುಷವಯಸ್ಸುಳ್ಳ, ಬಾಲಕಃ-ಹುಡುಗನಾದ, ಅಹಂಚ - ನಾನೂ, ತದಪೇಕ್ಷಯಾ, ತತ್-ಆಮಾತೃಸ್ನೇಹದ ಅಥವಾ ಆ ತತ್ವವಿಚಾರದ, ಅಪೇಕ್ಷಯಾ-ಅಪೇಕ್ಷೆಯಿಂದ, ತದ್ಬ್ರಹ್ಮಕುಲೇ, ಆ ಬ್ರಾಹ್ಮಣರಮನೆಯಲ್ಲಿ, ಉಷಿವಾನ್-ವಾಸಮಾಡುತ್ತಿದ್ದೆನು, ॥ ೮ ॥ ಏಕದಾ-ಒಂದುದಿನ, ಗೇಹಾತ್-ಮನೆಯಿಂದ, ನಿರ್ಗತಾಂ-ಹೊರಟ, ನಿಶಿ-ರಾತ್ರಿಯಲ್ಲಿ, ಗಾಂ-ಆಕಳನ್ನು, ದುಹಂತೀಂ - ಹಾಲುಕರೆಯುತ್ತಿರುವ, ಕೃಪಣಾಂ-ಅನಾಥಳಾದ ನನ್ನತಾಯಿಯನ್ನು ಪಥಿ-ದಾರಿಯಲ್ಲಿ, ಕಾಲಚೋದಿತಃ-ಮೃತ್ಯುವಿನಿಂದಪ್ರೇರಿಸಲ್ಪಟ್ಟ, ಸರ್ಪಃ-ಹಾವು, ಪದಾ-ಕಾಲಿನಿಂದ, ಸ್ಪೃಷ್ಟಃ-ತುಳಿಯಲ್ಪಟ್ಟದ್ದಾಗಿ, ಅದಶತ್ - ಕಚ್ಚಿತು. ॥ ೯ ॥ ತದಾ-ಆಗ, ಅಹಂ-ನಾನು, ತತ್-ಆತಾಯಿಯಮರಣವನ್ನು, ಭಕ್ತಾನಾಂ-ಭಕ್ತರಿಗೆ, ಶಂ-ಸುಖವನ್ನು, ಅಭೀಪ್ಸತಃ - ಅಪೇಕ್ಷಿಸುವ, ಈಶಸ್ಯ-ಪರಮೇಶ್ವರನ, ಅನುಗ್ರಹಂ-ಪ್ರಸಾದವನ್ನಾಗಿ, ಮನ್ಯಮಾನಃ-ತಿಳಿದವನಾಗಿ, ಉತ್ತರಾಂದಿಶಂ-

ಯಾಗಿಯೂ ಇರುವ ನನ್ನ ತಾಯಿಯು ಏಕಪುತ್ರಳಾದುದರಿಂದ ಬೇರೆಗತಿಯಿಲ್ಲದ ನನ್ನಲ್ಲಿ ಸಂಪೂರ್ಣವಾದ ಪ್ರೀತಿಯನ್ನೆ ಮಾಡುತ್ತಿದ್ದಳು ॥೬॥ ದಾರುಮಯವಾದ ಬೊಂಬೆಯು ಸೂತ್ರಧಾರನವಶವಾಗಿರುವಂತೆ, ಪ್ರಪಂಚವು ಪರಮೇಶ್ವರನಿಗಧೀನವಾಗಿದ್ದರೂ ಅಸ್ವತಂತ್ರಳಾದ ನನ್ನ ತಾಯಿಯು ನನ್ನ ಯೋಗಕ್ಷೇಮವನ್ನು ನಡೆಯಿಸುವುದಕ್ಕೆ ಯತ್ನವಿಲ್ಲದೆ ನನ್ನ ಯೋಗಕ್ಷೇಮ ಚಿಂತನೆಯನ್ನು ಮಾತ್ರಮಾಡುತ್ತಿದ್ದಳು ॥ ೭ ॥ ಪೂರ್ವಾದಿ ದಿಕ್ಕುಗಳನ್ನೂ, ಕಾಶಿ, ಕಾಂಚೀ ಮೊದಲಾದ ದೇಶಗಳನ್ನೂ, ಚೈತ್ರವೈಶಾಖಾದಿಕಾಲಗಳನ್ನೂ, ಯಾವುದನ್ನೂ ತಿಳಿಯದ, ಐದುವರುಷದ ಹುಡುಗನಾದ ನಾನು ಆ ತಾಯಿಯ ವಾತ್ಸಲ್ಯಕ್ಕೊಳಗಾಗಿ ತತ್ವವಿಚಾರವನ್ನು ಮಾಡಬೇಕೆಂಬಾಸೆಯಿಂದ ಆ ಬ್ರಾಹ್ಮರ ಮನೆಯಲ್ಲಿಯೇ ವಾಸವಾಗಿದ್ದೆನು, ॥೮॥ ಒಂದು ದಿನ ನನ್ನ ತಾಯಿಯು ರಾತ್ರಿಯಲ್ಲಿ ಮನೆಯಿಂದ ಹೊರಟು ಆಕಳಹಾಲನ್ನು ಕರೆಯುತ್ತಿರಲು ಅನಾಥಳಾದ ಆಕೆಯನ್ನು ಮೃತ್ಯುಪ್ರೇರಿತವಾದ ಒಂದುಸರ್ಪವು ಕಾಲಿನಿಂದತುಳಿಯಲ್ಪಟ್ಟದ್ದಾಗಿ ಕಚ್ಚಲು, ಆಕೆಯು ಮೃತಳಾದಳು॥೯॥ ಆಗ ನಾನು ಆ ತಾಯಿಯ ಮರಣವನ್ನು "ಭಕ್ತರ ಸುಖವನ್ನೇ ಬಯಸುತ್ತಿರುವ ಪರ

ಮನ್ಯಮಾನಃ ಪ್ರಾತಿಷ್ಠಂ ದಿಶಮುತ್ತರಾಂ॥೧೦॥ ಸ್ಫೀತಾನ್ ಜನಪದಾಂ ಸ್ತತ್ರ ಪುರಗ್ರಾಮ ವ್ರಜಾಕರಾನ್ । ಖೇಟಾನ್ ಖರ್ವಟವಾಟೀಶ್ಚ ವನಾನ್ಯುಪವನಾನಿಚ ॥೧೧॥ ಚಿತ್ರಧಾತುವಿಚಿತ್ರಾದ್ರೀ ನಿಭಭಗ್ನಭುಜದ್ರುಮಾನ್ । ಜಲಾಶಯಾನ್ ಶಿವಜಲಾ ನ್ನಲಿನೀ ಸ್ಸುರಸೇವಿತಾಃ ॥೧೨॥ ಚಿತ್ರಸ್ವನೈಃ ಪತ್ರರಥೈರ್ವಿಭ್ರಮದ್ಭ್ರಮರಶ್ರಿಯಃ । ನಲವೇಣುಶರಸ್ತಂಬಕುಶಕೀಚಕ ಗಹ್ವ

ಉತ್ತರದಿಕ್ಕಿಗೆ, ಪ್ರಾತಿಷ್ಠಂ-ಹೊರಟೆನು ॥೧೦॥ ತತ್ರ-ಆ ಉತ್ತರದಿಕ್ಕಿನಲ್ಲಿ, ಸ್ಫೀತಾನ್-ಸಮೃದ್ಧಗಳಾಗಿರುವ, ಜನಪದಾನ್-ದೇಶಗಳನ್ನೂ, ಪುರಗ್ರಾಮವ್ರಜಾಕರಾನ್, ಪುರ-ರಾಜಧಾನಿಗಳನ್ನೂ, *ಗ್ರಾಮ-ಗ್ರಾಮಗಳನ್ನೂ (ಹಳ್ಳಿ) ವ್ರಜ-ಗೋಕುಲಗಳನ್ನೂ, ಆಕರಾನ್-ರತ್ನಮೊದಲಾದವುಗಳ ಗಣಿಗಳನ್ನೂ, ಖೇಟಾನ್-ಬೇಸಾಯಗಾರರ ಹಳ್ಳಿಗಳನ್ನೂ, ಖರ್ವಟವಾಟೀಶ್ಚ, ಖರ್ವಟ-‡ ಬೆಟ್ಟದ ತಪ್ಪಲಲ್ಲಿರುವ ಹಳ್ಳಿಗಳನ್ನೂ, ವಾಟೀಶ್ಚ-ಅಡಿಕೆ ತೆಂಗು ಹೂದೋಟಗಳನ್ನೂ, ವನಾನಿ-ಕಾಡುಗಳನ್ನೂ. ಉಪವನಾನಿಚ - ಉದ್ಯಾನವನಗಳನ್ನೂ, ॥ ೧೧ ॥ ಚಿತ್ರಧಾತು ವಿಚಿತ್ರಾದ್ರೀನ್, ಚಿತ್ರ - ಹಲವುಬಗೆಗಳಾದ, ಧಾತು - ಬೆಳ್ಳಿಬಂಗಾರ ಮೊದಲಾದವುಗಳಿಂದ, ವಿಚಿತ್ರ-ಸೊಗಸಾದ, ಅದ್ರೀನ್-ಬೆಟ್ಟಗಳನ್ನೂ, ಇಭಭಗ್ನಭುಜದ್ರುಮಾನ್, ಇಭ-ಆನೆಗಳಿಂದ, ಭಗ್ನ-ಮುರಿಯಲ್ಪಟ್ಟ, ಭುಜ-ಕೊಂಬೆಗಳುಳ್ಳ, ದ್ರುಮಾನ್-ವೃಕ್ಷಗಳನ್ನೂ, ಶಿವಜಲಾನ್-ಮಂಗಳಕರವಾದ ಜಲವುಳ್ಳ. ಜಲಾಶಯಾನ್-ಕೆರೆ ಕೊಳ ಮೊದಲಾದವುಗಳನ್ನೂ, ಸುರಸೇವಿತಾಃ, ಸುರ-ದೇವತೆಗಳಿಂದ, ಸೇವಿತಾಃ-ಸೇವಿಸಲ್ಪಟ್ಟ, ಚಿತ್ರಸ್ವನೈಃ-ವಿಚಿತ್ರಶಬ್ದಗಳುಳ್ಳ, ಪತ್ರರಥೈಃ-ಪಕ್ಷಿಗಳಿಂದ, ವಿಭ್ರಮದ್ಭ್ರಮರಶ್ರಿಯಃ, ವಿಭ್ರಮತ್-ಸಂಚರಿಸುತ್ತಿರುವ, ಭ್ರಮರ-ದುಂಬಿಗಳ, ಶ್ರಿಯಃ - ಕಾಂತಿಗಳುಳ್ಳ, ನಳಿನೀಃ-ಸರೋವರಗಳನ್ನೂ, ಏಕಏವ-ಒಬ್ಬನೇ, ಅತಿಯಾತಸ್ಸನ್-ಅತಿಕ್ರಮಿಸಿದವನಾಗಿ, ಅಹಂ-ನಾನು ನಲವೇಣುಶರಸ್ತಂಬಕುಶಕೀಚಕಗಹ್ವರಂ, ನಲ-ಹುಲ್ಲು, ವೇಣು-ಬಿದಿರು, ಶರ-ಜೊಂಡು, ಸ್ತಂಬ-ಹುಲ್ಲುಮೊದಲಾದವುಗಳ ಗೊಂಚಲು, ಕುಶ-ದರ್ಭವಿಶೇಷ, ಕೀಚಕ - ತೂತುಗಳುಳ್ಳಬಿದಿರು ಇವುಗಳಿಂದ, ಗಹ್ವರಂ-ದುರ್ಗಮವಾಗಿರುವ, ಘೋರಂ-ಸಹಿಸುವುದಕ್ಕಾಗದ, ಪ್ರತಿಭಯಾಕಾರಂ, ಪ್ರತಿಭಯ-ಭಯಂಕರವಾದ, ಆಕಾರಂ-ರೂಪವುಳ್ಳ, ವ್ಯಾಳೋಲೂಕಶಿವಾಜಿರಂ, ವ್ಯಾಳ - ಕಾಡಾನೆಗಳು ಅಥವಾ ಸರ್ಪ

ಮೇಶ್ವರನ ಅನುಗ್ರಹವೇ'' ಎಂದು ತಿಳಿದವನಾಗಿ ಅಲ್ಲಿಂದ ಉತ್ತರ ದಿಕ್ಕಿಗೆ ಹೊರಟೆನು॥ ಬಳಿಕ ಅಲ್ಲಿರುವ ದೇಶಗಳನ್ನೂ, ಪಟ್ಟಣಗಳನ್ನೂ ಗೊಲ್ಲರದೊಡ್ಡಿಗಳನ್ನೂ, ರಾಜಧಾನಿಗಳನ್ನೂ, ಗ್ರಾಮಗಳನ್ನೂ, ಗಣಿಗಳನ್ನೂ, ತಪ್ಪಲಲ್ಲಿರುವ ಹಳ್ಳಿಗಳನ್ನೂ, ಹೂದೋಟಗಳನ್ನೂ, ಅರಣ್ಯಗಳನ್ನೂ, ಉದ್ಯಾನ ವನಗಳನ್ನೂ, ಚಿನ್ನಬೆಳ್ಳಿಮೊದಲಾದ ಹಲವು ಧಾತುಗಳಿಂದ ಚಿತ್ರಗಳಾಗಿರುವ ಬೆಟ್ಟಗಳನ್ನೂ, ಆನೆಗಳಿಂದಮುರಿಯಲ್ಪಟ್ಟ ಕೊಂಬೆಗಳುಳ್ಳ ವೃಕ್ಷಗಳನ್ನೂ, ಸೊಗಸಾದ ತಿಳಿನೀರುಳ್ಳ ಕೆರೆಕುಂಟೆಗಳನ್ನೂ, ವಿಚಿತ್ರಧ್ವನಿಗ

* ವಿಪ್ರಾಶ್ಚ ವಿಪ್ರಭೃತ್ಯಾಶ್ಚ ಯತ್ರಚೈವವಸಂತಿಹಿ । ಸತುಗ್ರಾಮಇತಿಪ್ರೋಕ್ತಶ್ಶೂದ್ರಾಣಾಂವಾಸ ಏವವಾ ॥ ಅಥವಾ-ಶೂದ್ರಾಶ್ಚ ಶೂದ್ರಭೃತ್ಯಾಶ್ಚ ಯತ್ರಸರ್ವೇವಸಂತಿಹಿ । ಸತುಗ್ರಾಮಇತಿ ಪ್ರೋಕ್ತೋ ದ್ವಿಜಾನಾಂವಾಸವರ್ಜಿತಾ॥

‡ ಏಕತೋಯತ್ರತುಗ್ರಾಮೋ ನಗರಂಚೈಕತಸ್ಸ್ಥಿತಂ । ಮಿಶ್ರಂತತ್ಖರ್ವಟಂನಾಮ ನದೀಗಿರಿಸಮಾಶ್ರಯಂ॥

ರಂ ॥ ೧೩ ॥ ಏಕಏವಾತಿಯಾತೋಽಹ ಮದ್ರಾಕ್ಷಂ ವಿಪಿನಂ ಮಹತ್ ।
ಘೋರಂ ಪ್ರತಿಭಯಾಕಾರಂ ವ್ಯಾಳೋಲೂಕ ಶಿವಾಜಿರಂ ॥೧೪॥ ಪರಿಶ್ರಾಂ
ತೇಂದ್ರಿಯಾತ್ಮಾಹಂ ತೃಟ್ಪರೀತೋ ಬುಭುಕ್ಷಿತಃ। ಸ್ನಾತ್ವಾ ಪೀತ್ವಾ ಹ್ರದೇ
ನದ್ಯಾ ಉಪಸ್ಪೃಷ್ಟೋ ಗತಶ್ರಮಃ ॥೧೫॥ ತಸ್ಮಿ ನ್ನಿರ್ಮನುಜೇ ರಣ್ಯೇ
ಪಿಪ್ಪಲೋಪಸ್ಥ ಆಶ್ರಿತಃ। ಆತ್ಮನಾತ್ಮಾನ † ಮಾತ್ಮಸ್ಥಂ ಯಥಾಶ್ರುತ ಮಚಿಂತ
ಯಂ ॥೧೬॥ ಧ್ಯಾಯತಶ್ಚರಣಾಂಭೋಜಂ ಭಾವನಿರ್ಜಿತ ಚೇತಸಾ ।

ಗಳು ಉಲೂಕ-ಗೂಬೆಗಳು, ಶಿವಾ-ನರಿಗಳು ಇವುಗಳಿಗೆ, ಅಜಿರಂ-ಆಟದಮನೆಯಾಗಿರುವ, ಮಹತ್ ವಿಸ್ತಾರವಾದ, ವಿಪಿನಂ-ಕಾಡನ್ನು, ಅದ್ರಾಕ್ಷಂ-ಕಂಡೆನು, ॥ ೧೩ ॥ ಪರಿಶ್ರಾಂತೇಂದ್ರಿಯಾತ್ಮಾ, ಪರಿಶ್ರಾಂತ-ಬಳಲಿದ, ಇಂದ್ರಿಯ-ಚಕ್ಷುರಾದೀಂದ್ರಿಯಗಳು, ಆತ್ಮಾ-ಶರೀರವೂವುಳ್ಳ, ತೃಟ್ಪರೀತಃ, ತೃಟ್-ನೀರಡಿಕೆಯಿಂದ, ಪರೀತಃ-ವ್ಯಾಪ್ತನಾದ, ಬುಭುಕ್ಷಿತಃ-ಹಸಿವುಳ್ಳ, ಅಹಂ - ನಾನು, ನದ್ಯಾಃ-ಆನದಿಯ, ಹ್ರದೇ-ಮಡುವಿನಲ್ಲಿ, ಸ್ನಾತ್ವಾ-ಸ್ನಾನಮಾಡಿ, ಪೀತ್ವಾ ನೀರನ್ನುಕುಡಿದು, ಉಪಸ್ಪೃಷ್ಟಃ-ಆಚಮನವನ್ನು ಮಾಡಿ, ಗತಶ್ರಮಃ-ಆಯಾಸವನ್ನು ಹೋಗಲಾಡಿಸಿಕೊಂಡವನಾಗಿ, ॥ ೧೪ ॥ ನಿರ್ಮನುಜೇ-ಮನುಷ್ಯರಿಲ್ಲದ, ತಸ್ಮಿನ್-ಆ, ಅರಣ್ಯೇ-ಕಾಡಿನಲ್ಲಿ, ಪಿಪ್ಪಲೋಪಸ್ಥೇ, ಪಿಪ್ಪಲ-ಅಶ್ವತ್ಥವೃಕ್ಷದ, ಉಪಸ್ಥೇ-ಬುಡದಲ್ಲಿ, ಆಶ್ರಿತಃ-ಕುಳಿತುಕೊಂಡು, ಯಥಾಶ್ರುತಂ-ಗುರೂಪದೇಶದಮೇರೆ, ಆತ್ಮನಾ-ಮನಸ್ಸಿನಿಂದ, ಆತ್ಮಸ್ಥಂ-ಹೃದಯದಲ್ಲಿರುವ, ಆತ್ಮಾನಂ-ಪರಮಾತ್ಮನನ್ನು, ಅಚಿಂತಯಂ-ಧ್ಯಾನಮಾಡಿದೆನು ॥ ೧೫ ॥ ಭಾವನಿರ್ಜಿತಚೇತಸಾ, ಭಾವ-ಭಕ್ತಿಯಿಂದ, ನಿರ್ಜಿತ-ಜಯಿಸಲ್ಪಟ್ಟ, ಚೇತಸಾ - ಮನಸ್ಸಿನಿಂದ, ಚರಣಾಂಭೋಜಂ-ಪಾದಕಮಲವನ್ನು, ಧ್ಯಾಯತಃ-ಧ್ಯಾನಮಾಡುತ್ತಿರುವ, ಔತ್ಕಂಠ್ಯಾಶ್ರುಕಳಾಕ್ಷಸ್ಯ, ಔತ್ಕಂಠ್ಯ-ಆನಂದದಿಂದುಂಟಾದ, ಅಶ್ರು-ನೀರಿನ, ಕಳಾ-ಕಳೆಯುಳ್ಳ, ಅಕ್ಷಸ್ಯ-ಕಣ್ಣುಳ್ಳ, ಮೇ-ನನ್ನ, ಹೃದಿ-ಹೃದಯದಲ್ಲಿ, ಹರಿಃ-ಶ್ರೀಹರಿಯು, ಶನೈಃ-ಮೆಲ್ಲನೆ, ಆಸೀತ್-ಪ್ರತ್ಯಕ್ಷನಾದನು, ॥ ೧೬ ॥ ಮುನೇ - ಎಲೈ

ಳುಳ್ಳ ಹಕ್ಕಿಗಳಿಂದ ರಮ್ಯಗಳಾಗಿಯೂ, ಸಂಚರಿಸುತ್ತಿರುವ ದುಂಬಿಗಳ ಗಾನದಿಂದ ಮನೋಹರಗಳಾಗಿಯೂ ದೇವತಾಯೋಗ್ಯಗಳೆನಿಸಿರುವ ಸರೋವರಗಳನ್ನೂ, ನೋಡುತ್ತಾ, ಹುಲ್ಲು, ಬಿದಿರುಮೆಳೆ, ಜೊಂಡುಹುಲ್ಲು, ದರ್ಭೆ, ಮೊದಲಾದವುಗಳಿಂದ ಹೋಗುವದಕ್ಕಾಗದೆ, ಆನೆ, ಗೂಗೆ, ನರಿ, ಮೊದಲಾದವುಗಳಿಗೆ ವಿಹಾರಸ್ಥಾನವೆನಿಸಿ ಅತಿಭಯಂಕರವಾದ ಒಂದು ಮಹಾರಣ್ಯವನ್ನುಕಂಡೆನು ॥ ೧೩ ॥ ಆಗ ನನ್ನ ಇಂದ್ರಿಯಗಳೂ ಶರೀರವೂ ಬಳಲಿದವು. ಹಸಿವು ಬಾಯಾರಿಕೆಗಳನ್ನು ಸಹಿಸುವದಕ್ಕಾಗಲಿಲ್ಲ. ಇಂತು ಕಂಗೆಟ್ಟಿರುವ ನಾನು ಬಳಿಯಲ್ಲಿಯೇ ಹರಿಯುತ್ತಿದ್ದ ಮಹಾನದಿಯಲ್ಲಿ ಸ್ನಾನಾಚಮನಗಳನ್ನು ಮಾಡಿ, ನೀರನ್ನುಕುಡಿದು ಬಳಲಿಕೆಯನ್ನು ತೀರಿಸಿಕೊಂಡು ನಿರ್ಮಾನುಷವಾದಕಾಡಿನಲ್ಲಿ ಒಂದು ಅಶ್ವತ್ಥವೃಕ್ಷದ ಬುಡದಲ್ಲಿ ಕುಳಿತುಕೊಂಡು, ನಾನು ಮೊದಲು ಗುರುಗಳಿಂದ ಹೇಗೆ ಉಪದೇಶವನ್ನು ಪಡೆದೆನೋ ಅದೇಮೇರೆಗೆ, ನನ್ನ ಮನಸ್ಸಿನಲ್ಲಿಯೇ ಹೃದಯಸ್ಥನಾದ ಪರಮಾತ್ಮನನ್ನು ಧ್ಯಾನಿಸುತ್ತಾ ಬಂದೆನು. ॥ ೧೫ ॥ ಇಂತು ಭಕ್ತ್ಯ

† ಪಾ॰ ಆತ್ಮಸ್ಥಂ-ಜೀವಾತ್ಮನಲ್ಲಿರುವ.

ಔತ್ಕಂಠ್ಯಾಶ್ರುಕಳಾಕ್ಷಸ್ಯ ಹೃದ್ಯಾಸೀ ನ್ಮೇ ಶನೈರ್ಹರಿಃ||೧೭||ಪ್ರೇಮಾತಿಭರ
ನಿರ್ಭಿನ್ನ ಪುಲಕಾಂಗೋ ತಿನಿರ್ವೃತಃ|ಆನಂದಸಂಪ್ಲವೇ ಲೀನೋ ನಾಪಶ್ಯ
ಮುಭಯಂ ಮುನೇ||೧೮|| ರೂಪಂ ಭಗವತೋ ಯತ್ತನ್ಮನಃಕಾಂತಂ ಶುಚಾ
ಪಹಂ|ಅಪಶ್ಯನ್ ಸಹಸೋತ್ತಸ್ಥೌ ವೈಕ್ಲಬ್ಯಾ ದ್ದುರ್ಮನಾ ಇವ||೧೯||ದಿದೃ
ಕ್ಷುಸ್ತದಹಂ ಭೂಯಃ ಪ್ರಣಿಧಾಯ ಮನೋ ಹೃದಿ | ವೀಕ್ಷಮಾಣೋಪಿ
ನಾಪಶ್ಯ ಮವಿತೃಪ್ತ ಇವಾತುರಃ ||೨೦||ಏವಂ ಯತಂತಂ ವಿಪಿನೇ ಮಾಮ
ಹಾ ಗೋಚರೋ ಗಿರಾಂ | ಗಂಭೀರಶ್ಲಕ್ಷ್ಣಯಾ ವಾಚಾ ಶುಚಃ ಪ್ರಶಮ

ವ್ಯಾಸನೆ ! ಪ್ರೇಮ... ಕಾಂಗಃ, ಪ್ರೇಮ-ಪ್ರೀತಿಯು, ಅತಿಭರ - ಬಹಳಭಾರದಿಂದ, ನಿರ್ಭಿನ್ನ - ಹೊರಹೊಮ್ಮಿದ, ಪುಲಕ - ರೋಮಾಂಚಗಳ, ಅಂಗಃ - ಶರೀರವುಳ್ಳ, ಅತಿನಿರ್ವೃತಃ-ಅತ್ಯಂತಾನಂದವನ್ನುಪಡೆದ ನಾನು, ಆನಂದಸಂಪ್ಲವೇ - ಆನಂದಸಮುದ್ರದಲ್ಲಿ, ಲೀನಃ-ಮುಳುಗಿದವನಾಗಿ, ಉಭಯಂ - ನನ್ನನ್ನೂ ಪರಮಾತ್ಮನನ್ನೂ ಸಹ, ನಾಪಶ್ಯಂ-ನೋಡಲಿಲ್ಲ. || ೧೮ || ಭಗವತಃ - ಭಗವಂತನ, ಮನಃಕಾಂತಂ-ಮನೋಹರವಾದ, ಶುಚಾಪಹಂ, ಶುಚಾ-ಶೋಕವನ್ನು, ಅಪಹಂ-ಹೋಗಲಾಡಿಸುವ, ಯದ್ರೂಪಂ-ಯಾವ ರೂಪವುಂಟೋ, ತತ್-ಅದನ್ನು, ಅಪಶ್ಯನ್-ನೋಡದವನಾಗಿ, ವೈಕ್ಲಬ್ಯಾತ್-ಅತ್ಯಾದರದಿಂದ, ದುರ್ಮನಾಇವ - ದುಃಖಗೊಂಡವನಂತೆ, ಸಹಸಾ-ಜಗನೆ, ಉತ್ತಸ್ಥೌ - ಮೇಲಕ್ಕೆದ್ದೆನು, || ೧೯ || ಅಹಂ-ನಾನು, ತತ್-ಆರೂಪವನ್ನು, ಭೂಯಃ-ತಿರುಗಿ, ದಿದೃಕ್ಷುಃ - ನೋಡಲಪೇಕ್ಷಿಸಿ, ಹೃದಿ - ಹೃದಯದಲ್ಲಿ ಮನಃ-ಮನಸ್ಸನ್ನು, ಪ್ರಣಿಧಾಯ-ನಿಲ್ಲಿಸಿ, ಅವಿತೃಪ್ತ ಇವ - ಒಂದುಸಲನೋಡಿ ದಣಿಯದವನಂತೆ, ಆತುರಃ-ಆಭಗವಂತನ ಅಗಲಿಕೆಯನ್ನುಸೈರಿಸಲಾರದೆ, ವೀಕ್ಷಮಾಣೋಪಿ - ದಿಕ್ಕುದಿಕ್ಕುಗಳಲ್ಲಿಯೂ ನೋಡಿದರೂ ನಾಪಶ್ಯಂ-ಕಾಣಲಿಲ್ಲ, || ೨೦ || ಏವಂ-ಈರೀತಿಯಾಗಿ, ವಿಪಿನೇ-ಕಾಡಿನಲ್ಲಿ. ಯತಂತಂ - ನೋಡಬೇಕೆಂದು ಯತ್ನಿಸುತ್ತಿರುವ, ಮಾಂ-ನನ್ನನ್ನುಕುರಿತು, ಗಿರಾಂ-ವೇದವಾಕ್ಯಗಳಿಗೂ, ಅಗೋಚರಃ - ತಿಳಿಯದಿರುವ ಭಗವಂತನು, ಗಂಭೀರಶ್ಲಕ್ಷ್ಣಯಾ, ಗಂಭೀರ-ಅಭಿಪ್ರಾಯಗರ್ಭಿತವಾಗಿಯೂ, ಶ್ಲಕ್ಷ್ಣಯಾ-ಮೃದು

ತಿಶಯದಿಂದ ಮನೋ ನಿರೋಧವನ್ನುಮಾಡಿ, ಆಭಗವಂತನ ಪಾದಕಮಲಗಳನ್ನೇ ಧ್ಯಾನಿಸುತ್ತಾ, ಆನಂದಾಶ್ರುಪೂರಿತನೇತ್ರನಾಗಿರುವ ನನ್ನ ಹೃದಯಪೀಠದಲ್ಲಿ ಆ ಶ್ರೀಹರಿಯು ಮೆಲ್ಲನೆ ಸಾಕ್ಷಾತ್ಕರಿಸಿದನು ||೧೭|| ಎಲೈವ್ಯಾಸಮುನಿಯೆ ! ಆಗ ನಾನು ನಿರವಧಿಕವಾದ ಭಕ್ತಿಭರದಿಂದ ಪುಲಕಾಂಚಿತಶರೀರನಾಗಿಯೂ, ಅತ್ಯಂತಸುಖಿತನಾಗಿಯೂ, ಆನಂದ ಸಮುದ್ರದಲ್ಲಿ ತೇಲಾಡುತ್ತಾ, ನನ್ನನ್ನೂ ಪ್ರತ್ಯಕ್ಷವಾಗಿರುವ ಪರಮಾತ್ಮನನ್ನೂ ಸಹ ನೋಡಲಿಲ್ಲ||೧೮||ಅನಂತರದಲ್ಲಿ ಆ ಭಗವಂತನ ಮನೋಹರವೆನಿಸಿ, ದುಃಖನಾಶಕವಾದ ರೂಪವನ್ನು ಕಾಣದೆ ಅತ್ಯಂತಾಸಕ್ತಿಯಿಂದ, ದುಃಖಿತನಾದಂತೆ ಥಟ್ಟನೆ ಗಾಬರಿಯಿಂದ, ಮೇಲಕ್ಕೆದ್ದೆನು||೧೯||ಬಳಿಕ ನಾನು ಮರಳಿ ಆ ಹರಿಯ ರೂಪವನ್ನು ನೋಡಲೆಳಸಿದವನಾಗಿ, ಮನಸ್ಸನ್ನು ನಿಶ್ಚಲವಾಗಿ ನಿಲ್ಲಿಸಿ, ಒಮ್ಮೆ ಕಂಡು ದಣಿಯದವನಂತೆ ಆತುರಪಡುತ್ತಾ ಎಲ್ಲಾದಿಕ್ಕಿನಲ್ಲಿ ನೋಡಿದರೂ ಆ ಭಗವಂತನನ್ನು ಕಾಣಲಿಲ್ಲ||೨೦||ಇಂತು ಆ ಕಾಂತಾರದಲ್ಲಿ ಭಗವದ್ದರ್ಶನಕ್ಕಾಗಿ ಯತ್ನಿಸುತ್ತಿರುವ ನನ್ನನ್ನು ಕುರಿತು, ವೇದಗಳಿಗೂ ಅಗೋಚರನಾಗಿರುವ ಆ ಶ್ರೀಹರಿಯು,ಅಭಿಪ್ರಾಯಗರ್ಭಿತಗಳಾದ ಸವಿನುಡಿಗಳಿಂದ ನನ್ನ ದುಃಖ

ಯನ್ನಿವ॥೨೧॥ಶ್ರೀಭಗವಾನ್॥ ಹಂತಾಸ್ಮಿನ್ ಜನ್ಮನಿ ಭವಾನ್ ಮಾ ಮಾ ದ್ರಷ್ಟುಮಿಹಾರ್ಹತಿ । ಅವಿಪಕ್ವಕಷಾಯಾಣಾಂ ದುರ್ದರ್ಶೋಽಹಂ ಕುಯೋಗಿನಾಂ॥೨೨॥ ಸಕೃದ್ಯದ್ದರ್ಶಿತಂ ರೂಪ ಮೇತತ್ಕಾಮಾಯ ತೇಽನಘ । ಮತ್ಕಾಮ ಶ್ಶನಕೈ ಸ್ಸಾಧು ಸರ್ವಾನ್ಮುಂಚತಿ ಹೃಚ್ಛಯಾನ್ ॥೨೩॥ ಸತ್ಸೇವಯಾ ದೀರ್ಘಯಾ ತೇ ಜಾತಾ ಮಯಿ ದೃಢಾಮತಿಃ।ಹಿತ್ವಾ ಽವದ್ಯ ಮಿಮಂ ಲೋಕಂ ಗಂತಾ ಮಜ್ಜನತಾ ಮಸಿ॥೨೪॥ಮತಿ ರ್ಮಯಿ ನಿಬದ್ಧೇಯಂ ನವಿಪದ್ಯೇತ

ವಾಗಿಯೂಇರುವ, ವಾಚಾ-ಮಾತಿನಿಂದ, ಶುಚಃ - ನನಗುಂಟಾಗಿರುವದುಃಖಗಳನ್ನು, ಪ್ರಶಮಯನ್ನಿವ-ಶಾಂತಿಗೊಳಿಸುವಂತೆ, ಆಹ-ಹೇಳಿದನು, ॥ ೨೧ ॥ ಶ್ರೀಭಗವಾನ್-ಭಗವಂತನು ಹೇಳುತ್ತಾನೆ, ಹಂತ-ಅಯ್ಯೋ ನಾರದನೆ ! ಅಹಂ-ನಾನು, ಅವಿಪಕ್ವಕಷಾಯಾಣಾಂ, ಅವಿಪಕ್ವ-ಸುಡಲ್ಪಡದಿರುವ, ಕಷಾಯಾಣಾಂ-ಕಾಮಕ್ರೋಧಾದಿ ಕಲ್ಮಷಗಳುಳ್ಳ, ಕುಯೋಗಿನಾಂ-ಕೆಟ್ಟಯೋಗಿಗಳಿಗೆ, ದುರ್ದರ್ಶಃ-ಕಾಣಲ್ಪಡುವವನಲ್ಲ, ಆದುದರಿಂದ, ಭವಾನ್-ನೀನು, ಅಸ್ಮಿನ್-ಈ, ಜನ್ಮನಿ-ಶೂದ್ರಜನ್ಮದಲ್ಲಿ, ಮಾ - ನನ್ನನ್ನು, ದ್ರಷ್ಟುಂ-ನೋಡುವುದಕ್ಕೆ, ಇಹ-ಈಗ, ಮಾರ್ಹತಿ-ಅರ್ಹನಾಗುವುದಿಲ್ಲ. ॥ ೨೨ ॥ ಹೇ ಅನಘ - ಎಲೈ ಪಾಪರಹಿತನೆ ! ತೇ-ನಿನಗೆ, ಕಾಮಾಯ-ನನ್ನಲ್ಲಿ ಪ್ರೀತಿಯುಂಟಾಗುವುದಕ್ಕಾಗಿ, ಏತತ್-ಈ, ರೂಪಂ-ರೂಪವು, ಸಕೃತ್-ಒಮ್ಮೆ, ದರ್ಶಿತಂ-ತೋರಿಸಲ್ಪಟ್ಟಿತು, ಮತ್ಕಾಮಃ-ನನ್ನಲ್ಲಿ ಪ್ರೀತಿಯುಳ್ಳವನು, ಶನಕೈಃ-ಮೆಲ್ಲನೆ, ಸಾಧು-ಚೆನ್ನಾಗಿ, ಹೃಚ್ಛಯಾನ್-ಮನಸ್ಸಿನಲ್ಲಿರುವ, ಸರ್ವಾನ್-ಎಲ್ಲಾಕಾಮಗಳನ್ನೂ, ಮುಂಚತಿ-ಬಿಡುತ್ತಾನೆ. ॥ ೨೩ ॥ ಅದೀರ್ಘಯಾಪಿ-ಸ್ವಲ್ಪಕಾಲದಲ್ಲಿ ಮಾಡಿದುದಾದರೂ, ಅಥವಾ ದೀರ್ಘಯಾ-ನಾಲ್ಕುತಿಂಗಳವರೆಗೂ ಮಾಡಿದ, ಸತ್ಸೇವಯಾ-ಸತ್-ಸಾಧುಗಳ, ಸೇವಯಾ-ಸೇವೆಯಿಂದ, ತೇ-ನಿನಗೆ, ಮಯಿ-ನನ್ನಲ್ಲಿ, ದೃಢಾ-ನಿಶ್ಚಲವಾದ, ಮತಿಃ-ಭಕ್ತಿಯು, ಜಾತಾ-ಉಂಟಾಯಿತು, ಅವದ್ಯಂ - ನಿಂದ್ಯವಾದ, ಇಮಂ-ಈ, ಲೋಕಂ-ಲೋಕವನ್ನು, ಅಥವಾ ದಾಸೀಪುತ್ರರೂಪವಾದ ಈ ಶೂದ್ರದೇಹವನ್ನು ಹಿತ್ವಾ-ಬಿಟ್ಟು, ಮಜ್ಜನತಾಂ, ಮತ್-ನನ್ನ ಜನತಾಂ-ಪರಿಜನರ ಸ್ಥಾನವನ್ನು, ಗಂತಾಸಿ-ಹೊಂದುವೆ॥೨೪ ಮಯಿ-ನನ್ನಲ್ಲಿ, ನಿಬದ್ಧಾ - ಇಡಲ್ಪಟ್ಟ, ಇಯಂ-ಈ, ಮತಿಃ-ಭಕ್ತಿರೂಪವಾದ, ಬುದ್ಧಿಯು, ಕರ್ಹಿಚಿತ್-

ಗಳನ್ನು ಕಳೆಯುವಂತೆ''ಅಯ್ಯಾ ಬಾಲನೆ ! ಕಾಮಕ್ರೋಧಾದಿ ಮನಃ ಕಲ್ಮಷಗಳನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಳ್ಳದಿರುವ ಕುಯೋಗಿಗಳಿಗೆ ನಾನು ದರ್ಶನವನ್ನು ಕೊಡತಕ್ಕವನಲ್ಲವಾದುದರಿಂದ, ನೀನೀ ಶೂದ್ರಜನ್ಮದಲ್ಲಿ ನನ್ನನು ಕಾಣಲಾರೆ॥ ೨೨॥ಎಲೈ ಪಾಪರಹಿತನಾದ ಬಾಲಕನೆ ! ನನ್ನಲ್ಲಿ ಭಕ್ತಿಯುಳ್ಳ ಸಾಧುಗಳು ಮೆಲ್ಲನೆ ತಮ್ಮ ಹೃದಯದಲ್ಲಿರುವ ಸಕಲ ಪಾಪಗಳನ್ನೂ ಕಳೆಯುವರಾದುದರಿಂದ, ನನ್ನಲ್ಲಿ ಭಕ್ತಿಯುಂಟಾಗುವುದಕ್ಕಾಗಿ, ಈ ನನ್ನ ದಿವ್ಯರೂಪವನ್ನು ನಿನಗೊಂದಾವರ್ತಿ ತೋರಿಸಿದೆನು॥೨೩॥ಎಲೈ ನಾರದನೆ ! ನೀನು ಅಲ್ಪಕಾಲವೆನಿಸಿದ ಚಾತುರ್ಮಾಸ್ಯದನಾಲ್ಕುತಿಂಗಳವರೆಗೂ ಆ ಮಹಾತ್ಮರನ್ನು ಸೇವಿಸಿದುದರಿಂದ, ನನ್ನಲ್ಲಿ ನಿನಗೆ ದೃಢವಾದ ಭಕ್ತಿಯುಂಟಾಯಿತು. ಆದಕಾರಣ ಇನ್ನು ನೀನು ಈ ನೀಚವಾದ ದಾಸೀಪುತ್ರ ಜನ್ಮವನ್ನೂ ಈ ಲೋಕವನ್ನೂ ಸಹ ಬಿಟ್ಟು ನನ್ನ* ಪಾರ್ಷದರ ಸ್ಥಾನವನ್ನು ಪಡೆಯುವೆ॥ ೨೪ ॥ನನ್ನಲ್ಲಿಡಲ್ಪಟ್ಟ ಭಕ್ತಿಯೆಂಬುದು ಎಂದಿಗೂ ಕೆಡುವುದಿಲ್ಲ.

* ಭಗವಂತನ ಸಾಮೀಪ್ಯ ಮುಕ್ತಿಯನ್ನುಪಡೆದ ಭಕ್ತರು.

ಕರ್ಹಿಚಿತ್ । ಪ್ರಜಾಸರ್ಗನಿರೋಧೇಪಿ ಸ್ಮೃತಿಶ್ಚ ಮದನುಗ್ರಹಾತ್॥ ೨೫॥
ಏತಾವದುಕ್ತ್ವೋಪರರಾಮ ತನ್ಮಹ * ದ್ಭೂತಂ † ನಭೋಲಿಂಗ § ಮ
ಲಿಂಗ @ ಮೈಶ್ವರಂ। ಅಹಂಚ ತಸ್ಮೈ ಮಹತಾಂ ಮಹೀಯಸೇ ಶೀರ್ಷ್ಣಾ
ವನಾಮಂ ವಿದಧೇನು ಕಂಪಿತಃ ॥ ೨೬ ॥ ನಾಮಾನ್ಯನಂತಸ್ಯ ಗತತ್ರಪಃ ಪ
ಠನ್ ಗುಹ್ಯಾನಿ ಭದ್ರಾಣಿ ಕೃತಾನಿ ಚ ಸ್ಮರನ್ । ಗಾಂಪರ್ಯಟಂ ಸ್ತುಷ್ಟ

ಯೂವಾಗಲೂ, ನವಿಪದ್ಯೇತ-ನಷ್ಟವಾಗುವುದಿಲ್ಲ, ಅಲ್ಲದೆ, ಮದನುಗ್ರಹಾತ್, ಮತ್-ನನ್ನ, ಅನುಗ್ರಹಾತ್-ಅನುಗ್ರಹದಿಂದ, ಪ್ರಜಾಸರ್ಗನಿರೋಧೇಪಿ, ಪ್ರಜಾ-ಪ್ರಜೆಗಳ, ಸರ್ಗ-ಸೃಷ್ಟಿಯಲ್ಲಿಯೂ, ನಿರೋಧೇಪಿ-ಪ್ರಳಯದಲ್ಲಿಯೂ, ಅಥವಾ, ಪ್ರಜಾಸರ್ಗ-ಪ್ರಪಂಚಸೃಷ್ಟಿಯು, ನಿರೋಧೇಪಿ-ಸಂಹಾರದಲ್ಲಿಯೂ, ಸ್ಮೃತಿಶ್ಚ-ನನ್ನಸ್ಮರಣೆಯೂ, ಭವತಿ - ಇರುತ್ತದೆ, ॥೨೫॥ ನಭೋಲಿಂಗಂ, ನಭಃ-ಆಕಾಶವೇ, ಲಿಂಗಂ-ಶರೀರವಾಗುಳ್ಳ, ಅಥವಾ(ಅದೃಶ್ಯವಾದ ಶರೀರವುಳ್ಳವನಾಗಿರುವುದರಿಂದ)ಆಕಾಶಸದೃಶವಾದ, ಅಲಿಂಗಂ-ಕಾಣಲ್ಪಡದಿರುವ, ಕರ್ಮನಿಮಿತ್ತವಾದ, ಶರೀರವಿಲ್ಲದ, ಐಶ್ವರಂ-ಈಶ್ವರಸಂಬಂಧವಾದ, ತತ್-ಆ, ಮಹತ್-ಸರ್ವೋನ್ನತವಾದ, ಭೂತಂ-ಭೂತವು, ಏತಾವತ್-ಇಷ್ಟುಮಾತ್ರ, ಉಕ್ತ್ವಾ-ಹೇಳಿ, ವಿರರಾಮ-ಸುಮ್ಮನಾಯಿತು, ಅಹಂಚ-ನಾನೂ, ಅನುಕಂಪಿತಃ-ಅನುಗ್ರಹಿಸಲ್ಪಟ್ಟವನಾಗಿ, ಮಹತಾಂ-ಮಹಾತ್ಮರಿಗೆ, ಮಹೀಯಸೇ ಮಹತ್ತೆನಿಸಿದ, ತಸ್ಮೈ-ಆಭೂತಕ್ಕೆ, ಶೀರ್ಷ್ಣಾ - ಶಿರಸ್ಸಿನಿಂದ, ಅವನಾಮಂ-ನಮಸ್ಕಾರವನ್ನು, ವಿದಧೇ ಮಾಡಿದೆನು, ॥ ೨೬ ॥ ಅಹಂ-ನಾನು, ಗತತ್ರಪಃ, ಗತ-ಹೋದ, ತ್ರಪಃ - ನಾಚಿಕೆಯುಳ್ಳವನಾಗಿ, ಅನಂತಸ್ಯ - ನಾಶರಹಿತನಾದ ಭಗವಂತನ, ನಾಮಾನಿ - ನಾಮಗಳನ್ನು, ಪಠನ್ - ಪಠಿಸುತ್ತಾ, ಗುಹ್ಯಾನಿ ರಹಸ್ಯಗಳಾದ, ಭದ್ರಾಣಿ-ಮಂಗಳಕರಗಳಾದ, ಕೃತಾನಿ-ಅವತಾರ ಚರಿತ್ರೆಗಳನ್ನು, ಸ್ಮರನ್-ಸ್ಮರಿಸುತ್ತಾ, ತುಷ್ಟಮನಾಃ, ತುಷ್ಟ-ಸಂತೋಷದಿಂದಕೂಡಿದ, ಮನಾಃ-ಮನಸ್ಸುಳ್ಳವನಾಗಿ, ಗಾಂ-ಭೂಮಿಯನ್ನು, ಪರ್ಯಟನ್-ಸಂಚರಿಸುತ್ತಾ, ಗತಸ್ಪೃಹಃ, ಗತ-ಹೋದಂಥಾ, ಸ್ಪೃಹಃ-ಆಸೆಯುಳ್ಳವನಾಗಿ, ಕಾಲಂ - ದೇಹಾವಸಾನಕಾಲವನ್ನು, ಪ್ರತೀಕ್ಷನ್ - ನಿರೀಕ್ಷಿಸುತ್ತಾ, ವಿಮದಃ - ಮದರಹಿತನೂ

ನನ್ನ ಅನುಗ್ರಹದಿಂದ ಸೃಷ್ಟಿ ಸ್ಥಿತಿಸಂಹಾರಗಳ ಮೂರರಲ್ಲಿಯೂ ನಿನಗೆ ಸ್ಮೃತಿಯು ಸ್ಥಿರವಾಗಿರುವುದು" ॥೨೫॥ ಎಂದ, ಆಕಾಶವೇ ಶರೀರವಾಗಿಯೂ, ಮೂರ್ತಿರಹಿತವಾಗಿಯೂ ಈಶ್ವರರೂಪವಾಗಿಯೂ ಇರುವ ಆ ಮಹಾ ಭೂತವು ಇಷ್ಟು ಮಾತ್ರ ಹೇಳಿ ಸುಮ್ಮನಾಗಲು, ನಾನು ಆ ಮಹಾ ಭೂತದ ದಯೆಗೆ ಪಾತ್ರನಾಗಿ, ಸರ್ವೋತ್ತಮನಾದ ಆ ಭಗವಂತನಿಗೆ ತಲೆಯನ್ನು ಬಾಗಿಸಿ ನಮಸ್ಕರಿಸಿದೆನು ॥ ೨೬ ॥ ಕೂಡಲೆ ನಾಚಿಕೆಯನ್ನು ತೊರೆದು ಆ ಭಗವನ್ನಾಮಗಳನ್ನು ಪಠಿಸುತ್ತಲೂ, ಜಗನ್ಮಂಗಳ ಕರಗಳಾಗಿಯೂ, ಅತಿರಹಸ್ಯಗಳಾಗಿಯೂ ಇರುವ ಆತನ ಅವತಾರ ಕಥೆಗಳನ್ನು, ಸ್ಮರಿಸುತ್ತಲೂ, ಸಂತೋಷವುಳ್ಳ ಮನಸ್ಸಿನಿಂದ ಭೂಮಿಯನ್ನು ಸಂಚರಿಸುತ್ತಲೂ, ಯಾವುದರಲ್ಲಿಯೂ ಆಸೆಯಿಲ್ಲದೆ, ದೇಹಾವ

(*) ಶ್ರುತಿ. ಏತಸ್ಯಮಹತೋಭೂತಸ್ಯನಿಶ್ವಸಿತಮೇತದ್ಯದೃಗ್ವೇದೋಯಜುರ್ವೇದಃ ಮತ್ತು ಸ್ಮೃತಿ.ಏಕೋವಿಷ್ಣುರ್ಮಹದ್ಭೂತಮಿತ್ಯಾದಿ (†) ಆಕಾಶಶರೀರಂಬ್ರಹ್ಮ (§) ಸು-ಎಲ್ಲರಿಗೂ ಆತ್ಮವಾಗಿ ಪ್ರತ್ಯಕ್ಷವಾಗಿರುವ ಕಾರಣ ಅನುಮಾನಾದಿಗಳಿಂದ ತಿಳಿಯತಕ್ಕವನಲ್ಲ. ವಿ-ರುದ್ರನಿಗಿಂತಲೂ ಬೇರೆಯಾದವನು(@) ಹಿ-ಹಾ, ಐಶ್ವರಂ-ಈಶ್ವರನೆಂದು ಕರೆಯಲ್ಪಡುವ

ಮನಾ ಗತಸ್ಪೃಹಃ ಕಾಲಂ ಪ್ರತೀಕ್ಷನ್ § ವಿಮದೋ ¶ ವಿಮತ್ಸರಃ॥೨೭॥
ಏವಂ ಕೃಷ್ಣಮತೇರ್ಬ್ರಹ್ಮನ್ನಸಕ್ತಸ್ಯಾ ಮಲಾತ್ಮನಃ। ಕಾಲಃ ಪ್ರಾದುರ
ಭೂತ್ಕಾಲೇ ತಟಿತ್ಸೌ * ದಾಮಿನೀಯಥಾ ॥ ೨೮ ॥ ಪ್ರಯುಜ್ಯಮಾನೇ ಮ
ಯಿ † ತಾಂ ಶುದ್ಧಾಂ ಭಾಗವತೀಂ ‡ ತನುಂ । ಪ್ರಾರಬ್ಧ ಕರ್ಮನಿರ್ವಾಣೋ
ನ್ಯಪತತ್ಪಾಂಚ ಭೌತಿಕಃ ॥೨೯॥ ಕಲ್ಪಾಂತ ಇದಮಾದಾಯ ೪ಶಯಾನೇಂ

ವಿಮತ್ಸರಃ-ಮತ್ಸರ ರಹಿತನೂ ಆದೆನು ॥ ೨೭ ॥ ಹೇ ಬ್ರಹ್ಮನ್-ಎಲೈ ಬ್ರಾಹ್ಮಣನೆ ? ಏವಂ-ಹೀಗೆ ಕೃಷ್ಣಮತೇಃ, ಕೃಷ್ಣ - ಕೃಷ್ಣನಲ್ಲಿ, ಮತೇಃ - ಭಕ್ತಿಯುಳ್ಳ, ಅಸಕ್ತಸ್ಯ - ವಿಷಯಗಳಲ್ಲಿ ಆಸಕ್ತಿಯಿಲ್ಲದ, ಅಮಲಾತ್ಮನಃ, ಅಮಲ-ನಿರ್ಮಲವಾದ, ಆತ್ಮನಃ-ಅಂತಃಕರಣವುಳ್ಳ ನನಗೆ, ಕಾಲೇ-ಅವಸಾನ ಕಾಲದಲ್ಲಿ, ಅಥವಾ-ಕಾಲೇ-ಮಳೆಗಾಲದಲ್ಲಿ, ಸೌದಾಮಿನೀ-ಮಾಲಾಕಾರವಾದ, ಅಥವಾ ಸುದಾಮವೆಂಬ ಸ್ಫಟಿಕಪರ್ವತಪ್ರಾಂತ್ಯದಲ್ಲಿ ಹುಟ್ಟಿದ. ಅಥವಾ ಸಮೀಪದಲ್ಲಿ ಉಂಟಾಗುವ, ತಟಿದ್ಯಥಾ-ಮಿಂಚಿನಂತೆ, ಕಾಲಃ-ಮೃತ್ಯುವು, ಅಥವಾ ದೇಹವಿಯೋಗಕಾಲವು, ಪ್ರಾದುರಭೂತ್-ತಲೆದೋರಿತು ॥೨೮॥ ಮಯಿ-ನಾನು, ಶುದ್ಧಾಂ-ಸತ್ವಮಯವಾಗಿಯೂ, ಅಥವಾ ಪಾಪನಿವರ್ತಕನಾಗಿಯೂ, ಭಾಗವತೀಂ - ಭಗವಂತನ ಪಾರ್ಷದರೂಪವಾಗಿಯೂ ಇರುವ, ತಾಂ-ಭಗವಂತನು ವಾಗ್ದಾನಮಾಡಿದ ಆ ಶರೀರವನ್ನು ಕುರಿತು ಪ್ರಯುಜ್ಯಮಾನೇಸತಿ - ಹೊಂದಿಸಲ್ಪಡಲು, ಅಥವಾ ಧ್ಯಾನಮಾಡಲು, ಪ್ರಾರಬ್ಧಕರ್ಮನಿರ್ವಾಣಃ, ಪ್ರಾರಬ್ಧ-ಫಲಾನುಭವಕ್ಕೆ ಬಂದಿರುವ, ಕರ್ಮ-ಕರ್ಮಗಳ, ನಿರ್ವಾಣಃ - ನಾಶವುಳ್ಳ, ಪಾಂಚಭೌತಿಕಃ-ಪಂಚಭೂತಗಳಿಂದುಂಟಾಗಿದ್ದ ಆ ದಾಸೀಪುತ್ರ ಶರೀರವು, ನ್ಯಪತತ್-ಬಿದ್ದು ಹೋಯಿತು ॥೨೯॥ ಅಹಂ-ನಾನು, ಕಲ್ಪಾಂತೇ-ಕಲ್ಪ ಪ್ರಳಯದಲ್ಲಿ, ಇದಂ-ಈ ಮೂರು ಲೋಕಗಳನ್ನೂ, ಆದಾಯ-ಉಪಸಂಹಾರ

ಸಾನ ಕಾಲವನ್ನು ನಿರೀಕ್ಷಿಸುತ್ತಾ, ಮದಮಾತ್ಸರ್ಯಾದಿಗಳನ್ನು ಬಿಟ್ಟು ಕಾಲವನ್ನು ಕಳೆಯುತ್ತಿದ್ದೆನು. ॥೨೭॥ ಎಲೈ ಬ್ರಾಹ್ಮಣೋತ್ತಮನಾದ ಕೃಷ್ಣಮುನಿಯೆ! ಈ ಪ್ರಕಾರವಾಗಿ ನಾನು ಕೃಷ್ಣಮೂರ್ತಿಯಲ್ಲಿ ಭಕ್ತಿಯುಕ್ತನಾಗಿ, ಪ್ರಪಂಚ ವಿಷಯಗಳಲ್ಲಿ ಆಸೆಯನ್ನು ಳದು ನಿರ್ಮಲಾಂತಃಕರಣನಾಗಿರಲು, ದೇಹಾವಸಾನ ಕಾಲವು ಪ್ರಾಪ್ತವಾದ ಕೂಡಲೇ, ಅಕಸ್ಮಾತ್ತಾಗಿ ಸ್ಫಟಿಕಪರ್ವತ ಪ್ರಾಂತ್ಯದಲ್ಲಿ ಮಾಲಾಕಾರದಿಂದ ಮೂಡುವ ಮಿಂಚುಬಳ್ಳಿಯಂತೆ ಮೃತ್ಯುವು ಸನ್ನಿಹಿತವಾಯಿತು ॥೨೮॥ ಆ ಸಮಯಕ್ಕೆ ಸರಿಯಾಗಿ, ಮೊದಲೇ ಹೇಳಿದ್ದ ಮೇರೆಗೆ ಭಗವಂತನು ಸತ್ವಮಯವಾದ ದಿವ್ಯಶರೀರವನ್ನು ದಯೆಪಾಲಿಸಲು, ಪ್ರಾರಬ್ಧಕರ್ಮ ಸಮಾಪ್ತಿಯಾಗಿ ದಾಸೀಪುತ್ರ ರೂಪವಾಗಿದ್ದ ನನ್ನ ಪಾಂಚಭೌತಿಕ ಶರೀರವು ಬಿದ್ದು ಹೋಯಿತು ॥೨೯॥ ಆ ಬಳಿಕ ಕಲ್ಪಪ್ರಳಯದಲ್ಲಿ, ಸೃಷ್ಟಿಯನ್ನುಪಸಂಹರಿಸಿ, ಏಕಾರ್ಣವವಾದ ಜಲರಾಶಿಯಲ್ಲಿ ಯೋಗನಿದ್ರೆಯನ್ನು ಮಾಡುತ್ತಿ

(§) ವಿ. ಪಾ, ಅಪಟಃ-ವಿಷ್ಣುವೇಗತಿಯಾಗುಳ್ಳವನು (¶) ಜನೇನಾಭಿಮತೋಯೋಗೀ ಯೋಗಸಿದ್ಧಿಂನವಿಂದತಿ'' ಎಂಬಂತೆ ಯೋಗಿಯು ಸ್ತುತಿಸುವವರನ್ನು ಪ್ರೀತಿಸದೆಯೂ ದೂಷಿಸುವವರನ್ನು ದ್ವೇಷಿಸದೆಯೂ ಇರಬೇಕು. * ವೃಷ್ಟಿಯಾಗುವುದಕ್ಕೆ ಮೊದಲೇ ಮಿಂಚುಬಳ್ಳಿ ಹರಿಯುವಂತೆ ರೋಗಾದಿಗಳೊದಗುವುದಕ್ಕೆ ಮೊದಲೇ ಅವಸಾನಕಾಲವು ತಲೆದೋರಿತು.(†)ಅಧ್ಯಾಯ ೬, ಶ್ಲೋ, ೨೪ರಲ್ಲಿ ಹೇಳಿದಂತೆ. ‡ ವೀ-ಅನಿರುದ್ಧ ಶರೀರವನ್ನು. ೪ ಪಾ-ಸ್ವಾಯನೇ.

ಬಸ್ಯುದನ್ವತಃ । ಅನುಪ್ರಾಣಂ ಶಿಶಯಿಷೋಃ § ರ್ವಿವಿಶೇಂತರಹಂ ವಿಭೋಃ
॥೩೦॥ ಸಹಸ್ರಯುಗಪರ್ಯಂತ ಉತ್ಥಾಯೇದಂ ಸಿಸೃಕ್ಷತಃ । ಮರೀಚಿಮಿ
ಶ್ರಾ ಋಷಯಃ ಪ್ರಾಣೇಭ್ಯೋಹಂಚ ಜಜ್ಞಿರೆ ॥ ೩೧ ॥ * ಅಂತರ್ಬಹಿಶ್ಚ
ಲೋಕಾಂ ಸ್ತ್ರೀನ್ ಪರ್ಯೇಮ್ಯ ಸ್ಕಂದಿತವ್ರತಃ । ಅನುಗ್ರಹಾನ್ಮಹಾವಿಷ್ಣೋ
† ರವ್ಯಾಹತಗತಿಃ ಕ್ವಚಿತ್ ॥೩೨॥ ದೇವದತ್ತಾ ಮಿಮಾಂ ವೀಣಾಂ ‡
ಸ್ವರಬ್ರಹ್ಮ ವಿಭೂಷಿತಾಂ । ಮೂರ್ಛಯಿತ್ವಾ ಹರಿಕಥಾಂ ಗಾಯಮಾನ

ಮಾಡಿ, ಉದನ್ವತಃ-ಏಕಾರ್ಣವದ, ಅಂಭಸಿ-ಜಲದಲ್ಲಿ, ಶಯಾನೇ-ಮಲಗಿರುವ ನಾರಾಯಣನಲ್ಲಿ, ಅಥವಾ ಸ್ವಾಯನೇ, ಸ್ವ - ತನಗೆ, ಅಯನೇ - ಸ್ಥಾನವಾದ, ಅಂಭಸಿ - ಜಲದಲ್ಲಿ, ಶಿಶಯಿಷೋಃ-ಮಲಗಲಪೇಕ್ಷೆಯುಳ್ಳ, ವಿಭೋಃ-ಬ್ರಹ್ಮದೇವನ, ಅನುಪ್ರಾಣಂ - ಉಸುರಿನಮಾರ್ಗವಾಗಿ, ಅಂತಃ-ಒಳಕ್ಕೆ, ವಿವಿಶೇ-ಪ್ರವೇಶಿಸಿದೆನು, ॥ ೩೦ ॥ ಸಹಸ್ರಯುಗಪರ್ಯಂತೇ, ಸಹಸ್ರಯುಗ - ನಾಲ್ಕುಸಾವಿರಯುಗಗಳ, ಪರ್ಯಂತೇ-ಕಡೆಯಲ್ಲಿ, ಉತ್ಥಾಯ-ಎದ್ದು, ಇದಂ - ಈ ಪ್ರಪಂಚವನ್ನು, ಸಿಸೃಕ್ಷತಃ - ಸೃಜಿಸಲಪೇಕ್ಷೆಯುಳ್ಳ ಬ್ರಹ್ಮನ, ಪ್ರಾಣೇಭ್ಯಃ-ಪ್ರಾಣವಾಯುಗಳಿಂದ, ಅಹಂ-ನಾನು, ಮರೀಚಿಮಿಶ್ರಾಃ-ಮರೀಚಿಯೇ ಮುಂತಾದ, ಋಷಯಃ-ನವಬ್ರಹ್ಮರೂ, ಜಜ್ಞಿರೆ-ಹುಟ್ಟಿದೆವು ॥ ೩೧ ॥ (ಅಹಂ - ನಾನು) ಅಸ್ಕಂದಿತವ್ರತಃ, ಅಸ್ಕಂದಿತ-ಅಖಂಡಿತವಾದ, ವ್ರತಃ ಬ್ರಹ್ಮಚರ್ಯವ್ರತವುಳ್ಳವನಾಗಿ, ಮಹಾವಿಷ್ಣೋಃ-ನಾರಾಯಣಮೂರ್ತಿಯ, ಅನುಗ್ರಹಾತ್ - ಪ್ರಸಾದದಿಂದ, ಕ್ವಚಿತ್ - ಎಲ್ಲೆಡೆಗಳಲ್ಲಿಯೂ, ಅವ್ಯಾಹತಗತಿಃ, ಅವ್ಯಾಹತ-ತಡೆಯಿಲ್ಲದ, ಗತಿಃ-ಗಮನವುಳ್ಳವನಾಗಿ. ಅಂತಃ-ಒಳಗೂ, ಬಹಿಶ್ಚ-ಹೊರಗೂ, ತ್ರೀನ್-ಮೂರು ಲೋಕಾನ್-ಲೋಕಗಳನ್ನು, ಪರ್ಯೇಮಿ-ಸಂಚರಿಸುತ್ತೇನೆ, ॥ ೩೨ ॥ ಅಹಂ - ನಾನು, ಸ್ವರಬ್ರಹ್ಮವಿಭೂಷಿತಾಂ, ಸ್ವರ-ನಿಷಾದವೊದಲಾದ ಸಪ್ತಸ್ವರಗಳೆಂಬ, ಬ್ರಹ್ಮ-ಬ್ರಹ್ಮದಿಂದ, ವಿಭೂಷಿತಾಂ-ಅಲಂಕರಿಸಲ್ಪಟ್ಟ, ದೇವದತ್ತಾಂ - ಪರಮೇಶ್ವರನಿಂದ ಕೊಡಲ್ಪಟ್ಟ, ಅಥವಾ ತಂದೆಯಾದ ಬ್ರಹ್ಮನಿಂದ ಕೊಡಲ್ಪಟ್ಟ, ಇಮಾಂ-ಈ, ವೀಣಾಂ-ವೀಣೆಯನ್ನು, ಮೂರ್ಛಯಿತ್ವಾ-ಬಾರಿಸಿಕೊಂಡು, ಹರಿಕಥಾಂ-

ರುವ ನಾರಾಯಣಮೂರ್ತಿಯಲ್ಲಿ ಮಲಗಲೆಳಸಿದ ಬ್ರಹ್ಮದೇವನ ನಿಶ್ವಾಸ ವಾಯುವಿನ ಮೂಲಕವಾಗಿ ಆತನೊಳಗೆ ಸೇರಿದೆನು ॥ ೩೦ ॥ ಅನಂತರದಲ್ಲಿ ನಾಲ್ಕು ಸಾವಿರ ಯುಗಗಳಾದ ಮೇಲೆ ಮರಳಿ ಸೃಷ್ಟಿಸಬೇಕೆಂದೆದ್ದ ಬ್ರಹ್ಮದೇವನ ಪ್ರಾಣವಾಯುಗಳಿಂದ ನಾನೂ ಮರೀಚಿಮೊದಲಾದ ನವಬ್ರಹ್ಮರೂ ಹುಟ್ಟಿದೆವು ॥ ೩೧ ॥ ಅದುಮೊದಲು ನಿಯತ ಬ್ರಹ್ಮಚರ್ಯವುಳ್ಳವನಾಗಿ ನಾನು ಆ ಭಗವಂತನ ಅನುಗ್ರಹದಿಂದ ಎಲ್ಲಿಯೂ ತಡೆಯಿಲ್ಲದೆ ಮೂರು ಲೋಕಗಳನ್ನು ಸಂಚರಿಸುತ್ತಿರುವೆನು ॥೩೨॥ ಆ ಪರಮೇಶ್ವರನಿಂದ ಕೊಡಲ್ಪಟ್ಟ, ಶಬ್ದಬ್ರಹ್ಮದಿಂದಲಂಕೃತವಾದ ಈ ವೀಣೆಯನ್ನು ಬಾರಿಸುತ್ತಾ ಶ್ರೀ ಹರಿಚರಿತ್ರೆ

§ ತತೋವತೀರ್ಯ ವಿಶ್ವಾತ್ಮಾ ದೇಹಮಾವಿಶ್ಯ ಚಕ್ರಿಣಃ । ಅವಾಪ ವೈಷ್ಣವೀಂ ನಿದ್ರಾ ಮೇಕೀಭೂಯಾಥ ವಿಷ್ಣುನಾ (ಕೂರ್ಮಪುರಾಣ) (*) ಕರ್ಮಗಳನ್ನು ಮಾಡಿದವರು ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರುಲೋಕಗಳನ್ನುಳಿದು ಹೊರಗೆ ಹೋಗಲಾರರು, ತಪಸ್ವಿಗಳಾದ ಉಪಾಸಕರು ಬ್ರಹ್ಮಲೋಕದಿಂದೀಲೋಕಗಳೊಳಕ್ಕೆ ಬರಲಾರರು. ಭಕ್ತರಾದವರಿಗೆಲ್ಲಿಯೂ ತಡೆಯಿಲ್ಲ. (†) ವ್ಯಾ-ಅವಿಘಾತ. (‡) ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮ.

ಶ್ಚರಾಮ್ಯಹಂ ॥೩೩॥ ಪ್ರಗಾಯತ ಸ್ಸ್ವವೀರ್ಯಾಣಿ ತೀರ್ಥಪಾದಃ ಪ್ರಿಯ
ಶ್ರವಾಃ । ಆಹೂತ ಇವ ಮೇ ಶೀಘ್ರಂ ದರ್ಶನಂ ಯಾತಿ ಚೇತಸಿ ॥ ೩೪ ॥
ಏತ ದ್ಧಾತುರಚಿತ್ತಾನಾಂ ಮಾತ್ರಾಸ್ಪರ್ಶೇಚ್ಛಯಾ ಮುಹುಃ । ಭವಸಿಂಧು
ಪ್ಲವೋ ದೃಷ್ಟೋ ಹರಿಚರ್ಯಾನು ವರ್ಣನಂ॥೩೫॥ ಯಮಾದಿಭಿ ರ್ಯೋ
ಗಪದ್ಯೈಃ ಕಾಮಲೋಭಹತೋ ಮುಹುಃ। ಮುಕುಂದ ಸೇವಯಾ ಯದ್ವತ್ತ
ಥಾತ್ಮಾದ್ಧಾನಶಾಮ್ಯತಿ॥೩೬॥ ಸರ್ವಂ ತದಿದ ಮಾಖ್ಯಾತಂ ಯತ್ಪೃಷ್ಟೋಹಂ

ಭಗವಂತನ ಚರಿತ್ರೆಯನ್ನು, ಗಾಯಮಾನಃ-ಹಾಡುತ್ತಾ, ಚರಾಮಿ-ಸಂಚರಿಸುತ್ತೇನೆ, ॥ ೩೩ ॥ ಸ್ವವೀರ್ಯಾಣಿ, ಸ್ವ-ತನ್ನ, ವೀರ್ಯಾಣಿ-ಚರಿತ್ರೆಗಳನ್ನು, ಪ್ರಗಾಯತಃ-ಗಾನಮಾಡುತ್ತಿರುವ, ಮೇ - ನನ್ನ, ಚೇತಸಿ-ಮನಸ್ಸಿನಲ್ಲಿ, ತೀರ್ಥಪಾದಃ, ತೀರ್ಥ-ಪರಿಶುದ್ಧವಾದ, ಪಾದಃ - ಪಾದಗಳುಳ್ಳ, ಶುಚಿಶ್ರವಾಃ ಶುಚಿ-ಪರಿಶುದ್ಧವಾದ,ಶ್ರವಾಃ-ಚರಿತ್ರೆಯುಳ್ಳಭಗವಂತನು, ಆಹೂತಇವ-ಕರೆಯಲ್ಪಟ್ಟವನಂತೆ,ಶೀಘ್ರಂ-ಬೇಗನೆ,ದರ್ಶನಂ-ದರ್ಶನವನ್ನು, ಯಾತಿ-ಹೊಂದುತ್ತಾನೆ, ॥ ೩೪ ॥ ಮಾತ್ರಾ ಸ್ಪರ್ಶೇಚ್ಛಯಾ, ಮಾತ್ರಾ-ಪ್ರಪಂಚವಿಷಯಗಳ, ಸ್ಪರ್ಶ-ಭೋಗಗಳ, ಇಚ್ಛಯಾ-ಆಸೆಯಿಂದ, ಆತುರಚಿತ್ತಾನಾಂ - ಆತುರ-ತವಕಿಸುವ, ಚಿತ್ತಾನಾಂ-ಮನಸ್ಸುಳ್ಳವರಿಗೆ, ಮುಹುಃ-ಬಾರಿಬಾರಿಗೂ, ಹರಿಚರ್ಯಾನುವರ್ಣನಂಯತ್, ಹರಿ-ಕೃಷ್ಣನ ಚರ್ಯಾ-ನಡವಳಿಯ, ಅನುವರ್ಣನಂಯತ್, ವರ್ಣನೆಯಾವುದುಂಟೋ, ಏತತ್-ಇದೇ, ಭವಸಿಂಧುಪ್ಲವಃ, ಭವ-ಸಂಸಾರವೆಂಬ, ಸಿಂಧು-ಸಮುದ್ರವನ್ನು ದಾಟುವುದಕ್ಕೆ. ಪ್ಲವಃ-ನಾವೆಯೆಂದು, ದೃಷ್ಟಃ-ನೋಡಲ್ಪಟ್ಟಿತು ॥ ೩೫ ॥ ಮುಹುಃ-ಬಾರಿಬಾರಿಗೂ, ಕಾಮಲೋಭಹತಃ, ಕಾಮ-ಕಾಮದಿಂದಲೂ ಲೋಭ-ದುರಾಸೆಯಿಂದಲೂ, ಹತಃ-ಪೀಡಿಸಲ್ಪಟ್ಟ, ಆತ್ಮಾ-ಮನಸ್ಸು, ಮುಕುಂದಸೇವಯಾ-ಕೃಷ್ಣನ ಸೇವೆಯಿಂದ, ಅದ್ಧಾ - ಸಾಕ್ಷಾತ್ತಾಗಿ, ಯದ್ವತ್ - ಹೇಗೆ, ಶಾಮ್ಯತಿ-ಶಾಂತಿಯನ್ನು ಪಡೆಯುವುದೊ, ತದ್ವತ್-ಹಾಗೆ, ಯಮಾದಿಭಿಃ-ಯಮವೇಮೊದಲಾದ, ಯೋಗಪದ್ಯೈಃ-ಯೋಗವಿಶೇಷಗಳಿಂದ, ನಶಾಮ್ಯತಿ-ಶಾಂತಿಯನ್ನು ಪಡೆಯುವುದಿಲ್ಲ, ॥ ೩೬ ॥ ಹೇ ಅನಘ-ಎಲೈಪಾಪರಹಿತನಾದ ವ್ಯಾಸಮುನಿಯೇ! ತ್ವಯಾ ನಿನ್ನಿಂದ, ಅಹಂ-ನಾನು, ಯತ್-ಯಾವಸಂಗತಿಯನ್ನುಕುರಿತು, ಪೃಷ್ಟಃ-ಕೇಳಲ್ಪಟ್ಟೆನೋ, ಭವತಃ-ನಿನ್ನ, ಆತ್ಮತೋಷಣಂ-ಮನಸ್ಸನ್ನು ಸಂತೋಷಗೊಳಿಸುವ, ಸರ್ವಂ-ಸಮಸ್ತವಾದ, ತದಿದಂ-ಆಈ,

ಯನ್ನು ಗಾನಮಾಡುತ್ತಿರುವೆನು ॥ ೩೩ ॥ ಇಂತು ನಾನು ಆತನ ಕೀರ್ತಿಯನ್ನು ಬಣ್ಣಿಸುವಾಗೆಲ್ಲಾ, ಲೋಕಪಾವನನಾದ ಗಂಗೆಯನ್ನು ಹೆತ್ತ ಪಾದವುಳ್ಳವನಾಗಿಯೂ, ಲೋಕಪ್ರಿಯನಾಗಿಯೂ ಇರುವ ಆ ಭಗವಂತನು ಕರೆಯಲ್ಪಟ್ಟವನಂತೆ ಬೇಗನೆ ಬಂದು ನನ್ನ ಮನಸ್ಸಿನಲ್ಲಿಯೇ ದರ್ಶನವನ್ನು ಕೊಡುವನು॥೩೪॥ ಆದುದರಿಂದಲೇ ಅಡಿಗಡಿಗೂ ವಿಷಯಗಳನ್ನನುಭವಿಸಬೇಕೆಂಬಾಸೆಯಿಂದ ಪೀಡಿತರಾದವರಿಗೆ, ಶ್ರೀಹರಿ ಚರಿತ್ರೆಯೇ ಸಂಸಾರಸಮುದ್ರವನ್ನುದಾಟಲು ಹಡಗೆಂದು ತೋರುವುದು॥೩೫॥ ಕಾಮಕ್ರೋಧಾದಿಗಳಿಂದ ಪೀಡಿತವಾದ ಮನಸ್ಸು, ಭಗವದ್ಭಜನದಿಂದ ಶಾಂತಿಯನ್ನು ಪಡೆದಂತೆ, ಯಮನಿಯಮಾದಿ ಅಷ್ಟಾಂಗಯೋಗಗಳಿಂದ ಶಾಂತಿಯನ್ನು ಪಡೆಯಲಾರದು ॥೩೬॥ ಎಲೈ ಪಾಪರಹಿತನಾದ ವ್ಯಾಸಮುನಿಯೆ! ನನ್ನ ಜನ್ಮ ಕರ್ಮಗಳ ವಿಷಯದಲ್ಲಿ ನೀನು ಯಾವ ಪ್ರಶ್ನೆಯನ್ನು ಮಾಡಿದೆಯೋ, ಅದನ್ನನುಸರಿಸಿ, ನಿನ್ನ ಮನಸ್ಸಿಗೆ ಸಂತೋಷವಾಗುವಂತೆ, ಎಲ್ಲವನ್ನೂ ಹೇಳಿರುವೆನು, ಎಂದು

ತ್ವಯಾ ನಘ । ಜನ್ಮಕರ್ಮರಹಸ್ಯಂ ಮೇಭವತಶ್ಚಾತ್ಮತೋಷಣಂ ॥೩೭॥
ಶ್ರೀ ಸೂತಃ ॥ ಏವಂ ಸಂಭಾಷ್ಯ ಭಗವಾನ್ ನಾರದೋ ವಾಸವೀಸುತಂ ।
ಆ ಮಂತ್ರ್ಯ ವೀಣಾಂ ರಣಯನ್ ಯಯೌ ಯಾದೃಚ್ಛಿಕೋ ಮುನಿಃ ॥೩೮
ಅಹೋ ದೇವರ್ಷಿ*ರ್ಧನ್ಯೋಯಂ ಯಃ ಕೀರ್ತಿಂ ಶಾರ್ಙ್ಗಧನ್ವನಃ । ಗಾ
ಯನ್ಮಾದ್ಯನ್ ಗಿರಾ ತಂತ್ರ್ಯಾ ರಮಯತ್ಯಾತುರಂ ಜಗತ್ ॥ ೩೯ ॥

— ಇತಿ ಷಷ್ಠೋಧ್ಯಾಯಃ —

ಮೇ-ನನ್ನ, ಜನ್ಮಕರ್ಮರಹಸ್ಯಂ - ಜನ್ಮದ ಮತ್ತು ಕರ್ಮಗಳ ರಹಸ್ಯವನ್ನು, ಆಖ್ಯಾತಂ - ಹೇಳಲ್ಪಟ್ಟಿತು ॥ ೩೭ ॥ ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ, ಯಾದೃಚ್ಛಿಕಃ-ಸ್ವೇಚ್ಛೆಯಿಂದಬಂದಿದ್ದ ಅಥವಾ ಸ್ವಪ್ರಯೋಜನದಉದ್ದೇಶ್ಯವಿಲ್ಲದ, ನಾರದಃ-ನಾರದನೆಂಬ, ಮುನಿಃ-ಮುನಿಯು, ಏವಂ-ಈರೀತಿಯಾಗಿ, ವಾಸವೀಸುತಂ, ವಾಸವೀ-ಉಪರಿಚರವಸುವಿನ ಮಗಳಾದ ಸತ್ಯವತಿಯ, ಸುತಂ - ಮಗನಾದ ವ್ಯಾಸಮುನಿಯನ್ನು ಕುರಿತು, ಸಂಭಾಷ್ಯ-ಮಾತನಾಡಿ, ಆಮಂತ್ರ್ಯ-ಅನುಜ್ಞೆಯನ್ನುಪಡೆದು, ವೀಣಾಂ-ವೀಣೆಯನ್ನು, ರಣಯನ್ - ಬಾರಿಸುತ್ತಾ ಯಯೌ - ಹೊರಟುಹೋದನು ॥ ೩೮ ॥ ಯಃ-ಯಾವನು ಶಾರ್ಙ್ಗಧನ್ವನಃ-ಶ್ರೀಹರಿಯ, ಕೀರ್ತಿಂ-ಯಶಸ್ಸನ್ನು, ಗಿರಾ-ವಾಕ್ಕಿನಿಂದ, ಗಾಯನ್-ಹಾಡುತ್ತಾ,ತಂತ್ರ್ಯಾ-ವೀಣೆಯಗಾನದಿಂದ, ಮಾದ್ಯನ್-ಮತ್ತನಾದವನಂತೆ ನಟಿಸುತ್ತಾ, ಆತುರಂ-ಸಂಸಾರವೆಂಬರೋಗದಿಂದ ಪೀಡಿತವಾದ, ಜಗತ್-ಲೋಕವನ್ನು, ರಮಯತಿ-ಸಂತೋಷಗೊಳಿಸುತ್ತಾನೋ, ಅಯಂ - ಈ, ದೇವರ್ಷಿಃ-ನಾರದಮುನಿಯು, ಧನ್ಯಃ-ಕೃತಾರ್ಥನು, ಅಹೋ-ಆಶ್ಚರ್ಯವು, ॥ ೩೯ ॥

—ಷಷ್ಠಾಧ್ಯಾಯಂ ಸಮಾಪ್ತಂ—

ನುಡಿದನು ॥೩೭॥ ಅಯ್ಯಾ ಶೌನಕನೇ ಕೇಳು, ಸ್ವಪ್ರಯೋಜನ ಸಂಕಲ್ಪವಿಲ್ಲದೆ ಸ್ವೇಚ್ಛೆಯಾಗಿ ಸಂಚರಿಸುತ್ತಿರುವ ಆ ನಾರದ ಮಹಾಮುನಿಯು, ಸತ್ಯವತೀ ಪುತ್ರನಾದ ಆ ವ್ಯಾಸಮಹರ್ಷಿಯನ್ನು ಕುರಿತು ಈ ರೀತಿಯಾಗಿಹೇಳಿ ಆತನಿಂದ ಅನುಜ್ಞೆಯನ್ನು ಪಡೆದು, ವೀಣೆಯನ್ನು ಬಾರಿಸುತ್ತಾ ತೆರಳಿದನು ॥೩೮॥ ಆ ನಾರದಮುನಿಯು, ಭಗವಂತನ ಚರಿತ್ರೆಯನ್ನು ಬಣ್ಣಿಸುತ್ತಾ, ಮತ್ತನಂತೆ ಕುಣಿದಾಡುತ್ತಾ, ವೀಣೆಯನ್ನು ಬಾರಿಸುತ್ತಾ ಸಂಸಾರವೆಂಬ ಮಹಾ ರೋಗದಿಂದ ಪೀಡಿತವಾಗಿರುವ ಜಗತ್ತನ್ನು ಭಗವಂತನಲ್ಲಿ ಭಕ್ತಿಯುಳ್ಳದ್ದನ್ನಾಗಿ ಮಾಡುತ್ತಿರುವನಾದುದರಿಂದ ಆತನೇ ಧನ್ಯನು. ಆಶ್ಚರ್ಯ ! ಎಂದುಸೂತಪೌರಾಣಿಕನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ, ಭಾಗವತ ಚಕೋರಚಂದ್ರಿಕೆಯೊಳ್

—ಆರನೆಯಧ್ಯಾಯಂ ಮುಗಿದುದು—

ಓಂ ನಮಃ ಪರಮಾತ್ಮನೇ.

ಶ್ರೀ ಶೌನಕಃ ॥ ನಿರ್ಗತೇ ನಾರದೇ ಸೂತ ಭಗವಾನ್ ಬಾದರಾಯಣಃ ।
ಶ್ರುತವಾಂ ಸ್ತದಭಿಪ್ರೇತಂ ತತಃ ಕಿಮಕರೋ ದ್ವಿಭುಃ ॥೧॥ ಶ್ರೀ ಸೂತಃ॥
* ಬ್ರಹ್ಮನದ್ಯಾ ಸ್ಸರಸ್ವತ್ಯಾ ಆಶ್ರಮಃ ಪಶ್ಚಿಮೇ ತಟೇ । ಶಮ್ಯಾಪ್ರಾಸ
ಇತಿಖ್ಯಾತ ಋಷೀಣಾಂ ಸತ್ರವರ್ಧನಃ ॥೨॥ ತಸ್ಮಿ†ನ್ಮುಖ್ಯಾಶ್ರಮೇ ವ್ಯಾ
ಸೋ ಬದರೀಷಂಡಮಂಡಿತೇ। ಆಸೀನೋಽಪ ಉಪಸ್ಪೃಶ್ಯ ಪ್ರಣಿದಧ್ಯೌ ಮನಃ

ಶ್ರೀಶೌನಕಃ-ಶೌನಕಮುನಿಯು ಬೆಸಗೊಳುತ್ತಾನೆ, ಹೇಸೂತ-ಎಲೈಸೂತನೆ! ನಾರದೇ-ನಾರದಮುನಿಯು, ನಿರ್ಗತೇ-ಹೊರಟುಹೋಗಲು, ಭಗವಾನ್-ಪೂಜ್ಯನಾದ, ವಿಭುಃ-ವ್ಯಾಪಕನಾದ, ಬಾದರಾಯಣಃ-ವ್ಯಾಸಮುನಿಯು, ತದಭಿಪ್ರೇತಂ-ತತ್-ಆನಾರದನ, ಅಭಿಪ್ರೇತಂ - ಅಭಿಪ್ರಾಯವನ್ನು, ಶ್ರುತವಾನ್-ಕೇಳಿದವನಾಗಿ, ತತಃ-ಆಬಳಿಕ, ಕಿಂ-ಏನನ್ನು, ಅಕರೋತ್-ಮಾಡಿದನು, ॥ ೧॥ ಶ್ರೀಸೂತಃ-ಸೂತನು ಉತ್ತರವನ್ನು ಹೇಳುತ್ತಾನೆ, ಬ್ರಹ್ಮನದ್ಯಾಃ-ಬ್ರಹ್ಮಪತ್ನಿಯಾದ, ಅಥವಾ ಬ್ರಾಹ್ಮಣರಿಂದೊಡಗೂಡಿದ, ಸರಸ್ವತ್ಯಾಃ-ಸರಸ್ವತೀನದಿಯ, ಪಶ್ಚಿಮೇ-ಪಡುಗಡೆಯಿರುವ, ತಟೇ-ದಡದಲ್ಲಿ, ಋಷೀಣಾಂ-ಋಷಿಗಳ, ಸತ್ರವರ್ಧನಃ-ಯಜ್ಞಗಳನ್ನು ಬೆಳೆಯಿಸುವ, ಶಮ್ಯಾಪ್ರಾಸಇತಿ-ಶಮ್ಯಾಪ್ರಾಸವೆಂದು, ಖ್ಯಾತಃ-ಹೆಸರುಗೊಂಡ, ಆಶ್ರಮಃ-ಆಶ್ರಮವುಂಟು ॥೨॥ ವ್ಯಾಸಃ-ವ್ಯಾಸಮುನಿಯು, ಬದರೀಷಂಡಮಂಡಿತೇ, ಬದರೀ-ಬೋರೇಗಿಡಗಳ, ಷಂಡ-ಗುಂಪುಗಳಿಂದ, ಮಂಡಿತೇ-ಅಲಂಕೃತವಾದ, ತಸ್ಮಿನ್-ಆ ತನ್ನ, ಮುಖ್ಯಾಶ್ರಮೇ-ಮುಖ್ಯವಾದ ಆಶ್ರಮದಲ್ಲಿ, ಆಸೀನಃ-ಕುಳಿತುಕೊಂಡು, ಅಪಃ-ನೀರನ್ನು ಉಪಸ್ಪೃಶ್ಯ-ಆ ಚಮನ

—: ಅರ್ಜುನನು ಅಶ್ವತ್ಥಾಮನನ್ನು ಅವಮಾನಗೊಳಿಸಿದ್ದು :—

ಕಂ॥ ಜನಪತಿಪರೀಕ್ಷಿತಂ ಸಂ । ಜನಿಸಿದ ತೆರ ನೊರೆಯೆ ಮಲಗಿ ಪುಪಪಾಂಡವರಂ॥
ಹನನಂ ಗೆಯ್ದಶ್ವತ್ಥಾ । ಮನಿ ಗಾದಪಮಾನ ವಿಂದು ಪೇಳಲ್ಪಡುಗುಂ॥

ಅನಂತರದಲ್ಲಿ ಶೌನಕಮುನಿಯು ಸೂತಪೌರಾಣಿಕನನ್ನು ಕುರಿತು, ಅಯ್ಯಾ ಸೂತನೇ ! ಮಹಾ ಜ್ಞಾನಿಯೂ, ಕಾರ್ಯದಕ್ಷನೂ ಆಗಿರುವ ವ್ಯಾಸಮುನಿಯು, ನಾರದಮುನಿಯು ಹೊರಟು ಹೋದ ಬಳಿಕ, ಆತನ ಅಭಿಪ್ರಾಯವನ್ನು ತಿಳಿದುಕೊಂಡು, ಆಮೇಲೆ ಏನು ಮಾಡಿದನು ? ಎಂದು ಕೇಳಲು ॥೧॥ ಸೂತನಾ ಮುನಿಗಳನ್ನು ಕುರಿತು, ಅಯ್ಯಾ ಮುನಿಗಳಿರಾ ! ಬ್ರಹ್ಮರ್ಷಿಗಳಿಗೆ ವಾಸಸ್ಥಾನವಾಗಿಯೂ, ಬ್ರಹ್ಮನಿಗೆ ಪತ್ನಿಯಾಗಿಯೂ ಇರುವ ಸರಸ್ವತೀನದಿಯ ಪಡುವಣದಡದಲ್ಲಿ,ಬ್ರಾಹ್ಮಣರ ಯಜ್ಞ ಯಾಗಗಳನ್ನು ವೃದ್ಧಿಗೊಳಿಸುವ,ಶಮ್ಯಾಪ್ರಾಸವೆಂದು ಹೆಸರುಗೊಂಡ ಒಂದು ಆಶ್ರಮವುಂಟು ॥ ೨ ॥ ಬದರೀಷಂಡದಿಂದ ಮಂಡಿತವಾದ, ಆ ಉತ್ತಮಾಶ್ರಮದಲ್ಲಿ, ವ್ಯಾಸಮುನಿಯು, ಸ್ನಾನಸಂಧ್ಯಾದಿಗಳನ್ನು ನೆರವೇರಿಸಿ,ವಿವಿಕ್ತವಾಗಿ ಕುಳಿತುಕೊಂಡು, ಮನಸ್ಸಿನಲ್ಲಿಯೇ ಧ್ಯಾನಮಾಡಿ

(*) ಪಾ-ಬ್ರಹ್ಮನದ್ಯಾಂ ಸರಸ್ವತ್ಯಾಂ. (†) ಸ್ವಆಶ್ರಮೇ-ತನ್ನ ಆಶ್ರಮದಲ್ಲಿ.

ಸ್ವಯಂ ॥ ೩ ॥ ಭಕ್ತಿಯೋಗೇನ ಮನಸಿ ಸಮ್ಯಕ್ಪ್ರಣಿಹಿತೇಽಮಲೇ ।
ಅಪಶ್ಯ * ತ್ಪುರುಷಂ † ಪೂರ್ವಂ ‡ ಮಾಯಾಂಚ ತದುಪಾಶ್ರಯಾಂ ¶ ॥೪॥
ಯಯಾ ಸಮ್ಮೋಹಿತೋ ಜೀವ ಆತ್ಮಾನಂ ತ್ರಿಗುಣಾತ್ಮಕಂ । ಪರೋಽಪಿ
ಮನುತೇಽನರ್ಥಂ ತತ್ಕೃತಂ ಚಾಭಿಪದ್ಯತೇ ॥೫॥ ಅನರ್ಥೋಪಶಮಂ
ಸಾಕ್ಷಾ ದ್ಭಕ್ತಿಯೋಗ ಮಧೋಕ್ಷಜೇ । ಲೋಕಸ್ಯಾಜಾನತೋ ವಿದ್ವಾಂ

ವನ್ನು ಮಾಡಿ, ಸ್ವಯಂ-ವಿವಿಕ್ತವಾಗಿ, ಮನಃ-ಮನಸ್ಸನ್ನು, ಪ್ರಣಿದಧ್ಯೌ-ಸ್ಥಿರಗೊಳಿಸಿದನು ॥೩॥ ಭಕ್ತಿಯೋಗೇನ-ಭಕ್ತಿಭಾವದಿಂದ, ಅಮಲೇ-ನಿರ್ಮಲವಾದ, ಮನಸಿ-ಮನಸ್ಸು, ಸಮ್ಯಕ್-ಸಂಪೂರ್ಣವಾಗಿ, ಪ್ರಣಿಹಿತೇ-ಸ್ತಿಮಿತವಾಗಲು, ಪೂರ್ವಂ-ಮೊದಲು ಅಥವಾ ಪೂರ್ಣಂ-ಸಕಲ ಕಲ್ಯಾಣಗುಣಪೂರ್ಣನಾಗಿರುವ, ಅಥವಾ ಸರ್ವವ್ಯಾಪ್ತನಾಗಿಯೂ, ಸರ್ವಾಂಗಯುಕ್ತನಾಗಿಯೂ ಇರುವ, ಪುರುಷಂ-ವೇದಪ್ರತಿಪಾದ್ಯನಾದ ಪರಮೇಶ್ವರನನ್ನು, ತದುಪಾಶ್ರಯಾಂ-ಆತನಿಗಧೀನವಾಗಿರುವ, ಮಾಯಾಂಚ-ಮಾಯೆಯನ್ನೂ, ಅಪಶ್ಯತ್-ನೋಡಿದನು ॥೪॥ ಪರೋಽಪಿ-ಪ್ರಕೃತಿ ವಿಲಕ್ಷಣನಾದರೂ, ಅಥವಾ ಗುಣಗಳಿಗೊಳಪಡದವನಾಗಿದ್ದರೂ, ಜೀವಃ-ಜೀವನು, ಯಯಾ-ಯಾವ ಮಾಯೆಯಿಂದ, ಸಮ್ಮೋಹಿತಃ-ಸಂಪೂರ್ಣವಾಗಿ ಮರಳುಮಾಡಲ್ಪಟ್ಟವನಾಗಿ, ಆತ್ಮಾನಂ-ತನ್ನನ್ನು, ತ್ರಿಗುಣಾತ್ಮಕಂ-ಗುಣಸ್ವರೂಪನನ್ನಾಗಿ, ಮನುತೇ-ತಿಳಿಯುತ್ತಾನೋ, ತತ್ಕೃತಂ,ತತ್-ಆ ಗುಣಾಭಿಮಾನದಿಂದ, ಕೃತಂ-ಮಾಡಲ್ಪಟ್ಟ, ಅನರ್ಥಂಚ-ಕೇಡನ್ನೂ, ಅಭಿಪದ್ಯತೇ-ಹೊಂದುತ್ತಾನೋ ॥೫॥ ಯಃ-ಯಾವನು, ಅನರ್ಥೋಪಶಮಂ, ಅನರ್ಥ-ಸಂಸಾರ ದುಃಖಗಳನ್ನು, ಉಪಶಮಂ-ಹೋಗಲಾಡಿಸುವ, ಭಕ್ತಿಯೋಗಂ-ಭಕ್ತಿಯೋಗವನ್ನೂ, ಸಾಕ್ಷಾತ್-ಪ್ರತ್ಯಕ್ಷನಾಗಿ,ಅಧೋಕ್ಷಜೇ-ವಿಷ್ಣುವಿನಲ್ಲಿ, ಅಪಶ್ಯತ್-ಕಂಡನೋ, ವಿದ್ವಾನ್-ಸರ್ವಜ್ಞನಾದ ಆ ವ್ಯಾಸಮುನಿಯು,

ದನು ॥೩॥ ಬಳಿಕ ಭಕ್ತಿಯೋಗದಿಂದ ನಿರ್ಮಲವಾದ ಬುದ್ಧಿಯನ್ನು ನಿಶ್ಚಲವಾಗಿ ನಿಲ್ಲಿಸಿ ಧ್ಯಾನಮಾಡಲು,ಮೊದಲು ಸರ್ವವ್ಯಾಪ್ತನಾಗಿಯೂ ಸರ್ವಾಂಗಯುಕ್ತನಾಗಿಯೂ ಇರುವ ಭಗವಂತನನ್ನು ಕಂಡನು ॥೪॥ ಬಳಿಕ ಸತ್ವರಜಸ್ತಮೋ ಗುಣಗಳಿಗೊಳಗಾಗದೆ, ಪ್ರಕೃತಿ ವಿಲಕ್ಷಣನಾಗಿದ್ದರೂ ಜೀವನು, ಯಾವ ಮಾಯೆಯ ಆವರಣಶಕ್ತಿಯಿಂದ ವಿಕ್ಷೇಪವನ್ನು ಪಡೆದು, ತನ್ನನ್ನು ಗುಣಗಳಿಗೊಳಪಟ್ಟವನೆಂದು ತಿಳಿದು,ಆ ಗುಣಾಭಿಮಾನದಿಂದ ಕರ್ತೃತ್ವ, ಭೋಕ್ತೃತ್ವಾದ್ಯನರ್ಥಗಳನ್ನು ಅನುಭವಿಸುತ್ತಿರುವನೋ, ಭಗವಂತನನ್ನು ಆಶ್ರಯಿಸಿರುವ ಅಂತಹ ಮಾಯೆಯನ್ನೂ ಕಂಡನು॥೫॥ಮತ್ತು ಆ ಭಗವಂತನಲ್ಲಿ,ಸಕಲ ಸಂಸಾರ ದುಃಖಗಳನ್ನೂ ನಾಶಗೊಳಿಸುವ ಭಕ್ತಿಯೋಗವನ್ನೂ ಸಹ ಪ್ರತ್ಯಕ್ಷವಾಗಿ ಕಂಡು, ಆ

* ಬ್ರ. ಪುರುಷೋಹವೈನಾರಾಯಣೋಽಕಾಮಯತ. ಮತ್ತು,ಸಹಸ್ರಶೀರ್ಷಾ ಪುರುಷಃ † ಪಾ. ಪೂರ್ಣಂ ‡ ಬ್ರಹ್ಮಾಂಡಗಳಿಂದ ತುಂಬಿರುವ ಮಾಯೆಯನ್ನು ¶ ಸ್ವಾವಿದ್ಯಾವಿನಿವರ್ತಿನ್ಯಾ [illegible] ಮುನಿಃ ಅಜ್ಞಾನವನ್ನು ನಾಶಗೊಳಿಸುವ ಆನಂದಮಯವಾದ ಜ್ಞಾನದಿಂದ ಭಗವಂತನನ್ನು ಕಂಡನು. ಇದೇ ಮುಕ್ತಿಯು. ಸ್ಮೃತಿ. ಅನಾತ್ಮನ್ಯಾತ್ಮಬುದ್ಧಿರ್ಯಾಽಸ್ವೇ ಸ್ವಮಿತಿಯಾಮತಿಃ। [illegible] ಮೋಕ್ಷ ಉಚ್ಯತೇ। ಮತ್ತು, [illegible] । [illegible] ದೀಪಿನೀವ್ಯಾಖ್ಯಾನದಲ್ಲಿ ಮಾತ್ರ ಇರುವುದು.

ಶ್ಚಕ್ರೇ ಸಾತ್ವತಸಂಹಿತಾಂ ॥ ೬ ॥ ಯಸ್ಯಾಂ ವೈಶ್ರೂಯಮಾಣಾಯಾಂ ಕೃಷ್ಣೇ ಪರಮಪೂರುಷೇ । ಭಕ್ತಿರುತ್ಪದ್ಯತೇ ಪುಂಸ ಶ್ಶೋಕಮೋಹಭಯಾಪಹಾ ॥೭॥ ಸಸಂಹಿತಾಂ ಭಾಗವತೀಂ ಕೃತ್ವಾನುಕ್ರಮ್ಯ ಚಾತ್ಮಜಂ। ಶುಕಮಧ್ಯಾಪಯಾಮಾಸ ನಿವೃತ್ತಿನಿರತಂ ಮುನಿಂ ॥೮॥ ಶ್ರೀ ಶೌನಕಃ ॥ ಸವೈ ನಿವೃತ್ತಿನಿರತ ಸ್ಸರ್ವತ್ರೋಪೇಕ್ಷಕೋ ಮುನಿಃ । ಕಸ್ಯವಾ ಬೃಹತೀ ಮೇತಾ ಮಾತ್ಮಾರಾಮ ಸ್ಸಮಭ್ಯಸತ್ ॥೯॥ ಶ್ರೀಸೂತಃ॥ಆತ್ಮಾರಾಮಾ

ಅಜಾನತಃ - (ಆ ಭಗವತ್ಸ್ವರೂಪವನ್ನು) ತಿಳಿಯದಿರುವ, ಲೋಕಸ್ಯ - ಜನಗಳಿಗಾಗಿ, ಸಾತ್ವತಸಂಹಿತಾಂ-ಭಾಗವತಶಾಸ್ತ್ರವನ್ನು, ಚಕ್ರೇ-ಮಾಡಿದನು, ॥೬॥ ಯಸ್ಯಾಂ-ಯಾವ ಭಾಗವತವು, ಶ್ರೂಯಮಾಣಾಯಾಂ-ಕೇಳಲ್ಪಡುವುದಾದರೆ, ಪರಮಪುರುಷೇ-ಪುರುಷೋತ್ತಮನಾದ, ಕೃಷ್ಣೇ-ಶ್ರೀಕೃಷ್ಣಮೂರ್ತಿಯಲ್ಲಿ, ಪುಂಸಃ-ಪುರುಷನಿಗೆ, ಶೋಕಮೋಹಭಯಾಪಹಾ, ಶೋಕ-ಸಂಸಾರದುಃಖಗಳನ್ನೂ, ಮೋಹ-ದೇಹಾತ್ಮಭ್ರಾಂತಿಯನ್ನೂ, ಭಯ-ನರಕಭಯವನ್ನೂ, ಅಪಹಾ-ಹೋಗಲಾಡಿಸುವ, ಭಕ್ತಿಃ-ಭಕ್ತಿಯು, ಉತ್ಪದ್ಯತೇ-ಉಂಟಾಗುತ್ತದೋ ॥೭॥ ಸಃ-ಆ ವ್ಯಾಸಮುನಿಯು, ಭಾಗವತೀಂ-ಭಗವದ್ಭಕ್ತಿಯನ್ನು ಬೋಧಿಸುವ, ಸಂಹಿತಾಂ-ಆ ಶಾಸ್ತ್ರವನ್ನು, ಕೃತ್ವಾ-ವಿರಚಿಸಿ, ಅನುಕ್ರಮ್ಯಚ-ಶೋಧನೆಯನ್ನೂ ಮಾಡಿ,ನಿವೃತ್ತಿನಿರತಂ-ನಿವೃತ್ತಿಮಾರ್ಗದಲ್ಲಿ ಆಸಕ್ತನಾದ, ಮುನಿಂ-ಮನನಶೀಲನಾದ, ಶುಕಂ-ಮಗನಾದ ಶುಕಮುನಿಯನ್ನು, ಅಧ್ಯಾಪಯಾಮಾಸ-ಓದಿಸಿದನು ॥೮॥ ಶ್ರೀ ಶೌನಕಃ-ಶೌನಕನು ಪ್ರಶ್ನೆಮಾಡುತ್ತಾನೆ, ನಿವೃತ್ತಿನಿರತಃ-ನಿವೃತ್ತಿಮಾರ್ಗದಲ್ಲಿ ಆಸಕ್ತನಾದ, ಸರ್ವತ್ರ-ಓದುವುದು, ಕೇಳುವುದು, ಮೊದಲಾದಸಕಲ ವಿಷಯಗಳಲ್ಲಿಯೂ, ಉಪೇಕ್ಷಕಃ-ಉದಾಸೀನನಾದ, ಆತ್ಮಾರಾಮಃ-ಆತ್ಮಕ್ರೀಡನಾದ, ಸವೈಮುನಿಃ-ಆಶುಕಮುನಿಯು, ಕಸ್ಯವಾ-ಯಾವ ಕಾರಣದಿಂದ, ಬೃಹತೀಂ-ವಿಸ್ತಾರವಾದ, ಏತಾಂ-ಈ ಭಾಗವತಶಾಸ್ತ್ರವನ್ನು, ಸಮಭ್ಯಸತ್-ಅಭ್ಯಾಸಮಾಡಿದನು, ॥೯॥ ಶ್ರೀಸೂತಃ-ಸೂತನು ಹೇಳುತ್ತಾನೆ, ಆತ್ಮಾರಾಮಾಃ-ಆತ್ಮನಲ್ಲಿಯೇ ಕ್ರೀಡಿಸುವ, ಮುನಯಃ-ಯೋಗಿಗಳು, ನಿರ್ಗ್ರಂಥಾಅಪಿ-ಯಾವ ಗ್ರಂಥಗಳನ್ನು ಓದದಿದ್ದ

ಭಗವತ್ಸ್ವರೂಪವನ್ನೇ ಅರಿಯದಿರುವ ಜನಗಳಲ್ಲಿ ಕನಿಕರಿಸಿ, ಅವರಿಗಾಗಿ, ಜ್ಞಾನಸ್ವರೂಪನೂ, ಮಾಯಾ ನಿಯಾಮಕನೂ, ನಿತ್ಯಾನಂದಾತ್ಮಕನೂ,ಸರ್ವಜ್ಞನೂ,ಸರ್ವಶಕ್ತನೂ ಆಗಿರುವವನು ಈಶ್ವರನೆಂತಲೂ,ಆ ಈಶ್ವರಮಾಯೆಯಿಂದ ಮರುಳಾಗಿ ಸ್ವಸ್ವರೂಪವನ್ನು ಮರೆತು ದುಃಖಿಯಾಗಿರವವನು ಜೀವನೆಂತಲೂ, ಆ ಜೀವನು ಈಶ್ವರ ಭಕ್ತಿಯಿಂದ ಜ್ಞಾನವನ್ನು ಸಂಪಾದಿಸಿ ಮೋಕ್ಷವನ್ನು ಪಡೆಯಬೇಕೆಂತಲೂ, ತತ್ವವನ್ನು ಬೋಧಿಸುವುದಾಗಿಯೂ, ಶ್ರವಣಮಾಡಿದ ಕೂಡಲೇ ಶ್ರೋತೃಗಳಿಗೆ ಶೋಕ, ಮೋಹ, ಭಯಗಳನ್ನು ಹೋಗಲಾಡಿಸುವ ಭಗವದ್ಭಕ್ತಿಯನ್ನುಂಟುಮಾಡುವುದಾಗಿಯೂ,ಇರುವ ಈ ಭಕ್ತಿಶಾಸ್ತ್ರವನ್ನು ವಿರಚಿಸಿದನು ॥೭॥ ಆವ್ಯಾಸಮುನಿಯು ಆ ಶಾಸ್ತ್ರವನ್ನು ಚೆನ್ನಾಗಿ ಪರಿಶೋಧಿಸಿ, ಅದನ್ನು ಮಹಾವಿರಕ್ತನಾಗಿರುವ ತನ್ನ ಮಗನಾದ ಶುಕಮುನಿಗೆ ಕಲಿಸಿದನು ॥೮॥ ಎಂದು ಹೇಳಲು ಶೌನಕನು ಸೂತನನ್ನು ಕುರಿತು ಅಯ್ಯಾ! ನಿವೃತ್ತಿಮಾರ್ಗದಲ್ಲಿ ನಿರತನಾಗಿ ಯಾವ ವಿಷಯದಲ್ಲಿಯೂ ಆಸೆಯಿಲ್ಲದೆ ಆತ್ಮಾರಾಮನಾಗಿರುವ ಆ ಶುಕಮುನಿಯು ಏತಕ್ಕಾಗಿ

ಕ್ಷ್ಯಮುನಯೋ *ನಿರ್ಗ್ರಂಥಾ ಅಪ್ಯುರುಕ್ರಮೇ। ಕುರ್ವಂತ್ಯಹೈತುಕೀಂ ಭಕ್ತಿ
ಮಿತ್ಥಂ ಭೂತಗುಣೋ ಹರಿಃ ॥೧೦॥ ಹರೇರ್ಗುಣಾಕ್ಷಿಪ್ತಮತಿ ರ್ಭಗ
ವಾನ್ ಬಾದರಾಯಣಿಃ । ಅಧ್ಯಗಾನ್ಮಹದಾಖ್ಯಾನಂ ನಿತ್ಯಂ ವಿಷ್ಣುಜನ
ಪ್ರಿಯಃ ॥೧೧॥ ಪರೀಕ್ಷಿತೋಥ ರಾಜರ್ಷೇ ಜನ್ಮಕರ್ಮ‡ ವಿಲಾ ಯನಂ ।
§ಸಂಸ್ಥಾನಂ ಪಾಂಡುಪುತ್ರಾಣಾಂ ವಕ್ಷ್ಯೇ ಕೃಷ್ಣಕಥೋದಯಂ ॥ ೧೨ ॥
ಯದಾ ಮೃಧೇ ಕೌರವಸೃಂಜಯಾನಾಂ ವೀರೇಷ್ವಥೋ ವೀರಗತಿಂ ಗತೇಷು।

ರೂ, ಅಥವಾ ಅಹಂಕಾರಾದಿ ಹೃದಯಗ್ರಂಥಿಗಳನ್ನು ಭೇದಿಸಿದವರಾಗಿದ್ದರೂ, ಅಥವಾ, ನಿರ್ಗ್ರಂಥಾ ಅಪಿ - ಶಬ್ದಾದಿ ವಿಷಯಗಳ ಗಂಧವೂ ಇಲ್ಲದವರಾದರೂ, ಉರುಕ್ರಮೇ - ಭಗವಂತನಲ್ಲಿ, ಅಹೈತುಕೀಂ-ನಿರ್ವ್ಯಾಜವಾದ, ಭಕ್ತಿಂ-ಭಕ್ತಿಯನ್ನು, ಕುರ್ವಂತಿ-ಮಾಡುತ್ತಾರೆ, ಹರಿಃ-ಶ್ರೀಕೃಷ್ಣನು, ಇತ್ಥಂಭೂತಗುಣಃ, ಇತ್ಥಂಭೂತ - ಇಂತಹ, ಗುಣಃ - ಗುಣಗಳುಳ್ಳವನು ॥ ೧೦ ॥ ಭಗವಾನ್ - ಜ್ಞಾನಿಶಿರೋಮಣಿಯಾದ, ನಿತ್ಯಂ-ಯಾವಾಗಲೂ, ವಿಷ್ಣುಜನಪ್ರಿಯಃ ವಿಷ್ಣುಜನ-ಭಗವದ್ಭಕ್ತರಿಗೆ, ಪ್ರಿಯಃ-ಪ್ರೀತಿಪಾತ್ರನಾದ ಹರೇಃ-ವಿಷ್ಣುವಿನ, ಗುಣ - ಕಲ್ಯಾಣಗುಣಗಳಿಂದ, ಆಕ್ಷಿಪ್ತಮತಿಃ-ಆಕ್ಷಿಪ್ತ-ವಶಗೊಳಿಸಲ್ಪಟ್ಟ,ಮತಿಃ-ಬುದ್ಧಿಯುಳ್ಳ,ಬಾದರಾಯಣಿಃ-ವ್ಯಾಸಪುತ್ರನಾದ ಶುಕಮುನಿಯು, ಮಹತ್-ವಿಸ್ತಾರವಾದ, ಆಖ್ಯಾನಂ-ಈ ಭಾಗವತ ಪುರಾಣವನ್ನು, ಅಧ್ಯಗಾತ್-ಅಧ್ಯಯನ ಮಾಡಿದನು ॥೧೧॥ ಅಥ-ಅನಂತರದಲ್ಲಿ, ರಾಜರ್ಷೇಃ-ರಾಜರಲ್ಲಿ ಋಷಿಯಾದ, ಪರೀಕ್ಷಿತಃ-ಪರೀಕ್ಷಿದ್ರಾಜನ, ಜನ್ಮಕರ್ಮವಿಲಾಯನಂ, ಜನ್ಮ-ಉತ್ಪತ್ತಿಯನ್ನೂ,ಕರ್ಮ-ಕಾರ್ಯಗಳನ್ನೂ,ವಿಲಾಯನಂ-ಮೋಕ್ಷವನ್ನೂ ಅಥವಾ ದೇಹವಿಯೋಗವನ್ನೂ,ಕೃಷ್ಣಕಥೋದಯಂ ಯಥಾ ಭವತಿ ತಥಾ-ಕೃಷ್ಣಚರಿತ್ರೆಯು ಪ್ರಾರಂಭವಾಗುವ ಹಾಗೆ,ಅಥವಾ ಕೃಷ್ಣನ ಮಹಿಮೆಯನ್ನು ಪ್ರಕಾಶಗೊಳಿಸುವಂತೆ, ಪಾಂಡುಪುತ್ರಾಣಾಂ-ಪಾಂಡವರ, ಸಂಸ್ಥಾನಂ-ಮಹಾಪ್ರಸ್ಥಾನವನ್ನೂ, ವಕ್ಷ್ಯೇ - ಹೇಳುವೆನು ॥೧೨॥ ಯದಾ-ಯಾವಾಗ,ಮೃಧೇ-ಯುದ್ಧದಲ್ಲಿ, ಕೌರವಸೃಂಜಯಾನಾಂ-

ಇಷ್ಟುದೊಡ್ಡಗ್ರಂಥವನ್ನು ಕಲಿತನು ? ಎಂದು ಬೆಸಗೊಳ್ಳಲು ಸೂತನು ಹೇಳುತ್ತಾನೆ॥೯॥ ಆತ್ಮಾರಾಮರಾದ ಯೋಗಿಗಳು,ಸಕಲ † ಗ್ರಂಥಗಳನ್ನೂಬಿಟ್ಟು,ಅಜ್ಞಾನರೂಪಗಳಾದ ಹೃದಯಗ್ರಂಥಿಗಳನ್ನು ಭೇದಿಸಿದವರಾದರೂ, ಭಗವಂತನಲ್ಲಿ ಅವ್ಯಾಜವಾದ ಭಕ್ತಿಯನ್ನಿಡುವರು. ಆದುದರಿಂದ ಆ ಭಗವಂತನ ಗುಣಮಹಿಮೆಯನ್ನು ಯಾರು ತಾನೇ ಬಣ್ಣಿಸಲಾರರು. ॥೧೦॥ ಆದುದರಿಂದ ಯಾವಾಗಲೂ ವಿಷ್ಣುಭಕ್ತರಲ್ಲಿ ಪ್ರೀತಿಯುಳ್ಳ ಮಹಾತ್ಮನಾದ ಶುಕಮುನಿಯು, ಭಗವದ್ಗುಣಗಳಿಂದ ವಶೀಕೃತಚಿತ್ತನಾಗಿ ಈ ಮಹಾಪುರಾಣವನ್ನು ಕಲಿತುಕೊಂಡನು ॥೧೧॥ ಅಯ್ಯಾ ಶೌನಕನೇ ! ನೀನು ಕೇಳಿದ ಮತ್ತೊಂದು ಪ್ರಶ್ನೆಯಂತೆ,ರಾಜರ್ಷಿಯಾದ ಪರೀಕ್ಷಿತ್ತಿನ,ಜನ್ಮವನ್ನು,ಆತನು ಮಾಡಿದ ಕರ್ಮಗಳನ್ನೂ,ಆತನ ಮುಕ್ತಿಯನ್ನೂ,ಶ್ರೀಕೃಷ್ಣಚರಿತ್ರೆಯನ್ನೂ, ವರ್ಣಿಸುವುದಕ್ಕೆ ಕಾರಣವಾದ ಪಾಂಡವರ ಸ್ವರ್ಗಾರೋಹಣವೃತ್ತಾಂತವನ್ನು ವಿವರಿಸುತ್ತೇನೆ. ಕೇಳು ॥೧೨॥ ಭಾರತಯುದ್ಧದಲ್ಲಿ

* ಪಾ. ನಿರ್ಗ್ರಂಥಾಃ † ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ। ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ (ಗೀತಾ)—ಜ್ಞಾನಿಗಳಿಗೆ ಪುಸ್ತಕಭಾರದಿಂದ ಪ್ರಯೋಜನವಿಲ್ಲವೆಂದು ಭಾವವು.

‡ ಪಾ-ವಿಲಾಪನಂ § ಸಂಸ್ಥಾಂ ಚ

ವೃಕೋದರಾವಿದ್ಧಗದಾಭಿಮರ್ಶಭಗ್ನೋರುದಂಡೇ ಧೃತರಾಷ್ಟ್ರಪುತ್ರೇ ॥
ಭರ್ತುಃ ಪ್ರಿಯಂ ದ್ರೌಣಿ ರಿತಿಸ್ಮ ಪಶ್ಯನ್ ಕೃಷ್ಣಾಸುತಾನಾಂ ಸ್ವಪತಾಂ
ಶಿರಾಂಸಿ । ಅಪಾಹರ ದ್ವಿಪ್ರಿಯ ಮೇವ ತಸ್ಯ ಜುಗುಪ್ಸಿತಂ ಕರ್ಮ ವಿಗರ್ಹ
ಯಂತಿ॥೧೪॥ಮಾತಾ ಸುತಾನಾಂ ನಿಧನಂ ಶಿಶೂನಾಂ ನಿಶಮ್ಯ ಘೋರಂ ಪರಿ
ತಪ್ಯಮಾನಾ।ತದಾ ರುದದ್ಬಾಷ್ಪಕಳಾಕುಲಾಕ್ಷೀ ತಾಂ ಸಾಂತ್ವಯ ನ್ನಾಹ
ಕಿರೀಟಮಾಲೀ॥೧೫॥ತದಾ ಶುಚ ಸ್ತೇ ವಿಮೃಜಾಮಿ ಭದ್ರೇ ಯದ್ಬ್ರಹ್ಮ

ಕೌರವಸೃಂಜಯರ,ವೀರೇಷು-ಶೂರರು, ವೀರಗತಿಂ-ವೀರಸ್ವರ್ಗವನ್ನು,ಗತೇಷು-ಹೊಂದಲು, ಧೃತರಾಷ್ಟ್ರ ಪುತ್ರೇ-ಧೃತರಾಷ್ಟ್ರನ ಮಗನಾದ ದುರ್ಯೋಧನನು, ವೃಕೋದರ-ಭೀಮನಿಂದ, ಆವಿದ್ಧ-ಹೊಡೆಯಲ್ಪಟ್ಟ, ಗದಾ-ಗದೆಯ, ಅಭಿಮರ್ಶ-ಹೊಡೆತದಿಂದ, ಭಗ್ನ-ಮುರಿದುಹೋದ, ಊರುದಂಡೇ-ದಂಡಗಳಂತಿರುವತೊಡೆಗಳುಳ್ಳವನಾಗಲು, ॥೧೩॥ದ್ರೌಣಿಃ - ದ್ರೋಣಪುತ್ರನಾದ ಅಶ್ವತ್ಥಾಮನು, ಭರ್ತುಃ - ಸ್ವಾಮಿಯಾದ ಧೃತರಾಷ್ಟ್ರನಿಗೆ, ಪ್ರಿಯಂ-ಇಷ್ಟವು, ಇತಿಸ್ಮ-ಹೀಗೆಂದು, ಪಶ್ಯನ್ -ತಿಳಿದವನಾಗಿ, ಸ್ವಪತಾಂ-ನಿದ್ರೆಗೈಯುತ್ತಿರುವ, ಕೃಷ್ಣಾಸುತಾನಾಂ, ದ್ರೌಪದೀ ಪುತ್ರರಾದುಪಪಾಂಡವರ, ಶಿರಾಂಸಿ - ತಲೆಗಳನ್ನ ಅಪಾಹರತ್-ತೆಗೆದುಕೊಂಡುಹೋದನೋ, ಜುಗುಪ್ಸಿತಂ-ಅಸಹ್ಯಕರವಾದುದರಿಂದಲೇ, ತಸ್ಯ - ಆದುರ್ಯೋಧನನಿಗೆ, ವಿಪ್ರಿಯಮೇವ-ಅನಿಷ್ಟವಾಗಿಯೇ ಇರುವ, ಕರ್ಮ-ಆ ಕಾರ್ಯವನ್ನು, ವಿಗರ್ಹಯಂತಿ-ನಿಂದಿಸುವರೋ ॥೧೪॥ ಮಾತಾ-ತಾಯಿಯಾದ ದ್ರೌಪದಿಯು, ಶಿಶೂನಾಂ-ಹಸುಳೆಗಳಾದ, ಸುತಾನಾಂ-ಮಕ್ಕಳ, ಘೋರಂ-ದುಸ್ಸಹವಾದ, ನಿಧನಂ-ಮರಣವನ್ನು, ನಿಶಮ್ಯ-ಕೇಳಿ, ಪರಿತಪ್ಯಮಾನಾ-ಸಂಕಟಪಡುತ್ತಾ, ಬಾಷ್ಪಕಳಾಕುಲಾಕ್ಷೀ, ಬಾಷ್ಪ-ಕಣ್ಣೀರಿನ, ಕಳಾ-ಬಿಂದುಗಳಿಂದ, ಆಕುಲ-ತುಂಬಿದ, ಅಕ್ಷೀ-ಕಣ್ಣುಳ್ಳವಳಾಗಿ ಯದಾ-ಯಾವಾಗ, ಅರುದತ್-ಗೋಳಾಡಿದಳೋ, ತದಾ-ಆಗ, ಕಿರೀಟಮಾಲೀ-ಕಿರೀಟದಲ್ಲಿ ರತ್ನಪಂಕ್ತಿಯನ್ನುಧರಿಸುವ ಅಥವಾ ಅನೇಕ ಶಿಖರಗಳಿಂದೊಡಗೂಡಿದ ಕಿರೀಟವುಳ್ಳ ಅರ್ಜುನನು, ತಾಂ-ಆ ದ್ರೌಪದಿಯನ್ನು, ಸಾಂತ್ವಯನ್-ಸಂತೈಸುತ್ತಾ, ಆಹ-ಹೇಳುತ್ತಾನೆ ॥೧೫॥ ಭದ್ರೇ-ಎಲೌಮಂಗ

ಕೌರವಪಾಂಡವರ ಶೂರರೆಲ್ಲಾ ಮಡಿದು ವೀರಸ್ವರ್ಗವನ್ನು ಹೊಂದಲು, ಭೀಮಸೇನನು ಗದಾದಂಡದಿಂದ ದುರ್ಯೋಧನನ ತೊಡೆಗಳನ್ನು ಕತ್ತರಿಸಿದನು ॥೧೩॥ ಆ ಕ್ರೋಧದಿಂದ ದ್ರೋಣಪುತ್ರನಾದ ಅಶ್ವತ್ಥಾಮನು, ತನ್ನ ಸ್ವಾಮಿಯಾದ ಧೃತರಾಷ್ಟ್ರನಿಗೆ ಅಥವಾ ದುರ್ಯೋಧನನಿಗೆ ಆಕಾರ್ಯವು ಅನಿಷ್ಟವಾದರೂ,ಅದರಿಂದ,ಸಂತೋಷವಾಗುವುದೆಂದೆಣಿಸಿ, ಮಲಗಿನಿದ್ರೆಮಾಡುತ್ತಿದ್ದ ದ್ರೌಪದೀಪುತ್ರರಾದುಪಪಾಂಡವರೈದುತಲೆಗಳನ್ನೂತರಿದು ತೆಗೆದುಕೊಂಡು ಹೋಗಲು,ಜುಗುಪ್ಸಿತವಾದ ಅವನಕಾರ್ಯವನ್ನು ದುರ್ಯೋಧನನು ಸಮ್ಮತಿಸಲಿಲ್ಲ. ಅಲ್ಲದೆ ಎಲ್ಲರೂ ನಿಂದಿಸತೊಡಗಿದರು॥೧೪॥ಅನಂತರದಲ್ಲಿ ತಾಯಿಯಾದ ದ್ರೌಪದಿಯು ಶಿಶುಗಳಾದ ತನ್ನ ಮಕ್ಕಳು ಮಡಿದ ವೃತ್ತಾಂತವನ್ನು ಕೇಳಿ ಕಣ್ಣುಗಳಲ್ಲಿ ಕಂಬನಿಗಳನ್ನುರುಳಿಸುತ್ತಾ ಘೋರವಾಗಿ ಪ್ರಲಾಪಿಸಲು,ಕಿರೀಟಮಾಲಿಯಾದ ಅರ್ಜುನನು ಆಕೆಯನ್ನು ಸಂತೈಸುತ್ತಾ ॥೧೫॥ಎಲೌ ಮಂಗಳಾಂಗಿಯೇ ! ಅಳಬೇಡ, ನಿನ್ನ ಪುತ್ರರನ್ನು ಸಂಹರಿಸಿದ ಬ್ರಾಹ್ಮಣಾಧಮನಾದ ಆ ಅಶ್ವತ್ಥಾಮನ ತಲೆಯನ್ನು, ನನ್ನ ಗಾಂಡೀವ ಮುಕ್ತಗಳಾದ

ಬಂಧೋಃ ಶ್ಶಿರ*ಆತತಾಯಿನಃ।ಗಾಂಡೀವಮುಕ್ತೈ ರ್ವಿಶಿಖೈ ರುಪಾಹರೇ
ತ್ವಾಕ್ರಮ್ಯ ಯತ್ †ಸ್ಥಾಸ್ಯಸಿ ದಗ್ಧಪುತ್ರಾ॥೧೬॥ಇತಿ ಪ್ರಿಯಾಂ ವಲ್ಗುವಿ
ಚಿತ್ರಜಲ್ಪೈ ಸ್ಸಸಾಂತ್ವಯಿತ್ವಾ ಚ್ಯುತಮಿತ್ರಸೂತಃ । ಅನ್ವಾದ್ರವ ದ್ದಂಶಿತ
ಉಗ್ರಧನ್ವಾ ಕಪಿಧ್ವಜೋ ಗುರುಪುತ್ರಂ ರಥೇನ ॥೧೭॥ ತಮಾಪತಂತಂ
ಸವಿಲಕ್ಷ್ಯ ದೂರಾ ತ್ಕುಮಾರಹೋದ್ವಿಗ್ನಮನಾ ರಥೇನ। ಪರಾದ್ರವ ತ್ಪ್ರಾಣ

ಳಾಂಗಿಯೇ, ಯತ್-ಯಾವಾಗ, ಗಾಂಡೀವಮುಕ್ತೈಃ-ಗಾಂಡಿವವೆಂಬ ಧನುಸ್ಸಿನಿಂದ ಬಿಡಲ್ಪಟ್ಟ, ವಿಶಿಖೈಃ-ಬಾಣಗಳಿಂದ, ಆತತಾಯಿನಃ - ಶಸ್ತ್ರಪಾಣಿಯಾಗಿಬಂದಿರುವ, ಬ್ರಹ್ಮಬಂಧೋಃ - ಬ್ರಾಹ್ಮಣಾಧಮನಾದ ಅಶ್ವತ್ಥಾಮನ, ಶಿರಃ-ತಲೆಯನ್ನು, ಉಪಾಹರೇ-ನಿನಗೆ ತಂದುಕೊಡುವೆನೋ, ಯತ್-ಯಾವ ತಲೆಯನ್ನು, ಆಕ್ರಮ್ಯ-ಮೆಟ್ಟಿಕೊಂಡು, ದಗ್ಧಪುತ್ರಾ, ದಗ್ಧ-ಸುಡಲ್ಪಟ್ಟ, ಪುತ್ರಾ-ಮಕ್ಕಳುಳ್ಳ ನೀನು,ಸ್ಥಾಸ್ಯಸಿ ಕುಳಿತುಕೊಳ್ಳವೆಯೊ, ಅಥವಾ ಸ್ನಾಸ್ಯಸಿ-ಸ್ನಾನಮಾಡುವೆಯೋ, ತದಾ-ಆಗ, ತೇ-ನಿನ್ನ, ಶುಚಃ-ದುಃಖಗಳನ್ನು, ವಿಮೃಜಾಮಿ-ಹೋಗಲಾಡಿಸುತ್ತೇನೆ, ॥ ೧೬ ॥ ಅಚ್ಯುತಮಿತ್ರಸೂತಃ, ಅಚ್ಯುತ-ಕೃಷ್ಣನೇ, ಮಿತ್ರ-ಸ್ನೇಹಿತನೂ, ಸೂತಃ - ಸಾರಥಿಯೂ ಆಗಿರುವ, ದಂಶಿತಃ - ಕವಚವನ್ನು ತೊಟ್ಟಿರುವ, ಉಗ್ರಧನ್ವಾ-ಕ್ರೂರವಾದ ಧನುಸ್ಸುಳ್ಳ, ಕಪಿಧ್ವಜಃ - ಕಪಿಯಾದ ಹನುಮಂತನೇ ಧ್ವಜದಲ್ಲಿಉಳ್ಳ ಅರ್ಜುನನು, ಇತಿ-ಇಂತು, ಪ್ರಿಯಾಂ - ಪ್ರಿಯಳಾದದ್ರೌಪದಿಯನ್ನು, ವಲ್ಗುವಿಚಿತ್ರಜಲ್ಪೈಃ, ವಲ್ಗು-ಸೊಗಸಾದ, ವಿಚಿತ್ರ-ಹಲವುಬಗೆಗಳಾದ, ಜಲ್ಪೈಃ-ಸವಿನುಡಿಗಳಿಂದ, ಸಾಂತ್ವಯಿತ್ವಾ - ಸಂತೈಸಿ, ರಥೇನ-ರಥದಿಂದ, ಗುರುಪುತ್ರಂ-ದ್ರೋಣಪುತ್ರನಾದಅಶ್ವತ್ಥಾಮನನ್ನು, ಅನ್ವಾದ್ರವತ್-ಬೆನ್ನಟ್ಟಿಹೋದನು, ॥೧೭॥ ಕುಮಾರಹಾ - ಶಿಶುಹತ್ಯವನ್ನುಮಾಡಿದವನಾದುದರಿಂದಲೇ, ಉದ್ವಿಗ್ನಮನಾಃ, ಉದ್ವಿಗ್ನ - ನಡುಗುತ್ತಿರುವ, ಮನಾಃ-ಮನಸ್ಸುಳ್ಳ, ಸಃ-ಆ ಅಶ್ವತ್ಥಾಮನು, ರಥೇನ - ರಥದಿಂದ, ಆಪತಂತಂ - ಬರುತ್ತಿರುವ, ತಂ-ಆಅರ್ಜುನನನ್ನು, ದೂರಾತ್ - ದೂರದಿಂದ, ವಿಲಕ್ಷ್ಯ - ನೋಡಿ, ಪ್ರಾಣಪರೀಪ್ಸುಃ - ಪ್ರಾಣಗಳನ್ನು ಕಾಪಾಡಬೇಕೆಂದೆಳಸಿ, ರುದ್ರಭಯಾತ್ - ಈಶ್ವರನ ಭಯದಿಂದ, ‡ ಕಃಯಥಾ - ಬ್ರಹ್ಮನಂತೆ,

ಬಾಣಗಳಿಂದ ಕತ್ತರಿಸಿ ನಿನಗೆ ತಂದುಕೊಡುವೆನು,ಆ ತಲೆಯನ್ನು ಮೆಟ್ಟಿ ಕುಳಿತುಕೊಂಡು ಸ್ನಾನವನ್ನು ಮಾಡಿ ನಿನ್ನದುಃಖವನ್ನು ಕಳೆದುಕೊಳ್ಳುವೆ ॥೧೬॥ ಎಂದು ಕೃಷ್ಣನೇ ಸಾರಥಿಯಾಗಿಯೂ ಮಿತ್ರನಾಗಿಯೂ ಇರುವ ಅರ್ಜುನನು ಹಲವು ಬಗೆಗಳಾದ ಸವಿನುಡಿಗಳಿಂದ ಆಕೆಯನ್ನು ಸಂತೈಸಿ,ಕವಚವನ್ನು ತೊಟ್ಟು, ಬಿಲ್ಲನ್ನುಹಿಡಿದು, ಕಪಿಧ್ವಜವಾದರಥದಲ್ಲಿ ಕುಳಿತು,ಗುರುಪುತ್ರನಾದ ಆ ಅಶ್ವತ್ಥಾಮನನ್ನು ಬೆನ್ನಟ್ಟಿಹೋದನು ॥೧೭॥ ಆಗಬಾಲಘಾತಿಯಾದ ಆ ಅಶ್ವತ್ಥಾಮನು ಹೆದರಿ ಅಟ್ಟಿಬರುತ್ತಿರುವ ಅರ್ಜುನನ್ನು ದೂರದಿಂದಲೇ ಕಂಡು ಪ್ರಾಣಗಳನ್ನು ಕಾಪಾಡಲೆಳಸಿ, ರುದ್ರನಿಗೆ ಹೆದರಿದ ಬ್ರಹ್ಮನಂತೆಯೂ, ಯಮನಂತೆಯೂ ದಕ್ಷಪ್ರಜಾಪತಿಯಂತೆಯೂ, ತನ್ನ ಕೈಲಾಗುವವರೆಗೂ ರಥದಲ್ಲಿ ಕುಳಿತುಕೊಂಡು, ಓಡಿ

* ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿ ರ್ಧನಾಪಹಃ । ಕ್ಷೇತ್ರದಾರಹರಶ್ಚೈವ ಷಡೇತೇ ಆತತಾಯಿನಃ॥ ಈ ಆರುಮಂದಿಯು ದ್ರೋಹಿಗಳು, † ಪಾ. ಸ್ನಾಸ್ಯಸಿ, ‡ ಬ್ರಹ್ಮನು ತನ್ನ ಮಗಳನ್ನು ರಮಿಸುವುದಕ್ಕೆ ಪ್ರಯತ್ನಿಸಿ,ರುದ್ರನು ಅಟ್ಟಿಕೊಂಡು ಬರಲು ಓಡಿದನು.

ಪರೀಪ್ಸುರುರ್ವ್ಯಾಂ ಯಾವದ್ಗಮಂ ರುದ್ರಭಯಾದ್ಯಥಾ* ಕಃ ॥೧೮॥ ಯದಾ
ಶರಣ ಮಾತ್ಮಾನ ಮೈಕ್ಷತ ಶ್ರಾಂತವಾಜಿನಂ। ಅಸ್ತ್ರಂ ಬ್ರಹ್ಮಶಿರೋ ಮೇ
ನೇ ಹ್ಯಾತ್ಮತ್ರಾಣಂ ದ್ವಿಜಾತ್ಮಜಃ ॥೧೯॥ ಅಥೋಪಸ್ಪೃಶ್ಯ ಸಲಿಲಂ ಸಂದ
ಧೇಸ್ತ್ರಂ ಸಮಾಹಿತಃ। ಅಜಾನನ್ನಪಿ ಸಂಹಾರಂ ಪ್ರಾಣಕೃಚ್ಛ್ರ ಉಪಸ್ಥಿತೇ। ೨೦
ತತಃ ಪ್ರಾದುಷ್ಕೃತಂ ತೇಜಃ ಪ್ರಚಂಡಂ ಸರ್ವತೋದಿಶಂ ॥ ಪ್ರಾಣಾಪ

ಅರ್ಕಿಃ (‡) ಯಥಾ-ಯಮನಂತೆ, ಅಥವಾ ಅರ್ಕಃ [†] ಯಥಾ, ಸೂರ್ಯನಂತೆ, ಉರ್ವ್ಯಾಂ-ಭೂಮಿಯಲ್ಲಿ, ಯಾವದ್ಗಮಂ - ಕೈಲಾದಷ್ಟು ದೂರದವರೆಗೂ, ರಥೇನ - ರಥದಿಂದ, ಪರಾದ್ರವತ್ - ಓಡಿದನು ॥ ೧೮ ॥ ದ್ವಿಜಾತ್ಮಜಃ-ಬ್ರಾಹ್ಮಣಪುತ್ರನಾದ ಅಶ್ವತ್ಥಾಮನು, ಶ್ರಾಂತವಾಜಿನಂ-ದಣಿದಕುದುರೆಗಳುಳ್ಳ, ಆತ್ಮಾನಂ-ತನ್ನನ್ನು, ಯದಾ-ಯಾವಾಗ, ಅಶರಣಂ-ರಕ್ಷಕರಿಲ್ಲದವನೆಂದು, ಅವೈಕ್ಷತ್ - ತಿಳಿದನೋ, ತದಾ-ಆಗ, ಬ್ರಹ್ಮಶಿರಃ-ಬ್ರಹ್ಮಶಿರಸ್ಸೆಂಬ, ಅಸ್ತ್ರಂ-ಅಸ್ತ್ರವನ್ನು, ಆತ್ಮತ್ರಾಣಂ - ತನಗೆ ರಕ್ಷಕವನ್ನಾಗಿ, ಮೇನೇ-ತಿಳಿದನು ॥ ೧೯ ॥ ಅಥ-ಆಮೇಲೆ, ಸಲಿಲಂ-ನೀರನ್ನು, ಉಪಸ್ಪೃಶ್ಯ-ಆಚಮಿಸಿ, ಸಮಾಹಿತಃ-ಧ್ಯಾನಿಸಿದವನಾಗಿ, ಪ್ರಾಣಕೃಚ್ಛ್ರೇ-ಪ್ರಾಣಾಪತ್ತು, ಉಪಸ್ಥಿತೇ - ಪ್ರಾಪ್ತವಾಗಲು, ಉಪಸಂಹಾರಂ-ಹಿಂದಿರುಗಿಸುವ ಕ್ರಮವನ್ನು, ಅಜಾನನ್ನಪಿ-ತಿಳಿಯದಿದ್ದರೂ, ಅಸ್ತ್ರಂ-ಆಬ್ರಹ್ಮಾಸ್ತ್ರವನ್ನು, ಸಂದಧೇ-ಪ್ರಯೋಗಿಸಿದನು, ॥ ೨೦ ॥ ತತಃ - ಆಅಸ್ತ್ರದಿಂದ, ಪ್ರಚಂಡಂ-ಅತಿಕ್ರೂರವಾಗಿರುವ, ತೇಜಃ-ತೇಜಸ್ಸು, ಸರ್ವತೋದಿಶಂ ಎಲ್ಲದಿಕ್ಕುಗಳಲ್ಲಿಯೂ, ಪ್ರಾದುಷ್ಕೃತಂ-ಹೊರಹೊಮ್ಮಿತು, ಜಿಷ್ಣುಃ-ಜಯಶೀಲನಾದರ್ಜುನನು, (ಆತೇಜಸ್ಸನ್ನೂ) ಪ್ರಾಣಾಪದಂ - ಅದರಿಂದುಂಟಾಗಿರುವ ಪ್ರಾಣಸಂಕಟವನ್ನೂ, ಅಭಿಪ್ರೇಕ್ಷ್ಯ-ನೋಡಿ, ವಿಷ್ಣುಂ-ಶ್ರೀಕೃಷ್ಣಮೂರ್ತಿಯನ್ನುಕುರಿತು, ಉವಾಚ - ಹೇಳಿ

ಹೋದನು ॥೧೮॥ ಬಳಿಕ ಕುದುರೆಗಳು ದಣಿದು ಮುಂದೋಡುವುದಕ್ಕೆ ಕೈಲಾಗದಿರಲು, ತನ್ನನ್ನು ಕಾಪಾಡಲು ಮತ್ತಾವಗತಿಯೂ ಇಲ್ಲವೆಂದು ತಿಳಿದು, ಬ್ರಹ್ಮಾಸ್ತ್ರವೇಶರಣವೆಂದು ನಿಶ್ಚಯಿಸಿದನು॥೧೯॥ಕೂಡಲೇ ಆಚಮನವನ್ನು ಮಾಡಿ ಶುದ್ಧನಾಗಿ ಧ್ಯಾನವನ್ನು ಗೈಯ್ಯುತ್ತಾ ಪ್ರಾಣಸಂಕಟವು ಪ್ರಾಪ್ತವಾದುದರಿಂದ ಆ ಬ್ರಹ್ಮಾಸ್ತ್ರವನ್ನು ಹಿಂದಿರುಗಿಸಿಕೊಳ್ಳುವ ಕ್ರಮವನ್ನರಿಯದಿದ್ದರೂ, ಆ ಅಸ್ತ್ರವನ್ನೇ ಪ್ರಯೋಗಿಸಿದನು॥೨೦॥ಆ ಅಸ್ತ್ರದಿಂದ ಪ್ರಚಂಡವಾದ ತೇಜಸ್ಸುಂಟಾಗಿ ಎಲ್ಲಾ ಕಡೆಗಳಲ್ಲಿಯೂ ತುಂಬಿ ಸಕಲ ಪ್ರಾಣಿಗಳನ್ನೂ ಬಾಧಿಸುತ್ತಾ ಬರಲು, ಆ ತೇಜಸ್ಸನ್ನೂ ಅದರಿಂದುಂಟಾಗಿರುವ ಪ್ರಾಣಸಂಕಟವನ್ನೂ ನೋಡಿ,

* ಪಾ ಅರ್ಕಃ, ಅರ್ಕಿಃ, ಅರ್ಕಃ ‡ ಯಮನು ಶಿವಭಕ್ತನಾದ ಮಾರ್ಕಂಡೇಯನನ್ನು ಬಲಾತ್ಕಾರವಾಗಿ ಪಾಶದಿಂದ ಸೆಳೆದು ಶಿವನಾವಿರ್ಭವಿಸಲು ಓಡಿದನು † ವಿದ್ಯುನ್ಮಾಲಿಯೆಂಬ ರಾಕ್ಷಸನು ತಪಸ್ಸನ್ನು ಮಾಡಿ ರುದ್ರನಿಂದ ಪಡೆದ ಸುವರ್ಣವಿಮಾನದಲ್ಲಿ ಕುಳಿತು, ಸೂರ್ಯನ ಹಿಂದೆಯೇ ಸಂಚರಿಸುತ್ತಾ, ತನ್ನ ವಿಮಾನಕಾಂತಿಯಿಂದ ರಾತ್ರಿಯಾಗದಂತೆ ಮಾಡಿದನು, ಆಗ ಸೂರ್ಯನು ತನ್ನ ಕಿರಣಗಳಿಂದ ಕರಗಿಸಿ ಆ ವಿಮಾನವನ್ನು ಕೆಡಹಿದನು. ಅದನ್ನು ಕೇಳಿ ರುದ್ರನು ಕ್ರುದ್ಧನಾಗಿ ಅಟ್ಟಿಬರಲು, ಸೂರ್ಯನೋಡುತ್ತಾ ಆರುದ್ರನ ಕ್ರೂರ ದೃಷ್ಟಿಯಿಂದ ಸುಟ್ಟುಬಿದ್ದು ಕಾಶೀಕ್ಷೇತ್ರದಲ್ಲಿ ಲೋಲಾರ್ಕನೆಂಬ ಹೆಸರಿನಿಂದ ಜನಿಸಿದನು (ವಾಮನ ಪುರಾಣ)

ದ ಮಭಿಪ್ರೇಕ್ಷ್ಯ ವಿಷ್ಣುಂ ಜಿಷ್ಣುರುವಾಚಹ॥೨೧॥ಕೃಷ್ಣ ಕೃಷ್ಣ ಮಹಾ
ಬಾಹೋ ಭಕ್ತಾನಾ ಮಭಯಂಕರ । ತ್ವ ಮೇಕೋ ದಹ್ಯಮಾನಾನಾ ಮ
ಪವರ್ಗೋಽಸಿ ಸಂಸೃತೇಃ ॥೨೨॥ ತ್ವ ಮಾದ್ಯಃ ಪುರುಷ ಸ್ಸಾಕ್ಷಾ ದೀಶ್ವರಃ
ಪ್ರಕೃತೇಃ ಪರಃ।ಮಾಯಾಂ ವ್ಯುದಸ್ಯ ಚಿಚ್ಛಕ್ತ್ಯಾ ಕೈವಲ್ಯೇ ಸ್ಥಿತ ಆತ್ಮನಿ॥
ಸ ಏವ ಜೀವಲೋಕಸ್ಯ ಮಾಯಾಮೋಹಿತ ಚೇತಸಃ । ವಿಧತ್ಸೇ ಸ್ವೇನ ವೀ
ರ್ಯೇಣ ಶ್ರೇಯೋ ಧರ್ಮಾದಿಲಕ್ಷಣಂ ॥ ೨೪ ॥ ತಥಾಯಂ ಚಾವತಾರ
ಸ್ತೇ ಭುವೋ ಭಾರ ಜಿಹೀರ್ಷಯಾ । ಸ್ವಾನಾಂ ಚಾನನ್ಯಭಾವಾನಾ

ದನು ॥ ೨೧ ॥ ಕೃಷ್ಣ-ಪಾಪಗಳನ್ನು ನಾಶಗೊಳಿಸುವವನೆ ! ಭಕ್ತಾನಾಂ-ಭಕ್ತರಿಗೆ, ಅಭಯಂಕರ-ಅಭಯವನ್ನು ಕೊಡುವವನೆ ! ಮಹಾಬಾಹೋ-ಮಹಾಪರಾಕ್ರಮಶಾಲಿಯೇ ! ಕೃಷ್ಣ-ಎಲೈ ಕೃಷ್ಣನೆ ? ಸಂಸೃತೇಃ-ಸಂಸಾರದುಃಖಗಳಿಂದ, ದಹ್ಯಮಾನಾನಾಂ-ಸುಡಲ್ಪಡುವವರಿಗೆ, ತ್ವಂ-ನೀನು, ಏಕಃ-ಒಬ್ಬನೇ, ಅಪವರ್ಗಃ-ಮೋಚಕನು, ಅಸಿ-ಆಗಿರುವೆ, ॥ ೨೨ ॥ ತ್ವಂ-ನೀನು, ಆದ್ಯಃ-ಎಲ್ಲಕ್ಕೂ ಕಾರಣನಾದ, ಪುರುಷಃ-ಪರಮಪುರುಷನು, ಪ್ರಕೃತೇಃ - ಮೂಲಪ್ರಕೃತಿಗೆ, ಪರಃ-ಅಧಿಷ್ಠಾನವಾದವನಾದುದರಿಂದಲೇ, ಸಾಕ್ಷಾತ್-ನಿರುಪಚಾರನೆನಿಸಿದ, ಈಶ್ವರಃ-ಈಶ್ವರನಾಗಿರುವೆ. ಆದುದರಿಂದಲೇ, ಚಿಚ್ಛಕ್ತ್ಯಾ-ಸ್ವಪ್ರಕಾಶಮಹಿಮೆಯಿಂದ, ಮಾಯಾಂ-ಮಾಯೆಯನ್ನು, ವ್ಯುದಸ್ಯ - ತಿರಸ್ಕರಿಸಿ, ಕೈವಲ್ಯೇ-ನಿರುಪಾಧಿಕವಾದ, ಆತ್ಮನಿ-ಆನಂದಸ್ವರೂಪದಲ್ಲಿ, ಸ್ಥಿತಃ-ಇರುವೆ, ॥ ೨೩ ॥ ಸಏವ-ಮಾಯಾರಹಿತನಾದ ಆ ನೀನೇ ಮಾಯಾಮೋಹಿತಚೇತಸಃ, ಮಾಯಾ - ಮಾಯೆಯಿಂದ, ಮೋಹಿತ - ಮೋಹಗೊಳಿಸಲ್ಪಟ್ಟ, ಚೇತಸಃ-ಬುದ್ಧಿಯುಳ್ಳ, ಜೀವಲೋಕಸ್ಯ-ಪ್ರಾಣಿವರ್ಗಕ್ಕೆ, ಸ್ವೇನ-ನಿನ್ನ, ವೀರ್ಯೇಣ-ಮಹಿಮೆಯಿಂದ, ಧರ್ಮಾದಿಲಕ್ಷಣಂ, ಧರ್ಮ-ಧರ್ಮವೊದಲಾದಪುರುಷಾರ್ಥಗಳೇ, ಲಕ್ಷಣಂ - ಗುರುತಾಗಿಉಳ್ಳ, ಶ್ರೇಯಃ-ಇಷ್ಟಾರ್ಥಗಳನ್ನು, ವಿಧತ್ಸೇ-ಮಾಡುತ್ತೀಯೆ, ಅಥವಾ-ವಿಧತ್ಸ್ವ-ಮಾಡು ॥ ೨೪ ॥ ತಥಾಚ-ಹಾಗೆಯೇ, ಭುವಃ-ಭೂಮಿಯ, ಭಾರಜಿಹೀರ್ಷಯಾ-ಭಾರವನ್ನು ಹೋಗಲಾಡಿಸಲಪೇಕ್ಷೆಯಿಂದ, ಸ್ವಾನಾಂ - ನಿನ್ನಜ್ಞಾತಿಗಳ,

ಅರ್ಜುನನು ಶ್ರೀಕೃಷ್ಣಮೂರ್ತಿಯನ್ನು ಕುರಿತು ಹೇಳಿದನೆಂತೆಂದರೆ ॥ ೨೧ ॥ ಪಾಪಹರನೂ, ಭಕ್ತರ ಭಯವನ್ನು ಹೋಗಲಾಡಿಸುವವನೂ, ಮಹಾಪರಾಕ್ರಮಿಯೂ ಆಗಿರುವ ಕೃಷ್ಣಮೂರ್ತಿಯೇ, ಈ ಸಂಸಾರವೆಂಬ ಕಾಳ್ಕಿಚ್ಚಿನಿಂದ ಬೇಯುತ್ತಿರುವ ಜನರಿಗೆ ಮೋಕ್ಷದಾಯಕನಾದವನು ನೀನೊಬ್ಬನೇ ಅಲ್ಲವೆ ? ॥೨೨॥ ನೀನೆಲ್ಲಕ್ಕೂ ಕಾರಣನಾದವನು, ನೀನು ಮೂಲಪ್ರಕೃತಿಗಧಿಷ್ಠಾನವಾದವನು, ನೀನೇ ಸಾಕ್ಷಾದೀಶ್ವರನು, ಆದುದರಿಂದಲೇ ಸ್ವಪ್ರಕಾಶಮಹಿಮೆಯಿಂದ ಮಾಯೆಯನ್ನು ತಳ್ಳಿದು, ಕೈವಲ್ಯರೂಪದಲ್ಲಿ ರಮಿಸುತ್ತಿರುವೆ ॥೨೩॥ ಅಂತಹ ಮಾಯಾತೀತನಾದ ನೀನೇ ಮಾಯೆಯಿಂದ ಮರುಳಾಗಿರುವ ಪ್ರಾಣಿವರ್ಗಕ್ಕೆ, ನಿನ್ನ ಮಹಿಮೆಯಿಂದ ಧರ್ಮಾರ್ಥಕಾಮಮೋಕ್ಷಗಳೆಂಬ ಇಷ್ಟಾರ್ಥಗಳನ್ನು, ಅವರವರ ಇಚ್ಛಾನುಸಾರವಾಗಿ ಸಲಿಸುತ್ತಿರುವೆ॥೨೪ ಮತ್ತು ಈ ನಿನ್ನ ಅವತಾರವೆಂಬುದು ಭೂಭಾರವನ್ನು ಕಳೆಯುವುದಕ್ಕಾಗಿಯೂ,

ಮನು ಧ್ಯಾನಾಯ ಚಾ ಸಕೃತ್॥೨೫॥ಕಿಮಿದಂ ಸ್ವಿತ್ಕುತೋ ವೇತಿ ದೇವ
ದೇವ ನವೇದ್ಮ್ಯಹಂ । ಸರ್ವತೋಮುಖ ಮಾಯಾತಿ ತೇಜಃ ಪರಮದಾರು
ಣಂ ॥೨೬॥ ಶ್ರೀ ಭಗವಾನ್ ॥ ವೇತ್ಥೇದಂ ದ್ರೋಣಪುತ್ರಸ್ಯ ಬ್ರಾಹ್ಮಮ
ಸ್ತ್ರಂ ಪ್ರದರ್ಶಿತಂ । ನೈವಾಸೌ ವೇದ ಸಂಹಾರಂ ಪ್ರಾಣಬಾಧ ಉಪಸ್ಥಿತೇ॥
ನಹ್ಯಸ್ಯಾನ್ಯತಮಂ ಕಿಂಚಿ ದಸ್ತ್ರಂ * ಪ್ರತ್ಯವಕರ್ಶನಂ । ಜಹ್ಯಸ್ತ್ರತೇಜ
ಉನ್ನದ್ಧ ಮಸ್ತ್ರಜ್ಞೋಹ್ಯ ‡ಸ್ಯಸ್ತ್ರತೇಜಸಾ ॥೨೮॥ ಶ್ರೀಸೂತಃ ॥ ಶ್ರುತ್ವಾ

ಅನನ್ಯಭಾವಾನಾಂ, ಅನನ್ಯ-ಮತ್ತೊಬ್ಬರನ್ನು ಆಶ್ರಯಿಸದಿರುವ,ಭಾವಾನಾಂ-ಬುದ್ಧಿಯುಳ್ಳಭಕ್ತರಿಗೆ, ಅಸಕೃತ್-ಬಾರಿಬಾರಿಗೂ, ಅನುಧ್ಯಾನಾಯಚ - ಧ್ಯಾನಕ್ಕಾಗಿಯೂ, ತೇ-ನಿನ್ನ, ಅಯಂ - ಈ, ಅವತಾರಃ-ಅವತಾರವು ॥ ೨೫ ॥ ದೇವದೇವ-ದೇವತೆಗಳಿಗೆದೇವನಾದ ಎಲೈಕೃಷ್ಣನೇ! ಪರಮದಾರುಣಂ-ಪರಮ-ಅತ್ಯಂತವಾಗಿ, ದಾರುಣಂ-ಕ್ರೂರವಾದ, ತೇಜಃ ತೇಜಸ್ಸು, ಸರ್ವತೋಮುಖಂ-ಎಲ್ಲಾಕಡೆಗಳಲ್ಲಿಯೂ ಆಯಾತಿ-ಬರುತ್ತಿದೆ, ಇದಂ-ಈ ತೇಜಸ್ಸು ಕಿಂ-ಯಾವುದೋ, ಕುತಃ - ಎಲ್ಲಿಂದಬರುವುದೋ, ಇತಿ-ಈ ಸಂಗತಿಯನ್ನು, ಅಹಂ-ನಾನು, ನವೇದ್ಮಿ-ತಿಳಿಯುವುದಿಲ್ಲ, ॥ ೨೬ ॥ ಶ್ರೀ ಭಗವಾನ್ - ಭಗವಂತನು ಹೇಳುತ್ತಾನೆ, ಇದಂ-ಇದು, ದ್ರೋಣಪುತ್ರಸ್ಯ-ಅಶ್ವತ್ಥಾಮನ, ಬ್ರಾಹ್ಮಂ - ಬ್ರಹ್ಮಶಿರಸ್ಸೆಂಬ, ಅಸ್ತ್ರಂ-ಅಸ್ತ್ರವು, ಅಸೌ-ಇವನು, ಸಂಹಾರಂ-ಉಪಸಂಹಾರವನ್ನು, ನೈವವೇದ - ತಿಳಿದಿರುವದೇಇಲ್ಲ, ಪ್ರಾಣಬಾಧೇ-ಪ್ರಾಣಸಂಕಟವು, ಉಪಸ್ಥಿತೇ-ಪ್ರಾಪ್ತವಾಗಲು, ಪ್ರದರ್ಶಿತಂ-ಪ್ರಯೋಗಿಸಲ್ಪಟ್ಟಿತು, ಇತಿ-ಇದೆಲ್ಲವನ್ನೂ, ವೇತ್ಥ-ತಿಳಿ ॥ ೨೭ ॥ ಅಸ್ಯ-ಈ ಅಸ್ತ್ರವನ್ನು, ಪ್ರತ್ಯವಕರ್ಶನಂ-ಬಲಗುಂದಿಸುವ, ಅನ್ಯತಮಂ-ಮತ್ತೊಂದು, ಅಸ್ತ್ರಂ-ಅಸ್ತ್ರವು ಕಿಂಚಿತ್-ಯಾವುದೊಂದೂ, ನಹಿ-ಇಲ್ಲವಷ್ಟೆ, ತ್ವಂ-ನೀನು, ಅಸ್ತ್ರಜ್ಞಃ -ಅಸ್ತ್ರಪ್ರಯೋಗವನ್ನು ತಿಳಿದವನು, ಅಸಿ-ಆಗಿರುವೆ, ಆದುದರಿಂದ, ಉನ್ನದ್ಧಂ-ಉಗ್ಗಡಿಸಿರುವ, ಅಸ್ತ್ರತೇಜಃ-ಅಸ್ತ್ರದತೇಜಸ್ಸನ್ನು, ಅಸ್ತ್ರತೇಜಸಾ-ನಿನ್ನ ಅಸ್ತ್ರದ ತೇಜಸ್ಸಿನಿಂದ, ಜಹಿ-ಜಯಿಸು ॥ ೨೮ ॥ ಶ್ರೀ ಸೂತಃ-ಸೂತನು ಹೇಳುತ್ತಾನೆ, ಪರವೀರಹಾ, ಪರ - ಶತ್ರುಗಳಾದ, ವೀರ-

ನಿನ್ನ ಬಂಧುಗಳೂ ಮತ್ತು ಏಕಾಂತ ಭಕ್ತರೂ ಬಾರಿಬಾರಿಗೂ ಧ್ಯಾನಿಸುವುದಕ್ಕಾಗಿಯೂ ಉಂಟಾಗಿರುವುದೇ ಹೊರತು ಮತ್ತೆ ಬೇರೆ ಅಲ್ಲ. ॥೨೫॥ಎಲೈ ದೇವದೇವನೆ? ಅತ್ಯಂತ ಕ್ರೂರವಾದ ಈ ತೇಜಸ್ಸು ಎಲ್ಲ ಕಡೆಗಳಲ್ಲಿಯೂ ಹಬ್ಬಿಕೊಂಡು ಬರುತ್ತಿದೆ. ಇದು ಯಾವುದೋ ? ಎಲ್ಲಿಂದ ಬರುವುದೋ ? ನಾನರಿಯೆನು ॥೨೬॥ ಎನಲು ಶ್ರೀಕೃಷ್ಣನು —ಅಯ್ಯಾ ಈ ತೇಜಸ್ಸು ದ್ರೋಣನಮಗನಾದ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದುಂಟಾಗಿರುವುದೆಂದು ತಿಳಿ. ಅವನು ಆ ಅಸ್ತ್ರವನ್ನು ಹಿಂದಿರುಗಿಸಿಕೊಳ್ಳಲಾರನು, ಆದರೂ ಪ್ರಾಣಸಂಕಟವು ಪ್ರಾಪ್ತವಾದುದರಿಂದ ಇದನ್ನು ಪ್ರಯೋಗಿಸಿದನು ॥೨೭॥ ಈ ಅಸ್ತ್ರವನ್ನು ಹಿಂದಿರುಗಿಸುವುದಕ್ಕೆ ಮತ್ತಾವ ಅಸ್ತ್ರವೂ ಸಮರ್ಥವಲ್ಲ.ನೀನು ಸಕಲಾಸ್ತ್ರಗಳ ಪ್ರಯೋಗಾದಿಗಳನ್ನೂ ಚೆನ್ನಾಗಿಬಲ್ಲವನಾದುದರಿಂದ, ನಿನ್ನ ಬ್ರಹ್ಮಾಸ್ತ್ರದ ತೇಜಸ್ಸಿನಿಂದಲೇ ಇದನ್ನು ಶಾಂತಿಗೊಳಿಸು. ॥೨೮॥ ಎಂದು ಹೇಳಲು, ಶತ್ರುಸಂಹಾರಕ

* ಪಾ-ಪ್ರತ್ಯವಕರ್ಷಣಂ. ‡ ಪಾ-ಹ್ಯಸ್ತ್ರ.

ಭಗವತಾ ಪ್ರೋಕ್ತಂ * ಫಲ್ಗುನಃ ಪರವೀರಹಾ। ಸ್ಪೃಷ್ಟ್ವಾಪಸ್ತಂ ಪರಿಕ್ರಮ್ಯ ಬ್ರಾಹ್ಮಂ ಬ್ರಾಹ್ಮಾಯ ಸಂದಧೇ ॥೨೯॥ ಸಂಹತ್ಯಾನ್ಯೋನ್ಯ ಮುಭಯೋ ಸ್ತೇಜಸೀ ಶರಸಂವೃತೇ। ಆವೃತ್ಯ ರೋದಸೀ ಖಂಚ ವವೃಧಾತೇರ್ಕವಹ್ನಿವತ್ ॥೩೦॥ ದೃಷ್ಟ್ವಾಸ್ತ್ರತೇಜಸ್ತು ತಯೋ ಸ್ತ್ರೀನ್ ಲೋಕಾನ್ ಪ್ರದಹ ನ್ಮಹತ್ । ದಹ್ಯಮಾನಾಃ ಪ್ರಜಾಸ್ಸರ್ವಾ ಸ್ಸಾಂವರ್ತಕ ಮಮಂಸತ ॥೩೧॥ ಪ್ರಜೋ¶ಪದ್ರವಮಾಲೋಕ್ಯ ಲೋಕವ್ಯತಿಕರಂ ಚ ತಂ । ಮತಂಚ ವಾಸುದೇವಸ್ಯ ಸಂಜಹಾರಾರ್ಜುನೋ ದ್ವಯಂ ॥೩೨॥ ತತ ಆಸಾ

ಶೂರರನ್ನು, ಹಾ-ಸಂಹರಿಸುವ, ಫಲ್ಗುನಃ(೧)-ಅರ್ಜುನನು, ಭಗವತಾ - ಭಗವಂತನಿಂದ, ಪ್ರೋಕ್ತಂ-ಹೇಳಲ್ಪಟ್ಟುದನ್ನು, ಶ್ರುತ್ವಾ-ಕೇಳಿ, ಅಪಃ-ನೀರನ್ನು, ಸ್ಪೃಷ್ಟ್ವಾ-ಆಚಮನಮಾಡಿ, ತಂ-ಆಕೃಷ್ಣನನ್ನು ಪರಿಕ್ರಮ್ಯ-ಪ್ರದಕ್ಷಿಣಮಾಡಿ, ಬ್ರಾಹ್ಮಾಯ ಅಶ್ವತ್ಥಾಮನಬ್ರಹ್ಮಾಸ್ತ್ರವನ್ನು ಹಿಂದಿರುಗಿಸುವುದಕ್ಕಾಗಿ, ಬ್ರಾಹ್ಮಂ-ಬ್ರಹ್ಮಾಸ್ತ್ರವನ್ನು, ಸಂದಧೇ-ಪ್ರಯೋಗಿಸಿದನು ॥ ೨೯ ॥ ಉಭಯೋಃ - ಎರಡು ಬ್ರಹ್ಮಾಸ್ತ್ರಗಳ, ತೇಜಸೀ-ಜ್ವಾಲೆಗಳು, ಶರಸಂವೃತೇ, ಶರ-ಬಾಣಗಳಿಂದ, ಸಂವೃತೇ-ಬಳಸಲ್ಪಟ್ಟುವುಗಳಾಗಿ, ಅನ್ಯೋನ್ಯಂ-ಒಂದಕ್ಕೊಂದು, ಸಂಹತ್ಯ-ಹೊಡೆದಾಡಿ, ರೋದಸೀ-ಭೂಲೋಕ ಸ್ವರ್ಗಲೋಕಗಳನ್ನೂ, ಖಂಚ-ಅಂತರಿಕ್ಷವನ್ನೂ, ಆವೃತ್ಯ-ಹಬ್ಬಿಕೊಂಡು, ಅರ್ಕವಹ್ನಿವತ್, ಅರ್ಕ-ಸೂರ್ಯನು, ವಹ್ನಿ-ಪ್ರಳಯಾಗ್ನಿಯು, ವತ್-ಇವರಂತೆ, ವವೃಧಾತೇ-ಬೆಳೆಯುತ್ತಾ ಬಂದುವು ॥೩೦॥ ತ್ರೀನ್-ಮೂರಾದ, ಲೋಕಾನ್-ಲೋಕಗಳನ್ನು, ಪ್ರದಹತ್ - ಸುಡುತ್ತಿರುವ, ಮಹತ್ - ವಿಜೃಂಭಿಸುತ್ತಿರುವ, ತಯೋಃ-ಆ ಅಶ್ವತ್ಥಾಮಾರ್ಜುನರ, ಅಸ್ತ್ರತೇಜಃ-ಅಸ್ತ್ರಗಳ ಹಾವಳಿಯನ್ನು, ದೃಷ್ಟ್ವಾ-ಕಂಡು, ಸರ್ವಾಃ-ಎಲ್ಲಾ, ಪ್ರಜಾಃ-ಪ್ರಜೆಗಳು, ದಹ್ಯಮಾನಾಃ-ಸುಡಲ್ಪಟ್ಟವರಾಗಿ, ಸಾಂವರ್ತಕಂ-ಪ್ರಳಯಾಗ್ನಿಯನ್ನಾಗಿ, ಅಮಂಸತ-ತಿಳಿದರು ॥೩೧॥ ಅರ್ಜುನಃ-ಅರ್ಜುನನು, ಲೋಕವ್ಯತಿಕರಂ, ಲೋಕ-ಜಗತ್ತನ್ನು, ವ್ಯತಿಕರಂ-ತಲೆಕೆಳಗುಮಾಡುವ, ಪ್ರಜೋಪದ್ರವಂ-ಪ್ರಜೆಗಳ ಉಪದ್ರವವನ್ನೂ, ಲೋಕವ್ಯತಿಕರಂ - ಲೋಕವು ಹಾಳಾಗುತ್ತಿರುವುದನ್ನೂ, ವಾಸುದೇವಸ್ಯ - ಶ್ರೀಕೃಷ್ಣನ, ಮತಂಚ - ಅಭಿಪ್ರಾಯವನ್ನೂ, ಆಲೋಕ್ಯ-ನೋಡಿ, ದ್ವಯಂ - ಎರಡಸ್ತ್ರಗಳನ್ನೂ, ಸಂಜಹಾರ - ಹಿಂದಕ್ಕೆ ತೆಗೆದುಕೊಂಡನು ॥ ೩೨ ॥ ತತಃ - ಆ ಬಳಿಕ

ನಾದ ಅರ್ಜುನನು ಶ್ರೀ ಕೃಷ್ಣನ ನುಡಿಗಳನ್ನುಕೇಳಿ, ಆಚಮನವನ್ನುಮಾಡಿ ಪರಿಶುದ್ಧನಾಗಿ ಆ ಕೃಷ್ಣನನ್ನು ಪ್ರದಕ್ಷಿಣಮಾಡಿ, ಆ ಅಶ್ವತ್ಥಾಮನ ಬ್ರಹ್ಮಾಸ್ತ್ರವನ್ನು ನಿಗ್ರಹಿಸುವುದಕ್ಕಾಗಿ ತಾನೂ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು ॥೨೯॥ ಆ ಎರಡು ಬ್ರಹ್ಮಾಸ್ತ್ರಗಳ ತೇಜಸ್ಸುಗಳೂ ಬಾಣಗಳಿಂದ ವ್ಯಾಪ್ತಗಳಾಗಿ ಒಂದಕ್ಕೊಂದುಹೊಡೆದಾಡುತ್ತಾ, ಭೂಮ್ಯಂತರಿಕ್ಷಗಳನ್ನೂ, ಸ್ವರ್ಗಲೋಕವನ್ನೂ ಬಳಸಿಕೊಂಡು, ಪ್ರಳಯದಲ್ಲಿ ಸಂಕರ್ಷಣನ ಮುಖದಲ್ಲುದಯಿಸುವ ಅಗ್ನಿಯೂ, ಸೂರ್ಯನೂ ಬೆಳೆಯುವಂತೆ ಹಬ್ಬುತ್ತಾ ಬಂದುವು॥೩೦॥ ಆಗ ಆತೇಜಸ್ಸುಗಳಿಂದ ಸುಡಲ್ಪಡುತ್ತಿರುವ ಪ್ರಜೆಗಳು, ಮೂರುಲೋಕಗಳನ್ನೂ ಬಳಸುತ್ತಿರುವ ಆ ತೇಜಸ್ಸುಗಳನ್ನು ಕಂಡು ಪ್ರಳಯಾಗ್ನಿಯೆಂದು ತಿಳಿದರು॥೩೧॥ ಬಳಿಕ ಅರ್ಜುನನು ಪ್ರಜೆಗಳಿಗುಂಟಾಗಿರುವ ಉಪದ್ರವವನ್ನೂ ಲೋಕವುಹಾಳಾಗುತ್ತಿರುವುದನ್ನೂ, ಶ್ರೀ ಕೃಷ್ಣನ ಅಭಿಪ್ರಾಯವನ್ನೂ ತಿಳಿದು, ಆ ಎರಡಸ್ತ್ರಗಳನ್ನೂ ಉಪಸಂಹಾರ ಮಾಡಿದನು॥೩೨॥

* ಫಲ್ಗುನೀನಕ್ಷತ್ರದಲ್ಲಿ ಹುಟ್ಟಿದುದರಿಂದೀಹೆಸರು ಬಂತು, ಪಾ-ಫಾಲ್ಗುನಃ ¶ ಪಾ-ಪಪ್ಲವ.

ದ್ಯ ತರಸಾ ದಾರುಣಂ ಗೌತಮೀಸುತಂ । ಬಬಂಧಾಮರ್ಷತಾಮ್ರಾಕ್ಷಃ ಪಶುಂ ರಶನಯಾ ಯಥಾ ॥೩೩॥ ಶಿಬಿರಾಯ ನಿನೀಷಂತಂ ಬಧ್ವಾರಜ್ವಾ ರಿಪುಂ ಬಲಾತ್ । ಪ್ರಾಹಾರ್ಜುನಂ ಪ್ರಕುಪಿತೋ ಭಗವಾ ನಂಬುಜೇಕ್ಷಣಃ ॥೩೪॥ ಮೈನಂ ಪಾರ್ಥಾರ್ಹಸಿ ತ್ರಾತುಂ ಬ್ರಹ್ಮಬಂಧು ಮಿಮಂ ಜಹಿ । ಯೋಽಸಾ ವನಾಗಸ ಸ್ಸುಪ್ತಾ ನವಧೀ ನ್ನಿಶಿ ಬಾಲಕಾನ್ ॥೩೫॥ ಮತ್ತಂ ಪ್ರಮತ್ತ ಮುನ್ಮತ್ತಂ ಸುಪ್ತಂ ಬಾಲಂ ಜಡಂ ಸ್ತ್ರಿಯಂ । ಪಸನ್ನಂ ವಿರಥಂ ಭೀತಂ ನರಿಪುಂ ಹಂತಿ ಧರ್ಮವಿತ್ ॥೩೬॥ ಸ್ವಪ್ರಾಣಾನ್ ಯಃ ಪರಪ್ರಾಣೈಃ

ದಾರುಣಂ-ಕ್ರೂರನಾದ, ಗೌತಮೀಸುತಂ, ಗೌತಮೀ-ಗೌತಮ ಕುಲದಲ್ಲಿ ಹುಟ್ಟಿದ ಕೃಪಿಯ, ಸುತಂ-ಮಗನಾದ ಅಶ್ವತ್ಥಾಮನನ್ನು, ತರಸಾ-ಬೇಗನೆ, ಆಸಾದ್ಯ-ಹಿಡಿದು, ಅಮರ್ಷತಾಮ್ರಾಕ್ಷಃ, ಅಮರ್ಷ-ಕೋಪದಿಂದ, ತಾಮ್ರ-ಕೆಂಪಾದ, ಅಕ್ಷಃ-ಕಣ್ಣುಳ್ಳವನಾಗಿ, ರಶನಯಾ-ಹಗ್ಗದಿಂದ, ಪಶುಂಯಥಾ-ಪಶುವನ್ನು ಕಟ್ಟುವಂತೆ, ಬಬಂಧ-ಕಟ್ಟಿದನು ॥೩೩॥ ರಿಪುಂ-ಶತ್ರುವನ್ನು, ಬಲಾತ್-ಬಲಾತ್ಕಾರದಿಂದ ರಜ್ವಾ-ಹಗ್ಗದಿಂದ, ಬಧ್ವಾ-ಕಟ್ಟಿ, ಶಿಬಿರಾಯ-ಪಾಳಯಕ್ಕೆ, ನಿನೀಷಂತಂ-ತೆಗೆದುಕೊಂಡು ಹೋಗಬೇಕೆಂದಿರುವ, ಅರ್ಜುನಂ-ಅರ್ಜುನನನ್ನು ಕುರಿತು, ಭಗವಾನ್-ಸರ್ವಜ್ಞನಾದ, ಅಂಬುಜೇಕ್ಷಣಃ-ಕಮಲಗಳಂತೆ ಕಣ್ಣುಳ್ಳ ಕೃಷ್ಣನು, ಪ್ರಕುಪಿತಇವ-ಕೋಪಗೊಂಡವನಂತೆ, ಆಹ-ಹೇಳುತ್ತಾನೆ ॥೩೪॥ ಹೇ ಪಾರ್ಥ-ಎಲೈ ಅರ್ಜುನನೇ, ಯೋಽಸೌ-ಯಾವ ಇವನು, ಅನಾಗಸಃ-ನಿರಪರಾಧಿಗಳಾದ, ಸುಪ್ತಾನ್-ನಿದ್ದೆ ಮಾಡುತ್ತಿದ್ದ, ಬಾಲಕಾನ್-ಮಕ್ಕಳನ್ನು, ನಿಶಿ-ರಾತ್ರಿಕಾಲದಲ್ಲಿ,ಅವಧೀತ್-ಸಂಹರಿಸಿದನೋ, ಏನಂ-ಅಂತಹ ಈ, ಬ್ರಹ್ಮಬಂಧುಂ-ಬ್ರಾಹ್ಮಣಾಧಮನನ್ನು, ತ್ರಾತುಂ-ಕಾಪಾಡುವುದಕ್ಕೆ, ನಾರ್ಹಸಿ-ಅರ್ಹನಾಗುವುದಿಲ್ಲ. ಇಮಂ-ಇವನನ್ನು, ಜಹಿ-ಕೊಲ್ಲು ॥೩೫॥ ಧರ್ಮವಿತ್-ಧರ್ಮಗಳನ್ನು ಬಲ್ಲವನು, ಮತ್ತಂ-ಮದ್ಯಾದಿಗಳಿಂದ ಮದಿಸಿದವನನ್ನೂ, ಪ್ರಮತ್ತಂ-ಅಜಾಗರೂಕನನ್ನೂ, ಅಥವಾ ರೋಗಾದಿಗಳಿಂದ ಮರುಳಾದವನನ್ನೂ, ಉನ್ಮತ್ತಂ-ಪಿಶಾಚ ಪ್ರಾರಬ್ಧಾದಿಗಳಿಂದ ಮೈಮರೆತವನನ್ನೂ, ಅಥವಾ ಹುಟ್ಟುಮರುಳನನ್ನೂ, ಸುಪ್ತಂ-ನಿದ್ದೆಮಾಡುವವನನ್ನೂ ಬಾಲಂ-ಹುಡುಗನನ್ನೂ, ಜಡಂ-ವಿವೇಕವಿಲ್ಲದವನನ್ನೂ, ಸ್ತ್ರಿಯಂ-ಹೆಂಗಸನ್ನೂ, ಪ್ರಸನ್ನಂ-ಮರೆಬಿದ್ದವನನ್ನೂ, ವಿರಥಂ-ರಥವನ್ನು ಕಳೆದುಕೊಂಡವನನ್ನೂ, ಭೀತಂ-ಭಯಗೊಂಡವನನ್ನೂ, ರಿಪುಂ-ಮೇಲೆಹೇಳಿದ ಶತ್ರುಗಳನ್ನು, ನಹಂತಿ-ಕೊಲ್ಲುವುದಿಲ್ಲ ॥೩೬॥ ಅಘೃಣಃ-ಕಟುಕನಾದ,

---

ಅನಂತರದಲ್ಲಿ ಅರ್ಜುನನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಕ್ರೂರಕೃತ್ಯವನ್ನು ಮಾಡಿದ ಕೃಪೀದೇವಿಯ ಮಗನಾದ ಆ ಅಶ್ವತ್ಥಾಮನನ್ನು ಬೇಗನೆಹಿಡಿದು, ಯಾಜ್ಞಿಕನು ಹಗ್ಗದಿಂದ ಪಶುವನ್ನು ಬಿಗಿಯುವಂತೆ ಅವನನ್ನು ಕಟ್ಟಿದನು ॥೩೩॥ ಇಂತು ಕಟ್ಟಿ ತನ್ನ ಪಾಳಯಕ್ಕೆ ತೆಗೆದುಕೊಂಡು ಹೋಗಬೇಕೆಂದು ಬಯಸುತ್ತಿರುವ ಅರ್ಜುನನ ಧರ್ಮಗುಣವನ್ನು ಪ್ರಸಿದ್ಧಗೊಳಿಸುವುದಕ್ಕಾಗಿ ಶ್ರೀಕೃಷ್ಣಮೂರ್ತಿಯು, ಕೋಪಗೊಂಡವನಂತೆ ಅವನಿಗೆ ಹೇಳಿದನು ॥೩೪॥ ಅಯ್ಯಾ ಅರ್ಜುನನೇ ! ಇವನು ನಿರಪರಾಧಿಗಳಾಗಿ ನಿದ್ರೆಮಾಡುತ್ತಿದ್ದ ಹಸುಳೆಗಳನ್ನು ರಾತ್ರಿಯಲ್ಲಿ ಕೊಂದಿರುವನಾದುದರಿಂದ ಈ ಬ್ರಾಹ್ಮಣಾಧಮನನ್ನು ಕಾಪಾಡಬೇಡ. ಈಗಲೇ ಇವನನ್ನುಕೊಲ್ಲು ॥ ೩೫ ॥ ಧರ್ಮಿಷ್ಠನಾದವನು, ಮದ್ಯವನ್ನು ಕುಡಿದು ಮತ್ತನಾದವನನ್ನೂ, ರೋಗಪೀಡಿತನನ್ನೂ, ಗ್ರಹಗ್ರಸ್ತನನ್ನೂ, ನಿದ್ದೆಮಾಡುವವನನ್ನೂ, ಬಾಲಕರನ್ನೂ, ತಿಳಿವಳಿಕೆಯಿಲ್ಲದವರನ್ನೂ,

ಪ್ರಪುಷ್ಣಾತ್ಯಘೃಣಃ ಖಲಃ। ತದ್ವಧಸ್ತಸ್ಯ ಹಿ * ಶ್ರೇಯೋ ಯದ್ದೋಷಾದ್ಯಾ
ತ್ಯಧಃ ಪುಮಾನ್ ॥೩೭॥ ‡ ಪ್ರತಿಶ್ರುತಂ ಚ ಭವತಾ ಪಾಂಚಾಲ್ಯೈ ಶೃಣ್ವ
ತೋ ಮಮ। ಆಹರಿಷ್ಯೇ ಶಿರಸ್ತಸ್ಯ ಯಸ್ತೇ ಮಾನಿನಿ ಪುತ್ರಹಾ ॥೩೮॥
ತದಸೌ ವಧ್ಯತಾಂ ಪಾಪ ಆತತಾಯ್ಯಾತ್ಮಬಂಧುಹಾ। ಭರ್ತುಶ್ಚ ವಿಪ್ರಿಯಂ
ವೀರ ಕೃತವಾನ್ ಕುಲಪಾಂಸನಃ ॥೩೯॥ ಏವಂ ಪರೀಕ್ಷತಾ ಧರ್ಮಂ

ಖಲಃ-ನೀಚನಾದ, ಯಃ-ಯಾವನು, ಪರಪ್ರಾಣೈಃ - ಇತರರಪ್ರಾಣಗಳಿಂದ, ಸ್ವಪ್ರಾಣಾನ್-ತನ್ನಪ್ರಾಣಗಳನ್ನು, ಪ್ರಪುಷ್ಣಾತಿ, ಕಾಪಾಡುತ್ತಾನೋ, ತದ್ವಧಃ - ತತ್-ಅವನ, ವಧಃ - ಸಂಹಾರವು, ತಸ್ಯ-ಅವನಿಗೆ, ಶ್ರೇಯಃ-ಒಳ್ಳೆಯದಪ್ಪ, ಪುಮಾನ್-ಪುರುಷನು, ತಕ್ಕಶಿಕ್ಷೆಯನ್ನುಪಡೆಯದ, ಯತ್-ಯಾವ, ದೋಷಾತ್-ಪಾಪದಿಂದ, ಅಧಃ-ನರಕವನ್ನು, ಯಾತಿ-ಹೊಂದುತ್ತಾನೋ ॥ ೩೭ ॥ ಮಮ - ನಾನು, ಶೃಣ್ವತಃ-ಕೇಳುತ್ತಿರುವಾಗ, ಹೇಮಾನಿನಿ-ಎಲೌಮಾನವತಿಯೆ, ಯಃ-ಯಾವನು, ತೇ-ನಿನ್ನ, ಪುತ್ರಹಾ-ಮಕ್ಕಳನ್ನ ಕೊಂದವನೋ, ತಸ್ಯ-ಅವನ, ಶಿರಃ-ತಲೆಯನ್ನು, ಆಹರಿಷ್ಯೇ-ತರುವೆನು, ಎಂದು, ಭವತಾ-ನಿನ್ನಿಂದ, ಪಾಂಚಾಲ್ಯೈ-ದ್ರೌಪದಿಗೆ, ಪ್ರತಿಶ್ರುತಂಚ-ಪ್ರತಿಜ್ಞೆಯೂ ಮಾಡಲ್ಪಟ್ಟಿತು ॥ ೩೮ ॥ ಹೇವೀರ ಎಲೈಶೂರನೆ, ಆತತಾಯಿ-ಕೊಲೆಗೇಡಿಯಾದ, ಆತ್ಮಬಂಧುಹಾ, ಆತ್ಮ-ನಿನ್ನ, ಬಂಧು-ಮಕ್ಕಳನ್ನು, ಅಥವಾ ಬಂಧುವಾದವನನ್ನು, ಹಾ-ಸಂಹರಿಸಿದ, ಕುಲಪಾಂಸನಃ-ಕುಲಗೇಡಿಯಾದ ಇವನು,ಭರ್ತುಶ್ಚ-ದಣಿಯಾದ ದುರ್ಯೋಧನನಿಗೂ, ವಿಪ್ರಿಯಂ-ಅನಿಷ್ಟವನ್ನು, ಕೃತವಾನ್-ಮಾಡಿದನು, ತತ್-ಆದುದರಿಂದ, ಪಾಪಃ-ಪಾಪಿಷ್ಠನಾದ, ಅಸೌ-ಇವನು, ವಧ್ಯತಾಂ-ಕೊಲ್ಲಲ್ಪಡಲಿ, ॥ ೩೯ ॥ ಏವಂ-ಹೀಗೆ, ಧರ್ಮಂ-ಧರ್ಮಗುಣವನ್ನು, ಪರೀಕ್ಷತಾ-ಪರೀಕ್ಷಿಸುವ, ಕೃಷ್ಣೇನ-ಕೃಷ್ಣನಿಂದ, ಚೋದಿತಃ - ಪ್ರೇರಿಸ

ರಥವಿಲ್ಲದವರನ್ನೂ,ಹೆದರಿ ಓಡುವವರನ್ನೂ,ಇಂತಹ ಶತ್ರುಗಳನ್ನು ಕೊಲ್ಲುವುದಿಲ್ಲ॥೩೬॥ಈಗ ಅಶ್ವತ್ಥಾಮನು ಹೆದರಿದ್ದರೂ,ಮಲಗಿದ್ದ ಮಕ್ಕಳನ್ನು ಕೊಂದ ಎರಡು ಪಾಪಗಳಿಗೆ ಗುರಿಯಾಗಿರುವುದರಿಂದ ಇವನನ್ನು ಕೊಲ್ಲಬಹುದು,ಯಾರಾದರೆ ಇತರರನ್ನು ಕೊಂದು ತಮ್ಮ ಪ್ರಾಣಗಳನ್ನು ಪೋಷಿಸುವರೋ,ಅಂತಹ ಕಟುಕರಾದ ನೀಚರಿಗೆ ಪ್ರಾಣಾಂತವಾದ ದಂಡವನ್ನ ಮಾಡದೆ ಹೋದರೆ ಆ ಪಾಪಿಗಳು ಆ ಪಾಪದಿಂದ ನರಕವನ್ನು ಪಡೆಯುವರು,ಆದುದರಿಂದ ಅವರ ಕ್ಷೇಮಕ್ಕಾಗಿಯೇ ಅವರನ್ನು ಕೊಲ್ಲಬೇಕು.॥೩೭॥ಅಯ್ಯಾ ಶೂರನಾದ ಅರ್ಜುನನೆ! ನಾನು ಕೇಳುತ್ತಿರುವಂತೆಯೇ ನೀನಿಲ್ಲಿಗೆ ಬರುವಾಗ ದ್ರೌಪದಿಯನ್ನು ಕುರಿತು, “ ಎಲೌ ಮಾನವತಿಯೆ?ನಿನ್ನ ಪುತ್ರರನ್ನು ಕೊಂದವನ ತಲೆಯನ್ನು ಈಗಲೇ ತರುವೆನು ” ಎಂದು ವಾಗ್ದಾನವನ್ನೂ ಮಾಡಿರುವೆ ॥ ೩೮ ॥ ಆದುದರಿಂದ ಕೊಲೆಪಾತಕನಾಗಿಯೂ, ಮನೆಹಾಳನಾಗಿಯೂ, ಸ್ವಾಮಿ ದ್ರೋಹಿಯಾಗಿಯೂ, ಇರುವ ಈ ಪಾಪಿಯನ್ನು ಕೊಲ್ಲು॥೩೯॥ಎಂದು ಶ್ರೀ ಕೃಷ್ಣನು ಎಷ್ಟು ಪ್ರೇರಿಸಿದರೂ, ಮಹಾತ್ಮನಾದ ಅರ್ಜುನನು,

* ಸ್ಮೃತಿ:—ರಾಜಭಿರ್ಧೃತದಂಡಾಸ್ತು ಕೃತ್ವಾ ಪಾಪಾನಿ ಮಾನವಾಃ। ನಿರ್ಧೂತಕಲ್ಮಷಾ ಯಾಂತಿ ಸ್ವರ್ಗಂ ಸುಕೃತಿನೋ ಯಥಾ ॥ ರಾಜರಿಂದಶಿಕ್ಷಿಸಲ್ಪಟ್ಟ ಪಾಪಿಗಳು ತಮ್ಮ ಪಾಪಗಳನ್ನು ಕಳೆದುಕೊಂಡು ಪುಣ್ಯವಂತರಂತೆಯೇ ಸದ್ಗತಿಯನ್ನು ಪಡೆಯುವರು ‡ ಅ೭-ಶ್ಲೋ ೧೬ § (ಗೀತಾ)ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ।

ಪಾರ್ಥಃ ಕೃಷ್ಣೇನ ಚೋದಿತಃ । ನೈಚ್ಛದ್ಗುರುಸುತಂ ಹಂತುಂ ಯದ್ಯ†ಪ್ಯಾತ್ಮಹನಂ ಮಹಾನ್ ॥ ೪೦ ॥ತತೋ ಭ್ಯೇತ್ಯ ಸ್ವಶಿಬಿರಂ ಗೋವಿಂದಪ್ರಿಯಸಾರಥಿಃ । ನ್ಯವೇದಯತ್ತಂ * ಪ್ರಿಯಾಯೈಶೋಚಂತ್ಯಾ ಆತ್ಮಜಾನ್ ಹತಾನ್ ॥ ೪೧ ॥ ತಥಾ ಹೃತಂ ಪಶುವತ್ಪಾಶಬದ್ಧ ಮವಾಙ್ಮುಖಂ ಕರ್ಮ ಜುಗುಪ್ಸಿತೇನ । ನಿರೀಕ್ಷ್ಯ ಕೃಷ್ಣಾಪಕೃತಂ ಗುರೋಃ ಸುತಂ ವಾಮಸ್ವಭಾವಾ ಕೃಪಯಾ ನನಾಮಚ ॥ ೪೨ ॥ ಉವಾಚ ಸಾ ಸಹಂತ್ಯಸ್ಯ ಬಂಧನಾ

ಲ್ಪಟ್ಟ, ಮಹಾನ್-ಮಹಾತ್ಮನಾದ, ಪಾರ್ಥಃ-ಪೃಥೆಯ (ಕುಂತಿ) ಮಗನಾದ ಅರ್ಜುನನು, ಯದ್ಯಪಿ ಆತ್ಮಹನಂ - ಮಕ್ಕಳನ್ನು ಕೊಂದವನಾದರೂ, ಗುರುಸುತಂ - ಗುರುಪುತ್ರನುದುದರಿಂದ, ಅವನನ್ನು, ಹಂತುಂ-ಕೊಲ್ಲುವುದಕ್ಕೆ, ನೈಚ್ಛತ್ - ಒಪ್ಪಲಿಲ್ಲ. ॥ ೪೦ ॥ ಗೋವಿಂದಪ್ರಿಯಸಾರಥಿಃ, ಗೋವಿಂದ-ಕೃಷ್ಣನೇ, ಪ್ರಿಯ-ಮಿತ್ರನಾಗಿಯೂ, ಸಾರಥಿಃ-ಸಾರಥಿಯಾಗಿಯು ಇರುವ, ಅರ್ಜುನನು, ತತಃ-ಆ ಬಳಿಕ, ಸ್ವಶಿಬಿರಂ-ತನ್ನ ಪಾಳಯವನ್ನು, ಅಭ್ಯೇತ್ಯ-ಹೊಂದಿ. ಹತಾನ್-ಕೊಲ್ಲಲ್ಪಟ್ಟ, ಆತ್ಮಜಾನ್-ಮಕ್ಕಳನ್ನು ಕುರಿತು, ಶೋಚಂತ್ಯೈ-ಅಳುತ್ತಿರುವ, ಪ್ರಿಯಾಯೈ--ದ್ರೌಪದಿಗೆ, ತಂ - ಅವನನ್ನು, ನ್ಯವೇದಯತ್-ಒಪ್ಪಿಸಿದನು, ॥ ೪೧ ॥ ತಥಾ-ಅಂತು, ಅವಮಾನದಿಂದ, ಆಹೃತಂ-ಸೆಳತರಲ್ಪಟ್ಟ, ಪಶುವತ್-ಯಜ್ಞದಪಶುವಿನಂತೆ, ಪಾಶಬದ್ಧಂ-ಹಗ್ಗದಿಂದ ಬಿಗಿಯಲ್ಪಟ್ಟ, ಕರ್ಮ-ಜುಗುಪ್ಸಿತೇನ-ಅಸಹ್ಯವಾದ ಕೆಲಸದಿಂದ, ಅವಾಙ್ಮುಖಂ-ತಲೆಯನ್ನು ಬಾಗಿಸಿರುವ, ಅಪಕೃತಂ-ಮಹಾಪರಾಧಿಯಾದ, ಗುರೋಃ-ದ್ರೋಣಾಚಾರ್ಯನ, ಸುತಂ-ಮಗನಾದ ಅಶ್ವತ್ಥಾಮನನ್ನು, ನಿರೀಕ್ಷ್ಯ-ಕಂಡು, ವಾಮಸ್ವಭಾವಾ, ವಾಮ-ಮಂಗಳಕರವಾದ, ಸ್ವಭಾವ-ನಡವಳಿಯುಳ್ಳ, ಕೃಷ್ಣಾ-ದ್ರೌಪದಿಯು, ಕೃಪಯಾ-ದಯೆಯಿಂದ ಕೂಡಿದವಳಾಗಿ, ನನಾಮಚ-ನಮಸ್ಕರಿಸಿದಳು, ॥ ೪೨ ॥ ಸತೀ-ಪತಿವ್ರತೆಯಾದ, ಸಾ-ಆ ದ್ರೌಪದಿಯು, ಅಸ್ಯ-ಈಅಶ್ವತ್ಥಾಮನ, ಬಂಧನಾನಯನಂ, ಬಂಧನ-ಬಂಧನದಿಂದ, ಆನಯನಂ-ಕರತಂದಿರುವುದನ್ನು, ಅಸಹಂತೀ ಸೈರಿಸಲಾರದೆ, ಏಷಃ-ಇವನು, ಬ್ರಾಹ್ಮಣಃ-ಬ್ರಾಹ್ಮಣನು, ನಿತರಾಂ-ಅದರಲ್ಲಿಯೂ, ಗುರುಃ - ಗುರು

ಅಶ್ವತ್ಥಾಮನು ಪುತ್ರಘಾತಿಯಾಗಿದ್ದರೂ ಗುರುಪುತ್ರನೆಂದು ಧರ್ಮದಿಂದ ಅವನನ್ನು ಕೊಲ್ಲುವುದಕ್ಕೆ ಸಮ್ಮತಿಸಲಿಲ್ಲ॥೪೦॥ಅನಂತರದಲ್ಲಿ ಶ್ರೀ ಕೃಷ್ಣನೇ ಮಿತ್ರನಾಗಿಯೂ ಸಾರಥಿಯಾಗಿಯೂ ಇರುವ ಅರ್ಜುನನು ಆ ಅಶ್ವತ್ಥಾಮನನ್ನು ತನ್ನ ಪಾಳಯಕ್ಕೆ ಸೆಳದುಕೊಂಡು ಹೋಗಿ, ಮಕ್ಕಳಮರಣಕ್ಕಾಗಿ ಗೋಳಾಡುತ್ತಿರುವ ದ್ರೌಪದಿಯ ಮುಂದೆನಿಲ್ಲಿಸಿ, ಎಲೌ ಪ್ರಿಯೆ?ನಿನ್ನಿಷ್ಟಾನುಸಾರವಾಗಿ ದಂಡಿಸುತ್ತೇನೆ. ಶಿಕ್ಷೆಯನ್ನು ವಿಧಿಸೆಂದು ನುಡಿದನು॥೪೧॥ ಅಂತು ಅವಮಾನದಿಂದ ಯಜ್ಞಪಶುವಿನಂತೆ ಪಾಶಬದ್ಧನಾಗಿ ಸೆಳತರಲ್ಪಟ್ಟು, ನೀಚಕೃತ್ಯವನ್ನು ಮಾಡಿದುದರಿಂದ ತಲೆಯನ್ನು ಬಾಗಿಸಿಕೊಂಡು ನಿಂದಿರುವ ಅವನನ್ನು ಕಂಡಕೂಡಲೇ,ಮಹಾ ಪತಿವ್ರತೆಯಾದ ಆ ದ್ರೌಪದಿಯು ಕನಿಕರಗೊಂಡು, ಮಂಗಳಕರವಾದ ನಡವಳಿಯುಳ್ಳವಳಾದುದರಿಂದ, ತಟ್ಟನೆ ಆತನಿಗೆ ನಮಸ್ಕರಿಸಿದಳು ॥ ೪೨ ॥ ಮತ್ತು ಆಕೆಯು ಆ ಅಶ್ವತ್ಥಾಮನನ್ನು ಬಂಧಿಸಿರುವುದನ್ನು ಕೂಡಾ ಸಹಿಸಲಾರದೆ, "ಪ್ರಿಯನೆ ! ಇವನು

---

† ಶ್ರು-ಆತ್ಮಾವೈಪುತ್ರನಾಮಾಸಿ

ನಯುಸಂ ಸತೀ । ಮುಚ್ಯತಾಂ ಮುಚ್ಯತಾ ಮೇಷ ಬ್ರಾಹ್ಮಣೋ ನಿತರಾಂ ಗುರುಃ ॥ ೪೩ ॥ ಸರಹಸ್ಯೋ ಧನುರ್ವೇದ ಸ್ಸವಿಸರ್ಗೋಪ ಸಂಯಮಃ। ಅಸ್ತ್ರಗ್ರಾಮಶ್ಚ ಭವತಾ ಶಿಕ್ಷಿತೋ ಯದನುಗ್ರಹಾತ್ ॥ ೪೪ ॥ ಸಏಷ ಭಗವಾನ್ ದ್ರೋಣಃ ಪ್ರಜಾರೂಪೇಣ ವರ್ತತೇ।ತಸ್ಯಾತ್ಮನೋರ್ಧಂ *ಪತ್ನ್ಯಾಸ್ತೇ ನಾನ್ವಗಾ ದ್ವೀರಸೂಃ ಕೃಪೀ ॥ ೪೫ ॥ ತದ್ಧರ್ಮಜ್ಞ ಮಹಾಭಾಗ ಭವದ್ಭಿ †ರ್ಗೌರವಂ ಕುಲಂ । ವೃಜಿನಂ ನಾರ್ಹತಿ ಪ್ರಾಪ್ತುಂ ಪೂಜ್ಯಂ ವಂದ್ಯ ಮಭೀಕ್ಷ್ಣಶಃ ॥ ೪೬ ॥ ಮಾರೋದೀ ತ್ತಸ್ಯ ಜನನೀ ಗೌತಮೀ

ವಾದವನು, ಮುಚ್ಯತಾಂ ಮುಚ್ಯತಾಂ-ಬಿಡಲ್ಪಡಲಿ ಎಂದು ಬಾರಿಬಾರಿಗೂ, ಉವಾಚಹ-ಹೇಳಲೂಹೇಳಿದಳು, ॥ ೪೩ ॥ ಭವತಾ-ನಿನ್ನಿಂದ, ಸರಹಸ್ಯಃ-ರಹಸ್ಯಗಳಾದ ಮಂತ್ರಗಳಿಂದಕೂಡಿದ, ಧನುರ್ವೇದಃ ಧನುರ್ವಿದ್ಯೆಯು, ಸವಿಸರ್ಗಃ-ಪ್ರಯೋಗದಿಂದಲೂ, ಉಪಸಂಯಮಃ-ಉಪಸಂಹಾರದಿಂದಲೂಕೂಡಿದ, ಅಸ್ತ್ರಗ್ರಾಮಶ್ಚ, ಅಸ್ತ್ರ-ಅಸ್ತ್ರಗಳ, ಗ್ರಾಮಶ-ಸಮೂಹವೂ, ಯದನುಗ್ರಹಾತ್, ಯತ್-ಯಾವ ದ್ರೋಣಾಚಾರ್ಯನ, ಅನುಗ್ರಹಾತ್-ಅನುಗ್ರಹದಿಂದ. ಶಿಕ್ಷಿತಃ-ಕಲಿಯಲ್ಪಟ್ಟಿತೋ, ॥೪೪॥ ಭಗವಾನ್-ಮಹಾತ್ಮನಾದ, ಸಏಷಃ-ಆತ, ದ್ರೋಣಃ-ದ್ರೋಣಾಚಾರ್ಯನೇ, ಪ್ರಜಾರೂಪೇಣ, ಪ್ರಜಾ - ಮಗನ ರೂಪೇಣ-ರೂಪದಿಂದ, ವರ್ತತೇ-ಇರುತ್ತಾನೆ, ತಸ್ಯ - ಅವನ, ಆತ್ಮನಃ-ಶರೀರದಲ್ಲಿ, ಅರ್ಧಂ - ಅರ್ಧ ಭಾಗವಾದ, ಪತ್ನೀ-ಹೆಂಡತಿಯು, ಆಸ್ತೇ-ಬದುಕಿರುತ್ತಾಳೆ, ವೀರಸೂಃ - ವೀರಮಾತೆಯಾದ, ಕೃಪೀ-ಕೃಪಿಯು, ನಾನ್ವಗಾತ್-ಸಹಗಮನವನ್ನು ಮಾಡಲಿಲ್ಲ, ॥ ೪೫ ॥ ಹೇಮಹಾಭಾಗ-ಎಲೈ ಮಹಾಮಹಿಮನೆ! ಧರ್ಮಜ್ಞ-ಸಕಲಧರ್ಮಗಳನ್ನೂ ತಿಳಿದವನೆ!ತತ್-ಆದುದರಿಂದ,ಭವದ್ಭಿಃ ನಿಮ್ಮಿಂದ,ಅಭೀಕ್ಷ್ಣಶಃ-ಬಾರಿಬಾರಿಗೂ, ಪೂಜ್ಯಂ-ಪೂಜೆಗೆಯೋಗ್ಯವಾದ, ಮತ್ತು ವಂದ್ಯಂ-ವಂದನೆಗರ್ಹವಾದ, ಗೌರವಂ-ಗುರುವಿನ, ಕುಲಂ-ವಂಶವು, ವೃಜಿನಂ-ದುಃಖವನ್ನು ಪ್ರಾಪ್ತುಂ - ಹೊಂದುವುದಕ್ಕೆ, ನಾರ್ಹತಿ - ಯೋಗ್ಯವಾಗುವುದಿಲ್ಲ, ॥ ೪೬ ॥ ಮೃತವತ್ಸಾ, ಮೃತ-ಮರಣವನ್ನು ಹೊಂದಿದ, ವತ್ಸಾ-ಮಕ್ಕಳುಳ್ಳವಳಾದುದರಿಂದಲೇ, ಆರ್ತಾ-ದೀನಳಾಗಿರುವ, ಅಹಂ-ನಾನು, ಯಥಾ-ಹೇಗೆ, ಅಶ್ರುಮುಖೀ, ಅಶ್ರು-ಕಣ್ಣೀರಿಂದ

ಬ್ರಾಹ್ಮಣನು, ಅಲ್ಲದೆ ಗುರುಪುತ್ರನಾಗಿಯೂ ಇರುವನು, ಆದುದರಿಂದ ಇವನನ್ನು ಬಿಟ್ಟುಬಿಡು ॥ ೪೩ ॥ ರಹಸ್ಯಗಳಾದ ಸಕಲ ಮಂತ್ರಗಳಿಂದ ಕೂಡಿದ ಧನುರ್ವೆದವನ್ನೂ, ಅಸ್ತ್ರಗಳನ್ನು ತೊಡುವುದು, ಬಿಡುವುದು ಹಿಂದಿರುಗಿಸುವುದು, ಇವುಗಳಿಂದೊಡಗೂಡಿದ ಅಸ್ತ್ರಗಳ ಸಮೂಹವನ್ನೂ, ನೀನು ಯಾರನುಗ್ರಹದಿಂದ ಕಲಿತೆಯೋ, ॥ ೪೪ ॥ ಅಂತಹ ಮಹಾತ್ಮನಾದ ದ್ರೋಣಾಚಾರ್ಯನೇ ಪುತ್ರರೂಪದಿಂದಿರುತ್ತಾನೆ, ಮತ್ತು ಆತನ ಅರ್ಧ ಶರೀರವೆನಿಸಿದ ಕೃಪಿಯೂ, ಸಹಗಮನವನ್ನು ಮಾಡದೆ ಪುತ್ರ ಸ್ನೇಹದಿಂದ ಬದುಕಿರುವಳು ॥ ೪೫ ॥ ಆದುದರಿಂದ ಎಲೈ ಧರ್ಮಜ್ಞನಾದ ಮಹಾತ್ಮನೆ ! ನಿಮಗೆ ಪೂಜ್ಯವಾಗಿಯೂ, ವಂದನೀಯ್ಯವಾಗಿಯೂ ಇರುವ ಗುರುಕುಲವನ್ನು ದುಃಖಗೊಳಿಸುವುದು ಚಿತವಲ್ಲ ॥ ೪೬ ॥ ಅಲ್ಲದೆ ಮಕ್ಕಳನ್ನು ಕಳೆದುಕೊಂಡು ಗೋಳಾಡುತ್ತಿರುವನಾನೆಂತು ಬಾರಿಬಾರಿಗೂ ಕಣ್ಣೀರು ಸುರಿಸಿಕೊಂಡು ಅಳುತ್ತಿರುವೆನೋ, ಮಹಾಪತಿವ್ರತೆಯಾದ

* ಪ್ರ--ಅರ್ಧೋವಾವಏಷಆತ್ಮನೋಯತ್ಪತ್ನೀ. † ಪಾ-ಕೌರವಂ-ಕೌರವರ

ಪತಿದೇವತಾ । ಯಥಾಹಂ ಮೃತವತ್ಸಾರ್ತಾ ರೋದಿಮ್ಯಶ್ರುಮುಖೀ ಮು
ಹುಃ ॥ ೪೭ ॥ ಯೈಃ ಕೋಪಿತಂ ಬ್ರಹ್ಮಕುಲಂ ರಾಜನ್ಯೈ ರಜಿತಾತ್ಮಭಿಃ।
ತತ್ಕುಲಂ ಪ್ರದಹತ್ಯಾಶು ಸಾನುಬಂಧಂ ಶುಚಾರ್ಪಿತಂ ॥ ೪೮ ॥ ಸೂತಃ॥
ಧರ್ಮ್ಯಂ ನ್ಯಾಯ್ಯಂ ಸಕರುಣಂ ನಿರ್ವ್ಯಳೀಕಂ ಸಮಂ ಮಹತ್।ರಾಜಾ
ಧರ್ಮಸುತೋ † ರಾಜ್ಞ್ಯಾಃ ಪ್ರತ್ಯನಂದ ದ್ವಚೋ ದ್ವಿಜಾಃ ॥ ೪೯ ॥
ನಕುಲ ಸ್ಸಹದೇವಶ್ಚ ಯುಯುಧಾನೋ ಧನಂಜಯಃ । ಭಗವಾನ್ ದೇವ
ಕೀಪುತ್ರೋ ಯೇಚಾನ್ಯೇ ಯಾಶ್ಚ ಯೋಷಿತಃ ॥ ೫೦ ॥ ತತ್ರಾಹಾ ಮ

ತುಂಬಿದ, ಮುಖೀ-ಮುಖವುಳ್ಳವಳಾಗಿ, ಮುಹುಃ-ಬಾರಿಬಾರಿಗೂ, ರೋದಿಮಿ-ಅಳುತ್ತಿರುವೆನೋ, ತಥಾ-ಹಾಗೆ, ಪತಿದೇವತಾ - ಮಹಾಪತಿವ್ರತೆಯಾದ, ತಸ್ಯ - ಆ ಅಶ್ವತ್ಥಾಮನಿಗೆ, ಜನನೀ - ತಾಯಿಯಾದ, ಗೌತಮೀ-ಕೃಪಿಯು, ಮಾರೋದೀತ್-ಅಳದಿರಲಿ, ॥ ೪೭ ॥ ಅಜಿತಾತ್ಮಭಿಃ, ಅಜಿತ-ಜಯಿಸಲ್ಪಡದಿರುವ ಆತ್ಮಭಿಃ - ಮನಸ್ಸುಳ್ಳ, ಯೈಃ - ಯಾವ, ರಾಜನ್ಯೈಃ- ರಾಜರಿಂದ, ಬ್ರಹ್ಮಕುಲಂ-ಬ್ರಾಹ್ಮಣಕುಲವು, ಕೋಪಿತಂ-ಕೋಪಗೊಳಿಸಲ್ಪಡುವುದೊ, (ಆಬ್ರಾಹ್ಮಣಕುಲವು) ಶುಚಾ-ದುಃಖದಿಂದ, ಅರ್ಪಿತಂ-ಒಪ್ಪಿಸಲ್ಪಟ್ಟ, ತತ್ಕುಲಂ, ತತ್-ಆ, ಕುಲಂ-ವಂಶವನ್ನು, ಸಾನುಬಂಧಂ - ಸಪರಿವಾರವಾಗಿ, ಆಶು-ಬೇಗನೆ, ಪ್ರದಹತಿ - ಸುಡುತ್ತದೆ ॥ ೪೮ ॥ ಸೂತಃ - ಸೂತನುಹೇಳುತ್ತಾನೆ, ಹೇದ್ವಿಜಾಃ-ಎಲೈ ಬ್ರಾಹ್ಮಣರಿರಾ! ಧರ್ಮ್ಯಂ-ಧರ್ಮಯುಕ್ತವಾಗಿಯೂ, ನ್ಯಾಯ್ಯಂ-ನ್ಯಾಯಸಹಿತವಾಗಿಯೂ, ಸಕರುಣಂ - ದಯೆಯಿಂದ ಕೂಡಿದುದಾಗಿಯೂ, ನಿರ್ವ್ಯಳೀಕಂ - ಸತ್ಯವಾಗಿಯೂ, ಅಥವಾ ಹಿತವಾಗಿಯೂ, ಸಮಂ - ಸಮವಾಗಿಯೂ, ಮಹತ್-ಅರ್ಥಗರ್ಭಿತವಾಗಿಯೂ, ಇರುವ, ರಾಜ್ಞ್ಯಾಃ-ದ್ರೌಪದಿಯ, ವಚಃ-ಮಾತನ್ನು, ರಾಜಾ-ರಾಜನಾದ, ಧರ್ಮಸುತಃ-ಧರ್ಮರಾಜನು, ಪ್ರತ್ಯನಂದತ್-ಸಮ್ಮತಿಸಿದನು ॥ ೪೯ ॥ ನಕುಲಃ-ನಕುಲನು, ಸಹದೇವಶ್ಚ-ಸಹದೇವನೂ, ಯುಯುಧಾನಃ-ಸಾತ್ಯಕಿಯೂ, ಧನಂಜಯಃ-ಅರ್ಜುನನು, ಭಗವಾನ್ ಭಗವಂತನಾದ ದೇವಕೀಪುತ್ರಃ - ಶ್ರೀಕೃಷ್ಣನು, ಅನ್ಯೇ-ಇತರರು, ಯೇಚ-ಯಾರೋ, ಯಾಃ-ಯಾವ, ಯೋಷಿತಶ್ಚ-ಸ್ತ್ರೀಯರುಂಟೋ ಅವರೆಲ್ಲರೂ, ಪ್ರತ್ಯನಂದನ್-ಸಮ್ಮತಿಸಿದರು, ॥ ೫೦ ॥ ತತ್ರ-ಅಲ್ಲಿ,

ಅವನ ತಾಯಿ ಕೃಪೀದೇವಿಯು ಅಂತ ಗೋಳಾಡದಿರಲಿ ॥ ೪೭ ॥ ಯಾವ ರಾಜರು ಕಾಮಕ್ರೋಧಾದಿಗಳನ್ನು ಗೆಲ್ಲದೆ ಕೋಪವಶರಾಗಿ ಬ್ರಾಹ್ಮಣ ಕುಲವನ್ನು ಸಂಕಟ ಪಡಿಸುವರೋ, ಅಂತು ದುಃಖಗೊಂಡ ಬ್ರಾಹ್ಮಣ ಕುಲವು ಸಪರಿವಾರವಾಗಿ ಆ ರಾಜ ವಂಶವನ್ನು ಬೇಗನೆ ಸುಟ್ಟು ಬಿಡುವುದು ಎಂದು ನುಡಿದಳು ॥ ೪೮ ॥ ಅಯ್ಯಾ ಋಷಿಗಳಿರಾ! ಇಂತು ಮೇಲೆ ಹೇಳಿದ ಮೇರೆ ನ್ಯಾಯವಾಗಿಯೂ, ಧರ್ಮಯುಕ್ತವಾಗಿಯೂ ದಯಾಯುತವಾಗಿಯೂ, ಸತ್ಯವಾಗಿಯೂ, ಸಮವಾಗಿಯೂ, ಹಿತಕರವಾಗಿಯೂ ಇರುವ ದ್ರೌಪದಿಯ ಮಾತನ್ನು ಧರ್ಮರಾಜನು ಅನುಮೋದಿಸಿದನು ॥ ೪೯ ॥ ಅಂತೆಯೇ ನಕುಲನು ಸಹದೇವನು, ಸಾತ್ಯಕಿಯು, ಅರ್ಜುನನೂ, ಭಗವಂತನಾದ ಕೃಷ್ಣನೂ, ಇನ್ನೂ ಅಲ್ಲಿರುವ ಇತರ ಪುರುಷರೂ, ಸ್ತ್ರೀಯರೂ ಸಹ ಆ ಮಾತನ್ನೊಪ್ಪಿಕೊಂಡರು ॥ ೫೦ ॥ ಆಗ ಭೀಮನು ಮಾತ್ರ ಕ್ರುದ್ಧನಾಗಿ, "ಈ ದುರಾತ್ಮನು ಸ್ವಪ್ರಯೋಜನವೂ ಇಲ್ಲದೆ

† ಪಾ-ಯಾಜ್ಞ್ಯಾಃ-ಯಜ್ಞದ ಅಗ್ನಿಯಲ್ಲಿ ಹುಟ್ಟಿದವಳು

ರ್ಷಿತೋ ಭೀಮ ಸ್ತಸ್ಯ ಶ್ರೇಯಾನ್ ವಧಸ್ಮೃತಃ । ನಭರ್ತುರ್ನಾತ್ಮನ ಶ್ಚಾರ್ಥೇ ಯೋಹನ್ ಸುಪ್ತಾನ್ ಶಿಶೂನ್ ವೃಥಾ ॥೫೦॥ ನಿಶಮ್ಯ ಭೀಮಗದಿತಂ ದ್ರೌಪದ್ಯಾಶ್ಚ ಚತುರ್ಭುಜಃ । ಆಲೋಕ್ಯ ವದನಂ ಸಖ್ಯು ರಿದ ಮಾಹ ಹಸನ್ನಿವ ॥ ೫೧ ॥ ಶ್ರೀ ಭಗವಾನ್ ॥ ಬ್ರಹ್ಮಬಂಧು ರ್ನಹಂತವ್ಯ ಆತತಾಯೀ ವಧಾರ್ಹಣಃ । ಮಯ್ಯೈ † ವೋಭಯ ಮಾಮ್ನಾತಂ ಪರಿಪಾಹ್ಯನುಶಾಸನಂ ॥ ೫೨ ॥ ಕುರು ಪ್ರತಿಶ್ರುತಂ ಸತ್ಯಂ ಯತ್ತ ತ್ಸಾಂತ್ವಯತಾ ಪ್ರಿ

ಅಮರ್ಷಿತಃ-ಕೋಪಗೊಂಡಿರುವ, ಭೀಮಃ-ಭೀಮನು, ಆಹ-ಹೇಳುತ್ತಾನೆ, ಯಃ-ಯಾವನು, ನಭರ್ತುಃ ಸ್ವಾಮಿಗಾಗಿಯೂ ಅಲ್ಲದೆ, ಆತ್ಮನಃ-ತನ್ನ, ಅರ್ಥೇಚನ - ಪ್ರಯೋಜನಕ್ಕೂ ಅಲ್ಲದೆ, ಸುಪ್ತಾನ್-ನಿದ್ದೆ ಮಾಡುತ್ತಿದ್ದ, ಶಿಶೂನ್-ಮಕ್ಕಳನ್ನು, ವೃಥಾ-ವ್ಯರ್ಥವಾಗಿ, ಅಹನ್-ಕೊಂದುಹಾಕಿದನೋ, ತಸ್ಯ-ಆ ಅಶ್ವತ್ಥಾಮನಿಗೆ, ವಧಃ-ಮರಣದಂಡವು, ಶ್ರೇಯಾನ್-ಕ್ಷೇಮಕರವೆಂದು, ಸ್ಮೃತಃ-ಹೇಳಲ್ಪಟ್ಟಿರುವುದು, ಚತುರ್ಭುಜಃ-ಕೃಷ್ಣನು, ಭೀಮಗದಿತಂ-ಭೀಮನ ಮಾತನ್ನು, ದ್ರೌಪದ್ಯಾಃ-ದ್ರೌಪದಿಯ, ಗದಿತಂಚ-ಮಾತನ್ನೂ, ನಿಶಮ್ಯ-ಕೇಳಿ, ಹಸನ್ನಿವ-ನಗುವಂತೆ, ಸಖ್ಯುಃ- ಅರ್ಜುನನ, ವದನಂ - ಮುಖವನ್ನು, ಆಲೋಕ್ಯ-ನೋಡಿ, ಇದಂ - ಈಮಾತನ್ನು, ಆಹ-ಹೇಳುತ್ತಾನೆ, ॥ ೫೦ ॥ ಬ್ರಹ್ಮಬಂಧುಃ-ಬ್ರಾಹ್ಮಣಾಧಮನಾದರೂ, ನಹಂತವ್ಯಃ-ಕೊಲ್ಲಲ್ಪಡಬಾರದು, ಆತತಾಯೀ-ಕೊಲೆಗಾರನಾದವನು, ವಧಾರ್ಹಣಃ ವಧ-ಕೊಲೆಗೆ, ಅರ್ಹಣಃ - ಅರ್ಹನು, (ಇತಿ-ಹೀಗೆಂದು) ಮಯ್ಯೈವ-ಶಾಸ್ತ್ರಗಳನ್ನುಮಾಡಿದ ನನ್ನಿಂದಲೇ, ಉಭಯಂ-ಎರಡುವಿಧಗಳೂ, ಆಮ್ನಾತಂ - ಹೇಳಲ್ಪಟ್ಟುವು, ಅನುಶಾಸನಂ-ಎರಡುವಿಧಗಳನ್ನೂ, ಪರಿಪಾಹಿ-ಕಾಪಾಡು ॥ ೫೨ ॥ ಪ್ರಿಯಾಂ-ದ್ರೌಪದಿಯನ್ನು, ಸಾಂತ್ವಯತಾ - ಸಂತೈಸುವ ನಿನ್ನಿಂದ, ಯತ್-ಯಾವುದು, ಪ್ರತಿಶ್ರುತಂ-ಪ್ರತಿಜ್ಞೆಮಾಡಲ್ಪಟ್ಟಿತೊ, ತತ್-ಅದನ್ನೂ, ಭೀಮಸೇನಸ್ಯ - ಭೀಮನಿಗೂ, ಪಾಂಚಾಲ್ಯಾಃ-ದ್ರೌಪದಿಗೂ, ಮಹ್ಯಮೇವಚ-ನನಗೂ, ಪ್ರಿಯಂಚ-ಹಿತವಾದುದನ್ನೂ, ಸತ್ಯಂ-

ಸ್ವಾಮಿಗೂ ಇಷ್ಟವಿಲ್ಲದೆ, ನಿದ್ದೆ ಮಾಡುತ್ತಿದ್ದ ಹಸುಳೆಗಳನ್ನು ಅನ್ಯಾಯವಾಗಿ ಕೊಂದಿರುವನಾದುದರಿಂದ ಇವನನ್ನು ಸಂಹರಿಸುವುದೇ ಲೇಸೆಂದು ನುಡಿದನು ॥ ೫೦ ॥ ಇಂತ ಭೀಮನು, ಸಂಹರಿಸುವುದೇ ನ್ಯಾಯವೆಂತಲೂ, ದ್ರೌಪದಿಯು ಕೂಡದೆಂತಲೂ ಹೇಳುತ್ತಿರುವ ಮಾತುಗಳನ್ನು ಕೇಳಿ, ಅವರಿಬ್ಬರನ್ನೂ ಒಮ್ಮೆಯೇ ಸಂತೈಸುವುದಕ್ಕಾಗಿ ನಾಲ್ಕು ಭುಜಗಳನ್ನು ಪಡೆದನೊ ಎಂಬಂತಿರುವ ಶ್ರೀ ಕೃಷ್ಣಮೂರ್ತಿಯು, ಪ್ರಿಯಮಿತ್ರನಾದ ಅರ್ಜುನನ ಮುಖವನ್ನು ನೋಡಿ ನಗುತ್ತಾ ಇಂತೆಂದನು ॥ ೫೧ ॥ ಅಯ್ಯಾ ಮಿತ್ರನೆ ! ಬ್ರಾಹ್ಮಣಜಾತಿಯವನು ಎಷ್ಟು ನೀಚನಾದರೂ ಅವನನ್ನು ಕೊಲ್ಲಬಾರದೆಂದೂ, ಕೊಲೆ ಮಾಡುವುದಕ್ಕೆ ಬಂದವನೆಂತವನಾದರೂ ಅವನನ್ನು ಕೊಲ್ಲಲೇಬೇಕೆಂದೂ, ಪರಸ್ಪರ ವಿರುದ್ಧಗಳಾಗಿ ತೋರುವ ಎರಡು ಶಾಸ್ತ್ರಗಳನ್ನೂ ನಾನೇ ಮಾಡಿರುವೆನು, ಆದುದರಿಂದ ಈ ಎರಡು ಶಾಸ್ತ್ರಗಳ ಅಭಿಪ್ರಾಯವನ್ನೂ ತಿಳಿದು ಅದರಂತಾಚರಿಸು ॥೫೨॥ ಮತ್ತು ನೀನು

† ಬ್ರಹ್ಮಬಂಧುರ್ನಹಂತವ್ಯಃ ಮತ್ತು ಆತತಾಯಿನ ಮಾಯಾಂತ ಮಪಿ ವೇದಾಂಗಪಾರಗಂ । ಜಿಘಾಂಸಂತಂ ಜಿಘಾಂಸೀಯಾ ನ್ನತೇನ ಬ್ರಹ್ಮಹಾ ಭವೇತ್

ಯಾಂ । ಪ್ರಿಯಂಚ ಭೀಮಸೇನಸ್ಯ ಪಾಂಚಾಲ್ಯಾ ಮಹ್ಯ ಮೇವಚ॥೫೪॥
ಶ್ರೀಸೂತಃ । ಅರ್ಜುನ ಸ್ಸಹಸಾಜ್ಞಾಯ ಹರೇ ರ್ಹಾರ್ದ ಮಥಾಸಿನಾ । ಮ
ಣಿಂ ಜಹಾರ ಮೂರ್ಧನ್ಯಂ ದ್ವಿಜಸ್ಯ ಸಹ ಮೂರ್ಧಜಂ ॥ ೫೫ ॥ ವಿಮು
ಚ್ಯ ರಶನಾಬಂಧಂ ಬಾಲಹತ್ಯಾಹತಪ್ರಭಂ । ತೇಜಸಾ ಮಣಿನಾ ಹೀನಂ
ಶಿಬಿರಾ ನ್ನಿರಯಾಪಯತ್ ॥ ೫೬ ॥ ವಪನಂ ದ್ರವಿಣಾದಾನಂ ಸ್ಥಾನಾ
ನ್ನಿರ್ಯಾಪನಂ ತಥಾ । ಏಷಹಿ ಬ್ರಹ್ಮಬಂಧೂನಾಂ ವಧೋ ನಾನ್ಯೋಸ್ತಿ
ದೈಹಿಕಃ॥ ೫೭ ॥ಪುತ್ರಶೋಕಾತುರಾ ಸ್ಸರ್ವೆ ಪಾಂಡವಾ ಸ್ಸಹಕೃಷ್ಣಯಾ

ನಿಜವಾಗಿ, ಕುರು-ಮಾಡು, ॥ ೫೪ ॥ ಸೂತಃ-ಸೂತನು ಹೇಳುತ್ತಾನೆ, ಅರ್ಜುನಃ-ಅರ್ಜುನನು ಸಹಸಾ ಬೇಗನೆ, ಹರೇಃ-ಕೃಷ್ಣನ, ಹಾರ್ದಂ-ಅಭಿಪ್ರಾಯವನ್ನು ಆಜ್ಞಾಯ - ತಿಳಿದು, ಅಥ - ಅನಂತರದಲ್ಲಿ, ದ್ವಿಜಸ್ಯ-ಬ್ರಾಹ್ಮಣನಾದ ಅಶ್ವತ್ಥಾಮನ, ಸಹಮೂರ್ಧಜಂ - ಕೂದಲಿಂದಕೂಡಿದ, ಮೂರ್ಧನ್ಯಂ-ತಲೆಯಲ್ಲಿರುವ, ಮಣಿಂ-ರತ್ನವನ್ನು, ಜಹಾರ-ಅಪಹರಿಸಿದನು ॥ ೫೫ ॥ ರಶನಾಬಂಧಂ, ರಶನಾ-ಹಗ್ಗಗಳ ಬಂಧಂ-ಕಟ್ಟನ್ನು, ವಿಮುಚ್ಯ-ಬಿಚ್ಚಿ, ಬಾಲ...ಪ್ರಭಂ, ಬಾಲ-ಮಕ್ಕಳ, ಹತ್ಯಾ - ಕೊಲೆಯಿಂದ, ಹತ-ನಷ್ಟವಾದ, ಪ್ರಭಂ-ಕಾಂತಿಯುಳ್ಳ, ತೇಜಸಾ-ತೇಜಸ್ಸಿನಿಂದಲೂ, ಮಣಿನಾ-ರತ್ನದಿಂದಲೂ, ಹೀನಂ-ಬಿಡಲ್ಪಟ್ಟ, ಆ ಅಶ್ವತ್ಥಾಮನನ್ನು, ಶಿಬಿರಾತ್-ಪಾಳೆಯದಿಂದ, ನಿರಯಾಪಯತ್-ಹೊರಡಿಸಿದನು ॥ ೫೬ ॥ ವಪನಂ-ತಲೆಯನ್ನು ಬೋಳಿಸುವುದು, ದ್ರವಿಣಾದಾನಂ-ಆಸ್ತಿಯನ್ನುಕಿತ್ತುಕೊಳ್ಳುವುದು, ತಥಾ-ಹಾಗೆಯೇ, ಸ್ಥಾನಾತ್-ಸ್ಥಲದಿಂದ, ನಿರ್ಯಾಪಣಂ-ಹೊರಡಿಸುವುದು, ಏಷಹಿ-ಇದೇ, ಬ್ರಹ್ಮಬಂಧೂನಾಂ-ಬ್ರಾಹ್ಮಣಾಧಮರಿಗೆ, ವಧಃ-ಮರಣದಂಡವು, ದೈಹಿಕಃ-ದೇಹಕ್ಕೆ ಸಂಬಂಧಿಸಿದ, ಅನ್ಯಃ-ಬೇರೆಯಾದ, ವಧಃ-ಕೊಲೆಯು, ನಾಸ್ತಿ-ಇಲ್ಲ ॥ ೫೭ ॥ ಪುತ್ರ...ತುರಾಃ, ಪುತ್ರ-ಮಕ್ಕಳ, ಶೋಕ-ದುಃಖದಿಂದ, ಆತುರಾಃ-ಪೀಡಿತರಾದ, ಸರ್ವೇ-ಎಲ್ಲಾ, ಪಾಂಡವಾಃ-ಪಾಂಡವರು, ಕೃಷ್ಣಯಾಸಹ-ದ್ರೌಪದಿಯೊಡನೆಕೂಡಿ, ಮೃತಾನಾಂ-ಮೃತರಾದ, ಸ್ವಾನಾಂ-ತಮ್ಮ ಮಕ್ಕಳಿಗೆ, ಯತ್-ಯಾವುದು, ಕೃತ್ಯಂ-ಮಾಡತಕ್ಕುದೋ

ಪ್ರಿಯಭಾರ್ಯೆಯಾದ ದ್ರೌಪದಿಯನ್ನು ಸಂತೈಸುವಾಗ ಯಾವ ಪ್ರತಿಜ್ಞೆಯನ್ನು ಮಾಡಿದೆಯೋ, ಅದನ್ನೂ ಸಾರ್ಥಕಮಾಡು, ಭೀಮನಿಗೂ ದ್ರೌಪದಿಗೂ ನನಗೂ ಸಹ ಯಾವುದಿಷ್ಟವೋ, ಆಕೆಲಸವನ್ನು ಮಾಡು, ಎನಲು॥೫೪॥ಅರ್ಜುನನು ಶ್ರೀಕೃಷ್ಣನ ಅಭಿಪ್ರಾಯವನ್ನು ಬೇಗನೆ ತಿಳಿದು, ಕತ್ತಿಯನ್ನು ಸೆಳೆದು, ಆ ಅಶ್ವತ್ಥಾಮನ ಮುಡಿಯನ್ನು ಕತ್ತರಿಸಿ ತಲೆಯಲ್ಲಿರುವ ಮಣಿಯನ್ನು ಕಿತ್ತುಕೊಂಡನು ॥ ೫೫ ॥ ಅನಂತರದಲ್ಲಿ ಅವನಿಗೆ ಬಿಗಿದಿದ್ದ ಕಟ್ಟುಗಳನ್ನು ಬಿಚ್ಚಿ ಶಿಶುಹತ್ಯೆಯಿಂದ ಕಳೆಗುಂದಿ ಶಿರೋಮಣಿಯನ್ನು ಕಳೆದುಕೊಂಡು ತಲೆಯನ್ನುಬಾಗಿಸಿ ನಿಸ್ತೇಜಸ್ಕನಾಗಿ ನಿಂದಿರುವ ಆ ಅಶ್ವತ್ಥಾಮನನ್ನುಶಿಬಿರದಿಂದ ಹೊರಡಿಸಿದನು ॥ ೫೬ ॥ ಕೊಲೆಗಾರರಾದ ಬ್ರಾಹ್ಮಣಾಧಮರಿಗೆ ಮುಂಡನವನ್ನುಮಾಡಿ ಆಸ್ತಿಯನ್ನು ಕಿತ್ತುಕೊಂಡು ದೇಶದಿಂದ ಹೊರಡಿಸುವುದೇ ಶಿಕ್ಷೆಯಲ್ಲದೆ, ಬೇರೇ ಮರಣದಂಡವಿಲ್ಲವಾದುದರಿಂದ ಇದು ನ್ಯಾಯಮೇಸರಿ ॥ ೫೭ ॥ ಬಳಿಕ ಪುತ್ರಶೋಕದಿಂದ ಪೀಡಿತರಾದ ಪಾಂಡವರೆಲ್ಲರೂ ದ್ರೌಪದಿಯಿಂದೊಡಗೂಡಿ ಮುಂದಣಕರ್ತವ್ಯವನ್ನರಿತು,ಮೃತರಾಗಿರುವ

ಸ್ವಾನಾಂ ಮೃತಾನಾಂ ಯತ್ಕೃತ್ಯಂ ಚಕ್ರು ರ್ನಿರ್ಹರಣಾದಿಕಂ ॥೫೮॥

—ಇತಿ ಸಪ್ತಮೋಽಧ್ಯಾಯಃ—

—ಓಂ ನಮಃಪರಮಾತ್ಮನೇ—

ಶ್ರೀ ಸೂತಃ॥ *ಅಥ ತೇ ಸಂಪರೇತಾನಾಂ ಸ್ವಾನಾ ಮುದಕಮಿಚ್ಛತಾಂ। ದಾ
ತುಂ ಸಕೃಷ್ಣಾ ಗಂಗಾಯಾಂ ಪುರಸ್ಕೃತ್ಯ ಯಯುಃ ಸ್ತ್ರಿಯಃ ॥ ೧ ॥ ತೇ ನಿ
ನೀಯೋದಕಂ ಸರ್ವೇ ವಿಲಪ್ಯ ಚ ಭೃಶಂ ಪುನಃ । ಆಪ್ಲುತಾ ಹರಿಪಾದಾ

ಅಂತಹ, ನಿರ್ಹರಣಾದಿಕಂ-ಶವವನ್ನು ಸಾಗಿಸುವುದೇ ಮೊದಲಾದ ಕೆಲಸಗಳನ್ನು, ಚಕ್ರುಃ-ಮಾಡಿದರು॥

ಸಪ್ತಮಾಧ್ಯಾಯಂ ಸಮಾಪ್ತಂ.

ಸೂತಃ-ಸೂತನು ಹೇಳುತ್ತಾನೆ, ಅಥ-ಅಮೇಲೆ, ತೇ-ಆಪಾಂಡವರು, ಸಂಪರೇತಾನಾಂ-ಮೃತರಾದ, ಇಚ್ಛತಾಂ-ತರ್ಪಣವನ್ನು ಬಯಸುತ್ತಿರುವ, ಸ್ವಾನಾಂ-ತಮ್ಮ ಮಕ್ಕಳಿಗೆ, ಉದಕಂ-ತರ್ಪಣೋದಕವನ್ನು, ದಾತುಂ-ಕೊಡುವುದಕ್ಕಾಗಿ, ಸಕೃಷ್ಣಾಃ-ದ್ರೌಪದಿಯಿಂದಲೂ, ಕೃಷ್ಣನಿಂದಲೂ, ಕೂಡಿದವರಾಗಿ, ಸ್ತ್ರಿಯಃ-ಇತರಸ್ತ್ರೀಯರನ್ನು, ಪುರಸ್ಕೃತ್ಯ-ಮುಂದಿಟ್ಟುಕೊಂಡು, ಗಂಗಾಯಾಂ-ಗಂಗಾನದಿಗೆ, ಯಯುಃ-ಹೋದರು॥೧
ತೇ ಸರ್ವೇ-ಅವರೆಲ್ಲರೂ, ಉದಕಂ-ತರ್ಪಣಗಳನ್ನು, ನಿನೀಯ-ಕೊಟ್ಟು, ಪುನಃ-ಮರಳಿ, ಭೃಶಂ-ಬಹಳವಾಗಿ

ಮಕ್ಕಳ ದಹನಾದಿಕಾರ್ಯಗಳನ್ನು ಮಾಡಿದರೆಂದು ಸೂತಪೌರಾಣಿಕನು ಶೌನಕಾದಿಗಳಿಗೆ
ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೋಳ್
ಏಳನೆಯ ಅಧ್ಯಾಯಂಮುಗಿದುದು.—

—ಕೃಷ್ಣನು ಪರೀಕ್ಷಿದ್ರಾಜನನ್ನು ಬದುಕಿಸಿದುದು.—

ಕಂ॥ ಹರಿ ಬ್ರಹ್ಮಾಸ್ತ್ರದಿಂ ಮತ್ತೆ ಪರೀಕ್ಷಿತಂ ಮಡಿಯದಂತೆ ಸಲಹಿದುದುಂ ಶ್ರೀ ।
ಪತಿಯಂ ಸ್ತುತಿಸುತ್ತಿಯಂ ಕುಂತಿ । ಪತಿಚಿಂತೆಯು ಮೆಂಟರಲ್ಲಿ ಪೇಳಲ್ಪಡುಗುಂ॥

ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳುವುದೆಂತೆನೆ—ಅನಂತರದಲ್ಲಿ ಆ ಪಾಂಡವರು ದ್ರೌಪದೀಕೃಷ್ಣರಿಂದೊಡಗೂಡಿ, ಕುಂತಿ ಮೊದಲಾದ ಸ್ತ್ರೀಯರೆಲ್ಲರನ್ನೂ ಕರೆದುಕೊಂಡು, ಮೃತರಾದ ತಮ್ಮ ಮಕ್ಕಳಿಗೆ ತರ್ಪಣಾದಿಗಳನ್ನು ಮಾಡುವುದಕ್ಕಾಗಿ ಗಂಗಾನದಿಗೆ ಹೋದರು ॥ ೧ ॥ ಬಳಿಕ ಅವರೆಲ್ಲರೂ ತಿಲೋದಕಗಳನ್ನು ಕೊಟ್ಟು, ಮರಳಿಮರಳಿ ಅವರನ್ನು

* ಅಥೋ ವಿಹಾಯ ಮಾಮಾರ್ತ ಕಸ್ಮಾದ್ವೈ ಭಗವಾನ್ ಪ್ರಭುಃ । ಪವಿತ್ರಾಯಾಃ ಪಾದಮೂಲೇ ದದಂ ತ್ಯಾಯುಷ್ಪ್ರತಿಶ್ರುತಂ॥೧॥ ಪಶ್ಯ ರಾಜ್ಞ್ಯೋರಿದಾನೀಂಸ್ತೇ ರುದತೋ ಮುಕ್ತಮೂರ್ಧಜಾನ್ । ಅಂಗ್ಯಾ ಪತೀನ್ ಭಿಮುಗದಾಘಗ್ನೋರುಪಕ್ಷ್ಮಃ ॥ ೨ ॥ (ವಿಜಯಧ್ವಜಪಾಠ)

ಬ್ಜರಜಃ ಪೂತಸರಿಜ್ಜಲೇ ॥ ೨ ॥ ತತ್ರಾಸೀನಂ ಕುರುಪತಿಂ ಧೃತರಾಷ್ಟ್ರಂ ಸಹಾನುಜಂ । ಗಾಂಧಾರೀಂ ಪುತ್ರಶೋಕಾರ್ತಾಂ ಪೃಥಾಂ ಕೃಷ್ಣಾಂ ಚ ಮಾಧವಃ ॥ ೩ ॥ ಸಾಂತ್ವಯಾಮಾಸ ಮುನಿಭಿ ರ್ಹತಬಂಧೂನ್ ಶುಚಾರ್ದಿತಾನ್ । ಭೂತೇಷು ಕಾಲಸ್ಯ ಗತಿಂ ದರ್ಶಯ ನ್ನಪ್ರತಿಕ್ರಿಯಾಂ॥ ೪ ॥ ಸಾಧಯಿತ್ವಾಽಜಾತಶತ್ರೋಃ ಸ್ವಂ ರಾಜ್ಯಂ ಕಿತವೈ ರ್ಹೃತಂ । *ಅಜೀಹನದ್ಯಾಜ್ಞಸೇನ್ಯಾಃ ಕಚಸ್ಪರ್ಶಕ್ಷತಾಯುಷಃ॥ ೫ ॥ ಯಾಜಯಿತ್ವಾಶ್ವಮೇಧೈ

ವಿಲಪ್ಯ-ಅತ್ತು, ಹರಿ...ಜಲೆ, ಹರಿ-ವಿಷ್ಣುವಿನ, ಪಾದಾಬ್ಜ-ಪಾದಕಮಲದ, ರಜಃ-ಧೂಳಿಯಿಂದ, ಪೂತ-ಪರಿಶುದ್ಧವಾದ, ಸರಿತ್-ದೇವಗಂಗೆಯ, ಜಲೇ-ನೀರಿನಲ್ಲಿ, ಆಪ್ಲುತಾಃ - ಸ್ನಾನವನ್ನು ಮಾಡಿದರು ॥ ೨ ॥ ಮಾಧವಃ - ಶ್ರೀಕೃಷ್ಣನು, ಮುನಿಭಿಃ - ಋಷಿಗಳಿಂದೊಡಗೂಡಿದವನಾಗಿ, ಭೂತೇಷು - ಪದಾರ್ಥಗಳಲ್ಲಿ, ಕಾಲಸ್ಯ-ಕಾಲದ, ಅಪ್ರತಿಕ್ರಿಯಾಂ-ಎದುರಿಲ್ಲದ, ಗತಿಂ - ಪ್ರಚಾರವನ್ನು, ದರ್ಶಯನ್ - ತೋರಿಸುತ್ತಾ; ತತ್ರ - ಆಗಂಗಾತೀರದಲ್ಲಿ, ಆಸೀನಂ-ಕುಳಿತಿರುವ, ಸಹಾನುಜಂ - ತಮ್ಮಂದಿರಿಂದಕೂಡಿದ, ಕುರುಪತಿಂ-ಧರ್ಮರಾಜನನ್ನೂ, ಧೃತರಾಷ್ಟ್ರಂ-ಧೃತರಾಷ್ಟ್ರನನ್ನೂ, ಗಾಂಧಾರೀಂ-ಗಾಂಧಾರಿಯನ್ನೂ, ಪುತ್ರಶೋಕಾರ್ತಾಂ-ಪುತ್ರಶೋಕದಿಂದಪೀಡಿತಳಾದ, ಪೃಥಾಂ - ಕುಂತಿಯನ್ನೂ, ಕೃಷ್ಣಾಂಚ - ದ್ರೌಪದಿಯನ್ನೂ, ಶುಚಾ-ದುಃಖದಿಂದ, ಅರ್ದಿತಾನ್ - ಪೀಡಿಸಲ್ಪಟ್ಟ, ಹತಬಂಧೂನ್ - ಬಂಧುಗಳನ್ನು ಕಳೆದುಕೊಂಡಿರುವ ಇತರರನ್ನೂ, ಸಾಂತ್ವಯಾಮಾಸ-ಸಂತೈಸಿದನು ॥ ೩-೪ ॥ ಕಿತವೈಃ-ಧೂರ್ತರಾದ ದುರ್ಯೋಧನಾದಿಗಳಿಂದ, ಹೃತಂ-ಅಪಹರಿಸಲ್ಪಟ್ಟ, ಅಜಾತಶತ್ರೋಃ, ಅಜಾತ - ಹುಟ್ಟದಿರುವ, ಶತ್ರೋಃ - ಶತ್ರುಗಳುಳ್ಳ ಧರ್ಮರಾಜನ, ಸ್ವಂ-ಸ್ವಂತವಾದ, ರಾಜ್ಯಂ - ರಾಜ್ಯವನ್ನು, ಸಾಧಯಿತ್ವಾ- ಗೆದ್ದು, ಯಾಜ್ಞಸೇನ್ಯಾಃ-ದ್ರೌಪದಿಯ, ಕಚ...ಯುಷಃ, ಕಚ-ಕೂದಲಿನ, ಸ್ಪರ್ಶ-ಸೋಂಕಿನಿಂದ, ಕ್ಷತ-ನಾಶವಾದ, ಆಯುಷಃ-ಆಯುಸ್ಸುಳ್ಳ ಕೌರವರನ್ನು, ಅಜೀಹನತ್-ಕೊಲ್ಲಿಸಿದನು. ॥ ೫ ॥ ಉತ್ತಮಕಲ್ಪಕೈಃ-ಉತ್ತಮತರವಾದ ತ್ರಿಭಿಃ-ಮೂರು, ಅಶ್ವಮೇಧೈಃ-ಅಶ್ವಮೇಧಯಾಗಗಳಿಂದ, ತಂ-ಧರ್ಮರಾಯನಿಂದ ಯಾಜಯಿತ್ವಾ-ಯಜ್ಞ

ಸ್ಮರಿಸಿಕೊಂಡು ಅತ್ತವರಾಗಿ, ಶ್ರೀಹರಿಯ ಪಾದಕಮಲದಿಂದ ಜನಿಸಿದ ದೇವಗಂಗೆಯಲ್ಲಿ ಸ್ನಾನಮಾಡಿದರು ॥ ೨ ॥ ಆಗ ಶ್ರೀಕೃಷ್ಣಮೂರ್ತಿಯು ಅನೇಕರುಷಿಗಳಿಂದೊಡಗೂಡಿ, "ಸಕಲಭೂತಗಳೂ ಕಾಲಕ್ಕೊಳಪಟ್ಟಿರುವುದರಿಂದ ಯಾರೂ ಕಾಲವನ್ನತಿಕ್ರಮಿಸಲಾರರು. ಇದಕ್ಕೆ ಪ್ರತೀಕಾರವಿಲ್ಲ. ಆದುದರಿಂದ ಚಿಂತಿಸಿ ಫಲವಿಲ್ಲ" ಎಂದು ಅಲ್ಲಿ ಕುಳಿತುಕೊಂಡು ಅಳುತ್ತಿರುವ ಧರ್ಮರಾಜ ಮೊದಲಾದ ಪಾಂಡವರನ್ನೂ, ಧೃತರಾಷ್ಟ್ರನನ್ನೂ, ಗಾಂಧಾರಿಯನ್ನೂ, ಪುತ್ರಶೋಕದಿಂ ಪೀಡಿತೆಯಾದ, ಕುಂತಿಯನ್ನೂ, ದ್ರೌಪದಿಯನ್ನೂ, ಬಂಧುಗಳನ್ನು ಕಳೆದುಕೊಂಡು ಗೋಳಾಡುತ್ತಿರುವ ಇತರರನ್ನೂ ಸಹ ಸಂತೈಸಿದನು ॥೩॥ ಆಮೇಲೆ ಜೂಜುಗಾರರಾದ ದುರ್ಯೋಧನಾದಿಗಳು ಕಿತ್ತುಕೊಂಡಿದ್ದ ರಾಜ್ಯವನ್ನು ಧರ್ಮರಾಜನಿಗೆ ಕೊಡಿಸಿ, ದ್ರೌಪದಿಯ ಮುಡಿಯನ್ನು ಸೋಂಕಿದುದರಿಂದ ಆಯುಸ್ಸು ಕುಂದಿದ ಕೌರವರನ್ನು ಭೀಮಾರ್ಜುನಾದಿಗಳಿಂದ ಕೊಲ್ಲಿಸಿದನು ॥೫॥ ಬಳಿಕ ಆ ಧರ್ಮರಾಜನಿಂದ ಉತ್ತಮತರಗಳಾದ ಮೂರು ಅಶ್ವಮೇಧಯಾಗಗಳನ್ನು ಮಾಡಿಸಿ

* ಪಾ-ಘಾತಯಿತ್ವಾಸತೋರಾಜ್ಞಃ-ದುಷ್ಟರಾದ ದುರ್ಯೋಧನಾದಿರಾಜರನ್ನುಕೊಲ್ಲಿಸಿ

ಸ್ತಂ ತ್ರಿಭಿ ರುತ್ತಮಕಲ್ಪಕೈಃ।ತದ್ಯಶಃ ಪಾವನಂ ದಿಕ್ಷು ಶತಮನ್ಯೋ ರಿವಾ
ತನೋತ್ ॥ ೬ ॥ ಆಮಂತ್ರ್ಯ ಪಾಂಡುಪುತ್ರಾಂಶ್ಚ ಶೈನೇಯೋದ್ಧವಸಂ
ಯುತಃ । ದ್ವೈಪಾಯನಾದಿಭಿ ರ್ವಿಪ್ರೈಃ ಪೂಜಿತೈಃ ಪ್ರತಿಪೂಜಿತಃ ॥ ೭ ॥
ಗಂತುಂ ಕೃತಮತಿ ರ್ಬ್ರಹ್ಮನ್ ದ್ವಾರಕಾಂ ರಥ ಮಾಸ್ಥಿತಃ । ಉಪಲೇಭೇ
ಭಿಧಾವಂತೀ ಮುತ್ತರಾಂ ಭಯವಿಹ್ವಲಾಂ ॥ ೮ ॥ ಉತ್ತರಾ । ಪಾಹಿ ಪಾಹಿ
ಮಹಾಯೋಗಿನ್ ದೇವ ದೇವ ಜಗತ್ಪತೇ । ನಾನ್ಯಂ ತ್ವ ದಭಯಂ ಪಶ್ಯೇ
ಯತ್ರ ಮೃತ್ಯುಃ ಪರಸ್ಪರಂ ॥ ೯ ॥ ಅಭಿದ್ರವತಿ ಮಾ ಮೀಶ ಶರಸ್ತಪ್ತಾಯ
ಸೋ ವಿಭೋ । ಕಾಮಂ ದಹತು ಮಾಂ ನಾಥ ಮಾ ಮೇ ಗರ್ಭೋ ನಿ

ಪನ್ನಮಾಡಿಸಿ, ಶತಮನ್ಯೋಃ ಇಂದ್ರನ, ಯಶಃ-ಕೀರ್ತಿಯನ್ನು, ಉಪೇಂದ್ರಇವ-ವಾಮನನಂತೆ, ದಿಕ್ಷು-ದಿಕ್ಕುಗಳಲ್ಲಿ, ಪಾವನಂ-ಪರಿಶುದ್ಧವಾದ, ತದ್ಯಶಃ-ಅವನಕೀರ್ತಿಯನ್ನು, ಅತನೋತ್-ವಿಸ್ತರಿಸಿದನು॥೬॥ ಶೈನೇ...ಸಂಯುತಃ, ಶೈನೇಯ-ಸಾತ್ಯಕಿಯಿಂದಲೂ, ಉದ್ಧವ-ಉದ್ಧವನಿಂದಲೂ, ಸಂಯುತಃ-ಕೂಡಿರುವ ಕೃಷ್ಣನು, ಪಾಂಡುಪುತ್ರಾಂಶ್ಚ-ಪಾಂಡವರನ್ನು, ಆಮಂತ್ರ್ಯ-ಅನುಜ್ಞೆಯನ್ನುಕೇಳಿ, ಪೂಜಿತೈಃ-ಪೂಜಿಸಲ್ಪಟ್ಟ, ದ್ವೈಪಾಯನಾದಿಭಿಃ-ವ್ಯಾಸನೇ ಮೊದಲಾದ, ವಿಪ್ರೈಃ-ಬ್ರಾಹ್ಮಣರಿಂದ, ಪ್ರತಿಪೂಜಿತಃ-ಮರಳಿ-ಪೂಜಿಸಲ್ಪಟ್ಟವನಾಗಿ ॥ ೭ ॥ ಹೇಬ್ರಹ್ಮನ್-ಎಲೈ ಶೌನಕನೆ? ಶ್ರೀಕೃಷ್ಣನು, ದ್ವಾರಕಾಂ-ದ್ವಾರಕಾಪಟ್ಟಣವನ್ನು, ಗಂತುಂ - ಹೋಗುವುದಕ್ಕೆ, ಕೃತಮತಿಃ - ನಿಶ್ಚಯಿಸಿದವನಾಗಿ, ರಥಂ - ರಥದಲ್ಲಿ, ಆಸ್ಥಿತಃ-ಕುಳಿತುಕೊಂಡು, ಅಭಿಧಾವಂತೀಂ-ಓಡಿಬರುತ್ತಿರುವ, ಭಯವಿಹ್ವಲಾಂ - ಭಯದಿಂದವ್ಯಾಕುಲಳಾದ, ಉತ್ತರಾಂ ಉತ್ತರೆಯನ್ನು, ಉಪಲೇಭೇ-ಕಂಡನು ॥ ೮ ॥ ಉತ್ತರಾ - ಉತ್ತರೆಯು ಸ್ತುತಿಸುತ್ತಾಳೆ, ಮಹಾಯೋಗಿನ್-ಯೋಗೀಶ್ವರೇಶ್ವರನೆ! ದೇವದೇವ- ದೇವತೆಗಳಿಗೆ ದೇವನಾದವನೆ? ಜಗತ್ಪತೇ-ಪ್ರಪಂಚಕ್ಕೊಡೆಯನೆ! ಯತ್ರ-ಯಾವಪ್ರಪಂಚದಲ್ಲಿ, ಪರಸ್ಪರಂ-ಒಬ್ಬರಿಗೊಬ್ಬರು, ಮೃತ್ಯುಃ ಮೃತ್ಯುವಾಗಿರುವರೊ, ತತ್ರ-ಅಂತಹ ಈ ಲೋಕದಲ್ಲಿ, ತ್ವತ್-ನಿನಗಿಂತಲೂ, ಅನ್ಯಂ-ಇತರರನ್ನು, ಅಭಯಂ ಭಯವಿಲ್ಲದವನನ್ನಾಗಿ, ನಪಶ್ಯೇ-ನೋಡುವುದಿಲ್ಲ ॥ ೯ ॥ ಈಶ-ಎಲೈಭಗವಂತನೆ ವಿಭೋ-ವ್ಯಾಪಕನೇ ! ತಪ್ತಾಯಸಃ, ತಪ್ತ - ಸುಡಲ್ಪಟ್ಟ, ಆಯಸಃ - ಕಬ್ಬಿಣದಅಲಗುಗಳುಳ್ಳ, ಶರಃ-ಈ ಬಾಣವು, ಮಾಂ-

ಪೂರ್ವದಲ್ಲಿ ವಾಮನಮೂರ್ತಿಯು ಇಂದ್ರನ ಕೀರ್ತಿಯನ್ನು ವಿಸ್ತರಿಸಿದಂತೆ, ಶ್ರೀಕೃಷ್ಣನು ಆ ಪಾಂಡವರ ಕೀರ್ತಿಯನ್ನು ಎಲ್ಲ ದಿಕ್ಕುಗಳಲ್ಲಿಯೂ ಹರಡಿದನು ॥ ೬ ॥ ಬಳಿಕ ಆತನು ಪಾಂಡವರಿಂದನುಜ್ಞೆಯನ್ನು ಪಡೆದು, ಸಾತ್ಯಕಿ ಉದ್ಧವರಿಂದೊಡಗೂಡಿ, ರಥದಲ್ಲಿ ಕುಳಿತುಕೊಂಡು ದ್ವಾರಕಾಪಟ್ಟಣಕ್ಕೆ ಪ್ರಯಾಣಮಾಡಬೇಕೆಂದು ಹೊರಡುವಷ್ಟರಲ್ಲಿಯೇ, ಅಭಿಮನ್ಯುವಿನ ಹೆಂಡತಿಯಾದ ಉತ್ತರಾದೇವಿಯು, ಭಯದಿಂದ ಗಾಬರಿಗೊಂಡು ಓಡಿಬರುವುದನ್ನು ಕಂಡನು ॥೮॥ ಆಗ ಉತ್ತರಾದೇವಿಯು ಶ್ರೀಕೃಷ್ಣಮೂರ್ತಿಯನ್ನು ಕಂಡು, ಸಕಲಜಗತ್ತುಗಳನ್ನು ರಕ್ಷಿಸುವ ಸತ್ಯಸಂಕಲ್ಪವುಳ್ಳ ಮಹನೀಯನೆ? ಸಕಲದೇವತೆಗಳಿಗೂ ದೇವನೆ? ಸರ್ವವ್ಯಾಪಕನೆ? ಜಗನ್ನಾಥನೆ? ಒಬ್ಬರಿಗೊಬ್ಬರು ಮೃತ್ಯುವಾಗಿರುವ ಈ ಪ್ರಪಂಚದಲ್ಲಿ ಮೃತ್ಯುಭಯವನ್ನು ಕಳೆದು ಕಾಪಾಡಬೇಕಾದರೆ ನೀನೊಬ್ಬನೇ ಅಲ್ಲದೆ ಮತ್ತಾರನ್ನೂ ಕಾಣೆನು॥೯॥ಎಲೈ ಪರಮೇಶ್ವರನೇ? ಇದೋ ನೋಡು, ಕಾದ ಕಬ್ಬಿಣದ

ಪಾತ್ಯತಾಂ ॥ ೧೦ ॥ ಉಪಧಾರ್ಯ ವಚ ಸ್ತಸ್ಯಾ ಭಗವಾನ್ ಭಕ್ತವತ್ಸಲಃ ।
ಅಪಾಂಡವ ಮಿದಂ ಕರ್ತುಂ ದ್ರೌಣೇ ರಸ್ತ್ರ ಮಬುಧ್ಯತ ॥ ೧೧ ॥ ತರ್ಹ್ಯೇ
ವಾಥ ಭೃಗುಶ್ರೇಷ್ಠ ಪಾಂಡವಾಃ ಪಂಚಸಾಯಕಾನ್ । ಆತ್ಮನೋ ಭಿಮು
ಖಾನ್ ದೀಪ್ತಾ ನಾಲಕ್ಷ್ಯಾ ಸ್ತ್ರಾಣ್ಯುಪಾದದುಃ ॥ ೧೨ ॥ ವ್ಯಸನಂ ವೀಕ್ಷ್ಯ
ತತ್ತೇಷಾ ಮನನ್ಯವಿಷಯಾತ್ಮನಾಂ । ಸುದರ್ಶನೇನ ಸ್ವಾಸ್ತ್ರೇಣ ಸ್ವಾನಾಂ
ರಕ್ಷಾಂ ವ್ಯಧಾ ದ್ವಿಭುಃ ॥೧೩॥ ಅಂತಸ್ಥ ಸ್ಸರ್ವಭೂತಾನಾ ಮಾತ್ಮಾ ಯೋ
ಗೇಶ್ವರೋ ಹರಿಃ । ಸ್ವಮಾಯಯಾ ವೃಣೋ ದ್ಗರ್ಭಂ ವೈರಾಟ್ಯಾಃ ಕುರು

ನನ್ನನ್ನು, ಅಭಿದ್ರವತಿ-ಎದುರಿಸಿ ಬರುತ್ತಿದೆ, ನಾಥ-ಎಲೈಸ್ವಾಮಿಯೇ ? ಮಾಂ - ನನ್ನನ್ನು, ಕಾಮಂ-ಬೇಕಾದಹಾಗೆ, ದಹತು-ಸುಡಲಿ, ಮೇ-ನನ್ನ, ಗರ್ಭಃ-ಗರ್ಭವು, ಮಾನಿಪಾತ್ಯತಾಂ-ಬೀಳಿಸಲ್ಪಡಬೇಡ ॥೧೦॥ ಭಕ್ತವತ್ಸಲಃ-ಭಕ್ತರಲ್ಲಿ ವಾತ್ಸಲ್ಯವುಳ್ಳ, ಭಗವಾನ್ - ಭಗವಂತನು, ತಸ್ಯಾಃ - ಆ ಉತ್ತರೆಯ, ವಚಃ - ಮಾತನ್ನು, ಉಪಧಾರ್ಯ - ಚೆನ್ನಾಗಿಯೋಚಿಸಿ, ಇದಂ-ಈ ಪ್ರಪಂಚವನ್ನು, ಅಪಾಂಡವಂ-ಪಾಂಡವಶೂನ್ಯವನ್ನಾಗಿ, ಕರ್ತುಂ-ಮಾಡುವುದಕ್ಕಾಗಿ, (ಬಿಡಲ್ಪಟ್ಟ) ದ್ರೌಣೇಃ-ಅಶ್ವತ್ಥಾಮನ, ಅಸ್ತ್ರಂ-ಅಸ್ತ್ರವನ್ನಾಗಿ, ಅಬುಧ್ಯತ-ತಿಳಿದನು ॥ ೧೧ ॥ ಹೇಭೃಗುಶ್ರೇಷ್ಠ-ಎಲೈಭೃಗುವಂಶದವರಲ್ಲಿ ಶ್ರೇಷ್ಠನಾದ ಶೌನಕನೇ? ಅಥ-ಆಮೇಲೆ, ತರ್ಹ್ಯೇವ-ಆಗಲೇ, ಪಾಂಡವಾಃ - ಪಾಂಡವರು, ಆತ್ಮನಃ-ತಮಗೆ, ಅಭಿಮುಖಾನ್-ಎದುರಾಗಿಬರುತ್ತಿರುವ, ಪಂಚ-ಐದು, ಸಾಯಕಾನ್-ಬಾಣಗಳನ್ನು, ಆಲಕ್ಷ್ಯ-ನೋಡಿ, ಅಸ್ತ್ರಾಣಿ-ಆಯುಧಗಳನ್ನು, ಉಪಾದದುಃ-ತೆಗೆದುಕೊಂಡರು ॥ ೧೨ ॥ ವಿಭುಃ-ಕೃಷ್ಣನು, ಅನನ್ಯ...ತ್ಮನಾಂ, ಅನನ್ಯವಿಷಯ-ಬೇರೇವಿಷಯವನ್ನು ಚಿಂತಿಸದ, ಆತ್ಮನಾಂ-ಮನಸ್ಸುಳ್ಳ, ತೇಷಾಂ-ಆಪಾಂಡವರ, ತತ್-ಅಪರಿಹಾರ್ಯವಾದ, ವ್ಯಸನಂ-ದುಃಖವನ್ನು, ವೀಕ್ಷ್ಯ-ನೋಡಿ, ಸ್ವಾಸ್ತ್ರೇಣ-ತನಗೆಅಸ್ತ್ರರೂಪವಾಗಿರುವ, ಸುದರ್ಶನೇನ-ಚಕ್ರಾಯುಧದಿಂದ, ಸ್ವಾನಾಂ - ತನ್ನಭಕ್ತರಾದ ಪಾಂಡವರ, ರಕ್ಷಾಂ-ಸಂರಕ್ಷಣೆಯನ್ನು, ವ್ಯಧಾತ್-ಮಾಡಿದನು ॥ ೧೩ ॥ ಸರ್ವಭೂತಾನಾಂ-ಸಕಲಭೂತಗಳಿಗೂ, ಆತ್ಮಾ-ಅಂತರ್ಯಾಮಿಯಾಗಿರುವ, ಹರಿಃ-ಕೃಷ್ಣನು, ಯೋಗೇಶ್ವರಃ, ಯೋಗ-ಅದ್ಭುತಮಹಿಮೆಗಳಿಗೆ, ಈಶ್ವರಃ

ಅಲಗುಗಳಿಂದ ಕೂಡಿರುವ ಈ ಬಾಣವು ನನ್ನೆದುರಾಗಿ ಅಟ್ಟಿಬರುತ್ತಿರುವುದು. ಮಹಾತ್ಮನೇ ! ಈ ಬಾಣವು ನನ್ನನ್ನು ಕೊಂದರೂ ಕೊಲ್ಲಲಿ. ನನ್ನ ಗರ್ಭವನ್ನು ಮಾತ್ರ ಹಾಳು ಮಾಡದಂತೆ ಕಾಪಾಡು ॥ ೧೦ ॥ ಎಂದು ಮೊರೆಯಿಡುತ್ತಿರುವ ಆಕೆಯ ಮಾತನ್ನು ಕೇಳಿ ಭಕ್ತವತ್ಸಲನಾದ ಭಗವಂತನು " ಅಶ್ವತ್ಥಾಮನು ಭೂಮಿಯಲ್ಲಿ ಪಾಂಡವರ ಸಂತತಿಯಿಲ್ಲದಂತೆ ಮಾಡಬೇಕೆಂದು ಪ್ರಯೋಗಿಸಿದ ನಿಷ್ಪಾಂಡವಾಸ್ತ್ರವಿದು " ಎಂದು ತಿಳಿದನು ॥೧೧॥ ಆ ಕಾಲದಲ್ಲಿಯೇ ಪಾಂಡವರೂ ತಮ್ಮೆದುರಾಗಿ ಬರುತ್ತಿರುವ ಐದು ಉರಿಯುತ್ತಿರುವ ಬಾಣಗಳನ್ನು ಕಂಡು, ತಾವೂ ಆಯುಧಗಳನ್ನು ತೆಗೆದುಕೊಂಡು ಸಿದ್ಧರಾದರು॥೧೨॥ ಆಗ ಭಗವಂತನು ಏಕಾಂತಭಕ್ತರಾದ ಪಾಂಡವರಿಗುಂಟಾಗಿರುವ ಅಪ್ರತೀಕಾರವಾದ ವ್ಯಸನವನ್ನು ತಿಳಿದು, ಮತ್ತಾವ ಅಸ್ತ್ರದಿಂದಲೂ ಶಾಂತಿಗೊಳಿಸುವುದಕ್ಕಾಗದ ಆ ನಿಷ್ಪಾಂಡವಾಸ್ತ್ರವನ್ನು ತನ್ನ ಚಕ್ರಾಯುಧದಿಂದ ಶಾಂತಿಗೊಳಿಸಿ, ತನ್ನ ಭಕ್ತರನ್ನು ಪಾಲಿಸಿದನು॥೧೩॥ ಬಳಿಕ ಶ್ರೀಕೃಷ್ಣಮೂರ್ತಿಯು ಸಕಲಭೂತಗಳಲ್ಲಿ ಅಂತರ್ಯಾಮಿಯಾಗಿಯೂ, ಆಶ್ಚ

ತ್ರಾತವೇ॥೧೪॥ ಯದ್ಯಪ್ಯಸ್ತ್ರಂ ಬ್ರಹ್ಮಶಿರ ಸ್ತ್ವಮೋಘಂ ಚಾಪ್ರತಿಕ್ರಿಯಂ।
ವೈಷ್ಣವಂ ತೇಜ ಆಸಾದ್ಯ ಸಮಶಾಮ್ಯ ದ್ಭೃಗೂದ್ವಹ ॥ ೧೫॥ ಮಾಮಂ
ಸ್ಥಾ ಏತದಾಶ್ಚರ್ಯಂ ಸರ್ವಾಶ್ಚರ್ಯಮಯೇಽಚ್ಯುತೇ । ಯ ಇದಂ ಮಾ
ಯಯಾ ದೈವ್ಯಾ ಸೃಜ ತ್ಯವತಿ ಹಂತ್ಯಜಃ ॥ ೧೬ ॥ ಬ್ರಹ್ಮತೇಜೋ ವಿನಿ
ರ್ಮುಕ್ತೈ ರಾತ್ಮಜೈ ಸ್ಸಹ ಕೃಷ್ಣಯಾ । ಪ್ರಯಾಣಾಭಿಮುಖಂ ಕೃಷ್ಣ
ಮಿದ ಮಾಹ ಪೃಥಾ ಸತೀ ॥ ೧೭ ॥ ಕುಂತೀ॥ ನಮಸ್ಯೇ ಪುರುಷಂ ತ್ವಾದ್ಯ

ನೆಲೆಯಾದವನಾದುದರಿಂದ ವೈರಾಟ್ಯಾಃ - ವಿರಾಟಪುತ್ರಿಯಾದ, ಉತ್ತರೆಯ, ಅಂತಸ್ಥಃ - ಗರ್ಭದಲ್ಲಿ ಪ್ರವೇಶಿಸಿದವನಾಗಿ, ಕುರುತಂತವೇ - ಕೌರವಪಾಂಡವರ ಸಂತಾನವನ್ನು ಬೆಳಸುವುದಕ್ಕಾಗಿ ಗರ್ಭಂ-ಆಕೆಯ ಗರ್ಭವನ್ನು, ಸ್ವಮಾಯಯಾ -ತನ್ನ ಮಾಯಾಶಕ್ತಿಯಿಂದ, ಆವೃಣೋತ್ - ಮುಚ್ಚಿದನು, ॥ ೧೪ ॥ ಬ್ರಹ್ಮಶಿರಃ - ಬ್ರಹ್ಮಶಿರಸ್ಸೆಂಬ, ಅಸ್ತ್ರಂ - ಅಸ್ತ್ರವು, ಯದ್ಯಪಿ - ಹೇಗಾದರೂ, ಅಮೋಘಂ-ಸಾರ್ಥಕವು, ಅಪ್ರತಿಕ್ರಿಯಂಚ-ಪ್ರತೀಕಾರವಿಲ್ಲದ್ದೂ ಹೌದು, ತಥಾಪಿ-ಹಾಗಾದರೂ, ಹೇ ಭೃಗೂದ್ವಹ - ಎಲೈ ಶೌನಕನೇ! ಆ ಅಸ್ತ್ರವು, ವೈಷ್ಣವಂ - ವಿಷ್ಣುಸಂಬಂಧವಾದ, ತೇಜಃ - ತೇಜಸ್ಸನ್ನು, ಆಸಾದ್ಯ-ಹೊಂದಿ, ಸಮಶಾಮ್ಯತ್-ಶಾಂತವಾಯಿತು, ॥ ೧೫ ॥ ಅಜಃ - ಜನ್ಮಾದಿಗಳಿಲ್ಲದ, ಯಃ-ಯಾವಪರಮಾತ್ಮನು. ದೈವ್ಯಾ-ತನ್ನ ಸಂಬಂಧವಾದ, ಮಾಯಯಾ - ಮಾಯೆಯಿಂದ, ಇದಂ-ಈ ಪ್ರಪಂಚವನ್ನು, ಸೃಜತಿ-ಹುಟ್ಟಿಸುವನೋ, ಅವತಿ - ಪಾಲಿಸುವನೋ, ಹಂತಿ - ನಾಶಗೊಳಿಸುವನೋ ಅಂತಹ, ಸರ್ವ...ಮಯೇ, ಸರ್ವ-ಸಮಸ್ತಗಳಾದ, ಆಶ್ಚರ್ಯ-ಅದ್ಭುತಗಳಿಂದ, ಮಯೇ-ಪ್ರಚುರವಾದ, ಅಚ್ಯುತೇ - ಶ್ರೀಕೃಷ್ಣನಲ್ಲಿ, ಏತತ್ - ಈಬ್ರಹ್ಮಾಸ್ತ್ರವು ಶಾಂತವಾದುದನ್ನು, ಆಶ್ಚರ್ಯಂ-ಆಶ್ಚರ್ಯವನ್ನಾಗಿ, ಮಾಮಂಸ್ಥಾಃ-ತಿಳಿಯಬೇಡ ॥ ೧೬ ॥ ಸತೀ-ಪತಿವ್ರತೆಯಾದ, ಪೃಥಾ-ಕುಂತಿಯು ಬ್ರಹ್ಮ...ಮುಕ್ತೈಃ ಬ್ರಹ್ಮ - ಬ್ರಹ್ಮಾಸ್ತ್ರದ, ತೇಜಃ - ತೇಜಸ್ಸಿನಿಂದ, ವಿನಿರ್ಮುಕ್ತೈಃ-ಬಿಡಲ್ಪಟ್ಟ, ಆತ್ಮಜೈಃ - ಮಕ್ಕಳಿಂದಲೂ, ಕೃಷ್ಣಯಾಚಸಹ - ದ್ರೌಪದಿಯಿಂದಲೂ ಕೂಡಿದವಳಾಗಿ, ಪ್ರಯಾಣಾಭಿಮುಖಂ-ಪ್ರಯಾಣಕ್ಕೆ ಸಿದ್ಧನಾಗಿರುವ, ಕೃಷ್ಣಂ-ಕೃಷ್ಣನನ್ನುಕುರಿತು, ಇದಂ-ಈ ಮಾತನ್ನು, ಆಹ ಹೇಳುತ್ತಾಳೆ, ॥ ೧೭ ॥ ಆದ್ಯಂ-ಜನ್ಮಾದಿಗಳಿಲ್ಲದ, ಪುರುಷಂ-ಪುರುಷನಾಗಿಯೂ, ಈಶ್ವರಂ-ಲೋಕ

ರ್ಯಗಳಿಗೆ ತವರುಮನೆಯಾಗಿಯೂ ಇರುವುದರಿಂದ, ತಾನು ಹೊರಗಿರುವವನಂತೆ ಕಾಣುತ್ತಿದ್ದರೂ, ಆ ವಿರಾಟಪುತ್ರಿಯಾದ ಉತ್ತರಾದೇವಿಯ ಗರ್ಭದಲ್ಲಿರುವವನಾಗಿ, ಭಕ್ತರಾದ ಪಾಂಡವರ ಸಂತಾನವನ್ನು ಬೆಳೆಯಿಸುವುದಕ್ಕಾಗಿ, ತನ್ನ ಮಾಯಾಶಕ್ತಿಯಿಂದಾಕೆಯ ಗರ್ಭಕ್ಕೆ ಚ್ಯುತಿ ಬಾರದಂತೆ ಕಾಪಾಡಿದನು॥ ೧೪ ॥ ಅಯ್ಯಾ ಶೌನಕನೇ? ಬ್ರಹ್ಮಾಸ್ತ್ರವೆಂಬುದು ಯೆಲ್ಲೆಡೆಗಳಲ್ಲಿಯೂ ಅಪ್ರತೀಕಾರವಾದುದಾದರೂ, ಶ್ರೀಕೃಷ್ಣನ ತೇಜೋರೂಪವಾದ ಚಕ್ರಾಯುಧದಿಂದ ಶಾಂತವಾಯಿತು ॥ ೧೫ ॥ ಯಾವ ಪರಮಾತ್ಮನು ಜನ್ಮಾದಿಗಳಿಲ್ಲದವನಾದರೂ, ತನ್ನ ಮಾಯೆಯಿಂದೀಪ್ರಪಂಚವನ್ನು ಸೃಷ್ಟಿಸಿ, ಬೆಳೆಯಿಸಿ, ಲಯಗೊಳಿಸುವನೋ, ಅಂತಹ ಪರಮಾಶ್ಚರ್ಯನಿಧಿಯಾದ ಭಗವಂತನು ಈ ಬ್ರಹ್ಮಾಸ್ತ್ರವನ್ನು ನಿಗ್ರಹಿಸಿದನೆಂಬುದಾಶ್ಚರ್ಯವೆಂದು ತಿಳಿಯಬೇಡ ॥ ೧೬ ॥ ಇಂತು ಆ ಬ್ರಹ್ಮಾಸ್ತ್ರದ ಹಾವಳಿಯಿಂದ ಬಿಡುಗಡೆಯನ್ನು ಪಡೆದ ಮಕ್ಕಳಿಂದಲೂ, ದ್ರೌಪದಿಯಿಂದಲೂ ಕೂಡಿದ ಕುಂತೀದೇವಿಯು, ಅತ್ಯಂತಸಂತುಷ್ಟಳಾಗಿ, ದ್ವಾರಕಾನಗರಕ್ಕೆ ಹೊರಟಿರುವ

ಮೀಶ್ವರಂ ಪ್ರಕೃತೇಃ ಪರಂ । ಅಲಕ್ಷ್ಯಂ ಸರ್ವಭೂತಾನಾ ಮಂತರ್ಬಹಿ
ರವಸ್ಥಿತಂ॥೧೮॥ಮಾಯಾಯವನಿಕಾಚ್ಛನ್ನ ಮಜ್ಞಾ ಧೋಕ್ಷಜ ಮವ್ಯಯಂ ।
ನಲಕ್ಷ್ಯಸೇ ಮೂಢದೃಶಾಂ ನಟೋ ನಾಟ್ಯಧರೋ ಯಥಾ ॥ ೧೯ ॥ ತಥಾ
ಪರಮಹಂಸಾನಾಂ ಮುನೀನಾ ಮಮಲಾತ್ಮನಾಂ । ಭಕ್ತಿಯೋಗವಿಧಾನಾ
ರ್ಥಂ ಕಥಂ ಪಶ್ಯೇಮಹಿ ಸ್ತ್ರಿಯಃ ॥ ೨೦ ॥ ಕೃಷ್ಣಾಯ ವಾಸುದೇವಾಯ
* ದೇವಕೀನಂದನಾಯಚ । ನಂದಗೋಪಕುಮಾರಾಯ ‡ಗೋವಿಂದಾಯ

ಕ್ಕೊಡೆಯನಾಗಿಯೂ, ಪ್ರಕೃತೇಃ-ಪ್ರಕೃತಿಗಿಂತಲೂ, ಪರಂ-ಮೇಲ್ಪಟ್ಟವನಾಗಿಯೂ, ಸವಭೂತಾನಾಂ ಸಕಲವಸ್ತುಗಳ, ಅಂತಃ-ಒಳಗೂ, ಬಹಿಃ-ಹೊರಗೂ, ಅವಸ್ಥಿತಂ - ಇರುವವನಾದರೂ, ಅಲಕ್ಷ್ಯಂ-ಕಾಣಲ್ಪಡದೆ ಯಿರುವ ಪರಮಾತ್ಮನನ್ನು, ನಮಸ್ಯೇ-ನಮಸ್ಕರಿಸುತ್ತೇನೆ, ॥ ೧೮ ॥ ಅಜ್ಞಾ - ತಿಳಿವಳಿಕೆ ಯಿಲ್ಲದನಾನು, ಮಾಯಾ...ಚ್ಛನ್ನಂ, ಮಾಯಾ-ಮಾಯೆಯೆಂಬ, ಯವನಿಕಾ- ತೆರೆಯಿಂದ, ಛನ್ನಂ-ಮರೆಗೊಳಿಸಲ್ಪಟ್ಟಿರುವ, ಅಧೋಕ್ಷಜಂ-ಜಿತೇಂದ್ರಿಯನಾದ, ಅವ್ಯಯಂ-ನಾಶರಹಿತನಾದ, ತ್ವಾಂ-ನಿನ್ನನ್ನು, ನಮಸ್ಯೇ-ನಮಸ್ಕಾರವನ್ನುಮಾತ್ರ ಮಾಡುತ್ತೇನೆ, ನಾಟ್ಯಧರಃ- ನಾಟ್ಯವನ್ನು ಮಾಡುವ, ನಟೋಯಥಾ-ನಟನಂತೆ, ತ್ವಂ-ನೀನು, ಮೂಢದೃಶಾಂ-ಪಾಮರರಿಗೆ, ನಲಕ್ಷ್ಯಸೇ- ಕಾಣುವದಿಲ್ಲ, ॥ ೧೯ ॥ ತಥಾ-ಹಾಗೆಯೇ, ಮುನೀನಾಂ-ಮನನ ಶೀಲರಾದ, ಅಮಲಾತ್ಮನಾಂ-ನಿರ್ಮಲಬುದ್ಧಿಯುಳ್ಳ, ಪರಮಹಂಸಾನಾಂ-ಆತ್ಮಾನಾತ್ಮವಿವೇಕವುಳ್ಳ ಜ್ಞಾನಿಗಳಿಗೂ, ಭಕ್ತಿ···ರ್ಥಂ, ಭಕ್ತಿಯೋಗ - ಭಕ್ತಿಯೋಗವನ್ನು ವಿಧಾನ ನೆಲೆಗೊಳಿಸುವುದೇ, ಅರ್ಥಂ-ಪ್ರಯೋಜನವಾಗುಳ್ಳ, ನಿನ್ನನ್ನು, ಸ್ತ್ರಿಯಃ-ಹೆಂಗಸರಾದನಾವು, ಕಥಂ-ಹೇಗೆ, ಪಶ್ಯೇಮಹಿ - ನೋಡಬಲ್ಲವು ! ॥ ೨೦ ॥ ಕೃಷ್ಣಾಯ-ಅಜ್ಞಾನವನ್ನು ನಾಶಗೊಳಿಸುವ, ವಾಸುದೇವಾಯ- ವಸುದೇವಪುತ್ರನಾದ, ದೇವಕೀನಂದನಾಯ - ದೇವಕಿಯಪುತ್ರನಾದ, ಅಥವಾ ಲಕ್ಷ್ಮೀಪತಿಯಾದ, ನಂದಗೋಪ ಕುಮಾರಾಯ, ನಂದಗೋಪನ ಮಗನಾದ, ಅಥವಾ ನಂದಗೋಪ-ನಂದಗೋ

ಶ್ರೀಕೃಷ್ಣಮೂರ್ತಿಯನ್ನು ಹೊಗಳತೊಡಗಿದುದೆಂತೆಂದರೆ ॥ ೧೭ ॥ ಅಯ್ಯಾ ಕೃಷ್ಣಮೂರ್ತಿಯೇ ! ನೀನು ನನಗಿಂತಲೂ ಚಿಕ್ಕವನೆನಿಸಿದ್ದರೂ, ಜನನಾದಿಗಳಿಲ್ಲದವನಾಗಿಯೂ, ಲೋಕನಿಯಾಮಕನಾಗಿಯೂ, ಪ್ರಕೃತಿಗೆ ಪರನಾಗಿಯೂ, ಯಿರುವೆ. ನೀನು ಸಕಲಭೂತಗಳಲ್ಲಿಯೂ ಹೊರಗೂ ಒಳಗೂ ತುಂಬಿರುವನಾಗಿದ್ದರೂ ಎಲ್ಲರಿಗೂ ಅದೃಶ್ಯನಾಗಿರುತ್ತಿ ॥ ೧೮ ॥ ಹುಟ್ಟುಸಾವುಗಳಿಲ್ಲದೆಯೂ, ಜ್ಞಾನಸ್ವರೂಪನಾಗಿಯೂ, ವೇಷಧಾರಿಯಾದ ನಟನಂತೆ ಮಾಯೆಯೆಂಬ ತೆರೆಯಿಂದ ಮರೆಯಾದವನಾಗಿಯೂ ಇರುವ, ನಿನ್ನ ಮಹಿಮೆಯನ್ನು ಪಾಮರರು ತಿಳಿಯಲಾರರಾದುದರಿಂದ ನಾನು ನಮಸ್ಕಾರವನ್ನುಮಾತ್ರ ಮಾಡುತ್ತೇನೆ ॥ ೧೯॥ ಮತ್ತು ಧ್ಯಾನಶೀಲರೆನಿಸಿ ನಿರ್ಮಲಬುದ್ಧಿಗಳಾಗಿರುವ ಜ್ಞಾನಿಗಳಿಗೂ ಭಕ್ತಿಯೋಗವನ್ನು ಉಂಟುಮಾಡುವುದಕ್ಕಾಗಿ ಅವತರಿಸಿರುವ ನಿನ್ನ ವೈಭವವನ್ನು ಸ್ತ್ರೀಮಾತ್ರರಾದ ನಾವೇನು ಬಲ್ಲವು? ॥ ೨೦॥ ಅಯ್ಯಾ ಅಜ್ಞಾನವನ್ನು ನಾಶಗೊಳಿಸುವವನೇ ! ವಸುದೇವಪುತ್ರನೆ ! ದೇವಕೀನಂದನನೇ ! ನಂದಗೋಪನ ಕಷ್ಟವನ್ನು ಹೋಗಲಾಡಿಸಿದವನೇ ! ವೇದವೇದ್ಯನಾದ ಕೃಷ್ಣನೇ ! ಇಂತಹ ಜ್ಞಾನಿಗಳೂ ಕೂಡಾ ಭಕ್ತಿಜ್ಞಾನಗಳ

* ವಿ, ದೇವಕೀ-ಲಕ್ಷ್ಮಿ ‡ ಗೋ-ವೇದಗಳಿಂದ, ವಿಂದ-ತಿಳಿಯಲ್ಪಡುವವನು

ನಮೋನಮಃ ॥೨೧॥ ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ ॥ ೨೨ ॥ ಯಥಾ
ಹೃಷೀಕೇಶ ಖಲೇನ ದೇವಕೀ ಕಂಸೇನ ರುದ್ಧಾ ಸುಚಿರಂ ಶುಚಾರ್ಪಿತಾ ।
ವಿಮೋಚಿತಾಹಂ ಚ ಸಹಾತ್ಮಜಾ ವಿಭೋ ತ್ವಯೈವ ನಾಥೇನ ಮುಹು
ರ್ವಿಪದ್ಗಣಾತ್ ॥೨೩॥ ವಿಷಾ ನ್ಮಹಾಗ್ನೇಃ ಪುರುಷಾದದರ್ಶನಾ ದಸತ್ಸಭಾ
ಯಾ ವನವಾಸಕೃಛ್ರತಃ।ಮೃಧೇ ಮೃಧೇ ನೇಕಮಹಾರಥಾಸ್ತ್ರತೋ ದ್ರೌಣ್ಯ
ಸ್ತ್ರತ ಶ್ಚಾಸ್ಮ ಹರೇ ಭಿರಕ್ಷಿತಾಃ ॥೨೪॥ * ಸುಯೋಧನಸಿಸೃಷ್ಟೋ ನಶ್ಚಾಪಾ

ಪನ, ಕು-ಕಷ್ಟವನ್ನು ಪರಾಯ-ನೀಗಿಸಿದ, ಗೋವಿಂದಾಯ - ಗೋವಿಂದನಿಗೆ, ನಮಃನಮಃ-ಅನೇಕನಮಸ್ಕಾರಗಳು ॥ ೨೧ ॥ ಪಂಕಜನಾಭಾಯ-ಹೊಕ್ಕುಳಲ್ಲಿ ಕಮಲವುಳ್ಳ ನಿನಗೆ, ನಮಃ-ನಮಸ್ಕಾರವು, ಪಂಕಜಮಾಲಿನೇ-ಕಮಲಗಳ ಮಾಲಿಕೆಯನ್ನು ಧರಿಸಿರುವ ನಿನಗೆ, ನಮಃ, ಪಂಕಜನೇತ್ರಾಯ ಕಮಲದಂತೆ ಕಣ್ಣುಗಳುಳ್ಳ ನಿನಗೆ, ನಮಃ, ಪಂಕಜಾಂಘ್ರಯೇ-ಕಮಲಗಳಂತೆ ಪಾದಗಳುಳ್ಳನಿನಗೆ,ನಮಃ-ನಮಸ್ಕಾರವು ॥ ೨೨ ॥ ಹೇ ಹೃಷೀಕೇಶ, ಹೃಷೀಕ-ಇಂದ್ರಿಯಗಳಿಗೆ ಈಶ-ನಿಯಾಮಕನೆ! ಖಲೇನ-ದುಷ್ಟನಾದ, ಕಂಸೇನ-ಕಂಸನಿಂದ, ಸುಚಿರಂ-ಬಹುಕಾಲದವರೆಗೂ, ರುದ್ಧಾ-ಸೆರೆಯಿಡಲ್ಪಟ್ಟ, ಶುಚಾ-ದುಃಖದಿಂದ, ಅರ್ಪಿತಾ-ಕೂಡಿದವಳಾದ, ದೇವಕೀ - ದೇವಕಿಯು , ಯಥಾ-ಹೇಗೆ, ತ್ವಯಾ - ನಿನ್ನಿಂದ, ವಿಮೋಚಿತಾ-ಬಿಡಿಸಲ್ಪಟ್ಟಳೋ, ಹೇ ವಿಭೋ-ಎಲೈ ವ್ಯಾಪಕನಾದ ಭಗವಂತನೆ! ಸಹಾತ್ಮಜಾ-ಮಕ್ಕಳಿಂದೊಡಗೂಡಿದ, ಅಹಂಚ-ನಾನೂ, ನಾಥೇನ-ರಕ್ಷಕನಾದ, ತ್ವಯೈವ-ನಿನ್ನಿಂದಲೇ, ಮುಹುಃ - ಬಾರಿಬಾರಿಗೂ, ವಿಪದ್ಗಣಾತ್ ಕಷ್ಟಪರಂಪರೆಯಿಂದ, ವಿಮೋಚಿತಾ-ಬಿಡಿಸಲ್ಪಟ್ಟೆನು ॥ ೨೩ ॥ ಹರೇ-ಎಲೈ ಕೃಷ್ಣನೇ ! ವಿಷಾತ್-ವಿಷದಿಂದಲೂ, ಮಹಾಗ್ನೇಃ-ದೊಡ್ಡಬೆಂಕಿಯಿಂದಲೂ, ಪುರು... ದರ್ಶನಾತ್, ಪುರುಷಾದ-ರಾಕ್ಷಸರ, ದರ್ಶನಾತ್-ದರ್ಶನದಿಂದಲೂ, ಅಸತ್ಸಭಾಯಾಃ, ಅಸತ್-ಜೂಜುಗಾರರ, ಸಭಾಯಾಃ-ಸಭೆಯಿಂದಲೂ, ವನ...ತಃ, ವನವಾಸ-ಅರಣ್ಯವಾಸದಿಂದುಂಟಾದ, ಕೃಛ್ರತಃ-ಕಷ್ಟದಿಂದಲೂ, ಮೃಧೇ ಮೃಧೇ-ಪ್ರತಿಯುದ್ಧದಲ್ಲಿಯೂ, ಅನೇಕ...ತಃ ಅನೇಕ-ಹಲವು, ಮಹಾರಥ-ಮಹಾಶೂರರ, ಅಸ್ತ್ರತಃ ಅಸ್ತ್ರದಿಂದಲೂ, ದ್ರೌಣ್ಯಸ್ತ್ರತಶ್ಚ, ದ್ರೌಣಿ-ಅಶ್ವತ್ಥಾಮನ, ಅಸ್ತ್ರತಶ್ಚ - ಅಸ್ತ್ರದಿಂದಲೂ, ಅಭಿ

ಸ್ವರೂಪವನ್ನರಿಯದಿರುವುದರಿಂದ, ಮೂಢಳಾದ ನಾನು ನಿನಗೆ ವಂದನವನ್ನು ಮಾತ್ರ ಮಾಡುತ್ತೇನೆ ॥೨೧॥ ಎಲೈ ಪದ್ಮನಾಭನೆ! ಕಮಲಮಾಲೆಯನ್ನು ಧರಿಸಿದವನೇ ! ಕಮಲದಂತೆ ಕಣ್ಣುಳ್ಳವನೇ ! ಕಮಲಚರಣನೇ ! ನಿನಗೆ ಅನೇಕ ನಮಸ್ಕಾರಗಳು ॥ ೨೨ ॥ ಅಯ್ಯಾ ಇಂದ್ರಿಯಪ್ರೇರಕನಾದ ಭಗವಂತನೇ ! ದುರಾತ್ಮನಾದ ಕಂಸನಿಂದ ಬಹುಕಾಲದವರೆಗೂ ಸೆರೆಗೊಳಿಸಲ್ಪಟ್ಟು, ದುಃಖಸಮುದ್ರದಲ್ಲಿ ಮುಳುಗಿದ್ದ ತಾಯಿಯಾದ ದೇವಕಿಯನ್ನು ಕಾಪಾಡಿದಂತೆಯೇ, ಹಗೆಗಳಿಟ್ಟ ವಿಷಾನ್ನದಿಂದಲೂ, ಅರಗಿನಮನೆಯ ಬೆಂಕಿಯಿಂದಲೂ, ಹಿಡಿಂಬನೇ ಮೊದಲಾದ ರಾಕ್ಷಸರಿಂದಲೂ, ಜೂಜುಗಾರರಾದ ಕೌರವರ ಸಭೆಯಿಂದಲೂ, ಅರಣ್ಯವಾಸದಲ್ಲುಂಟಾದ ಕಷ್ಟಗಳಿಂದಲೂ, ಪ್ರತಿಯುದ್ಧದಲ್ಲಿಯೂ ಮಹಾಶೂರರು ಬಿಟ್ಟಸ್ತ್ರಗಳಿಂದಲೂ, ಕಡೆಗೆ ಅಶ್ವತ್ಥಾಮನಿಟ್ಟ ಬ್ರಹ್ಮಾಸ್ತ್ರದಿಂದಲೂ ಸಹ, ನೀನು ನನ್ನನ್ನೂ ನನ್ನ ಮಕ್ಕಳನ್ನೂ ಬಾರಿಬಾರಿಗೂ ಸಲಹಿದೆ ॥ ೨೩-೨೪ ॥ ಇಷ್ಟೇ ಅಲ್ಲದೆ

* ಈ ಶ್ಲೋಕವು ಅರ್ಷವಲ್ಲ.

ಯಾಮರ್ಷಣೋ ಮುನಿಃ । ಪತ್ರೈಶ್ಶಾತೃಪ್ಯತ ಸಹ ತ್ರಿಲೋಕ್ಯೈ ಶ್ಚರತಾಂ ವನೇ ॥೨೪॥ ವಿಪದ ಸ್ಸಂತು ನಶ್ಶಶ್ವ ತ್ತತ್ರತತ್ರ ಜಗದ್ಗುರೋ । ಭವತೋ ದರ್ಶನಂ ಯತ್ಸ್ಯಾ ದಪುನ ರ್ಭವದರ್ಶನಂ ॥ ೨೫ ॥ ಜನ್ಮೈಶ್ವರ್ಯಶ್ರುತ ಶ್ರೀಭಿ ರೇಧಮಾನಮದಃ ಪುಮಾನ್। ನಚಾರ್ಹತ್ಯ ಭಿಧಾತುಂ ವೈ *ತ್ವಾಮ ಕಿಂಚನ ಗೋಚರಂ ॥ ೨೬ ॥ ನಮೋ ಕಿಂಚನ ವಿತ್ತಾಯ ನಿವೃತ್ತಗುಣವೃ ತ್ತಯೇ । † ಆತ್ಮಾರಾಮಾಯ ಶಾಂತಾಯ ಕೈವಲ್ಯಪತಯೇನಮಃ ॥ ೨೭ ॥ ಮನ್ಯೇ ತ್ವಾಂ ಕಾಲ ಮೀಶಾನ ಮನಾದಿನಿಧನಂ ವಿಭುಂ । ಸಮಂ ಚರಂತಂ ಸರ್ವತ್ರ ಭೂತಾನಾಂ ಯನ್ಮಿಥಃ ಕಲಿಃ ॥ ೨೮ ॥ ನ ವೇದ ಕಶ್ಚಿದ್ಭಗವಂ

ರಕ್ಷಿತಾಃ-ರಕ್ಷಿಸಲ್ಪಟ್ಟವರು, ಆಸ್ಮ-ಆದೆವು ॥ ೨೩ ॥ ವನೇ-ಕಾಡಿನಲ್ಲಿ, ಚರತಾಂ-ಅಲೆದಾಡುವ, ನಃ-ನಮ್ಮ, ಶಾಪಾಯ-ಶಾಪಕ್ಕಾಗಿ, ಸುಯೋಧನನಿಸೃಷ್ಟಃ. ಸುಯೋಧನ-ದುರ್ಯೋಧನನಿಂದ, ನಿಸೃಷ್ಟಃ-ಕಳುಹಿಸಲ್ಪಟ್ಟ, ಅಮರ್ಷಣಃ-ಕೋಪಿಷ್ಠನಾದ, ಮುನಿಃ-ದುರ್ವಾಸಮುನಿಯು, ಪತ್ರೈಃ-ಪರ್ಣಾಹಾರದಿಂದಲೇ, ತ್ರಿಲೋಕ್ಯಾಸ್ಸಹ-ಮೂರುಲೋಕಗಳಿಂದೊಡಗೂಡಿ, ಅತೃಪ್ಯತ-ದಣಿದನು ॥ ೨೪ ॥ ಹೇಜಗದ್ಗುರೋ-ಎಲೈ ಲೋಕಗುರುವಾದ ಕೃಷ್ಣನೇ ? ಯತ್-ಯಾವಕಾರಣದಿಂದ, ಅಥವಾ ಯಾವ ವಿಪತ್ತುಗಳಲ್ಲಿ, ಅಪುನರ್ಭವದರ್ಶನಂ-ಪುನರ್ಜನ್ಮವನ್ನು ಕಾಣದಿರುವ, ಅಥವಾ ಅಪುನರ್ಭವ-ಪುನರ್ಜನ್ಮವಿಲ್ಲದ ಮೋಕ್ಷವನ್ನು, ದರ್ಶನಂ-ತೋರಿಸುವ, ಭವತಃ-ನಿನ್ನ, ದರ್ಶನಂ-ಸಾಕ್ಷಾತ್ಕಾರವು, ತತ್ರತತ್ರ-ಆ ಆ ವಿಪತ್ತುಗಳಲ್ಲಿ, ಸ್ಯಾತ್-ಉಂಟಾಗುವುದೋ, ತತ್-ಆಕಾರಣದಿಂದ, ನಃ-ನಮಗೆ, ಶಶ್ವತ್ - ಯಾವಾಗಲೂ, ವಿಪದಃ-ವಿಪತ್ತುಗಳೇ, ಸಂತು - ಉಂಟಾಗಲಿ ॥ ೨೫ ॥ ಜನ್ಮೈ...ಭಿಃ, ಜನ್ಮ - ಉತ್ತಮಕುಲದಲ್ಲಿ ಹುಟ್ಟುವುದು, ಐಶ್ವರ್ಯ ದೊರೆತನವು, ಶ್ರುತ-ವೇದಶಾಸ್ತ್ರಾದಿಗಳಲ್ಲಿ ಪಾಂಡಿತ್ಯವು, ಶ್ರೀಭಿಃ-ಸಂಪತ್ತು ಇವುಗಳಿಂದ, ಏಧಮಾನಮದಃ, ಏಧಮಾನ-ಬೆಳೆಯುತ್ತಿರುವ, ಮದಃ- ಅಹಂಕಾರವುಳ್ಳ, ಪುಮಾನ್-ಪುರುಷನು, ಅಕಿಂಚನಗೋಚರಂ, ಅಕಿಂಚನ - ವಿರಕ್ತರಾದ ಜ್ಞಾನಿಗಳಿಗೆ, ಗೋಚರಂ - ಪ್ರತ್ಯಕ್ಷವಾಗುವ, ತ್ವಾಂ-ನಿನ್ನನ್ನು, ಅಭಿಧಾತುಂ-ಹೇಳುವುದಕ್ಕೂ, ವೈ-ಸ್ಮರಿಸುವುದಕ್ಕೂ ಸಹ, ನಾರ್ಹತಿ-ಅರ್ಹನಾಗುವುದಿಲ್ಲ ॥ ೨೬ ॥ ಆತ್ಮಾರಾಮಾಯ-ತನ್ನಲ್ಲಿತಾನೇ ರಮಿಸುವ, ಕೈವಲ್ಯಪತಯೇ-ಮೋಕ್ಷವನ್ನು ಕೊಡುವ

ಕಾಡಿನಲ್ಲಿರುವ ನಮ್ಮನ್ನು ಶಪಿಸುವುದಕ್ಕಾಗಿ ದುರ್ಯೋಧನನಿಂದ ಪ್ರೇರಿತನಾಗಿ ಬಂದ ದುರ್ವಾಸಮುನಿಯು ಸಾವಿತ್ತ ಪರ್ಣಾಹಾರದಿಂದಲೇ ತೃಪ್ತನಾಗಿ ಸಂತೋಷದಿಂದ ಹೊರಟುಹೋದನು. ಈ ಮಹಾವಿಪತ್ತಿನಿಂದ ನಮ್ಮನ್ನು ಬಿಡಿಸಿದ ಮಹಾತ್ಮನೂ ನೀನೇ ಅಲ್ಲವೆ ? ॥ ಎಲೈ ಜಗದ್ಗುರುವಾದ ಭಗವಂತನೆ ! ಯಾವ ವಿಪತ್ಕಾಲವು ಪ್ರಾಪ್ತವಾದರೆ ಪರಮದಯಾಳುವಾದ ನೀನು ಕನಿಕರಿಸಿ, ಮರಳಿ ಜನ್ಮವನ್ನುಂಟುಮಾಡದ ದರ್ಶನವನ್ನಿತ್ತು ಸಲಹುವೆಯೋ ! ಅಂತಹ ವಿಪತ್ತುಗಳೇ ನಮಗೆಂದಿಗೂ ಬರುತ್ತಿರಲಿ ॥ ೨೫ ॥ಕುಲಮದ, ಪ್ರಭುತ್ವಮದ, ವಿದ್ಯಾಮದ, ಐಶ್ವರ್ಯಮದ, ಇವುಗಳಿಂದ ತುಂಬಿದ ಪುರುಷನು ಪರಮವಿರಕ್ತರಾದ ಜ್ಞಾನಿಗಳಿಗೆಮಾತ್ರ ದರ್ಶನವನ್ನು ಕೊಡುವ ನಿನ್ನ, ಕೃಷ್ಣ, ಗೋವಿಂದ, ಮುಕುಂದ, ಮೊದಲಾದ ನಾಮಗಳನ್ನು ಉಚ್ಚರಿಸುವುದಕ್ಕೂ ಕಡೆಗೆ ಅವುಗಳನ್ನು

* ಭಗವಂತನನ್ನು ತಿಳಿದು ಮತ್ತಾವುದನ್ನೂ ಬಯಸದಿರುವವರು, † ವಿ, ಜೀವಾತ್ಮರಿಗೆ ವಿಹಾರಸ್ಥಾನ

ಶ್ಚಿಕೀರ್ಷಿತಂ ತವೇಶ ಮಾನಸ್ಯ ನೃಣಾಂ ವಿಡಂಬನಂ । ನ ಯಸ್ಯ ಕಶ್ಚಿದ್ದ
ಯಿತೋಽಸ್ತಿ ಕರ್ಹಿಚಿ ದ್ದ್ವೇಷ್ಯಶ್ಚ ಯಸ್ಮಿನ್ ವಿಷಮಾ ಮತಿರ್ನೃಣಾಂ॥೨೯॥
ಜನ್ಮ ಕರ್ಮ ಚ * ವಿಶ್ವಾತ್ಮ ನ್ನಜಸ್ಯಾ ಕರ್ತು ರಾತ್ಮನಃ । ತಿರ್ಯ

ವನೂ, ಶಾಂತಾಯು-ರಾಗಾದಿಗಳು ಅಥವಾ † ಷಡೂರ್ಮಿಗಳು ಇಲ್ಲದವನೂ, ನಿವೃತ್ತಗುಣವೃತ್ತಯೇ, ನಿವೃತ್ತ-ತಪ್ಪಿಹೋದ, ಗುಣ-ಸತ್ವಾದಿಗುಣಗಳ, ವೃತ್ತಯೇ-ವಿಷಯಗಳಾದ ಧರ್ಮಾದಿ ಪುರುಷಾರ್ಥಗಳು, ಅಥವಾ ಕಾಮಕ್ರೋಧಾದಿಗಳೂ ಉಳ್ಳವನಾದುದರಿಂದಲೇ, ಅಕಿಂಚನವಿತ್ತಾಯ, ಅಕಿಂಚನ-ನಿಷ್ಕಾಮರಾದ ಮಹಾತ್ಮರೇ, ವಿತ್ತಾಯ - ಧನವಾಗಿಉಳ್ಳ ಭಗವಂತನಿಗೆ, ನಮೋನಮಃ - ಅನೇಕನಮಸ್ಕಾರಗಳು ॥ ೨೭ ॥ ಈಶಾನಂ-ನಿಯಾಮಕನಾಗಿಯೂ, ಅನಾದಿನಿಧನಂ - ಆದ್ಯಂತರಹಿತನಾಗಿಯೂ, ವಿಭುಂ-ವ್ಯಾಪಕನಾಗಿಯೂ ಇರುವುದರಿಂದ, ತ್ವಾಂ ನಿನ್ನನ್ನು, ಕಾಲಂ-ಕಾಲಸ್ವರೂಪನನ್ನಾಗಿ, ಮನ್ಯೇ ತಿಳಿಯುತ್ತೇನೆ, ಯತ್-ಯಾವನಿಮಿತ್ತಭೂತನಾದ ನಿನ್ನಿಂದ, ಭೂತಾನಾಂ-ಪ್ರಾಣಿಗಳಿಗೆ, ಮಿಥಃ - ಪರಸ್ಪರವಾಗಿ, ಕಲಿಃ-ಕಲಹವು ಉಂಟಾಗುವುದೋ, ಅದರಿಂದ, ಸರ್ವತ್ರ-ಎಲ್ಲೆಡೆಗಳಲ್ಲಿಯೂ, ಸಮಂ-ಸಮವಾಗಿ, ಚರತಾ-ಸಂಚರಿಸುವ ನಿನ್ನನ್ನು ಕಾಲನೆಂದು ತಿಳಿಯುತ್ತೇನೆ ॥ ೨೮ ॥ ಹೇ ಭಗವನ್ - ಎಲೈ ಭಗವಂತನೆ ? ಯಸ್ಯ-ಯಾವನಿನಗೆ, ಕರ್ಹಿಚಿತ್-ಯಾವಾಗಲೂ, ಕಶ್ಚಿತ್ - ಒಬ್ಬನಾದರೂ, ದಯಿತಃ-ಪ್ರಿಯನಾಗಲಿ, ದ್ವೇಷ್ಯಶ್ಚ-ಶತ್ರುವಾಗಲಿ, ನ-ಇಲ್ಲಪ್ರೋ, ಯಸ್ಮಿನ್ - ಯಾವನಲ್ಲಿ, ನೃಣಾಂ - ಅಜ್ಞಾನಿಗಳ, ಮತಿಃ-ಬುದ್ಧಿಯು, ವಿಷಮಾ-ವ್ಯತ್ಯಸ್ತವಾಗಿರುವುದೋ, ನೃಣಾಂ-ಮನುಷ್ಯರ, ವಿಡಂಬನಂ-ಅನುಕರಣ

ಸ್ಮರಿಸುವುದಕ್ಕೆ ಕೂಡಾ ಅರ್ಹನಾಗುವುದಿಲ್ಲ॥೨೬॥ಮಹಾತ್ಮನೆ! ಕೈವಲ್ಯವನ್ನು ಕೊಡುವವನಾಗಿಯೂ, ಪರಮಶಾಂತನಾಗಿಯೂ, ಆತ್ಮಾರಾಮನಾಗಿಯೂ, ಮಾಯಾಸಂಬಂಧವಿಲ್ಲದವನಾಗಿಯೂ, ಭಕ್ತರನ್ನೇ ಧನವಾಗಿಯೂ, ತಿಳಿದಿರುವ ನಿನಗೆ ವಂದಿಸುವೆನು॥೨೭॥ ಲೋಕೇಶ್ವರನೂ, ಆದ್ಯಂತರಹಿತನೂ, ಸರ್ವವ್ಯಾಪಕನೂ, ಆಗಿರುವ ನಿನ್ನನ್ನು ಎಲ್ಲರೂ ದೇವಕೀಪುತ್ರನೆಂದೂ, ನಿನ್ನಿಂದಲೇ ಕಲಹ ಉಂಟಾಗುವುದೆಂದೂ ತಿಳಿದಿರುವರು. ಪ್ರಾಣಿಗಳ ಪರಸ್ಪರಕಲಹಕ್ಕೆ ನೀನು ನಿಮಿತ್ತಮಾತ್ರವಲ್ಲದೆ ನಿನ್ನಲ್ಲಿ ವೈಷಮ್ಯವಿಲ್ಲ. ನೀನು ಸರ್ವಸಮನಾಗಿರುವೆಯಾದುದರಿಂದ ನಾನು ನಿನ್ನನ್ನು ಕಾಲಸ್ವರೂಪನೆಂದು ತಿಳಿದಿರುವೆನು ॥ ೨೮ ॥ ಈ ಪ್ರಪಂಚದಲ್ಲಿ ನಿನಗೆ ಪ್ರಿಯನೂ ಇಲ್ಲ. ದ್ವೇಷಿಯೂ ಇಲ್ಲ. ತತ್ವವನ್ನರಿಯದವರು “ ನೀನು ಪೂತನೆ, ಶಕಟಾಸುರ ಮೊದಲಾದವರನ್ನು ನಿಗ್ರಹಿಸಿ, ಪಾಂಡವಾದಿಗಳನ್ನು ಅನುಗ್ರಹಿಸಿದೆಯಾದುದರಿಂದ ನಿನ್ನಲ್ಲಿ ಪಕ್ಷಪಾತವಿರುವುದೆಂದು ” ಭ್ರಾಂತಿಯಿಂದ ತಿಳಿಯುವರು. ಇದು ತಿಳಿಯುವವರ ಬುದ್ಧಿವೈಷಮ್ಯವೇ ಹೊರತು ನಿನ್ನಲ್ಲಿ ಪಕ್ಷಪಾತವಿಲ್ಲ. ನೀನು ದುಷ್ಟರಾದ ಕಂಸಾದಿಗಳನ್ನು ನಿಗ್ರಹಿಸಿದರೂ ಕೂಡಾ ಅವರಿಗೆ ಅನುಗ್ರಹವೇ. ಮನುಷ್ಯರಂತೆ ನಟನೆಯನ್ನು ಮಾಡುತ್ತಿರುವ ನಿನ್ನ ಉದ್ದೇಶ್ಯಗಳನ್ನು ಯಾರುಬಲ್ಲರು ? ॥ ೩೦ ॥ ಎಲೈ ಪ್ರಪಂಚಸ್ವರೂಪನಾದ ಭಗವಂತನೆ ! ಜನ್ಮವಿಲ್ಲದ ನೀನು

* ವಿ, ಪ್ರಪಂಚದಲ್ಲಿ ಅಂತರ್ಯಾಮಿಯಾದವನೆ!

† ಷಿ:- ಹಸಿವು, ನೀರಡಿಕೆ, ಶೋಕ, ಮೋಹ, ಜರಾ, ಮೃತ್ಯು,

ಜ್ನರರ್ಷಿ ಯಾದಸ್ಸು ತದತ್ಯಂತವಿಡಂಬನಂ ॥೩೦॥ ಗೋಪ್ಯಾದದೇ ತ್ವಯಿ ಕೃತಾಗಸಿ ದಾಮ ತಾವದ್ಯಾ ತೇ ದಶಾ ಶ್ರುಕಲಿಲಾಂಜನಸಂಭ್ರಮಾಕ್ಷಂ । ವಕ್ತ್ರಂ ನಿನೀಯ ಭಯಭಾವನಯಾ ಸ್ಥಿತಸ್ಯ ಸಾ ಮಾಂ ವಿಮೋಹಯತಿ ಭೀ ರಪಿ ಯದ್ಬಿಭೇತಿ ॥ ೩೧ ॥ ಕೇಚಿದಾಹು ರಜಂ ಜಾತಂ ಪುಣ್ಯಶ್ಲೋಕಸ್ಯ ಕೀರ್ತಯೇ । ಯದೋಃ ಪ್ರಿಯಸ್ಯಾನ್ವವಾಯೇ ಮಲಯಸ್ಯೇವ ಚಂದನಂ ॥ ೩೨ ॥ ಅಪರೇ ವಸುದೇವಸ್ಯ ದೇವಕ್ಯಾಂ ಯಾಚಿತೋ

ವನ್ನು, ಈಹಮಾನಸ್ಯ-ಮಾಡುತ್ತಿರುವ, ತವ-ನಿನ್ನ, ಚಿಕೀರ್ಷಿತಂ-ಸಂಕಲ್ಪವನ್ನು, ಕಶ್ಚಿತ್-ಯಾವನೂ ನವೇದ-ತಿಳಿಯುವುದಿಲ್ಲ, ॥೨೯॥ ಹೇ ವಿಶ್ವಾತ್ಮನ್-ಎಲ್ಲಾ-ಪ್ರಪಂಚಸ್ವರೂಪನೆ ! ತಿರ್ಯ......ಸ್ಸು,ತಿರ್ಯಕ್-ಸಿಂಹವರಾಹಾದಿಗಳಲ್ಲಿಯೂ, ನರ-ಮನುಷ್ಯರಲ್ಲಿಯೂ, ಋಷಿ-ಋಷಿಗಳಲ್ಲಿಯೂ, ಯಾದಸ್ಸು-ಜಲಜಂತುಗಳಲ್ಲಿಯೂ,ಅಜಸ್ಯ-ಜನ್ಮವಿಲ್ಲದ, ಆತ್ಮನಃ-ನಿನಗೆ, ಜನ್ಮ-ಜನ್ಮವೂ,ಅಕರ್ತುಃ-ಕರ್ತೃತ್ವವಿಲ್ಲದ ನಿನಗೆ, ಕರ್ಮವೂ,ತತ್-ಅದು, ಅತ್ಯಂತವಿಡಂಬನಂ-ಸಂಪೂರ್ಣವಾಗಿ ಅಣಕಿಸುವುದೇಸರಿ ॥೩೦॥ ತ್ವಯಿ-ನೀನು, ಕೃತಾಗಸಿ-ತಪ್ಪುಮಾಡಲು, ಗೋಪೀ-ತಾಯಿಯಾದ ಯಶೋದೆಯು, ಯಾವತ್-ಯಾವಾಗ, ದಾಮ-ಹಗ್ಗವನ್ನು, ಆದದೇ-ತೆಗೆದುಕೊಂಡಳೋ, ತಾವತ್-ಆಗ, ಭೀರಪಿ-ಮೃತ್ಯುವೂ, ಯತ್-ಯಾವನಿಂದ, ಬಿಭೇತಿ-ಹೆದರುವುದೋ, ಅಂತಹ, ಅಶ್ರು...ಕ್ಷಂ, ಅಶ್ರು-ಕಣ್ಣೀರಿನಿಂದ, ಕಲಿಲ ಮಿಶ್ರವಾದ, ಅಂಜನ-ಕಾಡಿಗೆಯುಳ್ಳುದಾಗಿಯೂ, ಸಂಭ್ರಮ-ಗಾಬರಿಗೊಂಡ, ಅಕ್ಷಂ ಕಣ್ಣುಳ್ಳದ್ದಾಗಿಯೂ ಇರುವ, ವಕ್ತ್ರಂ-ಮುಖವನ್ನು ನಿನೀಯ-ಬಾಗಿಸಿಕೊಂಡು, ಭಯಭಾವನಯಾ-ಭಯಭ್ರಾಂತಿಯಿಂದ, ಸ್ಥಿತಸ್ಯ-ಇದ್ದ, ತೇ-ನಿನ್ನ, ಯಾದಶಾ-ಯಾವಅವಸ್ಥೆಯುಂಟೋ, ಸಾ-ಆಸ್ಥಿತಿಯು, ಮಾಂ-ನನ್ನನ್ನು, ವಿಮೋಹಯತಿ-ಆಶ್ಚರ್ಯಗೊಳಿಸುತ್ತದೆ॥ ಕೇಚಿತ್-ಕೆಲವರು, ಪುಣ್ಯಶ್ಲೋಕಸ್ಯ-ಕೀರ್ತಿಶಾಲಿಯಾದ ಧರ್ಮರಾಜನ ಅಥವಾ ಮ.ಸುರಾಜನ, ಕೀರ್ತಯೇ-ಯಶಸ್ಸಿಗಾಗಿ, ಮಲಯಸ್ಯ-ಮಲಯಪರ್ವತದ ಕೀರ್ತಿಗಾಗಿ, ಅಥವಾ ವಂಶದಲ್ಲಿ, ಚಂದನಮಿವ-ಚಂದನವೃಕ್ಷದಂತೆ-ಪ್ರಿಯಸ್ಯ-ಪ್ರಿಯನಾದ, ಯದೋಃ-ಯದುರಾಜನ, ಅನ್ವವಾಯೇ-ವಂಶದಲ್ಲಿ, ಅಜಂ-ಜನ್ಮಾದಿಗಳಿಲ್ಲದನಿನ್ನನ್ನು, ಜಾತಂ-ಹುಟ್ಟಿದವನನ್ನಾಗಿ ಆಹುಃ-ಹೇಳುತ್ತಾರೆ ॥ ೩೧ ॥ ಅಪರೇ-ಮತ್ತೆಕೆಲವರು

ಸಿಂಹ, ವರಾಹ, ಮೊದಲಾದ ತಿರ್ಯಗ್ಜಂತುಗಳಲ್ಲಿಯೂ, ಮನುಷ್ಯರಲ್ಲಿಯೂ, ಋಷಿಗಳಲ್ಲಿಯೂ, ಅವತರಿಸಿದುದೂ, ಕರ್ತೃತ್ವವೇ ಇಲ್ಲದ ನೀನು ಆ ಅವತಾರಗಳಲ್ಲಿ ಕಾರ್ಯಗಳನ್ನು ಮಾಡಿದುದೂ, ಇವೆರಡೂ, ಸಂಪೂರ್ಣವಾಗಿ ಅನುಕರಣವೇ ಹೊರತು ನಿಜವಲ್ಲ ॥೩೦॥ ಎಂತೆಂದರೆ ಹಸುಳೆಯಾಗಿದ್ದ ನೀನು ದಧಿಭಾಂಡಗಳನ್ನೊಡೆದು ಬೆಣ್ಣೆಯನ್ನು ಕದ್ದೆಯೆಂದು ಗೋಪಿಯರು ದೂರು ಹೇಳಿದಾಗ, ಯಶೋದೆಯು ಕೋಪಗೊಂಡು ಕಟ್ಟಿಹಾಕುವುದಕ್ಕಾಗಿ ಹಗ್ಗವನ್ನು ತೆಗೆದುಕೊಂಡು ಬರಲು, ನೀನು ಮೃತ್ಯುವಿಗೆ ಮೃತ್ಯುವಾಗಿದ್ದರೂ, ಆಕೆಗೆ ಹೆದರಿದವನಂತೆ ತಲೆಯನ್ನು ಬಾಗಿಸಿಕೊಂಡು, ಕಾಡಿಗೆಯು ಕರಗಿಹೋಗುವಂತೆ ಕಂಬನಿಗಳನ್ನು ಸುರಿಸುತ್ತಾ, ಹೆದರಿದ ಹುಲ್ಲೆಯ ಮರಿಯಂತೆ ಗಾಬರಿಗೊಂಡು ಖಿನ್ನನಾಗಿದ್ದೆಯಲ್ಲಾ. ಆ ನಿನ್ನ ಸ್ಥಿತಿಯು ನನಗೆ ಆಶ್ಚರ್ಯವನ್ನುಂಟುಮಾಡುತ್ತಿರುವುದು ॥ ೩೧ ॥ ಇಂತು ಯಾರಿಗೂ ತಿಳಿಯಲಶಕ್ಯವಾದುದರಿಂದಲೇ ನೀನು ಅವತರಿಸಿದು

* ಭ್ಯಗಾತ್ । † ಅಜ ಸ್ತ್ವಮಸ್ಯ ಕ್ಷೇಮಾಯ ವಧಾಯಚ ಸುರದ್ವಿಷಾಂ ॥
ಭಾರಾವತರಣಾಯಾನ್ಯೇ ಭುವೋನಾವ ಇವೋದಧೌ । ಸೀದಂತ್ಯಾ
ಭೂರಿ ಭಾರೇಣ ಜಾತೋಽಹ್ಯಾತ್ಮ ಭುವಾರ್ಥಿತಃ ॥ ೩೪ ॥ ಭವೇಽಸ್ಮಿನ್
ಕ್ಲಿಶ್ಯಮಾನಾನಾ ‡ ಮವಿದ್ಯಾ ಕಾಮ ಕರ್ಮಭಿಃ । ಶ್ರವಣಸ್ಮರಣಾರ್ಹಾಣಿ
ಕರಿಷ್ಯನ್ನಿತಿ ಕೇಚನ ॥ ೩೫ ॥ ಶೃಣ್ವಂತಿ ಗಾಯಂತಿ ಗೃಣಂತ್ಯಭೀಕ್ಷ್ಣಶ

ಪೃಶ್ನಿಸುತಪರಿಂದಪ್ರಾರ್ಥಿಸಲ್ಪಟ್ಟವನಾಗಿ, ಅಸ್ಯ-ಈಜಗತ್ತಿನ, ಕ್ಷೇಮಾಯ-ಕ್ಷೇಮಕ್ಕಾಗಿಯೂ, ಸುರ ದ್ವಿಷಾಂ-ರಾಕ್ಷಸರ, ವಧಾಯಚ - ಸಂಹಾರಕ್ಕಾಗಿಯೂ, ವಸುದೇವಸ್ಯ - ವಸುದೇವನ ಪತ್ನಿಯಾದ, ದೇವಕ್ಯಾ-ದೇವಕಿಯಲ್ಲಿ, ಅಜಃ-ಜನ್ಮವಿಲ್ಲದ, ತ್ವಂ-ನೀನು ಅಭ್ಯಗಾತ್-ಜನ್ಮವನ್ನುಪಡೆದೆ ಎಂದು ಹೇಳು ತ್ತಾರೆ ॥ ೩೨ ॥ ಅನ್ಯೇ-ಇನ್ನುಕೆಲವರು, ಉದಧೌ-ಸಮುದ್ರದಲ್ಲಿರುವ, ನಾವಇವ-ಹಡಗಿನಂತೆ, ಭೂರಿ ಭಾರೇಣ, ಭೂರಿ-ಹೊರಲಾರದ, ಭಾರೇಣ-ಭಾರದಿಂದ, ಸೀದಂತ್ಯಾಃ-ಕಷ್ಟಪಡುತ್ತಿರುವ, ಭುವಃ-ಭೂಮಿಯ ಭಾರಾವತರಣಾಯ-ಭಾರವನ್ನುಕಳೆಯುವುದಕ್ಕಾಗಿ, ಆತ್ಮಭುವಾ-ಬ್ರಹ್ಮನಿಂದ, ಅರ್ಥಿತಃ-ಪ್ರಾರ್ಥಿಸಲ್ಪ ಟ್ಟವನಾಗಿ, ಜಾತಃ-ಹುಟ್ಟಿದೆ, ಎಂದು ಹೇಳುವರು, ॥ ೩೩ ॥ ಕೇಚನ-ಕೆಲವರು, ಅಸ್ಮಿನ್-ಈ, ಭವೇ-ಸಂಸಾರದಲ್ಲಿ, ಅವಿದ್ಯಾ ..ಭಿಃ, ಅವಿದ್ಯಾ-ಅಜ್ಞಾನವು, ಕಾಮ-ವಿಷಯಾಭಿಲಾಷೆಯು, ಕರ್ಮಭಿಃ - ಆ ಕಾರ್ಯಗಳು, ಇವುಗಳಿಂದ, ಕ್ಲಿಶ್ಯಮಾನಾನಾಂ - ಬಳಲುತ್ತಿರುವ ಪ್ರಾಣಿಗಳಿಗೆ, ಶ್ರವಣ...ಣಿ, ಶ್ರವಣ-ಕೇಳುವುದಕ್ಕೂ, ಸ್ಮರಣ-ಧ್ಯಾನಿಸುವುದಕ್ಕೂ. ಅರ್ಹಾಣಿ-ಯೋಗ್ಯಗಳಾದ, ನಾಮರೂಪಗಳನ್ನು, ಕರಿ

ದಕ್ಕೆ ಕಾರಣವನ್ನು ಹಲವು ಬಗೆಯಾಗಿ ಊಹಿಸುವರು ಎಂತೆಂದರೆ—ಮಲಯಾಚಲದ ಕೀರ್ತಿಯನ್ನು ಬೆಳೆಯಿಸುವುದಕ್ಕಾಗಿ ಅಲ್ಲಿ ಶ್ರೀಗಂಧವೃಕ್ಷವು ಜನಿಸುವಂತೆ, ಪುಣ್ಯ ಶ್ಲೋಕನಾದ ಯುಧಿಷ್ಠಿರನ ಅಥವಾ ಯದುರಾಜನ ಯಶಸ್ಸನ್ನು ವೃದ್ಧಿಗೊಳಿಸುವುದ ಕ್ಕಾಗಿ, ನೀನು ಜನ್ಮವಿಲ್ಲದವನಾದರೂ ಆ ಯಾದವವಂಶದಲ್ಲಿ ಅವತರಿಸಿದೆಯೆಂದು ಕೆಲ ವರು ಹೇಳುವರು ॥ ೩೨ ॥ ಸುತಪ, ಪೃಶ್ನಿ ಎಂಬ ದಂಪತಿಗಳ ಪ್ರಾರ್ಥನಾನುಸಾರವಾ ಗಿಯೂ, ದೇವಶತ್ರುಗಳಾದ ರಾಕ್ಷಸರನ್ನು ನಿಗ್ರಹಿಸಿ ಲೋಕಕ್ಕೆ ಕ್ಷೇಮವನ್ನುಂಟುಮಾ ಡುವುದಕ್ಕಾಗಿಯೂ, ಆ ಸುತಪಃ ಪೃಶ್ನಿರೂಪರಾದ ವಸುದೇವ ದೇವಕಿಯರ ಗರ್ಭದಲ್ಲಿ ನೀನು ಜನಿಸಿದೆಯೆಂದು ಕೆಲವರು ಹೇಳುವರು ॥ ೩೩ ॥ ಭಾರವು ಹೆಚ್ಚಿ ಸಮುದ್ರದ ಮಧ್ಯ ದಲ್ಲಿ ತಡಬಡಿಸುವ ಹಡಗಿನಂತೆ, ಪಾಪಿಗಳ ಭಾರವನ್ನು ಹೊರಲಾರದೆ ಬಳಲುತ್ತಿರುವ ಭೂದೇವಿಯ ಸಂಕಟವನ್ನು ಪರಿಹರಿಸಬೇಕೆಂದು ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟವನಾಗಿ, ಅವತರಿಸಿದೆಯೆಂದು ಕೆಲವರೆನ್ನುವರು ॥ ೩೪ ॥ ಈ ಸಂಸಾರದಲ್ಲಿ ಅವಿದ್ಯಾಕಾಮ-ಕರ್ಮ ಗಳಿಂದ ಕಷ್ಟಪಡುತ್ತಿರುವ ಪ್ರಾಣಿಗಳ ಅಜ್ಞಾನಾದಿಗಳನ್ನು ಹೋಗಲಾಡಿಸುವುದಕ್ಕಾಗಿ, ಶ್ರವಣಾರ್ಹಗಳಾದ ನಾಮಗಳನ್ನೂ, ಸ್ಮರಣಾರ್ಹಗಳಾದ ರೂಪಗಳನ್ನೂ ತಳೆದು ಅವತ

* ಪಾ, ಅಭ್ಯಗಾಃ † ಅರ್ಥ-ತ್ವಂ-ಪುತ್ರತ್ವವನ್ನು ‡ (೧) ಅವಿದ್ಯೆ-ಪರಮಾನಂದಸ್ವರೂಪವನ್ನರಿಯದಿರು ವುದು (೨) ಕಾಮ-ಆ ಅವಿದ್ಯೆಯಿಂದ ಶಬ್ದಸ್ಪರ್ಶಾದಿ ವಿಷಯಗಳಲ್ಲುಂಟಾಗುವ ಕೋರಿಕೆ, (೩) ಕರ್ಮ-ಆ ಕಾಮವನ್ನುಪಡೆಯುವುದಕ್ಕಾಗಿ ಮಾಡುವ ಕೆಲಸಗಳು

ಸ್ಮರಂತಿ ನಂದಂತಿ ತವೇಹಿತಂ ಜನಾಃ । ತಏವ ಪಶ್ಯಂತ್ಯಚಿರೇಣ ತಾವಕಂ ಭವಪ್ರವಾಹೋಪರಮಂ ಪದಾಂಬುಜಂ ॥ ೩೬ ॥ ಅಪ್ಯದ್ಯ ನಸ್ತ್ವಂ ಸ್ವಕೃತೇಹಿತಪ್ರಭೋ ಜಿಹಾಸಸಿ ಸ್ವಿತ್ಸುಹೃದೋನುಜೀವಿನಃ । ಯೇಷಾಂ ನಚಾನ್ಯದ್ಭವತಃ ಪದಾಂಬುಜಾತ್ ಪರಾಯಣಂ ರಾಜಸು ಯೋಜಿತಾಂಹಸಾಂ ॥ ೩೭ ॥ ಕೇ ವಯಂ ನಾಮರೂಪಾಭ್ಯಾಂ ಯದುಭಿಸ್ಸಹ ಪಾಂಡವಾಃ । ಭವತೋ ದರ್ಶನಂ ಯರ್ಹಿ ಹೃಷೀಕಾಣಾಮಿವೇಶಿತುಃ॥

ಷ್ಯ-ಮಾಡುವವನಾಗಿ, ಹುಟ್ಟಿದೆ ಎಂದು ಹೇಳುವರು ॥ ೩೫ ॥ ಯೇ ಜನಾಃ-ಯಾವಜನರು, ತವ-ನಿನ್ನ, ಈಹಿತಂ-ಚರಿತ್ರೆಯನ್ನು, ಅಭೀಕ್ಷ್ಣಶಃ-ಬಾರಿಬಾರಿಗೂ, ಶೃಣ್ವಂತಿ - ಕೇಳುವರೋ, ಗಾಯಂತಿ-ಹಾಡುವರೋ, ಗೃಣಂತಿ-ಹೊಗಳುವರೋ, ಸ್ಮರಂತಿ-ಸ್ಮರಿಸುವರೋ, ನಂದಂತಿ - ಸಂತೋಷಿಸುವರೋ, ತಏವ-ಆಜನರೇ, ಭವ...ರಮಂ, ಭವ-ಜನನಮರಣಗಳ, ಪ್ರವಾಹ-ಪರಂಪರೆಯನ್ನು, ಉಪರಮಂ-ಹೋಗಲಾಡಿಸುವ, ತಾವಕಂ-ನಿನ್ನ, ಪದಾಂಬುಜಂ ಪಾದಕಮಲವನ್ನು, ಅಚಿರೇಣ-ಬೇಗನೆ, ಪಶ್ಯಂತಿ-ನೋಡುತ್ತಾರೆ ॥ ೩೬ ॥ ಸ್ವಕೃತೇಹಿತ, ಸ್ವ-ತನ್ನವರಲ್ಲಿ, ಕೃತ-ಮಾಡಲ್ಪಟ್ಟ, ಈಹಿತ - ಇಷ್ಟಾರ್ಥಗಳುಳ್ಳ, ಹೇಪ್ರಭೋ-ಎಲೈ ಜಗನ್ನಾಥನೆ! ರಾಜಸು-ರಾಜರಲ್ಲಿ, ಯೋಜಿತಾಂಹಸಾಂ, ಯೋಜಿತ-ಮಾಡಲ್ಪಟ್ಟ, ಅಂಹಸಾಂ-ದುಃಖಗಳುಳ್ಳ, ಯೇಷಾಂ-ಯಾರಿಗೆ, ಭವತಃ-ನಿನ್ನ, ಪದಾಂಬುಜಾತ್-ಪಾದಕಮಲಕ್ಕಿಂತಲೂ, ಅನ್ಯತ್-ಬೇರೇ, ಪರಾಯಣಂ-ಗತಿಯು, ನ-ಇಲ್ಲವೋ, ಅಂತಹ, ಸುಹೃದಃ - ಸ್ನೇಹಿತರಾಗಿಯೂ, ಅನುಜೀವಿನಶ್ಚ, ಭೃತ್ಯರಾಗಿಯೂ ಇರುವ, ನಃ - ನಮ್ಮನ್ನು, ತ್ವಂ-ನೀನು, ಅದ್ಯ - ಈಗ, ಜಿಹಾಸಸಿಸ್ವಿತ್-ಬಿಟ್ಟು ಹೊರಡುವೆಯಾ ? ॥ ೩೭ ॥ ಈಶಿತುಃ-ಇಂದ್ರಿಯಾಧ್ಯಕ್ಷನಾದ ಜೀವನ, ಅದರ್ಶನಂ-ಕಾಣದಿರುವಿಕೆಯು, ಇಂದ್ರಿಯಾಣಾಮಿವ-ಇಂದ್ರಿಯಗಳಿಗೋಪಾದಿಯಲ್ಲಿ, ಅಸ್ಮಾಕಂ - ನಮಗೆ, ಯರ್ಹಿ-ಯಾವಾಗ, ಭವತಃ-ನಿನ್ನ, ಅದರ್ಶನಂ - ಅಗಲಿಕೆಯುಂಟಾಗುವುದೋ, ತದಾ - ಆಗ, ನಾಮರೂಪಾಭ್ಯಾಂ, ನಾಮ-ಪ್ರಸಿದ್ಧಿಯಿಂದಲೂ, ರೂಪಾಭ್ಯಾಂ-ಸಂಪತ್ತಿನಿಂದಲೂ, ಯದುಭಿಸ್ಸಹ-ಯಾದವರಿಂದಲೂ ಕೂಡಿರುವ, ಪಾಂಡವಾಃ-ಪಾಂಡವರೆಂಬ, ವಯಂ-ನಾವು, ಕೇ-ಎಷ್ಟುಮಾತ್ರದವರು, ॥ ೩೮ ॥

ರಿಸಿದೆಯೆಂದು ಮತ್ತೆ ಕೆಲವರು ಹೇಳುವರು ॥ ೩೫ ॥ ಯಾವಭಕ್ತರು ನಿನ್ನ ಚರಿತ್ರೆಯನ್ನು ಬಾರಿಬಾರಿಗೂಕೇಳುತ್ತ, ಹಾಡುತ್ತ ಹೊಗಳುತ್ತ ಧ್ಯಾನಿಸುತ್ತ, ಸಂತೋಷಿಸುವರೋ, ಅವರೇ ಈಜನನ ಮರಣ ಪ್ರವಾಹವನ್ನು ಶಾಂತಿಗೊಳಿಸುವ ನಿನ್ನಪಾದಕಮಲವನ್ನು ಬೇಗನೆ ಕಾಣುವರು ॥ ೩೬ ॥ ಎಲೈ ಭಕ್ತಾರ್ತಿ ಭಂಜನನಾದ ಭಗವಂತನೆ! ರಾಜಮಂಡಲಿಯಲ್ಲಿ ದುಃಖಪರಂಪರೆಗೊಳಗಾಗಿ, ನಿನ್ನಚರಣಾರವಿಂದ ಹೊರತು ಬೇರೇ ಗತಿಯನ್ನು ಕಾಣದೆ, ಮಿತ್ರರಾಗಿಯೂ, ದಾಸರಾಗಿಯೂ, ನಿನ್ನನ್ನೇ ನಂಬಿಕೊಂಡಿರುವ ನಮ್ಮನ್ನು ನೀನೀಗ ತೊರೆದು ಹೊರಡುವೆಯಾ ! ॥೩೭॥ ಇಂದ್ರಿಯಗಳಿಗೊಡೆಯನಾದಜೀವನ ಸಾನ್ನಿಧ್ಯವು ತಪ್ಪಿದ ಕೂಡಲೆ ಇಂದ್ರಿಯಗಳೆಂತು ನಿರರ್ಥಕಗಳೋ, ಅಂತೆಯೇ, ಮನಸ್ಯರಂತೆ ನಾಮರೂಪಗಳನ್ನು ಪಡೆದ ಭಗವಂತನಾದ ನಿನ್ನದರ್ಶನವು ತಪ್ಪಿದಕೂಡಲೇ,ನಮ್ಮ ಕೀರ್ತಿಯಾವುದು ? ಸಂಪತ್ತಾವುದು ? ಯಾದವರಾರು? ನಾವಾರು?

ನೇಯಂ ಶೋಭಿಷ್ಯತೇ ತತ್ರ ಯಥೇದಾನೀಂ ಗದಾಧರ । ತ್ವತ್ಪದೈ ರಂಕಿತಾ ಭಾತಿ ಸ್ವಲಕ್ಷಣವಿಲಕ್ಷಿತೈಃ ॥ ೩೯ ॥ ಇಮೇ ಜನಪದಾ ಸ್ಸ್ವೃದ್ಧಾ ಸ್ಸುಪಕ್ವೌಷಧಿವೀರುಧಃ । ವನಾದ್ರಿ ನದ್ಯುದನ್ವಂತೋ ಹ್ಯೇಧಂತೇ ತವ ವೀಕ್ಷಿತೈಃ॥ ಅಥ ವಿಶ್ವೇಶ ವಿಶ್ವಾತ್ಮನ್ *ವಿಶ್ವಮೂರ್ತೇ ಸ್ವಕೇಷು ಮೇ । ಸ್ನೇಹಪಾಶಮಿಮಂ ಛಿಂಧಿ ದೃಢಂ ಪಾಂಡುಷು ವೃಷ್ಣಿಷು ॥೪೧॥ ತ್ವಯಿ ಮೇ ನನ್ಯವಿಷಯಾ ಮತಿ †ರ್ಮಧುಪತೇ ಸಕೃತ್ । ರತಿ ಮುದ್ವಹತಾ ದದ್ಧಾ ಗಂಗೇವೌಘ

ಹೇ ಗದಾಧರ-ಎಲೈ ಗದಾಧರನೇ ! ಇಯಂ - ನಾವು ಪಾಲಿಸುತ್ತಿರುವ ಈ ಭೂಮಿಯು, ಇದಾನೀಂ - ಈಗ, ಸ್ವಲಕ್ಷಣ...ತೈಃ, ಸ್ವ-ಅಸಾಧಾರಣಗಳಾದ, ಲಕ್ಷಣ-ವಜ್ರ, ಅಂಕುಶಮೊದಲಾದ, ಚಿಹ್ನೆಗಳಿಂದ, ವಿಲಕ್ಷಿತೈಃ-ಗುರ್ತುಮಾಡಲ್ಪಟ್ಟ, ತ್ವತ್ಪದೈಃ - ನಿನ್ನ ಪಾದಗಳಿಂದ, ಅಂಕಿತಾ - ಗುರ್ತುಮಾಡಲ್ಪಟ್ಟದ್ದಾಗಿ, ಯಥಾ-ಹೇಗೆ, ಭಾತಿ ಶೋಭಿಸುತ್ತದೆಯೋ, ತಥಾ-ಹಾಗೆ, ತತ್ರ-ನೀನು ಹೊರಟುಹೋದಮೇಲೆ, ನಶೋಭಿಷ್ಯತೆ-ಶೋಭಿಸುವುದಿಲ್ಲ ॥ ೩೯ ॥ ಸುಪಕ್ವೌ...ಧಃ, ಸು-ಚೆನ್ನಾಗಿ, ಪಕ್ವ-ಹಣ್ಣಾಗಿರುವ, ಓಷಧಿ ಧಾನ್ಯಗಳು, ವೀರುಧಃ - ಬಳ್ಳಿಗಳೂ ಉಳ್ಳ, ಸ್ವೃದ್ಧಾಃ-ಸಂಪೂರ್ಣವಾಗಿ ವೃದ್ಧಿಯುಳ್ಳಿರುವ, ಇಮೇ - ಈ ಜನಪದಾಃ-ದೇಶಗಳೂ, ವನಾದ್ರಿ...ತಃ, ವನ-ಕಾಡುಗಳು, ಅದ್ರಿ ಬೆಟ್ಟಗಳು, ಉದನ್ವಂತಃ-ಸಮುದ್ರಗಳು ಇವುಗಳು, ತವ-ನಿನ್ನ, ವೀಕ್ಷಿತೈಃ-ಕಟಾಕ್ಷಗಳಿಂದ, ಏಧಂತೇಹಿ - ವೃದ್ಧಿಯಾಗಿರುವವು ॥ ೪೦ ॥ ಅಥ-ಎಲೈ, ವಿಶ್ವೇಶ-ಲೋಕೇಶ್ವರನೆ ! ವಿಶ್ವಾತ್ಮನ್-ಪ್ರಪಂಚಾತ್ಮಕನೆ ! ವಿಶ್ವಮೂರ್ತೇ-ಪ್ರಪಂಚಶರೀರನೆ ! ಮೇ-ನನಗೆ, ಸ್ವಕೇಷು-ನನ್ನವರಾದ, ಪಾಂಡುಷು-ಪಾಂಡವರಲ್ಲಿಯೂ, ವೃಷ್ಣಿಷು-ಯಾದವರಲ್ಲಿಯೂ, ದೃಢಂ ಬಲವಾಗಿರುವ, ಇಮಂ-ಈ, ಸ್ನೇಹಪಾಶಂ-ಸ್ನೇಹವೆಂಬ ಹಗ್ಗವನ್ನು, ಛಿಂದಿ-ಕತ್ತರಿಸು, ॥೪೧॥ ಹೇ

ಎಲ್ಲವೂ ನಿಷ್ಪ್ರಯೋಜನಗಳೇ. ಆದುದರಿಂದ ನಿನ್ನನ್ನಗಲಿದ ಮೇಲೆ ಎಷ್ಟು ಮಂದಿ ನಂಟರಿಷ್ಟರಿದ್ದರೂ ಪ್ರಯೋಜನವಿಲ್ಲ ॥೩೮॥ ಅಯ್ಯಾ ಗದಾಧರನಾದ ಕೃಷ್ಣಮೂರ್ತಿಯೆ ! ನಾವು ಸಂರಕ್ಷಿಸುತ್ತಿರುವ ಈ ಭೂಮಿಯು, ಯಾರಿಗೂ ಇಲ್ಲದಿರುವ ವಜ್ರಾಂಕುಶಾದಿ ದಿವ್ಯಲಕ್ಷಣಗಳಿಂದೊಪ್ಪುತ್ತಿರುವ ನಿನ್ನ ಪಾದಕಮಲಗಳ ಸ್ಪರ್ಶದಿಂದೀಗ ಹೇಗೆ ಶೋಭಿಸುತ್ತಿರುವುದೋ, ನೀನು ಹೊರಟು ಹೋದಮೇಲೆ ಅಂತು ಶೋಭಿಸುವುದಿಲ್ಲ. ಅಲ್ಲದೆ ನಾವು ಜಯಿಸಿರುವ ಈದೇಶಗಳು, ವನಗಳು, ಪರ್ವತಗಳು, ನದಿಗಳು, ಸಮುದ್ರಗಳು, ಇವುಗಳೆಲ್ಲ ನಿನ್ನ ಕಟಾಕ್ಷದಿಂದ ಸಂಪೂರ್ಣ ಸಮೃದ್ಧಿಯನ್ನು ಪಡೆದು, ಧನಧಾನ್ಯಾದಿಗಳಿಂದೊಪ್ಪುತ್ತಿರುವುವು, ನೀನು ಹೊರಟುಹೋದಬಳಿಕ ಇವುಗಳೂ ಇಂತಿರಲಾರವು ॥ ೪೦ ॥ ಮಹಾತ್ಮನೆ ! ನೀನು ತೆರಳದರೆ ನಮಗೆಂತು ಚಿಂತೆಯೋ, ತೆರಳದಿದ್ದಲ್ಲಿ ಯಾದವರಿಗೂ, ಅಂತೆಯೇ ಚಿಂತೆಯಾಗುವುದು. ಇಂತು ಎರಡುಬಗೆಯಾಗಿಯೂ, ನನ್ನ ಮನವು ಕಳವಳಗೊಂಡಿರುವುದರಿಂದ ಎಲೈ ಲೋಕನಾಥನೇ! ಪ್ರಪಂಚಾತ್ಮಕನೆ! ಪಾಂಡವರಲ್ಲಿಯೂ, ಯಾದವರಲ್ಲಿಯೂ, ನನ್ನವರೆಂದು ನನಗಿರುವ ಈ ಬಲವಾದ ಸ್ನೇಹಪಾಶ

* ೧ ಪಿ, ಅನಂತಶರೀರಗಳುಳ್ಳವನು.

† ೨ ಪೀ-ಯಾದವರಿಗೆ ಮಾಧವರೆಂದೂ ಹೆಸರುಂಟು. ವಿ:-ಮಧುಪತೇ ಆನಂದನಾಥನೆ!.

ಮುದನ್ವತಿ ॥೪೨॥ ಶ್ರೀಕೃಷ್ಣ ಕೃಷ್ಣಸಖ ವೃಷ್ಣ್ಯೃಷಭಾವನಿಧ್ರುಗ್ರಾಜ ನ್ಯವಂಶದಹನಾ ನಪವರ್ಗವೀರ್ಯ । ಗೋವಿಂದ ಗೋದ್ವಿಜಸುರಾರ್ತಿಹರಾ ವತಾರ ಯೋಗೀಶ್ವರಾ ಖಿಲಗುರೋ ಭಗವ ನ್ನಮಸ್ತೇ ॥೪೩॥ ಸೂತಃ॥ಪೃ ಥಯೇತ್ಥಂ ಕಲಪದೈಃ ಪರಿಣೂತಾಖಿಲೋದಯಃ । ಮಂದಂ ಜಹಾಸ ವೈಕುಂಠೋ ಮೋಹಯನ್ನಿವ ಮಾಯಯಾ ॥ ೪೪ ॥ ತಾಂ ಬಾಢ ಮಿತ್ಯು ಪಾಮಂತ್ರ್ಯ ಪ್ರವಿಶ್ಯ ಗಜಸಾಹ್ವಯಂ । ಸ್ತ್ರಿಯಶ್ಚ ಸ್ವಪುರಂ ಯಾಸ್ಯ

ಮಧುಪತೇ-ಎಲೈ ಯಾದವೇಂದ್ರನೆ! ಮೇ-ನನ್ನ, ಮತಿಃ-ಬುದ್ಧಿಯು, ಅನನ್ಯವಿಷಯಾ ಇತರರನ್ನು ಭಜಿಸದೆ, ಅಸಕೃತ್-ಬಾರಿಬಾರಿಗೂ, ಗಂಗಾ-ಗಂಗೆಯು, ಉದನ್ವತಿ-ಸಮುದ್ರದಲ್ಲಿ, ಓಘಮಿವ - ಪ್ರವಾಹದಂತೆ, ತ್ವಯಿ-ನಿನ್ನಲ್ಲಿ, ಅದ್ಧಾ-ಯಾವಾಗಲೂ, ರತಿಂ-ಪ್ರೀತಿಯನ್ನು, ಉದ್ವಹತಾತ್-ವಹಿಸಲಿ ॥೪೨॥ ಶ್ರೀಕೃಷ್ಣ-ಕೃಷ್ಣನೆ! ಕೃಷ್ಣಸಖ-ಅರ್ಜುನಮಿತ್ರನೆ? ವೃಷ್ಣ್ಯೃಷಭ, ವೃಷ್ಣಿ-ಯಾದವರಲ್ಲಿ, ಋಷಭ ಶ್ರೇಷ್ಠನೆ! ಅವನಿ...ದಹನ, ಅವನಿ - ಭೂಮಿಗೆ, ಧ್ರುಕ್-ದ್ರೋಹವನ್ನೆಣಿಸಿದ, ರಾಜನ್ಯ-ರಾಜರ, ವಂಶ-ಕುಲಗಳೆಂಬ ಬಿದಿರುಮೆಳೆಗೆ, ದಹನ-ಕಾಳ್ಗಿಚ್ಚಿನಂತಿರುವವನೆ! ಅನ...ರ್ಯ, ಅನಪವರ್ಗ-ಕಡಮೆಯಾಗದ, ವೀರ್ಯ-ಮಹಿಮೆಯುಳ್ಳವನೆ! ಗೋವಿಂದ-ಗೋಧನವನ್ನು ಪಡೆದವನೆ! ಗೋ...ತಾರ, ಗೋ-ಗೋವುಗಳ, ದ್ವಿಜ-ಬ್ರಾಹ್ಮಣರ, ಸುರ-ದೇವತೆಗಳ, ಆರ್ತಿ - ದುಃಖಗಳನ್ನು, ಹರ - ನಾಶಗೊಳಿಸುವ, ಅವತಾರ-ಅವತಾರವುಳ್ಳವನೆ! ಯೋಗೀಶ್ವರ-ಯೋಗಿಗಳಿಗೆ ಒಡೆಯನೆ! ಅಖಿಲಗುರೋ-ಲೋಕಾಧ್ಯಕ್ಷನೇ! ಭಗವನ್-ಭಗವಂತನೆ! ತೇ-ನಿನಗೆ, ನಮಃ-ನಮಸ್ಕಾರವು ॥ ೪೩ ॥ ಸೂತಃ-ಸೂತನು ಹೇಳುತ್ತಾನೆ, ಇತ್ಥಂ-ಹೀಗೆ, ಪೃಥಯಾ-ಕುಂತಿಯಿಂದ, ಕಲಪದೈಃ, ಕಲ - ಮಧುರಗಳಾದ, ಪದೈಃ - ವಾಕ್ಯಗಳಿಂದ, ಪರಿಣೂ...ಯಃ, ಪರಿಣೂತ - ಹೊಗಳಲ್ಪಟ್ಟ, ಅಖಿಲ - ಸಮಸ್ತಗಳಾದ, ಉದಯಃ - ಮಹಿಮೆಗಳುಳ್ಳ, ವೈಕುಂಠಃ-ಕೃಷ್ಣನು, ಮಾಯಯಾ-ಮಾಯೆಯಿಂದ, ಮೋಹಯನ್ನಿವ, ಮರುಳುಮಾಡುವಂತೆ, ಮಂದಂ-ಕೊಂಚವಾಗಿ, ಜಹಾಸ-ನಕ್ಕನು ॥ ೪೪ ॥ ಬಾಢಂ-ಆಗಲಿ, ಇತಿ-ಎಂದು, ಗಜಸಾಹ್ವಯಂ-ಹಸ್ತಿನಾವತಿಯನ್ನು, ಪ್ರವಿಶ್ಯ-ಹೊಕ್ಕು ತಾಂ-ಆಕುಂತಿಯನ್ನು, ಸ್ತ್ರಿಯಶ್ಚ - ಸುಭದ್ರೆಮೊದಲಾದ ಸ್ತ್ರೀಯ

ವನ್ನು ಕತ್ತರಿಸು ॥ ೪೧ ॥ ಎಲೈ ಆನಂದ ಮೂರ್ತಿಯೆ! ಗಂಗೆಯು ತನ್ನಪ್ರವಾಹವನ್ನು ಸಮುದ್ರದಲ್ಲಿ ಸೇರಿಸುವಂತೆ ನನ್ನ ಬುದ್ಧಿಯು ಬೇರೇ ವಿಷಯಗಳಲ್ಲಿ ಬೀಳದೆ ನಿನ್ನಲ್ಲಿಯೇ ಪ್ರೀತಿಯನ್ನ ಪಡೆಯುವಂತನುಗ್ರಹಿಸು ॥ ೪೨ ॥ ಅಯ್ಯಾ ಭಗವಂತನೆ ? ನಿನ್ನ ಉಪಕಾರಗಳನ್ನು, ಎಷ್ಟೆಂದು ಬಣ್ಣಿಸಲಿ ? ಸಾರಥಿಯಾಗಿ ಅರ್ಜುನನಿಂದ ಶತ್ರುಗಳನ್ನು ಕೊಲ್ಲಿಸಿದೆ, ದ್ರೋಹಿಗಳಾದ ರಾಜರನ್ನೆಲ್ಲಾ ನಿರ್ಮೂಲವಮಾಡಿದೆ, ಗೋ ಬ್ರಾಹ್ಮಣರ ಕಷ್ಟಗಳನ್ನು ಪರಿಹರಿಸಿದೆ. ದೇವಕಾರ್ಯವನ್ನು ಪೂರೈಸಿದೆ. ಮಹಾತ್ಮನೆ? ನಿನ್ನ ಮಹಿಮೆಯನ್ನು ಹೊಗಳಲು ನಾನೆಷ್ಟರವಳು. ಆದುದರಿಂದ ನಿನ್ನನ್ನು ವಂದಿಸುವೆನು॥೪೩॥ ಅಯ್ಯಾ ಶೌನಕಾದಿಗಳಿರಾ ? ಇಂತು ಕುಂತೀದೇವಿಯು ಸವಿನುಡಿಗಳಿಂದ ಹೊಗಳುತ್ತಬರಲು ಮಹಾಮಾಯಿಯಾದ ಕೃಷ್ಣನು ಮರುಳುಗೊಳಿಸುವಂತೆ ಕೊಂಚ ನಕ್ಕ ॥೪೪॥ ನಿಶ್ಚಲ ಭಕ್ತಿಯನ್ನು ನೀಡೆಂದು ಬೇಡಿದ ಕುಂತಿಯ ಪ್ರಾರ್ಥನೆಯಂತೆ "ಆಗಲಿ" ಎಂದು ಹೇಳಿ

ಪ್ರೇಮ್ಣಾ ರಾಜ್ಞಾ ನಿವಾರಿತಃ ॥೪೫॥ ವ್ಯಾಸಾದ್ಯೈ ರೀಶ್ವರೇಹಾಜ್ಞೈಃ
ಕೃಷ್ಣೇನಾದ್ಭುತ ಕರ್ಮಣಾ । ಪ್ರಬೋಧಿತೋಽಪೀತಿಹಾಸೈ ರ್ನಾಬು
ಧ್ಯತ ಶುಚಾರ್ಪಿತಃ ॥ ೪೬ ॥ ಆಹ ರಾಜಾ ಧರ್ಮಸುತ ಶ್ಚಿಂತಯನ್
ಸುಹೃದಾಂ ವಧಂ । ಪ್ರಾಕೃತೇನಾ ತ್ಮನಾ ವಿಪ್ರಾಃ ಸ್ನೇಹಮೋಹವಶಂ
ಗತಃ ॥ ೪೭ ॥ ಅಹೋ ಮೇ ಪಶ್ಯತಾಜ್ಞಾನಂ ಹೃದಿ ರೂಢಂ ದುರಾತ್ಮನಃ

ರನ್ನೂ, ಅನುಜ್ಞಾಪ್ಯ-ಸಮ್ಮತಿಗೊಳಿಸಿ, ಸ್ವಪುರಂ-ತನ್ನ ಪಟ್ಟಣಕ್ಕೆ, ಯಾಸ್ಯನ್-ಹೋಟು, ರಾಜ್ಞಾ-ಧರ್ಮರಾಜನಿಂದ, ಪ್ರೇಮ್ಣಾ-ಪ್ರೀತಿಯಿಂದ, ನಿವಾರಿತಃ-ತಡೆಯಲ್ಪಟ್ಟನು, ॥೪೫॥ ಈಶ್ವರೇಹಾಜ್ಞೈಃ ಈಶ್ವರ-ಭಗವಂತನ, * ಈಹಾ - ಅಭಿಪ್ರಾಯವನ್ನು, ಅಜ್ಞೈಃ - ತಿಳಿಯದೇ ಇರುವ, ವ್ಯಾಸಾದ್ಯೈಃ-ವ್ಯಾಸನೇ ಮೊದಲಾದ ಋಷಿಗಳಿಂದಲೂ, ‡ ಅದ್ಭುತಕರ್ಮಣಾ - ಆಶ್ಚರ್ಯಕರಗಳಾದ ಕಾರ್ಯಗಳುಳ್ಳ, ಕೃಷ್ಣೇನ-ಕೃಷ್ಣನಿಂದಲೂ, ಇತಿಹಾಸೈಃ-ಪೂರ್ವಚರಿತ್ರಗಳಿಂದ, ಪ್ರಬೋಧಿತೋಽಪಿ-ಬೋಧಿಸಲ್ಪಟ್ಟರೂ ಶುಚಾ-ದುಃಖದಿಂದ, ಅರ್ಪಿತಃ-ಪರವಶನಾದ ಧರ್ಮರಾಜನು, ನಾಬುಧ್ಯತ-ವಿವೇಕವನ್ನು ಪಡೆಯಲಿಲ್ಲ ಹೇ ವಿಪ್ರಾಃ - ಅಯ್ಯಾ-ಶೌನಕಾದಿಗಳಿರಾ ! ಸ್ನೇಹ...ತಃ, ಸ್ನೇಹ - ಬಂಧುಗಳಲ್ಲಿ ಸ್ನೇಹಕ್ಕೂ, ಮೋಹ-ಭ್ರಾಂತಿಗೂ, ವಶಂಗತಃ-ಸ್ವಾಧೀನನಾಗಿ, ಧರ್ಮಸುತಃ - ಯಮಪುತ್ರನಾದ, ರಾಜಾ-ಧರ್ಮರಾಜನು, ಸುಹೃದಾಂ-ಬಂಧುಗಳ, ವಧಂ-ಸಂಹಾರವನ್ನು, ಚಿಂತಯನ್ - ಸ್ಮರಿಸಿಕೊಂಡು, ಆಹ - ಹೇಳುತ್ತಾನೆ, ದುರಾತ್ಮನಃ-ದುರ್ಬುದ್ಧಿಯಾದ, ಮೇ-ನನ್ನ, ಹೃದಿ-ಹೃದಯದಲ್ಲಿ, ರೂಢಂ - ನೆಲೆಗೊಂಡ, ಅಜ್ಞಾನಂ-ಅಜ್ಞಾನವನ್ನು, ಪಶ್ಯತ-ನೋಡಿರಿ, ಅಹೋ ಆಶ್ಚರ್ಯವು, ಮೇ-ನನ್ನ, ಪಾರಕ್ಯಸ್ಯ-ಪರಕೀಯವಾದ, ದೇಹಸ್ಯೈವ - ಶರೀರಕ್ಕೋಸ್ಕರವಾಗಿಯೇ, ಬಹ್ವ್ಯಃ-ಬಹಳ, ಅಕ್ಷೌಹಿಣೀಃ- ಅಕ್ಷೌಹಿಣೀಸೈನ್ಯಗಳು, ಹತಾಃ-

ಮರಳಿ ಹಸ್ತಿನಾವತಿಗೆ ಬಂದು ಕುಂತಿ, ಸುಭದ್ರೆ, ಮೊದಲಾದ ಸ್ತ್ರೀಯರಿಂದನುಜ್ಞೆಯನ್ನು ಪಡೆದು ಹೊರಟವನಾಗಿ ಧರ್ಮರಾಜನಬಳಿಗೆ ಹೋಗಲು, ಆತನು ಪ್ರೇಮಾತಿಶಯದಿಂದ, ಇನ್ನೂ ಕೆಲವು ದಿನಗಳಲ್ಲಿಯೇ ಇರಬೇಕೆಂದು ಕೃಷ್ಣನನ್ನು ತಡೆದು ಪ್ರಯಾಣವನ್ನು ನಿಲ್ಲಿಸಿದನು ॥ ೪೫ ॥ ಬಳಿಕ ಭಗವಂತನ ಸಂಕಲ್ಪವನ್ನು ತಿಳಿಯದಿರುವ ವ್ಯಾಸಾದಿ ಮಹರ್ಷಿಗಳೂ, ಅದ್ಭುತ ಮಹಿಮನಾದ ಕೃಷ್ಣನೂ ಸಹ, ಎಷ್ಟು ಇತಿಹಾಸಗಳಿಂದ ಬೋಧಿಸಿದರೂ ಧರ್ಮರಾಜನ ಮನಸ್ಸು ಪ್ರಸನ್ನವಾಗಲಿಲ್ಲ ॥೪೬॥ ಅಯ್ಯಾ ಶೌನಕಾದಿ ಋಷಿಗಳಿರಾ ? ಕೇಳಿರಿ. ಅನಂತರದಲ್ಲಿ ಧರ್ಮರಾಜನು ಬಂಧು ಪ್ರೀತಿಗೊಳಗಾಗಿ ಅವರ ಸಂಹಾರವನ್ನು ಸ್ಮರಿಸಿಕೊಂಡು ದುಃಖಿಸುತ್ತಾ ವ್ಯಾಸಾದಿಗಳನ್ನು ಕುರಿತಿಂತೆಂದನು:-ಅಯ್ಯೋ ದುರ್ಬುದ್ಧಿಯಾದ ನನ್ನ ಅಜ್ಞಾನವನ್ನು ಕಂಡಿರಾ ! ನಾಯಿ ನರಿಗಳ

* ಭೀಷ್ಮನು ನಿರ್ಯಾಣವನ್ನು ಹೊಂದುವಕಾಲಕ್ಕೆ ಸರಿಯಾಗಿ ಧರ್ಮಾದಿಗಳನ್ನು ಕರೆದುಕೊಂಡು ಹೋಗಿ ಆತನಿಂದ ಧರ್ಮರಾಜನಿಗುಪದೇಶಮಾಡಿಸಬೇಕೆಂಬುದೇ ಭಗವಂತನ ಅಭಿಪ್ರಾಯು.

‡ ಕೃಷ್ಣನು ಪೂರ್ವದಲ್ಲಿ ಸಂಧಿಗಾಗಿ ಕೌರವರ ಸಭೆಗೆ ಹೋಗಿ ಕಾಲಾನುಸಾರವಾಗಿ ಮಾತನಾಡಿದರೂ ಯುದ್ಧವನ್ನೇ ಸ್ಥಿರಗೊಳಿಸಿದಂತೆ, ಈಗಲೂ ಧರ್ಮರಾಜನಿಗೆ ವಿವೇಕವನ್ನು ಬೋಧಿಸಿದರೂ ಅಜ್ಞಾನವನ್ನೇ ಬೆಳೆಯಿಸಿದನು.

ಪಾರಕ್ಯಸ್ಯೈವ ದೇಹಸ್ಯ ಬಹ್ವ್ಯೋ ಮೇ * ಕ್ಷೌಹಿಣೀರ್ಹತಾಃ ॥೪೮॥
ಬಾಲದ್ವಿಜ ಸುಹೃನ್ಮಿತ್ರ ಪಿತೃಭ್ರಾತೃ ಗುರುದ್ರುಹಃ । ನಮೇ ಸ್ಯಾ
ನ್ನಿರಯಾನ್ಮೋಕ್ಷೋ ಹ್ಯಪಿ ವರ್ಷಾಯುತಾಯುತೈಃ ॥ ೪೯ ॥ ನೈನೋ
ರಾಜ್ಞಃ ಪ್ರಜಾಭರ್ತುರ್ಧರ್ಮಯುದ್ಧೇ ವಧೋದ್ವಿಷಾಂ । ಇತಿ ಮೇ ನತು
ಬೋಧಾಯ ಕಲ್ಪತೇ ಶಾಸನಂ ವಚಃ ॥ ೫೦ ॥ ಸ್ತ್ರೀಣಾಂ ಮದ್ಧತ
ಬಂಧೂನಾಂ ದ್ರೋಹೋ ಯೋಸಾವಿಹೋತ್ಥಿತಃ । ಕರ್ಮಭಿ ರ್ಗೃಹ

ಕೊಲ್ಲಲ್ಪಟ್ಟವು ॥ ೪೭-೪೮ ॥ ಬಾಲ...ದ್ರುಹಃ, ಬಾಲರಿಗೂ, ದ್ವಿಜ-ಬ್ರಾಹ್ಮಣರಿಗೂ, ಸುಹೃತ್-ನೆಂಟರಿಗೂ, ಮಿತ್ರ-ಸ್ನೇಹಿತರಿಗೂ, ಪಿತೃ-ತಂದೆಗಳಿಗೂ, ಭ್ರಾತೃ - ಒಡಹುಟ್ಟಿದವರಿಗೂ, ಗುರು - ಗುರುಗಳಿಗೂ, ದ್ರುಹಃ-ದ್ರೋಹವನ್ನುಮಾಡಿರುವ, ಮೇ-ನನಗೆ, ವರ್ಷಾಯುತಾಯುತೈರಪಿ, ವರ್ಷ-ಸಂವತ್ಸರಗಳ, ಅಯುತಾಯುತೈಃ-ಲಕ್ಷಾಂತರಗಳಿಂದಲೂ, ನಿರಯಾತ್-ನರಕದಿಂದ, ಮೋಕ್ಷಃ-ಬಿಡುಗಡೆಯು, ನ-ಇಲ್ಲ ॥ ೪೯ ॥ ಪ್ರಜಾಭರ್ತುಃ-ಪ್ರಜೆಗಳನ್ನು ಕಾಪಾಡುತ್ತಿರುವ, ರಾಜನಿಗೆ, ಧರ್ಮಯುದ್ಧೇ-ಧರ್ಮವಾದ, ಯುದ್ಧದಲ್ಲಿ, ದ್ವಿಷಾಂ-ಶತ್ರುಗಳ, ವಧಃ-ಸಂಹಾರವು, ಏನಃ-ಪಾಪವು, ನ-ಅಲ್ಲ, ಇತಿ-ಹೀಗೆ, ಅನುಶಾಸನಂ-ಶಿಕ್ಷಿಸುವ, ವಚಃ-ಮಾತು, ಮೇ - ನನ್ನ, ಬೋಧಾಯ - ತಿಳಿವಳಿಕೆಗಾಗಿ, ನಕಲ್ಪತೇ-ಯೋಗ್ಯವಾಗುವದಿಲ್ಲ, ॥ ೫೦ ॥ ಮದ್ಧತ...ನಾಂ, ಮತ್-ನನ್ನಿಂದ, ಹತ-ಕೊಲ್ಲಲ್ಪಟ್ಟ, ಬಂಧೂನಾಂ-ಬಳಗಗಳುಳ್ಳ, ಸ್ತ್ರೀಣಾಂ-ಸ್ತ್ರೀಯರ, ಇಹ-ಈಗ, ಉತ್ಥಿತಃ - ಉಂಟಾದ, ಯೋಸೌದ್ರೋಹಃ - ಯಾವ ದ್ರೋಹವುಂಟೋ, ತಂ ಅದನ್ನು, ಅಹಂ-ನಾನು, ಗೃಹಮೇಧೀಯೈಃ - ಗೃಹಸ್ಥಾಶ್ರಮದವರು ಮಾಡತಕ್ಕ, ಕರ್ಮಭಿಃ-ಕರ್ಮಗಳಿಂದ, ವ್ಯಪೋಹಿತುಂ - ಕಳೆದುಕೊಳ್ಳುವುದಕ್ಕೆ, ನಕಲ್ಪಃ-ಸಮರ್ಥನಲ್ಲ.

ಪಾಲಾಗತಕ್ಕ ಈ ನನ್ನ ಶರೀರ ಪೋಷಣೆಗಾಗಿ ಎಷ್ಟೋ ಅಕ್ಷೋಹಿಣೀಸೈನ್ಯವು ಹತವಾಯಿತಲ್ಲಾ ॥ ೪೮ ॥ ಅಕಟಾ ಬಾಲರು, ಬ್ರಾಹ್ಮಣರು, ಬಂಧುಗಳು, ಮಿತ್ರರು, ತಂದೆಗಳು, ಅಣ್ಣತಮ್ಮಂದಿರು, ಗುರುಗಳು ಇಂತವರನ್ನೂ ಬಿಡದೆ ಕೊಂದ ನನಗೆ ಎಷ್ಟು ಯುಗಗಳಾದರೂ ನರಕದಿಂದ ಬಿಡುಗಡೆಯಾಗಲಾರದು ॥೪೯॥ ರಾಜರಿಗೆ ಯುದ್ಧವು ಸ್ವಧರ್ಮವೆಂದು ಹೇಳಬಹುದಾದರೂ, ಧರ್ಮದಿಂದ ಪ್ರಜಾಪಾಲನೆಯನ್ನು ಮಾಡುವ ರಾಜನು ಶತ್ರುಗಳಿಂದ ಪ್ರಜೆಗಳಿಗೆ ತೊಂದರೆಯುಂಟಾದಾಗ ಧರ್ಮಯುದ್ಧವನ್ನು ಮಾಡಿ ಶತ್ರುಗಳನ್ನು ಸಂಹರಿಸಿದಲ್ಲಿ,ಅಂತವನಿಗೆ ¶ ಈವಚನವು ಸಲ್ಲುವದೇ ಹೊರತು,ರಾಜ್ಯಕ್ಕಾಗಿಯೇ ಪ್ರಾಣಿಹತ್ಯೆಯನ್ನು ಮಾಡಿರುವಪಾಪಿಯಾದ ನನಗೆ ಸಲ್ಲಲಾರದು ॥೫೦॥ ಯುದ್ಧದಲ್ಲಿ ಪುರುಷರನ್ನು ಕೊಂದುದೂ ಅಂತಿರಲಿ, ಬಂಧುಗಳನ್ನು ಕಳೆದುಕೊಂಡು ಗೋಳಾಡುತ್ತಿರುವ ಸ್ತ್ರೀಯರಿಗೆ ನಾನು ಮಾಡಿರುವ ದ್ರೋಹವುಂಟಲ್ಲಾ ! ಗೃಹಸ್ಥಾಶ್ರಮದವರು ಮಾಡಬೇಕಾದ ಯಾವಕರ್ಮಗಳಿಂದಲೂ ಅದನ್ನು ಹೋಗಲಾಡಿಸಿ ಕೊಳ್ಳಲಾರೆನು॥೫೧॥

* ೨೧೮೭೦ ರಥಗಳು ೨೧೮೭೦ ಆನೆಗಳು, ೬೫೬೧೦ ಕುದುರೆಗಳು, ೧೦೯೩೫೦ ಕಾಲ್ಬಲ, ಇಷ್ಟು ಚತುರಂಗಸೈನ್ಯಕ್ಕೆ "ಅಕ್ಷೌಹಿಣಿ" ಯೆಂದು ಹೆಸರು ¶ ಧರ್ಮ್ಯಾದ್ಧಿ ಯುದ್ಧಾ ಚ್ಛ್ರೇಯೋನ್ಯತ್ ಕ್ಷತ್ರಿಯಸ್ಯನವಿದ್ಯತೆ--ಕ್ಷತ್ರಿಯರಿಗೆ ಧರ್ಮಯುದ್ಧವು ಶ್ರೇಯಸ್ಕರವು. (ಗೀತಾ)

ಮೋಥೀಯೈ ರ್ನಾಹಂ ಕಲ್ಪೋ ವ್ಯಪೋಹಿತು೦॥ ೫೧ ॥ಯಥಾ ಪಂಕೇನ *ಪಂಕಾಂಭಃ ಸುರಯಾ ವಾ ಸುರಾಕೃತಂ । ಭೂತಹತ್ಯಾಂ ತಥೈವೈಕಾಂ ನ ಯಜ್ಞೈ ರ್ಮಾರ್ಷ್ಟು ಮರ್ಹತಿ ॥ ೫೨ ॥

ಇತ್ಯಷ್ಟಮೋಧ್ಯಾಯಃ

—ಓಂನಮಃ ಪರಮಾತ್ಮನೇ.—

ಶ್ರೀಸೂತಃ॥ ಇತಿ ಭೀತಃ ಪ್ರಜಾದ್ರೋಹಾ ತ್ಸರ್ವಧರ್ಮ ವಿವಿತ್ಸಯಾ ।

ಪಂಕೇನ-ಕೆಸರಿನಿಂದ ಪಂಕಾಂಭಃ-ಕೆಸರು ನೀರು, ಯಥಾ-ಹೇಗೆ ಶುದ್ಧಿಮಾಡಲ್ಪಡುವುದಿಲ್ಲವೋ, ಸುರಯಾ-ಮದ್ಯದಿಂದ, ಸುರಾಕೃತಂ - ಮದ್ಯದ ದೋಷವು, ಯಥಾ - ಹೇಗೆ ಕಳೆಯಲ್ಪಡುವುದಿಲ್ಲವೋ, ತಥೈವ-ಹಾಗೆಯೇ, ಯಜ್ಞೈಃ - ಯಜ್ಞಗಳಿಂದ, ಏಕಾಂ - ಒಂದು, ಭೂತಹತ್ಯಾಂ - ಪ್ರಾಣಿಹತ್ಯೆಯನ್ನು, ಮಾರ್ಷ್ಟುಂ-ಕಳೆಯುವುದಕ್ಕೆ, ನಾರ್ಹತಿ-ಸಮರ್ಥನಲ್ಲ ॥ ೫೨ ॥

ಅಷ್ಟಮಾಧ್ಯಾಯಂ ಸಮಾಪ್ತಂ

ಇತಿ-ಹೀಗೆ, ಪ್ರಜಾದ್ರೋಹಾತ್-ಪ್ರಾಣಿಹಿಂಸೆಯಿಂದ, ಭೀತಃ-ಹೆದರಿದ ಧರ್ಮರಾಜನು, ಸರ್ವ... ಜಾ, ಸರ್ವಧರ್ಮ-ಎಲ್ಲಧರ್ಮಗಳನ್ನೂ, ವಿವಿತ್ಸಯಾ-ತಿಳಿಯುವ ಕೋರಿಕೆಯಿಂದ, ತತಃ - ಅಬಳಿಕ,

‡ಅಶ್ವಮೇಧಯಾಗವನ್ನು ಮಾಡಿದರೆ ಸಕಲಪಾಪಗಳೂ ಕಳೆಯುವುವು, ಎಂದು ಕೆಲವರು ಹೇಳುವರು ಇದು ನನಗೆ ಸಮ್ಮತವಾಗಿ ತೋರುವದಿಲ್ಲ. ಏಕೆಂದರೆ ಕೆಸರಿಂದ ಕೆಸರಿನ ನೀರನ್ನು ಶುದ್ಧಿ ಮಾಡಲಾಗುವುದೆ ? ಮದ್ಯದಿಂದ ಮದ್ಯಗಂಧವನ್ನು ಕಳೆಯಲಾದೀತೆ ? ಹೀಗೆಯೇ ಪ್ರಮಾದದಿಂದೊದಗಿರುವ ಭೂತಹತ್ಯೆಯನ್ನು, ಬುದ್ಧಿಪೂರ್ವಕವಾಗಿ ಮಾಡಿದ ಹತ್ಯೆಯು ಹೋಗಲಾಡಿಸುವುದೆ? ಆದುದರಿಂದ ಯಜ್ಞಾದಿಗಳು ಪಾಪವನ್ನು ಕಳೆಯುವುವೆಂಬುದನ್ನು ಹೇಳಲಾಗುವುದಿಲ್ಲವೆಂದು ಧರ್ಮರಾಜನು ವ್ಯಾಸಾದಿಗಳಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್ ಎಂಟನೆಯ ಅಧ್ಯಾಯಂ ಮುಗಿದುದು.

ಭೀಷ್ಮನು ಧರ್ಮರಾಯನಿಗೆ ಧರ್ಮೋಪದೇಶಮಾಡಿ ಕೃಷ್ಣನನ್ನು ಸ್ತುತಿಸಿ ಮುಕ್ತನಾಗುವುದು.

ಕಂ॥ ಧರ್ಮಂಗಳನೆಲ್ಲಮುಮಂ । ನರ್ಮತನೂಜಂಗೆ ಪೇಳ್ದು ಹರಿಮಹಿಮೆಯುಮಂ ।
ತಮ್ಮಾಣಿ ಭೀಷ್ಮಂ ಪೊಗಳುತ । ನಿರ್ಮಲಮಪ ಮುಕ್ತಿಪದವನಾಂತುದನೊರೆಗುಂ ॥

ಅನಂತರದಲ್ಲಿ ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳುವದೆಂತೆನೆ:—ಇಂತು, ಆ

* ಪಾ, ಪಂಕಾಂಗಂ-ಕೆಸರಂಟಿಕೊಂಡಿರುವ ಶರೀರವನ್ನು.

‡ ಶ್ರು, ಸರ್ವಂ ಪಾಪ್ಮಾನಂ ತರತಿ, ತರತಿ ಬ್ರಹ್ಮಹತ್ಯಾಂ, ಯೋಽಶ್ವಮೇಧೇನ ಯಜತೇ

ತತೋ * ವಿನಶನಂ ಪ್ರಾಗಾ ದ್ಯತ್ರ ದೇವವ್ರತೋಽ ಪತತ್ ॥ ೧ ॥ ತದಾ ತೇ ಭ್ರಾತರ ಸ್ಸರ್ವೇ ಸದಶ್ವೈ ಸ್ಸ್ವರ್ಣಭೂಷಿತೈಃ । ಅನ್ವಾಗಚ್ಛನ್ ರಥೈ ರ್ವಿಪ್ರಾ ವ್ಯಾಸಧೌಮ್ಯಾದಯ ಸ್ತಥಾ ॥ ೨ ॥ ಭಗವಾನಪಿ ವಿಪ್ರರ್ಷೇ ರಥೇನ ಸಧನಂಜಯಃ । ಸ ತೈ ರ್ವ್ಯರೋಚತ ನೃಪಃ ಕುಬೇರ ಇವ ಗುಹ್ಯಕೈಃ ॥ ೩ ॥ ದೃಷ್ಟ್ವಾ ನಿಪತಿತಂ ಭೂಮೌ ದಿವ ಶ್ಚ್ಯುತ ಮಿವಾ ಮರಂ । ಪ್ರಣೇಮುಃ ಪಾಂಡವಾ ಭೀಷ್ಮಂ ಸಾನುಗಾ ಸ್ಸಹ ಚಕ್ರಿಣಾ ॥ ೪ ॥ ತತ್ರ ಬ್ರಹ್ಮರ್ಷಯ ಸ್ಸರ್ವೇ * ತಥಾ ದೇವರ್ಷಿಸತ್ತಮಾಃ । ರಾಜರ್ಷಯ ಶ್ಚ ತತ್ರಾ ಸನ್ ದ್ರಷ್ಟುಂ ಭಾರತಪುಂಗವಂ ॥ ೫ ॥ ಪರ್ವತೋ ನಾರ

ಯತ್ರ-ಎಲ್ಲಿ, ದೇವವ್ರತಃ-ಭೀಷ್ಮಾಚಾರ್ಯನು, ಅಪತತ್-ಮಲಗಿರುವನೋ, ವಿನಶನಂ - ಅಂತಹ ಕುರುಕ್ಷೇತ್ರಕ್ಕೆ, ಪ್ರಾಗಾತ್-ಹೋದನು ॥ ೧ ॥ ಹೇ ವಿಪ್ರಾಃ-ಎಲೈ ಶೌನಕಾದಿಗಳಿರಾ ! ತದಾ-ಆಗ, ಸ್ವರ್ಣಭೂಷಿತೈಃ-ಚಿನ್ನದಿಂದಲಂಕರಿಸಲ್ಪಟ್ಟ, ಸದಶ್ವೈಃ-ಉತ್ತಮಾಶ್ವಗಳನ್ನು ಹೂಡಿರುವ, ರಥೈಃ-ರಥಗಳಿಂದ, ಸರ್ವೇ - ಎಲ್ಲಾ, ಭ್ರಾತರಃ - ಸಹೋದರರೂ, ತಥಾ - ಹಾಗೆಯೇ, ವ್ಯಾಸಧೌಮ್ಯಾದಯಃ-ವ್ಯಾಸಮುನಿ, ಧೌಮ್ಯ ಮೊದಲಾದವರೂ, ಅನ್ವಾಗಚ್ಛನ್-ಹಿಂಬಾಲಿಸಿದರು ॥ ೨ ॥ ಹೇ ವಿಪ್ರರ್ಷೇ - ಎಲೈಬ್ರಹ್ಮರ್ಷಿಯಾದ ಶೌನಕನೇ ! ಸಧನಂಜಯಃ-ಅರ್ಜುನನಿಂದಕೂಡಿದ, ಭಗವಾನಪಿ-ಕೃಷ್ಣನೂ, ರಥೇನ-ರಥದಿಂದ, ಹಿಂಬಾಲಿಸಿದನು, ಸನೃಪಃ-ಆಧರ್ಮರಾಜನು, ಗುಹ್ಯಕೈಃ-ಯಕ್ಷರಿಂದ, ಕುಬೇರಇವ - ಕುಬೇರನಂತೆ, ತೈಃ-ಆ ಕೃಷ್ಣಾರ್ಜುನಾದಿಗಳಿಂದ, ವ್ಯರೋಚತ-ಪ್ರಕಾಶಿಸಿದನು ॥ ೩ ॥ ಪಾಂಡವಾಃ - ಪಾಂಡವರು, ದಿವಃ-ಸ್ವರ್ಗದಿಂದ, ಚ್ಯುತಂ-ಉರುಳಿದ, ಅಮರಮಿವ - ದೇವಪುರುಷನಂತೆ, ಭೂಮೌ - ಭೂಮಿಯಲ್ಲಿ, ನಿಪತಿತಂ-ಬಿದ್ದಿರುವ, ಭೀಷ್ಮಂ-ಭೀಷ್ಮನನ್ನು, ದೃಷ್ಟ್ವಾ-ಕಂಡು, ಸಾನುಗಾಃ-ಸಪರಿವಾರರಾಗಿ, ಚಕ್ರಿಣಾಸಹ-ಕೃಷ್ಣನಿಂದೊಡಗೂಡಿ, ಪ್ರಣೇಮುಃ-ನಮಸ್ಕರಿಸಿದರು ॥ ೪ ॥ ತತ್ರ -ಆಗ, ಸರ್ವೇ-ಎಲ್ಲಾ, ಬ್ರಹ್ಮರ್ಷಯಃ-ಬ್ರಹ್ಮರ್ಷಿಗಳು, ತಥಾ-ಹಾಗೆಯೇ, ಸತ್ತಮಾಃ-ಶ್ರೇಷ್ಠರಾದ, ದೇವರ್ಷಯಶ್ಚ-ದೇವರ್ಷಿಗಳೂ, ರಾಜರ್ಷಯಶ್ಚ-ರಾಜರ್ಷಿಗಳೂ, ಭಾರತಪುಂಗವಂ-ಭರತವಂಶದಲ್ಲಿ ಶ್ರೇಷ್ಠನಾದ ಭೀಷ್ಮನನ್ನು ದ್ರಷ್ಟುಂ-ನೋಡುವುದಕ್ಕಾಗಿ, ತತ್ರ-ಆಕ್ಷಣವೇ, ಆಸನ್-ಬಂದರು ॥ ೫ ॥ ಪರ್ವತ, ನಾರದ, ಧೌಮ್ಯ

ಯುಧಿಷ್ಠಿರನು ಬಂಧುಗಳನ್ನು ಕೊಂದುದರಿಂದ ದಂದುಗಗೊಂಡವನಾಗಿ, ಧರ್ಮಗಳನ್ನು ತಿಳಿಯಬೇಕೆಂಬ ಸಂಕಲ್ಪದಿಂದ, ಕುರುಕ್ಷೇತ್ರದಲ್ಲಿ ಶರತಲ್ಪದಮೇಲೆ ಮಲಗಿರುವ ಭೀಷ್ಮನ ದರ್ಶನಾರ್ಥವಾಗಿ ತೆರಳಿದನು ॥ ೧ ॥ ಆಗ ತಮ್ಮಂದಿರೆಲ್ಲರೂ, ವ್ಯಾಸಮುನಿ, ಧೌಮ್ಯಮುನಿ ಮೊದಲಾದವರೂ, ಉತ್ತಮಾಶ್ವಗಳನ್ನು ಹೂಡಿರುವ ಸ್ವರ್ಣರಥಗಳಲ್ಲಿ ಕುಳಿತುಕೊಂಡು ಕೂಡಲೆ ಪ್ರಯಾಣಮಾಡಿದರು ॥ ೨ ॥ ಅಂತೆಯೇ ಕೃಷ್ಣಾರ್ಜುನರೂ ರಥವನ್ನೇರಿ ಹಿಂಬಾಲಿಸಿದರು. ಆಗ ಆ ಧರ್ಮರಾಜನು ಅವರಿಂದೊಡಗೂಡಿ, ಯಕ್ಷರಿಂದ ಪರಿವೃತನಾದ ಕುಬೇರನಂತೆ ಕಂಗೊಳಿಸಿದನು ॥ ೩ ॥ ಬಳಿಕ ಪಾಂಡವರು ದೇವಲೋಕದಿಂದುರುಳಿದ ದಿವ್ಯಪುರುಷನಂತೆ, ನೆಲದ ಮೇಲೆ ಮಲಗಿರುವ ಭೀಷ್ಮನನ್ನು ಕಂಡು, ಕೃಷ್ಣನಿಂದ ಕೂಡಿ ಸಪರಿವಾರರಾಗಿ ಆತನನ್ನು ನಮಸ್ಕರಿಸಿದರು ॥ ೪ ॥ ಆಸಮಯಕ್ಕೆ ಸರಿಯಾಗಿ, ಪರ್ವತಮುನಿಮೊದಲಾದ ಬ್ರಹ್ಮರ್ಷಿಗಳು, ದೇವರ್ಷಿಗಳು, ರಾಜರ್ಷಿಗಳೂ,

* ಪಾ, ವಿಶಸನಂ- ಯುದ್ಧಮಾಡಿಕೊಳ್ಳುವಸ್ಥಲ. ಕುರುಕ್ಷೇತ್ರ

ದೋ ಧೌಮ್ಯೋ 1 ಭಗವಾನ್ ಬಾದರಾಯಣಃ । ಬೃಹದಶ್ವೋ ಭರ
ದ್ವಾಜಃ 2 ಸಶಿಷ್ಯೋ 3 ರೇಣುಕಾಸುತಃ ॥ ೬ ॥ ವಶಿಷ್ಠ ಇಂದ್ರಪ್ರ
ಮದ ಸ್ತ್ರಿತೋ ಗೃತ್ಸಮದೋ ಸಿತಃ । ಕಕ್ಷೀವಾನ್ ಗೌತಮೋ ತ್ರಿಶ್ಚ ಕೌ
ಶಿಕೋ ಥ ಸುದರ್ಶನಃ ॥ ೭ ॥ ಅನ್ಯೇಚ ಮುನಯೋ ಬ್ರಹ್ಮನ್ ಬ್ರಹ್ಮರಾ
ತಾದಯೋ ಮಲಾಃ । ಶಿಷ್ಯೈ ರುಪೇತಾ ಆಜಗ್ಮುಃ ಕಾಶ್ಯಪಾಂಗಿರಸಾದ
ಯಃ ॥ ೮ ॥ ತಾನ್ ಸಮೇತಾನ್ ಮಹಾಭಾಗಾ ನುಪಲಭ್ಯ * ವಸೂತ್ತಮಃ ।
ಪೂಜಯಾಮಾಸ ಧರ್ಮಜ್ಞೋ ದೇಶಕಾಲವಿಭಾಗವಿತ್ ॥ ೯ ॥ ಕೃಷ್ಣಂ
ಚ ತತ್ಪ್ರಭಾವಜ್ಞ ಆಸೀನಂ ಜಗದೀಶ್ವರಂ । ಹೃದಿಸ್ಥಂ ಪೂಜಯಾಮಾಸ
ಮಾಯಯೋ ಪಾತ್ತವಿಗ್ರಹಂ ॥ ೧೦ ॥ ಪಾಂಡುಪುತ್ರಾ ನುಪಾಸೀನಾನ್

(1) ಷಡ್ಗುಣೈಶ್ವರ್ಯಸಂಪನ್ನನಾದ ವ್ಯಾಸಮುನಿ, ಬೃಹದಶ್ವ, ಭರದ್ವಾಜ, (2)ಶಿಷ್ಯರಿಂದಕೂಡಿದ, (3)ಪರಶುರಾಮ, ವಶಿಷ್ಠ, ಇಂದ್ರಪ್ರಮದ, ತ್ರಿತ, ಗೃತ್ಸಮದ, ಅಸಿತ, ಕಕ್ಷೀವಂತ, ಗೌತಮ, ಅತ್ರಿ, ವಿಶ್ವಾಮಿತ್ರ, ಸುದರ್ಶನ, ಇವರೂ ॥೬-೭॥ ಹೇಬ್ರಹ್ಮನ್-ಎಲೈಶೌನಕನೇ? ಅಮಲಾಃ-ನಿರ್ಮಲಚಿತ್ತವುಳ್ಳ, ಬ್ರಹ್ಮರಾತಾದಯಃ-ಬ್ರಹ್ಮರಾತನೇ ಮೊದಲಾದ, ಅನ್ಯೇ-ಇತರರಾದ, ಮುನಯಃ-ಋಷಿಗಳೂ, ಕಾಶ್ಯ...ದಯಃ, ಕಾಶ್ಯಪ-ಕಾಶ್ಯಪನು, ಅಂಗಿರಸ-ಅಂಗಿರಸನೂ, ಆದಯಃ-ಮೊದಲಾದವರೂ, ಶಿಷ್ಯೈಃ-ಶಿಷ್ಯರಿಂದ, ಉಪೇತಾಃ-ಕೂಡಿದವರಾಗಿ, ಆಜಗ್ಮುಃ-ಬಂದರು ॥ ೮ ॥ ಧರ್ಮಜ್ಞಃ-ಧರ್ಮಗಳನ್ನು ತಿಳಿದಿರುವ, ದೇಶ...ವಿತ್ ದೇಶ-ದೇಶದ, ಕಾಲ-ಕಾಲದ, ವಿಭಾಗ-ವಿಭಾಗವನ್ನು, ವಿತ್-ತಿಳಿದಿರುವ, ವಸೂತ್ತಮಃ - ವಸುಗಳಲ್ಲಿ ಶ್ರೇಷ್ಠನಾದ ಭೀಷ್ಮನು, ಸಮೇತಾನ್-ಸೇರಿರುವ, ಮಹಾಭಾಗಾನ್-ಮಹಾತ್ಮರಾದ, ತಾನ್-ಅವರನ್ನು, ಉಪಲಭ್ಯ-ನೋಡಿ, ಪೂಜಯಾಮಾಸ-ಪೂಜಿಸಿದನು ॥ ೯ ॥

ತತ್ಪ್ರಭಾವಜ್ಞಃ, ತತ್-ಆಕೃಷ್ಣನ, ಪ್ರಭಾವಜ್ಞಃ-ಮಹಿಮೆಯನ್ನು ತಿಳಿದವನಾದುದರಿಂದಲೇ, ಹೃದಿಸ್ಥಂ-ಹೃದಯದಲ್ಲಿರುವವನಾದರೂ, ಆಸೀನಂ-ಎದುರಾಗಿಕುಳಿತಿರುವ, ಜಗದೀಶ್ವರಂ-ಪ್ರಪಂಚಕ್ಕೊಡೆಯನಾದ, ಮಾಯಯಾ-ಮಾಯೆಯಿಂದ, ಉಪಾತ್ತವಿಗ್ರಹಂ-ಶರೀರವನ್ನು ಪಡೆದಿರುವ, ಕೃಷ್ಣಂಚ-ಕೃಷ್ಣನನ್ನೂ, ಪೂಜಯಾಮಾಸ-ಪೂಜಿಸಿದನು ॥ ೧೦ ॥ ಉಪಾಸೀನಾನ್-ಬಳಿಯಲ್ಲಿ ಸೇವಿಸುತ್ತಿರುವ,

ತಮ್ಮ ತಮ್ಮ ಶಿಷ್ಯರಿಂದ ಪರಿವೃತರಾಗಿ, ಶರತಲ್ಪಶಾಯಿಯಾಗಿರುವ ಭೀಷ್ಮಾಚಾರ್ಯನನ್ನು ನೋಡುವುದಕ್ಕಾಗಿ ಆಕ್ಷಣದಲ್ಲಿಯೇ ಅಲ್ಲಿಗೆ ಬಂದುಸೇರಿದರು ॥ ೫-೮ ॥

ಆಗ ಧರ್ಮಜ್ಞನಾದ ಭೀಷ್ಮಾಚಾರ್ಯನು, ಕುರುಕ್ಷೇತ್ರಮಹಿಮೆಯನ್ನೂ ತಾನು ಶರತಲ್ಪದ ಮೇಲೆ ಮಲಗಿರುವ ಉತ್ತರಾಯಣಕಾಲವನ್ನೂ ತಿಳಿದವನಾದುದರಿಂದ ಗುಂಪಾಗಿ ಬಿಜಮಾಡಿರುವ ಆ ಮಹಾತ್ಮರೆಲ್ಲರನ್ನೂ ಉಚಿತವನ್ನರಿತು ಪೂಜಿಸಿದುದಲ್ಲದೆ ॥೯॥ ಶ್ರೀಕೃಷ್ಣಮೂರ್ತಿಯ ಸ್ವರೂಪವನ್ನು ತಿಳಿದವನಾದುದರಿಂದ, ಹೃದಯದಲ್ಲಿ ನೆಲಸಿರುವವನಾದರೂ ಮಾಯೆಯಿಂದ ಶರೀರವನ್ನು ಪಡೆದು, ಎದುರಾಗಿ ಕುಳಿತಿರುವ ಜಗದೀಶ್ವರನಾದ ಕೃಷ್ಣನನ್ನೂ ಯಥಾವಿಧಿಯಾಗಿ ಪೂಜಿಸಿದನು ॥ ೧೦ ॥ ಬಳಿಕ ತನ್ನ ಬಳಿಯಲ್ಲಿ ಕು

* ವ. ವಸೋತ್ತಮಃ, ಹೆಂಡತಿಯಿಂದ ಪ್ರೇರಿತನಾಗಿ, ಕಾಮಧೇನುವನ್ನು ಅಪಹರಿಸಲು ಯತ್ನಿಸಿ, ವಶಿಷ್ಠಮುನಿಯಿಂದ ಶಪ್ತನಾಗಿ, ಶಂತನುವಿನಿಂದ ಗಂಗೆಯಲ್ಲಿ ಜನಿಸಿದ ವಸುವೇ ಭೀಷ್ಮನು,

ಪ್ರಶ್ರಯ ಪ್ರೇಮಸಂಗತಾನ್ । ಅಭ್ಯಾಚಷ್ಟಾ ನುರಾಗಾಸ್ರೈ ರಂಧೀಭೂತೇ
ನ ಚಕ್ಷುಷಾ ॥ ೧೧ ॥ ಭೀಷ್ಮ ಉವಾಚ ॥ * ಅಹೋ ಕಷ್ಟ ಮಹೋಽ
ನ್ಯಾಯ್ಯಂ ಯದ್ಯೂಯಂ ಧರ್ಮನಂದನ । ಜೀವಿತುಂ ನಾರ್ಹಥ ಕ್ಲಿಷ್ಟಂ
ವಿಪ್ರಧರ್ಮಾ ಚ್ಯುತಾಶ್ರಯಾಃ ॥ ೧೨ ॥ ಸಂಸ್ಥಿತೇ ತಿರಥೇ ಪಾಂಡೌ ಪೃಥಾ
ಬಾಲಪ್ರಜಾ ವಧೂಃ । ಯುಷ್ಮತ್ಕೃತೇ ಬಹೂನ್ ಕ್ಲೇಶಾನ್ ಪ್ರಾಪ್ತಾ
ತೋಕವತೀ ಮುಹುಃ ॥ ೧೩ ॥ ಸರ್ವಂ ಕಾಲಕೃತಂ ಮನ್ಯೇ ಭವತಾಂ
ಚ ಯದಪ್ರಿಯಂ । ಸಪಾಲೋ ಯದ್ವಶೇ ಲೋಕೋ ವಾಯೋ ರಿವ ಘ
ನಾವಲಿಃ ॥ ೧೪ ॥ ಯತ್ರ ಧರ್ಮಸುತೋ ರಾಜಾ ಗದಾಪಾಣಿ ರ್ವೃಕೋ

ಪ್ರಶ್ರಯ...ತಾನ್, ಪ್ರಶ್ರಯ-ವಿನಯದಿಂದಲೂ, ಪ್ರೇಮ-ಪ್ರೀತಿಯಿಂದಲೂ, ಸಂಗತಾನ್ - ಕೂಡಿರುವ, ಪಾಂಡುಪುತ್ರಾನ್ - ಪಾಂಡವರನ್ನು, ಅನುರಾಗಾಸ್ರೈಃ - ಆನಂದಬಾಷ್ಪಗಳಿಂದ, ಅಂಧೀಭೂತೇನ-ಕುರುಡಾದ, ಚಕ್ಷುಷಾ - ಕಣ್ಣಿನಿಂದ ಕೂಡಿದವನಾಗಿ, ಅಭ್ಯಾಚಷ್ಟ - ಹೇಳಿದನು ॥ ೧೧ ॥ ಹೇ ಧರ್ಮನಂದನ-ಎಲೈ ಧರ್ಮರಾಜನೆ? ಯತ್-ಯಾವಕಾರಣದಿಂದ, ವಿಪ್ರ-ಬ್ರಾಹ್ಮಣರೂ, ಧರ್ಮ-ಧರ್ಮವೂ, ಅಚ್ಯುತ-ಕೃಷ್ಣನೂ, ಆಶ್ರಯಾಃ - ಆಶ್ರಯವಾಗಿರುವ, ಯೂಯಂ - ನೀವು, ಕ್ಲಿಷ್ಟಂ - ಕಷ್ಟವಾಗಿ, ಜೀವಿತುಂ-ಬದುಕುವುದಕ್ಕೆ, ನಾರ್ಹಥ-ಅರ್ಹರಾಗುತ್ತಿಲ್ಲವೋ, ತತ್-ಆದುದರಿಂದ, ಅಹೋ-ಅಯ್ಯೋ, ಕಷ್ಟಂ-ಕಷ್ಟವು, ಅಹೋ-ಅಯ್ಯೋ, ಅನ್ಯಾಯ್ಯಂ-ಅನ್ಯಾಯವು, ॥ ೧೨ ॥ ಅತಿರಥೇ-ಮಹಾಶೂರನಾದ, ಪಾಂಡೌ-ಪಾಂಡುರಾಜನು, ಸಂಸ್ಥಿತೇ-ಮೃತನಾಗಲು, ಬಾಲಪ್ರಜಾ-ಎಳೇಮಕ್ಕಳುಳ್ಳ, ವಧೂಃ-ಸ್ತ್ರೀಮಾತ್ರಳಾದ, ಪೃಥಾ-ಕುಂತಿಯು, ತೋಕವತೀ-ಶಿಶುಗಳನ್ನು ಕಾಪಾಡುತ್ತಾ, ಯುಷ್ಮತ್ಕೃತೇ-ನಿಮಗಾಗಿ, ಮುಹುಃ-ಪದೇಪದೇ, ಬಹೂನ್-ಬಹಳ, ಕ್ಲೇಶಾನ್-ಕಷ್ಟಗಳನ್ನು, ಪ್ರಾಪ್ತಾಹಿ-ಹೊಂದಿದಳಷ್ಟೆ, ॥ ೧೩ ॥ ಭವತಾಂಚ-ನಿಮಗೂ, ಅಪ್ರಿಯಂಯತ್ - ದುಃಖವಾವುದುಂಟೋ, ಸರ್ವಂ-ಅದೆಲ್ಲವನ್ನೂ, ವಾಯೋಃ - ಗಾಳಿಯವಶದಲ್ಲಿ, ಘನಾವಲಿರಿವ - ಮೇಘಪಂಕ್ತಿಯಂತೆ, ಸಪಾಲಃ - ದಿಕ್ಪಾಲರಿಂದ ಕೂಡಿದ, ಲೋಕಃ-ಪ್ರಪಂಚವು, ಯದ್ವಶೇ-ಯಾರ ಅಧೀನವಾಗಿರುವುದೋ, ಕಾಲಕೃತಂ-ಆ ಕಾಲದಿಂದ ಮಾಡಲ್ಪಟ್ಟದ್ದೆಂದು, ಮನ್ಯೇ-ತಿಳಿಯುತ್ತೇನೆ, ॥ ೧೪ ॥ ಯತ್ರ ಎಲ್ಲಿ, ರಾಜಾ - ದೊರೆಯಾದ, ಧರ್ಮಸುತಃ-ಧರ್ಮರಾಜನು, ಗದಾಪಾಣಿಃ-ಗದೆಯನ್ನು ಹಿಡಿದಿರುವ, ವೃಕೋದರಃ - ಭೀಮನು, ಅಸ್ತ್ರೀ-

ಳಿತುಕೊಂಡು ಸೇವಿಸುತ್ತಾ, ವಿನೀತರಾಗಿ ಪ್ರೀತಿಯುಕ್ತರಾಗಿರುವ ಪಾಂಡವರನ್ನು ಕಂಡು, ಕಣ್ಣುತುಂಬಾ ಆನಂದಬಾಷ್ಪಗಳನ್ನು ತುಳುಕಿಸುತ್ತಾ ಇಂತೆಂದನು ॥ ೧೧ ॥ ಅಯ್ಯಾ ಧರ್ಮರಾಯನೇ? ಬ್ರಾಹ್ಮಣರನ್ನು, ಧರ್ಮಗಳನ್ನು, ಕೃಷ್ಣನನ್ನೂ ಆಶ್ರಯಿಸಿರುವ ನಿಮಗೆ ಇಂತು ದುಃಖದಿಂದ ಜೀವಿಸುವುದಕ್ಕಿಂತಲೂ ಕಷ್ಟವುಂಟೆ? ಅನ್ಯಾಯವಿರುವುದೆ? ಅಯ್ಯೋ ಬಹಳಕಷ್ಟವು ॥ ೧೨ ॥ ಮಹಾಶೂರನಾದ ಪಾಂಡುರಾಯನು ಅಕಾಲಮರಣವನ್ನು ಪಡೆಯಲು, ಶಿಶುಗಳಿಂದೊಡಗೂಡಿದ ಅಬಲೆಯಾದ ಕುಂತಿಯು ನಿಮಗಾಗಿ ಅಡಿಗಡಿಗೂ ಕಷ್ಟಗಳನ್ನನುಭವಿಸಿದಳು ॥ ೧೩ ॥ ಗಾಳಿಗಧೀನವಾದ ಮೇಘಪಙ್ಕ್ತಿಯಂತೆ, ಸಕಲ ಪ್ರಪಂಚಗಳೂ ಯಾವ ಕಾಲಕ್ಕಧೀನಗಳಾಗಿರುವವೋ, ಆ ಕಾಲದಿಂದಲೇ ನಿಮಗಿಷ್ಟು

* ಪಾ. ಅಹೋನ್ಯಾಯ್ಯ ಮಿದಂಕಷ್ಟಂ,

ದರಃ। ಕೃಷ್ಣೋಽಸ್ತ್ರೀ ಗಾಂಡಿವಂ ಚಾಪಂ ಸುಹೃತ್ಕೃಷ್ಣಸ್ತತೋ ವಿಪತ್॥
ನಹ್ಯಸ್ಯ ಕರ್ಹಿಚಿದ್ರಾಜನ್ ಪುಮಾನ್ ವೇದ *ಚಿಕಿತ್ಸಿತಂ। ಯದ್ವಿಜಿಜ್ಞಾ
ಸಯಾ ಯುಕ್ತಾ ಮುಹ್ಯಂತಿ ಕವಯೋಽಪಿಹಿ ॥ ೧೬ ॥ ತಸ್ಮಾದಿದಂ ದೈವ
ತಂತ್ರಂ ವ್ಯವಸ್ಯ ಭರತರ್ಷಭ । ತಸ್ಯಾನುವಿಹಿತೋಽನಾಥಾನಾಥ ಪಾಹಿ
ಪ್ರಜಾಃ ಪ್ರಭೋ ॥ ೧೭ ॥ ಏಷವೈ ಭಗವಾನ್ ಸಾಕ್ಷಾದಾದ್ಯೋ ನಾರಾ
ಯಣಃ ಪುಮಾನ್ । ಮೋಹಯನ್ ಮಾಯಯಾ ಲೋಕಂ ಗೂಢಶ್ಚರತಿ

ಅಸ್ತ್ರಗಳುಳ್ಳ, ಕೃಷ್ಣಃ ಅರ್ಜುನನು, ಗಾಂಡಿವಂ-ಗಾಂಡೀವವೆಂಬ, ಚಾಪಂ-ಬಿಲ್ಲು, ಸುಹೃತ್-ಮಿತ್ರನಾದ, ಕೃಷ್ಣಃ-ಶ್ರೀ ಕೃಷ್ಣನೂ, ಇರುವರೋ, ತತಃ - ಅಲ್ಲಿಯೂ, ವಿಪತ್-ಆಪತ್ತೆಂಬುದು ಆಶ್ಚರ್ಯವು ॥ ೧೫ ॥ ಹೇ ರಾಜನ್-ಎಲೈ ಧರ್ಮರಾಜನೆ? ಯದ್ವಿಜಿಜ್ಞಾಸಯಾ, ಯತ್-ಯಾವನ ಕಾರ್ಯಗಳ, ವಿಜಿಜ್ಞಾಸಯಾ-ವಿಚಾರಾಪೇಕ್ಷೆಯಿಂದ, ಯುಕ್ತಾಃ - ಕೂಡಿರುವ, ಕವಯೋಽಪಿ - ಜ್ಞಾನಿಗಳೂ, ಮುಹ್ಯಂತಿ-ಮರುಳಾಗಿರುವರೋ, ಅಸ್ಯ-ಈ ಕೃಷ್ಣನ, ಚಿಕಿತ್ಸಿತಂ - ಮಾಡುವ ಆ ಕಾರ್ಯಗಳನ್ನು, ಕರ್ಹಿಚಿತ್-ಯಾವಾಗಲೂ, ಪುಮಾನ್-ಪುರುಷನು, ನವೇದ - ತಿಳಿಯುವುದಿಲ್ಲ ॥ ೧೬ ॥ ಹೇ ಭರತರ್ಷಭ - ಎಲೈ ಭರತಕುಲದಲ್ಲಿ ಶ್ರೇಷ್ಠನಾದ ಧರ್ಮರಾಯನೆ,? ತಸ್ಮಾತ್-ಆದುದರಿಂದ, ಇದಂ-ಈ ಸುಖದುಃಖಗಳು, ದೈವತಂತ್ರಂ-ದೈವಾಧೀನಗಳೆಂದು, ವ್ಯವಸ್ಯ-ನಿಶ್ಚಯಿಸಿ, ತಸ್ಯ-ಆ ದೈವವನ್ನು, ಅನುವಿಹಿತಃ - ಅನುಸರಿಸುವವನಾಗಿ, ಪ್ರಭೋ-ಸಮರ್ಥನಾದ, ನಾಥ-ಸ್ವಾಮಿಯೇ ! ಅನಾಥಾಃ-ದಿಕ್ಕಿಲ್ಲದ, ಪ್ರಜಾಃ-ಪ್ರಜೆಗಳನ್ನು, ಪಾಹಿ-ಕಾಪಾಡು ॥ ೧೭ ॥ ಏಷವೈ-ಈ ಕೃಷ್ಣನು, ಆದ್ಯಃ-ಜನ್ಮಾದಿಗಳಿಲ್ಲದ, ಪುಮಾನ್-ಪರಮಪುರುಷನಾದ. ಸಾಕ್ಷಾತ್-ಪ್ರತ್ಯಕ್ಷನಾದ, ಭಗವಾನ್-ಷಡೈಶ್ವರ್ಯಯುಕ್ತನಾದ, ನಾರಾಯಣಃ-ನಾರಾಯಣಮೂರ್ತಿಯು, ಇವನು, ಮಾಯಯಾ-ಮಾಯೆಯಿಂದ ಲೋಕಂ-ಲೋಕವನ್ನು, ಮೋಹಯನ್-ಮೋಹಗೊಳಿಸುವವನಾಗಿ, ವೃಷ್ಣಿಷು-ಯಾದವರಲ್ಲಿ, ಗೂಢಃ-ಗುಪ್ತನಾಗಿ, ಚರತಿ-ಸಂಚರಿಸುತ್ತಾನೆ ॥೧೮॥

ದುಃಖಗಳುಂಟಾದುವಲ್ಲದೆ, ಬೇರೆಯಲ್ಲ ॥೧೪॥ ರಾಜನಾದ ಯುಧಿಷ್ಠಿರನು, ಗದಾಪಾಣಿಯಾದ ಭೀಮನು, ಅಸ್ತ್ರಕುಶಲನಾದ ಅರ್ಜುನನೂ, ಗಾಂಡೀವಧನುಸ್ಸೂ, ಮಿತ್ರನಾದ ಕೃಷ್ಣನು, ಇವರಿರುವ ಕಡೆಯಲ್ಲಿಯೂ ವಿಪತ್ತುಗಳುಂಟಾಯಿತೆಂದರೆ, ಇದಕ್ಕಿಂತಲೂ ಆಶ್ಚರ್ಯವೇನು ? ॥೧೫॥ ಅಯ್ಯಾ ರಾಜನೆ! ಬ್ರಹ್ಮಾದಿಗಳೂ ಯಾವನ ಕಾರ್ಯಗಳನ್ನು ತಿಳಿಯಲಾರದೆ ಮರುಳಾಗಿರುವರೋ, ಅಂತಹ ಈ ಕೃಷ್ಣಮೂರ್ತಿಯ ಕಾರ್ಯಗಳನ್ನು ಎಂದಿಗೂ ಮನುಷ್ಯನು ತಿಳಿಯಲಾರನು ॥೧೬॥

ಎಲೈ ಭರತಕುಲಾವತಂಸನೆ? ಪ್ರಭುವೆ? ಧರ್ಮರಾಜನೆ? ಆದುದರಿಂದ ಈ ಸುಖದುಃಖಗಳೆಲ್ಲವನ್ನೂ ದೈವತಂತ್ರನೆಂದು ತಿಳಿದು ಆ ಪರಮೇಶ್ವರನನ್ನು ಅನುವರ್ತಿಸಿಕೊಂಡು ಅನಾಥರಾಗಿರುವ ಪ್ರಜೆಗಳನ್ನು ಕಾಪಾಡು ॥ ೧೭ ॥ ನೀನು ಅನುವರ್ತಿಸಬೇಕಾದ ದೈವವೂ ದೂರವಾಗಿಲ್ಲ. ಇದೋ ನೋಡು, ಈ ಕೃಷ್ಣಮೂರ್ತಿಯೇ, ಆದ್ಯಂತರಹಿತನೂ, ಪುರಾಣಪುರುಷನೂ, ಆದ ನಾರಾಯಣಮೂರ್ತಿಯು, ಈತನು ತನ್ನ ಮಾಯೆಯಿಂದ ಜಗತ್ತನ್ನು ಮರುಳುಮಾಡುತ್ತಾ, ತನ್ನ ನಿಲೆಯನ್ನು ಯಾರಿಗೂ ತಿಳಿಸದೆ ಗುಪ್ತನಾಗಿ

* ಪಾ, ವಿಧಿತ್ಸಿತಂ--ಮಾಡುವಕೆಲಸ.

ವೃಷ್ಣಿಷು ॥ ೧೮ ॥ ಅಸ್ಯಾನುಭಾವಂ ಭಗವಾನ್ ವೇದ ಗುಹ್ಯತಮಂ ಶಿವಃ।
ದೇವರ್ಷಿರ್ನಾರದಃ ಸಾಕ್ಷಾದ್ಭಗವಾನ್ ಕಪಿಲೋ ನೃಪ ॥೧೯॥ ಯಂ ಮ
ನ್ಯಸೇ ಮಾತುಲೇಯಂ ಪ್ರಿಯಂ ಮಿತ್ರಂ ಸುಹೃತ್ತಮಂ । ಅಕರೋಃ ಸ್ಸಚಿ
ವಂ ದೂತಂ ಸೌಹೃದಾದಥ ಸಾರಥಿಂ ॥ ೨೦ ॥ ಸರ್ವಾತ್ಮನ ಸ್ಸಮದೃಶೋ
ಹ್ಯದ್ವಯಸ್ಯಾ ನಹಂಕೃತೇಃ।ತತ್ಕೃತಂ ಮತಿವೈಷಮ್ಯಂ ನಿರವದ್ಯಸ್ಯ ನಕ್ವ
ಚಿತ್ ॥ ೨೧ ॥ ತಥಾಪ್ಯೇಕಾಂತಭಕ್ತೇಷು ಪಶ್ಯಭೂಪಾ ನುಕಂಪಿತಂ ।
ಯನ್ಮೇಸೂಂ ಸ್ತ್ಯಜತ ಸ್ಸಾಕ್ಷಾ ತ್ಕೃಷ್ಣೋ ದರ್ಶನ ಮಾಗತಃ ॥ ೨೨ ॥

ಹೇ ನೃಪ-ಎಲೈ ಧರ್ಮರಾಯನೆ ! ಅಸ್ಯ - ಇವನ, ಗುಹ್ಯತಮಂ - ಅತ್ಯಂತರಹಸ್ಯವಾದ, ಅನುಭಾವಂ-ಮಹಿಮೆಯನ್ನು, ಭಗವಾನ್ - ಭಗವಂತನಾದ, ಶಿವಃ-ಶಿವನು, ದೇವರ್ಷಿಃ-ದೇವರ್ಷಿಯಾದ, ನಾರದಃ-ನಾರದನು, ಸಾಕ್ಷಾತ್ - ಪ್ರತ್ಯಕ್ಷನಾದ, ಭಗವಾನ್ - ಭಗವಂತನೆನಿಸಿದ, ಕಪಿಲಃ-ಕಪಿಲಮುನಿಯು, ವೇದ-ಬಲ್ಲರು ॥೧೯॥ ಯಂ-ಯಾವನನ್ನು, ಮಾತುಲೇಯಂ-ಸೋದರಮಾವನ ಮಗನೆಂದೂ, ಪ್ರಿಯಂ-ಇಷ್ಟನೆಂದೂ, ಮಿತ್ರಂ - ಸ್ನೇಹಿತನೆಂದೂ, ಸುಹೃತ್ತಮಂ-ಉಪಕಾರಕನೆಂದೂ, ಮನ್ಯಸೇ-ತಿಳಿದಿರುವೆಯೊ ? ಸೌಹೃದಾತ್ - ಸ್ನೇಹದಿಂದ, ಯಂ-ಯಾವನನ್ನು, ಸಚಿವಂ-ಮಂತ್ರಿಯನ್ನಾಗಿಯೂ, ಅಥ-ಮತ್ತು, ಸಾರಥಿಂ - ಸಾರಥಿಯನ್ನಾಗಿಯೂ, ಅಕರೋಃ - ಮಾಡಿರುವೆಯೋ ॥ ೨೦ ॥
ಸರ್ವಾತ್ಮನಃ-ಸರ್ವರಿಗೂ ಆತ್ಮನಾಗಿಯೂ, ಸಮದೃಶಃ-ಸಮದೃಷ್ಟಿಯುಳ್ಳವನಾಗಿಯೂ, ಅದ್ವಯಸ್ಯ-ಅದ್ವಿತೀಯನಾಗಿಯೂ, ಅನಹಂಕೃತೇಃ-ಅಹಂಕಾರವಿಲ್ಲದ, ನಿರವದ್ಯಸ್ಯ - ರಾಗಾದಿಗಳಿಲ್ಲದ ಭಗವಂತನಿಗೆ, ತತ್ಕೃತಂ-ಆ ಉಚ್ಚನೀಚ ಕೃತ್ಯಗಳಿಂದುಂಟಾದ, ಮತಿವೈಷಮ್ಯಂ-ಬುದ್ಧಿವ್ಯತ್ಯಾಸವು, ಕ್ವಚಿತ್-ಎಲ್ಲಿಯೂ, ನ-ಇಲ್ಲ ॥ ೨೧ ॥ ಹೇ ಭೂಪ-ಎಲೈ ರಾಜನೆ ! ಯತ್ - ಯಾವುದರಿಂದ, ಅಸೂನ್-ಪ್ರಾಣಗಳನ್ನು, ತ್ಯಜತಃ-ಬಿಡುವ, ಮೇ-ನನಗೆ, ಕೃಷ್ಣಃ-ಕೃಷ್ಣನು, ಸಾಕ್ಷಾತ್-ಪ್ರತ್ಯಕ್ಷವಾಗಿ, ದರ್ಶನಂ-ದರ್ಶನವನ್ನು, ಆಗತಃ-ಇತ್ತನೋ, ಆದುದರಿಂದ, ತಥಾಪಿ-ಸರ್ವಸಮನಾದರೂ, ಏಕಾಂತಭಕ್ತೇಷು-ಅಂತರಂಗಭಕ್ತರಲ್ಲಿ, ಅನುಕಂಪಿತಂ-ದಯೆಯನ್ನು, ಪಶ್ಯ-ನೋಡು ॥ ೨೨ ॥ಯೋಗೀ-ಜ್ಞಾನಿಯಾದವನು,

ಯಾದವರಲ್ಲಿ ಓಡಾಡುತ್ತಿರುವನು ॥ ೧೮ ॥ ಈತನ ಅತ್ಯಂತರಹಸ್ಯವಾದ ಮಹಿಮೆಯನ್ನು ಭಗವಂತನಾದ ಪರಶಿವನು, ದೇವರ್ಷಿಯಾದ ನಾರದನು, ಸಾಕ್ಷಾದ್ಭಗವಂತನೆನಿಸಿದ ಕಪಿಲಮುನಿಯು, ಇವರು ಬಲ್ಲರೇ ಹೊರತು, ಇತರರರಿಯರು ॥ ೧೯ ॥ ಅಯ್ಯಾ ಧರ್ಮರಾಜನೆ ! ನೀನು ಅಜ್ಞಾನದಿಂದ ಯಾರನ್ನು ಸೋದರಮಾವನ ಮಗನೆಂದೂ, ಆಪ್ತನೆಂದೂ, ಮಿತ್ರನೆಂದೂ, ತಿಳಿದು ಮಂತ್ರಿಯನ್ನಾಗಿಯೂ, ಸ್ನೇಹದಿಂದ, ದೂತನನ್ನಾಗಿಯೂ, ಸಾರಥಿಯನ್ನಾಗಿಯೂ ಮಾಡಿಕೊಂಡಿರುವೆಯೋ, ಆತನೇ ಸಾಕ್ಷಾನ್ನಾರಾಯಣಮೂರ್ತಿಯೆಂದು ತಿಳಿ. ಆ ಭಗವಂತನಿಂತಹ ನೀಚಕಾರ್ಯಗಳನ್ನು ಮಾಡಬಹುದೆ? ಎಂದು ಕೆಲವರು ತಿಳಿದಿರಬಹುದು. ಆದರೆ ಭಗವಂತನು ಕಾಮಕ್ರೋಧಾದಿಗಳಿಗೊಳಪಟ್ಟಿಲ್ಲ. ಆತನಲ್ಲಿ ಅಹಂಕಾರವಿಲ್ಲ. ಭೇದವಿಲ್ಲ. ಪಕ್ಷಪಾತವಿಲ್ಲ. ಎಲ್ಲರಿಗೂ ಆತ್ಮನಾಗಿರುವನು. ಈ ಕಾರಣಗಳಿಂದ ಆತನಿಗೆ ಭೇದಬುದ್ಧಿಯಿಲ್ಲ ॥ ೨೧ ॥ ಅಯ್ಯಾ ರಾಜನೆ ! ಹೀಗೆ ಸರ್ವಸಮನಾಗಿದ್ದರೂ ಆತನಿಗೆ ಭಕ್ತರಲ್ಲಿರುವ ದಯೆಯನ್ನು ನೋಡು. ನಾನು ಪ್ರಾಣಗಳನ್ನು ಬಿಡುವ ಸಮಯಕ್ಕೆ ಸರಿಯಾಗಿ ತಾನೇ ಸಾಕ್ಷಾತ್ತಾಗಿ ಬಿಜಮಾಡಿ, ದರ್ಶನವನ್ನಿತ್ತನಲ್ಲಾ ! ॥ ೨೨ ॥

ಭಕ್ತ್ಯಾವೇಶ್ಯ ಮನೋ ಯಸ್ಮಿನ್ ವಾಚಾ ಯನ್ನಾಮ ಕೀರ್ತಯನ್ ।
ತ್ಯಜನ್ ಕಳೇಬರಂ ಯೋಗೀ ಮುಚ್ಯತೇ ಕಾಮಕರ್ಮಭಿಃ ॥ ೨೩ ॥ ಸದೇ
ವದೇವೋ ಭಗವಾನ್ ಪ್ರತೀಕ್ಷತಾಂ ಕಳೇಬರಂ ಯಾವದಿದಂ ಹಿನೋಮ್ಯ
ಹಂ । ಪ್ರಸನ್ನಹಾಸಾರುಣ ಲೋಚನೋಲ್ಲಸ ನ್ಮುಖಾಂಬುಜೋ ಧ್ಯಾನಪ
ಥಶ್ಚತುರ್ಭುಜಃ ॥ ೨೪ ॥ ಸೂತಃ:—ಯುಧಿಷ್ಠಿರಸ್ತದಾಕರ್ಣ್ಯ ಶಯಾನಂ
ಶರಪಂಜರೇ । ಅಪೃಚ್ಛ ದ್ವಿವಿಧಾನ್ ಧರ್ಮಾ ನೃಷೀಣಾ ಮನುಶೃಣ್ವತಾಂ ॥ ೨೫ ॥
ಪುರುಷಸ್ವಭಾವವಿಹಿತಾನ್ ಯಥಾವರ್ಣಂ ಯಥಾಶ್ರಮಂ । ವೈರಾಗ್ಯರಾ

ಯಸ್ಮಿನ್ - ಯಾವನಲ್ಲಿ, ಭಕ್ತ್ಯಾ-ಭಕ್ತಿಯಿಂದ, ಮನಃ - ಮನಸ್ಸನ್ನು, ಆವೇಶ್ಯ-ನಿಲ್ಲಿಸಿ, ವಾಚಾ-ವಾಕ್ಕಿನಿಂದ, ಯನ್ನಾಮ-ಯಾವ ಹೆಸರನ್ನು, ಕೀರ್ತಯನ್-ಸ್ತುತಿಸುತ್ತಾ, ಕಳೇಬರಂ-ಶರೀರವನ್ನು, ತ್ಯಜನ್-ತೊರೆಯುವವನಾಗಿ, ಕಾಮಕರ್ಮಭಿಃ, ಕಾಮ-ಶಬ್ದಾದಿವಿಷಯಗಳಿಂದಲೂ, ಕರ್ಮಭಿಃ ಆ ಕಾಮಗಳಿಗೆ ನಿಮಿತ್ತಗಳಾದ ಪುಣ್ಯಪಾಪಕರ್ಮಗಳಿಂದಲೂ, ಮುಚ್ಯತೇ-ಬಿಡಲ್ಪಡುತ್ತಾನೋ, ॥ ೨೩ ॥ ಭಗವಾನ್ - ಭಗವಂತನಾದ, ಪ್ರಸನ್ನ...ಭುಜಃ, ಪ್ರಸನ್ನ-ನಿರ್ಮಲವಾದ, ಹಾಸ-ನಗೆಯಿಂದಲೂ, ಅರುಣಲೋಚನ-ಕೆಂಪಾದ ಕಡೆಗಣ್ಣುಗಳಿಂದಲೂ, ಉಲ್ಲಸತ್-ಪ್ರಕಾಶಮಾನವಾದ, ಮುಖಾಂಬುಜಃ-ಮುಖಕಮಲವುಳ್ಳ, ಚತುರ್ಭುಜಃ- ನಾಲ್ಕು ಭುಜಗಳುಳ್ಳ, ಸಃ-ಆ, ದೇವದೇವಃ-ದೇವತೆಗಳಿಗೆ ದೇವನಾದ, ಧ್ಯಾನಪಥಃ-ಧ್ಯಾನಕ್ಕೆ ವಿಷಯನಾದ ಕೃಷ್ಣಮೂರ್ತಿಯು, ಅಹಂ-ನಾನು, ಯಾವತ್ - ಎಷ್ಟರೊಳಗೆ, ಇದಂ-ಅನಾತ್ಮವೆಂದು ನಿಶ್ಚಿತವಾಗಿರುವ, ಕಳೇಬರಂ-ಶರೀರವನ್ನು, ಹಿನೋಮಿ-ಬಿಡುವೆನೋ, ತಾವತ್-ಅಷ್ಟರವರೆಗೂ, ಪ್ರತೀಕ್ಷತಾಂ-ಅನುಗ್ರಹಿಸಿರಲಿ, ॥ ೨೪ ॥ ತದಾ-ಆಗ, ಯುಧಿಷ್ಠಿರಃ-ಧರ್ಮರಾಜನು, ತತ್-ಅದನ್ನು, ಆಕರ್ಣ್ಯ-ಕೇಳಿ, ಶರಪಂಜರೇ-ಬಾಣಗಳ ಮಂಚದಲ್ಲಿ, ಶಯಾನಂ-ಮಲಗಿರುವ ಭೀಷ್ಮನನ್ನು ಕುರಿತು, ಋಷೀಣಾಂ-ವಸಿಷ್ಠಾದಿಋಷಿಗಳು, ಅನುಶೃಣ್ವತಾಂ-ಕೇಳುತ್ತಿರುವಾಗಲೇ, ದ್ವಿವಿಧಾನ್-ಹಲವುಬಗೆಗಳಾದ, ಧರ್ಮಾನ್ - ಧರ್ಮಗಳನ್ನು, ಅಪೃಚ್ಛತ್ - ಕೇಳಿದನು, ॥ ೨೫ ॥ ಯಥಾವರ್ಣಂ-ಬ್ರಾಹ್ಮಣಾದಿ ವರ್ಣಗಳಿಗೂ, ಯಥಾಶ್ರಮಂ-ಬ್ರಹ್ಮಚರ್ಯಾದ್ಯಾಶ್ರಮಗಳಿಗೂ ಅನುಸಾರವಾಗಿ, ಪುರುಷ...ವಿಹಿತಾನ್, ಪುರುಷ ಮನುಷ್ಯನ, ಸ್ವಭಾವ ಪ್ರಕೃತಿಗೆ ಸರಿಯಾಗಿ, ವಿಹಿತಾನ್-ಹೇಳಲ್ಪಟ್ಟಿರುವ,

ಮಹಾಯೋಗಿಗಳೂ ಯಾವನಲ್ಲಿ ಭಕ್ತಿಯಿಂದ ಬುದ್ಧಿಯನ್ನು ನಿಲ್ಲಿಸಿ, ಯಾವನ ನಾಮಗಳನ್ನು ಬಾಯಿಂದ ಹೊಗಳುತ್ತಾ, ಕಳೇಬರವನ್ನು ಬಿಟ್ಟು ಕಾಮಕರ್ಮಗಳನ್ನು ತೊರೆದು ಮುಕ್ತರಾಗುವರೋ, ಅಂತಹ ದೇವಾದಿದೇವನಾಗಿಯೂ, ನಿರ್ಮಲವಾದೆಳನಗೆಯಿಂದಲೂ, ನಸುಗೆಂಪಾದ ಕಡೆಗಣ್ಣುಗಳಿಂದಲೂ, ಹೊಳೆಯುತ್ತಿರುವ ಮುಖಕಮಲವುಳ್ಳವನಾಗಿಯೂ ಇರುವ ಭಗವಂತನು, ನಾನೀ ಜಡವಾದ ಶರೀರವನ್ನು ಬಿಡುವವರೆಗೂ, ಅನುಗ್ರಹವನ್ನು ಮಾಡಿ ಇಲ್ಲಿ ನೆಲಸಿರಲಿ ಎಂದು ಬೇಡಿಕೊಂಡನು ॥ ೨೩-೨೪ ॥

ಸೂತನು ಹೇಳುತ್ತಾನೆ:—ಅಯ್ಯಾ ಋಷಿಗಳಿರಾ! ಧರ್ಮರಾಜನಾಮಾತನ್ನು ಕೇಳಿ, ಎಲ್ಲ ಋಷಿಗಳೂ ಕೇಳುವಂತೆ, ಶರತಲ್ಪದಲ್ಲಿ ಮಲಗಿರುವ ಭೀಷ್ಮಾಚಾರ್ಯನನ್ನು ಕುರಿತು, ಸಕಲಧರ್ಮಗಳನ್ನು ಉಪದೇಶಿಸಬೇಕೆಂದು ಪ್ರಶ್ನೆಮಾಡಲು, ಆ ಗಾಂಗೇಯನು ಸಕಲಪುರುಷರಿಗೂ ಸಾಮಾನ್ಯಗಳಾಗಿಯೂ, ಬ್ರಾಹ್ಮಣಾದಿವರ್ಣಗಳಿಗೂ, ಬ್ರಹ್ಮಚ

ಗೋಪಾಧಿಭ್ಯಾ ಮಾಮ್ನಾತೋಭಯಲಕ್ಷಣಾನ್ ॥ ೨೬ ॥ ದಾನಧರ್ಮಾನ್
ರಾಜಧರ್ಮಾನ್ ಮೋಕ್ಷಧರ್ಮಾನ್ ವಿಭಾಗಶಃ । ಸ್ತ್ರೀಧರ್ಮಾನ್ ಭಗವದ್ಧ
ರ್ಮಾನ್ ಸಮಾಸವ್ಯಾಸಯೋಗತಃ ॥ ೨೭ ॥ ಧರ್ಮಾರ್ಥಕಾಮ ಮೋಕ್ಷಾಂ
ಶ್ಚ ಸಹೋಪಾಯಾನ್ ಯಥಾಮುನೇ । ನಾನಾಖ್ಯಾನೇತಿ ಹಾಸೇಷು ವರ್ಣ
ಯಾಮಾಸ ಧರ್ಮವಿತ್ ॥೨೮॥ ಧರ್ಮಂ ಪ್ರವದತ ಸ್ತಸ್ಯ ಸಕಾಲಃ ಪ್ರತ್ಯು
ಪಸ್ಥಿತಃ। ಯೋ ಯೋಗಿನ ಶ್ಛಂದಮೃತ್ಯೋರ್ವಾಂಛಿತ ಸ್ತೂತ್ತರಾಯಣಃ॥

ವೈರಾಗ್ಯ-ವಿರಕ್ತಿಯು, ರಾಗ-ಇಚ್ಛೆಯು, ಇವುಗಳ, ಉಪಾಧಿಭ್ಯಾಂ-ಹೆಸರುಗಳಿಂದ- ಆಮ್ನಾ...ಣಾನ್, ಆಮ್ನಾತ-ಹೇಳಲ್ಪಟ್ಟ- ಉಭಯ-ಎರಡರ, ಲಕ್ಷಣಾನ್-ಕುರುಹುಗಳುಳ್ಳ, ॥೨೬॥ ದಾನಧರ್ಮಾನ್-ದಾನಗಳ ನಡವಳಿಕೆಗಳನ್ನೂ, ರಾಜಧರ್ಮಾನ್-ರಾಜರ ನಡವಳಿಕೆಗಳನ್ನು, ಮೋಕ್ಷಧರ್ಮಾನ್-ಮೋಕ್ಷಧರ್ಮಗಳನ್ನು, ವಿಭಾಗಶಃ-ಪ್ರತ್ಯೇಕವಾಗಿ, ಸ್ತ್ರೀಧರ್ಮಾನ್ - ಸ್ತ್ರೀಯರ ನಡವಳಿಗಳನ್ನೂ, ಭಗವದ್ಧರ್ಮಾನ್-ಭಗವಂತನನ್ನು ಸಂತೋಷಗೊಳಿಸುವ ನಿಯಮಗಳನ್ನೂ, ಸಮಾಸ...ತಃ, ಸಮಾಸ - ಸಂಗ್ರಹವಾಗಿಯೂ, ವ್ಯಾಸ-ವಿಸ್ತರವಾಗಿಯೂ, ಯೋಗತಃ-ಇವುಗಳ ಉಪಾಯದಿಂದಲೂ, ॥ ೨೭ ॥ ಹೇಮುನೆ? - ಎಲೈ ಶೌನಕನೆ! ನಾನಾ...ಷು, ನಾನಾ-ಅನೇಕಗಳಾದ, ಆಖ್ಯಾನ - ಪುರಾಣಗಳಲ್ಲಿರುವ, ಇತಿಹಾಸೇಷು-ಪೂರ್ವಚರಿತ್ರೆಗಳಲ್ಲಿ, ಯಥಾ-ಹೇಗಿರುವವೋ ಹಾಗೆಯೇ, ಧರ್ಮವಿತ್-ಧರ್ಮಗಳನ್ನು ಬಲ್ಲ ಭೀಷ್ಮಾಚಾರ್ಯನು- ಸಹೋಪಾಯಾನ್ - ಉಪಾಯಗಳಿಂದೊಡಗೂಡಿದ, ಧರ್ಮಾ—ಶ್ಚ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನೂ ಸಹ, ವರ್ಣಯಾಮಾಸ-ವಿವರಿಸಿದನು, ॥ ೨೮ ॥ ಛಂದ ಮೃತ್ಯೋಃ-ಇಚ್ಛಾನುಸಾರವಾದ ಮರಣವುಳ್ಳ, ಯೋಗಿನಃ-ಜ್ಞಾನಿಯಾದ ಭೀಷ್ಮನಿಂದ, ಯಃ-ಯಾವ, ಉತ್ತರಾಯಣಃ-ಉತ್ತರಾಯಣವು, ವಾಂಛಿತಃ ಬಯಸಲ್ಪಟ್ಟಿತ್ತೋ, ಧರ್ಮಂ-ಧರ್ಮಗಳನ್ನು, ಪ್ರವದತಃ-ಹೇಳುತ್ತಿರುವ, ತಸ್ಯ-ಆ ಭೀಷ್ಮನಿಗೆ, ಸಕಾಲ-ಆ ಉತ್ತರಾಯಣಕಾಲವು, ಪ್ರತ್ಯುಪಸ್ಥಿತಃ-ಪ್ರಾಪ್ತವಾಯಿತು, ॥೨೯॥ ತದಾ-ಆಗ, ಸಹಸ್ರಣೀಃ- *ಭೀಷ್ಮನು(ಸಾವಿರಾರು ರಥಿಕರನ್ನು ಕಾಪಾಡುವವನು)ಗಿರಃ-ವಾಕ್ಯಗಳನ್ನು, ಉಪಸಂಹೃತ್ಯ-ನಿಲ್ಲಿಸಿ, ಅಮೀಲಿತದೃಗೇವ. ಅಮೀಲಿತ-ಮುಚ್ಚಲ್ಪಡದಿರುವ, ದೃಗೇವ-

ಯರ್ಾದ್ಯಾಶ್ರಮಗಳಿಗೂ ತಕ್ಕವುಗಳಾಗಿಯೂ, ಪ್ರವೃತ್ತಿ ನಿವೃತ್ತಿಗಳೆಂಬ ಹೆಸರುಗಳಂ ಪಡೆದು, ಸಂಸಾರಿಗಳಿಂದಲೂ, ಸನ್ಯಾಸಿಗಳಿಂದಲೂ ಕೂಡ ನಡೆಯಿಸಲ್ಪಡತಕ್ಕವುಗಳಾಗಿಯೂ, ಇರುವ, ದಾನಧರ್ಮಗಳು, ರಾಜಧರ್ಮಗಳು, ಮೋಕ್ಷಧರ್ಮಗಳು, ಸ್ತ್ರೀಧರ್ಮಗಳು, ಭಾಗವತಧರ್ಮಗಳು, ಇವೇ ಮೊದಲಾದವುಗಳನ್ನು ಬೇರೆಬೇರೆಯಾಗಿಯೂ, ಸಂಗ್ರಹವಾಗಿಯೂ, ವಿಸ್ತಾರವಾಗಿಯೂ ಹೇಳಿದ್ದಲ್ಲದೆ; ಸಕಲಪುರಾಣಗಳಲ್ಲಿಯೂ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನು ಬೋಧಿಸುವ ಯಾವ ಇತಿಹಾಸಗಳಿರುವವೊ ಅವುಗಳನ್ನೂ ಕ್ರಮವಾಗಿ ವರ್ಣಿಸಿದನು ॥ ೨೬-೨೮ ॥

ಸ್ವೇಚ್ಛಾಮರಣವುಳ್ಳ ಭೀಷ್ಮಾಚಾರ್ಯನು ಇಂತು ಧರ್ಮಗಳನ್ನುಪದೇಶಿಸುತ್ತಿರಲು, ಆಗ್ಯೆ ಸರಿಯಾಗಿ ಆತನ ಸಂಕಲ್ಪದಂತೆಯೇ ಉತ್ತರಾಯಣವು ಪ್ರಾಪ್ತವಾಯಿತು ॥ ೨೯ ॥ ಆಗ ಮಹಾಶೂರನಾದ ಭೀಷ್ಮನು ಮೌನವ್ರತವನ್ನು ಧರಿಸಿ, ಪುರಾಣ

* ಪಾ. ಸಹಸ್ರಣೀಃ—ಸಾವಿರಾರು ಅರ್ಥಗಳುಳ್ಳ ಮಾತುಗಳನ್ನು

ತದೋಪಸಂಹೃತ್ಯ ಗಿರಃ ಸಹಸ್ರಣೀರ್ ವಿಮುಕ್ತಸಂಗಂ ಮನ ಆದಿಪೂರು
ಷೇ । ಕೃಷ್ಣೇ ಲಸತ್ಪೀತಪಟೇ ಚತುರ್ಭುಜೇ ಪುರಃಸ್ಥಿತೇಽಮೀಲಿತದೃ
ಗ್ವ್ಯಧಾರಯತ್ ॥ ೩೦ ॥ ವಿಶುದ್ಧಯಾ ಧಾರಣಯಾ ಹತಾಶುಭಸ್ತದೀ
ಕ್ಷಯೈವಾಶು ಗತಾಯುಧವ್ಯಥಃ । ನಿವೃತ್ತಸರ್ವೇಂದ್ರಿಯವೃತ್ತಿವಿಭ್ರಮ
ಸ್ತುಷ್ಟಾವ ಜನ್ಯಂ ವಿಸೃಜನ್ ಜನಾರ್ದನಂ ॥ ೩೧ ॥ ಭೀಷ್ಮಃ॥ಇತಿಮತಿರು
ಪಕಲ್ಪಿತಾ ವಿತೃಷ್ಣಾ ಭಗವತಿ ಸಾತ್ವತಪುಂಗವೇ ವಿಭೂಮ್ನಿ । ಸ್ವಸುಖಮು
ಪಗತೇ ಕ್ವಚಿದ್ವಿಹರ್ತುಂ ಪ್ರಕೃತಿ ಮುಪೇಯುಷಿ ಯದ್ಭವಪ್ರವಾಹಃ॥೩೨

ಕಣ್ಣುಳ್ಳವನಾಗಿಯೇ, ಆದಿಪೂರುಷೇ-ಪುರಾಣಪುರುಷನಾದ, ಲಸ...ಪಟೇ, ಲಸತ್-ಹೊಳೆಯುತ್ತಿರುವ,ಪೀತ-ಹೊಂಬಣ್ಣವಾದ, ಪಟೇ-ವಸ್ತ್ರಗಳುಳ್ಳ, ಚತುರ್ಭುಜೇ-ನಾಲ್ಕುಭುಜಗಳುಳ್ಳ,ಪುರಃಸ್ಥಿತೇ-ಎದುರಾಗಿರುವ, ಕೃಷ್ಣೇ-ಕೃಷ್ಣನಲ್ಲಿ, ವಿಮುಕ್ತಸಂಗಂ-ಸರ್ವಸಂಗವನ್ನು ಬಿಟ್ಟ, ಮನಃ-ಮನಸ್ಸನ್ನು, ವ್ಯಧಾರಯತ್-ನಿಲ್ಲಿಸಿದನು ॥೩೦॥ ವಿಶುದ್ಧಯಾ-ನಿರ್ಮಲವಾದ, ಧಾರಣಯಾ-ಚಿತ್ತೈಕಾಗ್ರ್ಯದಿಂದ, ಹತಾಶುಭಃ-ಪಾಪಗಳನ್ನು ಕಳೆದುಕೊಂಡವನಾಗಿಯೂ, ತದೀಕ್ಷಯೈವ, ತತ್-ಆ ಕೃಷ್ಣನ, ಈಕ್ಷಯೈವ-ನೋಟದಿಂದಲೇ, ಆಶು-ಬೇಗನೆ,ಗತಾ...ಥಃ, ಗತ-ಹೋದಂಥ,ಆಯುಧ-ಶಸ್ತ್ರಾಸ್ತ್ರಗಳ, ವ್ಯಥಃ-ದುಃಖವುಳ್ಳವನಾಗಿಯೂ, ನಿವೃತ್ತ...ಭ್ರಮಃ,ನಿವೃತ್ತ-ತಪ್ಪಿಹೋದ, ಸರ್ವ-ಎಲ್ಲಾ, ಇಂದ್ರಿಯ-ಇಂದ್ರಿಯಗಳ, ವೃತ್ತಿ-ವ್ಯಾಪಾರಗಳ, ವಿಭ್ರಮಃ-ಅಲೆದಾಟವುಳ್ಳವನಾಗಿಯೂ ಇರುವ ಭೀಷ್ಮನು, ಜನ್ಯಂ-ಶರೀರವನ್ನು, ವಿಸೃಜನ್-ಬಿಡುವವನಾಗಿ, ಜನಾರ್ದನಂ-ಶ್ರೀಕೃಷ್ಣನನ್ನು, ತುಷ್ಟಾವ-ಹೊಗಳಿದನು ॥ ೩೧ ॥ ಭೀಷ್ಮಃ-ಭೀಷ್ಮನು ಹೊಗಳುತ್ತಾನೆ-ಸ್ವಸುಖಂ-ಪರಮಾನಂದಸ್ವರೂಪವನ್ನು, ಉಪಗತೇ-ಹೊಂದಿಯೇ, ಕ್ವಚಿತ್-ಒಮ್ಮೆ, ವಿಹರ್ತುಂ-ಕ್ರೀಡಿಸುವುದಕ್ಕಾಗಿ, ಪ್ರಕೃತಿಂ-ಮಾಯೆಯನ್ನು, ಉಪೇಯುಷಿ-ಹೊಂದಿದರೆ, ಯತ್-ಯಾವ ಪ್ರಕೃತಿಯಿಂದ, ಭವಪ್ರವಾಹಃ,ಭವ-ಸೃಷ್ಟಿಯ, ಪ್ರವಾಹಃ-ಪರಂಪರೆಯುಂಟಾಗುವುದೋ, ಅಂತಹ, ವಿಭೂಮ್ನಿ-ನಿರತಿಶಯಮಹಿಮೆಯುಳ್ಳ, ಸಾತ್ವತಪುಂಗವೇ-ಭಕ್ತಪಾಲಕನಾದ,ಅಥವಾ ಯಾದವರಿಗೊಡೆಯನಾದ ಭಗವತಿ-ಕೃಷ್ಣಪರಮಾತ್ಮನಲ್ಲಿ, ಇತಿ-ಧರ್ಮಾದ್ಯುಪಾಯಗಳಿಂದಲೂ, ಅಥವಾ ಮುಂದೆ ಹೇಳುವ ಮೇರೆ, ವಿತೃಷ್ಣಾ-ವಿರಕ್ತಿಯನ್ನು ಪಡೆದ, ಅಥವಾ ತೃಪ್ತಿಯನ್ನು ಪಡೆಯದ, ಮತಿಃ-ನನ್ನ ಬುದ್ಧಿಯು, ಉಪಕಲ್ಪಿ

ಪುರುಷನಾಗಿದ್ದರೂ,ಪೀತಾಂಬರಗಳನ್ನು ಧರಿಸಿ, ಚತುರ್ಭುಜನಾಗಿ ಎದುರಾಗಿ ನಿಂತಿರುವ ಶ್ರೀಕೃಷ್ಣಮೂರ್ತಿಯಲ್ಲಿ, ಏಕಾಂತವಾದ ಮನಸ್ಸನ್ನು ನಿಲ್ಲಿಸಿದನು ॥ ೩೦ ॥ ಇಂತು ಏಕಾಗ್ರವಾದ ಮನಸ್ಸನ್ನು ಭಗವಂತನಲ್ಲಿ ನಿಲ್ಲಿಸಿ, ಸಕಲ ಪಾಪಗಳನ್ನು ಕಳೆದುಕೊಂಡು ಆ ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರನಾಗಿ ಶಸ್ತ್ರಾಸ್ತ್ರಗಳ ಹೊಡೆತದಿಂದುಂಟಾಗಿರುವ ನೋವನ್ನೂ ಮರೆತು, ಶಬ್ದಸ್ಪರ್ಶಾದಿ ಪ್ರಪಂಚ ವಿಷಯಗಳಲ್ಲಿ ಅಲೆದಾಡದಂತೆ ಸಕಲೇಂದ್ರಿಯಗಳನ್ನೂ ನಿಗ್ರಹಿಸಿ,ಕಳೇಬರವನ್ನು ಬಿಡಬೇಳಿಸಿದವನಾಗಿ ಆ ಕೃಷ್ಣನನ್ನು ಸ್ತೋತ್ರ ಮಾಡಿದನೆಂತೆಂದರೆ-''ಯಾವ ಭಗವಂತನು ಆನಂದಸ್ವರೂಪವನ್ನು ಹೊಂದಿಯೇ ಒಂದೊಂದುವೇಳೆ ಕ್ರೀಡಾಕುತೂಹಲದಿಂದ ಮಾಯೆಯನ್ನು ಹೊಂದಿದ ಕೂಡಲೇ ಈ ಸೃಷ್ಟಿಪ್ರವಾಹವೆಂಬುದುಂಟಾಗುವದೋ, ಅಂತಹ ಅದ್ಭುತಮಹಿಮನಾಗಿಯೂ, ಯಾದವೇಂದ್ರನಾಗಿಯೂ, ಭಕ್ತರಕ್ಷಕನಾಗಿಯೂ, ಇರುವ ಭಗವಂತನಲ್ಲಿ ನನ್ನ ಬುದ್ಧಿಯು ಕಾಮಾದಿ

ತ್ರಿಭುವನತಿಲಕಂ ತಮಾಲವರ್ಣಂ ರವಿಕರಗೌರವರಾಂಬರಂ ದಧಾನೇ । ವಪು ರಲಕಕುಲಾವೃತಾನನಾಬ್ಜಂ ವಿಜಯಸಖೇರತಿರಸ್ತು ಮೇಽನವದ್ಯಾ॥೩೩॥ ಯುಧಿ ತುರಗರಜೋವಿಧೂಮ್ರವಿಷ್ವಕ್ಕಚಲುಲಿತಶ್ರಮವಾರ್ಯಲಂಕೃತಾಸ್ಯೇ । ಮಮ ನಿಶಿತಶರೈ ರ್ವಿಭಿದ್ಯಮಾನತ್ವಚಿ ವಿಲಸತ್ಕವಚೇಸ್ತು ಕೃಷ್ಣಆತ್ಮಾ ॥ ೩೪ ॥ ಸಪದಿ ಸಖಿವಚೋನಿಶಮ್ಯ ಮಧ್ಯೇ ನಿಜಪರಯೋ ರ್ಬಲಯೋ ರಥಂ ನಿವೇಶ್ಯ । ಸ್ಥಿತವತಿ ಪರಸೈನಿಕಾಯು ರಕ್ಷ್ಣಾ ಹೃತವತಿ

ತಾ-ಸಮರ್ಪಿಸಲ್ಪಟ್ಟದ್ದು, ಭವತು-ಆಗಲಿ ॥ ೩೨ ॥ ತ್ರಿಭುವನತಿಲಕಂ, ತ್ರಿಭುವನ-ಮೂರುಲೋಕಗಳಿಗೂ,ತಿಲಕಂ-ಅಲಂಕಾರವೆನಿಸುವ, ತಮಾಲವರ್ಣಂ-ಹೊಂಗೆಯ ಬಳ್ಳಿಯಂತೆನೀಲವರ್ಣವುಳ್ಳ,ರವಿ...ರಂ, ರವಿ-ಸೂರ್ಯನ, ಕರ-ಕಿರಣಗಳಂತೆ, ಗೌರ-ಕೆಂಪಿನಿಂದಕೂಡಿದ, ವರ-ಶ್ರೇಷ್ಠಗಳಾದ, ಅಂಬರಂ-ವಸ್ತ್ರಗಳುಳ್ಳ, ಅಲಕ...ಬ್ಜಂ, ಅಲಕ-ಮುಂಗುರುಳುಗಳ,ಕುಲ-ಗುಂಪಿನಿಂದ, ಆವೃತ-ಮುಚ್ಚಲ್ಪಟ್ಟಿರುವ, ಆನನಾಬ್ಜಂ-ಮುಖಕಮಲವುಳ್ಳ, ವಪುಃ-ಶರೀರವನ್ನು, ದಧಾನೇ-ಧರಿಸಿರುವ, ವಿಜಯಸಖೇ-ಅರ್ಜುನನಿಗೆ ಮಿತ್ರನಾದ ಕೃಷ್ಣನಲ್ಲಿ, ಮೇ-ನನಗೆ ಅನವದ್ಯಾ-ನಿರ್ದುಷ್ಟವಾದ, ರತಿಃ-ಪ್ರೀತಿಯು, ಅಸ್ತು ಉಂಟಾಗಲಿ ॥೩೩॥ಯುಧಿ-ಯುದ್ಧದಲ್ಲಿ, ತುರಗ...ಸ್ಯೇ, ತುರುಗ-ಕುದುರೆಗಳ, ರಜಃ-ಧೂಳಿಯಿಂದ, ವಿಧೂಮ್ರ-ಮಲಿನವಾಗಿ, ವಿಷ್ವಕ್-ಸುತ್ತಲೂ ಚಲಿಸುತ್ತಿರುವ, ಕಚ-ಕೂದಲಿನಿಂದ, ಲುಲಿತ-ಹರಡಲ್ಪಟ್ಟ, ಶ್ರಮವಾರಿ-ಬೆವರುನೀರಿನಿಂದ, ಅಲಂಕೃತ-ಅಲಂಕರಿಸಲ್ಪಟ್ಟ, ಆಸ್ಯೇ-ಮುಖವುಳ್ಳ, ಮಮ-ನನ್ನ, ನಿಶಿತಶರೈಃ-ಚೂಪಾದ ಬಾಣಗಳಿಂದ, ವಿಭಿದ್ಯಮಾನತ್ವಚಿ, ವಿಭಿದ್ಯಮಾನ-ಸೀಳಲ್ಪಟ್ಟ, ತ್ವಚಿ-ಚರ್ಮವುಳ್ಳ, ವಿಲಸತ್ಕವಚೇ-ಹೊಳೆಯುವ ಕವಚವುಳ್ಳ, ಕೃಷ್ಣೇ-ಕೃಷ್ಣನಲ್ಲಿ, ಮಮ-ನನ್ನ, ಆತ್ಮಾ-ಮನಸ್ಸು, ಅಸ್ತು-ರಮಿಸಲಿ॥೩೪॥ ಸಪದಿ-ತತ್ ಕ್ಷಣದಲ್ಲಿಯೇ, ಸಖಿವಚಃ-ಮಿತ್ರನಾದ ಅರ್ಜುನನ ಮಾತನ್ನು, ನಿಶಮ್ಯ-ಕೇಳಿ, ನಿಜಪರಯೋಃ-ತನ್ನ ಮತ್ತು ಶತ್ರುಗಳ, ಬಲಯೋಃ-ಸೇನೆಗಳ, ಮಧ್ಯೇ-ಮಧ್ಯದಲ್ಲಿ, ರಥಂ-ತೇರನ್ನು, ನಿವೇಶ್ಯ-ನಿಲ್ಲಿಸಿ, ಸ್ಥಿತವತಿ-ನಿಂತಿರುವ, ಪರ...ಯುಃ,ಪರ-ಶತ್ರುಗಳ, ಸೈನಿಕ-ಭಟರ, ಆಯುಃ-ಆಯುಸ್ಸನ್ನು,

ಗಳನ್ನುಳಿದು ಏಕಾಗ್ರವಾಗಿ ನಿಲ್ಲಲಿ ॥ ೩೨ ॥ ಮೂಲೋಕಕ್ಕಲಂಕಾರವಾಗಿಯೂ, ಹೊಂಗೆಯಯೆಸಳಿನಂತೆ ನೀಲವರ್ಣವಾಗಿಯೂ, ಮುಂಜಾವದ ಸೂರ್ಯಕಿರಣಗಳಂತೆ ಕೆಂಬಣ್ಣವಾದ ದುಕೂಲಗಳನ್ನು ಧರಿಸಿ, ಮುಂಗುರುಳಿಂದ ಮರೆಯಾದ ಮುಖಕಮಲವನ್ನು ಪಡೆದು ಹೊಳೆಯುತ್ತಿರುವ ದಿವ್ಯಶರೀರವನ್ನು ಹೊಂದಿದ ಅರ್ಜುನನ ಮಿತ್ರನಾದ ಶ್ರೀಕೃಷ್ಣಪರಮಾತ್ಮನಲ್ಲಿ ನನಗೆ ಫಲಾಪೇಕ್ಷೆಯಿಲ್ಲದ ಪ್ರೀತಿಯುಂಟಾಗಲಿ ॥ ೩೩ ॥

ಕಾಳಗದಲ್ಲಿ ಕುದುರೆಗಳ ಪಾದಘಾತದಿಂದೆದ್ದ ಧೂಳಿಯಿಂದ ಧೂಸರವಾಗಿ ಅತ್ತಿತ್ತ ಚಪರಿರುವ ಮುಂಗುರುಳಿಂದಲೂ, ಬೆವರಹನಿಗಳಸ್ನೀಡಾಡುತ್ತಿರುವ ಮುಖಕಮಲದಿಂದಲೂ,ಹೊಳೆಯುತ್ತಾ, ನನ್ನ ಬಾಣಗಳಿಂದ ಶರೀರವು ಸೀಳಿ ಕವಚದಿಂದಲಂಕೃತನಾದ ಕೃಷ್ಣನಲ್ಲಿ ನನ್ನಮನಸ್ಸು ರಮಿಸಲಿ ॥೩೪॥ ಯುದ್ಧಾರಂಭದಲ್ಲಿ ಸ್ನೇಹಿತನಾದ ಅರ್ಜುನನ ಮಾತನ್ನು ಕೇಳಿ ಎರಡು ಸೈನ್ಯಗಳ ಮಧ್ಯದಲ್ಲಿ ತನ್ನ ರಥವನ್ನು ನಿಲ್ಲಿಸಿ ಶತ್ರುವೀರರನ್ನು ತೋರಿಸುವ ನೆವದಿಂದ ದೃಷ್ಟಿಪಾತ ಮಾತ್ರದಿಂದಲೇ ಅವರ ಆಯುಸ್ಸನ್ನು

ಪಾರ್ಥಸಖೇ ರತಿರ್ಮಮಾಸ್ತು ॥ ೩೫ ॥ ವ್ಯವಹಿತಪೃತನಾಮುಖಂ ನಿರೀ
ಕ್ಷ್ಯ ಸ್ವಜನವಧಾ ದ್ವಿಮುಖಸ್ಯ ದೋಷಬುದ್ಧ್ಯಾ । ಕುಮತಿ ಮಹರದಾ
ತ್ಮವಿದ್ಯಯಾ ಯಶ್ಚರಣಗತಿಃ ಪರಮಸ್ಯ ತಸ್ಯ ಮೇಸ್ತು ॥ ೩೬ ॥ ಸ್ವನಿಗ
ಮ ಮಪಹಾಯ ಮತ್ಪ್ರತಿಜ್ಞಾ ಮೃತ ಮಧಿಕರ್ತುಮ ಮವಪ್ಲುತೋ ರಥಸ್ಥಃ ।
ಧೃತರಥಚರಣೋ ಭ್ಯಯಾ ಚ್ಚಲದ್ಗು ರ್ಹರಿ ರಿವ ಹಂತು ಮಿಭಂ ಗತೋತ್ತ
ರೀಯ್ಯಃ ॥ ೩೭ ॥ ಶಿತವಿಶಿಖಹತೋ ವಿಶೀರ್ಣದಂಶಃ ಕ್ಷತಜಪರಿಪ್ಲುತ ಆತ

ಅಕ್ಷ್ಣಾ-ಕಣ್ಣಿಂದ, ಹೃತವತಿ-ಅಪಹರಿಸುತ್ತಿರುವ, ಪಾರ್ಥಸಖೇ-ಅರ್ಜುನನಿಗೆ, ಸ್ನೇಹಿತನಾದ ಕೃಷ್ಣ ನಲ್ಲಿ, ನನಗೆ, ರತಿಃ-ಪ್ರೀತಿಯು, ಅಸ್ತು-ಉಂಟಾಗಲಿ ॥೩೫॥ ವ್ಯವಹಿತ...ಖಂ, ವ್ಯವಹಿತ-ದೂರದಲ್ಲಿರುವ, ಪೃತನಾ-ಸೇನೆಯ, ಮುಖಂ-ಮುಂಭಾಗದಲ್ಲಿರುವ ಭೀಷ್ಮಾದಿಗಳನ್ನು, ನಿರೀಕ್ಷ್ಯ-ಕಂಡು, ದೋಷಬುಧ್ಯಾ-ಪಾಪಭೀತಿಯಿಂದ, ಸ್ವಜನವಧಾತ್-ಬಂಧುಗಳ ಸಂಹಾರದಿಂದ, ವಿಮುಖಸ್ಯ-ಹಿಂದಿರುಗಿದ ಅರ್ಜುನನ, ಕುಮತಿಂ-ಅಜ್ಞಾನವನ್ನು. ಯಃ-ಯಾವನು, ಆತ್ಮವಿದ್ಯಯಾ ತತ್ತ್ವೋಪದೇಶದಿಂದ, ಅಹರತ್-ಹೋಗಲಾಡಿಸಿದನೋ, ಪರಮಸ್ಯ ಸರ್ವೋತ್ತಮನಾದ, ತಸ್ಯ-ಆಕೃಷ್ಣಮೂರ್ತಿಯ, ಚರಣಗತಿಃ-ಪಾದಾರವಿಂದ ಪ್ರಾಪ್ತಿಯು, ಮೇ-ನನಗೆ, ಅಸ್ತು-ಆಗಲಿ ॥ ೩೬ ॥ ಸ್ವನಿಗಮಂ-ತನ್ನಪ್ರತಿಜ್ಞೆಯನ್ನು, ಅಪಹಾಯ-ಬಿಟ್ಟು, ಮತ್ಪ್ರತಿಜ್ಞಾಂ-ನನ್ನ ಪ್ರತಿಜ್ಞೆಯನ್ನು, ಋತಂ-ಸತ್ಯವನ್ನಾಗಿ, ಅಧಿಕರ್ತುಂ-ಮಾಡುವುದಕ್ಕಾಗಿ, ರಥಸ್ಥಃ-ರಥದಲ್ಲಿದ್ದವನು, ಅವಪ್ಲುತಃ-ಕೆಳಗಿಳಿದು, ಧೃತ...ಣಃ,ಧೃತ-ಧರಿಸಲ್ಪಟ್ಟ, ರಥಚರಣಃ-ಚಕ್ರವುಳ್ಳವನಾಗಿ, ಚಲದ್ಗುಃ, ಚಲತ್-ಅಲ್ಲಾಡುತ್ತಿರುವ, ಗುಃ-ಭೂಮಿಯುಳ್ಳವನಾಗುತ್ತಾ, ಗತೋತ್ತರೀಯಃ-ಹೊದಿಕೆಯು ಜಾರಿಹೋಗಿ, ಇಭಂ-ಆನೆಯನ್ನು, ಹಂತುಂ-ಕೊಲ್ಲುವುದಕ್ಕಾಗಿ ಬರುವ, ಹರಿರಿವ-ಸಿಂಹದಂತೆ, ಯಃ-ಯಾವನು, ಅಭ್ಯಯಾತ್-ಬಂದನೋ ॥ ೩೭ ॥ ಯಃ-ಯಾವನು, ಆತತಾಯಿನಃ-ಬಿಲ್ಲನ್ನು ಹಿಡಿದಿರುವ, ಮೇ-ನನ್ನ, ಶಿತ...ಹತಃ, ಶಿತ-ತೀಕ್ಷ್ಣಗಳಾದ, ವಿಶಿಖ-ಬಾಣಗಳಿಂದ ಹತಃ-ಹೊಡೆಯಲ್ಪಟ್ಟವನಾದುದರಿಂದಲೇ,

---

ಕಳೆದು, ಅರ್ಜುನನಿಗೆ ಸಾರಥಿಯಾಗಿ ಜಯವನ್ನಿತ್ತ ಶ್ರೀಕೃಷ್ಣನಲ್ಲಿ ನನಗೆ ಪ್ರೀತಿಯುಂಟಾಗಲಿ ॥ ೩೫ ॥ ದೂರದಲ್ಲಿರುವ ಶತ್ರುಸೈನ್ಯವನ್ನು ಕಂಡು ನಂಟರಿಷ್ಟರನ್ನು ಕೊಲ್ಲುವುದಕ್ಕೆ ಹೆದರಿ ಯುದ್ಧಮಾಡುವುದಿಲ್ಲವೆಂದು ವಿಮುಖನಾದ ಅರ್ಜುನನಿಗೆ ದೇಹಾತ್ಮಭ್ರಾಂತಿಯನ್ನು ಕಳೆಯುವ ತತ್ತ್ವೋಪದೇಶವನ್ನು ಮಾಡಿ, ಅವನ ದುರಭಿಮಾನವನ್ನು ಯಾವನು ಕಳೆದನೋ ಅಂತಹ ಪರಮಪುರುಷನಾದ ಕೃಷ್ಣನ ಪಾದಾರವಿಂದವು ನನಗೆ ಶರಣವಾಗಲಿ ॥ "ಆಯುಧಗಳನ್ನು ಹಿಡಿಯದೆ ಸಹಾಯವನ್ನು ಮಾತ್ರ ಮಾಡುವೆನೆಂದು" ದುರ್ಯೋಧನಂಗಿತ್ತ ತನ್ನ ವಾಗ್ದಾನವನ್ನು ತೊರೆದು, "ಕೃಷ್ಣನಿಂದ ಯುದ್ಧದಲ್ಲಿ ಆಯುಧವನ್ನು ಹಿಡಿಸುವೆನೆಂದಿಟ್ಟ" ಎಂಬ ಭಕ್ತನಾದ ನನ್ನ ಪ್ರತಿಜ್ಞೆಯನ್ನು ಸಫಲಗೊಳಿಸುವುದಕ್ಕಾಗಿ, ರಥದಿಂದ ತಟ್ಟನೆ ನೆಲಕ್ಕೆ ಧುಮ್ಮಿಕ್ಕಿ ಚಕ್ರಾಯುಧವನ್ನು ಹಿಡಿದು ಕಾಡಾನೆಯನ್ನು ಕೊಲ್ಲುವುದಕ್ಕಾಗಿ ಅಟ್ಟಿಬರುವ ಸಿಂಹದಂತೆ ಕೋಪಗೊಂಡು, ಉದರದಲ್ಲಿರುವ ಬ್ರಹ್ಮಾಂಡಗಳ ಭಾರದಿಂದ ಭೂಮಿಯೆಲ್ಲ ಗಡಗಡನೆ ನಡುಗುವಂತೆ ತೋರುತ್ತಾ ಉತ್ತರೀಯ್ಯವಸ್ತ್ರವು ಬಿದ್ದುಹೋಗುವುದನ್ನು ಕೂಡಾ ನೋಡದೆ ಯಾವನಟ್ಟಿಕೊಂಡು ಬಂದನೋ ॥ ೩೭ ॥ ಮತ್ತು ಬಿಲ್ಲುಗಾರನಾದ ನನ್ನ ಬಾಣಗಳು ತಾರುಮಾರಾಗಿ ತೂರಿ, ಕವಚವು ಹರಿದು ಮೈಯೆ

ತಾಯಿನೋ ಮೇ । ಪ್ರಸಭಮಭಿಸಸಾರ ಮದ್ವಧಾರ್ಥಂ ಸ ಭವತು ಮೇ
ಭಗವಾನ್ಗತಿ ರ್ಮುಕುಂದಃ ॥ ೩೮ ॥ ವಿಜಯ ರಥಕುಟುಂಬ ಆತ್ತತೋ
ತ್ರೇ ಧೃತಹಯರಶ್ಮಿನಿ ತಚ್ಛ್ರಿಯೇಕ್ಷಣೀಯೇ । ಭಗವತಿ ರತಿರಸ್ತು ಮೇ
ಮುಮೂರ್ಷೋ ರ್ಯಮಿಹ ನಿರೀಕ್ಷ್ಯ ಹತಾ ಗತಾಃ ಸ್ವರೂಪಂ ॥ ೩೯ ॥
ಲಲಿತಗತಿವಿಲಾಸವಲ್ಗುಹಾಸಪ್ರಣಯನಿರೀಕ್ಷಣಕಲ್ಪಿತೋರುಮಾನಾಃ । ಕೃ
ತ ಮನುಕೃತವತ್ಯ ಉನ್ಮದಾಂಧಾಃ ಪ್ರಕೃತಿ* ಮಗನ್ ಕಿಲ ಯಸ್ಯ ಗೋಪ

ವಿಶೀರ್ಣದಂಶಃ-ವಿಶೀರ್ಣ-ಹರಿದುಹೋದ, ದಂಶಃ-ಕವಚವುಳ್ಳವನಾಗಿಯೂ, ಕ್ಷತಜ...ತಃ, ಕ್ಷತಜ-ರಕ್ತದಿಂದ, ಪರಿಪ್ಲುತಃ-ಬೊಳೆಯಲ್ಪಟ್ಟವನಾಗಿಯೂ, ಮದ್ವಧಾರ್ಥಂ-ನನ್ನನ್ನು ಕೊಲ್ಲುವುದಕ್ಕಾಗಿ, ಪ್ರಸಭಂ-ಬಲಾತ್ಕಾರವಾಗಿ, ಅಭಿಸಸಾರ-ಅಟ್ಟಬಂದನೋ, ಭಗವಾನ್-ಭಗವಂತನಾದ, ಸಮುಕುಂದಃ-ಆ ಕೃಷ್ಣಮೂರ್ತಿಯು, ಮೇ-ನನಗೆ, ಗತಿಃ-ಶರಣವು, ಭವತು-ಆಗಲಿ ॥ ೩೮ ॥ ವಿಜಯ-ಅರ್ಜುನನ, ರಥ-ರಥವೇ ಕುಟುಂಬೇ-ಅಕಾರ್ಯಗಳಿಂದಲೂ ರಕ್ಷಿಸಲ್ಪಡತಕ್ಕದ್ದಾಗಿರುವ, ಆತ್ತತೋತ್ರೇ, ಆತ್ತ-ಹಿಡಿಯಲ್ಪಟ್ಟ ತೋತ್ರೇ-ಚಾವಟಿಯುಳ್ಳ, ಧೃತ...ನಿ, ಧೃತ-ಧರಿಸಲ್ಪಟ್ಟ. ಹಯ-ಕುದುರೆಗಳ, ರಶ್ಮಿನಿ-ಹಗ್ಗಗಳುಳ್ಳ, ತಚ್ಛ್ರಿಯಾ-ಆಸಾರಥಿಯವೇಷದಿಂದ, ಈಕ್ಷಣೀಯೇ-ಹೊಳೆಯುತ್ತಿರುವ, ಭಗವತಿ-ಭಗವಂತನಲ್ಲಿ, ಮುಮೂರ್ಷೋಃ-ಮರಣವನ್ನು ಬಯಸುತ್ತಿರುವ, ಮೇ-ನನಗೆ, ರತಿಃ-ಪ್ರೀತಿಯು, ಅಸ್ತು-ಉಂಟಾಗಲಿ, ಇಹ-ಈ ಯುದ್ಧದಲ್ಲಿ, ಯಂ-ಯಾವ ಕೃಷ್ಣನನ್ನು, ನಿರೀಕ್ಷ್ಯ ನೋಡಿ, ಹತಾಃ-ಮಡಿದವರು, ಸರೂಪಂ-ಸಮಾನವಾದ ರೂಪವನ್ನು, ಗತಾಃ-ಪಡೆದರೋ ॥ ೩೯ ॥ ಲಲಿತ...ಮಾನಾಃ, ಲಲಿತ-ಸೊಗಸಾದ, ಗತಿ-ನಡಿಗೆಯು, ವಿಲಾಸ-ಬೆಡಗುಗಳು, ವಲ್ಗು - ಮನೋಹರವಾದ, ಹಾಸ - ನಗೆಯು, ಪ್ರಣಯನಿರೀಕ್ಷಣ-ಕೋರೆನೋಟಗಳು, ಇವುಗಳಿಂದ, ಕಲ್ಪಿತ-ಮಾಡಲ್ಪಟ್ಟ, ಉರು-ಅಧಿಕವಾದ, ಮಾನಾಃ-ಪೂಜೆಯುಳ್ಳ ಉನ್ಮದಾಂಧಾಃ, ಉತ್-ಅಧಿಕವಾದ, ಮದ-ಕೊಬ್ಬಿನಿಂದ, ಅಂಧಾಃ-ಕಣ್ಣು ಕಾಣದಿರುವ, ಗೋಪವಧ್ವಃ-ಗೋಪಿಯರು, ಯಸ್ಯ-ಯಾವ ಕೃಷ್ಣನ, ಕೃತಂ-ಕಾರ್ಯಗಳನ್ನು, ಅನುಕೃತವತ್ಯಃ-ಅಣಕಿಸಿದವರಾಗಿ,

---

ರಕ್ತಸಿಕ್ತವಾಗಲು ಅತ್ಯಂತ ಕ್ರುದ್ಧನಾಗಿ, ಬೇಡವೆಂದು ತಡೆಯುತ್ತಿರುವ ಅರ್ಜುನನ್ನೂ ಸಡ್ಡೆಗೈಯ್ಯದೆ, ನನ್ನನ್ನು ಕೊಲ್ಲುವುದಕ್ಕಾಗಿ, ಯಾವನು ಬಂದನೋ ಆಭಗವಂತನಾದ ಶ್ರೀಕೃಷ್ಣಮೂರ್ತಿಯೇ ನನಗೆಶರಣವಾಗಲಿ॥ ೩೮॥

ಯಾವ ಮಹಾತ್ಮನು ಅಕಾರ್ಯಗಳಿಂದಲೂ ಅರ್ಜುನನ ರಥವನ್ನು ಕಾಪಾಡಿದನೋ, ಹೀನಕಾರ್ಯವೆಂದೆಣಿಸದೆ, ಕುದುರೆಗಳ ಕಡಿವಾಣಗಳನ್ನು ಹಿಡಿದು, ಚಾವಟಿಯನ್ನು ಧರಿಸಿ, ಆ ವೇಷದಿಂದಲೇ ಶೋಭಾಯಮಾನನಾಗಿ ಸಾರಥ್ಯವನ್ನು ಮಾಡಿದನೋ, ಯಾವನನ್ನು ಕಣ್ಣಾರ ಕಂಡ ಮಹಾಶೂರರು ಯುದ್ಧದಲ್ಲಿ ಮಡಿದು ಸಾರೂಪ್ಯವನ್ನು ಪಡೆದರೋ, ಅಂತಹ ಭಗವಂತನಲ್ಲಿ ಮುಮುಕ್ಷುವಾದ ನನಗೆ ಪ್ರೀತಿಯುಂಟಾಗಲಿ॥ ೩೯ ॥ ಯಾವ ಭಗವಂತನ ಜಗನ್ಮೋಹನಮೂರ್ತಿಯನ್ನು ಕಂಡು ಗೋಪಾಂಗನೆಯರು ಮದಾಂಧೆಯರಾಗಿ ಮಂದಗಮನದಿಂದಲೂ, ಬೆಡಗುಗಳಿಂದಲೂ, ಮುಗುಳ್ನಗೆಯಿಂದಲೂ, ಸವಿನೋಟಗಳಿಂದಲೂ ಆರಾಧಿಸಿದವರಾಗಿ ಆತನಲ್ಲಿರುವ ಮೋಹಾತಿಶಯದಿಂದ ಆತನು ಮಾಡಿದ

ವಧ್ವಃ ॥ ೪೦ ॥ ಮುನಿಗಣನೃಪವರ್ಯಸಂಕುಲೇಂತಸ್ಸದಸಿ ಯುಧಿಷ್ಠಿರ
ರಾಜಸೂಯ ಏಷಾಂ। *ಅರ್ಹಣ ಮುಪಪೇದ ಈಕ್ಷಣೀಯೋ ಮಮ ದೃಶಿ
ಗೋಚರ ಏಷ ಆವಿರಾತ್ಮಾ ॥ ೪೧ ॥ ಕ್ಷಿತಿಭರ ಮವರೋಪಿತುಂ ಕುರೂ
ಣಾಂ ಶ್ವಸನ ಇವಾಸೃಜ ದಕ್ಷವಂಶವಹ್ನಿಂ । ತಮಿಮ ಮಹ ಮನುವ್ರ
ತಾರ್ತಿಹಾಂಘ್ರಿಂ ಹೃದಿ ಪರಿರಭ್ಯ ಜಹಾಮಿ ಮರ್ತ್ಯನೀಡಂ ॥೪೨॥ ತಮಿಮ
ಮಹ ಮಜಂ ಶರೀರಭಾಜಾಂ ಹೃದಿಹೃದಿ ಧಿಷ್ಠಿತ * ಮಾತ್ಮಕಲ್ಪಿತಾನಾಂ।

ಪ್ರಕೃತಿಂ-ಸ್ವರೂಪವನ್ನು, ಅಗಾತ್ಕಿಲ-ಹೊಂದಿದರೋ, ॥ ೪೦ ॥ ಯುಧಿಷ್ಠಿರ ರಾಜಸೂಯೇ-ಧರ್ಮ
ರಾಜನ ರಾಜಸೂಯಯಾಗದಲ್ಲಿ, ಮುನಿಗಣ...ಲೇ, ಮುನಿಗಣ-ಋಷಿಸಮೂಹದಿಂದಲೂ, ನೃಪವರ್ಯ-ರಾಜ
ರಿಂದಲೂ, ಸಂಕುಲೇ-ತುಂಬಿರುವ, ಅಂತಸ್ಸದಸಿ-ಸಭಾಮಧ್ಯದಲ್ಲಿ, ಯಃ-ಯಾವನು, ಈಕ್ಷಣೀಯ್ಯಸ್ಸನ್-
ಆಶ್ಚರ್ಯದಿಂದನೋಡಲ್ಪಟ್ಟವನಾಗಿ, ಏಷಾಂ-ಅವರೆಲ್ಲರಿಂದಲೂ, ಅರ್ಹಣಂ-ಮರ್ಯಾದೆಯನ್ನು, ಉಪ
ಪೇದೇ-ಹೊಂದಿದನೋ, ಏಷಃ-ಈ, ಆತ್ಮಾ-ಜಗತ್ತಿಗಾತ್ಮನಾಗಿರುವ ಭಗವಂತನು, ಮಮ-ನನ್ನ, ದೃಶಿ-
ಕಣ್ಣೆದುರಾಗಿ, ಆವಿಃ-ಪ್ರತ್ಯಕ್ಷನಾಗಿರುವನು, ಅಹೋ-ಭಾಗ್ಯವು ॥ ೪೧ ॥ ಯಃ-ಯಾವನು, ಕ್ಷಿತಿಭರಂ-
ಭೂಭಾರವನ್ನು, ಅವರೋಪಿತುಂ-ಇಳಿಹುವುದಕ್ಕಾಗಿ, ಕುರೂಣಾಂ-ಕೌರವರಲ್ಲಿ, ಶ್ವಸನ ಇವ-ಗಾಳಿ
ಯಂತೆ, ಅಕ್ಷ...ವಹ್ನಿಂ, ಅಕ್ಷ-ಪಗಡೆಯಾಟವೆಂಬ,ವಂಶ-ಕುರುಕುಲವೆಂಬ ಬಿದಿರುಮೆಳೆಗೆ,ವಹ್ನಿಂ-ಅಗ್ನಿಯ
ನ್ನು, ಅಸೃಜತ್-ಸೃಜಿಸಿದನೋ, ತಂ-ಅಂತಹ, ಅನು...ಘ್ರಿಂ,ಅನುವ್ರತ-ಭಕ್ತರ,ಆರ್ತಿ-ದುಃಖಗಳನ್ನು,ಹಾ-
ಕಳೆಯುವ,ಅಂಘ್ರಿಂ-ಪಾದಗಳುಳ್ಳ,ಇಮಂ-ಈ ಕೃಷ್ಣಪರಮಾತ್ಮನನ್ನು, ಹೃದಿ-ಹೃದಯದಲ್ಲಿ, ಪರಿರಭ್ಯ-
ಆಲಿಂಗಿಸಿ, ಮರ್ತ್ಯನೀಡಂ-ಶರೀರವನ್ನು, (ಅಳಿವಗೂಡು) ಜಹಾಮಿ-ಬಿಡುತ್ತೇನೆ ॥ ೪೨ ॥ ವಿಧೂತ...

ಗೋವರ್ಧನೋದ್ಧರಣವೇ ಮೊದಲಾದ ಕಾರ್ಯಗಳಂತೆಯೇ ತಾವೂ ಮಾಡುತ್ತಾ,
ಕಾಮರೂಪವಾದ ಭಕ್ತಿಯಿಂದ ಸಾರೂಪ್ಯಮುಕ್ತಿಯನ್ನು ಪಡೆದರೋ ॥ ೪೦ ॥ ಯಾವ
ಭಗವಂತನು ಧರ್ಮರಾಜನ ರಾಜಸೂಯಯಾಗದಲ್ಲಿ, ಮಹರ್ಷಿಗಳೂ ರಾಜರೂ ನೆರದಿ
ರುವ ಮಹಾಸಭಾಮಧ್ಯದಲ್ಲಿ ಎಲ್ಲರೂ, ಆಹಾ! ಇದೇನುರೂಪ? ಏನುತೇಜಸ್ಸು? ಎಂದು
ಆಶ್ಚರ್ಯಗೊಂಡು ನೋಡುತ್ತಿರುವಾಗ ಅಗ್ರಪೂಜೆಯನ್ನು ಪಡೆದನೋ, ಅಂತಹ ಪ್ರಪಂಚಾ
ತ್ಮಕನಾದ ಶ್ರೀಕೃಷ್ಣಮೂರ್ತಿಯು ನನ್ನ ಕಣ್ಣಿಗೆ ಗೋಚರನಾಗಿರುವನಾದುದರಿಂದ ನ
ನ್ನಭಾಗ್ಯಕ್ಕೆಣೆಯಿಲ್ಲ ॥೪೧॥ ಯಾವ ಭಗವಂತನು ಭೂಭಾರವನ್ನಿಳುಹುವುದಕ್ಕಾಗಿ, ಬಿರು
ಗಾಳಿಯು ಬಿದಿರುಗಳ ಸಂಘರ್ಷಣದಿಂದ ಬೆಂಕಿಯನ್ನುಂಟುಮಾಡಿ, ಆ ಬೆಂಕಿಯಿಂದಲೇ
ಕಾಡನ್ನು ಸುಡಿಸುವಂತೆ ಕೌರವರೆಂಬ ಬಿದಿರುಮೆಳೆಯಲ್ಲಿ ಪಗಡೆಯಾಟವೆಂಬ ಬೆಂಕಿ
ಯನ್ನು ಹುಟ್ಟಿಸಿ ಆ ಅಗ್ನಿಯಿಂದಲೇ ಕೌರವರನ್ನು ನಾಶಗೊಳಿಸಿದನೋ ಭಕ್ತಾರ್ತಿ
ಭಂಜನನಾದ ಆ ಶ್ರೀಕೃಷ್ಣಮೂರ್ತಿಯನ್ನು ಚೆನ್ನಾಗಿ ಮನಸ್ಸಿನಲ್ಲಿ ಧ್ಯಾನಿಸಿ ಈ ಕಳೇಬ
ರವನ್ನು ಬಿಡುವೆನು ॥ ೪೨ ॥

ಒಬ್ಬನಾದ ಸೂರ್ಯನು ನೀರುತುಂಬಿದ ಅನೇಕ ಘಟಗಳಲ್ಲಿ ಪ್ರತಿಬಿಂಬಿಸಿ ಜನ

* ಶ್ರು. ತತ್ಸೃಷ್ಟ್ವಾ ತದೇವಾನುಪ್ರಾವಿಶತ್. ಅನೇನ ಜೀವೇನಾತ್ಮನಾನು ಪ್ರವಿಶ್ಯನಾಮರೂಪೇ
ವ್ಯಾಕರವಾಣಿ.—ಭಗವಂತನು ಪ್ರಪಂಚವನ್ನು ಸೃಷ್ಟಿಸಿ ಅದರೊಳಹೊಕ್ಕನು

ಪ್ರತಿದೃಶ ಮಿವ * ನೈಕಧಾರ್ಕ ಮೇಕಂ ಸಮಧಿಗತೋಽಸ್ಮಿ † ವಿಧೂ
ತಭೇದಮೋಹಃ ॥೪೩॥ ಶ್ರೀಸೂತಃ॥ ಕೃಷ್ಣಏವಂ ಭಗವತಿ ಮನೋವಾ
ಗ್ದೃಷ್ಟಿ ವೃತ್ತಿಭಿಃ । ಆತ್ಮನ್ಯಾತ್ಮಾನ ಮಾವೇಶ್ಯ ಸೋಽಂತಶ್ಶ್ವಾಸ ಉಪಾ
ರಮತ್ ॥ ೪೪ ॥ ‡ ಸಂಪದ್ಯಮಾನ ಮಾಜ್ಞಾಯ ಭೀಷ್ಮಂ ಬ್ರಹ್ಮಣಿ

ಮೋಹಃ, ವಿಧೂತ-ಕಳೆಯಲ್ಪಟ್ಟ, ಭೇದ-ಭೇದಜ್ಞಾನವೆಂಬ, ಮೋಹಃ-ಮೋಹವುಳ್ಳ ನಾನು, ಪ್ರತಿದೃಶಂ-ಪ್ರಯೊಬ್ಬರ ಕಣ್ಣಿಗೂ, ಏಕಂ-ಒಬ್ಬನಾದ, ಅರ್ಕಮಿವ-ಸೂರ್ಯನಂತೆ, ಆತ್ಮಕಲ್ಪಿತಾನಾಂ-ತನ್ನಿಂದನಿರ್ಮಿಸಲ್ಪಟ್ಟ, ಶರೀರಭಾಜಾಂ-ಪ್ರಾಣಿಗಳ, ಹೃದಿಹೃದಿ-ಪ್ರತಿಹೃದಯದಲ್ಲಿಯೂ, ಧಿಷ್ಠಿತಂ-ಇರುವವನಾಗಿ, ನೈಕಧಾ-ಅನೇಕರಂತೆ ಕಾಣುವ, ಇಮಂ-ಈ ಭಗವಂತನನ್ನು, ಸಮಧಿಗತೋಽಸ್ಮಿ-ಚೆನ್ನಾಗಿ ತಿಳಿದೆನು ॥ ೪೩ ॥ ಸೂತಃ-ಸೂತನು ಹೇಳುತ್ತಾನೆ, ಸಃ-ಆ ಭೀಷ್ಮನು, ಏವಂ-ಹೀಗೆ, ಭಗವತಿ-ಭಗವಂತನಾದ, ಆತ್ಮನಿ-ಪರಮಾತ್ಮನಾದ, ಕೃಷ್ಣೇ-ಕೃಷ್ಣನಲ್ಲಿ, ಮನೋ...ಭಿಃ, ಮನಃ-ಮನಸ್ಸು, ವಾಕ್-ಮಾತು, ದೃಷ್ಟಿ, ನೋಟ, ಇವುಗಳ ವೃತ್ತಿಭಿಃ-ವ್ಯಾಪಾರಗಳೊಡನೆ, ಆತ್ಮಾನಂ-ತನ್ನನ್ನು, ಆವೇಶ್ಯ-ಪ್ರವೇಶಗೊಳಿಸಿ, ಅಂತಶ್ಶ್ವಾಸಃ, ಅಂತಃ ಒಳಗಡೆಯಲ್ಲಿ ಅಡಗಿದ, ಶ್ವಾಸಃ-ಪ್ರಾಣವಾಯುಗಳುಳ್ಳವನಾಗಿ ಉಪಾರಮತ್-ನಿರ್ಯಾಣವನ್ನು ಪಡೆದನು ॥ ೪೪ ॥

ತೇಸರ್ವೇ-ಅವರೆಲ್ಲರು, ಭೀಷ್ಮನನ್ನು, ನಿಷ್ಕಳೇ-ನಿರುಪಾಧಿಕವಾದ, ಬ್ರಹ್ಮಣಿ-ಪರಮಾತ್ಮನಲ್ಲಿ,

ಗಳ ಕಣ್ಣುಗಳಿಗೆ ಅನೇಕವಾಗಿ ಕಾಣುವಂತೆ ಯಾವ ಭಗವಂತನು ತನ್ನಿಂದ ಸೃಜಿಸಲ್ಪಟ್ಟ ಪ್ರಾಣಿಗಳ ಹೃದಯದಲ್ಲಿ ತಾನೊಬ್ಬನೇ ಇದ್ದುಕೊಂಡು ನೋಡುವವರ ಪ್ರತಿದೃಷ್ಟಿಗೂ ಜೀವರೂಪದಿಂದ ಅನೇಕರಾಗಿ ಕಾಣುತ್ತಿರುವನೋ, ಜನ್ಮಾದಿಗಳಿಲ್ಲದ ಆ ಶ್ರೀಕೃಷ್ಣಭಗವಂತನನ್ನು ನಾನು ಭೇದಭ್ರಾಂತಿಯನ್ನಳಿದು ಸಂಪೂರ್ಣವಾಗಿ ಮರೆಹೊಕ್ಕೆನು" ॥ ೪೩ ॥ ಸೂತನು ಹೇಳುತ್ತಾನೆ—ಅಯ್ಯಾ ಶೌನಕಾದಿಗಳಿರಾ ! ಆ ಭೀಷ್ಮಾಚಾರ್ಯನು ಇಂತು ಭಗವಂತನಾದ ಕೃಷ್ಣಪರಮಾತ್ಮನಲ್ಲಿ ಮನಸ್ಸು, ವಾಕ್ಕು, ದೃಷ್ಟಿ, ಇವುಗಳ ವೃತ್ತಿಗಳು ಸಹಿತವಾಗಿ ತನ್ನನ್ನ ಪ್ರವೇಶಗೊಳಿಸಿ ಪ್ರಾಣವಾಯುಗಳನ್ನು ಶರೀರದಲ್ಲಿಯೇ ಅಡಗಿಸಿಕೊಂಡು, ಮುಕ್ತಿಪದವನ್ನೈದಿದನು ॥ ೪೪ ॥ ಆಗ ಧರ್ಮರಾಯನೇ ಮೊದಲಾದವರು ಭೀಷ್ಮಾಚಾರ್ಯನು ಸಮಾಧಿಬಲದಿಂದ ನಿರುಪಾಧಿಕನಾದ ಬ್ರಹ್ಮ

* ಶ್ರು. ಏಕಂಸಂತಂಬಹುಧಾಕಲ್ಪಯಂತಿ,

† (1) ವಿ. ಭಗವಂತನು ಸರ್ವಾಂತರ್ಯಾಮಿಯಾಗಿರುವುದರಿಂದ, ಜೀವಿಗಳು ಕರ್ಮಾನುಗುಣವಾಗಿ ತಮಗುಂಟಾಗುವ ವಿಕಾರಗಳನ್ನು ಭ್ರಾಂತಿಯಿಂದ ಆತನಲ್ಲಿ ಆರೋಪಿಸುವರೇ ಹೊರತು. ಪರಮಾತ್ಮನಿಗೆ ಯಾವ ವಿಕಾರಗಳೂ ಇಲ್ಲವೆಂಬುದನ್ನು ಚೆನ್ನಾಗಿ ತಿಳಿದು ಶರಣಾಗತನಾದೆನ,.

ವಿ:—(2) ನಾನು ಅವತಾರಾದಿಗಳಲ್ಲಿ ಭೇದಭ್ರಾಂತಿಯನ್ನಳಿದು, ಪ್ರಾಣಿಗಳ ಹೃದಯಗಳಲ್ಲಿ ಹಲವುರೂಪಗಳಿಂದ ಭಗವಂತನೊಬ್ಬನೇ ನೆಲಸಿರುವನೆಂದು ತಿಳಿದೆನು. "ನಾನು ಕೃಷ್ಣನನ್ನ ಹೊಂದಿದೆನು" ಎಂಬಲ್ಲಿ, ಹೊಂದುವವನು, ಹೊಂದಲ್ಪಡುವವನು, ಹೊಂದಿಕೆ, ಎಂಬಿವುಗಳಿಗೆ ಭೇದವೆಂಬುದು ಅನುಭವಸಿದ್ಧವಾಗಿರುವುದರಿಂದ ಜೀವೇಶ್ವರರಿಗೆ ಅಭೇದವೆಂಬುದು ಘಟಿಸುವುದಿಲ್ಲ.

‡ ವಿ. ಸುಷುಪ್ತಿಯಲ್ಲಿ ಜೀವನು ಪರಮಾತ್ಮನಲ್ಲಿ ಸೇರುತ್ತಾನೆಂಬ (೧) ಶ್ರುತ್ಯರ್ಥದಂತೆ ಇಲ್ಲಿಯೂ

ನಿಷ್ಕಳೇ। ಸರ್ವೇ ಬಭೂವುಸ್ತೇ ತೂಷ್ಣೀಂ ವಯಾಂಸೀವ ದಿನಾತ್ಯಯೇ॥

ಸಂಪದ್ಯಮಾನಂ-ಐಕ್ಯವಾದವನನ್ನಾಗಿ, ಆಜ್ಞಾಯ-ತಿಳಿದು, ದಿನಾತ್ಯಯೇ-ಹೊತ್ತು ಮುಳುಗಿದ ಮೇಲೆ, ವಯಾಂಸೀವ-ಪಕ್ಷಿಗಳಂತೆ, ತೂಷ್ಣೀಂ ಬಭೂವುಃ-ಸುಮ್ಮನಾದರು ॥ ೪೫ ॥ ತತ್ರ ಆಗ, ದೇವ... ತಾಃ,

ಚೈತನ್ಯದಲ್ಲೈಕ್ಯವಾದುದನ್ನು ಕಂಡು, ಹೊತ್ತು ಮುಳುಗಿದಮೇಲೆ ಸದ್ದಿಲ್ಲದಿರುವ ಹಕ್ಕಿಗಳಂತೆ ಎಲ್ಲರೂ ಸುಮ್ಮನಾದರು ॥ ೪೫ ॥

ಭೀಷ್ಮನು ಬ್ರಹ್ಮನನ್ನು ಸೇರಿದನೆಂದರ್ಥವು. "ಸುಷುಪ್ತಿಯಲ್ಲಿ ಅಂತಃಕರಣೋಪಾಧಿಯನ್ನಳಿವುದರಿಂದ ಬ್ರಹ್ಮನಲ್ಲಿ ಐಕ್ಯವನ್ನು ಪಡೆಯುವನು, ಪ್ರಬೋಧದಲ್ಲಿ ಆ ಉಪಾಧಿಸಂಬಂಧದಿಂದ ಭೇದವುಂಟಾಗುವುದಾದ್ದರಿಂದ ಈ ಶ್ರುತಿಗೆ ಜೀವೇಶ್ವರೈಕ್ಯವೇ ತಾತ್ಪರ್ಯವೆಂದು" ಕೆಲವರು ಹೇಳುವರು. ಇದು ಸರಿಯಲ್ಲ. ಸುಷುಪ್ತಿಯಲ್ಲಿ "ದಾರದಿಂದ ಬಿಗಿದು ಬಿಡಲ್ಪಟ್ಟ ಹಕ್ಕಿಯು ಎಲ್ಲಿಹೋದರೂ ಮರಳಿ ಬಿಟ್ಟಲ್ಲಿಗೇ ಬರುವಂತೆ, ಮನಸ್ಸು ಎಲ್ಲೆಲ್ಲಿ ಅಲೆದಾಡುತ್ತಿದ್ದರೂ, ಆ ಕಾಲಕ್ಕೆ ಪರಮಾತ್ಮನನ್ನೇ ಸೇರುವುದು" ಎಂಬ (೨) ಶ್ರುತಿಯಿಂದಲೂ, ಜೀವನು ಇಂದ್ರಿಯಗಳೊಂದೊಡಗೂಡಿ ಸುಷುಪ್ತಿಯಲ್ಲಿ ಪರಮಾತ್ಮನಲ್ಲಿಯೇ ನೆಲಸುವನು. ಎಂಬ (೩) ಶ್ರುತಿಯಿಂದಲೂ, ಜೀವಬ್ರಹ್ಮರಿಗೆ ಭೇದವೇ ಕಂಡು ಬರುವುದು. ಮತ್ತು "ಪರಮಾತ್ಮನೊಡಗೂಡಿ ಯಾವುದನ್ನೂ ತಿಳಿಯಲಿಲ್ಲ" ಎಂಬ (೪) ಶ್ರುತಿಯಿಂದಲೂ ಭೇದವು ಸ್ಪಷ್ಟವಾಗುವುದು. ಹಾಗೆಯೇ ಜ್ಞಾನಿಯು ಪುಣ್ಯಪಾಪಗಳನ್ನು ತೊರೆದು ಪರಮಾತ್ಮನನ್ನು ಹೊಂದುವನು ಎಂಬ (೫) ಶ್ರುತಿಯಿಂದಲೂ, "ಜ್ಞಾನಿಗಳು ನನ್ನಂತೆಯೇ ಆಗುವರು" ಎಂಬ (೬) ಗೀತಾವಾಕ್ಯದಿಂದಲೂ, ಜೀವೇಶ್ವರರಿಗೆ ಭೇದವು ಕಾಣಬರುವುದು, ಮತ್ತು ಮುಕ್ತನಾದವನು" ಬ್ರಹ್ಮನೊಡನೆ ಸಕಲ ಕಾಮಗಳನ್ನೂ ಅನುಭವಿಸುವನು ಎಂಬ (೭) ಶ್ರುತಿಗೂ ಇದೇ ಅರ್ಥವಾಗುವುದು, ಇದಲ್ಲದೆ, ಓಂಕಾರವೆಂಬ ಬಿಲ್ಲಿನಲ್ಲಿ ಜೀವನೆಂಬ ಬಾಣವನ್ನು ಹೂಡಿ ಎಚ್ಚರದಿಂದ ಪರಮಾತ್ಮನೆಂಬ ಗುರಿಯನ್ನು ಹೊಡೆದರೆ ಬಾಣದಂತೆ ತನ್ಮಯನಾಗುವನು, ಎಂಬ(೮) ಲಕ್ಷ್ಯದೃಷ್ಟಾಂತದಿಂದಲೂ, ಬಾಣವು ಲಕ್ಷ್ಯದೊಡನೆಸೇರುವುದೇ ಹೊರತು, ಲಕ್ಷ್ಯವೇ ಆಗುವುದಿಲ್ಲವೆಂದು ಕಂಡು ಬರುವುದರಿಂದ ಜೀವಪರಮಾತ್ಮರಿಗೆ ಐಕ್ಯವೆಂಬುದು ಘಟಿಸುವುದಿಲ್ಲ, ಇಷ್ಟೇ ಅಲ್ಲದೆ ಎಷ್ಟು ಕಲ್ಪಕೋಟಿ ಸಂವತ್ಸರಗಳಾದರೂ ಒಂದು ವಸ್ತು ಮತ್ತೊಂದುವಸ್ತುವಾಗುವುದಿಲ್ಲ. ಜೀವನು ಪರಮಾತ್ಮನೊಡನೆ ಸೇರುವುದಕ್ಕೆ ಪರಮಾತ್ಮವೆಂದು (೯) ಹೆಸರೇ ಹೊರತು ನಿಜವಾಗಿ ಜೀವನು ಪರಮಾತ್ಮನಾಗುವುದಿಲ್ಲ. ಆದುದರಿಂದ "ಸಂಪದ್ಯಮಾನಂ" ಎಂಬ ಪದಕ್ಕೆ ಬ್ರಹ್ಮನಲ್ಲಿ ನೆಲೆಗೊಂಡನೆಂದರ್ಥವೇ ಹೊರತು ಐಕ್ಯವೆಂದಲ್ಲ. (೧) ಶ್ರು. ಸತಾಸೌಮ್ಯತದಾಸಂಪನ್ನೋಭವತಿ. (೨) ಶ್ರು. ಯಥಾ ಶಕುನಿಸ್ಸೂತ್ರೇಣ ಪ್ರಬದ್ಧೋದಿಶಂದಿಶಂ ಪತಿತ್ವಾನ್ಯತ್ರಾಯತನಮಲಬ್ಧ್ವಾ ಬಂಧನಮೇವೋಪ ಶ್ರಯತೇ, ಏವಮೇವ ಮನೋದಿಶಂ ದಿಶಂ ಪತಿತ್ವಾನ್ಯತ್ರಾಯತನಮಲಬ್ಧ್ವಾ ಪ್ರಾಣಮೇವೋಪ ಶ್ರಯತೇ, ಪ್ರಾಣಬಂಧನಂಹಿಸೌಮ್ಯಮನಃ. (೩) ಪರೋಂತಕಸ್ಸ್ವದಮ ಆಕಾಶಸ್ತಸ್ಮಿನ್ ಶೇತೇ (೪) ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋನಬಾಹ್ಯಂ ಕಿಂಚನವೇದನಾಂತರಂ (೫) ತಥಾವಿದ್ವಾನ್ ಪುಣ್ಯಪಾಪೇವಿಧೂಯ ಪರಾತ್ಪರಂ ಪುರುಷಮುಪೈತಿ ದಿವ್ಯಂ(೬) ಇದಂ ಜ್ಞಾನಮುಪಾಶ್ರಿತ್ಯಮಮಸಾಧರ್ಮ್ಯಮಾಗತಾಃ ೭ ಶ್ರು. ಸೋಽಶ್ನುತೇಸರ್ವಾನ್ ಕಾಮಾನ್ತ್ಸಹ ಬ್ರಹ್ಮಣಾ ವಿಪಶ್ಚಿತೇತಿ (೮) ಪ್ರಣವೋಧನುಶ್ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯಮುಚ್ಯತೇ। ಅಪ್ರಮತ್ತೇನವೇದ್ಧವ್ಯಂ ಶರವತ್ತನ್ಮಯೋಭವೇತ್(೯) ಪರಮಾತ್ಮಾತ್ಮನೋರ್ಯೋಗಃ ಪರಮಾತ್ಮೇತಿ ಕಥ್ಯತೇ। ಮಿಥ್ಯೈತದನ್ಯದ್ದ್ರವ್ಯಂ ಹಿ ನೈತಿ ತದ್ದ್ರವ್ಯತಾಂ ಯತಃ। (ವಿಷ್ಣುಪುರಾಣ)

ತತ್ರ ದುಂದುಭಯೋ ನೇದುರ್ದೇವಮಾನವವಾದಿತಾಃ। ಶಶಂಸುಃ ಸಾಧವೋ ರಾಜ್ಞಾಂ ಖಾತ್ಪೇತುಃ ಪುಷ್ಪವೃಷ್ಟಯಃ ॥ ೪೬ ॥ ತಸ್ಯ ನಿರ್ಹರಣಾದೀನಿ ಸಂಪರೇತಸ್ಯ ಭಾರ್ಗವ । ಯುಧಿಷ್ಠಿರಃ ಕಾರಯಿತ್ವಾ ಮುಹೂರ್ತಂ ದುಃಖಿತೋಽಭವತ್ ॥ ೪೭ ॥ ತುಷ್ಟುವುರ್ಮುನಯೋ ಹೃಷ್ಟಾಃ ಕೃಷ್ಣಂ ತದ್ಗುಹ್ಯ ನಾಮಭಿಃ । ತತಸ್ತೇ ಕೃಷ್ಣಹೃದಯಾಃ ಸ್ವಾಶ್ರಮಾನ್ ಪ್ರಯಯುಃ ಪುನಃ ॥ ೪೮ ॥ ತತೋ ಯುಧಿಷ್ಠಿರೋ ಗತ್ವಾ ಸಹಕೃಷ್ಣೋ ಗಜಾಹ್ವಯಂ । ಪಿತರಂ ಸಾಂತ್ವಯಾಮಾಸ ಗಾಂಧಾರೀಂ ಚ ಯಶಸ್ವಿನೀಂ॥ ೪೯ ॥

ದೇವ-ದೇವತೆಗಳಿಂದಲೂ, ಮಾನವ-ಮನುಷ್ಯರಿಂದಲೂ, ವಾದಿತಾಃ-ಬಾರಿಸಲ್ಪಟ್ಟ, ದುಂದುಭಯಃ-ವಾದ್ಯಗಳು, ನೇದುಃ-ಮೊಳಗಿದುವು, ರಾಜ್ಞಾಂ-ರಾಜರಲ್ಲಿ, ಸಾಧವಃ-ಜ್ಞಾನಿಗಳಾದವರು, ಶಶಂಸುಃ-ಹೊಗಳಿದರು, ಖಾತ್-ಗಗನದಿಂದ, ಪುಷ್ಪವೃಷ್ಟಯಃ-ಪುಷ್ಪಮಳೆಗಳು, ಪೇತುಃ-ಸುರಿದವು ॥ ೪೬ ॥ ಹೇ ಭಾರ್ಗವ-ಎಲೈ ಶೌನಕನೆ? ಯುಧಿಷ್ಠಿರಃ-ಧರ್ಮರಾಜನು, ಸಂಪರೇತಸ್ಯ, ಸಮ್-ಚೆನ್ನಾಗಿ, ಪರ-ಪರಮಾತ್ಮನನ್ನು, ಇತಸ್ಯ-ಹೊಂದಿದ, ತಸ್ಯ-ಆ ಭೀಷ್ಮನಿಗೆ, ನಿರ್ಹರಣಾದೀನಿ-ಸಂಸ್ಕಾರ ಮೊದಲಾದವುಗಳನ್ನು, ಕಾರಯಿತ್ವಾ-ಮಾಡಿಸಿ, ಮುಹೂರ್ತಂ-ಕೊಂಚಹೊತ್ತು, ದುಃಖಿತಃ-ದುಖಿಸುತ್ತಾ, ಅಭವತ್-ಇದ್ದನು॥ ೪೭ ॥ ಮುನಯಃ-ಋಷಿಗಳು, ಹೃಷ್ಟಾಃ-ಸಂತೋಷಗೊಂಡವರಾಗಿ, ಕೃಷ್ಣಂ-ಕೃಷ್ಣನನ್ನು, ತದ್ಗುಹ್ಯನಾಮಭಿಃ, ತತ್-ಅವನ, ಗುಹ್ಯ-ತತ್ವವನ್ನು, ಹೊರಪಡಿಸುವ, ನಾಮಭಿಃ-ಹೆಸರುಗಳಿಂದ, ತುಷ್ಟುವುಃ-ಹೊಗಳಿದರು, ತತಃ-ಆ ಬಳಿಕ, ತೇ-ಆ ಮುನಿಗಳು, ಕೃಷ್ಣಹೃದಯಾಃ-ಮನಸ್ಸಿನಲ್ಲಿ ಕೃಷ್ಣನನ್ನು ಧ್ಯಾನಿಸುತ್ತಾ, ಪುನಃ-ಹಿಂದಿರುಗಿ, ಸ್ವಾಶ್ರಮಾನ್-ತಮ್ಮ ಆಶ್ರಮಗಳಿಗೆ, ಪ್ರಯಯುಃ-ಹೋದರು ॥ ೪೮ ॥ ತತಃ-ಆ ಮೇಲೆ, ಯುಧಿಷ್ಠಿರಃ-ಧರ್ಮರಾಜನು, ಸಹಕೃಷ್ಣಃ-ಕೃಷ್ಣಾದಿಗಳಿಂದೊಡಗೂಡಿ, ಗಜಾಹ್ವಯಂ-ಹಸ್ತಿನಾವತಿಯನ್ನು, ಗತ್ವಾ-ಹೊಂದಿ, ಪಿತರಂ-ತಂದೆಯಾದ ಧೃತರಾಷ್ಟ್ರನನ್ನೂ, ಯಶಸ್ವಿನೀಂ-ಪ್ರಖ್ಯಾತಳಾದ, ಗಾಂಧಾರೀಂಚ-ಗಾಂಧಾರಿಯನ್ನೂ, ಸಾಂತ್ವಯಾಮಾಸ-ಸಂತೈಸಿದನು ॥ ೪೯ ॥ ರಾಜಾ-

---

ಕೂಡಲೇ ಅಲ್ಲಿ ಮನುಷ್ಯರೂ ದೇವತೆಗಳೂ ದುಂದುಭಿ ಮೊದಲಾದ ವಾದ್ಯಗಳನ್ನು ಬಾರಿಸಿದರು. ಆ ರಾಜರ ಮಧ್ಯದಲ್ಲಿ ಮಹಾತ್ಮರಾದವರು ಭೀಷ್ಮನನ್ನು ಹೊಗಳುತ್ತಾ ಬಂದರು, ಆಕಾಶದಿಂದ ಹೂವಿನ ಮಳೆಯೂ ಸುರಿಯಿತು ॥ ೪೬ ॥ ಧರ್ಮರಾಜನು, ಪರಮಾತ್ಮನಲ್ಲೈಕ್ಯವನ್ನು ಪಡೆದ ಭೀಷ್ಮನಿಗೆ ಶವನಿರ್ಹರಣ ಮೊದಲಾದ ಸಂಸ್ಕಾರಗಳನ್ನು ಮಾಡಿಸಿ, ಕೊಂಚಹೊತ್ತಿನವರೆಗೂ ದುಃಖಪಡುತ್ತಿದ್ದನು ॥ ೪೭ ॥ ಮಹರ್ಷಿಗಳೆಲ್ಲ ಸಂತೋಷಗೊಂಡು ಪರಮಾರ್ಥವನ್ನು ಬೋಧಿಸುವ ತಾರಕನಾಮಗಳಿಂದ ಕೃಷ್ಣನನ್ನು ಸ್ತುತಿಸಿ, ಆತನನ್ನೇ ಧ್ಯಾನಮಾಡುತ್ತಾ ತಂತಮ್ಮ ಆಶ್ರಮಗಳಿಗೆ ತೆರಳಿದರು ॥ ೪೮ ॥ ಅನಂತರದಲ್ಲಿ ಧರ್ಮರಾಜನು ಕೃಷ್ಣಾರ್ಜುನರೇ ಮೊದಲಾದವರಿಂದಕೂಡಿ ಹಸ್ತಿನಾವತಿಗೆ ಬಂದು, ತಂದೆಯಾದ ಧೃತರಾಷ್ಟ್ರನನ್ನೂ, ಪತಿವ್ರತಾಶಿರೋಮಣಿಯೆಂದು ಪ್ರಖ್ಯಾತಿಪಡೆದಿರುವ ತಾಯಿಯಾದ ಗಾಂಧಾರಿಯನ್ನೂ, ಉಪಚಾರೋಕ್ತಿಗಳಿಂದ ಸಮಾಧಾನಗೊಳಿಸಿದನು ॥ ೪೯ ॥ ಬಳಿಕ ಆ ರಾಜನು ಶ್ರೀಕೃಷ್ಣನಿಂದಲೂ, ತಂದೆಯಾದ ಧೃತರಾಷ್ಟ್ರ

ಪಿತ್ರಾಚಾನುಮತೋ ರಾಜಾ ವಾಸುದೇವಾನುಮೋದಿತಃ । ಚಕಾರ ರಾಜ್ಯಂ ಧರ್ಮೇಣ ಪಿತೃಪೈತಾಮಹಂ ವಿಭುಃ ॥೫೦॥

ಇತಿನವಮೋಽಧ್ಯಾಯಃ.

ಧರ್ಮರಾಜನು, ವಾಸುದೇವಾನುಮೋದಿತಃ-ಕೃಷ್ಣನಿಂದ ಸಮ್ಮತಿಗೊಳಿಸಲ್ಪಟ್ಟವನಾಗಿ, ಪಿತ್ರಾಚ-ತಂದೆಯಾದ ಧೃತರಾಷ್ಟ್ರನಿಂದಲೂ, ಅನುಮೋದಿತಃ-ಸಮ್ಮತಿಸಲ್ಪಟ್ಟು, ಪಿತೃಪೈತಾಮಹಂ - ತಂದೆತಾತಂದಿರಿಂದ ಬಂದಿರುವ, ರಾಜ್ಯಂ-ರಾಜ್ಯವನ್ನು, ಧರ್ಮೇಣ-ಧರ್ಮದಿಂದ, ಚಕಾರ-ಆಳಿದನು ॥ ೫೦ ॥

—:ನವಮಾಧ್ಯಾಯಂ ಸಮಾಪ್ತಂ:—

ನಿಂದಲೂ ಸಹ ಸಮ್ಮತಿಗೊಳಿಸಲ್ಪಟ್ಟವನಾಗಿ, ವಂಶಪರಂಪರೆಯಿಂದ ಬಂದಿರುವ ರಾಜ್ಯವನ್ನು ಧರ್ಮದಿಂದ ಪಾಲಿಸುತ್ತಿದ್ದನೆಂದು ಸೂತನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ

ಭಾಗವತ ಚಕೋರಚಂದ್ರಿಕೆಯೊಳ್

ಒಂಬತ್ತನೆಯ ಅಧ್ಯಾಯಂ ಮುಗಿದುದು.

ಓಂ ನಮಃಪರಮಾತ್ಮನೇ.

ಶ್ರೀಶೌನಕಃ॥ ಹತ್ವಾ ಸ್ವರಿಕ್ಥಸ್ಪೃಧ ಆತತಾಯಿನೋ*ಯುಧಿಷ್ಠಿರೋ ಧರ್ಮಭೃತಾಂ ವರಿಷ್ಠಃ । ಸಹಾನುಜೈಃ ಪ್ರತ್ಯವರುದ್ಧಭೋಜನಃ ಕಥಂಪ್ರ

ಶೌನಕಃ-ಶೌನಕನು ಪ್ರಶ್ನೆಮಾಡುತ್ತಾನೆ;—ಧರ್ಮಭೃತಾಂ-ಧರ್ಮಾತ್ಮರಲ್ಲಿ,ವರಿಷ್ಠಃ-ಶ್ರೇಷ್ಠನಾದ, ಯುಧಿಷ್ಠಿರಃ-ಧರ್ಮರಾಜನು, ಆತತಾಯಿನಃ-ಕೊಲೆಗೇಡಿಗಳಾಗಿಯೂ, ಸ್ವ...ಧಃ, ಸ್ವ-ತನ್ನ, ರಿಕ್ಥ-ಧನವನ್ನು, ಸ್ಪೃಧಃ-ಬಯಸುತ್ತಿರುವ ಶತ್ರುಗಳನ್ನು ಹತ್ವಾ-ಕೊಂದು, ಪ್ರತ್ಯವರುದ್ಧಭೋಜನಃ, ಪ್ರತ್ಯವರುದ್ಧ-ಬಂಧುವಿನಾಶದಿಂದ ತಗ್ಗಿಸಲ್ಪಟ್ಟ, ಭೋಜನಃ-ರಾಜಭೋಗಗಳುಳ್ಳವನಾಗಿ, ಅನುಜೈಸ್ಸಹ-ತಮ್ಮಂ

—:ಶ್ರೀ ಕೃಷ್ಣನು ದ್ವಾರಕಾನಗರಕ್ಕೆ ಪ್ರಯಾಣಮಾಡಿದುದು:—

ಸೂಚನೆ ಕಂ॥ ಹರಿ ನಿಷ್ಕಂಟಕರಾಜ್ಯದೊಳಿರಿಸುತೆ ಧರ್ಮಜನನೊಲ್ದು ಹಾಸ್ತಿನಪುರಿಯಿಂ।
ಪೊರಮಡೆ ನಿಜಪುರಕರಸಂ । ಕುರುಸತಿಯರ್ ಪೊಗಳೆ ಬಗೆಯ ನಿದರೊಳ್ ಪೇಳ್ವಂ॥

ಅನಂತರದಲ್ಲಿ ಶೌನಕಋಷಿಯು ಸೂತಪೌರಾಣಿಕನನ್ನು ಕುರಿತು, ಅಯ್ಯಾ ಸೂತನೆ ? ಧರ್ಮಿಷ್ಠರಲ್ಲಿ ಅಗ್ರಗಣ್ಯನಾದ ಧರ್ಮರಾಯನು, ತಮ್ಮ ಭಾಗದ ರಾಜ್ಯವನ್ನಪಹರಿಸಿದುದೂ ಅಲ್ಲದೆ ತಮ್ಮನ್ನು ಕೊಲ್ಲಬೇಕೆಂದಿದ್ದ ದುರ್ಯೋಧನಾದಿಗಳನ್ನು ಸಂ

* ಗವಿಷ್ಠಿರಃ, ಗವಿ-ವಾಕ್ಕಿನಲ್ಲಿ, ಸ್ಥಿರಃ-ಸ್ಥೈರ್ಯವುಳ್ಳವನು:-ಸತ್ಯಸಂಧನು.

ವೃತ್ತಃ ಕಿಮಕಾ * ರಷೀತ್ತತಃ ॥೧॥ ಶ್ರೀಸೂತಃ॥ ವಂಶಂ ಕುರೋರ್ವಂಶದವಾಗ್ನಿ ನಿರ್ಹತಂ ಸಂರೋಹಯಿತ್ವಾ ಭವಭಾವನೋ ಹರಿಃ । ನಿವೇಶಯಿತ್ವಾ ನಿಜರಾಜ್ಯ ಈಶ್ವರೋ ಯುಧಿಷ್ಠಿರಂ ಪ್ರೀತಮನಾ ಬಭೂವ॥೨॥ ನಿಶಮ್ಯ ಭೀಷ್ಮೋಕ್ತ ಮಥಾಚ್ಯುತೋಕ್ತಂ ಪ್ರವೃತ್ತವಿಜ್ಞಾನ ವಿಧೂತವಿಭ್ರಮಃ। ಶಶಾಸ ಗಾ ಮಿಂದ್ರ ಇವಾ ಜಿತಾಶ್ರಯಃ ಪರಿಧ್ಯುಪಾಂತಾ ಮನುಜಾನುವರ್ತಿತಃ ॥೩॥ ಕಾಮಂ ವವರ್ಷ ಪರ್ಜನ್ಯಃ ಸರ್ವಕಾಮದುಘಾ ಮಹೀ।

ದಿರೊಡನೆ, ರಾಜ್ಯದಲ್ಲಿ, ಕಥಂ-ಹೇಗೆ, ಪ್ರವೃತ್ತಃ-ಪ್ರವೇಶಿಸಿದನು, ತತಃ-ರಾಜ್ಯವನ್ನಾಳಿದಮೇಲೆ, ಕಿಂ-ಏನನ್ನು, ಅಕಾರ್ಷೀತ್-ಮಾಡಿದನು ॥ ೧ ॥ ಸೂತಃ-ಸೂತನು ಹೇಳುತ್ತಾನೆ, ಈಶ್ವರಃ-ಜಗನ್ನಿಯಾಮಕನಾಗಿಯೂ, ಭವಭಾವನಃ, ಭವ-ಪ್ರಪಂಚವನ್ನು, ಭಾವನಃ - ಬೆಳೆಯಿಸುವವನಾಗಿಯೂ ಇರುವ, ಹರಿಃ-ಶ್ರೀಕೃಷ್ಣನು,ವಂಶ...ತಂ,ವಂಶ-ಕೌರವರೆಂಬ ಬಿದಿರುಗಳ, ದವ-ಕಾಡಿನಲ್ಲಿ ಉಂಟಾದ, ಅಗ್ನಿ-ಕೋಪವೆಂಬ ಬೆಂಕಿಯಿಂದ, ನಿರ್ಹತಂ-ಸಂಪೂರ್ಣವಾಗಿ ನಾಶಗೊಳಿಸಲ್ಪಟ್ಟ, ಕುರೋಃ - ಕುರುರಾಜನ, ವಂಶಂ-ಕುಲವನ್ನು, ಸಂರೋಹಯಿತ್ವಾ-ಪರೀಕ್ಷಿತ್ತೆಂಬ ಮೊಳಕೆಯಿಂದ, ಬೆಳೆಯಿಸಿ, ನಿಜರಾಜ್ಯೇ-ತನ್ನ ರಾಜ್ಯದಲ್ಲಿ, ಯುಧಿಷ್ಠಿರಂ-ಧರ್ಮರಾಜನನ್ನು, ನಿವೇಶಯಿತ್ವಾ-ಕುಳ್ಳಿರಿಸಿ, ಪ್ರೀತಮನಾಃ - ಸಂತುಷ್ಟವಾದ ಮನಸ್ಸುಳ್ಳವನು, ಬಭೂವ-ಆದನು ॥ ೭ ॥ ಪ್ರವೃತ್ತ...ಮಃ, ಪ್ರವೃತ್ತ - ಉಂಟಾದ, ವಿಜ್ಞಾನ-ತತ್ವಜ್ಞಾನದಿಂದ, ವಿಧೂತ-ಕಳೆಯಲ್ಪಟ್ಟ, ವಿಭ್ರಮಃ-ಮೋಹವುಳ್ಳ ಧರ್ಮರಾಜನು, ಭೀಷ್ಮೋಕ್ತಂ-ಭೀಷ್ಮನ ಉಪದೇಶವನ್ನು, ಅಥ-ಬಳಿಕ, ಅಚ್ಯುತೋಕ್ತಂ-ಕೃಷ್ಣನುಪದೇಶವನ್ನೂ, ನಿಶಮ್ಯ-ಕೇಳಿ, ಅಜಿತಾಶ್ರಯಃ, ಅಜಿತ-ಕೃಷ್ಣನೇ, ಆಶ್ರಯಃ-ಆಶ್ರಯವಾಗುಳ್ಳವನಾಗಿ, ಅನುಜಾನುವರ್ತಿತಃ-ತಮ್ಮಂದಿರಿಂದ ಸೇವಿಸಲ್ಪಡುತ್ತಾ, ಪರಿಧ್ಯುಪಾಂತಾಂ, ಪರಿಧಿ-ಸಮುದ್ರಗಳೇ, ಉಪಾಂತಾಂ - ಕಡೆಯುಳ್ಳ, ಗಾಂ-ಭೂಮಿಯನ್ನು, ಇಂದ್ರಇವ-ಇಂದ್ರನಂತೆ, ಶಶಾಸ - ಪಾಲಿಸಿದನು ॥ ೩ ॥ ಅಜಾತಶತ್ರೌ - ಧರ್ಮ

ಹರಿಸಿ,ಬಂಧುವಿನಾಶದಿಂದ ಕಳವಳಿಸುತ್ತಾ,ಸರಿಯಾಗಿ ರಾಜಭೋಗಗಳನ್ನು ಅನುಭವಿಸಿದನೆ? ಅಥವಾ ಭೋಗಗಳನ್ನು ಳಿದನೆ? ಸಾನುಜನಾಗಿಯೆಂತು ರಾಜ್ಯವನ್ನಾಳಿದನು? ಆ ರಾಜ್ಯವನ್ನಾಳಿದಮೇಲೆ ಯಾವ ಕಾರ್ಯಗಳನ್ನು ಮಾಡಿದನು? ಎಂದು ಬೆಸಗೊಳಲು,ಸೂತನು ಹೇಳುವುದೆಂತೆಂದರೆ--॥೧॥ಅಯ್ಯಾ ಶೌನಕನೆ?ಕೇಳು,ಪ್ರಪಂಚಾತೀತನೆನಿಸಿದ್ದರೂ ಪ್ರಪಂಚಾಭಿವೃದ್ಧಿಯಲ್ಲಿ ನಿರತನಾದ ಕೃಷ್ಣಭಗವಂತನು,ಬಿದಿರುಗಳ ಘರ್ಷಣದಿಂದುಂಟಾಗುವ ಅಗ್ನಿಯು ಬಿದಿರು ಕಾಡನ್ನೇ ಸುಡುವಂತೆ,ಸ್ವಜನ ಕಲಹವೆಂಬ ಅಗ್ನಿಯಿಂದ ಸುಡಲ್ಪಟ್ಟ ಕೌರವಕುಲವನ್ನು ಹಾಳುಮಾಡದೆ ಪರೀಕ್ಷಿತ್ತೆಂಬ ಮೊಳಕೆಯನ್ನುಳಿಸಿ, ಧರ್ಮರಾಜನನ್ನು ಆತನ ರಾಜ್ಯದಲ್ಲಿ ನಿಲ್ಲಿಸಿ, ಸತ್ಯಸಂಕಲ್ಪನಾದುದರಿಂದ ಕೃತಕೃತ್ಯನಾಗಿ ಸಂತೋಷಗೊಂಡನು ॥ ೨ ॥ ಆ ಬಳಿಕ ಧರ್ಮರಾಜನು ಭೀಷ್ಮನು ಮಾಡಿದ ಧರ್ಮೋಪದೇಶದಿಂದಲೂ, ಶ್ರೀಕೃಷ್ಣಮೂರ್ತಿಯ ತತ್ವೋಪದೇಶದಿಂದಲೂ,ಜಗತ್ತೆಲ್ಲವೂ ಪರಮೇಶ್ವರಾಧೀನವೆಂದರಿದು "ನಾನು ತಾನು"ಎಂಬ ಅಹಂಕಾರವನ್ನು ಬಿಟ್ಟು, ಕೃಷ್ಣನೇ ಗತಿಯೆಂದು ನಂಬಿದವನಾಗಿ,ತಮ್ಮಂದಿರಿಂದ ಸೇವಿಸಲ್ಪಡುತ್ತಾ, ಸ್ವರ್ಗಸಾಮ್ರಾಜ್ಯವನ್ನು ಆಳುವ ದೇವರಾಜನಂತೆ ಧರ್ಮ

ಸಿಷಿಚುಸ್ಸ್ಮ ವ್ರಜಾನ್ ಗಾವಃ ಪಯಸೋಧಸ್ವತೀರ್ಮುದಾ ॥೪॥ ನದ್ಯ
ಸ್ಸಮುದ್ರಾ ಗಿರಯ ಸ್ಸವನಸ್ಪತಿವೀರುಧಃ । ಫಲಂತ್ಯೋಷಧಯ ಸ್ಸರ್ವಾಃ
ಕಾಮ ಮನ್ವೃತು ತಸ್ಯವೈ ॥ ೫ ॥ ನಾಧಯೋ ವ್ಯಾಧಯಃ ಕ್ಲೇಶಾ ದೈವ
ಭೂತಾತ್ಮಹೇತವಃ । ಅಜಾತಶತ್ರಾ ವಭವನ್ ಜಂತೂನಾಂ ರಾಜ್ಞಿ ಕರ್ಹಿ
ಚಿತ್ ॥ ೬ ॥ ಉಷಿತ್ವಾ ಹಾಸ್ತಿನಪುರೇ ಮಾಸಾನ್ ಕತಿಪಯಾನ್ ಹರಿಃ ।
ಸುಹೃದಾಂಚ ವಿಶೋಕಾಯ ಸ್ವಸುಶ್ಚ ಪ್ರಿಯ ಕಾಮ್ಯಯಾ ॥ ೭ ॥ ಆಮಂ

ರಾಜನು, ರಾಜ್ಞಿ-ರಾಜನಾಗಲು, ಪರ್ಜನ್ಯಃ-ವರುಣನು, ಕಾಮಂ - ಇಷ್ಟಾನುಸಾರವಾಗಿ, ವವರ್ಷ-ಮಳೆಗರೆದನು, ಮಹೀ-ಭೂಮಿಯು,ಸರ್ವ--ದುಘಾ, ಸರ್ವ-ಎಲ್ಲ, ಕಾಮ-ಇಷ್ಟವಸ್ತುಗಳನ್ನೂ, ದುಘಾ-ಫಲಿಸುತ್ತಿದ್ದುದು, ಊಧಸ್ವತೀಃ-ತೊರವಾದ ಕೆಚ್ಚಲುಳ್ಳ, ಗಾವಃ-ಆಕಳುಗಳು, ಮುಹುಃ-ಅಡಿಗಡಿಗೂ, ಪಯಸಾ-ಹಾಲಿನಿಂದ,ವ್ರಜಾನ್-ದೊಡ್ಡಿಗಳನ್ನು, ಸಿಷಿಚುಃ-ನೆನಸುತ್ತಿದ್ದವು ॥೪॥ ತಸ್ಯ-ಆರಾಜನಸೇಶಕ್ಕೆ ಸೇರಿದ, ನದ್ಯಃ-ನದಿಗಳು, ಸಮುದ್ರಾಃ-ಕಡಲುಗಳು, ಸವನ...ಧಃ,ಸವನಸ್ಪತಿ-ವೃಕ್ಷಗಳಿಂದಲೂ,ವೀರುಧಃ-ಲತೆಗಳಿಂದಲೂಕೂಡಿದ,ಗಿರಯಃ-ಬೆಟ್ಟಗಳು,ಸರ್ವಾಃ-ಎಲ್ಲವಿಧಗಳಾದ,ಓಷಧಯಃ-ಧಾನ್ಯಗಳು, ಅನ್ವೃತು-ಕಾಲವನ್ನತಿಕ್ರಮಿಸದೆ, ಫಲಂತಿ-ಫಲಿಸುತ್ತಾವೆ ॥ ೫ ॥ ದೈವ...ವಃ, ದೈವ-ದೈವವು, ಭೂತ - ಪಂಚಭೂತಗಳು ಆತ್ಮ - ಶರೀರಾದಿಗಳು, ಹೇತವಃ - ಕಾರಣಗಳಾಗಿರುವ, ಆಧಯಃ - ಮನೋರೋಗಗಳು, ವ್ಯಾಧಯಃ-ಶರೀರರೋಗಗಳು, ಕ್ಲೇಶಾಃ - ಶೀತೋಷ್ಣಾದಿಗಳಿಂದುಂಟಾಗುವ ತೊಂದರೆಗಳು, ಇವುಗಳು, ಜಂತೂನಾಂ - ಪ್ರಾಣಿಗಳಿಗೆ, ಕರ್ಹಿಚಿತ್ - ಯಾವಾಗಲೂ, ನ-ಇರಲಿಲ್ಲ ॥ ೬ ॥ ಹರಿಃ-ಕೃಷ್ಣನು, ಸುಹೃದಾಂ-ಮಿತ್ರರಾದ ಪಾಂಡವರ, ವಿಶೋಕಾಯ-ದುಃಖವನ್ನಾರಿಸುವುದಕ್ಕೂ, ಸ್ವಸುಃ-ತಂಗಿಯಾದ ಸುಭದ್ರೆಯ, ಪ್ರಿಯಕಾಮ್ಯಯಾಚ - ಇಷ್ಟವನ್ನು ನೆರವೇರಿಸುವುದಕ್ಕೂ, ಹಾಸ್ತಿನಪುರೇ-ಹಸ್ತಿನಾವತಿಯಲ್ಲಿ, ಕತಿಪಯಾನ್-ಕೆಲವು, ಮಾಸಾನ್-ತಿಂಗಳು, ಉಷಿತ್ವಾ-ವಾಸಮಾಡಿ ॥ ೭ ॥ ತಂ - ಆಥರ್ವಣ

ದಿಂದ ಚತುಸ್ಸಮುದ್ರಮುದ್ರಿತವಾದ ಭೂಮಂಡಲವನ್ನು ಪಾಲಿಸುತ್ತಿದ್ದನು. ॥೩॥ ಇಂತು ಆಥರ್ವಣರಾಜನು ರಾಜ್ಯಭಾರಂ ಗೈಯುತ್ತಿರುವಾಗ, ಪರ್ಜನ್ಯನು ಕಾಲಕ್ಕೆ ಸರಿಯಾಗಿ ಮಳೆಗರೆಯುತ್ತಿದ್ದನು. ಭೂಮಿಯು ಇಷ್ಟಾನುಸಾರವಾಗಿ ಸಕಲಧಾನ್ಯಗಳನ್ನೂ ಫಲಿಸುತ್ತಿದ್ದಿತು. ಆಕಳುಗಳು ಕೆಚ್ಚಲಲ್ಲಿ ಹಾಲು ಹಿಡಿಸಲಾರದೆ ದೊಡ್ಡಿಗಳ ನೆಲದಲ್ಲಿ ಹಾಲನ್ನು ಸುರಿಸುತ್ತಿದ್ದವು. ॥ ೪ ॥ ಆತನ ದೇಶದಲ್ಲಿ ನದಿಗಳು ಯಾವಾಗಲೂ ತುಂಬಿ ಹರಿಯುತ್ತಿದ್ದವು. ಸಮುದ್ರಗಳು ಎಲ್ಲಕಡೆಗಳಲ್ಲಿಯೂ ರತ್ನಾಕರಗಳೇ ಆಗಿದ್ದವು. ಗಿಡಬಳ್ಳಿಗಳಿಂದ ಕೂಡಿದ ಬೆಟ್ಟಗಳು ಧಾತುಗಳಿಂದ ಹೆಸರುಗೊಂಡಿದ್ದವು ಪೈರು ಪಚ್ಚೆಗಳು ತಂತಮ್ಮ ಕಾಲಕ್ಕೆ ಸರಿಯಾಗಿ ವಿಶೇಷವಾಗಿ ಫಲಿಸುತ್ತಿದ್ದವು. ॥ ೫ ॥ ಅಲ್ಲದೆ ಆತನ ರಾಜ್ಯದಲ್ಲಿ ಆಧ್ಯಾತ್ಮಿಕಾದಿ ತಾಪತ್ರಯಗಳಿಲ್ಲ. ರೋಗ ರುಜಿನಗಳಿಲ್ಲ. ಇತರ ದುಃಖಗಳಿಲ್ಲ. ಎಲ್ಲರೂಪರಮಾನಂದಭರಿತರಾಗಿದ್ದರು ॥ ೬ ॥

ಇಂತಿರಲು, ಆ ಶ್ರೀಕೃಷ್ಣಮೂರ್ತಿಯು, ತನಗೆ ಪರಮಮಿತ್ರರಾದ ಪಾಂಡವರ ದುಃಖಗಳನ್ನಾರಿಸಿ, ಸಂತೈಸುವುದಕ್ಕಾಗಿಯೂ, ತಂಗಿಯಾದ ಸುಭದ್ರಾದೇವಿಯ ಕೋರಿಕೆಯನ್ನು ನೆರವೇರಿಸುವುದಕ್ಕಾಗಿಯೂ, ಕೆಲವು ತಿಂಗಳವರೆಗೂ ಹಸ್ತಿನಾವತಿಯಲ್ಲಿ

ತ್ಯ್ರಚಾಭ್ಯನುಜ್ಞಾತಃ ಪರಿಷ್ವಜ್ಯಾಭಿವಂದ್ಯ ತಂ । ಆರುರೋಹ ರಥಂ ಕೈಶ್ಚಿತ್ ಪರಿಷ್ವಕ್ತೋಽಭಿವಾದಿತಃ ॥ ೮ ॥ ಸುಭದ್ರಾ ದ್ರೌಪದೀ ಕುಂತೀ 1 ವಿರಾಟತನಯಾ ತಥಾ । ಗಾಂಧಾರೀ ಧೃತರಾಷ್ಟ್ರಶ್ಚ 2 ಯುಯುತ್ಸು 3 ರ್ಗೌತಮೋ 4 ಯಮೌ ॥ ೯ ॥ 5 † ವೃಕೋದರಶ್ಚ ಧೌಮ್ಯಶ್ಚ ಸ್ತ್ರಿಯೋ 6 ಮತ್ಸ್ಯಸುತಾದಯಃ । ನಸೇಹಿರೇ ವಿಮುಹ್ಯಂತೋ ವಿರಹಂ ಶಾರ್ಙ್ಗಧನ್ವನಃ ॥ ೧೦ ॥ ಸತ್ಸಂಗಾನ್ಮುಕ್ತದುಸ್ಸಂಗೋ ಹಾತುಂ ನೋತ್ಸಹತೇ ಬುಧಃ । ಕೀರ್ತ್ಯಮಾನಂ ಯಶೋ ಯಸ್ಯ ಸಕೃದಾಕರ್ಣ್ಯ ರೋಚನಂ ॥ ೧೧ ॥ ದರ್ಶನ ಸ್ಪರ್ಶನಾಲಾಪಶಯನಾಸನ ಭೋ

ರಾಜನನ್ನು, ಅಭಿವಾದ್ಯ-ನಮಸ್ಕರಿಸಿ, ಆಮಂತ್ರ್ಯ-ಹೋಗಿಬರುವೆನೆಂದು ಹೇಳಿ, ಆತನಿಂದ, ಪರಿಷ್ವಜ್ಯ-ಆಲಿಂಗಿಸಿ, ಅಭ್ಯನುಜ್ಞಾತಃ-ಅಪ್ಪಣೆಯನ್ನು ಪಡೆದು, ಕೈಶ್ಚಿತ್-ಕೆಲವರಿಂದ, ಪರಿಷ್ವಕ್ತಃ-ಆಲಿಂಗಿಸಲ್ಪಟ್ಟವನಾಗಿ, ಕೈಶ್ಚಿತ್-ಕೆಲವರಿಂದ, ಅಭಿವಾದಿತಃ - ನಮಸ್ಕರಿಸಲ್ಪಟ್ಟವನಾಗಿ, ರಥಂ-ತೇರನ್ನು, ಆರುರೋಹ-ಹತ್ತಿದನು ॥ ೮ ॥ ಸುಭದ್ರೆ, ದ್ರೌಪದಿ, ಕುಂತಿ, 1 ವಿರಾಟರಾಜನಮಗಳಾದ ಉತ್ತರೆ, ಗಾಂಧಾರಿ, ಧೃತರಾಷ್ಟ್ರ 2 ಧೃತರಾಷ್ಟ್ರನಿಂದವೈಶ್ಯಸ್ತ್ರೀಯಲ್ಲಿ ಹುಟ್ಟಿದ, "ಯುಯುತ್ಸು" 3 ಗೌತಮಿಯಮಗನಾದ ದ್ರೋಣಾಚಾರ್ಯ 4 ಜವಳಿಮಕ್ಕಳಾದ ನಕುಲ ಸಹದೇವರು 5 ಭೀಮನು ಧೌಮ್ಯನು, 6 ಸತ್ಯವತಿ, ಮೊದಲಾದ ಸ್ತ್ರೀಯರು, ಇವರು ವಿಮುಹ್ಯಂತಃ - ಮೋಹಗೊಂಡವರಾಗಿ, ಶಾರ್ಙ್ಗಧನ್ವನಃ-ಕೃಷ್ಣನ, ವಿರಹಂ-ಅಗಲಿಕೆಯನ್ನು, ನಸೇಹಿರೇ-ಸ್ವೈರಿಸಲಿಲ್ಲ ॥ ೯-೧೦ ॥ ಸತ್ಸಂಗಾತ್-ಸಾಧುಗಳಸಂಗದಿಂದ, ಮುಕ್ತದುಸ್ಸಂಗಃ, ಮುಕ್ತ-ಬಿಡಲ್ಪಟ್ಟ, ದುಸ್ಸಂಗಃ-ದುಸ್ಸಹವಾಸವುಳ್ಳ, ಬುಧಃ-ವಿವೇಕಿಯು, ಯಸ್ಯ-ಯಾವಭಗವಂತನ, ಕೀರ್ತ್ಯಮಾನಂ-ಹೊಗಳಲ್ಪಡುವ, ರೋಚನಂ-ರುಚಿಕರವಾದ, ಯಶಃ-ಯಶಸ್ಸನ್ನು, ಸಕೃತ್-ಒಂದಾವರ್ತಿ, ಆಕರ್ಣ್ಯ-ಕೇಳಿ, ಹಾತುಂ-ಬಿಡುವುದಕ್ಕೆ, ನೋತ್ಸಹತೇ-ಸಮ್ಮತಿಸುವುದಿಲ್ಲವೋ ॥೧೧॥ ತಸ್ಮಿನ್-ಅಂತಹ ಕೃಷ್ಣನಲ್ಲಿ, ದರ್ಶನ...ನ್ನೈಃ, ದರ್ಶನ-ಕಾಣುವುದು, ಸ್ಪರ್ಶನ-ತೊಡುವುದು, ಆಲಾಪ-ಮಾತನಾಡುವುದು, ಶಯನ-ಮಲಗುವುದು, ಆಸನ - ಕುಳಿತುಕೊಳ್ಳುವುದು,

---

ನೆಲಸಿದ್ದು, ಬಳಿಕ ಧರ್ಮರಾಜನನ್ನು ಸಮ್ಮತಿಗೊಳಿಸಿ, ವಂದಿಸಿ, ಆತನಿಂದ ಆಲಿಂಗನ ಪೂರ್ವಕವಾಗಿ ಆಣತಿಯಂ ಪಡೆದು, ಕೆಲವರಿಂದಾಲಿಂಗಿತನಾಗಿ, ಕೆಲವರನ್ನು ವಂದಿಸಿ, ಕೆಲವರಿಂ ವಂದನೆಯನ್ನು ಕೈಕೊಂಡು, ದ್ವಾರಕಾಪ್ರಯಾಣೋನ್ಮುಖನಾಗಿ, ರಥದಲ್ಲಿ ಕುಳಿತುಕೊಂಡನು ॥ ೮ ॥ ಆಗ ಸುಭದ್ರೆ, ದ್ರೌಪದಿ, ಕುಂತಿ, ಉತ್ತರೆ, ಗಾಂಧಾರಿ, ಧೃತರಾಷ್ಟ್ರ, ಯುಯುತ್ಸು, ಕೃಪಾಚಾರ್ಯ, ನಕುಲಸಹದೇವರು, ಭೀಮ, ಧೌಮ್ಯ, ಇವರೂ, ಇನ್ನೂ ಸತ್ಯವತಿಯೇ ಮೊದಲಾದ ಸ್ತ್ರೀಯರೂ ಸಹ ಆ ಕೃಷ್ಣಮೂರ್ತಿಯ ಅಗಲಿಕೆಯನ್ನು ಸಹಿಸಲಾರದೆ ಅತ್ಯಂತ ದುಃಖಿತರಾದರು ॥ ೯-೧೦ ॥ ಲೋಕದಲ್ಲಿ ಮಹಾತ್ಮರಿಂದ ಹೊಗಳಲ್ಪಟ್ಟ ಯಾವ ಭಗವಂತನ ರುಚಿಕರವಾದ ದಿವ್ಯಚರಿತ್ರವನ್ನು ಒಂದಾವರ್ತಿ ಕೇಳಿದವನು ಕೂಡಾ ದುಸ್ಸಂಗವನ್ನು ತ್ಯಜಿಸಿ, ಸತ್ಸಂಗವನ್ನು ಬಯಸುವನೋ, ಅಂತಹ ಶ್ರೀಕೃಷ್ಣಮೂರ್ತಿಯೊಡನೆ ಹಗಲಿರುಳೂ, ನೋಡುತ್ತಾ, ಕೂಡುತ್ತಾ,

ಜನ್ಯೈಃ । ತಸ್ಮಿನ್ ನ್ಯಸ್ತಧಿಯಃ ಪಾರ್ಥಾಃ ಸಹೇರನ್ ವಿರಹಂ ಕಥಂ ॥೧೨॥ ಸರ್ವೇ ತೇಽನಿಮಿಷೈ ರ್ನೇತ್ರೈ ಸ್ತಮನುದ್ರುತಚೇತಸಃ । ವೀಕ್ಷಂತ ಸ್ನೇಹಸಂಬದ್ಧಾ ವಿಚೇಲು ಸ್ತತ್ರ ತತ್ರಹ ॥ ೧೩ ॥ ನ್ಯರುಂಧನ್ನುದ್ಗಲ ದ್ಬಾಷ್ಪ ಮೌತ್ಕಂಠ್ಯಾ ದ್ದೇವಕೀಸುತೇ । ನಿರ್ಯಾ ತ್ಯಗಾರಾ ನ್ನೋಽಭದ್ರ ಮಿತಿ ಸ್ಯಾ ದ್ಬಾಂಧವಸ್ತ್ರಿಯಃ ॥೧೪॥ ಮೃದಂಗ ಶಂಖ ಭೇರ್ಯಶ್ಚ ವೀಣಾ ಪಣವ ಗೋಮುಖಾಃ । ಧುಂಧುರ್ಯಾನಕ ಘಂಟಾದ್ಯಾ ನೇದು ರ್ದುಂದುಭಯ ಸ್ತದಾ ॥ ೧೫ ॥ ಪ್ರಾಸಾದಶಿಖರಾರೂಢಾಃ ಕುರುನಾರ್ಯೋ ದಿದೃಕ್ಷಯಾ । ವವೃಷುಃ ಕುಸುಮೈಃ ಕೃಷ್ಣಂ ಪ್ರೇಮವ್ರೀಡಾ

ಭೋಜನೈಃ-ಊಟಮಾಡುವುದು ಇವುಗಳಿಂದ, ನ್ಯಸ್ತಧಿಯಃ-ಮನಸ್ಸನ್ನಿಟ್ಟಿರುವ, ಪಾರ್ಥಾಃ-ಪಾಂಡವರು, ವಿರಹಂ-ವಿಯೋಗವನ್ನು, ಕಥಂ - ಹೇಗೆತಾನೆ, ಸಹೇರನ್ - ಸಹಿಸುವರು ॥ ೧೨ ॥ ಸ್ನೇಹಸಂಬದ್ಧಾಃ, ಸ್ನೇಹ-ಪ್ರೀತಿಯಿಂದ, ಸಂಬದ್ಧಾಃ-ಚೆನ್ನಾಗಿ ಬದ್ಧರಾಗಿರುವುದರಿಂದಲೇ, ತಂ-ಶ್ರೀಕೃಷ್ಣನನ್ನು, ಅನುದ್ರುತಚೇತಸಃ, ಅನುದ್ರುತ-ಅನುಸರಿಸಿರುವ, ಚೇತಸಃ-ಮನಸ್ಸುಳ್ಳ, ತೇಸರ್ವೇ-ಆಪಾಂಡವಾದಿಗಳೆಲ್ಲರೂ, ಅನಿಮಿಷೈಃ-ರೆಪ್ಪೆಹಾಕದ, ನೇತ್ರೈಃ-ಕಣ್ಣುಗಳಿಂದ, ವೀಕ್ಷಂತಃ - ನೋಡುತ್ತಾ, ತತ್ರತತ್ರ - ಅಲ್ಲಲ್ಲಿ, ವಿಚೇಲುಃ-ಓಡಾಡಿದರು ॥ ೧೩ ॥ ದೇವಕೀಸುತೇ-ದೇವಕೀಪುತ್ರನಾದ ಕೃಷ್ಣನು, ಅಗಾರಾತ್ - ಅರಮನೆಯಿಂದ, ನಿರ್ಯಾತಿಸತಿ-ಹೊರಡಲು, ಬಾಂಧವಸ್ತ್ರಿಯಃ-ಬಂಧುಗಳಾದಸ್ತ್ರೀಯರು, ಅಭದ್ರಂ-ಅಮಂಗಲವು, ನೋಸ್ಯಾತ್-ಆಗಬಾರದು, ಇತಿ-ಹೀಗೆಂದು, ಔತ್ಕಂಠ್ಯಾತ್ - ತವಕದಿಂದ ಉದ್ಗಲತ್-ಉರುಳುತ್ತಿರುವ, ಬಾಷ್ಪಂ-ಕಂಬನಿಗಳನ್ನು, ನ್ಯರುಂಧನ್-ತಡೆದರು ॥೧೪॥ ತದಾ-ಆಗ, ಮೃದಂಗ... ಭೇರ್ಯಶ್ಚ, ಮೃದಂಗ-ಮದ್ದಳೆ, ಶಂಖ-ಶಂಖವು,ಭೇರ್ಯಶ್ಚ-ನಗಾರಿಯು, ವೀಣಾ-ವೀಣೆಯು, ಪಣವ-ದೋಲು, ಗೋಮುಖ-ಕಹಳೆ, ಧುಂಧುರೀ-ಝಲ್ಲರಿಯು, ಆನಕ - ತಮಟೆ, ಘಂಟಾ - ಗಂಟೆ, ಆದ್ಯಾಃ-ಇವೇಮೊದಲಾದವುಗಳೂ, ದುಂದುಭಯಶ್ಚ-ಭೇರಿಗಳೂ, ನೇದುಃ-ಮೊಳಗಿದವು ॥೧೫॥ ದಿದೃಕ್ಷಯಾ-

---

ಮಾತನಾಡುತ್ತಾ, ಮಲಗುತ್ತಾ, ನೆಲಸುತ್ತಾ ಆತನಲ್ಲಿಯೇ ಮನಸ್ಸನ್ನಿಟ್ಟಿರುವ ಪಾಂಡವರು ಭಗವಂತನಗಲಿಕೆಯನ್ನೆಂತು ಸೈರಿಸುವರು ? ॥ ೧೧-೧೨ ॥ ಇಂತು ಆ ಕೃಷ್ಣನಲ್ಲಿ ಅತಿಸ್ನೇಹವನ್ನು ಮಾಡಿರುವುದರಿಂದಲೇ ಮನಸ್ಸೆಲ್ಲವನ್ನೂ ಆತನಿಗೊಪ್ಪಿಸಿರುವ ಪಾಂಡವಾದಿಗಳು, ಕಣ್ಣು ಮುಚ್ಚದೇ ಆತನನ್ನೇ ನೋಡುತ್ತಾ ಎಲ್ಲರೂ ಕಾಣಿಕೆಗಳನ್ನೊಪ್ಪಿಸಿ, ಹಿಂಬಾಲಿಸಿದರು ॥ ೧೩ ॥ ದೇವಕೀದೇವಿಯ ಕುಮಾರನಾದ ವಾಸುದೇವಮೂರ್ತಿಯು ಅರಮನೆಯಿಂದ ಪ್ರಯಾಣಮಾಡಿ ಹೊರಡಲು, ನಂಟರಿಷ್ಟರಾದ ಸ್ತ್ರೀಯರೆಲ್ಲರೂ, ಕಳವಳದಿಂದ ಕಣ್ಣುಗಳಲ್ಲಿ ಕಂಬನಿಗಳುಕ್ಕಿ ಬರುತ್ತಿದ್ದರೂ, ಅಮಂಗಳವಾಗಬಾರದೆಂದು ಹೊರಗುರುಳದಂತೆ ತಡೆದರು ॥ ೧೪ ॥ ಆಗ ಪ್ರಯಾಣಸೂಚಕಗಳಾದ, ಮದ್ದಳೆ, ಶಂಖ, ಭೇರೀವಾದ್ಯಗಳು, ವೀಣೆ, ದೋಳು, ಕಾಳೆ, ಝಲ್ಲರಿ, ತಮಟೆ, ಗಂಟೆ, ಈವಾದ್ಯಗಳೂ, ತತೂರಿ, ದುಂದುಭಿವಾದ್ಯಗಳೂ, ಬಂದೇಕಾಲದಲ್ಲಿ ಮೊಳಗಿದವು ॥ ೧೫ ॥

ಇಂತು ಪ್ರಯಾಣಮಾಡುತ್ತಿರುವ ಶ್ರೀಕೃಷ್ಣಮೂರ್ತಿಯನ್ನು ನೋಡಬೇಕೆಂದು

ಸ್ಮಿತೇಕ್ಷಣಾಃ ॥ ೧೬ ॥ ಸಿತಾತಪತ್ರಂ ಜಗ್ರಾಹ ಮುಕ್ತಾದಾಮವಿಭೂ
ಷಿತಂ । ರತ್ನದಂಡಂ * ಗುಡಾಕೇಶಃ ಪ್ರಿಯಃ ಪ್ರಿಯತಮಸ್ಯಹ ॥ ೧೭ ॥
ಉದ್ಧವ ಸ್ಸಾತ್ಯಕಿಶ್ಚೈವ ವ್ಯಜನೇ ಪರಮಾದ್ಭುತೇ । ವಿಕೀರ್ಯಮಾಣಃ
ಕುಸುಮೈ ರೇಜೇ ಮಧುಪತಿಃ ಪಥಿ ॥೧೮॥ ಅಶ್ರೂಯಂತಾ ಶಿಷ ಸ್ಸತ್ಯಾ
ಸ್ತತ್ರ ತತ್ರ ದ್ವಿಜೇರಿತಾಃ । ನಾನುರೂಪಾನು ರೂಪಾಶ್ಚ † ನಿರ್ಗುಣಸ್ಯ

ನೋಡಬೇಕೆಂಬಾಸೆಯಿಂದ, ಪ್ರಾಸಾದ...ಢಾಃ, ಪ್ರಾಸಾದ - ಉಪ್ಪರಿಗೆಗಳ, ಶಿಖರ - ಮೇಲ್ಗಡೆಯನ್ನು, ಆರೂಢಾಃ-ಹತ್ತಿದ, ಕುರು.ನಾರ್ಯಃ-ಕುರುಸ್ತ್ರೀಯರು, ಪ್ರೇಮ...ಣಾಃ, ಪ್ರೇಮ-ಪ್ರೀತಿಯಿಂದಲೂ, ವ್ರೀಡಾ-ನಾಚಿಕೆಯಿಂದಲೂ, ಸ್ಮಿತ-ಮಂದಹಾಸದಿಂದಲೂ, ಕೂಡಿರುವ, ಈಕ್ಷಣಾಃ-ನೋಟವುಳ್ಳವರಾಗಿ, ಕೃಷ್ಣಂ-ಕೃಷ್ಣನನ್ನು, ಕುಸುಮೈಃ-ಹೂಗಳಿಂದ, ವವೃಷುಃ-ಮಳೆಗರೆದರು ॥ ೧೬ ॥ ಗುಡಾಕೇಶಃ-ಗುಡಾಕಾ-ನಿದ್ದೆಗೆ, ಅಥವಾ ಧನುರ್ವಿದ್ಯೆಗೆ, ಈಶಃ-ಒಡೆಯನಾದ, ಪ್ರಿಯಃ - ಪ್ರೀತಿಪಾತ್ರನಾದ, ಅರ್ಜುನನನ್ನು, ಪ್ರಿಯತಮಸ್ಯ - ಅತ್ಯಂತಪ್ರಿಯನಾದ ಕೃಷ್ಣನಿಗೆ, ರತ್ನದಂಡಂ - ರತ್ನಮಯವಾದ ದಂಡವುಳ್ಳ, ಮುಕ್ತಾ......ತಂ, ಮುಕ್ತಾ - ಮುತ್ತುಗಳ, ದಾಮ - ಸರಗಳಿಂದ, ವಿಭೂಷಿತಂ - ಅಲಂಕರಿಸಲ್ಪಟ್ಟ, ಸಿತಾತಪತ್ರಂ-ಬೆಳುಗೊಡೆಯನ್ನು, ಜಗ್ರಾಹ - ಹಿಡಿದನು ॥ ೧೭ ॥ ಉದ್ಧವಃ - ಉದ್ಧವನು, ಸಾತ್ಯಕೀ-ಸಾತ್ಯಕಿಯು, ಪರಮಾದ್ಭುತೇ-ಅತ್ಯಾಶ್ಚರ್ಯಕರಗಳಾದ, ವ್ಯಜನೇ - ಚಾಮರಗಳನ್ನು, ಬೀಸಿದರು, ಮಧುಪತಿಃ-ಕೃಷ್ಣನು, ಪಥಿ-ದಾರಿಯಲ್ಲಿ, ಕುಸುಮೈಃ-ಹೂಗಳಿಂದ, ವಿಕೀರ್ಯಮಾಣಃ-ಎರಚಲ್ಪಟ್ಟವನಾಗಿ, ರೇಜೇ-ಪ್ರಕಾಶಿಸಿದನು ॥ ೧೮ ॥

ನಿರ್ಗುಣಸ್ಯ - ಗುಣರಹಿತನೂ, ಗುಣಾತ್ಮನಃ - ಗುಣಶಾಲಿಯೂ ಆಗಿರುವ ಕೃಷ್ಣನಿಗೆ, ನಾನುರೂಪಾನುರೂಪಾಶ್ಚ - ಸರಿಯಲ್ಲದೆಯೂ, ಸರಿಯಾಗಿಯೂಇರುವ, ತತ್ರತತ್ರ - ಅಲ್ಲಲ್ಲಿ, ದ್ವಿಜೇರಿತಾಃ-ಬ್ರಾಹ್ಮಣರಿಂದ ಹೇಳಲ್ಪಟ್ಟ, ಸತ್ಯಾಃ-ಯಥಾರ್ಥಗಳಾದ, ಆಶಿಷಃ - ಆಶೀರ್ವಾದಗಳು, ಅಶ್ರೂಯಂತ-

ಆ ರಾಜಸ್ತ್ರೀಯರೆಲ್ಲರೂ ಮೇಲ್ಮಹಡಿಗಳನ್ನೇರಿ, ಪ್ರೀತಿಯಿಂದಲೂ, ನಾಚಿಕೆಯಿಂದಲೂ, ಮುಗುಳ್ನಗೆಯಿಂದಲೂ, ಕೂಡಿರುವ ಸವಿನೋಟಗಳನ್ನು ಬೀರುತ್ತಾ, ಶ್ರೀಕೃಷ್ಣನ ಮೇಲೆ ಮಗಮಗಿಸುತ್ತಿರುವ ಹೂಗಳನ್ನು ಮಳೆಗರೆದರು ॥ ೧೬ ॥ ಆಗ ಅರ್ಜುನನು ಶ್ರೀಕೃಷ್ಣನಿಗೆ ಪ್ರಿಯಮಿತ್ರನಾದುದರಿಂದ, ರತ್ನದಂಡದಿಂದಲೂ, ಮುತ್ತಿನ ಸರಗಳಿಂದಲೂ, ಜಗಜಗಿಸುತ್ತಿರುವ ಬಿಳೀ ಸತ್ತಿಗೆಯನ್ನೆತ್ತಿ ಹಿಡಿದನು ॥ ೧೭ ॥ ಉದ್ಧವನು, ಸಾತ್ಯಕಿಯು ಇವರಿಬ್ಬರೂ ಅತ್ಯಾಶ್ಚರ್ಯಕರಗಳಾದ ಎರಡು ಚಾಮರಗಳನ್ನು ಹಿಡಿದು ಬೀಸುತ್ತಾ ಬಂದರು, ಇಂತುಪಚಾರಗಳನ್ನು ಕೈಕೊಂಡು, ದಾರಿಯಲ್ಲಿ ಪುರಜನಗಳಿಂದ ಎರಚಲ್ಪಟ್ಟ ಪುಷ್ಪಗಳಿಂದ ಪ್ರಕಾಶಿಸುತ್ತಾ ಹೊರಟನು ॥ ೧೮ ॥ ಮತ್ತು ನಿರ್ಗುಣನಾದದರಿಂದ ಅನನುರೂಪಗಳಾಗಿಯೂ, ಮನುಷ್ಯಾವತಾರವನ್ನು ಪಡೆದು ಗುಣಪೂರ್ಣನೆನಿಸಿರುವುದರಿಂದ ಅನುರೂಪಗಳಾಗಿಯೂ, ಅಲ್ಲಲ್ಲಿ ಬ್ರಾಹ್ಮಣೋತ್ತಮರಿಂದ ಹೇಳಲ್ಪಡು

* ಅರ್ಜುನನು ಇಂದ್ರಕೀಲಪರ್ವತದಲ್ಲಿ ಪಾಶುಪತಾಸ್ತ್ರವನ್ನು ಸಂಪಾದಿಸುವುದಕ್ಕಾಗಿ ನಿದ್ದೆಯನ್ನು ಬಿಟ್ಟದ್ದು ದರಿಂದೀಹೆಸರು ಬಂದಿತು. † ವೀ. ಪ್ರಕೃತಿಸಂಬಂಧಿಗಳಾದ ಸತ್ವಾದಿಗುಣಗಳಿಲ್ಲದವನು

ಗುಣಾತ್ಮನಃ ॥ ೧೯ ॥ ಅನ್ಯೋನ್ಯ ಮಾಸೀತ್ಸಂಜಲ್ಪ ಉತ್ತಮಶ್ಲೋಕ
ಚೇತಸಾಂ । ಕೌರವೇಂದ್ರ ಪುರಸ್ತ್ರೀಣಾಂ ಸರ್ವಶ್ರುತಿ ಮನೋಹರಃ ॥
* ಸವೈ ಕಿಲಾಯಂ ಪುರುಷಃ ಪುರಾತನೋ ಯ ಏಕ ಆಸೀ ದವಿಶೇಷ
ಆತ್ಮನಿ । ಅಗ್ರೇ ಗುಣೇಭ್ಯೋ ಜಗದಾತ್ಮ ನೀಶ್ವರೇ * ನಿಮೀಲಿತಾತ್ಮನ್ನಿಶಿ

ಕೇಳಲ್ಪಟ್ಟವು ॥ ೧೯ ॥ ಉತ್ತಮ...ಸಾಂ, ಉತ್ತಮಶ್ಲೋಕ-ಉತ್ತಮರಿಂದಹೊಗಳಲ್ಪಡುವ ಕೃಷ್ಣ ನಲ್ಲಿ, ಚೇತಸಾಂ-ಮನಸ್ಸುಳ್ಳ, ಕೌರವೇಂದ್ರ...ಣಾಂ, ಕೌರವೇಂದ್ರ - ಧರ್ಮರಾಜನ, ಪುರ - ಪಟ್ಟಣ ದಲ್ಲಿರುವ, ಸ್ತ್ರೀಣಾಂ-ಸ್ತ್ರೀಯರೊಳಗೆ, ಅನ್ಯೋನ್ಯಂ-ಪರಸ್ಪರವಾಗಿ, ಸರ್ವ...ರಃ, ಸರ್ವ-ಎಲ್ಲರ, ಶ್ರುತಿ-ಕಿವಿಗಳನ್ನು, ಮನಃ-ಮನಸ್ಸುಗಳನ್ನೂ, ಹರಃ - ಅಪಹರಿಸುವ, ಸಂಜಲ್ಪಃ - ಸಂಭಾಷಣೆಯು, ಆಸೀತ್-ಉಂಟಾಯಿತು ॥ ೨೦ ॥ ಗುಣೇಭ್ಯಃ-ಗುಣಗಳ ಕ್ಷೋಭೆಯಿಂದುಂಟಾದ ಜಗತ್ಸೃಷ್ಟಿಗಿಂತ, ಅಗ್ರೇ-ಮೊದಲಲ್ಲಿಯೂ, ನಿಶಿ-ಪ್ರಳಯದಲ್ಲಿಯೂ, ಈಶ್ವರೇ-ಪರಮಾತ್ಮನಲ್ಲಿ, ಜಗದಾತ್ಮನಿ - ಜಗತ್ತುಗಳಿಗೆ ಆತ್ಮರಾಗಿರುವ, ಜೀವರು, ನಿಮೀಲಿತಾತ್ಮನ್-ನಿಮೀಲಿತ-ಲೀನವಾದ, ಆತ್ಮನ್-ಸ್ವರೂಪವುಳ್ಳವರಾಗಲು, ಸುಪ್ತಶಕ್ತಿಷು-ಜೀವನಿಗೆ ಉಪಾಧಿಗಳಾದ, ಅಂತಃಕರಣಾದಿಗಳು ಲೀನಗಳಾಗಲು, ಯಃ ಯಾವನು,

ತ್ತಿರುವ ಯಥಾರ್ಥಗಳಾದ ಆಶೀರ್ವಚನಗಳೂ ಕೇಳಲ್ಪಟ್ಟವು ॥ ೧೯ ॥ ಆಕಾಲದಲ್ಲಿಪುಣ್ಯಶ್ಲೋಕನಾದ ಶ್ರೀಕೃಷ್ಣನಲ್ಲಿಯೇಮನಸ್ಸನ್ನಿಟ್ಟಿರುವ ಹಸ್ತಿನಾವತಿಯ ಸ್ತ್ರೀಯರೆಲ್ಲರೂ ಗುಂಪುಗುಂಪಾಗಿ ನೆರೆದು ಕೇಳುವವರಿಗೆ ಇಂಪಾಗಿರುವಂತೆ ಒಬ್ಬರಿಗೊಬ್ಬರು ಮಾತನಾಡುತ್ತಾ, ಆಕೃಷ್ಣನಪ್ರಭಾವ ಸೌಂದರ್ಯಾದಿಗಳನ್ನು ಕಂಡು ಆಚ್ಚರಿಗೊಂಡಿರುವ ತಮ್ಮ ಸಖಿಯರನ್ನುಕುರಿತು ಹೇಳುತ್ತಾರೆ:-ಅಮ್ಮಾ ಸಖಿಯರಿರಾ! ಈತನು ಸಾಕ್ಷಾದ್ಭಗವಂತನಾಗಿರುವುದರಿಂದ ಇದೇನಾಶ್ಚರ್ಯವಲ್ಲ ॥೨೦॥ ಸತ್ವರಜಸ್ತಮೋಗುಣಗಳ ಬದಲಾವಣೆಯಿಂದುಂಟಾದ ಪ್ರಪಂಚಸೃಷ್ಟಿಗಿಂತ ಪೂರ್ವದಲ್ಲಿಯೂ, ಮಹಾಪ್ರಳಯದಲ್ಲಿಯೂ,ಜಗತ್ತಿಗೆ ಆತ್ಮರಾಗಿರುವ ಜೀವರೂ,ಆಜೀವರಿಗುಪಾಧಿಗಳಾದ ಸತ್ವಾದಿಮೊದಲಾದ

* ೧ ವಿ. ಈ ಪ್ರಪಂಚ ಸೃಷ್ಟಿಗೆ ಮೊದಲಲ್ಲಿಯೂ, ಕಡೆಯಲ್ಲಿಯೂ ಸಹ, ಕರ್ಮ ಶಕ್ತಿಗಳು ಯಾವನಲ್ಲಿ ಅಡಗಿರುವವೋ? ಸೂಕ್ಷ್ಮರೂಪಗಳಾದ ಜೀವಪ್ರಕೃತಿಗಳು, ಯಾವನಿಗೆ ಶರೀರವೆನಿಸುವವೋ, ಜಡಚೇತನ ಶರೀರವಿಭಾಗವಿಲ್ಲದುದರಿಂದ ಯಾವನು ಅದ್ವಿತೀಯನೋ, ಯಾವನೀಜಗತ್ತಿಗೆ ನಿಮಿತ್ತ ಕಾರಣ ಉಪಾದಾನ ಕಾರಣಗಳೆರಡೂ ಆಗಿರುವನೋ, ಅವನೇ ಈ ಕೃಷ್ಣಮೂರ್ತಿಯು

ಘಟವನ್ನು ಮಾಡುವುದಕ್ಕೆ ದಂಡನಿಮಿತ್ತಕಾರಣ (ಅಂದರೆ ಕೆಲಸವನ್ನು ನೆರವೇರಿಸುವ ಸಲಕರಣ) ಅದೇಘಟಕ್ಕೆ ಮಣ್ಣು ಉಪಾದಾನ ಕಾರಣ.ಅಂದರೆ ಕಾರ್ಯರೂಪವಾಗಿಯೇ ಬದಲಾಯಿಸಲ್ಪಡುವಕಾರಣ

೨ ವಿ. ಗುಣಗಳಿಂದ ಕರೆಯಲ್ಪಡುವ ಮಹದಾದಿ ಪ್ರಪಂಚದ ಆದ್ಯಂತಗಳೆರಡರಲ್ಲಿಯೂ ಸತ್ವ ದೇವತೆಯಾದ ಶ್ರೀದೇವಿಯು, ರಜೋದೇವತೆಯಾದ ಭೂದೇವಿಯು ತಮೋದೇವತೆಯಾದ ದುರ್ಗಾದೇವಿಯು ಇವರು ತಮ್ಮ ಸೃಷ್ಟ್ಯಾದಿ ವ್ಯಾಪಾರಗಳನ್ನು, ಬಿಟ್ಟು ಹರಿಯಲ್ಲಿ ಸೇರಲು ಯಾವಪರಮಾತ್ಮನು ಸ್ವರೂಪಾನಂದದಲ್ಲಿಮುಳುಗಿ ಗುಣರೂಪವಾದ ಪ್ರಕೃತಿಯಿಂದ, ಮರೆಗೊಳಿಸಲ್ಪಡುವನೋ ಆ ಪುರಾಣಪುರುಷನಾದ ವಿಷ್ಣುವೇ ಈ ಕೃಷ್ಣಮೂರ್ತಿಯು.

ಸುಪ್ತಶಕ್ತಿಷು ॥ ೨೧ ॥ ಸಏವ ಭೂಯೋ ನಿಜ ವೀರ್ಯಚೋದಿತಾಂ ಸ್ವ
ಜೀವಮಾಯಾಂ ಪ್ರಕೃತಿಂ ಸಿಸೃಕ್ಷತೀಂ । * ಅನಾಮರೂಪಾತ್ಮನಿ ರೂಪ
ನಾಮನೀ ವಿಧಿತ್ಸಮಾನೋ ನುಸಸಾರ ಶಾಸ್ತ್ರಕೃತ್ ॥ ೨೨ ॥ ಸವಾ
ಅಯಂ ಯತ್ಪದ ಮತ್ರ ಸೂರಯೋ ಜಿತೇಂದ್ರಿಯಾ ನಿರ್ಜಿತ ಮಾತರಿಶ್ವನಃ।
ಪಶ್ಯಂತಿ ಭಕ್ತ್ಯುತ್ಕಲಿತಾಮಲಾತ್ಮನಾ ‡ ನನ್ವೇಷ ಸತ್ವಂ ಪರಿಮಾರ್ಷ್ಟು

ಅವಿಶೇಷೇ-ನಿಷ್ಪ್ರಪಂಚವಾದ, ಆತ್ಮನಿ-ಸ್ವರೂಪದಲ್ಲಿ, ಏಕಃ-ಅದ್ವಿತೀಯನಾಗಿ, ಆಸೀತ್-ಇರುವನೋ, ಪುರಾತನಃಪುರುಷಃ-ಪುರಾಣಪುರುಷನಾದ, ಸವೈ-ಆಪರಮಾತ್ಮನೇ, ಅಯಂಕಿಲ-ಈಕೃಷ್ಣನಷ್ಟೆ ॥೨೧॥ ಶಾಸ್ತ್ರಕೃತ್, ಶಾಸ್ತ್ರ-ಕರ್ಮಕಾಂಡವನ್ನು ಬೋಧಿಸುವ ವೇದಗಳನ್ನು, ಕೃತ್ - ಪ್ರಕಾಶಮಾಡಿದ, ಯಃ-ಯಾವ ಪರಮಾತ್ಮನು, ಅನಾಮ...ನಿ. ಅನಾಮರೂಪ-ನಾಮರೂಪಗಳಿಲ್ಲದ, ಆತ್ಮನಿ-ಜೀವನಲ್ಲಿ, ರೂಪನಾಮನೀ-ರೂಪನಾಮಗಳನ್ನು, ವಿಧಿತ್ಸಮಾನಃ-ಉಂಟುಮಾಡಬೇಕೆಂದು ಬಯಸಿ, ನಿಜ...ತಾಂ, ನಿಜ-ತನ್ನ, ವೀರ್ಯ-ಕಾಲರೂಪವಾದ ಶಕ್ತಿಯಿಂದ, ಚೋದಿತಾಂ-ಪ್ರೇರಿಸಲ್ಪಟ್ಟ, ಸ್ವಜೀವಮಾಯಾಂ ಸ್ವ-ತನಗಂಶಭೂತರಾದ, ಜೀವ-ಜೀವರನ್ನು, ಮಾಯಾಂ - ಮೋಹಗೊಳಿಸುವುದಾದುದರಿಂದಲೇ, ಸಿಸೃಕ್ಷತೀಂ-ಸೃಷ್ಟಿಸಬೇಕೆಂದು ಬಯಸುತ್ತಿರುವ, ಪ್ರಕೃತಿಂ-ಮಾಯೆಯನ್ನು, ಭೂಯಃ - ತಿರಿಗಿ, ಅನುಸಸಾರ-ಆಶ್ರಯಿಸಿದನೋ, ಸಏವ-ಅತನೇ ಈಕೃಷ್ಣನು ॥೨೨॥ ಅತ್ರ-ಈಜಗತ್ತಿನಲ್ಲಿ, ಜಿತೇಂದ್ರಿಯಾಃ-ಇಂದ್ರಿಯಗಳನ್ನು ಜಯಿಸಿದ, ನಿರ್ಜಿತಮಾತರಿಶ್ವನಃ, ನಿರ್ಜಿತ-ಜಯಿಸಲ್ಪಟ್ಟ, ಮಾತರಿಶ್ವನಃ - ಪ್ರಾಣವಾಯುಗಳುಳ್ಳ, ಸೂರಯಃ-ಜ್ಞಾನಿಗಳು, ಭಕ್ತ್ಯು...ನಾ, ಭಕ್ತಿ-ಭಕ್ತಿಯಿಂದ, ಉತ್ಕಲಿತ-ತವಕಗೊಳಿ

ಶಕ್ತಿಗಳೂ ಕೂಡಾ ಪರಮಾತ್ಮನಲ್ಲಿ ಲೀನವಾಗಲು, ಯಾವಪುರಾಣಪುರುಷನು ನಿಷ್ಪ್ರಪಂಚವಾದ ಸ್ವರೂಪದಲ್ಲಿ ತನಗೆ ತಾನೇ ಅದ್ವಿತೀಯ್ಯನಾಗಿ ಬೆಳಗುವನೋ, ಆತನೇ ಈ ಕೃಷ್ಣನು ॥ ೨೧ ॥ ಇಂತು ಸೃಷ್ಟಿಗಿಂತ ಮೊದಲಲ್ಲಿಯೂ, ಸಹ್ಮಾರಕಾಲದಲ್ಲಿಯೂ ಪ್ರಪಂಚಸಂಬಂಧವಿಲ್ಲದಂತೆ ಅದ್ವಿತೀಯನಾಗಿರುವುದಲ್ಲದೆ, ಸೃಷ್ಟಿಕಾಲದಲ್ಲಿ ವೇದಪ್ರಕಾಶಕನಾದ ಯಾವಭಗವಂತನು, ನಾಮರೂಪಗಳನ್ನು ಬಿಟ್ಟು ತನ್ನಲ್ಲಿ ಅಡಗಿರುವ ಜೀವರಿಗೆ ನಾಮರೂಪಗಳನ್ನಿತ್ತು ಭೋಗಗೊಳಿಸುವುದಕ್ಕಾಗಿ, ಕಾಲರೂಪವಾದ ತನ್ನಶಕ್ತಿಯಿಂದೆಬ್ಬಿಸಲ್ಪಟ್ಟು, ತನ್ನ ಅಂಶಭೂತರಾದ ಜೀವರನ್ನು ಮರುಳುಮಾಡುವುದಾದುದರಿಂದಲೆ ಸೃಷ್ಟಿಸಬೇಕೆಂದು ಬಯಸುತ್ತಿರುವ ಮಾಯೆಯನ್ನು ಮರಳಿ ಹೊಕ್ಕನೋ, ಆತನೇ ಈ ಕೃಷ್ಣಮೂರ್ತಿಯು ॥೨೨॥ ಈ ಪ್ರಪಂಚದಲ್ಲಿ ಇಂದ್ರಿಯಗಳನ್ನಡಗಿಸಿ ಯೋಗಾಭ್ಯಾಸದಿಂದ ಪ್ರಾಣವಾಯುಗಳನ್ನು ನಿಗ್ರಹಿಸಿದ ಜ್ಞಾನಿಗಳೂ, ‡ ವೇದದಲ್ಲಿ ಹೇಳಿದಂತೆ ಭಕ್ತಿಯಿಂದ ಮನಸ್ಸನ್ನು ನಿರ್ಮಲಗೊಳಿಸಿಕೊಂಡು ಯಾವನಪಾದಾರವಿಂದವನ್ನು ಕಾಣುವರೋ, ಆ ಪರಮಾತ್ಮನೇ ಈ ಕೃಷ್ಣನು. ನಮ್ಮ ಬುದ್ಧಿಯನ್ನು ಶೋಧಿಸಿ ನಿರ್ಮಲ

* ವೀ:-ಗುಣಪೂರ್ಣನೂ ಪ್ರಾಕೃತರೂಪರಹಿತನೂ ಆದ ತನ್ನಲ್ಲಿ,

‡ ಶ್ರು. ದೃಶ್ಯತೇ ತ್ವಗ್ರ್ಯಯಾ ಬುಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ಪಾ. ನತ್ವೇಷಃ.

ಮರ್ಹತಿ ॥ ೨೩ ॥ ಸವಾ ಅಯಂ ಸಖ್ಯನುಗೀತ ಸತ್ಕಥೋ ವೇದೇಷು
ಗುಹ್ಯೇಷು ಚ ಗುಹ್ಯವಾದಿಭಿಃ । ಯ ಏಕ ಈಶೋ ಜಗದಾತ್ಮಲೀಲಯಾ
ಸೃಜತ್ಯವತ್ಯತ್ತಿ ನ ತತ್ರ ಸಜ್ಜತೇ ॥ ೨೪ ॥ ಯದಾ ಹ್ಯಧರ್ಮೇಣ ತಮೋ
ಧಿಯೋ ನೃಪಾ ಜೀವಂತಿ ತತ್ರೈಷಹಿ ಸತ್ವತಃ ಕಿಲ । ಧತ್ತೇ ಭಗಂ ಸತ್ಯ
ಮೃತಂ ದಯಾಂ ಯಶೋ ಭವಾಯ ರೂಪಾಣಿ ದಧದ್ಯುಗೇ ಯುಗೇ॥೨೫॥

ಸಲ್ಪಟ್ಟ, ಅಮಲ-ನಿರ್ಮಲವಾದ, ಆತ್ಮನಾ-ಬುದ್ಧಿಯಿಂದ, ಯತ್ಪದಂ-ಯಾವನಸ್ವರೂಪವನ್ನು ಅಥವಾ ಪಾದವನ್ನು, ಪಶ್ಯಂತಿ-ನೋಡುವರೋ, ಸವಾ-ಅವನೇ, ಅಯಂ-ಈಕೃಷ್ಣನು, ನನು-ಎಲೌಸಖಿಯೇ ! ಏಷಏವ-ಈತನೇ, ಸತ್ವಂ-ಬುದ್ಧಿಯನ್ನು ಪರಿಮಾಷ್ಟುರ್ಂ-ಶೋಧಿಸುವುದಕ್ಕೆ, ಅರ್ಹತಿ-ಯೋಗ್ಯನಾಗುತ್ತಾನೆ, ಅಥವಾ, ಏಷಃ-ಇವನು, ಸತ್ವಂ - ಜ್ಞಾನವನ್ನು, ಪರಿಮಾಷ್ಟುರ್ಂ - ಹೋಗಲಾಡಿಸುವುದಕ್ಕೆ, ನಾರ್ಹತಿ-ಯೋಗ್ಯನಾಗುವುದಿಲ್ಲ ॥ ೨೩ ॥ ಏಕಃ-ಅದ್ವಿತೀಯನಾಗಿಯೂ, ಈಶಃ-ನಿಯಾಮಕನಾಗಿಯೂ ಇರುವ ಭಗವಂತನು, ಆತ್ಮಲೀಲಯಾ, ಆತ್ಮ-ತನ್ನ, ಲೀಲಯಾ-ಲೀಲೆಯಿಂದ, ಜಗತ್ - ಜಗತ್ತನ್ನು, ಸೃಜತಿ-ಸೃಷ್ಟಿಸುತ್ತಾನೆ, ಅವತಿ - ರಕ್ಷಿಸುತ್ತಾನೆ, ಅತ್ತಿ - ನಾಶಗೊಳಿಸುತ್ತಾನೆ, ತತ್ರ - ಆಸೃಷ್ಟ್ಯಾದಿಗಳಲ್ಲಿ, ನಸಜ್ಜತೇ - ಸಂಬಂಧಿಸುವುದಿಲ್ಲ. ಹೀಗೆಂದು, ವೇದೇಷು - ವೇದಗಳಲ್ಲಿಯೂ, ಗುಹ್ಯೇಷು ಚ-ರಹಸ್ಯಶಾಸ್ತ್ರಗಳಲ್ಲಿಯೂ, ಗುಹ್ಯವಾದಿಭಿಃ - ಗುಟ್ಟನ್ನು ಬಲ್ಲವರಿಂದ, ಯಃ - ಯಾವನು, ಅನುಗೀತ ಸತ್ಕಥಃ, ಅನುಗೀತ - ಹೊಗಳಲ್ಪಟ್ಟ, ಸತ್ಕಥಃ-ಸಚ್ಚರಿತ್ರೆಯುಳ್ಳವನೋ, ಹೇಸಖಿ - ಯಲೌಸಖಿಯೇ ! ಸವಾ-ಅವನೇ ಅಯಂ ಈಕೃಷ್ಣನು ॥ ೨೪ ॥

ಯದಾಹಿ ಯಾವಾಗ, ತಮೋಧಿಯಃ ತಮಃ-ಅಜ್ಞಾನದಿಂದಕೂಡಿದ, ಧಿಯಃ-ಬುದ್ಧಿಯುಳ್ಳ, ನೃಪಾಃ-ರಾಜರು, ಅಧರ್ಮೇಣ-ಅಧರ್ಮದಿಂದ, ಜೀವಂತಿ-ಬದುಕುತ್ತಾರೋ, ತತ್ರ-ಆಗ, ಏಷಃಹಿ - ಈತನೇ, ಭವಾಯ-ಲೋಕಕ್ಷೇಮಕ್ಕಾಗಿ, ಯುಗೇಯುಗೇ - ಪ್ರತಿಯುಗದಲ್ಲಿಯೂ, ಸತ್ವೇನ - ಸತ್ವಗುಣದಿಂದ, ರೂಪಾಣಿ-ಅವತಾರಗಳನ್ನು, ದಧತ್-ಪಡೆದವನಾಗಿ, ಭಗಂ - ಐಶ್ವರ್ಯವನ್ನು, ಸತ್ಯಂ - ಸತ್ಯಸಂಧತೆಯನ್ನೂ, ಋತಂ-ಯಥಾರ್ಥೋಪದೇಶವನ್ನೂ, ದಯಾಂ-ಭಕ್ತರಲ್ಲಿ ಕನಿಕರವನ್ನು, ಯಶಃ - ಅದ್ಭುತ

ಗೊಳಿಸುವದಕ್ಕೀತನೇ ಅರ್ಹನಲ್ಲದೆ ಯೋಗಾದಿಗಳಲ್ಲ. ದೂರವಾಗಿಹೊರಟು ಹೋದರೂ ನಾವೀತನನ್ನುಹಿಂಬಾಲಿಸಬೇಕು॥೨೩॥ಅಮ್ಮಾ ಸಖಿ! "ಅದ್ವಿತೀಯನಾಗಿಯೂ, ಜಗನ್ನಿಯಾಮಕನಾಗಿಯೂ, ಇರುವ ಪರಮಾತ್ಮನು ಪ್ರಪಂಚರೂಪವಾದ ಲೀಲೆಗಾಗಿ ಈಜಗತ್ತನ್ನು ಹುಟ್ಟಿಸಿ, ಬೆಳೆಯಿಸಿ, ನಾಶಗೊಳಿಸಿದರೂ, ಅದರಲ್ಲಿ ತಾನು ಸೇರುವುದಿಲ್ಲ" ಎಂದು ವೇದಶಾಸ್ತ್ರಗಳ ರಹಸ್ಯಗಳನ್ನು ಬಲ್ಲ ಜ್ಞಾನಿಗಳಿಂದ ಯಾವನ ಸಚ್ಚರಿತ್ರೆಗಳು ಹೊಗಳಲ್ಪಡುವುವೋ, ಆಪರಮೇಶ್ವರನೇ ಈ ಕೃಷ್ಣಮೂರ್ತಿಯು ॥೨೪॥ ಪ್ರತಿಯುಗದಲ್ಲಿಯೂ ಯಾವಾಗ ರಾಜರು ಅವಿವೇಕಿಗಳಾಗಿ ಅಧರ್ಮದಿಂದ ಲೋಕವನ್ನು ಕೋಟಲೆಗೊಳಿಸಿ ಬದುಕುವರೋ, ಆಗ ಈ ಭಗವಂತನು ಲೋಕಕ್ಷೇಮಕ್ಕಾಗಿ ಸತ್ವದಿಂದ ಅವತಾರಗಳನ್ನು ಪಡೆದು, ಐಶ್ವರ್ಯವನ್ನೂ, ಸತ್ಯಪ್ರತಿಜ್ಞೆಯನ್ನೂ, ತತ್ವೋಪದೇಶವನ್ನೂ, ಭಕ್ತರಲ್ಲಿ ದಯಾಗುಣವನ್ನೂ, ಅದ್ಭುತಗಳಾದ ಕಾರ್ಯಗಳನ್ನೂ ಪ್ರಕಟಗೊಳಿಸುವನು ॥ ೨೫ ॥

ಅಹೋ! ಅಲಂ ಶ್ಲಾಘ್ಯತಮಂ ಯದೋಃ ಕುಲಂ ಅಹೋ! ಅಲಂ ಪುಣ್ಯತಮಂ ಮಧೋರ್ವನಂ । ಯದೇಷ ಪುಂಸಾಂ ವೃಷಭಃ ಶ್ರಿಯಃ ಪತಿಃ ಸ್ವಜನ್ಮನಾ ಚಂಕ್ರಮಣೇನ ಚಾಂಚತಿ ॥ ೨೬ ॥ ಅಹೋ ! ಬತ ಸ್ವರ್ಯಶಸ ಸ್ತಿರಸ್ಕರೀ ಕುಶಸ್ಥಲೀ ಪುಣ್ಯಯಶಸ್ಕರೀ ಭುವಃ । ಪಶ್ಯಂತಿ ನಿತ್ಯಂ ಯದನುಗ್ರ * ಹೇಷಿತಂ ಸ್ಮಿತಾವಲೋಕಂ ಸ್ವಪತಿಂಸ್ಮ ಯತ್ಪ್ರಜಾಃ ॥ ೨೭ ॥ ನೂನಂ ವ್ರತಸ್ನಾನಹುತಾದಿನೇಶ್ವರಃ ಸಮರ್ಚಿತೋ ಹ್ಯಸ್ಯ ಗೃಹೀತಪಾ

ಕಾರ್ಯಗಳನ್ನೂ, ಧತ್ತೇ-ಪ್ರಕಾಶಗೊಳಿಸುತ್ತಾನೆ, ॥ ೨೫ ॥ ಯತ್-ಯಾವಕಾರಣದಿಂದ, ಪುಂಸಾಂ-ಪುರುಷರಲ್ಲಿ, ವೃಷಭಃ-ಶ್ರೇಷ್ಠನಾದ, ಶ್ರಿಯಃ-ಲಕ್ಷ್ಮೀದೇವಿಗೆ, ಪತಿಃ-ಒಡೆಯನಾದ, ಏಷಃ - ಈತನು, ಸ್ವಜನ್ಮನಾ-ತನ್ನ ಜನ್ಮದಿಂದಲೂ, ಚಂಕ್ರಮಣೇನಚ-ಸಂಚಾರದಿಂದಲೂ, ಅಂಚತಿ-ಸತ್ಕರಿಸುವನೋ, ತತ್-ಆಕಾರಣದಿಂದ, ಯದೋಃ-ಯದುರಾಜನ, ಕುಲಂ-ಕುಲವು, ಅಲಂ-ಬಹಳವಾಗಿ, ಶ್ಲಾಘ್ಯತಮಂ-ಅತ್ಯಂತಶ್ಲಾಘ್ಯವು, ಮಧೋಃ-ಮಧುವಿಗೆ, ವನಂ - ವನವಾದ ಮಧುರಾಪುರವು, ಅಲಂ - ಬಹಳ, ಪುಣ್ಯತಮಂ - ಪುಣ್ಯಕರವು, ಅಹೋ -ಆಶ್ಚರ್ಯವು ! ॥ ೨೬ ॥ ಯತ್ - ಯಾವಕಾರಣದಿಂದ, ಯತ್ಪ್ರಜಾಃ-ಯತ್ - ಯಾವದ್ವಾರಕಾಪುರದಲ್ಲಿರುವ, ಪ್ರಜಾಃ - ಪ್ರಜೆಗಳು ಅನುಗ್ರಹೇಷಿತಂ, ಅನುಗ್ರಹ - ಪ್ರಸಾದವನ್ನು ಪಡೆಯುವುದಕ್ಕಾಗಿ ಈಷಿತಂ - ಅಪೇಕ್ಷಿಸಲ್ಪಟ್ಟ, ಸ್ಮಿತಾವಲೋಕಂ, ಸ್ಮಿತ - ಮುಗುಳ್ನಗೆಯಿಂದಕೂಡಿದ ಅವಲೋಕಂ-ನೋಟವುಳ್ಳ, ಸ್ವಪತಿಂ, ಸ್ವ - ತಮ್ಮ ಆತ್ಮಕ್ಕೆ, ಪತಿಂ - ಒಡೆಯನಾದ, ಕೃಷ್ಣನನ್ನು, ನಿತ್ಯಂ-ನಿತ್ಯವೂ, ಪಶ್ಯಂತಿಸ್ಮ-ನೋಡುವರೋ, ತತ್ - ಆಕಾರಣದಿಂದ, ಕುಶಸ್ಥಲೀ-ದ್ವಾರಕಾಪಟ್ಟಣವು, ಸ್ವರ್ಯಶಸಃ-ಸ್ವರ್ಗಲೋಕದ ಕೀರ್ತಿಯನ್ನು, ತಿರಸ್ಕರೀ-ತಿರಸ್ಕರಿಸುವುದಾಗಿಯೂ, ಭುವಃ - ಭೂಲೋಕಕ್ಕೆ, ಪುಣ್ಯಯಶಸ್ಕರೀ - ಪುಣ್ಯಕೀರ್ತಿಗಳನ್ನುಂಟುಮಾಡುವುದಾಗಿಯೂ ಇರುವುದು, ಅಹೋಬತ !-ಆಶ್ಚರ್ಯವು, ॥ ೨೭ ॥ ಹೇಸಖಿ-ಎಲೌಸಖಿಯೇ ! ಯದಾಶಯಾಃ, ಯತ್-ಯಾವ ಅಧರಾಮೃತದಲ್ಲಿ, ಆಶಯಾಃ-ಮನಸ್ಸುಳ್ಳ, ವ್ರಜಸ್ತ್ರಿಯಃ, ಗೋಪಸ್ತ್ರೀಯರು, ಮುಹುಃ-ಬಾರಿಬಾರಿ

ಪರಮಪುರುಷನೂ ಲಕ್ಷ್ಮೀಪತಿಯೂ ಆಗಿರುವ ಈ ಕೃಷ್ಣನು ಜನ್ಮದಿಂದ ಯದುಕುಲವನ್ನೂ, ಸಂಚಾರದಿಂದ ಮಧುರೆಯನ್ನೂ ಪಾವನಗೊಳಿಸುವನಾದುದರಿಂದ ಆಮಧುರಾಪುರವೇ ಪುಣ್ಯಕ್ಷೇತ್ರವು, ಆಯದುಕುಲವೇ ಶ್ಲಾಘ್ಯವು ॥ ೨೬ ॥

ಈ ದ್ವಾರಕಾಪಟ್ಟದಲ್ಲಿರುವ ಪ್ರಜೆಗಳು ನಿತ್ಯವೂ ಕಿರುನಗೆಯಿಂದಲೂ, ಕರುಣಾಕಟಾಕ್ಷದಿಂದಲೂ, ಅನುಗ್ರಹಿಸುತ್ತಿರುವ ಆತ್ಮನಾಯಕನಾದ ಶ್ರೀಕೃಷ್ಣಮೂರ್ತಿಯನ್ನು ಕಣ್ಣಾರ ಕಾಣುತ್ತಿರುವರಾದುದರಿಂದ, ಸ್ವರ್ಗಲೋಕದ ಕೀರ್ತಿಯನ್ನು ತಿರಸ್ಕರಿಸುವುದಾಗಿಯೂ, ಭೂಲೋಕಕ್ಕೆ ಪುಣ್ಯಕೀರ್ತಿಗಳನ್ನುಂಟುಮಾಡುವುದಾಗಿಯೂ, ಇರುವ ಈ ಈ ಪಟ್ಟಣವೇ ಸರ್ವೋತ್ತಮವು ॥ ೨೭ ॥ ಎಲೌಸಖಿಯೇ ? ಯಾವಕೃಷ್ಣಮೂರ್ತಿಯ ಅಧರಾಮೃತವನ್ನು ಪಾನಮಾಡುವುದಕ್ಕಾಗಿ ಅಡಿಗಡಿಗೂ ತವಕಿಸುತ್ತಾ, ಗೋಪಸ್ತ್ರೀ

* ಪಾ. ಉಷಿತಂ-ವಾಸಮಾಡುತ್ತಿರುವ

ಣಿಭಿಃ । ಪಿಬಂತಿ ಯಾ ಸ್ಸಖ್ಯಧರಾಮೃತಂ ಮುಹು ರ್ವ್ರಜಸ್ತ್ರಿಯ ಸ್ಸಂಮು
ಮುಹು ರ್ಯದಾಶಯಾಃ ॥೨೮॥ಯಾ ವೀರ್ಯಶುಲ್ಕೇನ ಹೃತಾ ಸ್ಸ್ವಯಂ
ವರೇ ಪ್ರಮಥ್ಯ ಚೈದ್ಯಪ್ರಮುಖಾನ್ ಹಿ ಶುಷ್ಮಿಣಃ । ಪ್ರದ್ಯುಮ್ನ ಸಾಂ
ಬಾಂಬ ಸುತಾದಯೋ ಪರಾ ಯಾಶ್ಚಾಹೃತಾ ಭೌಮವಧೇ ಸಹಸ್ರಶಃ॥
ಏತಾಃ ಪರಂ ಸ್ತ್ರೀತ್ವ ಮಪಾಸ್ತಪೇಶಲಂ ನಿರಸ್ತಶೌಚಂ ಬತ ಸಾಧು
ಕುರ್ವತೇ। ಯಾಸಾಂ ಗೃಹಾ ತ್ಪುಷ್ಕರಲೋಚನಃ ಪತಿ ರ್ನಜಾತ್ವ ಪೈತ್ಯಾ

ಗೂ, ಸಂಮುಮುಹುಃ-ಮೋಹಗೊಳ್ಳುವರೋ, ಅಧರಾಮೃತಂ-ಅಂತಹಅಧರ ರಸವನ್ನು, ಯಾಃ-ಯಾವಪ ತ್ನಿಯರು, ಪಿಬಂತಿ-ಕುಡಿಯುವರೊ, ಅಸ್ಯ-ಈತನ, ಗೃಹೀತಪಾಣಿಭಿಃ-ಪಾಣಿಗ್ರಹಣವನ್ನುಮಾಡಿದ ಆ ಪತ್ನಿ ಯರಿಂದ, ಈಶ್ವರಃ-ಈಕೃಷ್ಣನೇ, ವ್ರತ...ನಾ, ವ್ರತ-ನಿಯಮಗಳು, ಸ್ನಾನ-ಸ್ನಾನಾದಿಗಳು, ಹುತಾ ದಿನಾ-ಹೋಮಾದಿಗಳು, ಇವುಗಳಿಂದ, ಸಮರ್ಚಿತಃ-ಚೆನ್ನಾಗಿಪೂಜಿಸಲ್ಪಟ್ಟನು, ನೂನಂ-ನಿಜವು॥೨೮॥ ಶುಷ್ಮಿಣಃ - ಬಲಿಷ್ಠರಾದ, ಅಥವಾ ಕಾಮುಕರಾದ, ಚೈದ್ಯಪ್ರಮುಖಾನ್, ಚೈದ್ಯ - ಶಿಶುಪಾಲನೇ, ಪ್ರಮುಖಾನ್-ಮೊದಲಾದವರನ್ನು, ಪ್ರಮಥ್ಯ-ನಿಗ್ರಹಿಸಿ, ಸ್ವಯಂವರೇ-ಸ್ವಯಂವರದಲ್ಲಿ, ಪ್ರದ್ಯುಮ್ನ... ದಯಃ, ಪ್ರದ್ಯುಮ್ನ-ಪ್ರದ್ಯುಮ್ನನು, ಸಾಂಬ-ಸಾಂಬನು, ಅಂಬ-ಅಂಬನು, ಇವರೇ, ಸುತ - ಮಕ್ಕ ಳಾಗಿವುಳ್ಳ ರುಕ್ಮಿಣೀಜಾಂಬವತೀ ನಾಗ್ನಜಿತಿ, ಆದಯಃ-ಮೊದಲಾದ, ಯಾಃ-ಯಾವಸ್ತ್ರೀಯರು, ವೀರ್ಯ ಶುಲ್ಕೇನ-ಪರಾಕ್ರಮವೆಂಬ ಮೂಲ್ಯದಿಂದ, ಹೃತಾಃ-ಅಪಹರಿಸಲ್ಪಟ್ಟರೋ, ಭೌಮವಧೇ - ನರಕಾಸುರನ ಸಂಹಾರದಲ್ಲಿ, ಸಹಸ್ರಶಃ - ಸಾವಿರಾರುಗಳಾಗಿ, ಅಪರಾಃ - ಇತರರಾದ, ಯಾಶ್ಚ - ಯಾವಸ್ತ್ರೀಯರು, ಹೃತಾಃ-ತರಲ್ಪಟ್ಟರೋ ॥ ೨೯ ॥

ಪುಷ್ಕರಲೋಚನಃ-ಕಮಲದಂತೆಕಣ್ಣುಳ್ಳ, ಪತಿಃ - ಪತಿಯಾದಕೃಷ್ಣನು, ಆಹೃತಿಭಿಃ-ಸವಿನುಡಿಗ ಳಿಂದಲೂ, ಅಥವಾ ಇಷ್ಟವಸ್ತುಗಳನ್ನು ತಂದುಕೊಡುವುದರಿಂದಲೂ, ಹೃದಿ-ಮನಸ್ಸಿನಲ್ಲಿ, ಸ್ಪೃಶನ್- ಆನಂದವನ್ನುಂಟುಮಾಡುತ್ತಾ, ಜಾತು-ಒಮ್ಮೆಯಾದರೂ, ಯಾಸಾಂ - ಯಾವಸ್ತ್ರೀಯರ, ಗೃಹಾತ್- ಮನೆಯಿಂದ, ನಾಪೈತಿ - ಹೊರಗೆ ಹೋಗುವುದಿಲ್ಲವೋ, ಏತಾಃ - ಈ ಸ್ತ್ರೀಯರು ಅಪಾಸ್ತಪೇಶಲಂ,

---

ಯರು ಮೋಹಗೊಳ್ಳುವರೋ, ಅಂತಹ ಅಧರಾಮೃತವನ್ನು ಬಾರಿಬಾರಿಗೂ ಸವಿಯುತ್ತಿ ರುವ, ಈ ಕೃಷ್ಣನನ್ನು ಕೈಹಿಡಿದ ಮಡದಿಯರು ಜನ್ಮಾಂತರದಲ್ಲಿ ಈತನ ಪ್ರೀತಿಗಾಗಿ ಎಷ್ಟೋ ವ್ರತಗಳನ್ನು ದಾನಧರ್ಮಗಳನ್ನು ಜಪಹೋಮಾದಿಗಳನ್ನೂ ಮಾಡಿರಬಹುದು. ೨೮. ಇಲ್ಲವಾದರೆ ಇವರಿಗೀಭಾಗ್ಯವೆಂತು ಲಭಿಸುತಿದ್ದಿತು ? ಮಹಾತ್ಮನಾದ ಶ್ರೀಕೃಷ್ಣ ಮೂರ್ತಿಯು, ಸ್ವಯಂವರಸಮಯದಲ್ಲಿ, ಪಶುಗಳಂತೆ ಕಾಮುಕರೂ ಬಲಿಷ್ಠರೂ ಆದ ಶಿಶುಪಾಲನೇ ಮೊದಲಾಗಿರುವ ದುಷ್ಟರನ್ನು ನಿಗ್ರಹಿಸಿ, ಪ್ರದ್ಯುಮ್ನ, ಸಾಂಬ, ಅಂಬ, ಇವರಿಂದ ಪುತ್ರವತಿಯರಾಗಿರುವ ರುಕ್ಮಿಣಿ, ಜಾಂಬವತಿ, ನಾಗ್ನಜಿತಿ, ಯೆಂಬ ಯಾದಕನ್ಯೆಯರನ್ನೂ, ಮತ್ತು ನರಕಾಸುರನನ್ನು ವಧಿಸಿ, ಅವನಬಳಿಯಲ್ಲಿ ಸೆರೆಯಾ ಗಿದ್ದ ಸಾವಿರಾರು ಮಂದಿಯಾದ ರಾಜಪುತ್ರಿಯರನ್ನೂ, ತನ್ನ ಪರಾಕ್ರಮವೆಂಬ ಅಮೂ ಲ್ಯವಾದ ಮೂಲ್ಯದಿಂದ ವಶಗೊಳಿಸಿಕೊಂಡು ಬಂದನೋ, ಆ ಸ್ತ್ರೀಯರೇ ಪುಣ್ಯವತಿಯ ರಲ್ಲವೆ ? ॥ ೨೯ ॥ ಪುಂಡರೀಕಾಕ್ಷನಾದ ಕೃಷ್ಣಮೂರ್ತಿಯು ಪತಿಯಾಗಿ ಎಡೆಬಿ

ಹೃತಿಭಿ ರ್ಹೃದಿಸ್ಪೃಶೈಃ ॥ ೩೦ ॥ ಏವಂವಿಧಾ * ಗದಂತೀನಾಂ ಸ ಗಿರಃ ಪುರಯೋಷಿತಾಂ । ನಿರೀಕ್ಷಣೇ ನಾಭಿನಂದನ್ ಸಸ್ಮಿತೇನ ಯಯೌ ಹರಿಃ॥ † ಅಜಾತಶತ್ರುಃ ಪೃತನಾಂ ಗೋಪೀಥಾಯ ಮಧುದ್ವಿಷಃ । ಪರೇಭ್ಯ ಶ್ಯಂಕಿತ ಸ್ಸ್ನೇಹಾ ತ್ಪ್ರಾಯುಙ್ಕ್ತ ‡ ಚತುರಂಗಿಣೀಂ ॥ ೩೨ ॥ ಅಥ ದೂರಾಗತಾನ್ ಶೌರಿಃ ಕೌರವಾನ್ ವಿರಹಾತುರಾನ್ । ಸನ್ನಿವೃತ್ಯ ದೃಢಸ್ನಿಗ್ಧಾನ್ ಪ್ರಾಯಾ ತ್ಸ್ವನಗರಂ ಹರಿಃ ॥ ೩೩ ॥ ಕುರು ಜಾಂಗಲಪಾಂಚಾಲಾನ್

ಅಪಾಸ್ತ-ಹೋಗಲಾಡಿಸಲ್ಪಟ್ಟ, ಪೇಶಲಂ-ಸ್ವಾತಂತ್ರ್ಯ ಅಥವಾ ಕರ್ಮಾನುಷ್ಠಾನವುಳ್ಳ, ನಿರಸ್ತಶೌಚಂ-ಶೌಚಾಚಾರಗಳಿಲ್ಲದ, ಸ್ತ್ರೀತ್ವಂಪರಂ - ಹೆಣ್ಣುಜನ್ಮವನ್ನೇ, ಸಾಧು - ಉತ್ತಮವನ್ನಾಗಿ, ಕುರ್ವತೆ-ಮಾಡುತ್ತಾರೆ, ಬತ-ಆಶ್ಚರ್ಯವು ॥ ೩೦ ॥ ಸೂತಃ-ಸೂತನು ಹೇಳುತ್ತಾನೆ, ಹರಿಃ - ಕೃಷ್ಣನು, ವದಂತೀನಾಂ-ಹೇಳುತ್ತಲಿರುವ ಪುರಯೋಷಿತಾಂ-ಪುರಸ್ತ್ರೀಯರ, ಏವಂವಿಧಾಃ-ಈರೀತಿಯಾದ, ಗಿರಃ-ಮಾತುಗಳನ್ನು, ಸಸ್ಮಿತೇನ, ಕಿರುನಗೆಯಿಂದಕೂಡಿದ, ನಿರೀಕ್ಷಣೇನ-ನೋಟದಿಂದ, ಅಭಿನಂದನ್-ಸಂತೋಷಿಸುತ್ತಾ-ಯಯೌ-ಹೊರಟುಹೋದನು ॥ ೩೧ ॥ ಅಜಾತಶತ್ರುಃ-ಧರ್ಮರಾಜನು, ಪರೇಭ್ಯಃ-ಶತ್ರುಗಳಿಂದ, ಶಂಕಿತಃ-ಸಂಶಯಗೊಂಡು, ಮಧುದ್ವಿಷಃ-ಮಧುವನ್ನು ಕೊಂದ ಶ್ರೀಕೃಷ್ಣನ, ಗೋಪೀಥಾಯ-ಸಂರಕ್ಷಣೆಗಾಗಿ, ಸ್ನೇಹಾತ್-ಸ್ನೇಹದಿಂದ, ಚತುರಂಗಿಣೀಂ-ಚತುರಂಗಸೈನ್ಯವನ್ನು, ಪ್ರಾಯುಙ್ಕ್ತ-ಕಳುಹಿಸಿದನು ॥ ೩೨ ॥ ಅಥ-ಆಬಳಿಕ, ಹರಿಃ - ಪಾಪಹಾರಕನಾದ, ಶೌರಿಃ - ಕೃಷ್ಣನು, ದೃಢಸ್ನಿಗ್ಧಾನ್-ಆಪ್ತಮಿತ್ರರೂ, ವಿರಹಾತುರಾನ್-ತನ್ನ ಅಗಲಿಕೆಯಿಂದ ವ್ಯಥೆಗೊಳ್ಳುವವರೂ, ಆದುದರಿಂದಲೇ, ದೂರಾಗತಾನ್-ದೂರದವರೆಗೂ ಹಿಂಬಾಲಿಸಿದ, ಕೌರವಾನ್-ಪಾಂಡವರನ್ನು, ಸನ್ನಿವೃತ್ಯ - ಹಿಂದಿರುಗಿಸಿ, ಸ್ವನಗರಂ-ತನ್ನಪಟ್ಟಣವನ್ನು ಕುರಿತು, ಪ್ರಾಯಾತ್-ಪ್ರಯಾಣಮಾಡಿದನು ॥ ೩೩ ॥

ಡದೆ ಸರಸಸಲ್ಲಾಪಗಳನ್ನು ಮಾಡುತ್ತಲೂ, ಪಾರಿಜಾತವೇ ಮೊದಲಾಗಿ ಅವರು ಬಯಸಿದ ವಸ್ತುಗಳನ್ನೊದಗಿಸುತ್ತಲೂ, ಪರಮಾನಂದಕರನಾಗಿ ಯಾರಮನೆಯನ್ನು ಬಿಟ್ಟು ಹೊರಗೆ ಬರುವುದಿಲ್ಲವೊ, ಆ ಸ್ತ್ರೀಯರು, "ಹೆಣ್ಣುಜನ್ಮವೆಂಬುದು ಕರ್ಮಾನುಷ್ಠಾನಕ್ಕನರ್ಹವು, ಅಸ್ವತಂತ್ರವು, ಅಶುದ್ಧವು" ಎಂದೆನಿಸಿದ್ದರೂ, ಅದನ್ನೇ ಸರ್ವೋತ್ತಮವೆಂದು ಭಾವಿಸಿರುವುದೇನಾಶ್ಚರ್ಯವಲ್ಲ, ಎಂದು ಅನ್ಯೋನ್ಯವಾಗಿ ಮಾತನಾಡಿಕೊಳ್ಳುತಿದ್ದರು ॥ ೩೦ ॥ ಅಯ್ಯಾ ಋಷಿಗಳಿರಾ? ಇಂತುಮಾತನಾಡುತ್ತಿರುವ ಪುರಾಂಗನೆಯರ ಸವಿನುಡಿಗಳನ್ನು ಕೇಳುತ್ತಾ, ಮುಗುಳ್ನಗೆಯಿಂದ ಬೆರಸಿದೋರೆ ನೋಟದಿಂದಭಿನಂದಿಸುತ್ತಾ ಶ್ರೀಕೃಷ್ಣಮೂರ್ತಿಯು ಪ್ರಯಾಣವನ್ನು ಮಾಡಿದನು. ॥ ೩೧ ॥

ಬಳಿಕ ಧರ್ಮರಾಜನು ದಾರಿಯಲ್ಲಿ ಶತ್ರುಗಳಿಂದೇನು ತೊಂದರೆಯುಂಟಾಗುವುದೋ, ಎಂದು ಸಂಶಯಗೊಂಡು ಸ್ನೇಹಾತಿಶಯದಿಂದ ಶ್ರೀಕೃಷ್ಣನ ಸಂರಕ್ಷಣೆಗಾಗಿ ಚತುರಂಗಸೇನೆಯನ್ನು ಕಳುಹಿದನು ॥ ೩೨ ॥ ಕೃಷ್ಣನೂ ತನ್ನಗಲಿಕೆಯನ್ನು ಸೈರಿಸಲಾರದೆ, ಅತಿ ಸ್ನೇಹವುಳ್ಳವರಾದುದರಿಂದ ಬಹಳದೂರದವರೆಗೂ ಹಿಂಬಾಲಿಸಿ ಬಂದಿರುವ

---

* ಪಾ. ವದಂತೀನಾಂ. † ಕಾಮಾದಿ ಶತ್ರುಗಳಿಲ್ಲದವನು. ‡ ರಥ, ಗಜ. ತುರಗ, ಪದಾತಿ.

ಶೂರಸೇನಾನ್ ಸಯಾಮುನಾನ್ । ಬ್ರಹ್ಮಾವರ್ತಂ ಕುರುಕ್ಷೇತ್ರಂ ಮ
ತ್ಸ್ಯಾನ್ ಸಾರಸ್ವತಾನಥ ॥ ೩೪ ॥ ಮರುಧನ್ವಾವ್ಯತಿಕ್ರಮ್ಯ ಸೌ
ವೀರಾಭೀರಸೈಂಧವಾನ್। ಆನರ್ತಾನ್ ಭಾರ್ಗವಃ ಪ್ರಾಗಾಚ್ಛ್ರಾಂತವಾ
ಹೋ ಮನಾಗ್ವಿಭುಃ ॥ ೩೫ ॥ ತತ್ರತತ್ರಚ ತತ್ರತ್ಯೈರ್ಹರಿಃ ಪ್ರತ್ಯು
ದ್ಯತಾರ್ಹಣಃ। ಸಾಯಂ ಭೇಜೇ ದಿಶಂ ಪಶ್ಚಾದ್ಗವಿಷ್ಠೋ ಗಾಂಗತಸ್ತದಾ॥

ಇತಿ ದಶಮೋಽಧ್ಯಾಯಃ

ಹೇ ಭಾರ್ಗವ-ಎಲೈ ಶೌನಕನೆ? ವಿಭುಃ - ಭಗವಂತನಾದಕೃಷ್ಣನು, ಕುರು...ಲಾನ್, ಕುರು, ಜಾಂಗಲ-ಪಾಂಚಾಲಗಳೆಂಬ ದೇಶಗಳನ್ನೂ, ಶೂರಸೇನಾನ್ - ಶೂರಸೇನ ದೇಶಗಳನ್ನೂ, ಸಯಾಮುನಾನ್ - ಯಮುನಾನದಿಯ ದಡದಲ್ಲಿರುವ ದೇಶಗಳನ್ನೂ, ಮರುಧನ್ವಾ, ಮರು - ನೀರಿಲ್ಲದದೇಶವನ್ನೂ, ಧನ್ವಾ-ಸ್ವಲ್ಪನೀರುಳ್ಳ ದೇಶವನ್ನೂ, ಸೌವೀರಾ...ವಾನ್, ಸೌವೀರ-ಆಭೀರ, ಸೈಂಧವಗಳೆಂಬ ದೇಶಗಳನ್ನೂ, ಅತಿಕ್ರಮ್ಯ-ದಾಟಿ, ಈಷ...ನಃ, ಈಷತ್-ಕೊಂಚವಾಗಿ, ಶ್ರಾಂತ-ಬಳಲಿದ, ವಾಹನಃ-ಕುದುರೆಗಳುಳ್ಳವನಾಗಿ, ಆನರ್ತಾನ್-ದ್ವಾರಕೆಯನ್ನು, ಪ್ರಾಗಾತ್-ಹೊಂದಿದನು, ॥ ೩೪-೩೫ ॥ ಹರಿಃ-ಕೃಷ್ಣನು, ತತ್ರತತ್ರ-ಅಲ್ಲಲ್ಲಿ, ತತ್ರತ್ಯೈಃ-ಅಲ್ಲಿರುವಜನಗಳಿಂದ, ಪ್ರತ್ಯುದ್ಯತಾರ್ಹಣಃ-ಪ್ರತ್ಯುದ್ಯತ-ಒಪ್ಪಿಸಲ್ಪಟ್ಟ, ಅರ್ಹಣಃ-ಕಾಣಿಕೆಗಳುಳ್ಳವನಾಗಿ, ಸಾಯಂ ಸಾಯಂಕಾಲದಲ್ಲಿ, ಗವಿಷ್ಠಃ-ರಥದಿಂದಿಳಿದು, ಗಾಂ-ಕೊಳವನ್ನು, ಗತಃ - ಹೊಂದಿ, ತದಾ-ಆಗ, ಪಶ್ಚಾದ್ದಿಶಂ - ಪಶ್ಚಿಮದಿಕ್ಕನ್ನು, ಭೇಜೆ - ಹೊಂದಿದನು, ಅಥವಾ, ತದಾ - ಆಗ, ಗವಿಷ್ಠಃ - ಆಕಾಶದಲ್ಲಿರುವಸೂರ್ಯನು, ಗಾಂ - ಜಲವನ್ನು, ಗತಃ-ಹೊಂದಿದನು ॥ ೩೬ ॥

ದಶಮಾಧ್ಯಾಯಂ ಸಮಾಪ್ತಂ.

ಪಾಂಡವರನ್ನು ಹಿಂದಕ್ಕೆ ಕಳುಹಿಸಿ, ತನ್ನ ಪಟ್ಟಣವನ್ನು ಕುರಿತು ತೆರಳಿದನು ॥ ೩೩ ॥ ಎಲೈ ಶೌನಕನೆ! ಕೇಳು, ಬಳಿಕ ಆಭಗವಂತನು ಕುರು, ಜಾಂಗಲ, ಪಾಂಚಾಲ, ಶೂರಸೇನ ಯಾಮುನ, ಬ್ರಹ್ಮಾವರ್ತ, ಕುರುಕ್ಷೇತ್ರ, ಮತ್ಸ್ಯ, ಸಾರಸ್ವತಗಳೆಂಬ ದೇಶಗಳನ್ನು, ನೀರಿಲ್ಲದ ದೇಶಗಳನ್ನು, ಸ್ವಲ್ಪನೀರುಳ್ಳ ದೇಶಗಳನ್ನೂ, ಸೌವೀರ, ಅಭೀರ, ಸೈಂಧವ, ದೇಶಗಳನ್ನೂ ಅತಿಕ್ರಮಿಸಿ, ಬಳಲಿದ ಕುದುರೆಗಳುಳ್ಳವನಾಗಿ ಮೆಲ್ಲನೆ ತನ್ನದ್ವಾರಕಾದೇಶಕ್ಕೆ ತೆರಳಿದನು ॥೩೪-೩೫॥ ಆ ಆದೇಶಗಳಲ್ಲಿ ಅಲ್ಲಿಯಜನಗಳಿಂದೊಪ್ಪಿಸಲ್ಪಟ್ಟ ಕೈಗಾಣಿಕೆಗಳನ್ನು ಸ್ವೀಕರಿಸುತ್ತಾ, ಸಾಯಂಕಾಲ ವಾದಕೂಡಲೆ ರಥದಿಂದಿಳಿದು, ಜಲಾಶಯಕ್ಕೆ ಹೋಗಿ ಸಂಧ್ಯಾಕೃತ್ಯಗಳನ್ನು ನೆರವೇರಿಸಿ, ಪಶ್ಚಿಮದಿಕ್ಕಿಗೆ ಪ್ರಯಾಣಮಾಡಲು, ಆಕಾಲಕ್ಕೆ ಸರಿಯಾಗಿ *ಶ್ರುತಿಯಲ್ಲಿ ಹೇಳುವಂತೆ, ಸೂರ್ಯನೂ ಜಲದಲ್ಲಿ ಪ್ರವೇಶಿಸಿ ಅಸ್ತವನ್ನು ಹೊಂದಿದನೆಂದು, ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳುತ್ತಿದ್ದನೆಂಬಲ್ಲಿಗೆ, ಭಾಗವತ ಚಕೋರ ಚಂದ್ರಿಕೆಯೊಳ್, ಹತ್ತನೆಯಅಧ್ಯಾಯಂ ಮುಗಿದುದು.

* ಶ್ರು. ಅದೌಗ್ರಾವಾ ಏಷ ಪ್ರಾತ ರುದೇತ್ಯಪಃ ಸ್ನಾಯುಂ ಪ್ರವಿಶತಿ.

ಓಂ ನಮಃಪರಮಾತ್ಮನೇ

ಶ್ರೀ ಸೂತಃ । ಆನರ್ತಾನ್ ಸ ಉಪವ್ರಜ್ಯ ಸ್ವೃದ್ಧಾನ್ ಜನಪದಾನ್ ಸ್ವ
ಕಾನ್ । ದಧ್ಮೌ ದರವರಂ ತೇಷಾಂ ವಿಷಾದಂ ಶಮಯನ್ನಿವ ॥ ೧ ॥ ಸ
ಉಚ್ಚಕಾಶೇ ಧವಳೋದರೋ ದರೋಽಪ್ಯುರುಕ್ರಮಸ್ಯಾಧರಶೋಣ
ಶೋಣಿಮಾ । ದಧ್ಮಾಯಮಾನಃ ಕರಕಂಜ ಸಂಪುಟೇ ಯಥಾಬ್ಜಷಂಡೇ
ಕಲಹಂಸ ಉತ್ಸ್ವನಃ ॥೨॥ ತ ಮುಪಶ್ರುತ್ಯ ನಿನದಂ ಜಗ *ದ್ಭವಭಯಾ
ಪಹಂ । ಪ್ರತ್ಯುದ್ಯಯುಃ ಪ್ರಜಾಃ ಸ್ಸರ್ವಾ ಭರ್ತೃದರ್ಶನ ಲಾಲಸಾಃ ॥೩॥

ಸೂತಃ-ಸೂತನು ಹೇಳುತ್ತಾನೆ, ಸಃ-ಆಕೃಷ್ಣನು, ಸ್ವಕಾನ್-ತನ್ನ, ಸ್ವೃದ್ಧಾನ್-ಸಮೃದ್ಧಗಳಾಗಿರುವ, ಆನರ್ತಾನ್, ಆನರ್ತಗಳೆಂಬ, ಜನಪದಾನ್-ದೇಶಗಳನ್ನು, ಉಪವ್ರಜ್ಯ-ಹೊಂದಿ, ತೇಷಾಂ-ಆದೇಶದವರ, ವಿಷಾದಂ - ದುಃಖವನ್ನು, ಶಮಯನ್ನಿವ - ಹೋಗಲಾಡಿಸುವಂತೆ, ದರವರಂ - ಉತ್ತಮವಾದಶಂಖವನ್ನು, ದಧ್ಮೌ - ಊದಿದನು ॥ ೧ ॥ ದಧ್ಮಾಯಮಾನ: - ಊದಲ್ಪಟ್ಟ, ಸದರ: - ಆಶಂಖವು, ಧವಳೋದರೋಽಪಿ - ಬಿಳಿದಾದ ವೈಯುಳ್ಳುದಾದರೂ, ಉರುಕ್ರಮಸ್ಯ - ಕೃಷ್ಣನ, ಅಧರ...ಮಾ, ಅಧರ - ಕೆಂದುಟಿಯ, ಶೋಣ - ಕೆಂಪಿನಿಂದ, ಶೋಣಿಮಾ - ಕೆಂಪುಳ್ಳುದಾಗಿ, ಅಬ್ಜಷಂಡೇ - ಕಮಲಗಳಗುಂಪಿನಲ್ಲಿ, ಉತ್ಸ್ವನ: - ಗಟ್ಟಿಯಾಗಿಕೂಗುತ್ತಿರುವ, ಕಲಹಂಸೋಯಥಾ-ರಾಜಹಂಸದಂತೆ, ಕರಸಂಪುಟೇ - ಕೈಯಲ್ಲಿ, ಉಚ್ಚಕಾಶೇ - ಪ್ರಕಾಶಿಸಿತು ॥ ೨ ॥ ಸರ್ವಾಃ - ಎಲ್ಲ, ಪ್ರಜಾಃ - ಜನರೂ, ಜಗ...ಹಂ, ಜಗತ್ - ಪ್ರಾಣಿಗಳಿಗೆ, ಭವ - ಸಂಸಾರದಿಂದುಂಟಾದ, ಭಯ-ಭಯವನ್ನು, ಅಪಹಂ - ಹೋಗಲಾಡಿಸುವ, ತಂನಿನದಂ, ಆಶಬ್ದವನ್ನು, ಉಪಶ್ರುತ್ಯಕೇಳಿ, ಭರ್ತೃ...ಸಾಃ, ಭರ್ತೃ - ಸ್ವಾಮಿಯ, ದರ್ಶನ - ನೋಟದಲ್ಲಿ, ಲಾಲಸಾಃ - ಆಸಕ್ತರಾಗಿ ॥ ೩ ॥ ನಿಜಲಾ

ಶ್ರೀ ಕೃಷ್ಣನು ದ್ವಾರಕಾಪಟ್ಟಣವನ್ನು ಸೇರುವುದು.

ಕಂ ॥ ಹರಿ ಯಾನರ್ತದ ಜನರಿಂ । ಪರಿಪರಿ ಮನ್ನಣೆಯ ನಾಂತು ಪಲಸಿಂಗರದಿಂ ।
ಮ.ವ ದ್ವಾರಕೆ ಯೈದಿದ । ತೆರನಿ: ಅಧ್ಯಾಯದಲ್ಲಿ ಪೇಳಲ್ಪಡುಗುಂ ॥

ಅಯ್ಯಾ ಶೌನಕಾದಿಗಳಿರಾ! ಕೇಳಿರಿ. ಅನಂತರದಲ್ಲಿ ಶ್ರೀಕೃಷ್ಣಮೂರ್ತಿಯು, ಸರ್ವೈಶ್ವರ್ಯಗಳಿಂದಕೂಡಿರುವ, ತನ್ನ ಆನರ್ತದೇಶಗಳ ಬಳಿಗೆ ಬಂದು, ಅಲ್ಲಿಯ ಜನರ ಕಳವಳವನ್ನು ಕಳೆಯುವಂತೆ ಸರ್ವೋತ್ತಮವಾದ ಪಾಂಚಜನ್ಯವೆಂಬ ಶಂಖವನ್ನೂದಿದನು ॥ ೧ ॥ ಆಗ ಬಿಳುಪಾದ ಆಶಂಖವನ್ನು ಕೃಷ್ಣನು ಕೈಯಲ್ಲಿ ಹಿಡಿದು ಊದುತ್ತಿರಲು, ಅದು ಆತನ ಕೆಂಪಾದ ತುಟಿಯ ಕೆಂಬಣ್ಣದಿಂದ ಕೆಂಪೇರಿ, ಕಮಲಷಂಡದಲ್ಲಿ ಕಲಕಲವನ್ನು ಮಾಡುವ ರಾಜಹಂಸದಂತೆ ಪ್ರಕಾಶಿಸಿತು ॥೨॥ ಸಂಸಾರದುಃಖಗಳನ್ನು ಕಳೆದು ಪ್ರಾಣಿಗಳಿಗೆ ಪರಮಾನಂದವನ್ನುಂಟುಮಾಡುವ ಆ ಶಂಖಧ್ವನಿಯನ್ನು ಕೇಳಿ, ಅಲ್ಲಿಯ ಪ್ರಜೆಗಳೆಲ್ಲರೂ, ಸ್ವಾಮಿಯಾದ ಕೃಷ್ಣಮೂರ್ತಿಯನ್ನು

---

* ಪಾ. ಭಯಭಯಾವಹಂ - ಭಯಕ್ಕೆಭಯವನ್ನುಂಟುಮಾಡುವವನು.

ತತ್ರೋಪನೀತ ಬಲಯೋ ರವೇ ರ್ದೀಪ ಮಿವೋದ್ಯತಾಃ । ಆತ್ಮಾರಾಮಂ ಪೂರ್ಣಕಾಮಂ ನಿಜಲಾಭೇನ ನಿತ್ಯದಾ ॥ ೪ ॥ ಪ್ರೀತ್ಯುತ್ಫುಲ್ಲಮುಖಾಃ ಪ್ರೋಚುಃ ಹರ್ಷಗದ್ಗದಯಾ ಗಿರಾ । ಪಿತರಂ ಸರ್ವಸುಹೃದ ಮವಿತಾರ ಮಿವಾರ್ಭಕಾಃ ॥೫॥ ನತಾಸ್ಮ ಹೇ ನಾಥ ತವಾಂಘ್ರಿ ಪಂಕಜಂ ವಿರಿಂಚ ವೈರಿಂಚ್ಯ ಸುರೇಂದ್ರ ವಂದಿತಂ । ಪರಾಯಣಂ ಕ್ಷೇಮ ಮಿಹೇಚ್ಛತಾಂ ಪರಂ ನ ಯತ್ರ ಕಾಲಃ ಪ್ರಭವೇ ತ್ಪರಃ ಪ್ರಭುಃ ॥೬॥ ಭವಾಯ ನ ಸ್ತ್ವಂ

ಭೇನ - ಆತ್ಮಾನಂದಲಾಭದಿಂದ, ನಿತ್ಯದಾ - ಯಾವಾಗಲೂ, ಪೂರ್ಣಕಾಮಂ - ತೃಪ್ತನಾದುದರಿಂದಲೇ, ಆತ್ಮಾರಾಮಂ-ತನ್ನಲ್ಲಿಯೇ ರಮಿಸುವ ಕೃಷ್ಣನನ್ನು ಕುರಿತು, ಉದ್ಯತಾಃ-ಪ್ರಯತ್ನಗೊಂಡಿರುವ, ಪ್ರಜೆಗಳು, ತತ್ರ-ಆನರ್ತದೇಶದಲ್ಲಿ, ರವೇಃ-ಸೂರ್ಯನಿಗೆ, ದೀಪಮಿವ-ದೀಪದಂತೆ, ಉಪನೀತಬಲಯಃ, ಉಪನೀತ-ಒಪ್ಪಿಸಲ್ಪಟ್ಟ, ಬಲಯಃ - ಕಾಣಿಕೆಗಳುಳ್ಳವರಾದರು ॥ ೪ ॥

ಪ್ರೀತ್ಯು...ಖಾಃ, ಪ್ರೀತಿ-ವಿಶ್ವಾಸದಿಂದ, ಉತ್ಫುಲ್ಲ-ವಿಕಸಿತವಾದ, ಮುಖಾಃ-ಮುಖವುಳ್ಳವರಾಗಿ, ಹರ್ಷಗದ್ಗದಯಾ - ಸಂತೋಷದಿಂದುಬ್ಬಿದ ಕೊರಳುಳ್ಳ, ಗಿರಾ-ಮಾತಿನಿಂದ, ಪಿತರಂ - ತಂದೆಯನ್ನು, ಅರ್ಭಕಾಇವ-ಮಕ್ಕಳಂತೆ, ಸರ್ವಸುಹೃದಂ-ಎಲ್ಲರಿಗೂ ಮಿತ್ರನಾದ, ಅವಿತಾರಂ - ರಕ್ಷಕನಾದ ಕೃಷ್ಣನನ್ನು ಕುರಿತು, ಪ್ರೋಚುಃ - ಹೇಳಿದರು ॥ ೫ ॥ ಹೇ ನಾಥ-ಎಲೈಸ್ವಾಮಿಯೇ ? ಯತ್ರ - ಯಾವ ನಿನ್ನ ಪಾದವನ್ನು ನಂಬಿದವರಲ್ಲಿ, ಪ್ರಭುಃ-ಸಕಲಪ್ರಪಂಚವನ್ನೂ ಬದಲಾಯಿಸುವ, ಕಾಲಃ-ಕಾಲವು, ನಪ್ರಭವೇತ್-ಸಮರ್ಥನಾಗಲಾರದೋ, ಇಹ-ಈಲೋಕದಲ್ಲಿ, ಪರಂ-ಅಧಿಕವಾದ, ಕ್ಷೇಮಂ - ನೆಮ್ಮದಿಯನ್ನು, ಇಚ್ಛತಾಂ-ಬಯಸುವವರಿಗೆ, ಪರಾಯಣಂ-ಗತಿಯಾಗಿ, ವಿರಿಂಚ...ತಂ, ವಿರಿಂಚ - ಬ್ರಹ್ಮನಿಂದಲೂ, ವೈರಿಂಚ್ಯ-ಬ್ರಹ್ಮಪುತ್ರರಾದ ಸನಕಾದಿಗಳಿಂದಲೂ, ಸುರೇಂದ್ರ - ದೇವೇಂದ್ರನಿಂದಲೂ, ವಂದಿತಂ-ನಮಿಸಲ್ಪಟ್ಟ, ತವ-ನಿನ್ನ, ಅಂಘ್ರಿಪಂಕಜಂ-ಪಾದಕಮಲವನ್ನು, ನತಾಸ್ಮಹೇ-ವಂದಿಸುತ್ತೇವೆ ॥೬॥

ಕಾಣಬೇಕೆಂಬ ತವಕದಿಂದೆದುರುಗೊಂಡರು ॥ ೩ ॥ ಬಳಿಕ ನಿರಂತರವೂ ಪರಮಾನಂದಲಾಭದಿಂದ ಆತ್ಮಾರಾಮನೂ ಪೂರ್ಣಕಾಮನೂ ಆಗಿರುವ, ಆ ಕೃಷ್ಣಮೂರ್ತಿಗೆ, ಸರ್ವಪ್ರಕಾಶಕನಾದ ಸೂರ್ಯನಿಗೆ ದೀಪವನ್ನು ಬೆಳಗಿದಂತೆ, ಅವರೆಲ್ಲರೂ ಕೈಗಾಣಿಕೆಗಳನ್ನೊಪ್ಪಿಸಿದರು ॥ ೪ ॥

ಸರ್ವಪ್ರಿಯನಾದುದರಿಂದ ಭಕ್ತಿಯಿಂದಿತ್ತ ಕಾಣಿಕೆಗಳನ್ನು ಕೈಕೊಂಡ, ಲೋಕರಕ್ಷಕನಾದ ಕೃಷ್ಣನನ್ನು ಕಂಡು, ನಗೆಮೊಗವುಳ್ಳವರಾಗಿ, ಅಗಲಿಹೋಗಿದ್ದು ಬಂದ ತಂದೆಯನ್ನು ಕಂಡ ಮಕ್ಕಳಂತೆ, ಸಂತೋಷವೇರಿ ಗದ್ಗದ ಧ್ವನಿಯಿಂದ ಹೊಗಳ ತೊಡಗಿದುದೇನೆಂದರೆ ॥೫॥ ಎಲೈ ಸ್ವಾಮಿಯೆ ? ಸಕಲ ಲೋಕಗಳನ್ನೂ ವಶಗೊಳಿಸಿಕೊಂಡಿದ್ದರೂ, ಕಾಲವೆಂಬುದು ಯಾವ ಚರಣಭಕ್ತರನ್ನು ಇಟ್ಟಣಿಸಿ ನೋಡಲಾರದೋ, ಬ್ರಹ್ಮನು, ಸನಕಾದಿ ಮಹಾಮುನಿಗಳು, ಇಂದ್ರಾದಿ ದೇವತೆಗಳೂಕೂಡ, ಯಾವನ ಪಾದವನ್ನು ವಂದಿಸಿ ಮಹಾತ್ಮರೆನಿಸಿರುವರೋ, ಈಲೋಕದಲ್ಲಿ ಸಂಪೂರ್ಣವಾದ ಶ್ರೇಯಸ್ಸನ್ನು ಬಯಸುವವರಿಗೆ ಯಾವನ ಪಾದವು ಪರಮಗತಿಯಾಗಿರುವುದೋ, ಅಂತಹ ನಿನ್ನ ಪಾದ

ಭವ ವಿಶ್ವಭಾವನ ತ್ವಮೇವ ಮಾತಾತ್ಮ ಸುಹೃತ್ಪಿತಾ ಪತಿಃ। ತ್ವಂ ಸದ್ಗುರು
ರ್ನಃ ಪರಮಂಚ ದೈವತಂ ಯಸ್ಯಾನು ವೃತ್ತ್ಯಾ ಕೃತಿನೋ ಬಭೂವಿಮ॥೭॥
ಅಹೋ! ಸನಾಥಾ ಭವತಾ ಸ್ಮ ಯದ್ವಯಂ ತ್ರೈವಿಷ್ಟಪಾನಾ ಮಪಿದೂರ
ದರ್ಶನಂ । ಪ್ರೇಮಸ್ಮಿತ ಸ್ನಿಗ್ಧನಿರೀಕ್ಷಣಾನನಂ ಪಶ್ಯೇಮ ರೂಪಂ ತವ
ಸರ್ವಸೌಭಗಂ ॥ ೮ ॥ ಯರ್ಹ್ಯಂಬುಜಾಕ್ಷಾ ಪಸಸಾರ ನೋ ಭವಾ
ನ್ಕುರೂ ನ್ಮಧೂ ನ್ವಾಥ ಸುಹೃದ್ದಿದೃಕ್ಷಯಾ । ತತ್ರಾಬ್ದಕೋಟಿಪ್ರತಿಮಃ

ಹೇವಿಶ್ವಭಾವನ-ಎಲೈ ಲೋಕರಕ್ಷಕನೆ? ತ್ವಂ-ನೀನು, ನಃ-ನಮ್ಮ, ಭವಾಯ - ಅಭಿವೃದ್ಧಿಗಾಗಿ, ಭವ-ಆಗು, ಯಸ್ಯ-ಯಾವನಿನ್ನ, ಅನುವೃತ್ತ್ಯಾ-ಅನುಸರಣದಿಂದ, ಕೃತಿನಃ-ಕೃತಾರ್ಥರು, ಬಭೂವಿಮ-ಆಗುವೆವೋ, ಅಂತಹ, ತ್ವಮೇವ - ನೀನೇ, ಮಾತಾ - ತಾಯಿಯು, ಆತ್ಮಸುಹೃತ್-ಆಪ್ತಮಿತ್ರನು, ಪಿತಾ-ತಂದೆಯು, ಪತಿಃ-ಪೋಷಕನು, ತ್ವಂ-ನೀನು, ಸದ್ಗುರುಃ-ಒಳ್ಳೆಯಗುರುವು. ಪರಮಂ-ಸರ್ವೋತ್ತಮವಾದ, ದೈವತಂಚ-ದೈವವೂ, ಆಗಿರುವೆ ॥ ೭ ॥

ಯತ್-ಯಾವಕಾರಣದಿಂದ. ವಯಂ-ನಾವು, ತ್ರೈವಿಷ್ಟಪಾನಾಮಪಿ-ಸ್ವರ್ಗವಾಸಿಗಳಾದ ಇಂದ್ರಾದಿದೇವತೆಗಳಿಗೂ, ದೂರದರ್ಶನಂ-ಕಾಣಲಶಕ್ಯವಾದ, ಪ್ರೇಮ...ನನಂ, ಪ್ರೇಮಸ್ಮಿತ - ಪ್ರೀತಿಪೂರ್ವಕವಾದಮಂದಹಾಸದಿಂದಲೂ, ಸ್ನಿಗ್ಧನಿರೀಕ್ಷಣ-ಅನುರಾಗಪೂರ್ವಕವಾದನೋಟದಿಂದಲೂ ಕೂಡಿದ, ಆನನಂ-ಮುಖವುಳ್ಳ, ತವ - ನಿನ್ನ, ಸರ್ವಸೌಭಗಂ - ಸಂಪೂರ್ಣಸೌಂದರ್ಯವುಳ್ಳ, ರೂಪಂ - ರೂಪವನ್ನು, ಪಶ್ಯೇಮ - ನೋಡುವೆವೋ, ತತ್-ಆಕಾರಣದಿಂದ, ಭವತಾ-ನಿನ್ನಿಂದ, ಸನಾಥಾಃಸ್ಮ-ಸನಾಥರಾದೆವು, ಅಹೋ-ಆಶ್ಚರ್ಯವು! ॥ ೮ ॥ ಹೇ ಅಂಬುಜಾಕ್ಷ-ಎಲೈಪುಂಡರೀಕಾಕ್ಷನೆ? ಹೇ ಅಚ್ಯುತ-ಎಲೈ ಕೃಷ್ಣನೆ? ನಃ-ನಮ್ಮನ್ನುಳಿದು, ಭವಾನ್-ನೀನು, ಯರ್ಹಿ-ಯಾವಾಗ, ಸುಹೃದ್ದಿದೃಕ್ಷಯಾ-ಮಿತ್ರರಾದ ಪಾಂಡವಾದಿಗಳನ್ನು ನೋಡಬೇಕೆಂದು, ಕುರೂನ್-ಹಸ್ತಿನಾವತಿಗೂ, ಮಧೂನ್‌ವಾ-ಮಧುರಾಪುರಿಗೂ, ಅಪಸಸಾರ-ಹೊರಟುಹೋದೆಯೋ, ತತ್ರ-ಆಗ, ರವೇರ್ವಿನಾ - ಸೂರ್ಯನನ್ನುಳಿದು, ಅಕ್ಷ್ಣಾಮಿವ - ಕಣ್ಣುಗಳಂತೆ, ತವ-ನಿನ್ನವರಾದ, ನಃ-ನಮಗೆ, ಕ್ಷಣಃ-ಒಂದು ಕ್ಷಣಕಾಲವು, ಅಬ್ದ...ಮಃ, ಅಬ್ದ - ಸಂವತ್ಸರಗಳ, ಕೋಟಿ-ಕೋಟಿಗಳಿಗೆ, ಪ್ರತಿಮಃ-ಸಮಾನವು, ಅಭವತ್-ಆಯಿತು ॥ ೯ ॥

ಕಮಲವನ್ನು ವಂದಿಸುವೆವು ॥ ೬ ॥ ಎಲೈ ಲೋಕ ಪರ್ಧನನೇ? ನಮಗೆ ನೀನೇ ತಾಯಿಯೂ, ಮಿತ್ರನೂ, ತಂದೆಯೂ, ರಕ್ಷಕನೂ, ಸದ್ಗುರುವೂ, ದೈವವೂ ಆಗಿರುವೆ. ನಿನ್ನ ಆಶ್ರಯದಿಂದಲೇ ನಾವು ಧನ್ಯರಾಗಿರುವೆವಾದುದರಿಂದ, ನಮಗೆ ಶ್ರೇಯಸ್ಸನ್ನುಂಟುಮಾಡು ॥ ೭ ॥ ಇಂದ್ರಾದಿ ದೇವತೆಗಳ ದರ್ಶನಕ್ಕೂ ದುರ್ಲಭವೆನಿಸಿ, ಪ್ರೇಮಪೂರ್ಣವಾದ ಮಂದಹಾಸದಿಂದಲೂ, ಸ್ನೇಹಪೂರ್ವಕವಾದ ನೋಟದಿಂದಲೂ, ರಮಣೀಯವಾಗಿ, ಸರ್ವಸೌಭಾಗ್ಯಗಳಿಗೂ ನಿಧಿಯಾದ ನಿನ್ನ ದಿವ್ಯರೂಪವನ್ನು ನೋಡುತ್ತಾ, ನಿನ್ನೊಡನೆ ನೆಲಸಿರುವುದರಿಂದ ನಾವೇ ಧನ್ಯರು ॥ ೮ ॥

ಎಲೈಕಮಲಾಕ್ಷನೆ? ನೀನೇಗತಿಯೆಂದು ನಂಬಿರುವನಮ್ಮನ್ನು ಆದರಿಸದೆ, ಮಿತ್ರರಾದಪಾಂಡವಾದಿಗಳನ್ನು ನೋಡುವುದಕ್ಕಾಗಿ, ಹಸ್ತಿನಾವತಿಗೋ ಅಥವಾಮಧುರಾ

ಮಾಯಾಂತಂ ವಸುದೇವ್ಯೋ ಮಹಾಮನಾಃ । ಅಕ್ರೂರ ಶ್ಚೋಗ್ರಸೇನಶ್ಚ
ರಾಮ ಶ್ಚಾದ್ಭುತವಿಕ್ರಮಃ ॥ ೧೬ ॥ ಪ್ರದ್ಯುಮ್ನ ಶ್ಚಾರುದೇಷ್ಣಶ್ಚ
ಯೇಽಚ ಸಾಂಬ ಗದಾದಯಃ । ಪ್ರಹರ್ಷವೇಗೋಚ್ಛ್ವಸಿತ ಶಯನಾ
ಸನ ಭೋಜನಾಃ ॥ ೧೭ ॥ ವಾರಣೇಂದ್ರಂ ಪುರಸ್ಕೃತ್ಯ ಬ್ರಾಹ್ಮಣೈ
ಸ್ಸಸು ಮಂಗಳೈಃ । ಶಂಖತೂರ್ಯನಿನಾದೇನ ಬ್ರಹ್ಮಘೋಷೇಣ ಚಾ
ದೃತಾಃ ॥ ೧೮ ॥ ಪ್ರತ್ಯುಜ್ಜಗ್ಮೂ ರಥೈ ರ್ಹೃಷ್ಟಾಃ ಪ್ರಣಯಾಗತ ಸಾ
ಧ್ವಸಾಃ । ವಾರಮುಖ್ಯಾಶ್ಚ ಶತಶೋ ಯಾನೈ ಸ್ತದ್ದರ್ಶ ನೋತ್ಸುಕಾಃ॥
ಲಸತ್ಕುಂಡಲ ನಿರ್ಭಾತ ಕಪೋಲ ವದನಶ್ರಿಯಃ । ನಟನರ್ತಕಗಂಧರ್ವಾ

ಉಗ್ರಸೇನಶ್ಚ-ಉಗ್ರಸೇನನು, ಅದ್ಭುತವಿಕ್ರಮಃ-ಮಹಾಶೂರನಾದ, ರಾಮಃ-ಬಲರಾಮನು, ಪ್ರದ್ಯುಮ್ನಃ-ಪ್ರದ್ಯುಮ್ನನು, ಚಾರುದೇಷ್ಣಃ-ಚಾರುದೇಷ್ಣನು, ಸಾಂಬ ಗದಾದಯಃ, ಸಾಂಬ, ಗದ, ಇವರೇಮೊದಲಾದ, ಯೇಽಚ-ಯಾವ ಯಾದವರುಂಟೋ, ಅವರೆಲ್ಲರೂ, ಪ್ರೇಷ್ಠಂ-ಅತ್ಯಂತಪ್ರೀತಿಪಾತ್ರನಾದ ಕೃಷ್ಣನನ್ನು, ಆಯಾಂತಂ-ಬರುವವನನ್ನಾಗಿ, ನಿಶಮ್ಯ-ಕೇಳಿ, ಪ್ರಹರ್ಷ...ನಾಃ, ಪ್ರಹರ್ಷ - ಸಂತೋಷದ, ವೇಗ-ಅತಿಶಯದಿಂದ, ಉಚ್ಛ್ವಸಿತ-ಮರೆಯಲ್ಪಟ್ಟ ಶಯನ.ನಿದ್ದೆಯು, ಆಸನ - ಕುಳ್ಳಿರುವಿಕೆಯೂ, ಭೋಜನಾಃ-ಊಟವೂ ಉಳ್ಳವರಾಗಿ ॥ ೧೭ ॥ ವಾರಣೇಂದ್ರಂ-ಪಟ್ಟದಾನೆಯನ್ನು, ಪುರಸ್ಕೃತ್ಯ - ಮುಂದಿಟ್ಟುಕೊಂಡು, ಸಸುಮಂಗಳೈಃ-ಫಲಪುಷ್ಪಮೊದಲಾದ ಮಂಗಳದ್ರವ್ಯಗಳಿಂದಕೂಡಿದ, ಬ್ರಾಹ್ಮಣೈಃ-ಬ್ರಾಹ್ಮಣರಿಂದಲೂ, ಶಂಖತೂರ್ಯನಿನಾದೇನ, ಶಂಖ, ಮಂಗಳವಾದ್ಯ, ಇವುಗಳ ಶಬ್ದದಿಂದಲೂ, ಬ್ರಹ್ಮಘೋಷೇಣಚ-ವೇದಪಾಠದಿಂದಲೂ, ಆದೃತಾಃ-ಒಡಗೂಡಿದವರಾಗಿ ॥ ೧೮ ॥

ಹೆ ಬ್ರಹ್ಮನ್-ಎಲೈ, ಶೌನಕನೇ ? ರಥೈಃ-ರಥಗಳಿಂದ, ಪ್ರತ್ಯುಜ್ಜಗ್ಮುಃ-ಎದುರುಗೊಂಡರು, ಅಲ್ಲದೆ ಪ್ರಣಯಾ...ಸಾಃ, ಪ್ರಣಯ-ಪ್ರೀತಿಯಿಂದ, ಆಗತ-ಉಂಟಾಗಿರುವ, ಸಾಧ್ವಸಾಃ-ಸಡಗರವುಳ್ಳ, ವಾರಮುಖ್ಯಾಶ್ಚ - ಗಣ್ಯರಾದ ವೇಶ್ಯಾಸ್ತ್ರೀಯರೂ, ತದ್ದರ್ಶನೋತ್ಸುಕಾಃ - ಆ ಕೃಷ್ಣನನ್ನು ನೋಡಬೇ

ರಾಮನು, ಪ್ರದ್ಯುಮ್ನನು, ಚಾರುದೇಷ್ಣನು, ಸಾಂಬನು, ಗದನು, ಇವರೇಮೊದಲಾದ ಯಾದವಶ್ರೇಷ್ಠರು, ತಮಗೆ ಪರಮಪ್ರಿಯನಾದಶ್ರೀಕೃಷ್ಣಮೂರ್ತಿಯು ಬಿಜಮಾಡುವನೆಂಬ ಸುದ್ದಿಯನ್ನು ಕೇಳಿದಕೂಡಲೆ, ಅತ್ಯಂತ ಸಂತೋಷದಿಂದ, ನಿದ್ರಾಹಾರಾದಿ ಕಾರ್ಯಗಳನ್ನುಕೂಡ ಮರೆತವರಾಗಿ, ಮಂಗಳಾರ್ಥವಾಗಿ, ಪಟ್ಟದಾನೆಯನ್ನು ಮುಂದಿಟ್ಟುಕೊಂಡು,ಫಲಪಾಣಿಗಳಾದ ಬ್ರಾಹ್ಮಣರನ್ನು ಜತೆಗೊಳಿಸಿಕೊಂಡು, ವೇದಘೋಷಗಳನ್ನುಮಾಡಿಸುತ್ತಾ, ತಾಳಮೇಳಗಳಿಂದ ಆತನನ್ನೆದುರುಗೊಂಡರು ॥೧೬-೧೮॥ ಅಯ್ಯಾ ಶೌನಕನೇಕೇಳು ! ಬಳಿಕ ಆಪಟ್ಟಣದಲ್ಲಿರುವ ಮುಖ್ಯರಾದ ವೇಶ್ಯೆಯರೂ. ಪ್ರೀತಿಯಿಂ ಸಡಗರಗೊಂಡು, ಆತನನ್ನು ನೋಡಬೇಕೆಂಬ ತವಕದಿಂದ ಗುಂಪುಗುಂಪಾಗಿ, ಎದುರುಗೊಳ್ಳುತ್ತಾ ಬಂದರು ॥ ೧೯ ॥

ಅಲ್ಲದೆ ತಳತಳಸುತ್ತಿರುವ ರತ್ನಕುಂಡಲಗಳ ಕಾಂತಿಗಳಿಂದಿಮ್ಮಡಿಯಾಗಿ ಹೊಳೆ

* ಸೂತಮಾಗಧವಂದಿನಃ ॥ ೨೦ ॥ ಗಾಯಂತಿ ಚೋತ್ತಮಶ್ಲೋಕ ಚರಿತಾನ್ಯದ್ಭುತಾನಿಚ । ಭಗವಾಂ ಸ್ತತ್ರ ಬಂಧೂನಾಂ ಪೌರಾಣಾ ಮನು ವರ್ತಿನಾಂ ॥ ೨೧ ॥ ಯಥಾವಿಧಿ ಸಮಾಗಮ್ಯ ಸರ್ವೇಷಾಂ ಮಾನ ಮಾದಧೇ ।ಪ್ರಹ್ವಾಭಿವಾದನಾಶ್ಲೇಷಕರಸ್ಪರ್ಶಸ್ಮಿತೇಕ್ಷಣೈಃ ॥ ೨೨ ॥ ಆಶ್ವಾಸ್ಯ ಚಾಶ್ವ ಪಾಕೇಭ್ಯೋ ವರೈ ಶ್ಚಾಭಿಮತೈ ರ್ವಿಭುಃ । ಸ್ವಯಂಚ

ಕೆಂಬ ಕುತೂಹಲದಿಂದ, ಯಾನೈಃ-ಬಂಡಿಮೊದಲಾದವುಗಳಿಂದ, ಪ್ರತ್ಯುಜ್ಜಗ್ಮುಃ - ಎದುರುಗೊಂಡರು. ಲಸತ್ಕುಂ...ಶ್ರಿಯಃ, ಲಸತ್ - ಹೊಳೆಯುವ, ಕುಂಡಲ - ಕಡಕುಗಳಿಂದ, ನಿರ್ಭಾತ - ಪ್ರಕಾಶಿಸುವ ಕಪೋಲ-ಕೆನ್ನೆಗಳಿಂದ, ವದನ-ಮುಖದಲ್ಲಿ, ಶ್ರಿಯಃ-ಕಾಂತಿಯುಳ್ಳ, ನಟ...ವರ್ಗಃ, ನಟ-ರಸಾಭಿನಯ ದಲ್ಲಿ ಜಾಣರಾದ ನಟರು, ನರ್ತಕ-ತಾಳವನ್ನನುಸರಿಸಿ ಕುಣಿಯುವವರು. ಗಂಧರ್ವಾಃ - ಗಾಯಕರು, ಸೂತ-ಪೌರಾಣಿಕರು, ಮಾಗಧ-ಹೊಗಳುಭಟರು, ವಂದಿನಃ-ಸಮಯಾನುಸಾರವಾಗಿ ಮಾತನಾಡುವವರು, ಇವರು, ಅದ್ಭುತಾನಿ, ಆಶ್ಚರ್ಯಕರಗಳಾದ, ಉತ್ತಮಶ್ಲೋಕ ಚರಿತಾನಿ-ಭಗವಂತನ ಚರಿತ್ರೆಗಳನ್ನು, ಗಾಯಂತಿ-ಹಾಡುತ್ತಿದ್ದರು, ತತ್ರ-ಆಗ, ಭಗವಾನ್-ಕೃಷ್ಣನು, ಯಥಾವಿಧಿ-ಸಂಪ್ರದಾಯಾನುಸಾರವಾಗಿ, ಸಮಾಗಮ್ಯ-ಸೇರಿ, ಪ್ರಹ್ವಾ...ಣೈಃ, ಪ್ರಹ್ವ - ತಲೆಬಾಗಿಸುವುದು, ಅಭಿವಾದನ - ನಮಸ್ಕರಿಸುವುದು, ಆಶ್ಲೇಷ-ಅಪ್ಪಿಕೊಳ್ಳುವುದು, ಕರಸ್ಪರ್ಶ-ಕೈ ಹಿಡಿವುದು, ಸ್ಮಿತ-ನಗುವುದು, ಈಕ್ಷಣೈಃ-ನೋಡುವುದು, ಇವುಗಳಿಂದ, ಅನುವರ್ತಿನಾಂ-ಹಿಂಬಾಲಿಸುತ್ತಿರುವ, ಬಂಧೂನಾಂ - ನಂಟರಿಗೂ, ಸರ್ವೇಷಾಂ - ಎಲ್ಲಾ, ಪೌರಾಣಾಂಚ, ಪಟ್ಟಣಿಗರಿಗೂ ಕೂಡ, ಮಾನಂ - ಮರ್ಯಾದೆಯನ್ನು, ಆದಧೆ-ಮಾಡಿದನು ॥ ೨೧ ॥ ವಿಭುಃ-ಪ್ರಭುವಾದಕೃಷ್ಣನು, ಆಶ್ವಪಾಕೇಭ್ಯಃ-ಚಂಡಾಲರವರೆಗೂ ಎಲ್ಲರನ್ನೂ, ಆಶ್ವಾಸ್ಯ - ಸಂತೈಸಿ,

ಯುತ್ತಿರುವ ಗಲ್ಲಿಗಳಿಂದ ಸಲ್ಲಲಿತವಾದ ಮುಖಕಾಂತಿಯುಳ್ಳ, ನಟರು ಶೃಂಗಾರಾದಿ ರಸ ಗಳನ್ನು ಅಭಿನಯಿಸುತ್ತಿದ್ದರು. ನರ್ತಕರು ತಾಳಾನುಸಾರವಾಗಿ ನಾಟ್ಯಗಳನ್ನುಮಾಡುತ್ತಿ ದ್ದರು. ಗಾಯಕರು ಇಂಪಾಗಿ ಗಾನಮಾಡತೊಡಗಿದರು. ಸೂತರು ಪುರಾಣಗಳನ್ನು ಹೇಳುತ್ತಿದ್ದರು. ಮಾಗಧರುವಂಶಾವಳಿಗಳನ್ನು ವರ್ಣಿಸುತ್ತಿದ್ದರು. ಹೊಗಳು ಭಟರು ಕಾಲೋಚಿತವಾಗಿ ಕಥೆಗಳನ್ನೂ, ಮಹಾಮಹಿಮನಾದ ಶ್ರೀಕೃಷ್ಣಮೂರ್ತಿಯ ಅದ್ಭುತ ಚರಿತ್ರೆಗಳನ್ನು ಹಾಡುತ್ತಿದ್ದರು. ಇಂತು ವೈಭವದಿಂದ ಶ್ರೀಕೃಷ್ಣನು, ಪದ್ಧತಿಯಮೇರೆ ಎದುರುಗೊಳ್ಳುವುದಕ್ಕಾಗಿಬಂದಿರುವ, ಬಂಧುಗಳನ್ನೂ, ಹಿಂಬಾಲಿಸಿರುವ ಪುರಜನರನ್ನೂ ಸೇರಿ, ಕೆಲವರಿಗೆ ತಲೆಯನ್ನು ಬಾಗಿಸಿ, ಕೆಲವರಿಗೆವಂದನವನ್ನುಮಾಡಿ, ಕೆಲವರನ್ನಾ ಲಿಂಗಿಸಿ, ಕೆಲವರನ್ನುಕೈಹಿಡಿದು, ಕೆಲವರನ್ನು ಕಂಡುನಗುತ್ತಾ, ಕೆಲವರನ್ನು ನೋಡು ತ್ತಾ, ಉಚಿತವರಿತು ಎಲ್ಲರಿಗೂ ಮರ್ಯಾದೆಯನ್ನುಮಾಡಿದನು ॥ ೨೧-೨೨ ॥

ಬಳಿಕ ಸ್ವಾಮಿಯಾದ ಕೃಷ್ಣನು, ಬ್ರಾಹ್ಮಣರುಮೊದಲು ಚಂಡಾಲರವರೆಗೂ,

* ಸೂತಾಃ ಪೌರಾಣಿಕಾಃ ಪ್ರೋಕ್ತಾ ಮಾಗಧಾ ವಂಶಶಂಸಕಾಃ । ವಂದಿನ ಸ್ತ್ವಮಲಪ್ರಜ್ಞಾಃ ಪ್ರಸ್ತಾವ ಸದೃಶೋಕ್ತಯಃ.

ಗುರುಭಿ ರ್ವಿಪ್ರೈಃ ಸ್ಸದಾರೈ ಸ್ಸ್ಥವಿರೈ ರಪಿ ॥ ೨೩ ॥ ಆಶೀರ್ಭಿ ರ್ಯು
ಜ್ಯಮಾನೋಽನ್ಯೈಃ ರ್ವಂದಿಭಿ ಶ್ಚಾ ವಿಶ ತ್ಪುರಂ । ರಾಜಮಾರ್ಗಂ ಗತೇ
ಕೃಷ್ಣೇ ದ್ವಾರಕಾಯಾಂ ಕುಲಸ್ತ್ರಿಯಃ ॥ ೨೪ ॥ ಹರ್ಮ್ಯಾಣ್ಯಾರುರು
ಹು ರ್ವಿಪ್ರಾ ಸ್ತದೀಕ್ಷಣ ಮಹೋತ್ಸವಾಃ । ನಿತ್ಯಂ ನಿರೀಕ್ಷ ಮಾಣಾನಾಂ
ಯದಪಿ ದ್ವಾರ ಕೌಕಸಾಂ ॥ ೨೫ ॥ ನ ವಿತೃಪ್ಯಂತಿ ಹಿ ದೃಶ ಶ್ಶ್ರಿಯೋ
ಧಾಮಾಂಗ ಮಚ್ಯುತಂ । ಶ್ರಿಯೋ ನಿವಾಸೋ ಯಸ್ಯೋರಃ ಪಾನಪಾತ್ರಂ
ಮುಖಂ ದೃಶಾಂ ॥೨೬॥ ಬಾಹವೋ ಲೋಕಪಾಲಾನಾಂ ಸಾರಂಗಾಣಾಂ

ವರ್ಯೈಃ-ಉತ್ತಮರುಗಳಾದ; ಅಭಿಮತ್ಯೈಃ-ಇಷ್ಟವಸ್ತುಗಳನ್ನು ಕೊಟ್ಟು, ಮಾನವಾದಧೇ-ಮರ್ಯಾದೆಮಾಡಿದನು, ಸ್ವಯಂಚ-ತಾನೂ, ಗುರುಭಿಃ-ಗುರುಗಳೂ, ಸದಾರೈಃ-ಸಪತ್ನೀಕರೂ, ಸ್ಥವಿರೈಃ - ವೃದ್ಧರೂ ಆದ, ವಿಪ್ರೈಃ - ಬ್ರಾಹ್ಮಣರಿಂದಲೂ, ಅನ್ಯೈಃ-ಇತರರಾದ, ವಂದಿಭಿಶ್ಚ - ಹೊಗಳುಭಟರಿಂದಲೂ, ಆಶೀರ್ಭಿಃ-ಹರಕೆಗಳಿಂದ, ಯುಜ್ಯಮಾನಃ-ಸೇರಿಸಲ್ಪಟ್ಟವನಾಗಿ, ಪುರಂ-ದ್ವಾರಕೆಯನ್ನು, ಅವಿಶತ್-ಪ್ರವೇಶಿಸಿದನು, ಕೃಷ್ಣೇ-ಕೃಷ್ಣನು, ರಾಜಮಾರ್ಗಂ - ರಾಜವೀಥಿಯನ್ನು, ಗತೇಸತಿ - ಹೊಗಲು, ದ್ವಾರಕಾಯಾಂ-ದ್ವಾರಕೆಯಲ್ಲಿ, ಕುಲಸ್ತ್ರಿಯಃ-ಗರತಿಯರು, ಹೇ ವಿಪ್ರಾಃ-ಎಲೈಶೌನಕಾದಿಗಳಿರಾ ! ತದೀ... ವಾಃ, ತತ - ಆ ಕೃಷ್ಣನ, ಈಕ್ಷಣ-ನೋಟವೆಂಬ, ಮಹೋತ್ಸವಾಃ-ದೊಡ್ಡ ಉತ್ಸವ ವುಳ್ಳವರಾಗಿ, ಹರ್ಮ್ಯಾಣಿ-ಉಪ್ಪರಿಗೆಗಳನ್ನು, ಆರುರುಹುಃ-ಹತ್ತಿದರು.

ಯಸ್ಯ-ಯಾವನ, ಉರಃ-ಎದೆಯು, ಶ್ರಿಯಃ-ಲಕ್ಷ್ಮಿಗೆ, ನಿವಾಸಃ - ನೆಲೆಯೋ, ದೃಶಾಂ-ಕಣ್ಣುಗಳಿಗೆ, ಯಸ್ಯ-ಯಾವನ, ಮುಖಂ - ಮುಖವು, ಪಾನಪಾತ್ರಂ - ಕುಡಿಯುವ ಪಾತ್ರೆಯೋ, ಯಸ್ಯ-ಯಾವನ, ಬಾಹವಃ-ಭುಜಗಳು, ಲೋಕಪಾಲಾನಾಂ-ದಿಕ್ಪಾಲಕರಿಗೆ, ನಿವಾಸಃ ನೆಲೆಯೋ, ಯಸ್ಯ-ಯಾವನ, ಪದಾಂಬುಜಂ-ಪಾದಕಮಲವು, ಸಾರಂಗಾಣಾಂ, ಸಾರಂ - ಭಗವಂತನನ್ನು, ಗಾಣಾಂ-ಭಜಿಸುವ ಭಕ್ತರಿಗೆ, ನಿವಾಸಃ-ನೆಲೆಯೋ, ಅಂತಹ, ಶ್ರಿಯಃ-ಕಾಂತಿಗೆ, ಧಾಮಾಂಗಂ-ಸ್ಥಾನವಾದ ಅಂಗಗಳುಳ್ಳ, ಅಚ್ಯುತಂ-ಕೃಷ್ಣನನ್ನು, ನಿತ್ಯಂ-ಯಾವಾಗಲೂ, ನಿರೀಕ್ಷಮಾಣಾನಾಮಪಿ-ನೋಡುತ್ತಿದ್ದರೂ, ದ್ವಾರಕೌಕಸಾಂ-ದ್ವಾರಕಾವಾಸಿಗಳ, ದೃಶಃ-ಕಣ್ಣುಗಳು, ಯತ್-ಯಾವಕಾರಣದಿಂದ, ನವಿತೃಪ್ಯಂತಿ-

---

ಎಲ್ಲರಿಗೂ ಅಭಯವನ್ನುಕೊಟ್ಟು, ಅವರಿಗೆ ಬೇಕಾದವಸ್ತುಗಳನ್ನಿತ್ತು, ಸಪತ್ನೀಕರಾಗಿ ಬಂದಿರುವ ವೃದ್ಧರಾದ, ಬ್ರಾಹ್ಮಣರಿಂದಲೂ,ವಂದಿಮಾಗಧರುಮೊದಲಾದ ಕೈವಾರದವರಿಂದಲೂ, ಆಶೀರ್ವಾದಗಳನ್ನುಪಡೆಯುತ್ತಾ,ಪುರವನ್ನುಹೊಕ್ಕನು. ಶ್ರೀಕೃಷ್ಣಮೂರ್ತಿಯು ರಾಜವೀಥಿಯಲ್ಲಿ ಬರುತ್ತಿರುವದನ್ನುಕೇಳಿ ಆ ಪಟ್ಟಣದ ರಮಣಿಯರೆಲ್ಲರೂ, ಆತನನ್ನು ನೋಡಬೇಕೆಂಬ ತವಕದಿಂದ ತಂತಮ್ಮ ಉಪ್ಪರಿಗೆಗಳನ್ನೇರಿದರು॥೨೩-೨೪॥ಮಹಾಲಕ್ಷ್ಮಿಗೆ ನೆಲೆಯಾದ ವಕ್ಷಸ್ಥಳದಿಂದಲೂ, ಎಲ್ಲರಕಣ್ಮನಗಳನ್ನೂ ಸೆಳೆಯುವ ಸೌಂದರ್ಯಸಾರದಿಂದೊಡಗೂಡಿದ ಮುಖದಿಂದಲೂ, ಇಂದ್ರಾದಿ ದಿಕ್ಪಾಲರಿಗಾವಾಸವಾದ ಭುಜಗಳಿಂದಲೂ, ಭಕ್ತರಿಗೆ ಪರಾಯಣವಾದಪಾದಕಮಲಗಳಿಂದಲೂ, ರಮಣೀಯ್ಯನೆನಿಸಿ, ಲಾವಣ್ಯಕ್ಕೆ ಗಣಿಯಾದ ಅಂಗಗಳುಳ್ಳಶ್ರೀಕೃಷ್ಣಮೂರ್ತಿಯನ್ನುನಿತ್ಯವೂ ನೋಡುತ್ತಿದ್ದರೂ,ದ್ವಾರಕಾ

ಪದಾಂಬುಜಂ ॥ ೨೭ ॥ ಸಿತಾತಪತ್ರವ್ಯಜನೈ ರುಪಸ್ಕೃತಃ ಪ್ರಸೂನವರ್ಷೈ ರಭಿವರ್ಷಿತಃ ಪಥಿ । ಪಿಶಂಗವಾಸಾ ವನಮಾಲಯಾ ಬಭೌ ಘನೋ ಯಥಾರ್ಕೋಡುಪಚಾಪವೈದ್ಯುತೈಃ ॥ ೨೮ ॥ ಪ್ರವಿಷ್ಟಸ್ತು ಗೃಹಂ ಪಿತ್ರೋಃ ಪರಿಷ್ವಕ್ತ ಸ್ಸ್ವಮಾತೃಭಿಃ । ವವಂದೇ ಶಿರಸಾ * ಸಪ್ತ ದೇವಕೀ ಪ್ರಮುಖಾ ಸ್ತದಾ ॥ ೨೯ ॥ ತಾಃ ಪುತ್ರ ಮಂಕ ಮಾರೋಪ್ಯ ಸ್ನೇಹಸ್ನುತಪಯೋಧರಾಃ । ಹರ್ಷವಿಹ್ವಲಿತಾ

ದಣಿಯುವುದಿಲ್ಲವೋ, ಆದುದರಿಂದುಪ್ಪರಿಗೆಗಳನ್ನೇರಿದರು ॥ ೨೦-೨೭ ॥ ಸಿತಾ...ನೈಃ, ಸಿತ - ಬಿಳಿದಾದ, ಆತಪತ್ರ-ಕೊಡೆಯಿಂದಲೂ, ವ್ಯಜನೈಃ-ಚಾಮರಗಳಿಂದಲೂ, ಉಪಸ್ಕೃತಃ-ಅಲಂಕರಿಸಲ್ಪಟ್ಟ, ಪಥಿ-ದಾರಿಯಲ್ಲಿ, ಪ್ರಸೂನವರ್ಷೈಃ-ಹೂಮಳೆಗಳಿಂದ, ಅಭಿವರ್ಷಿತಃ-ವ್ಯಾಪ್ತನಾದ, ಪಿಶಂಗವಾಸಾಃ-ಪೀತಾಂಬರಗಳನ್ನು ಧರಿಸಿರುವ ಕೃಷ್ಣನು, ವನಮಾಲಯಾ - ವನಮಾಲೆಯಿಂದ, ಅರ್ಕೋ...ತೈಃ, ಅರ್ಕ-ಸೂರ್ಯನು, ಉಡುಪ-ನಕ್ಷತ್ರಗಳಿಂದಕೂಡಿದ ಚಂದ್ರನು, ಚಾಪ-ಕಾಮನಬಿಲ್ಲು, ವೈದ್ಯುತೈಃ-ಮಿಂಚು ಇವುಗಳಿಂದ, ಘನೋಯಥಾ-ಮೇಘದಂತೆ. ಬಭೌ-ಮೆರೆಯುತ್ತಿದ್ದನು ॥೨೮॥

ಪಿತ್ರೋಃ-ತಾಯಿತಂದೆಗಳ, ಗೃಹಂ - ಮನೆಯನ್ನು, ಪ್ರವಿಷ್ಟಃ - ಹೊಕ್ಕು, ಸ್ವಮಾತೃಭಿಃ-ತನ್ನ ತಾಯಿಯರಿಂದ, ಪರಿಷ್ವಕ್ತಃ-ಆಲಿಂಗಿಸಲ್ಪಟ್ಟವನಾಗಿ, ತದಾ-ಆಗ, ದೇವಕೀಪ್ರಮುಖಾಃ-ದೇವಕಿಯೇ ಮೊದಲಾದ, ಸಪ್ತ-ಏಳುಮಂದಿಯನ್ನು, ಶಿರಸಾ-ಶಿರಸ್ಸಿನಿಂದ, ವವಂದೇ-ಮಣಿದನು, ॥ ೨೯ ॥ ತಾಃ-ಆತಾಯಿಯರು, ಪುತ್ರಂ-ಮಗನಾದ ಕೃಷ್ಣನನ್ನು, ಅಂಕಂ-ತೊಡೆಯನ್ನು, ಆರೋಪ್ಯ-ಹತ್ತಿಸಿ, ಸ್ನೇಹ...ರಾಃ, ಸ್ನೇಹ - ವಾತ್ಸಲ್ಯದಿಂದ, ಸ್ನುತ - ಸ್ರವಿಸುತ್ತಿರುವ, ಪಯೋಧರಾಃ - ಸ್ತನಗಳುಳ್ಳವರಾಗಿಯೂ, ಹರ್ಷ...ನಃ, ಹರ್ಷ-ಸಂತೋಷದಿಂದ, ವಿಹ್ವಲಿತ-ಪರವಶವಾದ, ಆತ್ಮಾನಃ - ಮನಸ್ಸುಳ್ಳವ

ವಾಸಿಗಳಿಗೆ ತೃಪ್ತಿಯಿಲ್ಲವಾದುದರಿಂದ ಆ ಮಹಿಳೆಯರು ಸೌಧಗಳನ್ನೇರಿ ನೋಡುತ್ತಿದ್ದುದು ನ್ಯಾಯವೇಸರಿ ॥ ೨೬-೨೭ ॥

ಆಗ ಭಗವಂತನು, ಪೀತಾಂಬರಗಳನ್ನುಧರಿಸಿ ವನಮಾಲೆಯಿಂದಲಂಕೃತನಾಗಿ, ಪೂರ್ಣ ಚಂದ್ರಮಂಡಲಗಳಂತೆ ಬಿಳಿದಾದಬೆಳುಗೊಡೆಗಳನೆರಳಲ್ಲಿ, ಚಾಮರಗಳಿಂದಬೀಸಲ್ಪಡುತ್ತಾ, ದಾರಿಯಲ್ಲಿಪುರಜನರು ಚೆಲ್ಲುತ್ತಿರುವಪುಷ್ಪರಾಶಿಗಳನ್ನುಬಳಸುತ್ತಾ. ಸೂರ್ಯಚಂದ್ರ ಬಿಂಬಗಳಿಂದಲೂ, ನಕ್ಷತ್ರ ರಾಶಿಯಿಂದಲೂ, ಇಂದ್ರಧನುರ್ಯುಗ್ಮದಿಂದಲೂ, ಮಿಂಚುಬಳ್ಳಿಯಿಂದಲೂ, ಕೂಡಿರುವ ನೀಲಮೇಘದಂತೊಪ್ಪಿದನು ॥ ೨೮ ॥ ಬಳಿಕ ಆ ಕೃಷ್ಣನು ತನ್ನತಂದೆಯ ಮನೆಗೆ ಹೋಗಿ, ತಾಯಿಯರಿಂದ ಆಲಿಂಗಿತನಾಗಿ, ದೇವಕಿಯೇ ಮೊದಲಾದ ಏಳುಮಂದಿ ತಾಯಿಯರಿಗೂ ವಂದಿಸಿದನು॥೨೯॥ ಕೂಡಲೇ ಅವರು ಮಗನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಸ್ನೇಹದಿಂದಸ್ರವಿಸುತ್ತಿರುವಸ್ತನಗಳುಳ್ಳವ

* ದೇವಕೀ, ಶ್ರುತದೇವಾ, ಶಾಂತಿದೇವಾ, ಉಪದೇವಾ, ಶ್ರೀದೇವಾ, ದೇವರಕ್ಷಿತಾ, ಸಹದೇವಾ, ಈ ಏಳುಮಂದಿಯೂ ವಸುದೇವನ ಪತ್ನಿಯರು.

ತ್ಮಾನ ಸ್ಸಿಷಿಚು ರ್ನೇತ್ರಜೈ ರ್ಜಲೈಃ ॥ ೩೦ ॥ ಅಥಾವಿಶ ತ್ಸ್ವಭವನಂ
ಸರ್ವಕಾಮ ಮನುತ್ತಮಂ । ಪ್ರಾಸಾದಾ ಯತ್ರ ಪತ್ನೀನಾಂ ಸಹಸ್ರಾ
ಣಿಚ ಷೋಡಶ ॥ ೩೧ ॥ ಪತ್ನ್ಯಃ ಪತಿಂ ಪ್ರೋಷ್ಯ ಗೃಹಾನು ಪಾಗತಂ
ವಿಲೋಕ್ಯ ಸಂಜಾತ ಮನೋ ಮಹೋತ್ಸವಾಃ । ಉತ್ತಸ್ಥು ರಾರಾ ತ್ಸಹ
ಸಾ ಸನಾಶಯಾ ತ್ಸಾಕಂ * ವ್ರತೈ ರ್ವ್ರೀಡಿತ ಲೋಚನಾನನಾಃ ॥೩೨॥

ರಾಗಿಯೂ, ನೇತ್ರಜೈಃ-ಕಣ್ಣಿಂದಬರುವ, ಜಲೈಃ-ಆನಂದಬಾಷ್ಪಗಳಿಂದ, ಸಿಷಿಚುಃ-ನೆನಸಿದರು ॥ ೩೦ ॥ ಅಥ-ಅನಂತರದಲ್ಲಿ, ಯತ್ರ-ಎಲ್ಲಿ, ಪತ್ನೀನಾಂ - ಹೆಂಡತಿಯರ, ಷೋಡಶ - ಹದಿನಾರು ಸಹಸ್ರಾಣಿ-ಸಾವಿರ, ಪ್ರಾಸಾದಾಃ - ಅಂತಃಪುರಗಳುಂಟೋ, ಸರ್ವಕಾಮಂ - ಸಕಲ ಇಷ್ಟವಸ್ತುಗಳುಳ್ಳ, ಅನುತ್ತಮಂ-ಸರ್ವೋತ್ತಮವಾದ, ಸ್ವಭವನಂ - ಅಂತಹ ತನ್ನರಮನೆಯನ್ನು ಅವಿಶತ್-ಪ್ರವೇಶಿಸಿದನು ॥೩೧॥

ಪತ್ನ್ಯಃ-ಹೆಂಡತಿಯರು, ಪ್ರೋಷ್ಯ-ದೇಶಾಂತರದಲ್ಲಿದ್ದು, ಗೃಹಾನ್-ಮನೆಗೆ, ಉಪಾಗತಂ-ಬಂದ, ಪತಿಂ-ಗಂಡನನ್ನು ವಿಲೋಕ್ಯ-ಕಂಡು, ಸಂಜಾತ...ವಾಃ, ಸಂಜಾತ-ಉಂಟಾದ, ಮನಃ-ಮನಸ್ಸಿನ, ಮಹೋತ್ಸವಾಃ-ಉತ್ಸವವುಳ್ಳವರಾಗಿ, ಆರಾತ್-ದೂರವಾಗಿಯೇ, ಸಹಸಾ-ಬೇಗನೆ, ವ್ರತೈಸ್ಸಾಕಂ-ವ್ರತಗಳೊಡನೆ, ವ್ರೀಡಿತ...ನಾಃ, ವ್ರೀಡಿತ-ನಾಚುತ್ತಿರುವ, ಲೋಚನ-ಕಣ್ಣುಗಳು, ಆನನಾಃ-ಮುಖವುಳ್ಳವರಾಗಿ, ಆಸನಾಶಯಾತ್ - ಆಸನ-ಪೀಠದಿಂದಲೂ, ಆಶಯಾತ್-ಮನಸ್ಸಿನಿಂದಲೂ, ಉತ್ತಸ್ಥುಃ-ಎದ್ದರು, ॥ ೩೨ ॥ ಹೇಭೃಗುವರ್ಯ-ಎಲೈ ಭೃಗುವಂಶದಲ್ಲಿ ಶ್ರೇಷ್ಠನಾದ ಶೌನಕನೇ ! ತಂ-ಮನೆಗೆ

ರಾಗಿ, ಅತ್ಯಂತಸಂತೋಷದಿಂದ ಪರವಶತೆಯನ್ನು ಪಡೆದು, ಆನಂದ ಬಾಷ್ಪಗಳಿಂದ ಮಗನನ್ನು ಅಭಿಷೇಕಿಸಿದರು ॥ ೩೦ ॥

ಅನಂತರದಲ್ಲಿ ಕೃಷ್ಣನು, ಹದಿನಾರುಸಾವಿರದನೂರೆಂಟು ಅಂತಃಪುರಗಳಿಂದಲೂ, ಸಕಲಕಾಮಗಳಿಂದಲೂ ಸರ್ವೋತ್ತಮವೆನಿಸಿರುವ ತನ್ನ ಅರಮನೆಯನ್ನು ಹೊಕ್ಕನು ॥ ಆಗ ಆತನ ಪತ್ನಿಯರು ದೇಶಾಂತರದಿಂದ ಬಂದ ಪ್ರಾಣಕಾಂತನನ್ನು ಕಂಡು, ಅತ್ಯಂತ ಸಂತೋಷಗೊಂಡು, ಗಂಡನಗಲಿಕೆಯಲ್ಲಿ ಹಿಡಿದಿದ್ದ ಹಾಸ್ಯಕ್ರೀಡಾವರ್ಜನಾದಿ ನಿಯಮಗಳನ್ನು ತೊರೆದು, ಕಾಲಪ್ರಾಪ್ತವಾದ ನಾಚಿಕೆಯಿಂದ ತಲೆಯನ್ನು ಬಾಗಿಸಿ, ಓರೆನೋಟಗಳಿಂದ ನೋಡುತ್ತಾ, ದೂರದಿಂದಲೇ ಪೀಠದಿಂದೆದ್ದು ನಿಂತು ಕೊಂಡರು ॥ ಅಯ್ಯಾ ಶೌನಕನೆ ! ಗಂಭೀರಸ್ವಭಾವವುಳ್ಳ ಆಸ್ತ್ರೀಯರ ಚಮತ್ಕಾರವೇನೆಂದು ಹೇಳಲಿ ! ಕೃಷ್ಣನನ್ನು ಕಾಣುವುದಕ್ಕೆ ಮೊದಲು, ಮನಸ್ಸಿನಿಂದಲೂ, ಕಂಡಬಳಿಕ ಕಣ್ಣುಗಳಿಂದಲೂ, ಆಲಿಂಗಿಸಿದವರಾಗಿ, ಬಳಿಕ, ತಮ್ಮ ಮಕ್ಕಳನ್ನು ಆಲಿಂಗನಗೊಳಿಸುವ

* ಕ್ರೀಡಾಂ ಶರೀರಸಂಸ್ಕಾರಂ ಸಮಾಜೋತ್ಸವದರ್ಶನಂ । ಹಾಸ್ಯಂ ಪರಗೃಹೇಯಾನಂ ತ್ಯಜೇತ್ ಪ್ರೋಷಿತ ಭರ್ತೃಕಾ (ಯಾಜ್ಞವಲ್ಕ್ಯ) ಪತಿಯು ಪ್ರವಾಸದಲ್ಲಿರುವಾಗ, ಪತ್ನಿಯಾದವಳು, ಆಟಗಳನ್ನೂ ಅಲಂಕಾರ, ಹಾಸ್ಯ ಇವುಗಳನ್ನು ಸಮಾಜಗಳಿಗೂ ಉತ್ಸವಗಳಿಗೂ ಇತರರ ಮನೆಗಳಿಗೂ ಹೋಗುವುದನ್ನೂ, ಬಿಡಬೇಕೆಂದು ತಾತ್ಪರ್ಯವು.

ತ ಮಾತ್ಮಜೈ ರ್ದೃಷ್ಟಿಭಿ ರಂತರಾತ್ಮನಾ ದುರಂತಭಾವಾಃ ಪರಿರೇಭಿರೇ ಪತಿಂ । ನಿರುದ್ಧ ಮಪ್ಯಾಸ್ರುವ ದಂಬು ನೇತ್ರಯೋ ರ್ವಿಲಜ್ಜಿತಾನಾಂ ಭೃಗುವರ್ಯ ವಿಕ್ಲಬಾತ್ ॥ ೩೩ ॥ ಯದ್ಯಪ್ಯಸೌ ಪಾರ್ಶ್ವಗತೋ ರಹೋಗತ ಸ್ತಾಸಾಂ ತಥಾ ಪ್ಯಂಘ್ರಿಯುಗಂ ನವಂನವಂ । ಪದೇಪದೇ ಕಾ ವಿರಮೇತ ತತ್ಪದಾ ಚ್ಚಲಾಪಿ ಯಂ ಶ್ರೀ ರ್ನಜಹಾತಿ ಕರ್ಹಿಚಿತ್ ॥ ಏವಂ ನೃಪಾಣಾಂ ಕ್ಷಿತಿಭಾರ ಜನ್ಮನಾ ಮಕ್ಷೌಹಿಣೀಭಿಃ ಪರಿವೃತ್ತ ತೇಜಸಾಂ। ವಿಧಾಯ ವೈರಂ ಶ್ವಸನೋ ಯಥಾನಲಂ ಮಿಥೋ ವಧೇನೋ ಪರತೋ

ಬಂದ, ಪತಿಂ-ಗಂಡನನ್ನು, ದುರಂತಭಾವಾಃ-ಗಂಭೀರವಾದ ಅಭಿಪ್ರಾಯವುಳ್ಳ, ಆಸ್ತ್ರೀಯರು, ಅಂತರಾತ್ಮನಾ-ಮನಸ್ಸಿನಿಂದಲೂ, ದೃಷ್ಟಿಭಿಃ-ನೋಟದಿಂದಲೂ, ಆತ್ಮಜೈಃ-ಮಕ್ಕಳಿಂದಲೂ, ಪರಿರೇಭಿರೇ-ಆಲಿಂಗಿಸಿಕೊಂಡರು, ವಿಕ್ಲಬಾತ್ - ಪಾರವಶ್ಯದಿಂದ, ವಿಲಜ್ಜಿತಾನಾಂ-ನಾಚಿಕೆಗೊಂಡ ಆಸ್ತ್ರೀಯರ, ನೇತ್ರಯೋಃ-ಕಣ್ಣುಗಳಲ್ಲಿ, ನಿರುದ್ಧ ಮಪಿ-ತಡೆಯಲ್ಪಟ್ಟರೂ, ಅಂಬು - ಆನಂದಬಾಷ್ಪವು, ಆಸ್ರುವತ್-ಕೊಂಚವಾಗುರುಳಿತು, ॥ ೩೩ ॥ ಯದ್ಯಪಿ-ಹೇಗಾದರೂ, ಅಸೌ-ಈ ಕೃಷ್ಣನು, ತಾಸಾಂ-ಅವರಿಗೆ, ಪಾರ್ಶ್ವಗತಃ-ಪಕ್ಕದಲ್ಲಿರುವನು, ರಹೋಗತಃ-ಏಕಾಂತದಲ್ಲಿಯೂಇರುವನು, ತಥಾಪಿ - ಆದರೂ, ಪದೇ ಪದೇ-ಅಡಿಗಡಿಗೂ, ಅಂಘ್ರಿಯುಗಂ-ಯಾವಪಾದಯುಗ್ಮವು, ನವಂನವಂ-ಹೊಸದಾಗಿಯೇ ಇರುವುದೋ, ಶ್ರೀಃ-ಲಕ್ಷ್ಮಿಯು, ಚಲಾಪಿ-ಚಂಚಲೆಯಾದರೂ, ಕರ್ಹಿಚಿತ್-ಯಾವಾಗಲೂ, ಯಂ-ಯಾವನನ್ನು, ನಜಹಾತಿ-ಬಿಡುವುದಿಲ್ಲವೋ, ತತ್ಪದಾ-ಅವನಪಾದವನ್ನು, ಕಾ-ಯಾವಳು, ವಿರಮೇತ-ಬಿಟ್ಟಾಳು ॥ ೩೪ ॥ ಏವಂ-ಇಂತು, ಕ್ಷಿತಿಭಾರಜನ್ಮನಾಂ-ಭೂಮಿಗೆಭಾರವಾಗಿ ಜನಿಸಿರುವ, ಅಕ್ಷೌಹಿಣೀಭಿಃ - ಅಕ್ಷೌಹಿಣೀ ಸೇನೆಗಳಿಂದ, ಪರಿವೃತ್ತತೇಜಸಾಂ - ವ್ಯಾಪ್ತವಾದ ತೇಜಸ್ಸುಳ್ಳ, ನೃಪಾಣಾಂ - ರಾಜರೊಳಗೆ, ಮಿಥಃ-ಬಿದಿರುಗಳ ಅನ್ಯೋನ್ಯಘರ್ಷಣದಿಂದ, ಅನಲಂ ಅಗ್ನಿಯನ್ನು, ವಿಧಾಯ - ಉಂಟುಮಾಡಿ, ಶ್ವಸನೋ

ನೆವಮಾಡಿಕೊಂಡು ಶರೀರದಿಂದಲೂ ಪತಿಯನ್ನಾಲಿಂಗಿಸಿದರು, ಆಗ ಸ್ತ್ರೀಸ್ವಭಾವ ಸಹಜವಾದ ನಾಚಿಕೆಯಿಂದಕೂಡಿ ಆನಂದಪರವಶರಾಗಿರುವ ಅವರಕಣ್ಣುಗಳಲ್ಲಿ ಎಷ್ಟುತಡೆದರೂ ಆನಂದಬಾಷ್ಪಗಳು ಹೊರಹೊಮ್ಮದೇ ಇರಲಿಲ್ಲ ॥ ೩೩ ॥

ಕೃಷ್ಣಮೂರ್ತಿಯು ಅವರ ಪಕ್ಕದಲ್ಲಿಯೇ ಏಕಾಂತವಾಗಿ ನೆಲಸುತ್ತಿದ್ದರೂ ಆತನಪಾದಗಳು ಅವರಿಗೆ ಅಡಿಗಡಿಗೂ ಹೊಸದಾಗಿಯೇ ತೋರುತ್ತಿದ್ದುವು. ಪ್ರಕೃತಿ ಚಂಚಲೆಯಾದಲಕ್ಷ್ಮೀದೇವಿಯೂ ಸಹ ಯಾವನಪಾದವನ್ನು ಅರೆಗಳಿಗೆಯೂ ಬಿಟ್ಟಿರಲಾರಳೋ, ಅಂತಹ ಭಗವಂತನ ಸಾನ್ನಿಧ್ಯವನ್ನು ಯಾವಳುತಾನೇ ಬಿಟ್ಟದ್ದಾಳು ? ॥ ೩೪ ॥ ಇಂತು ನಿರಾಯುಧನಾಗಿಯೇ, ಅನ್ಯೋನ್ಯ ಘರ್ಷದಿಂದ ಅಗ್ನಿಯನ್ನು ಹುಟ್ಟಿಸಿ. ಆಬೆಂಕಿಯಿಂದಲೇ ಕಾಡುಗಳನ್ನು ಸುಡಿಸುವ ಬಿರುಗಾಳಿಯಂತೆ, ಭೂಮಿಗೆ ಭಾರವಾಗಿ ಅವತರಿಸಿ ಸೇನಾಸಹಾಯದಿಂದ ಕೊಬ್ಬಿ, ಅಜಯ್ಯರೆನಿಸಿ ಕೋಟಲೆಗೊಳಿಸುತ್ತಿರುವ ರಾಜರಲ್ಲಿ ವೈರವನ್ನುಂಟುಮಾಡಿ, ಅದರಿಂದಲೇ ಭೂಭಾರವನ್ನಿಳುಹಿ, ಇಂಧನವಿಲ್ಲದಗ್ನಿಯಂತೆ

ನಿರಾಯುಧಃ ॥ ೩೫ ॥ ಸಏವಂ ನರಲೋಕೇಽಸ್ಮಿ ನ್ನವತೀರ್ಣ ಸ್ಸ್ವಮಾಯಯಾ । ರೇಮೇ ಸ್ತ್ರೀರತ್ನ ಕೂಟಸ್ಥೋ ಭಗವಾನ್ ಪ್ರಾಕೃ ತೋ ಯಥಾ ॥ ೩೬ ॥ ಉದ್ದಾಮಭಾವಪಿಶುನಾಮಲವಲ್ಗುಹಾಸ ವ್ರೀಡಾವಲೋಕನಿಹತೋ ಮದನೋಽಪಿ ಯಾಸಾಂ । ಸಂಮುಹ್ಯ ಚಾಪ ಮಜಹಾ ತ್ಪ್ರಮದೋತ್ತಮಾ ಸ್ತಾ ಯಸ್ಯೇಂದ್ರಿಯಂ ಪ್ರಮಥಿತುಂ ಕು ಹಕೈ ರ್ನಶೇಕುಃ ॥ ೩೭ ॥ ಮನ್ಯತೇ ತಮಯಂ ಲೋಕೋ ಹ್ಯಸಕ್ತ

ಯಥಾ-ಗಾಳಿಯಂತೆ, ವೈರಂ-ದ್ವೇಷವನ್ನು, ವಿಧಾಯ-ಹುಟ್ಟಿಸಿ, ಮಿಥೋವಧೇನ-ಪರಸ್ಪರ ಸಂಹಾರದಿಂದ, ನಿರಾಯುಧಃ - ತಾನು ಆಯುಧವನ್ನು ಹಿಡಿಯದೆಯೆ, ಉಪರತಃ - ಶಾಂತಿಯನ್ನು ಪಡೆದನು, ॥ ೩೫ ॥ ಭಗವಾನ್-ಭಗವಂತನಾದ, ಸಃ-ಶ್ರೀಕೃಷ್ಣನು, ಏವಂ - ಹೀಗೆ, ಅಸ್ಮಿನ್-ಈ, ನರಲೋಕೇ-ಮನುಷ್ಯ ಲೋಕದಲ್ಲಿ, ಸ್ವಮಾಯಯಾ-ತನ್ನ ಮಾಯೆಯಿಂದ, ಅವತೀರ್ಣಃ - ಅವತರಿಸಿ, ಸ್ತ್ರೀರತ್ನಕೂಟಸ್ಥಃ-ಉತ್ತಮಸ್ತ್ರೀಯರ ಕೂಟದಲ್ಲಿದ್ದುಕೊಂಡು, ಪ್ರಾಕೃತೋಯಥಾ-ಪಾಮರನಂತೆ, ರೇಮೇ-ವಿಹರಿಸಿದನು॥

ಯಾಸಾಂ-ಯಾವ ಸ್ತ್ರೀಯರ, ಉದ್ದಾಮ…ನಿಹತಃ, ಉದ್ದಾಮ-ಗಂಭೀರಗಳಾದ, ಭಾವ-ಅಭಿಪ್ರಾಯಗಳಿಗೆ, ಪಿಶುನ-ಸೂಚಕಗಳಾದ, ಅಮಲ-ಶುದ್ಧವಾದ, ವಲ್ಗು - ಸೊಗಸಾದ, ಹಾಸ-ನಗೆಯು, ವ್ರೀಡಾ-ನಾಚಿಕೆಯು, ಅವಲೋಕ-ಕಡೆಗಣ್ಣುಗಳ ನೋಟವು, ಇವುಗಳಿಂದ, ನಿಹತಃ-ಸೋಲಿಸಲ್ಪಟ್ಟ. ಮದನೋಽಪಿ - ಮನ್ಮಥನೂ, ಅಥವಾ ಅಮದನೋಽಪಿ - ಶಿವನೂ, ಸಂಮುಹ್ಯ - ಮರುಳಾಗಿ, ಚಾಪಂ-ಬಿಲ್ಲನ್ನು, ಅಜಹಾತ್-ಬಿಸುಟನೋ, ತಾಃ- ಅಂತಹ, ಪ್ರಮದೋತ್ತಮಾಃ - ಉತ್ತಮಸ್ತ್ರೀಯರು, ಕುಹಕೈಃ-ಮೋಸಗೊಳಿಸುವ ಬೆಡಗುಗಳಿಂದ, ಯಸ್ಯ-ಯಾವ ಕೃಷ್ಣನ, ಇಂದ್ರಿಯಂ-ಮನಸ್ಸನ್ನು, ಪ್ರಮಥಿತುಂ-ವಶಪಡಿಸಿಕೊಳ್ಳುವುದಕ್ಕೆ, ನಶೇಕುಃ-ಸಮರ್ಥರಾಗಲಿಲ್ಲವೋ ॥ ೩೭ ॥

ವ್ಯಾಪ್ಯವ್ಯಾಪನಂ - ಸರ್ವವ್ಯಾಪಕನಾದ- ತಂ - ಅಂತಹ ಕೃಷ್ಣನನ್ನು, ಅಯಂಲೋಕಃ - ಈ ಪ್ರಪಂಚವು, ಆತ್ಮೌಪಮ್ಯೇನ-ತಮ್ಮಸಾಮ್ಯದಿಂದ, ಮನುಜಂ-ಮನುಷ್ಯನನ್ನಾಗಿಯೂ, ಅಸಕ್ತಮಪಿ-

ಯಾವನು ಶಾಂತಿಯನ್ನು ಪಡೆದನೋ ॥ ೩೫ ॥

ಆ ಭಗವಂತನು ಇಂತು ತನ್ನ ಮಾಯೆಯಿಂದ ಈ ಭೂಲೋಕದಲ್ಲಿ ಅವತರಿಸಿ, ಉತ್ತಮೆಯರಾದ ಮತ್ತಕಾಶಿನಿಯರ ಮೊತ್ತದಿಂಕೂಡಿ ಸಾಧಾರಣ ಜನರಂತೆ ರಮಿಸು ತ್ತಿದ್ದನು ॥ ೩೬ ॥ ಲೋಕೈಕವೀರನಾದ ಮಾರನೂ, ಆಮಾರನನ್ನು ಸೂರೆಗೈದ ಶೂಲಧಾರಿಯೂ ಸಹ, ಬೆಳದಿಂಗಳಂತೆ ಮನೋಹರವಾದ ಕಿರುನಗೆಯಿಂದಲೂ, ಲಜ್ಜೆ ಗೂಡಿದೋರೆನೋಟಗಳಿಂದಲೂ, ಗಂಭೀರವಾದ ಮನೋಭಾವವನ್ನು ಸೂಚಿಸುತ್ತಿ ರುವ ಯಾವ ಮೋಹನಾಂಗಿಯರಿಗೆ ಸೋತು ತಮ್ಮ ಬಿಲ್ಲುಗಳನ್ನು ಬಿಸುಟರೋ, ಅಂತಹ ಗಜಗಾಮಿನಿಯರಾದ ಕಾಮಿನಿಯರೂ, ತಮ್ಮ ಬೆಡಗುಗಳಿಂದ ಯಾವ ಭಗ ವಂತನ ಮನಸ್ಸನ್ನು ವಶಗೊಳಿಸಿಕೊಳ್ಳದೇ ಹೋದರೋ ॥ ೩೭ ॥ ಸರ್ವವ್ಯಾಪಕನಾದ ಆಭಗವಂತನನ್ನು ಈಜನರು ತಮ್ಮಂತೆಯೇ, ಆತನು ಮನುಷ್ಯನೆಂತಲೂ, ವಿಷಯಗ ಳನ್ನಂಟದಿದ್ದರೂ, ವಿಷಯಾಸಕ್ತನೆಂತಲೂ ತಿಳಿಯುತ್ತಿರುವರು. ಆದುದರಿಂದ ಇವರು

ಮಪಿ ಸಂಗಿನಂ । ಆತ್ಮಾ ಪತ್ನ್ಯೇನ ಮನುಜಂ ವ್ಯಾವೃಣ್ವಾನ ಮತೋ
ಬುಧಃ ॥ ೩೮ ॥ ಏತದೀಶನ ಮೀಶಸ್ಯ * ಪ್ರಕೃತಿಸ್ಥೋಪಿ ತದ್ಗುಣೈಃ।
ನಯುಜ್ಯತೇ ಸದಾತ್ಮಸ್ಥೈ ರ್ಯಥಾ ಬುದ್ಧಿ ಸ್ತದಾಶ್ರಯಾ ॥ ೩೯ ॥
ತಂ ಮೇನಿರೇ ಒಲಾ ಮೌಢ್ಯಾತ್ ಸ್ತ್ರೈಣಂ ಚಾನುವ್ರತಂ ರಹಃ ।
ಅಪ್ರಮಾಣವಿದೋ ಭರ್ತು ರೀಶ್ವರಂ ಮತಯೋ ಯಥಾ ॥ ೪೦ ॥

ಇತ್ಯೇಕಾದಶೋ ಧ್ಯಾಯಃ

ವಿಷಯಗಳನ್ನುಂಟದವನಾದರೂ, ಸಂಗಿನಂ-ವಿಷಯಾಸಕ್ತನನ್ನಾಗಿಯೂ, ಮನ್ಯತೇ ತಿಳಿಯುತ್ತದೆ, ಅತಃ-ಆದುದರಿಂದ, ಅಬುಧಃ ತಿಳಿವಳಿಕೆಇಲ್ಲದ್ದು ॥ ೩೮ ॥ ಆತ್ಮಸ್ಥೈಃ-ಆತ್ಮನಲ್ಲಿರುವ ಆನಂದಾದಿ ಗುಣಗಳಿಂದ, ತದಾಶ್ರಯಾಪಿ-ಆ ಆತ್ಮನನ್ನು ಆಶ್ರಯಿಸಿದ್ದಗೂ, ಬುದ್ಧಿಃ - ಬುದ್ಧಿಯು, ಯಥಾ ಹೇಗೆ, ನಯುಜ್ಯತೇ - ಸೇರಲ್ಪಡುವುದಿಲ್ಲವೋ, ತಥಾ-ಹಾಗೆ, ಪ್ರಕೃತಿಸ್ಥೋಪಿ - ಪ್ರಕೃತಿಯಲ್ಲಿರುವವನಾದರೂ, ತದ್ಗುಣೈಃ-ಆಪ್ರಕೃತಿ ಗುಣಗಳಿಂದ, ಸದಾ-ಯಾವಾಗಲೂ, ನಯುಜ್ಯತ ಇತಿಯತ್ - ಸೇರಲ್ಪಡುವುದಿಲ್ಲವೆಂಬುದಾವುದುಂಟೋ, ಏತತ್-ಇದೇ, ಈಶಸ್ಯ - ಭಗವಂತನಿಗೆ, ಈಶನಂ - ಸ್ವಾಮಿತ್ವವು ॥ ೩೯ ॥ ಅಬಲಾಃ - ಆತನಪತ್ನಿಯರು, ಮೌಢ್ಯಾತ್ - ಅವಿವೇಕದಿಂದ, ಭರ್ತುಃ - ಗಂಡ ಅಪ್ರಮಾಣವಿದಃ - ಮಹಿಮೆಯನ್ನು ತಿಳಿಯದವರಾಗಿ, ತಂ - ಆತನನ್ನು, ಮತಯೋಯಥಾ - ತಮ್ಮಬುದ್ಧಿಗನುಸಾರವಾಗಿ, ಸ್ತ್ರೈಣಂ-ತಮಗಧೀನನೆಂತಲೂ, ರಹಃ-ಏಕಾಂತದಲ್ಲಿ, ಅನುವ್ರತಂ - ಅನುಸರಿಸುವವನೆಂತಲೂ, ಮೇನಿರೇ-ತಿಳಿದರು ॥ ೪೦ ॥

ಏಕಾದಶಾಧ್ಯಾಯಂ ಸಮಾಪ್ತಂ

ಮೂಢರಲ್ಲವೇ ॥ ೩೮ ॥ ಶರೀರವನ್ನಾಶ್ರಯಿಸಿರುವ ಬುದ್ಧಿಯು ಶರೀರದ ಸುಖದುಃಖಗಳಿಗೆ ಒಳಗಾಗುವಂತೆ, ಆತನು ಪ್ರಕೃತಿಯಲ್ಲಿರುವವನಾದರೂ ಆಪ್ರಕೃತಿಯ ಗುಣಗಳಾದ ಸುಖದುಃಖಾದಿಗಳಿಗೆ ಯಾವಾಗಲೂ ಒಳಗಾಗುವುದಿಲ್ಲ. ಇದೇಅಲ್ಲವೆ! ಭಗವಂತನ ಮಹಿಮೆಯು ॥ ೩೯ ॥

ಹೀಗಿದ್ದರೂ ಆತನ ಪತ್ನಿಯರು ಮೌಢ್ಯದಿಂದ ತಮ್ಮ ಪತಿಯಾದ ಕೃಷ್ಣಮೂರ್ತಿಯ ಮಹಿಮೆಯನ್ನರಿಯದೆ, ತಮ್ಮ ಬುದ್ಧಿಗೆ ತೋರಿದಂತೆ, ಅಂತಃಕರಣ ಧರ್ಮಗಳು ಕ್ಷೇತ್ರಜ್ಞನಾದ ಜೀವನನ್ನು ತಮ್ಮಗುಣಗಳಿಂದೊಡಗೂಡಿದವನೆಂದು ತಿಳಿಯುವಂತೆ, ಏಕಾಂತದಲ್ಲಿ ತಮ್ಮನ್ನು ಅನುಸರಿಸುತ್ತಿದ್ದಮಾತ್ರದಿಂದಲೇ, ಆತನನ್ನು ತಮಗಡಿಯಾಳೆಂದು ತಿಳಿದರು. ಇವರು ಮುಗ್ಧೆಯರಲ್ಲವೆ! ಇಂತು ಆಭಗವಂತನು ಎಲ್ಲರನ್ನೂ ಮರುಳುಮಾಡುತ್ತಾ ಗೋಪಿಕಾಂತಃಪುರಗಳಲ್ಲಿ ವಿಹರಿಸುತ್ತಿದ್ದನೆಂದು ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ಹನ್ನೊಂದನೆಯ ಅಧ್ಯಾಯಂ ಮುಗಿದುದು

* ವೀ. ಭಗವಂತನು ಪ್ರಕೃತಿಯಲ್ಲಿರುವವನಾದರೂ, ಜೀವನ ಗುಣಗಳಿಗೆ ಒಳಗಾಗುವುದಿಲ್ಲ. ವಿ. ಭಗವಂತನನ್ನು ಆಶ್ರಯಿಸಿರುವ ಜ್ಞಾನಿಗಳೇ,ಪ್ರಕೃತಿಯಲ್ಲಿನೆಲೆಗೊಂಡಿದ್ದರೂ, ಅದಕ್ಕೆ ವಶರಾಗುವುದಿಲ್ಲ.ಇಂತಿರುವಾಗ,ಭಗವಂತನುಪ್ರಕೃತಿಯಲ್ಲಿದ್ದರೂಆಗುಣಗಳಿಂದಯುಕ್ತನಾಗುವುದಿಲ್ಲವೆಂಬುದನ್ನು ಹೇಳುವುದೇನು?

ಓಂ ನಮಃಪರಮಾತ್ಮನೇ

ಶ್ರೀ ಶೌನಕಃ ॥ ಅಶ್ವತ್ಥಾಮ್ನೋ ಪಸೃಷ್ಟೇನ ಬ್ರಹ್ಮಶೀರ್ಷ್ಣೋರು ತೇಜಸಾ । ಉತ್ತರಾಯಾ ಹತೋ ಗರ್ಭ ಈಶೇನಾ ಜೀವಿತಃ ಪುನಃ ॥ ೧ ॥ ತಸ್ಯ ಜನ್ಮ ಮಹಾಬುದ್ಧೇ ! ಕರ್ಮಾಣಿಚ ಮಹಾತ್ಮನಃ । ನಿಧನಂ ಚ ಯಥೈವಾಸೀತ್ ಸಪ್ರೇತ್ಯ ಗತವಾನ್ ಯಥಾ ॥ ೨ ॥ ತದಿದಂ ಶ್ರೋತು ಮಿಚ್ಛಾಮೋ ಗದಿತುಂ ಯದಿ ಮನ್ಯಸೇ । ಬ್ರೂಹಿ ನ ಶ್ರದ್ದಧಾನಾನಾಂ ಯಸ್ಯ ಜ್ಞಾನ ಮದಾ ಚ್ಛುಕಃ ॥ ೩ ॥ ಸೂತಃ ॥ ಅಪೀಪಲ

ಶೌನಕಃ ॥ ಶೌನಕ ಋಷಿಯು ಕೇಳುತ್ತಾನೆ, ಅಶ್ವತ್ಥಾಮ್ನಾ - ಅಶ್ವತ್ಥಾಮನಿಂದ, ಉಪಸೃಷ್ಟೇನ-ಬಿಡಲ್ಪಟ್ಟ, ಉರುತೇಜಸಾ-ಅಧಿಕವಾದ ತೇಜಸ್ಸುಳ್ಳ, ಬ್ರಹ್ಮಶೀರ್ಷ್ಣ - ಬ್ರಹ್ಮಾಸ್ತ್ರದಿಂದ, ಹತಃ-ಹೊಡೆಯಲ್ಪಟ್ಟ, ಉತ್ತರಾಯಾಃ-ಉತ್ತರಾದೇವಿಯ, ಗರ್ಭಃ-ಗರ್ಭವು, ಈಶೇನ-ಭಗವಂತನಾದ ಕೃಷ್ಣನಿಂದ, ಪುನಃ - ಮರಳಿ, ಆಜೀವಿತಃ - ಬದುಕಿಸಲ್ಪಟ್ಟಿತು, ॥ ೧ ಹೇ ಮಹಾಬುದ್ಧೇ-ಅಧಿಕ ಬುದ್ಧಿಯುಳ್ಳ ಎಲೈಸೂತನೆ ! ಮಹಾತ್ಮನಃ-ಮಹಾತ್ಮನಾದ, ತಸ್ಯ-ಆಪರೀಕ್ಷಿತ್ತಿನ, ಜನ್ಮ - ಜನನವು, ಕರ್ಮಾಣಿಚ-ಕಾರ್ಯಗಳೂ, ನಿಧನಂಚ-ಸಾವೂ, ಯಥೈವ - ಹೇಗೆ, ಆಸೀತ್ - ಆಯಿತೋ, ಸಃ-ಅವನು, ಪ್ರೇತ್ಯ-ಮೃತನಾದಮೇಲೆ, ಯಥಾ - ಯಾವಗತಿಯನ್ನು, ಗತವಾನ್ - ಪಡೆದನೋ ॥ ೨ ॥ ತದಿದಂ-ಆ ಈ ಸಂಗತಿಯೆಲ್ಲವನ್ನೂ, ಶ್ರೋತುಂ-ಕೇಳುವುದಕ್ಕೆ, ಇಚ್ಛಾಮಃ-ಬಯಸುತ್ತೇವೆ, ಗದಿತುಂ-ಹೇಳುವುದಕ್ಕೆ, ಮನ್ಯಸೇಯದಿ-ಇಷ್ಟವಿದ್ದಲ್ಲಿ, ಶುಕಃ-ಶುಕಮುನಿಯು, ಯಸ್ಯ - ಯಾವನಿಗೆ, ಜ್ಞಾನಂ-ತತ್ವಜ್ಞಾನವನ್ನು, ಅದಾತ್ - ಕೊಟ್ಟನೋ, ಆ ಪರೀಕ್ಷಿದ್ರಾಜನ, ಜನ್ಮಾದಿಗಳನ್ನು, ಶ್ರದ್ದಧಾನಾನಾಂ-ಆದರವುಳ್ಳ, ನಃ-ನಮಗೆ, ಬ್ರೂಹಿ-ಹೇಳು ॥ ೩ ॥

ಪರೀಕ್ಷಿದ್ರಾಜನ ಜನನ.

ಕಂ ॥ ಮುನ್ನೊರೆದ ದ್ರೌಣಿಯ ಚರಿ । ತೋನ್ನತಿಯುಂ ವಿಶದಮಾಗೆ ಬಣ್ಣಿಸುತೆ ಪರೀ ॥
ಕ್ಷಿನ್ನರಪತಿ ಜನನವನೀ । ಪನ್ನೆರಡನೆಯುದರೊಳೊರೆವನು ನ್ನತಮಹಿಮಂ ॥

ಅನಂತರದಲ್ಲಿ ಶೌನಕ ಋಷಿಯು ಸೂತನಂ ಕುರಿತು:—ಎಲೈ ಪ್ರಾಜ್ಞಶಿರೋಮಣಿಯಾದ ಸೂತನೆ ! ಅಶ್ವತ್ಥಾಮನು ಪ್ರಯೋಗಿಸಿದ ಮಹಾತೇಜಸ್ವಿಯಾದ ಬ್ರಹ್ಮಾಸ್ತ್ರದಿಂದ ನಾಶವಾಗುತ್ತಿದ್ದ ಉತ್ತರಾದೇವಿಯ ಗರ್ಭವನ್ನು ಶ್ರೀ ಕೃಷ್ಣಮೂರ್ತಿಯು ಕಾಪಾಡಿದನೆಂದು ಮುನ್ನ ನೀನು ಹೇಳಿದೆಯಷ್ಟೆ ॥ ೧ ॥ ಆ ಮಹಾತ್ಮನೆಂತು ಜನಿಸಿದನು ? ಯಾವ ಕಾರ್ಯಗಳನ್ನು ಮಾಡಿದನು ? ಎಂತು ಕಳೇಬರವನ್ನು ತೊರೆದನು ? ಬಳಿಕ ಯಾವಗತಿಯನ್ನು ಪಡೆದನು ? ॥ ೨ ॥ ಈ ಸಂಗತಿಗಳನ್ನು ಕೇಳಬೇಕೆಂದು ನಾವು ಕುತೂಹಲಿಗಳಾಗಿರುವುದರಿಂದ, ನಮಗಿದನ್ನು ತಿಳಿಸಬಹುದೆಂದು ನಿನಗೆ ತೋರಿದಲ್ಲಿ, ಸಾಕ್ಷಾತ್ತಾಗಿ ಶುಕನಿಂದಲೇ ಜ್ಞಾನೋಪದೇಶವನ್ನು ಪಡೆದ ಆಪರೀಕ್ಷಿದ್ರಾ

ದ್ಧರ್ಮರಾಜಃ ಪಿತೃವ ದ್ರಂಜಯನ್ ಪ್ರಜಾಃ । ನಿಸ್ಪೃಹಃ ಸರ್ವಕಾಮೇಭ್ಯಃ ಕೃಷ್ಣಪಾದಾನುಸೇವಯಾ ॥ ೪ ॥ ಸಂಪದಃ ಕ್ರತವೋ ಲೋಕಾಃ ಮಹಿಷೀ ಭ್ರಾತರೋ ಮಹೀ । ಜಂಬೂದ್ವೀಪಾಧಿಪತ್ಯಂಚ ಯಶಶ್ಚ ತ್ರಿದಿವಂಗತಂ ॥ ೫ ॥ ಕಿಂತೇ ಕಾಮಾ ಸ್ಸುರಸ್ಪಾರ್ಹಾ ಮುಕುಂದ ಮನಸೋದ್ವಿಜ । ಅಧಿಜಹ್ರು ರ್ಮುದಂ ರಾಜ್ಞಃ ಕ್ಷುಧಿತಸ್ಯ ಯಥೇತರೇ ॥ ೬ ॥ ಮಾತು ರ್ಗರ್ಭಗತೋ ವೀರ ಸ್ಸ ತದಾ ಭೃಗು

ಸೂತಃ - ಸೂತನು ಹೇಳುತ್ತಾನೆ, ಧರ್ಮರಾಜಃ - ಧರ್ಮರಾಜನು, ಕೃಷ್ಣ...ಯಾ, ಕೃಷ್ಣ-ಕೃಷ್ಣನ, ಪಾದ-ಪಾದಗಳ, ಅನುಸೇವಯಾ - ಶುಶ್ರೂಷೆಯಿಂದ, ಸರ್ವಕಾಮೇಭ್ಯಃ-ಸಕಲಕಾಮುಗಳಲ್ಲಿಯೂ, ನಿಸ್ಪೃಹಃ-ಆಸೆಯಿಲ್ಲದವನಾಗಿ, ಪಿತೃವತ್ - ತಂದೆಯಂತೆ, ರಂಜಯನ್ - ಸಂತೋಷಗೊಳಿಸುತ್ತಾ, ಪ್ರಜಾಃ-ಪ್ರಜೆಗಳನ್ನು ಅಪೀಪಲತ್ - ಪಾಲಿಸುತ್ತಿದ್ದನು ॥ ೪ ॥ ಸಂಪದಃ - ಧನಧಾನ್ಯಾದಿ ಸಂಪತ್ತುಗಳು, ಕ್ರತವಃ - ಅಶ್ವಮೇಧಾದಿ ಕ್ರತುಗಳು, ಲೋಕಾಃ - ಆಕ್ರತುಗಳಿಂದ ಪಡೆಯಬಹುದಾದ ಸ್ವರ್ಗಾದಿಲೋಕಗಳು, ಮಹಿಷೀ-ಅನುಕೂಲೆಯರಾದ ಪತ್ನಿಯರು, ಭ್ರಾತರಃ-ಸಹೋದರರು, ಮಹೀ-ಭೂಮಂಡಲವು, ಜಂಬೂದ್ವೀಪಾಧಿಪತ್ಯಂಚ-ಜಂಬೂದ್ವೀಪದಾಳಿಕೆಯು, ತ್ರಿದಿವಂಗತಂ-ಸ್ವರ್ಗದವರೆಗೂ ಹಬ್ಬಿರುವ, ಯಶಶ್ಚ-ಕೀರ್ತಿಯೂ ॥ ೫ ॥ ಹೇದ್ವಿಜ - ಎಲೆ ಬ್ರಾಹ್ಮಣೋತ್ತಮನಾದ ಶೌನಕನೆ! ತೇಕಾಮಾಃ-ಈ ಭೋಗಗಳು, ಸುರಸ್ಪಾರ್ಹಾಃ, ಸುರ-ದೇವತೆಗಳಿಂದ, ಸ್ಪಾರ್ಹಾಅಪಿ-ಬಯಸಲ್ಪಡತಕ್ಕವುಗಳಾದರೂ, ಮುಕುಂದಮನಸಃ-ಕೃಷ್ಣನಲ್ಲಿ ಮನಸ್ಸನ್ನಿಟ್ಟಿರುವ, ರಾಜ್ಞಃ-ಧರ್ಮರಾಜನಿಗೆ, ಕ್ಷುಧಿತಸ್ಯ-ಹಸಿವುಗೊಂಡವನಿಗೆ, ಇತರಇವ-ಗಂಧಪುಷ್ಪಾದಿಗಳಂತೆ, ಮುದಂ-ಸಂತೋಷವನ್ನು, ಅಧಿಜಹ್ರುಃಕಿಂ-ಉಂಟುಮಾಡಿದುವೆ? ಇಲ್ಲ. ॥ ೬ ॥

ಜನ ಚರಿತವನ್ನು ಶ್ರದ್ಧಾಳುಗಳಾಗಿ ಸಿದ್ಧರಾಗಿರುವ ನಮಗನುಗ್ರಹಿಸಿ ಹೇಳಬೇಕೆಂದು ಬಿನ್ನವಿಸಲು, ಸೂತ ಪೌರಾಣಿಕನು ಹೇಳುವುದೆಂತೆಂದರೆ ॥ ೩ ॥

ಅಯ್ಯಾ ಋಷಿಗಳಿರಾ! ಧರ್ಮರಾಜನು ಶ್ರೀ ಕೃಷ್ಣನಡಿದಾವರೆಗಳನ್ನು ಸೇವಿಸುತ್ತಾ, ಸಕಲಕಾಮುಗಳಲ್ಲಿಯೂ ನಿಸ್ಪೃಹನಾಗಿ, ರಾಜಧರ್ಮವನ್ನನುಸರಿಸಿ ತಂದೆಯಂತೆಲ್ಲರನ್ನೂ ಸಂತೋಷಗೊಳಿಸುತ್ತಾ ಪ್ರಜೆಗಳನ್ನು ಸಲಹುತ್ತಾ, ಯಿದ್ದನು ॥ ೪ ॥ ಗಂಧಪುಷ್ಪತಾಂಬೂಲಾದಿ ಭೋಗಗಳು ಹಸಿವುಗೊಂಡವನಿಗೆಂತು ಪ್ರೀತಿಯನ್ನುಂಟು ಮಾಡಲಾರವೋ, ಅಂತೆಯೇ, ಧನಧಾನ್ಯಾದಿ ಸಂಪತ್ತುಗಳು, ಅಶ್ವಮೇಧಾದಿ ಕ್ರತುಗಳು, ಅವುಗಳಿಂದಸಂಪಾದಿಸಿರುವ ಸ್ವರ್ಗಾದಿಲೋಕಗಳು, ಅನುಕೂಲೆಯರಾದ ಪತ್ನಿಯರು, ನಿಷ್ಕಂಟಕವಾದ ಭೂಮಿಯು, ಅಖಂಡವಾದ ಭೂಮಂಡಲಾಧಿಪತ್ಯವು, ಸ್ವರ್ಗದವರೆಗೂಹಬ್ಬಿರುವ ಕೀರ್ತಿಯು, ಈಭೋಗಗಳು ದೇವತೆಗಳೂ ಬಯಸತಕ್ಕವುಗಳಾಗಿದ್ದರೂ, ಭಗವಂತನಲ್ಲಿಯೇ ಮನಸ್ಸನ್ನಿಟ್ಟು ನಿರ್ಲಿಪ್ತನಾಗಿದ್ದ ಆಧರ್ಮರಾಜನಿಗೆ ಸಂತೋಷವನ್ನುಂಟು ಮಾಡಲಿಲ್ಲ ॥ ೫-೬ ॥

ನಂದನ । ದದರ್ಶ ಪುರುಷಂ ಕಂಚಿ ದ್ದಹ್ಯಮಾನೋ ಸ್ತ್ರತೇಜಸಾ ॥೭॥ ಅಂಗುಷ್ಠಮಾತ್ರ ಮಮಲಂ ಸ್ಫುರತ್ಪುರಟ ಮೌಳಿನಂ । ಅಪೀಚ್ಯ ದರ್ಶನಂ ಶ್ಯಾಮಂ ತಟಿದ್ವಾಸಸ ಮಚ್ಯುತಂ ॥ ೮ ॥ ಶ್ರೀಮದ್ದೀರ್ಘ ಚತುರ್ಬಾಹುಂ ತಪ್ತಕಾಂಚನ ಕುಂಡಲಂ । ಕ್ಷತಜಾಕ್ಷಂ ಗದಾಪಾಣಿ ಮಾತ್ಮನ ಸ್ಸರ್ವತೋದಿಶಂ ॥ ೯ ॥ ಪರಿಭ್ರಮಂತ ಮುಲ್ಕಾಭಾಂ ಭ್ರಾಮಯಂ ತಂ ಗದಾಂ ಮುಹುಃ । ಅಸ್ತ್ರತೇಜ ಸ್ಸ್ವಗದಯಾ ನೀಹಾರ ಮಿವ ಗೋ

ಹೇ ಭೃಗುನಂದನ-ಎಲೈ ಶೌನಕನೆ! ಮಾತುಃ-ತಾಯಿಯ, ಗರ್ಭಗತಃ-ಗರ್ಭದಲ್ಲಿರುವ, ವೀರಃ-ಶೂರನಾದ ಪರೀಕ್ಷಿದ್ರಾಜನು, ತದಾ - ಆಗ, ಅಸ್ತ್ರತೇಜಸಾ - ಬ್ರಹ್ಮಾಸ್ತ್ರದಜ್ವಾಲೆಯಿಂದ, ದಹ್ಯಮಾನಃ-ಸುಡಲ್ಪಡುವವನಾಗಿ, ಅಂಗುಷ್ಠಮಾತ್ರಂ - ಅಂಗುಷ್ಠಪ್ರಮಾಣವುಳ್ಳ, ಅಮಲಂ - ನಿರ್ಮಲನಾದ, ಸ್ಫುರ...ನಂ, ಸ್ಫುರತ್-ಹೊಳೆಯುತ್ತಿರುವ, ಪುರಟ-ಚಿನ್ನದ, ಮೌಳಿನಂ-ಕಿರೀಟವುಳ್ಳ, ಅಪೀಚ್ಯದರ್ಶನಂ, ಅಪೀಚ್ಯ-ಅತಿಸುಂದರವಾದ, ದರ್ಶನಂ-ರೂಪವುಳ್ಳ, ಶ್ಯಾಮಂ-ನೀಲವರ್ಣನಾದ, ತಟಿದ್ವಾಸಸಂ-ಮಿಂಚಿನಂತೆ ವಸ್ತ್ರಗಳುಳ್ಳ, ಅಚ್ಯುತಂ - ನಿರ್ವಿಕಾರನಾದ, ಶ್ರೀಮ...ಹುಂ, ಶ್ರೀಮತ್-ಕಾಂತಿಯುಕ್ತಗಳಾದ, ದೀರ್ಘ - ಉದ್ದವಾದ, ಚತುರ್ಬಾಹುಂ - ನಾಲ್ಕು ತೋಳುಳ್ಳ, ತಪ್ತ...ಲಂ, ತಪ್ತ-ಪುಟವಿಕ್ಕಿದ, ಕಾಂಚನ-ಚಿನ್ನದ, ಕುಂಡಲಂ-ಕಡಕುಗಳುಳ್ಳ, ಕ್ಷತಜಾಕ್ಷಂ-ರಕ್ತದಂತೆ ಕಣ್ಣುಳ್ಳ, ಗದಾಪಾಣಿಂ-ಗದೆಯನ್ನು ಕೈಯಲ್ಲಿ ಧರಿಸಿರುವ, ಆತ್ಮನಃ - ತನ್ನ, ಸರ್ವತೋದಿಶಂ - ಎಲ್ಲದಿಕ್ಕುಗಳಲ್ಲಿಯೂ, ಪರಿಭ್ರಮಂತಂ-ತಿರುಗುತ್ತಿರುವ, ಉಲ್ಕಾಭಾಂ-ಕೊಳ್ಳಿಗೆ ಸರಿಯಾದ, ಗದಾಂ - ಗದೆಯನ್ನು, ಮುಹುಃ-ಅಡಿಗಡಿಗೂ, ಭ್ರಾಮಯಂತಂ-ತಿರುಗಿಸುತ್ತಿರುವ, ನೀಹಾರಂ-ಮಂಜನ್ನು, ಗೋಪತಿರಿವ, ಸೂರ್ಯನಂತೆ, ಸ್ವಗದಯಾ - ತನ್ನಗದೆಯಿಂದ, ಸನ್ನಿಕರ್ಷೇ-ಸಮೀಪದಲ್ಲಿ, ಅಸ್ತ್ರತೇಜಃ-ಬ್ರಹ್ಮಾಸ್ತ್ರದ ತೇಜಸ್ಸನ್ನು, ವಿಧಮಂತಂ ನಿವಾರಿಸುತ್ತಿರುವ, ಕಂಚಿತ್-ಅನಿರ್ವಾಚ್ಯನಾದ, ಪುರುಷಂ-ಪುರುಷನನ್ನು, ದದರ್ಶ-ಕಂಡನು, ಅಸೌ - ಇವನು, ಕಃ-ಯಾರು? ಇತಿ-ಎಂದು, ಪರ್ಯೈಕ್ಷತ-ಯೋಚಿಸಿದನು, ॥ ೭-೧೦ ॥

ಅಯ್ಯಾ ಶೌನಕನೆ ? ಇಂತಿರಲು, ಉತ್ತರಾದೇವಿಯಗರ್ಭದಲ್ಲಿರುವ ಪರೀಕ್ಷಿತ್ತೆಂಬ ಶಿಶುವು, ಒಂದುದಿನ ಅಶ್ವತ್ಥಾಮಬಿಟ್ಟ ಬ್ರಹ್ಮಾಸ್ತ್ರದ ಜ್ವಾಲೆಗೆಸಿಕ್ಕಿ, ತಡಬಡಿಸುತ್ತಾ ಇರುವಷ್ಟರಲ್ಲಿಯೇ, ಹೆಬ್ಬೆಟ್ಟನಗಾತ್ರದಿಂದ, ನಿರ್ಮಲವಾಗಿ ಹೊಳೆಯುತ್ತಾ, ಮೆರೆಯುತ್ತಿರುವ ಸುವರ್ಣ ಕಿರೀಟವನ್ನುಧರಿಸಿ, ದಿವ್ಯಸುಂದರಶರೀರನಾಗಿ, ಮಿಂಚುಗಳಿಂದ ತಳತಳಿಸುವ ನೀಲಮೇಘದಂತೆ, ನೀಲವರ್ಣವಾದ ಮೈಮೇಲೆ ಪೀತಾಂಬರಗಳನ್ನು ಧರಿಸಿ, ದಿವ್ಯಕಾಂತಿಯಿಂದಕೂಡಿ ಆಜಾನುಲಂಬಿಗಳಾದ ನಾಲ್ಕುತೋಳುಗಳಿಂದಲೂ, ಪುಟಪಾಕಶೋಧಿತವಾದ ಸುವರ್ಣಕುಂಡಲಗಳಿಂದಲೂ, ದೇದೀಪ್ಯಮಾನನಾಗಿ, ಭಕ್ತನನ್ನು ಕಾಪಾಡಬೇಕೆಂಬ ರಭಸದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ಗದಾದಂಡವನ್ನು ಹಿಡಿದು, ತನ್ನಸುತ್ತಮುತ್ತಲೂ, ಓಡಾಡುತ್ತಾ, ಅಗ್ನಿಜ್ವಾಲೆಯಂತಿರುವ ಗದಾದಂಡವನ್ನು ತಿರುಗಿಸುತ್ತಾ, ಪ್ರಚಂಡವಾತಾರ್ತಂಡಮಂಡಲವು ಮಂಜಿನತಂಡವನ್ನು ಖಂಡರಿಸುವಂತೆ, ತನ್ನಗದಾದಂಡದಿಂದಲೇ ಆಬ್ರಹ್ಮಾಸ್ತ್ರದ ತೇಜೋಮಂಡಲವನ್ನು ದಿಂಡುಗೆಡಿ

ಪತಿಃ ॥೧೦॥ ವಿಧಮಂತಂ ಸನ್ನಿಕರ್ಷೇ ಪರ್ಯೈಕ್ಷತ ಕ ಇತ್ಯಸೌ । ವಿಧೂಯ ತದಮೇಯಾತ್ಮಾ ಭಗವಾನ್ ಧರ್ಮಗುಬ್ವಿಭುಃ ॥ ೧೧ ॥ ಮಿಷತೋ ದಶಮಾಸ್ಯಸ್ಯ ತತ್ರೈವಾಂತರ್ದಧೇ ಹರಿಃ । ತತ ಸ್ಸರ್ವಗುಣೋದರ್ಕೇ ಸಾನುಕೂಲ ಗ್ರಹೋದಯೇ॥ ಜಜ್ಞೇವಂಶಧರಃ ಪಾಂಡೋರ್ಭೂಯಃ ಪಾಂಡುರಿವೌಜಸಾ ॥ ೧೨ ॥ ತಸ್ಯ ಪ್ರೀತಮನಾ ರಾಜಾ ವಿಪ್ರೈ ರ್ಧೌಮ್ಯಕೃಪಾದಿಭಿಃ । ಜಾತಕಂ ಕಾರಯಾಮಾಸ ವಾಚಯಿತ್ವಾ ಚ ಮಂಗಳಂ ॥ ೧೩ ॥ ಹಿರಣ್ಯಂ ಗಾಂ ಮಹೀಂ ಗ್ರಾಮಾನ್ ಹಸ್ತ್ಯ

ತತಃ - ಅನಂತರದಲ್ಲಿ, ಅಮೇಯಾತ್ಮಾ, ಅಮೇಯ - ಅಚಿಂತ್ಯವಾದ, ಆತ್ಮಾ - ಸ್ವರೂಪವುಳ್ಳ, ಧರ್ಮಗುಪ್ - ಧರ್ಮರಕ್ಷಕನಾದ, ವಿಭುಃ - ವ್ಯಾಪಕನಾದ, ಭಗವಾನ್ - ಭಗವಂತನಾದ, ಹರಿಃ- ವಿಷ್ಣುವು, ತತ್- ಆ ಬ್ರಹ್ಮಾಸ್ತ್ರದ ತೇಜಸ್ಸನ್ನು, ವಿಧೂಯ - ಹೋಗಲಾಡಿಸಿ, ದಶಮಾಸ್ಯಸ್ಯ-ಹತ್ತು ತಿಂಗಳಮಗುವು, ಮಿಷತಃ - ನೋಡುತ್ತಿರುವಾಗಲೇ, ತತ್ರೈವ - ಅಲ್ಲಿಯೇ, ಅಂತರ್ದಧೇ - ಮಾಯವಾದನು, ತತಃ-ಆಮೇಲೆ, ಸಾನು...ಯೇ, ಸಾನುಕೂಲ-ಅನುಕೂಲರಾದ ಇತರಗ್ರಹಗಳಿಂದಕೂಡಿದ, ಗ್ರಹ-ಶುಭಗ್ರಹಗಳ, ಉದಯೇ-ಸಂಬಂಧವುಳ್ಳದುದರಿಂದಲೇ, ಸರ್ವ...ರ್ಕೇ, ಸರ್ವ - ಎಲ್ಲಾ, ಗುಣ- ಗುಣಗಳ, ಉದರ್ಕೇ-ಅಭಿವೃದ್ಧಿಯನ್ನು ಸೂಚಿಸುವ ಲಗ್ನದಲ್ಲಿ, ಪಾಂಡೋಃ-ಪಾಂಡುರಾಜನ, ವಂಶ ಧರಃ - ವಂಶವನ್ನು ಬೆಳೆಸುವ, ಆ ಪರೀಕ್ಷಿದ್ರಾಜನು, ಭೂಯಃ - ಮರಳಿ, ಓಜಸಾ - ಪರಾಕ್ರಮದಿಂದ, ಪಾಂಡುರಿವ-ಪಾಂಡುವಿನಂತೆ, ಜಜ್ಞೇ - ಹುಟ್ಟಿದನು ॥ ೧೧-೧೨ ॥ ಪ್ರೀತಮನಾಃ - ಸಂತುಷ್ಟವಾದ ಮನಸ್ಸುಳ್ಳ, ರಾಜಾ-ಧರ್ಮರಾಜನು, ಧೌಮ್ಯಾದಿಭಿಃ-ಧೌಮ್ಯನೇ ಮೊದಲಾದ, ವಿಪ್ರೈಃ - ಬ್ರಾಹ್ಮಣರಿಂದ, ಮಂಗಳಂ-ಪುಣ್ಯಾಹವನ್ನು, ವಾಚಯಿತ್ವಾ-ಹೇಳಿಸಿ, ತಸ್ಯ-ಆ ಮಗುವಿಗೆ, ಜಾತಕಂ-ಜಾತಕರ್ಮವನ್ನು, ಚಕ್ರೇ - ಮಾಡಿದನು ॥ ೧೩ ॥ ತೀರ್ಥವಿತ್ - ದಾನಕಾಲವನ್ನು ತಿಳಿದಿರುವ, ಸನೃಪತಿಃ-ಆ ಧರ್ಮ ರಾಜನು, ಪ್ರಜಾತೀರ್ಥೇ - ಪುತ್ರೋತ್ಪತ್ತಿಯ ಪುಣ್ಯಕಾಲದಲ್ಲಿ, ವಿಪ್ರೇಭ್ಯಃ - ಬ್ರಾಹ್ಮಣರಿಗೆ, ಹಿರಣ್ಯಂ-

ಸುತ್ತಾ, ನಿರ್ವಿಕಾರನಾಗಿ ಸಮೀಪದಲ್ಲಿಯೇ ಇರುವಬಬ್ಬಪುರುಷನನ್ನು ಕಂಡು, “ ಇವನಾರು ” ಎಂದು ಯೋಚಿಸುತ್ತಿರುವಷ್ಟರಲ್ಲಿಯೇ, ಅಚಿಂತ್ಯಮಹಿಮನೂ ಧರ್ಮಪಾಲಕನೂ, ಆದ ಆಭಗವಂತನು, ಆಬ್ರಹ್ಮಾಸ್ತ್ರದಕೋಟಲೆಯನ್ನುತಪ್ಪಿಸಿ, ಹತ್ತುತಿಂಗಳವಯಸ್ಸುಳ್ಳ ಆಮಗುವುನೋಡುತ್ತಿರುವಂತೆಯೇ ಅಲ್ಲಿಯೇಮಾಯವಾದನು ॥ ೬-೧೨ ॥

ಅನಂತರದಲ್ಲಿ ಸಕಲಗ್ರಹಗಳು, ಅನುಕೂಲಗಳಾಗಿ ಉತ್ತಮಫಲಗಳನ್ನುಕೊಡುವಸುಲಗ್ನದಲ್ಲಿ, ಪಾಂಡುವಂಶೋದ್ಧಾರಕನಾದ ಪರೀಕ್ಷಿದ್ರಾಜನು, ಮಹಾಶೂರನಾದಎರಡನೆಯಪಾಂಡುವಿನಂತೆ ಜನಿಸಿದನು. ಆಗ ಸಂತೋಷದಿಂದ ಕೂಡಿರುವ ಧರ್ಮರಾಜನು, ಧೌಮ್ಯನೇ ಮೊದಲಾದ ಬ್ರಾಹ್ಮಣರಿಂದ ಪುಣ್ಯಾಹಮೊದಲಾದವುಗಳನ್ನು ಮಾಡಿಸಿ,ಯಥಾವಿಧಿಯಾಗಿ ಜಾತಕರ್ಮ ಮಹೋತ್ಸವವನ್ನು ನೆರವೇರಿಸಿ ॥ ೧೩ ॥ ದಾನಕಾಲವನ್ನು ಬಲ್ಲವನಾದುದರಿಂದ, ಗ್ರಹಣಾದಿಗಳಿಗಿಂತಲೂ ಉತ್ತಮವಾದ, ಪುತ್ರೋತ್ಸವಪುಣ್ಯಕಾಲದಲ್ಲಿ, ದಾನಾರ್ಹರಾದ ಬ್ರಾಹ್ಮಣೋತ್ತಮರನ್ನು ಕರೆಯಿಸಿ, ಗೋ, ಭೂ, ಹಿರಣ್ಯಾದಿಗ

ಶ್ವಾನ್ ನೃಪತಿ ರ್ವರಾನ್ । ಪ್ರಾದಾ * ತ್ಸ್ವನ್ನಂ ಚ ವಿಪ್ರೇಭ್ಯೋ † ಪ್ರಜಾ
ತೀರ್ಥೇ ಸತೀರ್ಥವಿತ್ ॥ ೧೪ ॥ ತಮೂಚು ರ್ಬ್ರಾಹ್ಮಣಾ ಸ್ತುಷ್ಟಾ
ರಾಜಾನಂ ಪ್ರಶ್ರಯಾನತಂ । ಏಷ ಹ್ಯಸ್ಮಿನ್ ಪ್ರಜಾ ತಂತೌ ‡ ಪುರೂ
ಣಾಂ ಪೌರವರ್ಷಭ ॥ ೧೫ ॥ ದೈವೇ ನಾಪ್ರತಿಘಾತೇನ ಶುಕ್ಲೇ ಸಂ
ಸ್ಥಾ ಮುಪೇಯುಷಿ । ರಾತೋ ವೋ ನುಗ್ರಹಾರ್ಥಾಯ ವಿಷ್ಣುನಾ ಪ್ರಭ
ವಿಷ್ಣುನಾ ॥ ೧೬ ॥ ತಸ್ಮಾ ನ್ನಾಮ್ನಾ ವಿಷ್ಣುರಾತ ಇತಿಲೋಕೇ ಬೃಹ

ಚಿನ್ನವನ್ನು, ಗಾಂ-ಆಕಳನ್ನು, ಮಹೀಂ - ಭೂಮಿಯನ್ನು, ವರಾನ್ - ಉತ್ತಮಗಳಾದ, ಗ್ರಾಮಾನ್-ಗ್ರಾಮಗಳನ್ನು, ಹಸ್ತ್ಯಶ್ವಾನ್ - ಆನೆ ಕುದುರೆಗಳನ್ನು, ಸ್ವನ್ನಂಚ - ಮೃಷ್ಟಾನ್ನವನ್ನು, ಪ್ರಾದಾತ್-ಕೊಟ್ಟನು ॥ ೧೪ ॥

ತುಷ್ಟಾಃ-ಸಂತೋಷಗೊಂಡ, ಬ್ರಾಹ್ಮಣಾಃ-ಬ್ರಾಹ್ಮಣರು, ಪ್ರಶ್ರಯಾನತಂ - ವಿನಯದಿಂದ ನಮ್ರನಾದ, ರಾಜಾನಂ-ಧರ್ಮರಾಜನನ್ನು ಕುರಿತು, ಹೇಪೌರವರ್ಷಭ - ಎಲೈಪುರುವಂಶೋತ್ತಂಸನೆ ! ಪುರೂಣಾಂ - ಪುರುರಾಜನ ವಂಶಸ್ಥರಾದ ನಿಮ್ಮ, ಶುಕ್ಲೇ - ಪರಿಶುದ್ಧವಾದ, ಅಸ್ಮಿನ್ - ಈ, ಪ್ರಜಾತಂತೌ-ಪ್ರಜಾಸಂತಾನವು, ಅಪ್ರತಿಘಾತೇನ - ನಿವಾರಿಸುವುದಕ್ಕಶಕ್ಯವಾದ, ದೈವೇನ – ದೈವದಿಂದ, ಸಂಸ್ಥಾಂ-ನಾಶವನ್ನು, ಉಪೇಯುಷಿಸತಿ-ಹೊಂದಲು, ಪ್ರಭವಿಷ್ಣುನಾ-ಸಮರ್ಥನಾದ, ವಿಷ್ಣುನಾ-ವಿಷ್ಣುವಿನಿಂದ-

ಳನ್ನೂ, ಉತ್ತಮಗಳಾದ ಅಗ್ರಹಾರಗಳನ್ನೂ, ಹಸ್ತ್ಯಶ್ವಗಳನ್ನೂ, ದಾನಮಾಡಿದುದಲ್ಲದೆ ಎಲ್ಲರಿಗೂ ಮೃಷ್ಟಾನ್ನಭೋಜನವನ್ನೂ ಮಾಡಿಸಿದನು ॥ ೧೪ ॥

ಆಗಮೃಷ್ಟಾನ್ನ ಭೋಜನಾದಿಗಳಿಂದ ತುಷ್ಟರಾದ ಬ್ರಾಹ್ಮಣ ಶ್ರೇಷ್ಠರು ಹೃಷ್ಟರಾಗಿ,ವಿನಯಾವನತನಾಗಿನಿಂದಿರುವಯುಧಿಷ್ಠಿರನನ್ನು ಕುರಿತು:—ಅಯ್ಯಾ ರಾಜೇಂದ್ರನೆ? ಅಪರಿಹಾರ್ಯವಾದ ವಿಧಿವಿಲಾಸದಿಂದ ಪರಿಶುದ್ಧವಾದ ನಿಮ್ಮ ಪುರುವಂಶವೆಂಬುದು, ನಾಶವನ್ನು ಹೊಂದುತ್ತಿರುವಾಗ, ಅದನ್ನು ಬೆಳೆಸುವುದಕ್ಕಾಗಿ ಭಕ್ತವತ್ಸಲನಾದ ಭಗವಂತನು ಈ ಶಿಶುವನ್ನು ಬದುಕಿಸಿ ನಿಮಗಿತ್ತನು ॥ ೧೫-೧೬ ॥ ಆದುದರಿಂದ ಮಹನೀಯ್ಯನಾದ

* ಸ್ಮೃತಿಃ-ಯಾವನ್ನ ಛಿದ್ಯತೇ ನಾಳಂತಾವನ್ನಾಪ್ನೋತಿಸೂತಕಂ । ಛಿನ್ನೇ ನಾಳೇ ತತಃ ಪಶ್ಚಾತ್ ಸೂತಕಂತು ವಿಧೀಯತೇ· ಹುಟ್ಟಿದಮಗುವಿಗೆ ಹೊಕ್ಕಳನ್ನು ಕೊಯ್ಯುವವರೆಗೂ ತಂದೆಮೊದಲಾದವರಿಗೆ ಸೂತಕವಿಲ್ಲವಾದುದರಿಂದ ಅದಕ್ಕೆ ಮೊದಲೇ ಅನ್ನದಾನವನ್ನು ಮಾಡಿದನೆಂದು ತಾತ್ಪರ್ಯವು.

† ಸ್ಮೃತಿಃ- ಪುತ್ರೇಜಾತೇ [illegible] ದತ್ತಂಭವತಿ ಚಾಕ್ಷಯಂ. ಮತ್ತು ದೇವಾಶ್ಚ ಪಿತರಶ್ಚೈವ ಪುತ್ರೇಜಾತೇ ದ್ವಿಜನ್ಮನಾಂ । ಆಯಾಂತಿ ಗೃಹಂ ತಸ್ಮಾತ್ ಸೂರ್ಯಗ್ರಹಣಾಧಿಕಂ. ಗ್ರಹಣಕಾಲದ [illegible] ಪುತ್ರೋತ್ಪತ್ತಿಯಲ್ಲಿಯೂ ದಾನಮಾಡಿದುದು ಅಕ್ಷಯ ವಾಗುವುದು. ಮತ್ತು ಪುತ್ರನು ಜನಿಸಿದಾಗ ದೇವತೆಗಳೂ ಪಿತೃಗಳೂ ಸಹ ಆತನಿಗೆ ಬರುವರಾದುದರಿಂದ ಅದುಸೂರ್ಯಗ್ರಹಣಕ್ಕಿಂತಲೂ ಉತ್ತಮವಾದುದು. ‡ ಪಾ, ಕುರೂಣಾಂಕೌರವರ್ಷಭ.

ಚ್ಛ್ರವಾಃ । ಭವಿಷ್ಯತಿ ನಸಂದೇಹೋ ಮಹಾ ಭಾಗವತೋ ಮಹಾನ್॥
ರಾಜೋವಾಚ ॥ ಅಪ್ಯೇಷ ವಂಶ್ಯಾನ್ ರಾಜರ್ಷೀನ್ ಪುಣ್ಯಶ್ಲೋಕಾನ್ ಮ
ಹಾತ್ಮನಃ । ಅನುವರ್ತಿತಾ ಸ್ವಿ ದ್ಯಶಸಾ ಸಾಧುವಾದೇನ ಸತ್ತಮಾಃ ॥೧೭॥
ಬ್ರಾಹ್ಮಣಾ ಊಚುಃ॥ ಪಾರ್ಥ ಪ್ರಜಾವಿತಾ ಸಾಕ್ಷಾ ದಿಕ್ಷ್ವಾಕು ರಿವ
ಮಾನವಃ ॥ ಬ್ರಹ್ಮಣ್ಯ ಸ್ಸತ್ಯಸಂಧಶ್ಚ ರಾಮೋ ದಾಶರಥಿ ರ್ಯಥಾ ॥೧೮॥
ಏಷ ದಾತಾ ಶರಣ್ಯಶ್ಚ ಯಥಾ ಹ್ಯೌ ಶೀನರ * ಶ್ಶಿಬಿಃ । ಯಶೋ ವಿತನಿತಾ

ವಃ-ನಿಮ್ಮ, ಅನುಗ್ರಹಾರ್ಥಾಯ-ಅನುಗ್ರಹಕ್ಕಾಗಿ, ಏಷಃ-ಈ ಶಿಶುವು, ರಾತಃ-ಕೊಡಲ್ಪಟ್ಟನು ॥೧೬॥ ತಸ್ಮಾತ್-ಆದುದರಿಂದ, ಮಹಾನ್-ಪೂಜ್ಯನಾದ, ಮಹಾಭಾಗವತಃ-ಭಾಗವತೋತ್ತಮನಾದ, ಬೃಹಚ್ಛ್ರವಾಃ-ಬೃಹತ್-ಅಧಿಕವಾದ, ಶ್ರವಾಃ-ಯಶಸ್ಸುಳ್ಳ ಇವನು, ಲೋಕೇ-ಲೋಕದಲ್ಲಿ, ವಿಷ್ಣುರಾತಇತಿ, ವಿಷ್ಣುರಾತನೆಂದು, ನಾಮ್ನಾ-ಹೆಸರಿನಿಂದ, ಭವಿಷ್ಯತಿ-ಪ್ರಸಿದ್ಧನಾಗುತ್ತಾನೆ, ನಸಂಶಯಃ-ಸಂಶಯವಿಲ್ಲ॥ ರಾಜಾ-ಧರ್ಮರಾಜನು, ಉವಾಚ-ಹೇಳಿದನು, ಹೇಸತ್ತಮಾಃ-ಎಲೈ ಸಾಧುವರ್ಯರೆ ! ಏಷಃ - ಇವನು, ವಂಶ್ಯಾನ್ - ನಮ್ಮಕುಲದಲ್ಲಿ ಹುಟ್ಟಿದ, ಪುಣ್ಯಶ್ಲೋಕಾನ್-ಸಜ್ಜನರಿಂದಹೊಗಳಲ್ಪಡುವ, ಮಹಾತ್ಮನಃ-ಮಹಾತ್ಮರಾದ, ರಾಜರ್ಷೀನ್ - ರಾಜಋಷಿಗಳನ್ನು, ಸಾಧುವಾದೇನ-ಸತ್ಪುರುಷರಿಂದ ಕೊಂಡಾಡಲ್ಪಡುವ, ಯಶಸಾ-ಕೀರ್ತಿಯಿಂದ, ಅನುವರ್ತಿತಾಸ್ವಿತ್-ಅನುಸರಿಸುವನೆ? ॥ ೧೭ ॥

ಬ್ರಾಹ್ಮಣಾಃ-ಬ್ರಾಹ್ಮಣರು, ಊಚುಃ-ಹೇಳಿದರು. ಪಾರ್ಥ - ಎಲೈ ಕುಂತೀಪುತ್ರನೆ ? ಇವನು ಪ್ರಜಾವಿತಾ, ಪ್ರಜಾ - ಪ್ರಜೆಗಳನ್ನು, ಅವಿತಾ - ರಕ್ಷಿಸುವವನೂ, ಸಾಕ್ಷಾತ್ - ಪ್ರತ್ಯಕ್ಷನಾದ, ಮಾ

ಈತನು ಮಹಾಭಾಗವತೋತ್ತಮನೆನಿಸಿ, ಲೋಕದಲ್ಲಿ, ವಿಷ್ಣುರಾತ (ವಿಷ್ಣುವಿನಿಂದಕೊಡಲ್ಪಟ್ಟವ) ನೆಂದು ಹೆಸರುಗೊಂಡು ಬಹಳ ಕೀರ್ತಿವಂತನಾಗುವನು, ಈವಿಷಯದಲ್ಲಿ ಸಂಶಯವಿಲ್ಲವೆಂದು ಹೇಳಿದರು ॥ ೧೬ ॥ ಬಳಿಕ ಧರ್ಮರಾಜನು ಸಂತೋಷಪಟ್ಟು ಅವರನ್ನುಕುರಿತು ಅಯ್ಯಾಬ್ರಾಹ್ಮಣೋತ್ತಮರಿರಾ ! ಇವನು, ನಮ್ಮಪುರುವಂಶದಲ್ಲಿ ಜನಿಸಿದ, ಮಹಾತ್ಮರೂ, ಪುಣ್ಯಶ್ಲೋಕರೂ, ಆದ ರಾಜ ಋಷಿಗಳಂತೆ ಕೀರ್ತಿ ಪ್ರತಿಷ್ಠೆಗಳನ್ನುಪಡೆಯುವನೆ ? ಎಂದುಪ್ರಶ್ನೆಮಾಡಿದನು ॥ ೧೭ ॥

ಆ ಮಾತನ್ನುಕೇಳಿಬ್ರಾಹ್ಮಣರುಹೇಳುತ್ತಾರೆ:—ಅಯ್ಯಾಕುಂತೀಕುಮಾರನೆ ! ನಿನ್ನಮೊಮ್ಮಗನಾದ ಈತನುಸಾಮಾನ್ಯನೆಂದರಿಯಬೇಡ. ಮನುಪುತ್ರನಾದಇಕ್ಷ್ವಾಕುವಿನಂತೆ ಪ್ರಜೆಗಳನ್ನು ಸಲಹುವನು, ದಶರಥತನಯನಾದ ಶ್ರೀರಾಮನಂತೆ ಬ್ರಾಹ್ಮಣರನ್ನುಪ್ರೀತಿಸುವನಲ್ಲದೆಸತ್ಯಸಂಧನಾಗುವನು, ॥ ೧೮ ॥ ಉಶೀನರಾಧೀಶನಾದ ಶಿಬಿ ಚಕ್ರೇಶ್ವರ

---

* ಶಿಬಿಯಧರ್ಮಗುಣವನ್ನು ಪರೀಕ್ಷಿಸುವುದಕ್ಕಾಗಿ ಅಗ್ನಿಯು ಪಾರಿವಾಳದ ರೂಪನ್ನು ಪಡೆದು, ಡೇಗೆಯರೂಪನ್ನು ಪಡೆದ ಇಂದ್ರನಿಂದ ಹಿಂಬಾಲಿಸಲ್ಪಟ್ಟು,ಶಿಬಿಯನ್ನು ಮರೆಹೊಕ್ಕನು. ಆಗ ಶಿಬಿಯು ಆಪಾರಿವಾಳದ ತೂಕದಷ್ಟು ತನ್ನಶರೀರದ ಮಾಂಸವನ್ನು ಡೇಗೆಗಿತ್ತು ಮರೆಬಿದ್ದಪಾರಿವಾಳವನ್ನು ಕಾಪಾಡಿದನು.

ಸ್ವಾನಾಂ ದೌಷ್ಯಂತಿ ರಿವ ಯಜ್ವನಾಂ || ೨೦ || ಧನ್ವಿನಾ ಮಗ್ರಿಣೀ
ರೇಷ ತುಲ್ಯಶ್ಚಾರ್ಜುನಯೊ ರ್ದ್ವಯೋಃ | ಹುತಾಶ ಇವ ದುರ್ಧರ್ಷಃ
ಸಮುದ್ರ ಇವ ದುಸ್ತರಃ ||೨೧|| ಮೃಗೇಂದ್ರ ಇವ ವಿಕ್ರಾಂತೋ ನಿಷೇವ್ಯೋ
ಹಿಮವಾ ನಿವ | ತಿತಿಕ್ಷು ರ್ವಸುಧೇವಾಸೌ ಸಹಿಷ್ಣುಃ ಪಿತರಾವಿವ ||೨೨||
ಪಿತಾಮಹ ಸಮಃ ಸಾಮ್ಯೇ ಪ್ರಸಾದೇ ಗಿರಿಶೋಪಮಃ| ಆಶ್ರಯ ಸ್ಸರ್ವ
ಭೂತಾನಾಂ ಯಥಾದೇವೋ ರಮಾಶ್ರಯಃ || ೨೩ || ಸರ್ವಸದ್ಗುಣ

ಸವಃ-ಮನುಪುತ್ರನಾದ, ಇಕ್ಷ್ವಾಕುರಿವ - ಇಕ್ಷ್ವಾಕುರಾಜನಂತೆ, ದಾಶರಥಿಃ-ದಶರಥಪುತ್ರನಾದ, ರಾಮೋ ಯಥಾ - ರಾಮನಂತೆ, ಬ್ರಹ್ಮಣ್ಯಃ-ಬ್ರಾಹ್ಮಣಪ್ರಿಯನೂ, ಸತ್ಯಸಂಧಶ್ಚ - ಸತ್ಯಪ್ರತಿಜ್ಞನೂ || ೧೯ || ಶೈಬಿನರಃ - ಉಶೀನರದೇಶಕ್ಕೊಡೆಯನಾದ, ಶಿಬಿರ್ಯಥಾ - ಶಿಬಿಯಂತೆ, ದಾತಾ - ದಾತನೂ, ಶರಣ್ಯಶ್ಚ - ರಕ್ಷಕನೂ, ದೌಷ್ಯಂತಿರಿವ - ದುಷ್ಯಂತನ ಮಗನಾದ ಭರತನಂತೆ, ಸ್ವಾನಾಂ-ತನ್ನ, ಜ್ಞಾತಿಗಳಿಗೂ, ಯಜ್ವನಾಂಚ - ಯಜ್ಞಾದಿಗಳನ್ನು ಮಾಡುವವರಿಗೂ, ಯಶಃ-ಕೀರ್ತಿಯನ್ನು, ವಿತನಿತಾ - ಬೆಳೆಯಿಸುವವನೂ, ಆಗುತ್ತಾನೆ || ೨೦ || ಏಷಃ-ಇವನು, ಧನ್ವಿನಾಂ - ಧನುರ್ಧಾರಿಗಳಲ್ಲಿ, ಅಗ್ರಣೀಃ-ಶ್ರೇಷ್ಠನೂ, ದ್ವಯೋಃ-ಇಬ್ಬರು, ಅರ್ಜುನಯೋಶ್ಚ, ಕಾರ್ತವೀರ್ಯ, ಅರ್ಜುನ, ಇವರಿಗೆ, ತುಲ್ಯಃ-ಸಮನೂ, ಹುತಾಶ ಇವ - ಅಗ್ನಿಯಂತೆ, ದುರ್ಧರ್ಷಃ - ಎದುರಿಸುವುದಕ್ಕಾಗದವನೂ, ಸಮುದ್ರ ಇವ - ಸಮುದ್ರದಂತೆ, ದುಸ್ತರಃ - ದಾಟಲಶಕ್ಯನೂ || ೨೧ ||

ಮೃಗೇಂದ್ರ ಇವ - ಸಿಂಹದಂತೆ, ವಿಕ್ರಾಂತಃ-ಶೂರನೂ, ಹಿಮವಾನಿವ - ಹಿಮಾಲಯದಂತೆ, ನಿಷೇವ್ಯಃ ಸೇವಿಸಲ್ಪಡತಕ್ಕವನೂ, ವಸುಧೇವ-ಭೂಮಿಯಂತೆ, ತಿತಿಕ್ಷುಃ-ಸೈರಣೆಯುಳ್ಳವನೂ, ಪಿತರಾವಿವ-ತಾಯಿತಂದೆಗಳಂತೆ, ಸಹಿಷ್ಣುಃ-ತಾಳ್ಮೆಯುಳ್ಳವನೂ || ೨೨ || ಸಾಮ್ಯೇ - ಸಮತ್ವದಲ್ಲಿ, ಪಿತಾಮಹಸಮಃ-ಬ್ರಹ್ಮನಿಗೆ ಸಮನೂ, ಪ್ರಸಾದೇ-ಅನುಗ್ರಹಿಸುವುದರಲ್ಲಿ, ಗಿರಿಶೋಪಮಃ-ಶಿವನಿಗೆಸಮಾನನೂ, ದೇವಃ-ಪ್ರಕಾಶಶೀಲನಾದ, ರಮಾಶ್ರಯೋಯಥಾ - ವಿಷ್ಣುವಿನಂತೆ, ಸರ್ವಭೂತಾನಾಂ - ಸಕಲಭೂತಗಳಿಗೂ, ಆಶ್ರಯಃ-ಆಸರೆಯಾದವನೂ, || ೨೩ || ಏಷಃ-ಇವನು, ಸರ್ವ...ತ್ಮ್ಯೇ, ಸರ್ವ-ಎಲ್ಲಾ,

ನಂತೆ ದಾತೃವೂ, ಶರಣಾಗತರಕ್ಷಕನೂ ಆಗುವನು, ದುಷ್ಯಂತತನುಜನಾದ ಭರತನಂತೆ ಜ್ಞಾತಿಗಳಿಗೂ, ಯಜ್ಞಾದಿಗಳನ್ನುಮಾಡುವವರಿಗೂ ಆಶ್ರಯನೆನಿಸುವನು, || ೨೦ || ಧನುರ್ಧಾರಿಗಳಲ್ಲಿ ಅಗ್ರೇಸರನೆನಿಸಿದ, ನಿನ್ನತಮ್ಮನಾದ ಅರ್ಜುನನಿಗೂ, ಕಾರ್ತವೀರ್ಯಾರ್ಜುನನಿಗೂ ಸಮಾನನಾಗುವನು. ಅಗ್ನಿಯಂತೆ ಭಯಂಕರನೂ, ಸಮುದ್ರದಂತೆ ಅತಿಕ್ರಮಿಸಲಶಕ್ಯನೂ ಆಗುವನು || ೨೧ ||

ಮತ್ತು ಸಿಂಹದಂತೆ ಪರಾಕ್ರಮಿಯೂ, ಹಿಮವಂತನಂತೆ ಸಜ್ಜನರಿಗಾಶ್ರಯನೂ, ಭೂಮಿಯಂತೆ ತಾಳ್ಮೆಯುಳ್ಳವನೂ, ತಾಯಿತಂದೆಗಳಂತೆ ಕ್ಷಮಾವಂತನೂ ಆಗುವನು || ಬ್ರಹ್ಮದೇವನಂತೆ ಸಕಲಪ್ರಾಣಿಗಳಲ್ಲಿಯೂ ನಿಷ್ಪಕ್ಷಪಾತಿಯಾಗುವನು. ಅನುಗ್ರಹಿಸುವವಿಷಯದಲ್ಲಿ ಪರಮೇಶ್ವರನಿಗೆ ಸಮನೆನಿಸುವನು. ಭಗವಂತನಾದರಮಾಕಾಂತನಂತೆ ಸಕಲ ಪ್ರಾಣಿಗಳಿಗೂ ಆಶ್ರಯನಾಗುವನು || ೨೩ || ಸಕಲಸದ್ಗುಣಸಂಪತ್ತಿನಿಂದ ಈತನು

ಮಾಹಾತ್ಮ್ಯ ಏಷ ಕೃಷ್ಣಮನುವ್ರತಃ ॥ ರಂತಿದೇವ ಇವೌದಾರ್ಯೇ
ಯಯಾತಿ ರಿವ ಧಾರ್ಮಿಕಃ ॥ ೨೪ ॥ ಧೃತ್ಯಾ ಬಲಿಸಮಃ ಕೃಷ್ಣೇ
ಪ್ರಹ್ಲಾದಇವ ಸದ್ಗ್ರಹಃ । ಆಹರ್ತೈಷೋಶ್ವಮೇಧಾನಾಂ ವೃದ್ಧಾನಾಂ
ಪರ್ಯುಪಾಸಕಃ ॥ ೨೫ ॥ ರಾಜರ್ಷೀಣಾಂ ಜನಯಿತಾ ಶಾಸ್ತಾ ಚೋತ್
ತ್ಪಥಗಾಮಿನಾಂ । ನಿಗೃಹೀತಾ ಕಲೇಶ್ಚೈವ ಭುವೋ ಧರ್ಮಸ್ಯ ಕಾರ
ಣಾತ್ ॥ ೨೬ ॥ ತಕ್ಷಕಾ ದಾತ್ಮನೋ ಮೃತ್ಯುಂ ದ್ವಿಜಪುತ್ರೋಪ
ಸರ್ಜಿತಾತ್। ಪ್ರಪತ್ಸ್ಯತ ಉಪಶ್ರುತ್ಯ ಮುಕ್ತಸಂಗಃ ಪದಂ ಹರೇಃ ॥೨೭॥

ಸದ್ಗುಣ-ಒಳ್ಳೆಯಗುಣಗಳ, ಮಹಾತ್ಮ್ಯೇ-ಮಹಿಮೆಯಲ್ಲಿ ಕೃಷ್ಣಂ-ಕೃಷ್ಣನನ್ನು, ಅನುವ್ರತಃ-ಅನುಸರಿಸುವವನೂ, ಔದಾರ್ಯೇ - ದಾತೃತ್ವದಲ್ಲಿ, ರಂತಿದೇವಇವ - ರಂತಿದೇವನನ್ನು ಹೋಲುವವನೂ, ಯಯಾತಿರಿವ-ಯಯಾತಿಯಂತೆ, ಧಾರ್ಮಿಕಃ-ಧರ್ಮಿಷ್ಠನೂ ॥ ೨೪ ॥ ಧೃತ್ಯಾ-ಧೈರ್ಯದಿಂದ, ಬಲಿಸಮಃ-ಬಲಿಗೆ ಸಮಾನನೂ, ಪ್ರಹ್ಲಾದಇವ - ಪ್ರಹ್ಲಾದನಂತೆ, ಕೃಷ್ಣೇ - ಕೃಷ್ಣನಲ್ಲಿ, ಸದ್ಗ್ರಹಃ-ಒಳ್ಳೆಯ ಅಭಿನಿವೇಶವುಳ್ಳವನೂ, ಅಲ್ಲದೆ, ಏಷಃ-ಇವನು, ಅಶ್ವಮೇಧಾನಾಂ - ಅಶ್ವಮೇಧಯಾಗಗಳನ್ನು, ಆಹರ್ತಾ-ಮಾಡುವವನೂ, ವೃದ್ಧಾನಾಂ-ಹಿರಿಯರನ್ನು, ಪರ್ಯುಪಾಸಕಃ-ಸೇವಿಸುವವನೂ ॥೨೫॥

ರಾಜರ್ಷೀಣಾಂ-ಋಷಿಗಳಂತಿರುವ ರಾಜರನ್ನು, ಜನಯಿತಾ-ಹುಟ್ಟಿಸುವವನೂ, ಉತ್ಪಥಗಾಮಿನಾಂ-ದಾರಿತಪ್ಪಿಹೋಗುವವರನ್ನು, ಶಾಸ್ತಾ - ಶಿಕ್ಷಿಸುವವನೂ, ಭುವಃ - ಭೂಮಿಗೋಸ್ಕರವೂ, ಧರ್ಮಸ್ಯ ಕಾರಣಾತ್-ಧರ್ಮಕ್ಕಾಗಿಯೂ, ಕಲೇಶ್ಚೈವ-ಕಲಿಯನ್ನೂ, ನಿಗೃಹೀತಾ-ನಿಗ್ರಹಿಸುವವನೂ, ಭವಿಷ್ಯತಿ-ಆಗುತ್ತಾನೆ ॥ ೨೬ ॥ ದ್ವಿಜ...ತಾತ್, ದ್ವಿಜಪುತ್ರ - ಋಷಿಕುಮಾರನಾದ ಶೃಂಗಿಯಿಂದ, ಉಪಸರ್ಜಿತಾತ್-ಪ್ರೇರಿಸಲ್ಪಟ್ಟ ತಕ್ಷಕಾತ್-ತಕ್ಷಕನೆಂಬ ಸರ್ಪದಿಂದ, ಆತ್ಮನಃ-ತನ್ನ, ಮೃತ್ಯುಂ-ಮರಣವನ್ನು, ಉಪಶ್ರುತ್ಯ-ಕೇಳಿ, ಮುಕ್ತಸಂಗಃ-ವಿರಕ್ತನಾಗಿ, ಹರೇಃ-ಹರಿಯ, ಪದಂ - ಸ್ಥಾನವನ್ನು, ಪ್ರಪತ್ಸ್ಯತೇ-ಹೊಂದುವನು, ಅಸೌ-ಇವನು, ವ್ಯಾಸಸುತಾತ್ - ವ್ಯಾಸಪುತ್ರನಾದ, ಮುನೇಃ - ಶುಕಮುನಿಯಿಂದ, ಜಿಜ್ಞಾ...ತ್ಮ್ಯಃ, ಜಿಜ್ಞಾಸಿತ-ವಿಚಾರಿಸಲ್ಪಟ್ಟ, ಆತ್ಮ-ತನ್ನ, ಯಥಾತ್ಮ್ಯಃ - ನಿಜಸ್ವರೂಪವುಳ್ಳವನಾಗಿ, ಹೇನೃಪ-ಎಲೈ ಧರ್ಮರಾಜನೆ ! ಇದಂ-ಈಶರೀರವನ್ನು, ಗಂಗಾಯಾಂ-ಗಂಗೆಯಲ್ಲಿ, ಹಿತ್ವಾ - ಬಿಟ್ಟು,

---

ಶ್ರೀಕೃಷ್ಣಮೂರ್ತಿಯನ್ನು ಹೋಲುವನು. ದಾತೃತ್ವದಲ್ಲಿರಂತಿದೇವನನ್ನೂ, ಧರ್ಮಗುಣದಲ್ಲಿಯಯಾತಿಯನ್ನೂ, ನಗುವನು ॥ ೨೪ ॥ ಧೈರ್ಯದಲ್ಲಿಬಲಿಚಕ್ರವರ್ತಿಗೆಣೆಯಾಗುವನು. ಪ್ರಹ್ಲಾದನಂತೆ ಭಗವಂತನಲ್ಲಿ ಭಕ್ತಿಯನ್ನುಪಡೆಯುವನು. ಅನೇಕಾಶ್ವಮೇಧಯಾಗಗಳನ್ನುಮಾಡುವನು. ಗುರುಹಿರಿಯರನ್ನು ಸೇವಿಸುವನು ॥ ೨೫ ॥ ಜನಮೇಜಯಾದಿ ರಾಜರನ್ನುಜನಿಯಿಸಿ ವಂಶವನ್ನು ಬೆಳೆಯಿಸುವನು. ದುರ್ಮಾರ್ಗರನ್ನು ದಂಡಿಸುವನು. ಭೂಮಿಯಲ್ಲಿ ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ ಕಲಿಯನ್ನು ನಿಗ್ರಹಿಸುವನು ॥೨೬॥ ಕಡೆಯಲ್ಲಿ, ಶೃಂಗಿಯೆಂಬಋಷಿಪುತ್ರನಿಂದ ಪ್ರೇರಿತನಾದ ತಕ್ಷಕನಿಂದ ತನಗೆಮರಣವಾಗುವುದೆಂಬಸುದ್ದಿಯನ್ನು ಕೇಳಿ, ಸರ್ವಸಂಗಪರಿತ್ಯಾಗಮಾಡಿ, ವ್ಯಾಸಮುನಿಯ ಪುತ್ರನಾದ ಶುಕಾಚಾರ್ಯನಿಂದ ಆತ್ಮಸ್ವರೂಪ ವಿಚಾರವನ್ನು ತಿಳಿದುಕೊಂಡು, ಆದೇವ ಗಂಗೆಯ

ಜಿಜ್ಞಾಸಿ * ತಾತ್ಮಯಾಥಾತ್ಮ್ಯೋ ಮುನೇರ್ವ್ಯಾಸ ಸುತಾದಸೌ। ಹಿತ್ವೇ
ದಂ ನೃಪ ಗಂಗಾಯಾಂ ಯಾಸ್ಯತ್ಯದ್ಧಾ ಕುತೋಭಯಂ ॥ ೨೮ ॥ ಇತಿ
ರಾಜ್ಞ ಉಪಾದಿಶ್ಯ ವಿಪ್ರಾ ಜಾತಕಕೋವಿದಾಃ । ಲಬ್ಧಾಪಚಿತಯ
ಸ್ಸರ್ವೇ ಪ್ರತಿಜಗ್ಮುಸ್ಸ್ವಕಾನ್ ಗೃಹಾನ್ ॥ ೨೯ ॥ ಸ ಏಷ ಲೋಕೇ
ವಿಖ್ಯಾತಃ ಪರೀಕ್ಷಿದಿತಿ ಯತ್ಪ್ರಭುಃ । † ಗರ್ಭದೃಷ್ಟಮಭಿಧ್ಯಾಯನ್
ಪರೀಕ್ಷೇತ ನರೇಷ್ವಿಹ ॥ ೩೦ ॥ ಸ ರಾಜಪುತ್ರೋ ವವೃಧೇ ಹ್ಯಾಶು
ಶುಕ್ಲ ಇವೋಡುರಾಟ್ । ಆಪೂರ್ಯಮಾಣಃ ಪಿತೃಭಿಃ ಕಾಷ್ಠಾಭಿರಿವ ಸೋ

ಅದ್ಧಾ-ಸ್ಥಿರವಾಗಿ, ಅಕುತೋಭಯಂ-ಭಯರಹಿತವಾದ, ಕೈವಲ್ಯವನ್ನು, ಯಾಸ್ಯತಿ-ಹೊಂದುತ್ತಾನೆ ॥ ಜಾತಕಕೋವಿದಾಃ-ಜಾತಕಶಾಸ್ತ್ರದಲ್ಲಿಪಂಡಿತರಾದ, ವಿಪ್ರಾಃ-ಬ್ರಾಹ್ಮಣರು, ಇತಿ - ಹೀಗೆ, ರಾಜ್ಞಃ-ರಾಜನಿಗೆ, ಉಪದಿಶ್ಯ-ಹೇಳಿ, ಲಬ್ಧಾಪಚಿತಯಃ, ಲಬ್ಧ-ಹೊಂದಲ್ಪಟ್ಟ, ಅಪಚಿತಯಃ - ಮರ್ಯಾದೆಯುಳ್ಳವರಾಗಿ, ಸರ್ವೇ-ಎಲ್ಲರೂ, ಸ್ವಕಾನ್-ತಮ್ಮ ಗೃಹಾನ್-ಮನೆಗಳಿಗೆ, ಪ್ರತಿಜಗ್ಮುಃ-ಹೊರಟುಹೋದರು ॥ ೨೯ ॥ ಏಷಪ್ರಭುಃ-ಈರಾಜನು, ಯತ್-ಯಾವಕಾರಣದಿಂದ. ಗರ್ಭದೃಷ್ಟಂ-ಗರ್ಭದಲ್ಲಿ ಕಂಡವನನ್ನು, ಇಹ-ಈಲೋಕದಲ್ಲಿ, ನರೇಷು-ಮನುಷ್ಯರಲ್ಲಿ, ಪರೀಕ್ಷೇತ-ಪರೀಕ್ಷಿಸುವನೋ, ತತ್-ಆದುದರಿಂದ, ಲೋಕೇ-ಲೋಕದಲ್ಲಿ, ಪರೀಕ್ಷಿದಿತಿ-"ಪರೀಕ್ಷಿತ್ತು" ಎಂದು ವಿಖ್ಯಾತಃ-ಹೆಸರುಗೊಂಡನು ॥೩೦॥ ಸರಾಜಪುತ್ರಃ-ಆ ಅರಸುಮಗನು, ಶುಕ್ಲೇ - ಶುಕ್ಲಪಕ್ಷದಲ್ಲಿ, ಕಾಷ್ಠಾಭಿಃ - ಕಳೆಗಳಿಂದ, ಆಪೂರ್ಯಮಾಣಃ-ತುಂಬಲ್ಪಡುವ, ಉಡುರಾಡಿವ-ಚಂದ್ರನಂತೆ, ಪಿತೃಭಿಃ-ತಾಯಿತಂದೆಗಳಿಂದ, ಆಪೂರ್ಯಮಾಣಃ-ಬೇಕಾದ ಇಷ್ಟವಸ್ತುಗಳನಿತ್ತು ಸಲಹಲ್ಪಟ್ಟವನಾಗಿ, ಅನ್ವಹಂ-ದಿನದಿನವೂ, ಆಶು-ಬೇಗನೆ, ವವೃಧೇ-ಬೆಳೆದನು ॥

ಕ್ಷಿಯೇ ತನ್ನಕಳೇಬರವನ್ನುತ್ಯಜಿಸಿ, ಪುನರಾವೃತ್ತಿಯಿಲ್ಲದ ಭಗವಂತನ ಸಾಯುಜ್ಯಪದವಿಯನ್ನು ಪಡೆಯುವನು ॥ ೨೮ ॥

ಎಂದು ಜಾತಕಶಾಸ್ತ್ರದಲ್ಲಿ ನಿಪುಣರಾದ ಜೋಯಿಸರು ಮುಂದಣ ಸಂಗತಿಯನ್ನು ತಿಳುಹಿಸಿ, ಆಧರ್ಮರಾಜನಿಂದ ಮರ್ಯಾದೆಯನ್ನು ಪಡೆದು ಎಲ್ಲರೂತಂತಮ್ಮ ಮನೆಗಳಿಗೆ ತೆರಳಿದರು ॥ ೨೯ ॥ ಅಯ್ಯಾ ಶೌನಕಾದಿಗಳಿರಾ ! ಆರಾಜನು ಮಾತೃಗರ್ಭದಲ್ಲಿತಾನು ಕಂಡದಿವ್ಯಪುರುಷನನ್ನೇ ಧ್ಯಾನಮಾಡುತ್ತಾ, ಆಪುರುಷನೀಲೋಕದಲ್ಲಿ ಎಲ್ಲಿರಬಹುದೆಂದು ಎಲ್ಲರಲ್ಲಿಯೂ ಪರೀಕ್ಷಿಸುವನಾದುದರಿಂದ ಆತನಿಗೆ ಪರೀಕ್ಷಿದ್ರಾಜನೆಂದು ಹೆಸರಾಯಿತು ॥ ಇಂತು ಆರಾಜಪುತ್ರನು ಶುಕ್ಲಪಕ್ಷದಲ್ಲಿ ಕಳಾಭಿವೃದ್ಧಿಯಿಂದ ಬೆಳೆಯುವ ಚಂದ್ರಮಂಡಲದಂತೆ. ಬೇಕಾದ ಕೋರಿಕೆಗಳನ್ನು ಸಲಿಸಿ, ಅಕ್ಕರೆಯಾಗಿ ತಾಯಿತಂದೆಗಳಿಂದರಕ್ಷಿತನಾಗುತ್ತಾ, ಪೂರ್ವಿಕರಾದ ರಾಜರ್ಷಿಗಳ ಕಳೆಯನ್ನು ಪಡೆದು ಬೆಳೆಯುತ್ತಿದ್ದನು॥೩೧॥

* ಪಾ. ಆತ್ಮ-ಜೀವಾತ್ಮಪರಮಾತ್ಮರ. † ಪಾ. ಪೂರ್ವಂ - ಮೊದಲು.

ನ್ವಹಂ ॥ ೩೧ ॥ * ಬಾಲ ಏವ ಸ ಧರ್ಮಾತ್ಮಾ ಕೃಷ್ಣಭಕ್ತೋ ನಿಸ
ರ್ಗತಃ । ಪ್ರೀತಿದ ಸ್ಸರ್ವಲೋಕಸ್ಯ ಮಹಾಭಾಗವತ ಸ್ಸುಧೀಃ ॥ ಯಕ್ಷ್ಯ
ಮಾಣೋ ಶ್ವಮೇಧೇನ ಜ್ಞಾತಿದ್ರೋಹಜಿಹಾಸಯಾ । ರಾಜಾ ಲಬ್ಧಧನೋ
ದಧ್ಯೌ ನಾನ್ಯತ್ರ ಕರದಂಡಯೋಃ ॥ ೩೨ ॥ ತದಭಿಪ್ರೇತ ಮಾಲಕ್ಷ್ಯ
ಭ್ರಾತರೋ ಚ್ಯುತಚೋದಿತಾಃ। ಧನಂ ಪ್ರಹೀಣ ಮಾಜಹ್ರು ರುದೀಚ್ಯಾಂ
ದಿಶಿ ಭೂರಿಶಃ ॥ ೩೩ ॥ ತೇನ ಸಂಭೃತಸಂಭಾರೋ ಲಬ್ಧಕಾಮೋ
ಯುಧಿಷ್ಠಿರಃ । ವಾಜಿಮೇಧೈ ಸ್ತ್ರಿಭಿ ರ್ಭೀತೋ ಯಜ್ಞೈ ರೀಶ ಮಯಜ

(ಸುಧೀಃ-ಪಂಡಿತನಾಗಿಯೂ, ಮಹಾಭಾಗವತಃ-ಭಕ್ತಾಗ್ರೇಸರನಾಗಿಯೂ, ಸರ್ವಲೋಕಸ್ಯ-ಸಕಲ ಜನರಿಗೂ, ಪ್ರೀತಿದಃ-ಪ್ರೀತಿಯನ್ನು ಮಾಡತಕ್ಕವನಾಗಿಯೂ, ಇರುವ, ಸಃ-ಆ, ಧರ್ಮಾತ್ಮಾ-ಧರ್ಮಿಷ್ಠನಾದ ಪರೀಕ್ಷಿತ್ತು, ನಿಸರ್ಗತಃ-ಸ್ವಭಾವವಾಗಿಯೇ, ಬಾಲಏವ - ಬಾಲನಾಗಿರುವಾಗಲೇ, ಕೃಷ್ಣಭಕ್ತಃ-ಕೃಷ್ಣನಲ್ಲಿ ಭಕ್ತಿಯುಳ್ಳವನು ಆದನು) ರಾಜಾ-ಧರ್ಮರಾಜನು, ಜ್ಞಾತಿ...ಯಾ, ಜ್ಞಾತಿ-ಬಂಧುಗಳ, ದ್ರೋಹ-ಕೊಲೆಪಾತಕವನ್ನು, ಜಿಹಾಸಯಾ-ಕಳೆದುಕೊಳ್ಳಬೇಕೆಂಬಾಸೆಯಿಂದ, ಅಶ್ವಮೇಧೇನ-ಅಶ್ವಮೇಧಯಾಗದಿಂದ, ಯಕ್ಷ್ಯಮಾಣಃ-ಯಜ್ಞಮಾಡುವವನಾಗಿ, ಕರದಂಡಯೋಃ, ಕರ-ಕಂದಾಯವು, ದಂಡ-ತಪ್ಪುಕಾಣಿಕೆಯು, ಇವುಗಳಿಗಿಂತಲೂ, ಅನ್ಯತ್ರ-ಬೇರೆಯಾಗಿ, ಅಲಬ್ಧಧನಃ-ಧನವನ್ನು ಪಡೆಯದವನಾಗಿ, ದಧ್ಯೌ-ಚಿಂತಿಸಿದನು ॥ ೩೦ ॥

ಭ್ರಾತರಃ-ಒಡಹುಟ್ಟಿದ ಭೀಮಾದಿಗಳು, ತದಭಿಪ್ರೇತಂ - ಆತನ ಅಭಿಪ್ರಾಯವನ್ನು, ಆಲಕ್ಷ್ಯ-ತಿಳಿದು, ಅಚ್ಯುತಚೋದಿತಾಃ-ಕೃಷ್ಣನಿಂದ ಪ್ರೇರಿಸಲ್ಪಟ್ಟವರಾಗಿ, ಉದೀಚ್ಯಾಂದಿಶಿ - ಉತ್ತರದಿಕ್ಕಿನಲ್ಲಿ ಪ್ರಹೀಣಂ - ಬಿಡಲ್ಪಟ್ಟಿದ್ದ, ಧನಂ - ಧನವನ್ನು, ಭೂರಿಶಃ-ಬಹಳವಾಗಿ, ಆಜಹ್ರುಃ-ತಂದರು ॥೩೩॥ ಭೀತಃ-ಬಂಧುಹತ್ಯೆಯಿಂದ ಹೆದರಿರುವ, ಯುಧಿಷ್ಠಿರಃ-ಧರ್ಮರಾಜನು, ತೇನ - ಆಧನದಿಂದ, ಸಂಭೃತ

ಭಾಗವತಾಗ್ರೇಸರನೂ ಪಂಡಿತನೂ, ಸರ್ವಜನಪ್ರಿಯನೂ, ಧರ್ಮಿಷ್ಠನೂ ಆದ ಆಪರೀಕ್ಷಿದ್ರಾಜನು ಬಾಲನಾಗಿರುವಾಗಲೇ ಸಹಜವಾಗಿ ಕೃಷ್ಣನಲ್ಲಿ ಭಕ್ತಿಯುಕನಾದನು, ಅನಂತರದಲ್ಲಿ ಧರ್ಮರಾಜನು ‡ ಶ್ರುತಿಯಲ್ಲಿ ಹೇಳಿದಂತೆ, ಬಂಧು ಹತ್ಯಾದೋಷವನ್ನು ಕಳೆದುಕೊಳ್ಳುವುದಕ್ಕಾಗಿ, ಅಶ್ವಮೇಧಯಾಗವನ್ನು ಮಾಡಬೇಕೆಂದೆಣಿಸಿ, ತನ್ನ ಪ್ರಜೆಗಳಿಂದ ಸಂಪಾದಿಸಿರುವ ತಪ್ಪುಕಾಣಿಕೆ, ತೆರಿಗೆ, ಇವುಗಳಲ್ಲದೆ ಬೇರೆ ಯಾವಧನವೂ ಬಂಡಾರದಲ್ಲಿ ಯಿಲ್ಲದುದರಿಂದ, ಯಾಗವನ್ನಂತು ಮಾಡಬೇಕೆಂದು ಚಿಂತಿಸುತ್ತಿದ್ದನು ॥೩೨॥
ಆಗ ಒಡಹುಟ್ಟುಗಳಾದ ಭೀಮಾರ್ಜುನಾದಿಗಳು ಕಳವಳ ಹೊಂದಿರುವ ಅಣ್ಣನ ಅಭಿಪ್ರಾಯವನ್ನು ತಿಳಿದು, ಶ್ರೀಕೃಷ್ಣಮೂರ್ತಿಯಿಂದ ಪ್ರೇರಿತರಾಗಿ. ಉತ್ತರದಿಕ್ಕಿಗೆ ಪ್ರಯಾಣಮಾಡಿ, ಪೂರ್ವಕಾಲದಲ್ಲಿ ಮರುತ್ತರಾಯನು ಯಜ್ಞಮಾಡಿದಾಗ ಬ್ರಾಹ್ಮಣಾದಿಗಳು ಬಿ

* ಈ ಶ್ಲೋಕವಾರ್ಷವಲ್ಲ. ‡ ಶ್ರು—ತರತಿಬ್ರಹ್ಮಹತ್ಯಾಂ ಯೋಶ್ವಮೇಧೇನಯಜತೇ ಸ್ಮೃತಿ॥ ಬ್ರಹ್ಮಹತ್ಯಾಶ್ವಮೇಧಾನಾಂ ನಾಪರಂ ಪುಣ್ಯಪಾಪಯೋಃ॥ ಅಶ್ವಮೇಧವನ್ನು ಮಾಡಿದವನು ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳುವನು. ಮತ್ತು ಬ್ರಹ್ಮಹತ್ಯೆಗೆ ಮಿಂಚಿದಪಾಪವೂ, ಅಶ್ವಮೇಧಕ್ಕೆ ಮೀರಿದ ಪುಣ್ಯವೂ ಇಲ್ಲ.

ದ್ಧರಿಂ ॥ ೩೪ ॥ ಆಹೂತೋ ಭಗವಾನ್ ರಾಜ್ಞಾ ಯಾಜಯಿತ್ವಾ ದ್ವಿಜೈ
ರ್ನೃಪಂ । ಉವಾಸ ಕತಿ ಚಿನ್ಮಾಸಾನ್ ಸುಹೃದಾಂ ಪ್ರಿಯಕಾಮ್ಯಯಾ॥
ತತೋ ರಾಜ್ಞಾಭ್ಯನುಜ್ಞಾತಃ ಕೃಷ್ಣಯಾ ಸಹ ಬಂಧುಭಿಃ । ಯಯೌ
ದ್ವಾರವತೀಂ ಕೃಷ್ಣಃ ಸಾರ್ಜುನೋ ಯದುಭಿ ರ್ವೃತಃ ॥ ೩೬ ॥

ಇತಿ ದ್ವಾದಶೋಧ್ಯಾಯಃ

ಸಂಭಾರೇ-ಯಜ್ಞದ ಸಲಕರಣಗಳನ್ನು ಸಿದ್ಧಗೊಳಿಸಿಕೊಂಡು, ಪೂರ್ಣಕಾಮಃ-ಕೊರತೆ ಯಿಲ್ಲದವನಾಗಿ, ತ್ರಿಭಿಃಅಶ್ವಮೇಧೈಃ-ಮೂರು ಅಶ್ವಮೇಧಗಳಿಂದ, ಯಜ್ಞೇಶಂ-ಯಜ್ಞಗಳಿಗೊಡೆಯನಾದ, ಹರಿಂ-ವಿಷ್ಣುವನ್ನು, ಅಯಜತ್-ಪೂಜಿಸಿದನು ॥ ೩೪ ॥ ರಾಜ್ಞಾ-ಧರ್ಮರಾಜನಿಂದ, ಆಹೂತಃ - ಕರೆಯಿಸಲ್ಪಟ್ಟ, ಭಗವಾನ್-ಭಗವಂತನಾದ ಕೃಷ್ಣನು, ದ್ವಿಜೈಃ-ಬ್ರಾಹ್ಮಣರಮೂಲಕವಾಗಿ, ನೃಪಂ-ಧರ್ಮರಾಜನಿಂದ, ಯಾಜಯಿತ್ವಾ-ಯಜ್ಞಮಾಡಿಸಿ, ಸುಹೃದಾಂ - ಸ್ನೇಹಿತರಾದ ಪಾಂಡವರಿಗೆ, ಪ್ರಿಯಕಾಮ್ಯಯಾ - ಪ್ರೀತಿಯನ್ನು ಮಾಡುವುದಕ್ಕಾಗಿ, ಕತಿಚಿತ್‌ಮಾಸಾನ್-ಕೆಲವುತಿಂಗಳು, ಉವಾಸ-ವಾಸಮಾಡಿದನು ॥ ೩೫ ॥ ತತಃ-ಆಮೇಲೆ, ರಾಜ್ಞಾ-ಧರ್ಮರಾಜನಿಂದಲೂ ಬಂಧುಭಿಸ್ಸಹ-ಬಂಧುಗಳೊಡಗೂಡಿದ, ಕೃಷ್ಣಯಾಚ-ದ್ರೌಪದಿಯಿಂದಲೂ, ಅಭ್ಯನುಜ್ಞಾತಃ-ಅಪ್ಪಣೆ ಪಡೆದವನಾಗಿ, ಯದುಭಿಃ-ಯಾದವರಿಂದ, ವೃತಃ-ಬಳಸಲ್ಪಟ್ಟವನಾಗಿ, ಸಾರ್ಜುನಃ - ಅರ್ಜುನನಿಂದೊಡಗೂಡಿ, ಕೃಷ್ಣಃ-ಕೃಷ್ಣನು, ದ್ವಾರಕಾಂ-ದ್ವಾರಕೆಗೆ, ಯಯೌ-ಹೊರಟುಹೋದನು ॥ ೩೬ ॥

ದ್ವಾದಶಾಧ್ಯಾಯಂ ಸಮಾಪ್ತಂ

ಸುಟ್ಟುಹೋಗಿರುವ ಧನಕನಕಾದಿಗಳನ್ನು ಯಥೇಚ್ಛವಾಗಿ ತಂದು ಧರ್ಮರಾಜನಿಗೊಪ್ಪಿಸಿದರು ॥ ೩೩ ॥ ಬಳಿಕಧರ್ಮರಾಜನು ಆಧನದಿಂದ ಯಜ್ಞಕ್ಕೆ ಬೇಕಾದ ಸಂಭಾರಗಳೆಲ್ಲವನ್ನೂ ಸಜ್ಜುಗೊಳಿಸಿದವನಾಗಿ, ಮನಸ್ಸಿನಲ್ಲಿ ಯಾವಕೊರತೆಯೂ ಇಲ್ಲದೆ, ಬಂಧುಹತ್ಯೆಯಿಂದಹೆದರಿದವನಾದಕಾರಣ, ಮೂರುಅಶ್ವಮೇಧಗಳಿಂದ, ಯಜ್ಞಗಳಿಗೊಡೆಯನಾದ ಶ್ರೀಮಹಾವಿಷ್ಣುವನ್ನು ಆರಾಧಿಸಿದನು ॥ ೩೪ ॥

ಇಂತು ಶ್ರೀಕೃಷ್ಣಮೂರ್ತಿಯು ಧರ್ಮರಾಜನಿಂದ ಕರೆಯಲ್ಪಟ್ಟು ಬಂದು, ಉತ್ತಮರಾದ ಬ್ರಾಹ್ಮಣೋತ್ತಮರ ಮೂಲಕವಾಗಿ ಆತನಿಂದ ಯಾಗವನ್ನು ಮಾಡಿಸಿ, ತನಗೆ ಮಿತ್ರರಾದ ಪಾಂಡವರ ಪ್ರೀತಿಗಾಗಿ ಕೆಲವುತಿಂಗಳವರೆಗೂ ಹಸ್ತಿನಾವತಿಯಲ್ಲಿಯೇ ನೆಲಸುತ್ತಿದ್ದನು ॥ ೩೫ ॥ ಅಯ್ಯಾ ಶೌನಕನೆ ? ಅನಂತರದಲ್ಲಿ ಧರ್ಮರಾಜನಿಂದಲೂ, ದ್ರೌಪದಿಯಿಂದಲೂ, ಇತರ ಬಂಧುಗಳಿಂದಲೂ, ಪ್ರಯಾಣಕ್ಕೆ ಅಪ್ಪಣೆಯನ್ನು ಪಡೆದು, ತನ್ನಸಂಗಡಲೇ ಅರ್ಜುನನನ್ನು ಕರೆದುಕೊಂಡು, ಯಾದವರಿಂದ ಪರಿವೃತನಾಗಿ ತನ್ನರಾಜಧಾನಿಯಾದ ದ್ವಾರಕಾಪಟ್ಟಣಕ್ಕೆ ತೆರಳಿದನೆಂದು ಸೂತನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆ ಯೊಳ್

ಹನ್ನೆರಡನೆಯ ಅಧ್ಯಾಯಂ ಮುಗಿದುದು

ಓಂ ನಮಃಪರಮಾತ್ಮನೇ

ಶ್ರೀಸೂತಃ ॥ ವಿದುರ ಸ್ತೀರ್ಥಯಾತ್ರಾಯಾಂ ಮೈತ್ರೇಯಾ ದಾತ್ಮನೋ ಗತಿಂ । ಜ್ಞಾತ್ವಾ ಗಾ ದ್ಧಾಸ್ತಿನಪುರಂ ತಯಾ ವಾಪ್ತ ವಿವಿತ್ಸಿತಃ ॥೧॥ ಯಾವತಃ ಕೃತವಾನ್ ಪ್ರಶ್ನಾನ್ ಕ್ಷತ್ತಾ ಕೌಶಾರವಾಗ್ರತಃ । ಜಾತೈಕಭಕ್ತಿ

ಶ್ರೀಸೂತಃ-ಸೂತನುಹೇಳುತ್ತಾನೆ, ವಿದುರಃ - ವಿದುರನು, ತೀರ್ಥಯಾತ್ರಾಯಾಂ - ತೀರ್ಥಯಾತ್ರೆಯಲ್ಲಿ, ಮೈತ್ರೇಯಾತ್ - ಮೈತ್ರೇಯನೆಂಬ ಋಷಿಯಿಂದ, ಆತ್ಮನಃ - ತನಗೆ, ಗತಿಂ-ಕೃಷ್ಣನೇಗತಿಯೆಂಬುದನ್ನು, ಜ್ಞಾತ್ವಾ-ತಿಳಿದು, ತಯಾ-ಆತಿಳಿವಳಿಕೆಯಿಂದ, ಅವಾಪ್ತ ವಿವಿತ್ಸಿತಃ,ಅವಾಪ್ತ-ಹೊಂದಲ್ಪಟ್ಟ, ವಿವಿತ್ಸಿತಃ-ತಿಳಿಯಬೇಕಾದ ಸಂಗತಿಗಳುಳ್ಳವನಾಗಿ, ಹಾಸ್ತಿನಪುರಂ-ಹಸ್ತಿನಾವತಿಗೆ, ಅಗಾತ್-ಹೋದನು ॥ ಕ್ಷತ್ತಾ-ವಿದುರನು, ಕೌಶಾರವಾಗ್ರತಃ, ಕೌಶಾರವ-ಕುಶಾರವ ವಂಶದಲ್ಲಿ ಹುಟ್ಟಿದ ಮೈತ್ರೇಯನ, ಅಗ್ರತಃ-ಎದುರಾಗಿ, ಯಾವತಃ-ಎಷ್ಟು, ಪ್ರಶ್ನಾನ್-ಪ್ರಶ್ನೆಗಳನ್ನು, ಕೃತವಾನ್-ಮಾಡಿದನೋ, ಗೋವಿಂದೇ-ಕೃಷ್ಣನಲ್ಲಿ,ಜಾತೈಕಭಕ್ತಿಃ-ಅಧಿಕಭಕ್ತಿಯುಳ್ಳವನಾಗಿ,ತೇಭ್ಯಃ-ಆಪ್ರಶ್ನೆಗಳನ್ನು ಕೇಳದೇನೇ, ಉಪರರಾಮ-

ವಿದುರನ ಮಾತಿನಿಂದ ಧೃತರಾಷ್ಟ್ರನು ವಾನಪ್ರಸ್ಥನಾಗುವುದು.

ಕಂ ॥ ಉತ್ತರೆಯ ಸುತಗೆ ॥ ರಾಜ್ಯವ ನಿತ್ತು ಮಹಾಪಥಕೆ ಪಾಂಡವ ರ್ತೆರಳಿದುದಂ ।
ಬಿತ್ತರಿಸಲೋಸುಗಂ ಕುರು । ಸತ್ತಮ ಧೃತರಾಷ್ಟ್ರ ನೃಪನಪಯಣವನೊರೆಗುಂ ॥

ಭಾರತ ಯುದ್ಧಾರಂಭವಾಗುವುದಕ್ಕೆಮೊದಲು ಧೃತರಾಷ್ಟ್ರನು ವಿದುರನನ್ನು ಕರೆಯಿಸಿ ಮಂತ್ರಾಲೋಚನೆಯನ್ನು ಮಾಡಿದನು. ಆಗವಿದುರನು ಪಾಂಡವಕೌರವರಲ್ಲಿರುವ ಗುಣದೋಷಗಳನ್ನು ಹೊರಪಡಿಸಿ ಪಾಂಡವರಿಗೆ ರಾಜ್ಯಭಾಗವನ್ನು ಕೊಡುವುದೇ ಶ್ರೇಯಸ್ಕರವೆಂದುಹೇಳಿದನು. ದುರ್ಯೋಧನನು ಅದನ್ನುಸಮ್ಮತಿಸದೆ ವಿದುರನನ್ನು ಅವಮಾನಗೊಳಿಸಿದನು. ಅದಕ್ಕಾಗಿ ವಿದುರನು ತೀರ್ಥಯಾತ್ರಾವ್ಯಾಜದಿಂದ ಹೊರಟು, ಆತೀರ್ಥಯಾತ್ರೆಯಲ್ಲಿ ಕುಶಾರವ ಕುಲೀನನಾದ ಮೈತ್ರೇಯನೆಂಬ ಮಹರ್ಷಿಯಿಂದ ತನಗೆ ಶ್ರೀಹರಿಯೇ ಗತಿಯೆಂಬುದನ್ನು ತಿಳಿದವನಾಗಿ, ಆ ಆತ್ಮಜ್ಞಾನವುಂಟಾದುದರಿಂದಲೇ * ಶ್ರುತಿಯಲ್ಲಿ ಹೇಳಿದಂತೆ ತಿಳಿಯತಕ್ಕವುಗಳೆಲ್ಲವನ್ನೂ ತಿಳಿದುಕೊಂಡನು ॥ ೧ ॥ ವಿದುರನು ಮೊದಲು ಮೈತ್ರೇಯನನ್ನುಕಂಡಾಗ ಯೋಗ. ಸಾಂಖ್ಯ, ಧರ್ಮ, ವ್ರತ ಮೊದಲಾದ ವಿಷಯಗಳಲ್ಲಿ ಅನೇಕ ಪ್ರಶ್ನೆಗಳನ್ನು ಮಾಡಿದನು. ಆದರೆ ಬಂದೆರಡುಪ್ರಶ್ನೆಗಳುತ್ತರಗಳನ್ನು ತಿಳಿಯುವುದರೊಳಗಾಗಿಯೇ ಸಂಪೂರ್ಣವಾಗಿ ತತ್ವಜ್ಞಾನವನ್ನು ಪಡೆದು,

* ಶ್ರು. ಯೇನಾಶ್ರುತಂ ಶ್ರುತಂ ಭವತ್ಯಮತಂಮತ ಮವಿಜ್ಞಾತಂ ವಿಜ್ಞಾತಮಾತ್ಮನಿ ಖಲ್ವರೇ ದೃಷ್ಟೇ ಶ್ರುತೇಮತೇ ವಿದಿತೇ ಇದಂಸರ್ವಂ ವಿಜ್ಞಾತಂ ಭವತಿ. ಸರ್ವಾತ್ಮಕ ವಾದಭಗವತ್ತತ್ವವನ್ನು ತಿಳಿದಲ್ಲಿ ಎಲ್ಲವೂ ತಿಳಿಯಲ್ಪಟ್ಟತೆಂದು ಭಾವವು.

ಗೋವಿಂದೇ ತೇಭ್ಯ ಶ್ಚೋಪರರಾಮಹ ॥ ೨ ॥ ತಂ ಬಂಧು ಮಾಗತಂ ದೃಷ್ಟ್ವಾ ಧರ್ಮಪುತ್ರ ಸ್ಸಹಾನುಜಃ। ಧೃತರಾಷ್ಟ್ರೋ ಯುಯುತ್ಸುಶ್ಚ ಸೂತ ಶ್ಶಾರದ್ವತಃ ಪೃಥಾ ॥ ೩ ॥ ಗಾಂಧಾರೀ ದ್ರೌಪದೀ ಬ್ರಹ್ಮನ್ ಸುಭದ್ರಾ ಚೋತ್ತರಾ ಕೃಪೀ । ಅನ್ಯಾಶ್ಚ * ಯಾಮಯಃ ಪಾಂಡೋರ್ ಜ್ಞಾತಯ ಸ್ಸಸುತಾ ಸ್ಸ್ತ್ರಿಯಃ । ಪ್ರತ್ಯುಜ್ಜಗ್ಮುಃ ಪ್ರಹರ್ಷೇಣ ಪ್ರಾಣಂ ತನ್ವ ಇವಾಗತಂ ॥ ೪ ॥ ಅಭಿಸಂಗಮ್ಯ ವಿಧಿವತ್ ಪರಿಷ್ವಂಗಾಭಿವಾದನೈಃ ॥ ಮುಮುಚುಃ ಪ್ರೇಮಬಾಷ್ಪೌಘಂ ವಿರಹೌತ್ಕಂಠ್ಯಕಾತುರಾಃ । ರಾಜಾ

ಸುಮ್ಮನಾದನು ॥ ೨ ॥ ಸಹಾನುಜಃ - ತಮ್ಮಂದಿರಿಂದಕೂಡಿದ, ಧರ್ಮಪುತ್ರಃ - ಧರ್ಮರಾಜನು, ಧೃತರಾಷ್ಟ್ರಃ - ಧೃತರಾಷ್ಟ್ರನು, ಯುಯುತ್ಸುಃ - ಯುಯುತ್ಸುವು, ಸೂತಃ - ಸಂಜಯನು, ಶಾರದ್ವತಃ - ಕೃಪಾಚಾರ್ಯನು, ಪೃಥಾ - ಕುಂತಿಯು ॥ ೩ ॥

ಗಾಂಧಾರೀ-ಗಾಂಧಾರಿಯು, ದ್ರೌಪದೀ-ದ್ರೌಪದಿಯು, ಹೇಬ್ರಹ್ಮನ್-ಎಲೈ ಶೌನಕನೆ! ಸುಭದ್ರಾ-ಸುಭದ್ರೆಯು, ಉತ್ತರಾ-ಉತ್ತರೆಯು, ಕೃಪೀ-ದ್ರೋಣಾಚಾರ್ಯನ ಪತ್ನಿಯು, ಪಾಂಡೋಃ - ಪಾಂಡುರಾಯನ, ಯಾಮಯಃ-ಜ್ಞಾತಿಸ್ತ್ರೀಯರು, ಜ್ಞಾತಯಃ-ಜ್ಞಾತಿಗಳು, ಸಸುತಾಃ - ಪುತ್ರರಿಂದೊಡಗೂಡಿದ, ಅನ್ಯಾಶ್ಚಸ್ತ್ರಿಯಃ-ಇತರಸ್ತ್ರೀಯರೂ, ಇವರೆಲ್ಲರೂ, ಅಗತಂ-ಬಂದ, ತಂಬಂಧುಂ-ಆ ಬಂಧುವಾದ ವಿದುರನನ್ನು, ದೃಷ್ಟ್ವಾ-ಕಂಡು, ಆಗತಂ-ಬದುಕಿಬಂದ, ಪ್ರಾಣಂ-ಪ್ರಾಣವನ್ನು, ತನ್ವಇವ-ಅಂಗಗಳಂತೆ, ಪ್ರಹರ್ಷೇಣ - ಸಂತೋಷದಿಂದ, ಪ್ರತ್ಯುಜ್ಜಗ್ಮುಃ - ಎದುರುಗೊಂಡರು ॥ ೪ ॥ ವಿರಹ...ರಾಃ ವಿರಹ - ವಿಯೋಗದ, ಔತ್ಕಂಠ್ಯ - ಕಳವಳದಿಂದ, ಕಾತುರಾಃ - ಹೆದರಿದಬಾಂಡವಾದಿಗಳು, ವಿಧಿವತ್ - ಕ್ರಮಪ್ರಕಾರವಾಗಿ, ಪರಿ...ನೈಃ, ಪರಿಷ್ವಂಗ - ಆಲಿಂಗನ, ಅಭಿವಾದನೈಃ - ವಂದನ ಇವುಗಳಿಂದ, ಅಭಿಸಂಗಮ್ಯ - ಬರಮಾಡಿಕೊಂಡು, ಪ್ರೇಮ - ಘಂ, ಪ್ರೇಮ...ಪ್ರೀತಿಯಿಂದಕೂಡಿದ, ಬಾ

ಭಗವಂತನಾದ ಶ್ರೀಕಾಂತನಲ್ಲಿ ನಿಶ್ಚಲವಾದ ಭಕ್ತಿಯುಂಟಾಗಲು, ಕೃತಾರ್ಥನಾಗಿ ಉಳಿದಪ್ರಶ್ನೆಗಳಿಗೆ ಉತ್ತರಗಳನ್ನೇಬಯಸದೆ, ಹಿಂದಿರುಗಿ ಹಸ್ತಿನಾವತಿಗೆಬಂದನು ॥ ೨ ॥

ಆಗ ಧರ್ಮಾದಿಗಳು, ಧೃತರಾಷ್ಟ್ರ, ಯುಯುತ್ಸು, ಸಂಜಯ, ಕೃಪಾಚಾರ್ಯ, ಕುಂತಿ, ಗಾಂಧಾರಿ, ದ್ರೌಪದಿ ಸುಭದ್ರೆ, ಉತ್ತರೆ, ದ್ರೋಣಪತ್ನಿಯಾದ ಕೃಪಿ, ಪಾಂಡುರಾಜನ ಜ್ಞಾತಿಸ್ತ್ರೀಯರು, ಸಪರಿವಾರರಾದ ಜ್ಞಾತಿಗಳು, ಇನ್ನೂಇತರ ಸ್ತ್ರೀಯರೂಸಹ, ತಮಗೆಬಂಧುವಾದ ವಿದುರನು ಬಂದುದನ್ನು ಕಂಡು, ಮುಖ್ಯಾದಿಗಳಿಂದಪ್ರಾಣವು ಹಿಂದಿರುಗಿದ ಕೂಡಲೇ ಶರೀರವುಚೇತರಿಸುವಂತೆ, ಅತ್ಯಂತಸಂತೋಷದಿಂದ ಆತನನ್ನು ಎದುರುಗೊಂಡುಕರತಂದರು ॥ ೩-೪ ॥ ಬಳಿಕ ಅವರೆಲ್ಲರೂ ಉಚಿತಪ್ರಕಾರವಾಗಿ, ಆಲಿಂಗನ, ವಂದನ, ಸಂಭಾಷಣ, ಅವಲೋಕನ ಮೊದಲಾದವುಗಳಿಂದ ಆ ವಿದುರನನ್ನು ಸತ್ಕರಿಸಿ, ಆತನಗಲಿಕೆಯಿಂದ ಕಳವಳಗೊಂಡಿದ್ದುದರಿಂದ, ಆತ

ಪಾ. ಜಾಮಯಃ- ವಿ. ಅಂತಃಪುರಸ್ತ್ರೀಯರು. ವಿ. ಸೊಸೆಯರು. ಅಥವಾತಂಗಿಯರು.

ತಮರ್ಹಯಾಂಚಕ್ರೇ ಕೃತಾಸನಪರಿಗ್ರಹಂ ॥ ೬ ॥ ತಂ ಭುಕ್ತ ವಂತಂ ವಿಶ್ರಾಂತ ಮಾಸೀನಂ ಸುಖ ಮಾಸನೇ । ಪ್ರಶ್ರಯಾವನತೋ ರಾಜಾ ಪ್ರಾಹ ತೇಷಾಂ ಚ ಶೃಣ್ವತಾಂ ॥ ೭ ॥ ಯುಧಿಷ್ಠಿರಃ । ಅಪಿ ಸ್ಮರಥ! ನೋ ಯುಷ್ಮತ್ಪಕ್ಷಚ್ಛಾಯಾಸಮೇಧಿತಾನ್ । ವಿಪದ್ಗಣಾ ದ್ವಿಷಾಗ್ನ್ಯಾದೇ ರ್ಮೋಚಿತಾ ಯತ್ ಸಮಾತೃಕಾಃ ॥ ೮ ॥ ಕಯಾ ವೃತ್ತ್ಯಾ ವರ್ತಿತಂ ವಃ ಚರದ್ಭಿಃ ಕ್ಷಿತಿಮಂಡಲಂ । ತೀರ್ಥಾನಿ ಕ್ಷೇತ್ರಮುಖ್ಯಾನಿ ಸೇವಿತಾನೀಹ ಭೂತಲೇ ॥೯॥ ಭವದ್ವಿಧಾ ಭಾಗವತಾ ಸ್ತೀರ್ಥಭೂತಾ ಸ್ಸ್ವಯಂ

ಷ್ಪೌಘಂ - ಆನಂದ ಬಾಷ್ಪಗಳನ್ನು, ಮುಮುಚುಃ- ಸುರಿಸಿದರು, ರಾಜಾ -ಧರ್ಮರಾಜನು, ತಂ- ಆವಿದುರನನ್ನು; ಅರ್ಹಯಾಂಚಕ್ರೇ - ಪೂಜಿಸಿದನು ॥ ೬ ॥ ರಾಜಾ - ಧರ್ಮರಾಜನು, ಭುಕ್ತವಂತಂ - ಭೋಜನಮಾಡಿ, ವಿಶ್ರಾಂತಂ - ಸುದಾರಿಸಿಕೊಂಡು, ಆಸನೇ - ಪೀಠದಲ್ಲಿ, ಸುಖಂ - ಸುಖವಾಗಿ, ಆಸೀನಂ - ಕುಳಿತುಕೊಂಡಿರುವ, ತಂ - ಆವಿದುರನನ್ನು, ಕುರಿತು, ಪ್ರಶ್ರಯಾವನತಸ್ಸನ್ - ವಿನಯದಿಂದನಮ್ರನಾಗಿ, ತೇಷಾಂ - ಅವರೆಲ್ಲರೂ, ಶೃಣ್ವತಾಂ - ಕೇಳುತ್ತಿರುವಾಗ, ಪ್ರಾಹ- ಹೇಳುತ್ತಾನೆ ॥ ೭ ॥ ಯತ್ - ಯಾವಕಾರಣದಿಂದ, ಸಮಾತೃಕಾಃ - ತಾಯಿಯಿಂದೊಡಗೂಡಿದ ನಾವು, ವಿಷಾಗ್ನ್ಯಾದೇಃ, ವಿಷ - ಅಗ್ನಿಮೊದಲಾದ, ವಿಪದ್ಗಣಾತ್ - ವಿಪತ್ತುಗಳ ಪರಂಪರೆಯಿಂದ, ಮೋಚಿತಾಃ-ಬಿಡಿಸಲ್ಪಟ್ಟೆವೋ, ತತ್ - ಆದುದರಿಂದ, ಯುಷ್ಮತ್ಪಕ್ಷ...ತಾನ್, ಯುಷ್ಮತ್ - ನಿಮ್ಮ, ಪಕ್ಷ-ಪಕ್ಷಪಾತವೆಂಬ, ಛಾಯಾ-ನೆರಳಿಂದ, ಸಮೇಧಿತಾನ್-ಬೆಳೆಯಿಸಲ್ಪಟ್ಟ, ನಃ-ನಮ್ಮನ್ನು - ಅಪಿಸ್ಮರಥ-ಸ್ಮರಿಸುವಿರಾ ! ॥ ೮ ॥ ಕ್ಷಿತಿಮಂಡಲಂ-ಭೂಮಂಡಲವನ್ನು, ಚರದ್ಭಿಃ-ಸಂಚರಿಸುವ, ಭವದ್ಭಿಃ- ನಿಮ್ಮಿಂದ, ಕಯಾ-ಯಾವ, ವೃತ್ತ್ಯಾ-ಜೀವಿಕೆಯಿಂದ, ವರ್ತಿತಂ-ಇರೋಣವಾಯಿತು ! ಇಹಭೂತಲೇ- ಈ ಭೂಲೋಕದಲ್ಲಿ, ಕಾನಿ-ಯಾವ, ತೀರ್ಥಾನಿ-ತೀರ್ಥಗಳು, ಕ್ಷೇತ್ರಮುಖ್ಯಾನಿ-ಮುಖ್ಯ ಕ್ಷೇತ್ರಗಳು, ಸೇವಿತಾನಿ-ಸೇವಿಸಲ್ಪಟ್ಟವು ! ॥ ೯ ॥

ನನ್ನುಕಂಡ ಕೂಡಲೇ ಆನಂದಬಾಷ್ಪಗಳನ್ನು ಸುರಿಸಿದರು ॥ ೫ ॥

ಬಳಿಕ ಧರ್ಮರಾಜನು ಯಥಾವಿಧಿಯಾಗಿ ಪೂಜಿಸಿ, ಪೀಠವನ್ನಿತ್ತುಕುಳ್ಳಿರಿಸಿ, ಮೃಷ್ಟಾನ್ನ ಭೋಜನಮಾಡಿಸಿ, ಆತನು ವಿಶ್ರಾಂತಿಯನ್ನುಪಡೆದು, ಸುಖವಾಗಿಕುಳಿತುಕೊಂಡಿರುವಾಗ, ಸಂಟರಿಷ್ಟರೆಲ್ಲರೂ ಕೇಳುವಂತೆ, ವಿದುರನನ್ನಿಂತು ಬೆಸಗೊಂಡನು ॥ ೭ ॥ ತಂದೆಯೆ ? ಹಕ್ಕಿಗಳೆಂತು ತಮ್ಮಮರಿಗಳನ್ನು ಅಕ್ಕರೆಯಿಂದ ತಮ್ಮ ರೆಕ್ಕೆಗಳ ನೆರಳಲ್ಲಿಟ್ಟುಕೊಂಡು ಬೆಳೆಯಿಸುವವೋ, ಅಂತು ಪಕ್ಷಪಾತವನ್ನುತೋರಿ, ವಿಷ, ಅಗ್ನಿ ಮೊದಲಾದ ಅನೇಕವಿಪತ್ತುಗಳಿಂದ ನಮ್ಮನ್ನು ಸಲುಹಿದೆ. ಇಂತಹನಮ್ಮನ್ನು ನೀನುಸ್ಮರಿಸುತ್ತಿರುವೆಯಾ ? ॥ ೮ ॥ ಭೂಮಂಡಲವನ್ನು ಸಂಚರಿಸುವಾಗ ದೇಹಧಾರಣೆಗಾಗಿ ನೀನಾವವೃತ್ತಿಯನ್ನವಲಂಬಿಸಿದೆ ? ಈ ಪೃಥ್ವಿಯಲ್ಲಿ ಯಾವ ಯಾವ ಕ್ಷೇತ್ರಗಳನ್ನು ದರ್ಶನ ಮಾಡಿದೆ ? ಯಾವ ಯಾವತೀರ್ಥಗಳನ್ನು ಸೇವಿಸಿದೆ ? ॥ ೯ ॥

ಸ್ವಭಾವವಾಗಿಯೇ ಪವಿತ್ರರಾಗಿರುವ ನಿನ್ನಂತಹ ಭಾಗವತೋತ್ತಮರು, ಯಾವಾ

ಪ್ರಭೋ । ತೀರ್ಥೀಕುರ್ವಂತಿ ತೀರ್ಥಾನಿ ಸ್ವಾಂತಸ್ಥೇನ ಗದಾ
ಭೃತಾ ॥ ೧೦ ॥ ಅಪಿ ನ ಸ್ಸುಹೃದಸ್ತಾತ ಬಾಂಧವಾಃ ಕೃಷ್ಣದೇವತಾಃ ।
ದೃಷ್ಟಾ ಶ್ರುತಾವಾ ಯದವ ? ಸ್ವ ಪುರ್ಯಾಂ ಸುಖ ಮಾಸತೇ ॥೧೧॥
ಇತ್ಯುಕ್ತೋ ಧರ್ಮರಾಜೇನ ಸರ್ವಂ ತತ್ಸಮವರ್ಣಯತ್ । ಯಥಾನು
ಭೂತಂ ಕ್ರಮಶೋ ವಿನಾ ಯದುಕುಲಕ್ಷಯಂ ॥ ೧೨ ॥ ನನ್ವಪ್ರಿಯಂ
ದುರ್ವಿಷಹಂ ನೃಣಾಂ ಸ್ವಯ ಮುಪಸ್ಥಿತಂ । ನಾವೇದಯ ತ್ಸಕರುಣೋ

ಹೇಪ್ರಭೋ-ಎಲೈಮಹಾತ್ಮನೆ! ಸ್ವಯಂ-ತವುಗೆತಾವೇ, ತೀರ್ಥಭೂತಾಃ-ಪವಿತ್ರರಾಗಿರುವ, ಭವ ದ್ವಿಧಾಃ-ತಮ್ಮಂತಹ, ಭಾಗವತಾಃ-ಭಕ್ತರು, ಸ್ವಾಂತಸ್ಥೇನ - ತಮ್ಮ ಮನಸ್ಸಿನಲ್ಲಿರುವ, ಗದಾಭೃತಾ-ವಿಷ್ಣುವಿನಿಂದ, ತೀರ್ಥಾನ್ಯಪಿ-ಗಂಗಾದಿತೀರ್ಥಗಳನ್ನೂ,ತೀರ್ಥೀಕುರ್ವಂತಿ-ಪವಿತ್ರಮಾಡುತ್ತಾರೆ. ಎಂದು ಹೊಗಳಿದನು ॥ ೧೦ ॥ ಹೇತಾತ-ಎಲೈ ತಂದೆಯೆ! ಕೃಷ್ಣ ದೇವತಾಃ-ಕೃಷ್ಣನೇ ದೇವತೆಯಾಗುಳ್ಳ ನಃ-ನಮ್ಮ, ಸುಹೃದಃ-ಮಿತ್ರರು, ಬಾಂಧವಾಃ-ಬಂಧುಗಳು ಆದ, ಯದವಃ-ಯಾದವರು, ಸ್ವಪುರ್ಯಾಂ-ತಮ್ಮಪಟ್ಟಣದಲ್ಲಿ, ಸುಖಂ - ಸುಖವಾಗಿ, ಅಪ್ಯಾಸತೇ - ಇರುವರೆ? ತ್ವಯಾ-ನಿನ್ನಿಂದ, ಅಪಿದೃಷ್ಟಾಃ-ನೋಡಲ್ಪಟ್ಟರೆ? ಅಪಿಶ್ರುತಾಃ-ಕೇಳಲ್ಪಟ್ಟರೇ! ॥ ೧೧ ॥ ಧರ್ಮರಾಜೇನ-ಧರ್ಮರಾಜನಿಂದ, ಇತ್ಯುಕ್ತಃ-ಹೀಗೆ ಹೇಳಲ್ಪಟ್ಟವನಾಗಿ, ಯದುಕುಲಕ್ಷಯಂವಿನಾ-ಯಾದವವಂಶನಾಶವನ್ನು ಹೊರತು, ಯಥಾನುಭೂತಂ - ತಾನುಅನುಭವಿಸಿದ, ತತ್ಸರ್ವಂ - ಅದೆಲ್ಲವನ್ನೂ, ಕ್ರಮಶಃ - ಕ್ರಮವಾಗಿ, ಸಮವರ್ಣಯತ್-ವಿವರಿಸಿದನು ॥ ೧೨ ॥ ಸಕರುಣಃ - ದಯಾಶಾಲಿಯಾದ, ದುಃಖಿತಾನ್ - ದುಃಖಪಡುವವರನ್ನು, ದ್ರಷ್ಟುಂ-ನೋಡುವುದಕ್ಕೆ, ಅಕ್ಷಮಃ-ಅಸಮರ್ಥನಾದ ವಿದುರನು, ನೃಣಾಂ-ಪುರುಷರಿಗೆ, ಸ್ವಯಂ-ತನಗೆತಾನೇ, ಉಪಸ್ಥಿತಂ-ಪ್ರಾಪ್ತವಾದ, ದುರ್ವಿಷಹಂ-ಸಹಿಸಲಶಕ್ಯವಾದ ಅಪ್ರಿಯಂ-ಅನಿಷ್ಟವಾರ್ತೆಯನ್ನು, ನಾವೇದಯನ್ನನು-ತಿಳಿಸಲಿಲ್ಲವಷ್ಟೆ ॥ ೧೩ ॥ ಅಥ-ಆಬಳಿಕ, ಸ್ವಕೈಃ - ತನ್ನವರಿಂದ, ಸ

ಗಲೂ ಮನಸ್ಸಿನಲ್ಲಿಯೇ ಭಗವಂತನ ಸಾನ್ನಿಧ್ಯವನ್ನು ಪಡೆದಿರುವರಾದುದರಿಂದ, ಅವರು ಪಾಪಿಗಳ ಸಂಸರ್ಗದಿಂದ ಮಲಿನಗಳಾದ ತೀರ್ಥಗಳನ್ನು ಪಾವನಗೊಳಿಸುವುದಕ್ಕಾಗಿ ಯಾತ್ರೆಗೆ ಹೊಯುವರಲ್ಲದೆ, ಸ್ವಪ್ರಯೋಜನಕ್ಕಲ್ಲವೆಂಬುದು ನ್ಯಾಯವೇಸರಿ ॥ ೧೦ ॥

ಎಲೈ ತಂದೆಯೆ! ಕೃಷ್ಣನೇ ಪರದೈವವೆಂದು ತಿಳಿದಿರುವ, ನಮಗೆ ಮಿತ್ರರೂ ಬಂಧುಗಳೂ ಆದ ಯಾದವರೆಲ್ಲರೂ ತಮ್ಮ ಪಟ್ಟದಲ್ಲಿ ಸೆಮ್ಮದಿಯಾಗಿರುವರೆ? ಅವರನ್ನು ಎಲ್ಲಿ ಯಾದರೂಕಂಡಿದ್ದೆಯ ? ಅಥವಾಕೇಳಿದ್ದೆಯ ? ॥೧೧॥ ಎಂದು ಧರ್ಮರಾಜನು ಬೆಸಗೊಳಲು, ವಿದುರನು ಯದುಕುಲವು ನಾಶವಾದಸಂಗತಿಯನ್ನು ಹೊರತು, ತಾನುತೀರ್ಥಯಾತ್ರೆಯಲ್ಲಿ ಕಂಡುಕೇಳಿ ಅನುಭವಿಸಿದ ಸಮಾಚಾರವೆಲ್ಲವನ್ನೂಕ್ರಮವಾಗಿ ಬಣ್ಣಿಸಿದನು ॥೧೨॥ ಏಕೆಂದರೆ - ಆತನು ಬಹಳದಯಾಳುವೂ, ಪರರಸಂಕಟವನ್ನು ನೋಡಲಾರದವನೂ ಆದುದರಿಂದ, ತಮಗೆ ತಾವೇ ಉಂಟುಮಾಡಿಕೊಂಡ, ಮನುಷ್ಯಮಾತ್ರನು ಸೈರಿಸಲಾಗದ ಅ

ದುಃಖಿತಾನ್ ದ್ರಷ್ಟುಮುಕ್ಷಮಃ ॥ ೧೩ ॥ ಕಂಚಿತ್ಕಾಲ ಮಥಾ ವಾತ್ಸೀತ್ ಸತ್ಕೃತೋ ದೇವವ ತ್ಸ್ವಕೈಃ । ಭ್ರಾತು ರ್ಜ್ಯೇಷ್ಠಸ್ಯ ಶ್ರೇಯಸ್ಕೃ ತ್ಸರ್ವೇಷಾಂ ಪ್ರೀತಿ ಮಾವಹನ್ ॥ ೧೪ ॥ ಅಬಿಭ್ರ ದರ್ಯಮಾ ದಂಡಂ ಯಥಾಘ ಮಘಕಾರಿಷು । ಯಾವ ದ್ದಧಾರ * ಶೂದ್ರತ್ವಂ ಶಾಪಾ ದ್ವರ್ಷಶತಂ ಯಮಃ ॥೧೫॥ ಶ್ರೀಸೂತಃ ॥ ಯುಧಿಷ್ಠಿರೋ ಲಬ್ಧರಾಜ್ಯೋ ದೃಷ್ಟ್ವಾ

ತ್ಕೃತಃ-ಉಪಚರಿಸಲ್ಪಡುತ್ತಾ, ಜ್ಯೇಷ್ಠಸ್ಯ-ಹಿರಿಯುವನಾದ, ಭ್ರಾತುಃ-ಒಡಹುಟ್ಟಿದ ಧೃತರಾಷ್ಟ್ರನಿಗೆ, ಶ್ರೇಯಸ್ಕೃತ್-ಶ್ರೇಯಸ್ಸನ್ನು ಮಾಡುತ್ತಾ, ಸರ್ವೇಷಾಂ-ಎಲ್ಲರಿಗೂ, ಪ್ರೀತಿಂ-ವಿಶ್ವಾಸವನ್ನು, ಆವಹನ್-ಉಂಟುಮಾಡುತ್ತಾ, ದೇವವತ್ - ದೇವತೆಯಂತೆ, ಕಂಚಿತ್ಕಾಲಂ - ಕೊಂಚಕಾಲದವರೆಗೂ, ಅವಾತ್ಸೀತ್ - ವಾಸಮಾಡುತ್ತಿದ್ದನು ॥ ೧೪ ॥

ಯಮಃ-ಯಮನು, ಶಾಪಾತ್-ಶಾಪದಿಂದ, ಯಾವತ್-ಎಲ್ಲಿಯುವರಿಗೂ, ವರ್ಷಶತಂ - ನೂರಾರು ವರ್ಷಗಳು, ಶೂದ್ರತ್ವಂ-ಶೂದ್ರಜನ್ಮವನ್ನು, ದಧಾರ-ಪಡೆದನೋ, ತಾವತ್-ಅಲ್ಲಿಯವರೆಗೂ,ಅರ್ಯಮಾ-ಯಮನತಂದೆಯಾದ ಸೂರ್ಯನು, ಅಘಕಾರಿಷು - ಪಾಪಮಾಡಿದವರಲ್ಲಿ, ಯಥಾಘಂ - ಪಾಪಾನುಗುಣವಾಗಿ, ದಂಡಂ - ಶಿಕ್ಷೆಯನ್ನು, ಅಬಿಭ್ರತ್ - ಧರಿಸಿದನು, ॥ ೧೫ ॥ ಸೂತಃ-ಸೂತನು ಹೇಳುತ್ತಾನೆ, ಲಬ್ಧರಾಜ್ಯಃ-ರಾಜ್ಯವನ್ನುಪಡೆದ, ಯುಧಿಷ್ಠಿರಃ-ಧರ್ಮರಾಜನು, ಕುಲಂಧರಂ-ವಂಶೋದ್ಧಾರಕನಾದ,

ಅಪ್ರಿಯವಾದ ವೃತ್ತಾಂತವನ್ನು ಮಾತ್ರ ಹೇಳಲಿಲ್ಲ ॥ ೧೩ ॥ ಇಂತು ಆ ವಿದುರನು, ತಮ್ಮವರಿಂದ ಸತ್ಕರಿಸಲ್ಪಡುತ್ತಲೂ,ಎಲ್ಲರನ್ನು ಸಂತೋಷಗೊಳಿಸುತ್ತಲೂ, ತನ್ನ ಅಣ್ಣನಾದ ಧೃತರಾಷ್ಟ್ರನಿಗೆ ತತ್ವೋಪದೇಶವನ್ನು ಮಾಡುತ್ತಲೂ, ಕೊಂಚಕಾಲದವರೆಗೂ, ದೇವ ಪುರುಷನಂತೆ ಹಸ್ತಿನಾವತಿಯಲ್ಲಿನೆಲೆಗೊಂಡಿದ್ದನು ॥ ೧೪ ॥

ವಿದುರನು ಶಾಪದಿಂದ ಶೂದ್ರಸ್ತ್ರೀಯಲ್ಲಿ ಜನಿಸಿದವನಾದರೂ, ಯಮನ ಅವತಾರ ವಾದುದರಿಂದ ಧೃತರಾಷ್ಟ್ರನಿಗೆ ಜ್ಞಾನೋಪದೇಶಮಾಡಿದನು. ಅವನು ಶೂದ್ರಜನ್ಮದಲ್ಲಿ ರುವವರೆಗೂ ಆತನತಂದೆಯಾದ ಸೂರ್ಯನೇ ಜೀವರಿಗೆ ಪಾಪಾನುಗುಣವಾಗಿ ಶಿಕ್ಷೆಯನ್ನು ವಿಧಿಸುವ ಅಧಿಕಾರವನ್ನು ವಹಿಸಿದ್ದನು ॥ ೧೫ ॥ ಅಯ್ಯಾಶೌನಕಾದಿಗಳಿರಾ ? ಅನಂತ

* ಒಂದುದಿನ ರಾಜಭಟರು ಕಳ್ಳರನ್ನು ಅಟ್ಟಿಸಿಕೊಂಡುಬರುತ್ತಾ ಮಾಂಡವ್ಯಋಷಿಯ ಆಶ್ರಮದಲ್ಲಿ ಆ ಕಳ್ಳರನ್ನುಕಂಡು, ಅವರನ್ನೂ ಮಾಂಡವ್ಯನನ್ನೂ ಸಹ ಹಿಡಿದುಕೊಂಡು ಹೋಗಿ ತಮ್ಮ ದೊರೆಗೊಪ್ಪಿಸಿ, ಆತನಪ್ಪಣೆಯಂತೆಲ್ಲರನ್ನೂ ಶೂಲಕ್ಕೇರಿಸಿದರು. ಬಳಿಕ ರಾಜನು ಮಾಂಡವ್ಯನನ್ನು ಮಹರ್ಷಿಯೆಂದುತಿಳಿದು ಬಿಡಿಸಿದನು. ಆಗ ಮಾಂಡವ್ಯನು ಕ್ರುದ್ಧನಾಗಿ ಯಮನಬಳಿಗೆ ಹೋಗಿ ತನಗೀ ಶಿಕ್ಷೆಯಾಗಲು ಕಾರಣವೇನೆಂದು ಕೇಳಿದನು. ಯಮನು "ನೀನು ಬಾಲ್ಯದಲ್ಲಿ ಒಂದು ಚಿಟ್ಟೇಹುಳವನ್ನು ಕುಶಾಗ್ರದಿಂದ ಚುಚ್ಚಿ ಆಟವಾಡುತ್ತಿದ್ದುದರಿಂದೀ ಶೂಲಾರೋಹಣ ಪ್ರಾಪ್ತಿಯಾಯಿತು" ಎಂದು ಹೇಳಿದನು. ಅದಕ್ಕೆಮಾಂಡವ್ಯನುಮತ್ತಷ್ಟು ಕ್ರುದ್ಧನಾಗಿ "ಅಜ್ಞಾನದಿಂದಮಾಡಿದತಪ್ಪಿಗೆಹೆಚ್ಚು ದಂಡನೆಯನ್ನು ವಿಧಿಸಿದೆ ಯಾದುದರಿಂದ ನೀನು ಶೂದ್ರನಾಗು" ಎಂದು ಶಪಿಸಿದನು.

ಪೌತ್ರಂ ಕುಲಂಧರಂ । ಭ್ರಾತೃಭಿ ರ್ಲೋಕಪಾಲಾಭೈ ರ್ಮುಮುದೇ ಪರಯಾ ಶ್ರಿಯಾ ॥ ೧೬ ॥ * ಅಥಾಮಂತ್ರ್ಯ ಚ್ಯುತೋ ಬಂಧೂ ನ್ನಿವರ್ತ್ಯಾನುಗತಾನ್ ವಿಭುಃ। ಅರ್ಜುನೋದ್ಧವಶೈನೇಯೈ ರ್ವೃತೋ ದ್ವಾರವತೀಂ ಯಯೌ ॥ ಏವಂ ಗೃಹೇಷು ಸಕ್ತಾನಾಂ ಪ್ರಮತ್ತಾನಾಂ ತದೀಹಯಾ । ಅತ್ಯಕ್ರಾಮ ದವಿಜ್ಞಾತಃ ಕಾಲಃ ಪರಮದುಸ್ತರಃ ॥೧೭॥ ವಿದುರ ಸ್ತದಭಿಪ್ರೇತ್ಯ ಧೃತರಾಷ್ಟ್ರ ಮಭಾಷತ ॥ ವಿದುರಃ ॥ ರಾಜನ್ ನಿರ್ಗಮ್ಯತಾಂ ಶೀಘ್ರಂ ಪಶ್ಯೇದಂ ಭಯ ಮಾಗತಂ ॥ ೧೮ ॥ ಪ್ರತಿಕ್ರಿಯಾ ನ ಯ

ಪೌತ್ರಂ-ಮೊಮ್ಮಗನನ್ನು, ದೃಷ್ಟ್ವಾ-ನೋಡಿ, ಲೋಕಪಾಲಾಭೈಃ-ದಿಕ್ಪಾಲಕರಿಗೆ ಸಮಾನರಾದ, ಭ್ರಾತೃಭಿಃ-ತಮ್ಮಂದಿರೊಡನೆ, ಪರಯಾ-ಅಪಾರವಾದ, ಶ್ರಿಯಾ-ಸಂಪತ್ತಿನಿಂದ, ಮುಮುದೇ-ಸಂತೋಷಿಸುತ್ತಿದ್ದನು ॥ ೧೬ ॥ (ಅಥ-ಬಳಿಕ, ವಿಭುಃ-ಪ್ರಭುವಾದ, ಅಚ್ಯುತಃ-ಕೃಷ್ಣನು, ಆಮಂತ್ರ್ಯ-ಅಪ್ಪಣೆ ಪಡೆದು, ಅನುಗತಾನ್-ಹಿಂಬಾಲಿಸಿದ, ಬಂಧೂನ್ - ನೆಂಟರನ್ನು, ನಿವರ್ತ್ಯ- ಹಿಂದಿರುಗಿಸಿ, ಅರ್ಜುನೋದ್ಧವಶೈನೇಯೈಃ, ಅರ್ಜುನ, ಉದ್ಧವ, ಸಾತ್ಯಕಿಗಳಿಂದ, ವೃತಃ-ಕೂಡಿದವನಾಗಿ, ದ್ವಾರವತೀಂ-ದ್ವಾರಕೆಗೆ. ಯಯೌ-ಹೋದನು) ॥ ಏವಂ-ಹೀಗೆ, ಗೃಹೇಷು-ಮನೆಯಲ್ಲಿ, ಸಕ್ತಾನಾಂ-ಆಸಕ್ತನಾಗಿರುವ, ತದೀಹಯಾ - ಗೃಹವ್ಯಾಪಾರಗಳಿಂದ, ಪ್ರಮತ್ತಾನಾಂ - ಮದಿಸಿದ, ತೇಷಾಂ - ಆಪಾಂಡವರಿಗೆ, ಪರಮದುಸ್ತರಃ-ಬ್ರಹ್ಮಾದಿಗಳಿಗೂ ವಶವಾಗದ, ಕಾಲಃ-ಕಾಲವು ಅಥವಾ ಆಯುಸ್ಸು, ಅವಿಜ್ಞಾತಃ-ತಿಳಿಯಲ್ಪಡದಂತೆಯೇ, ಅತ್ಯಕ್ರಾಮತ್ - ಕಳೆದುಹೋಯಿತು ॥ ೧೭ ॥

ವಿದುರಃ-ವಿದುರನು, ತಂ - ಅದನ್ನು, ಅಭಿಪ್ರೇತ್ಯ- ತಿಳಿದು, ಧೃತರಾಷ್ಟ್ರಂ - ಧೃತರಾಷ್ಟ್ರನನ್ನು ಕುರಿತು, ಅಭಾಷತ-ಹೇಳಿದನು, ರಾಜನ್ - ರಾಜನೆ! ಶೀಘ್ರಂ-ಬೇಗನೆ, ನಿರ್ಗಮ್ಯತಾಂ - ಹೊರಡು, ಆಗತಂ- ಬಂದ, ಇದಂ ಭಯಂ - ಈಭಯವನ್ನು, ಪಶ್ಯ-ನೋಡು ॥ ೧೮ ॥ ಪ್ರಭೋ-ಮಹಾರಾಜನೆ!

ಲದಲ್ಲಿ ರಾಜ್ಯಾಧಿಪತ್ಯವನ್ನು ಪಡೆದಧರ್ಮರಾಜನು, ವಂಶವರ್ಧನನಾದ ಮೊಮ್ಮಗನನ್ನು ಕಂಡು, ಲೋಕಪಾಲರಿಗೆ ಸಮಾನರಾದ ತಮ್ಮಂದಿರಿಂದೊಡಗೂಡಿ, ನಿರತಿಶಯವಾದೈಶ್ವರ್ಯದಿಂದ ಸಂತೋಷಿಸುತ್ತಿದ್ದನು ॥ ೧೬ ॥ ಬಳಿಕ ಶ್ರೀಕೃಷ್ಣಮೂರ್ತಿಯು ಎಲ್ಲರಿಂದಲೂ ಅನುಜ್ಞೆಯನ್ನು ಪಡೆದು, ಪ್ರಯಾಣವನ್ನುಮಾಡಿ, ಸಾಗಕಳುಹುವುದಕ್ಕಾಗಿ ಹಿಂಬಾಲಿಸಿದ ಬಂಧುಗಳನ್ನೆಲ್ಲಾ ಹಿಂದಕ್ಕೆಕಳುಹಿಸಿ,ಅರ್ಜುನ, ಉದ್ಧವ, ಸಾತ್ಯಕಿ, ಇವರನ್ನು ಕರೆದುಕೊಂಡು ದ್ವಾರಕೆಗೆ ಹೊರಟುಹೋದನು. ಇಂತು ಸಂಸಾರದಲ್ಲಿ ವ್ಯಾಪಕರಾಗಿ, ಆಗೃಹವ್ಯಾಪಾರಗಳಿಂದ ಮತ್ತರಾಗಿರುವ ಪಾಂಡವರಿಗೆ, ಬ್ರಹ್ಮಾದಿಗಳಿಗೂ ಸ್ವಾಧೀನವಾಗದಿರುವ ಕಾಲವು ತಿಳಿಯದಂತೆಯೇಕಳೆದುಹೋಯಿತು ॥ ೧೭ ॥ ವಿದುರನೀ ಸಂಗತಿಯನ್ನು ತಿಳಿದು, ಧೃತರಾಷ್ಟ್ರನನ್ನು ಕುರಿತು " ಮಹಾರಾಜನೆ ! ಇನ್ನು ಶೀಘ್ರ

* ಈಶ್ಲೋಕವು ಶ್ರೀಧರವ್ಯಾಖ್ಯಾನೋಪಪನ್ನವಾದ ಪುಸ್ತಕದಲ್ಲಿಲ್ಲದಿರುವುದರಿಂದ ಅರ್ಥವೆಂದು ತೋರುವುದಿಲ್ಲ

ಸ್ಯೇಹ ಕುತಶ್ಚಿ ತ್ಕರ್ಹಿಚಿ ತ್ಪ್ರಭೋ! । ಸ ಏಷಭಗವಾ‌ನ್ ಕಾಲ ಸ್ಸರ್ವೇಷಾಂ ನ ಸ್ಸಮಾಗತಃ ॥ ೧೯ ॥ ಯೇನ ಜ್ಯೈವಾ ಭಿಪನ್ನೋಯಂ ಪ್ರಾಣ್ಯೈಃ ಪ್ರಿಯ ತಮೈ ರಪಿ । ಜನ ಸ್ಸದ್ಯೋ ವಿಮುಚ್ಯೇತ ಕಿಮುತಾನ್ಯೈ ರ್ಧನಾ ದಿಭಿಃ ॥ ೨೦ ॥ ಪಿತೃ ಭ್ರಾತೃ ಸುಹೃ ತ್ಪುತ್ರಾ ಹತಾಸ್ತೇ ವಿಗತಂ ವಯಃ। ಆತ್ಮಾ ಚ ಜರಯಾ ಗ್ರಸ್ತಃ ಪರಗೇಹ ಮುಪಾಸಸೇ ॥ ೨೧ ॥ ಅಂಧಃ ಪುರೈವ ಬಧಿರೋ ಮಂದ ಪ್ರಜ್ಞಶ್ಚ ಸಾಂಪ್ರತಂ । ವಿಶೀರ್ಣದಂತೋ ಮಂದಾಗ್ನಿಃ ಸರೋಗಃ ಕಫ ಮುದ್ವಹ‌ನ್ ॥೨೨॥ ಅಹೋ ಮಹೀಯಸೀ

ಇಹ- ಈ ಲೋಕದಲ್ಲಿ, ಕುತಶ್ಚಿತ್- ಯಾವುದರಿಂದಲೂ, ಕರ್ಹಿಚಿತ್ - ಯಾವಾಗಲೂ, ಯಸ್ಯ-ಯಾವುದಕ್ಕೆ, ಪ್ರತಿಕ್ರಿಯಾ- ಪ್ರತೀಕಾರವು, ನ- ಇಲ್ಲವೋ, ಭಗವಾ‌ನ್ - ಮಹಾಶಕ್ತಿಯುಳ್ಳ, ಸಏಷಕಾಲಃ-ಆ ಈಕಾಲವು, ನಸ್ಸರ್ವೇಷಾಂ- ನಮ್ಮೆಲ್ಲರಿಗೂ, ಸಮಾಗತಃ- ಪ್ರಾಪ್ತವಾಯಿತು. ॥ ೧೯ ॥ ಯೇನ-ಯಾವಕಾಲದಿಂದ. ಅಭಿಪನ್ನಃ-ಗ್ರಸ್ತನಾದ, ಅಯಂಜನಃ-ಈಜನವು, ಪ್ರಿಯತಮೈಃ-ಅತ್ಯಂತ ಪ್ರಿಯಗಳಾದ, ಪ್ರಾಣೈರಪಿ-ಪ್ರಾಣಗಳಿಂದಲೂ, ಸದ್ಯಃ - ತತ್‌ಕ್ಷಣದಲ್ಲಿಯೇ, ವಿಮುಚ್ಯೇತ--ಬಿಡಲ್ಪಡುವುದೋ ಆಗ, ಅನ್ಯೈಃ ಬೇರೆಯಾದ ಧನಮೊದಲಾದವುಗಳಿಂದ, ಕಿಮುತ-ಹೇಳುವುದೇನು ? ॥ ೨೦ ॥

ತೇ- ನಿನ್ನ, ಪಿತೃ...ಪುತ್ರಾಃ, ಪಿತೃ ತಂದೆಯು, ಭ್ರಾತೃ-ಒಡಹುಟ್ಟಿದವರು, ಸುಹೃತ್ - ಮಿತ್ರರು, ಪುತ್ರಾಃ- ಮಕ್ಕಳು, ಇವರೆಲ್ಲರೂ, ಹತಾಃ - ಕೊಲ್ಲಲ್ಪಟ್ಟರು. ವಯಃ-ವಯಸ್ಸು ಕಳೆಯಿತು, ಆತ್ಮಾಚ-ದೇಹವೂ, ಜರಯಾ - ಮುಪ್ಪಿನಿಂದ, ಗ್ರಸ್ತಃ - ಆಕ್ರಮಿಸಲ್ಪಟ್ಟಿತು, ಪರಗೇಹಂ-ಕಂಡವರ ಮನೆಯನ್ನು, ಉಪಾಸಸೇ- ಆಶ್ರಯಿಸಿರುವೆ ॥ ೨೧ ॥ ಪುರೈವ-ಮೊದಲೇ, ಅಂಧಃ-ಕುರುಡನು, ಸಾಂಪ್ರತಂ- ಈಗ, ಬಧಿರಃ - ಕಿವುಡನು, ಮಂದಪ್ರಜ್ಞಶ್ಚ-ಅರಿವುಮರುಳಾದವನೂ, ವಿಶೀರ್ಣದಂತಃ-ಹಲ್ಲಿಲ್ಲದವನು, ಮಂದಾಗ್ನಿಃ-ಜೀರ್ಣಶಕ್ತಿಯಿಲ್ಲದವನು, ಸರೋಗಃ-ರೋಗಿಯೂ, ಕಫಂ - ಶ್ಲೇಷ್ಮವನ್ನು, ಉದ್ವಹ‌ನ್- ಕಾರುವವನೂ ಆಗಿರುವೆ ॥ ೨೨ ॥ ಜಂತೋಃ-ಪ್ರಾಣಿಗೆ, ಜೀವಿತಾಶಾ - ಬದುಕುವಆಸೆಯು,

---

ವಾಗಿ ಮನೆಯಿಂದ ಹೊರಡು. ಇದೋ ಒದಗಿಬರುತ್ತಿರುವ ಭಯವನ್ನು ನೋಡು. ಯಾವುದಕ್ಕೀ ಲೋಕದಲ್ಲಿ, ಯಾವಾಗಲೂ, ಯಾವುದರಿಂದಲೂ, ಪ್ರತೀಕಾರವಿಲ್ಲವೋ, ಅಂತಹ ಮಹಾಮಹಿಮೆಯುಳ್ಳ ಕಾಲವೆಂಬುದು ನಮ್ಮೆಲ್ಲರಿಗೂ ಸಮೀಪಿಸಿತು. ಯಾವಕಾಲಕ್ಕೆ ಒಳಗಾದ ಪುರುಷನು ಅತ್ಯಂತಪ್ರಿಯಗಳಾದ ಪ್ರಾಣಗಳನ್ನೂ ಬಿಟ್ಟುಬಿಡುವನೋ, ಅಂತಹ ಕಾಲವು ಪ್ರಾಪ್ತವಾದಾಗ, ಆ ಪ್ರಾಣಗಳಿಗೆ ಸಂಬಂಧಿಸಿದ ಇತರಗಳಾದ ಧನಕನಕಾದಿಗಳನ್ನು ಬಿಡುವುದರಲ್ಲಿ ಹೇಳುವುದೇನು ॥ ೧೯ ॥

ಅಣ್ಣಾ ಧೃತರಾಷ್ಟ್ರನೆ ! ನಿನ್ನ ತಂದೆಯು, ಒಡಹುಟ್ಟಿದವರು, ಮಿತ್ರರು, ಪುತ್ರರು ಎಲ್ಲರೂ ಮಡಿದರು. ವಯಸ್ಸೂ ಕಳೆದುಹೋಯಿತು. ಮುಪ್ಪಿನಿಂದ ಶರೀರವೂಗಳಿತವಾಯಿತು. ಕಂಡವರಮನೆಯಲ್ಲಿ ಬಿದ್ದಿರುವೆ. ॥ ೨೦ ॥ ಮೊದಲೇಕುರುಡನು, ಈಗಂತೂ ಕಿವಿಕೇಳುವುದಿಲ್ಲ. ಅರಿವುಮರುಳಾಯಿತು, ಹಲ್ಲುಗಳುದುರಿಹೋದುವು, ಆಹಾರವು ಜೀರ್ಣಿಸುವುದಿಲ್ಲ. ರೋಗಗಳು ತಲೆದೋರಿದವು. ಶ್ಲೇಷ್ಮವು ಹೆಚ್ಚಿಗೂರುತ್ತಿರುವೆ ॥೨೨॥

ಜಂತೋರ್ಜೀವಿತಾಶಾ ಯಯಾ ಭವಾನ್ । ಭೀಮಾಪವರ್ಜಿತಂ ಪಿಂಡಮಾ
ದತ್ತೇ ಗೃಹಪಾಲವತ್ ॥ ೨೩ ॥ ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾ
ರಾಶ್ಚ ದೂಷಿತಾಃ । ಹೃತಂ ಕ್ಷೇತ್ರಂ ಧನಂ ಯೇಷಾಂ ತದ್ದತ್ತೈರಸುಭಿಃ ಕಿ
ಯತ್ ॥ ೨೪ ॥ ತಸ್ಯಾಪಿ ತವ ದೇಹೋಯಂ ಕೃಪಣಸ್ಯ ಜಿಜೀವಿಷೋಃ ।
ಪರ್ಯೇತ್ಯನಿಚ್ಛತೋ ಜೀರ್ಣೋ ಜರಯಾ ವಾಸಸೀ ಇವ ॥ ೨೫ ॥ ಗತ
ಸ್ವಾರ್ಥಮಿಮಂ ದೇಹಂ ವಿರಕ್ತೋ ಮುಕ್ತಬಂಧನಃ । ಅವಿಜ್ಞಾತಗತಿ
ರ್ಜಹ್ಯಾತ್ಸವೈ ಧೀರ ಉದಾಹೃತಃ ॥ ೨೬ ॥ ಯಃ ಸ್ವಕಾತ್ಪರತೋ

ಬಲವತೀ-ಬಲವಾದುದು, ಅಹೋ-ಆಶ್ಚರ್ಯವು ! ಯಯಾ-ಯಾವಆಸೆಯಿಂದ, ಭವಾನ್-ನೀನು, ಗೃಹ
ಪಾಲವತ್ ನಾಯಿಯಂತೆ, ಭೀಮಾಪವರ್ಜಿತಂ - ಭೀಮನಿಂದ ಕೊಡಲ್ಪಟ್ಟ, ಪಿಂಡಂ - ತಿಂಡಿಯನ್ನು
ಆದತ್ತೇ-ತೆಗೆದುಕೊಳ್ಳುವೆಯೋ ॥ ೨೩ ॥ ಯೇಷಾಂ-ಯಾರಿಗೆ, ಅಗ್ನಿಃ - ಬೆಂಕಿಯು, ನಿಸೃಷ್ಟಃ-
ಇಡಲ್ಪಟ್ಟಿತೋ, ಗರಶ್ಚ-ವಿಷವೂ, ದತ್ತಃ-ಕೊಡಲ್ಪಟ್ಟಿತೋ, ದಾರಾಶ್ಚ - ಹೆಂಡತಿಯೂ, ದೂಷಿತಾಃ-
ಅವಮಾನಗೊಳಿಸಲ್ಪಟ್ಟಳೋ, ಕ್ಷೇತ್ರಂ-ರಾಜ್ಯವು, ಧನಂಚ-ಧನವೂ, ಹೃತಂ - ಅಪಹರಿಸಲ್ಪಟ್ಟಿತೋ,
ತದ್ದತ್ತೈಃ-ಅವರಿಂದ ಕೊಡಲ್ಪಟ್ಟನ್ನದಿಂದ ಬೆಳೆದ, ಅಸುಭಿಃ - ಪ್ರಾಣಗಳಿಂದ, ಕಿಯತ್ - ಏನುಪ್ರಯೋ
ಜನ ? ॥ ೨೪ ॥ ತಸ್ಯಾಪಿ-ಇಷ್ಟು ದೈನ್ಯದಿಂದಿದ್ದರೂ, ಕೃಪಣಸ್ಯ-ಕಷ್ಟಪಡುತ್ತಿರುವ, ಜಿಜೀವಿಷೋಃ-
ಬದುಕಲಪೇಕ್ಷಿಸುವ, ತವ-ನಿನ್ನ, ಅನಿಚ್ಛತೋಪಿ-ಬಯಸದಿದ್ದರೂ, ಜರಯಾ-ಮುಪ್ಪಿನಿಂದ, ದೇಹಃ-
ನಿನ್ನಶರೀರವು, ವಾಸಸೀಇವ-ವಸ್ತ್ರಗಳಂತೆ, ಜೀರ್ಣಃ-ಬಡವಾಗಿ, ಪರ್ಯೇತಿ-ನಾಶವಾಗುತ್ತಿದೆ ॥ ೨೫ ॥
ವಿರಕ್ತಃ-ವೈರಾಗ್ಯಸಂಪನ್ನನು, ಮುಕ್ತಬಂಧನಃ-ಅಭಿಮಾನವನ್ನು ಬಿಟ್ಟವನೂ ಆದನು, ಗತಸ್ವಾರ್ಥಂ-
ಯಶಸ್ಸು ಧರ್ಮ ಮೊದಲಾದ ಸ್ವಪ್ರಯೋಜನವಿಲ್ಲದ, ಇಮಂ - ಈ, ದೇಹಂ - ಶರೀರವನ್ನು, ಅವಿಜ್ಞಾತ
ಗತಿಃ, ಅವಿಜ್ಞಾತ - ತಿಳಿಯಲ್ಪಡದ, ಗತಿಃ - ಗಮನವುಳ್ಳವನಾಗಿ, ಜಹ್ಯಾತ್ - ಬಿಡಬೇಕು, ಸಃ-ಅವನೇ,
ಧೀರಃ-ಧೀರನೆಂದು, ಉದಾಹೃತಃ ಹೇಳಲ್ಪಡುವನು, ವೈ-ದಿಟವು, ॥ ೨೬ ॥ ಯಃ - ಯಾವನು, ಸ್ವ

ಇಾತಿದ್ದರೂ, ಪುತ್ರರೆಲ್ಲರನ್ನೂ ಕೊಂದ ಭೀಮನು ಅಸಡ್ಡೆಯಿಂದ ಕೊಡುವ ಪಿಂಡವನ್ನು ನಾ
ಯಿಯಂತೆ ತಿನ್ನುತ್ತಾ ಬದುಕಿರುವೆಯಲ್ಲ, ಅಕಟಾ ! ಲೋಕದಲ್ಲಿ ಪ್ರಾಣಿಗಳಿಗೆ ಜೀವಿ
ತಾಶೆಯೆಂಬುದು ಎಷ್ಟುಪ್ರಬಲವಾದುದೋ ನಾನರಿಯೆನು ॥ ೨೩ ॥

ಯಾರನ್ನು ಕೊಲ್ಲಿಸಬೇಕೆಂದು, ಮನೆಗೆ ಬೆಂಕಿಯನ್ನಿಡಿಸಿದೆಯೋ, ವಿಷವನ್ನು ಕೊ
ಡಿಸಿದೆಯೋ, ಹೆಂಡತಿಯ ಮಾನಭಂಗವನ್ನು ಮಾಡಿಸಲೆಳಸಿದೆಯೋ, ರಾಜ್ಯವನ್ನಪಹರಿ
ಸಿದೆಯೋ, ಸರ್ವಸ್ವವನ್ನು ಕಸುಕೊಂಡು ಕಾಡಿಗೆ ಹೊರಡಿಸಿದೆಯೋ, ಅಂತಹ ಪಾಂ
ಡವರಿತ್ತ ಪಿಂಡವನ್ನು ತಿಂದು ಪ್ರಾಣಗಳನ್ನು ಸಲಹಬಹುದೆ? ॥ ೨೪ ॥ ಹೀಗೆ ನೀನು
ಬಂಡತನದಿಂದ ಬದುಕುತ್ತಾ, ಸಾಯಬಾರದೆಂದು ಪಿಸುಣತನದಿಂದ ಕಷ್ಟಪಡುತ್ತಿದ್ದರೂ,
ಹಳೇಬಟ್ಟೆಯಂತೆ ಜೀರ್ಣವಾಗಿರುವನಿನ್ನಶರೀರವು ದಿನೇದಿನೇಬಡವಾಗಿ ನಾಶವನ್ನೇಪಡೆ
ಯುವುದು. ॥ ೨೫ ॥ ಯಾವಪುರುಷನಾದರೆ, ವಿಷಯಾಸಕ್ತಿಯನ್ನುಳಿದು, ಅಭಿಮಾನ
ವಿಲ್ಲದೆ, ತಾನೆಲ್ಲಿಹೋದನೆಂಬಸುದ್ದಿಯನ್ನು ಕೂಡಾ ಇತರರರಿಯದಂತೆ, ಧರ್ಮ, ಕೀರ್ತಿ

ವೇಹ ಜಾತನಿರ್ವೇದ ಆತ್ಮವಾನ್ । ಹೃದಿ ಕೃತ್ವಾ ಹರಿಂ ಗೇಹಾತ್ಪ್ರವ್ರಜೇತ್ಸನರೋತ್ತಮಃ ॥ ೨೭ ॥ ಅಥೋದೀಚೀಂ ದಿಶಂಯಾತು ಸ್ವೈರಜ್ಞಾತಗತಿ ರ್ಭವಾನ್ । ಇತೋ ರ್ವಾಕ್ ಪ್ರಾಯಶಃ ಕಾಲಃ ಪುಂಸಾಂ ಗುಣವಿಕರ್ಷಣಃ ॥ ೨೮ ॥ ಏವಂ ರಾಜಾ ವಿದುರೇ ಣಾನುಜೇನ ಪ್ರಜ್ಞಾಚಕ್ಷು ರ್ಬೋಧಿತ ಆಜಮೀಢಃ । ಛಿತ್ವಾ ಸ್ವೇಷು ಸ್ನೇಹಪಾಶಾನ್ ದ್ರಢಿಮ್ನೋ ನಿಶ್ಚಕ್ರಾಮ ಭ್ರಾತೃ ಸಂದರ್ಶಿತಾಧ್ವಾ ॥ ೨೯ ॥ ಪತಿಂ

ಕಾತ್-ತನಗೆತಾನೆ, ಅಥವಾ, ಪರತಃ-ಇತರರಿಂದ, ಜಾತನಿರ್ವೇದಃ - ವೈರಾಗ್ಯವುಂಟಾಗಿ, ಆತ್ಮವಾನ್-ಜಿತೇಂದ್ರಿಯನೆನಿಸಿ, ಹೃದಿ-ಮನಸ್ಸಿನಲ್ಲಿ, ಹರಿಂ-ವಿಷ್ಣುವನ್ನು, ಕೃತ್ವಾ-ಮಾಡಿ, ಗೇಹಾತ್-ಮನೆಯಿಂದ, ಪ್ರವ್ರಜೇತ್-ಹೊರಟು ಹೋಗುವನೋ, ಸಃ-ಅವನು, ನರೋತ್ತಮಃ - ಪುರುಷಶ್ರೇಷ್ಠನು ॥ ೨೭ ॥ ಅಥ-ಆದುದರಿಂದ, ಭವಾನ್-ನೀನು, ಸ್ವೈಃ-ಜ್ಞಾತಿಗಳಿಂದ, ಅಜ್ಞಾತಗತಿಃ - ತಿಳಿಯಲ್ಪಡದ ದಾರಿಯುಳ್ಳವನಾಗಿ, ಉದೀಚೀಂದಿಶಂ-ಉತ್ತರದಿಕ್ಕಿಗೆ, ಯಾತು-ಹೊರಡು, ಇತಃ ಅರ್ವಾಕ್-ಇನ್ನುಮೇಲೆ ಬರುವ, ಕಾಲಃ-ಕಾಲವು, ಪುಂಸಾಂ-ಪುರುಷರ, ಗುಣವಿಕರ್ಷಣಃ-ಶೌರ್ಯೌದಾರ್ಯಾದಿ ಗುಣಗಳನ್ನು ಹೋಗಲಾಡಿಸುವುದು ॥ ೨೮ ॥ ಆಜಮೀಢಃ-ಅಜಮೀಢನವಂಶದಲ್ಲಿ ಹುಟ್ಟಿದ, ಪ್ರಜ್ಞಾಚಕ್ಷುಃ-ಜ್ಞಾನವೇ ಕಣ್ಣಾಗಿ ಉಳ್ಳ, (ಕುರುಡನಾದ) ರಾಜಾ-ಧೃತರಾಷ್ಟ್ರನು, ಅನುಜೇನ-ತಮ್ಮನಾದ, ವಿದುರೇಣ - ವಿದುರನಿಂದ, ಬೋಧಿತಃ - ಬೋಧಿಸಲ್ಪಟ್ಟವನಾಗಿ, ಸ್ವೇಷು - ತನ್ನವರಲ್ಲಿ, ದ್ರಢಿಮ್ನಃ-ಗಟ್ಟಿಯಾದ, ಸ್ನೇಹಪಾಶಾನ್ - ಮಮತೆಯೆಂಬ ಹಗ್ಗಗಳನ್ನು, ಛಿತ್ವಾ-ಕತ್ತರಿಸಿ, ಭ್ರಾತೃಸಂದರ್ಶಿತಾಧ್ವಾ, ಭ್ರಾತೃ-ವಿದುರನಿಂದ, ಸಂದರ್ಶಿತ-ತೋರಿಸಲ್ಪಟ್ಟ, ಅಧ್ವಾ-ದಾರಿಯುಳ್ಳವನಾಗಿ, ನಿಶ್ಚಕ್ರಾಮ - ಹೊರಟು ಹೋದನು ॥

ಮೊದಲಾದ ಪ್ರಯೋಜನವಿಲ್ಲದ ಈ ಶರೀರವನ್ನು ಬಿಟ್ಟು ಬಿಡುವನೋ, ಅವನೇ ಧೀರನು ॥ ಮತ್ತು ಯಾವನು ಜಿತೇಂದ್ರಿಯನಾಗಿ, ತನಗೆ ತಾನೇ ಆಗಲಿ, ಅಥವಾ ಪರರ ಉಪದೇಶದಿಂದಾಗಲಿ, ವೈರಾಗ್ಯವನ್ನು ಪಡೆದು, ಮನಸ್ಸಿನಲ್ಲಿ ಶ್ರೀಹರಿಯನ್ನು ನೆಲೆಗೊಳಿಸಿಕೊಂಡು ಮನೆಯಿಂದ ಹೊರಟು ಹೋಗುವನೋ, ಅವನೇ ಉತ್ತಮಪುರುಷನೆನಿಸುವನು ॥ ೨೭ ॥ ಆದುದರಿಂದ ಎಲೈ ಅಣ್ಣನೇ ! ನೀನೀಗಲಾದರೂ, ಈ ಜ್ಞಾತಿಗಳಿಗೆ ದಾರಿತೋರದಂತೆ ಉತ್ತರ ದಿಕ್ಕಿಕೆ ಹೊರಟುನಡೆ. ಇನ್ನು ಮುಂದೆ ಬರುವ ಕಾಲವು ಪುರುಷರ ಧೈರ್ಯಶೌರ್ಯೌದಾರ್ಯಾದಿ ಸುಗುಣಗಳೆಲ್ಲವನ್ನೂ ಹೋಗಲಾಡಿಸುವುದು, ಎಂದು ಹೇಳಿದನು ॥ ೨೮ ॥ ಬಳಿಕ, ಅಜಮೀಢನವಂಶದಲ್ಲಿ ಜನಿಸಿದ, ಅಂಧನಾದ ಧೃತರಾಷ್ಟ್ರನು, ತಮ್ಮನಾದ ವಿದುರನಿಂದ ಈರೀತಿಯಾಗಿ ಬೋಧಿಸಲ್ಪಟ್ಟವನಾಗಿ, ತನ್ನವರಲ್ಲಿರುವ ಪ್ರಬಲವಾದ ಅಭಿಮಾನವೆಂಬ ಪಾಶವನ್ನು ಛೇದಿಸಿ, ವಿದುರನಿಂದುಪದೇಶಿಸಲ್ಪಟ್ಟ ಮೋಕ್ಷಮಾರ್ಗವನ್ನೂ, ಅರಣ್ಯಮಾರ್ಗವನ್ನೂ ಸಹ ಅನುಸರಿಸಿ ಪ್ರಯಾಣಮಾಡಿದನು ॥ ೨೯ ॥

ಕೂಡಲೇ ಪತಿದೇವತೆಯೂ, ಸುಶೀಲೆಯೂ, ಸುಕುಮಾರಿಯೂ, ಆದ ಗಾಂಧಾರಿಯು, ಯುದ್ಧವೆಂಬುದು ಭಯಂಕರವಾಗಿದ್ದರೂ, ಶೂರರಿಗೆ ಹರ್ಷವನ್ನುಂಟುಮಾಡುವಂತೆ,

ಪ್ರಯಾಂತಂ ಸುಬಲಸ್ಯ ಪುತ್ರೀ ಪತಿವ್ರತಾ ಚಾನು ಜಗಾಮ ಸಾಧ್ವೀ ।
ಹಿಮಾಲಯಂ ನ್ಯಸ್ತ ದಂಡಪ್ರಹರ್ಷಂ ಮನಸ್ವಿನಾಮಿವ ಸತ್ ಸಂಪ್ರಹಾರಃ॥
ಅಜಾತಶತ್ರುಃ ಕೃತಮೈತ್ರೋ ಹುತಾಗ್ನಿ ರ್ವಿಪ್ರಾ ನ್ನತ್ವಾ ತಿಲಗೋ
ವಸ್ತ್ರರುಕ್ಮೈಃ । ಗೃಹಂ ಪ್ರವಿಷ್ಟೋ ಗುರುವಂದನಾಯ ನ ಚಾಪಶ್ಯ
ತ್ಪಿತರೌ ಸೌಬಲೀಂಚ ॥ ೩೧ ॥ ತತ್ರ ಸಂಜಯ ಮಾಸೀನಂ ಪಪ್ರಚ್ಛೋ
ದ್ವಿಗ್ನಮಾನಸಃ । ಗಾವಲ್ಗಣೇ ? ಕ್ವ ನಸ್ತಾತೋ ವೃದ್ಧೋ ಹೀನಶ್ಚ ನೇತ್ರ
ಯೋಃ ॥ ೩೨॥ ಅಂಬಾ ವಾ ಹತ ಪುತ್ರಾರ್ತಾ ಪಿತೃವ್ಯಃ ಕ್ವಗತ? ಸ್ಸುಹೃತ್।

ಪತಿವ್ರತಾ-ಪತಿವ್ರತೆಯಾದ, ಸಾಧ್ವೀ-ಸುಶೀಲೆಯಾದ, ಸುಬಲಸ್ಯ-ಗಾಂಧಾರ ರಾಜನ, ಪುತ್ರೀ-ಮಗಳಾದ ಗಾಂಧಾರಿಯು, ಮನಸ್ವಿನಾಂ-ಶೂರರಿಗೆ, ಸತ್-ತೀವ್ರವಾದ, ಸಂಪ್ರಹಾರಇವ-ಯುದ್ಧದಂತೆ, ನ್ಯಸ್ತ...ರ್ಷಂ, ನ್ಯಸ್ತದಂಡ-ಭೂತದ್ರೋಹವನ್ನುಳಿದ ಯತಿಗಳನ್ನು, ಪ್ರಹರ್ಷಂ-ಸಂತೋಷಗೊಳಿಸುವ, ಹಿಮಾಲಯಂ-ಹಿಮವತ್ಪರ್ವತಕ್ಕೆ, ಪ್ರಯಾಂತಂ-ಹೋಗುತ್ತಿರುವ, ಪತಿಂ-ಗಂಡನನ್ನು, ಅನುಜಗಾಮ-ಹಿಂಬಾಲಿಸಿದಳು ॥ ೩೦ ॥ ಅಜಾತಶತ್ರುಃ-ಧರ್ಮರಾಜನು, ಕೃತಮೈತ್ರಃ, ಕೃತ-ಮಾಡಲ್ಪಟ್ಟ, ಮೈತ್ರಃ-ಸೂರ್ಯದೇವತಾಕವಾದ ಸಂಧ್ಯಾವಂದನವುಳ್ಳವನಾಗಿ. ಹುತಾಗ್ನಿಃ-ಅಗ್ನಿಹೋತ್ರಗಳನ್ನು ಮಾಡಿ, ವಿಪ್ರಾನ್-ಬ್ರಾಹ್ಮಣರನ್ನು, ತಿಲ...ರುಕ್ಮೈಃ, ತಿಲ-ಎಳ್ಳು, ಗೋ-ಆಕಳು, ವಸ್ತ್ರ-ವಸ್ತ್ರಗಳು, ರುಕ್ಮೈಃ-ಚಿನ್ನ ಇವುಗಳಿಂದ, ನತ್ವಾ-ಪೂಜಿಸಿ, ಗುರುವಂದನಾಯ-ಗುರುಗಳಾದ ಧೃತರಾಷ್ಟ್ರವಿದುರಾದಿಗಳ, ವಂದನಾಯ-ನಮಸ್ಕಾರಕ್ಕಾಗಿ, ಗೃಹಂ-ಅವರಮನೆಯನ್ನು, ಪ್ರವಿಷ್ಟಃ-ಪ್ರವೇಶಿಸಿ, ಪಿತರೌ-ತಂದೆಗಳನ್ನೂ, ಸೌಬಲೀಂಚ-ಗಾಂಧಾರಿಯನ್ನೂ, ನಾಪಶ್ಯತ್-ನೋಡಲಿಲ್ಲ ॥ ೩೧ ॥

ಉದ್ವಿಗ್ನಮಾನಸಃ-ಬಳಲಿದ ಮನಸ್ಸುಳ್ಳ ಧರ್ಮರಾಜನು. ತತ್ರ-ಅಲ್ಲಿ, ಆಸೀನಂ-ಕುಳಿತಿರುವ ಸಂಜಯಂ-ಸಂಜಯನನ್ನು ಕುರಿತು, ಪಪ್ರಚ್ಛ-ಪ್ರಶ್ನೆಮಾಡಿದನು:—ಹೇ ಗಾವಲ್ಗಣೇ-ಎಲೈ ಗವಲ್ಗಣನ ಮಗನಾದ ಸಂಜಯನೇ! ವೃದ್ಧಃ-ಮುದುಕನೂ, ನೇತ್ರಯೋಃ-ಕಣ್ಣುಗಳು, ಹೀನಃ-ಇಲ್ಲದವನೂ ಆದ, ನಃ-ನಮ್ಮ, ತಾತಃ-ತಂದೆಯು, ಕ್ವ-ಎಲ್ಲಿ? ॥ ೩೨ ॥ ಹತ...ರ್ತಾ, ಹತ-ಕೊಲ್ಲಲ್ಪಟ್ಟ, ಪುತ್ರ-ಮಕ್ಕಳಿಗಾಗಿ, ಆರ್ತಾ-ಗೋಳಾಡುತ್ತಿರುವ, ಅಂಬಾ-ತಾಯಿಯು, ಕ್ವ-ಎಲ್ಲಿ?

ಭೂತದ್ರೋಹವನ್ನುಳಿದ ಸಾಧುಗಳಿಗೆ ಅತ್ಯಾನಂದಕರವಾದ, ಹಿಮಾಲಯವನ್ನು ಕುರಿತು ತೆರಳುತ್ತಿರುವಪತಿಯನ್ನು ಹಿಂಬಾಲಿಸಿದಳು. ॥ ೩೦ ॥ ಅನಂತರದಲ್ಲಿ ಧರ್ಮರಾಜನು ಎಂದಿನಂತೆಯೇ ಬೆಳಿಗ್ಗೆ ಎದ್ದು ಸ್ನಾನ, ಸಂಧ್ಯಾವಂದನ, ಅಗ್ನಿಹೋತ್ರ, ಮೊದಲಾದ ಪ್ರಾತರಾಹ್ನಿಕಗಳನ್ನು ನೆರವೇರಿಸಿ, ಬ್ರಾಹ್ಮಣರಿಗೆ ಗೋ, ಭೂ, ತಿಲ, ಹಿರಣ್ಯಾದಿ ದಾನಗಳನ್ನಿತ್ತು, ಸತ್ಕರಿಸಿ, ಗುರುವಂದನೆಗಾಗಿ, ಧೃತರಾಷ್ಟ್ರನ ಅರಮನೆಗೆ ಹೋದನು. ಅಲ್ಲಿ ಧೃತರಾಷ್ಟ್ರವಿದುರರನ್ನೂ, ಗಾಂಧಾರಿಯನ್ನೂ ಸಹ ಕಾಣದೆ, ಖಿನ್ನನಾಗಿ ಕಳವಳಿಸುತ್ತಾ, ಅಲ್ಲಿ ಕುಳಿತಿರುವ ಸಂಜಯನನ್ನು ಕುರಿತು, ಅಯ್ಯಾ! ಗವಲ್ಗಣ ಪುತ್ರನಾದ ಸಂಜಯನೇ! ವೃದ್ಧನೂ, ಅಂಧನೂ ಆದ ನಮ್ಮ ತಂದೆಯೆಲ್ಲಿ! ಪುತ್ರಶೋಕದಿಂದ ಪೀಡಿತಳಾದ ತಾಯಿಯೆಲ್ಲಿ? ನಮ್ಮಲ್ಲಿ ಸಂಪೂರ್ಣಾಭಿಮಾನಿಯಾದ ನಮ್ಮ ಚಿಕ್ಕಪ್ಪನೆಲ್ಲಿ? ಪುತ್ರ ಮಿತ್ರಾದಿ

ಅಪಿ ಮಯ್ಯಕೃತಪ್ರಜ್ಞೇ ಹತಬಂಧು ಸ್ಸ್ವಭಾರ್ಯಯಾ ॥ ೩೩ ॥
ಆಶಂಸಮಾನ ಶ್ಶಮಲಂ ಗಂಗಾಯಾಂ ದುಃಖಿತೋ ಪತತ್ । ಪಿತರ್ಯ್ಯುಪರತೇ
ಪಾಂಡೌ ಸರ್ವಾನ್ನ ಸ್ಸುಹೃದ ಶ್ಶಿಶೂನ್ ॥ ೩೪ ॥ ಅರಕ್ಷತಾಂ ವ್ಯಸ
ನತಃ ಪಿತೃವ್ಯೌ ಕ್ವಗತೌ ವಿತಃ ॥ ಶ್ರೀ ಸೂತಃ ॥ ಕೃಪಯಾ ಸ್ನೇಹವೈಕ್ಲ
ಬ್ಯಾ ತ್ಸೂತೋ ವಿರಹ ಕರ್ಶಿತಃ ॥ ೩೫ ॥ ಆತ್ಮೇಶ್ವರ ಮಚಕ್ಷಾಣೋ
ನ ಪ್ರತ್ಯಾಹಾತಿಪೀಡಿತಃ । ವಿಮೃಜ್ಯ ಪಾಣಿನಾ ಶ್ರೂಣಿ ವಿಷ್ಟಭ್ಯಾತ್ಮಾನ
ಮಾತ್ಮನಾ ॥ ೩೬ ॥ ಅಜಾತಶತ್ರುಂ ಪ್ರತ್ಯೂಚೇ ಭರ್ತುಃ ಪಾದಾವನು

ಸುಹೃತ್ ಒಳ್ಳೆಯಮನಸ್ಸುಳ್ಳ, ಪಿತೃವ್ಯಃ - ಚಿಕ್ಕತಂದೆಯು, ಕ್ವಗತಃ-ಎಲ್ಲಿಹೋದನು ? ಹತಬಂಧುಃ-ಪುತ್ರಾದಿಗಳನ್ನು ಕಳೆದುಕೊಂಡ ಧೃತರಾಷ್ಟ್ರನು, ಅಕೃತಪ್ರಜ್ಞೇ-ಮಂದಮತಿಯಾದ, ಮಯಿ-ನನ್ನಲ್ಲಿ, ಶಮಲಂ-ಅಪರಾಧವನ್ನು, ಆಶಂಸಮಾನಃ-ಊಹಿಸಿದವನಾಗಿ, ಸ್ವಭಾರ್ಯಯಾ-ತನ್ನಪತ್ನಿಯೊಡನೆ, ದುಃಖಿತಃ-ದುಃಖಗೊಂಡವನಾಗಿ, ಗಂಗಾಯಾಂ-ಗಂಗೆಯಲ್ಲಿ, ಅಪ್ಯಪತತ್-ಬಿದ್ದುಹೋದನೆ ! ಪಿತರಿ - ತಂದೆಯಾದ, ಪಾಂಡೌ-ಪಾಂಡುರಾಜನು, ಉಪರತೇ-ಮೃತನಾಗಲು, ಶಿಶೂನ್-ಹಸುಳೆಗಳಾದ, ಸುಹೃದಃ-ಮಕ್ಕಳಾದ, ನಸ್ಸರ್ವಾನ್-ನಮ್ಮೆಲ್ಲರನ್ನು, ಯೌ-ಯಾರು, ವ್ಯಸನತಃ - ಆಪತ್ತಿನಿಂದ, ಅರಕ್ಷತಾಂ - ಕಾಪಾಡಿದರೋ, ತೌಪಿತೃವ್ಯೌ - ಆ ನಮ್ಮ ಚಿಕ್ಕಪ್ಪ ದೊಡ್ಡಪ್ಪಂದಿರು, ಇತಃ - ಇಲ್ಲಿಂದ, ಕ್ವಗತೌ - ಎಲ್ಲಿಹೋದರು ? ಸೂತನು ಹೇಳುತ್ತಾನೆ:—ಸೂತಃ-ಸಂಜಯನು, ಆತ್ಮೇಶ್ವರಂ-ತನ್ನಸ್ವಾಮಿಯಾದ ಧೃತರಾಷ್ಟ್ರನನ್ನು, ಅಚಕ್ಷಾಣಃ-ಕಾಣದೆ, ಕೃಪಯಾ-ಕೃಪೆಯಿಂದಲೂ, ಸ್ನೇಹವೈಕ್ಲಬ್ಯಾತ್-ಸ್ನೇಹಪಾರವಶ್ಯದಿಂದಲೂ, ಅತಿಪೀಡಿತಃ-ಬಹಳಪೀಡಿತನಾಗಿ, ವಿರಹಕರ್ಶಿತಃ-ಅಗಲಿಕೆಯಿಂದ ಬಡವಾಗಿ, ನಪ್ರತ್ಯಾಹ-ಉತ್ತರವನ್ನು ಹೇಳಲಿಲ್ಲ, ಪಾಣಿನಾ-ಕೈಯಿಂದ, ಅಶ್ರೂಣಿ-ಕಣ್ಣೀರನ್ನು, ವಿಮೃಜ್ಯ - ಒರಸಿ, ಆತ್ಮನಾ - ಬುದ್ಧಿಯಿಂದ, ಆತ್ಮಾನಂ-ಮನಸ್ಸನ್ನು, ವಿಷ್ಟಭ್ಯ-ಗಟ್ಟಿಮಾಡಿಕೊಂಡು, ಭರ್ತುಃ-ಸ್ವಾಮಿಯ, ಪಾದೌ-ಪಾದಗಳನ್ನು, ಅನುಸ್ಮರನ್-ಸ್ಮರಿಸುತ್ತಾ, ಅಜಾತಶತ್ರುಂ-ಧರ್ಮರಾಜನನ್ನು ಕುರಿತು, ಪ್ರತ್ಯೂಚೇ-ಉತ್ತರಗೊಟ್ಟನು॥

ಗಳನ್ನು ಕಳೆದುಕೊಂಡು ದುಃಖಿತನಾಗಿರುವ ತಂದೆಯು, ಬುದ್ಧಿಹೀನನಾದ ನನ್ನಲ್ಲಿಯೇನಾದರೂ ಅಪರಾಧವನ್ನು ಶಂಕಿಸಿದವನಾಗಿ,ದುಃಖವಿಮ್ಮಡಿಯಾಗಲು, ಹೆಂಡತಿಯಿಂದೊಡಗೂಡಿ ಗಂಗೆಯಲ್ಲಿ ಬಿದ್ದುಹೋದನೆ ? ಅಕಟಾ ! ತಂದೆಯಾದ ಪಾಂಡುರಾಜನು ಲೋಕಾಂತರವನ್ನೈದಲು, ಅಪಾರವಾದ ವಿಪತ್ಸಾಗರದಲ್ಲಿ ಮುಳುಗಿದ್ದ ಹಸುಗಳೆಗಳಾದ ನಮ್ಮನ್ನು ಯಾವಮಹನೀಯರು ದುಃಖ ಸಮುದ್ರದಿಂದ ಕಡೆಹಾಯಿಸಿದರೋ, ಅಂತಹ ನಮ್ಮ ಪಿತೃವ್ಯರೆಲ್ಲಿ ಹೋದರು ? ಎಂದು ಬೆಸಗೊಂಡನು ॥ ೩೪ ॥

ಅಯ್ಯಾ ಶೌನಕಾದಿಗಳಿರಾ ! ಕೇಳಿರಿ. ಆಮಾತನ್ನು ಕೇಳಿದಕೂಡಲೆ ಕೃಪೆಯಿಂದಲೂ, ಸ್ನೇಹಾತಿಶಯದಿಂದಲೂ, ಪರವಶನಾಗಿ, ಸಂಜಯನು ತನ್ನಪ್ರಭುವಾದ ಧೃತರಾಷ್ಟ್ರನನ್ನು ಕಾಣದೆ ಆತನ ಅಗಲಿಕೆಯಿಂದ ಕೃಶನಾಗುತ್ತಾ, ಉತ್ತರವನ್ನು ಕೊಡುವುದಕ್ಕೇನೂ ತೋರದೆ ಅಳುತ್ತಾ, ಸ್ವಲ್ಪ ಹೊತ್ತಿನಮೇಲೆ ಕೈಗಳಿಂದ ಕಂಬನಿಗಳನ್ನೊರಸಿಕೊಂಡು, ಮನಸ್ಸನ್ನು ಗಟ್ಟಿಮಾಡಿ, ತನ್ನಸ್ವಾಮಿಯಪಾದಗಳನ್ನು ಸ್ಮರಿಸುತ್ತಾ,

ಸ್ಮರನ್ । ಅಹಂ ವ್ಯವಸಿತಂ ರಾಜನ್ ! ಪಿತ್ರೋರ್ವಃ ಕುರುನಂದನ ! ॥೩೭॥ ನವೇದ್ಮಿ ಸಾಧ್ವ್ಯಾ ಗಾಂಧಾರ್ಯಾ ಮುಷಿತೋಽಸ್ಮಿ ಮಹಾತ್ಮಭಿಃ। *ಅಥಾಜಗಾಮ ಭಗವಾನ್ ನಾರದ ಸ್ಸಹ ತುಂಬುರುಃ ॥ ೩೮ ॥ ಪ್ರತ್ಯುತ್ಥಾಯಾಭಿವಾದ್ಯಾಹ ಸಾನುಜೋ ‡ ಭ್ಯರ್ಚಯನ್ನಿವ । ಯುಧಿಷ್ಠಿರಃ ॥ ನಾಹಂ ವೇದ ಗತಿಂಪಿತ್ರೋ ರ್ಭಗವನ್ ! ಕ್ವಗತಃ ? ಪಿತಾ ॥ ೩೯ ॥ ಅಂಬಾವಾ

ರಾಜನ್ ಎಲೈರಾಜನೆ ! ಕುರುನಂದನ ಎಲೈ ಕುರುವಂಶೋದ್ಧಾರಕನೇ ! ವಃ-ನಿಮ್ಮ, ಪಿತ್ರೋಃ - ತಂದೆತಾಯಿಯರ, ವ್ಯವಸಿತಂ-ಪ್ರಯತ್ನವನ್ನೂ, ಸಾಧ್ವ್ಯಾ-ಪತಿವ್ರತೆಯಾದ, ಗಾಂಧಾರ್ಯಾಃ - ಗಾಂಧಾರಿಯ, ವ್ಯವಸಿತಂಚ-ಪ್ರಯತ್ನವನ್ನೂ, ಅಹಂ-ನಾನು, ನವೇದ್ಮಿ-ತಿಳಿಯಲಿಲ್ಲ. ಮಹಾತ್ಮಭಿಃ-ಆಮಹಾತ್ಮರಿಂದ, ಮುಷಿತೋಽಸ್ಮಿ-ವಂಚಿತನಾದೆನು ॥ ೩೭ ॥ ಅಥ-ಅನಂತರದಲ್ಲಿ, ಭಗವಾನ್-ಭಗವಂತನಾದ, ನಾರದಃ-ನಾರದನು, ಸಹತುಂಬುರುಃ - ತುಂಬುರುವಿಂದಕೂಡಿ, ಆಜಗಾಮ - ಬಂದನು, ಸಾನುಜಃ-ತಮ್ಮಂದಿರಿಂದಕೂಡಿದ ಧರ್ಮರಾಜನು, ಪ್ರತ್ಯುತ್ಥಾಯ - ಎದುರುಗೊಂಡು, ಅಭಿವಾದ್ಯ - ನಮಸ್ಕರಿಸಿ, ಅಭ್ಯರ್ಚಯನ್ನಿವ - ಪೂಜಿಸಿದಂತೆ ಭಾವಿಸಿ, ಆಹ - ಹೇಳುತ್ತಾನೆ, ಭಗವನ್ - ಪೂಜ್ಯನೆ ! ಅಹಂ - ನಾನು, ಪಿತ್ರೋಃ-ತಾಯಿತಂದೆಗಳ, ಗತಿಂ - ದಾರಿಯನ್ನು, ನವೇದ - ತಿಳಿಯಲಿಲ್ಲ, ಪಿತಾ-ತಂದೆಯು, ಕ್ವಗತಃ-ಎಲ್ಲಿಹೋದನೋ ! ಹತಪುತ್ರಾರ್ತಾ - ಪುತ್ರಮರಣದಿಂದದುಃಖಿತೆಯಾದ, ತಪಸ್ವಿನೀ-ದೀನಳಾದ, ಅಂಬಾವಾ ತಾಯಿಯೂ, ಕ್ವಗತಾ ಎಲ್ಲಿಹೋದಳೋ, ಅಪಾರೇ-ದಡವಿಲ್ಲದ, ವ್ಯಸನಾರ್ಣವೇ-ದುಃಖಸಮುದ್ರ

ಧರ್ಮರಾಜನನ್ನುಕುರಿತು, ಅಯ್ಯಾ ಕುರುನಂದನನಾದ ಧರ್ಮರಾಜನೆ ! ನಿನ್ನ ತಂದೆಗಳಾದ ಧೃತರಾಷ್ಟ್ರ ವಿದುರರೂ, ಮಹಾಪತಿವ್ರತೆಯಾದ ನಿಮ್ಮ ತಾಯಿ ಗಾಂಧಾರಿಯೂ, ಏನಾದರೆಂಬುದನ್ನು ನಾನರಿಯೆನು, ಮಹಾರಾಜನೆ! ಅವರು ನನ್ನನ್ನು ವಂಚಿಸಿ ಹೊರಟು ಹೋಗಿರುವರು,ಎಂದು ಹೇಳುವಸಮಯಕ್ಕೆ ಸರಿಯಾಗಿ ಮಹಾತ್ಮನಾದ ನಾರದಮುನಿಯು ತುಂಬುರುಮುನಿಯಿಂದೊಡಗೂಡಿ ಅಲ್ಲಿಗೆ ಬಂದನು ॥ ೩೮ ॥ ಆಗ ಧರ್ಮರಾಜನು ತಮ್ಮಂದಿರಿಂದೊಡಗೂಡಿ ಆಮಹರ್ಷಿಗಳನ್ನು ಎದುರುಗೊಂಡು ನಮಸ್ಕರಿಸಿ ಪೂಜೆಯನ್ನು ಮಾನಸಿಕಮಾಡಿ ಆತನನ್ನು ಕುರಿತು:—ಮಹಾತ್ಮನೆ ! ನಮ್ಮ ತಾಯಿತಂದೆಗಳು ಎಲ್ಲಿ ಹೋದರೋ ತಿಳಿಯದು, ಅಪಾರವಾದ ದುಃಖಸಮುದ್ರದಲ್ಲಿ ಮುಳುಗಿರುವ

---

* ಸ್ಮೃತಿ ॥ ಶೋಕಾಕ್ರಾಂತಃ ಕ್ರುಧಾವಿಷ್ಟಃ ಶ್ರದ್ಧಯಾ ರಹಿತಃ ಪುಮಾನ್ । ಗುರುದೇವದ್ವಿಜಾತೀನಾಂ ಪೂಜನಂನ ಸಮಾಚರೇತ್ । ದುಃಖಕಾಲದಲ್ಲಿಯೂ ಕೋಪಕಾಲದಲ್ಲಿಯೂ, ಶ್ರದ್ಧೆಯಿಲ್ಲದೆಯೂ, ದೇವಬ್ರಾಹ್ಮಣರನ್ನೂ ಗುರುಗಳನ್ನೂ ಪೂಜಿಸಕೂಡದು,

‡ ಪಶ್ಯನ್ನಂತರೇ ವಿಪ್ರ ! ನಾರದಃ ಪ್ರತ್ಯದೃಶ್ಯತ । ವೀಣಾಂತ್ರಿತಂತ್ರೀಂ ಧ್ವನಯನ್ ಭಗವಾನ್ ಸಹತುಂಬುರುಃ। ರಾಜ್ಞಾ ವರೋಪಯೋಕಾರ್ಥ್ಯ ಪ್ರತ್ಯುತ್ಥಾನಾಭಿವಂದಿತಂ । ವರಮಾಸನ ಆಸೀನಂ ಕೌರವೇಂದ್ರಮಭಾಷತ ॥ ಅಷ್ಟರಲ್ಲಿ ನಾರದನು ಬಂದು ಧರ್ಮರಾಜನಿಂದ ಮರ್ಯಾದೆಯನ್ನು ಪಡೆದು ಆತನಿಗೆ ಹೇಳಿದನು. (ವಿಜಯಧ್ವಜ ಪಾಠ)

ಹತಪುತ್ರಾನ್ ಕ್ವಗತಾಶ್ಚ ? ತಪಸ್ವಿನೀ । ದಿಷ್ಟ್ಯಾ ನೋ ಭಗವಾನ್
ದೃಷ್ಟೋ ಮಗ್ನಾನಾಂ ವ್ಯಸನಾರ್ಣವೇ ॥೩೮॥ ಕರ್ಣಧಾರ ಇವಾಪಾರೇ
ಪಾಹಿ ಮಾಂ ಪಾರದರ್ಶನಃ ॥ ಶ್ರೀಸೂತಃ ॥ ಅಥಾಬಭಾಷೇ ಭಗವಾನ್
ನಾರದೋ ಮುನಿಸತ್ತಮ ॥ ೪೦ ॥ ನಾರದಃ ॥ ಮಾ ಕಂ ಚ ನಶುಚೋ
ರಾಜನ್ ಯದೀಶ್ವರವಶಂ ಜಗತ್ । ಸ ಸಂಯುನಕ್ತಿ ಭೂತಾನಿ ಸಏವವಿ
ಯುನಕ್ತಿ ಚ ॥ ೪೧ ॥ ಲೋಕಾಃ ಸಪಾಲಾ ಯಸ್ಯೇಮೇ ವಹಂತಿ ಬಲಿ
ಮೀಶಿತುಃ। ಯಥಾ ಗಾವೋ ನಸಿ ಪ್ರೋತಾಸ್ತಂತ್ಯಾಂ ಬದ್ಧಾಶ್ಚ ದಾಮಭಿಃ॥

ದಲ್ಲಿ, ಮಗ್ನಾನಾಂ-ಮುಳುಗಿರುವ, ನಃ-ನಮಗೆ, ಭವಾನ್-ಪೂಜ್ಯನಾದನೀನು, ದಿಷ್ಟ್ಯಾ-ದೈವಯೋಗ ದಿಂದ ಕರ್ಣಧಾರಇವ- ನಾವಿಕನಂತೆ, ದೃಷ್ಟಃ- ಕಾಣಲ್ಪಟ್ಟೆಪಾರದರ್ಶನಃ - ದಡವನ್ನು ಕಾಣಿಸು ವವನಾಗಿ, ಮಾಂ - ನನ್ನನ್ನು, ಪಾಹಿ - ಸಲಹು. ಶ್ರೀಸೂತಃ ಸೂತನು ಹೇಳುತ್ತಾನೆ ॥೩೮-೪೦॥ ಹೇ ಮುನಿಸತ್ತಮ-ಎಲೈ ಋಷಿಶ್ರೇಷ್ಠನಾದ ಶೌನಕನೇ ! ಅಥ - ಆಬಳಿಕ, ಭಗವಾನ್ - ಪೂಜ್ಯನಾದ, ನಾರದಃ-ನಾರದಮುನಿಯು, ಆಬಭಾಷೇ - ಹೇಳಿದನು ॥ ೪೧ ॥ ಹೇರಾಜನ್-ಎಲೈ ರಾಜನೆ! ಯತ್-ಯಾವಕಾರಣದಿಂದ, ಜಗತ್-ಪ್ರಪಂಚವು, ಈಶ್ವರವಶಂ - ಈಶ್ವರನಿಗಧೀನವೋ, ತತ್ - ಆದುದರಿಂದ, ಸಏವ-ಆಈಶ್ವರನೇ, ಭೂತಾನಿ-ಭೂತಗಳನ್ನು, ಸಂಯುನಕ್ತಿ-ಸೇರಿಸುತ್ತಾನೆ, ವಿಯುನಕ್ತಿಚ-ಅಗಲಿಸು ತ್ತಾನೆ, ಆದಕಾರಣ, ಕಂಚನ-ಯಾರನ್ನು ಕುರಿತೂ, ಮಾಶುಚಃ - ದುಃಖಿಸಬೇಡ ॥ ೪೨ ॥ ನಸಿ-ಮೂಗಿನಲ್ಲಿ, ಪ್ರೋತಾಃ-ದಾರಪೋಣಿಸಲ್ಪಟ್ಟ, ತಂತ್ಯಾಂ-ಉದ್ದವಾದಹಗ್ಗದಲ್ಲಿ, ದಾಮಭಿಃ-ಹುರಿಗಳಿಂದ, ಬದ್ಧಾಶ್ಚ - ಕಟ್ಟಲ್ಪಟ್ಟ, ಗಾವೋಯಥಾ - ಎತ್ತುಗಳಂತೆ, ಸಪಾಲಾಃ - ಲೋಕಪಾಲರಿಂದೊಡಗೂಡಿದ, ಇಮೇಲೋಕಾಃ - ಈ ಲೋಕಗಳು, ಈಶಿತುಃ-ನಿಯಾಮಕನಾದ, ಯಸ್ಯ-ಯಾವ ಭಗವಂತನ, ಬಲಿಂ-ಆಜ್ಞೆಯನ್ನು, ವಹಂತಿ-ಅನುಸರಿಸುವುವೋ ॥ ೪೩ ॥ ತಥಾ-ಹಾಗೆಯೇ, ವಾಕ್ತಂತ್ಯಾಂ, ವಾಕ್-

ನಮ್ಮನ್ನು ಕಡೆಹಾಯಿಸುವುದಕ್ಕಾಗಿ, ದೈವಯೋಗದಿಂದ ನೀನು ನಾವಿಕನಂತೆ ಬಿಜ ಮಾಡಿಸಿದೆ. ದುಃಖಪೀಡಿತನಾದ ತಂದೆಯು, ಪುತ್ರಶೋಕದಿಂದ ಹಂಬಲಿಸುತ್ತಿರುವ ನಮ್ಮ ತಾಯಿಯೂ ಸಹ, ಎಲ್ಲಿಹೋದರೋ ಅದನ್ನು ತಿಳಿಸಿ, ಈ ಚಿಂತಾಸಮುದ್ರವನ್ನು ಕಡೆಗಾಣಿಸಿ ನನ್ನನ್ನು ಕಾಪಾಡಬೇಕು ಎಂದು ಬೇಡಿಕೊಳ್ಳಲು; ಸೂತನು ಹೇಳುತ್ತಾನೆ॥

ಅಯ್ಯಾ ಶೌನಕನೆ ! ಕೇಳು, ಅನಂತರದಲ್ಲಿ ನಾರದಮುನಿಯು ಆಮಾತನ್ನು ಕೇಳಿಧರ್ಮ ರಾಜನನ್ನುಕುರಿತು-ಎಲೈಧರ್ಮರಾಜನೆ ? ನೀನುಯಾರಿಗೂ ದುಃಖಿಸಬೇಡ. ಈಪ್ರಪಂಚವು ಈಶ್ವರಾಧೀನವಾಗಿರುವುದರಿಂದ ಆ ಈಶ್ವರನೇ ಪ್ರಾಣಿಗಳಸಂಯೋಗವಿಯೋಗಗಳನ್ನುಂ ಟು ಮಾಡುವನು ॥೪೨॥ ಮೂಗುದಾರವಿಡಲ್ಪಟ್ಟ ಹೋರಿಗಳಂತು ಹಗ್ಗಗಳಿಂದ ಬಿಗಿಯ ಲ್ಪಟ್ಟು ಯಜಮಾನನ ಹೊರೆಯನ್ನು ಹೊರುವುವೋ, ಅಂತೆಯೇ ಒಳ್ಳೆಯದು, ಕೆಟ್ಟ ದ್ದೆಂಬ ವಿಧಿನಿಷೇಧಗಳನ್ನು ಬೋಧಿಸುವ ವೇದವಾಕ್ಯಂಬಮೂಗುದಾರಕ್ಕೆಸಿಕ್ಕಿ, ವರ್ಣಾ ಶ್ರಮಧರ್ಮಗಳೆಂಬ ಹಗ್ಗಗಳಿಂದಬಿಗಿಯಲ್ಪಟ್ಟು, ಚಕ್ರವರ್ತಿಗಳಾದಿಯಾದ ಸಕಲಪುರು ಷರೂ ಭಗವದಾಜ್ಞೆಯನ್ನು ನಡೆಯಿಸುತ್ತಿರುವರು. ಮತ್ತು, ಆಟಗಾರನು, ತನ್ನಆಟಕ್ಕೆ

ವಾಕ್ತಂತ್ಯಾಂ ನಾಮಭಿ ರ್ಬದ್ಧಾ ವಹಂತಿ ಬಲಿ ಮೀಶತುಃ । ಯಥಾ ಕ್ರೀಡೋಪಸ್ಕರಾಣಾಂ ಸಂಯೋಗ ವಿಗಮಾ ವಿಹ ॥ ೪೪ ॥ ಇಚ್ಛಯಾ ಕ್ರೀಡಿತು ಸ್ಸ್ಯಾತಾಂ ತಥೈ ವೇಶೇ ಚ್ಛಯಾ ನೃಣಾಂ । ಯನ್ಮನ್ಯಸೇ ಧ್ರುವಂ ಲೋಕ ಮಧ್ರುವಂ ವಾ ನ ಚೋಭಯಂ ॥ ೪೫ ॥ ಸರ್ವಥಾಪಿ ನಶೋಚ್ಯಾಸ್ತೇ ಸ್ನೇಹಾದನ್ಯತ್ರ ಮೋಹಜಾತ್ । ತಸ್ಮಾ ಜ್ಜಹ್ಯಂಗ ವೈಕ್ಲಬ್ಯ ಮಜ್ಞಾನಕೃತ ಮಾತ್ಮನಃ ॥ ೪೬ ॥ ಕಥಂ ತ್ವನಾಥಾಃ ಕೃಪಣಾ ವರ್ತೇರಂ * ಬತ ಮಾದೃತೇ । ಕಾಲ ಕರ್ಮ ಗುಣಾಧೀನೋ

ವಿಧಿನಿಷೇಧ ಬೋಧಕವಾದ ವೇದವಾಕ್ಯೆಂಬ, ತಂತ್ಯಾಂ-ಹಗ್ಗದಲ್ಲಿ, ನಾಮಭಿಃ-ವರ್ಣಾಶ್ರಮಗಳೆಂಬ ಹೆಸರುಳ್ಳ ಹುರಿಗಳಿಂದ, ಬದ್ಧಾಃ-ಕಟ್ಟಲ್ಪಟ್ಟವರಾಗಿ, ಈಶಿತುಃ-ಭಗವಂತನ, ಬಲಿಂ-ಆಜ್ಞೆಯನ್ನು, ವಹಂತಿ ವಹಿಸುತ್ತಾರೆ, ಮತ್ತು, ಇಹ-ಈಲೋಕದಲ್ಲಿ, ಕ್ರೀಡಿತುಃ-ಆಟಗಾರನ, ಇಚ್ಛಯಾ-ಕೋರಿಕೆಯಂತೆ, ಕ್ರೀಡೋಪಸ್ಕರಾಣಾಂ-ಆಟದಸಾಮಾನುಗಳ, ಸಂಯೋಗವಿಗಮೌ-ಸಂಯೋಗ ವಿಯೋಗಗಳು, ಯಥಾ-ಹೇಗೋ, ಈಶೇಚ್ಛಯಾ-ಭಗವಂತನಇಚ್ಛೆಯಿಂದ, ನೃಣಾಂ - ಪುರುಷರ ಸಂಯೋಗ ವಿಯೋಗಗಳೂ, ತಥೈವ-ಹಾಗೆಯೇ, ಲೋಕಂ-ಪ್ರಪಂಚವನ್ನು, ಧ್ರುವಂ-ಸ್ಥಿರವೆಂದಾಗಲಿ, ಅಧ್ರುವಂ-ಅಸ್ಥಿರವೆಂದಾಗಲಿ, ಉಭಯಂನಚ - ಎರಡೂ ಅಲ್ಲವೆಂದಾಗಲಿ, ಯನ್ಮನ್ಯಸೇ-ತಿಳಿದರೆ ॥ ೪೫ ॥ ತಥಾಪಿ-ಆದರೂ, ಮೋಹಜಾತ್ - ಅಜ್ಞಾನದಿಂದುಂಟಾದ, ಸ್ನೇಹಾದನ್ಯತ್ರ-ಸ್ನೇಹಕ್ಕಿಂತಬೇರೆವಿಧದಲ್ಲಿ ತೇ-ಅವರು, ನಶೋಚ್ಯಾಃ-ದುಃಖಿಸಲ್ಪಡಲುಅರ್ಹರಲ್ಲ, ತಸ್ಮಾತ್-ಆದುದರಿಂದ, ಹೇಅಂಗ-ಎಲೈ ಧರ್ಮರಾಜನೆ ! ಕೃಪಣಾಃ-ದೀನರಾದ, ಧೃತರಾಷ್ಟ್ರಾದಿಗಳು, ಮಾದೃತೇ - ನನ್ನನ್ನುಳಿದು, ಕಥಂ-ಹೇಗೆ, ವರ್ತೇರನ್-ಜೀವಿಸುವರು? ಇತಿ - ಹೀಗೆಂಬ, ಅಜ್ಞಾನಕೃತಂ - ಅಜ್ಞಾನದಿಂದುಂಟಾದ, ಆತ್ಮನಃ-ನಿನ್ನ, ವೈಕ್ಲಬ್ಯಂ - ದುಃಖವನ್ನು, ಜಹಿ-ಬಿಡು ॥ ೪೬ ॥ ಕಾಲ...ಧೀನಃ, ಕಾಲ - ಕಾಲಕ್ಕೂ, ಕರ್ಮ-ಕರ್ಮಗಳಿಗೂ, ಗುಣ-ಸತ್ವಾದಿಗಳಿಗೂ ಅಧೀನಃ-ಒಳಗಾಗಿರುವ, ಪಾಂಚಭೌತಿಕಃ-ಪಂಚಭೂತಗಳಿಂದುಂಟಾಗಿರುವ, ಅಯಂ-ಈ ನಿನ್ನ

ಬೇಕಾದ ಚಂಡು, ಪಗಡೆ, ಮೊದಲಾದವುಗಳನ್ನು ತೆಗೆದುಕೊಳ್ಳುವುದಕ್ಕೂ, ಬಿಸಾಡುವುದಕ್ಕೂ ಎಂತು ಸ್ವತಂತ್ರನೋ, ಹಾಗೆಯೇ ಈಪ್ರಪಂಚದಲ್ಲಿ ಪ್ರಾಣಿಗಳನ್ನು ಜತೆಗೂಡಿಸುವುದಕ್ಕೂ, ಜತೆಯಾಗಿರುವವರನ್ನು ಅಗಲಿಸುವುದಕ್ಕೂ ಭಗವಂತನೇ ಸ್ವತಂತ್ರನಾಗಿರುವನು. ಇದೂಅಲ್ಲದೆ, ಪ್ರಪಂಚತತ್ವವನ್ನು ವಿಚಾರಿಸಿದಲ್ಲಿ ಶೋಕಿಸುವುದಕ್ಕೆ ಕಾರಣವೇಇಲ್ಲ, ಏಕೆಂದರೆ— ಈ ಜಗತ್ತನ್ನು ಜೀವರೂಪದಿಂದ ಸ್ಥಿರವೆಂದುತಿಳಿಯುವೆಯಾ? ಸ್ಥಿರವಸ್ತುವಿಗೆ ನಾಶವಿಲ್ಲ, ಶರೀರರೂಪದಿಂದ ಅಸ್ಥಿರವೆಂದುತಿಳಿಯುವೆಯಾ ? ಅಸ್ಥಿರವಸ್ತುವಿಗಳುವುದೇಕೆ? ಅನಿರ್ವಚನೀಯವಾದ ಶುದ್ಧ ಬ್ರಹ್ಮರೂಪದಿಂದ ಇವೆರಡೂ ಅಲ್ಲವೆಂದು ತಿಳಿಯುವೆಯಾ ? ಅಲ್ಲಿಗೂದುಃಖಿಸಬೇಕಾದುದಿಲ್ಲ. ಯಾವರೀತಿಯಲ್ಲಿ ತಿಳಿದುಕೊಂಡಿದ್ದರೂ, "ವೃದ್ಧರಾಗಿಯೂ, ಅನಾಥರಾಗಿಯೂ, ದೀನರಾಗಿಯೂ ಇರುವ ಧೃತರಾಷ್ಟ್ರ

* ಪಾ. ವನವಾಸಿನಃ-ಕಾಡಿನಲ್ಲಿರುವ.

ದೇಹೋಯಂ ಪಾಂಚಭೌತಿಕಃ ॥೪೭॥ ಕಥ ಮನ್ಯಾಂಸ್ತು ಗೋಪಾಯೇ
ತ್ಸರ್ಪಗ್ರಸ್ತೋ ಯಥಾಪರಂ । ಅಹಸ್ತಾನಿ ಸಹಸ್ತಾನಾ ಮಪದಾನಿ ಚತು
ಷ್ಪದಾಂ ॥೪೮॥ ಫಲ್ಗೂನಿ ತತ್ರ ಮಹತಾಂ ಜೀವೋ ಜೀವಸ್ಯ ಜೀವನಂ
* ತದಿದಂ ಭಗವಾನ್ ರಾಜನ್ನೇಕ ಆತ್ಮಾತ್ಮನಾಂ ಸ್ವದೃಕ್ ॥೪೯॥

ದೇಹವು, ಸರ್ಪಗ್ರಸ್ತಃ-ಹಾವಿನಿಂದ ನುಂಗಲ್ಪಟ್ಟವನು, ಅಪರಂಯಥಾ-ಇತರನನ್ನೋಪಾದಿಯಲ್ಲಿ,ಅನ್ಯಾನ್-ಇತರರನ್ನು, ಕಥಂ-ಹೇಗೆ, ಗೋಪಾಯೇತ್-ಸಲಹೀತು ! ಸಹಸ್ತಾನಾಂ-ಕೈಯುಳ್ಳ ಮನುಷ್ಯರಿಗೆ, ಅಹಸ್ತಾನಿ-ಕೈಗಳಿಲ್ಲದ ಮೃಗಪಕ್ಷಿಗಳು, ಚತುಷ್ಪದಾಂ-ಮೃಗಪಶ್ವಾದಿಗಳಿಗೆ, ಅಪದಾನಿ-ಕಾಲಿಲ್ಲದಹುಲ್ಲುಮೊದಲಾದವುಗಳೂ, ಮಹತಾಂ-ದೊಡ್ಡ ಪ್ರಾಣಿಗಳಿಗೆ, ಫಲ್ಗೂನಿ-ಕ್ಷುದ್ರಜಂತುಗಳು, ಹೀಗೆಯೇ, ಜೀವಸ್ಯ-ಜೀವಕ್ಕೆ, ಜೀವಃ - ಜೀವವೇ, ಜೀವನಂ - ಜೀವನವು, ಹೇರಾಜನ್ - ಎಲೈರಾಜನೆ ! ತತ್-ಆದುದರಿಂದ, ಇದಂ-ಈಜಗತ್ತು, ಸ್ವದೃಕ್-ಸ್ವಪ್ರಕಾಶನಾದ, ಭಗವಾನ್ - ಭಗವಂತನೇ, ಆತನು, ಏಕಃ-ಒಬ್ಬನೇ,

ದಿಗಳು, ನನ್ನನ್ನುಳಿದು ಕಾಡಿನಲ್ಲೆಂತು ಬದುಕುವರು ? " ಎಂದು ನೀನಿವರನ್ನು ಕುರಿತು ದುಃಖಿಸುವುದಕ್ಕೆ ಅಜ್ಞಾನಕೃತವಾದ ನಿನ್ನಸ್ನೇಹವೇ ಕಾರಣವಲ್ಲದೆ, ಮತ್ತಾವನಿಮಿತ್ತವೂ ಕಾಣುವದಿಲ್ಲ.ಆದುದರಿಂದ ಈಮೋಹ ನಿಮಿತ್ತಕವಾದ ದುಃಖವನ್ನು ಬಿಡು ॥೪೬॥ ಮತ್ತು ನಿನ್ನ ದೇಹವು ನಿತ್ಯವಾಗಿದ್ದರಲ್ಲವೆ ? ನೀನಿತರರನ್ನು ಕುರಿತು ಚಿಂತಿಸಬೇಕು. ಸತ್ವರಜ

ವಿ. ಸರ್ವಾಂತರ್ಯಾಮಿಯಾದ ನಾರಾಯಣಮೂರ್ತಿಯೇ ತನ್ನ ಸಂಕಲ್ಪ ರೂಪವಾದ ಮಾಯೆಯಿಂದ ಹಲವುಬಗೆಯಾಗಿ ಕಾಣುವನು. ಇಲ್ಲಿ "ಆತ್ಮನಾಂ" ಎಂಬಬಹುವಚನದಿಂದ ಜೀವರಲ್ಲಿ ಪರಸ್ಪರಭೇದವು, "ಆತ್ಮನಾಂಆತ್ಮ"—ಜೀವರಲ್ಲಿಅಂತರ್ಯಾಮಿ, ಎಂಬುದರಿಂದ ಜೀವೇಶ್ವರರ ಭೇದವು, "ಸ್ವದೃಕ್" ಎಂಬುದರಿಂದ ಸಗುಣತ್ವವು, "ಅಂತರೋನಂತರಃ"—ಪ್ರಪಂಚದ ಒಳಗೂ ಹೊರಗೂ ಯಿದಾನೆ, ಎಂಬುದರಿಂದ ಪ್ರಪಂಚ ಸತ್ಯತ್ವವು, "ತದಿದಂ" ಆಭಗವಂತನೇ ಈ ಪ್ರಪಂಚವು ಎಂಬುದರಿಂದ ಜಗತ್ತು ಭಗವಂತನಿಗೆ ಶರೀರವು, ಎಂಬಂಶಗಳು, ಸ್ಪಷ್ಟವಾಗುವುದರಿಂದ ಈಶ್ಲೋಕದಲ್ಲಿ ವಿಶಿಷ್ಟಾದ್ವೈತತತ್ವವು ವಿಶದವಾಗಿ ವಿವರಿಸಿದಂತಾಯಿತು. (1) ಶ್ರು. ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ. (2) ಸೋಕಾಮಯತ ಬಹುಸ್ಯಾಂ ಪ್ರಜಾಯೇಯೇತಿ.

ವಿ. ಹರಿಪರಮಾತ್ಮನಿಗಿಂತಲೂ ಬೇರೆಯಾದುದೆಲ್ಲವೂ ಅನಿತ್ಯವೂ ಅಸ್ವತಂತ್ರವೂ ಆಗಿರುವುದರಿಂದ ಆಪರಮಾತ್ಮನೇ ಜೀವರಿಗೆ ಅನುಗ್ರಹಾದಿ ಕರ್ತನೂ, ಜಗದಂತರ್ಯಾಮಿಯೂ, ಗುಣಿಗುಣ ಭೇದರಹಿತನೂ ಆಗಿರುವನು, ನೀನೂ, ದೇವೋತ್ತಮನಾದಯಮನ ಅವತಾರವಾದುದರಿಂದ ವಿವೇಕಿಯಾಗಿರುವೆ. ಆದಕಾರಣ ಅನೇಕಾವತಾರಗಳಲ್ಲಿ ಅಂತರ್ಯಾಮಿಯಾಗಿರುವುದೇ ಮೊದಲಾಗಿ ಹಲವು ಬಗೆಯಿಂದ ತೋರುತ್ತಿರುವ ಆಪರಮಾತ್ಮನಮಹಿಮೆಯನ್ನು ನೋಡುತ್ತಾ ಚಿಂತೆಯನ್ನುಳಿದು ಆತನನ್ನು ಭಜಿಸೆಂದಭಿಪ್ರಾಯವು.

ಭೋಕ್ತೃವೂ, ಭೋಗ್ಯವೂ ಸಹ ಆದ ಭಗವಂತನೇ ಪ್ರಪಂಚವಾಗಿರುವನು. ಹೀಗಾಗಿರುವುದಕ್ಕೆ ಆತನಮಾಯೆಯೇ ಕಾರಣವೆಂದು ಕೆಲವರು ಹೇಳುವರು. ಆದರೆ ಒಂದೇವಸ್ತುವು ಭೋಕ್ತೃವೂ ಭೋಗ್ಯವೂಸಹ ಆಗಲಾರದು. ಮತ್ತು ಮಾಯೆಯೆಂಬುದು ಕೂಡ ಪ್ರಮಾಣಸಿದ್ಧವಲ್ಲ ಆದುದರಿಂದ ಇದು ಆದರಿಸತಕ್ಕದಲ್ಲ.

ಅಂತರೋಽನಂತರೋಽಭಾತಿ * ಪಶ್ಯತ್ವಂ ಮಾಯಯೋರುಧಾ । ಸೋಽಯ
ಮದ್ಯ ಮಹಾರಾಜ ಭಗವಾನ್ ಭೂತ ಭಾವನಃ ॥ ೫೦ ॥ ಕಾಲರೂಪೋ
ಽವತೀರ್ಣೋಽಸ್ಯಾ ಮಭಾವಾಯ ಸುರದ್ವಿಷಾಂ । ನಿಷ್ಪಾದಿತಂ ದೇವಕೃತ್ಯ
ಮವಶೇಷಂ ಪ್ರತೀಕ್ಷತೇ ॥ ೫೧ ॥ ತಾವದ್ಯೂಯ ಮವೇಕ್ಷಧ್ವಂ ಭವೇ
ದ್ಯಾವ ದಿಹೇಶ್ವರಃ । ಧೃತರಾಷ್ಟ್ರಸ್ಸಹ ಭ್ರಾತ್ರಾ ಗಾಂಧಾರ್ಯಾಚ

ಆತ್ಮನಾಂ - ಜೀವರಿಗೆ, ಆತ್ಮಾ-ಆತ್ಮರೂಪನಾಗಿರುವನು ॥ ೪೭-೪೯ ॥ ಆ ಭಗವಂತನು ಅಂತರಃ-ಒಳಗೆ ಭೋಕ್ತೃರೂಪನಾಗಿಯೂ, ಅನಂತರಶ್ಚ - ಹೊರಗೆ - ಭೋಗ್ಯರೂಪನಾಗಿಯೂ, ಮಾಯಯಾ ಮಾಯೆಯಿಂದ, ಉರುಧಾ-ಅನೇಕಪ್ರಕಾರವಾಗಿ, ಭಾತಿ-ಮೆರೆಯುತ್ತಾನೆ, ಪಶ್ಯ-ನೋಡು, ಮಹಾರಾಜ-ಎಲೈ ಧರ್ಮರಾಜನೆ ! ಭೂತಭಾವನಃ-ಲೋಕರಕ್ಷಕನಾದ, ಭಗವಾನ್-ಭಗವಂತನಾದ, ಸೋಽಯಂ - ಆ ಈಕೃಷ್ಣನು, ಅಸ್ಯಾಂ - ಈದ್ವಾರಕೆಯಲ್ಲಿ, ಸುರದ್ವಿಷಾಂ - ರಾಕ್ಷಸರ, ಅಭಾವಾಯ - ನಾಶಕ್ಕಾಗಿ, ಕಾಲರೂಪಃ-ಕಾಲಸ್ವರೂಪನಾಗಿ, ಅವತೀರ್ಣಃ-ಅವತರಿಸಿದನು, ದೇವಕೃತ್ಯಂ-ದೇವತೆಗಳ ಕಾರ್ಯವು, ನಿಷ್ಪಾದಿತಂ-ನೆರವೇರಿಸಲ್ಪಟ್ಟಿತು, ಅವಶೇಷಂ-ಉಳಿದಿರುವುದನ್ನು, ಪ್ರತೀಕ್ಷತೇ - ನಿರೀಕ್ಷಿಸುತ್ತಿರುವನು ॥

ಈಶ್ವರಃ-ಭಗವಂತನು, ಯಾವತ್-ಎಷ್ಟರವರೆಗೆ, ಇಹ-ಇಲ್ಲಿ, ಭವೇತ್-ಇರುವನೋ, ತಾವತ್-ಅಷ್ಟರವರೆಗೂ, ಯೂಯಂ-ನೀವು, ಅವೇಕ್ಷಧ್ವಂ-ನೋಡಿರಿ, ಯತ್ರ - ಎಲ್ಲಿ, ಸ್ವರ್ಧುನೀ - ದೇವಗಂಗೆಯು, ಸಪ್ತಾನಾಂ-ಸಪ್ತರುಷಿಗಳ, ಪ್ರೀತಯೆ-ಪ್ರೀತಿಗಾಗಿ, ಸಪ್ತಭಿಃ-ಏಳಾದ, ಸ್ರೋತೋಭಿಃ-ಪ್ರವಾಹಗಳಿಂದ, (ತನ್ನನ್ನು) ನಾನಾ-ಬೇರೆಬೇರೆಯಾದ, ಸಪ್ತಧಾ-ಏಳುಭಾಗಗಳಾಗಿ, ವ್ಯಧಾತ್-ಮಾಡಿತೋ

ಸ್ತಮಸ್ಸುಗಳೆಂಬ ಗುಣಗಳೇ ಕಾಲದಿಂದ ಕ್ಷೋಭೆಯನ್ನೊಂದಿ ಕರ್ಮವಶದಿಂದ ಶರೀರವೆನಿಸುವದು. ಅವುಮರಳಿಬೇರೆಯಾಗಲು ಶರೀರವು ನಾಶವಾಗುವುದು, ಹೀಗೆ ಪಾಂಚಭೌತಿಕವಾದ ನಿನ್ನ ಶರೀರವೇಕಾಲ ಕರ್ಮ ಗುಣಗಳಿಗೆ ಅಧೀನರಾಗಿರುವಲ್ಲಿ, ಅಜಗರದಿಂದ ನುಂಗಲ್ಪಡುತ್ತಿರುವ ಪುರುಷರಲ್ಲಿ ಒಬ್ಬನು ಮತ್ತೊಬ್ಬನನ್ನು ಕಾಪಾಡಲೆಳಸುವಂತೆ ನೀನು ಧೃತರಾಷ್ಟ್ರಾದಿಗಳನ್ನು ಸಲಹಬೇಕೆಂದು ಚಿಂತಿಸಬಹುದೆ ? ಅಲ್ಲದೆ ಲೋಕದಲ್ಲಿ ಪ್ರತಿಪ್ರಾಣಿಗೂ ಈಶ್ವರನಿರ್ಮಿತವಾದ ಜೀವನವೆಂಬುದು ಎಲ್ಲೆಡೆಗಳಲ್ಲಿಯೂ ಸುಲಭವಾಗಿರುವುದು, ಕೈಗಳುಳ್ಳ ಮನುಷ್ಯರಿಗೆ ಕೈಗಳಿಲ್ಲದ ಮೃಗಪಶ್ವಾದಿಗಳು ಆಹಾರವು, ಕಾಲುಳ್ಳ ಮೃಗಪಶ್ವಾದಿಗಳಿಗೆ, ಕಾಲುಗಳಿಲ್ಲದ ತೃಣಾದಿಗಳಾಹಾರವು, ಇವುಗಳಲ್ಲಿಯೂ ದೊಡ್ಡದೊಡ್ಡಪ್ರಾಣಿಗಳಿಗೆ ಚಿಕ್ಕಚಿಕ್ಕಪ್ರಾಣಿಗಳಾಹಾರವು, ಹೀಗೆಸಕಲ ಪ್ರಾಣಿಗಳೂ ಪರಸ್ಪರವಾಗಿ ಜೀವನರೂಪಗಳಾಗಿರುವುದರಿಂದ, ಎಲ್ಲರೂ ಮೃತ್ಯುವಿಗೊಳಪಟ್ಟವರೆಂದೇ ತಿಳಿ. ಅಯ್ಯಾಮಹಾರಾಜನೆ ! ಈಹಲವುಬಗೆಯಪ್ರಾಣಿಗಳರೂಪವಾದ ಪ್ರಪಂಚವೆಲ್ಲವೂ ದೃಗ್ರೂಪನಾದ ಪರಮಾತ್ಮನೇ ಹೊರತು ಬೇರೆಯಲ್ಲ. ಆಭಗವಂತನು ಒಬ್ಬನೇಅಲ್ಲದೆ ಅನೇಕರಲ್ಲ. ಆತನೇ ಸಕಲರಿಗೂ ಆತ್ಮನಾಗಿ, ಮಾಯೆಯಿಂದ ನಾನಾರೂಪವಾಗಿ ಕಾಣು

* ವಿ. ಪಾ. ಪಶ್ಯಂ ಸ್ತ್ವಂ ಮಾಯಯೋರುತಾಂ. ಮಾಯಾ-ಸಂಕಲ್ಪ,

ಸ್ವಭಾರ್ಯಯಾ ॥೫೨॥ * ದಕ್ಷಿಣೇನ ಹಿಮವತಃ ಋಷೀಣಾ ಮಾಶ್ರಮಂ
ಗತಃ । ಸ್ರೋತೋಭಿ ಸ್ಸಪ್ತಭಿ ರ್ಯತ್ರ ಸ್ವರ್ಧುನೀ ಸಪ್ತಧಾ ವ್ಯಧಾತ್॥
ಸಪ್ತಾನಾಂ ಪ್ರೀತಯೇ ನಾನಾ ಸಪ್ತಸ್ರೋತಃ ಪ್ರಚಕ್ಷತೇ । ಸ್ನಾತ್ವಾನು
ಸವನಂ ತಸ್ಮಿನ್ ಹುತ್ವಾ ಚಾಗ್ನೀನ್ ಯಥಾವಿಧಿ ॥ ೫೪ ॥ ಅಬ್ಭಕ್ಷ ಉಪ
ಶಾಂತಾತ್ಮಾ ಸ ಆಸ್ತೇ ವಿಗತೈಷಣಃ । ಜಿತಾಸನೋ ಜಿತಶ್ವಾಸಃ ಪ್ರತ್ಯಾ

(ಜನರು ಯಾವತೀರ್ಥವನ್ನು) ಸಪ್ತಸ್ರೋತಃ-ಸಪ್ತಸ್ರೋತವೆಂದು, ಪ್ರಚಕ್ಷತೇ-ಹೇಳುತ್ತಾರೋ, ಹಿಮವತಃ-ಹಿಮಾಲಯದ, ದಕ್ಷಿಣೇನ-ದಕ್ಷಿಣದಿಕ್ಕಿನಲ್ಲಿರುವ, ಋಷೀಣಾಂ-ರುಷಿಗಳ, ಆಶ್ರಮಂ-ಆಶ್ರಮವನ್ನು ಕುರಿತು, ಧೃತರಾಷ್ಟ್ರಃ-ಧೃತರಾಷ್ಟ್ರನು. ಭ್ರಾತ್ರಾ-ತಮ್ಮನಾದ ವಿದುರನಿಂದಲೂ, ಸ್ವಭಾರ್ಯಯಾ-ತನ್ನ ಹೆಂಡತಿಯಾದ, ಗಾಂಧಾರ್ಯಾಚಸಹ - ಗಾಂಧಾರಿಯಿಂದಲೂಕೂಡಿ, ಗತಃ - ಹೊರಟುಹೋದನು, ತತ್ರ-ಅಲ್ಲಿ, ಅನುಸವನಂ - ಕಾಲಕಾಲದಲ್ಲಿಯೂ, ಸ್ನಾತ್ವಾ-ಸ್ನಾನಮಾಡಿ, ಯಥಾವಿಧಿ-ಕ್ರಮವಾಗಿ, ಅಗ್ನೀನ್-ಅಗ್ನಿಗಳನ್ನು, ಹುತ್ವಾಚ-ಹೋಮವನ್ನುಮಾಡಿ, ಅಬ್ಭಕ್ಷಃ - ಜಲಾಹರವುಳ್ಳವನಾಗಿ, ವಿಗತೈಷಣಃ-ದಾರಾಪುತ್ರವಿತ್ತಗಳೆಂಬ ಏಷಣತ್ರಯವನ್ನುಳಿದು, ಉಪಶಾಂತಾತ್ಮಾ-ಮನಸ್ಸನ್ನು ಸಮಾಧಾನಗೊಳಿಸಿಕೊಂಡು, ಜಿತಾಸನಃ - ಆಸನ ಸಿದ್ಧಿಯನ್ನುಪಡೆದು, ಜಿತಶ್ವಾಸಃ ಪ್ರಾಣವಾಯುಗಳನ್ನು ನಿಗ್ರಹಿಸಿ,ಪ್ರತ್ಯಾ...ಯಃ-ಪ್ರತ್ಯಾಹೃತ-ಹಿಂದಿರುಗಿಸಲ್ಪಟ್ಟ, ಷಟ್-ಆರು, ಇಂದ್ರಿಯಃ-ಇಂದ್ರಿಯಗಳುಳ್ಳವ

ವನು. ಒಳಗಡೆಯಲ್ಲಿ ಭೋಕ್ತೃವಾಗಿಯೂ ಹೊರಗೆ ಭೋಗ್ಯರೂಪನಾಗಿಯೂ ಇರುವನು. ಲೋಕರಕ್ಷಕನಾದ ಆ ಭಗವಂತನೇ ಈಗ ಕಾಲಸ್ವರೂಪನಾಗಿ, ದೇವಶತ್ರುಗಳಾದ ರಾಕ್ಷಸರನ್ನು ನಾಶಗೊಳಿಸುವುದಕ್ಕಾಗಿ, ಈ ದ್ವಾರಕಾಪಟ್ಟಣದಲ್ಲಿ ಅವತರಿಸಿ, ದೇವತೆಗಳಕಾರ್ಯವನ್ನುಪೂರಯಿಸಿದನು, ಇನ್ನೂ ಉಳಿದಿರುವ ಕಾರ್ಯವನ್ನು ನೆರವೇರಿಸುವುದಕ್ಕಾಗಿ ನಿರೀಕ್ಷಿಸುತ್ತಿರುವನು.

ಆ ಭಗವಂತನಾದ ಕೃಷ್ಣಮೂರ್ತಿಯು ಈಪ್ರಪಂಚದಲ್ಲಿ ಎಲ್ಲಿಯವರೆಗೆ ಇರುವನೋ ಅಲ್ಲಿಯವರೆಗೂನೀವು ನಿರೀಕ್ಷಿಸಿರಿ. ಇನ್ನು ಧೃತರಾಷ್ಟ್ರಾದಿಗಳ ವೃತ್ತಾಂತವನ್ನು ಹೇಳುತ್ತೇನೆಕೇಳು. ಪರಮಪಾವನೆಯಾದ ದೇವಗಂಗೆಯು ಸಪ್ತಋಷಿಗಳ ಪ್ರೀತಿಗಾಗಿ, ಯಾವಕ್ಷೇತ್ರದಲ್ಲಿ ಏಳುಭಾಗವಾಗಿ ತನ್ನನ್ನುವಿಭಾಗಿಸಿಕೊಂಡಳೋ, ಯಾವತೀರ್ಥವನ್ನು ಜನರು ಪಾವನವಾದ "ಸಪ್ತಸ್ರೋತ" ವೆಂದು ಕೊಂಡಾಡುತ್ತಿರುವರೋ, ಅಂತಹದೇವತೀರ್ಥದಿಂದಪಾವನವೆನಿಸಿ, ಹಿಮಾಲಯದದಕ್ಷಿಣಭಾಗದಲ್ಲಿರುವ ಋಷ್ಯಾಶ್ರಮವನ್ನು ಕುರಿತು, ನಿಮ್ಮ ತಂದೆಯಾದ ಧೃತರಾಷ್ಟ್ರನು, ತಮ್ಮನಾದ ವಿದುರನಿಂದಲೂ, ಹೆಂಡತಿಯಾದ ಗಾಂಧಾರಿಯಿಂದಲೂ ಒಡಗೂಡಿ ಹೊರಟು ಹೋದನು ॥ ೫೩ ॥

ಆತನು ಕಾಲತ್ರಯದಲ್ಲಿಯೂ ಗಂಗಾ ನದಿಯಲ್ಲಿ ಸ್ನಾನವನ್ನು ಮಾಡಿ, ಯಥಾವಿಧಿಯಾಗಿ ಅಗ್ನಿ ಹೋತ್ರಗಳನ್ನು ನಡೆಯಿಸುತ್ತಾ, ಜಲಪಾನಮಾತ್ರದಿಂದ ತೃಪ್ತನಾಗಿ, ದಾರಾ ಪುತ್ರ ವಿತ್ತಾದಿಗಳಲ್ಲಿ ಆಸೆಯನ್ನು ತೊರೆದು, ಉಪಶಾಂತನಾಗಿ, ಆಸನಶುದ್ಧಿಯನ್ನು ಪಡೆದು, ಶ್ವಾಸಧಾರಣೆಯನ್ನುಮಾಡುತ್ತಾ, ಮನಸ್ಸು ಮೊದಲಾದ ಷಡಿಂದ್ರಿಯಗ

ಹೃತಷಡಿಂದ್ರಿಯಃ ॥ ೫೫ ॥ ಹರಿಭಾವನಯಾ ಧ್ವಸ್ತರಜಸ್ಸತ್ವ ತಮೋ ಮಲಃ । * ವಿಜ್ಞಾನಾತ್ಮನಿ ಸಂಯೋಜ್ಯ † ಕ್ಷೇತ್ರಜ್ಞೇ ಪ್ರವಿಲಾಪ್ಯತಂ ॥ ಬ್ರಹ್ಮಣ್ಯಾತ್ಮಾನ ಮಾಧಾರೇ ‡ ಘಟಾಂಬರ ಮಿವಾಂಬರೇ । ಧ್ವಸ್ತ ಮಾಯಾ ಗುಣೋದರ್ಕೋ ನಿರುದ್ಧ ಕರಣಾಶಯಃ ॥ ೫೬ ॥ ನಿವರ್ತಿತಾ

ನಾಗಿ, ಹರಿಭಾವನಯಾ - ಪರಮಾತ್ಮದೃಷ್ಟಿಯಿಂದ, ಧ್ವಸ್ತ...ಮಲಃ, ಧ್ವಸ್ತ - ಧ್ವಂಸಮಾಡಲ್ಪಟ್ಟ, ರಜಸ್ಸು, ಸತ್ವ, ತಮಸ್ಸು ಇವುಗಳ; ಮಲಃ - ಕಲ್ಮಷವುಳ್ಳವನೆನಿಸಿ, (ಮನಸ್ಸನ್ನು) ವಿಜ್ಞಾನಾತ್ಮನಿ-ಬುದ್ಧಿಯಲ್ಲಿ, ಸಂಯೋಜ್ಯ - ಸೇರಿಸಿ, ತಂ - ಆ ಬುದ್ಧಿಯನ್ನು, ಕ್ಷೇತ್ರಜ್ಞೇ - ಜೀವನಲ್ಲಿ, ಪ್ರವಿಲಾಪ್ಯ, ಲಯಗೊಳಿಸಿ, ಆತ್ಮಾನಂ - ಆ ದ್ರಷ್ಟೃವಾದ ಜೀವನನ್ನು, ಆಧಾರೆ - ಆಶ್ರಯನಾದ, ಬ್ರಹ್ಮಣಿ-ಪರಮಾತ್ಮನಲ್ಲಿ, ಅಂಬರೇ-ಮಹಾಕಾಶದಲ್ಲಿ, ಘಟಾಂಬರಮಿವ - ಘಟಾಕಾಶದಂತೆ, ಪ್ರವಿಲಾಪ್ಯ - ಲಯಗೊಳಿಸಿ, ಧ್ವಸ್ತ...ರ್ಕಃ, ಧ್ವಸ್ತ-ನಾಶಗೊಳಿಸಲ್ಪಟ್ಟ, ಮಾಯಾಗುಣ-ಸತ್ವರಜಸ್ತಮಸ್ಸುಗಳ, ಉದರ್ಕಃ-ಮುಂದಣಫಲವುಳ್ಳವನಾಗಿ, ನಿರುದ್ಧ...ಯಃ, ನಿರುದ್ಧ-ತಡೆಯಲ್ಪಟ್ಟ, ಕರಣ-ಇಂದ್ರಿಯಗಳು, ಆಶಯಃ-ಮನಸ್ಸು ಉಳ್ಳವನಾಗಿ, ನಿವರ್ತಿ...ರಃ, ನಿವರ್ತಿತ-ಬಿಡಲ್ಪಟ್ಟ, ಅಖಿಲಾಹಾರಃ-ಸಕಲಾಹಾರವುಳ್ಳವನಾಗಿ, ಅಧುನಾ-ಈಗ, ಸ್ಥಾಣುರಿವ - ಮೋಟುಮರದಂತೆ, ಆಸ್ತೇ - ಇದ್ದಾನೆ, ಸನ್ಯಸ್ತಾ...ಣಃ, ಸನ್ಯಸ್ತ-ಬಿಡಲ್ಪಟ್ಟ, ಅಖಿಲಕರ್ಮಣಃ-ಸಕಲವ್ಯಾಪಾರಗಳುಳ್ಳ, ತಸ್ಯ-ಅವನಿಗೆ, ಅಂತರಾಯಃ - ವಿಘ್ನವು, ಮೈವಾ

ಳನ್ನೂ ವಿಷಯಗಳಲ್ಲಿ ಬಿಡದಂತೆ ನಿಗ್ರಹಿಸಿ, ಭಗವದ್ಧ್ಯಾನದಿಂದ ಸತ್ವರಜಸ್ತಮಸ್ಸುಗಳೆಂಬ ಗುಣಗಳನ್ನು ನಿರಾಕರಿಸಿ ಪರಿಶುದ್ಧವಾದ ಮನಸ್ಸನ್ನು, ಅಹಂಕಾರಕ್ಕೊಳಗಾಗಿರುವ ಸ್ಥೂಲದೇಹದಿಂದಗಲಿಸಿ ಸತ್ವಸ್ವರೂಪವಾದ ಬುದ್ಧಿಯಲ್ಲಿ ಸೇರಿಸಿ, ಆ ಬುದ್ಧಿಯನ್ನು ದೃಶ್ಯವಾದ ವಿಷಯ ಪ್ರಪಂಚದಿಂದ ವಿಂಗಡಿಸಿ, ದ್ರಷ್ಟೃವಾದ ಜೀವನಲ್ಲಿ ಲಯಗೊಳಿಸಿ, ಆ ಜೀವನನ್ನು ದ್ರಷ್ಟ್ರಂಶದಿಂದ ವಿಂಗಡಿಸಿ, ಪರಿಚ್ಛಿನ್ನವಾದ ಘಟಾಕಾಶವನ್ನು ಘಟೋಪಾಧಿಯಿಂದಗಲಿಸಿ, ಅಪರಿಚ್ಛಿನ್ನವಾದ ಮಹಾಕಾಶದಲ್ಲಿ ಲಯಗೊಳಿಸುವಂತೆ, ಆಶ್ರಯರೂಪನಾದ ಪರಮಾತ್ಮನಲ್ಲಿ ಲಯಗೊಳಿಸಿ, ಒಳಗಣ ಗುಣಕ್ಷೋಭೆಯಿಂದಾಗಲಿ, ಹೊರಗಣ ಇಂದ್ರಿಯಕ್ಷೋಭೆಯಿಂದಾಗಲಿ, ಮರಳಿ ಏಳದಂತೆ, ಮಾಯಾಗುಣಗಳಿಂದ ಸತ್ವ

* ವಿ. ವಿಜ್ಞಾನ ತತ್ವಕ್ಕೆ (ಬುದ್ಧಿಗೆ) ಅಭಿಮಾನಿಯಾದ ಬ್ರಹ್ಮದೇವರಲ್ಲಿ,

† ವಿ. ಜೀವದಲ್ಲಿ ಅಂತರ್ಯಾಮಿಯಾದ ಪರಮಾತ್ಮದಲ್ಲಿ,

‡ (1) ಟಿ. ಇಲ್ಲಿ ಆಕಾಶದೃಷ್ಟಾಂತದಿಂದ ಜೀವಬ್ರಹ್ಮರಿಗೈಕ್ಯವೆಂದು ಭ್ರಮಿಸಕೂಡದು. ಘಟ ಮೊದಲಾದ ಉಪಾಧಿಗಳು ನಷ್ಟವಾಗುವದರಿಂದ ಅವುಗಳಲ್ಲಿದ್ದ ಆಕಾಶವು ಮಹಾಕಾಶದೊಡನೆಸೇರಿ ಹೋದರೂ, ಅವುಗಳ ಸ್ವರೂಪಭೇದವೂ ಪ್ರದೇಶಭೇದವೂ ಸಹ ಇರಲೇಇರುವುದು. ಆದರೆ ಉಪಾಧಿನಾಶವಾದ ಮೇಲೆ ಈ ಎರಡಾಕಾಶಗಳೂ ಸಮಾನಾಕಾರಗಳಾಗುವುವು. ಇದರಂತೆಯೇ ಜೀವನೂ ತನ್ನ ಉಪಾಧಿಯನ್ನು ಕಳೆಕೊಂಡು ಪರಮಾತ್ಮನೊಡನೆ ಸಮಾನಾಕಾರನಾಗುವನೇ ಹೊರತು, ಸ್ವರೂಪಭೇದವನ್ನು ಕಳೆದುಕೊಳ್ಳುವುದಿಲ್ಲ. ಆದುದರಿಂದ ಧೃತರಾಷ್ಟ್ರನು ಜೀವನನ್ನು ಪರಮಾತ್ಮನಲ್ಲಿ ಲಯಗೊಳಿಸಿ ಉಪಾಧಿ ವಿಲಯದಿಂದ ಬ್ರಹ್ಮಸಮಾನಾಕಾರತೆಯನ್ನು ಧ್ಯಾನಿಸಿದನೆಂದು ಭಾವವು.

ಖಿಲಾಹಾರ ಆಸ್ತೆ ಸ್ಥಾಣುರಿವಾಧುನಾ । ತಸ್ಯಾಂತರಾಯೋ ಮೈವಾ ಭೂ
ಸ್ಸನ್ಯಸ್ತಾಖಿಲ ಕರ್ಮಣಃ ॥ ೫೮ ॥ ಸವಾ ಅದ್ಯತನಾ ದ್ರಾಜನ್ ಪರತಃ
ಪಂಚಮೇಽಹನಿ । ಕಳೇಬರಂ ಹಾಸ್ಯತಿ ಸ್ವಂ ತಚ್ಚ ಭಸ್ಮೀ ಭವಿಷ್ಯತಿ॥೫೯
ದಹ್ಯಮಾನೇಽಗ್ನಿಭಿ ರ್ದೇಹೇ ಪತ್ಯುಃ ಪತ್ನೀ ಸಹೋಟಜೇ । ಬಹಿ ಸ್ಸ್ಥಿತಾ
ಪತಿಂ ಸಾಧ್ವಿ ತಮಗ್ನಿ ಮನು ವೇಕ್ಷ್ಯತಿ ॥೬೦॥ ವಿದುರಸ್ತು ತದಾಶ್ಚರ್ಯಂ

ಭೂಃ-ಆಗಬೇಡ, ॥ ೫೮ ॥ ರಾಜನ್-ಎಲೈರಾಜನೆ ! ಸವಾ - ಅವನು, ಅದ್ಯತನಾತ್ - ಈದಿನದಿಂದ, ಪರತಃ-ಮುಂದೆ, ಪಂಚಮೇ-ಐದನೆಯದಾದ, ಅಹನಿ-ದಿನದಲ್ಲಿ, ಸ್ವಂ-ತನ್ನ, ಕಳೇಬರಂ-ಶರೀರವನ್ನು, ಹಾಸ್ಯತಿ-ಬಿಡುತ್ತಾನೆ, ತಚ್ಚ-ಆಕಳೇಬರವೂ, ಭಸ್ಮೀಭವಿಷ್ಯತಿ-ಬೂದಿಯಾಗುವುದು ॥ ೫೯ ॥ ಸಾಧ್ವೀ-ಪತಿವ್ರತೆಯಾದ, ಪತ್ನೀ-ಹೆಂಡತಿಯಾದ ಗಾಂಧಾರಿಯು, ಪತ್ಯುಃ-ಗಂಡನ, ದೇಹೇ-ಶರೀರವು, ಅಗ್ನಿಭಿಃ-ಅಗ್ನಿಗಳಿಂದ, ಸಹೋಟಜೇ - ಪರ್ಣಶಾಲಾಸಮೇತವಾಗಿ, ದಹ್ಯಮಾನೇಸತಿ - ಸುಡಲ್ಪಡುತ್ತಿರಲು, ಬಹಿಸ್ಸ್ಥಿತಾ-ಹೊರಗೆ ಇದ್ದವಳಾಗಿ, ಪತಿಂ-ಗಂಡನನ್ನನುಸರಿಸಿ,ತಂಅಗ್ನಿಂ-ಆ ಅಗ್ನಿಯನ್ನು, ಅನುವೇಕ್ಷ್ಯತಿ-ಹೊಗುವಳು ॥ ೬೦ ॥ ಕುರುನಂದನ-ಎಲೈ ಕುರುವಂಶೋದ್ಧಾರಕನೆ ! ವಿದುರಸ್ತು - ವಿದುರನಾದರೆ

ರಜಸ್ತಮಸ್ಸುಗಳನ್ನು ಸಮೂಲವಾಗಿನಾಶಗೊಳಿಸಿ, ಮೊದಲೇಇಂದ್ರಿಯಗಳನ್ನೂ ಮನಸ್ಸನ್ನೂಸಹ ಜಯಿಸಿರುವನಾದುದರಿಂದ, ಸಕಲೇಂದ್ರಿಯವಿಷಯಗಳನ್ನೂ ಗೆದ್ದು ಸ್ಥಾಣುವಿನಂತೆ ನಿಶ್ಚಲನಾಗಿರುವನು, ಇಂತುಸಕಲವ್ಯಾಪಾರಗಳನ್ನೂಬಿಟ್ಟು ಆತ್ಮಾರಾಮನಾಗಿರುವ ಆಧೃತರಾಷ್ಟ್ರನಿಗೆ, ನೀನು ವಿಘ್ನವನ್ನು ಮಾಡಬೇಡ ॥ ೫೪-೫೮ ॥ ಆತನು ಈ ಹೊತ್ತಿಗೆ ಐದನೆಯ ದಿನದಲ್ಲಿ ತನ್ನಕಳೇಬರವನ್ನು, ಬಿಟ್ಟುಬಿಡುವನು, ಆ ದೇಹವೂ ಸುಟ್ಟು ಭಸ್ಮವಾಗುವುದು ॥ ೫೯ ॥ ಯೋಗಾಗ್ನಿಯಿಂದಲೂ, ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ್ಯಗಳೆಂಬ ಶ್ರೌತಾಗ್ನಿಗಳಿಂದಲೂ, ಗಂಡನಾದ ಧೃತರಾಷ್ಟ್ರನ ಶರೀರವು ಪರ್ಣಶಾಲಾ ಸಮೇತವಾಗಿ ಸುಡುತ್ತಿರುವಾಗ ಹೊರಗಿರುವ ಗಾಂಧಾರಿಯು ಪತಿಯನ್ನನುಸರಿಸಿ, ಅದೇ ಅಗ್ನಿಯನ್ನು ಪ್ರವೇಶಿಸುವಳು ॥೬೦ ॥ ಬಳಿಕ ವಿದುರನು ಆ ಆಶ್ಚರ್ಯ

‡ (2) ವಿ. ಧೃತರಾಷ್ಟ್ರನು ಜೀವಸ್ವರೂಪ ಮೊದಲು ವಿಷ್ಣುವಿನ ವರೆಗೂ ಇರುವ, ಎಲ್ಲ ತತ್ವಗಳನ್ನೂ ಪರಿಶೋಧಿಸಿ, ಜಗತ್ತೆಲ್ಲವನ್ನೂ ವಿಜ್ಞಾನ (ಬುದ್ಧಿ) ತತ್ವಾಭಿಮಾನಿಯಾದ ಚತುರ್ಮುಖನಲ್ಲಿ ಲಯಗೊಳಿಸಿ, ಆ ಚತುರ್ಮುಖನನ್ನು ತನ್ನ ಅಂತರ್ಯಾಮಿಯಲ್ಲಿ, ಲಯಗೊಳಿಸಿ, ಘಟಾಕಾಶವು ಮಹಾಕಾಶದಲ್ಲಿ ಲಯವಾಗುವಂತೆ ಆ ಅಂತರ್ಯಾಮಿಯನ್ನು ಪರಮಾತ್ಮನಲ್ಲಿ ಲಯಗೊಳಿಸಿದನೆಂದರ್ಥವು. ಈ ಮತಾನುಸಾರವಾಗಿ, ಘಟವು ಹುಟ್ಟುವಾಗಲೇ ಅದರಲ್ಲಿರುವ ಅವ್ಯಾಕೃತ ಅಥವಾ ಮಹಾಕಾಶವೊಂದು, ಅದರೊಡನೆ ಹುಟ್ಟುವ ಭೂತಾಕಾಶವೊಂದು, ಈಎರಡೂ ಘಟಾಕಾಶವೆಂದೇ ಕರೆಯಲ್ಪಡುವುವು. ಆದುದರಿಂದ ಆ ಘಟವು ನಾಶವಾದ ಕೂಡಲೇ, ಅದರಲ್ಲಿರುವ ಭೂತಾಕಾಶವು ಮಾತ್ರನಾಶವಾಗಿ ಅಲ್ಲಿಯ ಮಹಾಕಾಶವು ಮಹಾಕಾಶದಲ್ಲಿ ಸೇರಿ ಹೋಗುವಂತೆಜೀವನಾಶ ವಾದ ಕೂಡಲೇ ಅಂದರೆ ಜೀವನಿಗಾವರಣ ವಾಗಿದ್ದ ಲಿಂಗಶರೀರವು ನಾಶವಾದ ಕೂಡಲೆ ಆಅಂತರ್ಯಾಮಿಯು ಪರಮಾತ್ಮನಲ್ಲಿ ಐಕ್ಯವನ್ನು ಪಡೆಯುವನೆಂದು ಭಾವವು.

ನಿಶಾಮ್ಯ ಕುರುನಂದನ। ಹರ್ಷಶೋಕಯುತಸ್ತಸ್ಮಾದ್ಗಂತಾ ತೀರ್ಥನಿಷೇ
ವಕಃ ॥೬೧॥ ಸೂತಃ ॥ ಇತ್ಯುಕ್ತ್ವಾಥಾ ರುಹತ್ಸ್ವರ್ಗಂ ನಾರದಸ್ಸಹತುಂ
ಬುರುಃ ॥ ಯುಧಿಷ್ಠಿರೋ ವಚಸ್ತಸ್ಯ ಹೃದಿ ಕೃತ್ವಾ ಜಹಾ ಚ್ಛುಚಃ ॥

ಇತಿ ತ್ರಯೋದಶೋಧ್ಯಾಯಃ

ತತ್-ಆ, ಆಶ್ಚರ್ಯಂ ಆಶ್ಚರ್ಯವನ್ನು, ನಿಶಾಮ್ಯ-ಕಂಡು, ಹರ್ಷಶೋಕಯುತಃ-ಸಂತೋಷವುತ್ತು ವ್ಯಸನ ದಿಂದಕೂಡಿದವನಾಗಿ, ತಸ್ಮಾತ್-ಅಲ್ಲಿಂದ, ತೀರ್ಥನಿಷೇವಕಃ-ತೀರ್ಥಗಳನ್ನು ಸೇವಿಸುವುದಕ್ಕಾಗಿ, ಗಂತಾ-ಹೊ ರಟುಹೋಗುವನು ॥ ೬೧ ॥ ಸೂತಃ-ಸೂತನುಹೇಳುತ್ತಾನೆ:— ನಾರದಃ-ನಾರದಮುನಿಯು, ಸಹತುಂಬುರುಃ-ತುಂಬುರುವಿನಿಂದಕೂಡಿದವನಾಗಿ, ಇತಿ-ಹೀಗೆ, ಉಕ್ತ್ವಾ-ಹೇಳಿ, ಅಥ-ಆಬಳಿಕ ಸ್ವರ್ಗಂ-ಸ್ವರ್ಗ ವನ್ನು, ಆರುಹತ್-ಹತ್ತಿದನು, ಯುಧಿಷ್ಠಿರಃ-ಧರ್ಮರಾಜನು, ತಸ್ಯ-ಆ ನಾರದನ, ವಚಃ-ಮಾತನ್ನು, ಹೃದಿ-ಮನಸ್ಸಿನಲ್ಲಿ, ಕೃತ್ವಾ-ಮಾಡಿ, ಶುಚಃ-ದುಃಖಗಳನ್ನು, ಅಜಹಾತ್-ಬಿಟ್ಟನು, ॥ ೬೦ ॥

ತ್ರಯೋದಶಾಧ್ಯಾಯಂ ಸಮಾಪ್ತಂ

ವನ್ನು ಕಂಡು ಅಣ್ಣನು ಸದ್ಗತಿಯನ್ನು ಪಡೆದನೆಂಬ ಹರ್ಷದಿಂದಲೂ, ಆತನ ಮರಣದಿಂದುಂಟಾದ ದುಃಖದಿಂದಲೂ ಕೂಡಿದವನಾಗಿ, ಅಲ್ಲಿಂದ ತೀರ್ಥಯಾತ್ರೆಗಾಗಿ ಹೊರಟು ಹೋಗುವನು ॥ ೬೧ ॥ ಅಯ್ಯಾ ಶೌನಕಾದಿಗಳಿರಾ? ತುಂಬುರುಸಹಿತನಾದ ನಾರದಮುನಿಯು ಹೀಗೆ ಹೇಳಿ, ಬಳಿಕ ಸ್ವರ್ಗಕ್ಕೆ ಹೊರಟು ಹೋದನು. ಧರ್ಮರಾಜನು ಆತನ ಮಾತುಗಳನ್ನು ಕೇಳಿಪರಿಭಾವಿಸುತ್ತಾ ಚಿಂತೆಯನ್ನಳಿದು ಸಮಾಧಾನಗೊಂಡನು, ಎಂದು ಸೂತಪೌರಾಣಿಕನು ಹೇಳುತ್ತಿದ್ದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್

ಹದಿಮೂರನೆಯ ಅಧ್ಯಾಯಂ ಮುಗಿದುದು

ಓಂ ನಮಃ ಪರಮಾತ್ಮನೇ

ಸೂತಃ । ಸಂಪ್ರಸ್ಥಿತೇ ದ್ವಾರಕಾಯಾಂ ಜಿಷ್ಣೌ ಬಂಧುದಿದೃಕ್ಷಯಾ ।

ಸೂತಃ-ಸೂತನು ಹೇಳುತ್ತಾನೆ, ಜಿಷ್ಣೌ-ಅರ್ಜುನನು, ಬಂಧುದಿದೃಕ್ಷಯಾ-ನೆಂಟರನ್ನು ನೋಡುವುದಕ್ಕಾಗಿಯೂ, ಪುಣ್ಯಶ್ಲೋಕಸ್ಯ-ಪುಣ್ಯಕೀರ್ತಿಯುಳ್ಳ, ಕೃಷ್ಣಸ್ಯ-ಕೃಷ್ಣನ, ವಿಚೇಷ್ಟಿತಂ-ಸಮಾಚಾರವನ್ನು, ಜ್ಞಾತುಂಚ-ತಿಳಿಯುವದಕ್ಕಾಗಿಯೂ, ದ್ವಾರಕಾಯಾಂ-ದ್ವಾರಕೆಯಲ್ಲಿ, ಸಂಪ್ರಸ್ಥಿತೇಸತಿ-ಹೊರಟು

—: ಧರ್ಮರಾಜನು ಉತ್ಪಾತಗಳನ್ನು ಕಾಣುವುದು :—

ಕಂ॥ ಪರಿಕಿಸುತ ರಿಷ್ಟಗಳನಾ । ನರಪತಿ ಮಂದುಗವನಾಂತು ಶಂಕಿಸುತಂ ಸೋ ।
ದರನಪ ಫಲುಗುಣನಿಂ ಶ್ರೀ । ಹರಿಯಂತೆಧರ್ನಕಥೆಯ ಕೇಳ್ದಪನಿದರೊಳ್ ॥

ಅಯ್ಯಾ ಬ್ರಾಹ್ಮಣೋತ್ತಮರಿರಾ! ಅನಂತರದಲ್ಲಿ ಅರ್ಜುನನು ಬಂಧುಗಳನ್ನು ನೋಡುವಕೋರಿಕೆಯಿಂದಲೂ, ಪುಣ್ಯಶ್ಲೋಕನಾದ ಶ್ರೀಕೃಷ್ಣಮೂರ್ತಿಯ ಸಮಾ

ಜ್ಞಾತುಂಚ ಪುಣ್ಯಶ್ಲೋಕಸ್ಯ ಕೃಷ್ಣಸ್ಯಚ ವಿಚೇಷ್ಟಿತಂ ॥ ೧ ॥ ವ್ಯತೀ
ತಾಃ ಕತಿಚಿನ್ಮಾಸಾ ಸ್ತದಾ ನಾಯಾ ತ್ತತೋರ್ಜುನಃ। ದದರ್ಶ ಘೋರರೂ
ಪಾಣಿ ನಿಮಿತ್ತಾನಿ ಕುರೂದ್ವಹಃ ॥ ೨ ॥ ಕಾಲಸ್ಯಚ ಗತಿಂ ರೌದ್ರಾಂ ವಿಪ
ರ್ಯಸ್ತರ್ತುಧರ್ಮಿಣಃ । ಪಾಪೀಯಸೀಂ ನೃಣಾಂ ವಾರ್ತಾಂ ಕ್ರೋಧ
ಲೋಭಾನೃತಾತ್ಮನಾಂ ॥ ೩ ॥ ಜಿಂಹಪ್ರಾಯಂ ವ್ಯವಹೃತಂ ಶಾಠ್ಯಮಿಶ್ರಂ
ಚ ಸೌಹೃದಂ। ಪಿತೃಮಾತೃಸುಹೃದ್ಭ್ರಾತೃದಂಪತೀನಾಂಚ ಕಲ್ಕನಂ ॥೪॥
* (ಕನ್ಯಾವಿಕ್ರಯಿಣಂ ತಾತಂ ಸುತಂ ಪಿತ್ರೋರಪೋಷಕಂ। ಬ್ರಾಹ್ಮಣಾನ್
ವೇದವಿಮುಖಾನ್ ಶೂದ್ರಾನ್ ವೈ ಬ್ರಹ್ಮವಾದಿನಃ) ನಿಮಿತ್ತಾನ್ಯತ್ಯರಿಷ್ಟಾ
ನಿ ಕಾಲೇತ್ವನುಗತೇ ನೃಣಾಂ । ಲೋಭಾದ್ಯಧರ್ಮಪ್ರಕೃತಿಂ ದೃಷ್ಟ್ವಾ

ಹೋಗಲು ॥೧॥ ಕತಿಚಿತ್-ಕೆಲವು, ಮಾಸಾಃ-ತಿಂಗಳುಗಳು, ವ್ಯತೀತಾಃ-ಕಳೆದವು, ತತಃ-ಆ ಬಳಿಕ, ಅರ್ಜುನಃ-ಅರ್ಜುನನು. ನಾಯಾತ್-ಬರಲಿಲ್ಲ, ತದಾ-ಆಗ, ಕುರೂದ್ವಹಃ-ಕುರುಶ್ರೇಷ್ಠನಾದ ಧರ್ಮರಾಜನು ಘೋರರೂಪಾಣಿ-ಭಯಂಕರಗಳಾದ, ನಿಮಿತ್ತಾನಿ-ಅಪಶಕುನಗಳನ್ನು, ದದರ್ಶ-ಕಂಡನು॥೨॥ ವಿಪ...ಣಃ, ವಿಪರ್ಯಸ್ತ- ತಲೆಕೆಳಗಾದ, ಋತುಧರ್ಮಿಣಃ- ಋತುಧರ್ಮಗಳುಳ್ಳ, ಕಾಲಸ್ಯ- ಕಾಲದ, ರೌದ್ರಾಂ-ಭಯಂಕರವಾದ, ಗತಿಂ-ಪ್ರಚಾರವನ್ನು, ಕ್ರೋಧ...ನಾಂ, ಕ್ರೋಧ-ಕೋಪವು, ಲೋಭ-ದುರಾಸೆಯು ಅನೃತ ಸುಳ್ಳು, ಇವುಗಳಿಂದ ಕೂಡಿದ, ಆತ್ಮನಾಂ - ಮನಸ್ಸುಳ್ಳ, ನೃಣಾಂ-ಮನುಷ್ಯರ, ಪಾಪೀಯಸೀಂ- ಪಾಪಿಷ್ಠವಾದ, ವಾರ್ತಾಂ ಬಾಳನ್ನೂ ॥೩॥ ಜಿಂಹ ಪ್ರಾಯಂ-ಮೋಸದಿಂದ ತುಂಬಿರುವ, ವ್ಯವಹೃತಂ- ನಡೆವಳಿಯನ್ನೂ, ಶಾಠ್ಯಮಿಶ್ರಂ - ಕೃತ್ರಿಮವಾದ, ಸೌಹೃದಂ - ಸ್ನೇಹವನ್ನೂ, ಪಿತೃ...ನಂ ಪಿತೃ- ತಂದೆ, ಮಾತೃ-ತಾಯಿ, ಸುಹೃತ್- ಮಿತ್ರರು, ಭ್ರಾತೃ-ಒಡಹುಟ್ಟಿದವರು, ದಂಪತೀನಾಂಚ-ಗಂಡಹೆಂಡಿರು, ಇವರಿಗೆ, ಕಲ್ಕನಂ-ಜಗಳವನ್ನು ॥೪॥ ಕನ್ಯಾವಿಕ್ರಯಿಣಂ-ಹೆಣ್ಣುಮಗಳನ್ನು ಮಾರಿಕೊಳ್ಳುವ, ತಾತಂ-ತಂದೆಯನ್ನೂ, ಪಿತ್ರೋಃ-ತಾಯಿತಂದೆಗಳನ್ನು, ಅಪೋಷಕಂ-ಕಾಪಾಡದಿರುವ, ಸುತಂ-ಮಗನನ್ನೂ, ವೇದವಿಮುಖಾನ್-ವೇದಗಳನ್ನೋದದ, ಬ್ರಾಹ್ಮಣಾನ್-ಬ್ರಾಹ್ಮಣರನ್ನೂ, ಬ್ರಹ್ಮವಾದಿನಃ-ವೇ

ಚಾರವನ್ನು ತಿಳಿಯಬೇಕೆಂತಲೂ, ದ್ವಾರಕೆಗೆ ಪ್ರಯಾಣವನ್ನು ಮಾಡಿದನು ॥೧॥ ಆತನೆಷ್ಟು ತಿಂಗಳಾದರೂ ಹಿಂದಿರುಗಿ ಬಾರದಿರಲು, ಕುರುವಂಶಾವತಂಸನಾದ ಧರ್ಮರಾಜನಿಗೆ, ಆಸಮಯದಲ್ಲಿ ಭಯಂಕರಗಳಾದ ದುಶ್ಶಕುನಗಳು ತಲೆದೋರಿದುವು ॥ ೨ ॥ ಕಾಲವು ದಿನೇ ದಿನೇ ಕ್ರೂರವಾಗುತ್ತಾ ಬಂತು. ಋತುಧರ್ಮಗಳು ವ್ಯತ್ಯಸ್ತಗಳಾದವು. ಮನುಷ್ಯರಲ್ಲಿ ಕ್ರೋಧ, ದುರಾಸೆ, ಸುಳ್ಳು, ತಟವಟ ಇವುಗಳು ತುಂಬಿಉಕ್ಕಳಿಸಿದವು. ಜನರು ಬಹಳ ಪಾಪಿಷ್ಠವಾದ ಜೀವನವನ್ನು ಮಾಡಲಾರಂಭಿಸಿದರು ॥೩॥ ಜನರನಡವಳಿಯು ಮೋಸಕ್ಕೆ ತವರು ಮನೆಯಾಯಿತು. ಸ್ನೇಹವೆಂಬುದು ಕಪಟಮಯವಾಯಿತು, ತಂದೆ, ತಾಯಿ, ಮಿತ್ರ, ಸೋದರ, ಗಂಡ, ಹೆಂಡತಿ; ಇವರುಗಳಲ್ಲಿ ಪರಸ್ಪರವಾಗಿ ಜಗಳಗಳುಂಟಾದುವು ॥೪॥ ತಂದೆಯಾದವನು ಹೆಣ್ಣುಮಕ್ಕಳನ್ನು ಮಾರಿದನು. ಮಗನಾದವನು ತಾಯಿತಂದೆಗಳನ್ನು ಮನೆಯಿಂದ ಹೊರಡಿಸಿದನು. ಬ್ರಾಹ್ಮಣರು ವೇದಾಧ್ಯಯನವನ್ನು ಬಿಟ್ಟರು.

* ಈ ಶ್ಲೋಕವು ವೀರರಾಘವೀಯ ಸಿದ್ಧಾಂತಪ್ರದೀಪಗಳಲ್ಲಿಮಾತ್ರ ಟೀಕಿಸಲ್ಪಟ್ಟಿದೆ.

ವಾಚಾನುಜಂ ನೃಪಃ ॥ ೫ ॥ ಯುಧಿಷ್ಠಿರಃ ॥ ಸಂಪ್ರೇಷಿತೋ ದ್ವಾರಕಾ
ಯಾಂ ಜಿಷ್ಣು ರ್ಬಂಧುದಿದೃಕ್ಷಯಾ । ಜ್ಞಾತುಂಚ ಪುಣ್ಯಶ್ಲೋಕಸ್ಯ ಕೃಷ್ಣ
ಸ್ಯಚ ವಿಚೇಷ್ಟಿತಂ ॥೬॥ ಗತಾ ಸ್ಸಪ್ತಾಧುನಾ ಮಾಸಾ ಭೀಮಸೇನ ತವಾ
ನುಜಃ । ನಾಯಾತಿ ಕಸ್ಯವಾ ಹೇತೋ ರ್ನಾಹಂ ವೇದೇದ ಮಂಜಸಾ॥೭॥
ಅಪಿದೇವರ್ಷಿಣಾ ದಿಷ್ಟ ಸ್ಸಕಾಲೋಯ ಮುಪಸ್ಥಿತಃ।ಯದಾತ್ಮನೋಂಗ
ಮಾಕ್ರೀಡಂ ಭಗವಾ ನುತ್ಸಿಸೃಕ್ಷತಿ॥೮॥ ಯಸ್ಮಾ ನ್ನಸ್ಸಂಪದೋ ರಾಜ್ಯಂ
ದಾರಾಃ ಪ್ರಾಣಾಃ ಕುಲಂ ಪ್ರಜಾಃ । ಆಸ ನ್ಸಪತ್ನವಿಜಯೋ ಲೋಕಾಶ್ಚ

ದಾಧ್ಯಯನಮಾಡುವ, ಶೂದ್ರಾನ್-ವೈ-ಶೂದ್ರರನ್ನೂ, ಅತ್ಯರಿಷ್ಟಾನಿ, ಅತ್ಯಂತ ಅಶುಭಗಳಾದ, ನಿಮಿತ್ತಾನಿ ಶಕುನಗಳನ್ನು, ಕಾಲೇ-ವಿಪರೀತಕಾಲವು, ಅನುಗತೇತು-ಬದಗಲು, ನೃಣಾಂ-ಮನುಷ್ಯರ, ಲೋಭಾ... ತಿಂ, ಲೋಭ - ದುರಾಸೆಯೇ, ಆದಿ.ಮೊದಲಾದ, ಅಧರ್ಮ - ಅಧರ್ಮಗಳ, ಪ್ರಕೃತಿಂ-ಸ್ವಭಾವವನ್ನೂ, ದೃಷ್ಟ್ವಾ-ಕಂಡು,ನೃಪಃ-ರಾಜನು, ಅನುಜಂ-ತಮ್ಮನಾದಭೀಮನನ್ನು ಕುರಿತು, ಉವಾಚ-ಹೇಳಿದನು॥೫॥ ಯುಧಿಷ್ಠಿರಃ-ಧರ್ಮರಾಜನು ಹೇಳುತ್ತಾನೆ:-ಹೇ ಭೀಮಸೇನ- ಎಲೈ ಭೀಮನೇ ! ಬಂಧುದಿದೃಕ್ಷಯಾ-ಬಂಧುಗಳನ್ನು ನೋಡುವುದಕ್ಕೂ, ಪುಣ್ಯಶ್ಲೋಕಸ್ಯ-ಪುಣ್ಯಕೀರ್ತಿಯುಳ್ಳ, ಕೃಷ್ಣಸ್ಯ-ಕೃಷ್ಣನ, ವಿಚೇಷ್ಟಿತಂ-ಅಭಿಪ್ರಾಯವನ್ನು, ಜ್ಞಾತುಂಚ-ತಿಳಿಯುವುದಕ್ಕೂ, ಜಿಷ್ಣುಃ-ಅರ್ಜುನನು, ದ್ವಾರಕಾಯಾಂ-ದ್ವಾರಕೆಯಲ್ಲಿ ಸಂಪ್ರೇಷಿತಃ ಕಳುಹಿಸಲ್ಪಟ್ಟನು ॥೬॥ ಅಧುನಾ-ಈಗ, ಸಪ್ತಮಾಸಾಃ-ಏಳುತಿಂಗಳು, ಗತಾಃ-ಕಳೆದವು, ಕಸ್ಯವಾಹೇತೋಃ - ಏನುಕಾರಣದಿಂದ, ತವ-ನಿನ್ನ, ಅನುಜಃ-ತಮ್ಮನು, ನಾಯಾತಿ-ಬರಲಿಲ್ಲವೋ, ಇದಂ-ಈ ಕಾರಣವನ್ನು, ಅಂಜಸಾ.ಬೇಗನೆ, ಅಹಂ-ನಾನು, ನವೇದ-ತಿಳಿಯಲಿಲ್ಲ, ॥೭॥ ಭಗವಾನ್ ಭಗವಂತನಾದ ಕೃಷ್ಣನು, ಆತ್ಮನಃ-ತನಗೆ, ಆ ಕ್ರೀಡಂ-ಕ್ರೀಡಾಸಾಧನವಾದ, ಅಂಗಂ-ಶರೀರವನ್ನು, ಯದಾ-ಯಾವಕಾಲದಲ್ಲಿ, ಉತ್ಸಿಸೃಕ್ಷತಿ-ಬಿಡಲೆಳಸುವನೋ, ದೇವರ್ಷಿಣಾ-ನಾರದ ಮುನಿಯಿಂದ ಆದಿಷ್ಟಃ-ಹೇಳಲ್ಪಟ್ಟ, ಸಕಾಲಃ.ಆಕಾಲವು, ಅಯಂ-ಇದಾಗಿ, ಅಪ್ಯುಪಸ್ಥಿತಃ-ಪ್ರಾಪ್ತವಾಯಿತೇ ? ॥೮॥ ಯಸ್ಮಾತ್ ಯಾವಕೃಷ್ಣನಿಂದ, ನಃ-ನಮ್ಮ, ಸಂಪದಃ-ಸಂಪತ್ತುಗಳು, ರಾಜ್ಯಂ-ರಾಜ್ಯವು, ದಾರಾಃ-

ಶೂದ್ರರು ವೇದಪಾಠಕರಾದರು, ಅತ್ಯಂತಾಶುಭ ಸೂಚಕಗಳಾದ ಅರಿಷ್ಟಗಳುಂಟಾಗುತ್ತಾ ಬಂದುವು. ಕಾಲಾನುಸಾರವಾಗಿ ಮನುಷ್ಯರಲ್ಲಿ ಅಧರ್ಮಗಳು ನೆಲೆಗೊಂಡುವು. ದುರಾಸೆಯು ಅಧಿಕವಾಯಿತು. ಇದೆಲ್ಲವನ್ನೂ ಕಂಡು ಧರ್ಮರಾಜನು ಭೀಮನನ್ನು ಕುರಿತು ಹೇಳಿದನು ॥೫॥ ಅಯ್ಯಾ ಭೀಮಸೇನನೆ ! ಭಗವಂತನಾದ ಶ್ರೀಕೃಷ್ಣಮೂರ್ತಿಯ ಸಮಾಚಾರವನ್ನು ತಿಳಿದು,ಬಂಧುಗಳನ್ನು ನೋಡಿಕೊಂಡು ಬರುವದಕ್ಕಾಗಿ, ಅರ್ಜುನನು ದ್ವಾರಕಾನಗರಿಗೆ ತೆರಳಿ ಏಳು ತಿಂಗಳಾಯಿತು॥೬॥ ಇಷ್ಟು ದಿನಗಳಾದರೂ ನಿನ್ನ ತಮ್ಮನು ಹಿಂದಿರುಗಿ ಬಾರದಿರುವದಕ್ಕೇನುಕಾರಣವೋ ನಾನರಿಯೆನು॥೭॥ಯಾವಭಗವಂತನ ಅನುಗ್ರಹದಿಂದ ನಮಗೆ, ಸಂಪತ್ತು, ರಾಜ್ಯವು, ಮಡದಿಯು, ಮಕ್ಕಳು, ಪ್ರಾಣಗಳು, ಕುಲವು, ಶತ್ರುಜಯವು ಇತ್ಯಾದಿಗಳು ಲಭಿಸಿದುವೋ, ಮುಂದೆ ಪುಣ್ಯಲೋಕಗಳೂ ಲಭಿಸುವುವೋ, ಸರ್ವಜ್ಞನೆನಿಸಿದ ನಾರದ ಮಹಾಮುನಿಯು ಹೇಳಿದಂತೆ. ಆ ಶ್ರೀಕೃಷ್ಣಮೂರ್ತಿಯು ಮನುಷ್ಯಲೀಲೆಗಳಿಗೆ ಆಧಾರವಾಗಿದ್ದ ತನ್ನಮಾನುಷ ಶರೀರವನ್ನುಪರಿತ್ಯಾಗ

ಯದನುಗ್ರಹಾತ್॥೯॥ ಪಶ್ಯೋತ್ಪಾತಾನ್ ನರವ್ಯಾಘ್ರ ದಿವ್ಯಾನ್ ಭೌಮಾನ್ ಸದೈಹಿಕಾನ್ । ದಾರುಣಾನ್ ಶಂಸತೋಽದೂರಾ ದ್ಭಯಂ ನೋ ಬುದ್ಧಿಮೋಹನಂ ॥ ೧೦ ॥ ಊರ್ವಕ್ಷಿ ಬಾಹವೋ ಮಹ್ಯಂ ಸ್ಫುರಂತ್ಯಂಗ ಪುನಃ ಪುನಃ । ವೇಪಥುಶ್ಚಾಪಿ ಹೃದಯೇ ಆರಾ ದ್ದಾಸ್ಯಂತಿ ವಿಪ್ರಿಯಂ ॥ ೧೧ ॥ ಶಿವೈಷೋದ್ಯಂತ ಮಾದಿತ್ಯ ಮಭಿರೌತ್ಯನಲಾನನಾ। ಮಾ ಮಂಗ ಸಾರಮೇಯೋಯ ಮಭಿ † ರೋದಿತ್ಯಭೀರುವತ್ ॥೧೨॥ ಶಸ್ತಾಃ ಕುರ್ವಂತಿ ಮಾಂ ಸವ್ಯಂ ದಕ್ಷಿಣಂ ಪಶವೋಽಪರೇ। ವಾಹಾಂಶ್ಚ ಪುರುಷವ್ಯಾಘ್ರ ಲಕ್ಷಯೇ

ಹೆಂಡಿರು, ಪ್ರಾಣಾಃ-ಪ್ರಾಣಗಳು, ಕುಲಂ-ಕುಲವು, ಪ್ರಜಾಃ-ಸಂತತಿಯು, ಸಪತ್ನವಿಜಯಃ-ಶತ್ರುಜಯವು, ಆಸನ್-ಉಂಟಾದುವೋ, ಯದನುಗ್ರಹಾತ್-ಯಾವನಅನುಗ್ರಹದಿಂದ, ಲೋಕಾಶ್ಚ-ಪುಣ್ಯಲೋಕಗಳೂ ಉಂಟಾಗುವುವೋ ॥ ೯ ॥ ಹೇನರವ್ಯಾಘ್ರ-ಎಲೈ ಪುರುಷ ಶ್ರೇಷ್ಠನೆ ! ಸದೈಹಿಕಾನ್-ದೇಹದಲ್ಲಿ ಉಂಟಾದ ಉತ್ಪಾತಗಳಿಂದ ಕೂಡಿದ, ದಿವ್ಯಾನ್-ಅಂತರಿಕ್ಷದಲ್ಲುಂಟಾದ, ಭೌಮಾನ್-ಭೂಮಿಯಲ್ಲುಂಟಾದ, ಮತ್ತು, ನಃ-ನಮಗೆ, ಅದೂರಾತ್-ಶೀಘ್ರದಲ್ಲಿಯೇ, ಬುದ್ಧಿಮೋಹನಂ-ಬುದ್ಧಿಯನ್ನು ಮರುಳುಮಾಡುವ, ಭಯಂ-ಭಯವನ್ನು, ಶಂಸತಃ ಸೂಚಿಸುತ್ತಿರುವ, ದಾರುಣಾನ್-ಭಯಂಕರಗಳಾದ, ಉತ್ಪಾತಾನ್-ದುರ್ಲಕ್ಷಣಗಳನ್ನು, ಪಶ್ಯ-ನೋಡು ॥ ೯ ॥

ಹೇ ಅಂಗ-ಎಲೈಭೀಮನೆ ! ಊರ್ವ...ವಃ, ಊರು-ತೊಡೆಯು, ಅಕ್ಷಿ-ಕಣ್ಣು, ಬಾಹವಃ-ತೋಳು ಇವು, ಪುನಃ-ಬಾರಿಬಾರಿಗೂ, ಸ್ಫುರಂತಿ-ಅದುರುತ್ತಿವೆ, ಹೃದಯೇ-ಎದೆಯಲ್ಲಿ, ವೇಪಥುಶ್ಚಾಪಿ-ನಡುಕವು ಉಂಟಾಗಿದೆ, ಇವು, ಆರಾತ್-ಬೇಗನೆ, ಮಹ್ಯಂ-ನನಗೆ, ಅಪ್ರಿಯಂ-ಅನಿಷ್ಟವನ್ನು, ದಾಸ್ಯಂತಿ ಕೊಡುವುವು ॥ ೧೧ ॥ ಏಷಾ-ಈ, ಶಿವಾ-ನರಿಯು, ಅನಲಾನನಾ - ಬಾಯಿಂದ ಬೆಂಕಿಯನ್ನುಗುಳುತ್ತಾ ಉದ್ಯಂತಂ-ಉದಯಿಸುತ್ತಿರುವ, ಆದಿತ್ಯಂ - ಸೂರ್ಯನಿಗೆ, ಅಭಿರೌತಿ-ಎದುರಾಗಿ ಕಿರಿಚುತ್ತದೆ, ಹೇಅಂಗ-ಎಲೈ ಭೀಮನೆ! ಅಯಂ-ಈ, ಸಾರಮೇಯಃ-ನಾಯಿಯು, ಅಭೀರುವತ್-ಹೆದರಿಕೆಯಿಲ್ಲದಂತೆ, ಮಾಮಭಿ-ನನ್ನೆದುರಾಗಿ, ರೋದಿತಿ-ಅಳುತ್ತದೆ॥೧೨॥ಶಸ್ತಾಃ-ಯೋಗ್ಯಗಳಾದ ಗೋವುಮೊದಲಾದುವು, ಮಾಂ-ನನ್ನನ್ನು, ಸವ್ಯಂ-ಅಪ್ರದಕ್ಷಿಣವನ್ನು, ಕುರ್ವಂತಿ-ಮಾಡುತ್ತವೆ, ಅಪರೇ-ಇತರಗಳಾದ, ಪಶವಃ-ಕತ್ತೆಮೊದಲಾದುವು,

ಮಾಡುವ ಸಮಯವು ಪ್ರಾಪ್ತವಾಗಿರ ಬಹುದೆಂದೆಣಿಸುವೆನು ॥೮-೯॥ ಎಲೈ ಶೂರಾಗ್ರಣಿಯೆ ! ಶರೀರದಲ್ಲಿಯೂ, ಭೂಮಿಯಲ್ಲಿಯೂ, ಅಂತರಿಕ್ಷದಲ್ಲಿಯೂ ಸಹ ಉಂಟಾಗಿರುವ ಉತ್ಪಾತಗಳನ್ನು ನೋಡು. ಇವುಗಳನ್ನು ಕಂಡರೆ, ನಮ್ಮ ಬುದ್ಧಿಯನ್ನು ಮರುಳು ಮಾಡಿ ಭಯವೆಂಬುದು ಶೀಘ್ರವಾಗಿಯೇ ಒದಗುವಂತೆ ತೋರುವುದು ॥೧೦॥ ನನ್ನ ಎಡಗಡೆಯ ತೊಡೆ, ಕಣ್ಣು, ತೋಳು, ಇವುಗಳು ಬಾರಿಬಾರಿಗೂ ಚಲಿಸುತ್ತಿರುವುವು. ಹೃದಯವು ಕಂಪಿಸುತ್ತಿರುವುದು. ಹೀಗೆ ನನ್ನ ಶರೀರದಲ್ಲುಂಟಾಗಿರುವ ಲಕ್ಷಣಗಳು ಶೀಘ್ರವಾಗಿಯೇ ಅನಿಷ್ಟವುಂಟಾಗುವುದೆಂದು ಸೂಚಿಸುವುವು ॥೧೧॥ ಅಲ್ಲದೆ, ಈ ನರಿಯು ಬಾಯಿಂದ ಬೆಂಕಿಯನ್ನು ಕಾರುತ್ತಾ, ಉದಯಿಸುತ್ತಿರುವ ಸೂರ್ಯಮಂಡಲದೆದುರಾಗಿ ಅರಚುತ್ತಿರುವುದು. ಈ ನಾಯಿಯು, ಸ್ವಲ್ಪವೂ ಹೆದರಿಕೆಯಿಲ್ಲದೆ ವಿಕಾರಧ್ವನಿಯಿಂದ ನನ್ನೆದುರಾಗಿ ಅಳುತ್ತಿರುವುದು॥೧೨॥ ಉತ್ತಮಗಳಾದ ಆಕಳು ಮೊದಲಾದವು ನನ್ನನ್ನು ಅಪ್ರದಕ್ಷಿಣವಾಗಿ ಬಳ

† ಪಾ-ರೇಭತಿ—ಪ್ಲುತಸ್ವರದಿಂದ ಬೊಗಳುವುದು.

ರುದತೋ ಮಮ ॥ ೧೩ ॥ ಮೃತ್ಯುದೂತಃ ಕಪೋತ ‡ ತೋಽಯ ಮುಲೂಕಃ
ಕಂಪಯ ನ್ಮನಃ। ಪ್ರತ್ಯುಲೂಕಶ್ಚ *ಕುಹ್ವಾನೈ ರ್ವಿಶ್ವಂ ವೈ ಶೂನ್ಯ ಮಿಚ್ಛ
ತಃ ॥ ೧೪ ॥ ಧೂಮ್ರಾ ದಿಶಃ ಪರಿಧಯಃ ಕಂಪತೇ ಭೂ ಸ್ಸಹಾದ್ರಿಭಿಃ ।
ನಿರ್ಘಾತಶ್ಚ ಮಹಾಂಸ್ತಾತ ಸಾಕಂಚ ಸ್ತನಯಿತ್ನುಭಿಃ ॥ ೧೫ ॥ ವಾಯು
ರ್ವಾತಿ ಖರಸ್ಪರ್ಶೋ ರಜಸಾ ವಿಸೃಜಂ ಸ್ತಮಃ । ಅಸೃ ಗ್ವರ್ಷಂತಿ ಜಲ
ದಾ ಬೀಭತ್ಸಮಿವ ಸರ್ವತಃ ॥ ೧೬ ॥ ಸೂರ್ಯಂ ಹತಪ್ರಭಂ ಪಶ್ಯ ಗ್ರಹ
ಮರ್ದಂ ಮಿಥೋ ದಿವಿ । ಸಸಂಕುಲೈ ರ್ಭೂತಗಣೈ ರ್ಜ್ವಲಿತೇ ಇವ

ದಕ್ಷಿಣಂ-ಪ್ರದಕ್ಷಿಣವನ್ನು, ಕುರ್ವಂತಿ-ಮಾಡುತ್ತವೆ, ಹೇಪುರುಷವ್ಯಾಘ್ರ-ಎಲೈಶೂರನೆ ! ಮಮ-ನನ್ನ ವಾಹಾಂಶ್ಚ-ಕುದುರೆಮೊದಲಾದ ವಾಹನಗಳನ್ನೂ, ರುದತಃ-ಅಳುತ್ತಿರುವಂತೆ, ಲಕ್ಷಯೇ-ನೋಡುತ್ತೇನೆ,॥ ಮೃತ್ಯುದೂತಃ-ಮರಣವನ್ನು ಸೂಚಿಸುವ, ಅಯಂಕಪೋತಃ-ಈ ಪಾರಿವಾಳವು, ಅಥವಾ ಅಗ್ನಿಪಕ್ಷಿಯು ಉಲೂಕಶ್ಚ-ಗೂಗೆಯು. ಮನಃ-ಮನಸ್ಸನ್ನು, ಕಂಪಯನ್-ಅಲ್ಲಾಡಿಸುತ್ತಾ, ಪ್ರತ್ಯುಲೂಕಶ್ಚ-ಎದುರು ಗೂಗೆಯು, ಅಥವಾ ಗೂಗೆಗೆ ಶತ್ರುವಾದ ಕಾಗೆಯು ಇವು, ಕುಹ್ವಾನೈಃ ವಿಕಾರಧ್ವನಿಗಳಿಂದ, ವಿಶ್ವಂ-ಪ್ರಪಂಚವನ್ನು, ಶೂನ್ಯಂ-ಶೂನ್ಯವನ್ನಾಗಿ, ಕರ್ತುಂ-ಮಾಡುವುದಕ್ಕೆ, ಇಚ್ಛತಃ-ಬಯಸುತ್ತವೆ ॥೧೪॥ ಧೂಮ್ರಾಃ-ಧೂಸರವರ್ಣವುಳ್ಳವುಗಳಾಗಿ, ದಿಶಃ-ದಿಕ್ಕುಗಳು, ಪರಿಧಯಃ-ಸುತ್ತು ಬಳಸುತ್ತಿವೆ, ಭೂಃ-ಭೂಮಿಯು, ಅದ್ರಿಭಿಸ್ಸಹ-ಬೆಟ್ಟಗಳೊಡನೆ, ಕಂಪತೆ-ಚಲಿಸುತ್ತಿದೆ, ಹೇತಾತ-ಅಯ್ಯಾಭೀಮನೆ! ಸ್ತನಯಿತ್ನುಭಿಸ್ಸಾಕಂ-ಗುಡುಗುಗಳೊಡನೆ, ಮಹಾನ್-ಭಯಂಕರವಾದ, ನಿರ್ಘಾತಶ್ಚ-ಮೋಡಗಳಿಲ್ಲದ ಸಿಡಿಲೂ ಬೀಳುತ್ತಿರುವುದು ॥೧೫॥ ಖರಸ್ಪರ್ಶಃ-ಕಠಿನವಾದ ಸ್ಪರ್ಶವುಳ್ಳ, ವಾಯುಃ-ಗಾಳಿಯು, ರಜಸಾ-ಧೂಳಿನಿಂದ, ತಮಃ ಕತ್ತಲೆಯನ್ನು, ವಿಸೃಜನ್-ಕರೆಯುತ್ತಾ, ವಾತಿ-ಬೀಸುತ್ತಿದೆ, ಜಲದಾಃ- ಮೇಘಗಳು, ಬೀಭತ್ಸಮಿವ-ಭಯವನ್ನುಂಟುಮಾಡುವಂತೆ ಸರ್ವತಃ-ಎಲ್ಲೆಲ್ಲಿಯೂ, ಅಸೃಕ್-ರಕ್ತವನ್ನು, ವರ್ಷಂತಿ-ಸುರಿಸುತ್ತಿವೆ, ॥೧೬॥ ಹತಪ್ರಭಂ-ಕಾಂತಿಗೆಟ್ಟ, ಸೂರ್ಯಂ-ಸೂರ್ಯನನ್ನು, ದಿವಿ-ಅಂತರಿಕ್ಷದಲ್ಲಿ, ಮಿಥಃ-ಪರಸ್ಪರವಾಗಿ, ಗ್ರಹಮ

ಸುವುವು. ಅಯೋಗ್ಯಗಳಾದ ಕತ್ತೆ, ಕೋಣ, ಮೊದಲಾದುವು ನನ್ನನ್ನು ಪ್ರದಕ್ಷಿಣವಾಗಿಬಳಸುವುವು. ನನ್ನ ಆನೆ ಕುದುರೆ ಮೊದಲಾದ ವಾಹನಗಳೆಲ್ಲಾ ಅಳುತ್ತಿರುವಂತೆ ಕಾಣುವುವು॥೧೩॥ ಇಷ್ಟೇ ಅಲ್ಲದೆ ಮರಣಸೂಚಕವಾದ ಈ ಬೆಂಕಿಯನ್ನು ನುಂಗುವ ಪಾರಿವಾಳವು, ಗೂಗೆಯು, ಅದಕ್ಕೆ ವೈರಿಯಾದ ಕಾಗೆಯು, ಇವುಗಳು ಜಗತ್ತೇನಾಶವನ್ನು ಪಡೆಯುವಂತೆ ಸೂಚಿಸುತ್ತಾ ಭಯಂಕರಗಳಾದ ಹೀನಧ್ವನಿಗಳಿಂದ ಕೂಗುತ್ತಿರುವುವು ॥೧೪॥ ದಿಕ್ಕುಗಳೆಲ್ಲವೂ ಹೊಗೆಯು ಮುತ್ತಿದಂತೆ ಧೂಮ್ರಗಳಾಗಿ ಲೋಕವನ್ನು ಬಳಸುತ್ತಿರುವುವು. ಪರ್ವತಸಹಿತವಾಗಿ ಭೂಮಿಯು ನಡುಗುತ್ತಿರುವುದು, ಮೋಡಗಳೇ ಇಲ್ಲದಂತೆ ಗುಡುಗುಗಳು, ಮಿಂಚುಗಳುಂಟಾಗಿ ಸಿಡಿಲುಗಳು ಬೀಳುತ್ತಿರುವುವು ॥೧೫॥ ಗಾಳಿಯು ಧೂಳಿಯನ್ನು ಹರಡಿ ಕತ್ತಲೆಯನ್ನು ಕವಿಯಿಸುತ್ತಾ ಬೆಚ್ಚನೆ ಬೀಸುತ್ತಿರುವುದು, ಎಲ್ಲಿ ನೋಡಿದರೂ, ಮೋಡಗಳು ಭಯಂಕರವಾಗಿ ರಕ್ತವನ್ನು ಮಳೆಗರೆಯುತ್ತಿರುವುವು॥೧೬॥

‡ ಪಿ. ಪಾ-ತಾಗ್ನ್ಯ-ಅಗ್ನಿಪಕ್ಷಿಯು ಬೆಂಕಿಯಲ್ಲಿ ಕಾಲಿಡುವುದು. * ಹುಂಕಾರೈರಿತಿವಾ

ರೋದಸೀ ||೧೭|| ನದ್ಯೋ ನದಾಶ್ಚ ಕ್ಷುಭಿತಾ ಸರಾಂಸಿಚ ಮನಾಂಸಿಚ। ನ ಜ್ವಲತ್ಯಗ್ನಿ ರಾಜ್ಯೇನ ಕಾಲೋಯಂ ಕಿಂವಿಧಾಸ್ಯತಿ ||೧೮|| ನಪಿಬಂತಿ ಸ್ತನಂ ವತ್ಸಾ ನದುಹ್ಯಂತಿಚ ಮಾತರಃ । ರುದಂತ್ಯಶ್ರುಮುಖಾ ಗಾವೋ ನಹೃಷ್ಯಂತ್ಯೃಷಭಾ ವ್ರಜೇ ||೧೯|| ದೈವತಾನಿ ರುದಂತೀವ ಸ್ವಿದ್ಯಂತಿ ಪ್ರಚಲಂತಿಚ । ಇಮೇ ಜನಪದಾ ಗ್ರಾಮಾ ಪುರೋದ್ಯಾನಾಕರಾಶ್ರಯಾಃ। ಭ್ರಷ್ಟಶ್ರಿಯೋ ನಿರಾನಂದಾಃ ಕಿಮಘಂ ದರ್ಶಯಂತಿ ನಃ || ೨೦ || ಮನ್ಯ ಏತೈ ರ್ಮಹೋತ್ಪಾತೈ ರ್ನೂನಂ ಭಗವತಃ ಪದೈಃ । ಅನನ್ಯ ಪುರುಷಶ್ರೀಭಿ

ರ್ದಂ-ಗ್ರಹಗಳ ಕಲಹವನ್ನು, ಸುಸಂಕುಲೈಃ-ಕೇದಿರುವ, ಭೂತಗಣೈಃ-ಪಿಶಾಚಗಳ ಸಮೂಹದಿಂದ, ಜ್ವಲಿತೇ ಇವ-ಉರಿವಂತಿರುವ, ರೋದಸೀ-ಭೂಮ್ಯಂತರಿಕ್ಷಗಳನ್ನೂ, ಪಶ್ಯ-ನೋಡು ||೧೭|| ನದ್ಯಃ-ಹೆಣ್ಣುನದಿಗಳು ನದಾಶ್ಚ-ಗಂಡುನದಿಗಳು, ಸರಾಂಸಿ-ಸರೋವರಗಳು, ಮನಾಂಸಿಚ-ಮನಸ್ಸುಗಳೂ ಕೂಡಾ, ಕ್ಷುಭಿತಾಃ-ಕದಡಲ್ಪಟ್ಟವೆ, ಅಗ್ನಿಃ-ಅಗ್ನಿಯು, ಆಜ್ಯೇನ-ತುಪ್ಪದಿಂದ, ನಜ್ವಲತಿ-ಉರಿಯುವದಿಲ್ಲ, ಅಯಂಕಾಲಃ-ಈ ಕಾಲವು, ಕಿಂ-ಏನನ್ನು, ವಿಧಾಸ್ಯತಿ-ಮಾಡುವುದೋ? ||೧೮|| ವತ್ಸಾಃ-ಕರುಗಳು, ಸ್ತನಂ-ಮೊಲೆಯನ್ನು, ನಪಿಬಂತಿ-ಕುಡಿಯುವದಿಲ್ಲ. ಮಾತರಃ-ಆಕಳುಗಳು, ನದುಹ್ಯಂತಿಚ-ಹಾಲನ್ನು ಕರೆಯುವುದಿಲ್ಲ, ಗಾವಃ-ಗೋವುಗಳು, ಅಶ್ರುಮುಖಾಃ-ಕಣ್ಣೀರು ಸುರಿಸುತ್ತಾ, ರುದಂತಿ-ಅಳುತ್ತಿವೆ, ಋಷಭಾಃ-ಗೂಳಿಗಳು, ವ್ರಜೇ-ದೊಡ್ಡಿಯಲ್ಲಿ, ನಹೃಷ್ಯಂತಿ-ಸಂತೋಷಿಸುವುದಿಲ್ಲ ||೧೯|| ದೈವತಾನಿ-ದೇವತಾವಿಗ್ರಹಗಳು, ರುದಂತೀವ-ಅಳುವಂತಿವೆ, ಸ್ವಿದ್ಯಂತಿ-ಬೆವರನ್ನು ಸುರಿಸುತ್ತಿವೆ, ಪ್ರಚಲಂತಿಚ-ಹಾರಿಬೀಳುವಂತಿವೆ, ಪುರೋ...ಯಾಃ, ಪುರ-ಪಟ್ಟಣಗಳು, ಉದ್ಯಾನ-ತೋಟಗಳು, ಆಕರ-ಗಣಿಗಳು, ಆಶ್ರಯಾಃ-ಆಧಾರವಾಗುಳ್ಳ, ಇಮೇ-ಈ, ಜನಪದಾಃ-ದೇಶಗಳು, ಭ್ರಷ್ಟಶ್ರಿಯಃ-ಭಾಗ್ಯಹೀನಗಳಾಗಿಯೂ, ನಿರಾನಂದಾಃ-ಸಂತೋಷರಹಿತಗಳಾಗಿಯೂ ಇವೆ, ನಃ-ನಮಗೆ, ಕಿಂ-ಏನು, ಅಘಂ-ದುಃಖವನ್ನು, ದರ್ಶಯಂತಿ-ತೋರಿಸುವುವೋ ||೨೦|| ಏತೈಃ-ಈ, ಮಹೋತ್ಪಾತೈಃ-

ಇದೋ ನೋಡು, ಸೂರ್ಯನು ಕಾಂತಿ ಹೀನನಾಗಿರುವನು. ಶುಕ್ರಾಂಗಾರಕಾದಿ ಗ್ರಹಗಳು ಅಂತರಿಕ್ಷದಲ್ಲಿ ಪರಸ್ಪರವಾಗಿ ಜಗಳವಾಡುತ್ತಿರುವುವು. ಭೂತಪ್ರೇತ ಪಿಶಾಚಗಳಿಂದ ತುಂಬಿ ಭೂವ್ಯಾಕಾಶಗಳು ಉರಿಯುತ್ತಿರುವಂತೆ ಕಾಣುವುವು ||೧೭|| ಹೆಣ್ಣುಗಂಡು ನದಿಗಳು ಸರೋವರಗಳು, ಜನರ ಮನಸ್ಸುಗಳೂ ಸಹ ಕಲಕಲ್ಪಟ್ಟಿರುವುವು, ಆಜ್ಯಧಾರೆಯನ್ನೆರದರೂ ಆಹವನೀಯಾದಿ ಶ್ರೌತಾಗ್ನಿಗಳುರಿಯುವುದಿಲ್ಲ. ಈ ವಿಪರೀತಕಾಲವು ನಮಗೇನು ದುಃಖವನ್ನುಂಟುಮಾಡುವುದೋ ಕಾಣೆನು ||೧೮|| ಮತ್ತು ಎಳಗರುಗಳು ತಾಯಿ ಮೊಲೆಯನ್ನು ಕುಡಿಯುವುದಿಲ್ಲ. ಆಕಳುಗಳು ಕರುಗಳಿಗೆ ಹಾಲನ್ನು ಕೊಡುವುದಿಲ್ಲ. ಗೋವುಗಳೆಲ್ಲಾ ಕಣ್ಣೀರು ಸುರಿಸುತ್ತಾ ಅಳುತ್ತಿರುವುವು. ಗೂಳಿಗಳು ದನದ ಮಂದೆಯಲ್ಲಿದ್ದರೂ ಸಂತೋಷಿಸುವುದಿಲ್ಲ ||೧೯||ದೇವತಾ ಪ್ರತಿಮೆಗಳು ರೋದಿಸುತ್ತಿವೆ. ಬೆವರು ನೀರನ್ನು ಸುರಿಸುತ್ತಿವೆ. ಹಾರಿಹಾರಿ ಬೀಳುತ್ತಿವೆ. ಪಟ್ಟಣಗಳಿಂದಲೂ, ಉದ್ಯಾನಗಳಿಂದಲೂ, ಗಣಿಗಳಿಂದಲೂ ರಮಣೀಯಗಳಾದ ಈದೇಶಗಳು, ಗ್ರಾಮಗಳೂಸಹ ಭಾಗ್ಯಹೀನಗಳಾಗಿಯೂ, ದುಃಖಮಯಗಳಾಗಿಯೂ ಕಾಣುತ್ತಿವೆ. ಆದುದರಿಂದ ನಮಗೇನು ದುಃಖಪ್ರಾಪ್ತಿಯಾಗುವುದೋ ಅರಿಯೆನು ||೨೦|| ಈರೀತಿಯಾಗಿ ಉತ್ಪಾತಗಳುಂಟಾ

ಹೀನಾ ಭೂಃ ಹತಸೌಭಗಾ ॥ ೨೧ ॥ ಇತಿ ಚಿಂತಯತಸ್ತಸ್ಯ ದೃಷ್ಟಾರಿಷ್ಟೇನ ಚೇತಸಾ । ರಾಜ್ಞಃ ಪ್ರತ್ಯಾಗಮದ್ಬ್ರಹ್ಮನ್ ಯದುಪುರ್ಯಾಃ ಕಪಿಧ್ವಜಃ ॥ ೨೨ ॥ ತಂ ಪಾದಯೋರ್ನಿಪತಿತಮಯಥಾಪೂರ್ವಮಾತುರಂ । ಅಧೋವದನಮಬ್ಬಿಂದೂನ್ ಸೃಜಂತಂ ನಯನಾಬ್ಜಯೋಃ ॥ ೨೩ ॥ ವಿಲೋಕ್ಯೋದ್ವಿಗ್ನಹೃದಯೋ ವಿಚ್ಛಾಯಮನುಜಂ ನೃಪಃ । ಪೃಚ್ಛತಿಸ್ಮ ಸುಹೃನ್ಮಧ್ಯೇ ಸಂಸ್ಮರನ್ನಾರದೇರಿತಂ ॥ ೨೪ ॥ ಯುಧಿಷ್ಠಿರಃ ॥ ಕಚ್ಚಿದಾನರ್ತಪುರ್ಯಾಂ ನಸ್ಸ್ವಜನಾಸ್ಸುಖಮಾಸತೇ । ಮಧುಭೋಜದಶಾರ್ಹಾರ್ಹಾಃ

ಚಪಲಗಳಾದ ಅಪಶಕುನಗಳಿಂದ, ಅನನ್ಯ...ಭೀಃ, ಅನನ್ಯಪುರುಷ - ಅನ್ಯಪುರುಷರಿಗಿಲ್ಲದಿರುವ, ಶ್ರೀಭಿಃ-ದಿವ್ಯಲಕ್ಷಣಗಳುಳ್ಳ, ಭಗವತಃ-ಭಗವಂತನ, ಪದ್ಭಿಃ-ಪಾದಗಳಿಂದ, ಹತಸೌಭಗಾ-ಭಾಗ್ಯರಹಿತಳಾದ, ಭೂಃ-ಭೂಮಿಯು, ಹೀನಾ-ಬಿಡಲ್ಪಟ್ಟಳು, ನೂನಂ-ದಿಟವು ಎಂದು, ಮನ್ಯೇ-ತಿಳಿಯುತ್ತೇನೆ ॥೨೧॥ ಇತಿ-ಹೀಗೆ ತಸ್ಯರಾಜ್ಞಃ-ಆ ಧರ್ಮರಾಜನು, ದೃಷ್ಟಾರಿಷ್ಟೇನ- ಉತ್ಪಾತಗಳನ್ನು ಚಿಂತಿಸುತ್ತಿರುವ, ಚೇತಸಾ-ಮನಸ್ಸಿನಿಂದ, ಚಿಂತಯತಃ-ಯೋಚಿಸುತ್ತಿರಲು,ಹೇಬ್ರಹ್ಮನ್-ಎಲೈ ಶೌನಕನೆ! ಕಪಿಧ್ವಜಃ-ಕಪಿಯೇಧ್ವಜದಲ್ಲುಳ್ಳ ಅರ್ಜುನನು, ಯದುಪುರ್ಯಾಃ-ದ್ವಾರಕೆಯಿಂದ, ಪ್ರತ್ಯಾಗಮತ್-ಹಿಂದಕ್ಕೆ ಬಂದನು ॥೨೨॥ ನೃಪಃ-ಧರ್ಮರಾಜನು, ಅಯಥಾಪೂರ್ವಂ-ಹೊಸಪರಿಯಾಗಿ, ಪಾದಯೋಃ-ಪಾದಗಳಲ್ಲಿ, ನಿಪತಿತಂ-ಬಿದ್ದು, ಆತುರಂ-ಭ್ರಾಂತನಾಗಿರುವ, ಅಧೋವದನಂ-ತಲೆಯನ್ನು ಬಾಗಿಸಿರುವ, ನಯನಾಬ್ಜಯೋಃ-ಕಮಲದಂತಿರುವ ಕಣ್ಣುಗಳಿಂದ, ಅಬ್ಬಿಂದೂನ್-ನೀರುಹನಿಗಳನ್ನು, ಸೃಜತಂ-ಸುರಿಸುತ್ತಿರುವ, ವಿಚ್ಛಾಯಂ-ಬಣ್ಣಗೆಟ್ಟಿರುವ, ಅನುಜಂ-ತಮ್ಮನನ್ನು, ವಿಲೋಕ್ಯ-ಕಂಡು, ಉದ್ವಿಗ್ನಹೃದಯಃ-ಬಳಲಿದ ಮನಸ್ಸುಳ್ಳವನಾಗಿ, ನಾರದೇರಿತಂ-ನಾರದನ ಮಾತನ್ನು, ಸ್ಮರನ್-ಸರಿಸುತ್ತಾ, ಸುಹೃನ್ಮಧ್ಯೇ-ಸ್ನೇಹಿತರ ಮಧ್ಯದಲ್ಲಿ, ಪೃಚ್ಛತಿಸ್ಮ-ಪ್ರಶ್ನೆಮಾಡಿದನು, ॥೨೩-೨೪॥ ಆನರ್ತಪುರ್ಯಾಂ-ದ್ವಾರಕೆಯಲ್ಲಿ, ಮಧುಭೋಜ ದಶಾರ್ಹಾರ್ಹಾಃ-ಯಾದವರು, ಭೋಜರು, ದಶಾರ್ಹರು, ಅರ್ಹರು, ಸಾತ್ವತಾಂಧಕವೃಷ್ಣಯಃ-ಸಾತ್ವತರು, ಅಂಧಕರು, ವೃಷ್ಣಿ

ಗುತ್ತಿರುವುದನ್ನು ನೋಡಿದರೆ, ಭೂಮಂಡಲವು,ಯಾವಪುರುಷರಲ್ಲಿಯೂ ಇಲ್ಲದ,ವಜ್ರಾಂಕುಶಾದಿ ಚಿಹ್ನೆಗಳಿಂದ ರಮಣೀಯಗಳಾದ ಶ್ರೀಕೃಷ್ಣ ಪರಮಾತ್ಮನ ಪಾದಕಮಲಗಳ ವಿಯೋಗವನ್ನು ಪಡೆದು ಭಾಗ್ಯಹೀನವಾಯಿತೆಂದೂಹಿಸುವೆನು॥೨೧॥ ಎಂದು ಧರ್ಮರಾಯನುಭೀಮಸೇನನಿಗೆ ಹೇಳುತ್ತಾ,ದುಶ್ಶಕುನಗಳಿಂದ ಕಳವಳಿಸುತ್ತಾ, ಖಿನ್ನನಾಗಿರಲು, ಆ ಸಮಯಕ್ಕೆ ಸರಿಯಾಗಿಕಪಿಧ್ವಜನಾದ ಅರ್ಜುನನು ದ್ವಾರಕಾಪುರದಿಂದ ಹಿಂದಿರುಗಿಬಂದನು ॥೨೨॥ ಬಳಿಕ ಧರ್ಮರಾಜನು, ಎಂದಿನಂತಿಲ್ಲದೆ, ಬಳಲಿ ಕಂಗೆಟ್ಟು ಬಡವಾಗಿ, ತಾವರೆಯೆಸಳುಗಳಂತಿರುವ ಕಣ್ಣುಗಳಿಂದ ಕಂಬನಿಗಳನ್ನುರುಳಿಸುತ್ತಾ ಕಳೆಗುಂದಿ ತಲೆಯನ್ನು ಬಾಗಿಸಿ, ಕಾಲಿಗೆರಗುತ್ತಿರುವ ಫಲುಗುಣನನ್ನು ಕಂಡು ॥೨೩॥ ಮನಸ್ಸು ತಳಮಳಿಸುತ್ತಿರಲು, ಸರ್ವಜ್ಞನಾದ ನಾರದ ಮುನಿಯ ನುಡಿಗಳನ್ನು ನೆನದು, ಅಲ್ಲಿ ಸೆರದಿರುವ ಮಿತ್ರಮಂಡಲಿಯ ಮಧ್ಯದಲ್ಲಿ, ಕೇಳತೊಡಗಿದನೆಂತೆಂದರೆ ॥೨೪॥ ಎಲೈ ಅರ್ಜುನನೆ ? ದ್ವಾರಕಾನಗರದಲ್ಲಿ ವಾಸಿಸುತ್ತಿರುವ ಯಾದವರು, ಭೋಜರು, ದಶಾರ್ಹರು,ಅರ್ಹರು, ಸಾತ್ವತರು, ಅಂಧಕರು, ವೃಷ್ಣಿಗಳು ಇವರು ಮೊದಲಾದ ನಮ್ಮ ನೆಂಟರೆಲ್ಲರೂ ಕ್ಷೇಮ

ಸಾತ್ವತಾಂಧಕವೃಷ್ಣಯಃ ॥ ೨೫ ॥ ಶೂರೋ ಮಾತಾಮಹಃ ಕಚ್ಚಿತ್ಸ್ವ
ಸ್ತ್ಯಾಸ್ತೇ ಪಾರ್ಥ ಮಾರಿಷಃ । ಮಾತುಲ ‡ ಸ್ಸಾನುಜಃ ಕಚ್ಚಿತ್ಕುಶಲ್ಯಾ
ನಕದುಂದುಭಿಃ ॥೨೬॥ ಸಪ್ತ † ಸ್ವಸಾರ ಸ್ತತ್ಪತ್ನ್ಯೋ ಮಾತುಲಾನ್ಯಸ್ಸಹಾ
ತ್ಮಜಾಃ । ಆಸತೇ ಸಸ್ನುಷಾಃ ಕ್ಷೇಮಂ * ದೇವಕೀಪ್ರಮುಖಾಸ್ಸ್ವಯಂ
॥೨೭॥ ಕಚ್ಚಿ ದ್ರಾಜಾಹುಕೋ ಜೀವತ್ಯಸತ್ಪುತ್ರೋಽಸ್ಯ ಚಾನುಜಃ ।
ಹೃಧಿಕಸ್ಯ ಸುತೋ ಕ್ರೂರೋ ಜಯಂತ ಗದಸಾರಣಾಃ ॥ ೨೮ ॥ ಆಸತೇ
ಕುಶಲಂ ಕಚ್ಚಿ ದ್ಯೇಚ ಸತ್ಯಜಿದಾದಯಃ । ಕಚ್ಚಿದಾಸ್ತೇ ಸುಖೀ

ಗಳು, ಈ. ಸ್ವಜನಾಃ-ನೆಂಟರು, ಸುಖಂ-ಸುಖವಾಗಿ, ಆಸತೇಕಚ್ಚಿತ್-ಇರುವರೆ? ॥೨೫॥ ಹೇಪಾರ್ಥ-ಎಲೈಅರ್ಜುನನೆ! ಮಾರಿಷಃ-ಪೂಜ್ಯನಾದ, ಮಾತಾಮಹಃ-ತಾಯಿಯತಂದೆಯಾದ, ಶೂರಃ-ಶೂರರಾಜನು, ಸ್ವಸ್ತಿ-ನೆಮ್ಮದಿಯಾಗಿ, ಆಸ್ತೇಕಚ್ಚಿತ್-ಇರುವನೆ? ಮಾತುಲಃ-ಸೋದರಮಾವನಾದ, ಆನಕದುಂದುಭಿಃ-ವಸುದೇವನು, ಸಾನುಜಃ-ತಮ್ಮಂದಿರಿಂದಕೂಡಿ, ಕುಶಲೀಕಚ್ಚಿತ್-ಕ್ಷೇಮದಿಂದಿರುವನೆ? ॥೨೬॥ ಸಪ್ತ-ಏಳುಮಂದಿ, ಸ್ವಸಾರಃ-ಉಗ್ರಸೇನನ ತಂಗಿಯರು, ತತ್ಪತ್ನ್ಯಃ-ಆವಸುದೇವನಪತ್ನಿಯರಾದ, ಮಾತುಲಾನ್ಯಃ-ಸೋದರತ್ತೆಯರಾದ, ದೇವಕೀಪ್ರಮುಖಾಃ-ದೇವಕಿ ಮೊದಲಾದವರು, ಸಹಾತ್ಮಜಾಃ-ಮಕ್ಕಳಿಂದೊಡಗೂಡಿ, ಸಸ್ನುಷಾಃ-ಸೊಸೆಯರೊಡನೆ, ಸ್ವಯಂ-ತಾವು, ಕ್ಷೇಮಂ-ನೆಮ್ಮದಿಯಾಗಿ, ಆಸತೇ-ಇರುವರೆ? ॥೨೭॥ ಅಸತ್ಪುತ್ರಃ-ದುಷ್ಪುತ್ರರನ್ನುಪಡೆದ, ಆಹುಕಃ-ಉಗ್ರಸೇನನೆಂಬ, ರಾಜಾ-ದೊರೆಯು, ಕಚ್ಚಿಜ್ಜೀವತಿ-ಬದುಕಿರುವನೆ? ಅಸ್ಯ-ಇವನ, ಅನುಜಶ್ಚ-ತಮ್ಮನಾದದೇವಕನೂ, ಕಚ್ಚಿಜ್ಜೀವತಿ-ಬದುಕಿರುವನೆ? ಹೃಧಿಕಸ್ಯ-ಹೃಧಿಕನ, ಸುತಃ-ಮಗನಾದ ಕೃತವರ್ಮನು, ಅಕ್ರೂರಃ-ಅಕ್ರೂರನು, ಜಯಂತಗದ ಸಾರಣಾಃ-ಜಯಂತ, ಗದ, ಸಾರಣ ಇವರು, ಸತ್ಯಜಿದಾದಯಃ-ಸತ್ಯಜಿತ್ತೇ ಮೊದಲಾದ, ಯೇಚ-ಯಾರೋ, ಶ್ರೀಕೃಷ್ಣನ ಸಹೋದರರು. ಕುಶಲಂ-ಕ್ಷೇಮವಾಗಿ, ಆಸತೇಕಚ್ಚಿತ್-ಇರುವರೆ? ಭಗವಾನ್-ಭಗವಂತನಾದ, ಸಾತ್ವತಾಂ-ಯಾದವರಿಗೆ, ಪತಿಃ-ಒಡೆಯನಾದ, ರಾಮಃ-ಬಲರಾಮನು, ಸುಖೀ-ಸುಖವಾಗಿ, ಆಸ್ತೇಕಚ್ಚಿತ್-ಇರುವನೆ? ॥೨೮-೨೯॥

ವಾಗಿರುವರೇ ? ॥೨೫॥ ಅಯ್ಯಾ ಧನಂಜಯನೆ ? ಪೂಜ್ಯನಾಗಿಯೂ ತಾತನಾಗಿಯೂ ಇರುವ ಶೂರರಾಜನು ಕುಶಲದಿಂದಿರುವನೆ? ಸೋದರಮಾವನಾದ ವಸುದೇವನೂ ಆತನ ತಮ್ಮಂದಿರಾದ ದೇವಭಾಗಾದಿಗಳು ಕ್ಷೇಮವೆ ? ॥೨೬॥ ಉಗ್ರಸೇನನ ತಂಗಿಯರೇಳು ಮಂದಿಯು ಕ್ಷೇಮವೆ ? ವಸುದೇವನಿಗೆ ಪತ್ನಿಯರೂ, ನಮಗೆ ಸೋದರತ್ತೆಯರೂ ಆದ ದೇವಕೀ ದೇವಿ ಮೊದಲಾದವರು ಕ್ಷೇಮದಿಂದಿರುವರೆ ? ಅವರ ಮಕ್ಕಳು, ಸೊಸೆಯರೂ ನೆಮ್ಮದಿಯಾಗಿರುವರೆ ? ॥೨೭॥ ದುಷ್ಪುತ್ರನನ್ನು ಹೆತ್ತ ಅಥವಾ ಪುತ್ರಹೀನನಾದ ಉಗ್ರಸೇನರಾಜನು ಬದುಕಿ¯ುವನೆ ? ಆತನ ತಮ್ಮನಾದ ದೇವಕನು ಜೀವಿಸಿರುವನೆ ? ಹೃಧಿಕನ ಮಗನಾದ ಕೃತವರ್ಮನು, ಅಕ್ರೂರನು, ಶ್ರೀ ಕೃಷ್ಣನ ಸಹೋದರರಾದ ಜಯಂತ, ಗದ, ಸಾರಣ, ಸತ್ಯಜಿತ್ತು ಮೊದಲಾದವರು ಸುಖದಿಂದಿರುವರೆ ? ಯದು

‡ ದೇವಭಾಗ. ದೇವಶ್ರವ, ಆನಕ, ಸಂಜಯ, ಶಾಮಕ, ಕಂಕ, ಸಮಿಕ, ವತ್ಸರ, ವೃಕ, ಇವರೊಂಬತ್ತುಮಂದಿಯು ವಸುದೇವನ ತಮ್ಮಂದಿರು. † ಏಳುಮಂದಿಯು, ಉಗ್ರಸೇನನ ಸಹೋದರಿಯರೆಂದು ವೀರರಾಘವೀಯದಲ್ಲಿಯೂ, ವಸುದೇವನ ಸೋದರಿಯರೆಂದು ವಿಜಯಧ್ವಜದಲ್ಲಿಯೂ ಟೀಕಿಸಲ್ಪಟ್ಟಿದೆ. * ಇವರಹೆಸರುಗಳನ್ನು ೧೫೦ನೇ ಪುಟದ ಟಿಪ್ಪಣಿಯಲ್ಲಿ ನೋಡಿ.

ರಾಮೋ ಭಗವಾನ್ ಸಾತ್ವತಾಂ ಪತಿಃ ॥ ೨೯ ॥ ಪ್ರದ್ಯುಮ್ನ ಸ್ಸರ್ವವೃ
ಷ್ಣೀನಾಂ ಸುಖಮಾಸ್ತೇ ಮಹಾರಥಃ । * ಯೋ ಗಂಭೀರರಯೋ ಯು
ದ್ಧೇ ವರ್ಧತೇ ಭಗವಾನುತ ॥ ೩೦ ॥ ಸುಷೇಣ ಶ್ಚಾರುಧೇಷ್ಣಶ್ಚ ಸಾಂ
ಬೋ ಜಾಂಬವತೀಸುತಃ । ಅನ್ಯೇಚ ಕಾರ್ಷ್ಣಿಪ್ರವರಾ ಸ್ಸಪುತ್ರಾ ಋಷ
ಭಾದಯಃ ॥೩೧॥ ತಥೈವಾನುಚರಾ ಶ್ಶೌರೇ ಶ್ಶ್ರುತದೇವೋದ್ಧವಾದಯಃ।
ಸುನಂದ ನಂದ ಶೀರ್ಷಣ್ಯಾಃ ಯೇಚಾನ್ಯೇ ಸಾತ್ವತರ್ಷಭಾಃ ॥ ೩೨ ॥
ಅಪಿ ಸ್ವಸ್ತ್ಯಾಸತೇ ಸರ್ವೇ ರಾಮಕೃಷ್ಣಭುಜಾಶ್ರಯಾಃ। ಅಪಿ ಸ್ಮರಂತಿ
ಕುಶಲ ಮಸ್ಮಾಕಂ ಬದ್ಧಸೌಹೃದಾಃ ॥ ೩೩ ॥ ಭಗವಾನಪಿ ಗೋವಿಂ

ಯಃ-ಯಾವನು, ಯುದ್ಧೇ-ಯುದ್ಧದಲ್ಲಿ, ಗಂಭೀರರಯಃ-ಅಧಿಕವೇಗವುಳ್ಳವನೋ, ಸರ್ವವೃಷ್ಣೀನಾಂ-ಯಾದವರೆಲ್ಲರಲ್ಲಿಯೂ, ಮಹಾರಥಃ-ಮಹಾಶೂರನಾದ, ಭಗವಾನ್-ಮಹಾತ್ಮನಾದ, ಪ್ರದ್ಯುಮ್ನಃ-ಆ ಪ್ರದ್ಯುಮ್ನನು, ಸುಖಮಾಸ್ತೇಉತ-ಸುಖವಾಗಿರುವನೆ? ॥೩೦॥ ಸುಷೇಣಃ-ಸುಷೇಣನು, ಚಾರುಧೇಷ್ಣಶ್ಚ-ಚಾರುಧೇಷ್ಣನು, ಜಾಂಬವತೀಸುತಃ-ಜಾಂಬವತಿಯಮಗನಾದ, ಸಾಂಬಃ-ಸಾಂಬನು, ಕಾರ್ಷ್ಣಿಪ್ರವರಾಃ - ಕೃಷ್ಣನಪುತ್ರರಲ್ಲಿಮುಖ್ಯರಾದ, ಸಪುತ್ರಾಃ - ಮಕ್ಕಳಿಂದಕೂಡಿದ, ಋಷಭಾದಯಃ-ಋಷಭನೇಮೊದಲಾದ, ಅನ್ಯೇಚ-ಇತರರೂ, ಸುಖಮಾಸತೇಕಚ್ಚಿತ್-ನೆಮ್ಮದಿಯಾಗಿರುವರೆ ? ॥ ೩೧ ॥ ತಥೈವ-ಹಾಗೆಯೇ, ಶ್ರುತ...ಯಃ, ಶ್ರುತದೇವ, ಉದ್ಧವ, ಆದಯಃ-ಮೊದಲಾದ, ಶೌರೇಃ - ಕೃಷ್ಣನ, ಅನುಚರಾಃ-ಸೇವಕರು, ಸುನಂದ...ಣ್ಯಾಃ, ಸುನಂದ, ನಂದ, ಇವರೇ, ಶೀರ್ಷಣ್ಯಾಃ-ಮುಖ್ಯರಾಗಿರುವ, ಅನ್ಯೇ--ಇತರರಾದ, ಯೇಚ - ಯಾವ, ಸಾತ್ವತರ್ಷಭಾಃ - ಯಾದವಶ್ರೇಷ್ಠರುಂಟೋ ಅವರು ॥೩೨॥ ಸರ್ವೇ-ಎಲ್ಲರೂ, ರಾಮ...ಯಾಃ, ರಾಮ, ಕೃಷ್ಣ, ಇವರ, ಭುಜ - ಭುಜಗಳನ್ನು, ಆಶ್ರಯಾಃ-ಆಶ್ರಯಿಸಿದವರಾಗಿ, ಅಪಿಸ್ವಸ್ತ್ಯಾಸತೇ-ಕುಶಲವಾಗಿರುವರೆ ? ಬದ್ಧಸೌಹೃದಾಃ-ಸ್ನೇಹವುಳ್ಳವರಾಗಿ, ಅಸ್ಮಾಕಂ-ನಮ್ಮ, ಕುಶಲಂ-ಕ್ಷೇಮವನ್ನು, ಅಪಿಸ್ಮರಂತಿ-ನೆನೆಸುತ್ತಿರುವರೆ ? ॥ ೩೩ ॥

ತಿಲಕನೂ, ಭಗವಂತನೂ ಆಗಿರುವ ಬಲರಾಮನು ಕ್ಷೇಮದಿಂದಿರುವನೆ ? ॥ ೨೮-೨೯ ॥ ಯಾದವರೆಲ್ಲರಲ್ಲಿಯೂ ಮಹಾಶೂರನಾಗಿಯೂ, ಯುದ್ಧದಲ್ಲಿಮಹಾವೇಗವುಳ್ಳವನಾಗಿಯೂ ಇರುವಮಹಾತ್ಮನಾದ ಪ್ರದ್ಯುಮ್ನನು ನೆಮ್ಮದಿಯಾಗಿರುವನೆ ? ॥ ೩೦ ॥ ಶ್ರೀಕೃಷ್ಣನ ಪುತ್ರರಲ್ಲಿ ಪ್ರಮುಖರಾದ, ಸುಷೇಣ, ಚಾರುಧೇಷ್ಣ, ಸಾಂಬ, ಮೊದಲಾದವರು ತಂತಮ್ಮ ಪುತ್ರರೊಡನೆ ಕ್ಷೇಮವಾಗಿರುವರೆ ? ॥ ೩೧ ॥ ಶ್ರೀಕೃಷ್ಣಮೂರ್ತಿಗನುಚರರಾದ ಶ್ರುತದೇವ, ಉದ್ಧವ, ಮೊದಲಾದವರು ಕ್ಷೇಮದಿಂದಿರುವರೆ ? ಸುನಂದ, ನಂದ, ಮುಂತಾದ ಯಾದವಾಗ್ರೇಸರರು, ಇತರರಾದ ಯಾದವರು ಇವರೆಲ್ಲರೂ ಬಲರಾಮಕೃಷ್ಣರ ಭುಜಾಶ್ರಯದಿಂದ ಕ್ಷೇಮವಾಗಿರುವರೆ ? ಮೊದಲಿನಂತೆಯೇ ನಮ್ಮಲ್ಲಿಸ್ನೇಹವುಳ್ಳವರಾಗಿ ನಮ್ಮ ಯೋಗಕ್ಷೇಮಗಳನ್ನು ವಿಚಾರಿಸುತ್ತಿರುವರೆ ? ॥೩೨-೩೩॥ ಬ್ರಾಹ್ಮಣಪ್ರಿಯನೂ

* ಪಾ-ಗಂಭೀರ ರಯೋಽನಿರುದ್ಧೋ-ಯುದ್ಧದಲ್ಲಿ ವೇಗವುಳ್ಳ ಅನಿರುದ್ಧನು.

ದೋ ಬ್ರಹ್ಮಣ್ಯೋ ಭಕ್ತವತ್ಸಲಃ । ಕಚ್ಚಿತ್ಪುರೇ ಸುಧರ್ಮಾಯಾಂ ಸುಖ
ಮಾಸ್ತೇ ಸುಹೃದ್ವೃತಃ ॥ ೩೪ ॥ ಮಂಗಳಾಯಚ ಲೋಕಾನಾಂ ಕ್ಷೇಮಾ
ಯಚ ಭವಾಯಚ । ಆಸ್ತೇ ಯದುಕುಲಾಂಭೋಧಾ ವಾದ್ಯೋ ನಂತಸಖಃ
ಪುಮಾನ್ ॥ ೩೫ ॥ ಯದ್ಬಾಹು ದಂಡೈ ರ್ಗುಪ್ತಾಯಾಂ ಸ್ವಪುರ್ಯಾಂ
ಯದವೋ ರ್ಚಿತಾಃ । ಕ್ರೀಡಂತಿ ಪರಮಾನಂದಂ ಮಹಾಪೌರುಷಿಕಾ
ಇವ ॥ ೩೬ ॥ ಯತ್ಪಾದಶುಶ್ರೂಷಣ ಮುಖ್ಯಕರ್ಮಣಾ ಸತ್ಯಾದಯೋ
ದ್ವ್ಯಷ್ಟ ಸಹಸ್ರಯೋಷಿತಃ । ನಿರ್ಜಿತ್ಯ ಸಂಖ್ಯೇ ತ್ರಿದಶಾಂ ಸ್ತದಾಶಿಷೋ

ಬ್ರಹ್ಮಣ್ಯಃ-ಬ್ರಾಹ್ಮಣಪ್ರಿಯನೂ, ಭಕ್ತವತ್ಸಲಃ-ಭಕ್ತರಲ್ಲಿಪ್ರೀತಿಯುಳ್ಳವನೂ, ಭಗವಾನ್-ಷಡ್ಗುಣೈಶ್ವರ್ಯಸಂಪನ್ನನೂ ಆದ, ಗೋವಿಂದೋಪಿ-ಕೃಷ್ಣನೂ, ಪುರೇ-ದ್ವಾರಕೆಯಲ್ಲಿ, ಸುಧರ್ಮಾಯಾಂ-ಸಭೆಯಲ್ಲಿ, ಸುಹೃದ್ವೃತಃ-ಮಿತ್ರರೊಡಗೂಡಿ, ಸುಖಂ-ಸುಖವಾಗಿ, ಆಸ್ತೇಕಚ್ಚಿತ್-ಇರುವನೆ ? ॥ ೩೪ ॥ ಲೋಕಾನಾಂ ಲೋಕಗಳ, ಮಂಗಳಾಯ-ಕಲ್ಯಾಣಕ್ಕಾಗಿಯೂ, ಕ್ಷೇಮಾಯ-ಕ್ಷೇಮಕ್ಕಾಗಿಯೂ, ಭವಾಯಚ-ನೆಲೆಗಾಗಿಯೂ, ಯದು...ಧೌ, ಯದುಕುಲ-ಯಾದವಕುಲವೆಂಬ, ಅಂಭೋಧೌ - ಸಮುದ್ರದಲ್ಲಿ, ಆದ್ಯಃಪುಮಾನ್-ಪುರಾಣಪುರುಷನಾದ, ಅನಂತಸಖಃ-ಬಲರಾಮನಿಗೆ ಮಿತ್ರನಾದ ಕೃಷ್ಣನು, ಆಸ್ತೇಕಚ್ಚಿತ್-ಕುಶಲಿಯಾಗಿರುವನೆ ? ॥ ೩೫ ॥ ಯದ್ಬಾಹುದಂಡೈಃ - ಯಾರಭುಜದಂಡಗಳಿಂದ, ಗುಪ್ತಾಯಾಂ-ಕಾಪಾಡಲ್ಪಟ್ಟ, ಸ್ವಪುರ್ಯಾಂ-ದ್ವಾರಕೆಯಲ್ಲಿ, ಯದವಃ-ಯಾದವರು, ಅರ್ಚಿತಾಃ - ಪೂಜಿಸಲ್ಪಟ್ಟವರಾಗಿ, ಮಹಾಪೌರುಷಿಕಾಇವ-ವೈಕುಂಠಲೋಕದವರಂತೆ, ಪರಮಾನಂದಂ-ಸಂಪೂರ್ಣಾನಂದದಿಂದ, ಕ್ರೀಡಂತಿ ವಿಹರಿಸುತ್ತಿರುವರೋ ॥ ೩೬ ॥ ಯತ್ಪಾದ...ಣಾ, ಯತ್-ಯಾವಕೃಷ್ಣನ, ಪಾದ - ಪಾದಗಳ, ಶುಶ್ರೂಷಣ-ಸೇವೆಯೆಂಬ, ಮುಖ್ಯ-ಶ್ರೇಷ್ಠವಾದ, ಕರ್ಮಣಾ-ಕರ್ಮದಿಂದ, ಸತ್ಯಾದಯಃ - ಸತ್ಯಭಾಮೆಯೇಮೊದಲಾದ, ದ್ವ್ಯಷ್ಟ...ತಃ, ದ್ವಿ + ಅಷ್ಟ = ದ್ವ್ಯಷ್ಟ-ಹದಿನಾರು, ಸಹಸ್ರ-ಸಾವಿರ, ಯೋಷಿತಃ-ಸ್ತ್ರೀಯರು, ಸಂಖ್ಯೇ-ಯುದ್ಧದಲ್ಲಿ, ತ್ರಿದಶಾನ್-ದೇವತೆಗಳನ್ನು, ನಿರ್ಜಿತ್ಯ-ಗೆದ್ದು, ವಜ್ರಾ...ತಾಃ, ವಜ್ರಾಯುಧ-ವಜ್ರವೇ ಆಯುಧವಾಗುಳ್ಳ ಇಂದ್ರನೇ, ವಲ್ಲಭ - ಪತಿಯಾಗಿರುವ ಶಚೀದೇವಿಗೆ, ಉಚಿತಾಃ-

ವೇದಪ್ರತಿಪಾದ್ಯನೂ, ಭಕ್ತವತ್ಸಲನೂ, ಷಡ್ಗುಣೈಶ್ವರ್ಯ ಸಂಪನ್ನನೂ, ಎನಿಸಿರುವ ಶ್ರೀಕೃಷ್ಣಮೂರ್ತಿಯು ಮಿತ್ರರಿಂದೊಡಗೂಡಿ, ದ್ವಾರಕೆಯೊಳಗೆ ಸುಧರ್ಮಾಸಭೆಯಲ್ಲಿ ಸುಖವಾಗಿನೆಲಸಿರುವನೆ ? ॥೩೪॥ ನಿತ್ಯಾನಂದನಾದಭಗವಂತನ ಕುಶಲವನ್ನು ವಿಚಾರಿಸಬೇಕಾದುದೇಇಲ್ಲ. ಆದರೂ, ಯಾವ ಭಗವಂತನ ಭುಜಪರಾಕ್ರಮದಿಂದ ರಕ್ಷಿತವಾದ ದ್ವಾರಕೆಯಲ್ಲಿ, ನೆಲಸಿರುವ ಯಾದವರು, ಕುಬೇರನನ್ನಾಶ್ರಯಿಸಿದ ಯಕ್ಷರಂತೆಯೂ, ವೈಕುಂಠದಲ್ಲಿರುವ ಜಯವಿಜಯಾದಿಗಳಂತೆಯೂ, ಪ್ರಖ್ಯಾತಿಯನ್ನು ಪಡೆದು, ಪರಮಾನಂದದಿಂದ ಕ್ರೀಡಿಸುತ್ತಿರುವರೋ,ಯಾವಕೃಷ್ಣಮೂರ್ತಿಯ ಪಾದಸೇವೆಯೇ ಸಕಲ ತಪಸ್ಸುಗಳಿಗಿಂತ ಶ್ರೇಷ್ಠವೆಂದು ತಿಳಿದಾಚರಿಸುತ್ತಿರುವ, ಸತ್ಯಭಾಮೆಮೊದಲಾದ ಹದಿನಾರು ಸಾವಿರಮಂದಿ ಗೋಪಸ್ತ್ರೀಯರು,ಯುದ್ಧದಲ್ಲಿ ದೇವತೆಗಳನ್ನುಗೆದ್ದು, ಇಂದ್ರಪತ್ನಿಯಾದ ಶಚೀದೇವಿಯ ಭೋಗಕ್ಕುಚಿತಗಳಾದ ಮಂದಾರ, ಪಾರಿಜಾತಮೊದಲಾದ ಇಷ್ಟವಸ್ತು

ಹರಂತಿ ವಜ್ರಾಯುಧ ವಲ್ಲಭೋಚಿತಾಃ ॥ ೩೭ ॥ ಯದ್ಬಾಹು ದಂಡಾ
ಭ್ಯುದಯಾನು ಜೀವಿನೋ ಯದುಪ್ರವೀರಾ ಹ್ಯಕುತೋಭಯಾ ಮುಹುಃ ।
ಅಧಿಕ್ರಮಂತ್ಯಂಘ್ರಿಭಿ ರಾಹೃತಾಂ ಬಲಾತ್ ಸಭಾಂ ಸುಧರ್ಮಾಂ ಸುರ
ಸತ್ತಮೋಚಿತಾಂ ॥೩೮॥ ಕಚ್ಚಿತ್ತೇ ನಾಮಯಂ ತಾತ ಭ್ರಷ್ಟತೇಜಾ
ವಿಭಾಸಿಮೇ । ಅಲಬ್ಧಮಾನೋ ವಜ್ಞಾತಃ ಕಿಂವಾ ತಾತ ಚಿರೋಷಿತಃ॥೩೯॥
ಕಚ್ಚಿನ್ನಾಭಿಹತೋ ಭಾವೈ ಶ್ಶಬ್ದಾದಿಭಿ ರಮಂಗಲೈಃ । ನದತ್ತ ಮುಕ್ತ

ಯೋಗ್ಯಗಳಾಗಿರುವ, ತತ್-ಆ, ಆಶಿಷಃ-ಪಾರಿಜಾತವೊದಲಾದ ಇಷ್ಟಾರ್ಥಗಳನ್ನು, ಹರಂತಿ-ಪಡೆಯು ವರೋ ॥ ೩೭ ॥ ಯದ್ಬಾ...ಪಃ, ಯತ್-ಯಾವಕೃಷ್ಣನ, ಬಾಹುದಂಡ - ಭುಜದಂಡದ, ಅಭ್ಯು ದಯ-ಏಳಿಗೆಯನ್ನು, ಅನುಜೀವಿನಃ-ಅನುಸರಿಸಿ ಬದುಕುವ, ಯದುಪ್ರವೀರಾಃ-ಯಾದವಶೂರರು, ಅಕು ತೋಭಯಾಃ-ಯಾರಿಂದಲೂ ಭಯವಿಲ್ಲದವರಾಗಿ, ಬಲಾತ್-ಬಲಾತ್ಕಾರದಿಂದ, ಆಹೃತಾಂ - ಗೆದ್ದು ತರಲ್ಪ ಟ್ಟ, ಸುರಸತ್ತಮೋಚಿತಾಂ, ಸುರಸತ್ತಮ-ಇಂದ್ರಾದಿಗಳಿಗೆ ಉಚಿತಾಂ-ಅರ್ಹವಾದ, ಸಧರ್ಮಾಂ-ಸುಧ ರ್ಮೆ ಎಂದು ಹೆಸರುಳ್ಳ ಸಭಾಂ-ಸಭಾಮಂಟಪವನ್ನು, ಮುಹುಃ-ಬಾರಿಬಾರಿಗೂ, ಅಂಘ್ರಿಭಿಃ - ಅಡಿಗ ಳಿಂದ, ಅಧಿಕ್ರಮಂತಿ - ಆಕ್ರಮಿಸುವರೋ ॥ ೩೮ ॥ ತಾತ - ಅಯ್ಯಾ ! ತೇ-ನಿನಗೆ, ಅನಾಮಯಂ ಕಚ್ಚಿತ್-ಆರೋಗ್ಯವೆ ? ಭ್ರಷ್ಟತೇಜಾಃ-ಕಳೆಗುಂದಿದವನಾಗಿ, ಮೇ-ನನಗೆ, ವಿಭಾಸಿ-ಕಾಣುವೆ, ಅಲಬ್ಧ ಮಾನಃಕಿಂ, ಅಲಬ್ಧ-ಹೊಂದಲ್ಪಡದ, ಮಾನಃಕಿಂ-ಮರ್ಯಾದೆಯುಳ್ಳವನೆ ! ಅವಜ್ಞಾತಃಕಿಂ - ತಿರಸ್ಕರಿಸ ಲ್ಪಟ್ಟೆಯಾ ? ತಾತ-ಅಪ್ಪಾ ! ಕಿಂ-ಏಕೆ, ಚಿರೋಷಿತಃ-ಬಹುಕಾಲನಿಂತುಬಿಟ್ಟೆ ? ॥ ೩೯ ॥

ಅಭಾವೈಃ-ಸ್ನೇಹಶೂನ್ಯಗಳಾದ, ಅಮಂಗಳೈಃ-ಅಶುಭಗಳಾದ, ಶಬ್ದಾದಿಭಿಃ - ಕಠಿನೋಕ್ತಿಗಳಿಂದ, ನಾಭಿಹತಃಕಚ್ಚಿತ್-ಹೊಡೆಯಲ್ಪಡಲಿಲ್ಲವಷ್ಟೆ, ಅಥವಾ, ಅರ್ಥಿಭ್ಯಃ-ಯಾಚಕರಿಗೆ, ನೋಕ್ತಂ-ಕೊಡು ವೆನೆಂದು ಹೇಳಲ್ಪಡಲಿಲ್ಲವೇ ? ಅಥವಾ, ಆಶಯಾ - ಆಸೆಯಿಂದ, ಯತ್ - ಯಾವುದು, ಪ್ರತಿಶ್ರುತಂ-

---

ಗಳನ್ನು ಪಡೆದು ಸುಖದಿಂದನೆಲಸಿರುವರೋ ? ॥೩೭॥

ಯಾವಭಗವಂತನ ಭುಜಪರಾಕ್ರಮದಿಂದ,ಜೀವಿಸುತ್ತಿರುವ ಯಾದವವೀರರು,ಯಾವ ಭಯವೂ ಇಲ್ಲದೆ,ಯುದ್ಧದಲ್ಲಿ ದೇವತೆಗಳನ್ನುಗೆದ್ದುಬಲಾತ್ಕಾರವಾಗಿ ಅಪಹರಿಸಿ ತಂದ, ಸುಧರ್ಮೆಯೆಂಬ ಸಭಾಮಂಟಪದಲ್ಲಿ ವಿಹರಿಸುತ್ತಿರುವರೋ, ಅಂತಹ ಪುರಾಣ ಪುರುಷ ನಾದ, ಶ್ರೀಕೃಷ್ಣಮೂರ್ತಿಯು, ಅಣ್ಣನಾದ ಬಲರಾಮನಿಂದೊಡಗೂಡಿ, ಈ ಲೋಕ ಕ್ಕೆ ಕ್ಷೇಮವನ್ನೂ, ಅಭಿವೃದ್ಧಿಯನ್ನೂ, ಮಂಗಳವನ್ನೂ, ಉಂಟುಮಾಡುವುದಕ್ಕಾಗಿ, ಯದುಕುಲವನ್ನಲಂಕರಿಸುತ್ತಾ ಕ್ಷೇಮವಾಗಿರುವನೇ ? ॥ ೩೮ ॥ ಅಯ್ಯಾ ಅರ್ಜುನನೇ ! ನಿನ್ನ ಶರೀರದಲ್ಲಿ ಆರೋಗ್ಯವಾಗಿರುವುದೆ ? ಯಾಕೆ ಕಳೆಗುಂದಿರುವೆ ? ಬಂಧುಗಳು ನಿನಗೆ ಸರಿಯಾದಮರ್ಯಾದೆಯನ್ನು ಮಾಡಲಿಲ್ಲವೆ ? ಅಥವಾ ನಿನ್ನನ್ನು ಹೀಯಾಳಿಸಿದರೆ ? ಏಕೆ ಇಷ್ಟುಕಾಲದವರೆಗೂ ತಡಮಾಡಿದೆ ? ॥ ೩೯ ॥ ನಿನ್ನನ್ನು ಯಾರಾದರೂ, ಪ್ರೇಮಶೂನ್ಯ ಗಳಾಗಿಯೂ, ಅಶ್ಲೀಲಗಳಾಗಿಯೂ, ಇರುವ ಕಠಿನೋಕ್ತಿಗಳನ್ನಾಡಿದರೆ ? ಯಾಚಕ ರುಬೇಡಿದಾಗ ಕೊಡುವೆನೆಂದು ಹೇಳಲಿಲ್ಲವೆ ? ಅಥವಾ ಬೇಡಿದವರಿಗೆ ಕೊಡುವೆನೆಂದಾಸೆ

ಮರ್ಥಿಭ್ಯ ಆಶಯಾ ಯತ್ಪ್ರತಿ ಶ್ರುತಂ ॥೪೦॥ ಕಚ್ಚಿತ್ತ್ವಂ ಬ್ರಾಹ್ಮಣಂ ಬಾಲಂ ಗಾಂ ವೃದ್ಧಂ ರೋಗಿಣಂ ಸ್ತ್ರಿಯಂ । ಶರಣೋಪಸೃತಂ ಸತ್ವಂ ನಾತ್ಯಾಕ್ಷೀಃ ಶ್ಯರಣಪ್ರದಃ ॥ ೪೧ ॥ ಕಚ್ಚಿತ್ತ್ವಂ ನಾಗಮೋಽಗಮ್ಯಾಂ ಗಮ್ಯಾಂ ವಾಸತ್ಕೃತಾಂ ಸ್ತ್ರಿಯಂ! ಪರಾಜಿತೋ ವಾಥ ಭವಾ ನ್ನೋತ್ತ ಮೈರ್ನಾಸಮೈಃ ಪಥಿ ॥೪೨॥ ಅಪಿಸ್ವಿ ತ್ಪರ್ಯಭುಂಜ್ಥಾ ಸ್ತ್ವಂ ಸಂಭೋಜ್ಯಾನ್ ವೃದ್ಧಬಾಲಕಾನ್*। ಜುಗುಪ್ಸಿತಂ ಕರ್ಮ ಕಿಂಚಿತ್ ಕೃತವಾ

ಮಾತುಕೊಡಲ್ಪಟ್ಟಿತೋ, ತತ್-ಅದು, ನದತ್ತಂಕಚ್ಚಿತ್ - ಕೊಟಲ್ಪಡಲಿಲ್ಲವೆ? ॥ ೪೦ ॥ ಶರಣಪ್ರದಃ-ಆಶ್ರಯವನ್ನುಕೊಡುವ, ತ್ವಂ-ನೀನು, ಬ್ರಾಹ್ಮಣಂ-ಬ್ರಾಹ್ಮಣನನ್ನು, ಬಾಲಂ - ಹಸುಳೆಗಳನ್ನು, ಗಾಂ-ಗೋವನ್ನು, ರೋಗಿಣಂ-ರೋಗಿಯನ್ನು, ಸ್ತ್ರಿಯಂ-ಹೆಂಗಸನ್ನು, ಶರಣೋಪಸೃತಂ - ಮರೆಹೊಕ್ಕ, ಸತ್ವಂ-ಪ್ರಾಣಿಯನ್ನು, ನಾತ್ಯಾಕ್ಷೀಃಕಚ್ಚಿತ್-ಬಿಡಲಿಲ್ಲವಷ್ಟೆ ? ॥ ೪೧ ॥ ತ್ವಂ-ನೀನು, ಅಗಮ್ಯಾಂ-ಹೊಂದಲ್ಪಡಬಾರದ ಸ್ತ್ರೀಯನ್ನು, ನಾಗಮಃಕಚ್ಚಿತ್ - ಹೊಂದಲಿಲ್ಲವಷ್ಟೆ, ಅಥ--ಅಥವಾ, ಭವಾನ್-ನೀನು, ಪಥಿ-ದಾರಿಯಲ್ಲಿ, ಉತ್ತಮೈಃ-ಉತ್ತಮರಿಂದಾಗಲಿ, ಅಸಮೈರ್ವಾ - ಅಧಮರಿಂದಾಗಲಿ, ನಪರಾಜಿತಃ-ಸೋಲಿಸಲ್ಪಡಲಿಲ್ಲವಷ್ಟೆ ? ॥ ೪೨ ॥ ತ್ವಂ-ನೀನು, ಸಂಭೋಜ್ಯಾನ್ - ಪಙ್ತಿಭೋಜನಕ್ಕರ್ಹರಾದ, ವೃದ್ಧಬಾಲಕಾನ್-ವೃದ್ಧರನ್ನು, ಬಾಲರನ್ನು, ಪರಿ-ಬಿಟ್ಟು, ಅಭುಜ್ಥಾಃಅಪಿಸ್ವಿತ್ - ಊಟಮಾಡಿದೆಯಾ ? ಯತ್-ಯಾವುದು, ಅಕ್ಷಮಂ-ನಾವು ಮಾಡುವುದಕ್ಕರ್ಹವಲ್ಲವೊ ಅಂತಹ, ಜುಗುಪ್ಸಿತಂ-ಅಸಹ್ಯವಾದ, ಕಿಂಚಿತ್ಕರ್ಮ-ಯಾವಕಾರ್ಯವನ್ನು, ಕೃತವಾನ್-ಮಾಡಿದೆ ? ॥ ೪೩ ॥ ಪ್ರೇಷ್ಠತಮೇನ-ಅತ್ಯಂತಪ್ರಿಯನೂ, ಹೃದಯೇನ - ಅತ್ಯಾಪ್ತನೂ, ಆತ್ಮಬಂಧುನಾ - ನಮಗೆ ಬಂಧುವೂ ಆದ

ಯಿಟ್ಟು ಕೊಡಲಿಲ್ಲವೆ ? ॥ ೪೦ ॥ ಅಥವಾ ಮೊದಲಿನಿಂದಲೂ ನೀನು ಮರೆಬಿದ್ದವರನ್ನು ಕಾಪಾಡುತ್ತಿದ್ದವನಾದುದರಿಂದ, ಈಗ ಶರಣಾಗತರಾದ ಬ್ರಾಹ್ಮಣರನ್ನಾಗಲಿ, ಹಸುಳೆಗಳನ್ನಾಗಲಿ, ಗೋವು, ಮುದುಕರು, ರೋಗಿಗಳು, ಸ್ತ್ರೀಯರು, ಇನ್ನೂಇತರ ಪ್ರಾಣಿಗಳು, ಯಾರನ್ನೇ ಆಗಲಿ ಸಲಹಲಿಲ್ಲವೆ ? ॥ ೪೧ ॥ ಅಥವಾ ಅಗಮ್ಯಳಾದ ಯಾವಸ್ತ್ರೀಯನ್ನಾದರೂ ಸೇರಿದೆಯಾ ? ಹೊಂದುವುದಕ್ಕೆ ಅರ್ಹಳಾಗಿದ್ದರೂ, ವಸ್ತ್ರಾಭರಣಮೊದಲಾದ ಅಲಂಕಾರಗಳಿಂದ ಹೀನಳೆಂದು ಪರಿತ್ಯಾಗಮಾಡಿದೆಯಾ ? ಅಥವಾ ದಾರಿಯಲ್ಲಿ ನಿನಗಿಂತಲೂ ಬಲಿಷ್ಠರಿಂದಾಗಲಿ,ದುರ್ಬಲರಿಂದಾಗಲಿ, ಪರಾಜಯವನ್ನು ಪಡೆದೆಯಾ ? ॥ ೪೨ ॥ ಜತೆಯಲ್ಲಿ ಕುಳಿತು ಭೋಜನಮಾಡುವುದಕ್ಕೆ ಅರ್ಹರಾದ ವೃದ್ಧರನ್ನಾಗಲಿ, ಬಾಲಕರನ್ನಾಗಲಿ ಬಿಟ್ಟು ಭೋಜನವನ್ನು ಮಾಡಿದೆಯಾ ? ॥೪೩॥ ಅಥವಾ ಅತ್ಯಂತಪ್ರಿಯನಾಗಿಯೂ, ಪ್ರಾಣಾಪ್ತನಾಗಿಯೂ, ಮುಖ್ಯಬಂಧುವಾಗಿಯೂ, ಇದ್ದ

* ಉಪೇಕ್ಷ್ಯಾತಿಥಿ ಭೃತ್ಯಾಂಶ್ಚ ಗರ್ಭಿಣ್ಯಾತುರ ಕನ್ಯಕಾಃ:—ಅತಿಥಿಗಳನ್ನು, ಸೇವಕರನ್ನು, ಗರ್ಭಿಣೀ ಸ್ತ್ರೀಯರನ್ನು, ರೋಗಿಗಳನ್ನು, ಹೆಣ್ಣುಮಕ್ಕಳನ್ನು, ಉಪೇಕ್ಷೆಮಾಡಿ ಭೋಜನಮಾಡಿದೆಯಾ ? (ಈ ಪಾಠವು ಆಂಧ್ರಕೋಶದಲ್ಲಿಮಾತ್ರ ಇದೆ.)

ಸ್ನ ಯದಕ್ಷಮಂ ॥೪೩॥ ಕಚ್ಚಿತ್ಪ್ರೇಷ್ಠತಮೇ ನಾಥ ಹೃದಯೇ ನಾತ್ಮ
ಬಂಧುನಾ। ಶೂನ್ಯೋಽಸ್ಮಿ ರಹಿತೋ ನಿತ್ಯಂ ಮನ್ಯಸೇ ತೇನ್ಯಥಾ ನರುಕ್॥
—ಇತಿ ಚತುರ್ದಶೋಽಧ್ಯಾಯಃ—

ಕೃಷ್ಣನಿಂದ, ರಹಿತಃ-ಬಿಡಲ್ಪಟ್ಟವನಾಗಿ, ನಿತ್ಯಂ ಯಾವಾಗಲೂ ಶೂನ್ಯೋಽಸ್ಮೀತಿ-ಶೂನ್ಯನಾದೆನೆಂದು, ಆತ್ಮಾನಂ-ನಿನ್ನನ್ನು, ಮನ್ಯಸೇಕಚ್ಚಿತ್-ತಿಳಿದಿರುವೆಯಾ? ಅನ್ಯಥಾ - ಇಲ್ಲವಾದರೆ, ತೇ - ನಿನಗೆ, ರುಕ್-ಮನೋವ್ಯಥೆಯು, ನ-ಇರಲಾರದು ॥ ೪೪ ॥

—ಚತುರ್ದಶಾಧ್ಯಾಯಂ ಸಮಾಪ್ತಂ—

ಶ್ರೀಕೃಷ್ಣಮೂರ್ತಿಯನ್ನು ಅಗಲಿದೆಯಾ? ಇಲ್ಲವಾದರೆ ನಿನಗಿಂತಹ ಮನೋವ್ಯಥೆಯುಂಟಾಗುತ್ತಿರಲಿಲ್ಲ,ಎಂದು ಧರ್ಮರಾಜನು ಅರ್ಜುನನನ್ನು ಪ್ರಶ್ನೆಮಾಡುತ್ತಿದ್ದನೆಂದು ಸೂತನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆ ಯೊಳ್

ಹದಿನಾಲ್ಕನೆಯ ಅಧ್ಯಾಯಂ ಮುಗಿದುದು

ಓಂ ನಮಃ ಪರಮಾತ್ಮನೇ.

ಸೂತಉವಾಚ॥ ಏವಂ ಕೃಷ್ಣಸಖಃ ಕೃಷ್ಣೋ ಭ್ರಾತ್ರಾ ರಾಜ್ಞಾ ವಿಕ
ಲ್ಪಿತಃ । ನಾನಾಶಙ್ಕಾಸ್ಪದಂ ರೂಪಂ ಕೃಷ್ಣ ವಿಶ್ಲೇಷ *ಕರ್ಶಿತಃ ॥೧॥ ಶೋ

ಏವಂ-ಹೀಗೆ, ಕೃಷ್ಣಸಖಃ, ಕೃಷ್ಣ-ಶ್ರೀಕೃಷ್ಣನ, ಸಖಃ-ಸ್ನೇಹಿತನಾದ, ಕೃಷ್ಣಃ-ಅರ್ಜುನನು, ರಾಜ್ಞಾ-ದೊರೆಯಾದ, ಭ್ರಾತ್ರಾ-ಅಣ್ಣನಿಂದ, ನಾನಾಶಂಕಾಸ್ಪದಂ, ನಾನಾ-ಅನೇಕವಿಧಗಳಾದ, ಶಙ್ಕಾ-ಅನುಮಾನಗಳಿಗೆ, ಆಸ್ಪದಂ-ಆಶ್ರಯವಾಗಿರುವ, ರೂಪಂ-ಅರ್ಜುನನ ಆಕಾರವನ್ನು, (ಆಲಕ್ಷ್ಯ-ನೋಡಿ) ವಿಕಲ್ಪಿತಃ-ಸಂಶಯಪಡಿಸಲ್ಪಟ್ಟ, ಕೃಷ್ಣವಿಶ್ಲೇಷಕರ್ಶಿತಃ, ಕೃಷ್ಣ - ಶ್ರೀಕೃಷ್ಣನ, ವಿಶ್ಲೇಷ-

ಪಾಂಡವರು ಸ್ವರ್ಗಾರೋಹಣವನ್ನು ಮಾಡುವುದು.

ಸೂಚನೆ॥ ಕಂ॥ ಅರಿದು ಕಲಿಬರ್ಪುದಂ ಭೂ । ಭರಮಂ ಮೊಮ್ಮಂಗೆ ಸಾರ್ಚಿ ಭೀಮಾದಿಗಳಿಂ॥
ಬೆರಸುತೆ ಸಗ್ಗಮ ನಡರ್ದಂ। ನರಪತಿ ಯೆಂಬಂಶ ಮಿದರೊಳೊರೆಯಲ್ಪಡುಗುಂ ॥

ಸೂತನು ಶೌನಕಾದಿಗಳಿಗೆ ಹೇಳುವುದೆಂತೆಂದರೆ:—ಅಯ್ಯಾ ಋಷಿಗಳಿರಾ ! ಅನಂತರದಲ್ಲಿ ಅರ್ಜುನನು ದ್ವಾರಕಾನಗರದಿಂದ ಹಸ್ತಿನಾಪುರಕ್ಕೆ ಬರಲು, ಧರ್ಮನಂದನನು ಅವನ ಮುಖವನ್ನು ನೋಡಿ, ವಿವರ್ಣವಾಗಿದ್ದುದರಿಂದ "ಬಹುಚಿಂತಾಕ್ರಾಂತನಾಗಿರುವನೆಂದು" ತಿಳಿದು ಎಲೈ ಅರ್ಜುನನೇ ! ನಿನ್ನಮುಖವು ಕಳೆಗುಂದಿರುವುದನ್ನು ನೋಡಿ

* ಪಾ-ಕರ್ಷಿತಃ-ಬದಲಾಯಿಸಲ್ಪಟ್ಟವನಾಗಿ.

ಶೋಕೇನ ಶುಷ್ಯದ್ವದನಹೃತ್ಸರೋಜೋ ಹತಪ್ರಭಃ । ವಿಭುಂ ತಮೇವಾನು
ಧ್ಯಾಯ ನ್ನಾಶಕ್ನೋತ್ಪ್ರತಿಭಾಷಿತುಂ ॥ ೨ ॥ ಕೃಚ್ಛ್ರೇಣ ಸಂಸ್ತಭ್ಯ
ಶುಚಃ ಪಾಣಿನಾ ಮೃಜ್ಯ ನೇತ್ರಯೋಃ । ಪರೋಕ್ಷೇಣ ಸಮುನ್ನದ್ಧ ಪ್ರಣ
ಯೌತ್ಕಂಠ್ಯಕಾತರಃ ॥ ೩ ॥ ಸಖ್ಯಂ ಮೈತ್ರೀಂ ಸೌಹೃದಞ್ಚ ಸಾರಥ್ಯಾ
ದಿಷು ಸಂಸ್ಮರನ್ । ನೃಪ ಮಗ್ರಜ ಮಿತ್ಯಾಹ ಬಾಷ್ಪಗದ್ಗದಯಾ ಗಿರಾ॥೪॥

ವಿಯೋಗದಿಂದ, ಕರ್ಶಿತಃ-ಕೃಶನಾದ ॥ ೧ ॥ ಶೋಕೇನ-ದುಃಖದಿಂದ, ಶುಷ್ಯದ್ವದನಹೃತ್ಸರೋಜಃ, ಶುಷ್ಯತ್-ಬಣಗಿದ, ವದನ-ಮುಖವೆಂಬ, ಹೃತ್-ಮನಸ್ಸೆಂಬ, ಸರೋಜಃ-ಕಮಲವುಳ್ಳ, ಹತಪ್ರಭಃ-ಹತ-ನಷ್ಟವಾದ, ಪ್ರಭಃ - ಕಾಂತಿಯುಳ್ಳ ಅರ್ಜುನನು, ವಿಭುಂ - ಸರ್ವಜ್ಞನಾದ, ತಮೇವ-ಆಕೃಷ್ಣ ನನ್ನೇ, ಅನುಧ್ಯಾಯನ್-ಧ್ಯಾನಮಾಡುತ್ತಿರುವವನಾಗಿ, ಪ್ರತಿಭಾಷಿತುಂ-ಪ್ರತ್ಯುತ್ತರವನ್ನು ಹೇಳುವುದಕ್ಕೆ, ನಾಶಕ್ನೋತ್-ಸಮರ್ಥನಾಗಲಿಲ್ಲ ॥ ೨ ॥ ಶುಚಃ-ಶೋಕಗಳನ್ನು, ಕೃಚ್ಛ್ರೇಣ-ಕಷ್ಟದಿಂದ, ಸಂಸ್ತಭ್ಯ-ತಡೆದುಕೊಂಡು, ನೇತ್ರಯೋಃ-ಕಣ್ಣುಗಳನ್ನು, ಪಾಣಿನಾ-ಕೈಯಿಂದ, ಆಮೃಜ್ಯ - ಒರಸಿಕೊಂಡು, ಪರೋಕ್ಷೇಣ-ಪ್ರತ್ಯಕ್ಷನಾಗದಿರುವ ಕೃಷ್ಣನಕಾರಣದಿಂದ, ಸಮು...ತರಸ್ಸನ್, ಸಮುನ್ನದ್ಧ-ಹೆಚ್ಚುತ್ತಿರುವ, ಪ್ರಣಯ-ಪ್ರೀತಿಯ, ಔತ್ಕಂಠ್ಯ-ಕುತೂಹಲದಿಂದ, ಕಾತರಸ್ಸನ್-ಕಳವಳವನ್ನು ಹೊಂದಿದವನಾಗಿ ॥ ೩ ॥ ಸಾರಥ್ಯಾದಿಷು, ಸಾರಥ್ಯ-ಸಾರಥಿಯಕೆಲಸವೇ, ಆದಿಷು-ಮೊದಲಾದವುಗಳಲ್ಲಿ, ಸಖ್ಯಂ-ಸಮಭಾವನೆಯನ್ನೂ, ಮೈತ್ರೀಂ-ಹಿತಚಿಂತನೆಯನ್ನೂ, ಸೌಹೃದಞ್ಚ-ಸ್ನೇಹವನ್ನೂ ಸಹ, ಸಂಸ್ಮರನ್-ನೆನೆಸಿಕೊಂಡು, ಬಾಷ್ಪಗದ್ಗದಯಾ, ಬಾಷ್ಪ - ಕಣ್ಣೀರಿನಿಂದ, ಗದ್ಗದಯಾ - ಕುಗ್ಗಿದಧ್ವನಿಯುಳ್ಳ, ಗಿರಾ-ಮಾತಿನಿಂದ, ನೃಪಂ-ದೊರೆಯಾದ, ಅಗ್ರಜಂ-ಅಣ್ಣನನ್ನುಕುರಿತು, ಇತಿ-ಹೀಗೆಂದು, ಆಹ - ಹೇಳುತ್ತಾನೆ ॥ ೪ ॥ ಮಹಾರಾಜ-ದೊರೆಯಾದ ಧರ್ಮರಾಜನೇ ! ಯೇನ - ಯಾರಿಂದ, ದೇವವಿಸ್ಮಾಪನಂ-

---

ದರೆ, ಪ್ರಮಾದಗಳುಂಟಾಗಿರುವಂತೆ ಕಾಣಬರುವುದು, ನೀನು ಇಷ್ಟು ಕಳವಳಗೊಂಡಿರಲು ಕಾರಣವೇನೆಂದು ಪ್ರಶ್ನೆಮಾಡಲು ॥ ೧ ॥ ಅರ್ಜುನನು ತನ್ನ ಮಿತ್ರನಾಗಿಯೂ ಪರಮಾತ್ಮನಾಗಿಯೂ ಇರುವ ಕೃಷ್ಣನ ವಿಯೋಗದುಃಖದಿಂದ ಕೊರಗಿ ಬಾಡಿದ ಮುಖವುಳ್ಳವನಾಗಿ, ಆತನನ್ನೇ ಸರ್ವದಾ ಮನದಲ್ಲಿ ಧ್ಯಾನಿಸುತ್ತಾ,ಇತರವಿಷಯಗಳಲ್ಲಿ ಜುಗುಪ್ಸೆಯನ್ನು ಹೊಂದಿದ್ದನಾದುದರಿಂದ ಅಣ್ಣನ ಪ್ರಶ್ನೆಗೆ ಉತ್ತರವನ್ನು ಹೇಳಲಾರದೆಹೋದನು ॥ ೨ ॥ ಬಳಿಕ ಉಕ್ಕಿ ಉಕ್ಕಿ ಬರುತ್ತಿರುವ ದುಃಖವನ್ನು ಬಹಳ ಕಷ್ಟದಿಂದ ಒಳಗೆ ಅಡಗಿಸಿಕೊಂಡರೂ,ಎರಡು ಕಣ್ಣಿನಲ್ಲಿಯೂ ಸುರಿಯುತ್ತಿರುವ ನೀರನ್ನು ಕೈಯಿಂದ ತೊಡೆದುಕೊಳ್ಳುತ್ತಾ, ಆ ಶ್ರೀಕೃಷ್ಣನು ತನ್ನಕಣ್ಣಿಗೆ ಮರೆಯಾಗಿರುವುದರಿಂದ ಪ್ರೀತಿಪೂರ್ವಕವಾದ ಆ ಕೃಷ್ಣದರ್ಶನ ಕುತೂಹಲವು ಮತ್ತಷ್ಟುಹೆಚ್ಚಿ ಕಳವಳಿಸುತ್ತಾ ॥೩॥ ತನಗೆ ಸಾರಥ್ಯವೇ ಮೊದಲಾದ ಕಾರ್ಯಗಳನ್ನು ಮಾಡುತ್ತಿರುವಾಗ, ತನ್ನಲ್ಲಿ ಕೃಷ್ಣನಿಗಿದ್ದ ಸ್ನೇಹವನ್ನೂ, ತನಗೆ ಮೇಲನ್ನು ಮಾಡುವುದಕ್ಕಾಗಿ ಆತನು ಪ್ರಯತ್ನಿಸುತ್ತಿದ್ದುದನ್ನೂ, ಜಗನ್ನಿಯಾಮಕನಾಗಿದ್ದರೂ ತನಗೆ ಸಮಾನಸ್ಕಂಧನಂತೆ ಕಾಣಿಸಿಕೊಂಡಿದ್ದುದನ್ನೂ ಸಹ, ನೆನನೆನೆದು ಕಂಬನಿಗಳನ್ನು ಸುರಿಸುತ್ತಾ, ಕುತ್ತಿಗೆಯ ನರಗಳು ಬಿಗಿದು, ಗದ್ಗದಸ್ವರ

ಅರ್ಜುನಉವಾಚ ॥ ವಞ್ಚಿತೋಽಹಂ ಮಹಾರಾಜ ಹರಿಣಾ ಬನ್ಧುರೂಪಿಣಾ । ಯೇನ ಮೇಽಪಹೃತಂ ತೇಜೋ ದೇವವಿಸ್ಮಾಪನಂ ಮಹತ್ ॥೫॥ ಯಸ್ಯ ಕ್ಷಣವಿಯೋಗೇನ ಲೋಕೋ ಹ್ಯಪ್ರಿಯದರ್ಶನಃ । ಉಕ್ಥೇನ ರಹಿತೋ ಹ್ಯೇಷ ಮೃತಕಃ ಪ್ರೋಚ್ಯತೇ ಯಥಾ ॥೬॥ ಯತ್ಸಂಶ್ರಯಾದ್ದ್ರುಪದಗೇಹ ಮುಪಾಗತಾನಾಂ ರಾಜ್ಞಾಂ ಸ್ವಯಂವರಮುಖೇ ಸ್ಮರದುರ್ಮದಾನಾಂ । ತೇಜೋ ಹೃತಂ ಖಲು ಮಯಾ *ನಿಹತಶ್ಚ ಮತ್ಸ್ಯಃ ಸಜ್ಜೀಕೃತೇನ ಧನುಷಾ † ಧಿಗತಾ ಚ ಕೃಷ್ಣಾ ॥ ೭ ॥ ಯತ್ಸನ್ನಿಧಾವಹಮು ಖಾ

ದೇವ-ದೇವತೆಗಳಿಗೆ, ವಿಸ್ಮಾಪನಂ-ಆಶ್ಚರ್ಯಕರವಾದ, ಮೇ-ನನ್ನ, ಮಹತ್-ಹೆಚ್ಚಾದ, ತೇಜಃ-ಕಾಂತಿಯು, ಅಪಹೃತಂ-ಅಪಹರಿಸಲ್ಪಟ್ಟಿತೋ ? (ಅಂತಹ) ಬಂಧುರೂಪಿಣಾ, ಬಂಧು ಬಂಧುವಿನ,ರೂಪಿಣಾ-ರೂಪವುಳ್ಳ, ಹರಿಣಾ-ಕೃಷ್ಣನಿಂದ, ಅಹಂ-ನಾನು, ವಂಚಿತಃ-ವಂಚಿಸಲ್ಪಟ್ಟೆನು ॥ ೫ ॥

ಏಷಃ-ಈ ಜೀವನು, ಉಕ್ಥೇನ-ಪ್ರಾಣದಿಂದ, ರಹಿತೋಹಿ-ಬಿಡಲ್ಪಟ್ಟವನಾದರೆ, ಯಥಾ - ಹೇಗೆ, ಮೃತಕಃ-ಶವವೆಂದು, ಪ್ರೋಚ್ಯತೇ - ಹೇಳಲ್ಪಡುವನೋ, ಹಾಗೆ, ಯಸ್ಯ - ಯಾವ ಭಗವಂತನ, ಕ್ಷಣ ವಿಯೋಗೇನ, ಕ್ಷಣ-ಬಂದುಕ್ಷಣಕಾಲದ, ವಿಯೋಗೇನ - ಅಗಲಿಕೆಯಿಂದ, ಲೋಕಃ - ಈ ಪ್ರಪಂಚವು, ಅಪ್ರಿಯದರ್ಶನೋಹಿ-ನೋಡುವುದಕ್ಕೆ ವಿಕಾರವಾಗಿರುವುದೋ ॥ ೬ ॥ ದ್ರುಪದಗೇಹಂ, ದ್ರುಪದ-ದ್ರುಪದರಾಜನ, ಗೇಹಂ-ಮನೆಯನ್ನು ಕುರಿತು, ಉಪಾಗತಾನಾಂ-ಬಂದಿರುವ, ಸ್ಮರದುರ್ಮದಾನಾಂ, ಸ್ಮರ-ಮನ್ಮಥನಿಂದ, ದುರ್ಮದಾನಾಂ-ಅತ್ಯಂತವಾಗಿ ಮದಿಸಿರುವ, ರಾಜ್ಞಾಂ-ರಾಜರ, ತೇಜಃ-ತೇಜಸ್ಸು, ಮಯಾ-ನನ್ನಿಂದ, ಸ್ವಯಂವರಮುಖೇ-ಸ್ವಯಂವರಪ್ರಾರಂಭದಲ್ಲಿ, ಯತ್ಸಂಶ್ರಯಾತ್, ಯತ್-ಯಾವ ಕೃಷ್ಣನ, ಸಂಶ್ರಯಾತ್-ಆಶ್ರಯದಿಂದ, ಹೃತಂ-ಅಪಹರಿಸಲ್ಪಟ್ಟಿತೋ, ಮತ್ಸ್ಯಃ-ಮತ್ಸ್ಯವು, ಸಜ್ಜೀಕೃತೇನ-ಆರೋಪಿಸಿದ, ಧನುಷಾ-ಧನುಸ್ಸಿನಿಂದ, ನಿಹತಶ್ಚ-ಹೊಡೆಯಲ್ಪಟ್ಟಿತೋ ! ಕೃಷ್ಣಾಚ-ದ್ರೌಪದಿಯೂ, ಅಧಿಗತಾ-ಸಂಪಾದಿಸಲ್ಪಟ್ಟಳೋ ! ॥ ೭ ॥ ಅಹಂ - ನಾನು, ಯತ್ಸನ್ನಿಧೌ-ಯಾರಬಳಿಯಲ್ಲಿ,

ದಿಂದಹೇಳತೊಡಗಿದನು ॥ ೪ ॥ ಅಣ್ಣಾ ಧರ್ಮರಾಜನೆ! ಏನೆಂದು ಹೇಳಲಿ ? ಜಗನ್ನಿಯಾಮಕನಾಗಿದ್ದರೂ, ನಮಗೆ ಬಂಧುವಿನಂತಿದ್ದ ಶ್ರೀಕೃಷ್ಣನನ್ನು ಕಳೆದುಕೊಂಡೆನು. ಯಾವನ ವಿಯೋಗದಿಂದ ದೇವತೆಗಳಿಗೂ ಆಶ್ಚರ್ಯಕರವಾಗಿದ್ದ, ನನ್ನತೇಜಸ್ಸು, ಕುಂದಿತೋ. ಆ ಪ್ರಿಯಮಿತ್ರನಾದ ಕೃಷ್ಣನವಿಯೋಗದಿಂದ ನಾನು ಹೀಗೆ ಕಳವಳಿಸುತ್ತಿದ್ದೇನೆ. ಮನುಷ್ಯನ ದೇಹದಿಂದ ಪ್ರಾಣವು ಹೋದಮೇಲೆ ಅವನನ್ನು ಶವವೆಂದು ಹೇಳಿ ಜುಗುಪ್ಸೆಪಡುವಂತೆ, ಆಭಗವಂತನ ಸಾನ್ನಿಧ್ಯವು ಸ್ವಲ್ಪಕಾಲತಪ್ಪಿದಾಗ್ಯೂ, ಈ ಲೋಕವು ಅಸಹ್ಯಕರವಾಗಿಯೂ, ಅಮಂಗಲಕರವಾಗಿಯೂ ಇರುವುದಲ್ಲವೆ ? ॥ ೬ ॥ ಯಾವ ಕೃಷ್ಣನ ಆಶ್ರಯದಿಂದ ನಾನು ದ್ರುಪದಪುರಿಯೊಳಗೆ ಸ್ವಯಂವರಕಾಲದಲ್ಲಿ ಮದೋದ್ಧತರಾಗಿ ಬಂದಿದ್ದ ರಾಜರನ್ನು ನಿಗ್ರಹಿಸಿ, ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ಪಡೆದೆನೋ ॥ ೭ ॥ ಯಾವನಸಾನ್ನಿಧ್ಯಬಲದಿಂದ ನಾನು, ದೇವತೆ

* ಪಾ - ಅಭಿಹತಃ. † ಅಭಿಗತಾ.

ಣ್ಡವ ಮಗ್ನಯೇ ಽದಾ ಮಿಂದ್ರಞ್ಚ ಸಾಮರಗಣಂ ತರಸಾ ವಿಜಿತ್ಯ । ಲಬ್ಧಾ ಸಭಾ ಮಯಕೃತಾ ದ್ಭುತಶಿಲ್ಪಮಾಯಾ ದಿಗ್ಭ್ಯೋಽಹರ ನ್ನೃಪತಯೋ ಬಲಿ ಮಧ್ವರೇ ತೇ ॥ ೮ ॥ ಯತ್ತೇಜಸಾ ನೃಪಶಿರೋಂಘ್ರಿ ಮಹನ್ಮಖಾರ್ಥ ಮಾರ್ಯೋಽನುಜ ಸ್ತವ*ಗಜಾಯುತಸತ್ತ್ವವೀರ್ಯಃ। ತೇನಾ ಹೃತಾಃ ಪ್ರಮಥನಾಥಮಖಾಯ ಭೂಪಾ ಯನ್ಮೋಚಿತಾ ಸ್ತ † ದನಯರ್ ಬಲಿ ಮಧ್ವರೇ ತೇ ॥೯॥ ಪತ್ನ್ಯಾ ಸ್ತವಾಧಿಮಖಕ್ಲ್ ಪ್ತ ಮಹಾಭಿಷೇಕ ಶ್ಲಾಘಿಷ್ಠಚಾರುಕಬರಂ ಕಿತವೈ ಸ್ಸಭಾಯಾಂ । ಸ್ಪೃಷ್ಟಂ

(ಇದ್ದುದರಿಂದ) ಸಾಮರಗಣಂ - ದೇವತೆಗಳೆಲ್ಲರಿಂದಲೂ ಕೂಡಿದ, ಇಂದ್ರಞ್ಚ - ಇಂದ್ರನನ್ನೂ ಕೂಡ, ತರಸಾ-ಸಾಹಸದಿಂದ, ವಿಜಿತ್ಯ-ಜಯಿಸಿ, ಖಾಣ್ಡವಂ-ಖಾಣ್ಡವ ವನವನ್ನು, ಅಗ್ನಯೇ-ಅಗ್ನಿಗೆ, ಅದಾಂ-ಆಹುತಿಯಾಗಿ ಕೊಟ್ಟೆನೋ ! ಮಯ...ಯಾ, ಮಯ-ಮಯನಿಂದ, ಕೃತ- ಮಾಡಲ್ಪಟ್ಟ, ಅದ್ಭುತ-ಆಶ್ಚರ್ಯಕರವಾದ, ಶಿಲ್ಪ-ಚಮತ್ಕಾರಗಳಿಂದ, ಮಾಯಾ-ಮೋಹಕರವಾದ, ಸಭಾ-ಸಭೆಯು, ಲಬ್ಧಾ-ಪ್ರವೇಶಿಸಲ್ಪಟ್ಟಿತೋ, ತೇ - ನಿನ್ನ, ಅಧ್ವರೇ - ರಾಜಸೂಯ ಯಾಗದಲ್ಲಿ, ನೃಪತಯಃ - ದೊರೆಗಳು, ದಿಗ್ಭ್ಯಃ-ದಿಕ್ಕುದಿಕ್ಕುಗಳಿಂದಲೂ, ಬಲಿಂ-ಕಾಣಿಕೆಯನ್ನು, ಅಹರನ್ - ತಂದೊಪ್ಪಿಸಿದರೋ ! ॥ ೮ ॥ ಯತ್ತೇಜಸಾ-ಯಾರತೇಜಸ್ಸಿನಿಂದ, ಗಜಾ...ರ್ಯಃ, ಗಜಾಯುತ-ಹತ್ತುಸಾವಿರಆನೆಗಳ, ಸತ್ವ-ಬಲವು, ವೀರ್ಯಃ-ಪರಾಕ್ರಮವೂಉಳ್ಳ, ತವ-ನಿನ್ನ, ಅನುಜಃ-ತಮ್ಮನಾದ, ಆರ್ಯಃ-ಪೂಜ್ಯನಾದ ಭೀಮಸೇನನು, ಮಖಾರ್ಥಂ-ರಾಜಸೂಯಯಾಗಕ್ಕಾಗಿ, ನೃಪಶಿರೋಂಘ್ರಿಂ, ನೃಪ-ರಾಜರ, ಶಿರಃ-ತಲೆಗಳಲ್ಲಿ, ಅಂಘ್ರಿಂ-ಪಾದವುಳ್ಳ, (ಜರಾಸಂಧನನ್ನು), ಅಹನ್-ಕೊಂದನೋ ? ತೇನ - ಆಜರಾಸಂಧನಿಂದ, ಪ್ರಮಥ...ಯ, ಪ್ರಮಥನಾಥ-ಈಶ್ವರನ, ಮಖಾಯ-ಯಜ್ಞಾರ್ಥವಾಗಿ, ಆಹೃತಾಃ-ಹಿಡಿಯಲ್ಪಟ್ಟ, ಭೂಪಾಃ-ದೊರೆಗಳು, ಯನ್ಮೋಚಿತಾಃ, ಯತ್-ಯಾವಕೃಷ್ಣನಿಂದ, ಮೋಚಿತಾಃ-ಬಿಡಿಸಲ್ಪಟ್ಟವರಾಗಿ, ತತ್-ಆಕಾರಣದಿಂದ, ತೇ-ನಿನ್ನ, ಅಧ್ವರೇ-ಯಜ್ಞದಲ್ಲಿ, ಬಲಿಂ-ಕಾಣಿಕೆಯನ್ನು, ಅನಯನ್-ಸಲ್ಲಿಸಿದರೋ ! ॥ ೯ ॥

ಗಳೊಡಗೂಡಿ ಪ್ರತಿಭಟಿಸಿದ ಇಂದ್ರನನ್ನೂಗೆದ್ದು ಅಗ್ನಿಗೆ ಅವನಪ್ರಾರ್ಥನೆಯಂತೆ ಖಾಂಡವವನವನ್ನು ಆಹುತಿಯಾಗಿ ಕೊಟ್ಟೆನೋ,ಯಾವನಕೃಪೆಯಿಂದ ನಾನು, ನೀರನ್ನು ಭೂಮಿಯಾಗಿ, ಭೂಮಿಯನ್ನು ನೀರಾಗಿ ತಿಳಿವಂತೆಯೂ, ಇನ್ನೂ ಅನೇಕ ಕೃತ್ರಿಮ ರಚನೆಗಳಿರುವಂತೆಯೂ, ಮಯನ ಚಾತುರ್ಯದಿಂದ ನಿರ್ಮಿತವಾಗಿ ಜಗನ್ಮೋಹನವೆನಿಸಿರುವ ರಾಜಸೂಯಸಭೆಯನ್ನು ನಿರ್ವಿಘ್ನದಿಂದ ಪ್ರವೇಶಿಸಿದೆನೋ, ಮತ್ತು ಯಾವನ ಮಹಿಮೆಯಿಂದ ನಮಗೆ ಸಮಸ್ತರಾಜರೂ ಜಿತರಾಗಿ,ರಾಜಸೂಯಯಾಗದಲ್ಲಿ ನಿನಗೆಕಾಣಿಕೆಯನ್ನು ಸಮರ್ಪಿಸಿದರೋ॥೮॥ಅಲ್ಲದೆ ಯಾರಸಹಾಯದಿಂದ ಮಹಾಪರಾಕ್ರಮಿಯಾದ ನಮ್ಮಣ್ಣನು, ಎಲ್ಲ ರಾಜರನ್ನೂ ಪಾದಾಕ್ರಾಂತರನ್ನಾಗಿ ಮಾಡಿಕೊಂಡಿದ್ದ ಜರಾಸಂಧನನ್ನು ಕೊಂದನೋ, ಮತ್ತು ಆ ನೀಚನಾದ ಜರಾಸಂಧನು ಯಜ್ಞದಲ್ಲಿ ಭೈರವನಿಗೆ ಬಲಿಗೊಡುವುದಕ್ಕಾಗಿ

* ಗದಾಯುಧ. † ಪಾ - ಭ್ಯುದನಯನ್.

ವಿಕೀರ್ಯ ಪದಯೋಃ ಪತಿತಾಶ್ರುಮುಖ್ಯಾ ಯಸ್ತತ್ ಸ್ತ್ರಿಯೋಽಕೃತ
ಹತೇಶವಿಮುಕ್ತಕೇಶಾಃ ॥ ೧೦ ॥ ಯೋನೋ ಜುಗೋಪ ವನ ಏತ್ಯ
ದುರಂತಕೃಚ್ಛ್ರಾದ್ದುರ್ವಾಸಸೋಽರಿರಚಿತಾದಯುತಾಗ್ರಭುಗ್ಯಃ ।
ಶಾಕಾನ್ನಶಿಷ್ಟಮುಪಯುಜ್ಯ ಯತಸ್ತ್ರಿಲೋಕೀಂ ತೃಪ್ತಾಮಮಂಸ್ತ ಸಲಿ
ಲೇ ವಿನಿಮಗ್ನಸಂಘಃ ॥ ೧೧ ॥ ಯತ್ತೇಜಸಾಥ ಭಗವಾನ್ ಯುಧಿಶೂಲ
ಪಾಣಿರ್ವಿಸ್ಮಾಪಿತಃ ಸ ಗಿರಿಜೋಽಸ್ತ್ರಮದಾನ್ನಿಜಂ ಮೇ । ಅನ್ಯೇಽಪಿ

ಪದಯೋಃ - ಪಾದಗಳಮೇಲೆ ಪತಿ...ಖ್ಯಾಃ, ಪತಿತಾ-ಬಿದ್ದವಳಾಗಿ, ಅಶ್ರುಮುಖ್ಯಾಃ-ಕಣ್ಣೀರನ್ನು ಸುರಿಸುತ್ತಿದ್ದ, ತವ-ನಿನ್ನ, ಪತ್ನ್ಯಾಃ-ಹೆಂಡತಿಯಾದ ದ್ರೌಪದಿಯ, ಅಧಿ...ಬರಂ, ಅಧಿಮಖ-ಯಜ್ಞದಲ್ಲಿ, ಕ್ಲೃಪ್ತ-ಮಾಡಿದ, ಮಹಾಭಿಷೇಕ-ಮಹಾಭಿಷೇಕದಿಂದ, ಶ್ಲಾಘಿಷ್ಠ-ಶ್ರೇಷ್ಠವಾದ, ಚಾರು-ಮನೋಹರವಾದ, ಕಬರಂ-ಕೇಶಪಾಶವು, ಕಿತವೈಃ-ಯಾವನೀಚರಾದ ದುಶ್ಶಾಸನಾದಿಗಳಿಂದ, ಸಭಾಯಾಂ ರಾಜಸಭೆಯಲ್ಲಿ, ವಿಕೀರ್ಯ-ಕೆದರಿ, ಸ್ಪೃಷ್ಟಂ-ಹಿಡಿದೆಳೆಯಲ್ಪಟ್ಟಿತೊ! ತತ್ಸ್ತ್ರಿಯಃ, ತತ್-ಆ ನೀಚರ, ಸ್ತ್ರಿಯಃ-ಹೆಂಡತಿಯರನ್ನು, ಯಃ-ಯಾವಭೀಮನು, ಹತೇ...ಶಾಃ, ಹತ-ಕೊಲ್ಲಲ್ಪಟ್ಟ, ಈಶ-ಪತಿಗಳುಳ್ಳವರಾದಕಾರಣ, ವಿಮುಕ್ತ-ತೆಗೆಯಲ್ಪಟ್ಟ, ಕೇಶಾಃ ಕೂದಲುಳ್ಳವರನ್ನಾಗಿ, ಅಕೃತ - ಮಾಡಿದನೋ! ॥ ೧೦ ॥ ಯಃ-ಯಾವಕೃಷ್ಣಮೂರ್ತಿಯು, ವನೇ-ಅರಣ್ಯದಲ್ಲಿ, ಏತ್ಯ - ಬಂದು, ಶಾಕಾನ್ನಶಿಷ್ಟಂ, ಶಾಕ-ಶಾಕರೂಪವಾಗಿರುವ, ಅನ್ನ-ಅನ್ನದ, ಶಿಷ್ಟಂ-ಶೇಷವನ್ನು, ಉಪಭುಜ್ಯ - ಭುಜಿಸಿ, ಯಃ-ಯಾವನು, ಅಯುತಾಗ್ರಭುಕ್, ಅಯುತ-ಹತ್ತುಸಾವಿರಮಂದಿ ಬ್ರಾಹ್ಮಣರ, ಅಗ್ರ-ಪಙ್ಕ್ತಿಯಲ್ಲಿ, ಭುಕ್-ಊಟಮಾಡುವೆನೆಂಬ ವ್ರತವುಳ್ಳವನಾಗಿದ್ದನೋ: ದುರ್ವಾಸಸಃ-ಅಂತಹದುರ್ವಾಸ ಮುನಿಯ ಮೂಲಕವಾಗಿ, ಅರಿರಚಿತಾತ್, ಅರಿ-ಶತ್ರುಗಳಿಂದ, ರಚಿತಾತ್-ಮಾಡಲ್ಪಟ್ಟ, ದುರಂತಕೃಚ್ಛ್ರಾತ್, ದುರಂತ-ಅಪಾರವಾದ, ಕೃಚ್ಛ್ರಾತ್-ಕಷ್ಟದಿಂದ, ನಃ-ನಮ್ಮನ್ನು, ಜುಗೋಪ-ರಕ್ಷಿಸಿದನೋ! ಯತಃ ಯಾರಿಂದ, ಸಲಿಲೇ-ನೀರಿನಲ್ಲಿ, ವಿನಿಮಗ್ನಸಂಘಃ, ವಿನಿಮಗ್ನ-ಮುಳುಗಿದ, ಸಂಘಃ-ಬ್ರಾಹ್ಮಣರ ಗುಂಪುಳ್ಳವನಾದ, (ದುರ್ವಾಸನು) ತ್ರಿಲೋಕೀಂ-ಮೂರುಲೋಕಗಳನ್ನು, ತೃಪ್ತಾಂ - ತೃಪ್ತವಾದದ್ದನ್ನಾಗಿ, ಅಮಂಸ್ತ-ತಿಳಿದನೋ! ॥ ೧೧ ॥ ಯತ್ತೇಜಸಾ-ಯಾರಪರಾಕ್ರಮದಿಂದ, ಅಥ-ಅನಂತರದಲ್ಲಿ, ಸಗಿರಿಜಃ ಪಾರ್ವತೀಸಹಿತನಾದ, ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ, ಶೂಲಪಾಣಿಃ - ಪರಮೇಶ್ವರನು, ಯುಧಿ-ಯುದ್ಧದಲ್ಲಿ, ವಿಸ್ಮಾಪಿತಸ್ಸನ್-ಆಶ್ಚರ್ಯಗೊಳಿಸಲ್ಪಟ್ಟವನಾಗಿ, ಮೇ-ನನಗೆ, ನಿಜಂ-ತನ್ನ, ಅಸ್ತ್ರಂ-

ಹಿಡಿದುತರಲ್ಪಟ್ಟಿದ್ದ ರಾಜರು, ಯಾವನ ಮಹಿಮೆಯಿಂದ ಬಿಡುಗಡೆಯನ್ನು ಹೊಂದಿದರೋ, ಅವರೆಲ್ಲರೂ ಯಾವನಿಂದ ನೀನುಮಾಡಿದ ಯಜ್ಞದಲ್ಲಿ ಕಾಣಿಕೆಗಳನ್ನು ತಂದೊಪ್ಪಿಸಿದರೋ, ಯಜ್ಞದಲ್ಲಿ ಮಹಾಭಿಷೇಕದಿಂದ ಪವಿತ್ರವೆನಿಸಿ ರಮ್ಯವಾಗಿದ್ದನಿನ್ನ ಮಡದಿಯಾದ ದ್ರೌಪದಿಯ ಕೇಶಪಾಶವನ್ನು ಹಿಡಿದೆಳೆದು ಸಭೆಯಲ್ಲಿ ಅವಮಾನ ಮಾಡಿದ ದುಶ್ಶಾಸನನೇ ಮೊದಲಾದ ನೀಚರ ವಿಷಯವನ್ನು ಹೇಳಿಕೊಂಡು ದುಃಖದಿಂದ ಅಳುತ್ತಾ, ತನ್ನ ಕಾಲ್ಗೆರಗಿದ ದ್ರೌಪದಿಯನ್ನು ಸಮಾಧಾನಪಡಿಸಿ, ಯಾವನ ಸಹಾಯದಿಂದ ಅಣ್ಣನಾದ ಭೀಮಸೇನನು ಆ ನೀಚರನ್ನು ಸಂಹರಿಸಿ ಅವರಪತ್ನಿಯರು ವಿಕೇಶಿಯರಾಗುವಂತೆಮಾಡಿದನೋ॥

ಯಾವನ ಮಹಿಮೆಯಿಂದ ನಾನು, ಕಿರಾತ ರೂಪದಿಂದ ಬಂದು ನನ್ನಮೇಲೆ ಯುದ್ಧ

ಚಾಹ ಮನುಷ್ಯೈವ ಕಳೇಬರೇಣ ಪ್ರಾಪ್ತೋ ಮಹೇಂದ್ರಭವನೇ ಮಹ
ದಾಸನಾರ್ಧಂ ॥ ೧೨ ॥ ತತ್ರೈವ ಮೇ ವಿಹರತೋ ಭುಜದಣ್ಡಯುಗ್ಮಂ
ಗಾಣ್ಡೀವಲಕ್ಷಣ ಮರಾತಿ ವಧಾಯ ದೇವಾಃ । ಸೇನ್ದ್ರಾಃ ಶ್ರಿತಾ ಯದನು
ಭಾವಿತ ಮಾಜಮೀಢ ! ತೇನಾಹ ಮದ್ಯ ಮುಷಿತಃ ಪುರುಷೇಣ ಭೂಮ್ನಾ॥
ಯದ್ಬಾಂಧವಃ ಕುರುಕುಲಾಬ್ಧಿ ಮನಂತಪಾರ ಮೇಕೋರಥೇನ * ತತರೇ

ಪಾಶುಪತಾಸ್ತ್ರವನ್ನು, ಅದಾತ್-ಕೊಟ್ಟನೋ, ಅನ್ಯೇಪಿ-ಉಳಿದ ದೇವತೆಗಳೆಲ್ಲರೂ, (ಅಮುಃ-ತಮ್ಮ ತಮ್ಮ ಅಸ್ತ್ರಗಳನ್ನು ಕೊಟ್ಟರೋ) ಅಹಂ - ನಾನು ಅಮುನಾ - ಈ ಮನುಷ್ಯಸಂಬಂಧವಾದ, ಕಳೇಬರೇಣೈವ-ದೇಹದಿಂದಲೇ, ಮಹೇಂದ್ರಭವನೇ-ಇಂದ್ರನ ಮನೆಯಲ್ಲಿ, ಮಹತ್-ಶ್ರೇಷ್ಠವಾದ, ಆಸನಾರ್ಧಂ-ಆಸನದ ಅರ್ಧಭಾಗವನ್ನೂ ಕೂಡ, ಪ್ರಾಪ್ತಃ-ಪಡೆದೆನೋ ! ॥ ೧೨ ॥ ಆಜಮೀಢ-ಎಲೈ ಧರ್ಮರಾಜನೆ! ತತ್ರೈವ-ಆಸ್ವರ್ಗದಲ್ಲಿಯೇ, ವಿಹರತಃ-ಕ್ರೀಡಿಸುತ್ತಿದ್ದ, ಮೇ-ನನ್ನ, ಯದನುಭಾವಿತಂ, ಯತ್-ಯಾವನಿಂದ, ಅನುಭಾವಿತಂ-ಪ್ರಭಾವಯುಕ್ತವಾಗಿ ಮಾಡಲ್ಪಟ್ಟ, ಗಾಣ್ಡೀವಲಕ್ಷಣಂ, ಗಾಣ್ಡೀವ-ಗಾಣ್ಡೀವವೆಂಬ ಧನುಸ್ಸೇ, ಲಕ್ಷಣಂ-ಗುರುತಾಗಿರುವ, ಭುಜದಣ್ಡಯುಗ್ಮಂ, ಭುಜದಂಡ - ದಣ್ಡದಂತಿರುವ ಬಾಹುಗಳ, ಯುಗ್ಮಂ - ಯುಗವನ್ನು, ಸೇನ್ದ್ರಾಃ - ಇಂದ್ರಸಹಿತರಾದ, ದೇವಾಃ - ದೇವತೆಗಳು, ಅರಾತಿವಧಾಯ, ಅರಾತಿ-ಶತ್ರುಗಳ, ವಧಾಯ-ಸಂಹಾರಕ್ಕಾಗಿ, ಶ್ರಿತಾಃ - ಆಶ್ರಯಿಸಿದರೋ ! ತೇನ-ಅಂತಹ, ಭೂಮ್ನಾ-ನಿಜಮಹಿಮೆಯಲ್ಲಿ-ನೆಲೆಗೊಂಡಿರುವ, ಪುರುಷೇಣ-ಪುರಾಣಪುರುಷನಾದ ಕೃಷ್ಣನಿಂದ, ಅಹಂ - ನಾನು, ಅದ್ಯ - ಈಗ, ಮುಷಿತಃ - ವಂಚಿಸಲ್ಪಟ್ಟೆನು ॥ ೧೩ ॥

ಯದ್ಬಾನ್ಧವಃ, ಯತ್ - ಯಾವಕೃಷ್ಣನಿಗೆ, ಬಾನ್ಧವಃ - ಬಂಧುವಾಗಿ, ಅಹಂ-ನಾನು, ಏಕಃ-ಒಬ್ಬನೇ, ಅನಂತಪಾರಂ-ಅನಂತ ಕೊನೆಯಿಲ್ಲದ, ಪಾರಂ - ದಡೆವುಳ್ಳ, ಅತೀರ್ಯಸತ್ತ್ವಂ, ಅತೀರ್ಯ-ದಾಟುವುದಕ್ಕೆ ಅಸಾಧ್ಯವಾದ, ಸತ್ವಂ-ಭೀಷ್ಮದ್ರೋಣಾದಿಗಳೆಂಬ ಜಲಚರಗಳುಳ್ಳ, ಕುರುಕುಲಾಬ್ಧಿಂ-ಕುರುಕುಲ-ಕೌರವ ವಂಶವೆಂಬ, ಅಬ್ಧಿಂ-ಸಮುದ್ರವನ್ನು, ರಥೇನ - ರಥದಿಂದ, ತತರೇ - ದಾಟಿದೆನೋ, ಮಯಾ-ನನ್ನಿಂದ, ಪುರುಧನಞ್ಜ-ಶತ್ರುಗಳು ಆಕ್ರಮಿಸಿದ್ದ ಗೋಧನವೂ ಸಹ, ಪ್ರತ್ಯಾಹೃತಂ-ಹಿಂದಿರು

ಮಾಡಿದ ಆ ಪರಮೇಶ್ವರನನ್ನು ವಿಸ್ಮಯ ಹೊಂದುವಂತೆ ಮಾಡಿ, ಅವನಿಂದ ಪಾಶುಪತಾಸ್ತ್ರವನ್ನೂ, ಆಶ್ಚರ್ಯಭರಿತರಾದ ಇಂದ್ರಾದಿ ದೇವತೆಗಳಿಂದ ಅವರವರ ಅಸ್ತ್ರಗಳನ್ನೂ ಸಂಪಾದಿಸಿದೆನೋ ! ಮತ್ತು ತಪಃಪ್ರಭಾವದಿಂದ ದೇಹಾಂತರವನ್ನು ಪಡೆದು ಪ್ರವೇಶಿಸುವುದಕ್ಕೆ ಅರ್ಹವಾದ ಸ್ವರ್ಗಲೋಕವನ್ನು ಈ ದೇಹದಿಂದಲೇ ಹೊಕ್ಕು ಐದುವರ್ಷಗಳವರೆಗೂ ಇಂದ್ರಸಿಂಹಾಸನದ ಅರ್ಧಾಧಿಕಾರವನ್ನು ಯಾವನಅನುಗ್ರಹದಿಂದಪಡೆದೆನೋ ! ॥೧೨॥ ಯಾವ ಮಹಾನುಭಾವನಮಹಿಮೆಯಿಂದ ಗಾಂಡೀವಧನುಸ್ಸನ್ನು ಧರಿಸಿದ ನನ್ನ ದೋರ್ದಂಡಗಳು ಪ್ರಖ್ಯಾತಗಳಾದುವೋ । ನಾನು ಆ ಸ್ವರ್ಗಲೋಕದಲ್ಲಿರುವಾಗ, ನಿವಾತಕವಚಾದಿ ರಾಕ್ಷಸರ ನಿವಾರಣೆಗಾಗಿ ಎಲ್ಲದೇವತೆಗಳೂ ನನ್ನನ್ನಾಶ್ರಯಿಸಿದರೋ, ಅಂತಹ ಪುರುಷೋತ್ತಮನಾದ ಕೃಷ್ಣನನ್ನು ನಾನೀಗ ಕಳೆದುಕೊಂಡೆನು ॥ ೧೩ ॥

ಯಾವ ಕೃಷ್ಣನು ಬಂಧುವಾಗಿದ್ದುದರಿಂದ ಉತ್ತರಗೋಗ್ರಹಣದಲ್ಲಿ ನಾನೊಬ್ಬನೇ ಅಸಹಾಯನಾಗಿ ರಥವನ್ನೇರಿಹೋಗಿ ಭೀಷ್ಮದ್ರೋಣಾದಿ ಮಹಾಪರಾಕ್ರಮಿಗಳಿಂದ

ಹಮಾತ್ಯೀರ್ಯಸತ್ತ್ವಂ । ಪ್ರತ್ಯಾಹೃತಂ ಪುರುಧನಞ್ಚ ಮಯಾ ಪರೇಷಾಂ ತೇಜಾಸ್ಪದಂ ಮಣಿಮಯಞ್ಚ ಹೃತಂ ಶಿರೋಭ್ಯಃ ॥ ೧೪ ॥ ಯೋ ಭೀಷ್ಮ ಕರ್ಣ ಗುರು ಶಲ್ಯ ಚಮೂಷ್ವದಭ್ರರಾಜನ್ಯವರ್ಯರಥ ಮಣ್ಡಲಮಣ್ಡಿತಾಸು। ಅಗ್ರೇಚರೋ ಮಮ ವಿಭೋ ರಥಯೂಥಪಾನಾಮಾಯುರ್ಮನಾಂಸಿ ಚ ದೃಶಾ ಸಹ ಓಜ ಆರ್ಚ್ಛತ್ ॥ ೧೫ ॥ ಯದ್ದೋಷ್ಷು ಮಾ ಪ್ರಣಿಹಿತಂ ಗುರು ಭೀಷ್ಮ ಕರ್ಣ ನಪ್ತೃ ತ್ರಿಗರ್ತ ಶಲ ಸೈನ್ಧವ ಬಾಹ್ಲಿಕಾದ್ಯೈಃ । ಅಸ್ತ್ರಾಣ್ಯಮೋಘಮಹಿಮಾನಿ ನಿರೂಪಿತಾನಿ ನೋಪಸ್ಪೃಶು

ಗಿಸಿ ತರಲ್ಪಟ್ಟಿತೋ ! ಪರೇಷಾಂ-ವೈರಿರಾಜರ, ಶಿರೋಭ್ಯಃ-ತಲೆಗಳಿಂದ, ಮಣಿಮಯಂಚ - ರತ್ನಖಚಿತವಾದ, ತೇಜಃಪದಂ-ಕಿರೀಟವು, ಹೃತಂ-ಅಪಹರಿಸಲ್ಪಟ್ಟಿತೋ ! ॥ ೧೪ ॥ ವಿಭೋ - ಎಲೈ ಸ್ವಾಮಿಯಾದ ಧರ್ಮರಾಜನೆ! ಅದಭ್ರ...ಸು, ಅದಭ್ರ - ಅಸಂಖ್ಯಾಕರಾದ, ರಾಜನ್ಯವರ್ಯ - ಕ್ಷತ್ರಿಯಶ್ರೇಷ್ಠರ, ರಥ-ರಥಗಳ, ಮಣ್ಡಲ-ಸಮೂಹದಲ್ಲಿ, ಮಂಡಿತಾಸು - ಕುಳಿತಿರುವ, ಭೀಷ್ಮ - ಭೀಷ್ಮನೂ ಕರ್ಣ-ಕರ್ಣನೂ, ಗುರು-ದ್ರೋಣನೂ, ಶಲ್ಯ-ಶಲ್ಯನೂ ಇವರ, ಚಮೂಷು-ಸೇನೆಗಳಲ್ಲಿ, ಯಃ-ಯಾವ ಕೃಷ್ಣನು, ಮಮ-ನನ್ನ, ಅಗ್ರೇಸರಃ-ಮುಂದಿರುವವನಾಗಿ, ದೃಶಾ - ನೋಟದಿಂದಲೇ, ರಥಯೂಥಪಾನಾಂ-ರಥಪತಿಗಳ, ಆಯುಃ-ಆಯುಸ್ಸನ್ನೂ, ಮನಾಂಸಿ-ಬುದ್ಧಿಗಳನ್ನೂ, ಸಹಃ-ಬಲವನ್ನೂ, ಓಜಃ-ಅಸ್ತ್ರಚಾತುರ್ಯವನ್ನೂಸಹ, ಆರ್ಚ್ಛತ್-ನಾಶಮಾಡಿದನೋ ! ॥ ೧೫ ॥ ಯದ್ದೋಷ್ಷು, ಯತ್-ಯಾವಕೃಷ್ಣನ, ದೋಷ್ಷು-ಭುಜಗಳಲ್ಲಿ, ಪ್ರಣಿಹಿತಂ-ಇಡಲ್ಪಟ್ಟ, ಮಾ - ನನ್ನನ್ನು, ಗುರು-ದ್ರೋಣನೂ, ಭೀಷ್ಮ-ಭೀಷ್ಮಾಚಾರ್ಯನೂ, ಕರ್ಣ-ಕರ್ಣನೂ, ನಪ್ತೃ - ಭೂರಿಶ್ರವನೂ, (ಮೊಮ್ಮಗ) ತ್ರಿಗರ್ತ-ಸುಶರ್ಮನೂ, ಶಲ-ಶಲ್ಯನೂ, ಸೈಂಧವ-ಸೈಂಧವನೂ, ಬಾಹ್ಲಿಕ-ಶಂತನುವಿನ ಸಹೋದರನು, ಆದ್ಯೈಃ-ಇವರೇ ಮೊದಲಾದವರಿಂದ, ನಿರೂಪಿತಾನಿ-ಪ್ರಯೋಗಿಸಲ್ಪಟ್ಟ, ಅಮೋಘಮಹಿಮಾನಿ, ಅಮೋಘ-ವ್ಯರ್ಥವಾಗದ, ಮಹಿಮಾನಿ-ಮಹಾತ್ಮ್ಯವುಳ್ಳ, ಅಸ್ತ್ರಾಣಿ - ಬಾಣಗಳನ್ನು, ಆಸುರಾಣಿ - ರಾಕ್ಷಸಸಂಬಂಧಗಳಾದ ಬಾಣಗಳು, ನೃಹರಿದಾಸಮಿವ, ನೃಹರಿ-ನರಸಿಂಹನ, ದಾಸಮಿವ, ಭಕ್ತನಾದ ಪ್ರಹ್ಲಾ

ಕೂಡಿ ಪ್ರವೇಶಕ್ಕಸಾಧ್ಯವಾದ ಕುರುಸೇನೆಯನ್ನು ಎದುರಿಸಿ, ಶತ್ರುಜಯವನ್ನು ಹೊಂದಿ ಗೋವುಗಳನ್ನು ಹಿಂದಿರುಗಿಸಿಕೊಂಡು ಬಂದುದಲ್ಲದೆ, ಪರರಾಜರ ತಲೆಯಲ್ಲಿ ಒಪ್ಪುತ್ತಿದ್ದ ರತ್ನಖಚಿತವಾದ ದಿವ್ಯಕಿರೀಟಗಳನ್ನೂ ಅಪಹರಿಸಿದೆನೋ ! ॥ ೧೪ ॥ ಯಾವ ಶ್ರೀ ಕೃಷ್ಣನು ನನಗೆ ಸಾರಥಿಯಾಗಿ ರಥದಮುಂಭಾಗದಲ್ಲಿ ಕುಳಿತು ದೃಷ್ಟಿಮಾತ್ರದಿಂದಲೇ, ಅಪಾರ ಸೇನಾಸಮೇತರಾಗಿ ಬಂದು ನನ್ನನ್ನು ಪ್ರತಿಭಟಿಸಿದ ರಥಪತಿಗಳಾದ, ಭೀಷ್ಮ, ದ್ರೋಣ, ಕರ್ಣ, ಶಲ್ಯ, ಮೊದಲಾದ ಯೋಧಾಗ್ರೇಸರರ, ಬುದ್ಧಿಯನ್ನೂ, ಶಕ್ತಿಯನ್ನೂ, ಅಸ್ತ್ರ ಕೌಶಲವನ್ನೂ, ಆಯುಷ್ಯವನ್ನೂ ಅಪಹರಿಸಿದನೋ ! ॥ ೧೫ ॥ ಯಾವಭಗವಂತನಾದ ಕೃಷ್ಣನ ಭುಜದಂಡಗಳನ್ನು ನಾನು ಆಶ್ರಯಿಸಿದ್ದುದರಿಂದಲೇ, ನಮ್ಮ ಶತ್ರುಪಕ್ಷದಲ್ಲಿದ್ದ ಭೀಷ್ಮ, ದ್ರೋಣ, ಮೊದಲಾದ ಅಸಹಾಯ ಶೂರರು ಪ್ರಯೋಗಿಸಿದ ಅಮೋಘಗಳಾದಬಾಣಗಳೂಸಹ, ಹಿರಣ್ಯಕಶಿಪುವಿನ ಬಾಣಗಳು ನೃಸಿಂಹಸ್ವಾಮಿಯ ಪರಮಭಕ್ತ

ನ್ನೃಗಹರಿದಾಸ ಮಿಮಾಸುರಾಣಿ ॥ ೧೬ ॥ *ಸೌತ್ಯೇ ವೃತಃ ಕುಮತಿನಾ
ತ್ಮದ ಈಶ್ವರೋ ಮೇ ಯತ್ಪಾದಪದ್ಮ ಮಭವಾಯ ಭಜನ್ತಿ ಧನ್ಯಾಃ ।
ಮಾಂ ಶ್ರಾಂತವಾಹ ಮರಯೋ ರಥಿನೋ ಭುವಿಷ್ಠಂ ನ ಪ್ರಾಹರರ್ ಯದ
ನು ಭಾವ ನಿರಸ್ತ ಚಿತ್ತಾಃ ॥ ೧೭ ॥ ನರ್ಮಾಣ್ಯುದಾರ ರುಚಿರಸ್ಮಿತಶೋ
ಭಿತಾನಿ ಹೇ ಪಾರ್ಥ ! ಹೇ ರ್ಜುನ ! ಸಖೇ ! ಕುರುನಂದನೇತಿ । ಸಂಜಲ್ಪಿ

ದನನ್ನೋಪಾದಿಯಲ್ಲಿ, ನೋಪಸಸ್ಪೃಶುಃ-ಸೋಕಲಿಲ್ಲವೋ, ॥ ೧೬ ॥ ಧನ್ಯಾಃ-ಪುಣ್ಯಶಾಲಿಗಳು, ಯತ್ಪಾದಪದ್ಮಂ, ಯತ್-ಯಾವ ಪರಮಾತ್ಮನ, ಪಾದಪದ್ಮಂ - ಕಮಲದಂತಿರುವಪಾದವನ್ನು, ಅಭವಾಯ-ಪುನರ್ಜನ್ಮವನ್ನು ಕಳೆದುಕೊಳ್ಳುವುದಕ್ಕಾಗಿ, ಭಜನ್ತಿ - ಸೇವಿಸುತ್ತಾರೋ, ಈಶ್ವರಃ-ಅಂತಹ ಜಗದೊಡೆಯನಾದ, ಆತ್ಮದಃ-ಜ್ಞಾನಪ್ರದನಾದ ಕೃಷ್ಣನು, ಕುಮತಿನಾ-ಅಲ್ಪ ಬುದ್ಧಿಯುಳ್ಳ, ಮೇ - ನನ್ನಿಂದ ಸೌತ್ಯೇ - ಸಾರಥಿಯಕೆಲಸದಲ್ಲಿ, ವೃತಃ-ನಿಯಮಿಸಲ್ಪಟ್ಟನಲ್ಲವೇ ? ಯದನು...ತ್ತಾಃ, ಯತ್ - ಯಾವ ಕೃಷ್ಣನ, ಅನುಭಾವ-ಮಹಿಮೆಯಿಂದ, ನಿರಸ್ತ-ಅಪಹರಿಸಲ್ಪಟ್ಟ, ಚಿತ್ತಾಃ-ಮನಸ್ಸುಳ್ಳವರಾಗಿ, ರಥಿನಃ-ರಥಗಳುಳ್ಳ, ಅರಯಃ-ಶತ್ರುಗಳು, ಭುವಿಷ್ಠಂ-ನೆಲದಲ್ಲಿ ನಿಂತಿದ್ದ, ಶ್ರಾಂತವಾಹಂ, ಶ್ರಾಂತ - ಬಳಲಿದ ವಾಹಂ-ಕುದುರೆಗಳುಳ್ಳ, ಮಾಂ-ನನ್ನನ್ನು, ನಪ್ರಾಹರರ್-ಹೊಡೆಯಲಿಲ್ಲವೊ !

ನರದೇವ-ದೊರೆಯಾದ ಧರ್ಮಜನೇ ! ಮಾಧವಸ್ಯ - ಲಕ್ಷ್ಮೀಪತಿಯಾದ ಕೃಷ್ಣನ, ಹೇಪಾರ್ಥ-

ನಾದಪ್ರಹ್ಲಾದನನ್ನೋ ಪಾದಿಯಲ್ಲಿ ನನ್ನನ್ನು ಮುಟ್ಟಲಾರದೆ ಹೋದುವೋ ! ॥ ೧೬ ॥

ಜನ್ಮಾಂತರಗಳನ್ನುಕಳೆದುಕೊಂಡು ಮೋಕ್ಷವನ್ನು ಪಡೆವುದಕ್ಕಾಗಿ, ಪುಣ್ಯಾತ್ಮರು ಯಾರಪದಕಮಲದಗಳಸೇವೆಯನ್ನು ಮಾಡುತ್ತಾರೋ, ಯಾವ ಮಹಾಮಹಿಮನನ್ನು ದುರ್ಬುದ್ಧಿಯುಳ್ಳನಾನು ಸಾರಥ್ಯಕ್ಕೆ ನಿಯಮಿಸಿಕೊಂಡಿದ್ದೆನೋ ! ಮತ್ತು ನಾನು ಒಂದಾನೊಂದು ದಿವಸದಲ್ಲಿ "ಜಯದ್ರಥನನ್ನು ಸೂರ್ಯಾಸ್ತಕಾಲದೊಳಗಾಗಿ ಸಂಹರಿಸದಿದ್ದರೆ ನನ್ನ ರಥದೊಡನೆ ಅಗ್ನಿಪ್ರವೇಶಮಾಡುವೆನು" ಎಂಬ ಕ್ರೂರವಾದ ಪ್ರತಿಜ್ಞೆಯನ್ನು ಮಾಡಿ ರಥದಲ್ಲಿನಿಂತು ಯುದ್ಧಮಾಡುತ್ತಿರುವಾಗ, ಬಿಸಿಲಿನ ತಾಪದಿಂದ ರಥಾಶ್ವಗಳು ಬಳಲಿ ಬಾಯಾರಿದುದನ್ನುಕಂಡು, ನೆಲವನ್ನು ತೋಡಿ ನೀರನ್ನು ತೆಗೆದು ಅವುಗಳ ದಣುವಾರಿಸಬೇಕೆಂದು ರಥದಿಂದಿಳಿದಾಗ, ಪ್ರತಿಪಕ್ಷದಲ್ಲಿ ಸಿದ್ಧರಾಗಿದ್ದ ಭಟರು ಯಾವನ ಮಹಿಮೆಯಿಂದ ನನ್ನನ್ನು ಕೊಲ್ಲದೆ ಬಿಟ್ಟರೋ ॥ ೧೭ ॥

ಯಾವ ಜಗನ್ನಿಯಾಮಕನಾದ ವಾಸುದೇವನು ನನ್ನ ಮಿತ್ರನಾಗಿದ್ದುಕೊಂಡು, ಆಯಾಸಂದರ್ಭಗಳಿಗೆ ತಕ್ಕಹಾಗೆ ನನ್ನೊಡನೆ ಪ್ರರಮಪ್ರೀತಿಯಿಂದಾಡಿದ ಹಾಸ್ಯಕರ

* ಯನ್ಮೇನೃಪೇಂದ್ರ ತದತರ್ಕ್ಯ ವಿಹಾರ ಈಶೋ ಯೋಽಲಬ್ಧರೂಪ ಮವದ ವ್ರಣಮೂರ್ಧ್ನಿ ದರ್ಶೀ । ಯನ್ಮಾಯಯಾ ವೃತದೃಶೋ ನವಿದುಃ ಪರಂ ತಂ ಸೂತ್ರಪ್ರದಯೋ ಹಮಹ ಮಸ್ಮಿ ಮಮೇತಿ ಭವ್ಯಾಃ (ವಿಜಯ) ಬ್ರಹ್ಮಾದಿ ದೇವತೆಗಳನ್ನೂ ಮರುಳು ಮಾಡುವ ಯಾವ ಭಗನಂತನು ಯುದ್ಧಾಂಗಣದಲ್ಲಿ ನನಗೆಯಾರಿಂದಲೂ ತಿಳಿಯಲಾಗದ ತತ್ವವನ್ನುಪದೇಶಿಸಿದನೋ,

ತಾನಿ ನರದೇವ ಹೃದಿಸ್ಪೃಶಾನಿ ಸ್ಮರ್ತುರ್ಲುಠಂತಿ ಹೃದಯಂ ಮಮ ಮಾಧವಸ್ಯ ॥ ೧೮ ॥ ಶಯ್ಯಾಸನಾಟನ ವಿಕತ್ಥನ ಭೋಜನಾದಿಷ್ವೈಕ್ಯಾದ್ವಯಸ್ಯ ! ಋತವಾನಿತಿ ವಿಪ್ರಲಬ್ಧಃ । ಸಖ್ಯುಃ ಸಖೇವ ಪಿತೃವತ್ತನಯಸ್ಯ ಸರ್ವಂ ಸೇಹೇ ಮಹಾನ್ ಮಹಿತಯಾ ಕುಮತೇರಘಂ ಮೇ ॥ ೧೯ ॥ ಸೋ ಹಂ ನೃಪೇಂದ್ರ ರಹಿತಃ ಪುರುಷೋತ್ತಮೇನ ಸಖ್ಯಾ ಪ್ರಿಯೇಣ ಸುಹೃದಾ ಹೃದಯೇನ ಶೂನ್ಯಃ । ಅಧ್ವನ್ಯುರುಕ್ರಮ ಪರಿಗ್ರಹ ಮಙ್ಗ

ಎಲೈ ಪೃಥಾಕುಮಾರನೇ, ಹೇಅರ್ಜುನ-ಎಲೈ ಅರ್ಜುನನೇ! ಸಖೇ - ಸ್ನೇಹಿತನೇ! ಕುರುನಂದನ-ಕುರುವಂಶಸಂಭೂತನಾದವನೇ! ಇತಿ-ಹೀಗೆಂಬ, ಉದಾರ...ನಿ, ಉದಾರ-ಗಂಭೀರಗಳಾಗಿಯೂ, ರುಚಿರ-ಮನೋಹರಗಳಾಗಿಯೂ ಇರುವ, ಸ್ಮಿತ-ಮುಗುಳುನಗೆಯಿಂದ, ಶೋಭಿತಾನಿ-ಪ್ರಕಾಶಿಸುತ್ತಿರುವ, ಹೃದಿಸ್ಪೃಶಾನಿ-ಹೃದಯಂಗಮಗಳಾದ, ನರ್ಮಾಣಿ-ಹಾಸ್ಯಕರಗಳಾದ, ಸಂಜಲ್ಪಿತಾನಿ - ಸಲ್ಲಾಪಗಳು, ಸ್ಮರ್ತುಃ-ಸ್ಮರಿಸುವ, ಮಮ-ನನ್ನ, ಹೃದಯಂ-ಮನಸ್ಸನ್ನು, ಲುಠಂತಿ-ಕಲಕುತ್ತಿವೆ. ॥ ೧೮ ॥ ಶಯ್ಯಾ...ಷು, ಶಯ್ಯಾ-ಮಲಗುವುದು, ಆಸನ-ಕುಳಿತಿರುವುದು, ಅಟನ-ಸಂಚರಿಸುವುದು, ವಿಕತ್ಥನ-ಆತ್ಮಶ್ಲಾಘನೆಯು, ಭೋಜನ-ಊಟವು, ಆದಿಷು-ಇವೇಮೊದಲಾದ ಕಾರ್ಯಗಳಲ್ಲಿ, ಐಕ್ಯಾತ್-ನಾವಿಬ್ಬರೂ ಜತೆಯಾಗಿದ್ದುದರಿಂದ, ವಯಸ್ಯ-ಮಿತ್ರನೇ? ಋತವಾನ್-ನೀನು, ಬಹಳ ಸತ್ಯಸಂಧನು! ಇತಿ-ಹೀಗೆಂದು, ವಿಪ್ರಲಬ್ಧಃ-ತಿರಸ್ಕರಿಸಲ್ಪಟ್ಟರೂ, ಸಖ್ಯುಃ-ಸ್ನೇಹಿತನತಪ್ಪುಗಳನ್ನು, ಸಖೇವ-ಮಿತ್ರನಂತೆಯೂ, ತನಯಸ್ಯ-ಮಗನ ದೋಷವನ್ನು, ಪಿತೃವತ್-ತಂದೆಯಂತೆಯೂ, ಕುಮತೇಃ-ಅಲ್ಪ ಬುದ್ಧಿಯುಳ್ಳ, ಮೇ-ನನ್ನ, ಅಘಂ-ತಪ್ಪನ್ನು, ಸರ್ವಂ - ಎಲ್ಲವನ್ನೂ, ಮಹಿತಯಾ - ಪೂಜ್ಯತ್ವದಿಂದ, ಮಹಾನ್ - ಶ್ರೇಷ್ಠನಾದ ಯಾವ ಕೃಷ್ಣನು, ಸೇಹೇ-ಸಹಿಸುತ್ತಿದ್ದನೋ ॥೧೯॥ ನೃಪೇಂದ್ರ-ರಾಜಶ್ರೇಷ್ಠನೇ! ಸೋऽಹಂ - ಅಂತಹ ನಾನು, ಸಖ್ಯಾ-ಸ್ನೇಹಿತನಾದ, ಪ್ರಿಯೇಣ-ಇಷ್ಟನಾದ, ಸುಹೃದಾ-ಹಿತವನ್ನೇ ಹಾರೈಸುತ್ತಿದ್ದ, ಪುರುಷೋತ್ತಮೇನ-ಪುರುಷಶ್ರೇಷ್ಠನಾದ ಕೃಷ್ಣನಿಂದ, ರಹಿತಃ-ಬಿಡಲ್ಪಟ್ಟವನಾಗಿ, ಹೃದಯೇನ-ಮನಸ್ಸಿ

ಗಳಾದ ಮಾತುಗಳನ್ನು ಈಗ ನೆನೆಸಿಕೊಂಡರೆ ನನ್ನಮನಸ್ಸು ಕೊರೆಯುವುದೋ ॥ ೧೮ ॥ ನನ್ನೊಡನೆಯೇ ಸರ್ವದಾ ತಿರುಗಾಡುವುದು, ಮಲಗುವುದು, ಭೋಜನಮಾಡುವುದು, ನಿದ್ರಿಸುವುದು, ಹಾಸ್ಯಮಾಡುವುದು; ಇವುಗಳಿಂದ ಅಲ್ಪಬುದ್ಧಿಯುಳ್ಳನಾನು ಯಾವನನ್ನು ಸಾಮಾನ್ಯನಾಗಿ ಜತೆಗಾರನಂತೆಯೇ, ಭಾವಿಸಿ ಕೆಲವು ವೇಳೆಗಳಲ್ಲಿ " ಆಃ - ನೀನು ಸುಳ್ಳಾಡುವವನೇಅಲ್ಲ, ಬಹುವಿವೇಕಿ, ಮೋಸವೆಂಬುದು ನಿನ್ನಲ್ಲಿ ಬಾರಲೇಬಾರದು, " ಎಂಬಿವೇ ಮೊದಲಾದ ಹಂಗಿಸುವ ಮಾತುಗಳನ್ನಾಡಿದರೂ, ಅವುಗಳನ್ನೊಂದನ್ನೂ ಎಣಿಸದೆ, ತಂದೆಯು ಮಗನ ತಪ್ಪುಗಳನ್ನೂ, ಸ್ನೇಹಿತನು ತನ್ನ ಗೆಳೆಯನ ಅಪರಾಧಗಳನ್ನೂ, ಮನ್ನಿಸುವಂತೆ ನನ್ನನ್ನು ಕ್ಷಮಿಸುತ್ತಿದ್ದನೋ ॥ ೧೯ ॥ ಎಲೈ ದೊರೆಯೇ ! ಅಂತಹ ಪುರಾಣಪುರುಷನಾಗಿಯೂ, ಇಷ್ಟಬಂಧುವಾಗಿಯೂ, ಆಪ್ತಮಿತ್ರನಾಗಿಯೂಇರುವ ಆ ಕೃಷ್ಣನನ್ನುಅಗಲಿ ಶೂನ್ಯಮನಸ್ಕನಾದಕಾರಣ ನಾನು ಕೃಷ್ಣನಪತ್ನಿಯರನ್ನು ಮಾರ್ಗದಲ್ಲಿ ರಕ್ಷಿಸಿಕೊಂಡುಬಂದಾಗ್ಯೂ, ದುರ್ಜನರಾದ ಆ ಗೋಪಾಲಕರಿಂದ ಹೆಂಗಸಿನಂತೆ ಪರಾ

ರಕ್ಷನ್ ಗೋಪೈರಸದ್ಭಿ ರಬಲೇವ ವಿನಿರ್ಜಿತೋ ಸ್ಮಿ ॥ ೨೦ ॥ ತದ್ವೈ
ಧನು ಸ್ತ ಇಷವಃ ಸ ರಥೋ ಹಯಾಸ್ತೇ ಸೋ ಹಂ ರಥೀ ನೃಪತಯೋ
ಯತ ಆನಮಂತಿ । ಸರ್ವಂ ಕ್ಷಣೇನ ತದಭೂ ದಸ ದೀಶರಿಕ್ತಂ ಭಸ್ಮನ್
ಹುತಂ ಕುಹಕರಾದ್ಧ ಮಿವೋಪ್ತ ಮೂಷ್ಯಾಂ ॥ ೨೧ ॥ ರಾಜಂ ಸ್ತ್ವ
ಯಾನು ಪೃಷ್ಟಾನಾಂ ಸುಹೃದಾಂ ನಃ ಸುಹೃತ್ಪುರೇ । ವಿಪ್ರಶಾಪಾವ ಮೂ
ಢಾನಾಂ ನಿಘ್ನತಾಂ ಮುಷ್ಟಿಭಿ ರ್ಮಿಥಃ ॥ ೨೨ ॥ ವಾರುಣೀಂ ಮದಿರಾಂ
ಪೀತ್ವಾ ಮದೋನ್ಮಥಿತಚೇತಸಾಂ । ಅಜಾನತಾ ಮಿವಾನ್ಯೋನ್ಯಂ ಚತುಃ

ನಿಂದ, ಶೂನ್ಯಃ-ಶೂನ್ಯನಾಗಿದ್ದೇನೆ, ಅಙ್ಗ-ಎಲೈ ದೊರೆಯೇ ! ಅಧ್ವನಿ - ಮಾರ್ಗದಲ್ಲಿ, ಉರುಕ್ರಮ ಪರಿಗ್ರಹಂ, ಉರುಕ್ರಮ-ತ್ರಿವಿಕ್ರಮಾವತಾರಿಯಾದ ಆವಿಷ್ಣುವಿನ, ಪರಿಗ್ರಹಂ - ಹೆಂಡತಿಯರ ಸಮೂಹವನ್ನು, ರಕ್ಷನ್-ರಕ್ಷಿಸುತ್ತಿರುವವನಾಗಿ, ಅಸದ್ಭಿಃ-ದುರ್ಜನರಾದ, ಗೋಪೈಃ-ಗೋಪಾಲಕರಿಂದ, ಅಬಲೇವ-ಹೆಂಗಸಿನಂತೆ, ವಿನಿರ್ಜಿತೋಸ್ಮಿ-ಜಯಿಸಲ್ಪಟ್ಟೆನು ॥ ೨೦ ॥

ಯತಃ-ಯಾವುಗಳದೆಸೆಯಿಂದ, ನೃಪತಯಃ-ದೊರೆಗಳು, ಆನಮಂತಿ - ನಮಸ್ಕರಿಸುತ್ತಾರೆಯೋ, ತದ್ವೈ-ಅದೇ, ಧನುಃ-ಬಿಲ್ಲು, ತೇ-ಅವೇ, ಇಷವಃ-ಬಾಣಗಳು, ಸಃ-ಅದೇ, ರಥಃ-ರಥವು, ಸೋಽಹಂ-ಆನಾನೇ, ರಥೀ-ರಥಿಕನು; ಆದಾಗ್ಯೂ, ತತ್-ಅದು, ಸರ್ವಂ-ಎಲ್ಲವೂ, ಈಶರಿಕ್ತಂ, ಈಶ - ಈಶ್ವರನಾದ ಶ್ರೀಕೃಷ್ಣನಿಂದ, ರಿಕ್ತಂ - ರಹಿತವಾದುದಾದಕಾರಣವೇ ! ಭಸ್ಮನ್-ಬೂದಿಯಲ್ಲಿ, ಹುತಮಿವ-ಹೋಮಮಾಡಿದಂತೆ, ಕುಹಕರಾದ್ಧಂ, ಕುಹಕ-ಕಾಪಟ್ಯದಿಂದ, ರಾದ್ಧಮಿವ-ದಾನಮಾಡಲ್ಪಟ್ಟಂತೆಯೂ, ಊಷ್ಯಾಂ-ಊಷರಭೂಮಿಯಲ್ಲಿ, ಉಪ್ತಮಿವ - ಬೀಜವನ್ನು ಬಿತ್ತಿದಂತೆಯೂ, ಅಸತ್ - ವ್ಯರ್ಥವಾದುದಾಗಿ, ಅಭೂತ್-ಆಯ್ತು ॥ ೨೧ ॥ ರಾಜನ್-ದೊರೆಯೇ ! ನಃ-ನಮ್ಮ, ಸುಹೃತ್ಪುರೇ - ಸ್ನೇಹಿತನ ಪಟ್ಟಣದಲ್ಲಿ, ತ್ವಯಾ-ನಿನ್ನಿಂದ, ಅನುಪೃಷ್ಟಾನಾಂ-ಪ್ರಶ್ನೆಮಾಡಲ್ಪಟ್ಟ, ವಿಪ್ರಶಾಪವಿಮೂಢಾನಾಂ, ವಿಪ್ರ ಬ್ರಾಹ್ಮಣನ, ಶಾಪ - ಶಾಪದಪ್ರಭಾವದಿಂದ, ವಿಮೂಢಾನಾಂ-ಅವಿವೇಕಿಗಳಾದ, ವಾರುಣೀಂ - ತಾಳೆಯ ಮರದ, ಮದಿರಾಂ-ಮದ್ಯವನ್ನು, ಪೀತ್ವಾ-ಕುಡಿದು, ಮದೋನ್ಮಥಿತಚೇತಸಾಂ, ಮದ-ಮತ್ತಿನಿಂದ,

ಜಿತನಾದೆನು. ॥ ೨೦ ॥ ಯಾವ ನನ್ನ ಧನಸ್ಸುಮೊದಲಾದವುಗಳನ್ನು ಕಂಡಮಾತ್ರಕ್ಕೆ ರಾಜರೆಲ್ಲರೂ ನನಗೆ ಪಾದಾಕ್ರಾಂತರಾಗಿ ತಲೆಯನ್ನು ಬಗ್ಗಿಸುತ್ತಿದ್ದರೋ ! ಅದೇಗಾಂಡೀವವೂ, ಅದೇಬಾಣಗಳೂ, ಅದೇರಥವೂ, ಅದೇಕುದುರೆಗಳೂ,ಅದೇ ನಾನೂ, ಈಗಲೂ ಇದ್ದಾಗ್ಯೂ, ಆ ಪ್ರಭುವಾದ ಕೃಷ್ಣನಿಂದ ವಿಯುಕ್ತರಾದೆವಾದುದರಿಂದ ಅವೆಲ್ಲವೂ, ಬೂದಿಯಲ್ಲಿ ಮಾಡಿದ ಹೋಮದಂತೆಯೂ, ಇಂದ್ರಜಾಲಮೊದಲಾದ ಮಾಯೆಗಳಲ್ಲಿ ಕೃತ್ರಿಮದಿಂದ ಮಾಡಿತೋರಿಸಿದ ದಾನದಂತೆಯೂ, ಊಷರಭೂಮಿಯಲ್ಲಿ ಬಿತ್ತಿದಬೀಜದಂತೆಯೂ, ನಿಷ್ಫಲವಾದುವು ॥೨೧॥ ಎಲೈ ಧರ್ಮರಾಯನೇ ! ದ್ವಾರಕಾಪಟ್ಟಣದಲ್ಲಿ ನೀನುಕೇಳಿದ ನಮ್ಮ ಸ್ನೇಹಿತರೆಲ್ಲರೂ, ಪೂರ್ವದಲ್ಲಿತಮಗೆಬಂದ ಬ್ರಾಹ್ಮಣ ಶಾಪದಿಂದ ಭ್ರಾಂತರಾಗಿ ಮದ್ಯಪಾನಮಾಡಿ, ಪರಸ್ಪರಕಲಹವನ್ನು ಮಾಡುತ್ತಾ, ಒಬ್ಬರನ್ನೊಬ್ಬರು ಗುರುತನ್ನೇ ಅರಿಯದವರಂತೆ ಮರುಳರಾಗಿ ಮುಷ್ಟಿಯಿಂದ ಹೊಡೆದಾಡುತ್ತಾ ನಾಲ್ಕೈದು

ಪಂಚಾವಶೇಷಿತಾಃ ॥ ೨೩ ॥ ಪ್ರಾಯೇಣೈತದ್ಭಗವತ ಈಶ್ವರಸ್ಯ ವಿಚೇಷ್ಟಿತಂ । ಮಿಥೋ ನಿಘ್ನಂತಿ ಭೂತಾನಿ ಭಾವಯನ್ತಿ ಚ ಯನ್ಮಿಥಃ ॥೨೪॥ ಜಲೌಕಸೋ ಜಲೇ ಯದ್ವನ್ಮಹಾಂತೋ * ದಂತ್ಯಣೀಯಸಃ । ದುರ್ಬಲಾನ್ ಬಲಿನೋ ರಾಜನ್ ಮಹಾನ್ತೋ ಬಲಿನೋ ಮಿಥಃ ॥ ಏವಂ ಬಲಿಷ್ಠೈರ್ಯದುಭಿ ರ್ಮಹದ್ಭಿ ರಿತರಾನ್ ವಿಭುಃ । ಯದೂನ್ ಯದುಭಿ ರನ್ಯೋನ್ಯಂ ಭೂಭಾರಾನ್ ಸಂಜಹಾರಹ ॥ ೨೬ ॥ ದೇಶಕಾಲಾರ್ಥಯುಕ್ತಾನಿ

ಉನ್ಮಥಿತ-ಕಡೆಯಲ್ಪಟ್ಟ, ಚೇತಸಾಂ-ಮನಸ್ಸುಗಳುಳ್ಳ, ಅನ್ಯೋನ್ಯಂ-ಒಬ್ಬರನ್ನೊಬ್ಬರು, ಅಜಾನತಾಮಿವ-ಅರಿಯದವರಂತೆ, ಮಿಥಃ-ಒಬ್ಬರಿಗೊಬ್ಬರು, ಮುಷ್ಟಿಭಿಃ-ಮುಷ್ಟಿಗಳಿಂದ, ನಿಘ್ನತಾಂ - ಹೊಡೆದಾಡಿದ, ಸುಹೃದಾಂ - ಸ್ನೇಹಿತರಾದ ಯಾದವರಲ್ಲಿ, ಚತುಃಪಂಚ – ನಾಲ್ಕೈದುಮಂದಿ, ಅವಶೇಷಿತಾಃ-ಉಳಿದಿದ್ದರೆ ॥ ೨೦-೨೩ ॥ ಯತ್ - ಯಾವಕಾರಣದಿಂದ, ಭೂತಾನಿ - ಪ್ರಾಣಿಗಳು, ಮಿಥಃ-ಒಂದರಿಂದೊಂದು, ನಿಘ್ನಂತಿ-ನಾಶವಾಗುತ್ತವೆಯೋ ! ಭಾವಯಂತಿಚ - ಉತ್ಪತ್ತಿಯಾಗುತ್ತಿವೆಯೋ ! ಏತತ್-ಇದು, ಪ್ರಾಯೇಣ – ಪ್ರಾಯಶಃ, ಭಗವತಃ-ಭಗವಂತನಾದ, ಈಶ್ವರಸ್ಯ-ಪರಮಾತ್ಮನಾದ ಶ್ರೀಕೃಷ್ಣನ, ವಿಚೇಷ್ಟಿತಂ – ವಿಲಾಸವು ॥ ೨೪ ॥

ರಾಜನ್-ದೊರೆಯೇ! ಜಲೌಕಸಃ-ಜಲಚರಪ್ರಾಣಿಗಳು, ಜಲೇ-ನೀರಿನಲ್ಲಿ, ಯದ್ವತ್-ಯಾವರೀತಿಯಿಂದ, ಮಹಾನ್ತಃ-ದೊಡ್ಡವು, ಅಣೀಯಸಃ-ಚಿಕ್ಕವುಗಳನ್ನು, ಅದಂತಿ-ತಿನ್ನುತ್ತವೆಯೋ! ಹಾಗೆ, ದುರ್ಬಲಾನ್-ಶಕ್ತಿಯಿಲ್ಲದವರನ್ನು, ಬಲಿನಃ-ಬಲಿಷ್ಠರೂ, ಮಹಾನ್ತಃ-ಅತ್ಯಂತಬಲಿಷ್ಠರು, ಬಲೀಯಸಃ-ಬಲಿಷ್ಠರನ್ನು, ಮಿಥಃ-ಒಬ್ಬರನ್ನೊಬ್ಬರು, (ಅದನ್ತಿ-ತಿನ್ನುತ್ತಾರೆ,)॥೨೫॥ ಏವಂ-ಈರೀತಿಯಾಗಿ, ವಿಭುಃ-ಸಮರ್ಥನಾದ ಕೃಷ್ಣನು, ಬಲಿಷ್ಠೈಃ-ಬಲಶಾಲಿಗಳಾದ, ಮಹದ್ಭಿಃ-ಅತ್ಯಂತಶಕ್ತರಾದ, ಯದುಭಿಃ - ಯಾದವರಿಂದ, ಇತರಾನ್-

ಜನರು ಹೊರತು ಉಳಿದವರೆಲ್ಲರೂ ಮೃತರಾದರು. ॥ ೨೨- ೨೩॥ ಲೋಕದಲ್ಲಿ ಪ್ರಾಣಿಸಮೂಹವು ಒಂದುಕೊಂದು ಉತ್ಪತ್ತಿಯಾಗಿ ಅಭಿವೃದ್ಧಿಯಾಗುವಂತೆಯೇ ನಾಶವಾಗುವದನ್ನೂ ನೋಡಿದರೆ, ಇದೆಲ್ಲವೂ ಆ ಭಗವಂತನ ಇಚ್ಛಾಮಾತ್ರದಿಂದ ನಡೆಯತಕ್ಕದೆಂದು ತೋರುವದಲ್ಲದೆ ಅನ್ಯಥಾ ಅಲ್ಲ. ಆದುದರಿಂದ ಈರೀತಿಯಾದ ಸೃಷ್ಟಿಸ್ಥಿತಿಲಯಗಳು ಆಪರಬ್ರಹ್ಮನ ಕರ್ತವ್ಯಗಳೇಸರಿ ॥೨೪॥

ನೀರಿನಲ್ಲಿರುವ ಪ್ರಾಣಿಗಳು ಚಿಕ್ಕಚಿಕ್ಕ ಪ್ರಾಣಿಗಳನ್ನು ಹೇಗೆ ನುಂಗುವುವೋ, ಅಂದರೆ ಚಿಕ್ಕಪ್ರಾಣಿಯೊಂದನ್ನು ಅದಕ್ಕಿಂತ ದೊಡ್ಡದು, ಅದನ್ನು ಮತ್ತದಕ್ಕಿಂತ ದೊಡ್ಡದು, ಅದನ್ನು ಬೇರೊಂದು ದೊಡ್ಡದು ಸಹ, ನುಂಗಿ ಬಿಡುವಂತೆ, ಸ್ವಲ್ಪ ಬಲವುಳ್ಳವರನ್ನು ಸಾಮಾನ್ಯ ಬಲಶಾಲಿಗಳೂ, ಅವರನ್ನು ಅತಿಬಲವುಳ್ಳವರೂ, ಒಬ್ಬರನ್ನೊಬ್ಬರು ಇದೇ ರೀತಿಯಾಗಿ ಹೊಡೆದಾಟದಲ್ಲಿ ಕೊಲ್ಲುತ್ತ ಬಂದರು ॥ ೨೫ ॥ ಹೀಗೆ ಜಗನ್ನಿಯಾಮಕನಾದ ವಾಸುದೇವನು, ಬಾಂಧವರಲ್ಲಿ ಪರಸ್ಪರ ದ್ವೇಷವನ್ನು ಹುಟ್ಟಿಸಿ, ತಾವುತಾವೇ ಹೊಡೆದಾಡಿ ಮಡಿಯುವಂತೆ ಮಾಡಿ ಭೂಭಾರವನ್ನು ಕಡಿಮೆಮಾಡಿದನು. ॥ ೨೬ ॥ ಆದೂ ಅ

ಹೃತ್ತಾಪೋಪಶಮಾನಿಚ । ಹರನ್ತಿ ಸ್ಮರತಶ್ಚಿತ್ತಂ ಗೋವಿಂದಾಭಿಹಿತಾ
ನಿ ಮೇ ॥೨೭॥ ಏವಂ ಚಿಂತಯತೋ ಜಿಷ್ಣೋಃ ಕೃಷ್ಣಪಾದಸರೋ
ರುಹಂ । ಸೌಹಾರ್ದೇನಾತಿಗಾಢೇನ ಶಾನ್ತಾಸೀದ್ವಿಮಲಾ ಮತಿಃ ॥೨೮॥
ವಾಸುದೇವಾಂಘ್ರ್ಯನುಧ್ಯಾನ ಪರಿಬೃಂಹಿತರಂಹಸಾ । ಭಕ್ತ್ಯಾ ನಿರ್ಮಥಿ
ತಾಶೇಷ ಕಷಾಯಧಿಷಣೋಽರ್ಜುನಃ ॥ ೨೯ ॥ ಗೀತಂ ಭಗವತಾ
ಜ್ಞಾನಂ ಯತ್ತತ್ಸಂಗ್ರಾಮಮೂರ್ಧನಿ । ಕಾಲ ಕರ್ಮತಮೋ ರುದ್ಧಂ

ಇತರರಾದ, ಭೂಭಾರಾಃ-ಭೂಮಿಗೆ ಹೊರೆಯಾಗಿರುವ, ಯದೂನ್-ಯಾದವರನ್ನು, ಯದುಭಿಃ-ಯಾದವರಿಂದಲೇ. ಅನ್ಯೋನ್ಯಂ - ಒಬ್ಬರಿಂದೊಬ್ಬರನ್ನು, ಸಂಜಹಾರ - ಕೊಲ್ಲಿಸಿದನು ॥ ೨೬ ॥ ದೇಶ ಕಾಲಾರ್ಥಯುಕ್ತಾನಿ, ದೇಶ-ಆಯಾದೇಶಕ್ಕೂ, ಕಾಲ - ಆಯಾಕಾಲಗಳಿಗೂ, ಅರ್ಥ - ಆಯಾವಿಷಯಕ್ಕೂ, ಯುಕ್ತಾನಿ-ಯೋಗ್ಯಗಳಾದ, ಹೃತ್ತಾಪೋಪಶಮಾನಿಚ, ಹೃತ್-ಮನಸ್ಸಿನ, ತಾಪ - ಸಂಕಟವನ್ನು, ಉಪಶಮಾನಿಚ-ಪರಿಹರಿಸತಕ್ಕವಾಗಿಯೂ ಇರುವ, ಗೋವಿಂದಾಭಿಹಿತಾನಿ, ಗೋವಿಂದ-ಕೃಷ್ಣನಿಂದ, ಅಭಿಹಿತಾನಿ - ಹೇಳಲ್ಪಟ್ಟ ಮಾತುಗಳು, ಸ್ಮರತಃ-ಜ್ಞಾಪಿಸಿಕೊಳ್ಳುವ, ಮೇ - ನನ್ನ, ಚಿತ್ತಂ-ಮನಸ್ಸನ್ನು, ಹರನ್ತಿ-ಅಪಹರಿಸುತ್ತವೆ ॥ ೨೭ ॥ ಏವಂ-ಈರೀತಿಯಾಗಿ, ಅತಿಗಾಢೇನ - ಅತ್ಯಂತದೃಢವಾದ, ಸೌಹಾರ್ದೇನ-ಸ್ನೇಹದಿಂದ, ಕೃಷ್ಣಪಾದಸರೋರುಹಂ, ಕೃಷ್ಣ - ಕೃಷ್ಣನ, ಪಾದಸರೋರುಹಂ-ಪಾದಕಮಲವನ್ನು, ಚಿಂತಯತಃ-ಧ್ಯಾನಿಸುತ್ತಿರುವ, ಜಿಷ್ಣೋಃ-ಜಯಶೀಲನಾದ, ಅರ್ಜುನನ, ಮತಿಃ-ಬುದ್ಧಿಯು, ವಿಮಲಾ-ನಿರ್ಮಲವಾದದ್ದಾಗಿಯೂ, ಶಾನ್ತಾ-ಸಮಾಧಾನವುಳ್ಳದ್ದಾಗಿಯೂ, ಆಸೀತ್-ಆಯ್ತು. ॥ ೨೮ ॥ ವಾಸುದೇವಾಂಘ್ರ್ಯನುಧ್ಯಾನಪರಿಬೃಂಹಿತರಂಹಸಾ, ವಾಸುದೇವ- ಶ್ರೀಕೃಷ್ಣನ, ಅಂಘ್ರಿ - ಪಾದವನ್ನು, ಅನುಧ್ಯಾನ - ಸರ್ವದಾ ಚಿಂತಿಸುತ್ತಿರುವುದರಿಂದ, ಪರಿಬೃಂಹಿತ - ಹೆಚ್ಚಿಸಲ್ಪಟ್ಟ, ರಂಹಸಾ-ವೇಗವುಳ್ಳ, ಭಕ್ತ್ಯಾ-ಭಕ್ತಿಯಿಂದ, ಅರ್ಜುನಃ-ಅರ್ಜುನನು, ನಿರ್ಮಥಿತಾಶೇಷಕಷಾಯಧಿಷಣಃ, ನಿರ್ಮಥಿತ-ನಿರ್ಮೂಲಮಾಡಲ್ಪಟ್ಟ, ಅಶೇಷ-ಸಮಸ್ತವಾದ, ಕಷಾಯ-ವ್ಯಥೆಗಳುಳ್ಳ, ಧಿಷಣಃ - ಬುದ್ಧಿಯುಳ್ಳವನು, ಆದನು. ॥ ೨೯ ॥ ವಿಭುಃ-ಸಮರ್ಥನಾದ ಅರ್ಜುನನು, ಸಂಗ್ರಾಮಮೂರ್ಧನಿ-ಯುದ್ಧ

ಲ್ಲದೆ ಸರ್ವದಾ ನನ್ನ ಜತೆಯಲ್ಲಿಯೇ ಆಕೃಷ್ಣ ಪರಮಾತ್ಮನು ಇರುತ್ತಿದ್ದನಾದಕಾರಣ ಆಗಾಗ ಒದಗುತಿದ್ದ ಸಂದರ್ಭಗಳಲ್ಲಿ, ಆಯಾದೇಶಕ್ಕೂ, ಕಾಲಕ್ಕೂ, ವಿಷಯಕ್ಕೂ, ತಕ್ಕಂತೆ ಹೇಳಿ ಮನೋವ್ಯಥೆಯನ್ನು ಪರಿಹಾರ ಮಾಡುತ್ತಿದ್ದ ಆತನ ವಾಕ್ಯಗಳನ್ನು ಸ್ಮರಿಸಿ ಕೊಳ್ಳುವನನ್ನ ಮನಸ್ಸು ಪರವಶವಾಗುತ್ತಿರುವುದು ॥ ೨೭ ॥

ಎಲೈ ಶೌನಕ ಮಹರ್ಷಿಯೇ ! ಇಂತು ಕೃಷ್ಣನಪಾದ ಕಮಲವನ್ನು ಪರಮ ಪ್ರೀತಿಯಿಂ ಧ್ಯಾನಿಸುತ್ತಿದ್ದ ಅರ್ಜುನನ ಮನಸ್ಸು, ಕಳವಳವನ್ನುಳಿದು ಸಮಾಧಾನವಾಯಿತು. ॥ ೨೮ ॥ ಆವಾಸುದೇವನ ಪಾದಗಳನ್ನು ಅವಿಚ್ಛಿನ್ನವಾಗಿ ಧ್ಯಾನಿಸುತ್ತಿದ್ದುದರಿಂದುಂಟಾದ ಅಚಂಚಲ ಭಕ್ತಿಭರದಿಂದ ಅವನ ಮನವು ರಾಗದ್ವೇಷಾದಿ ಕಲ್ಮಷಂಗಳಂ ತೊರೆದುದು. ॥ ೨೯ ॥ ಅಲ್ಲದೆ ಕುರುಕ್ಷೇತ್ರವೆಂಬ ಯುದ್ಧಭೂಮಿಯಲ್ಲಿರುವಾಗ, ಶ್ರೀಕೃಷ್ಣಭಗವಂತನು ಮಾಡಿದ್ದ ಗೀತಾವಚನದ ಉಪದೇಶ

ಪುನರಧ್ಯಗಮದ್ವಿಭುಃ ॥ ೩೦ ॥ ವಿಶೋಕೋ ಬ್ರಹ್ಮಸಂಪತ್ತ್ಯಾ *ಸಂಛಿ
ನ್ನದ್ವೈತ ಸಂಶಯಃ। ಲೀನಪ್ರಕೃತಿ ನೈರ್ಗುಣ್ಯಾ ದಲಿಙ್ಗತ್ವಾ ದಸಂಭವಃ॥
ನಿಶಮ್ಯ ಭಗವನ್ಮಾರ್ಗಂ ಸಂಸ್ಥಾಂ ಯದು ಕುಲಸ್ಯಚ । ಸ್ವಃ ಪಥಾಯ
ಮತಿಂ ಚಕ್ರೇ ನಿಭೃತಾತ್ಮಾ ಯುಧಿಷ್ಠಿರಃ ॥ ೩೨ ॥ ಪೃಥಾಪ್ಯನು
ಶ್ರುತ್ಯ ಧನಂಜಯೋದಿತಂ ನಾಶಂ ಯದೂನಾಂ ಭಗವದ್ಗತಿಂ ಚ ತಾಂ ।

ಭೂಮಿಯಲ್ಲಿ, ಭಗವತಾ-ಭಗವಂತನಾದ ಕೃಷ್ಣನಿಂದ, ಯತ್-ಯಾವ, ಜ್ಞಾನಂ - ಜ್ಞಾನವು, ಗೀತಂ-ಹೇಳಲ್ಪಟ್ಟಿತೋ, ಕಾಲಕರ್ಮತಮೋರುದ್ಧಂ, ಕಾಲ-ಕಾಲವಿಶೇಷದಿಂದಲೂ, ಕರ್ಮ-ಪ್ರಾರಬ್ಧಕರ್ಮದಿಂದಲೂ, ತಮಃ-ಅಜ್ಞಾನದಿಂದಲೂ, ರುದ್ಧಂ-ತಡೆಯಲ್ಪಟ್ಟ ತತ್-ಆಜ್ಞಾನವನ್ನು, ಪುನಃ-ಮತ್ತೆ, ಅಧ್ಯಗಮತ್-ಹೊಂದಿದನು. ॥ ೩೦ ॥ ಬ್ರಹ್ಮಸಂಪತ್ತ್ಯಾ, ಬ್ರಹ್ಮ - ಬ್ರಹ್ಮವಸ್ತುವಿನ, ಸಂಪತ್ತ್ಯಾ - ಪ್ರಾಪ್ತಿಯಿಂದ, ಸಂಛಿನ್ನದ್ವೈತಸಂಶಯಃ, ಸಂಛಿನ್ನ-ಪರಿಹರಿಸಲ್ಪಟ್ಟ, ದ್ವೈತ-ಭೇದಭಾವನೆಯೆಂಬ, ಸಂಶಯಃ-ಸಂದೇಹವುಳ್ಳ, ಲೀನಪ್ರಕೃತಿನೈರ್ಗುಣ್ಯಾತ್, ಲೀನ - ನಾಶವಾದ, ಪ್ರಕೃತಿ-ಮಾಯೆಯುಳ್ಳ, ನೈರ್ಗುಣ್ಯಾತ್--ಸತ್ವಾದಿಗುಣತ್ರಯರಾಹಿತ್ಯದ ದೆಸೆಯಿಂದಲೂ, ಅಲಿಂಗತ್ವಾತ್ - ಲಿಂಗದೇಹಾಭಾವದಿಂದಲೂ, ಅಸಂಭವಃ - ಜನ್ಮರಹಿತನಾದ ಅರ್ಜುನನು, ವಿಶೋಕಃ - ದುಃಖರಹಿತನಾದವನು ಆದನು ॥ ೩೧ ॥

ನಿಭೃತಾತ್ಮಾ, ನಿಭೃತ-ನಿಶ್ಚಲವಾದ, ಆತ್ಮಾ-ಮನಸ್ಸುಳ್ಳ, ಯುಧಿಷ್ಠಿರಃ-ಧರ್ಮರಾಜನು, ಭಗವನ್ಮಾರ್ಗಂ, ಭಗವತ್-ಶ್ರೀಕೃಷ್ಣನ, ಮಾರ್ಗಂ-ಲೋಕಾಂತರ ಗಮನವನ್ನೂ. ಯದುಕುಲಸ್ಯ-ಯದುವಂಶದ, ಸಂಸ್ಥಾಂಚ-ನಾಶವನ್ನೂ, ನಿಶಮ್ಯ-ಕೇಳಿ, ಸ್ವಃಪಥಾಯ, ಸ್ವಃ - ಸ್ವರ್ಗದ, ಪಥಾಯ-ಮಾರ್ಗಕ್ಕೆ, ಮತಿಂ-ಮನಸ್ಸನ್ನು, ಚಕ್ರೇ-ಮಾಡಿದನು ॥ ೩೨ ॥ ಪೃಥಾಪಿ - ಕುಂತಿಯೂಸಹ, ಧನಂಜಯೋದಿತಂ, ಧನಂಜಯ-ಅರ್ಜುನನಿಂದ, ಉದಿತಂ-ಹೇಳಲ್ಪಟ್ಟ, ಯದೂನಾಂ - ಯಾದವರ, ನಾಶಂ-

---

ದಿಂದ, ತಾನು ಪಡೆದ ಜ್ಞಾನವು, ಕಾಲ, ಕರ್ಮ, ಅಜ್ಞಾನಾದಿಗಳಿಂದ ಮರೆಯಾಗಿದ್ದರೂ ಆಕೃಷ್ಣನ ಸ್ಮರಣೆಯಿಂದ, ಅದನ್ನು ಜ್ಞಾಪಕಕ್ಕೆ ತಂದುಕೊಂಡನು ॥ ೩೦ ॥ ಎಲೈ ಶೌನಕನೇ ! ಹೀಗೆ ಆ ಅರ್ಜುನನು ಪರಮಾತ್ಮ ಧ್ಯಾನದಿಂದ ದಿವ್ಯಜ್ಞಾನವನ್ನು ಪಡೆದು, † ಬ್ರಹ್ಮನೇ ನಾನೆಂದು ತಿಳಿದವನಾಗಿ, ಜೀವಾತ್ಮ ಪರಮಾತ್ಮರಿಗೆ ಭೇದವಿಲ್ಲವೆಂಬುದನ್ನು, ಅರಿತವನಾದಕಾರಣ, ಮಾಯೆಯು ಲಯವಾಗಿ ಸತ್ವಾದಿ ಗುಣಗಳು ನಾಶವಾದುದರಿಂದ ಲಿಙ್ಗದೇಹ ಭಂಗವನ್ನು ಪಡೆದು ತನ್ಮೂಲಕ ತತ್ಕಾರ್ಯವಾದ ಸ್ಥೂಲದೇಹವನ್ನು ಕಳೆದುಕೊಂಡು, ಪ್ರಾಪಂಚಿಕ ದುಃಖಮಂ ತೊರೆದವನಾದನು. ॥ ೩೧ ॥ ನಿಶ್ಚಲಚಿತ್ತನಾದ ಧರ್ಮನಂದನನೂ ಸಹ, ಶ್ರೀಕೃಷ್ಣನು ತನ್ನಲೋಕಕ್ಕೆ ಹೊರಟು ಹೋದುದನ್ನೂ, ಯದುವಂಶವು ನಷ್ಟವಾದುದನ್ನೂ, ಕೇಳಿ ಸ್ವರ್ಗಮಾರ್ಗವಂ ನಿರೀಕ್ಷಿಸುತ್ತಿದ್ದನು. ॥ ೩೨ ॥

---

* (1) ವಿ. ಭಗವತ್ಸ್ವರೂಪಜ್ಞಾನದಿಂದ ದೇಹಾದಿಗತವಾದ ಮತ್ತು ಆತ್ಮಗತವಾದ ದ್ವೈತಬುದ್ಧಿಯನ್ನು ಬಿಟ್ಟನು. ವಿ. (2) ಬ್ರಹ್ಮಸ್ವರೂಪಜ್ಞಾನದಿಂದ ಜೀವೇಶ್ವರ ಭೇದವಿಷಯದಲ್ಲಿದ್ದ ಅನುಮಾನವನ್ನು ಪರಿಹರಿಸಿಕೊಂಡನು. † ಶ್ರು. ಅಹಂ ಬ್ರಹ್ಮಾಸ್ಮಿ.

ಏಕಾನ್ತಭಕ್ತ್ಯಾ ಭಗವತ್ಯಧೋಕ್ಷಜೇ ನಿವೇಶಿತಾತ್ಮೋಪರರಾಮ
ಸಂಸೃತೇಃ ॥೩೩॥ ಯಯಾಹರದ್ಭುವೋ ಭಾರಂ ತಾಂ ತನುಂ ವಿಜಹಾ
ವಜಃ । ಕಂಟಕಂ ಕಂಟಕೇನೇವ ದ್ವಯಂ ಚಾಪೀಶಿತುಃ ಸಮಂ ॥ ೩೪ ॥
ಯಥಾ ಮತ್ಸ್ಯಾದಿರೂಪಾಣಿ ಧತ್ತೇ ಜಹ್ಯಾದ್ಯಥಾ ನಟಃ । ಭೂಭಾರಃ
ಕ್ಷಪಿತೋ ಯೇನ ಜಹೌ ತಚ್ಚ ಕಳೇಬರಂ ॥೩೫॥ ಯದಾ ಮುಕುನ್ದೋ
ಭಗವಾನಿಮಾಂ ಮಹೀಂ ಜಹೌ ಸ್ವತನ್ವಾ ಶ್ರವಣೀಯಸತ್ಕಥಃ । ತದಾ

ನಾಶವನ್ನೂ, ತಾಂ-ಆರೀತಿಯಾದ, ಭಗವದ್ಗತಿಂ - ಶ್ರೀಕೃಷ್ಣನ ಸ್ಥಿತಿಯನ್ನೂ, ಉಪಶ್ರುತ್ಯ - ಕೇಳಿ, ಅಧೋಕ್ಷಜೇ-ಜಿತೇಂದ್ರಿಯನಾದ, ಭಗವತಿ - ಭಗವಂತನಲ್ಲಿ, ಏಕಾನ್ತಭಕ್ತ್ಯಾ, ಏಕಾನ್ತ - ದೃಢವಾದ, ಭಕ್ತ್ಯಾ-ಭಕ್ತಿಯಿಂದ, ನಿವೇಶಿತಾತ್ಮಾ, ನಿವೇಶಿತ-ಇಡಲ್ಪಟ್ಟ, ಆತ್ಮ-ಮನಸ್ಸುಳ್ಳವಳಾಗಿ, ಸಂಸೃತೇಃ-ಸಂಸಾರಧರ್ಮದಿಂದ, ಉಪರರಾಮ-ವೈರಾಗ್ಯವನ್ನು ಹೊಂದಿದಳು ॥ ೩೩ ॥

ಅಜಃ-ಜನ್ಮರಹಿತನಾದ ವಾಸುದೇವನು, ಕಂಟಕೇನ-ಮುಳ್ಳಿನಿಂದ ಕಂಟಕಮಿವ -, ಮುಳ್ಳನ್ನೋ, ಹಾದಿಯಲ್ಲಿ, ಯಯಾ-ಯಾವದೇಹದಿಂದ, ಭುವಃ-ಭೂಮಿಯ, ಭಾರಂ-ಹೊರೆಯನ್ನು, ಅಹರತ್ - ಪರಿಹರಿಸಿದನೋ, ತಾಂ-ಅಂತಹ, ತನುಂ-ಶರೀರವನ್ನು, ವಿಜಹೌ-ತ್ಯಜಿಸಿದನು, ಈಶಿತುಃ - ಸ್ವಾಮಿಯಾದ ಕೃಷ್ಣನಿಗೆ, ದ್ವಯಂ-ಎರಡು ದೇಹಗಳೂ, ಸಮಂ - ಸಮಾನವಾದವುಗಳು ॥ ೩೪ ॥ ನಟಃ-ನಾಟ್ಯಕಾರನು, ಯಥಾ-ಹೇಗೆ, ಮತ್ಸ್ಯಾದಿರೂಪಾಣಿ, ಮತ್ಸ್ಯ-ಮತ್ಸ್ಯವೇ, ಆದಿ-ಮೊದಲಾದವುಗಳ, ರೂಪಾಣಿ-ವೇಷಗಳನ್ನು, ಧತ್ತೇ-ಧರಿಸುತ್ತಾನೋ, ಯಥಾ-ಹೇಗೆ, ಜಹ್ಯಾತ್-ಬಿಟ್ಟುಬಿಡುವನೋ, (ಹಾಗೆ) ಯೇನ-ಯಾವ ಯಾದವದೇಹದಿಂದ, ಭೂಭಾರಃ-ಭೂಮಿಯ ಭಾರವು, ಕ್ಷಪಿತಃ - ಅಪಹರಿಸಲ್ಪಟ್ಟಿತೋ, ತತ್-ಆ ಕಳೇಬರಂಚ-ದೇಹವನ್ನೂಕೂಡ (ಕೃಷ್ಣನು), ಜಹೌ-ಬಿಟ್ಟನು ॥ ೩೫ ॥ ಶ್ರವಣೀಯಸತ್ಕಥಃ, ಶ್ರವಣೀಯ-ಕೇಳುವುದಕ್ಕೆ ಇಂಪಾದ, ಸತ್ಕಥಃ-ಸಚ್ಚರಿತ್ರೆಯುಳ್ಳ, ಮುಕುಂದಃ - ಮೋಕ್ಷಪ್ರದನಾದ, ಭಗವಾನ್-ಭಗವಂತನು, ಯದಾ-ಯಾವಾಗ, ಸ್ವತನ್ವಾ - ತನ್ನ ದೇಹದೊಡನೆ, ಇಮಾಂ - ಈ, ಮಹೀಂ-

---

ಅಂತೆಯೇ ಕುಂತಿಯೂಕೂಡ ಅರ್ಜುನನು ಹೇಳಿದವೃತ್ತಾಂತದಿಂದ ಭಗವಂತನು ಪರಲೋಕಪ್ರಯಾಣಮಾಡಿದುದನ್ನೂ, ಯಾದವವಂಶವು ಲಯವಾದುದನ್ನೂ ತಿಳಿದು ಕೃಷ್ಣನಲ್ಲಿ ನೆಲಸಿದ ಮನಸ್ಸುಳ್ಳವಳಾಗಿ, ವೈರಾಗ್ಯವನ್ನು ಪಡೆದು ಸಂಸಾರಧರ್ಮವನ್ನು ತೊರೆದಳು॥

ಕಾಲಿನಲ್ಲಿ ಸಿಕ್ಕಿಕೊಂಡ ಮುಳ್ಳನ್ನು, ಮತ್ತೊಂದು ಮುಳ್ಳಿನಿಂದ ತೆಗೆದು ಎರಡನ್ನೂ ಬಿಸಾಡುವಂತೆ, ಪರಮಾತ್ಮನು ದುಷ್ಟರಾದವರನ್ನು ಸಂಹರಿಸುವುದಕ್ಕಾಗಿ ಯದುವಂಶದಲ್ಲಿಯೇ ಹುಟ್ಟಿ, ಅವರನ್ನು ನಿಗ್ರಹಿಸಿ, ತನ್ನದೇಹವೂ ಭೂಭಾರಗಳಾದ ಯಾದವದೇಹಗಳೂ ಸಮಾನಗಳಾದುದರಿಂದ ಆದೇಹಗಳನ್ನು ನಾಶಮಾಡಿದಂತೆ ತನ್ನದೇಹವನ್ನೂ ಬಿಟ್ಟುಬಿಟ್ಟನು॥ ನಾಟಕದಲ್ಲಿ ಅಭಿನಯಿಸುವನಟನು ಬೇಕಾದವೇಷಗಳನ್ನು ತಳೆದು ಅಭಿನಯಿಸಿದಮೇಲೆ ಆವೇಷಗಳನ್ನು ಬಿಟ್ಟು ಸ್ವಸ್ವರೂಪವನ್ನು ಹೊಂದುವಂತೆ ಭೂಭಾರಹರಣಕ್ಕಾಗಿ ಪರಮಾತ್ಮನು ಮತ್ಸ್ಯಾದ್ಯವತಾರಗಳನ್ನು ಹೊಂದಿ ಕಾರ್ಯಾನಂತರದಲ್ಲಿ ಆರೂಪಗಳನ್ನು ತ್ಯಜಿಸುವನು. ಪ್ರಕೃತದಲ್ಲಿ ಶ್ರೀಕೃಷ್ಣನು ಯಾದವರನಿಗ್ರಹಕ್ಕಾಗಿ ತಾನು ತಳೆದಿದ್ದ ಯಾದ

ಹ ರೇವಾ ಪ್ರತಿಬುದ್ಧ ಚೇತಸಾ ಮಭದ್ರಹೇತುಃ ಕಲಿ ರನ್ವವರ್ತತ॥೩೬॥ ಯುಧಿಷ್ಠಿರ ಸ್ತತ್ಪರಿಸರ್ಪಣಂ ಬುಧಃ ಪುರೇ ಚ ರಾಷ್ಟ್ರೇ ಚ ಗೃಹೇ ತಥಾತ್ಮನಿ । ವಿಭಾವ್ಯ ಲೋಭಾ ನೃತಜಿಹ್ಮ ಹಿಂಸನಾ ದ್ಯಧರ್ಮ ಚಕ್ರಂ ಗಮನಾಯ ಪರ್ಯಧಾತ್ ॥೩೭॥ ಸಮ್ರಾಟ್ ಪೌತ್ರಂ ವಿನಿಯತ ಮಾತ್ಮನಃ ಸುಸಮಂ ಗುಣೈಃ । ತೋಯನೀವ್ಯಾಃ ಪತಿಂ ಭೂಮೇ ರಭ್ಯಷಿಂ ಚ ದ್ಗಜಾಹ್ವಯೇ ॥ ೩೮ ॥ ಮಥುರಾಯಾಂ ತಥಾ ವಜ್ರಂ ಶೂರಸೇನ

ಭೂಮಿಯನ್ನು, ಜಹೌ-ಬಿಟ್ಟು ಹೋದನೋ ! ತದಾ-ಆಕಾಲದ, ಅಹರೇವ - ಹಗಲಿನಲ್ಲಿಯೇ, ಅಪ್ರತಿಬುದ್ಧ ಚೇತಸಾಂ, ಅಪ್ರತಿಬುದ್ಧ-ಅವಿವೇಕವಾದ, ಚೇತಸಾಂ ಮನಸ್ಸುಳ್ಳವರಿಗೆ, ಅಭದ್ರಹೇತುಃ, ಅಭದ್ರ-ಅಶುಭಕ್ಕೆ, ಹೇತುಃ-ಕಾರಣವಾದ, ಕಲಿಃ-ಕಲಿಯುಗವು, ಅನ್ವವರ್ತತ-ಪ್ರಾರಂಭವಾಇತು ॥೩೬॥ ಬುಧಃ-ವಿವೇಕಿಯಾದ, ಯುಧಿಷ್ಠಿರಃ-ಧರ್ಮರಾಜನು, ಪುರೇಚ-ಹಸ್ತಿನಾವತಿಯಲ್ಲಿಯೂ, ರಾಷ್ಟ್ರೇಚ-ದೇಶದಲ್ಲಿಯೂ, ಗೃಹೇ-ಅರಮನೆಯಲ್ಲಿಯೂ, ತಥಾ-ಹಾಗೆಯೇ, ಆತ್ಮನಿ-ತನ್ನಲ್ಲಿಯೂ, ತತ್ಪರಿಸರ್ಪಣಂ ತತ್-ಆಕಲಿಯ, ಪರಿಸರ್ಪಣಂ-ಪ್ರವೇಶವನ್ನು, ವಿಭಾವ್ಯ-ಆಲೋಚಿಸಿ, ಲೋಭಾನೃತಜಿಹ್ಮ ಹಿಂಸನಾದ್ಯಧರ್ಮಚಕ್ರಂ, (ಪ್ರಜೆಗಳಲ್ಲಿ) ಲೋಭ - ದುರಾಸೆಯೂ, ಅನೃತ - ಸುಳ್ಳು, ಜಿಹ್ಮ - ಕೌಟಿಲ್ಯವು, ಹಿಂಸನ-ಹಿಂಸೆಯು, ಆದಿ-ಇವೇ ಮೊದಲಾದ, ಅಧರ್ಮ - ದುರಾಚಾರದ, ಚಕ್ರಾ - ಸಮೂಹವನ್ನು, ವಿಭಾವ್ಯ-ತಿಳಿದು, ಗಮನಾಯ-ತನ್ನ ಮನೆಯನ್ನು ಬಿಟ್ಟು ಹೊರಡುವುದಕ್ಕೆ, ಪರ್ಯಧಾತ್ - ಪ್ರಯತ್ನಿಸಿದನು ॥ ೩೭ ॥ ಸಮ್ರಾಟ್-ಚಕ್ರವರ್ತಿಯಾದ ಧರ್ಮನು, ವಿನಿಯತಂ - ವಿನಯನಾಗಿಯೂ, ಗುಣೈಃ-ಶೌರ್ಯೌದಾರ್ಯಾದಿ ಗುಣಗಳಿಂದ, ಆತ್ಮನಃ - ತನಗೆ, ಸುಸಮಂ - ಸಮಾನನಾದ, ಪೌತ್ರಂ- ಮೊಮ್ಮಗನನ್ನು, ತೋಯನೀವ್ಯಾಃ, ತೋಯ - ಸಮುದ್ರವೇ, ನೀವ್ಯಾಃ - ಉಡಿಗೆಯಾಗಿಉಳ್ಳ, ಭೂಮೇಃ-ಭೂಮಿಗೆ, ಪತಿಂ - ಅಧಿಪತಿಯನ್ನಾಗಿ, ಗಜಾಹ್ವಯೇ - ಹಸ್ತಿನ ಪುರಿಯಲ್ಲಿ, ಅಭ್ಯಷಿಂಚತ್ - ಪಟ್ಟಾಭಿಷೇಕಮಾಡಿದನು. ॥ ೩೮ ॥ ಈಶ್ವರಃ-ಸಮರ್ಥನಾದ ಯುಧಿಷ್ಠಿರನು, ತಥಾ-ಹಾಗೆಯೇ, ಶೂರಸೇನ

ದೇಹವನ್ನು ತನ್ನಸಂಕಲ್ಪವು ನೆರವೇರಿದ್ದರಿಂದ ಬಿಟ್ಟುಬಿಟ್ಟನು, ॥ ೩೫ ॥ ಕರ್ಣಾಮೃತವಾದ ಸಚ್ಚರಿತ್ರೆಯುಳ್ಳ ಶ್ರೀಕೃಷ್ಣ ಭಗವಂತನು ಯಾವದಿನದಲ್ಲಿ ಈ ಭೂಲೋಕವನ್ನುಬಿಟ್ಟು ತೆರಳಿದನೋ ಆದಿನವೇ, ಭಗವದ್ಭಕ್ತಿ ರಹಿತರಾದ ಪಾಮರರಿಗೆ ದುಃಖವನ್ನುಂಟುಮಾಡುವ ಸಾಮರ್ಥ್ಯವುಳ್ಳ ಕಲಿಯು ಭೂಲೋಕವನ್ನೈದಿತು. ॥ ೩೬ ॥

ಸರ್ವಜ್ಞನಾದ ಧರ್ಮರಾಜನು, ಕಲಿಮಹಿಮೆಯಿಂದ, ತನ್ನದೇಶದಲ್ಲಿಯೂ, ತನ್ನಲ್ಲಿಯೂ, ಎಲ್ಲಾಜನಗಳಲ್ಲಿಯೂ, ಅಸತ್ಯ, ಕೃತ್ರಿಮ, ಜೀವಹಿಂಸೆ, ಮೊದಲಾದ ಅಧರ್ಮಗಳು ಅಂಕುರಿಸಿದುದು ಕಂಡು, ತಾನುಇನ್ನು ಈ ಲೋಕದಲ್ಲಿರುವುದು ಉಚಿತವಲ್ಲವೆಂದು ಭಾವಿಸಿ, ಅರಮನೆಯಿಂ ಹೊರಡಲು ಉದ್ಯುಕ್ತನಾದನು. ॥ ೩೭ ॥ ಸಕಲರಾಜಲಕ್ಷಣ ಲಕ್ಷಿತನಾಗಿಯೂ, ಗುಣಶಾಲಿಯಾಗಿಯೂ, ತನಗೆ ಸಮಾನನಾಗಿಯೂ, ಇರುವ ಮೊಮ್ಮಗನಾದ ಪರೀಕ್ಷಿತನಿಗೆ ಹಾಸ್ತಿನ ಪುರದಲ್ಲಿ ಪಟ್ಟಾಭಿಷೇಕವನ್ನು ಗೆಯ್ದನು ॥೩೮॥ ಶೂರಸೇನ ದೇಶಾಧಿಪತಿಯಾಗಿಯೂ, ಕೃಷ್ಣನ ಪ್ರಪೌತ್ರನಾಗಿಯೂ ಇರುವ ವಜ್ರನಿಗೆ

ಪತಿಂ ತತಃ । ಪ್ರಾಜಾಪತ್ಯಾಂ ನಿರೂಪ್ಯೇಷ್ಟಿ ಮಗ್ನೀ ನ ಪಿಬ ದೀಶ್ವರಃ॥ ವಿಸೃಜ್ಯ ತತ್ರ ತತ್ಸರ್ವಂ ದುಕೂಲ ವಲಯಾದಿಕಂ । ನಿರ್ಮಮೋ ನಿರಹಂ ಕಾರಃ ಸಂಛಿನ್ನಾ ಽ ಶೇಷಬಂಧನಃ ॥ ೪೦ ॥ ವಾಚಂ ಜುಹಾವ ಮನಸಿ ತತ್ ಪ್ರಾಣ ಇತರೇ ಚ ತಂ । ಮೃತ್ಯಾವಪಾನಂ ಸೋತ್ಸರ್ಗಂ ತಂ ಪಂಚ ತ್ವೇಹ್ಯ ಜೋಹವೀತ್ ॥೪೧॥ ತ್ರಿತ್ವೇ ಹುತ್ವಾ ಚ ಪಂಚತ್ವಂ ತಚ್ಚೈಕ ತ್ವೇಽಜುಹೋ ನ್ಮುನಿಃ।ಸರ್ವಮಾತ್ಮನ್ಯಜುಹವೀ *ದ್ಬ್ರ ಹ್ಮಣ್ಯಾತ್ಮಾನ

ಪತಿಂ-ಶೂರಸೇನಾಧೀಶ್ವರನಾದ, ವಜ್ರಂ-ವಜ್ರನೆಂಬುವನನ್ನು, ಮಧುರಾಯಾಂ-ಮಧುರೆಯಲ್ಲಿ (ಪಟ್ಟಾಭಿಷೇಕಮಾಡಿದನು.) ತತಃ-ಅನಂತರದಲ್ಲಿ, ಪ್ರಾಜಾಪತ್ಯಾಂ-ಪ್ರಾಜಾಪತ್ಯವೆಂಬ, ಇಷ್ಟಿಂ-ಯಜ್ಞವನ್ನು ನಿರೂಪ್ಯ-ಮಾಡಿ, ಅಗ್ನೀನ್-ಅಗ್ನಿಗಳನ್ನು, ಅಪಿಬತ್-ತನ್ನಲ್ಲಿ ಆರೋಪಿಸಿಕೊಂಡನು. ॥ ೩೯ ॥ ತತ್ರ-ಅಲ್ಲಿ, ದುಕೂಲವಲಯಾದಿಕಂ, ದುಕೂಲ-ಅಮೌಲ್ಯಗಳಾದ ವಸ್ತ್ರಗಳು, ವಲಯ-ರತ್ನದ ಕಡಗಗಳು, ಆದಿಕಂ-ಮೊದಲಾದ, ತತ್ಸರ್ವಂ-ರಾಜಯೋಗ್ಯವಸ್ತುಗಳೆಲ್ಲವನ್ನೂ, ವಿಸೃಜ್ಯ-ಬಿಟ್ಟು ನಿರ್ಮಮಃ - ಮಮತೆಯುನ್ನುಳಿದು. ನಿರಹಂಕಾರಃ - ಅಹಂಕಾರವಿಲ್ಲದವನಾಗಿ, ಸಂಛಿನ್ನಾಶೇಷಬಂಧನಃ, ಸಂಛಿನ್ನ-ಕತ್ತರಿಸಲ್ಪಟ್ಟ, ಅಶೇಷ-ಸಮಸ್ತವಾದ, ಬಂಧನಃ-ಸಂಸಾರ ನಿರ್ಬಂಧವುಳ್ಳವನಾಗಿ ॥ ೪೦ ॥ ವಾಚಂ-ವಾಗಿಂದ್ರಿಯವನ್ನು, ಮನಸಿ - ಮನಸ್ಸಿನಲ್ಲಿಯೂ, ತತ್ - ಅದನ್ನು, ಪ್ರಾಣೇ-ಪ್ರಾಣದಲ್ಲಿಯೂ, ತಂ-ಅದನ್ನು, ಇತರೇಚ-ಮತ್ತೊಂದಾದ ಅಪಾನದಲ್ಲಿಯೂ, ಜುಹಾವ-ಹೋಮಮಾಡಿದನು, ಸೋತ್ಸರ್ಗಂ-ಆಕರ್ಷಣೆಯಿಂದಕೂಡಿದ, ಅಪಾನಂ-ಅಪಾನವನ್ನು, ಮೃತ್ಯೌ - ಮೃತ್ಯುವಿನಲ್ಲಿಯೂ, ತಂ-ಆ ಮೃತ್ಯುವನ್ನು, ಪಂಚತ್ವೇ-ದೇಹದಲ್ಲಿಯೂ, ಅಜೋಹವೀತ್-ಹೋಮಮಾಡಿದನು ॥೪೧॥ ಪಂಚತ್ವಂ-ದೇಹವನ್ನು, ತ್ರಿತ್ವೇ-ಗುಣತ್ರಯದಲ್ಲಿಯೂ, ತತ್ - ಆ ಗುಣತ್ರಯವನ್ನು, ಏಕತ್ವೇಚ - ಅವಿದ್ಯೆಯಲ್ಲಿಯೂ, ಮುನೀ-ಮುನಿಯಾದ ಧರ್ಮನು, ಅಜುಹೋತ್-ಹೋಮಮಾಡಿದನು, ಸರ್ವಂ-ಎಲ್ಲವನ್ನೂ,

ಮಧುರೆಯಲ್ಲಿ ರಾಜ್ಯಾಭಿಷೇಕಂ ಗೆಯ್ದು, ಅನಂತರದಲ್ಲಿ ಪ್ರಾಜಾಪತ್ಯೇಷ್ಟಿಯಂಮಾಡಿ ಅಗ್ನಿಗಳನ್ನು ಆತ್ಮಸಮಾರೋಪಣವನ್ನು ಮಾಡಿದನು. ॥ ೩೯ ॥ ರಾಜಯೋಗ್ಯಗಳೂ ಅಮೂಲ್ಯಗಳೂಆದ ಆಭರಣಗಳೆಲ್ಲವನ್ನೂ ತ್ಯಜಿಸಿ, ಸಂಸಾರ ಬಂಧಗಳನ್ನು ತೊಲಗಿಸಿ, ನಾನು, ನನ್ನದು, ಎಂಬ ಅಭಿಮಾನವನ್ನುಬಿಟ್ಟು, ॥ ೪೦ ॥ ವಾಕ್ಕುಮೊದಲಾದ ಎಲ್ಲಾ ಇಂದ್ರಿಯಗಳನ್ನು, ಮನಸ್ಸಿನಲ್ಲಿಯೂ, ಮನಸ್ಸನ್ನು, ಪ್ರಾಣದಲ್ಲಿಯೂ, ಅಪಾನದಿಂದ ಆಕರ್ಷಣ ಮಾಡಬೇಕಾದುದರಿಂದ ಪ್ರಾಣವನ್ನು, ಅಪಾನದಲ್ಲಿಯೂ, ಅಪಾನವನ್ನು, ಅದರ ಅಧಿಷ್ಠಾನವಾದ ಮೃತ್ಯುವಿನಲ್ಲಿಯೂ, ಮೃತ್ಯುವನ್ನು ದೇಹದಲ್ಲಿಯೂ, ವಿಲಯಗೊಳಿಸಿದನು, ॥೪೧॥ ಆ ಪಂಚ ಭೂತಾತ್ಮಕವಾದ ದೇಹವನ್ನು, ಗುಣತ್ರಯದಲ್ಲಿಯೂ, ಅದನ್ನು ಅವಿದ್ಯೆಯಲ್ಲಿಯೂ, ಅವೆಲ್ಲವನ್ನೂ ಜೀವನಲ್ಲಿಯೂ, ಆ ಜೀವನನ್ನು, ಶಾಶ್ವತನಾದ ಪರಬ್ರಹ್ಮನಲ್ಲಿಯೂ, ಲಯಂಗೊಳಿಸಿದನು. ಹೀಗೆ ಧರ್ಮನಂದನನು,ಜ್ಞಾನಶಕ್ತಿಯಿಂದ ಕ್ರಮಕ್ರಮವಾಗಿ ಎಲ್ಲವನ್ನೂ, ಉಪಸಂಹಾರಮಾಡಿ,ಪ್ರತ್ಯಕ್ಚೈತನ್ಯ ಸ್ವರೂಪವಂ ಪಡೆದನು. ॥ ಇಂತು ಆತ್ಮಪ್ರತಿ ಪತ್ತಿಯನ್ನು ಪಡೆದು, ನಾರುಮಡಿಗಳನ್ನುಟ್ಟು, ಆಹಾರವನ್ನು

ಮವ್ಯಯೇ ॥ ೪೨ ॥ ಚೀರವಾಸಾ ನಿರಾಹಾರೋ ಬದ್ಧವಾ ಙ್ಮುಕ್ತ ಮೂರ್ಧಜಃ । ದರ್ಶಯ ನ್ನಾತ್ಮನೋ ರೂಪಂ ಜಡೋನ್ಮತ್ತ ಪಿಶಾಚ ವತ್ ॥೪೩॥ ಅನವೇಕ್ಷಮಾಣೋ ನಿರಗಾ ದಶೃಣ್ವನ್ ಬಧಿರೋ ಯಥಾ । ಉದೀಚೀಂ ಪ್ರವಿವೇ ಶಾಶಾಂ ಗತಪೂರ್ವಾಂ ಮಹಾತ್ಮಭಿಃ। ಹೃದಿ ಬ್ರಹ್ಮ ಪರಂ ಧ್ಯಾಯ ನ್ನಾವರ್ತೇತ ಯತೋ ಗತಃ ॥ ೪೪ ॥ ಸರ್ವೇ ತಮನು ನಿರ್ಜಗ್ಮು ಭ್ರಾತರಃ ಕೃತನಿಶ್ಚಯಾಃ।ಕಲಿನಾಽಧರ್ಮಮಿತ್ರೇಣ ದೃಷ್ಟ್ವಾ ಸ್ಪೃಷ್ಟಾಃ ಪ್ರಜಾ ಭುವಿ ॥೪೫॥ ತೇ ಸಾಧು ಕೃತಸರ್ವಾರ್ಥಾ ಜ್ಞಾತ್ವಾ

ಆತ್ಮನಿ - ಜೀವಾತ್ಮನಲ್ಲಿಯೂ, ಆತ್ಮಾನಂ-ಜೀವಾತ್ಮನನ್ನು, ಅವ್ಯಯೇ-ನಾಶರಹಿತವಾದ, ಬ್ರಹ್ಮಣಿ-ಪರಮಾತ್ಮನಲ್ಲಿಯೂ, ಅಜುಹವೀತ್ - ಲಯಗೊಳಿಸಿದನು ॥ ೪೦ ॥ ಚೀರವಾಸಾಃ - ನಾರುಮಡಿಗಳನ್ನು ಧರಿಸಿ, ನಿರಾಹಾರಃ-ಆಹಾರವನ್ನುಳಿದು, ಬದ್ಧವಾಕ್-ಮೌನವ್ರತವನ್ನುಹೊಂದಿ, ಮುಕ್ತಮೂರ್ಧಜಃ-ತಲೆಗೂದಲನ್ನು ಬಿರಿಹೊಯ್ದುಕೊಂಡು, ಆತ್ಮನಃ-ತನ್ನ, ರೂಪಂ-ರೂಪವನ್ನು, ಜಡೋ...ತ್, ಜಡ-ಸೋಮಾರಿಯಂತೆಯೂ, ಉನ್ಮತ್ತ-ಹುಚ್ಚನಂತೆಯೂ, ಪಿಶಾಚವತ್-ಪಿಶಾಚದಂತೆಯೂ, ದರ್ಶಯನ್-ತೋರ್ಪಡಿಸುತ್ತಾ ॥ ೪೩ ॥ ಅನವೇಕ್ಷಮಾಣಃ - ಯಾರನ್ನೂ ನಿರೀಕ್ಷಿಸದೇ ಬಧಿರೋಯಥಾ - ಕಿವುಡನಂತೆ, ಅಶೃಣ್ವನ್-ಕೇಳದೇ, ನಿರಗಾತ್-ಹೊರಟುಹೋದನು, ಯತಃ-ಎಲ್ಲಿ, ಗತಃ-ಹೋದವನು, ನಾವರ್ತೇತ-ಹಿಂದಿರುಗಲಾರನೋ, ಅಂತಹ, ಪರಂಬ್ರಹ್ಮ-ಪರಮಾತ್ಮನನ್ನು, ಹೃದಿ-ಹೃದಯದಲ್ಲಿ, ಧ್ಯಾಯನ್-ಧ್ಯಾನಿಸುತ್ತಾ, ಮಹಾತ್ಮಭಿಃ-ಮಹಾತ್ಮರಾದ ಧೃತರಾಷ್ಟ್ರಾದಿಗಳಿಂದ, ಗತಪೂರ್ವಾಂ - ಪೂರ್ವದಲ್ಲಿ, ಪ್ರವೇಶಿಸಲ್ಪಟ್ಟ, ಉದೀಚೀಂ-ಉತ್ತರದಿಕ್ಕನ್ನು, ಪ್ರವಿವೇಶ - ಪ್ರವೇಶಿಸಿದನು ॥ ೪೪ ॥ ಸರ್ವೇ-ಎಲ್ಲಾ, ಭ್ರಾತರಃ-ತಮ್ಮಂದಿರು, ಅಧರ್ಮಮಿತ್ರೇಣ-ಅಧರ್ಮವೇ ಮಿತ್ರನಾಗಿ ಉಳ್ಳ, ಕಲಿನಾ-ಕಲಿಯಿಂದ, ಭುವಿ-ಭೂಮಿಯಲ್ಲಿ, ಸ್ಪೃಷ್ಟಾಃ-ಆಕ್ರಮಿಸಲ್ಪಟ್ಟ, ಪ್ರಜಾಃ-ಪ್ರಜೆಗಳನ್ನು, ದೃಷ್ಟ್ವಾ - ಕಂಡು, ಕೃತನಿಶ್ಚಯಾಃ-ನಿಶ್ಚಯವನ್ನುಮಾಡಿ, ತಂ-ಆ ಧರ್ಮರಾಜನನ್ನು, ಅನುನಿರ್ಜಗ್ಮುಃ-ಹಿಂಬಾಲಿಸಿದರು ॥ ೪೫ ॥

ಬಿಟ್ಟು, ಮೌನವ್ರತವನ್ನು ತೊಟ್ಟು, ತಲೆಕೂದಲನ್ನು ಜಡೆಗಟ್ಟಿಸಿಕೊಂಡು, ನೋಡುವವರಿಗೆ, ಜಡನಂತೆಯೂ, ಮರುಳನಂತೆಯೂ, ಪಿಶಾಚದಂತೆಯೂ, ಕಾಣಿಸಿಕೊಳ್ಳುತ್ತಾ, ಪ್ರಾಣಪ್ರಿಯರಾದ ತಮ್ಮಂದಿರನ್ನೂ ನಿರೀಕ್ಷಿಸದೆ, ಕಿವುಡನಂತೆ ಯಾರಮಾತನ್ನೂ ಕೇಳದೇ, ಹೊರಟವನಾಗಿ, ಹೃದಯಾರವಿಂದದಲ್ಲಿ ಪರಬ್ರಹ್ಮಾನುಸಂಧಾನವನ್ನು ಮಾಡುತ್ತಾ, ಯಾವದಿಕ್ಕಿಗೆ ಹೋದವರು ಮರಳಿ ಹಿಂದಿರುಗಿ ಬರುವದಿಲ್ಲವೋ, ಮಹಾತ್ಮರಾದ ಧೃತರಾಷ್ಟ್ರ, ವಿದುರ, ಮೊದಲಾದವರು ಯಾವದಿಕ್ಕಿಗೆಹೋದರೋ, ಅಂತಹ ಉತ್ತರದಿಕ್ಕಿಗೆ ತೆರಳಿದನು. ॥ ೪೩ ॥ ೪೪॥ ಬಳಿಕ ಆತನ ತಮ್ಮಂದಿರಾದ ಭೀಮಾರ್ಜುನ ನಕುಲ ಸಹದೇವರು, ಭೂಲೋಕದಲ್ಲಿರುವ ಪ್ರಜೆಗಳೆಲ್ಲರೂ, ಅಧರ್ಮಯುಕ್ತವಾದ ಕಲಿಪ್ರಚಾರಕ್ಕೊಳಗಾಗುತ್ತಿರುವುದನ್ನು ಕಂಡು, ಬೇಸರಗೊಂಡು, ಪ್ರಸ್ಥಾನವೇ ಶ್ರೇಯಸ್ಕರವೆಂದು ನಿಶ್ಚಯಿಸಿದವರಾಗಿ, ಅಣ್ಣನಾದ ಧರ್ಮರಾಜನನ್ನು ಹಿಂಬಾಲಿಸಿ ನಡೆದರು ॥ ಆಭೀಮಾದಿಗಳು ಧರ್ಮಾದಿ ಪುರುಷಾರ್ಥಗಳನ್ನು ಸಂಪೂರ್ಣವಾಗಿ ಪಡೆದವರಾದುದರಿಂದ,

ತ್ಯಂತಿಕ ಮಾತ್ಮನಃ । ಮನಸಾ ಧಾರಯಾಮಾಸು ರ್ವೈಕುಂಠ ಚರಣಾಂಬುಜಂ ॥ ೪೬ ॥ ತದ್ಧ್ಯಾನೋದ್ರಿಕ್ತಯಾ ಭಕ್ತ್ಯಾ ವಿಶುದ್ಧ ಧಿಷಣಾಃ ಪರೇ । ತಸ್ಮಿನ್ * ನಾರಾಯಣ ಪದೇ ಏಕಾಂತಮತಯೋ † ಗತಿಂ ॥೪೭॥ ಅವಾಪು ರ್ದುರವಾಪಾಂ ತೇ ಅಸದ್ಭಿ ರ್ವಿಷಯಾತ್ಮಭಿಃ । ‡ವಿಧೂತಕಲ್ಮಷಾಸ್ಥಾನಂ ವಿರಜೇನಾತ್ಮನೈವಹಿ ॥ ೪೮ ॥ § ವಿದುರೋಽಪಿ ಪರಿತ್ಯಜ್ಯ ಪ್ರಭಾಸೇ ದೇಹ ಮಾತ್ಮವಾನ್ । ಕೃಷ್ಣಾವೇಶೇನ ತಚ್ಚಿತ್ತಃ ಪಿತೃಭಿ ಸ್ಸ್ವಕ್ಷಯಂ

ಸಾಧು...ರ್ಥಾಃ, ಸಾಧು-ಚೆನ್ನಾಗಿ, ಕೃತ-ಸಂಪಾದಿಸಲ್ಪಟ್ಟ, ಸರ್ವ-ಎಲ್ಲಾ, ಅರ್ಥಾಃ-ಧರ್ಮಾದಿ ಪುರುಷಾರ್ಥಗಳುಳ್ಳ, ತೇ-ಅವರು, ಆತ್ಮನಃ-ತಮಗೆ, ವೈಕುಂಠ...ಜಂ, ವೈಕುಂಠ-ವಿಷ್ಣುವಿನ, ಚರಣಾಂಬುಜಂ-ಪಾದಕಮಲವನ್ನು, ಆತ್ಯಂತಿಕಂ - ಯಾವಾಗಲೂ, ಶರಣವನ್ನಾಗಿ ಜ್ಞಾತ್ವಾ - ತಿಳಿದು, ಮನಸಾ - ಹೃದಯದಲ್ಲಿ, ಧಾರಯಾಮಾಸುಃ - ಧರಿಸಿದರು ॥ ೪೬ ॥ ತದ್ಧ್ಯಾ...ಯಾ, ತತ್-ಆ ಭಗವಂತನ ಪಾದಕಮಲದ, ಧ್ಯಾನ - ಧ್ಯಾನದಿಂದ, ಉದ್ರಿಕ್ತಯಾ - ಅಧಿಕವಾದ, ಭಕ್ತ್ಯಾ-ಭಕ್ತಿಯಿಂದ, ವಿಶುದ್ಧ ಧಿಷಣಾಃ-ನಿರ್ಮಲ ಬುದ್ಧಿಯುಳ್ಳ, ತೇ-ಆ ಪಾಂಡವರು, ಪರೇ-ಪ್ರಪಂಚಾತೀತವಾದ, ತಸ್ಮಿನ್-ಆ, ನಾರಾಯಣಪದೇ-ನಾರಾಯಣ ಮೂರ್ತಿಯ ಪಾದದಲ್ಲಿ, ಏಕಾಂತಮತಯಃ - ಐಕ್ಯವನ್ನು ಪಡೆದ ಬುದ್ಧಿಯುಳ್ಳವರಾಗಿ, ವಿಷಯಾತ್ಮಭಿಃ - ವಿಷಯಗಳಲ್ಲಿ ಮನಸ್ಸುಳ್ಳ, ಅಸದ್ಭಿಃ - ಅಜ್ಞಾನಿಗಳಿಂದ, ದುರವಾಪಾಂ-ದುಃಖದಿಂದಲೂ ಹೊಂದುವುದಕ್ಕಾಗದ, ವಿಧೂತ...ನಂ, ವಿಧೂತ-ಕಳೆಯಲ್ಪಟ್ಟ, ಕಲ್ಮಷ-ಪಾಪವುಳ್ಳವರಿಗೆ, ಆಸ್ಥಾನಂ-ನೆಲೆಯಾದ, ವಿರಜೇನ-ರಜಸ್ಸಂಬಂಧವಿಲ್ಲದ, ಆತ್ಮನೈವ-ಆತ್ಮಸ್ವರೂಪದಿಂದಿರುವ, ಗತಿಂ-ಮೋಕ್ಷವನ್ನು, ಅವಾಪುಃ-ಪಡೆದರು ॥೪೭-೪೮॥ ಆತ್ಮವಾನ್-ಜ್ಞಾನಿಯಾದ, ವಿದುರೋಽಪಿ-ವಿದುರನೂ, ಪ್ರಭಾಸೇ-ಪ್ರಭಾಸಕ್ಷೇತ್ರದಲ್ಲಿ, ಕೃಷ್ಣಾವೇಶೇನ-ಕೃಷ್ಣನಲ್ಲಿ ಮನಸ್ಸನ್ನಿಟ್ಟು, ತಚ್ಚಿತ್ತಸ್ಸನ್-ಅದೇಬುದ್ಧಿಯುಳ್ಳವನಾಗಿ, ದೇಹಂ-ಶರೀರವನ್ನು, ಪರಿತ್ಯಜ್ಯ-ಬಿಟ್ಟು, ಪಿತೃಭಿಃ-ಪಿತೃದೇವತೆಗಳೊಡನೆ,

ಭಗವಂತನ ಚರಣಕಮಲವೇ ತಮಗೆ ಮುಖ್ಯವಾದ ಶ್ರೇಯಸ್ಸಾಧನವೆಂದು ತಿಳಿದವರಾಗಿ ಧ್ಯಾನಿಸುತ್ತಿದ್ದರು. ॥ ೪೬ ॥ ಇಂತು ಧ್ಯಾನಿಸುತ್ತಾ, ನಿರತಿಶಯವಾದ ಭಕ್ತಿಯಿಂದ ಮನಶ್ಶುದ್ಧಿಯನ್ನು ಪಡೆದು, ಸರ್ವೋತ್ತಮವಾದ ನಾರಾಯಣ ಪದದಲ್ಲಿ ಏಕಾಂತಬುದ್ಧಿಯುಳ್ಳವರಾಗಿ, ವಿಷಯಾಸಕ್ತರಾದ ಅಜ್ಞಾನಿಗಳಿಗೆ ಅಗಮ್ಯವಾಗಿಯೂ, ಪಾಪರಹಿತರಾದ ಮಹಾತ್ಮರಿಗೆ ನೆಲೆಯಾಗಿಯೂ, ರಜಸ್ಸಂಬಂಧವಿಲ್ಲದ ಆತ್ಮಸ್ಥಿತಿರೂಪವಾಗಿಯೂ, ಇರುವ ಮೋಕ್ಷ ಪದವನ್ನು ಹೊಂದಿದರು. ॥೪೭॥ ೪೮॥ ಬಳಿಕ ವಿದುರನು ಶ್ರೀಕೃಷ್ಣನಲ್ಲಿ ಮನಸ್ಸನ್ನಿಟ್ಟು, ಅದೇಧ್ಯಾನದಿಂದಲೇ ಪ್ರಭಾಸ ತೀರ್ಥದಲ್ಲಿ ಕಳೇಬರವನ್ನು ಳಿದು, ತನ್ನನ್ನು

* ವಿ. ಬದರಿಕಾ, ವನದಲ್ಲಿರುವ ನಾರಾಯಣಾಶ್ರಮದಲ್ಲಿ. † ಪಾ. ಅಪರ್ತ, ‡ ವಿ. ಆ ಪಾಂಡವರು, ಗುಣಾತ್ಮಕವಾದ ಲಿಂಗಶರೀರದ ಅಭಿಮಾನವನ್ನು ಳಿದಿರುವ ಮನಸ್ಸಿನಿಂದೊಡಗೂಡಿ, ಜರಾಮರಣಾದಿ ಕಲ್ಮಷಗಳಿಲ್ಲದ ತಂತಮ್ಮ ಮೂಲರೂಪಗಳನ್ನು ಪಡೆದರು. (ಈ ಮತಾನುಸಾರವಾಗಿ ಜೀವರು ಆದಿಯಲ್ಲಿ ಯಾವರೂಪದಿಂದಿರುವರೋ ಮರಳಿ ಆರೂಪವನ್ನು ಪಡೆವುದಕ್ಕೆ ಮೋಕ್ಷವೆಂದು ಹೆಸರು)

§ ಈಶ್ಲೋಕವು ಪ್ರಕ್ಷಿಪ್ತವೆಂದು ವಿಜಯಧ್ವಜದಲ್ಲಿ ಹೇಳಲ್ಪಟ್ಟಿದೆ.

ಯಯೌ ॥ ೪೯ ॥ ದ್ರೌಪದೀಚ ತದಾಜ್ಞಾಯ ಪತೀನಾ ಮನಪೇಕ್ಷತಾಂ।
ವಾಸುದೇವೇ ಭಗವತಿ ಹ್ಯೇಕಾಂತ ಮತಿರಾಪ ತಂ ॥ ೫೦ ॥ ಯಶ್ಶ್ರದ್ಧ
ಯೈತದ್ಭಗವತ್ಪ್ರಿಯಾಣಾಂ ಪಾಂಡೋಸ್ಸುತಾನಾ ಮಿತಿ ಸಂಪ್ರಯಾಣಂ।
ಶೃಣೋತ್ಯಲಂ ಸ್ವಸ್ತ್ಯಯನಂ ಪವಿತ್ರಂ ಲಬ್ಧ್ವಾ ಹರೌ ಭಕ್ತಿ ಮುಪೈತಿ
ಸಿದ್ಧಿಂ ॥ ೫೧ ॥

ಇತಿ ಪಂಚದಶೋಽಧ್ಯಾಯಃ

ಸ್ವಕ್ಷಯಂ-ತನ್ನ ಸ್ಥಾನವನ್ನು, ಯಯೌ-ಪಡೆದನು ॥ ೪೯ ॥ ತದಾ-ಆಗ, ದ್ರೌಪದೀಚ-ದ್ರೌಪದಿಯು, ಪತೀನಾಂ-ಪತಿಗಳು, ಅನಪೇಕ್ಷತಾಂ-ತನ್ನನ್ನು ಅಪೇಕ್ಷಿಸದಿರುವುದನ್ನು, ಆಜ್ಞಾಯ-ತಿಳಿದು, ಭಗವತಿ-ಭಗವಂತನಾದ, ವಾಸುದೇವೇ-ಶ್ರೀ ಕೃಷ್ಣಮೂರ್ತಿಯಲ್ಲಿ, ಏಕಾಂತಮತಿಃ-ನೆಲೆಗೊಂಡಮನಸ್ಸುಳ್ಳವಳಾಗಿ, ತಂ-ಆಭಗವಂತನನ್ನು, ಆಪ-ಹೊಂದಿದಳು ॥ ೫೦ ॥ ಇತಿ-ಹೀಗೆ, ಭಗವತ್ಪ್ರಿಯಾಣಾಂ-ವಿಷ್ಣುಭಕ್ತರಾದ, ಪಾಂಡೋಃ-ಪಾಂಡುವಿನ, ಸುತಾನಾಂ-ಮಕ್ಕಳಾದ ಧರ್ಮಾದಿಗಳ, ಅಲಂ-ಅಧಿಕವಾಗಿ, ಸ್ವಸ್ತ್ಯಯನಂ-ಶುಭಕರವೂ, ಪವಿತ್ರಂ - ಪರಿಶುದ್ಧವೂ ಆದ, ಯತ್ - ಯಾವ, ಸಂಪ್ರಯಾಣಂ - ಪ್ರಸ್ಥಾನವುಂಟೋ, ಏತತ್-ಇದನ್ನು, ಯಃ-ಯಾವನು, ಶ್ರದ್ಧಯಾ-ಶ್ರದ್ಧೆಯಿಂದ, ಶೃಣೋತಿ-ಕೇಳುವನೋ, ಸಃ-ಅವನು, ಹರೌ - ಹರಿಯಲ್ಲಿ, ಭಕ್ತಿಂ - ಭಕ್ತಿಯನ್ನು, ಲಬ್ಧ್ವಾ - ಪಡೆದು, ಸಿದ್ಧಿಂ - ಮುಕ್ತಿಯನ್ನು, ಉಪೈತಿ-ಹೊಂದುತ್ತಾನೆ ॥ ೫೧ ॥

ಪಂಚದಶಾಧ್ಯಾಯಂ ಸಮಾಪ್ತಂ

ಕರೆವುದಕ್ಕಾಗಿ ಬಂದಿರುವ ಪಿತೃದೇವತೆಗಳಿಂದೊಡಗೂಡಿ, ತನ್ನ ಅಧಿಕಾರಸ್ಥಾನವಾದ ಯಮಲೋಕಕ್ಕೆ, ತೆರಳಿದನು, ॥ ೪೯ ॥

ಅಂತೆಯೇ ದ್ರೌಪದಿಯೂ, ತನ್ನಗಂಡಂದಿರುದೇಹಾಭಿಮಾನವನ್ನುಳಿದುದನ್ನುತಿಳಿದು ಭಗವಂತನಾದ ಶ್ರೀಕೃಷ್ಣನನ್ನು ಮನಸ್ಸಿನಲ್ಲಿ ನಿಲ್ಲಿಸಿ, ಆಭಗವಂತನನ್ನೇ ಹೊಂದಿದಳು॥ ಅಯ್ಯಾ ಋಷಿಗಳಿರಾ ! ಕೇಳಿರಿ, ಇಂತು ಪರಮ ಭಾಗವತರಾದ ಪಾಂಡವರು ಮಹಾಪಥ ಪ್ರಯಾಣವನ್ನುಮಾಡಿದ ಪವಿತ್ರ ವೆನಿಸಿದೀಶುಭ ಚರಿತ್ರೆಯನ್ನು ಯಾವಪುರುಷನು ಶ್ರದ್ಧೆಯಿಂದ ಕೇಳುವನೋ, ಅವನು ಶ್ರೀಹರಿಯಲ್ಲಿ ಭಕ್ತಿಯನ್ನು ಪಡೆದು ಮುಕ್ತನಾಗುವನೆಂದು ಸೂತನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆ

ಯೊಳ್ ಹದಿನೈದನೆಯ ಅಧ್ಯಾಯಂ ಮುಗಿದುದು

ಓಂ ನಮಃ ಪರಮಾತ್ಮನೇ.

ಶ್ರೀ ಸೂತಃ ॥ ತತಃ ಪರೀಕ್ಷಿ ದ್ದ್ವಿಜವರ್ಯ ಶಿಕ್ಷಯಾ ಮಹೀಂ ಮಹಾಭಾಗ ವತಶ್ಶಶಾಸಹ।ಯಥಾಹಿ ಸೂತ್ಯಾ ಮಭಿಜಾತಕೋವಿದಾ ಸ್ಸಮಾದಿಶ೯ ವಿಪ್ರ ಮಹದ್ಗುಣಾ ಸ್ತಥಾ ॥೧॥ ಸ ಉತ್ತರಸ್ಯ ತನಯಾ ಮುಪಯೇಮೇ *ಇರಾ ವತೀಂ । ಜನಮೇಜಯಾದೀಂ ಶ್ಚತುರ ಸ್ತಸ್ಯಾ ಮುತ್ಪಾದಯ ತ್ಸುತಾ೯ ॥ ೨ ॥ ಆಜಹಾರಾಶ್ವಮೇಧಾಂ ಸ್ತ್ರೀ೯ ಗಂಗಾಯಾಂ ಭೂರಿ

ಹೇವಿಪ್ರ-ಎಲೈ ಬ್ರಾಹ್ಮಣನೆ? ತತಃ – ಅನಂತರದಲ್ಲಿ, ಮಹದ್ಗುಣಃ – ಮಹಾತ್ಮರಗುಣಗಳುಳ್ಳ, ಮಹಾಭಾಗವತಃ-ಭಾಗವತಶ್ರೇಷ್ಠನಾದ, ಪರೀಕ್ಷಿತ್-ಪರೀಕ್ಷಿದ್ರಾಜನು, ಸೂತ್ಯಾಂ-ಜನ್ಮದಿನದಲ್ಲಿ, ಅಭಿ ಜಾತಕೋವಿದಾಃ-ಜಾತಕಶಾಸ್ತ್ರದಲ್ಲಿಪಂಡಿತರು, ಯಥಾ-ಹೇಗೆ, ಸಮಾದಿಶ೯-ಹೇಳಿದ್ದರೋ, ತಥಾ-ಹಾಗೆ, ದ್ವಿಜವರ್ಯಶಿಕ್ಷಯಾ-ಬ್ರಾಹ್ಮಣೋತ್ತಮರಶಿಕ್ಷೆಯಿಂದ, ಮಹೀಂ-ಭೂಮಿಯುನ್ನು, ಶಶಾಸ – ಆಳಿದನು ॥೧॥ ಸಃ-ಆ ಪರೀಕ್ಷಿತನು, ಉತ್ತರಸ್ಯ-ಉತ್ತರನ, ತನಯಾಂ-ಮಗಳಾದ, ಇರಾವತೀಂ-ಇರಾವತಿಯುನ್ನು, ಉಪ ಯೇಮೇ-ಮದುವೆಯಾದನು, ತಸ್ಯಾಂ-ಆಕೆಯಲ್ಲಿ, ಜನಮೇಜಯಾದೀ೯ - ಜನಮೇಜಯನೇಮೊದಲಾದ, ಚತುರಃ-ನಾಲ್ಕುಮಂದಿ, ಸುತಾ೯-ಮಕ್ಕಳನ್ನು, ಉತ್ಪಾದಯತ್ - ಹುಟ್ಟಿಸಿದನು ॥ ೨ ॥ ಶಾರದ್ವತಂ-ಕೃಪಾಚಾರ್ಯನನ್ನು, ಗುರುಂ-ಗುರುವನ್ನಾಗಿ, ಕೃತ್ವಾ-ಮಾಡಿ, ಯತ್ರ – ಯಾವಯಾಗಗಳಲ್ಲಿ, ದೇವಾಃ-ಇಂದ್ರಾದಿಗಳು, ಅಕ್ಷಿಗೋಚರಾಃ - ಪ್ರತ್ಯಕ್ಷರಾದರೋ, ಅಂತಹ, ಭೂರಿದಕ್ಷಿಣಾ೯ – ಅಧಿಕವಾದ ದಕ್ಷಿಣೆ

ಪರೀಕ್ಷಿದ್ರಾಜನ ರಾಜ್ಯಭಾರ.

ಕಂ॥ ಭೂದೇವತೆಯುಂ ಧರ್ಮನು । ಮಾದಂ ಕಲಿಗಂಜಿ ಗೆಯ್ದು ಸಂವಾದ ಮುಮ ॥
ತ್ಯಾದರದೆ ಪರೀಕ್ಷಿತ ನೀ । ಮೇದಿನಿಯುಂ ಪೊರೆವ ತೆರನು ಮೊರೆಯಲ್ಪಡುಗುಂ॥

ಅಯ್ಯಾ ಶೌನಕಾದಿಗಳಿರಾ ! ಅನಂತರದಲ್ಲಿ ಮಹಾಗುಣ ಸಂಪನ್ನನೂ, ಭಾಗವತ ಶಿರೋಮಣಿಯೂ ಆದ ಪರೀಕ್ಷಿದ್ರಾಜನು, ಹುಟ್ಟಿದಾಗಲೇ ಜಾತಕ ಕೋವಿದರಾದ ಪಂಡಿತರೆಂತು ಹೇಳಿದ್ದರೋ ಆರೀತಿಯಾಗಿಯೇ, ಬ್ರಾಹ್ಮಣೋತ್ತಮರ ಆಜ್ಞಾನುಸಾರ ವಾಗಿ ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು, ॥ ೧ ॥ ಆತನು ತನ್ನ ಸೋದರಮಾವನೆನಿಸಿದ ಉತ್ತರನ ಮಗಳಾದ ಇರಾವತಿಯುನ್ನು ಮದುವೆಯಾಗಿ,ಆಕೆಯಲ್ಲಿ ಜನಮೇಜಯನೇ ಮೊದಲಾದ ನಾಲ್ವರು ಪುತ್ರರನ್ನು ಪಡೆದನು, ॥೨॥ ಮತ್ತು ಕೃಪಾಚಾರ್ಯನನ್ನು ಗುರುವನ್ನಾಗಿಟ್ಟುಕೊಂಡು, ಗಂಗಾತೀರದಲ್ಲಿ, ಭೂರಿದಕ್ಷಿಣೆಯುಳ್ಳ ಮೂರು ಅಶ್ವಮೇಧ

---

* ಸ್ಮೃ. ಮಾತುಲಸ್ಯ ಸುತಾಮೂಢ್ವಾ ಮಾತೃಗೋತ್ರಾಂ ತಥೈವಚ । ಸಮಾನಪ್ರವರಾಂಚೈವ ತ್ಯಕ್ತ್ವಾ ಚಾಂದ್ರಾಯಣಂಚರೇತ್ ॥ ಎಂಬುದರಿಂದ ಮಾತುಲಕನ್ಯಾವಿವಾಹವು ನಿಷಿದ್ಧವಾದರೂ, ದಕ್ಷಿಣದೇಶದವರು ಮಾತ್ರ ತಮ್ಮ ಸೌಕರ್ಯಕ್ಕಾಗಿ ಇದನ್ನು ಅಂಗೀಕರಿಸಿರುವಂತೆ ತೋರುವುದು.

ದಕ್ಷಿಣಾಃ । ಶಾರದ್ವತಂ ಗುರುಂ ಕೃತ್ವಾ ದೇವಾ ಯತ್ರಾಕ್ಷಿಗೋಚರಾಃ ॥ ೩ ॥ ನಿಜಗ್ರಾಹೌಜಸಾ ವೀರಃ ಕಲಿಂದಿಗ್ವಿಜಯೇ ಕ್ವಚಿತ್। ನೃಪಲಿಂಗಧರಂ ಶೂದ್ರಂ ಘ್ನಂತಂ ಗೋಮಿಥುನಂ ಪದಾ ॥ ೪ ॥ ಶ್ರೀ ಶೌನಕಃ ॥ ಕಸ್ಯ ಹೇತೋರ್ನಿಜಗ್ರಾಹ! ಕಲಿಂ ದಿಗ್ವಿಜಯೇ ನೃಪಃ । ನೃದೇವ ಚಿಹ್ನ ಧೃಕ್ಛೂದ್ರಃ ಕೋಽಸೌ ಗಾಂ ಯಃ ಪದಾ ಹನತ್ ॥೫॥ ತತ್ಕಥ್ಯತಾಂ ಮಹಾಭಾಗ ಯದಿ ಕೃಷ್ಣಕಥಾಶ್ರಯಂ। ಅಥವಾಸ್ಯ ಪದಾಂ

ಯುಳ್ಳ, ತ್ರೀನ್ - ಮೂರು, ಅಶ್ವಮೇಧಾನ್-ಅಶ್ವಮೇಧಗಳನ್ನು, ಗಂಗಾಯಾಂ - ಗಂಗಾತೀರದಲ್ಲಿ, ಆಜಹಾರ-ಮಾಡಿದನು ॥ ೩ ॥ ವೀರಃ - ಶೂರನಾದರಾಜನು, ದಿಗ್ವಿಜಯೇ - ದಿಕ್ಕುಗಳನ್ನು ಗೆಲ್ಲುವದಕ್ಕಾಗಿ ಹೊರಟಕಾಲದಲ್ಲಿ, ಕ್ವಚಿತ್-ಒಂದೆಡೆಯಲ್ಲಿ, ಗೋಮಿಥುನಂ - ಎರಡುಗೋವುಗಳನ್ನು, ಪದಾ-ಕಾಲಿಂದ ಘ್ನಂತಂ-ಒದೆಯುತ್ತಿರುವ, ನೃಪಲಿಂಗಧರಂ - ರಾಜಲಕ್ಷಣಗಳುಳ್ಳ, ಶೂದ್ರಂ - ಶೂದ್ರಕರ್ಮವನ್ನು ಮಾಡುತ್ತಿರುವ, ಕಲಿಂ-ಕಲಿಯನ್ನು, ಓಜಸಾ - ಪರಾಕ್ರಮದಿಂದ, ನಿಜಗ್ರಾಹ-ನಿಗ್ರಹಿಸಿದನು ॥ ೪ ॥

ಶೌನಕನು ಪ್ರಶ್ನೆಮಾಡುತ್ತಾನೆ. ಯಃ-ಯಾವನು, ಪದಾ-ಕಾಲಿನಿಂದ, ಗಾಂ - ಗೋವನ್ನು, ಅಹನತ್-ಒದ್ದನೋ, ಕೋಽಸೌ-ಯಾವನು, ನೃದೇವ...ಕ್, ನೃದೇವ-ರಾಜನ, ಚಿಹ್ನ-ಲಕ್ಷಣಗಳನ್ನು, ಧೃಕ್-ಧರಿಸಿದ,ಕಃ-ಕುತ್ಸಿತನಾದ,ಶೂದ್ರಃ-ಶೂದ್ರನೋ,ಕಲಿಂ-ಅಂತಹ ಕಲಿಯನ್ನು, ನೃಪಃ-ಪರೀಕ್ಷಿತನು, ದಿಗ್ವಿಜಯೇ-ಜೈತ್ರಯಾತ್ರೆಯಲ್ಲಿ, ಕಸ್ಯಹೇತೋಃ-ಯಾವಕಾರಣದಿಂದ, ನಿಜಗ್ರಾಹ-ನಿಗ್ರಹವನ್ನುಮಾತ್ರ ಮಾಡಿದನು, ॥ ೫ ॥ ಹೇ ಮಹಾಭಾಗ - ಎಲೆ ಮಹಾತ್ಮನೆ? ಕೃಷ್ಣ...ಯಂಯದಿ, ಕೃಷ್ಣ-ಕೃಷ್ಣನ, ಕಥಾ - ಕಥೆಯನ್ನು, ಆಶ್ರಯಂಯದಿ - ಆಶ್ರಯಿಸಿದ್ದರೆ, ಅಥವಾ, ಅಸ್ಯ - ಆಕೃಷ್ಣನ ಪದಾಂ...ಹಾಂ, ಪದಾಂಭೋಜ-ಪಾದಕಮಲದ, ಮಕರಂದ-ಮಧುರಸವನ್ನು, ಲಿಹಾಂ - ಸವಿಯುತ್ತಿ

ಯಾಗಗಳನ್ನು ಮಾಡಿದನು. ಆಯಾಗಗಳಲ್ಲಿ ಇಂದ್ರನೇ ಮೊದಲಾದ ದೇವತೆಗಳು ಪ್ರತ್ಯಕ್ಷರಾಗಿಬಂದು ಹವಿರ್ಭಾಗಗಳನ್ನು ಪರಿಗ್ರಹಿಸಿದರು. ॥ ೩ ॥ ಆತನು ದಿಗ್ವಿಜಯಾರ್ಥವಾಗಿ ಹೊರಟು, ಜೈತ್ರ ಯಾತ್ರೆಯನ್ನು ಮಾಡುತ್ತಿರುವಾಗ, ಕುರುಕ್ಷೇತ್ರದೊಂದುಕಡೆಯಲ್ಲಿ,ರಾಜಲಕ್ಷಣಗಳಿಂದೊಪ್ಪುತ್ತ,ಆಕಳನ್ನೂ ಎತ್ತನ್ನೂ ಜತೆಯಲ್ಲಿ ಹೂಡಿರುವ ಬಂಡಿಯಲ್ಲಿ ಕುಳಿತುಕೊಂಡು, ಕಾಲಿನಿಂದವುಗಳನ್ನೊದೆಯುತ್ತಾ, ಶೂದ್ರ ಕರ್ಮವನ್ನುಮಾಡುತ್ತಿರುವ ಕಲಿಪುರುಷನನ್ನುಕಂಡು, ತನ್ನ ಪರಾಕ್ರಮದಿಂದಾತನನ್ನು ನಿಗ್ರಹಿಸಿದನು॥ ೪ ॥ ಎಂದು ಹೇಳಿದ ಸೂತನ ಮಾತುಗಳನ್ನು ಕೇಳಿ ಶೌನಕನುಬೆಸಗೊಳ್ಳುತ್ತಾನೆ " ಅಯ್ಯಾ ಸೂತನೆ ?ಪರೀಕ್ಷಿದ್ರಾಜನು,ರಾಜವೇಷವನ್ನುಧರಿಸಿದಗೋವನ್ನುಕಾಲಿನಿಂದೊದೆಯುತ್ತಾ ಶೂದ್ರಾಧಮನಂತಿರುವ ಕಲಿಪುರುಷನನ್ನು, ದಿಗ್ವಿಜಯಸಮಯದಲ್ಲಿ, ಸಂಹರಿಸದೆ ನಿಗ್ರಹವನ್ನುಮಾತ್ರ ಮಾಡಿದುದೇಕೆ ? ॥ ೫ ॥ ಎಲೈಮಹಾತ್ಮನೆ ? ಶ್ರೀಕೃಷ್ಣನ ಚರಿತ್ರೆಯಿಂದಾಗಲಿ, ಅಥವಾ ಆ ಕೃಷ್ಣಮೂರ್ತಿಯ ಪಾದಾರವಿಂದ ಮಕರಂದ ರಸವನ್ನು ಪಾನಮಾಡುವ ಭಾಗವತೋತ್ತಮರ ಚರಿತ್ರೆಯಿಂದಾಗಲಿ, ಸಂಬಂಧಿಸಿದ್ದಲ್ಲಿ ಆತನ ವಿಜಯಯಾತ್ರಾವೃತ್ತಾಂತವನ್ನು ತಿಳಿಸು ॥ ೬ ॥ ಇಲ್ಲವಾದರೆ ಅಲ್ಪಾಯುಗಳಾಗಿಯೂ

ಭೋಜ ಮಕರಂದಲಿಹಾಂ ಸತಾಂ ॥ ೬ ॥ ಕಿ ಮನ್ಯೈ ರಸದಾಲಾಪೈ
ರಾಯುಷೋ ಯದಸದ್ವ್ಯಯಃ । ಕ್ಷುದ್ರಾಯುಷಾಂ ನೃಣಾ ಮಂಗ ಮ
ರ್ತ್ಯಾನಾ ಮೃತಮಿಚ್ಛತಾಂ ॥ ೭ ॥ ಇಹೋಪ ಹೂತೋ ಭಗವಾ
ಮೃತ್ಯು ಶ್ಯಾಮಿತ್ರಕರ್ಮಣಿ । ನಕಶ್ಚಿನ್ಮ್ರಿಯತೇ ತಾವದ್ಯಾ ವದಾಸ್ತ
ಇಹಾಂತಕಃ ॥ ೮ ॥ ಏತದರ್ಥಂ ಹಿ ಭಗವಾ ನಾಹೂತಃ ಪರಮರ್ಷಿಭಿಃ।
ಅಹೋ! ನೃಲೋಕೇ ಪೀಯ್ಯೇತ ಹರಿಲೀಲಾಮೃತಂ ವಚಃ ॥ ೯ ॥
ಮಂದಸ್ಯ ಮಂದ ಪ್ರಜ್ಞಸ್ಯ ವಯೋ ಮಂದಾಯುಷಶ್ಚ ಯತ್। ನಿದ್ರಯಾ

ರುವ, ಸತಾಂ-ಸಾಧುಗಳ, ಕಥಾಶ್ರಯಂಯದಿ-ಚರಿತ್ರೆಯನ್ನು ಆಶ್ರಯಿಸಿದ್ದಲ್ಲಿ, ತತ್-ಆಸಂಗತಿಯು, ಕಥ್ಯತಾಂ-ಹೇಳಲ್ಪಡಲಿ. ॥ ೬ ॥ ಹೇ ಅಂಗ-ಎಲೈ ಸೂತನೆ? ಯತ್-ಯಾವ ಹರಟೆಗಳಿಂದ, ಆಯುಷಃ-ಆಯುಸ್ಸಿನ, ಅಸದ್ವ್ಯಯಃ-ವ್ಯರ್ಥವಾದವೆಚ್ಚವು, ಭವತಿ-ಆಗುತ್ತದೆಯೋ, ಅಂತಹ, ಅನ್ಯೈಃ-ಇತರಗಳಾದ, ಅಸದಾಲಾಪೈಃ-ಕಾಡುಹರಟೆಗಳಿಂದ, ಕ್ಷುದ್ರಾಯುಷಾಂ-ಅಲ್ಪಾಯುಗಳೂ, ಮರ್ತ್ಯಾನಾಂ-ಸಾಯತಕ್ಕವರೂ ಆದುದರಿಂದಲೇ, ಋತಂ-ಮೋಕ್ಷವನ್ನು, ಇಚ್ಛತಾಂ-ಬಯಸುತ್ತಿರುವ, ನೃಣಾಂ-ಮನುಷ್ಯರಿಗೆ, ಕಿಂ-ಏನುಪ್ರಯೋಜನವು? ॥ ೭ ॥ ಇಹ-ಈ ಸತ್ರಯಾಗದಲ್ಲಿ, ಭಗವಾನ್-ಮಹಾತ್ಮನಾದ, ಮೃತ್ಯುಃ-ಯಮನು, ಶಾಮಿತ್ರಕರ್ಮಣಿ - ಪಶುಹಿಂಸೆಗಾಗಿ, ಉಪಹೂತಃ - ಕರೆಯಲ್ಪಟ್ಟಿರುವನು, ಅಂತಕಃ-ಆಯಮನು, ಇಹ-ಇಲ್ಲಿ, ಯಾವತ್-ಎಲ್ಲಿಯವರೆಗೆ, ಆಸ್ತೇ-ಇರುವನೋ, ತಾವತ್-ಅಲ್ಲಿಯವರೆಗೆ, ಕಶ್ಚಿತ್-ಒಬ್ಬನೂ, ನಮ್ರಿಯತೇ-ಸಾಯುವುದಿಲ್ಲ, ॥ ೮ ॥ ನೃಲೋಕೆ - ಮನುಷ್ಯಲೋಕದಲ್ಲಿ ಹರಿ...ತಂ, ಹರಿ-ವಿಷ್ಣುವಿನ, ಲೀಲಾ-ಚರಿತ್ರೆಯೆಂಬ, ಅಮೃತಂ-ಅಮೃತವುಳ್ಳ, ವಚಃ-ಮಾತು, ಪೀಯ್ಯೇತಅಹೋ-ಪಾನಮಾಡಲ್ಪಡುವುದಲ್ಲಾ, ಏತದರ್ಥಂ-ಇದಕ್ಕಾಗಿಯೇ, ಪರಮರ್ಷಿಭಿಃ-ಋಷಿಶ್ರೇಷ್ಠರಿಂದ, ಭಗವಾನ್-ಭಗವಂತನಾದಯಮನು, ಆಹೂತಃ-ಕರೆಯಲ್ಪಟ್ಟನು ॥ ೯ ॥

ಮಂದಸ್ಯ-ಸೋಮಾರಿಯೂ, ಮಂದಪ್ರಜ್ಞಸ್ಯ-ಅಲ್ಪಬುದ್ಧಿಯೂ, ಮಂದಾಯುಷಶ್ಚ - ಅಲ್ಪಾಯುಷ್ಯೂ ಆಗಿರುವವನ, ಯದ್ವಯಃ-ಯಾವ ಆಯುಸ್ಸುಂಟೋ ಅದು, ನಕ್ತಂ-ರಾತ್ರಿಯಲ್ಲಿ, ನಿದ್ರ

ಮರಣಧರ್ಮವುಳ್ಳವರಾಗಿಯೂ ಇದ್ದರೂ, ಮೋಕ್ಷವನ್ನುಬಯಸುತ್ತಿರುವನಮಗೆ ವ್ಯರ್ಥವಾಗಿ ಆಯುಷ್ಯವನ್ನು ವೆಚ್ಚಗೊಳಿಸುವ, ಬೇರೇಕಾಡುಹರಟೆಗಳಿಂದಪ್ರಯೋಜನವೇನು?

ಈಗನಾವು ಈ ಸತ್ರಯಾಗಕ್ಕಾಗಿ ಭಗವಂತನಾದ ಕೃತಾಂತನನ್ನು, ಕರೆಯಿಸಿರುವೆವಾದುದರಿಂದ ಆತನಿಲ್ಲಿ ನೆಲಸಿರುವವರೆಗೂ ಯಾವಪ್ರಾಣಿಯೂ ಸಾಯುವುದಿಲ್ಲ. ॥ ೮ ॥ ಆದಕಾರಣ ಈಭೂಲೋಕದಲ್ಲಿ ಹೀಗಾದರೂ ಭಗವತ್ಕಥಾಮೃತ ಪಾನವು ದೊರೆಯಲೆಂಬುದಕ್ಕಾಗಿಯೇ ಮಹರ್ಷಿಗಳು ಯಮರಾಜನನ್ನು ಇಲ್ಲಿಗೆ ಕರೆಯಿಸಿರುವರು॥೯॥ ಅಲ್ಪಾಯುಗಳೂ, ಅಲ್ಪಬುದ್ಧಿಗಳೂ, ಜಡರೂ ಆಗಿರುವ ಜನಗಳು ರಾತ್ರಿಕಾಲವನ್ನು ನಿದ್ದೆಯಿಂದಲೂ, ಹಗಲನ್ನು ವ್ಯರ್ಥಗಳಾದ ಉದರಭರಣಕಾರ್ಯಗಳಿಂದಲೂ ಕಳೆಯುವರಾದುದರಿಂದ ಇಂತಹ ಸಮಯದಲ್ಲಿಯಾದರೂ ಹರಿಕಥಾಮೃತವನ್ನು ಪಾನಮಾಡದಿದ್ದಲ್ಲಿ ಆಜನ್ಮವು ವ್ಯರ್ಥವಲ್ಲವೆ? ಆದುದರಿಂದೀಕಥೆಯನ್ನು ನಿರೂಪಿಸು " ಎಂದು ಬೆಸಗೊಳಲು

ಹ್ರಿಯತೇ ನಕ್ತಂ ದಿವಾಚ ವ್ಯರ್ಥಕರ್ಮಭಿಃ ॥ ೧೦ ॥ ಶ್ರೀ ಸೂತಃ॥
ಯದಾ ಪರೀಕ್ಷಿ ತ್ಕುರುಜಾಂಗಲೇ ವಸನ್ ಕಲಿಂ ಪ್ರವಿಷ್ಟಂ ನಿಜಚಕ್ರವ
ರ್ತಿತೇ । ನಿಶಮ್ಯ ವಾರ್ತಾ ಮನತಿಪ್ರಿಯಾಂ ತತ ಶ್ಶರಾಸನಂ ಸಂಯುಗ
ಶೌಂಡ ಆದಧೇ ॥೧೧॥ ಸ್ವಲಂಕೃತಂ ಶ್ಯಾಮತುರಂಗ ಯೋಜಿತಂ ರಥಂ
ಮೃಗೇಂದ್ರಧ್ವಜ ಮಾಸ್ಥಿತಃ ಪುರಾತ್ । ವೃತೋ ರಥಾಶ್ವ ದ್ವಿಪಪತ್ತಿಯು
ಕ್ತಯಾ ಸ್ವಸೇನಯಾ ದಿಗ್ವಿಜಯಾಯ ನಿರ್ಗತಃ ॥ ೧೨ ॥ ಭದ್ರಾಶ್ವಂ
ಕೇತುಮಾಲಂಚ ಭಾರತಂ ಚೋತ್ತರಾನ್ ಕುರೂನ್ । ಕಿಂಪು*ರುಷಾದೀನಿ

ಯಾ-ನಿದ್ದೆಯಿಂದಲೂ, ದಿವಾ-ಹಗಲು, ವ್ಯರ್ಥಕರ್ಮಭಿಶ್ಚ-ವ್ಯರ್ಥಗಳಾದ ಕಾರ್ಯಗಳಿಂದಲೂ, ಹ್ರಿಯತೇ-ಕಳೆಯಲ್ಪಡುವುದು ॥ ೧೦ ॥ ಯದಾ-ಯಾವಾಗ, ಪರೀಕ್ಷಿತ್-ಪರೀಕ್ಷಿತನು, ಕುರುಜಾಂಗಲೇ-ಕುರುಜಾಂಗಲಗಳೆಂಬ ದೇಶಗಳಲ್ಲಿ, ವಸನ್-ಇದ್ದನೋ, ತದಾ-ಆಗ, ನಿಜ...ತೇ, ನಿಜ-ತನ್ನ, ಚಕ್ರ-ಆಜ್ಞೆಯಿಂದ, ಅಥವಾ ಸೈನ್ಯದಿಂದ, ವರ್ತಿತೇ-ರಕ್ಷಿಸಲ್ಪಟ್ಟದೇಶದಲ್ಲಿ, ಕಲಿಂ - ಕಲಿಯನ್ನು, ಪ್ರವಿಷ್ಟಂ-ಪ್ರವೇಶಿಸಿದನೆಂದು, ಅನತಿಪ್ರಿಯಾಂ-ಅತಿಪ್ರಿಯವಲ್ಲದ, ವಾರ್ತಾಂ-ವೃತ್ತಾಂತವನ್ನು, ನಿಶಮ್ಯ-ಕೇಳಿ - ಸಂಯುಗ ಶೌಂಡಃ-ಯುದ್ಧದಲ್ಲಿ ಶೂರನಾದ ರಾಜನು, ತತಃ-ಬಳಿಕ, ಶರಾಸನಂ - ಬಿಲ್ಲನ್ನು, ಆದಧೇ-ಹಿಡಿದನು. ॥ ೧೧ ॥ ಸ್ವಲಂಕೃತಂ - ಚೆನ್ನಾಗಿ ಸಿಂಗರಿಸಲ್ಪಟ್ಟ, ಶ್ಯಾಮ...ತಂ, ಶ್ಯಾಮ-ಕರಿದಾದ, ತುರಂಗ-ಕುದುರೆಗಳಿಂದ, ಯೋಜಿತಂ-ಹೂಡಲ್ಪಟ್ಟ, ಮೃಗೇಂದ್ರಧ್ವಜಂ - ಸಿಂಹಧ್ವಜವುಳ್ಳ, ರಥಂ-ತೇರಿನಲ್ಲಿ, ಆಸ್ಥಿತಃ-ಕುಳಿತುಕೊಂಡು, ರಥಾ...ಯಾ, ರಥ, ಅಶ್ವ, ಆನೆ, ಕಾಲ್ಬಲ, ಇವುಗಳಿಂದ, ಯುಕ್ತಯಾ-ಕೂಡಿದ, ಸ್ವಸೇನಯಾ-ತನ್ನಸೇನೆಯಿಂದ, ವೃತಃ-ಬಳಸಲ್ಪಟ್ಟವನಾಗಿ, ಪುರಾತ್-ಪಟ್ಟಣದಿಂದ, ದಿಗ್ವಿಜಯಾಯ-ಜೈತ್ರಯಾತ್ರೆಗಾಗಿ, ನಿರ್ಗತಃ-ಹೊರಟನು ॥ ೧೨ ॥

ಭದ್ರಾಶ್ವ, ಕೇತುಮಾಲ, ಭಾರತಖಂಡ, ಉತ್ತರಕುರುದೇಶಗಳು, ಕಿಂಪುರುಷ ಮೊದಲಾದ ವರ್ಷಗಳು, ಇವುಗಳನ್ನು, ವಿಜಿತ್ಯ-ಗೆದ್ದು, ಬಲಿಂ-ಕಾಣಿಕೆಯನ್ನು ಜಗೃಹೇ-ತೆಗೆದುಕೊಂಡನು ॥ ತತ್ರತತ್ರ-ಅಲ್ಲಲ್ಲಿ, ಪ್ರಗೀಯಮಾನಂ - ಹೊಗಳಲ್ಪಡುತ್ತಿರುವ, ಕೃಷ್ಣ...ನಂ, ಕೃಷ್ಣ - ಕೃಷ್ಣನ, ಮಾಹಾತ್ಮ್ಯ-ಮಹಿಮೆಯನ್ನು, ಸೂಚನಂ-ಹೊರಪಡಿಸುತ್ತಿರುವ, ಮಹಾತ್ಮನಾಂ - ಮಹಾತ್ಮರಾದ,

ಸೂತನು ಹೇಳತೊಡಗಿದು ದೆಂತೆಂದರೆ ॥ ೧೧ ॥ ಅಯ್ಯಾ ಶೌನಕನೆ ? ಆಪರೀಕ್ಷಿದ್ರಾಜನು ಕುರುಜಾಂಗಲ ದೇಶಗಳಲ್ಲಿರುವಾಗ " ತನ್ನ ಚಕ್ರಾಧಿಪತ್ಯಕ್ಕೊಳಪಟ್ಟದೇಶದಲ್ಲಿ ಕಲಿಯು ಪ್ರವೇಶಿಸಿರುವನು" ಎಂಬ ವಾರ್ತೆಯನ್ನು ಕೇಳಿ, ಅದು ತನಗನಿಷ್ಟವಾದರೂ ಯುದ್ಧಮಾಡುವ ಪ್ರತಿಭಟನು ದೊರೆತುದಕ್ಕಾಗಿ ಕೊಂಚ ಸಂತೋಷಗೊಂಡು, ಬಿಲ್ಲನ್ನು ಹಿಡಿದು, ಕರೀ ಕುದುರೆಗಳನ್ನು ಹೂಡಿ ಸಿಂಹಧ್ವಜವನ್ನು ಬಿಗಿದು, ಚೆನ್ನಾಗಿಸಿಂಗರಿಸಿರುವ ರಥದಲ್ಲಿ ಕುಳಿತುಕೊಂಡು, ತೇರು, ಆನೆ, ಕುದುರೆ, ಕಾಲ್ಬಲವೆಂಬ ಚತುರಂಗ ಸೇನೆಯೊಂದೊಡಗೂಡಿ, ದಿಗ್ವಿಜಯ ಯಾತ್ರೆಗಾಗಿ ತನ್ನ ಪಟ್ಟಣದಿಂದ ಪ್ರಯಾಣಮಾಡಿದನು ॥ ೧೧ ॥-೧೨॥ ಇಂತುಹೊರಟು, ಭದ್ರಾಶ್ವ, ಕೇತುಮಾಲ, ಭಾರತ, ಉತ್ತರಕುರು, ಮೊದಲಾದ ದೇಶಗಳನ್ನೂ ಕಿಂಪುರುಷ ಮೊದಲಾದ ವರ್ಷಗಳನ್ನೂ ಜಯಿಸಿ ಆ

ವರ್ಷಾಣಿ ವಿಜಿತ್ಯ ಜಗೃಹೇ ಬಲಿಂ ॥ ೧೨ ॥ ತತ್ರತತ್ರೋಪ ಶೃಣ್ವಾನ ಸ್ವಪೂರ್ವೇಷಾಂ ಮಹಾತ್ಮನಾಂ । ಪ್ರಗೀಯ ಮಾನಂಚ ಯಶಃ ಕೃಷ್ಣ ಮಾಹಾತ್ಮ್ಯ ಸೂಚಕಂ ॥ ೧೪ ॥ ಆತ್ಮಾನಂಚ ಪರಿತ್ರಾತ ಮಶ್ವತ್ಥಾ ಮ್ನೋಽಸ್ತ್ರತೇಜಸಃ । ಸ್ನೇಹಂಚ ವೃಷ್ಣಿಪಾರ್ಥಾನಾಂ ತೇಷಾಂ ಭಕ್ತಿಂ ಚ ಕೇಶವೇ ॥ ೧೫ ॥ ತೇಭ್ಯಃ ಪರಮ ಸಂತುಷ್ಟಃ ಪ್ರೀತ್ಯುಜ್ಜೃಂಭಿ ತಲೋಚನಃ । ಮಹಾಧನಾನಿ ವಾಸಾಂಸಿ ದದೌ ಹಾರಾ೯ ಮಹಾಮನಾಃ॥ ಸಾರಥ್ಯಪಾರಿಷದ ಸೇವನ ಸಖ್ಯ ದೌತ್ಯ ವೀರಾಸನಾನು ಗಮನ ಸ್ತವನ

ಸ್ವಪೂರ್ವೇಷಾಂ-ತನ್ನ ಪೂರ್ವಿಕರ, ಯಶಃ-ಕೀರ್ತಿಯನ್ನೂ, ಅಶ್ವತ್ಥಾಮ್ನಃ-ಅಶ್ವತ್ಥಾಮನ, ಅಸ್ತ್ರ ತೇಜಸಃ - ಅಸ್ತ್ರದುರಿಯಿಂದ, ಆತ್ಮಾನಂ - ತಾನು, ಪರಿತ್ರಾತಂ-ರಕ್ಷಿಸಲ್ಪಟ್ಟದ್ದನ್ನೂ, ವೃಷ್ಣಿ ಪಾರ್ಥಾನಾಂ-ಯಾದವ ಪಾಂಡವರಿಗಿರುವ, ಸ್ನೇಹಂಚ-ಮೈತ್ರಿಯನ್ನೂ, ತೇಷಾಂ - ಆಪಾಂಡವರಿಗೆ, ಕೇಶವೇ-ಕೃಷ್ಣನಲ್ಲಿರುವ, ಭಕ್ತಿಂಚ-ಭಕ್ತಿಯನ್ನೂ, ತತ್ರತತ್ರ-ಅಲ್ಲಲ್ಲಿ, ಪ್ರಗೀಯಮಾನಂ - ಹಾಡಲ್ಪ ಡುವುದನ್ನು, ಉಪಶೃಣ್ವಾನಃ-ಕೇಳುತ್ತಾ ॥ ೧೫ ॥ ಮಹಾಮನಾಃ - ಧಾರಾಳವಾದ ಬುದ್ಧಿಯುಳ್ಳ, ರಾಜನು, ಪರಮಸಂತುಷ್ಟಃ - ಬಹಳಸಂತೋಷಗೊಂಡು, ಪ್ರೀತ್ಯು...ನಃ, ಪ್ರೀತಿ - ಪ್ರೀತಿಯಿಂದ, ಉಜ್ಜೃಂಭಿತ-ಅರಳಿದ, ಲೋಚನಃ-ಕಣ್ಣುಳ್ಳವನಾಗಿ, ತೇಭ್ಯಃ-ಅವರಿಗೆ, ಮಹಾಧನಾನಿ-ಬಹಳ ಧನಗ ಳನ್ನೂ, ವಾಸಾಂಸಿ-ವಸ್ತ್ರಗಳನ್ನೂ, ಹಾರಾ೯-ರತ್ನಹಾರಗಳನ್ನೂ: ದದೌ-ಕೊಟ್ಟನು, ॥೧೬॥

ವಿಷ್ಣೋಃ-ಕೃಷ್ಣನಿಗೆ, ಸ್ನಿಗ್ಧೇಷು-ಸ್ನೇಹಿತರಾದ, ಪಾಂಡುಷು-ಪಾಂಡವರಲ್ಲಿ, ಸಾರಥ್ಯ...ವರ್ಗ- ಸಾರಥ್ಯ-ರಥವನ್ನು ನಡೆಯಿಸುವುದು, ಪಾರಿಷದ - ಸಭಾಧ್ಯಕ್ಷತೆಯು, ಸೇವನ - ಚಿತ್ತಾನುವರ್ತನವೂ, ಸಖ್ಯ-ಸ್ನೇಹವೂ, ದೌತ್ಯ-ದೂತಕೃತ್ಯವೂ, ವೀರಾಸನ - ಕಾವಲಿರುವುದು, ಅನುಗಮನ - ಹಿಂಬಾಲಿಸು ವುದು, ಸ್ತವನ-ಹೊಗಳುವುದು, ಪ್ರಣಿಪಾತ-ನಮಸ್ಕಾರ, ಈ ಕೆಲಸಗಳನ್ನೂ, ಜಗತ್ಪ್ರಣತಿಂಚ- ಲೋಕವೆಲ್ಲವೂ ವಂದಿಸುವುದನ್ನೂ, ನಿಶಮ್ಯ-ಕೇಳಿ, ನೃಪತಿಃ-ಪರೀಕ್ಷಿತನು ವಿಷ್ಣೋಃ-ಕೃಷ್ಣನ, ಚರ

ರಾಜರಿಂದ ಕಾಣಿಕೆಗಳನ್ನು ಸಂಪಾದಿಸಿದನು॥೧೨॥ ಶ್ರೀಕೃಷ್ಣಮೂರ್ತಿಯ ಮಾಹಾತ್ಮ್ಯ ವನ್ನು ಹೊರಪಡಿಸುತ್ತಿರುವ, ತಮ್ಮಪೂರ್ವಿಕರಾದ ಪಾಂಡವಾದಿಗಳ ಸತ್ಕೀರ್ತಿಯನ್ನೂ, ಅಶ್ವತ್ಥಾಮಾಚಾರ್ಯನು ಬಿಟ್ಟ ಬ್ರಹ್ಮಾಸ್ತ್ರದಿಂದ ಸುಟ್ಟು ಕಂಗೆಟ್ಟದ್ದ ತನ್ನನ್ನು ಶ್ರೀಕೃಷ್ಣನುದ್ಧರಿಸಿದುದನ್ನೂ, ಪಾಂಡವರಿಗೂ ಯಾದವರಿಗೂ ಇದ್ದ ಸ್ನೇಹವನ್ನೂ, ಪಾಂಡವರಿಗೆ ಶ್ರೀಕೃಷ್ಣನಲ್ಲಿದ್ದ ಭಕ್ತಿಯನ್ನೂ, ಅಲ್ಲಲ್ಲಿ ಹೊಗಳುತ್ತಿರುವುದನ್ನು ಕೇಳಿ, ಪರಮಾನಂದ ಭರಿತನಾಗಿ, ಉದಾರ ಮನಸ್ಕನಾದುದರಿಂದ ಅವರೆಲ್ಲರಿಗೂ, ಧನಕನಕ ವಸ್ತ್ರಾಭರಣಾದಿಗಳನ್ನಿತ್ತು ಸಂತೋಷಗೊಳಿಸಿದನು ॥ ೧೬ ॥

ಮತ್ತು ಭಕ್ತವತ್ಸಲನಾದ ಶ್ರೀಕೃಷ್ಣಮೂರ್ತಿಯು, ಸಾರಥಿಯಾಗಿಯೂ, ಸಭಾಧ್ಯಕ್ಷ ನಾಗಿಯೂ, ಸೇವಕನಾಗಿಯೂ, ಮಿತ್ರನಾಗಿಯೂ, ದೂತನಾಗಿಯೂ, ಖಡ್ಗಧಾರಿಯಾದ ಕಾವಲುಗಾರನಾಗಿಯೂ, ಅನುಚರನಾಗಿಯೂ, ಸ್ತುತಿಸುವವನಾಗಿಯೂ, ವಂದಿಸುವವ ನಾಗಿಯೂ, ಮಿತ್ರರಾದ ಪಾಂಡವರನ್ನು ಸಲಹುತ್ತಿದ್ದುದನ್ನೂ, ಆತನೇ ಭಗವಂತನೆಂದು

ಪ್ರಣಾಮರ್ಹಾಸ್ನಿಗ್ಧೇಷು ಪಾಂಡುಷು ಜಗತ್ಪ್ರಣತಿಂಚ ವಿಷ್ಣೋರ್ಭಕ್ತಿಂ
ಕರೋತಿ ನೃಪತಿ ಶ್ಚರಣಾರವಿಂದೇ ॥ ೧೭ ॥ ತಸ್ಯೈವಂ ವರ್ತಮಾನಸ್ಯ
ಪೂರ್ವೇಷಾಂ ವೃತ್ತಿಮನ್ವಹಂ । ನಾತಿದೂರೇ ಕಿಲಾಶ್ಚರ್ಯಂ ಯದಾಸೀ
ತ್ತನ್ನಿಬೋಧ ಮೇ ॥ ೧೮ ॥ ಧರ್ಮಃ ಪದೈಕೇನ ಚರನ್ ವಿಚ್ಛಾಯಾ
ಮುಪಲಭ್ಯ ಗಾಂ।ಪೃಚ್ಛತಿಸ್ಮಾಶ್ರುವದನಾಂ ವಿವತ್ಸಾ ಮಿವ ಮಾತರಂ॥
ಧರ್ಮಃ॥ಕಚ್ಚಿದ್ಭದ್ರೇಽನಾಮಯ ಮಾತ್ಮನಸ್ತೇ! ವಿಚ್ಛಾಯಾಸಿ ಮ್ಲಾಯ
ತೇಷನ್ಮುಖೇನ। ಆಲಕ್ಷಯೇ ಭವತೀ ಮಂತರಾಧಿಂ ದೂರೇ ಬಂಧುಂ ಶೋ
ಚಸಿ ಕಂಚನಾಂಬ ! ॥ ೨೦ ॥ ಪಾದನ್ಯೂನಂ ಶೋಚಸಿ ಮೈಕಪಾದ

ಚರಣಾರವಿಂದೇ-ಪಾದಕಮಲದಲ್ಲಿ, ಭಕ್ತಿಂ-ಭಕ್ತಿಯನ್ನು, ಕರೋತಿಸ್ಮ-ಮಾಡಿದನು ॥ ೧೭ ॥ ಏವಂ-ಹೀಗೆ, ಅನ್ವಹಂ-ನಿತ್ಯವೂ, ಪೂರ್ವೇಷಾಂ-ಪೂರ್ವಿಕರ, ವೃತ್ತಿಂ-ನಡವಳಿಯನ್ನು, ತಸ್ಯ - ಆ ರಾಜನು, ವರ್ತಮಾನಸ್ಯ - ಅನುಸರಿಸುತ್ತಿರಲು, ನಾತಿದೂರೇ - ಶೀಘ್ರದಲ್ಲಿಯೇ ಯತ್-ಯಾವ, ಆಶ್ಚರ್ಯಂ-ಆಶ್ಚರ್ಯವು, ಆಸೀತ್ಕಿಲ-ಆಯಿತೋ, ತತ್-ಅದನ್ನು ಹೇಳುವ, ಮೇ-ನನ್ನ ಮಾತನ್ನು, ನಿಬೋಧ-ಕೇಳು ॥ ೧೮ ॥ ಧರ್ಮಃ-ಧರ್ಮ ಪುರುಷನು, ಏಕೇನ-ಒಂದು, ಪದಾ-ಕಾಲಿನಿಂದ, ಚರನ್-ಸಂಚರಿಸುತ್ತಾ, ವಿಚ್ಛಾಯಾಂ-ಕಳೆಗುಂದಿರುವ, ವಿವತ್ಸಾಂ-ಕರುವಿಲ್ಲದ, ಮಾತರಮಿವ-ತಾಯಿಯಂತೆ, ಅಶ್ರುವದನಾಂ-ಕಣ್ಣೀರಿನ ಮುಖವುಳ್ಳ, ಗಾಂ-ಆಕಳನ್ನು, ಉಪಲಭ್ಯ-ಹೊಂದಿ ಪೃಚ್ಛತಿಸ್ಮ-ಪ್ರಶ್ನೆಮಾಡಿದನು ॥ ೧೯ ॥ ಹೇ ಭದ್ರೇ-ಎಲೌ ಮಂಗಳಾಂಗಿಯೇ ? ತೇ-ನಿನ್ನ ಆತ್ಮನಃ-ಶರೀರಕ್ಕೆ, ಅನಾಮಯಂ ಕಚ್ಚಿತ್-ಆರೋಗ್ಯವೇ ? ಈಷತ್-ಕೊಂಚವಾಗಿ, ಮ್ಲಾಯತಾ-ಬಳಲಿರುವ, ಮುಖೇನ-ಮುಖದಿಂದ ವಿಚ್ಛಾಯಾಸಿ-ಕಳೆಗುಂದಿರುವೆ, ಭವತೀಂ-ನಿನ್ನನ್ನು, ಅಂತರಾಧಿಂ - ಮನೋರೋಗವುಳ್ಳವಳನ್ನಾಗಿ, ಆಲಕ್ಷಯೇ-ಕಾಣುತ್ತೇನೆ, ಹೇ ಅಂಬ-ಎಲೌ ತಾಯಿ ! ದೂರೇ-ದೂರದಲ್ಲಿರುವ, ಕಂಚನ-ಯಾವನನ್ನಾದರೂ, ಬಂಧುಂ-ಬಂಧುವನ್ನು ಕುರಿತು, ಶೋಚಸಿಕಿಂ-ಚಿಂತಿಸುತ್ತಿರುವೆಯಾ ? ॥ ೨೦ ॥

ಪ್ರಪಂಚವೆಲ್ಲವು ನಮಿಸುತ್ತಿದ್ದುದನ್ನೂ ಕೇಳಿ, ಆ ಕೃಷ್ಣನಪಾದ ಕಮಲದಲ್ಲಿ ನಿರತಿಶಯವಾದ ಭಕ್ತಿಯನ್ನಿಟ್ಟನು ॥ ೧೭ ॥ ಅಯ್ಯಾ ಶೌನಕನೆ ! ಇಂತು ಆ ಪರೀಕ್ಷಿದ್ರಾಜನು ಪ್ರತಿದಿನವೂ ತನ್ನ ಹಿರಿಯರ ನಡವಳಿಗಳನ್ನೇ ಅನುಸರಿಸುತ್ತಾ ಇರಲು, ಸ್ವಲ್ಪಕಾಲದಲ್ಲಿಯೇ ಬಂದಾಶ್ಚರ್ಯವು ನಡೆಯಿತು, ಅದನ್ನು ಹೇಳುವೆನು ಕೇಳು, ॥ ೧೮ ॥ ಒಂದುಕಾಲಿನಿಂದ ಕುಂಟಿಕೊಂಡು ಬರುತ್ತಾ, ಕರುವನ್ನು ಕಳೆದುಕೊಂಡ ಆಕಳಿನಂತೆ ಕಂಬನಿ ಗರೆಯುತ್ತಾ, ಕಂಗೆಟ್ಟು ಕಳೆಗುಂದಿರುವ ಗೋರೂಪವನ್ನು ಧರಿಸಿದ, ಭೂದೇವಿಯನ್ನು ಕಂಡು ಬೆಸಗೊಂಡ ನೆಂತೆಂದರೆ ॥ ೧೯ ॥ ಎಲೌ ಮಂಗಳಾಂಗಿಯೆ ! ನಿನ್ನ ದೇಹದಲ್ಲಿ ಆರೋಗ್ಯ ವಾಗಿರುವುದೆ ? ನಿನ್ನ ಮುಖವನ್ನು ನೋಡಿದರೆ ಸ್ವಲ್ಪ ಬಾಡಿದಂತೆ ಕಾಣುವುದು, ನೀನು ಕಳೆಗುಂದಿರುವುದನ್ನು ಕಂಡರೆ, ನಿನಗೇನೋ ಮನೋವ್ಯಥೆಯುಂಟಾದಂತೆ ತೋರುವುದು. ಎಲೌ ತಾಯಿ ! ದೂರದೇಶದಲ್ಲಿರುವ ಬಂಧುವಾರನ್ನಾದರೂ ಚಿಂತಿಸುತ್ತಿರುವೆಯಾ ? ॥ ೨೦ ॥ ಮೂರುಕಾಲಿಲ್ಲದೆ ಒಂದುಕಾಲಿಂದ ಕುಂ

ಮುತಾತ್ಮಾನಂ ವೃಷಲೈರ್ಭೋಕ್ಷ್ಯಮಾಣಂ। ಆಹೋ! ಸುರಾದೀನ್ ಹೃತಯಜ್ಞಭಾಗಾನ್ ಪ್ರಜಾ ಉತಸ್ವಿನ್ಮಘವತ್ಯವರ್ಷತಿ ॥೨೧॥ ಅರಕ್ಷ್ಯಮಾಣಾಃ ಸ್ತ್ರಿಯ ಉರ್ವಿ! ಬಾಲಾನ್ ಶೋಚಸ್ಯಹೋ ಪುರುಷಾದೈರಿವಾರ್ತಾನ್। ವಾಚಂ ದೇವೀಂ ಬ್ರಹ್ಮಕುಲೇ ಕುಕರ್ಮಣ್ಯಬ್ರಹ್ಮಣ್ಯೇ ರಾಜಕುಲೇ ಕುಲಾಗ್ರ್ಯಾನ್ ॥ ೨೨ ॥ ಕಿಂ ಕ್ಷತ್ರಬಂಧೂನ್ ಕಲಿನೋಪಸೃಷ್ಟಾನ್ ರಾಷ್ಟ್ರಾಣಿವಾ ತೈರವರೋಪಿತಾನಿ। ಇತಸ್ತತೋವಾ ಶಯನಾಸನಾನ್ನ ಪಾನವ್ಯವಾಯೋನ್ಮುಖ ಜೀವಲೋಕಂ ॥ ೨೩ ॥

ಪಾದನ್ಯೂನಂ-ಮೂರುಪಾದಗಳಿಲ್ಲದ, ಏಕಪಾದಂ-ಒಂದುಕಾಲುಳ್ಳ, ಮಾ - ನನ್ನನ್ನುಕುರಿತು, ಶೋಚಸಿ-ದುಃಖಿಸುವೆಯಾ? ಉತ-ಅಥವಾ, ವೃಷಲೈಃ-ದುಷ್ಟರಾಜರಿಂದ, ಭೋಕ್ಷ್ಯಮಾಣಂ-ಅನುಭವಿಸಲ್ಪಡುವ, ಆತ್ಮಾನಂ-ನಿನ್ನನ್ನುಕುರಿತು, ಶೋಚಸಿ-ದುಃಖಿಸುವೆಯಾ! ಆಹೋ-ಅಥವಾ, ಹೃತ...ಗಾನ್, ಹೃತ-ಅಪಹರಿಸಲ್ಪಟ್ಟ, ಯಜ್ಞಭಾಗಾನ್-ಹವಿರ್ಭಾಗಗಳುಳ್ಳ, ಅಸುರಾದೀನ್-ರಾಕ್ಷಸರು ಮೊದಲಾದವರನ್ನು ಕುರಿತು, ಶೋಚಸಿ-ಶೋಕಿಸುವೆಯಾ, ಉತ-ಅಥವಾ, ಮಘವತಿ-ಇಂದ್ರನು, ಅವರ್ಷತಿ ವರ್ಷಿಸದಿರಲು, ಪ್ರಜಾಃ - ಪ್ರಜೆಗಳನ್ನು ಕುರಿತು, ಶೋಚಸಿ-ಅಳುವೆಯಾ? ॥ ೨೧ ॥ ಹೇ ಉರ್ವಿ-ಎಲೌಭೂಮಿಯೆ? ಅರಕ್ಷ್ಯಮಾಣಾಃ-ಕಾಪಾಡಲ್ಪಡದ, ಸ್ತ್ರೀಯಃ-ಸ್ತ್ರೀಯರನ್ನೇ? ಅಥವಾ ಪುರುಷಾದೈರಿವ - ರಾಕ್ಷಸರಂತೆ ನಿರ್ದಯರಾದ ತಂದೆಗಳಿಂದ, ಆರ್ತಾನ್-ಹಿಂಸಿಸಲ್ಪಡುವ, ಬಾಲಾನ್-ಬಾಲರನ್ನೆ? ಬ್ರಹ್ಮಕುಲೆ-ಬ್ರಾಹ್ಮಣಕುಲವು, ಕುಕರ್ಮಣಿ-ದುರ್ವೃತ್ತವಾಗಲು, ದೇವೀಂ - ಭಗವತ್ಸಂಬಂಧಿಯಾದ, ವಾಚಂ-ವೇದವನ್ನೇ? ರಾಜಕುಲೇ-ರಾಜವಂಶವು, ಅಬ್ರಹ್ಮಣ್ಯೇ - ಬ್ರಾಹ್ಮಣರನ್ನು ಆದರಿಸದಿರಲು, ಕುಲಾಗ್ರ್ಯಾನ್-ಉತ್ತಮ ಬ್ರಾಹ್ಮಣರನ್ನೇ? । ೨೨ ॥

ಕಲಿನಾ-ಕಲಿಯಿಂದ, ಉಪಸೃಷ್ಟಾನ್ - ವ್ಯಾಪ್ತರಾದ, ಕ್ಷತ್ರಬಂಧೂನ್-ಕ್ಷತ್ರಿಯಾಧಮರನ್ನೇ! ವಾ-ಅಥವಾ, ತೈಃ-ಅವರಿಂದ, ಅವರೋಪಿತಾನಿ-ಕೊಟಲೆಗೊಳಿಸಲ್ಪಟ್ಟ, ರಾಷ್ಟ್ರಾಣಿ-ರಾಷ್ಟ್ರಗಳನ್ನೇ ವಾ-ಅಥವಾ, ಇತಸ್ತತಃ-ಇಲ್ಲಲ್ಲಿ, ಶಯನಾ...ಕಂ, ಶಯನ-ಮಲಗುವುದು, ಆಸನ - ಕುಳಿತುಕೊಳ್ಳು

ಟ್ಟುತ್ತಿರುವ ನನಗಾಗಿ ದುಃಖಿಸುವೆಯಾ? ಅಥವಾ ಇನ್ನುಮುಂದೆ ನಿನ್ನನ್ನು ದುರಾಚಾರರಾದ ಶೂದ್ರರನುಭವಿಸುವರೆಂದಳುವೆಯಾ? ಅಥವಾ ಕರ್ಮಲೋಪವಾಗಿ ನಡೆದು ಯಜ್ಞಭಾಗಗಳನ್ನು ರಾಕ್ಷಸರು ಅಪಹರಿಸುವುದಕ್ಕಾಗಿ ಗೋಳಾಡುವೆಯಾ? ಅಥವಾ ಕಾಲಕ್ಕೆ ಸರಿಯಾಗಿ ಮಳೆಬೆಳೆಗಳಾಗದೆ ಪ್ರಜೆಗಳು ಕಷ್ಟಪಡುವುದಕ್ಕಾಗಿ ಯೋಚಿಸುವೆಯಾ? ॥ ೨೧ ॥ ಅಥವಾ ಹೆಂಡಿರನ್ನು ಗಂಡಂದಿರು ಕಾಪಾಡದಿರುವುದಕ್ಕಾಗಿ ಕಳವಳಿಸುವೆಯಾ? ತಂದೆಗಳಾದವರು ರಾಕ್ಷಸರಂತೆ ನಿರ್ದಯರಾಗಿ ಬಾಲಕರನ್ನು ಪೀಡಿಸುವುದಕ್ಕಾಗಿ ರೋದಿಸುವೆಯಾ? ಬ್ರಾಹ್ಮಣರು ದುರ್ವೃತ್ತರಾಗಲು, ವೇದಕ್ಕೆ ಬಂದ ದುರವಸ್ಥೆಗಾಗಿ ಶೋಕಿಸುವೆಯಾ? ರಾಜರು ಬ್ರಹ್ಮದ್ವೇಷಿಗಳಾಗಲು, ಕುಲೀನರಾದ ಬ್ರಾಹ್ಮಣರ ದುರ್ದೆಸೆಗಾಗಿ ಆಲೋಚಿಸುವೆಯಾ? ॥ ೨೨ ॥

ಕಲಿಮಹಿಮೆಗೊಳಪಟ್ಟ ಕ್ಷತ್ರಿಯಾಧಮರಿಗಾಗಿ, ಮರುಗುವೆಯಾ? ಅಮ್ಮಾ

ಯದ್ವಾಂಬ ! ತೇ ಭೂರಿ ಭರಾವತಾರ ಕೃತಾವತಾರಸ್ಯ ಹರೇ ರ್ಧರಿತ್ರಿ! ।
ಅಂತರ್ಹಿತಸ್ಯ ಸ್ಮರತೀ ವಿಸೃಷ್ಟಾ ಕರ್ಮಾಣಿ ನಿರ್ವಾಣವಿಲಂಬಿತಾನಿ॥ ೨೪॥
ಇದಂ ಮಮಾಚಕ್ಷ್ವ ತವಾಧಿಮೂಲಂ ವಸುಂಧರೇ ! ಯೇನ ವಿಕರ್ಶಿ
ತಾಸಿ । ಕಾಲೇನವಾ ತೇ ಬಲಿನಾಂ ಬಲೀಯಸಾ ಸುರಾರ್ಚಿತಂ ಕಿಂ
ಹೃತ ಮಂಬ ! ಸೌಭಗಂ ॥ ೨೫ ॥ ಧರಣೀ ॥ ಭವಾನ್ಹಿ ವೇದ
ತತ್ಸರ್ವಂ ಯನ್ಮಾಂ ಧರ್ಮಾನುಪೃಚ್ಛಸಿ । ಚತುರ್ಭಿ ರ್ವರ್ತಸೇ ಯೇನ
ಪಾದೈ ರ್ಲೋಕ ಸುಖಾವಹೈಃ ॥ ೨೬ ॥ * ಸತ್ಯಂ ಶೌಚಂ ದಯಾ

ವುದು, ಅನ್ನ, ಭೋಜನ, ಪಾನ-ಜಲಪಾನ ಅಥವಾ ಮದ್ಯಾದಿಗಳಪಾನವು, ವ್ಯವಾಯ-ಸ್ತ್ರೀಸಂಗವು, ಇವುಗಳಲ್ಲಿ, ಉನ್ಮುಖಂ-ಆಸಕ್ತವಾದ, ಜೀವಲೋಕಂ-ಪ್ರಾಣಿಸಮೂಹವನ್ನೇ ? ॥ ೨೩ ॥ ಯದ್ವಾ-ಅಥವಾ, ಹೇಅಂಬ-ಎಲೌತಾಯೆ ? ಧರಿತ್ರಿ-ಭೂಮಿಯೆ ? ತೇ-ನಿನ್ನ, ಭೂರಿ..ಸ್ಯ, ಭೂರಿ-ಅಧಿಕವಾದ, ಭರ-ಭಾರವನ್ನು, ಅವತಾರ-ಇಳುಹುವುದಕ್ಕಾಗಿ, ಕೃತ-ಮಾಡಲ್ಪಟ್ಟ, ಅವತಾರಸ್ಯ-ಅವತಾರವುಳ್ಳ, ಅಂತರ್ಹಿತಸ್ಯ-ಅಂತರ್ಧಾನವನ್ನು ಪಡೆದ, ಹರೇಃ-ಕೃಷ್ಣನ, ನಿರ್ವಾಣವಿಲಂಬಿತಾನಿ, ನಿರ್ವಾಣ-ಮೋಕ್ಷದಿಂದ, ವಿಲಂಬಿತಾನಿ-ಆಶ್ರಯಿಸಲ್ಪಟ್ಟ, ಕರ್ಮಾಣಿ - ಕರ್ಮಗಳನ್ನು, ಸ್ಮರತೀ-ಸ್ಮರಿಸಿಕೊಂಡು, ವಿಸೃಷ್ಟಾ-ಆತನಿಂದ ಬಿಡಲ್ಪಟ್ಟವಳಾಗಿ, ಶೋಚಸಿ-ದುಃಖಿಸುವೆಯಾ? ॥ ೨೪ ॥ ಹೇವಸುಂಧರೆ-ಎಲೌ ಭೂಮಿಯೆ ? ಬಲಿನಾಂ-ಬಲಶಾಲಿಗಳಲ್ಲಿ, ಬಲೀಯಸಾ-ಬಹಳ ಬಲಿಷ್ಠವಾದ, ಕಾಲೇನ-ಕಾಲದಿಂದ, ತೇ-ನಿನ್ನ, ಸುರಾರ್ಚಿತಂ-ದೇವತೆಗಳಿಂದಪೂಜಿಸಲ್ಪಡುವ, ಸೌಭಗಂ-ಸೌಂದರ್ಯವು, ಹೃತಂಕಿಂ - ಅಪಹರಿಸಲ್ಪಟ್ಟಿತೆ? ಹೇಅಂಬ-ಎಲೌತಾಯೆ ! ಯೇನ-ಯಾವುದರಿಂದ, ವಿಕರ್ಶಿತಾಸಿ-ಬಡವಾಗಿರುವೆಯೋ, ಇದಂ-ಇಂತಹ, ತವ - ನಿನ್ನ, ಆಧಿಮೂಲಂ - ಮನೋವ್ಯಥೆಯ ಕಾರಣವನ್ನು, ಮಮ - ನನಗೆ, ಆಚಕ್ಷ್ವ, ಹೇಳು ॥೨೫॥ ಧರಣೀ-ಭೂಮಿಯು ಹೇಳುತ್ತಾಳೆ:—ಹೇಧರ್ಮ-ಎಲೈ ಧರ್ಮ ಪುರುಷನೇ ? ಯೇನ, ಯಾವುದರಿಂದ, ಲೋಕಸುಖಾವಹೈಃ - ಲೋಕಕ್ಕೆ ಸುಖವನ್ನುಂಟುಮಾಡುವ, ಚತುರ್ಭಿಃ - ನಾಲ್ಕು, ಪಾದೈಃ-ಪಾದಗಳಿಂದ, ವರ್ತಸೇ-ಇದ್ದೆಯೋ, ಯತ್-ಯಾವುದನ್ನು ಕುರಿತು, ಮಾಂ-ನನ್ನನ್ನು, ಅನು

ವಸುಧೆಯೆ ? ಬಲಿಷ್ಠರಲ್ಲಿ ಮಹಾಬಲಿಷ್ಠವೆನಿಸಿದ ಕಾಲದಿಂದ ದೇವಪೂಜ್ಯವಾಗಿರುವ ನಿನ್ನಸೌಭಾಗ್ಯವು ಕುಂದಿದುದಕ್ಕೇನಾದರೂ ಹಂಬಲಿಸುವೆಯಾ ? ನೀನು ಬಡವಾಗಿರುವುದೇಕೆ ? ನಿನ್ನ ಮನಕ್ಕಿಂತುದುರಂತವಾದ ಚಿಂತೆಯೇಕೆ ? ತಿಳುಹಬೇಕೆಂದು ಪ್ರಶ್ನೆ ಮಾಡಲು, ಭೂದೇವಿಯು ಧರ್ಮನನ್ನು ಕುರಿತು ॥ ೨೫ ॥ ಅಯ್ಯಾ ಧರ್ಮಪುರುಷನೆ ! ಯಾವುದರಿಂದ ನೀನು ಲೋಕ ಸುಖಕರಗಳಾದ ನಾಲ್ಕು ಪಾದಗಳಿಂದ ಸಂಚರಿಸುತ್ತಿದ್ದೆಯೋ, ಮತ್ತು ಯಾವುದಕ್ಕಾಗಿ ನನ್ನನ್ನು ಕೇಳುತ್ತಿರುವೆಯೋ, ಆಸಂಗತಿಯೆಲ್ಲವನ್ನೂ ನೀನೇಬಲ್ಲೆ, ಆದರೂ ಹೇಳುವೆನು ಕೇಳು ॥೨೬॥ ಸತ್ಯ, ಪಾರಿಶುಧ್ಯ, ದಯೆ, ತಾಳ್ಮೆ,

---

* 27, 28, 29. ನೆಯ ಶ್ಲೋಕಗಳಲ್ಲಿ ಅನ್ವಯಕ್ಲೇಶವಿಲ್ಲವಾದುದರಿಂದ ಪ್ರತಿಪದಾರ್ಥವನ್ನು ಬರೆಯಲಿಲ್ಲ.

ಕ್ಷಾಂತಿಃ ತ್ಯಾಗಃ ಸಂತೋಷ ಆರ್ಜವಂ । ಶಮೋ ದಮಃ ತಪಃ ಸಾಮ್ಯಂ ತಿತಿಕ್ಷೋ ಪರತಿಃ ಶ್ರುತಂ ॥ ೨೭ ॥ ಜ್ಞಾನಂ ವಿರಕ್ತಿರೈಶ್ವರ್ಯಂ ಶೌರ್ಯಂ ತೇಜೋ ಬಲಂ ಸ್ಮೃತಿಃ । ಸ್ವಾತಂತ್ರ್ಯಂ ಕೌಶಲಂ ಕಾಂತಿಃ ಧೈರ್ಯಂ ಮಾರ್ದವ ಮೇವಚ ॥ ೨೮ ॥ ಪ್ರಾಗಲ್ಭ್ಯಂ ಪ್ರಶ್ರಯಃ ಶೀಲಂ ಸಹ ಓಜೋ ಬಲಂ ಭಗಃ । ಗಾಂಭೀರ್ಯಂ ಸ್ಥೈರ್ಯ ಮಾಸ್ತಿಕ್ಯಂ ಕೀರ್ತಿಃ ಮಾನೋಽನಹಂಕೃತಿಃ ॥ ೨೯ ॥ ಏತೇಚಾನ್ಯೇಚ ಬಹವೋ ಯಸ್ಮಿನ್ನಿತ್ಯಾ ಮಹಾಗುಣಾಃ । ಪ್ರಾರ್ಥ್ಯಾ ಮಹತ್ವ ಮಿಚ್ಛದ್ಭಿರ್ನ ವಿಯಂತಿ ಸ್ಮ ಕರ್ಹಿಚಿತ್ ॥ ೩೦ ॥ ತೇನಾಹಂ ಗುಣಪಾತ್ರೇಣ ಶ್ರೀನಿವಾಸೇನ

ಪೃಚ್ಛಸಿ-ಪ್ರಶ್ನೆ ಮಾಡುವೆಯೋ, ತತ್ಸರ್ವಂ - ಅದೆಲ್ಲವನ್ನೂ, ಭವಾನ್-ನೀನು, ವೇದಹಿ - ತಿಳಿದಿರುವೆಯಷ್ಟೆ, ॥ ೨೯ ॥ ಏತೇಚ-ಇವೇ ಮೊದಲಾದ, ಅನ್ಯೇಚ-ಇತರಗಳಾದ, ಬಹವಃ-ಬಹಳವಾದ, ಮಹಾಗುಣಾಃ-ಉತ್ತಮಗುಣಗಳು, ಮಹತ್ವಂ-ದೊಡ್ಡತನವನ್ನು, ಇಚ್ಛದ್ಭಿಃ-ಬಯಸುವವರಿಂದ, ಪ್ರಾರ್ಥ್ಯಾಅಪಿ-ಬಯಸಲ್ಪಡುವುವಾದರೂ, ಯಸ್ಮಿನ್-ಯಾವನಲ್ಲಿ, ಕರ್ಹಿಚಿತ್-ಯಾವಾಗಲೂ, ನವಿಯಂತಿ-ಕಡಮೆಯಾಗುವುದಿಲ್ಲವೋ ॥ ೩೦ ॥ ಗುಣಪಾತ್ರೇಣ-ಗುಣಗಳಿಗೆ ನೆಲೆಯಾದ, ಶ್ರೀನಿವಾಸೇನ-ಲಕ್ಷ್ಮೀಪತಿಯಾದ, ತೇನ - ಆಕೃಷ್ಣನಿಂದ, ಸಾಂಪ್ರತಂ - ಈಗ, ರಹಿತಂ-ಬಿಡಲ್ಪಟ್ಟಿರುವ, ಪಾಪ್ಮನಾ-ಪಾಪಹೇತುವಾದ, ಕಲಿನಾ - ಕಲಿಯಿಂದ, ಈಕ್ಷಿತಂ - ನೋಡಲ್ಪಡುತ್ತಿರುವ, ಲೋಕಂ-ಈ ಲೋಕವನ್ನು ಕುರಿತು, ಶೋಚಾಮಿ-ಅಳುತ್ತೇನೆ ॥ ೩೧ ॥
ಆತ್ಮಾನಂ-ನನ್ನನ್ನೂ, ಅಮರೋತ್ತಮಂ-ದೇವಶ್ರೇಷ್ಠನಾದ, ಭವಂತಂಚ-ನಿನ್ನನ್ನೂ, ದೇವಾನ್-ದೇವತೆ

ದಾತೃತ್ವ, ಸಂತೋಷ, ಋಜುತ್ವ, ಮನಸ್ಸ್ಥೈರ್ಯ, ಇಂದ್ರಿಯಜಯ, ಸ್ವಧರ್ಮ, ಸಮತ್ವ, ಸೈರಣೆ, ಲಾಭದಲ್ಲಿ ಉದಾಸೀನತೆ, ಶಾಸ್ತ್ರವಿಚಾರ, ಆತ್ಮಜ್ಞಾನ, ವೈರಾಗ್ಯ, ಪ್ರಭುತ್ವ ಶೌರ್ಯ, ಮಹಿಮೆ, ಸಾಮರ್ಥ್ಯ, ಸ್ಮೃತಿ, ಸ್ವಾತಂತ್ರ್ಯ, ಜಾಣತನ, ಕಾಂತಿ, ಧೈರ್ಯ, ಕನಿಕರ, ಪ್ರತಿಭೆ, ವಿನಯ, ಒಳ್ಳೆಯನಡವಳಿ, ಮನಸ್ಸು, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಪಾವನಗೊಳಿಸುವ ಸಹ, ಓಜಸ್ಸು, ಬಲ, ಇವುಗಳೂ, ಸಂಪತ್ತು, ಗಾಂಭೀರ್ಯ, ಸ್ಥೈರ್ಯ, ಶ್ರದ್ಧೆ, ಕೀರ್ತಿ, ಗೌರವ, ಗರ್ವವಿಲ್ಲದಿರುವಿಕೆ, ಈ ನಲವತ್ತೊಂಬತ್ತು ಮಹಾಗುಣಗಳೂ, ಇನ್ನೂ ಲೋಕದಲ್ಲಿ, ಮರ್ಯಾದೆಯನ್ನು ಸಂಪಾದಿಸುವುದಕ್ಕೆ ಬಯಸುವ ಪುರುಷರಿಂದ ಪ್ರಾರ್ಥಿಸಲ್ಪಡಬೇಕಾದ ಯಾವಯಾವ ಉತ್ತಮಗಳಾದ ಕಲ್ಯಾಣ ಗುಣಗಳುಂಟೋ, ಇವುಗಳೆಲ್ಲವೂ ಯಾವನನ್ನಡಬಿಡದೆ ನೆಲೆಗೊಂಡಿದ್ದವೋ, ಅಂತಹ ಭಗವಂತನಾದ ಶ್ರೀಕಾಂತನ ವಿಯೋಗವನ್ನು ಪಡೆದು, ಪಾಪಕ್ಕೆ ತವರೂರಾಗಿ ನಲಿಯುತ್ತಿರುವ ಕಲಿಯದೃಷ್ಟಿಗೊಳಗಾಗಿರುವ ಈ ಲೋಕಕ್ಕಾಗಿ ದುಃಖಿಸುತ್ತಿರುವೆನು॥ ಮತ್ತು ನನಗಾಗಿಯೂ, ದೇವವರೇಣ್ಯನಾದ ನಿನಗಾಗಿಯೂ, ದೇವತೆಗಳಿಗಾಗಿಯೂ, ಮಹರ್ಷಿಗಳಿಗಾಗಿಯೂ, ಪಿತೃದೇವತೆ ಗಳಿಗಾಗಿಯೂ, ಸಜ್ಜನರಿಗಾಗಿಯೂ ಬ್ರಾಹ್ಮಣಾದಿ

ಸಾಂಪ್ರತಂ। ಶೋಚಾಮಿ ರಹಿತಂ ಲೋಕಂ ಪಾಪ್ಮನಾ ಕಲಿನೇಕ್ಷಿತಂ ॥
ಆತ್ಮಾನಂ ಚಾನುಶೋಚಾಮಿ ಭವಂತಂ ಚಾಮರೋತ್ತಮಂ ।ದೇವಾನ್
ಋಷೀನ್ ಪಿತೄನ್ ಸಾಧೂನ್ ಸರ್ವಾನ್ ವರ್ಣಾನ್ ತಥಾಶ್ರಮಾನ್ ॥೩೨॥
ಬ್ರಹ್ಮಾದಯೋ ಬಹುತಿಥಂ ಯದಪಾಂಗ ಮೋಕ್ಷಕಾಮಾ ಸ್ತಪಃ ಸಮ
ಚರನ್ ಭಗವತ್ಪ್ರಪನ್ನಾ। ಸಾ ಶ್ರೀಃ ಸ್ವವಾಸ ಮರವಿಂದವನಂ ವಿಹಾಯ
ಯತ್ಪಾದ ಸೌಭಗ ಮಲಂ ಭಜತೇಽನುರಕ್ತಾ ॥೩೩॥ ತಸ್ಯಾಹ ಮಬ್ಜ
ಕುಲಿಶಾಂಕುಶ ಕೇತುಕೇತೈಃ ಶ್ರೀಮತ್ಪದೈ ರ್ಭಗವತ ಸ್ಸಮಲಂಕೃ
ತಾಂಗೀ । ತ್ರೀ ನತ್ಯರೋಚ ಉಪಲಭ್ಯ ತತೋ ವಿಭೂತಿಂ ಲೋಕಾನ್

ಗಳನ್ನೂ, ಋಷೀನ್-ಋಷಿಗಳನ್ನೂ, ಪಿತೄನ್-ಪಿತೃಗಳನ್ನೂ, ಸಾಧೂನ್-ಸಜ್ಜನರನ್ನೂ, ಸರ್ವಾನ್-ಎಲ್ಲಾ, ವರ್ಣಾನ್-ಜಾತಿಗಳನ್ನೂ, ತಥಾ-ಹಾಗೆ, ಆಶ್ರಮಾನ್ - ಆಶ್ರಮಗಳನ್ನೂ, ಕುರಿತು, ಅನುಶೋಚಾಮಿ-ವ್ಯಸನಪಡುತ್ತೇನೆ, ॥ ೩೨ ॥ ಬ್ರಹ್ಮಾದಯಃ - ಬ್ರಹ್ಮನೇ ಮೊದಲಾದವರು, ಯದ...ಮಾಃ, ಯತ್-ಯಾವಲಕ್ಷ್ಮಿಯ, ಅಪಾಂಗ-ಕಡೆಗಣ್ಣೋಟದ, ಮೋಕ್ಷ-ಪ್ರಸರಣೆಯನ್ನು, ಕಾಮಾಃ - ಅಪೇಕ್ಷಿಸುವವರಾಗಿ, ಬಹುತಿಥಂ-ಬಹುಕಾಲದವರೆಗೂ, ತಪಃ - ತಪಸ್ಸನ್ನು, ಸಮಚರನ್ - ಮಾಡಿದರೋ, ಸಾಶ್ರೀಃ-ಆಲಕ್ಷ್ಮೀದೇವಿಯು, ಭಗವತ್ಪ್ರಪನ್ನಾಪಿ, ಭಗವತ್-ಮಹಾತ್ಮರಿಂದ, ಪ್ರಪನ್ನಾಪಿ-ಆಶ್ರಯಿಸಲ್ಪಟ್ಟವಳಾದರೂ, ಸ್ವವಾಸಂ-ತನಗೆ ನೆಲೆಯಾದ, ಅರವಿಂದವನಂ - ಕಮಲವನವನ್ನು, ವಿಹಾಯ-ಬಿಟ್ಟು, ಯತ್ಪಾ...ಗಂ, ಯತ್ - ಯಾವಭಗವಂತನ, ಪಾದ-ಪಾದಗಳ, ಸೌಭಗಂ-ಸೌಭಾಗ್ಯವನ್ನು, ಅಲಂ-ಬಹಳವಾಗಿ, ಅನುರಕ್ತಾ-ವಿಶ್ವಾಸ ವುಳ್ಳವಳಾಗಿ, ಭಜತೇ - ಹೊಂದುವಳೋ ॥ ೩೩ ॥ ತಸ್ಯ-ಆ, ಭಗವತಃ - ಭಗವಂತನ, ಅಬ್ಜ...ತೈಃ, ಅಬ್ಜ-ಕಮಲ, ಕುಲಿಶ - ವಜ್ರ, ಅಂಕುಶ-ಅಂಕುಶ, ಕೇತು-ಧ್ವಜ, ಇವುಗಳ, ಕೇತೈಃ - ಚಿಹ್ನೆಗಳುಳ್ಳ, ಶ್ರೀಮತ್ಪದೈಃ - ಕಾಂತಿಯುಕ್ತಗಳಾದ ಪಾದಗಳಿಂದ ಸಮಲಂಕೃತಾಂಗೀ - ಅಲಂಕರಿಸಲ್ಪಟ್ಟ ಮೈಯುಳ್ಳವಳಾಗಿ, ತತಃ-ಆತನಿಂದ, ವಿಭೂತಿಂ-ಸಂಪತ್ತನ್ನು, ಉಪಲಭ್ಯ-ಹೊಂದಿ, ತ್ರೀನ್‌ಲೋಕಾನ್ - ಮೂರುಲೋಕಗಳನ್ನೂ, ಅತ್ಯರೋಚೇ-ಅತಿಕ್ರಮಿಸಿ ಹೊಳೆಯುತ್ತಿದ್ದೆನು, ತದಂತೇ - ಆಸಂಪತ್ತಿನ ಕಡೆಯಲ್ಲಿ, ಸಃ-ಆಭಗವಂತನು, ಉತ್ಸ್ಮಯಂತೀಂ-ಗರ್ವಪ

ವರ್ಣಗಳಿಗಾಗಿಯೂ, ಬ್ರಹ್ಮಚರ್ಯಾದ್ಯಾಶ್ರಮಗಳಿಗಾಗಿಯೂ, ದುಃಖಿಸುತ್ತಿರುವೆನು ॥ ೩೨ ॥ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ, ಯಾವಳ ಕಟಾಕ್ಷವೀಕ್ಷಣೆಗಾಗಿ, ಬಹುಸಹಸ್ರ ವರ್ಷಗಳವರೆಗೂ ತಪಸ್ಸನ್ನು ಮಾಡಿದರೋ, ಆ ರಮಾದೇವಿಯು ಮಹಾತ್ಮರಿಂದ ಸೇವಿತಳಾದರೂ, ತನಗಾವಾಸವೆನಿಪ ಸುಂದರವಾದ ಕಮಲಮಂದಿರವನ್ನುಳಿದು, ಪರಮಪ್ರೀತಿಯಿಂದ ಯಾವನ ಪಾದಕಮಲ ಸೌಭಾಗ್ಯಕ್ಕೆ ಮರುಳಾಗಿ ಸೇವಿಸುತ್ತಿರುವಳೋ ॥ ೩೩ ॥ ಅಂತಹ ಭಗವಂತನ, ವಜ್ರಾಂಕುಶಕಮಲಾದಿ ಚಿಹ್ನೆಗಳಿಗಾವಾಸವಾದ ಪದನ್ಯಾಸಗಳಿಂದ ಭಾಸುರಳಾಗಿ,ಆಮಹಾಸಂಪತ್ತನ್ನುಪಡೆದು ನಾನು, ಈ ಮೂರುಲೋಕಗಳನ್ನು ಲಕ್ಷ್ಯಮಾಡದೆ ಗರ್ವದಿಂದಮೆರೆಯುತ್ತಿದ್ದೆನು.ಕಡೆಗೆಆಭಗವಂತನು ಗರ್ವಿಸುತ್ತಿರುವ ನನ್ನನ್ನುಳಿದು ನನ್ನಗರ್ವವನ್ನು ಭಂಗಗೊಳಿಸಿದನು ॥ ೩೪ ॥

ಸಮಾಂ ವ್ಯಸೃಜ ದುತ್ಸ್ಮಯತೀಂ ತದಂತೇ ॥೩೪॥ ಯೋವೈ ಮಮಾ
ತಿಭರ ಮಾಸುರವಂಶರಾಜ್ಞಾ ಮಕ್ಷೌಹಿಣೀ ಶತ ಮಪಾನುದ ದಾತ್ಮತಂತ್ರಃ ।
ತ್ವಾಂ ದುಸ್ಥ ಮೂನಪದ ಮಾತ್ಮನಿ ಪೌರುಷೇಣ ಸಂಪಾದಯ‌ನ್ ಯದುಷು
ರಮ್ಯ ಮಬಿಭ್ರದಂಗಂ ॥ ೩೫ ॥ ಕಾವಾ ಸಹೇತ ವಿರಹಂ ಪುರುಷೋ
ತ್ತಮಸ್ಯ ಪ್ರೇಮಾವಲೋಕ ರುಚಿರಸ್ಮಿತ ವಲ್ಗುಜಲ್ಪೈಃ । ಸ್ಥೈರ್ಯಂ
ಸಮಾನ ಮಹರ ನ್ಮಧುಮಾನಿನೀನಾಂ ರೋಮೋತ್ಸವೋ ಮಮ ಯದಂಘ್ರಿ
ವಿಟಂಕಿತಾಯಾಃ ॥ ೩೬ ॥ ತಯೋ ರೇವಂ ಕಥಯತೋಃ ಪೃಥಿವೀಧ

ಡುತ್ತಿರುವ, ಮಾಂ-ನನ್ನನ್ನು, ವ್ಯಸೃಜತ್-ಬಿಟ್ಟನು. ಆಸು...ಜ್ಞಾಂ, ಆಸುರವಂಶ-ರಾಕ್ಷಸ ವಂಶದಲ್ಲಿ ಜನಿಸಿದ ರಾಜ್ಞಾಂ ರಾಜರ, ಅಕ್ಷೌಹಿಣೀಶತಂ - ನೂರಾರು ಅಕ್ಷೌಹಿಣಿಗಳ ರೂಪವಾದ, ಮಮ-ನನ್ನ, ಅತಿಭರಂ - ಬಹಳವಾದ ಭಾರವನ್ನು, ಯೋವೈ-ಯಾವನು, ಆತ್ಮತಂತ್ರಃ-ಸ್ವತಂತ್ರನಾಗಿ, ಅಪಾನುದತ್-ಕಳೆದನೋ, ಆತ್ಮನಿ-ತನ್ನಲ್ಲಿರುವ, ಪೌರುಷೇಣ-ಸಾಮರ್ಥ್ಯದಿಂದ, ಊನಪದಂ-ಕಾಲುಗಳಿಲ್ಲದುದರಿಂದ, ದುಸ್ಥಂ-ನಿಲ್ಲಲಾರದ, ತ್ವಾಂ - ನಿನ್ನನ್ನು, ಸಂಪಾದಯನ್ - ಸರಿಯಾಗಿ ನಿಲ್ಲಿಸುವುದಕ್ಕಾಗಿ, ಯದುಷು-ಯಾದವರಲ್ಲಿ, ರಮ್ಯಂ-ಸೊಗಸಾದ, ಅಂಗಂ-ಶರೀರವನ್ನು, ಅಬಿಭ್ರತ್-ಪಡೆದನೋ, ॥ ೩೫ ॥

ಯಃ-ಯಾವನು, ಪ್ರೇಮಾ...ಲ್ಪೈಃ, ಪ್ರೇಮಾವಲೋಕ-ಸವಿನೋಟ, ರುಚಿರಸ್ಮಿತ-ಸೊಗಸಾದ ಎಳನಗೆ, ವಲ್ಗುಜಲ್ಪೈಃ - ಇಂಪಾದನುಡಿ ಇವುಗಳಿಂದ, ಮಧುಮಾನಿನೀನಾಂ - ಯಾದವ ಸ್ತ್ರೀಯರ, ಸಮಾನಂ - ಗರ್ವದಿಂದಕೂಡಿದ, ಸ್ಥೈರ್ಯಂ - ಶುದ್ಧತ್ವವನ್ನು, ಅಹರತ್ - ಹೋಗಲಾಡಿಸಿದನೋ, ಯದಂಘ್ರಿ...ಯಾಃ, ಯತ್, ಯಾವನ ಅಂಘ್ರಿ-ಪಾದನ್ಯಾಸಗಳಿಂದ, ವಿಟಂಕಿತಾಯಾಃ - ಗುರ್ತುಮಾಡಲ್ಪಟ್ಟ, ಮಮ-ನನಗೆ, ರೋಮೋತ್ಸವಃ - ರೋಮಾಂಚವು, ಆಗುತ್ತಿದ್ದಿತೋ, ಅಂತಹ, ಪುರುಷೋತ್ತಮಸ್ಯ-ಪುರುಷಶ್ರೇಷ್ಠನಾದಶ್ರೀಕೃಷ್ಣಮೂರ್ತಿಯ, ವಿರಹಂ-ಅಗಲಿಕೆಯನ್ನು, ಕಾವಾ-ಯಾವಳುತಾನೇ, ಸಹೇತ - ಸೈರಿಸುವಳು ? ॥ ೩೬ ॥ ತಯೋಃ-ಆ, ಪೃಥಿವೀಧರ್ಮಯೋಃ - ಭೂದೇವಿ, ಧರ್ಮಪುರು

ಅಯ್ಯಾ ಧರ್ಮಪುರುಷನೆ ? ಯಾವಭಗವಂತನು, ರಾಕ್ಷಸಾಂಶದಿಂದ ರಾಜಕುಲದಲ್ಲಿ ಜನಿಸಿರುವರಾಜರ, ಅನೇಕಾಕ್ಷೌಹಿಣೀ ಸೈನ್ಯದ ರೂಪವಾದ ನನ್ನ ಭಾರವನ್ನಿಳುಹಿದನೋ, ಮೂರುಕಾಲುಗಳಿಲ್ಲದುದರಿಂದ ನಿಲ್ಲಲಾರದ ನಿನ್ನನ್ನು ತನ್ನ ಸಾಮರ್ಥ್ಯದಿಂದ ನಾಲ್ಕುಕಾಲುಗಳಿಂದ ಸರಿಯಾಗಿ ನಿಲ್ಲಿಸುವುದಕ್ಕಾಗಿ ಯಾದವರಲ್ಲಿ ಜಗನ್ಮೋಹನವಾದ ಅವತಾರವನ್ನು ಪಡೆದನೋ ॥ ೩೫ ॥ ಸವಿನೋಟಗಳು, ಮನೋಹರವಾದೆಳನೆಗೆಯು, ಮೋಹವನ್ನುಂಟುಮಾಡುವ ಸವಿನುಡಿಗಳು, ಇವುಗಳಿಂದ, ಯಾವನು ಸತ್ಯಭಾಮೆಯೇ ಮೊದಲಾದ, ಯಾದವಾಂಗನೆಯರ ಗರ್ವದಿಂದೊಡಗೂಡಿದ ಬಿಗುಮಾನವನ್ನಪಹರಿಸಿದನೋ, ಯಾವನ ಪಾದನ್ಯಾಸಗಳಿಂದ ನಾನು ರೋಮಾಂಚವನ್ನುಪಡೆದು ಸಂತೋಷದಿಂದುಬ್ಬುತ್ತಿದ್ದೆನೋ, ಅಂತಹ ಪುರುಷೋತ್ತಮನಾದ ಶ್ರೀಕೃಷ್ಣಮೂರ್ತಿಯ ಅಗಲಿಕೆಯನ್ನು ಯಾವಳುತಾನೇ ಸೈರಿಸಬಲ್ಲಳು ? ॥೩೬॥ ಎಂದು ಆ ಭೂದೇವಿಯು ಧರ್ಮಪುರುಷನೊಡನೆ ಮಾತನಾಡಿ ಕೊಳ್ಳುತ್ತಿರುವ ಕಾಲಕ್ಕೆ ಸರಿಯಾಗಿ, ಮಹಾತ್ಮನಾದ ಪರೀಕ್ಷಿ

ರ್ಯಯೋಃ ಸ್ತದಾ । ಪರೀಕ್ಷಿನ್ನಾಮರಾಜರ್ಷಿಃ ಪ್ರಾಪ್ತಃ * ಪ್ರಾಚೀಂ ಸರಸ್ವತೀಂ ॥ ೩೭ ॥

ಇತಿ ಷೋಡಶೋಽಧ್ಯಾಯಃ

ಓಂ ನಮಃ ಪರಮಾತ್ಮನೇ.

ಶ್ರೀಸೂತಃ ॥ ತತ್ರ ಗೋಮಿಥುನಂ ರಾಜಾ ಹನ್ಯಮಾನ ಮನಾಥವತ್।ದಂಡ ಹಸ್ತಂಚ ವೃಷಲಂ ದದೃಶೇ ನೃಪಲಾಂಛನಂ ॥ ೧ ॥ ವೃಷಂ ಮೃಣಾಳ

ಷರ್ರು, ಏವಂ-ಇಂತು, ಕಥಯತೋಃ-ಮಾತಾಡುತ್ತಿರಲು, ತದಾ-ಆಗ, ಪರೀಕ್ಷಿನ್ನಾಮ - ಪರೀಕ್ಷಿತ್ತೆಂದು ಪ್ರಸಿದ್ಧನಾದ, ರಾಜರ್ಷಿಃ-ರಾಜಋಷಿಯು. ಪ್ರಾಚೀಂ-ಪೂರ್ವದಿಕ್ಕಿಗೆಹರಿವ, ಸರಸ್ವತೀಂ-ಸರಸ್ವತೀನದಿಯ ಬಳಿಗೆ. ಪ್ರಾಪ್ತಃ-ಬಂದನು ॥ ೩೭ ॥

ಷೋಡಶಾಧ್ಯಾಯಂ ಸಮಾಪ್ತಂ

ಸೂತಃ-ಸೂತನು ಹೇಳಿದನು, ತತ್ರ-ಅಲ್ಲಿ, ರಾಜಾ-ಪರೀಕ್ಷಿತನು, ಅನಾಥವತ್ - ದಿಕ್ಕಿಲ್ಲದಂತೆ, ಹನ್ಯಮಾನಂ-ಹಿಂಸಿಸಲ್ಪಡುತ್ತಿರುವ, ಗೋಮಿಥುನಂ-ಎರಡುಗೋವುಗಳನ್ನೂ, ನೃಪಲಾಂಛನಂ-ರಾಜನ ವೇಷವುಳ್ಳ, ದಂಡಹಸ್ತಂ-ಕೈಯಲ್ಲಿ ಕೋಲನ್ನು ಹಿಡಿದಿರುವ, ವೃಷಲಂಚ-ಶೂದ್ರನನ್ನೂ, ದದೃಶೇ-

ದ್ರಾಜನು, ಕುರುಕ್ಷೇತ್ರದಲ್ಲಿ ಪೂರ್ವಾಭಿಮುಖವಾಗಿ ಪ್ರವಹಿಸುತ್ತಿರುವ ಸರಸ್ವತೀ ನದಿಯ ಸಮೀಪಕ್ಕೆ ಬಂದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ಹದಿನಾರನೆಯ ಅಧ್ಯಾಯಂ ಮುಗಿದುದು

ಪರೀಕ್ಷಿತನು ವೈರಾಗ್ಯವನ್ನು ಪಡೆಯುವುದು.

ಕಂ॥ ಕಲಿಯಂ ನಿಗ್ರಹಿಸುತೆ ಕಡು।ಗಲಿ ಯೆನಿಸಿದ ವಿಷ್ಣುರಾತ ನವಹಿತ ಚೇತಂ।
ಬಲಿಯುತೆ ಪರವೈರಾಗ್ಯಕೆ। ನೆಲೆಯೆನಿಸಿದ ಚರಿತ ಮಿಲ್ಲಿ ಪೇಳಲ್ಪಡುಗುಂ ॥

ಸೂತಪೌರಾಣಿಕನು ಶೌನಕಾದಿಗಳನ್ನು ಕುರಿತು ; ಅಯ್ಯಾ ಬ್ರಾಹ್ಮಣರಿರಾ ? ಅನಂತರದಲ್ಲಿ ಪರೀಕ್ಷಿದ್ರಾಜನು ಆ ಸರಸ್ವತೀನದಿಯಬಳಿಯಲ್ಲಿ, ದಿಕ್ಕಿಲ್ಲದೆ ಹಿಂಸೆಗೊಳಗಾಗಿರುವ ಎರಡು ಗೋವುಗಳನ್ನೂ; ರಾಜವೇಷದಿಂದ ಯುಕ್ತನಾಗಿ, ಕೈಯಲ್ಲಿ ದೊಣ್ಣೆ

* ಪಾ. ಪರೀಕ್ಷಿದ್ರಾಜನು ಪ್ರಭಾಸ,ತೀರ್ಥದಬಳಿಗೆ ಬಂದನು.

ಧವಳಂ ಮೇಹಂತ ಮಿವ ಬಿಭ್ಯತಂ । ವೇಪಮಾನಂ ಪದೈಕೇನ ಸೀದಂತಂ ಶೂದ್ರ ತಾಡಿತಂ ॥ ೨ ॥ ಗಾಂಚ ಧರ್ಮ ದುಘಾಂ ದೀನಾಂ ಭೃಶಂ ಶೂದ್ರಪದಾಹತಾಂ । ವಿವತ್ಸಾ ಮಶ್ರುವದನಾಂ ಕ್ಷಾಮಾಂ ಯವಸ ಮಿಚ್ಛತೀಂ ॥೩॥ ಪಪ್ರಚ್ಛ ರಥ ಮಾರೂಢಃ ಕಾರ್ತಸ್ವರ ಪರಿಚ್ಛದಂ। ಮೇಘ ಗಂಭೀರಯಾ ವಾಚಾ ಸಮಾರೋಪಿತ ಕಾರ್ಮುಕಃ ॥೪॥ ಕಸ್ತ್ವಂ ? ಮಚ್ಛರಣೇ ಲೋಕೇ ಬಲಾದ್ಧಂಸ್ಯ ಬಲಾನ್ ಬಲೀ । ನರದೇವೋಸಿ ವೇಷೇಣ ನಟವತ್ ಕರ್ಮಣಾಽದ್ವಿಜಃ ॥ ೫ ॥ ಯಸ್ತ್ವಂ ಕೃಷ್ಣೇ ಗತೇ

ಕಂಡನು. ॥ ೧ ॥ ಮೃಣಾಳಧವಳಂ-ತಾವರೇ ದಂಟಿನಂತೆ ಬಿಳಿದಾಗಿಯೂ, ಮೇಹಂತಮಿವ, ಮೂತ್ರವನ್ನು ಹೊಯ್ಯುವಂತೆ, ಬಿಭ್ಯತಂ-ಹೆದರುತ್ತಿರುವ, ಏಕೇನಪದಾ-ಒಂದು ಕಾಲಿಂದನಿಂತು,ವೇಪಮಾನಂ-ನಡುಗುತ್ತಿರುವ, ಶೂದ್ರತಾಡಿತಂ - ಶೂದ್ರನಿಂದ ಹೊಡೆಯಲ್ಪಟ್ಟು, ಸೀದಂತಂ - ಗೋಳಾಡುತ್ತಿರುವ, ವೃಷಂ - ಎತ್ತನ್ನು ॥ ೨ ॥ ಧರ್ಮದುಘಾಂ, ಧರ್ಮ - ಹಾಲುಮೊದಲಾದ ಹವಿರ್ದ್ರವ್ಯಗಳನ್ನು, ದುಘಾಂ - ಕರೆಯುವ, ಶೂದ್ರ...ತಾಂ, ಶೂದ್ರ - ಶೂದ್ರನ, ಪದ-ಪಾದದಿಂದ, ಆಹತಾಂ-ಒದೆಯಲ್ಪಡುವುದರಿಂದ, ಭೃಶಂ-ಬಹಳವಾಗಿ, ದೀನಾಂ-ಕಂಗೆಟ್ಟ, ವಿವತ್ಸಾಂ-ಕರುವಿಲ್ಲದ, ಅಶ್ರುವದನಾಂ-ಕಣ್ಣೀರುತುಂಬಿದ ಮುಖವುಳ್ಳ, ಕ್ಷಾಮಾಂ-ಬಡವಾಗಿರುವ, ಯವಸಂ - ಹುಲ್ಲನ್ನು, ಇಚ್ಛತೀಂ-ಬಯಸುತ್ತಿರುವ, ಗಾಂಚ-ಆಕಳನ್ನೂ, ದದೃಶೇ-ಕಂಡನು ॥ ೩ ॥ ಕಾರ್ತ...ದಂ, ಕಾರ್ತಸ್ವರ-ಸುವರ್ಣಮಯವಾದ, ಪರಿಚ್ಛದಂ-ಅಲಂಕಾರವುಳ್ಳ, ರಥಂ-ತೇರನ್ನು, ಆರೂಢಃ - ಹತ್ತಿರುವ, ಸಮಾ...ಕಃ, ಸಮಾರೋಪಿತ - ಹೆದೆಯೇರಿಸಿದ, ಕಾರ್ಮುಕಃ - ಬಿಲ್ಲುಳ್ಳ ಪರೀಕ್ಷಿತನು, ಮೇಘಗಂಭೀರಯಾ-ಗುಡುಗಿನಂತೆ ಗಂಭೀರವಾದ, ವಾಚಾ-ವಾಕ್ಕಿನಿಂದ, ಪಪ್ರಚ್ಛ-ಪ್ರಶ್ನೆಮಾಡಿದನು ॥ ೪ ॥

ತ್ವಂ-ನೀನು, ಕಃ-ಯಾರು ? ಬಲೀ-ಬಲವಂತನಾದ ನೀನು, ಮಚ್ಛರಣೇ - ನಾನು ರಕ್ಷಕನಾಗಿರುವ, ಲೋಕೇ-ಜಗತ್ತಿನಲ್ಲಿ, ಅಬಲಾನ್-ಕೈಲಾಗದವರನ್ನು, ಬಲಾತ್ - ಬಲಾತ್ಕಾರದಿಂದ, ಹಂಸಿ-ಹಿಂಸಿಸುತ್ತಿರುವೆ, ಕರ್ಮಣಾ - ಕರ್ಮದಿಂದ, ಅದ್ವಿಜಃ - ಶೂದ್ರನಾದ ನೀನು, ನಟವತ್-ನಟನಂತೆ,

---

ಯನ್ನು ಹಿಡಿದಿರುವ ಒಬ್ಬ ಶೂದ್ರನನ್ನೂ ಕಂಡನು ॥೧॥ ಆ ಗೋವುಗಳಲ್ಲಿ ಒಂದಾದ ವೃಷಭವು, ತಾವರೆದಂಟಿನಂತೆ ಬಿಳಿದಾಗಿಯೂ, ಹೆದರಿಕೆಯಿಂದ ಅಡಿಗಡಿಗೂ, ಮೂತ್ರವನ್ನು ಹೊಯ್ದುಕೊಳ್ಳುತ್ತಲೂ, ಒಂದು ಕಾಲಿಂದ ನಿಲ್ಲಲಾರದೆ ನಡುಗುತ್ತಲೂ, ಶೂದ್ರನಿಂದ ಒದೆಗಳನ್ನುತಿನ್ನಲಾರದೇ ಗೋಳಾಡುತ್ತಿದ್ದಿತು ॥ ೨ ॥ ಮತ್ತೊಂದಾದ ಆಕಳು ಹೋಮಕ್ಕೆ ಬೇಕಾದಹಾಲು,ತುಪ್ಪ,ಮೊಲಾದ ಹವಿಸ್ಸುಗಳನ್ನು ಕರೆಯತಕ್ಕದಾಗಿದ್ದರೂ, ಆಶೂದ್ರನಕಾಲಿನಿಂದ ಪೆಟ್ಟುಗಳನ್ನು ಸೈರಿಸಲಾರದೆ, ಕಂಗೆಟ್ಟು, ಕರುವಿಲ್ಲದೆ, ಕಣ್ಣೀರು ಸುರಿಸುತ್ತಾ, ತಿನ್ನುವುದಕ್ಕೆ ಹುಲ್ಲಿಲ್ಲದೆ ಬಡವಾಗಿದ್ದಿತು ॥ ೩ ॥ ಇದನ್ನು ಕಂಡು ಆ ರಾಜನು ಕನಿಕರಗೊಂಡು, ಅವನನ್ನು ಕುರಿತು ,, ಎಲಾ ; ನೀನಾರು ? ನನ್ನಪಾಲನೆಗೊಳಪಟ್ಟಿರುವ ದೇಶಕ್ಕೆ ಬಂದು, ಶೂದ್ರಕರ್ಮವನ್ನೆಸಗುತ್ತಿದ್ದರೂ, ಬಲಶಾಲಿಯೆಂದು ಕೊಬ್ಬಿ, ನಟನಂತೆ ರಾಜವೇಷವನ್ನು ಧರಿಸಿಕೊಂಡು, ಕೈಲಾಗದವರನ್ನು ಬಲಾತ್ಕಾರ

ದೂರಂ ಸಹಗಾಂಡೀವ ಧನ್ವನಾ। ಶೋಚ್ಯೋಸ್ಯ ಶೋಚ್ಯಾನ್ ರಹಸಿ ಪ್ರ
ಹರನ್ ವಧ ಮರ್ಹಸಿ ||೬|| ತ್ವಂ ವಾ ಮೃಣಾಳ ಧವಳಃ ಪಾದೈ ರ್ನ್ಯೂನಃ
ಪದಾ ಚರನ್ । ವೃಷರೂಪೇಣ ಕಿಂ ಕಶ್ಚಿದ್ದೇವೋ ನಃ ಪರಿ ಖೇದಯನ್||೭||
ನಜಾತು ಕೌರವೇಂದ್ರಾಣಾಂ ದೋರ್ದಂಡ ಪರಿರಂಭಿತೇ । ಭೂತಲೇನು
ಪತಂ ತ್ಯಸ್ಮಿನ್ ವಿನಾ ತೇ ಪ್ರಾಣಿನಾಂ ಶುಚಃ || ೮ || ಮಾ ಸೌರಭೇ
ಯಾತ್ರ ಶುಚೋ ವ್ಯೇತು ತೇ ವೃಷಲಾದ್ಭಯಂ।ಮಾರೋದೀ ರಂಬ ಭದ್ರಂ

ವೇಷೇಣ-ವೇಷದಿಂದ, ನರದೇವಃ-ರಾಜನು, ಅಸಿ-ಆಗಿರುವೆ || ೫ || ಗಾಂಡೀವ ಧನ್ವನಾಸಹ-ಅರ್ಜುನನಿಂದೊಡಗೂಡಿ, ಕೃಷ್ಣೇ - ಕೃಷ್ಣನು, ದೂರಂ-ತನ್ನಲೋಕವನ್ನು, ಗತೇ-ಹೊಂದಲು, ಯಃ ತ್ವಂ-ಯಾವನೀನು, ಅಶೋಚ್ಯಾನ್ - ನಿರಪರಾಧಿಗಳನ್ನು, ರಹಸಿ-ಏಕಾಂತದಲ್ಲಿ, ಪ್ರಹರನ್-ಹೊಡೆಯುವವನಾಗಿ, ಶೋಚ್ಯೋಸಿ-ಅಪರಾಧಿಯಾಗಿರುವೆಯೋ, ಆದುದರಿಂದ, ವಧಂ-ಕೊಲೆಗೆ, ಅರ್ಹಸಿ-ಯೋಗ್ಯನಾಗುತ್ತಿ || ೬ || ಮೃಣಾಳಧವಳಃ-ತಾವರೆದಂಟಿನಂತೆ ಬಿಳುಪಾದ, ಪಾದೈಃ-ಮೂರು ಕಾಲುಗಳಿಂದ, ನ್ಯೂನಃ-ಹೀನನಾದ, ಪದಾ-ಒಂದುಕಾಲಿಂದ, ಚರನ್-ಓಡಾಡುವ, ತ್ವಂವಾ-ನೀನೂ, ಕಃ-ಯಾರು ? ಕಶ್ಚಿತ್-ಒಬ್ಬಾನೊಬ್ಬನಾದ, ದೇವಃ-ದೇವಪುರುಷನು, ನಃ-ನಮ್ಮನ್ನು, ವೃಷರೂಪೇಣ-ಎತ್ತಿನರೂಪದಿಂದ, ಪರಿಖೇದಯನ್-ದುಃಖಗೊಳಿಸುತ್ತಾ, ವರ್ತಸೇಕಿಂ-ಇರುವೆಯಾ ? || ೭ ||

ಕೌರವೇಂದ್ರಾಣಾಂ-ಕೌರವಶ್ರೇಷ್ಠರ, ದೋರ್ದಂಡ...ತೆ, ದೋರ್ದಂಡ - ಭುಜದಂಡಗಳಿಂದ, ಪರಿರಂಭಿತೇ - ಸುರಕ್ಷಿತವಾದ, ಅಸ್ಮಿನ್-ಈ, ಭೂತಲೇ-ಭೂಮಂಡಲದಲ್ಲಿ, ತೇವಿನಾ - ನಿನ್ನಹೊರತು, ಜಾತು-ಯಾವಾಗಲೂ, ಪ್ರಾಣಿನಾಂ-ಪ್ರಾಣಿಗಳ, ಶುಚಃ-ಕಣ್ಣೀರು, ನಾನುಪತಂತಿ-ಬೀಳುವುದಿಲ್ಲ ||೮|| ಹೇಸೌರಭೇಯ-ಎಲೈ ಸುರಭಿಕುಮಾರನಾದ ವೃಷಭನೆ ? ಅತ್ರ - ಇಲ್ಲಿ, ಮಾಶುಚಃ - ಅಳಬೇಡ, ತೇ-ನಿನಗೆ, ವೃಷಲಾತ್-ಶೂದ್ರನಿಂದ, ಭಯಂ-ಭಯವು, ವ್ಯೇತು-ತಪ್ಪಲಿ, ಹೇ ಅಂಬ - ಎಲೌ ತಾಯೇ ? ಖಲಾನಾಂ-ದುಷ್ಟರಿಗೆ, ಶಾಸ್ತರಿ-ಶಿಕ್ಷಕನಾದ, ಮಯಿ-ನಾನಿರುವಾಗ, ಮಾರೋದೀಃ - ಅಳಬೇಡ, ತೇ-

ದಿಂದ ಹಿಂಸಿಸುವೆಯಾ ? || ೫ || ಭಗವಂತನಾದ ಶ್ರೀಕೃಷ್ಣಮೂರ್ತಿಯು ಅರ್ಜುನ ಸಹಿತನಾಗಿ ತನ್ನ ಲೋಕಕ್ಕೆ ತೆರಳಿದನೆಂದುತಿಳಿದು, ಗುಟ್ಟಾಗಿ ನಿರಪರಾಧಿಗಳನ್ನು ಹಿಂಸಿಸುತ್ತಿರುವೆಯಾದುದರಿಂದ ನಿನ್ನ ಅಪರಾಧಕ್ಕೆ ಮರಣದಂಡನವೇ ವಿಹಿತವು," ಎಂದು ಹೇಳಿ ಆ ವೃಷಭವನ್ನುಕುರಿತು; „ಅಯ್ಯಾ ಸೌರಭೇಯನೆ ? ನೀನಾರು ?ನಿನ್ನಮೈಯ್ಯನ್ನು ನೋಡಿದರೆ ತಾವರೆದಂಟಿನಂತೆ ಫಳಫಳಿಸುತ್ತಿರುವುದು, ಒಂದು ಕಾಲಿಂದ ಕುಂಟುವುದೇಕೆ ? ಇನ್ನುಮೂರುಪಾದಗಳೇನಾದುವು ? ಅಥವಾ ಈ ಎತ್ತಿನರೂಪದಿಂದ ನಮ್ಮನ್ನು ಖೇದಗೊಳಿಸುವವುದಕ್ಕಾಗಿ, ಯಾವನಾದರೂ ದೇವಪುರುಷನಿತು ಬಂದಿರುವೆಯಾ ? || ೭ ||

ಕುರುಕುಲದ ಅರಸುಗಳಿಂದ ಸುರಕ್ಷಿತವಾದ ಈ ಭೂಮಂಡಲದಲ್ಲಿ ನೀನೊಬ್ಬನು ಹೊರತು, ಮತ್ತಾವಪ್ರಾಣಿಯು ಕಣ್ಣೀರನ್ನು ಸುರಿಸುವುದಿಲ್ಲ, ಇನ್ನುಚಿಂತಿಸಬೇಡ, ಈ ವೃಷಲನಿಂದ ಭಯವನ್ನುಬಿಡು," ಎಂದುಸಂತೈಸಿ, ಬಳಿಯಲ್ಲಿರುವ ಆಕಳನ್ನುಕಂಡು ; ಅಮ್ಮ ಮಂಗಳಾಂಗಿ! ದುರ್ಮಾರ್ಗಗರನ್ನು ದಂಡಿಸುವ ನಾನಿರುವಾಗ ನೀನಳುವುದೇಕೆ ?

ತೇ ಖಲಾನಾಂ ಮಯಿ ಶಾಸ್ತರಿ ॥೯॥ ಯಸ್ಯ ರಾಷ್ಟ್ರೇ ಪ್ರಜಾಃ ಸರ್ವಾಸ್ತ್ರಸ್ಯಂತೇ ಸಾಧ್ವ್ಯಸಾಧುಭಿಃ। ತಸ್ಯ ಮತ್ತಸ್ಯ ನಶ್ಯಂತಿ ಕೀರ್ತಿ ರಾಯುರ್ಭಗೋ ಗತಿಃ ॥೧೦॥ ಏಷ ರಾಜ್ಞಃ ಪರೋಧರ್ಮೋ ಹ್ಯಾರ್ತಾನಾಮಾರ್ತಿನಿಗ್ರಹಃ। ಅತ ಏನಂ ವಧಿಷ್ಯಾಮಿ ಭೂತದ್ರುಹ ಮಸತ್ತಮಂ ॥೧೧॥ ಕೋವೃಶ್ಚತ್ತವ ಪಾದಾಂ ಸ್ತ್ರೀನ್ ಸೌರಭೇಯ ಚತುಷ್ಪದಃ। ಮಾಭೂವಂ ಸ್ತ್ವಾದೃಶಾ ರಾಷ್ಟ್ರೇ ರಾಜ್ಞಾಂ ಕೃಷ್ಣಾನುವರ್ತಿನಾಂ ॥೧೨॥ ಆಖ್ಯಾಹಿ ವೃಷ! ಭದ್ರಂ ವಃ ಸಾಧೂನಾ ಮಕೃತಾಗಸಾಂ। ಆತ್ಮವೈರೂ

ನಿನಗೆ, ಭದ್ರಂ-ಮಂಗಳವಾಗಲಿ ॥೯॥ ಹೇಸಾಧ್ವಿ-ಎಲೌ ಪೂಜ್ಯಳೆ? ಯಸ್ಯ-ಯಾವನ, ರಾಷ್ಟ್ರೇ-ರಾಜ್ಯದಲ್ಲಿ, ಸರ್ವಾಃ-ಎಲ್ಲಾ, ಪ್ರಜಾಃ-ಪ್ರಜೆಗಳು, ಅಸಾಧುಭಿಃ - ದುಷ್ಟರಿಂದ, ತ್ರಸ್ಯಂತೇ - ಪೀಡಿಸಲ್ಪಡುವರೋ, ಮತ್ತಸ್ಯ-ಮದಿಸಿದ, ತಸ್ಯ-ಆರಾಜನ, ಕೀರ್ತಿಃ-ಯಶಸ್ಸು, ಆಯುಃ - ಆಯುಸ್ಸು. ಭಗಃ-ಭಾಗ್ಯವು, ಗತಿಃ-ಪರಲೋಕವು, ನಶ್ಯಂತಿ - ಹಾಳಾಗುತ್ತವೆ ॥೧೦॥ ಆರ್ತಾನಾಂ - ಪೀಡಿತರಾದವರ, ಆರ್ತಿನಿಗ್ರಹಃ-ತೊಂದರೆಯನ್ನು ಕಳೆವುದೆಂಬ, ಏಷಃ-ಇದು, ರಾಜ್ಞಃ-ರಾಜನಿಗೆ, ಪರಃ-ಉತ್ತಮವಾದ, ಧರ್ಮಃ - ಧರ್ಮವೆನಿಸುವುದು, ಅತಃ-ಆದುದರಿಂದ, ಭೂತದ್ರುಹಂ - ಪ್ರಾಣಿಹಿಂಸಕನಾದುದರಿಂದ, ಅಸತ್ತಮಂ - ಬಹಳದುಷ್ಟನಾದ, ಏನಂ-ಇವನನ್ನು, ವಧಿಷ್ಯಾಮಿ-ಕೊಲ್ಲುವೆನು ॥ ೧೧ ॥

ಹೇಸೌರಭೇಯ - ಎಲೈವೃಷಭನೆ? ಚತುಷ್ಪದಃ - ನಾಲ್ಕುಕಾಲುಳ್ಳ, ತವ-ನಿನ್ನ, ತ್ರೀನ್-ಮೂರು,ಪಾದಾನ್ - ಕಾಲುಗಳನ್ನು, ಕಃ-ಯಾವನು, ಅವೃಶ್ಚತ್-ಕಡಿದನು? ಕೃಷ್ಣಾನುವರ್ತಿನಾಂ-ಕೃಷ್ಣನನ್ನುಆಶ್ರಯಿಸಿರುವ, ರಾಜ್ಞಾಂ-ರಾಜರ, ರಾಷ್ಟ್ರೇ - ರಾಜ್ಯದಲ್ಲಿ ತ್ವಾದೃಶಾಃ - ನಿನ್ನಂತಹ ದುಃಖಿಗಳು, ಮಾಭೂವನ್ - ಇರಬಾರದು, ॥ ೧೨ ॥ ಹೇವೃಷ-ಎಲೈ ವೃಷಭನೆ? ವಃ-ನಿಮಗೆ, ಭದ್ರಂ-ಮಂಗಳವಾಗಲಿ, ಸಾಧೂನಾಂ - ಸಾಧುಗಳಾಗಿಯೂ, ಅಕೃತಾಗಸಾಂ-ನಿರಪರಾಧಿಗಳಾಗಿಯೂ ಇರುವ ನಿಮ್ಮಲ್ಲಿ, ಆತ್ಮ...ರಂ, ಆತ್ಮ-ನಿನಗೆ, ವೈರೂಪ್ಯ-ವಿರೂಪವನ್ನು, ಕರ್ತಾರಂ-ಮಾಡಿದ, ಪಾರ್ಥಾನಾಂ-

---

ನಿನಗೆ ಮಂಗಳವಾಗಲಿ, ಚಿಂತಿಸಬೇಡ ॥ ೯ ॥ ಯಾವನರಾಜ್ಯದಲ್ಲಿ ದುಷ್ಟರು ಹೆಚ್ಚಿ,ಶಿಷ್ಟರಾದ ಪ್ರಜೆಗಳನ್ನುಪೀಡಿಸುವರೋ, ಅಂತಹ ಮದಾಂಧನಾದ ರಾಜನಕೀರ್ತಿಯೂ, ಆಯುಷ್ಯವು, ಐಶ್ವರ್ಯವೂ ನಾಶವಾಗುವುವಲ್ಲದೆ ಆತನು ಸದ್ಗತಿಯನ್ನೂಪಡೆಯುವುದಿಲ್ಲ.॥೧೦॥ ನೋಯುವವರ ನೋವನ್ನುಕಳೆಯುವದೇ ರಾಜನಿಗೆ ಮುಖ್ಯಧರ್ಮವಾದುದರಿಂದ,ಅತಿನೀಚನೂ ಪ್ರಾಣಿಹಿಂಸಕನೂ ಆದ ಇವನನ್ನುಕೊಲ್ಲುವೆನು ॥೧೧॥ ಎಂದಾಗೋವನ್ನು ಸಂತೈಸಿ, ಮರಳಿ ಆವೃಷಭವನ್ನುಕುರಿತು ಎಲೈಸೌರಭೇಯನೆ ? ನಾಲ್ಕುಕಾಲುಗಳಿಂದ ಕೂಡಿದ್ದ ನಿನ್ನ ಮೂರುಕಾಲುಗಳನ್ನು ಕತ್ತರಿಸಿದವನಾರು ? ಶ್ರೀಕೃಷ್ಣನನ್ನು ಆಶ್ರಯಿಸಿರುವ ರಾಜರ ರಾಷ್ಟ್ರದಲ್ಲಿ ನಿನ್ನಂತೆ ಗೋಳಾಡುವುದುಂಟೆ ? ॥ ೧೨ ॥ ಎಲೈ ವೃಷವೆ ? ನಿನಗೆ ಕಲ್ಯಾಣವಾಗುವುದು. ನಿರಪರಾಧಿಗಳೂ ಸಾಧುಗಳೂ ಆದ ನಿಮ್ಮಲ್ಲಿ, ನಿನಗಿಂತಹ ವಿಕಾರವನ್ನುಂಟುಮಾಡಿ ಪಾಂಡವಕುಲದ ಕೀರ್ತಿಯನ್ನು ಕೆಡಿಸಿದವನಾರು ? ಹೇಳು ॥ ತಪ್ಪಿಲ್ಲದ ಜನರನ್ನು ಹಿಂಸಿಸಿದವನೆಲ್ಲಿ ಹೋದರೂ ನನ್ನದಂಡವನ್ನು ತಪ್ಪಿಸಿಕೊಳ್ಳಲಾರನು.

ಪ್ಯ ಕರ್ತಾರಂ ಪಾರ್ಥಾನಾಂ ಕೀರ್ತಿದೂಷಣಂ ॥ ೧೩ ॥ ಜನೇನಾಗಸ್ಯ ಘಂ ಯುಂಜನ್ ಸರ್ವತೋಸ್ಯಚ ಮದ್ಭಯಂ। ಸಾಧೂನಾಂ ಭದ್ರಮೇವ ಸ್ಯಾ ದಸಾಧುದಮನೇ ಕೃತೇ ॥ ೧೪ ॥ ಅನಾಗಸ್ಸ್ವಿಹ ಭೂತೇಷು ಯ ಆಗಸ್ಕೃನ್ನಿರಂಕುಶಃ । ಆಹರ್ತಾಸ್ಮಿ ಭುಜಂ ಸಾಕ್ಷಾ ದಮರ್ತ್ಯ ಸ್ಯಾಪಿ ಸಾಂಗದಂ ॥೧೫॥ ರಾಜ್ಞೋಹಿ ಪರಮೋ ಧರ್ಮ ಸ್ಸ್ವಧರ್ಮ ಸ್ಥಾನುಪಾಲನಂ । ಶಾಸತೋಽನ್ಯಾನ್ ಯಥಾಶಾಸ್ತ್ರ ಮನಾಪದ್ಯುತ್ಪಥಾ ನಿಹ ॥೧೬॥ ಧರ್ಮಃ॥ ಏತದ್ವಃ ಪಾಂಡವೇಯಾನಾಂ ಯುಕ್ತ ಮಾರ್ತಾ ಭಯಂ ವಚಃ । ಯೇಷಾಂ ಗುಣಗಣೈಃ ಕೃಷ್ಣೋ ದೌತ್ಯಾದೌ ಭಗವಾನ್

ಪಾಂಡವರ, ಕೀರ್ತಿದೂಷಣಂ - ಹೆಸರನ್ನು ಕೆಡಿಸಿದವನನ್ನು, ಆಖ್ಯಾಹಿ-ಹೇಳು ॥ ೧೩ ॥ ಅನಾಗಸಿ-ತಪ್ಪಿಲ್ಲದ, ಜನೇ-ಜನರಲ್ಲಿ, ಅಘಂ-ದುಃಖವನ್ನು, ಯಃ - ಯಾವನು, ಯುಂಜನ್ - ಉಂಟುಮಾಡುವನೋ, ಅಸ್ಯ-ಅಂತವನಿಗೆ, ಮತ್-ನನ್ನಿಂದ, ಸರ್ವತಃ-ಎಲ್ಲಿಯೂ, ಭಯಂ - ಭಯವುಂಟು. ಅಸಾಧುದಮನೇ - ದುಷ್ಟನಿಗ್ರಹವು, ಕೃತೇಸತಿ - ಮಾಡಲ್ಪಟ್ಟರೆ, ಸಾಧೂನಾಂ - ಸಜ್ಜನರಿಗೆ, ಭದ್ರಂ-ಕಲ್ಯಾಣವು, ಸ್ಯಾದೇವ - ಆಗುವುದೇದಿಟ ‖ ೧೪ ॥ ಇಹ-ಈಲೋಕದಲ್ಲಿ. ಅನಾಗಸ್ಸು - ನಿರಪರಾಧಿಗಳಾದ, ಭೂತೇಷು-ಪ್ರಾಣಿಗಳಲ್ಲಿ, ಯಃ-ಯಾವನು, ನಿರಂಕುಶಃ-ತಡೆಯಿಲ್ಲದೆ, ಆಗಸ್ಕೃತ್ - ಕೋಟಲೆಗೊಳಿಸುವನೋ, ಸಾಕ್ಷಾತ್-ಎದುರಿಗೆಬಂದ, ದೇವಸ್ಯಾಪಿ - ದೇವಪುರುಷನಾದರೂ. ತಸ್ಯ-ಅವನ, ಸಾಂಗದಂ-ಭುಜಕೀರ್ತಿಗಳಿಂದ ಕೂಡಿದ. ಭುಜಂ-ತೋಳನ್ನು, ಆಹರ್ತಾಸ್ಮಿ-ಕತ್ತರಿಸಿ ತರುವೆನು ॥ ೧೫ ॥

ಇಹ-ಈಪ್ರಪಂಚದಲ್ಲಿ, ಅನಾಪದಿ - ಆಪತ್ತಿಲ್ಲದಾಗ, ಉತ್ಪಥಾನ್ - ದುರ್ವೃತ್ತರಾದ, ಅನ್ಯಾನ್-ದುಷ್ಟರನ್ನು, ಯಥಾಶಾಸ್ತ್ರಂ - ಶಾಸ್ತ್ರಾನುಸಾರವಾಗಿ, ಶಾಸತಃ-ಶಿಕ್ಷಿಸುವ, ರಾಜ್ಞಃ - ರಾಜನಿಗೆ, ಸ್ವಧ...ನಂ, ಸ್ವ-ತಮ್ಮ, ಧರ್ಮ - ನಡವಳಿಯಲ್ಲಿ, ಸ್ಥ-ಇರುವವರ, ಅನುಪಾಲನಂ - ಸಂರಕ್ಷಣೆಯು, ಪರಮಃ-ಮುಖ್ಯವಾದ, ಧರ್ಮೋಹಿ-ಧರ್ಮವಷ್ಟೆ, ॥೧೬॥ ಧರ್ಮಃ--ಧರ್ಮಪುರುಷನು ಹೇಳುತ್ತಾನೆ, ಯೇಷಾಂ-ಯಾರ, ಗುಣಗಣೈಃ - ಗುಣಸಮೂಹದಿಂದ, ಭಗವಾನ್ - ಭಗವಂತನಾದ, ಕೃಷ್ಣಃ-ಕೃಷ್ಣನು, ದೌತ್ಯಾದೌ - ದೂತಕೃತ್ಯ ಮೊದಲಾದವುಗಳಲ್ಲಿ, ವೃತಃ - ವರಿಸಲ್ಪಟನೋ, ಅಂತಹ, ಪಾಂಡವೇ

ದುಷ್ಟರನ್ನು ನಿಗ್ರಹಿಸಿದಲ್ಲಿ ಶಿಷ್ಟರಿಗೆ ಕ್ಷೇಮವೇ ಉಂಟಾಗುವುದು ॥ ೧೪ ॥ ಈ ಪ್ರಪಂಚದಲ್ಲಿ ನಿರಪರಾಧಿಗಳಾದ ಪ್ರಾಣಿಗಳನ್ನು ಯಾವ ದುರಾತ್ಮನಾದರೆ ತನಗೆದುರಿಲ್ಲವೆಂದು ಕೊಬ್ಬಿ ಕೋಟಲೆ ಗೊಳಿಸುವನೋ, ಅವನು ಸಾಕ್ಷಾದ್ದೇವ ಪುರುಷನಾಗಿದ್ದರೂ ಬಾಹುಪುರಿಗಳಿಂದಲಂಕೃತಗಳಾದ ಅವನ ಭುಜಗಳನ್ನು ತರಿದುಬಿಡುವೆನು ॥ ೧೫ ॥ ಆಪತ್ತಿಲ್ಲದೆ ದುರ್ಮಾರ್ಗವನ್ನು ಆಶ್ರಯಿಸಿರುವ ದುಷ್ಟರನ್ನು ಶಾಸ್ತ್ರಾನುಸಾರವಾಗಿ ದಂಡಿಸುವ ರಾಜನಿಗೆ ಸ್ವಧರ್ಮನಿರತರಾದ ಶಿಷ್ಟರನ್ನು ಸಲಹುವುದು ಕರ್ತವ್ಯವೆನಿಸುವುದು. ಆದುದರಿಂದ ಇವನನ್ನು ಕೊಲ್ಲುವೆನೆಂದು ಹೇಳಲು ॥ ೧೬ ॥

ಧರ್ಮಪುರುಷನು ಎಲೈಮಹಾರಾಜನೆ ? ಆರ್ತರಕ್ಷಾಧುರೀಣರೆನಿಸಿ,ಪಾಂಡವವಂಶದಲ್ಲಿಜನಿಸಿರುವ ನಿಮಗೀನುಡಿಯು ವಿಹಿತವೇಸರಿ. ಇಂತಹಸದ್ಗುಣಗಳು ನಿಮ್ಮಲ್ಲಿಲ್ಲ

ವೃತಃ ॥ ೧೩ ॥ ನನಯುಂಕ್ಲೇಶ ಬೀಜಾನಿ ಯತ ಸ್ಸ್ಯುಃ ಪುರುಷರ್ಷಭೆ ।
ಪುರುಷಂ ತಂ ವಿಜಾ ನೀಮೋ ವಾಕ್ಯಭೇದ ವಿಮೋಹಿತಾಃ ॥೧೪॥ *ಕೇ
ಚಿದ್ವಿಕಲ್ಪ ವಸನಾ ಆಹು ರಾತ್ಮಾನ ಮಾತ್ಮನಃ।ದೈವ ಮನ್ಯೇ ಪರೇ

ಯಾನಾಂ-ಪಾಂಡವ ವಂಶಸ್ಥರಾದ, ವಃ-ನಿಮಗೆ, ಏತತ್-ಈ, ಆರ್ತಭಯಂ - ದುಃಖಿತರಭಯವನ್ನು ಕಳೆಯುವ, ವಚಃ-ಮಾತು, ಯುಕ್ತಂ-ಏಹಿತವೇಸರಿ ॥೧೩॥ ಹೇಪುರುಷರ್ಷಭ-ಎಲೈ ಪುರುಷಶ್ರೇಷ್ಠನೆ? ವಾಕ್ಯ...ತಾಃ, ವಾಕ್ಯಭೇದ - ಹಲವುಬಗೆಗಳಾದ ವಾಕ್ಯಗಳಿಂದ, ವಿಮೋಹಿತಾಃ-ಮರುಳ್ಗೊಳಿಸಲ್ಪಟ್ಟ ವರಾಗಿ, ಯತಃ-ಯಾರಿಂದ, ಕ್ಲೇಶಬೀಜಾನಿ - ದುಃಖಕಾರಣಗಳು, ಸ್ಯುಃ ಉಂಟಾಗಿರುವವೋ, ತಂಪುರುಷಂ-ಆಪುರುಷನನ್ನು, ನವಿಜಾನೀಮಃ-ತಿಳಿಯುವುದಿಲ್ಲ. ॥ ೧೪ ॥ ಕೇಚಿತ್-ಕೆಲವರು, ವಿಕಲ್ಪವಸನಾಃ, ವಿಕಲ್ಪ-ಭೇದವನ್ನು, ವಸನಾಃ - ಆಚ್ಛಾದಿಸುವವರಾಗಿ, ಆತ್ಮನಃ- ಆತ್ಮನಿಗೆ, ಆತ್ಮಾನಮೇವ-ಆತ್ಮ

ದಿದ್ದರೆ,ಆಭಗವಂತನಾದಶ್ರೀಕೃಷ್ಣಮೂರ್ತಿಯು ನಿಮಗೆ ದೌತ್ಯವೊದಲಾದ ಊಳಿಗವನ್ನು ಮಾಡುವುದಕ್ಕೆ ಸಮ್ಮತಿಸುತ್ತಿದ್ದನೆ? ॥ ೧೩ ॥ ಆದರೆ "ನಿನಗೆಯಾರಿಂದೀದುಃಖಪ್ರಾಪ್ತಿಯಾಯಿತು?" ಎಂದುನೀನುಪ್ರಶ್ನೆಮಾಡಿದ ವಿಷಯದಲ್ಲಿ,ಜನರುಹಲವು ವಿಧವಾಗಿಹೇಳುವುದರಿಂದ ಮರುಳಾಗಿರುವನಾನು, ಯಾರಿಂದನನಗೀದುಃಖವು ಬಂದುದೆಂಬುದನ್ನು ತಿಳಿಯಲಾರೆನು ॥೧೪॥ ಏಕೆಂದರೆ ಭೇದವನ್ನುಒಪ್ಪದಿರುವಯೋಗಿಗಳು ‡ ಗೀತಾವಾಕ್ಯದಂತೆ ತನ್ನಸುಖದುಃಖಗಳಿಗೆ ತಾನೇಕಾರಣವೆಂತಲೂ, ಕುಯುಕ್ತಿಗಳಿಂದ ವಾದಿಸುವ ನಾಸ್ತಿ

* (೧) ವಿ. ಕೆಲವರು ಸಂದಿಗ್ಧವಾಕ್ಯುಳ್ಳವರಾಗಿ ತಮ್ಮ ಸುಖದಃಖಾದಿಗಳಿಗೆ ತಮ್ಮ ಅಂತಃಕರಣವೇ ಕಾರಣವೆಂತಲೂ, ಕೆಲವರು ಸಮ್ಯಕ್ಜ್ಞಾನಿಗಳು ಹರಿಯೇ ಕಾರಣವೆಂತಲೂ ಹೇಳುವರು.

ವಿಶ್ವ. (೨) ಆತ್ಮಾಜ್ಞಾನದಿಂದವಿಜೃಂಭಿತವಾದ ಸುಖದುಃಖಾದಿಗಳೆಂಬ ದ್ವೈತವು ಮಿಥ್ಯೆಯಾದುದರಿಂದ ತನಗೆ ಸುಖದುಃಖಗಳನ್ನು ಕೊಡುವವನು ಮತ್ತಾವನೂ ಇಲ್ಲವೆಂದು ಅದ್ವೈತಿಗಳೂ, ಕರ್ಮಗಳಿಗೆ ಅಧೀನರಾದುದರಿಂದ ದೇವತೆಗಳು ಸ್ವತಂತ್ರರಲ್ಲ, ತಮಗಧೀನಗಳಾದುದರಿಂದ ಆಕರ್ಮಗಳೂ ಸ್ವತಂತ್ರಗಳಲ್ಲ. ಆದುದರಿಂದ ತಮ್ಮ ಸುಖದುಃಖಗಳಿಗೆ ತಾವೇ ಕಾರಣವೆಂದು ತಾರ್ಕಿಕರೂ ಹೇಳುವರು.

(೩) ಸಿ. † ಶ್ರುತಿಯಲ್ಲಿ ಜಗತ್ಕಾರಣವಾವುದೆಂದು ವಿಚಾರಿಸುವಾಗ ಕಾಲ, ಸ್ವಭಾವ, ನಿಯತಿ, ಯದೃಚ್ಛೆ, ಭೂತ, ಪುರುಷರೆಂದು ಆರುಪಕ್ಷಗಳನ್ನು ಹೇಳಿ ಅವುಗಳಲ್ಲಿ ಐದು ಆದರಿಸತಕ್ಕದ್ದಲ್ಲವೆಂತಲೂ, ಕಡೆಯದನ್ನು ಅಂಗೀಕರಿಸಬೇಕೆಂತಲೂ ಹೇಳಲ್ಪಟ್ಟದೆ. (1) ಜೋಯಿಸರು ಕಾಲವೇ ಕಾರಣವೆಂತಲೂ (2) ಸಾಂಖ್ಯರು ಪ್ರಕೃತಿಯ ಪರಿಣಾಮದ ಸ್ವಭಾವವೇ ಕಾರಣವೆಂತಲೂ, (3) ಕರ್ಮವಾದಿಗಳಾದ ಮೀಮಾಂಸಕರು, ನಿಯತಿಯೇ ಕಾರಣವೆಂತಲೂ, (4) ಅನಿಯಮ ವಾದಿಗಳಾದ ಆರ್ಹತರು ಯದೃಚ್ಛೆಯೇ ಕಾರಣವೆಂತಲೂ, (5) ಲೋಕಾಯತಿಕರು ಭೂತಗಳೇ ಕಾರಣವೆಂತಲೂ, ಹೇಳುವರು. (6) ಪರಮಾತ್ಮ, ಬ್ರಹ್ಮ, ಮೊದಲಾದ ಶಬ್ದಗಳಿಂದ ಕರೆಯಲ್ಪಡುವ ಅಚಿಂತ್ಯಶಕ್ತಿಯುಳ್ಳ ಪರಮೇಶ್ವರನೇ ಸುಖದುಃಖ ಕಾರಣವೆಂದು ವೇದಾಂತಿಗಳು ಹೇಳುವರು, ಇದೇ ಸಿದ್ಧಾಂತವು. † ಶ್ರು. ಕಾಲಸ್ಸ್ವಭಾವೋ ನಿಯತಿ ರ್ಯದೃಚ್ಛಾಭೂತಾನಿ ಯೋನಿಃ ಪುರುಷಇತಿ ಚಿಂತ್ಯಂ ।

‡ ಆತ್ಮೈವಹ್ಯಾತ್ಮನೋ ಬಂಧು ರಾತ್ಮೈವರಿಪುರಾತ್ಮನಃ.

ಕರ್ಮ ಸ್ವಭಾವ ಮಪರೇ ಪ್ರಭುಂ ॥ ೧೯ ॥ ಅಪ್ರತರ್ಕ್ಯಾ ದನಿರ್ದೇಶ್ಯಾ ದಿತಿ ಕೇಷ್ವಪಿ ನಿಶ್ಚಯಃ। ಅತ್ರಾನುರೂಪಂ ರಾಜರ್ಷೇ ವಿಮೃಶ ಸ್ವಮನೀಷಯಾ ॥೨೦॥ ಏವಂ ಧರ್ಮೇ ಪ್ರವದತಿ ಸ ಸಮ್ರಾಡ್ದ್ವಿಜಸತ್ತಮ ! । ಸಮಾಹಿತೇನ ಮನಸಾ ವಿಖೇದಃ ಪರ್ಯಚಷ್ಟ ತಂ ॥ ೨೧ ॥ ಧರ್ಮಂ ಬ್ರವೀಷಿ ಧರ್ಮಜ್ಞ! ಧರ್ಮೋಽಸಿ ವೃಷರೂಪಧೃಕ್। ಯದಧರ್ಮ ಕೃತಃ ಸ್ಥಾನಂ ಸೂಚಕಸ್ಯಾಪಿ ತದ್ಭವೇತ್ ॥ ೨೨ ॥ ಅಥವಾ ದೇವಮಾಯಾ

ಸನ್ನೇ, ಪ್ರಭುಂ - ಸುಖದಃಖಗಳನ್ನು ಕೊಡುವವನನ್ನಾಗಿ, ಆಹುಃ - ಹೇಳುವರು, ಅನ್ಯೇ_ಇತರರು, ದೈವಂ-ಸೂರ್ಯಾದಿ ಗ್ರಹಗಳನ್ನೂ, ಪರೇ-ಮತ್ತೆ ಕೆಲವರು, ಕರ್ಮ-ಕರ್ಮವನ್ನೂ - ಅಪರೇ-ಇನ್ನು ಕೆಲವರು,ಸ್ವಭಾವಂ-ಸ್ವಭಾವವನ್ನೂ, ಪ್ರಭುಂ-ಸುಖದುಃಖಕಾರಣವೆಂದು, ಆಹುಃ-ಹೇಳುತ್ತಾರೆ, ॥೧೯॥ ಅಪ್ರತರ್ಕ್ಯಾತ್ - ಮನಸ್ಸಿಗೆ ಗೋಚರವಲ್ಲದ, ಅನಿರ್ದೇಶ್ಯಾತ್ - ವಾಕ್ಕಿಗೊಳಗಾಗದ, ಪರಮೇಶ್ವರನಿಂದಲೇ ಸುಖದುಃಖಗಳುಂಟಾಗುವುವೆಂದು, ಕೇಷ್ವಪಿ-ಕೆಲವರಲ್ಲಿ, ನಿಶ್ಚಯಃ - ಸಿದ್ಧಾಂತವು, ಅತ್ರ-ಈವಿಷಯದಲ್ಲಿ, ರಾಜರ್ಷೇ-ಎಲೈ ರಾಜಋಷಿಯೆ ? ಸ್ವಮನೀಷಯಾ - ನಿನ್ನ ಬುದ್ಧಿಯಿಂದ, ವಿಮೃಶ-ವಿಚಾರಿಸು ॥ ೨೦ ॥ ಏವಂ-ಇಂತು, ಧರ್ಮೇ - ಧರ್ಮಪುರುಷನು. ಪ್ರವದತಿ-ಹೇಳಲು, ಹೇದ್ವಿಜಸತ್ತಮ - ಎಲೈಬ್ರಾಹ್ಮಣೋತ್ತಮನಾದಶೌನಕನೆ ? ಸಸಮ್ರಾಟ್ - ಆಪರೀಕ್ಷಿಚ್ಚಕ್ರವರ್ತಿಯು, ವಿಖೇದಃ-ಮೋಹವನ್ನುಳಿದು, ಸಮಾಹಿತೇನ-ಸ್ತಿಮಿತವಾದ, ಮನಸಾ - ಮನಸ್ಸಿನಿಂದ, ತಂ-ಆಧರ್ಮಪುರುಷನನ್ನು ಕುರಿತು, ಪರ್ಯಚಷ್ಟ-ನುಡಿದನು, ॥ ೨೧ ॥ ಹೇಧರ್ಮಜ್ಞ - ಎಲೆಧರ್ಮಜ್ಞನೆ ! ಧರ್ಮಂ-ಧರ್ಮವನ್ನು, ಬ್ರವೀಷಿ-ಹೇಳುತ್ತಿರುವೆ, ವೃಷ...ಕ್, ವೃಷ-ಎತ್ತಿನ, ರೂಪ-ಆಕಾರವನ್ನು, ಧೃಕ್-ಧರಿಸಿದ, ಧರ್ಮಃ-ಧರ್ಮಪುರುಷನು, ಅಸಿ-ಆಗಿರುವೆ, ಅಧರ್ಮಕೃತಃ-ಪಾಪಕರ್ಮವನ್ನುಮಾಡಿದವನ, ಸ್ಥಾನಂ - ನೆಲೆಯಾದನರಕವು, ಯತ್-ಯಾವುದುಂಟೋ, ತತ್-ಅದು, ಸೂಚಕಸ್ಯಾಪಿ-ಅದನ್ನುಸೂಚಿಸಿದವನಿಗೂ, ಭವೇತ್-ಉಂಟಾದೀತು ॥ ೨೨ ॥

ಕರು ದೇವತೆಗಳು ಕರ್ಮಾಧೀನರಾದುದರಿಂದಲೂ, ಆಕರ್ಮಗಳು ತಮಗಧೀನಗಳಾದುದರಿಂದಲೂ ತಮ್ಮಸುಖದುಃಖಗಳಿಗೆ ತಾವೇಕಾರಣವಲ್ಲದೆ ಬೇರೆದೈವವಿಲ್ಲವೆಂತಲೂ, ಜ್ಯೋತಿಶ್ಶಾಸ್ತ್ರವನ್ನು ಬಲ್ಲ ಜೋಯಿಸರು ಸೂರ್ಯಾದಿಗ್ರಹಗಳೇ ಸುಖದುಃಖಕಾರಣವೆಂತಲೂ, ಮೀಮಾಂಸಕರು ಕರ್ಮವೇಕಾರಣವೆಂತಲೂ, ಚಾರ್ವಾಕಾದಿಗಳು ಸ್ವಭಾವವೇ ಕಾರಣವೆಂತಲೂ ನುಡಿಯುವರು ॥ ೧೯ ॥

ಕೆಲವರುಮಾತ್ರ ಮನಸ್ಸಿಗೂ, ಮಾತುಗಳಿಗೂಸಹ ಅಗೋಚರನಾಗಿರುವ ಪರಮೇಶ್ವರನೇ ಸುಖದುಃಖ ಕಾರಣವೆಂದು ಹೇಳುವರು. ಎಲೈ ರಾಜರ್ಷಿಯೇ ಇದನ್ನು ನೀನು ವಿಚಾರಿಸಿ ಸಿದ್ಧಾಂತವಾಗಿ ತಿಳಿ ॥ ೨೦ ॥ ಎಂದು ಧರ್ಮಪುರುಷನು ನುಡಿಯಲು, ಪರೀಕ್ಷಿಚ್ಚಕ್ರವರ್ತಿಯು, ಅಜ್ಞಾನರಹಿತನಾಗಿ ನಿಶ್ಚಲವಾದಬುದ್ಧಿಯಿಂದ ಆ ಧರ್ಮಪುರುಷನನ್ನು ಕುರಿತು ; ॥೨೧॥ ಎಲೈ ಧರ್ಮಜ್ಞನೆ ? "ಪಾಪಿಯನ್ನು ತಿಳಿದಿದ್ದರೂ ತಿಳಿಯದವನಂತಿರಬೇಕಲ್ಲದೆ ತೋರಿಸಿ ಹೇಳಬಾರದು, ತೋರಿಸಿದಲ್ಲಿ, ಅವನಪಾಪಕ್ಕೆ ತಾನೂ

ಯಾ ನೂನಂ ಗತಿ ರಗೋಚರಾ । ಚೇತಸೋ ವಚಸ ಶ್ಚಾಪಿ ಭೂತಾನಾ
ಮಿತಿ ನಿಶ್ಚಯಃ ॥೨೩॥ ತಪ ಶೌಚಂ ದಯಾ ಸತ್ಯಮಿತಿ ಪಾದಾಃ ಕೃತೇ
ಕೃತಾಃ।ಅಧರ್ಮಾಂಶೈ ಸ್ತ್ರಯೋ ಭಗ್ನಾ ಸ್ಸ್ಮಯಸಂಗ ಮದೈ ಸ್ತವ ॥
* ಇದಾನೀಂ ಧರ್ಮ! ಪಾದಸ್ತೇ ಸತ್ಯಂ ನಿರ್ವರ್ತಯೇ ದ್ಯತಃ । ತಂ
ಜಿಘೃಕ್ಷ ತ್ಯಧರ್ಮೋಯ ಮನೃತೇ ನೈಧಿತಃ ಕಲಿಃ ॥ ೨೫ ॥ ಇಯಂ ಚ

ಅಥವಾ, ದೇವಮಾಯಾಯಾಃ-ಭಗವಂತನಮಾಯೆಯು, ಗತಿಃ – ಪ್ರಚಾರವು, ಭೂತಾನಾಂ-ಪ್ರಾಣಿಗಳ, ಚೇತಸಃ-ಮನಸ್ಸಿಗೂ, ವಚಸಶ್ಚಾಪಿ--ಮಾತುಗಳಿಗೂ, ಅಗೋಚರಾ - ತಿಳಿಯತಕ್ಕದ್ದಲ್ಲ, ಇತಿ-ಎಂಬುದು, ನಿಶ್ಚಯಃ-ನಿಶ್ಚಯವು, ನೂನಂ-ದಿಟವು, ॥ ೨೩ ॥ ಕೃತೇ-ಕೃತಯುಗದಲ್ಲಿ, ತಪಃ-ತಪಸ್ಸು, ಶೌಚಂ-ಪಾರಿಶುಧ್ಯವು, ದಯಾ-ಪ್ರಾಣಿಗಳಲ್ಲಿಕನಿಕರವು, ಸತ್ಯಂ-ದಿಟವನ್ನುಹೇಳುವುದು, ಇತಿ - ಎಂಬ ನಾಲ್ಕು, ತವ-ನಿನಗೆ, ಪಾದಾಃ-ಕಾಲುಗಳೆಂದು, ಕೃತಾಃ - ಹೇಳಲ್ಪಟ್ಟವು, ಅಧರ್ಮಾಂಶೈಃ – ಅಧರ್ಮ ಭಾಗಗಳಾದ, ಸ್ಮಯ...ದೈಃ, ಸ್ಮಯ-ತಾನೇ ಉತ್ತಮನೆಂಬ ಗರ್ವವು, ಸಂಗ-ದುರ್ಜನಸಹವಾಸವು, ಮದೈಃ-ಕೊಬ್ಬು, ಇವುಗಳಿಂದ, ತವ-ನಿನ್ನ, ತ್ರಯಃ-ತಪಸ್ಸು, ಶೌಚ-ದಯೆಗಳೆಂಬ ಮೂರುಪಾದಗಳು, ಭಗ್ನಾಃ-ಮುರಿಯಲ್ಪಟ್ಟವು ॥ ೨೪ ॥ ಹೇಧರ್ಮ-ಎಲೈಧರ್ಮಪುರುಷನೆ ? ಇದಾನೀಂ-ಈಗ, ಯತಃ-ಯಾವುದರಿಂದ, (ಭವಾನ್-ನೀನು, ಆತ್ಮಾನಂ-ಶರೀರವನ್ನು) ನಿರ್ವರ್ತಯೇತ್-ಧರಿಸುತ್ತಿರುವೆಯೋ, ಅಂತಹ,ಸತ್ಯಂ - ಸತ್ಯರೂಪವಾದ, ತೇ-ನಿನ್ನ, ಪಾದಃ - ಯಾವಪಾದವುಂಟೋ, ತಂ-ಆಪಾದವನ್ನೊ, ಅನೃತೇನ-ಸುಳ್ಳಿನಿಂದ, ಏಧಿತಃ – ಬೆಳೆಯಿಸಲ್ಪಟ್ಟ, ಕಲಿಃ – ಕಲಿರೂಪನಾದ, ಅಯಂ-ಈ, ಅಧರ್ಮಃ-

ಭಾಗಿಯಾಗುವನು" ಎಂಬ ಧರ್ಮವನ್ನು ಬಲ್ಲವನಾದುದರಿಂದ ಸರಿಯಾಗಿಹೇಳಿದೆ ॥೨೨॥

ಅಥವಾ ಭಗವಂತನಮಾಯೆಯು, ಪ್ರಾಣಿಗಳ ಮನಸ್ಸಿಗೂ ವಚಸ್ಸಿಗೂಕೂಡ ಅಗೋಚರವೆಂಬುದು ನಿಶ್ಚಯವಾದುದರಿಂದ, ನೀನುತಿಳಿಯದೆಂದು ಹೇಳುವುದೂ ವಿಹಿತವೇ ಸರಿ ॥ ೨೩ ॥ ಎಂದು ಹೇಳುತ್ತಾ ಅದನ್ನು ಧರ್ಮಪುರುಷನೆಂದು ತಿಳಿದು; ಎಲೈಧರ್ಮ ಪುರುಷನೆ ? ಕೃತಯುಗದಲ್ಲಿ, ತಪಸ್ಸು, ಶೌಚ, ದಯೆ, ಸತ್ಯವೆಂಬ ನಾಲ್ಕು ಪಾದಗಳು ನಿನಗೆ ಸಂಪೂರ್ಣಗಳಾಗಿದ್ದುವು, ಬರುತ ಬರುತ ಅಧರ್ಮಭಾಗಗಳಿಂದ ಗರ್ವ, ಸ್ತ್ರೀಸಂಗ, ಪಾನಮದಗಳಿಂದ ನಿನ್ನ ಮೂರು ಪಾದಗಳು ಮುರಿದು ಹೋದುವು ॥ ೨೪ ॥ ಈಕಲಿ ಕಾಲದಲ್ಲಿ ನೀನುಇಷ್ಟುಮಟ್ಟಿಗಾದರೂ ಶರೀರವನ್ನು ಧರಿಸಿರುವುದಕ್ಕಾಧಾರವಾಗಿಯೂ, ಪುರುಷನಾದವನು ನಿನ್ನನ್ನು ಸಾಧಿಸುವುದಕ್ಕನುಕೂಲವಾಗಿಯೂ ಇರುವ ನಾಲ್ಕನೆಯ ದಾದ ಯಾವ ಸತ್ಯವೆಂಬ ಪಾದವುಂಟೋ, ಅನೃತದಿಂದ ಬೆಳೆಯುತ್ತಿರುವಕಲಿರೂಪನಾದ

* ಕೃತಯುಗದಲ್ಲಿ ಧರ್ಮಕ್ಕೆ ನಾಲ್ಕುಪಾದಗಳೂ ಸರಿಯಾಗಿರುವವು. ತ್ರೇತಾಯುಗದಲ್ಲಿ ಆನಾಲ್ಕುಪಾದಗಳಲ್ಲಿ ಗರ್ವದಿಂದ ತಪಸ್ಸು, ಸ್ತ್ರೀಸಂಗದಿಂದ ಶೌಚವು, ಮದದಿಂದ ದಯೆಯು, ಅನೃತದಿಂದ ಸತ್ಯವು, ಇವುಗಳಲ್ಲಿ ಹಾಗಪಾಲು ಕಡಿಮೆಯಾಗುವುದು. ದ್ವಾಪರಯುಗದಲ್ಲಿ ಅರ್ಧಭಾಗವು ನಷ್ಟವಾಗುವುದು, ಕಲಿಯುಲ್ಲಿ ಹಾಗಪಾಲು ಉಳಿದಿರುವುದು, ಕಲ್ಯಂತದಲ್ಲಿ ಅದೂ ನಿಶ್ಶೇಷವಾಗುವುದು.

ಭೂರ್ಭಗವತಾ ನ್ಯಾಸಿ ತೋರುಭರಾ ಸತೀ। ಶ್ರೀಮದ್ಭಿಸ್ತತ್ಪದನ್ಯಾಸೈ
ಸ್ಸರ್ವತಃ ಕೃತಕೌತುಕ ॥ ೨೬ ॥ ಶೋಚತ್ಯಶ್ರುಕಲಾ ಸಾಧ್ವೀ
ದುರ್ಭಗೇವೋಜ್ಝಿತಾ ಸತೀ। ಅಬ್ರಹ್ಮಣ್ಯಾ ನೃಪವ್ಯಾಜಾಃ ಶೂದ್ರಾ
ಭೋಕ್ಷ್ಯಂತಿ ಮಾಮಿತಿ ॥ ೨೭ ॥ ಇತಿ ಧರ್ಮಂ ಮಹೀಂಚೈವ ಸಾಂ
ತ್ವಯಿತ್ವಾ ಮಹಾರಥಃ। ನಿಶಾತಮಾದದೇ ಖಡ್ಗಂ ಕಲಯೇಽಧರ್ಮಹೇ
ತವೇ ॥೨೮॥ ತಂ ಜಿಘಾಂಸುಮಭಿಪ್ರೇತ್ಯ ವಿಹಾಯ ನೃಪಲಾಂಛನಂ।

ಅಧರ್ಮನು, ಜಿಘೃಕ್ಷತಿ-ಹಿಡಿಯಲೆಳಸುತ್ತಿರುವನು ॥ ೨೫ ॥ ಭಗವತಾ - ಭಗವಂತನಾದ ಶ್ರೀಕೃಷ್ಣನಿಂದ, ನ್ಯಾಸಿ...ರಾ, ನ್ಯಾಸಿತ-ಇಳುಹಲ್ಪಟ್ಟ, ಉರು-ಅಧಿಕವಾದ, ಭರಾ-ಭಾರವುಳ್ಳ, ಸತೀ-ಸಚ್ಚರಿತ್ರೆಯುಳ್ಳ, ಶ್ರೀಮದ್ಭಿಃ - ಸಂಪದ್ಯುಕ್ತಗಳಾದ, ತತ್ಪದನ್ಯಾಸೈಃ - ಆಕೃಷ್ಣನ ಹೆಜ್ಜೆಯಗುರುತುಗಳಿಂದ, ಸರ್ವತಃ - ಎಲ್ಲಕಡೆಯಲ್ಲಿಯೂ, ಕೃತಕೌತುಕಾ-ಮಂಗಳವನ್ನುಪಡೆದ, ಇಯಂ-ಈ, ಭೂಶ್ಚ-ಭೂದೇವಿಯೂ, ॥ ೨೬ ॥ ಸಾಧ್ವೀ-ಪತಿವ್ರತೆಯಾದುದರಿಂದ, ಭಗವತಾ-ಭಗವಂತನಿಂದ, ಉಜ್ಝಿತಾ ಸತೀ-ಬಿಡಲ್ಪಟ್ಟವಳಾಗಿ, ದುರ್ಭಗೇವ - ಭಾಗ್ಯಹೀನಳಂತೆ, ಅಬ್ರಹ್ಮಣ್ಯಾಃ-ಬ್ರಾಹ್ಮಣಪ್ರಿಯರಲ್ಲದ, ನೃಪವ್ಯಾಜಾಃ - ರಾಜವೇಷಧಾರಿಗಳಾದ, ಶೂದ್ರಾಃ-ಶೂದ್ರರು, ಮಾಂ-ನನ್ನನ್ನು. ಭೋಕ್ಷ್ಯಂತಿ-ಅನುಭವಿಸುತ್ತಾರೆ, ಇತಿ-ಎಂದು, ಅಶ್ರುಕಲಾ - ಕಂಬನಿಗರೆಯುತ್ತಾ, ಶೋಚತಿ - ದುಃಖಿಸುವಳು, ॥ ೨೭ ॥ ಇತಿ-ಇಂತು, ಮಹಾರಥಃ-ಮಹಾಶೂರನಾದ ಪರೀಕ್ಷಿತನು, ಧರ್ಮಂ-ಧರ್ಮಪುರುಷನನ್ನೂ, ಮಹೀಂಚೈವ-ಭೂದೇವಿಯನ್ನೂ, ಸಾಂತ್ವಯಿತ್ವಾ-ಸಂತೈಸಿ, ಅಧರ್ಮಹೇತವೇ - ಅಧರ್ಮಕ್ಕೆ ಕಾರಣವಾದ, ಕಲಯೇ-ಕಲಿಯನ್ನು ಕೊಲ್ಲುವುದಕ್ಕಾಗಿ, ನಿಶಾತಂ - ತೀಕ್ಷ್ಣವಾದ, ಖಡ್ಗಂ-ಕತ್ತಿಯನ್ನು, ಆದದೇ - ತೆಗೆದುಕೊಂಡನು ॥ ೨೮ ॥ ಭಯವಿಹ್ವಲಃ - ಭಯದಿಂದ ವ್ಯಾಕುಲನಾದಕಲಿಯು, ತಂ-ಅವನನ್ನು, ಜಿಘಾಂಸುಂ-ಕೊಲ್ಲುವವನನ್ನಾಗಿ, ಅಭಿಪ್ರೇತ್ಯ-ತಿಳಿದು, ನೃಪಲಾಂಛನಂ - ರಾಜವೇಷವನ್ನು, ವಿಹಾಯ-ಬಿಟ್ಟು, ತತ್..ಲಂ, ತತ್-ಅವನ, ಪಾದಮೂಲಂ-ಕಾಲುಗಳಬಳಿಯಲ್ಲಿ, ಶಿರಸಾ-ತಲೆಯಿಂದ, ಸಮಗಾತ್-ಎರ

ಅಧರ್ಮನು ಆ ಪಾದವನ್ನುಕೂಡ ಈಗ ಮುರಿಯಬೇಕೆಂದು ಯತ್ನಿಸುತ್ತಿರುವನು ॥೨೫॥ ಅಲ್ಲದೆ ಇದು ಆಕಳಲ್ಲ, ಭೂದೇವಿಯೇ ಸರಿ, ಭಗವಂತನಾದ ರಮಾಕಾಂತನು ತನ್ನ ದುಸ್ಸಹವಾದಭಾರವನ್ನು ಕಳೆದುದರಿಂದ, ಈಕೆಯು ಆಭಗವಂತನ ಪಾದನ್ಯಾಸಗಳಿಂದ ಸರ್ವ ಮಂಗಳೆಯಾಗಿ, ಮಹಾಪತಿವ್ರತೆಯಾದುದರಿಂದ, ಆತನಗಲಿಕೆಯನ್ನು ಪಡೆದು, ಭಾಗ್ಯಹೀನಳಾದಂತೆ ಕಣ್ಣುಗಳಿಂದ ಕಂಬನಿಗಳನ್ನು ಸುರಿಸುತ್ತಾ "ಅಕಟಾ ! ಇನ್ನು ಮುಂದೆ ಬ್ರಹ್ಮದ್ವೇಷಿಗಳಾಗಿ ರಾಜರಂತೆ ವೇಷಧಾರಿಗಳಾದ ಶೂದ್ರರು ನನ್ನನ್ನು ಆಳುವರಲ್ಲಾ ! ಎಂದಳುತ್ತಿರುವಳು. ನಿಮಗೆ ಮಂಗಳವಾಗುವುದು ಚಿಂತಿಸಬೇಡಿರಿ ! ಎಂದು ವೃಷಭರೂಪಿಯಾದ ಧರ್ಮಪುರುಷನನ್ನೂ, ಗೋರೂಪವನ್ನುಪಡೆದ ಭೂದೇವಿಯನ್ನೂ ಸಹ ಸಂತೈಸಿ, ಬಳಿಯಲ್ಲಿಯೇ ನಿಂತಿರುವ ಅಧರ್ಮಗಳಿಗೆ ಬೀಜಭೂತನಾದ ಕಲಿಯನ್ನು ಸಂಹರಿಸುವುದಕ್ಕಾಗಿ ತಟ್ಟನೆ ಹರಿತವಾದ ತನ್ನ ಕತ್ತಿಯನ್ನೊರೆಯಿಂದ ಸೆಳೆದನು ॥೨೮॥ ಅಷ್ಟರಲ್ಲಿಯೇ ಕಲಿಯು ಅವನನ್ನುಕಂಡು ತನ್ನನ್ನು ಕೊಲ್ಲುವನೆಂದು ನಿಶ್ಚಯಿಸಿಕೊಂಡು,

ತತ್ಪಾದಮೂಲಂ ಶಿರಸಾ ಸಮಗಾ ದ್ಭಯವಿಹ್ವಲಃ ॥೨೯॥ ಪತಿತಂ ಪಾದ ಯೋ ರ್ವೀರಃ ಕೃಪಯಾ ದೀನವತ್ಸಲಃ । ಶರಣ್ಯೋ ನಾವಧೀ ಚ್ಛ್ಲೋಕ್ಯ ಆಹ ಚೇದಂ ಹಸನ್ನಿವ ॥೩೦॥ ನತೇ ಗುಡಾಕೇಶ ಯಶೋಧರಾಣಾಂ ಬದ್ಧಾಂಜಲೇ ರ್ವೈ ಭಯಮಸ್ತಿ ಕಿಂಚಿತ್। ನ ವರ್ತಿತವ್ಯಂ ಭವತಾ ಕಥಂ ಚನ ಕ್ಷೇತ್ರೇ ಮದೀಯೇ ತ್ವ ಮಧರ್ಮ ಬಂಧುಃ॥೩೧॥ ತ್ವಾಂ ವರ್ತಮಾ ನಂ ನರದೇವದೇಹೇಷ್ವನು ಪ್ರವೃತ್ತೋಽಯ ಮಧರ್ಮ ಪೂಗಃ । ಲೋ ಭೋಽನೃತಂ ಚೌರ್ಯ ಮನಾರ್ಯ ಮಂಹೋ ಜ್ಯೇಷ್ಠಾ ಚ ಮಾಯಾ ಕಲ ಹಶ್ಚ ದಂಭಃ ॥ ೩೨ ॥ ನ ವರ್ತಿತವ್ಯಂ ತ ದಧರ್ಮಬಂಧೋ ? ಧರ್ಮೇ

ಗಿದನು ॥ ೨೯ ॥ -ವೀರಃ-ಶೂರನಾದ, ದೀನವತ್ಸಲಃ-ದೀನರಲ್ಲಿ ಕನಿಕರವುಳ್ಳ, ಶರಣ್ಯಃ-ಆಶ್ರಯಿಸುವುದಕ್ಕೆ ಅರ್ಹನಾದ, ಶ್ಲೋಕ್ಯಃ-ಕೀರ್ತಿಗರ್ಹನಾದ ಪರೀಕ್ಷಿತನು, ಪಾದಯೋಃ-ಪಾದಗಳಲ್ಲಿ, ಪತಿತಂ-ಬಿದ್ದ ಕಲಿ ಯನ್ನು, ನಾವಧೀತ್-ಕೊಲ್ಲಲಿಲ್ಲ, ಕೃಪಯಾ - ದಯೆಯಿಂದ, ಹಸನ್ನಿವ-ನಸುನಕ್ಕು, ಇದಂ-ಮುಂದೆ ಹೇಳುವಂತೆ, ಆಹ-ಹೇಳುತ್ತಾನೆ, ॥ ೩೦ ॥ ಗುಡಾ...ಣಾಂ, ಗುಡಾಕೇಶ-ಅರ್ಜುನನ, ಯಶಃ-ಕೀರ್ತಿ ಯನ್ನು, ಧರಾಣಾಂ-ಧರಿಸಿರುವವನಮಗೆ, ಬದ್ಧಾಂಜಲೇಃ - ಕೈಮುಗಿದ, ತೇ-ನಿನಗೆ, ಕಿಂಚಿತ್-ಕೊಂಚ ವಾದರೂ, ಭಯಂ - ಭಯವು, ನಾಸ್ತಿ-ಇಲ್ಲ. ಯತ್ - ಯಾವಕಾರಣದಿಂದ, ತ್ವಂ-ನೀನು, ಅಧರ್ಮ ಬಂಧುಃ-ಅಧರ್ಮಕ್ಕೆ ಸಹಾಯನೋ, ತತ್-ಆ ಕಾರಣದಿಂದ, ಭವತಾ-ನಿನ್ನಿಂದ,ಮದೀಯೇ-ನನಗೆ ಸೇರಿದ, ಕ್ಷೇತ್ರೇ-ದೇಶದಲ್ಲಿ, ಕಥಂಚನ-ಯಾವರೀತಿಯಲ್ಲಿಯೂ, ನವರ್ತಿತವ್ಯಂ - ಇರಲ್ಪಡಕೂಡದು. ॥ ೩೧ ॥

ನರ...ಷು, ನರದೇವ-ರಾಜರ, ದೇಹೇಷು-ಶರೀರಗಳಲ್ಲಿ, ವರ್ತಮಾನಂ-ವ್ಯಾಪಿಸಿರುವ, ತ್ವಾಂ- ನಿನ್ನನ್ನು, ಅನು-ಅನುಸರಿಸುವ, ಲೋಭಃ-ದುರಾಸೆಯು, ಅನೃತಂ-ತಟವಟವು, ಚೌರ್ಯಂ-ಕಳವು, ಅನಾರ್ಯಂ-ದೌರ್ಜನ್ಯವು, ಅಂಹಃ - ಸ್ವಧರ್ಮತ್ಯಾಗವು, ಜ್ಯೇಷ್ಠಾಚ - ಅಲಕ್ಷ್ಮಿಯು, ಮಾಯಾ- ಕಪಟವು, ಕಲಹಃ-ಜಗಳವು, ದಂಭಃ-ಜಂಭವು, ಇವುಗಳೆಂಬ ಅಯಂ-ಈ, ಅಧರ್ಮಪೂಗಃ-ಅಧರ್ಮ ಗಳ ಸಮೂಹವು, ಪ್ರವೃತ್ತಃ-ನೆಲಸುವುದು. ॥ ೩೨ ॥ ಹೇ ಅಧರ್ಮಬಂಧೋ-ಎಲೈ ಅಧರ್ಮಗಳಿಗೆ

ಭಯದಿಂದ ಗಡಗಡನೆ ನಡುಗುತ್ತಾ,ತಾನುಧರಿಸಿದ್ದ ಕಿರೀಟ ಕವಚ ಕುಂಡಲಾದಿ ರಾಜ ಚಿಹ್ನಗಳನ್ನುಳಿದು, ಬೇಗನೆಬಂದು ಕಾಲಿಗೆರಗಿದನು ॥ ೨೯ ॥

ಆಗ ದೀನದಯಾಳುವೂ,ಆಶ್ರಯಾರ್ಹನೂ,ಪುಣ್ಯಶ್ಲೋಕನೂ,ಮಹಾಶೂರನೂ ಆದ ಪರೀಕ್ಷಿದ್ರಾಜನು, ಪಾದಮೂಲದಲ್ಲಿ ಬಿದ್ದಿರುವ ಆ ಕಲಿಯನ್ನು ಕಂಡು ಕನಿಕರಗೊಂಡು, ಸಂಹರಿಸದೆ ಕಿರುನಗೆಯನ್ನು ತೋರುತ್ತಾ ॥ ೩೦ ॥ ಎಲೈ ಕಲಿಯೆ ! ಮಹಾತ್ಮನಾದ ಅರ್ಜುನನ ಕೀರ್ತಿಯನ್ನು ಬೆಳೆಯಿಸುವ ನಮಗೆ ನೀನು ಕೈಮುಗಿದು ಮರೆಬಿದ್ದಮೇಲೆ ನಿನಗೆಂದಿಗೂ ಭಯವಿಲ್ಲ, ಆದರೆ ನೀನು ಅಧರ್ಮಗಳಿಗೆ ಸಹಕಾರಿಯಾದುದರಿಂದ ಎಷ್ಟು ಮಾತ್ರವೂ ನನ್ನ ದೇಶದಲ್ಲಿರಕೂಡದು ॥ ೩೧ ॥ ರಾಜರ ಶರೀರಗಳನ್ನು ಒಳಹೊಕ್ಕಿ ರುವ ನಿನ್ನನ್ನು ಅನುಸರಿಸಿ, ದುರಾಸೆ, ತಟವಟ, ಕಳವು, ದೌರ್ಜನ್ಯ, ದಾರಿದ್ರ್ಯ,ಮೋಸ, ಜಗಳ, ಜಂಬ ಮೊದಲಾದ ಅಧರ್ಮಗಳೆಲ್ಲಾ ಲೋಕದಲ್ಲಿ ನೆರದಿರುವುವು ॥ ೩೨ ॥ ಎಲೈ

ಣ ಸತ್ಯೇನ ಚ ವರ್ತಿತವ್ಯೇ। *ಬ್ರಹ್ಮಾವರ್ತೇ ಯತ್ರ ಯಜಂತಿ ಯಜ್ಞೈರ್ಯಜ್ಞೇಶ್ವರಂ ಯಜ್ಞವಿತಾನ ವಿಜ್ಞಾಃ ॥ ೩೩ ॥ ಯಸ್ಮಿನ್ ಹರಿರ್ಭಗವಾನ್ ಇಜ್ಯಮಾನ ಇಜ್ಯಾತ್ಮಮೂರ್ತಿರ್ಯಜತಾಂ ಶಂ ತನೋತಿ। ಕಾಮಾನ ಮೋಘಾನ್ ಸ್ಥಿರಜಂಗಮಾನಾಮಂತರ್ಬಹಿರ್ವಾಯುರಿವೈಷ ಆತ್ಮಾ ॥೩೪॥ ಶ್ರೀಸೂತಃ। ಪರೀಕ್ಷಿತೈವ ಮಾದಿಷ್ಟಸ್ಸ ಕಲಿರ್ಜಾತ ವೇಪಥುಃ। ತ ಮುದ್ಯತಾಸಿ ಮಾಹೇದಂ ದಂಡ ಪಾಣಿ ಮಿವೋದ್ಯತಂ ॥

ಬಂಧುವಾದ ಕಲಿಯೆ ! ತತ್-ಆದುದರಿಂದ, ಯತ್ರ-ಎಲ್ಲಿ, ಯಜ್ಞ...ಜ್ಞಾಃ, ಯಜ್ಞ-ಯಜ್ಞಗಳ, ವಿತಾನ-ವಿಸ್ತಾರವನ್ನು, ವಿಜ್ಞಾಃ-ತಿಳಿದಿರುವವರು, ಯಜ್ಞೈಃ-ಯಜ್ಞಗಳಿಂದ, ಯಜ್ಞೇಶ್ವರಂ-ಯಜ್ಞಾಧಿಪತಿಯಾದ ವಿಷ್ಣುವನ್ನು, ಯಜಂತಿ-ಪೂಜಿಸುವರೋ, ಧರ್ಮೇಣ-ಧರ್ಮದಿಂದಲೂ, ಸತ್ಯೇನಚ - ಸತ್ಯದಿಂದಲೂ, ವರ್ತಿತವ್ಯೇ-ಇರಬೇಕಾದ, ಬ್ರಹ್ಮಾವರ್ತೇ - ಬ್ರಹ್ಮಾವರ್ತವೆಂಬ ಕ್ಷೇತ್ರದಲ್ಲಿ, ನವರ್ತಿತವ್ಯಂ-ನೀನಿರಕೂಡದು ॥ ೩೩ ॥ ಯಸ್ಮಿನ್ - ಯಾವಕ್ಷೇತ್ರದಲ್ಲಿ, ಇಜ್ಯಾ...ರ್ತಿಃ, ಇಜ್ಯಾ - ಯಾಗಗಳ, ಆತ್ಮ-ಸ್ವರೂಪವಾದ, ಮೂರ್ತಿಃ-ಶರೀರವುಳ್ಳ, ಭಗವಾನ್ - ಭಗವಂತನಾದ, ಹರಿಃ-ವಿಷ್ಣುವು, ಇಜ್ಯಮಾನಃ-ಯಜ್ಞಮಾಡಲ್ಪಟ್ಟವನಾಗಿ, ಸ್ಥಿರಜಂಗಮಾನಾಂ - ಸ್ಥಾವರಜಂಗಮ ಪದಾರ್ಥಗಳ, ಅಂತರ್ಬಹಿಶ್ಚ-ಒಳಗೂ ಹೊರಗೂ ಇರುವ, ವಾಯುರಿವ - ವಾಯುವಿನಂತೆ, ಏಷಆತ್ಮಾ - ಎಲ್ಲರಿಗೂ ಆತ್ಮಸ್ವರೂಪನಾದ ಈ ಭಗವಂತನು, ಯಜತಾಂ-ಯಜ್ಞಮಾಡುವವರಿಗೆ, ಅಮೋಘಾನ್-ಸಾರ್ಥಕಗಳಾದ, ಕಾಮಾನ್-ಇಷ್ಟಾರ್ಥಗಳನ್ನೂ, ಶಂ-ಮೋಕ್ಷ ಸುಖವನ್ನೂ, ತನೋತಿ-ಉಂಟುಮಾಡುತ್ತಾನೋ ॥ ೩೪ ॥

ಸೂತಃ-ಸೂತನು ಹೇಳುತ್ತಾನೆ, ಏವಂ-ಹೀಗೆ, ಪರೀಕ್ಷಿತಾ-ಪರೀಕ್ಷಿತನಿಂದ, ಆದಿಷ್ಟಃ - ಆಜ್ಞಾಪಿ

ಅಧರ್ಮಬಂಧುವಾದ ಕಲಿಯೆ ? ಯಜ್ಞ ಯಾಗಾದಿಗಳ ವಿಧಾನವನ್ನುಬಲ್ಲ ಮಹಾತ್ಮರು ಯಾವಕ್ಷೇತ್ರದಲ್ಲಿ ಯಜ್ಞಪತಿಯಾದ ಮಹಾವಿಷ್ಣುವನ್ನು ಯಜ್ಞಗಳಿಂದಪೂಜಿಸುವರೋ, ಧರ್ಮವು, ಸತ್ಯವು ಸಹ ಎಲ್ಲಿನೆಲೆಗೊಂಡಿರಬೇಕೋ, ಅಂತಹ ಈ ಬ್ರಹ್ಮಾವರ್ತಕ್ಷೇತ್ರದಲ್ಲಿ ನೀನು ವಾಸಮಾಡಕೂಡದು ॥೩೩॥ ಮತ್ತು ಯಾವಕ್ಷೇತ್ರದಲ್ಲಿ ಭಗವಂತನಾದವಿಷ್ಣುವು ವಾಯುವಿನಂತೆ ಸಕಲಚರಾಚರಗಳ ಒಳಗೂ ಹೊರಗೂಸಹ ಆತ್ಮರೂಪನಾಗಿರುವುದರಿಂದ, ಯಜ್ಞಾದಿಗಳನ್ನುಮಾಡಿದವರಿಗೆ ಬೇಕಾದ ಇಷ್ಟಾರ್ಥಗಳನ್ನೂ, ನಿರತಿಶಯಾನಂದರೂಪವಾದ ಮೋಕ್ಷವನ್ನೂ ದಯಪಾಲಿಸುವನೋ ಅಂತಹ ಬ್ರಹ್ಮಾವರ್ತವನ್ನುಳಿದು ನಡೆ, ಎಂದು ಹೇಳಿದನು ॥೩೪॥ ಇಂತು ಪರೀಕ್ಷಿತನಿಂದಾಜ್ಞಪ್ತನಾದ ಕಲಿಯು, ದಂಡಧರನಾದ ಯಮನಂತೆ ಕತ್ತಿಯನ್ನೆತ್ತಿ ಕೊಲ್ಲಲುದ್ಯುಕ್ತನಾಗಿರುವ, ಆ ರಾಜನನ್ನು ಕಂಡು ಕಂಪಿತಗಾತ್ರನಾಗಿ ॥ ೩೫ ॥ ಅಯ್ಯಾ ಪರೀಕ್ಷಿಚ್ಚಕ್ರವರ್ತಿಯೆ ? ನಿನ್ನ ಆಣತಿಯನ್ನು ಶಿರಸಾ ವಹಿಸಿದೆನು. ನಾನೆಲ್ಲಿದ್ದರೂ ಧನುರ್ಧಾರಿಯಾದ ನಿನ್ನನ್ನು ಕಾಣುತ್ತಲೇ ಇರು

---

* ಸರಸ್ವತೀ ದೃಷದ್ವತ್ಯೋರ್ದೇವನದ್ಯೋರ್ಯದಂತರಂ॥ ಸರಸ್ವತೀನದಿಯಿಂದ ದೃಷದ್ವತೀನದಿಯವರೆಗಿರುವ ದೇಶಕ್ಕೆ ಬ್ರಹ್ಮಾವರ್ತವೆಂದು ಹೆಸರು.

ಯತ್ರ ಕ್ವಾಥ ವತ್ಸ್ಯಾಮಿ ಸಾರ್ವಭೌಮ ! ತವಾಜ್ಞಯಾ । ಲಕ್ಷಯೇ ತತ್ರ ತತ್ರಾಪಿ ತ್ವಾ ಮಾತ್ತೇಷು ಶರಾಸನಂ ॥ ೩೬ ॥ ತನ್ಮೇ ಧರ್ಮ ಭೃತಾಂ ಶ್ರೇಷ್ಠ ! ಸ್ಥಾನಂ ನಿರ್ದೇಷ್ಟು ಮರ್ಹಸಿ । ಯತ್ರೈವ ನಿಯ ತೋ ವತ್ಸ್ಯೇ ಆತಿಷ್ಠಂಸ್ತೇಽನುಶಾಸನಂ ॥೩೭॥ ಸೂತಃ ॥ ಅಭ್ಯರ್ಥಿತ ಸ್ತದಾ ತಸ್ಮೈ ಸ್ಥಾನಾನಿ ಕಲಯೇ ದದೌ। ದ್ಯೂತಂ ಪಾನಂ ಸ್ತ್ರಿಯ ಸ್ಸೂನಾ ಯತ್ರಾಧರ್ಮ ಶ್ಚತುರ್ವಿಧಃ ॥ ೩೮ ॥ ಪುನಶ್ಚ ಯಾಚಮಾ ನಾಯ ಜಾತರೂಪ ಮದಾ ತ್ಪ್ರಭುಃ । ತತೋಽನೃತಂ ಮದಂ ಕಾಮಂ

ಸಲ್ಪಟ್ಟ, ಸಕಲಿಃ - ಆ ಕಲಿಯು, ಜಾತವೇಪಥುಃ - ನಡುಕವುಳ್ಳವನಾಗಿ, ಉದ್ಯತಾಸಿಂ-ಕತ್ತಿಯನ್ನು ಎತ್ತಿ, ಉದ್ಯತಂ - ಕೊಲ್ಲುವುದಕ್ಕುದ್ಯುಕ್ತನಾದ, ದಂಡಪಾಣಿಮಿವ - ಯಮನಂತಿರುವ, ತಂ-ಆರಾಜ ನನ್ನು ಕುರಿತು, ಇದಂ-ಈಮಾತನ್ನು, ಆಹ-ಹೇಳುತ್ತಾನೆ. ॥ ೩೫ ॥ ಹೇಸಾರ್ವ ಭೌಮ-ಎಲೈಚಕ್ರ ವರ್ತಿಯೆ ? ತವ-ನಿನ್ನ, ಆಜ್ಞಯಾ-ಅಣತಿಯಿಂದ, ಯತ್ರ ಕ್ವಾಪಿ - ಎಲ್ಲಿಯಾದರೂ, ವತ್ಸ್ಯಾಮಿ-ವಾಸ ಮಾಡುತ್ತೇನೆ. ತತ್ರತತ್ರಾಪಿ - ಅಲ್ಲಿಯೂ, ಆತ್ತೇಷು ಶರಾಸನಂ-ಬಿಲ್ಲು ಬಾಣಗಳನ್ನು ಹಿಡಿದಿರುವ,ತ್ವಾಂ- ನಿನ್ನನ್ನು, ಲಕ್ಷಯೇ-ಕಾಣುವೆನು. ॥ ೩೬ ॥ ಧರ್ಮಭೃತಾಂ - ಧರ್ಮಾತ್ಮರಲ್ಲಿ, ಶ್ರೇಷ್ಠ - ಉತ್ತಮ ನಾದ ಪರೀಕ್ಷಿತನೆ ? ಯತ್ರೈವ-ಎಲ್ಲಿ, ತೇ-ನಿನ್ನ, ಅನುಶಾಸನಂ - ಆಜ್ಞೆಯನ್ನು, ಆತಿಷ್ಠನ್ - ಅನುಸರಿ ಸುತ್ತಾ, ನಿಯತಃ-ಸ್ಥಿರವಾಗಿ, ವತ್ಸ್ಯೇ-ನೆಲಸುವೆನೋ, ತತ್-ಆ, ಸ್ಥಾನಂ-ಸ್ಥಾನವನ್ನು, ನಿರ್ದೇಷ್ಟುಂ- ತೋರುವುದಕ್ಕೆ, ಅರ್ಹಸಿ-ಯೋಗ್ಯನಾಗುತ್ತಿ ॥ ೩೭ ॥ ಸೂತಃ-ಸೂತನು ಹೇಳುತ್ತಾನೆ, ತದಾ-ಆಗ, ಅಭ್ಯರ್ಥಿತಃ-ಬೇಡಲ್ಪಟ್ಟವನಾಗಿ, ಯತ್ರ ಎಲ್ಲಿ, ಚತುರ್ವಿಧಃ-ನಾಲ್ಕುವಿಧವಾದ, ಅಧರ್ಮಃ-ಅಧರ್ಮ ವುಂಟೋ, ಅಂತಹ-ದ್ಯೂತಂ-ಜೂಜು, ಪಾನಂ - ಮದ್ಯಪಾನ, ಸ್ತ್ರಿಯಃ - ಸ್ತ್ರೀಯರು, ಸೂನಾಃ- ಕೊಲೆ, ಇವುಗಳೆಂಬ, ಸ್ಥಾನಾನಿ-ನಾಲ್ಕುಸ್ಥಾನಗಳನ್ನು, ತಸ್ಮೈಕಲಯೇ-ಆ ಕಲಿಗೆ, ದದೌ - ಕೊ ಟ್ಟನು ॥ ೩೮ ॥ ಪ್ರಭುಃ-ಪರೀಕ್ಷಿದ್ರಾಜನು, ಪುನಶ್ಚ - ಮರಳಿ, ಯಾಚಮಾನಾಯ - ಬೇಡುತ್ತಿರುವ ಕಲಿಪುರುಷನಿಗೆ, ಜಾತರೂಪಂ-ಚಿನ್ನವನ್ನೂ, ತತಃ-ಅದರಿಂದ, ಅನೃತಂ-ಸುಳ್ಳು, ಮದಂ-ಮತ್ತತೆ, ಕಾಮಂ-ಸ್ತ್ರೀಸಂಗ, ರಜಃ-ಹಿಂಸೆ, ಪಂಚಮಂ-ಐದನೆಯದಾದ, ವೈರಂಚ-ದ್ವೇಷವು, ಇವುಗಳನ್ನೂ,

---

ವೆನು. ನೀನು ದಯಮಾಡಿ ನಾನು ವಾಸಮಾಡುವುದಕ್ಕೆಲ್ಲಿಯಾದರೂ ಸ್ಥಳವನ್ನುತೋರಿಸಿ ಕಾಪಾಡು, ನಿನ್ನಾಜ್ಞಾನುಸಾರ ವಾಸಮಾಡಿಕೊಂಡಿರುವೆನೆಂದು ಬೇಡಿದನು ॥ ೩೬-೩೭ ॥

ಇಂತು ವಿಜ್ಞಪ್ತನಾದ ಪರೀಕ್ಷಿದ್ರಾಜನು, ಸತ್ಯನಾಶಕರವಾದ ಅನೃತಕ್ಕೆ ನೆಲೆಯೆ ನಿಸಿದ ಜೂಜಾಟವು,ದಯೆಯನ್ನು ಧ್ವಂಸಗೊಳಿಸುವ ಮದಕ್ಕೆತವರೂರಾದ ಮದ್ಯಪಾನವು, ಶೌಚಾಚಾರಗಳನ್ನು ನಾಶಗೊಳಿಸುವ ಸಂಗಕ್ಕೆ ದಾರಿಯೆನಿಸಿದ ನಾರಿಯರು, ಅನೃತಾದಿ ಸರ್ವದೋಷಗಳಿಗೂ ಗಣಿಯಾದಹಿಂಸೆಯು, ಎಂಬ ಈನಾಲ್ಕು ಅಧರ್ಮಸ್ಥಾನಗಳನ್ನು ವಿಂಗಡಿಸಿ ಕಲಿಗೆಕೊಟ್ಟನು ॥ ೩೮ ॥ ಬಳಿಕ ಕಲಿಯು, ಮಹಾರಾಜನೆ ? ಈನಾಲ್ಕು ಅಧರ್ಮಗಳೂ ನೆಲೆಗೊಂಡಿರುವ ಬಂದೇಸ್ಥಾನವನ್ನು ನನಗೆತೋರಿಸಿ ಸಲಹಬೇಕೆಂದು ಮರಳಿಬೇಡಿಕೊಳ್ಳಲು,ಪರೀಕ್ಷಿದ್ರಾಜನು ಅನೃತಮೊದಲಾದ ನಾಲ್ಕುಅಧರ್ಮಗಳೇ ಅಲ್ಲದೆ

ರಜೋ ವೈರಂಚ ಪಂಚಮಂ ॥ ೩೯ ॥ ಅಮೂನಿ ಪಂಚ ಸ್ಥಾನಾನಿ ಹ್ಯ
ಧರ್ಮ ಪ್ರಭವಃ ಕಲಿಃ । ಔತ್ತರೇಯೇಣ ದತ್ತಾನಿ ನ್ಯವಸತ್ತನ್ನಿದೇಶ
ಕೃತ್ ॥೪೦॥ ಅಥೈತಾನಿ ನಸೇವೇತ ಬುಭೂಷುಃ ಪುರುಷಃ ಕ್ವಚಿತ್ ।
ವಿಶೇಷತೋ ಧರ್ಮ ಶೀಲೋ ರಾಜಾ ಲೋಕಪತಿಃ ಗುರುಃ ॥ ೪೧ ॥
ವೃಷಸ್ಯ ನಷ್ಟಾಂ ಸ್ತ್ರೀನ್ ಪಾದಾನ್ ತಪಃ ಶೌಚಂ ದಯಾಮಿತಿ । ಪ್ರತಿ
ಸಂದಧ ಆಶ್ವಾಸ್ಯ ಮಹೀಂಚ ಸಮವರ್ಧಯತ್ ॥ ೪೨ ॥ ಸ ಏಷ ಏ
ತರ್ಹ್ಯ ಧ್ಯಾಸ್ತೇ ಆಸನಂ ಪಾರ್ಥಿವೋಚಿತಂ । ಪಿತಾಮಹೇನೋಪ *ನ್ಯ

ಅದಾತ್-ಕೊಟ್ಟನು. ॥ ೩೯ ॥ ಅಧರ್ಮಪ್ರಭವಃ - ಅಧರ್ಮಗಳಿಗೆ ನೆಲೆಯಾದ, ಕಲಿಃ - ಕಲಿಯು ಔತ್ತರೇಯೇಣ-ಪರೀಕ್ಷಿತನಿಂದ, ದತ್ತಾನಿ-ಕೊಡಲ್ಪಟ್ಟ, ಅಮೂನಿ-ಈ, ಪಂಚ - ಐದು, ಸ್ಥಾನಾನಿ-ಸ್ಥಾನಗಳಲ್ಲಿ, ತನ್ನಿದೇಶಕೃತ್-ಆತನಪ್ಪಣೆಯನ್ನು ನಡೆಯಿಸುತ್ತಾ, ನ್ಯವಸತ್-ವಾಸಮಾಡುತ್ತಿದ್ದನು. ॥

ಅಥ-ಆದುದರಿಂದ, ಬುಭೂಷುಃ-ಬಾಳಬೇಕೆಂದಿರುವವನು, ವಿಶೇಷತಃ - ಅದರಲ್ಲಿಯೂ, ಧರ್ಮಶೀಲಃ-ಧರ್ಮಸ್ವಭಾವವುಳ್ಳ, ಲೋಕಪತಿಃ - ಲೋಕಕ್ಕೊಡೆಯನಾದ, ರಾಜಾ-ದೊರೆಯೂ, ಗುರುಃ-ಧರ್ಮೋಪದೇಶಕನಾದಗುರುವೂ, ಏತಾನಿ-ಇವುಗಳನ್ನು, ಕ್ವಚಿತ್-ಯಾವಾಗಲೂ, ನಸೇವೇತ-ಸೇವಿಸಬಾರದು॥ ವೃಷಸ್ಯ-ವೃಷರೂಪಿಯಾದ ಧರ್ಮನ, ನಷ್ಟಾನ್-ಮುರಿದುಹೋದ, ತಪಃ-ತಪಸ್ಸು, ಶೌಚಂ - ಸದಾಚಾರ, ದಯಾಂ-ಪರದುಃಖಪ್ರಹಾಣೇಚ್ಛೆ, ಇವುಗಳೆಂಬ, ತ್ರೀನ್ - ಮೂರು, ಪಾದಾನ್-ಪಾದಗಳನ್ನು, ಪ್ರತಿಸಂದಧೇ - ಸರಿಪಡಿಸಿದನು, ಮಹೀಂಚ-ಗೋರೂಪಿಣಿಯಾದಭೂಮಿಯನ್ನೂ, ಆಶ್ವಾಸ್ಯ - ಸಮಾಧಾನಗೊಳಿಸಿ, ಸಮವರ್ಧಯತ್-ಸಲಹಿದನು, ॥ ೪೨ ॥ ಸಏಷಃ - ಆ ಈಪರೀಕ್ಷಿದ್ರಾಜನೇ, ಏತರ್ಹಿ-ಈಗಲೂ, ಅರಣ್ಯಂ-ಅರಣ್ಯವನ್ನು, ವಿವಿಕ್ಷತಾ-ಹೊಗಲಪೇಕ್ಷಿಸಿದ, ಪಿತಾಮಹೇನ-ತಾತನಾದ, ರಾಜ್ಞಾ-ಧರ್ಮರಾಜನಿಂದ, ಉಪನ್ಯಸ್ತಂ-ಕೊಡಲ್ಪಟ್ಟ, ಪಾರ್ಥಿವೋಚಿತಂ - ರಾಜರಿಗೆ ಉಚಿತವಾದ, ಆಸನಂ-

ವೈರವೆಂಬ ಐದನೆಯ ಅಧರ್ಮಕ್ಕೂ ಕ್ರೀಡಾಸ್ಥಾನವಾದ ಸುವರ್ಣವೆಂಬ ಐದನೆಯ ಅಧರ್ಮಸ್ಥಾನವನ್ನೂ ತೋರಿಸಿಕೊಟ್ಟನು ॥ ೩೯ ॥ ಆಗ ಅಧರ್ಮಹೇತುವಾದ ಕಲಿಯು ಪರೀಕ್ಷಿದ್ರಾಜನು ತೋರಿಸಿಕೊಟ್ಟ ಈ ಐದು ಪಾಪಸ್ಥಾನಗಳಲ್ಲಿಯೂ ವಿಹರಿಸುತ್ತಾ ಆತನಾಜ್ಞಾನುಸಾರವಾಗಿ ವಾಸಮಾಡುತ್ತಿದ್ದನು ॥ ೪೦ ॥ ಆದುದರಿಂದ ಲೋಕದಲ್ಲಿ ಬಾಳಬೇಕೆಂದಿರುವ ಪುರುಷರೂ, ಅವರಲ್ಲಿಯೂ, ಧರ್ಮಿಷ್ಠರೂ, ದೇಶಾಧಿಪತಿಗಳಾದ, ರಾಜರೂ ಧರ್ಮೋಪದೇಶಕರಾದ ಗುರುಗಳೂ, ಇವರು ಯಾವಾಗಲೂ, ಇವುಗಳನ್ನು ಸೇವಿಸಕೂಡದು ॥೪೧॥ ಅಯ್ಯಾ ಶೌನಕಾದಿಗಳಿರಾ? ಇಂತು ಆಪರೀಕ್ಷಿದ್ರಾಜನು ಕಲಿಯನ್ನು ನಿಗ್ರಹಿಸಿ, ಮುರಿದುಹೋಗಿದ್ದ ಧರ್ಮಪಾದಗಳನ್ನು ಸರಿಪಡಿಸಿ, ತಪಶ್ಶೌಚ ದಯೆಗಳೆಂಬ ಧರ್ಮಗಳನ್ನೂ, ಲೋಕದಲ್ಲಿ ಜೀರ್ಣೋದ್ಧಾರಮಾಡಿ ನೆಲೆಗೊಳಿಸಿದುದಲ್ಲದೆ, ಗೋರೂಪವನ್ನುಧರಿಸಿದ್ದ ಭೂದೇವಿಯನ್ನು ಸಂತೈಸಿ ಧರ್ಮದಿಂದ ಸಲಹಿದನು ॥ ೪೨ ॥ ಪಿತಾಮಹನೆನಿಸಿದ ಧರ್ಮರಾಜನು ಮಹಾಪ್ರಸ್ಥಾನಕ್ಕೆ ತೆರಳುವಾಗ ತನಗಿತ್ತ ವಂಶಪರಂಪರಾಗತವಾದ ಸಿಂಹಾಸನವನ್ನಲಂಕರಿಸಿ ಆತನು ಈಗಲೂ ರಾಜ್ಯಭಾರಂಗೈಯುತ್ತಿ

ಸ್ತಂ ರಾಜ್ಞಾರಣ್ಯಂ ವಿವಿಕ್ಷತಾ ॥ ೪೩ ॥ ಆಸ್ತೇ ಧುನಾ ಸ ರಾಜರ್ಷಿಃ ಕೌರವೇಂದ್ರ ಶ್ರಿಯೋಲ್ಲಸರ್ । ಗಜಾಹ್ವಯೇ ಮಹಾಭಾಗ ಶ್ಚಕ್ರವರ್ತೀ ಬೃಹಚ್ಛ್ರವಾಃ ॥ ೪೪ ॥ ಇತ್ಥಂಭೂತಾನುಭಾವೋಯ ಮಭಿಮನ್ಯುಸುತೋ ನೃಪಃ । ಯಸ್ಯ ಪಾಲಯತಃ ಕ್ಷೋಣೀಂ ಯೂಯಂ ಸತ್ರಾಯ ದೀಕ್ಷಿತಾಃ ॥ ೪೫ ॥

ಇತಿ ಸಪ್ತದಶೋಧ್ಯಾಯಃ

ಸಿಂಹಾಸನದಲ್ಲಿ, ಅಧ್ಯಾಸ್ತೇ-ನೆಲಸಿರುತ್ತಾನೆ. ॥ ೪೩ ॥ ಮಹಾಭಾಗಃ-ಮಹಾಭಾಗ್ಯಶಾಲಿಯೂ, ಬೃಹಚ್ಛ್ರವಾಃ-ಪಂಡಿತೋತ್ತಮನೂ, ಕೌರವೇಂದ್ರಃ - ಕೌರವ ಶ್ರೇಷ್ಠನೂ ಆದ, ಸರಾಜರ್ಷಿಃ - ಆರಾಜಋಷಿಯು, ಅಧುನಾ-ಈಗ, ಶ್ರಿಯಾ - ಚಕ್ರವರ್ತಿ ಸಂಪತ್ತಿನಿಂದ, ಉಲ್ಲಸರ್ - ಪ್ರಕಾಶಿಸುತ್ತಾ, ಗಜಾಹ್ವಯೇ-ಹಸ್ತಿನಾವತಿಯಲ್ಲಿ, ಆಸ್ತೇ-ಇರುತ್ತಾನೆ. ॥ ೪೪ ॥ ಯಸ್ಯ - ಯಾವರಾಜನು, ಕ್ಷೋಣೀಂ-ಭೂಮಿಯನ್ನು, ಪಾಲಯತಃ-ಪಾಲಿಸುತ್ತಿರಲು, ಯೂಯಂ - ನೀವು, ಸತ್ರಾಯ - ಸತ್ರಯಾಗಕ್ಕಾಗಿ, ದೀಕ್ಷಿತಾಃ-ದೀಕ್ಷೆಯನ್ನು ವಹಿಸಿರುವಿರೋ, ಅಭಿಮನ್ಯುಸುತಃ-ಅಭಿಮನ್ಯುವಿನ ಮಗನಾದ, ಅಯಂ-ಈ ನೃಪಃ-ರಾಜನು, ಇತ್ಥಂ...ವಃ, ಇತ್ಥಂಭೂತ-ಇಂತಹ, ಅನುಭಾವಃ-ಮಹಿಮೆಯುಳ್ಳವನು. ॥ ೪೫ ॥

ಸಪ್ತದಶಾಧ್ಯಾಯಂ ಸಮಾಪ್ತಂ

ರುವನು ॥೪೩॥ ಕೌರವ ಕುಲಾವತಂಸನೂ,ಮಹಾಭಾಗ್ಯಶಾಲಿಯೂ,ಪಂಡಿತೋತ್ತಮನೂ, ಭೂಮಂಡಲಾಖಂಡಲನೂ, ಅಭಿಮನ್ಯು ಕುಮಾರನೂ ಆದ, ಆಪರೀಕ್ಷಿದ್ರಾಜರ್ಷಿಯು ಈಗಲೂಹಸ್ತಿನಾವತಿಯಲ್ಲಿ ರಾಜ್ಯಭಾರವನ್ನು ಮಾಡುತ್ತಿರುವುದರಿಂದಲೇ ನೀವು ಈಸತ್ರಯಾಗವನ್ನುಮಾಡುವುದಕ್ಕೆದೀಕ್ಷಿತರಾದಿರಿ, ಆದುದರಿಂದ ಆ ಮಹಾನುಭಾವನಾದ ಪರೀಕ್ಷಿದ್ರಾಜನ ಶೌರ್ಯ ಪ್ರಭಾವಾದಿಗಳನ್ನು ಬಣ್ಣಿಸುವವರಾರು ? ಎಂದು ಸೂತನು ಶೌನಕಾದಿಗಳಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

ಹದಿನೇಳನೆಯ ಅಧ್ಯಾಯಂ ಮುಗಿದುದು

ಓಂ ನಮಃಪರಮಾತ್ಮನೇ.

ಶ್ರೀಸೂತಃ ॥ ಯೋವೈ ದ್ರೌಣ್ಯಸ್ತ್ರವಿಪ್ಲುಷ್ಟೋ ನಮಾತು ರುದರೇ ಮೃತಃ । ಅನುಗ್ರಹಾ ದ್ಭಗವತಃ ಕೃಷ್ಣಸ್ಯಾಽದ್ಭುತಕರ್ಮಣಃ ॥೧॥ ಬ್ರಹ್ಮ ಕೋಪೋತ್ಥಿತಾ ದ್ಯಸ್ತು ತಕ್ಷಕಾತ್ ಪ್ರಾಣವಿಪ್ಲವಾತ್।ನಸಂಮುಮೋಹೋರು ಭಯಾ ದ್ಭಗವತ್ಯರ್ಪಿತಾಶಯಃ ॥೨॥ ಉತ್ಸೃಜ್ಯ ಸರ್ವತ ಸ್ಸಂಗಂ ವಿಜ್ಞಾತಾಽಜಿತಸಂಸ್ಥಿತಿಃ।ವೈಯ್ಯಾಸಿಕೇ ರ್ಜಹೌ ಶಿಷ್ಯೋ ಗಂಗಾಯಾಂ ಸ್ವಕಳೇ

ಸೂತಃ-ಸೂತನು ಹೇಳುತ್ತಾನೆ-ಯಃ-ಯಾವನು, ಮಾತುಃ-ತಾಯಿಯ, ಉದರೇ-ಹೊಟ್ಟೆಯಲ್ಲಿ, ದ್ರೌಣ್ಯ...ಪಿ, ದ್ರೌಣಿ-ಅಶ್ವತ್ಥಾಮನ, ಅಸ್ತ್ರ-ಬಾಣದಿಂದ, ವಿಪ್ಲುಷ್ಟೋಪಿ-ದಹಿಸಲ್ಪಟ್ಟರೂ, ಅದ್ಭುತಕರ್ಮಣಃ-ಆಶ್ಚರ್ಯಕರಗಳಾದ ವ್ಯಾಪಾರಗಳುಳ್ಳ, ಭಗವತಃ-ಭಗವಂತನಾದ, ಕೃಷ್ಣಸ್ಯ-ಕೃಷ್ಣನ, ಅನುಗ್ರಹಾತ್-ಪ್ರಸಾದದಿಂದ, ನಮೃತಃ-ಸಾಯಲಿಲ್ಲವೋ ॥ ೧ ॥ ಯಸ್ತು-ಯಾವನಾದರೆ, ಭಗವತಿ-ಭಗವಂತನಲ್ಲಿ, ಅರ್ಪಿತಾಶಯಃ-ಮನಸ್ಸನ್ನಿಟ್ಟವನಾದುದರಿಂದ, ಬ್ರಹ್ಮ...ತಾತ್, ಬ್ರಹ್ಮ-ಬ್ರಾಹ್ಮಣನ, ಶಾಪ-ಶಾಪದಿಂದ, ಉತ್ಥಿತಾತ್-ಎದ್ದಂಥಾ, ತಕ್ಷಕಾತ್-ತಕ್ಷಕನಿಂದ, (ಉಂಟಾದ) ಪ್ರಾಣವಿಪ್ಲವಾತ್-ಪ್ರಾಣನಾಶದಿಂದಲೂ, ಉರುಭಯಾಚ್ಚ-ಆ ಪ್ರಾಣಭಯದಿಂದಲೂ, ನಸಂಮುಮೋಹ-ಮರುಳಾಗಲಿಲ್ಲವೋ ॥೨॥ ಸಃ-ಆರಾಜನು,ಸರ್ವತಃ-ಎಲ್ಲದರಲ್ಲಿಯೂ, ಸಂಗಂ-ಸಂಗವನ್ನು, ಉತ್ಸೃಜ್ಯ-ಬಿಟ್ಟು, ವಿಜ್ಞಾ...ತಿಃ, ವಿಜ್ಞಾತ-ತಿಳಿಯಲ್ಪಟ್ಟ, ಅಜಿತ-ಶ್ರೀಹರಿಯ, ಸಂಸ್ಥಿತಿಃ-ತತ್ವವುಳ್ಳವನಾಗಿ, ವೈಯಾಸಕೇಃ-ವ್ಯಾಸಪುತ್ರನಾದ ಶುಕಮುನಿಗೆ, ಶಿಷ್ಯಃ-ಶಿಷ್ಯನೆನಿಸಿ, ಗಂಗಾಯಾಂ-ಗಂಗೆಯಲ್ಲಿ, ಸ್ವಕಳೇಬರಂ-ತನ್ನ ಶರೀರವನ್ನು, ಜಹೌ-ಬಿಟ್ಟ

ಪರೀಕ್ಷಿದ್ರಾಜನಿಗೆ ಶಾಪಬಂದುದು

ಕಂ॥ ಶೃಂಗಿಮುನಿಶಾಪದಿಂ ಮುನಿ।
ಪುಂಗವನಹ ವಿಷ್ಣುರಾತ ನೆದೆಗುಂದದೆ ದು ।
ಸ್ಸಂಗವ ನುಳಿದದು ತನಗತಿ ।
ಮಂಗಳಮೆಂದರಿದ ಬಗೆಯನಿದರೊಳ್ ಪೇಳ್ವೆಂ ॥

ಅಯ್ಯಾ ಶೌನಕಾದಿಗಳಿರಾ ! ಕೇಳಿರಿ. ಆ ರಾಜನೆಂದರೆ ಸಾಮಾನ್ಯನಲ್ಲ. ಯಾವ ಮಹಾತ್ಮನು ತಾಯಿಯ ಗರ್ಭದಲ್ಲಿರುವಾಗ ಕ್ರುದ್ಧನಾದ ಅಶ್ವತ್ಥಾಮನಿಂದ ಬಿಡಲ್ಪಟ್ಟ ಬ್ರಹ್ಮಾಸ್ತ್ರದಿಂದ ಸುಡಲ್ಪಟ್ಟರೂ,ಅದ್ಭುತಮಹಿಮನಾದ ಶ್ರೀಕೃಷ್ಣಭಗವಂತನ ಅನುಗ್ರಹದಿಂದ ಸಾಯದೇ ಬದುಕಿಕೊಂಡನೋ ॥ ೧ ॥ ಯಾವನು ಭಗವಂತನಲ್ಲಿ ಅನನ್ಯಭಾವವನ್ನಿಟ್ಟು ಬ್ರಾಹ್ಮಣಶಾಪದಿಂದ ಬಂದ ತಕ್ಷಕನೆಂಬ ಸರ್ಪರಾಜನಿಂದ ಪ್ರಾಣನಾಶವುಂಟಾಗುತ್ತಿದ್ದರೂ, ಆ ಪ್ರಾಣಭಯವು ಸನ್ನಿಹಿತವಾಗಿದ್ದರೂ, ಹೆದರಲಿಲ್ಲವೋ ॥ ೨ ॥ ಅಂತಹ ಧೀರನಾದ ಪರೀಕ್ಷಿದ್ರಾಜನು ರಾಜ್ಯವೊದಲಾದ ಸಕಲ ವಿಷಯಗಳಲ್ಲಿಯೂ ಸಂಗವನ್ನು ಳಿದು, ವ್ಯಾಸಪುತ್ರನಾದ ಶುಕಮುನಿಗೆ ಶಿಷ್ಯನೆನಿಸಿ ಪರತತ್ವವನ್ನು ತಿಳಿದವನಾಗಿ ಗಂಗೆಯಲ್ಲಿ ತನ್ನ ಕಳೇಬರವನ್ನು ತ್ಯಜಿಸಿದನು ॥ ೩ ॥ ಯಾವಾಗಲೂ ಭಗವದ್ಭಜನವನ್ನು

ಬರಂ ॥೩॥ ನೋತ್ತಮಶ್ಲೋಕವಾರ್ತಾನಾಂ ಜುಷತಾಂ ತತ್ಕಥಾಮೃತಂ ।
ಸ್ಯಾ ತ್ಸಂಭ್ರಮೋಽಂತಕಾಲೇಪಿ ಸ್ಮರತಾಂ ತತ್ಪದಾಂಬುಜಂ॥೪॥ತಾವತ್ಕಲಿ
ರ್ನಪ್ರಭವೇ ತ್ಪ್ರವಿಷ್ಟೋಪೀಹ ಸರ್ವತಃ।ಯಾವದೀಶೋ ಮಹಾ ನುರ್ವ್ಯಾ
ಆಭಿಮನ್ಯವ ಏಕರಾಟ್ ॥೫॥ ಯಸ್ಮಿ ನ್ನಹನಿ ಯರ್ಹ್ಯೇವ ಭಗವಾ ನುತ್ಸಸ
ರ್ಜ ಗಾಂ । ತದೈವೇಹಾ ನುವೃತ್ತೋಽಸಾ ವಧರ್ಮಪ್ರಭವಃ ಕಲಿಃ॥೬॥ನಾ
ನುದ್ವೇಷ್ಟಿ ಕಲಿಂ ಸಮ್ರಾಟ್ ಸಾರಂಗ ಇವ ಸಾರಭುಕ್ । ಕುಶಲಾ

ನು ॥ ೩ ॥ ಉತ್ತಮ...ನಾಂ, ಉತ್ತಮಶ್ಲೋಕ-ಭಗವಂತನ, ವಾರ್ತಾನಾಂ-ವೃತ್ತಾಂತವುಳ್ಳವರಾದುದ ರಿಂದಲೇ, ತತ್ಕಥಾಮೃತಂ-ಆ ಭಗವಂತನ ಕಥೆಯೆಂಬ ಅಮೃತವನ್ನು, ಜುಷತಾಂ-ಪಾನಮಾಡುತ್ತಿರುವ, ತತ್ಪದಾಂಬುಜಂ-ಆತನಪಾದ ಕಮಲವನ್ನು, ಸ್ಮರತಾಂ-ಸ್ಮರಿಸುತ್ತಿರುವ, ಭಕ್ತರಿಗೆ, ಅಂತಕಾಲೇಪಿ-ಮರಣಸಮಯದಲ್ಲಿಯೂ, ಸಂಭ್ರಮಃ-ಅಜ್ಞಾನವು, ನಸ್ಯಾತ್-ಉಂಟಾಗಲಾರದು ॥ ೪ ॥ ಈಶಃ-ಒಡೆಯನಾದ, ಮಹಾನ್-ಪೂಜ್ಯನಾದ ಆಭಿಮನ್ಯವಃ-ಅಭಿಮನ್ಯು ಕುಮಾರನಾದ ಪರೀಕ್ಷಿತನು, ಯಾವತ್-ಎಲ್ಲಿಯುವರೆಗೆ ಉರ್ವ್ಯಾಃ-ಭೂಮಿಗೆ, ಏಕರಾಟ್-ಚಕ್ರವರ್ತಿಯಾಗಿರುವನೋ, ತಾವತ್-ಅಲ್ಲಿಯುವರೆಗೆ, ಇಹ-ಈ ಲೋಕ ದಲ್ಲಿ, ಸರ್ವತಃ-ಎಲ್ಲಾ ಕಡೆಯಲ್ಲಿಯೂ, ಕಲಿಃ-ಕಲಿಪುರುಷನು, ಪ್ರವಿಷ್ಟೋಪಿ-ಪ್ರವೇಶಿಸಿದ್ದರೂ, ನಪ್ರಭ ವೇತ್-ತನ್ನ ಅಧಿಕಾರವನ್ನು ನಡೆಯಿಸಲಾರನು ॥ ೫ ॥

ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನು, ಯಸ್ಮಿನ್-ಯಾವ, ಅಹನಿ-ದಿನದಲ್ಲಿ, ಯರ್ಹ್ಯೇವ-ಯಾವ ಕ್ಷಣದಲ್ಲಿಯೇ, ಗಾಂ-ಭೂಮಿಯನ್ನು, ಉತ್ಸಸರ್ಜ-ಬಿಟ್ಟನೋ, ತದೈವ-ಆಗಲೇ ಅಧ ರ್ಮಪ್ರಭವಃ-ಅಧರ್ಮಗಳಿಗೆ ಕಾರಣನಾದ, ಅಸೌಕಲಿಃ-ಈ ಕಲಿಯು, ಇಹ-ಈ ಲೋಕದಲ್ಲಿ, ಅನು ವೃತ್ತಃ-ಪ್ರವೇಶಿಸಿದನು ॥ ೬ ॥ ಯತ್-ಯಾವಕಾರಣದಿಂದ, ಕುಶಲಾನಿ-ಪುಣ್ಯಗಳು, ಆಶು-ಬೇಗನೆ, ಸಿಧ್ಯಂತಿ-ಸಿದ್ಧಿಸುವುವೋ, ಇತರಾಣಿ-ಪಾಪಗಳು, ನ, ಇಲ್ಲವೋ, ಆ ಪಾಪಗಳೂ, ಕೃತಾನಿ-ಮಾಡಲ್ಪಟ್ಟ ವುಗಳೇ ಅಲ್ಲದೆ ಸಂಕಲ್ಪಿಸಿದ ಮಾತ್ರದಿಂದ ಉಂಟಾಗುವುದಿಲ್ಲವೋ ತತ್-ಆದುದರಿಂದ, ಸಾರಂಗಇವ-

ಮಾಡುತ್ತಾ, ಭಗವತ್ಕಥಾಮೃತವನ್ನು ಸವಿಯುತ್ತಾ, ಭಗವಂತನ ಪಾದಕಮಲವನ್ನು ಸ್ಮರಿಸುತ್ತಿರುವ ಭಕ್ತರಿಗೆ ಮರಣಕಾಲದಲ್ಲಿಯೂ, ಮೋಹವುಂಟಾಗುವುದಿಲ್ಲವೆಂಬುದೇನಾಶ್ಚರ್ಯವಲ್ಲ ॥ ೪ ॥ ಇಂತಿರುವಲ್ಲಿ ಈ ರಾಜನನ್ನು ಹೇಳುವುದೇನು ? ಮಹಾತ್ಮನೂ, ಅಭಿಮನ್ಯುಕುಮಾರನೂ ಆದ ಇವನು ಎಲ್ಲಿಯುವರಗೆ ಏಕಛತ್ರಾಧಿಪತಿಯಾಗಿ ಭೂಮಿಯನ್ನಾಳುವನೋ, ಅಲ್ಲಿಯುವರೆಗೂ ಕಲಿಪುರುಷನು ಪ್ರವೇಶಿಸಿದ್ದರೂ ಅವನ ಅಧಿಕಾರವೇನೂ ನಡೆಯಲಾರದು. ॥ ೫ ॥ ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣಮೂರ್ತಿಯು ಯಾವದಿನ ಯಾವಕ್ಷಣದಲ್ಲಿ ಭೂಲೋಕವನ್ನು ಬಿಟ್ಟನೋ, ಆಗಲೇ ಅಧರ್ಮಗಳಿಗೆ ತವರೂರಾದ ಕಲಿಯು ಈ ಲೋಕವನ್ನು ಪ್ರವೇಶಿಸಿದನು ॥ ೬ ॥ ಇಂತು ಮೊದಲೇ ಪ್ರವೇಶಿಸಿರುವ ಕಲಿಯನ್ನು ನಿಗ್ರಹಿಸಬಹುದಾಗಿದ್ದರೂ, ಈ ಕಲಿಯುಗದಲ್ಲಿ ಪುಣ್ಯಕರ್ಮಗಳನ್ನು ಮಾಡಿದರಾಗಲಿ, ಅಥವಾ ಸಂಕಲ್ಪಿಸಿದ ಮಾತ್ರದಿಂದಾಗಲಿ, ಆ ಫಲಗಳು ಬೇಗನೆ ಸಿದ್ಧಿಸುವುದರಿಂದಲೂ, ಪಾಪಕಾರ್ಯಗಳನ್ನು ಮಾಡಿದಲ್ಲದೆ ಸಂಕಲ್ಪಮಾತ್ರದಿಂದ ಆ ಪಾಪಫಲವುಂಟಾಗದಿರುವುದರಿಂದಲೂ, ಕಲಿಪ್ರಚಾರವು ಲೋಕಕ್ಕೆ ಉಪಕಾರವೇ ಆಗಿ

ನ್ಯಾಶು ಸಿಧ್ಯಂತಿ ನೇತರಾಣಿ ಕೃತಾನಿ ಯತ್ ॥೭॥ ಕಿನ್ನು? ಬಾಲೇಷು ಶೂರೇಣ ಕಲಿನಾ ಧೀರಭೀರುಣಾ। ಅಪ್ರಮತ್ತಃ ಪ್ರಮತ್ತೇಷು ಯೋ ವೃಕೋ ನೃಷು ವರ್ತತೇ ॥೮॥ ಉಪವರ್ಣಿತ ಮೇತದ್ವಃ ಪುಣ್ಯಂ ಪಾರೀಕ್ಷಿತಂ ಮಯಾ। ವಾಸುದೇವಕಥೋಪೇತ ಮಾಖ್ಯಾನಂ ಯದಪೃಚ್ಛತ ॥೯॥ ಯಾ ಯಾಃ ಕಥಾ ಭಗವತಃ ಕಥನೀಯೋರುಕರ್ಮಣಃ। ಗುಣಕರ್ಮಾಶ್ರಿತಾಃ ಪುಂಭಿ ಸ್ಸೇವ್ಯಾ ಸ್ತಾಸ್ತಾ ಬುಭೂಷುಭಿಃ॥೧೦॥ಋಷಯಃ॥ಸೂತ ! ಜೀವ ಸಮಾ ಸ್ಸೌಮ್ಯ ಶಾಶ್ವತೀ ರ್ವಿಶದಂ ಯಶಃ। ಯಸ್ತ್ವಂ ಶಂಸಸಿ ಕೃಷ್ಣ

ಭ್ರಮರದಂತೆ, ಸಾರಭುಕ್-ಸಾರಗ್ರಾಹಿಯಾದ, ಸಮ್ರಾಟ್-ಪರೀಕ್ಷಿಚ್ಚಕ್ರವರ್ತಿಯು, ಕಲಿಂ-ಕಲಿಯನ್ನು ನಾನುದ್ವೇಷ್ಟಿ-ದ್ವೇಷಿಸುವುದಿಲ್ಲ ॥ ೭ ॥ ಯಃ-ಯಾವ ಕಲಿಯು, ಪ್ರಮತ್ತೇಷು-ಮೈಮರೆತಿರುವ, ನೃಷು-ಪುರುಷರಲ್ಲಿ, ವೃಕಇವ-ತೋಳನಂತೆ, ಅಪ್ರಮತ್ತಃ-ಜಾಗರೂಕನಾಗಿ, ವರ್ತತೇ-ಇರುವನೋ, ಅಂತಹ, ಬಾಲೇಷು-ಅಂಜಿದವರಲ್ಲಿ, ಶೂರೇಣ-ಶೂರನಾದ, ಧೀರಭೀರುಣಾ-ಧೀರರಿಗೆ ಹೆದರುವ, ಕಲಿನಾ-ಕಲಿಯಿಂದ ಕಿನ್ನು-ಏನುಪ್ರಯೋಜನವು ॥ ೮ ॥ ಯತ್-ಯಾವುದನ್ನು, ಅಪೃಚ್ಛತ-ಪ್ರಶ್ನೆಮಾಡಿದಿರೋ, ಏತತ್-ಈ, ವಾಸು...ಪೇತಂ, ವಾಸುದೇವ-ಶ್ರೀಹರಿಯ, ಕಥಾ-ಚರಿತ್ರೆಯಿಂದ, ಉಪೇತಂ-ಕೂಡಿರುವ, ಪುಣ್ಯಂ-ಪುಣ್ಯಕರವಾದ, ಪಾರೀಕ್ಷಿತಂ-ಪರೀಕ್ಷಿದ್ರಾಜನ ಸಂಬಂಧಿಯಾದ, ಆಖ್ಯಾನಂ-ಇತಿಹಾಸವು, ವಃ-ನಿಮಗೆ ಉಪವರ್ಣಿತಂ-ವಿವರಿಸಲ್ಪಟ್ಟಿತು ॥ ೯ ॥ ಕಥ...ಣಃ, ಕಥನೀಯ-ಹೊಗಳಲ್ಪಡತಕ್ಕ, ಉರು-ಅದ್ಭುತಗಳಾದ, ಕರ್ಮಣಃ-ಕಾರ್ಯಗಳುಳ್ಳ, ಭಗವತಃ-ಭಗವಂತನ, ಗುಣ...ತಾಃ-ಗುಣ-ಗುಣಗಳನ್ನು, ಕರ್ಮ-ಕರ್ಮಗಳನ್ನು, ಆಶ್ರಿತಾಃ-ಆಶ್ರಯಿಸಿರುವ, ಯಾಃ ಯಾಃ-ಯಾವ ಯಾವ, ಕಥಾಃ-ಕಥೆಗಳುಂಟೋ, ಬುಭೂಷುಭಿಃ-ಬಾಳಲೆಳಸುವವರಿಂದ, ತಾಸ್ತಾಃ-ಆ ಆ ಕಥೆಗಳು, ಸೇವ್ಯಾಃ-ಸೇವಿಸಲ್ಪಡತಕ್ಕವುಗಳು ॥ ೧೦ ॥ ಋಷಯಃ-ಋಷಿಗಳು ಹೇಳುತ್ತಾರೆ, ಸೌಮ್ಯ-ಉಪಶಾಂತನಾದ, ಸೂತ-ಸೂತನೆ ? ಯಸ್ತ್ವಂ-ಯಾವ ನೀನು, ಮರ್ತ್ಯಾನಾಂ-ಮರಣಶೀಲರಾದ ನಮಗೆ, ಅಮೃತಂ-ಮರಣವನ್ನು ಹೋಗಲಾಡಿಸುವ, ಕೃ

ರುವುದೆಂದೆಣಿಸಿ ಭ್ರಮರದಂತೆ ಸಾರಗ್ರಾಹಿಯಾದುದರಿಂದಾರಾಜನು ಕಲಿಯನ್ನು ನಿಗ್ರಹಿಸಲಿಲ್ಲ ॥ ೭ ॥ ಮತ್ತು ಯಾವಕಲಿಯು ಅಂಜಿದವರನ್ನು ಅಂಜಿಸುತ್ತಾ, ಅಂಜಿಸುವವರಿಗೆ ಅಂಜುತ್ತಾ, ಕುರಿಗಳನ್ನು ಹಿಡಿಯುವುದಕ್ಕೆ ಕಾಯುವ ತೋಳನಂತೆ, ಮೈಮರೆತವರನ್ನು ಹಿಡಿವುದಕ್ಕಾಗಿ ಎಚ್ಚರದಿಂದ ಕಾದಿರುವನೋ, ಅಂತಹ ಹೇಡಿಯಿಂದೇನುಪ್ರಯೋಜನ? ಎಂದು ಅವನನ್ನು ದ್ವೇಷಿಸಲೂ ಇಲ್ಲ ॥ ೮ ॥

ಅಯ್ಯಾ ಶ್ರೋತೃಗಳಿರಾ ! ಇದೋ ನೀವು ಪ್ರಶ್ನೆಮಾಡಿದಂತೆ ಶ್ರೀಕೃಷ್ಣಚರಿತ್ರೆಯಿಂದೊಡಗೂಡಿ ಪಾವನವೆನಿಸಿರುವ ಈ ಪರೀಕ್ಷಿದ್ರಾಜನ ವೃತ್ತಾಂತವನ್ನು ನಿಮಗೆ ವಿವರಿಸಿ ಹೇಳಿದೆನು ॥ ೯ ॥ ಬಹಳ ಮಾತೇಕೆ ? ಸಕಲ ಶಾಸ್ತ್ರಸಾರವನ್ನು ಹೇಳುವೆನು ಕೇಳಿರಿ--ಸುಖವಾಗಿ ಲೋಕದಲ್ಲಿ ಬಾಳಬೇಕೆಂದಿರುವವರೆಲ್ಲರೂ ವರ್ಣನೀಯವಾದ ಚರಿತ್ರೆಯುಳ್ಳ ಭಗವಂತನ ಗುಣಗಳನ್ನೂ,ಅದ್ಭುತಕರ್ಮಗಳನ್ನೂ,ಪ್ರಕಾಶಗೊಳಿಸುವ ಯಾವ ಯಾವ ಚರಿತ್ರೆಗಳುಂಟೋ, ಅವುಗಳನ್ನು ಕೇಳಿ ಧನ್ಯರಾಗಬೇಕು,ಎಂದು ನುಡಿದನು॥೧೦॥ ಬಳಿಕ ಶೌನಕಾದಿ ಮಹರ್ಷಿಗಳು ಆ ಸೂತನನ್ನು ಕುರಿತು:-ಅಯ್ಯಾ ಸೌಮ್ಯನಾದ ಸೂತ

ಸ್ಯ ಮರ್ತ್ಯಾನಾ ಮಮೃತಂಹಿ ನಃ ॥೧೧॥ ಕರ್ಮಣ್ಯಸ್ಮಿ ನ್ನನಾಶ್ವಾಸ್ಯೇ ಧೂಮ ಧೂಮ್ರಾತ್ಮನಾಂ ಭವಾ೯। ಆಪಾಯಯತಿ ಗೋವಿಂದ ಪಾದಪದ್ಮಾ ಸವಂ ಮಧು ॥೧೨॥ ತುಲಯಾಮ ಲವೇನಾಪಿ ನಸ್ವರ್ಗಂ ನಾಪುನರ್ಭವಂ। ಭಗವತ್ಸಂಗಿಸಂಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥೧೩॥ ಕೋನಾಮ ತೃಪ್ಯೇ ದ್ರಸವಿತ್ಕಥಾಯಾಂ ಮಹತ್ತಮೈಕಾಂತ ಪರಾಯಣಸ್ಯ । ನಾಂತಂ ಗುಣಾನಾ ಮಗುಣಸ್ಯ ಜಗ್ಮು ರ್ಯೋಗೇಶ್ವರಾ ಯೇ ಭವಪಾದ್ಮಮು

ಷ್ಣಸ್ಯ-ಕೃಷ್ಣನ, ವಿಶದಂ-ಪರಿಶುದ್ಧವಾದ, ಯಶಃ-ಮಹಿಮೆಯನ್ನು, ಶಂಶಸಿ-ಹೇಳುತ್ತೀಯೋ, ಅಂತಹ ನೀನು, ಶಾಶ್ವತೀಃ-ಅನೇಕ, ಸಮಾಃ-ವರ್ಷಗಳು, ಜೀವ-ಬದುಕು ॥ ೧೧ ॥ ಅನಾಶ್ವಾಸ್ಯೇ-ನಂಬಲ್ಪಡದಿರುವ, ಅಸ್ಮಿನ್-ಕರ್ಮಣಿ-ಈ ಸತ್ರಯಾಗದಲ್ಲಿ, ಧೂಮ...ನಾಂ, ಧೂಮ-ಹೊಗೆಯಿಂದ, ಧೂಮ್ರ-ವಿವರ್ಣವಾದ, ಆತ್ಮನಾಂ-ಶರೀರವುಳ್ಳ ನಮಗೆ, ಭವಾ೯-ನೀನು, ಮಧು-ಮಧುರವಾದ, ಗೋವಿಂದ...ಸವಂ, ಗೋವಿಂದ-ಶ್ರೀವಿಷ್ಣುವಿನ, ಪಾದಪದ್ಮ-ಪಾದಕಮಲದ, ಆಸವಂ-ಮಕರಂದವನ್ನು, ಆಪಾಯಯತಿ-ಪಾನಮಾಡಿಸುತ್ತಿರುವೆ, ॥ ೧೨ ॥ ಭಗ...ಸ್ಯ, ಭಗವತ್-ಭಗವಂತನಲ್ಲಿ ಸಂಗಿ-ಸಂಗವುಳ್ಳ ಭಕ್ತರ, ಸಂಗಸ್ಯ-ಸಹವಾಸದ, ಲವೇನಾಪಿ-ಲೇಶದಿಂದಲೂ, ಸ್ವರ್ಗಂ-ಸ್ವರ್ಗವನ್ನು, ಅಪುನರ್ಭವಂ-ಮೋಕ್ಷವನ್ನೂ, ನತುಲಯಾಮ-ಸಮವಾಗಿ ತೂಗಲಾರೆವು, ಮರ್ತ್ಯಾನಾಂ-ಸಾಯತಕ್ಕ ಮನುಷ್ಯರ, ಆಶಿಷಃ-ರಾಜ್ಯಾದಿಸಂಪತ್ತುಗಳನ್ನು, ಕಿಮುತ-ಹೇಳುವುದೇನು ? ॥ ೧೩ ॥ ಮಹತ್ತ...ಸ್ಯ, ಮಹತ್ತಮ-ಅತ್ಯಂತವಂದನೀಯರಿಗೂ, ಏಕಾಂತ-ಮುಖ್ಯವಾಗಿ, ಪರಾಯಣಸ್ಯ-ಪ್ರಾಪ್ಯಸ್ಥಾನವಾಗಿರುವ ಭಗವಂತನ, ಕಥಾಯಾಂ-ಕಥೆಯಲ್ಲಿ, ರಸವಿತ್-ರುಚಿಯನ್ನು ತಿಳಿದ, ಕೋನಾಮ-ಯಾವನು ತಾನೇ, ತೃಪ್ಯೇತ್-ತೃಪ್ತನಾದಾನು ? ಅಗುಣಸ್ಯ-ಪ್ರಾಕೃತಗುಣರಹಿತನಾದ, ಯಸ್ಯ-ಯಾವ ಭಗವಂತನ, ಗುಣಾನಾಂ-ಕಲ್ಯಾಣಗುಣಗಳ, ಅಂತಂ-ಕಡೆಯನ್ನು, ಭವ...ಖ್ಯಾಃ, ಭವ-ಶಿವನು, ಪಾದ್ಮ-ಪದ್ಮದಲ್ಲಿ, ಹುಟ್ಟಿದ ಬ್ರಹ್ಮನು, ಮುಖ್ಯಾಃ-ಇವರೇ

ಪೌರಾಣಿಕನೆ ! ಸಾಯತಕ್ಕವರಾಗಿರುವ ನಮಗೆ ಸಾವನ್ನು ಹೋಗಲಾಡಿಸುವ ಭಗವಂತನ ವಿಶುದ್ಧವಾದ ಯಶಸ್ಸನ್ನುತಿಳಿಯಪಡಿಸಿದೆಯಾದುದರಿಂದ ನೀನು ದೀರ್ಘಾಯುಷ್ಯವನ್ನು ಪಡೆದು ಬಾಳು ॥ ೧೧ ॥ ಅನೇಕ ವಿಘ್ನಗಳಿಂದ ಫಲವಾಗುತ್ತೆಂಬ ನಿಶ್ಚಯವಿಲ್ಲವಾದುದರಿಂದ ನಂಬುಗೆಯಿಲ್ಲದಿರುವ ಈ ಸತ್ರಯಾಗದಲ್ಲಿ ಹೋಮಧೂಮಗಳಿಂದ ವಿವರ್ಣವಾದ ಶರೀರವುಳ್ಳ ನಮಗೆ ಅತಿ ರುಚಿಕರವಾದ ಭಗವತ್ಕಥಾಮೃತವನ್ನು ಪಾನಮಾಡಿಸುತ್ತಿರುವೆ ॥ ೧೨ ॥ ಸ್ವರ್ಗ ಮೊದಲಾದುತ್ತಮಲೋಕಗಳೂ ಪುನರ್ಜನ್ಮಾದಿಗಳಿಲ್ಲದ ಮೋಕ್ಷವೂಸಹ, ಭಗವದ್ಭಕ್ತರೊಡನೆ ಒಂದುಕ್ಷಣ ವಾಸಮಾಡುವುದರಿಂದುಂಟಾಗುವ ಸುಖದ ಲೇಶವನ್ನು ಕೂಡಾ ಹೋಲಲಾರವು. ಇಂತಿರುವಾಗ ಅತಿತುಚ್ಛಗಳಾದ ಮಾನುಷಭೋಗಗಳನ್ನು ಹೇಳುವುದೇನು? ॥ ೧೩ ॥ ಪ್ರಾಕೃತಗುಣರಹಿತನಾದ ಯಾವ ಭಗವಂತನ ಕಲ್ಯಾಣಗುಣಗಳ ಪಾರವನ್ನು ಮಹಾಮಹಿಮರಾದ ಬ್ರಹ್ಮರುದ್ರಾದಿಗಳೂ ಕಾಣಲಿಲ್ಲವೋ, ಮಹನೀಯರಿಗೆ ಮುಖ್ಯಾಶ್ರಯನಾಗಿರುವ ಅಂತಹ ಶ್ರೀಕೃಷ್ಣಮೂರ್ತಿಯ ಚರಿತ್ರೆಯಲ್ಲಿ

ಖ್ಯಾಃ ॥೧೪॥ ತತೋ ಭವಾನ್ ವೈ ಭಗವತ್ಪ್ರಧಾನೋ ಮಹತ್ತಮೈಕಾಂ
ತಪರಾಯಣಸ್ಯ । ಹರೇ ರುದಾರಂ ಚರಿತಂ ವಿಶುದ್ಧಂ ಶುಶ್ರೂಷತಾಂ ನೋ
ವಿತನೋತು ವಿದ್ವನ್! ॥೧೫॥ ಸ ವೈ ಮಹಾಭಾಗವತಃ ಪರೀಕ್ಷಿ ದ್ಯೇನಾಪವ
ರ್ಗಾಖ್ಯ ಮದಭ್ರಬುದ್ಧಿಃ। ಜ್ಞಾನೇನ ವೈಯ್ಯಾಸಕಿಶಬ್ದಿತೇನ ಭೇಜೇ ಖಗೇಂ
ದ್ರಧ್ವಜಪಾದಮೂಲಂ ॥೧೬॥ ತನ್ನಃ ಪರಂ ಪುಣ್ಯ ಮಸಂವೃತಾರ್ಥ ಮಾ
ಖ್ಯಾನ ಮತ್ಯದ್ಭುತಯೋಗನಿಷ್ಠಂ । ಆಖ್ಯಾಹ್ಯನಂತಾ ಚರಿತೋಪಪನ್ನಂ

ಮೊದಲಾದ,ಯೇ-ಯಾವ,ಯೋಗೇಶ್ವರಾಃ-ಮಹಾತ್ಮರುಂಟೋ, ಅವರೂ, ನಜಗ್ಮುಃ-ಹೊಂದಲಿಲ್ಲವೋ॥೧೪॥ ತತಃ-ಆದುದರಿಂದ, ಹೇವಿದ್ವನ್-ಎಲೈ ಪ್ರಾಜ್ಞನೆ? ಭಗವತ್ಪ್ರಧಾನಃ-ಭಗವಂತನೇ ಆಶ್ರಯವಾಗುಳ್ಳ-ಭವಾನ್-ನೀನು, ಮಹತ್ತ...ಸ್ಯ, ಮಹತ್ತಮ-ಮಹಾತ್ಮರಿಗೆ, ಏಕಾಂತ-ಅನನ್ಯವಾದ, ಪರಾಯಣಸ್ಯ-ಆಶ್ರಯವೆನಿಸಿರುವ, ಹರೇಃ-ಶ್ರೀಹರಿಯ, ಉದಾರಂ-ಪರಮಪುರುಷಾರ್ಥವನ್ನು ಕೊಡುವ, ವಿಶುದ್ಧಂ-ಪರಿಶುದ್ಧವಾದ, ಚರಿತಂ-ಚರಿತ್ರೆಯನ್ನು, ಶುಶ್ರೂಷತಾಂ-ಕೇಳಲಪೇಕ್ಷಿಸುವ, ನಃ-ನಮಗೆ, ವಿತನೋತು-ವಿವರಿಸು ॥ ೧೫ ॥ ಅದಭ್ರಬುದ್ಧಿಃ- ಅದಭ್ರ-ಅಧಿಕವಾದ, ಬುದ್ಧಿಃ-ತಿಳುವಳಿಕೆಯುಳ್ಳ, ಮಹಾಭಾಗವತಃ, ಭಕ್ತಾಗ್ರೇಸರನಾದ, ಸಪರೀಕ್ಷಿತ್-ಆಪರೀಕ್ಷಿದ್ರಾಜನು, ವೈಯ್ಯಾ...ನ, ವೈಯ್ಯಾಸಕಿ-ವ್ಯಾಸಪುತ್ರನಾದ ಶುಕನಿಂದ, ಶಬ್ದಿತೇನ-ಹೇಳಲ್ಪಟ್ಟ, ಯೇನ-ಯಾವ ಜ್ಞಾನೇನ-ಜ್ಞಾನಸಾಧನದಿಂದ, ಅಪವರ್ಗಾಖ್ಯಂ-ಮೋಕ್ಷನೆಂದು ಕರೆಯಲ್ಪಡುವ, ಖಗೇಂದ್ರ...ಲಂ, ಖಗೇಂದ್ರ-ಗರುಡನೆ, ಧ್ವಜ-ಧ್ವಜದಲ್ಲುಳ್ಳ ಭಗವಂತನ-ಪಾದಮೂಲಂ-ಚರಣಸನ್ನಿಧಿಯನ್ನು, ಭೇಜೇ-ಹೊಂದಿದನೋ ॥ ೧೬ ॥

ತತ್-ಅಂತಹ, ಪರಂ-ಶ್ರೇಷ್ಠವಾದ, ಪುಣ್ಯಂ-ಸತ್ವಗುಣವನ್ನುಂಟುಮಾಡುವ, ಅತ್ಯದ್ಭು...ಷ್ಠಂ ಅತ್ಯದ್ಭುತ-ಅತ್ಯಾಶ್ಚರ್ಯಕರವಾದ, ಯೋಗ-ಆತ್ಮಜ್ಞಾನದಲ್ಲಿ, ನಿಷ್ಠಂ-ನೆಲೆಯುಳ್ಳ, ಪಾರೀಕ್ಷಿತಂ-ಪರೀಕ್ಷಿದ್ರಾಜನಿಗೆ ಹೇಳಲ್ಪಟ್ಟ, ಅನಂತಾ...ನ್ನಂ, ಅನಂತ-ವಾಸುದೇವಮೂರ್ತಿಯ, ಆಚರಿತ-ನಡವಳಿಗಳಿಂದ, ಉಪಪನ್ನಂ-ಕೂಡಿರುವುದರಿಂದಲೇ, ಭಾಗವತಾಭಿರಾಮಂ-ಭಕ್ತರಿಗೆ ಮನೋಹರವಾದ, ಆಖ್ಯಾನಂ-ಇತಿಹಾಸವನ್ನು, ಅಸಂವೃತಾರ್ಥಂ ಯಥಾ ತಥಾ, ಅಸಂವೃತ-ಮರೆಮಾಚಲ್ಪಡದಿರುವ, ಅರ್ಥಂ ಯಥಾತಥಾ,

---

ರಸಜ್ಞನಾದ ಯಾವನುತಾನೇ ತೃಪ್ತನಾದಾನು ? ॥ ೧೪ ॥ ಆದುದರಿಂದ ಎಲೈ ಪ್ರಾಜ್ಞಶಿರೋಮಣಿಯೆ ! ಸರ್ವಾತ್ಮನಾದ ಭಗವಂತನನ್ನೇ ನಂಬಿರುವ ಭಕ್ತಶಿರೋಮಣಿಯಾದ ನೀನು, ಭಕ್ತಪರಾಯಣನಾದ ಶ್ರೀಹರಿಯ,ಪಾವನವಾಗಿಯೂ, ಪರಮಪುರುಷಾರ್ಥವನ್ನು ಕೊಡತಕ್ಕದಾಗಿಯೂ, ಇರುವ ಚರಿತ್ರೆಯನ್ನು, ಕೇಳಬೇಕೆಂದು ತವಕಿಸುತ್ತಿರುವ ನಮಗೆ ವಿಶದವಾಗಿ ನಿರೂಪಿಸು ॥೧೫॥ ಮಹಾಮೇಧಾವಿಯೂ ಭಾಗವತಶಿಖಾಮಣಿಯೂ ಆದ ಆ ಪರೀಕ್ಷಿದ್ರಾಜನು ವ್ಯಾಸಪುತ್ರನಾದ ಶುಕಮಹರ್ಷಿಯಿಂದುಪದೇಶಿಸಲ್ಪಟ್ಟ ಯಾವ ಜ್ಞಾನಸಾಧನದಿಂದ ಪರಮಪುರುಷಾರ್ಥವೆಂದು ಕರೆಯಲ್ಪಡುವ ಭಗವಂತನ ಪಾದಸಾನಿಧ್ಯವನ್ನು ಪಡೆದನೋ ॥ ೧೬ ॥ ಅಂತಹ ಪುಣ್ಯಕರವಾಗಿಯೂ, ಭಗವಂತನ ಚರಿತ್ರದಿಂದ ಯುಕ್ತವಾಗಿಯೂ, ಭಕ್ತರಿಗೆ ಮನೋಹರವಾಗಿಯೂ, ಆಶ್ಚರ್ಯಕರವಾದ ಆತ್ಮಧ್ಯಾನಕ್ಕೆ ನೆಲೆಯಾಗಿಯೂ, ಸರ್ವೋತ್ತಮವಾಗಿಯೂ ಇರುವ, ಶುಕಮುನಿಯಿಂದ ಪರೀಕ್ಷಿದ್ರಾಜ

ಪಾರೀಕ್ಷಿತಂ ಭಾಗವತಾಭಿರಾಮಮ್ ॥೧೭॥ ಶ್ರೀಸೂತಃ॥ ಅಹೋ! ವಯಂ
ಜನ್ಮಭೃತೋಽದ್ಯ ಹಾಸ್ಮ ವೃದ್ಧಾನುವೃತ್ತ್ಯಾಪಿ * ವಿಲೋಮಜಾತಾಃ । ದೌ
ಷ್ಕುಲ್ಯ ಮಾಧಿಂ ವಿಧುನೋತಿ ಶೀಘ್ರಂ ಮಹತ್ತಮಾನಾ ಮಭಿಧಾನಯೋಗಃ॥
ಕುತಃ ಪುನ ರ್ಗೃಣತೋ ನಾಮ ತಸ್ಯ ಮಹತ್ತಮೈಕಾಂತಪರಾಯಣಸ್ಯ ।
ಯೋಽನಂತಶಕ್ತಿ ರ್ಭಗವಾನನಂತೋ ಮಹದ್ಗುಣತ್ವಾ ದ್ಯಮನಂತಮಾ

ಅರ್ಥವಿರುವಂತೆ, ನಃ-ನಮಗೆ, ಆಖ್ಯಾಹಿ-ಹೇಳು ॥ ೧೭ ॥ ಸೂತಃ-ಸೂತನು ಹೇಳುತ್ತಾನೆ, ಯತ್-ಯಾವ ಕಾರಣದಿಂದ, ಮಹತ್ತಮಾನಾಂ-ಮಹಾತ್ಮರ, ಅಭಿಧಾನಯೋಗಃ-ಲೌಕಿಕವಾದ ಸಂಭಾಷಣವು, ದೌಷ್ಕುಲ್ಯಂ-ನೀಚಕುಲದಲ್ಲಿ ಜನಿಸಿದ ದೋಷವನ್ನೂ, ಆಧಿಂಚ-ಅದರಿಂದುಂಟಾಗಿರುವ ಮನೋವ್ಯಥೆಯನ್ನೂ, ಶೀಘ್ರಂ-ಬೇಗನೆ, ವಿಧುನೋತಿ-ಕಳೆಯುವುದೋ, ಆ ಕಾರಣದಿಂದ, ವಿಲೋಮಜಾತಾ ಅಪಿ-ಅಕ್ರಮವಾಗಿ ಜನಿಸಿದವರಾದರೂ, ವಯಂ-ನಾವು, ಅದ್ಯ-ಈಗ, ವೃದ್ಧಾನುವೃತ್ತ್ಯಾ-ವೃದ್ಧರಸೇವೆಯಿಂದ ಜನ್ಮಭೃತಃ-ಸಾರ್ಥಕವಾದ ಜನ್ಮವುಳ್ಳವರು, ಆಸ್ಮ-ಆದೆವು, ಅಹೋ-ಆಶ್ಚರ್ಯ, ಹಾ-ಸಂತೋಷವಾಯಿತು ॥ ೧೮ ॥ ಯಃ-ಯಾವ, ಭಗವಾನ್-ಭಗವಂತನು, ಅನಂತಶಕ್ತಿಃ-ಅಪರಿಮಿತಗಳಾದ ಶಕ್ತಿಗಳುಳ್ಳವನೋ, ಅನಂತಃ-ತಾನೂ ಅಂತವಿಲ್ಲದವನೋ, ಮಹದ್ಗುಣತ್ವಾತ್-ಅನಂತ ಕಲ್ಯಾಣಗುಣಗಳುಳ್ಳವನಾದುದರಿಂದ, ಯಂ-ಯಾವನನ್ನು, ಅನಂತಂ-ಅಂತರಹಿತನೆಂದು, ಆಹುಃ-ಹೇಳುತ್ತಾರೋ, ಮಹ...ಸ್ಯ, ಮಹತ್ತಮ-ಅತ್ಯಂತಮಹಾತ್ಮರಿಗೆ, ಏಕಾಂತ-ಅನನ್ಯವಾದ, ಪರ-ಶ್ರೇಷ್ಠವಾದ, ಅಯಣಸ್ಯ-ಸ್ಥಾನವಾದ, ತಸ್ಯ-ಆ ಭಗವಂತನ, ನಾಮ-ಹೆಸರನ್ನು, ಗೃಣತಃ-ಹೊಗಳುವವನಿಗೆ, ಕುತಃ ಪುನಃ-ಹೇಳಬೇಕಾದು

ನಿಗೆ ಹೇಳಲ್ಪಟ್ಟ ಈ ಇತಿಹಾಸವನ್ನು ಚೆನ್ನಾಗಿ ತಿಳಿಯುವಂತೆ ವಿವರಿಸು ॥ ೧೭ ॥ ಎಂದು ಬೇಡುತ್ತಿರುವ ಶೌನಕಾದಿಗಳ ನುಡಿಗಳನ್ನು ಕೇಳಿ ಅತ್ಯಂತ ಸಂತುಷ್ಟನಾದ ಸೂತಮುನಿಯು ಅವರನ್ನು ಕುರಿತು ಹೇಳುತ್ತಾನೆ:—ಮಹಾತ್ಮರಿರಾ ! ನಾವು ಹೀನಕುಲದಲ್ಲಿ ಜನಿಸಿದವರಾದರೂ ಮಹನೀಯ್ಯರಾದ ತಮ್ಮನ್ನೂ,ಜ್ಞಾನವೃದ್ಧನಾದ ಶುಕಮುನಿಯನ್ನೂ, ಸೇವಿಸಿದುದರಿಂದ ನಮ್ಮ ಜನ್ಮವು ಸಾರ್ಥಕವಾಯಿತು. ಮಹಾತ್ಮರೊಡನೆ ಲೌಕಿಕವಾದ ಸಂಭಾಷಣೆಯನ್ನು ಮಾಡಿದರೂ, ಅದು ಕುಲಹೀನತೆಯನ್ನೂ, ಅದರಿಂದುಂಟಾಗಿರುವ ಮನೋವ್ಯಥೆಯನ್ನೂ ಬೇಗನೆ ಕಳೆಯುವುದು ॥ ೧೮ ॥

ಇಂತಿರುವಾಗ ಯಾವನು ಅನಂತಶಕ್ತಿಗಳುಳ್ಳವನೂ, ಅನಂತ ಕಲ್ಯಾಣಗುಣಪೂರ್ಣನೂ, ಅನಂತನೂ ಆಗಿರುವನೋ, ಮಹನೀಯರಾದ ಜ್ಞಾನಿಗಳಿಗೆ ಮುಖ್ಯಾಶ್ರಯನಾದ ಆ ಭಗವಂತನ ದಿವ್ಯನಾಮಪಾರಾಯಣವನ್ನು ಮಾಡುತ್ತಿರುವ ನನಗೆ ದುಷ್ಕುಲದಲ್ಲಿ ಜನಿಸಿದ ಮನೋವ್ಯಥೆ ನಾಶವಾಗಿ ತಮ್ಮಂತವರೊಡನೆ ಸಂಭಾಷಣೆ ದೊರೆಯಿತೆಂಬುದಾಶ್ಚರ್ಯ

* ಉತ್ತಮಕ್ಷೇತ್ರದಲ್ಲಿ ಹೀನಬೀಜದಿಂದುಂಟಾಗುವುದು:—ಬ್ರಾಹ್ಮಣಸ್ತ್ರೀಯಲ್ಲಿ ಕ್ಷತ್ರಿಯನಿಂದಹುಟ್ಟಿದವರಿಗೆ ಸೂತರೆಂದು ಹೆಸರು.

ಹುಃ॥೧೯॥ಏತಾವತಾಽಲಂ ನನು ಸೂಚಿತೇನ ಗುಣೈರಸಾಮ್ಯಾಽನತಿಶಾಯನಸ್ಯ । ಹಿತ್ವೇತರಾನ್ ಪ್ರಾರ್ಥಯತೋ ವಿಭೂತಿ ರ್ಯಸ್ಯಾಂಘ್ರಿರೇಣುಂ ಜುಷತೇಽನಭೀಪ್ಸೋಃ ॥೨೦॥ ಅಥಾಪಿ ಯತ್ಪಾದನಖಾವಸೃಷ್ಟಂ ಜಗದ್ವಿರಿಂಚೋಪಹೃತಾಽರ್ಹಣಾಂಭಃ। ಸೇಶಂ ಪುನಾತ್ಯನ್ಯತಮೋ ಮುಕುಂದಾತ್ ಕೋನಾಮ ಲೋಕೇ ಭಗವತ್ಪದಾರ್ಥಃ॥ ೨೧ ॥ ಯತ್ರಾಽನುರಕ್ತಾಸ್ಸಹಸೈವ ಧೀರಾ ವ್ಯಪೋಹ್ಯ ದೇಹಾದಿಷು ಸಂಗ ಮೂಢಂ । ವ್ರಜಂತಿ

ದೇನು ? ॥ ೧೯ ॥ ವಿಭೂತಿಃ-ಲಕ್ಷ್ಮೀದೇವಿಯು, ಪ್ರಾರ್ಥಯತಃ-ಬೇಡುತ್ತಿರುವ, ಇತರಾನ್-ಇತರ ದೇವತೆಗಳನ್ನು, ಹಿತ್ವಾ-ಬಿಟ್ಟು, ಅನಭೀಪ್ಸೋರಪಿ-ನಿರಪೇಕ್ಷನಾಗಿದ್ದರೂ, ಯಸ್ಯ-ಯಾವ ಕೃಷ್ಣನ, ಅಂಘ್ರಿರೇಣುಂ-ಪಾದಧೂಳಿಯನ್ನು, ಜುಷತೇ-ಸೇವಿಸುತ್ತಿರುವಳೋ, ಗುಣೈಃ-ಗುಣಗಳಿಂದ ಅಸಾ...-ಸ್ಯ, ಅಸಾಮ್ಯ, ಸಾಮ್ಯವಿಲ್ಲದ, ಅನತಿಶಾಯನಸ್ಯ-ಅತಿಶಯವೂ ಇಲ್ಲದಭಗವಂತನಿಗೆ, ಏತಾವತಾ-ಇಷ್ಟುಮಾತ್ರ ಸೂಚಿತೇನ-ಸೂಚನೆಯಿಂದ, ಅಲಂನನು ಸಾಕಷ್ಟೆ ॥ ೨೦ ॥ ಅಥಾಪಿ-ಅದೂ ಇಲ್ಲದೆ, ಯತ್ಪಾ...ಷ್ಟಂ, ಯತ್-ಯಾವ ವಿಷ್ಣುವಿನ, ಪಾದ-ಪಾದಗಳ, ನಖಉಗುರಿಂದ,ಅವಸೃಷ್ಟಂ-ಉಂಟುಮಾಡಲ್ಪಟ್ಟ, ವಿರಿಂ...ಭಃ, ವಿರಿಂಚ-ಬ್ರಹ್ಮನಿಂದ, ಉಪಹೃತ-ಸಮರ್ಪಿಸಲ್ಪಟ್ಟ, ಅರ್ಹಣಾಂಭಃ-ಅರ್ಘ್ಯೋದಕವು, ಸೇಶಂ-ಈಶ್ವರನಿಂದೊಡಗೂಡಿದ, ಜಗತ್-ಲೋಕವನ್ನು, ಪುನಾತಿ-ಪಾವನಗೊಳಿಸುವುದೋ, ಮುಕುಂದಾತ್-ಆ ವಿಷ್ಣುವಿಗಿಂತಲೂ, ಲೋಕೇ-ಲೋಕದಲ್ಲಿ, ಅನ್ಯತಮಃ-ಬೇರೆಯಾದ, ಭಗವತ್ಪದಾರ್ಥಃ-ಭಗವಂತನೆಂಬ ವಸ್ತುವು, ಕೋನಾಮ-ಯಾವುದು ॥ ೨೧ ॥

ಧೀರಾಃ-ಸತ್ಪುರುಷರು, ಯತ್ರ-ಯಾವ ವಿಷ್ಣುವಿನಲ್ಲಿ, ಅನುರಕ್ತಾಃ-ಭಕ್ತಿಯುಳ್ಳವರಾಗಿ, ದೇಹಾದಿಷು-ಶರೀರಮೊದಲಾದವುಗಳಲ್ಲಿ, ಊಢಂ-ಇಡಲ್ಪಟ್ಟ, ಸಂಗಂ-ಮಮಕಾರಾದಿಗಳನ್ನು, ಸಹಸೈವ-ತಟ್ಟನೆ. ವ್ಯಪೋಹ್ಯ-ತೊರೆದು, ಯತ್ರ-ಎಲ್ಲಿ, ಅಹಿಂಸಾ-ಅಹಿಂಸೆಯು, ಉಪಶಮಃ-ಶಾಂತಿಯು, ಸ್ವಧರ್ಮಃ-ಸ್ವಭಾವವೋ, ಅಂತ್ಯಂ-ಕಟ್ಟಕಡೆಯದಾದ, ತತ್ ಆ, ಪಾರಮಹಂಸ್ಯಂ-ಪರಮಹಂಸಧರ್ಮವನ್ನು. ವ್ರಜಂ-

ವೇನು ? ॥ ೧೯ ॥ ಲಕ್ಷ್ಮೀದೇವಿಯು ತನ್ನನ್ನು ಪ್ರಾರ್ಥಿಸುತ್ತಿರುವ ಬ್ರಹ್ಮಾದಿಗಳನ್ನುಳಿದು, ತನ್ನನ್ನು ಬಯಸದಿದ್ದರೂ ಯಾವ ಭಗವಂತನ ಪಾದಧೂಳಿಯನ್ನು ಸೇವಿಸುತ್ತಿರುವಳೋ,ಅಂತಹ ಭಗವಂತನ ಕಲ್ಯಾಣಗುಣಗಳಿಗೆ ಸಮಾನಗುಣಗಳಾಗಲಿ, ಅಧಿಕಗುಣಗಳಾಗಲಿ, ಇತರರಲ್ಲಿ ಇಲ್ಲವೆಂಬುದಕ್ಕೆ ಇದೇ ನಿದರ್ಶನವಲ್ಲವೆ ? ॥ ೨೦ ॥ ಇಷ್ಟೇ ಅಲ್ಲದೆ ಯಾವ ಭಗವಂತನ ಕಾಲುಗುರಿಂದ ಜನಿಸಿದ ದೇವಗಂಗೆಯನ್ನು ಬ್ರಹ್ಮದೇವನು ಅರ್ಘ್ಯವನ್ನಾಗಿ ಸಮರ್ಪಿಸಿದನೋ, ಯಾವ ದೇವಗಂಗೆಯು, ಶಿವನು ಮೊದಲುಗೊಂಡು ಸಕಲ ಲೋಕಗಳನ್ನೂ ಪಾವನಗೊಳಿಸುತ್ತಿರುವುದೋ, ಅಂತಹ ಮುಕುಂದನನ್ನುಳಿದು ಲೋಕದಲ್ಲಿ ಮತ್ತಾವನುತಾನೇ ಭಗವಂತನೆನಿಸಿಕೊಂಡಾನು ? ॥ ೨೧ ॥ ಯಾವ ಭಗವಂತನಲ್ಲಿ ಭಕ್ತಿಯನ್ನಿಟ್ಟ ಸಜ್ಜನರು ಶರೀರಾದಿಗಳಲ್ಲಿರುವ ಅಭಿಮಾನವನ್ನು ತೊರೆದು ಅಹಿಂಸೆಗೂ, ಉಪಶಾಂತಿಗೂ, ನೆಲೆಯಾಗಿರುವ ನಿರವಧಿಕವಾದ ಪರಮಹಂಸಧರ್ಮವನ್ನು ಪಡೆದು ಮೋಕ್ಷಾನಂದವನ್ನನುಭವಿಸುವರೋ, ಅಂತಹ ಭಗವಂತನ ಸಚ್ಚರಿತ್ರೆಯು

ತತ್ಪಾರಮಹಂಸ್ಯ ಮಂತ್ಯಂ ಯಸ್ಮಿನ್ನಹಿಂಸೋಪಶಮ ಸ್ಸ್ವಧರ್ಮಃ॥೨೨॥
ಅಹಂಹಿ ಪೃಷ್ಟೋಽರ್ಯಮಣೋ! ಭವದ್ಭಿ ರಾಚಕ್ಷ ಆತ್ಮಾವಗಮೋಽತ್ರ
ಯಾವಾನ್। ನಭಃ ಪತಂತ್ಯಾತ್ಮಸಮಂ ಪತತ್ರಿಣ ಸ್ತಥಾ ಸಮಂ ವಿಷ್ಣುಗತಿಂ
ವಿಪಶ್ಚಿತಃ ॥ ೨೩ ॥ ಏಕದಾ ಧನು ರುದ್ಯಮ್ಯ ವಿಚರನ್ ಮೃಗಯಾಂ
ವನೇ । ಮೃಗಾ ನನುಗತ ಶ್ಶ್ರಾಂತಃ ಕ್ಷುಧಿತ ಸ್ತೃಷಿತೋ ಭೃಶಂ ॥ ೨೪ ॥
ಜಲಾಶಯ ಮಚಕ್ಷಾಣಃ ಪ್ರವಿವೇಶ ತಮಾಶ್ರಮಂ । ದದರ್ಶ ಮುನಿ

ತಿ-ಹೊಂದುವರೋ ॥ ೨೨ ॥ ಹೇ ಅರ್ಯಮಣಃ-ಅಯ್ಯಾ ಸೂರ್ಯಸಮಾನರಾದ ವೇದಮೂರ್ತಿಗಳಿರಾ? ಭವದ್ಭಿಃ-ನಿಮ್ಮಿಂದ, ಪೃಷ್ಟಃ-ಕೇಳಲ್ಪಟ್ಟವನಾಗಿ, ಅಹಂ-ನಾನು, ಅತ್ರ-ಈ ಭಗವಚ್ಚರಿತ್ರದಲ್ಲಿ, ಯಾವಾನ್-ಎಷ್ಟು, ಆತ್ಮಾವಗಮಃ-ನನಗೆ ತಿಳಿವಳಿಕೆಯುಂಟೋ ಅಷ್ಟು, ಆಚಕ್ಷೇ-ಹೇಳುತ್ತೇನೆ, ಪತತ್ರಿಣಃ-ಪಕ್ಷಿಗಳು, ಯಥಾ-ಹೇಗೆ, ಆತ್ಮಸಮಂ-ತಮ್ಮ ಶಕ್ತ್ಯನುಸಾರವಾಗಿ, ನಭಃ-ಆಕಾಶದಲ್ಲಿ, ಪತಂತಿ-ಹಾರುತ್ತವೋ, ತಥಾ-ಹಾಗೆ, ವಿಪಶ್ಚಿತಃ-ವಿದ್ವಾಂಸರು, ವಿಷ್ಣುಗತಿಂ-ಭಗವಂತನ ಗುಣಗಳನ್ನು, ಆತ್ಮಸಮಂ-ತಮ್ಮ ಜ್ಞಾನಾನುಸಾರವಾಗಿ, ಜಾನಂತಿ-ತಿಳಿಯುತ್ತಾರೆ ॥ ೨೩ ॥(ಪರೀಕ್ಷಿತನು), ಏಕದಾ-ಒಂದುದಿನ, ಧನುಃ-ಬಿಲ್ಲನ್ನು, ಉದ್ಯಮ್ಯ-ಹೂಡಿ, ವನೇ-ಕಾಡಿನಲ್ಲಿ, ಮೃಗಯಾಂ-ಬೇಟೆಗಾಗಿ, ವಿಚರನ್-ಸಂಚರಿಸುತ್ತಾ, ಮೃಗಾನ್-ಮೃಗಗಳನ್ನು, ಅನುಗತಃ-ಹಿಂಬಾಲಿಸಿ, ಭೃಶಂ-ಬಹಳವಾಗಿ, ಶ್ರಾಂತಃ-ಬಳಲಿದವನು, ಕ್ಷುಧಿತಃ-ಹಸಿವುಗೊಂಡವನೂ, ತೃಷಿತಶ್ಚ-ನೀರಡಿಕೆಯುಳ್ಳವನೂ ಆದನು ॥ ೨೪ ॥ ಜಲಾಶಯಂ-ನೀರಿರುವ ಸ್ಥಲವನ್ನು, ಅಚಕ್ಷಾಣಃ-ಕಾಣದೆ, ತಂ-ಪ್ರಸಿದ್ಧನಾದ ಶಮೀಕ ಋಷಿಯ, ಆಶ್ರಮಂ-ಆಶ್ರಮವನ್ನು, ಪ್ರವಿವೇಶ-ಹೊಕ್ಕನು, ತತ್ರ-ಅಲ್ಲಿ, ಆಸೀನಂ-ಕುಳಿತಿರುವ, ಶಾಂತಂ-ಪ್ರಸನ್ನನಾದ, ಮೀಲಿತಲೋಚನಂ-ಕಣ್ಣು ಮುಚ್ಚಿಕೊಂಡಿರುವ ॥ ೨೫ ॥ ಪ್ರತಿ—ದ್ಧಂ, ಪ್ರತಿರುದ್ಧ-ಹಿಂದಿರುಗಿಸಲ್ಪಟ್ಟ, ಇಂದ್ರಿಯ-ಕಣ್ಣುಮೊದ

ನ್ನು ಸಂಪೂರ್ಣವಾಗಿ ಯಾವನುತಾನೇ ಬಣ್ಣಿಸಬಲ್ಲನು ? ॥ ೨೨ ॥ ಅಯ್ಯಾ ಸೂರ್ಯನಂತೆ ವೇದಮೂರ್ತಿಗಳೆನಿಸಿದ ಮಹಾತ್ಮರಿರಾ ! ಇಂತಹ ಭಗವಂತನ ದಿವ್ಯಚರಿತ್ರವನ್ನು ಶ್ರವಣಮಾಡಿಸಬೇಕೆಂದು ನೀವು ನನ್ನನ್ನು ಬೆಸಗೊಂಡುದರಿಂದ ನನ್ನ ಭಾಗ್ಯಕ್ಕೆಣೆಯಿಲ್ಲ. ಅಪಾರವಾದ ಗಗನಮಂಡಲದಲ್ಲಿ ಹಕ್ಕಿಗಳು ತಂತಮ್ಮ ಶಕ್ತ್ಯನುಸಾರ ಹಾರುವಂತೆ, ಪಂಡಿತರಾದವರು ತಾವುತಾವು ತಿಳಿದಮಾತ್ರವೇ ಭಗವಂತನ ಲೀಲೆಯನ್ನು ಬಣ್ಣಿಸುವರಾದುದರಿಂದ, ನಾನೂ ನನಗೆ ತಿಳಿದಮಟ್ಟಿಗೆ ನಿರೂಪಿಸುವೆನು ಕೇಳಿರಿ. ॥ ೨೩ ॥ ಮಹನೀಯನಾದ ಪರೀಕ್ಷಿದ್ರಾಜನು ಒಂದುದಿನ ಬೇಟೆಯಾಡುವುದಕ್ಕಾಗಿ ಕಾಡಿಗೆ ಹೊರಟು ಬಿಲ್ಲಿನಲ್ಲಿ ಬಾಣಗಳನ್ನು ಹೂಡಿ, ಅಲ್ಲಿಯ ಮೃಗಗಳನ್ನಟ್ಟಿ ಓಡಾಡುತ್ತಾ ಬಹಳವಾಗಿ ಬಳಲಿ ಬಾಯಾರಿ ಕಂಗೆಟ್ಟು ಹಸಿವಿನಿಂದಲೆದಾಡುತ್ತಿದ್ದನು ॥ ೨೪ ॥

ಇಂತು ಆ ಮಹಾರಾಜನು ನೀರಿಗಾಗಿ ಅಲೆದಾಡುತ್ತಾ ಎಲ್ಲಿಯೂ ಜಲಾಶಯವನ್ನು ಕಾಣದೆ ಸಮೀಪದಲ್ಲಿ ಕಂಡುಬಂದ ಒಂದಾಶ್ರಮಕ್ಕೆ ಹೋಗಿ ಒಳಹೊಕ್ಕು, ಅಲ್ಲಿ ಕುಳಿತುಕೊಂಡು ಪ್ರಸನ್ನನಾಗಿ ಕಣ್ಣುಗಳಂ ಮುಚ್ಚಿಕೊಂಡು ಇಂದ್ರಿಯಗಳನ್ನು ವಿಷಯ

ಮಾಸೀನಂ ಶಾಂತಂ ಮೀಲಿತಲೋಚನಂ ॥೨೫॥ ಪ್ರತಿರುದ್ಧೇಂದ್ರಿಯಪ್ರಾಣ ಮನೋಬುದ್ಧಿ ಮುಪರತಂ । ಸ್ಥಾನತ್ರಯಾ ತ್ಪರಂ ಪ್ರಾಪ್ತಂ *ಬ್ರಹ್ಮ ಭೂತ ಮವಿಕ್ರಿಯಂ ॥ ೨೬ ॥ ವಿಪ್ರಕೀರ್ಣ ಜಟಾಚ್ಛನ್ನಂ ರೌರವೇಣಾ ಜಿನೇನಚ । ವಿಶುಷ್ಯತ್ತಾಲು ರುದಕಂ ತಥಾಭೂತ ಮಯಾಚತ ॥ ೨೭ ॥ ಅಲಬ್ಧ † ತೃಣಭೂಮ್ಯಾದಿ ರಸಂಪ್ರಾಪ್ತಾರ್ಘ್ಯ ಸೂನೃತಃ । ಅವ

ಲಾದ ಇಂದ್ರಿಯಗಳು, ಪ್ರಾಣ-ಪ್ರಾಣವಾಯುಗಳು, ಮನಃ-ಮನಸ್ಸು, ಬುದ್ಧಿ-ಬುದ್ಧಿಯು, ಇವುಗಳುಳ್ಳ, ಉಪಾರತಂ-ಪ್ರಪಂಚವ್ಯಾಪಾರಗಳನ್ನುಳಿದ, ಸ್ಥಾನತ್ರಯಾತ್-ಜಾಗ್ರತ್ತು, ಸ್ವಪ್ನ, ಸುಷುಪ್ತಿ, ಎಂಬ ಮೂರುಸ್ಥಾನಗಳಿಗಿಂತಲೂ, ಪರಂ-ಬೇರೆಯಾದ ತುರೀಯಸ್ಥಾನವನ್ನು, ಪ್ರಾಪ್ತಂ-ಹೊಂದಿದವನಾದುದ ರಿಂದಲೇ, ಬ್ರಹ್ಮಭೂತಂ-ಬ್ರಹ್ಮಭಾವವನ್ನು ಪಡೆದ, ಅವಿಕ್ರಿಯಂ-ನಿರ್ವಿಕಾರನಾದ ॥ ೨೬ ॥ ವಿಪ್ರ... ನ್ನಂ, ವಿಪ್ರಕೀರ್ಣ - ಹರಡಲ್ಪಟ್ಟ, ಜಟಾ-ಜಡೆಗಳಿಂದ, ಛನ್ನಂ-ಮುಚ್ಚಲ್ಪಟ್ಟ, ರೌರವೇಣ-ರುರುವೆಂಬ ಜಿಂಕೆಯ, ಅಜಿನೇನಚ - ಚರ್ಮದಿಂದಲೂ, ಆಛನ್ನಂ - ಹೊದಿಸಲ್ಪಟ್ಟ, ಮುನಿಂ-ಶಮೀಕನನ್ನು, ದದ ರ್ಶ-ಕಂಡನು, ವಿಶುಷ್ಯತ್ತಾಲುಃ-ಬಣಗಿದ ದವಡೆಗಳುಳ್ಳವನಾಗಿ, ತಥಾಭೂತಂ-ಆರೀತಿಯಾಗಿರುವ ಶಮೀ ಕನನ್ನು ಕುರಿತು, ಉದಕಂ-ನೀರನ್ನು, ಅಯಾಚತ-ಬೇಡಿದನು ॥ ೨೭ ॥ ಅಲಬ್ಧ...ದಿಃ, ಅಲಬ್ಧ-ಹೊಂದ ಲ್ಪಡದ, ತೃಣ-ದರ್ಭಾಸನವು, ಭೂಮಿ-ಸ್ಥಲವು, ಆದಿಃ-ಮೊದಲಾದವುಗಳುಳ್ಳವನಾಗಿಯೂ, ಅಸಂ...ತಃ, ಅಸಂಪ್ರಾಪ್ತ-ಹೊಂದಲ್ಪಡದ, ಅರ್ಘ್ಯ-ಅರ್ಘ್ಯವು, ಸೂನೃತಃ-ಸವಿನುಡಿಯೂ ಉಳ್ಳವನಾಗಿ, ಆತ್ಮಾನಂ-

ಳಿಂದ ತೋರಿಸಿ, ಪ್ರಾಣವಾಯುಗಳನ್ನು ನಿಗ್ರಹಿಸಿ, ಮನೋಬುದ್ಧಿಗಳನ್ನು ನಿಶ್ಚಲ ಗೊಳಿಸಿ, ಬಾಹ್ಯ ವ್ಯಾಪಾರಗಳನ್ನುಳಿದು, ಜಾಗ್ರತ್ತು, ಸ್ವಪ್ನ, ಸುಷುಪ್ತಿಗಳೆಂಬ ಮೂರ ವಸ್ಥೆಗಳನ್ನತಿಕ್ರಮಿಸಿದ ತುರೀಯ ಸ್ಥಾನವನ್ನುಹೊಂದಿ,ಧ್ಯಾನ ಧ್ಯೇಯಾದಿ ಭೇದವಳಿದು ಬ್ರಹ್ಮೀಭಾವವನ್ನು ಹೊಂದಿ, ನಿರ್ವಿಕಾರನಾಗಿ, ಸುತ್ತಲೂ ಜೋಲುತ್ತಿರುವ ಜಟಾಭಾ ರದಿಂದ ಪರಿವೃತನಾಗಿ, ರುರುವೆಂಬ ಮೃಗವಿಶೇಷದಚರ್ಮವನ್ನು ಹೊದ್ದುಕೊಂಡು, ಸ್ಥಾ ಣುವಿನಂತೆ ಕಂಗೊಳಿಸುತ್ತಿರುವ ಆಶಮೀಕಮುನಿಯನ್ನು ಕಂಡು,ಬಳಲಿ ಬಾಯಾರಿ ಗಂಟ ಲೊಣಗುತ್ತಿರುವ ಆಪರೀಕ್ಷಿತನು, ಆಮುನಿಯು ಸಮಾಧಿನಿಷ್ಠನೆಂದರಿಯದೆ, ಜಲವನ್ನು ಕೊಡಬೇಕೆಂದಾತನನ್ನು ಬೇಡಿದನು, ॥ ೨೭ ॥ ಅಂತರ್ಮುಖಿಯಾದ ಆಮುನಿಯು ನಿರು ತ್ತರನಾಗಿರಲು, ರಾಜನು, ಆಋಷ್ಯಾಶ್ರಮದಲ್ಲಿ, ಆಸನ, ಸ್ಥಲ, ನೀರು, ಸವಿನುಡಿಗಳೆಂಬ ಯಾವಸತ್ಕಾರವನ್ನೂ ಪಡೆಯದೆ, ಬೇಕೆಂದಾಮುನಿಯು ತನಗವಮಾನಮಾಡಿದನೆಂದು,

* (೧) ವಿ. ಬ್ರಹ್ಮಭಾವನೆಯಿಂದ ಕೂಡಿರುವವನು. (೨) ವಿ. ಪ್ರಯತ್ನವಿಲ್ಲದೆ ತನಗೆತಾನೇ ಮನಸ್ಸಿನಿಂದ ಬಿಂಬರೂಪನಾದ ಪರಮಾತ್ಮನನ್ನು ಅನುಭವಿಸುತ್ತಿರುವವನು. (೩) ಅಸಂಪ್ರಜ್ಞಾತಸ ಮಾಧಿಯಲ್ಲಿದ್ದುಕೊಂಡು ಸ್ವಸ್ವರೂಪವಾದ ಭಗವಂತನನ್ನು ಸೇವಿಸುವವನು, † ತೃಣಾನಿ ಭೂಮಿ ರುದ ಕಂ ವಾಕ್ಚತುರ್ಥೀಚ ಸೂನೃತಾ, ಏತಾನ್ಯಪಿ ಸತಾಂ ಗೇಹೇ ನೋಚ್ಛಿದ್ಯಂತೇ ಕದಾಚನ. ಸಂಸಾರಿಯು ಮನೆಗೆ ಬಂದವರಿಗೆ ಆಸನ, ಸ್ಥಲ, ಜಲ, ಸವಿನುಡಿ. ಇವುಗಳಿಂದಾದರೂ ಉಪಚರಿಸಬೇಕು

ಜ್ಞಾತ ಮಿವಾತ್ಮಾನಂ ಮನ್ಯಮಾನ ಶ್ಚುಕೋಪ ಹ ॥ ೨೮ ॥ ಅಭೂತ ಪೂರ್ವ ಸ್ಸಹಸಾ ಕ್ಷುತ್ತೃಡ್ಭ್ಯಾ ಮರ್ದಿತಾತ್ಮನಃ । ಬ್ರಾಹ್ಮಣಂ ಪ್ರತ್ಯಭೂದ್ಬ್ರಹ್ಮನ್! ಮತ್ಸರೋ ಮನ್ಯುರೇವ ಚ ॥ ೨೯ ॥ ಸತು ಬ್ರಹ್ಮ ಋಷೇ ರಂಸೇ ಗತಾಸು ಮುರಗಂ ರುಷಾ । ವಿನಿರ್ಗಚ್ಛನ್ ಧನುಷ್ಕೋಟ್ಯಾ ನಿಧಾಯ ಪುರಮಾಗತಃ ॥ ೩೦ ॥ ಏಷ ಕಿಂ ? ನಿಭೃತಾ ಶೇಷಕರಣೋ ಮೀಲಿತೇಕ್ಷಣಃ । ಮೃಷಾಸಮಾಧಿ ರಾಹೋಸ್ವಿತ್ ಕಿನ್ನು ಸ್ಯಾತ್ ? ಕ್ಷತ್ರ ಬಂಧುಭಿಃ ॥ ೩೧ ॥ ತಸ್ಯ ಪುತ್ರೋತಿ ತೇಜಸ್ವೀ ವಿಹರನ್ ಬಾಲಕೋ-

---

ತನ್ನನ್ನು, ಅವಜ್ಞಾತಮಿವ-ಅವಮಾನಗೊಳಿಸಲ್ಪಟಂತೆ, ಮನ್ಯಮಾನಃ-ತಿಳಿದು, ಚುಕೋಪಹ-ಕೋಪಿಸಿಕೊಂಡನು ॥ ೨೮ ॥ ಹೇಬ್ರಹ್ಮನ್-ಎಲೈ ಬ್ರಾಹ್ಮಣನೆ ? ಕ್ಷುತ್ತೃಡ್ಭ್ಯಾಂ-ಹಸಿವು ನೀರಡಕೆಗಳಿಂದ, ಅರ್ದಿತಾತ್ಮನಃ-ಪೀಡಿತವಾದ ಶರೀರವುಳ್ಳರಾಜನಿಗೆ, ಬ್ರಾಹ್ಮಣಂಪ್ರತಿ-ಆಶಮೀಕಮುನಿಯನ್ನು ಕುರಿತು, ಸಹಸಾ-ಬೇಗನೆ, ಅಭೂತಪೂರ್ವಃ-ಎಂದಿಗೂ ಉಂಟಾಗದಿದ್ದ, ಮತ್ಸರಃ-ದ್ವೇಷವು, ಮನ್ಯುರೇವಚ-ಕ್ರೋಧವೂ, ಅಭೂತ್-ಉಂಟಾಯಿತು ॥ ೨೯ ॥

ಸತು-ಆ ರಾಜನು, ವಿನಿರ್ಗಚ್ಛನ್-ಹಿಂದಿರುಗಿ ಬರುತ್ತಾ,ರುಷಾ-ಕೋಪದಿಂದ, ಬ್ರಹ್ಮಋಷೇಃ-ಶಮೀಕನ, ಅಂಸೇ-ಹೆಗಲಿನಲ್ಲಿ, ಗತಾಸುಂ-ಸತ್ತುಹೋದ, ಉರಗಂ-ಹಾವನ್ನು, ಧನುಷ್ಕೋಟ್ಯಾ-ಬಿಲ್ಲಿನಕೊನೆಯಿಂದ, ನಿಧಾಯ-ಇಟ್ಟು, ಪುರಂ-ತನ್ನಪಟ್ಟಣಕ್ಕೆ, ಆಗತಃ-ಬಂದನು ॥ ೩೦ ॥ ಏಷಃ-ಈ ಋಷಿಯು, ನಿಭೃ...ಣಃ, ನಿಭೃತ-ಹಿಂದಿರುಗಿಸಲ್ಪಟ್ಟ, ಅಶೇಷಕರಣಃ-ಸಕಲೇಂದ್ರಿಯಗಳುಳ್ಳವನಾಗಿ, ಮೀಲಿತೇಕ್ಷಣಃ ಕಿಂ ? ಕಣ್ಣುಮುಚ್ಚಿಕೊಂಡಿರುವನೆ ? ಆಹೋಸ್ವಿತ್-ಅಥವಾ, ಕ್ಷತ್ರಬಂಧುಭಿಃ-ಈ ಕ್ಷತ್ರಿಯಾಧಮರಿಂದ ಕಿನ್ನುಸ್ಯಾತ್-ಏನಾದೀತು ? ಎಂದು, ಮೃಷಾಸಮಾಧಿಃ ಕಿಂ ?-ಸುಳ್ಳುತಪಸ್ಸುಮಾಡುವನೋ ? ॥ ೩೧ ॥ ತಸ್ಯ-ಆಶಮೀಕನ, ಅತಿತೇಜಸ್ವೀ-ಅಧಿಕತೇಜಸ್ಸುಳ್ಳ, ಬಾಲಕಃ-ಹಸುಳೆಯಾದ, ಪುತ್ರಃ-ಮಗನಾದ, ಶೃಂಗಿಯು, ಅರ್ಭಕೈಃ-ಹುಡುಗರೊಡನೆ, ವಿಹರನ್-ಆಡುತ್ತಾ, ತಾತಂ-ತಂದೆಯನ್ನು, ರಾಜ್ಞಾ-ರಾಜನಿಂದ, ಅಘಂ-

---

ಭಾವಿಸಿ ಕೋಪಗೊಂಡನು. ॥ ೨೮ ॥ ಅಲ್ಲದೆ, ಹಸಿವು ಬಾಯಾರಿಕೆಗಳಿಂದ, ಗಂಟಲೊಣಗಿ ಕಂಗೆಟ್ಟದ್ದುದರಿಂದ, ಆರಾಜನಿಗೆ ಶಮೀಕಮುನಿಯಲ್ಲಿ, ಎಂದಿಗೂಯಿಲ್ಲದ ದ್ವೇಷವೂ, ರೋಷವೂ ಸಹ ತಟ್ಟನುಂಟಾದುವು ॥ ೨೯ ॥

ಬಳಿಕ ಪರೀಕ್ಷಿದ್ರಾಜನು,ಇವನು ದಿಟವಾಗಿ ಇಂದ್ರಿಯಗಳನ್ನು ಅಡಗಿಸಿ, ಕಣ್ಣುಮುಚ್ಚಿಕೊಂಡು ಸಮಾಧಿನಿಷ್ಠನಾಗಿರಬಹುದೆ? ಅಥವಾ ಈಕ್ಷತ್ರಿಯಾಧಮರು ಬಂದರೇನು? ಹೋದರೇನು ? ನಾವೇಕೆ ಇವರನ್ನು ಸಡ್ಡೆಮಾಡಬೇಕು ? ಎಂದು ದುರಹಂಕಾರದಿಂದ ಸುಮ್ಮನೆ ಕಣ್ಣುಮುಚ್ಚಿ ಬಕಧ್ಯಾನವನ್ನು ಮಾಡುತ್ತಿರಬಹುದೆ ? ನೋಡೋಣ, ಎಂದು ಯೋಚಿಸುತ್ತಾ ಕೋಪದಿಂದ ಹಿಂದಿರುಗಿ ಸತ್ತುಬಿದ್ದಿದ್ದ ಒಂದುಹಾವನ್ನು ಬಿಲ್ಲಿನ ಕೊನೆಯಿಂದೆತ್ತಿಕೊಂಡುಹೋಗಿ, ಆ ಮಹರ್ಷಿಯ ಕೊರಳಿಗೆಸುತ್ತಿ ತನ್ನ ಪಟ್ಟಣಕ್ಕೆ ತೆರಳಿದನು ॥ ೩೦-೩೧॥ ಆಗ ತನ್ನೋರಗೆಯ ಬಾಲಕರೊಡನಾಡುತ್ತಿದ್ದ ಮಹಾತೇಜಸ್ವಿಯಾದ ಶೃಂಗಿಯೆಂಬ ಆಶಮೀಕಋಷಿಯ ಪುತ್ರನು, ರಾಜನಿಂದ ತನ್ನ ತಂದೆಗುಂಟಾದ

ರ್ಭಕೈಃ। ರಾಜ್ಞಾಘಂ ಪ್ರಾಪಿತಂ ತಾತಂ ಶ್ರುತ್ವಾ ತತ್ರೇದ ಮಬ್ರವೀತ್ ॥
ಶೃಂಗೀ॥ಅಹೋ! ಅಧರ್ಮಃ ಪಾಲಾನಾಂ ಪೀವ್ನಾಂ ಬಲಿಭುಜಾ ಮಿವ ।
ಸ್ವಾಮಿನ್ಯಘಂ ಯದ್ದಾಸಾನಾಂ ದ್ವಾರಪಾನಾಂ ಶುನಾ ಮಿವ ॥ ೩೩ ॥
ಬ್ರಾಹ್ಮಣೈಃ ಕ್ಷತ್ರಬಂಧುರ್ಹಿ ಗೃಹಪಾಲೋ ನಿರೂಪಿತಃ । ಸಕಥಂ ತದ್ಗೃ
ಹೇ ದ್ವಾಸ್ಥಃ ಸ್ಸಭಾಂಡಂ ಭೋಕ್ತು ಮರ್ಹತಿ ॥ ೩೪ ॥ ಕೃಷ್ಣೇ
ಗತೇ ಭಗವತಿ ಶಾಸ್ತರ್ಯುತ್ಪಥಗಾಮಿನಾಂ। ತದ್ಭಿನ್ನ ಸೇತೂ ನದ್ಯಾಹಂ
ಶಾಸ್ಮಿ ಪಶ್ಯತ ಮೇಬಲಂ ॥೩೫॥ ಇತ್ಯುಕ್ತ್ವಾ ರೋಷತಾಮ್ರಾಕ್ಷೋ

ಕಷ್ಟವನ್ನು, ಪ್ರಾಪಿತಂ-ಹೊಂದಿಸಲ್ಪಟ್ಟವನನ್ನಾಗಿ, ಶ್ರುತ್ವಾ-ಕೇಳಿ, ತತ್ರ-ಅಲ್ಲಿ ಇದಂ-ಈ ಮಾತನ್ನು, ಅಬ್ರವೀತ್-ಹೇಳಿದನು ॥೩೨॥ ಯತ್-ಯಾವುದರಿಂದ, ದ್ವಾರಪಾನಾಂ-ಬಾಗಿಲನ್ನು ಕಾಯುವ, ಶುನಾಮಿವ-ನಾಯಿಗಳಂತೆಯೂ, ಬಲಿಭುಜಾಮಿವಚ-ಕಾಗೆಗಳಂತೆಯೂ ಇರುವ, ದಾಸಾನಾಂ-ಭೃತ್ಯರಿಂದ, ಸ್ವಾಮಿನಿ-ಪ್ರಭುವಿನಲ್ಲಿ, ಅಘಂ-ಪಾಪಾಚರಣೆಯುಂಟಾಯಿತೋ, ತತ್-ಇದುದರಿಂದ, ಪೀವ್ನಾಂ-ಕೊಬ್ಬಿರುವ, ಪಾಲಾನಾಂ-ರಾಜರ, ಅಧರ್ಮಃ-ಅನ್ಯಾಯವು ತಿಳಿದುದು, ಅಹೋ-ಕಷ್ಟವು. ॥ ೩೩ ॥ ಬ್ರಾಹ್ಮಣೈಃ-ಬ್ರಾಹ್ಮಣರಿಂದ, ಕ್ಷತ್ರಬಂಧುಃ - ಕ್ಷತ್ರಿಯಾಧಮನು, ಗೃಹಪಾಲಃ - ದಾಸನಾದುದರಿಂದ ನಾಯಿಯಾಗಿ, ನಿರೂಪಿತಃ-ಹೇಳಲ್ಪಟ್ಟಿರುವವನು, ದ್ವಾಸ್ಥಃ-ಬಾಗಿಲನ್ನು ಕಾಯುವ, ಸಃ - ಆನಾಯಿಯು, ತದ್ಗೃಹೇ-ಅವನ ಮನೆಯಲ್ಲಿ, ಸಭಾಂಡಂ-ಮಡಿಕೆಯಲ್ಲಿರುವ ಅನ್ನವನ್ನು, ಭೋಕ್ತುಂ - ತಿನ್ನುವುದಕ್ಕೆ, ಕಥಂ-ಹೇಗೆ, ಅರ್ಹತಿ-ಯೋಗ್ಯವಾಗುತ್ತದೆ. ॥ ೩೪ ॥ ಉತ್ಪಥಗಾಮಿನಾಂ - ದುರ್ಮಾರ್ಗರನ್ನು, ಶಾಸ್ತರಿ-ದಂಡಿಸುವ, ಭಗವತಿ - ಭಗವಂತನಾದ, ಕೃಷ್ಣೇ-ಕೃಷ್ಣನು, ಗತೇ - ಹೊರಟುಹೋಗಲು, ತತ್-ಆ ಬಳಿಕ, ಭಿನ್ನಸೇತೂನ್-ಮರ್ಯಾದೆಯನ್ನು ಅತಿಕ್ರಮಿಸಿದವರನ್ನು, ಅದ್ಯ-ಈಗ, ಅಹಂ-ನಾನು, ಶಾಸ್ಮಿ-ದಂಡಿಸುತ್ತೇನೆ, ಮೇ-ನನ್ನ, ಬಲಂ-ಸಾಮರ್ಥ್ಯವನ್ನು, ಪಶ್ಯತ - ನೋಡಿರಿ. ॥೩೫॥ ರೋಷ...ಕ್ಷಃ, ರೋಷ-ಕೋಪದಿಂದ, ತಾಮ್ರ-ಕೆಂಪಾದ, ಅಕ್ಷಃ-ಕಣ್ಣುಳ್ಳ, ಋಷಿಬಾಲಕಃ-ಶೃಂಗಿ ಮುನಿಯು, ವಯ

ಕೇಡನ್ನು ಕೇಳಿ ತಿಳಿದು ಆ ಜತೆಗಾರರಿಗಿಂತೆಂದನು ॥೩೨॥ ಅಕಟಾ, ಕೊಬ್ಬಿರುವ ಕ್ಷತ್ರಿಯರ ಅನ್ಯಾಯವು ಈಗ ಸ್ಪಷ್ಟವಾಯಿತು, ಬಾಗಿಲು ಕಾಯುವ ನಾಯಿಯಂತೆಯೂ, ಬಲಿಯನ್ನು ತಿನ್ನುವ ಕಾಗೆಗಳಂತೆಯೂ ತುಚ್ಛರೆನಿಸಿ, ನಮಗೆ ದಾಸರಾಗಿರುವ ಇವರು ಸ್ವಾಮಿದ್ರೋಹವನ್ನು ಮಾಡಿದರಲ್ಲಾ! ॥೩೩॥ ಕ್ಷತ್ರಿಯಾಧಮನೆಂಬುವನು ಬ್ರಾಹ್ಮಣರಿಂದ ನಾಯಿಯಂತೆ ಬಾಗಿಲನ್ನು ಕಾಯುವುದಕ್ಕೆ ನಿಯಮಿಸಲ್ಪಟ್ಟವನಲ್ಲವೆ ? ಬಾಗಿಲನ್ನು ಕಾಯುವನಾಯಿಯು ಒಳಹೊಕ್ಕು ಮಡಕೆಯಲ್ಲಿರುವ ಅನ್ನವನ್ನು ತಿನ್ನಬಹುದೆ? ಇಂತಹ ಅನ್ಯಾಯವುಂಟೆ ? ॥ ೩೪ ॥ ಅಯ್ಯಾ ಮಿತ್ರರಿರಾ ! ದುಷ್ಟಶಿಕ್ಷಕನಾಗಿದ್ದ ಭಗವಂತನಾದ ಶ್ರೀಕೃಷ್ಣನು ವೈಕುಂಠಕ್ಕೆ ತೆರಳಿದ ಬಳಿಕ ದಾರಿತಪ್ಪಿ ನಡೆವ ದುರ್ಮಾರ್ಗರನ್ನು ನಾನೀಗ ದಂಡಿಸುತ್ತೇನೆ. ನನ್ನ ಸಾಮರ್ಥ್ಯವನ್ನು ನೋಡಿರಿ ॥೩೫॥ ಎಂದು ಬಾಲಕನಾದ ಆಋಷಿಕುಮಾರನು ಕೋಪದಿಂದ ಕಣ್ಣುಗಳನ್ನು ಕೆಂಪಗೆಮಾಡಿಕೊಂಡು, ಕೌಶಿಕೀನದಿಯ ಜಲದಲ್ಲಿ ಆಚಮನವನ್ನುಮಾಡಿ, ವಾಗ್ರೂಪವಾದ ವಜ್ರಾಯುಧದಂತಿರುವ

ವಯಸ್ಯಾನ್ನೃಷಿಬಾಲಕಃ। *ಕೌಶಿಕ್ಯಾಪ ಉಪಸ್ಪೃಶ್ಯ ವಾಗ್ವಜ್ರಂ ವಿಸ
ಸರ್ಜಹ ॥ ೩೬ ॥ ಇತೋ ಲಂಘಿತ ಮರ್ಯಾದಂ ತಕ್ಷಕ ಸ್ಸಪ್ತಮೇ
ಹನಿ। ‡ಧಕ್ಷ್ಯತಿಸ್ಮ ಕುಲಾಂಗಾರಂ ಚೋದಿತೋ ಮೇ *ತತದ್ರುಹಂ ॥೩೭॥
ತತೋಭ್ಯೇತ್ಯಾಶ್ರಮಂ ಬಾಲೋ ಗಳೇ ಸರ್ಪಕಳೇಬರಂ । ಪಿತರಂ
ವೀಕ್ಷ್ಯ ದುಃಖಾರ್ತೋ ಮುಕ್ತ ಕಂಠೋ ರುರೋದಹ ॥ ೩೮ ॥ ಸವಾ
ಆಂಗಿರಸೋ ಬ್ರಹ್ಮನ್ ! ಶ್ರುತ್ವಾ ಸುತವಿಲಾಪನಂ । ಉನ್ಮೀಲ್ಯ ಶನಕೈ
ರ್ನೇತ್ರೇ ದೃಷ್ಟ್ವಾ ಚಾಂಸೇ ಮೃತೋರಗಂ ॥ ೩೯ ॥ ವಿಸೃಜ್ಯ ಪುತ್ರಂ

ಸ್ಯಾನ್-ಜೊತೆಗೆಯುವರನ್ನು ಕುರಿತು, ಇತಿ-ಹೀಗೆ, ಉಕ್ತ್ವಾ-ಹೇಳಿ, ಕೌಶಿಕ್ಯಪಃ - ಕೌಶಿಕೀನದಿಯ ಜಲ
ವನ್ನು, ಉಪಸ್ಪೃಶ್ಯ-ಆಚಮನವಮಾಡಿ, ವಾಗ್ವಜ್ರಂ-ವಾಗ್ರೂಪವಾದ ವಜ್ರಾಯುಧವನ್ನು, ವಿಸಸರ್ಜಹ-
ಬಿಟ್ಟನು. ॥ ೩೬ ॥ ಇತಃ-ಈದಿನದಿಂದ, ಸಪ್ತಮೇ-ಏಳನೆಯದಾದ, ಅಹನಿ-ದಿನದಲ್ಲಿ, ಮೇ - ನನ್ನಿಂದ,
ಚೋದಿತಃ-ಪ್ರೇರಿಸಲ್ಪಟ್ಟ, ತಕ್ಷಕಃ-ತಕ್ಷಕನು, ಲಂಘಿತಮರ್ಯಾದಂ - ಮರ್ಯಾದೆಯನ್ನು ಅತಿಕ್ರಮಿ
ಸಿದ, ಕುಲಾಂಗಾರಂ-ವಂಶಕ್ಕೆ ಅಗ್ನಿಪ್ರಾಯನಾದ, ಮೇ-ನನ್ನ, ತತದ್ರುಹಂ, ತತ-ತಂದೆಗೆ, ದ್ರುಹಂ-ದ್ರೋ
ಹವನ್ನೆಸಗಿದವನನ್ನು, ಧಕ್ಷ್ಯತಿ-ಸುಡುವನು. ॥ ೩೭ ॥ ತತಃ-ಅನಂತರದಲ್ಲಿ, ಬಾಲಃ-ಹುಡುಗನಾದ,
ಶೃಂಗಿಯು, ಆಶ್ರಮಂ-ತನ್ನಾಶ್ರಮವನ್ನು, ಅಭ್ಯೇತ್ಯ-ಹೊಂದಿ, ಗಳೇ-ಕೊರಳಲ್ಲಿ, ಸರ್ಪಕಳೇಬರಂ-ಹಾವನ್ನು
ಸುತ್ತಿಕೊಂಡಿರುವ, ಪಿತರಂ-ತಂದೆಯನ್ನು, ವೀಕ್ಷ್ಯ-ಕಂಡು, ದುಃಖಾರ್ತಃ-ಖಿನ್ನನಾಗಿ, ಮುಕ್ತಕಂಠಃ-ಗಟ್ಟ
ಯಾಗಿ, ರುರೋದಹ-ಅತ್ತನು. ॥೩೮॥ ಹೇಬ್ರಹ್ಮನ್-ಎಲೈ ಶೌನಕನೆ ! ಆಂಗಿರಸಃ-ಆಂಗಿರಸ್ಸಿನ ಕುಲದಲ್ಲಿ
ಜನಿಸಿದ, ಸಃ-ಆಶಮೀಕನು, ಸುತವಿಲಾಪನಂ - ಮಗನಗೋಳಾಟವನ್ನು, ಶ್ರುತ್ವಾ-ಕೇಳಿ, ಶನಕೈಃ-ಮೆ
ಲ್ಲನೆ, ನೇತ್ರೇ-ಕಣ್ಣುಗಳನ್ನು, ಉನ್ಮೀಲ್ಯ-ತೆರೆದು, ಅಂಸೇ - ತನ್ನ ಹೆಗಲಲ್ಲಿ, ಮೃತೋರಗಂ - ಸತ್ತ
ಹಾವನ್ನು, ದೃಷ್ಟ್ವಾಚ-ಕಂಡು, ॥ ೩೯ ॥ ವಿಸೃಜ್ಯ - ಆಸರ್ಪವನ್ನು ಬಿಸುಟು, ಪುತ್ರಂ - ಮಗ
ನನ್ನು ಕುರಿತು, ವತ್ಸ-ಮಗುವೆ ! ಕಸ್ಮಾದ್ಧಿ-ಏಕೆ, ರೋದಿಷಿ-ಅಳುತ್ತಿರುವೆ, ತೇ - ನಿನಗೆ, ಕೇನವಾ-

ಶಾಪವನ್ನಿಟ್ಟ ನಂತೆಂದರೆ; ॥ ೩೬ ॥ ಧರ್ಮಮರ್ಯಾದೆಯನ್ನು ಅತಿಕ್ರಮಿಸಿ, ನಮ್ಮ
ತಂದೆಯ ಕೊರಳಲ್ಲಿ ಸರ್ಪವನ್ನಿಟ್ಟ, ದ್ರೋಹಿಯೂ, ಕುಲಪಾಂಸನನೂ, ಆದ ಆಕ್ಷತ್ರಿ
ಯಾಧಮನನ್ನು, ಈಹೊತ್ತಿಗ ಏಳನೆಯದಿನದಲ್ಲಿ ನನ್ನಿಂದ ಪ್ರೇರಿತನಾದ ತಕ್ಷಕನು
ಕಡಿದುಕೊಲ್ಲಲಿ ॥೩೭॥ ಎಂದು ಶಾಪವನ್ನಿತ್ತು ಆಬಾಲನು ಆಶ್ರಮಕ್ಕೆಬಂದು, ಕೊರಳ
ಲ್ಲಿಹಾವು ಜೋಲುತ್ತಿರುವ ತಂದೆಯನ್ನುಕಂಡು, ದುಃಖದಿಂದ ಬಳಲಿ, ಗಟ್ಟಿಯಾಗಿ ಅಳು
ತ್ತಿರಲು ॥೩೮॥ ಆಂಗೀರಸಕುಲದಲ್ಲಿ ಜನಿಸಿದ ಆಶಮೀಕಮುನಿಯು ತಟ್ಟನೆ ಬಹಿರ್ಮು
ಖನಾಗಿ ಮಗನರೋದನ ಧ್ವನಿಯನ್ನುಕೇಳಿ, ಮೆಲ್ಲನೆ ಕಣ್ಣುತೆರದು, ತನ್ನಕೊರಳಲ್ಲಿ
ನೇತಾಡುತ್ತಿರುವ ಮೃತಸರ್ಪವನ್ನುಕಂಡು ॥ ೩೯ ॥

ಅದನ್ನುತೆಗದು ಬಿಸುಟು, ಮಗನನ್ನುಕುರಿತು,- ಮಗುವೆ? ಏಕೆ ಅಳುತ್ತಿರುವೆ ?

* ಕೌಶಿಕ್ಯಾಃ+ಅಪಃ, ಪಾ, ಕೌಶಿಕ್ಯಪಃ, ‡ ಪಾ. ಭಕ್ಷಿಷ್ಯತಿ-ನುಂಗುವನು.

ಪಪ್ರಚ್ಛ ವತ್ಸ! ಕಸ್ಮಾದ್ಧಿ ರೋದಿಷಿ? । ಕೇನ ವಾ ತೇವಿಪ್ರಕೃತ? ಮಿತ್ಯುಕ್ತ ಸ್ಸಂನ್ಯವೇದಯತ್ ॥ ೪೦ ॥ ನಿಶಮ್ಯ ಶಪ್ತ ಮತದರ್ಹಂ ನರೇಂದ್ರಂ ಸ ಬ್ರಾಹ್ಮಣೋ ನಾತ್ಮಜ ಮಭ್ಯನಂದತ್ । ಅಹೋ ! ಬತಾಽಂಹೋ ಮಹ ದಜ್ಞ! ತೇ ಕೃತ ಮಲ್ಪೀಯಸಿ ದ್ರೋಹ ಉರು ರ್ದಮೋ ಧೃತಃ॥೪೧॥ ನವೈ ನೃಭಿ ರ್ನರದೇವಂ ಪರಾಖ್ಯಂ ಸಂಮಾತು ಮರ್ಹಸ್ಯ ವಿಪಕ್ವ ಬುದ್ಧೇ! । ಯತ್ತೇಜಸಾ ದುರ್ವಿಷಹೇಣ ಗುಪ್ತಾ ವಿಂದಂತಿ ಭದ್ರಾಣ್ಯ ಕುತೋಭ ಯಾಃ ಪ್ರಜಾಃ ॥ ೪೨ ॥ ಅಲಕ್ಷ್ಯಮಾಣೇ ನರದೇವನಾಮ್ನಿ ರಥಾಂಗ

ಯಾರಿಂದ, ವಿಪ್ರಕೃತಂ-ಅಪಕಾರಮಾಡಲ್ಪಟ್ಟೆತು ! ಇತಿ-ಇಂತು, ಉಕ್ತಃ-ಹೇಳಲ್ಪಟ್ಟವನಾಗಿ, ಸಂನ್ಯವೇದಯತ್ - ಎಲ್ಲಸಂಗತಿಯನ್ನೂ ತಿಳುಹಿದನು. ॥ ೪೦ ॥ ಸಬ್ರಾಹ್ಮಣಃ-ಆ ಶಮೀಕನು, ಅತದರ್ಹಂ-ಶಾಪಕ್ಕೆ ಅರ್ಹನಲ್ಲದ, ನರೇಂದ್ರಂ-ಪರೀಕ್ಷಿತನನ್ನು, ಶಪ್ತಂ - ಶಪಿಸಲ್ಪಟ್ಟವನನ್ನಾಗಿ, ನಿಶಮ್ಯ-ಕೇಳಿ, ಆತ್ಮಜಂ-ಮಗನನ್ನು ಕುರಿತು, ನಾಭ್ಯನಂದತ್ - ಸಂತೋಷಿಸಲಿಲ್ಲ, ಹೇ ಅಜ್ಞ-ಎಲೈಮೂಢನೆ ! ತೇ-ನಿನ್ನಿಂದ, ಮಹತ್-ಬಹಳವಾದ, ಅಂಹಃ-ಪಾಪವು, ಕೃತಂ-ಮಾಡಲ್ಪಟ್ಟಿತು, ಅಲ್ಪೀಯಸಿ-ಸ್ವಲ್ಪವಾದ, ದ್ರೋಹೆ - ತಪ್ಪಿಗೆ, ಉರುಃ - ಬಹಳವಾದ, ದಮಃ - ದಂಡವು, ಕೃತಃ - ಮಾಡಲ್ಪಟ್ಟಿತು. ಅಹೋಬತ-ಅಯ್ಯೋ ! ಕಷ್ಟವು, ॥ ೪೧ ॥ ಅವಿಪಕ್ವಬುದ್ಧೇ-ಎಲೈ ದುಡುಕು ಬುದ್ಧಿಯುಳ್ಳ ಹುಡುಗನೇ ! ದುರ್ವಿಷಹೇಣ-ತಡೆಯಲಶಕ್ಯವಾದ, ಯತ್ತೇಜಸಾ-ಯಾವನ ಪರಾಕ್ರಮಾದಿಗಳಿಂದ, ಗುಪ್ತಾಃ-ರಕ್ಷಿಸಲ್ಪಟ್ಟ, ಪ್ರಜಾಃ-ಪ್ರಜೆಗಳು, ಅಕುತೋಭಯಾಃ-ಯಾರಿಂದಲೂ ಭಯವಿಲ್ಲದೆ, ಭದ್ರಾಣಿ-ನೆಮ್ಮದಿಯನ್ನು, ವಿಂದಂತಿ-ಪಡೆಯುವರೋ, ಅಂತಹ, ಪರಾಖ್ಯಂ-ವಿಷ್ಣುವಿನ ಅವತಾರವೆನಿಸಿರುವ, ನರದೇವಂ-ರಾಜನನ್ನು, ನೃಭಿಃ-ಮನುಷ್ಯರೊಡನೆ, ಸಂಮಾತುಂ-ಹೋಲಿಸುವುದಕ್ಕೆ, ನಾರ್ಹಸಿ - ಅರ್ಹನಾಗುವುದಿಲ್ಲ. ॥ ೪೨ ॥ ರಥಾಂಗಪಾಣೌ-ವಿಷ್ಣುರೂಪನಾದ, ನರದೇವನಾಮ್ನಿ - ರಾಜನು, ಅಲಕ್ಷ್ಯಮಾಣೇಸತಿ-ಕಾಣಲ್ಪಡದೆಹೋದರೆ, ಹೇ ಅಂಗ-ಎಲೈಮಗುವೆ, ಅಯಂಲೋಕಃ-ಈಜನರು, ಚೋರಪ್ರಚುರಃ-ಕಳ್ಳಕಾಕರಿಗೊಳಗಾಗಿ, ಅರಕ್ಷ್ಯ...ತ್, ಅರಕ್ಷ್ಯಮಾಣ-ಕಾವಲುಗಾರನಿಲ್ಲದ, ಅವಿ-ಕುರಿಗಳ, ವರೂ

ಯಾರೇನು ನಿನಗಪಕಾರವನ್ನು ಮಾಡಿದರು ? ಹೇಳೆಂದು ಬೆಸಗೊಳಲು, ಶೃಂಗಿಯು ನಡೆದ ವೃತ್ತಾಂತವೆಲ್ಲವನ್ನೂ ತಿಳುಹಿದನು ॥೪೦॥ ಆ ಬ್ರಾಹ್ಮಣೋತ್ತಮನಾದ ಶಮೀಕಮಹರ್ಷಿಯು, ಶಾಪಕ್ಕರ್ಹನಲ್ಲದ ಧರ್ಮಿಷ್ಠನಾದ ಪರೀಕ್ಷಿದ್ರಾಜನಿಗೆ ಶಾಪವನ್ನಿತ್ತ ವೃತ್ತಾಂತವನ್ನುಕೇಳಿ, ಮಗನಮೇಲೆ ಅಸಮಾಧಾನಗೊಂಡು, ಅಯ್ಯೋ! ಮೂಢನೆ ? ನೀನು ಬಹಳ ಪಾಪಕಾರ್ಯವನ್ನುಮಾಡಿದೆ, ಅಲ್ಪವಾದ ಅಪರಾಧಕ್ಕೆ ಅಧಿಕದಂಡವನ್ನೆಸಗಿದೆ॥ ಅಯ್ಯೋ! ತುಡುಗುಹುಡುಗನೆ ? ಯಾವಮಹಾತ್ಮನ ದುರ್ವಿಷಹವಾದ ಪ್ರತಾಪದಿಂದ ಸಲಹಲ್ಪಡುವ ಪ್ರಜೆಗಳು ಯಾವ ಈತಿಗಳೂ ಇಲ್ಲದೆ ನೆಮ್ಮದಿಯಾಗಿರುವರೋ, ವಿಷ್ಣುವಿನವತಾರವೆನಿಸಿರುವ ಅಂತಹ ಮಹಾರಾಜನನ್ನು ಸಾಮಾನ್ಯಜನರಂತೆಣಿಸಬಹುದೆ ?॥

ಭಗವದಂಶವೆಂದು ಪ್ರಖ್ಯಾತಿಪಡೆದ ಮಹಾರಾಜನು ಕಾಪಾಡದಿದ್ದಲ್ಲಿ, ಈ ಲೋಕವು, ಕಾವಲಿಲ್ಲದ ಕುರಿಗಳಹಿಂಡಿನಂತೆ,ಚೋರಮಯವಾಗಿ ಕ್ಷಣಮಾತ್ರದಲ್ಲಿ ನಾಶ

ಪೋಣಾ ವಯ ಮುಂಗ! ಲೋಕಃ। ತಥಾಹಿ ಚೋರಪ್ರಚುರೋ ವಿನಂಕ್ಷ್ಯ ತ್ಯ ರಕ್ಷಮಾಣಾಽವಿವರೂಥವತ್ ಕ್ಷಣಾತ್ ॥೪೩॥ ತದದ್ಯ ನಃ ಪಾಪ ಮುಪೈತ್ಯನನ್ವಯಂ ಯ ನ್ನಷ್ಟನಾಥಸ್ಯ ವಸೋರ್ವಿಲುಂಪಕಾತ್ । ಪರ ಸ್ಪರಂ ಘ್ನಂತಿ ಶಪಂತಿ ವೃಂಜತೇ ಪಶೂಂ ಸ್ತ್ರಿಯೋಽರ್ಥಾ ಪುರುದಸ್ಯ ವೋ ಜನಾಃ ॥೪೪॥ ತದಾರ್ಯಧರ್ಮಶ್ಚ ವಿಲೀಯತೇ ನೃಣಾಂ ವರ್ಣಾ ಶ್ರಮಾಚಾರಯುತ ಸ್ತ್ರಯೀಮಯಃ । ತತೋರ್ಥ ಕಾಮಾಭಿ ನಿವೇಶಿತಾ ತ್ಮನಾಂ ಶುನಾಂ ಕಪೀನಾ ಮಿವ ವರ್ಣಸಂಕರಃ ॥ ೪೫ ॥ ಧರ್ಮಪಾಲೋ

ಥವತ್-ಗುಂಪಿನಂತೆ, ಕ್ಷಣಾತ್-ಕ್ಷಣದಲ್ಲಿ, ನಂಕ್ಷ್ಯತಿ-ನಾಶವಾಗುವರು, ತಥಾಹಿ-ಅದು ಯುಕ್ತವೇಸರಿ ॥ ನಷ್ಟನಾಥಸ್ಯ-ರಾಜನನ್ನು ಕಳೆದುಕೊಂಡ ಜನರಿಗೆ, ವಸೋಃ-ಧನಾದಿಗಳನ್ನು,ವಿಲುಂಪಕಾತ್-ಅಪಹರಿಸಿದ ಕಳ್ಳಕಾಕರಿಂದ,ಯತ್-ಯಾವಪಾಪವುಂಟಾಗುವುದೋ, ಯತ್-ಯಾವಪಾಪದಿಂದ, ಜನಾಃ-ಜನರು, ಪುರುದಸ್ಯವಃ-ಕಳ್ಳರಿಗೀಡಾಗಿ, ಪರಸ್ಪರಂ-ಒಬ್ಬರನ್ನೊಬ್ಬರು, ಘ್ನಂತಿ-ಕೊಲ್ಲುವರೋ, ಶಪಂತಿ-ಬೈಯ್ಯುವರೋ, ಪಶೂನ್-ಪಶುಗಳನ್ನೂ, ಸ್ತ್ರಿಯಃ-ಸ್ತ್ರೀಯರನ್ನೂ, ಅರ್ಥಾನ್-ಧನಧಾನ್ಯಾದಿಗಳನ್ನೂ, ವೃಂಜತೇ-ಅಪಹರಿಸುವರೋ, ತತ್-ಅಂತಹ, ಪಾಪಂ-ಪಾಪವು, ಅದ್ಯ-ಈಗ, ನಃ-ನಮಗೆ, ಅನನ್ವಯಂ-ಸಂಬಂಧವಿಲ್ಲದೆಯೇ, ಉಪೈತಿ - ಬರುವುದು. ॥ ೪೪ ॥ ತದಾ-ಆಗ, ನೃಣಾಂ - ಮನುಷ್ಯರ, ವರ್ಣಾ...ತಃ, ವರ್ಣ-ಬ್ರಾಹ್ಮಣಾದಿ ಜಾತಿಗಳು, ಆಶ್ರಮ-ಬ್ರಹ್ಮಚರ್ಯಾದ್ಯಾಶ್ರಮಗಳು, ಆಚಾರ-ಜಾತಿಕಟ್ಟಳೆಗಳು, ಇವುಗಳಿಂದ, ಯುತಃ-ಕೂಡಿದ, ತ್ರಯೀಮಯಃ - ವೇದೋಕ್ತವಾದ, ಆರ್ಯಧರ್ಮಃ-ಸದಾಚಾರವು, ವಿಲೀಯತೇ-ನಾಶವಾಗುವುದು, ತತಃ-ಅನಂತರದಲ್ಲಿ, ಶುನಾಮಿವ-ನಾಯಿಗಳಂತೆಯೂ, ಕಪೀನಾಮಿವ-ಕೋತಿಗಳಂತೆಯೂ. ಅರ್ಥ...ನಾಂ, ಅರ್ಥ - ಧನಾದಿಗಳಲ್ಲಿಯೂ, ಕಾಮ - ಸ್ತ್ರೀಸಂಗಾದಿಗಳಲ್ಲಿಯೂ, ಅಭಿನಿವೇಶಿತ - ನೆಲೆಗೊಳಿಸಲ್ಪಟ್ಟ, ಆತ್ಮನಾಂ-ಮನಸ್ಸುಳ್ಳಜನರಿಗೆ, ವರ್ಣಸಂಕರಃ - ಜಾತಿಸಾಂಕರ್ಯವುಂಟಾಗುವುದು.॥ ೪೫ ॥ ಸಃ-ಆ, ನರಪತಿಸ್ತು - ರಾಜನಾದರೆ, ಧರ್ಮಪಾಲಃ - ಧರ್ಮಗಳನ್ನು ಸಲಹುವವನು, ಸಮ್ರಾಟ್ - ಚಕ್ರವರ್ತಿಯು, ಬೃಹಚ್ಛ್ರವಾಃ-ಕೀರ್ತಿವಂತನು, ಸಾಕ್ಷಾತ್ - ಪ್ರತ್ಯಕ್ಷವಾಗಿ, ಮಹಾಭಾಗವತಃ - ಭಗವದ್ಭಕ್ತಶಿಖಾಮಣಿಯು, ರಾಜರ್ಷಿಃ - ಋಷಿಯಂತಿರುವರಾಜನು, ಹಯಮೇಧ

ವಾಗುವುದು ॥೪೩॥ ಅಲ್ಲದೆ ರಾಜನಿಲ್ಲದದೇಶದಲ್ಲಿ ಕಳ್ಳಕಾಕರು ಹೆಚ್ಚಿ, ಜನರ ಧನಧಾನ್ಯಾದಿಗಳನ್ನು ಸೂರೆಗೊಳ್ಳುವರು,ಚೋರಪ್ರಚಾರವು ಹೆಚ್ಚಿ ಪ್ರಜೆಗಳೇ ಒಬ್ಬರನ್ನೊಬ್ಬರು ಕೊಲ್ಲುವರು, ಬೈಯ್ದಾಡುವರು, ಪಶುಗಳನ್ನು ಕದಿಯುವರು, ಸ್ತ್ರೀಯರನ್ನು ಕೆಡಿಸುವರು, ಮನೆಗಳನ್ನು ಕೊಳ್ಳೆಹೊಡೆಯುವರು, ಅರಾಜಕವಾಗಿ ಇಂತಹ ಪಾಪ ವುಂಟಾಗುವುದರಿಂದ, ಆಪಾಪವೀಗ ನಮಗೆ ನಿಷ್ಕಾರಣವಾಗಿ ಘಟಿಸುವುದಲ್ಲಾ? ॥ ೪೪ ॥ ಇಷ್ಟೇ ಅಲ್ಲದೆ ಆಗ ದೇಶದಲ್ಲಿ ವರ್ಣಾಶ್ರಮಗಳಿಂದ ಕೂಡಿದ ವೇದೋಕ್ತವಾದ ಪ್ರಜೆಗಳ ಸದಾಚಾರವು ಕೂಡಾ ನಾಶವಾಗುವುದು, ಬಳಿಕ ಜನರು ನಾಯಿಗಳಂತೆಯೂ ಕೋತಿಳಂತೆಯೂ, ಅರ್ಥಕಾಮಗಳನ್ನು ಮಾತ್ರ ಬಲುಸುವುದರಿಂದ ಜಾತಿ ಸಾಂಕರ್ಯವುಂಟಾಗುವುದು, ಆದುದರಿಂದ ಎಂತಹ ರಾಜನಿಗೂ ಶಾಪವನ್ನು ಕೊಡಕೂಡದು, ಇಂತಿರುವಾಗ

ನರಪತಿ ಸ್ಸತು ಸಮ್ರಾಟ್ ಬೃಹಚ್ಛ್ರವಾಃ । ಸಾಕ್ಷಾ ನ್ಮಹಾಭಾಗವತೋ ರಾಜರ್ಷಿ ರ್ಹಯಮೇಧ ಯಾಟ್ ॥ ೪೬ ॥ ಕ್ಷುತ್ತೃಟ್ಶ್ರಮ ಯುತೋ ದೀನೋ ನೈವಾಸ್ಮಚ್ಛಾಪ ಮರ್ಹತಿ । ಅಪಾಪೇಷು ಸ್ವಭೃತ್ಯೇಷು ಬಾಲೇನಾ ಪಕ್ವ ಬುದ್ಧಿನಾ ॥ ೪೭ ॥ ಪಾಪಂಕೃತಂ ಯದ್ಭಗವಾ ನ್ಸರ್ವಾತ್ಮಾ ಕ್ಷಂತು ಮರ್ಹತಿ । ತಿರಸ್ಕೃತಾ ವಿಪ್ರಲಬ್ಧಾ ಶ್ಶಪ್ತಾಃ ಕ್ಷಿಪ್ತಾ ಹತಾ ಅಪಿ ॥೪೮॥ ನಾಸ್ಯ ತತ್ಪ್ರತಿಕುರ್ವಂತಿ ತದ್ಭಕ್ತಾಃ ಪ್ರಭವೋಽಪಿಹಿ। ಶ್ರೀಸೂತಃ ॥ ಇತಿ ಪುತ್ರಕೃತಾಘೇನ ಸೋಽನುತಪ್ತೋ ಮಹಾಮುನಿಃ ॥

ಯಾಟ್ - ಅಶ್ವಮೇಧಯಾಗವನ್ನುಮಾಡಿದವನು. ॥ ೪೬ ॥

ಮತ್ತೂ, ಕ್ಷುತ್ - ಹಸಿವಿನಿಂದಲೂ, ತೃಟ್ - ನೀರಡಿಕೆಯಿಂದಲೂ, ಪರಿವೃತಃ - ವ್ಯಾಪ್ತನಾಗಿ, ದೀನಃ-ಶ್ರಾಂತನಾದ ಇಂತಹರಾಜನು ಅಸ್ಮಚ್ಛಾಪಂ - ನಮ್ಮಶಾಪಕ್ಕೆ, ನೈವಾರ್ಹತಿ - ತಕ್ಕವನೇಅಲ್ಲ ಅಪಕ್ವಬುದ್ಧಿನಾ - ದುಡುಕುಬುದ್ಧಿಯುಳ್ಳ, ಬಾಲೇನ-ಹುಡುಗನಿಂದ, ಅಪಾಪೇಷು - ಪಾಪರಹಿತರಾದ, ಸ್ವಭೃತ್ಯೇಷು-ತಮ್ಮಸೇವಕರಲ್ಲಿ, ಯತ್-ಯಾವ, ಪಾಪಂ-ಪಾಪವು, ಕೃತಂ-ಮಾಡಲ್ಪಟ್ಟಿತೋ, ತತ್-ಆಪಾಪವನ್ನು, ಸರ್ವಾತ್ಮಾ - ಸರ್ವಾತ್ಮಕನಾದ, ಭಗವಾನ್-ಭಗವಂತನು, ಕ್ಷಂತುಂ-ಮನ್ನಿಸುವುದಕ್ಕೆ, ಅರ್ಹತಿ-ಶಕ್ತನಾಗುತ್ತಾನೆ, ॥ ೪೭ ॥ ತದ್ಭಕ್ತಾಃ-ವಿಷ್ಣುಭಕ್ತರು, ಪ್ರಭವೋಽಪಿ-ಸಮರ್ಥರಾಗಿದ್ದರೂ ತಿರಸ್ಕೃತಾಃ-ನಿಂದಿಸಲ್ಪಟ್ಟರೂ, ವಿಪ್ರಲಬ್ಧಾಃ- ವಂಚಿಸಲ್ಪಟ್ಟರೂ, ಶಪ್ತಾಃ-ಶಪಿಸಲ್ಪಟ್ಟರೂ, ಹತಾಅಪಿ-ಹೊಡೆಯಲ್ಪಟ್ಟರೂ, ಅಸ್ಯ - ಇಂತು ಅಪಕಾರಮಾಡಿದವನಿಗೆ, ತತ್ಪ್ರತಿ - ಅದಕ್ಕೆಬದಲಾಗಿ, ನಕುರ್ವಂತಿ-ಮಾಡುವದಿಲ್ಲ, ಶ್ರೀಸೂತಃ-ಸೂತನು ಹೇಳುತ್ತಾನೆ, ಸಮಹಾಮುನಿಃ - ಆಶಮೀಕಮುನಿಯು, ಇತಿ-ಹೀಗೆ, ಪುತ್ರಕೃತಾಘೇನ-ಮಗನುಮಾಡಿದ ಪಾಪಕೃತ್ಯದಿಂದ, ಅನುತಪ್ತಃ-ಬಳಲಿದವನಾಗಿ ॥೪೮॥ ಸ್ವಯಂ-ತಾನು, ರಾಜ್ಞಾ - ರಾಜನಿಂದ, ವಿಪ್ರಕೃತೋಽಪಿ - ಅಪಕೃತನಾದರೂ, ತತ್-ಆ, ಅಘಂ-

---

ಧರ್ಮಪಾಲಕನೂ, ಸಾರ್ವಭೌಮನೂ; ಕೀರ್ತಿವಂತನೂ, ಭಕ್ತಾಗ್ರೇಸರನೂ, ಅಶ್ವಮೇಧಯಾಜಿಯೂ, ರಾಜರ್ಷಿಯೂ, ಹಸಿವು ನೀರಡಿಕೆಗಳಿಂದ ಪೀಡಿತನೂ, ಶ್ರಾಂತನೂ ಆದ ಪರೀಕ್ಷಿದ್ರಾಜನಿಗೆ ಶಾಪವನ್ನು ಕೊಡಬಹುದೆ ? ಎಂದು ಚಿಂತಿಸುತ್ತಾ, ಅವನ ಪಾಪಕ್ಕೆ ಯಾವ ಪ್ರಾಯಶ್ಚಿತ್ತವೂ ತೋರದೆ, ಬುದ್ಧಿಹೀನನಾದ ಬಾಲಕನು ನಿರಪರಾಧಿಗಳಾದ ತಮ್ಮ ಭೃತ್ಯರಲ್ಲಿ ಮಾಡಿರುವಪಾಪವನ್ನು ಸರ್ವಾತ್ಮಕನಾದ ಭಗವಂತನು ಪರಿಹರಿಸಿ ಕ್ಷಮಿಸಲಿ, ಎಂದು ಹರಸುತ್ತಿದ್ದನು, ಭಗವದ್ಭಕ್ತರು ಪ್ರತೀಕಾರವನ್ನು ಮಾಡುವುದಕ್ಕೆ ಸಮರ್ಥರಾಗಿದ್ದರೂ, ಇತರರು ಜರಿಯಲಿ, ವಂಚಿಸಲಿ, ಬೈಯ್ಯಲಿ, ಅವಮಾನಗೊಳಿಸಲಿ, ಏನುತಪ್ಪು ಮಾಡಿದರೂ ಅವರಿಗೆ ಪ್ರತಿಮಾಡುವವರಲ್ಲವಾದುದರಿಂದ ಪರೀಕ್ಷಿತನು ಪ್ರತಿಶಾಪವನ್ನು ಕೊಡಲಿಲ್ಲ. ಅಯ್ಯಾ ಬ್ರಾಹ್ಮಣರಿರಾ ! ಇಂತು ಆಶಮೀಕಮುನಿಯು, ಮಗನುಮಾಡಿದ ಪಾಪಕೃತ್ಯಕ್ಕಾಗಿ ದುಃಖಿಸುತ್ತಾ, ತಾನು ಆ ಪರೀಕ್ಷಿತನಿಂದ ಅಪಕೃತನಾಗಿದ್ದರೂ, ಅದನ್ನು ತಪ್ಪನ್ನಾಗಿಯೇ ಎಣಿಸಲಿಲ್ಲ, ಪ್ರಾಯಿಕವಾಗಿ ಲೋಕದಲ್ಲಿ ಸತ್ಪು

ಸ್ವಯಂ ವಿಪ್ರಕೃತೋ ರಾಜ್ಞಾ ನೈವಾಘಂ ತ ದಚಿಂತಯುತ್ । ಪ್ರಾಯಶ
ಸ್ಸಾಧವೋ ಲೋಕೇ ಪರೈ ರ್ದ್ವಂದ್ವೇಷು ಯೋಜಿತಾಃ । ನವ್ಯಥಂತಿ
ನಹೃಷ್ಯಂತಿ ಯತ * ಆತ್ಮಾಗುಣಾಶ್ರಯಃ ॥೫೦॥

ಇತ್ಯಷ್ಟಾದಶೋಧ್ಯಾಯಃ

ಅಪರಾಧವನ್ನು, ನಾಚಿಂತಯುತ್ - ಯೋಚಿಸಲಿಲ್ಲ, ಲೋಕೇ-ಲೋಕದಲ್ಲಿ, ಪ್ರಾಯಶಃ-ಬಹಳವಾಗಿ, ಸಾಧವಃ-ಸಜ್ಜನರು, ಪರೈಃ-ಇತರರಿಂದ, ದ್ವಂದ್ವೇಷು - ಸುಖದುಃಖಗಳಲ್ಲಿ, ಯೋಜಿತಾಃ-ಹೊಂದಿಸಲ್ಪಟ್ಟರೂ, ಆತ್ಮಾ-ಆತ್ಮನು, ಅಗುಣಾಶ್ರಯೋಯತಃ-ನಿರ್ಗುಣನಾದುದರಿಂದ, ನವ್ಯಥಂತಿ - ದುಃಖಿಸುವುದಿಲ್ಲ, ನಹೃಷ್ಯಂತಿ-ಸಂತೋಷಿಸುವುದಿಲ್ಲ ॥ ೫೦ ॥

ಅಷ್ಟಾದಶಾಧ್ಯಾಯಂ ಸಮಾಪ್ತಂ

ರುಷರು ಇತರರಿಂದ ಎಷ್ಟು ಕಷ್ಟಸುಖಗಳಿಗೊಳಗಾದರೂ, ಅವರು ತಗ್ಗುವುದೂಇಲ್ಲ, ಹಿಗ್ಗುವುದೂ ಇಲ್ಲ. ಪರಮಾತ್ಮನು ಗುಣಾಶ್ರಯನಲ್ಲವಾದುದರಿಂದ ಆ ಪರಮಾತ್ಮಸ್ವರೂಪವನ್ನು ಪಡೆದವರು ಗುಣಗಳಿಗೊಳಗಾಗದಿರುವುದೇನಚ್ಚರಿಯಲ್ಲ ಎಂದು ಸೂತನು ಶೌನಕಾದಿಗಳಿಗೆ ಹೇಳುತ್ತಿದ್ದನೆಂಬಲ್ಲಿಗೆ

ಭಾಗವತಚಕೋರ ಚಂದ್ರಿಕೆಯೊಳ್

ಹದಿನೆಂಟನೆಯ ಅಧ್ಯಾಯಂ ಮುಗಿದುದು

---

* ವಿ. ಗುಣಗಳಿಗಾಗಲಿ, ದೋಷಗಳಿಗಾಗಲಿ ತಾವೇ (ಜೀವರೇ) ಆಶ್ರಯರಾಗಿರುವುದರಿಂದ ಸಜ್ಜನರು, ಸುಖದುಃಖಗಳಿಗೆ ಹಿಗ್ಗಿತಗ್ಗುವುದಿಲ್ಲ.

ಓಂ ನಮಃ ಪರಮಾತ್ಮನೇ.

ಶ್ರೀಸೂತಃ॥ ಮಹೀಪತಿ ಸ್ತ್ವಥ ತತ್ಕರ್ಮ ಗರ್ಹ್ಯಂ ವಿಚಿಂತಯ ನ್ನಾತ್ಮ
ಕೃತಂ ಸುದುರ್ಮನಾಃ । ಅಹೋ ! ಮಯಾ ನೀಚ ಮನಾರ್ಯವತ್ಕೃತಂ
ನಿರಾಗಸಿ ಬ್ರಹ್ಮಣಿ ಗೂಢತೇಜಸಿ ॥ ೧ ॥ ಧ್ರುವಂ ತತೋ ಮೇ ಕೃತ
ದೇವ ಹೇಳನಾ ದ್ದುರತ್ಯಯಂ ವ್ಯಸನಂ ನಾತಿದೀರ್ಘಾತ್ । ತದಸ್ತು ಕಾಮಂ
ಹ್ಯಘ ನಿಷ್ಕೃತಾಯ ಮೇ ಯಥಾ ನಕುರ್ಯಾಂ ಪುನರೇವ ಮದ್ಧಾ ॥೨॥
ಅದ್ಯೈವ ರಾಜ್ಯಂ ಬಲ ಮೃದ್ಧಕೋಶಂ ಪ್ರಕೋಪಿತ ಬ್ರಹ್ಮಕುಲಾ

ಸೂತಃ-ಸೂತನುಹೇಳುತ್ತಾನೆ, ಅಥ-ಅನಂತರದಲ್ಲಿ, ಮಹೀಪತಿಃ-ಪರೀಕ್ಷಿದ್ರಾಜನು, ಆತ್ಮಕೃತಂ, ತನ್ನಿಂದಮಾಡಲ್ಪಟ್ಟ, ತತ್ಕರ್ಮ - ಆಕಾರ್ಯವನ್ನು, ಗರ್ಹ್ಯಂ-ನೀಚವನ್ನಾಗಿ- ವಿಚಿಂತಯನ್-ಚಿಂತಿಸಿ, ಸುದುರ್ಮನಾಃ-ದುಃಖಿತವಾದ ಮನಸ್ಸುಳ್ಳವನಾದನು, ನಿರಾಗಸಿ-ನಿರಪರಾಧಿಯಾದ, ಗೂಢತೇಜಸಿ-ಗುಪ್ತವಾದ ತೇಜಸ್ಸುಳ್ಳ, ಬ್ರಹ್ಮಣಿ-ಬ್ರಾಹ್ಮಣನಲ್ಲಿ, ಅನಾರ್ಯವತ್-ನೀಚಪುರುಷನಂತೆ, ಮಯಾ-ನನ್ನಿಂದ, ನೀಚಂ-ನಿಂದ್ಯವಾದಕೃತ್ಯವು, ಕೃತಂ-ಮಾಡಲ್ಪಟ್ಟಿತು, ಅಹೋ-ಕಷ್ಟವು ! ॥ ೧ ॥ ತತಃ-ಆದುದರಿಂದ, ಅಹಂ-ನಾನು, ಏವಂ-ಹೀಗೆ, ಪುನಃ-ಮರಳಿ, ಯಥಾ-ಹೇಗೆ, ನಕುರ್ಯಾಂ-ಮಾಡಲಾರೆನೋ, ತಥಾ-ಹಾಗೆ ಮೇ-ನನ್ನ, ಅಘನಿಷ್ಕೃತಾಯ - ಪಾಪದಪ್ರಾಯಶ್ಚಿತ್ತಕ್ಕಾಗಿ, ಕೃತ...ನಾತ್, ಕೃತ-ಮಾಡಲ್ಪಟ್ಟ ದೇವ-ದೇವತೆಗಳ, ಹೇಳನಾತ್-ಅಪಮಾನದಿಂದ, ದುರತ್ಯಯವ್ಯಸನಂ - ಅಪಾರವಾದದುಃಖವು, ಭವಿಷ್ಯತಿ-ಉಂಟಾಗುವುದು, ಧ್ರುವಂ - ನಿಶ್ಚಯವು, ತತ್-ಆದುದರಿಂದ ಆವ್ಯಸನವು, ಮೇ-ನನಗೆ, ನಾತಿದೀರ್ಘಾತ್-ಶೀಘ್ರವಾಗಿಯೇ, ಅದ್ಧಾ-ಸಾಕ್ಷಾತ್ತಾಗಿ, ಕಾಮಂ-ಬೇಕಾದಷ್ಟು, ಅಸ್ತು-ಉಂಟಾಗಲಿ, ॥ ೨ ॥ ಪ್ರಕೋಪಿತ...ಗ್ನಿಃ, ಪ್ರಕೋಪಿತ-ಪ್ರಜ್ವಲಿಸಲ್ಪಟ್ಟ, ಬ್ರಹ್ಮಕುಲ-ಬ್ರಾಹ್ಮಣಕುಲವೆಂಬ, ಅಗ್ನಿಃ-ಅಗ್ನಿ

॥ಪರೀಕ್ಷಿದ್ರಾಜನ ಪ್ರಾಯೋಪವೇಶ.॥

ಕಂ ॥ ಗಂಗೆಯೊ ಳುಪವಾಸದೆ ಮುನಿ । ಪುಂಗವರೊಡಗೂಡಿ ನೆಲಸಿರಲ್ ಭರತಕುಲೋ ।
ತ್ತುಂಗಪರೀಕ್ಷಿತ ನಲ್ಲಿಗೆ । ಮಂಗಳಮತಿ ಶುಕಮಹರ್ಷಿ ಬಂದಪ ನೊಲವಿಂ॥

ಅಯ್ಯಾ ಶೌನಕಾದಿಗಳಿರಾ ! ಅನಂತರದಲ್ಲಿ ಪರೀಕ್ಷಿದ್ರಾಜನು, ತಾನು ಮಹರ್ಷಿಯ ಕೊರಳಲ್ಲಿ ಮೃತಸರ್ಪವನ್ನು ಸುತ್ತಿದ ನೀಚಕೃತ್ಯವನ್ನು ಚಿಂತಿಸುತ್ತಾ ದುಃಖಾಕ್ರಾಂತನಾಗಿ, ಅಯ್ಯೋ ! ನಾನೆಂತಹ ಅಕಾರ್ಯವನ್ನುಮಾಡಿದೆನು ? ನಿರಪರಾಧಿಯೂ ಮಹಾಮಹಿಮನೂ ಆದ ಬ್ರಾಹ್ಮಣನಲ್ಲಿ ತುಡುಗುಹುಡುಗನಂತೆ ಅಪರಾಧವನ್ನು ಮಾಡಿದೆನಲ್ಲಾ ! ॥ ೧ ॥ ನಾನು ದೇವಬ್ರಾಹ್ಮಣರಿಗವಮಾನಮಾಡಿದುದರಿಂದ, ನನಗೆ ಅಪಾರವಾದ ದುಃಖವು ಸಂಭವಿಸುವುದೇನೋದಿಟ, ಇನ್ನುಮೇಲಾದರೂ ಇಂತಹ ಪಾಪಕೃತ್ಯಗಳನ್ನು ಮಾಡದಿರುವಂತೆ,ಈಗ ನಾನುಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತಾರ್ಥವಾಗಿ ಆ ವ್ಯಸನವು ಕಾಲಾಂತರದಲ್ಲಿ ನನ್ನ ಪುತ್ರಾದಿಗಳಿಗೆ ಸಂಕ್ರಮಿಸದೆ, ಬೇಗನೆ ನನಗೇಪ್ರಾಪ್ತವಾಗಲಿ ॥ ೨॥ ನಾನು ಕೆಣಕಿದ ಬ್ರಾಹ್ಮಣನಕೋಪಾಗ್ನಿಯು, ಚತುರಂಗ ಸೈನ್ಯದಿಂ

ನಲೋ ಮೇ। ದಹತ್ವ ಭದ್ರಸ್ಯ ಪುನರ್ನಮೇಽಭೂತ್ ಪಾಪೀಯಸೀ ಧೀ
ರ್ದ್ವಿಜದೇವ ಗೋಭ್ಯಃ ॥ ೩ ॥ ಸ ಚಿಂತಯನ್ನಿತ್ಥ ಮಥಾಽಶೃಣೋ
ದ್ಯಥಾ ಮುನೇಸ್ಸುತೋಕ್ತೋ ನಿಋತಿಸ್ತಕ್ಷಕಾಖ್ಯಾತ್। ಸ ಸಾಧು ಮೇ
ನೇ ನಚಿರೇಣ ತಕ್ಷಕಾನಲಂ ಪ್ರಸಕ್ತಸ್ಯ ವಿರಕ್ತಿಕಾರಣಂ ॥೪॥ ಅಥೋ
ವಿಹಾಯೇಮ ಮಮುಂಚ ಲೋಕೌ ವಿಮರ್ಶಿತೌ ಹೇಯತಯಾ ಪುರ
ಸ್ತಾತ್। ಕೃಷ್ಣಾಂಘ್ರಿಸೇವಾ ಮಧಿಮನ್ಯಮಾನ ಉಪಾವಿಶತ್ಪ್ರಾಯ ಮ
ಮರ್ತ್ಯನದ್ಯಾಂ ॥೫॥ ಯಾ ವೈ ಲಸಚ್ಛ್ರೀ ತುಲಸೀ ವಿಮಿಶ್ರಕೃಷ್ಣಾಂಘ್ರಿ

ಯು, ಅದ್ಯೈವ-ಈಗಲೇ, ಮೇ-ನನ್ನ, ಋದ್ಧಕೋಶಂ-ಬಂಡಾರದಿಂದತುಂಬಿರುವ, ರಾಜ್ಯಂ-ರಾಜ್ಯವನ್ನೂ, ಬಲಂ-ಸೈನ್ಯವನ್ನೂ, ದಹತು-ಸುಡಲಿ, ಅಭದ್ರಸ್ಯ-ಪಾಪಿಯಾದ,!ಮೇ-ನನಗೆ, ದ್ವಿಜ...ಭ್ಯಃ, ದ್ವಿಜ-ಬ್ರಾಹ್ಮಣರು, ದೇವ-ದೇವತೆಗಳು, ಗೋಭ್ಯಃ-ಗೋವುಗಳು, ಇವರಲ್ಲಿ, ಪುನಃ-ತಿರುಗಿ, ಪಾಪೀಯಸೀ-ಪಾಪಕರವಾದ, ಧೀಃ-ಬುದ್ಧಿಯು, ನಾಭೂತ್-ಉಂಟಾಗಬೇಡ, ॥ ೩ ॥ ಸಃ-ಆರಾಜನು, ಇತ್ಥಂ-ಹೀಗೆ, ಚಿಂತಯನ್ - ಯೋಚಿಸುತ್ತಾ, ಅಥ-ಆಬಳಿಕ, ಮುನೇಃ-ಶಮೀಕನ, ಸುತೋಕ್ತಃ-ಮಗನಾದ ಶೃಂಗಿಯಿಂದ ಹೇಳಲ್ಪಟ್ಟ, ತಕ್ಷಕಾಖ್ಯಾತ್-ತಕ್ಷಕನಿಂದ, ನಿಋತಿಃ-ಮೃತ್ಯುವು, ಯಥಾ-ಹೇಗೋ, ತಥಾ-ಹಾಗೆ, ಅಶೃಣೋತ್-ಕೇಳಿದನು, ಸಃ-ಅವನು, ಪ್ರಸಕ್ತಸ್ಯ-ವಿಷಯಾಸಕ್ತನಿಗೆ, ವಿರಕ್ತಿಕಾರಣಂ-ವೈರಾಗ್ಯ ಕಾರಣವಾದುದರಿಂದ, ನಚಿರೇಣ-ಶೀಘ್ರವಾಗಿ, ತಕ್ಷಕಾನಲಂ-ತಕ್ಷಕನವಿಷವೆಂಬ ಅಗ್ನಿಯನ್ನು, ಸಾಧು-ಒಳ್ಳೆಯದನ್ನಾಗಿ, ಮೇನೇ-ತಿಳಿದನು, ॥ ೪ ॥ ಅಥೋ-ಅನಂತರದಲ್ಲಿ, ಅವನು, ಪುರಸ್ತಾತ್-ರಾಜ್ಯವನ್ನಾಳುತ್ತಿದ್ದಾಗಲೇ, ಹೇಯತಯಾ-ಬಿಡತಕ್ಕವುಗಳನ್ನಾಗಿ, ವಿಮರ್ಶಿತೌ-ವಿಚಾರಿಸಲ್ಪಟ್ಟದ್ದ, ಇಮಂ-ಈಲೋಕವನ್ನು, ಅಮುಂಚ-ಪರಲೋಕವನ್ನೂ, ಲೋಕೌ-ಇವೆರಡನ್ನೂ, ವಿಹಾಯ-ಬಿಟ್ಟು, ಕೃಷ್ಣಾಂಘ್ರಿಸೇವಾಂ-ಕೃಷ್ಣನಪಾದಸೇವೆಯನ್ನು,, ಅಧಿ-ಸರ್ವಪುರುಷಾರ್ಥಗಳಿಗೂ ಅಧಿಕವನ್ನಾಗಿ, ಮನ್ಯಮಾನಃ-ತಿಳಿದು, ಅಮರ್ತ್ಯನದ್ಯಾಂ-ದೇವಗಂಗೆಯಲ್ಲಿ, ಪ್ರಾಯಂ-ಉಪವಾಸದಲ್ಲಿ, ಉಪಾವಿಶತ್-ಕುಳಿತುಕೊಂಡನು ॥ ೫ ॥ ಯಾವೈ-ಯಾವದೇವನದಿಯು, ಲಸ...ಚ್ಛ್ರೀ, ಲಸತ್-ಪ್ರಕಾಶವಾದ, ಶ್ರೀ-ಕಾಂತಿಯುಳ್ಳ,

ದಲೂ, ಕೋಶಸಮೃದ್ಧಿಯಿಂದಲೂ ಕೂಡಿದ ನನ್ನರಾಜ್ಯವನ್ನೀಗಲೇ ದಹಿಸಲಿ, ಇನ್ನು ಮೇಲಾದರೂ ಗೋಬ್ರಾಹ್ಮಣದೇವತೆಗಳ ವಿಷಯದಲ್ಲಿ ನನಗೀರೀತಿಯಾದ ಪಾಪಬುದ್ಧಿಯುಂಟಾಗದಿರಲಿ ॥ ೩ ॥ ಎಂದು ಚಿಂತಿಸುತ್ತಾ ಆರಾಜನು "ಶಮೀಕಪುತ್ರನಾದ ಶೃಂಗಿಯ ಶಾಪಾನುಸಾರವಾಗಿ ಇಂದಿಗೆ ಏಳನೆಯದಿನದಲ್ಲಿ ತಕ್ಷಕನಿಂದ ನಿನಗೆ ಮರಣವುಂಟಾಗುವುದು" ಎಂದು ಶಮೀಕಮಹರ್ಷಿಯ ಶಿಷ್ಯನುಹೇಳಿದ ವೃತ್ತಾಂತವನ್ನುಕೇಳಿ, ವಿಷಯಾಸಕ್ತನಾಗಿದ್ದ ತನಗೆ ವೈರಾಗ್ಯವುಂಟಾಗುವುದಕ್ಕೆ ಸರಿಯಾದಕಾರಣವು ದೊರೆತುದರಿಂದ ತನಗದೇ ಉತ್ತಮವಾದ ಪ್ರಾಯಶ್ಚಿತ್ತವೆಂದು ತಿಳಿದನು ॥ ೪ ॥

ಅನಂತರದಲ್ಲಿ ಆ ಪರೀಕ್ಷಿದ್ರಾಜನು, ರಾಜ್ಯವನ್ನಾಳುತ್ತಿದ್ದ ಕಾಲದಲ್ಲಿಯೇ ತತ್ವವಿಚಾರದಿಂದ ಈ ಲೋಕವನ್ನು ಪರಲೋಕವನ್ನುಕೂಡ ಅತಿತುಚ್ಛವೆಂದು ತಿಳಿದಿದ್ದನಾದುದರಿಂದ, ಆ ಎರಡು ಲೋಕಗಳೂ ನಶ್ವರಗಳೆಂದುತಿಳಿದು ಶ್ರೀಕೃಷ್ಣನ ಪಾದಸೇವೆಯೇ ಸಕಲಪುರುಷಾರ್ಥಗಳಿಗಿಂತಲೂ ಅಧಿಕವೆಂದು ಭಾವಿಸಿದವನಾಗಿ, ದೇವಗಂಗೆ

ರೇಣ್ವಾಭ್ಯಧಿಕಾಂಬುನೇತ್ರೀ । ಪುನಾತಿ ಲೋಕಾ ನುಭಯತ್ರ ಸೇಶಾನ್
ಕಸ್ತಾಂ ನಸೇವೇತ? ಮರಿಷ್ಯಮಾಣಃ ॥೬॥ ಇತಿ ವ್ಯವಚ್ಛಿದ್ಯ ಸಪಾಂ
ಡವೇಯಃ ಪ್ರಾಯೋಪವೇಶಂ ಪ್ರತಿ ವಿಷ್ಣು ಪದ್ಯಾಂ। ದಧ್ಯೌ ಮುಕುಂದಾ
ಘ್ರಿ ಮನನ್ಯಭಾವೋ ಮುನಿವ್ರತೋ ಮುಕ್ತಸಮಸ್ತಸಂಗಃ ॥ ೭ ॥
ತತ್ರೋಪಜಗ್ಮು ರ್ಭುವನಂ ಪುನಾನಾ ಮಹಾನುಭಾವಾ ಮುನಯ ಸ್ಸಶಿ
ಷ್ಯಾಃ । ಪ್ರಾಯೇಣ ತೀರ್ಥಾಭಿಗಮಾಪದೇಶೈ ಸ್ಸ್ವಯಂಹಿ ತೀರ್ಥಾನಿ
ಪುನಂತಿ ಸಂತಃ ॥ ೮ ॥ ಅತ್ರಿ ರ್ವಸಿಷ್ಠ ಶ್ಚ್ಯವನ ಶ್ಶರದ್ವಾ ನರಿಷ್ಟನೇಮಿ

ತುಲಸೀ-ತುಲಸಿಯಿಂದ, ವಿಮಿಶ್ರ-ಬೆರೆತಿರುವ, ಕೃಷ್ಣಾಂಘ್ರಿರೇಣು-ಕೃಷ್ಣನಪಾದಧೂಳಿಗಳಿಂದ, ಅಭ್ಯಧಿಕ-ಸರ್ವೋತ್ತಮವಾದ, ಅಂಬು-ನೀರಿಂದ, ನೇತ್ರೀ-ಹರಿಯುತ್ತಾ, ಉಭಯತ್ರ-ಒಳಗೂ ಹೊರಗೂ ಕೂಡ, ಸೇಶಾನ್-ಲೋಕಪಾಲರಿಂದಕೂಡಿದ, ಲೋಕಾನ್ - ಲೋಕಗಳನ್ನು, ಪುನಾತಿ-ಪಾವನಗೊಳಿಸುವುದೋ, ತಾಂ-ಅಂತಹ ಗಂಗೆಯನ್ನು, ಮರಿಷ್ಯಮಾಣಃ-ಸಾಯುತಕ್ಕವನು, ಕಃ-ಯಾವನುತಾನೇ, ನಸೇವೇತ-ಸೇವಿಸದಿರುವನು ?॥೬॥ಸಃ-ಅ, ಪಾಂಡವೇಯಃ-ಪಾಂಡವವಂಶಸ್ಥನಾದ ಪರೀಕ್ಷಿದ್ರಾಜನು, ವಿಷ್ಣುಪದ್ಯಾಂ-ಗಂಗೆಯಲ್ಲಿ, ಇತಿ-ಹೀಗೆ, ಪ್ರಾಯೋಪವೇಶಂಪ್ರತಿ-ಉಪವಾಸವ್ರತವನ್ನು ಕುರಿತು, ವ್ಯವಚ್ಛಿದ್ಯ-ನಿಶ್ಚಯಿಸಿ, ಮುಕ್ತಸಮಸ್ತಸಂಗಃ-ಸಕಲಸಂಗಗಳನ್ನೂ ಬಿಟ್ಟವನಾದುದರಿಂದ, ಮುನಿವ್ರತಃ-ಋಷಿಚರ್ಯೆಯುಳ್ಳವನಾಗಿ, ಅನನ್ಯಭಾವಃ-ಬೇರೆಮನಸ್ಸನ್ನಿಡದೆ, ಮುಕುಂದಾಂಘ್ರಿಂ-ಕೃಷ್ಣನಪಾದವನ್ನು, ದಧ್ಯೌ-ಧ್ಯಾನಿಸಿದನು, ॥ ೭ ॥ ಭುವನಂ-ಲೋಕವನ್ನು, ಪುನಾನಾಃ-ಪರಿಶುದ್ಧಮಾಡುವ, ಮಹಾನುಭಾವಾಃ-ಮಹಾಮಹಿಮೆಯುಳ್ಳ, ಮುನಯಃ-ಮಹರ್ಷಿಗಳು. ಸಶಿಷ್ಯಾಃ - ಶಿಷ್ಯರಿಂದೊಡಗೂಡಿ, ತತ್ರ-ಅಲ್ಲಿಗೆ, ಉಪಜಗ್ಮುಃ - ಬಂದರು, ಸಂತಃ - ಸಾಧುಗಳು, ಪ್ರಾಯೇಣ-ಬಹಳಮಟ್ಟಿಗೆ, ತೀರ್ಥಾ...ಶೈಃ, ತೀರ್ಥ-ತೀರ್ಥಗಳ, ಅಭಿಗಮ-ಯಾತ್ರೆಯ, ಅಪದೇಶೈಃ-ನೆವದಿಂದ, ಸ್ವಯಂ-ತಾವೇ, ತೀರ್ಥಾನಿ - ತೀರ್ಥಗಳನ್ನು, ಪುನಂತಿಹಿ - ಪವಿತ್ರಮಾಡುವರಷ್ಟೆ. ॥ ೮ ॥ ಅತ್ರಿಯು, ವಶಿಷ್ಠನು, ಚ್ಯವನನು, ಶರದ್ವಂತನು, ಅರಿಷ್ಟನೇಮಿಯು, ಭೃಗುವು, ಅಂಗಿರಸ್ಸು, ಪರಾಶರನು, (1) ವಿಶ್ವಾಮಿತ್ರನು, ಪರಶು

ಯಲ್ಲಿ ನಿರಶನವ್ರತದಿಂದ ಕುಳಿತುಕೊಂಡನು ॥೫॥ ಯಾವಗಂಗೆಯು, ತಳತಳಿಸುತ್ತಿರುವ ತುಳಸೀದಳಗಳಿಂದ ಮಿಶ್ರವಾಗಿ,ಶ್ರೀಕೃಷ್ಣನಪಾದ ಧೂಳಿಯಿಂದ ಪರಮಪವಿತ್ರವೆನಿಸಿದ ಜಲದಿಂದ ಪ್ರವಹಿಸುತ್ತಾ, ಇಂದ್ರಾದಿಲೋಕಪಾಲಕರಿಂದ ಕೂಡಿದ ಸಕಲಲೋಕಗಳನ್ನೂ, ಒಳಗೂ ಹೊರಗೂ, ಪಾವನಗೊಳಿಸುತ್ತಿರುವದೋ, ಅಂತಹ ಲೋಕಪಾವನಿಯಾದ ಗಂಗೆಯನ್ನು ಮರಣಕಾಲದಲ್ಲಿ ಯಾವನುತಾನೇ ಸೇವಿಸಲಾರನು ? ॥ ೬ ॥ ಪಾಂಡವಕುಲತಿಲಕನಾದ ಆಪರೀಕ್ಷಿದ್ರಾಜನು ಗಂಗೆಯಲ್ಲಿ ಪ್ರಾಯೋಪವೇಶವನ್ನುಮಾಡುವುದಕ್ಕಾಗಿ ನಿಶ್ಚಯಿಸಿ, ಸಕಲಸಂಗ ಪರಿತ್ಯಾಗವಮಾಡಿ, ಋಷಿಚರ್ಯೆಯನ್ನವಲಂಬಿಸಿದವನಾಗಿ, ಏಕಾಂತವಾದ ಮನಸ್ಸಿನಿಂದ ಶ್ರೀಕೃಷ್ಣನ ಪಾದಕಮಲವನ್ನು ಧ್ಯಾನಿಸುತ್ತಿದ್ದನು ॥ ೭ ॥ ಪ್ರಾಯೇಣ ಲೋಕದಲ್ಲಿ ಸಾಧುಗಳು ತೀರ್ಥಯಾತ್ರಾವ್ಯಾಜದಿಂದ ತಾವೇ ಆತೀರ್ಥಗಳನ್ನು ಪಾವನಗೊಳಿಸುವರಾದುದರಿಂದ,ಆಸಮಯಕ್ಕೆ ಸರಿಯಾಗಿ,ಲೋಕಪಾವನರೂ, ಮಹಾಮಹಿಮರೂ, ಆದ ಅತ್ರಿ, ವಶಿಷ್ಠ, ಚ್ಯವನ, ಶರದ್ವಂತ, ಅರಿಷ್ಟ

ಭೃಗು ರಂಗಿರಾಶ್ಚ । ಪರಾಶರೊ (1) ಗಾಧಿಸುತೋಽಥರಾಮ ಉಚಥ್ಯ ಇಂದ್ರಪ್ರಮದೇ ಧ್ಮವಾಹೌ ॥ ೯ ॥ ಮೇಧಾತಿಥಿ ರ್ದೇವಲ ಆರ್ಷ್ಟಿ ಷೇಣೋ ಭರದ್ವಾಜೋ ಗೌತಮಃ ಪಿಪ್ಪಲಾದಃ । ಮೈತ್ರೇಯ ಔರ್ವಃ ಕವಷಃ(೨)ಕುಂಭಯೋನಿ ರ್ದ್ವೈಪಾಯನೋ ಭಗವಾನ್ ನಾರದಶ್ಚ ॥೧೦॥ ಅನ್ಯೇಚ ದೇವರ್ಷಿ *ಬ್ರಹ್ಮರ್ಷಿ ವರ್ಯಾ ರಾಜರ್ಷಿವರ್ಯಾ ಅರುಣಾದ ಯಶ್ಚ । ನಾನಾರ್ಷೇಯಪ್ರವರಾಂ ಸ್ತಾನ್ ಸಮೇತಾ ನಭ್ಯರ್ಚ್ಯ ರಾಜಾ ಶಿರಸಾ ವವಂದೇ ॥ ೧೧ ॥ ಸುಖೋಪವಿಷ್ಟೇ ಷ್ವಥ ತೇಷು ಭೂಯಃ ಕೃತಪ್ರಣಾಮ ಸ್ಸ್ವಚಿಕೀರ್ಷಿತಂ ಯತ್ । ವಿಜ್ಞಾಪಯಾಮಾಸ ವಿವಿಕ್ತ ಚೇತಾ ಉಪಸ್ಥಿತೋಽಗ್ರೇಽಭಿಗೃಹೀತಪಾಣಿಃ ॥೧೨॥ ಪರೀಕ್ಷಿದುವಾಚ॥

ರಾಮನು, ಉಚಥ್ಯನು, ಇಂದ್ರಪ್ರಮದ, ಇಧ್ಮವಾಹರು ॥ ೯ ॥ ಮೇಧಾತಿಥಿಯು, ದೇವಲನು, ಆರ್ಷ್ಟಿ ಷೇಣನು, ಭರದ್ವಾಜನು, ಗೌತಮನು, ಪಿಪ್ಪಲಾದನು, ಮೈತ್ರೇಯನು, ಔರ್ವನು, ಕವಷನು, (೨) ಅಗಸ್ತ್ಯನು, ದ್ವೈಪಾಯನನು, ಭಗವಂತನಾದ ನಾರದನು, ॥ ೧೦ ॥

ಅನ್ಯೇಚ-ಇತರರಾದ, ದೇವ...ರ್ಯಾಃ, ದೇವರ್ಷಿ-ದೇವಋಷಿಗಳು, ಬ್ರಹ್ಮರ್ಷಿವರ್ಯಾಃ-ಬ್ರಹ್ಮರ್ಷಿಶ್ರೇಷ್ಠರೂ, ರಾಜರ್ಷಿವರ್ಯಾಃ-ರಾಜರ್ಷಿಶ್ರೇಷ್ಠರೂ,ಅರುಣಾದಯಶ್ಚ-ಅರುಣನೇ ಮೊದಲಾದ ಕಾಂಡ ಋಷಿಗಳೂಕೂಡಬಂದರು, ರಾಜಾ-ಪರೀಕ್ಷಿತನು, ನಾನಾ...ರ್ನ್, ನಾನಾ-ಅನೇಕಗಳಾದ, ಆರ್ಷೇಯ-ಋಷಿಗೋತ್ರಗಳಲ್ಲಿ, ಪ್ರವರಾನ್-ಶ್ರೇಷ್ಠರಾದ, ಸಮೇತಾನ್-ಸೇರಿರುವ, ತಾನ್-ಅವರೆಲ್ಲರನ್ನೂ, ಅಭ್ಯರ್ಚ್ಯ-ಪೂಜಿಸಿ, ಶಿರಸಾ-ತಲೆಯಿಂದ, ವವಂದೇ - ನಮಸ್ಕರಿಸಿದನು, ॥ ೧೧ ॥ ಅಥ - ಅನಂತರದಲ್ಲಿ, ತೇಷು-ಅವರು, ಸುಖೋಪವಿಷ್ಟೇಷು - ಸುಖವಾಗಿಕುಳಿತುಕೊಳ್ಳಲು, ಭೂಯಃ - ಮರಳಿ, ಕೃತಪ್ರಣಾಮಃ-ನಮಸ್ಕಾರವನ್ನುಮಾಡಿ, ವಿವಿಕ್ತಚೇತಾಃ-ಶುದ್ಧವಾದಮನಸ್ಸುಳ್ಳವನಾಗಿ, ಉಪಸ್ಥಿತಃ - ಬಳಿ ಹಿಡಿದು, ಅಗ್ರೇ-ಮುಂದುಗಡೆಯಲ್ಲಿ, ಅಭಿಗೃಹೀತಪಾಣಿಃ - ಕೈಗಳನ್ನುಜೋಡಿಸಿ, ಸ್ವಚಿಕೀರ್ಷಿತಂ - ತಾನುಮಾಡುತ್ತಿರುವಕೆಲಸವು, ಯತ್ - ಯಾವುದುಂಟೋ, ಅದನ್ನು, ವಿಜ್ಞಾಪಯಾಮಾಸ - ಬಿನ್ನವಿಸಿದನು ॥೧೨॥ ಪರೀಕ್ಷಿತನು ಹೇಳಿದನು; ಯತಃ-ಯಾವುದರಿಂದ, ರಾಜ್ಞಾಂ-ರಾಜರ, ಕುಲಂ-ಕುಲವು,

ನೇಮಿ, ಭೃಗು, ಅಂಗಿರಸ್ಸು, ಪರಾಶರ, ಗಾಧಿರಾಜನ ಮಗನಾದ ವಿಶ್ವಾಮಿತ್ರ, ಪರಶುರಾಮ, ಉಚಥ್ಯ, ಇಂದ್ರಪ್ರಮದ, ಇಧ್ಮವಾಹ, ಮೇಧಾತಿಥಿ, ದೇವಲ, ಆರ್ಷ್ಟಿಷೇಣ, ಭರದ್ವಾಜ, ಗೌತಮ, ಪಿಪ್ಪಲಾದ, ಮೈತ್ರೇಯ, ಔರ್ವ, ಕವಷ, ಅಗಸ್ತ್ಯ, ವ್ಯಾಸ, ನಾರದ, ಇವರೂ, ಇನ್ನೂ ಇತರರಾದ ದೇವರ್ಷಿಗಳು, ಬ್ರಹ್ಮರ್ಷಿಗಳು, ರಾಜರ್ಷಿಗಳು, ಅರುಣನೇ ಮೊದಲಾದ ಕಾಂಡಋಷಿಗಳು, ಅಲ್ಲದೆ ಅನೇಕ ಗೋತ್ರಪ್ರವರ್ತಕರಾದ ಮಹರ್ಷಿಗಳು, ಇವರೆಲ್ಲರೂ ಒಟ್ಟಾಗಿಬಂದು ಕಾಣಲು, ಆಪರೀಕ್ಷಿದ್ರಾಜನು ಅವರೆಲ್ಲರನ್ನೂ ಉಚಿತಪ್ರಕಾರವಾಗಿ ಪೂಜಿಸಿ ಸಾಷ್ಟಾಂಗವಾಗಿ ವಂದಿಸಿದನು ॥೧೧॥ ಅನಂತರದಲ್ಲಿ ಅವರೆಲ್ಲರೂ ಸುಖವಾಗಿ ಕುಳಿತುಕೊಳ್ಳಲು, ಮರಳಿ ವಂದನೆಯನ್ನು ಗೈದು, ಪರಿಶುದ್ಧಮನಸ್ಕನಾಗಿ ಬಳಿಗೆಬಂದು ಕೈಜೋಡಿಸಿ ಮುಂದೆನಿಂದು, ತಾನು ಮಾಡಲೆಳಸಿರುವುದ

ಅಹೋ! ವಯಂಧನ್ಯತಮಾ ನೃಪಾಣಾಂ ಮಹತ್ತಮಾನುಗ್ರಹಣೀಯಶೀಲಾಃ।
ರಾಜ್ಞಾಂ ಕುಲಂ ಬ್ರಾಹ್ಮಣ ಪಾದಶೌಚಾ *ದ್ದೂರಾ ದ್ವಿಸೃಷ್ಟಂಬತ! ಗರ್ಹ್ಯ
ಕರ್ಮ ॥೧೩॥ ತಸ್ಯೈವ ಮೇಽಘಸ್ಯ ಪರಾವರೇಶೋ ವ್ಯಾಸಕ್ತ ಚಿತ್ತ
ಸ್ಯ ಗೃಹೇಷ್ವಭೀಕ್ಷ್ಣಂ। ನಿರ್ವೇದಮೂಲೋ ದ್ವಿಜಶಾಪ ರೂಪೋ ಯತ್ರ
ಪ್ರಸಕ್ತೋ ಭಯ ಮಾಶು ಧತ್ತೇ ॥ ೧೪ ॥ ತಂ ಮೋಪಯಾತಂ ಪ್ರತಿ
ಯಂತು ವಿಪ್ರಾ! ಗಂಗಾಚ ದೇವೀ ಧೃತಚಿತ್ತ ಮೀಶೇ। ದ್ವಿಜೋಪಸೃಷ್ಟಃ

ಬ್ರಾಹ್ಮಣ...ಚಾತ್, ಬ್ರಾಹ್ಮಣ-ಬ್ರಾಹ್ಮಣರ, ಪಾದ-ಪಾದಗಳ, ಶೌಚಾತ್-ಪ್ರಕ್ಷಾಳನೋದಕಕ್ಕಿಂತಲೂ, ದೂರಾತ್-ದೂರವಾಗಿ, ವಿಸೃಷ್ಟಂ-ಬಿಡಲ್ಪಟ್ಟಿತೋ, ಅದರಲ್ಲಿಯೂ, ಯಸ್ಯ-ಯಾವನ, ಕರ್ಮ-ಕಾರ್ಯವು, ಗರ್ಹ್ಯಂ-ನಿಂದ್ಯವಾದುದೋ, ವಯಂ-ಅಂತಹನಾವು, ಮಹ...ಲಾಃ, ಮಹತ್ತಮ-ಮಹಾತ್ಮರಿಂದ, ಅನುಗ್ರಹಣೀಯ-ಅನುಗ್ರಹಿಸಲ್ಪಡುವ, ಶೀಲಾಃ-ನಡವಳಿಯುಳ್ಳವರಾದುದರಿಂದ, ನೃಪಾಣಾಂ-ರಾಜರಲ್ಲಿ, ಧನ್ಯತಮಾಃ-ಅತ್ಯಂತ ಧನ್ಯರು, ಅಹೋ - ಆಶ್ಚರ್ಯವು ॥ ೧೩ ॥

ಯತ್ರ-ಯಾವಶಾಪವುಂಟಾದಲ್ಲಿ, ಗೃಹೇಷು - ಮನೆಯಲ್ಲಿ, ಸಕ್ತಃ - ಆಸಕ್ತನಾದವನು, ಆಶು-ಬೇಗನೆ, ಭಯಂ--ಭಯವನ್ನು, ಧತ್ತೇ-ಪಡೆಯುವನೋ, ನಿರ್ವೇದಮೂಲಃ-ವೈರಾಗ್ಯಕಾರಣನಾದ-ಪರಾವರೇಶಃ - ಜಗನ್ನಾಥನಾದಭಗವಂತನೇ, ತಸ್ಯ - ಆ ನಿಂದ್ಯಕರ್ಮವನ್ನುಮಾಡಿದ, ಅಘಸ್ಯ-ಪಾಪಿಯಾದ, ಅಭೀಕ್ಷ್ಣಂ-ಬಹಳವಾಗಿ, ಗೃಹೇಷು - ಸಂಸಾರದಲ್ಲಿ, ವ್ಯಾಸಕ್ತಚಿತ್ತಸ್ಯ-ಮನಸ್ಸನ್ನಿಟ್ಟಿರುವ, ಮೇ-ನನಗೆ, ದ್ವಿಜಶಾಪರೂಪಃ-ಬ್ರಾಹ್ಮಣಶಾಪರೂಪನು, ಆದನು, ॥ ೧೪ ॥ ಹೇವಿಪ್ರಾಃ - ಎಲೈ ಬ್ರಾಹ್ಮಣರಿರಾ ! ತಂ-ಆ, ಮಾ-ನನ್ನನ್ನು, ಉಪಯಾತಂ ಮರೆಹೊಕ್ಕವನನ್ನಾಗಿ, ಜಾನಂತು-ತಿಳಿ

ನ್ನಿಂತು ಬಿನ್ನವಿಸಿದನು ॥ ೧೨ ॥ ಮಹಾತ್ಮರಿರಾ ! ರಾಜಸಗುಣ ಭರಿತವಾದ ರಾಜಕುಲವು, ಬ್ರಾಹ್ಮಣರ ಪಾದಪ್ರಕ್ಷಾಳನೋದಕಕ್ಕಿಂತಲೂ ದೂರದಲ್ಲಿಬಿಡತಕ್ಕುದಾಗಿರುವುದು. ಅಕಟಾ! ಅದರಲ್ಲಿಯೂ, ನಾನತಿನೀಚಕೃತ್ಯವನ್ನುಮಾಡಿದವನು, ಇಂತಿದ್ದರೂ, ಯಾರಿಗೂ ಲಭಿಸಲಾರದ ಮಹನೀಯರಾದ ತಮ್ಮ ಅನುಗ್ರಹಕ್ಕೆ ಪಾತ್ರತೆಯನ್ನು ಪಡೆದುದರಿಂದ, ಈರಾಜಕುಲದಲ್ಲಿ ನಾನೇ ಬಹಳ ಧನ್ಯನು ॥ ೧೩ ॥

ಇಂತು ತಮ್ಮ ಅನುಗ್ರಹವೂ ಉಂಟಾದುದಲ್ಲದೆ, ಯಾವಶಾಪವೆಂಬುವುದು ಬದಗಿದಲ್ಲಿ ಸಂಸಾರ ವಿಷಯಾಸಕ್ತನಾದವನು ಕೂಡಲೇಭಯವನ್ನು ಪಡೆಯುವನೋ, ಸಂಸಾರ ವಿಷಯಗಳಲ್ಲಿ ಓಲಾಡುತ್ತಾ ಅತಿನೀಚಕೃತ್ಯವನ್ನು ಮಾಡಿರುವ ಪಾಪಿಯಾದ ನನ್ನನ್ನುದ್ಧರಿಸುವುದಕ್ಕಾಗಿ ಚರಾಚರ ಜಗನ್ನಾಯಕನಾದ ಭಗವಂತನೇ ವೈರಾಗ್ಯಕಾರಣವಾಗಿ ಅಂತಹ ಬ್ರಾಹ್ಮಣ ಶಾಪರೂಪವಾದನು, ಇದೂ ನನ್ನ ಭಾಗ್ಯವಲ್ಲವೇ ॥ ೧೪ ॥ ಅಯ್ಯಾ ಮಹಾತ್ಮರಾದ ಬ್ರಾಹ್ಮಣೋತ್ತಮರಿರಾ ! ಚಿತ್ತೈಕಾಗ್ರತೆಯಿಂದ ಭಗವಂತ

* ವಿ. ಆರಾತ್-ರಾಜಕುಲವು ನಿಂದ್ಯಕರ್ಮವುಳ್ಳದ್ದು. ಸ್ಮೃತಿ. ಬ್ರಾಹ್ಮಣಾನಾಂ ಪಾದಶೌಚಾತ್ಪಾದಪ್ರಕ್ಷಾಳನೋದಕಾತ್ । ದೂರಾ ದುಚ್ಛಿಷ್ಟವಿಣ್ಮೂತ್ರ ಪಾದಾಂಭಾಂಸಿ ಸಮುತ್ಸೃಜೇತ್॥

ಕುಹಕ ಸ್ತಕ್ಷಕಾಖ್ಯೋ ದಶತ್ವಲಂ ಗಾಯತ ವಿಷ್ಣುಗಾಥಾಃ ॥೧೫॥ ಪುನಶ್ಚ ಭೂಯಾ ದ್ಭಗವತ್ಯನಂತೇ ರತಿಪ್ರಸಂಗಶ್ಚ ತದಾಶ್ರಯೇಷು । ಮಹತ್ಸು ಯಾಂ ಯಾ ಮುಪಯಾಮಿ ಸೃಷ್ಟಿಂ ಮೈತ್ರ್ಯಸ್ತು ಸರ್ವತ್ರ ನಮೋ ದ್ವಿಜೇಭ್ಯಃ ॥ ೧೬ ॥ ಇತಿ ಸ್ಮರಾಜಾ ವ್ಯವಸಾಯಯುಕ್ತಃ ಪ್ರಾಚೀನಮೂಲೇಷು ಕುಶೇಷು ಧೀರಃ । ಉದಙ್ಮುಖೋ ದಕ್ಷಿಣಕೂಲ ಆಸ್ತೇ ಸಮುದ್ರಪತ್ನ್ಯಾ ಸ್ಸ್ವಸುತನ್ಯಸ್ತಭಾರಃ ॥ ೧೭ ॥ ಏವಂತು ತಸ್ಮಿ ನ್ನರದೇವ

ಯಿರಿ, ದೇವೀ-ಪ್ರಕಾಶಮಾನಳಾದ, ಗಂಗಾಚ-ಗಂಗೆಯೂ, ಪ್ರತ್ಯೇತು-ತಿಳಿದುಕೊಳ್ಳಲಿ, ಈಶೇ - ಭಗವಂತನಲ್ಲಿ, ಧೃತಚಿತ್ತಂ-ಮನಸ್ಸನ್ನಿಟ್ಟಿರುವ ನನ್ನನ್ನು, ದ್ವಿಜೋಪಸೃಷ್ಟಃ - ಬ್ರಾಹ್ಮಣರಿಂದ ಪ್ರೇರಿತನಾದ, ಕುಹಕಃ-ಕುತ್ಸಿತನಾದ, ತಕ್ಷಕಾಖ್ಯಃ-ತಕ್ಷಕನೆಂಬವನು, ಅಲಂ - ಚೆನ್ನಾಗಿ, ದಶತು-ಕಚ್ಚಲಿ, ವಿಷ್ಣುಗಾಥಾಃ-ವಿಷ್ಣುವಿನ ಚರಿತ್ರೆಗಳನ್ನು, ಅಲಂಗಾಯತ-ಚೆನ್ನಾಗಿ ಗಾಯನಮಾಡಿರಿ ॥೧೫॥ ಪುನಶ್ಚ-ತಿರುಗಿ, ಯಾಂಯಾಂ-ಯಾವ ಯಾವ, ಸೃಷ್ಟಿಂ-ಜನ್ಮವನ್ನು, ಉಪಯಾಮಿ-ಪಡೆಯುವೆನೋ, ಆಜನ್ಮದಲ್ಲಿ, ಅನಂತೇ-ನಾಶರಹಿತನಾದ, ಭಗವತಿ-ಭಗವಂತನಲ್ಲಿಯೂ, ತದಾಶ್ರಯೇಷು-ಆಭಗವದ್ಭಕ್ತರಾದ, ಮಹತ್ಸುಚ-ಮಹಾತ್ಮರಲ್ಲಿಯೂ, ಮೇ-ನನಗೆ, ರತಿಪ್ರಸಂಗಃ-ಪ್ರೀತಿಯು, ಭೂಯಾತ್ - ಉಂಟಾಗಲಿ, ಸರ್ವತ್ರ-ಸಕಲಭೂತಗಳಲ್ಲಿಯೂ, ಮೈತ್ರೀ-ಸ್ನೇಹವು, ಅಸ್ತು-ಇರಲಿ, ದ್ವಿಜೇಭ್ಯಃ - ಬ್ರಾಹ್ಮಣರಿಗೆ, ನಮಃ-ನಮಸ್ಕಾರವು ॥ ೧೬ ॥ ಇತಿ-ಹೀಗೆ, ವ್ಯವಸಾಯಯುಕ್ತಃ - ನಿಶ್ಚಯದಿಂದಕೂಡಿ, ಧೀರಃ-ಧೀರನಾಗಿ, ಸ್ವಸುತನ್ಯಸ್ತಭಾರಃ-ಭೂಭಾರವನ್ನು ತನ್ನ ಮಗನಲ್ಲಿಟ್ಟು, ಪ್ರಾಚೀನಮೂಲೇಷು-ಪೂರ್ವಾಗ್ರಗಳಾದ, ಕುಶೇಷು-ದರ್ಭೆಗಳಲ್ಲಿ, ಸಮುದ್ರಪತ್ನ್ಯಾಃ-ಗಂಗೆಯ, ದಕ್ಷಿಣಕೂಲೇ-ದಕ್ಷಿಣತೀರದಲ್ಲಿ, ಉದಙ್ಮುಖಃ-ಉತ್ತರಾಭಿಮುಖನಾಗಿ, ಆಸ್ತೇಸ್ಮ-ಕುಳಿತುಕೊಂಡನು. ॥ ೧೭ ॥

ನನ್ನು ಧ್ಯಾನಿಸುತ್ತಿರುವ ನಾನು ನಿಮಗೆ ಶರಣಾಗತನಾಗಿರುವೆನು. ಲೋಕಪಾವನಿಯಾದ ಗಂಗೆಯೂ ನನಗೆ ಶರಣವಾಗಲಿ. ಆಬ್ರಾಹ್ಮಣನಿಂದ ಪ್ರೇರಿತನಾದ ತಕ್ಷಕನೆಂಬ ಕುಟಿಲ ಸರ್ಪವು ನನ್ನನ್ನು ಬೇಕಾದಹಾಗೆ ಕಚ್ಚಲಿ, ನೀವು ಭಗವಚ್ಚರಿತ್ರೆಗಳನ್ನು ಗಾನಮಾಡುತ್ತಲಿರಿ. ॥೧೫॥ ಮಹಾತ್ಮರಿರಾ! ನಾನು ಮರಳಿ ಯಾವಯಾವ ಜನ್ಮವನ್ನು ಪಡೆದರೂ, ಆ ಸಕಲಜನ್ಮಗಳಲ್ಲಿಯೂ ಆದ್ಯಂತರಹಿತನಾದ ಭಗವಂತನಲ್ಲಿಯೂ, ಆತನನ್ನಾಶ್ರಯಿಸಿರುವ ಭಾಗವತೋತ್ತಮರಲ್ಲಿಯೂ,ನನಗೆ ನಿರಂತರವಾದ ಪ್ರೀತಿಯುಂಟಾಗಲಿ. ಸರ್ವಭೂತಗಳಲ್ಲಿಯೂ ಮೈತ್ರಿಯಿರಲಿ. ಬ್ರಾಹ್ಮಣರಲ್ಲಿ ಭಕ್ತಿಯಿರಲಿ ॥ ೧೬ ॥

ಎಂದಾಪರೀಕ್ಷಿದ್ರಾಜನು ಅವರನ್ನು ಪ್ರಾರ್ಥಿಸಿದವನಾಗಿ ಪ್ರಾಯೋಪವೇಶವನ್ನು ನಿಶ್ಚಯಿಸಿಕೊಂಡು ಪರಂಪರಾಗತವಾದ ರಾಜ್ಯಭಾರವನ್ನು ತನ್ನಮಗನಾದ ಜನಮೇಜಯನಿಗೊಪ್ಪಿಸಿದವನಾಗಿ ಆ ಗಂಗಾನದಿಯ ತೆಂಕಣದಡದಲ್ಲಿ, ಪೂರ್ವಾಗ್ರಗಳಾದ ದರ್ಭೆಗಳನ್ನು ಹಾಸಿಕೊಂಡು ಸ್ವಲ್ಪವಾದರೂ ಮರಣಭಯವಿಲ್ಲದೆ ಧೀರಾಗ್ರಗಣ್ಯನೆನಿಸಿ ಉತ್ತರಾಭಿಮುಖನಾಗಿ ಕುಳಿತುಕೊಂಡನು ॥ ೧೭ ॥ ಇಂತು ಆ ರಾಜಾಧಿರಾಜನಾದ ಪರೀಕ್ಷಿತನು, ಪ್ರಾಯೋಪವೇಶವನ್ನು ಮಾಡಲು, ದೇವತೆಗಳೆಲ್ಲರೂ ಸಂತೋಷದಿಂದಾ

ದೇವೇ ಪ್ರಾಯೋಪವಿಷ್ಟೇ ದಿವಿ ದೇವಸಂಘಾಃ । ಪ್ರಶಸ್ಯ ಭೂಮೌ ವ್ಯಕಿರನ್ ಪ್ರಸೂನೈರ್ಮುದಾ ಮುಹುರ್ದುಂದುಭಯಶ್ಚ ನೇದುಃ ॥ ೧೮ ॥ ಮಹರ್ಷಯಸ್ತಂ ಸಮುಪಾಗತಾ ಯೇ ಪ್ರಶಸ್ಯ ಸಾಧ್ವಿತ್ಯನು ಮೋದಮಾನಾಃ । ಊಚುಃ ಪ್ರಜಾನುಗ್ರಹ ಶೀಲಸಾರಾ ಯದುತ್ತಮಶ್ಲೋಕ ಗುಣಾಽನುರೂಪಂ ॥ ೧೯ ॥ ನವಾ ಇದಂ ರಾಜ *ರ್ಷಿವರ್ಯ! ಚಿತ್ರಂ ಭವತ್ಸುಕೃಷ್ಣಂ ಸಮನುವ್ರತೇಷು । ಯೇಽಧ್ಯಾಸನಂ ರಾಜಕಿರೀಟಜುಷ್ಟಂ ಸದ್ಯೋ ಜಹುರ್ಭಗವತ್ಪಾರ್ಶ್ವಕಾಮಾಃ ॥ ೨೦ ॥ ಸರ್ವೇ ವಯಂ

ಏವಂ - ಹೀಗೆ, ತಸ್ಮಿನ್-ಆ, ನರದೇವದೇವೇ-ರಾಜೇಂದ್ರನಾದ ಪರೀಕ್ಷಿತನು, ಪ್ರಾಯೋಪವಿಷ್ಟೇ ಸತಿ - ಪ್ರಾಯೋಪವೇಶವನ್ನು ಮಾಡಲು, ದಿವಿ-ಆಕಾಶದಲ್ಲಿ, ದೇವಸಂಘಾಃ - ದೇವತೆಗಳ ಸಮೂಹಗಳು ಪ್ರಶಸ್ಯ - ಹೊಗಳಿ, ಭೂಮೌ-ಭೂಮಿಯಲ್ಲಿ, ಮುದಾ-ಸಂತೋಷದಿಂದ, ಪ್ರಸೂನೈಃ-ಹೂಗಳಿಂದ, ವ್ಯಕಿರನ್-ಮಳೆಗರೆದರು, ದುಂದುಭಯಶ್ಚ-ದುಂದುಭಿವಾದ್ಯಗಳು, ಮುಹುಃ-ಬಾರಿಬಾರಿಗೂ, ನೇದುಃ-ಮೊಳಗಿದುವು ॥ ೧೮ ॥ ಪ್ರಜಾ...ರಾಃ, ಪ್ರಜಾ-ಪ್ರಜೆಗಳನ್ನು, ಅನುಗ್ರಹ-ಅನುಗ್ರಹಿಸುವ, ಶೀಲ-ನಡವಳಿಯೇ, ಸಾರಾಃ-ಬಲವಾಗಿಉಳ್ಳ, ಯೇ-ಯಾವ,ಮಹರ್ಷಯಃ-ಮಹರ್ಷಿಗಳು, ಸಮುಪಾಗತಾಃ-ಬಂದಿದ್ದರೋ ಅವರು, ತಂ-ಆರಾಜನನ್ನು, ಸಾಧು-ಭಲಾ ! ಇತಿ-ಹೀಗೆಂದು, ಪ್ರಶಸ್ಯ - ಹೊಗಳಿ, ಅನುಮೋದಮಾನಾಃ-ಸಮ್ಮತಿಸಿದವರಾಗಿ, ಯತ್-ಯಾವುದು, ಉತ್ತಮ...ಪಂ, ಉತ್ತಮಶ್ಲೋಕ-ಉತ್ತಮರಿಂದಹೊಗಳಲ್ಪಡುವ ಭಗವಂತನ, ಗುಣ-ಗುಣಗಳನ್ನುಪ್ರಕಟಿಸುವುದಕ್ಕೆ, ಅನುರೂಪಂ - ಸರಿಯಾದುದೋ ಅದನ್ನು, ಊಚುಃ-ಹೇಳಿದರು, ॥೧೯॥ ಹೇರಾಜರ್ಷಿವರ್ಯ-ಎಲೈ ರಾಜಶ್ರೇಷ್ಠನೇ ! ಯೇ ಯಾವನಿನ್ನವಂಶಸ್ಥರು, ಭಗವ...ಮಾಃ, ಭಗವತ್-ಭಗವಂತನ, ಪಾರ್ಶ್ವ-ಸಾನ್ನಿಧ್ಯವನ್ನು, ಕಾಮಾಃ-ಬಯಸುವವರಾಗಿ, ರಾಜ...ಷ್ಟಂ, ರಾಜ ರಾಜರ,ಕಿರೀಟ-ಕಿರೀಟಗಳಿಂದ, ಜುಷ್ಟಂ - ಸೇವಿಸಲ್ಪಟ್ಟ, ಅಧ್ಯಾಸನಂ-ಸಿಂಹಾಸನವನ್ನು, ಸದ್ಯಃ-ತಕ್ಷಣದಲ್ಲಿಯೇ ಜಹುಃ-ಬಿಟ್ಟರೋ ಅಂತಹ,ಕೃಷ್ಣಂ-ಶ್ರೀಕೃಷ್ಣನನ್ನು,ಸಮನುವ್ರತೇಷು-ಆಶ್ರಯಿಸಿರುವ, ಭವತ್ಸು-ನಿಮ್ಮಪಾಂಡುವಂಶದವರಲ್ಲಿ, ಇದಂ-ಇದು, ನವಾಚಿತ್ರಂ-ಆಶ್ಚರ್ಯವೇಅಲ್ಲ ॥೨೦॥ ಭಾಗವತಪ್ರಧಾನಃ-ಭಾಗವತೋತ್ತಮನಾದ, ಅಯಮಸೌ-ಈಪರೀಕ್ಷಿತನು, ಕಳೇಬರಂ-ಶರೀರವನ್ನು, ವಿಹಾಯ-ಬಿಟ್ಟು, ಯಾವತ್-ಎಲ್ಲಿಯುವವರೆಗೆ, ವಿರಜಸ್ಕಂ-ಮಾಯಾರಹಿತವೂ,

ತನನ್ನು ಕೊಂಡಾಡಿ, ಗಗನದಿಂದ ಪೂಮಳೆಯನ್ನು ಕರೆದರು, ದಿವ್ಯಗಳಾದ ದುಂದುಭಿವಾದ್ಯಗಳು ಮೊಳಗಿದವು ॥ ೧೮ ॥ ಅಲ್ಲಿ ಬಂದಿದ್ದ ಮಹರ್ಷಿಗಳೆಲ್ಲರೂ ಭಲಾ ! ಭಲಾ ! ಎಂದು ಹೊಗಳುತ್ತಾ ಆತನ ಕಾರ್ಯವನ್ನು ಸಮ್ಮತಿಸಿದವರಾಗಿ, ಪ್ರಜೆಗಳನ್ನು ಅನುಗ್ರಹಿಸುವುದೇ ಸ್ವಭಾವವಾದುದರಿಂದ, ಭಗವಂತನ ಗುಣಗಳನ್ನು ಪ್ರಕಟಗೊಳಿಸುವುದಕ್ಕೆ ಪಾತ್ರನಾಗಿರುವ ಆತನನ್ನು ಕುರಿತು ಹೇಳುತ್ತಾರೆ ॥ ೧೯ ॥

ಅಯ್ಯಾ ರಾಜಪುಂಗವನೆ ! ನಿನ್ನವಂಶದ ಯಾವಮಹಾರಾಜರು, ಭಗವಂತನ ಸಾನ್ನಿಧ್ಯವನ್ನು ಪಡೆಯಲೆಳಸಿದವರಾಗಿ, ಸಕಲರಾಜ ಕಿರೀಟಗಳಿಂದ ಸೇವಿಸಲ್ಪಡುವ ಸಿಂಹಾಸನವನ್ನುಕೂಡ ಕ್ಷಣಮಾತ್ರದಲ್ಲಿ ಬಿಟ್ಟವರಾದರೋ, ಅಂತಹ, ಪರಮಭಾಗವತರಾದ ನಿಮ್ಮಲ್ಲಿ ಈ ಭಗವತ್ಕಥಾಶ್ರವಣವೆಂಬುದು ಚಿತ್ರವಲ್ಲ ॥ ೨೦ ॥ ಎಂದುಹೇಳಿ, ಅಯ್ಯಾ

ತಾವದಿಹಾಸ್ಮಹೇಽದ್ಯ ಕಳೇಬರಂ ಯಾವದಸೌ ವಿಹಾಯ।ಲೋಕಂ ಪರಂ
ವಿರಜಸ್ಕಂ ವಿಶೋಕಂ ಯಾಸ್ಯತ್ಯಯಂ ಭಾಗವತ ಪ್ರಧಾನಃ॥೨೧॥ ಆಶ್ರು
ತ್ಯ ತದೃ*ಷಿವಚಃ ಪರೀಕ್ಷಿತ್ಸಮಂ ಮಧುಚ್ಯುದ್ಗುರು ಚಾಽವ್ಯಳೀಕಂ।
ಆಭಾಷತೈನಾನಭಿನಂದ್ಯ ಯುಕ್ತಾನ್ ಶುಶ್ರೂಷಮಾಣಶ್ಚರಿತಾನಿ ವಿಷ್ಣೋಃ॥
ರಾಜಾ॥ ಸಮಾಗತಾಸ್ಸರ್ವತ ಏವ ಸರ್ವೇ ವೇದಾ ಯಥಾ ಮೂರ್ತಿಧರಾ
ಸ್ತ್ರಿಪೃಷ್ಠೇ । ನೇಹಾಽಥವಾಮುತ್ರ ಚ ಕಶ್ಚನಾರ್ಥಃ ಋತೇ ಪರಾನು
ಗ್ರಹಮಾತ್ಮಶೀಲಂ ॥೨೩॥ ತತಶ್ಚ ವಃ ಪೃಚ್ಛ್ಯಮಿಮಂ ಹಿ ಪೃಚ್ಛೇ

ವಿಶೋಕಂ-ದುಃಖಶೂನ್ಯವೂ, ಪರಂ-ಸರ್ವೋತ್ತಮವೂ ಆದ, ಲೋಕಂ - ಲೋಕವನ್ನು, ಯಾಸ್ಯತಿ-ಹೊಂದುವನೋ, ಅಲ್ಲಿಯವರೆಗೆ, ವಯಂಸರ್ವೇ - ನಾವೆಲ್ಲರೂ, ಇಹತಾವತ್ - ಇಲ್ಲಿಯೇ, ಆಸ್ಮಹೇ-ಇರೋಣ ॥ ೨೧ ॥ ಪರೀಕ್ಷಿತ್-ಪರೀಕ್ಷಿತನು, ಸಮಂ-ನಿಷ್ಪಕ್ಷಪಾತವೂ, ಮಧುಚ್ಯುತ್-ಅತಿಮಧುರವೂ, ಗುರು - ಗಂಭೀರವೂ, ಅವ್ಯಳೀಕಂ - ಸತ್ಯವೂ ಆಗಿರುವ, ತದೃಷಿವಚಃ - ಆ ಋಷಿಗಳಮಾತನ್ನು, ಆಶ್ರುತ್ಯ-ಕೇಳಿ, ಅಭಿನಂದ್ಯ-ಸಂತೋಷಿಸಿ, ವಿಷ್ಣೋಃ - ವಿಷ್ಣುವಿನ, ಚರಿತಾನಿ - ಚರಿತ್ರೆಗಳನ್ನು, ಶುಶ್ರೂಷಮಾಣಃ-ಕೇಳುವವನಾಗಿ, ಏನಾನ್-ಆ ಋಷಿಗಳನ್ನು ಕುರಿತು, ಯುಕ್ತಂ-ಕಾಲೋಚಿತವಾಗಿ, ಆಭಾಷತ-ಮಾತನಾಡಿದನು, ॥ ೨೨ ॥ ರಾಜಾ-ರಾಜನುಹೇಳುತ್ತಾನೆ, ತ್ರಿಪೃಷ್ಠೇ, ತ್ರಿ - ಮೂರು ಲೋಕಗಳ, ಪೃಷ್ಠೇ-ಮೇಲಿರುವಸತ್ಯಲೋಕದಲ್ಲಿ, ಮೂರ್ತಿಧರಾಃ-ಮೂರ್ತೀಭವಿಸಿದ, ವೇದಾಯಥಾ-ವೇದಗಳಂತೆ, ಸರ್ವೇ-ನೀವೆಲ್ಲರೂ, ಸರ್ವತಃ-ಎಲ್ಲಾ ಕಡೆಗಳಿಂದಲೂ, ಸಮಾಗತಾಃ-ಬಂದಿರುವಿರಿ, ಇಹ-ಈ ಲೋಕದಲ್ಲಾಗಲಿ, ಅಮುತ್ರಚವಾ- ಪರಲೋಕದಲ್ಲಿಯಾಗಲಿ, ಪರಾನುಗ್ರಹಂ, ಪರ-ಅನ್ಯರನ್ನ, ಅನುಗ್ರಹಂ - ಉದ್ಧರಿಸುವ, ಆತ್ಮಶೀಲಮೃತೇ - ನಿಜಸ್ವಭಾವವನ್ನು ಬಿಟ್ಟು, ಕಶ್ಚನ - ಮತ್ತಾವ, ಅರ್ಥಃ-ಪ್ರಯೋಜನವೂ, ನ-ನಿಮಗೆ ಇಲ್ಲ ॥ ೨೩ ॥ ತತಶ್ಚ - ಆದುದರಿಂದ, ಹೇವಿಪ್ರಾಃ - ಅಯ್ಯಾ

ಮಹರ್ಷಿಗಳಿರಾ ! "ಭಾಗವತಾಗ್ರೇಸರನಾದ ಈಪರೀಕ್ಷಿದ್ರಾಜನು ಕಳೇಬರವನ್ನು ಳಿದು, ಮಾಯೆಗೊಳಗಾಗದೆ, ದುಃಖರಹಿತವಾಗಿ, ಸರ್ವೋತ್ತಮವೆಂದೆನಿಸಿದ ಪರಲೋಕವನ್ನು ಪಡೆಯುವವರೆಗೂ, ನಾವೆಲ್ಲರೂ ಇಲ್ಲಿಯೇ ಇದ್ದುಕೊಂಡು ಭಗವತ್ಕಥಾಶ್ರವಣವನ್ನು ಮಾಡಿಸಬೇಕು," ಎಂದು ತಮ್ಮಲ್ಲಿತಾವೇ ಮಾತನಾಡಿಕೊಂಡರು ॥೨೧॥ ಇಂತು ಹೇಳುತ್ತಿರುವ ಆಮಹರ್ಷಿಗಳ ಮಧುರವೂ, ಗಂಭೀರವೂ, ಸತ್ಯವೂ, ನಿಷ್ಪಕ್ಷಪಾತವೂ, ಆದ ಮಾತುಗಳನ್ನುಕೇಳಿ ಆಪರೀಕ್ಷಿನ್ನರಪತಿಯು, ಅವರನ್ನು ಬಹಳವಾಗಿ ಕೊಂಡಾಡಿ ಭಗವಚ್ಚರಿತ್ರೆಗಳನ್ನು ಕೇಳಲೆಳಸಿದವನಾಗಿ, ಅವರನ್ನುಕುರಿತು ಕೇಳಿದನು ॥ ೨೨ ॥

ಮಹಾತ್ಮರಿರಾ ! ಸರ್ವಲೋಕಗಳಿಗೂ ಮೇಲೆನಿಸಿರುವ ಸತ್ಯಲೋಕದಲ್ಲಿಮೂರ್ತೀಭವಿಸಿರುವ ವೇದಪುರುಷರಂತೆ, ನೀವು ಎಲ್ಲಕಡೆಗಳಿಂದಲೂ ಬಿಜಮಾಡಿರುವಿರಿ, ನೀವು ದಯಮಾಡಿಸಿರುವುದಕ್ಕೆ, ಲೋಕವನ್ನುದ್ಧರಿಸಬೇಕೆಂಬ ದಯಾಗುಣವೊಂದೇ ಕಾರಣವಲ್ಲದೆ, ಈಲೋಕದಲ್ಲಿ ಯಾಗಲಿ, ಪರಲೋಕದಲ್ಲಿಯಾಗಲಿ, ನಿಮಗಾವಪ್ರಯೋಜನವೂ ಇಲ್ಲ ॥೨೩॥ ಆದುದರಿಂದ ಈಗ ನಾನೇನು ಮಾಡಬೇಕೆಂಬ ವಿಚಾರದಲ್ಲಿ ತಮ್ಮನ್ನು

ವಿಸ್ರಭ್ಯ ವಿಪ್ರಾ ಇತಿಕೃತ್ಯತಾಯಾಂ । ಸರ್ವಾತ್ಮನಾ ಮ್ರಿಯಮಾಣೈ
ಶ್ಚ ಕೃತ್ಯಂ ಶುದ್ಧಂಚ ತತ್ರಾಮೃಶತಾಽಭಿಯುಕ್ತಾಃ ॥೨೪॥ ತತ್ರಾಗಮ
ದ್ಭಗವಾನ್ ವ್ಯಾಸಪುತ್ರೋ ಯದೃಚ್ಛಯಾ ಗಾ ಮಟಮಾನೋಽನಪೇಕ್ಷಃ ।
ಅಲಕ್ಷ್ಯಲಿಂಗೋ ನಿಜಲಾಭ ತುಷ್ಟೋ ವೃತಶ್ಚ ಬಾಲೈ ರವಧೂತ ವೇಷಃ॥
ತಂ ದ್ವ್ಯಷ್ಟವರ್ಷಂ ಸುಕುಮಾರ ಪಾದಕರೋರು ಬಾಹ್ವಂಸ ಕಪೋಲ
ಗಾತ್ರಂ। ಚಾರ್ವಾಯ ತಾಕ್ಷೋನ್ನಸ ತುಲ್ಯಕರ್ಣ ಸುಭ್ರ್ವಾನನಂ ಕಂಬು

ಬ್ರಾಹ್ಮಣರಿರಾ? ಇತಿಕೃತ್ಯತಾಯಾಂ-ಏನುಮಾಡಬೇಕೆಂಬ ವಿಚಾರದಲ್ಲಿ, ವಃ-ನಿಮ್ಮನ್ನು, ಪೃಚ್ಛ್ಯಂ-ಕೇಳಬೇಕಾಗಿರುವ, ಇಮಂ-ಈಸಂಗತಿಯನ್ನು, ಪೃಚ್ಛೇ-ಕೇಳುತ್ತೇನೆ, ತತ್ರ-ಆವಿಷಯದಲ್ಲಿ, ಸರ್ವಾತ್ಮನಾ - ಎಲ್ಲಾ ಕಾಲದಲ್ಲಿಯೂ, ಯತ್ಕೃತ್ಯಂ - ಯಾವುದು ಮಾಡತಕ್ಕದ್ದೋ ಅದರಲ್ಲಿಯೂ, ಮ್ರಿಯಮಾಣೈಃ-ಸಾಯುತಕ್ಕವರಿಂದ, ಯತ್-ಯಾವುದು, ಕೃತ್ಯಂ - ಅವಶ್ಯವಾಗಿಮಾಡತಕ್ಕದ್ದೋ, ಶುದ್ಧಂ-ಪಾಪಸಂಬಂಧವಿಲ್ಲದ, ತತ್-ಅದನ್ನು, ಅಭಿಯುಕ್ತಾಃ-ಸಾವಧಾನರಾಗಿ, ಆಮೃಶತ-ನಿಶ್ಚಯಿಸಿಹೇಳಿರಿ॥

ತತ್ರ-ಆಸಮಯದಲ್ಲಿ, ಅವಧೂತವೇಷಃ, ಅವಧೂತ - ಜನರಿಂದ ತಿರಸ್ಕರಿಸಲ್ಪಡತಕ್ಕ, ವೇಷಃ-ವೇಷವುಳ್ಳ, ಬಾಲೈಃ-ಹಸುಳೆಗಳಿಂದ, ವೃತಃ-ಬಳಸಲ್ಪಟ್ಟ, ನಿಜಲಾಭತುಷ್ಟಃ-ಆತ್ಮಲಾಭದಿಂದ ಸಂತುಷ್ಟನಾದ, ಅಲಕ್ಷ್ಯಲಿಂಗಃ-ಬ್ರಹ್ಮಚರ್ಯ ಮೊದಲಾದ ಕುರುಹುಗಳಿಲ್ಲದ, ಅನಪೇಕ್ಷಃ-ವಿರಕ್ತಶಿರೋಮಣಿಯಾದ, ಭಗವಾನ್-ಭಗವಂತನಾದ, ವ್ಯಾಸಪುತ್ರಃ-ಶುಕಮುನಿಯು, ಯದೃಚ್ಛಯಾ-ಸ್ವೇಚ್ಛೆಯಿಂದ, ಗಾಂ-ಭೂಮಿಯನ್ನು, ಅಟಮಾನಃ - ಸಂಚರಿಸುತ್ತಾ, ಆಗಮತ್ - ಬಂದನು. ॥ ೨೫ ॥ ದ್ವ್ಯಷ್ಟವರ್ಷಂ-ಹದಿನಾರುವರ್ಷವಯಸ್ಸುಳ್ಳ, ಸುಕು...ತ್ರಂ, ಸುಕುಮಾರ-ಕೋಮಲಗಳಾದ, ಕರ-ಕೈಗಳು, ಊರು-ತೊಡೆಗಳು, ಬಾಹು-ತೋಳುಗಳು, ಅಂಸ-ಭುಜಶಿರಸ್ಸುಗಳು, ಕಪೋಲ - ಗಲ್ಲಗಳು, ಗಾತ್ರಂ-ಶರೀರವೂ ಉಳ್ಳ, ಚಾರ್ವಾ...ನಂ, ಚಾರು-ಮನೋಹರವಾದ, ಆಯತ-ಅಗಲವಾದ, ಅಕ್ಷ-ಕಣ್ಣುಗಳು, ಉನ್ನಸ-ಉನ್ನತವಾದ ಮೂಗು, ತುಲ್ಯಕರ್ಣ-ಸಮವಾದ ಕಿವಿಗಳು, ಸುಭ್ರೂ-ಸೊಗಸಾದ ಹುಬ್ಬುಗಳು, ಆನನಂ-ಇವುಗಳಿಂದಕೂಡಿದ ಮುಖವುಳ್ಳ, ಕಂಬು...ಠಂ, ಕಂಬು-ಶಂಖದಂತೆ, ಸುಜಾತ-ಸೊ

ಕೇಳಬೇಕಾಗಿರುವುದು, ಮನುಷ್ಯನು ಎಲ್ಲಾ ಕಾಲದಲ್ಲಿಯೂ ಮಾಡಬೇಕಾದುದಾವುದು? ಅದರಲ್ಲಿಯೂ ಮರಣಕಾಲದಲ್ಲಿ ಮಾಡತಕ್ಕದೇನು? ಈವಿಷಯದಲ್ಲಿ ನನ್ನಲ್ಲಿ ದಯೆಮಾಡಿ ಯಾವುದು ಶುದ್ಧವಾದುದೋ ಅದನ್ನು ನಿಶ್ಚಯಿಸಿ ನನಗುಪದೇಶಿಸಬೇಕೆಂದು ಬೇಡಿಕೊಂಡನು. ॥೨೪॥ ಆಗ್ಯೆ ಸರಿಯಾಗಿ,ಆತ್ಮಧ್ಯಾನದಿಂದ ತುಷ್ಟನಾಗಿಯೂ, ಬಾಲಕರಿಂದಪರಿವೃತನಾಗಿಯೂ,ಪರಮವಿರಕ್ತನಾಗಿಯೂ,ಷಡ್ಗುಣೈಶ್ವರ್ಯ ಸಂಪನ್ನನಾಗಿಯೂಇರುವ ಶುಕಮುನಿಯು,ಅವಧೂತವೇಷದಿಂದ,ವರ್ಣ ಆಶ್ರಮ ಮೊದಲಾದ ಯಾವುದರಕುರುಹೂಇಲ್ಲದೆ ಸ್ವೇಚ್ಛೆಯಿಂದ ದೇಶಾಟನ ಮಾಡುತ್ತಾ ಅಲ್ಲಿಗೆ ಬಂದನು ॥೨೫॥ ಇಂತು ಬಂದ ಹದಿನಾರು ವರ್ಷವಯಸ್ಸುಳ್ಳ, ಕೋಮಲಗಳಾದ,ಕೈಗಳು,ತೊಡೆಗಳು,ತೋಳುಗಳು,ಹೆಗಲುಗಳು,ಗಲ್ಲಗಳು, ಶರೀರ ಇವುಗಳಿಂದಲೂ, ಅಂದವಾಗಿ ವಿಶಾಲಗಳಾದ ಕಣ್ಣುಗಳಿಂದಲೂ, ಉನ್ನತವಾದ ನಾಸಿಕೆಯಿಂದಲೂ, ಸಮಗಳಾದ ಕಿವಿಗಳಿಂದಲೂ, ಮನೋಹರಗಳಾದ ಹುಬ್ಬುಗಳಿಂದಲೂ, ಒಪ್ಪುತ್ತಿರುವ ಮುಖವುಳ್ಳ, ಶಂಖದಂತೆ ಸುಳಿಗೊಂಡಿರುವ ಕಂಠದಿಂದಲೂ,

ಸುಜಾತ ಕಂಠಂ ॥೨೬॥ ನಿಗೂಢಜತ್ರುಂ ಪೃಥುತುಂಗ ವಕ್ಷಸ ಮಾವರ್ತ ನಾಭಿಂ ವಳಿವಲ್ಗೂದರಂಚ । ದಿಗಂಬರಂ ವಕ್ರವಿಕೀರ್ಣ ಕೇಶಂ ಪ್ರಲಂಬ ಬಾಹುಂ ಸ್ವಮರೋತ್ತಮಾಭಂ ॥ ೨೭ ॥ ಶ್ಯಾಮಂ ಸದಾಪೀಚ್ಯವ ಯೋಂಗಲಕ್ಷ್ಮ್ಯಾ ಸ್ತ್ರೀಣಾಂ ಮನೋಜ್ಞಂ ರುಚಿರಂ ಸ್ಮಯೇನ । ಪ್ರತ್ಯುತ್ಥಿತಾ ಮುನಯ ಸ್ಸ್ವಾಸನೇಭ್ಯಃ ತಲ್ಲಕ್ಷಣಜ್ಞಾ ಅಪಿ ಗೂಢವ ರ್ಚಸಂ ॥ ೨೮ ॥ ಸ ವಿಷ್ಣುರಾತೋ ಽತಿಥಯ ಆಗತಾಯ ತಸ್ಮೈ ಸಪ ರ್ಯಾಂ ಶಿರಸಾ ಜಹಾರ । ತತೋ ನಿವೃತ್ತಾ ಹ್ಯಬುಧಾ ಸ್ತ್ರಿಯೋಽರ್ಭ

ಗಸಾದ, ಕಂಠಂ-ಕಂಠವುಳ್ಳ, ॥ ೨೬ ॥ ನಿಗೂಢ-ಅಡಗಿರುವ, ಜತ್ರುಂ - ಕೊರಲಡಿಯ ಎಲುಬುಳ್ಳ, ಪೃಥು...ಸಂ, ಪೃಥು-ವಿಸ್ತಾರವಾಗಿಯೂ, ತುಂಗ-ಉನ್ನತವಾಗಿಯೂಇರುವ, ವಕ್ಷಸಂ - ಎದೆಯುಳ್ಳ ಆವರ್ತನಾಭಿಂ - ಸುಳಿಯಂತೆಹೊಕ್ಕಳುಳ್ಳ, ವಳಿ...ರಂಚ, ವಳಿ - ಪದರಗಳಿಂದ,ವಲ್ಗು - ಸೊಗಸಾದ, ಉದರಂಚ - ಹೊಟ್ಟೆಯುಳ್ಳ, ದಿಗಂಬರಂ - ವಸ್ತ್ರಹೀನನಾದ, ವಕ್ರ...ಶಂ, ವಕ್ರ - ಕೊಂಕಾಗಿ, ವಿಕೀರ್ಣ-ಕೆದರಿರುವ, ಕೇಶಂ-ಕೂದಲುಳ್ಳ, ಪ್ರಲಂಬಬಾಹುಂ-ಉದ್ದವಾದತೋಳುಳ್ಳ, ಸ್ವಮ...ಭಂ ಸ್ವಮರೋತ್ತಮ-ದೇವತೆಗಳಲ್ಲಿ ಶ್ರೇಷ್ಠನಾದ ವಿಷ್ಣುವಿಗೆ, ಆಭಂ-ಸಮಾನನಾದ ॥ ೨೭ ॥

ಶ್ಯಾಮಂ - ನೀಲವರ್ಣವುಳ್ಳ, ಸದಾ...ಕ್ಷ್ಮ್ಯಾ: ಸದಾ - ಯಾವಾಗಲೂ, ಅಪೀಚ್ಯ - ಸರ್ವೋತ್ತ ಮವಾದ, ವಯಃ - ಯೌವ್ವನದಿಂದುಂಟಾದ, ಅಂಗಲಕ್ಷ್ಮ್ಯಾ - ಶರೀರಕಾಂತಿಯಿಂದ, ಮನೋಜ್ಞಂ- ಸುಂದರನಾದ, ಸ್ಮಯೇನಚ - ಮುಗುಳ್ನಗೆಯಿಂದ, ಗೂಢವರ್ಚಸಮಪಿ - ಗುಪ್ತವಾದ ಮಹಿಮೆಯು ಳ್ಳವನಾದರೂ, ಸ್ತ್ರೀಣಾಂ - ಸ್ತ್ರೀಯರಿಗೆ, ಮನೋಜ್ಞಂ-ಮನೋಹರನಾದ, ತಂ-ಆ ಶುಕಮುನಿ ಯನ್ನು ಕಂಡು, ತಲ್ಲಕ್ಷಣಜ್ಞಾಃ-ಆತನಮಹಿಮೆಯನ್ನು ತಿಳಿದವರಾದುದರಿಂದ, ಮುನಯಃ - ಋಷಿಗಳೆ ಲ್ಲರೂ, ಸ್ವಾಸನೇಭ್ಯಃ-ತಂತಮ್ಮಪೀಠಗಳಿಂದ, ಪ್ರತ್ಯುತ್ಥಿತಾಃ - ಪ್ರತ್ಯುತ್ಥಾನಮಾಡಿದರು ॥ ೨೮ ॥ ಸವಿಷ್ಣುರಾತಃ-ಆ ಪರೀಕ್ಷಿದ್ರಾಜನು, ಆಗತಾಯ-ಬಂದ, ತಸ್ಮೈಅತಿಥಯೇ-ಆ ಅತಿಥಿಯಾದ ಶುಕನಿಗೆ, ಶಿರಸಾ - ಶಿರಸ್ಸಿನಿಂದಲೇ, ಸಪರ್ಯಾಂ - ಪೂಜೆಯನ್ನು, ಆ ಜಹಾರ - ಮಾಡಿದನು, ತತಃ - ಆ ಬಳಿಕ,

ಮಾಂಸಖಂಡಗಳಿಂದ ಮುಚ್ಚಲ್ಪಟ್ಟು, ಗೂಢವಾಗಿರುವ ಕುತ್ತಿಗೆ ಎಲುಬುಗಳಿಂದಲೂ, ವಿಶಾಲವಾಗಿಯೂ, ಉನ್ನತವಾಗಿಯೂ ಇರುವ ಎದೆಯಿಂದಲೂ, ಸುಳಿಯನ್ನು ಹೋಲುವ ಹೊಕ್ಕಳಿಂದಲೂ,ತ್ರಿವಳಿಗಳಿಂದ ರಮಣೀಯವಾದ ಉದರದಿಂದಲೂ,ವಕ್ರವಾಗಿಕೆದರಲ್ಪ ಟ್ಟಿರುವಕೂದಲುಗಳಿಂದಲೂ,ಆಜಾನುಲಂಬಿಗಳಾದ ತೋಳುಗಳಿಂದಲೂ ಒಪ್ಪುತ್ತಾ, ಆದಿ ಪುರುಷನಿಗೆ ಸಮಾನನೆನಿಸಿ,ನೀಲವಾದ ಶರೀರವರ್ಣದಿಂದಲೂ,ಯಾವಾಗಲೂ ಸುಂದರವಾದ ಯೌವ್ವನ ಕಾಂತಿಯಿಂದಲೂ, ಕಿರುನಗೆಯಿಂದಲೂ, ಸ್ತ್ರೀಯರ ಕಣ್ಮನಗಳನ್ನು ಅಪ ಹರಿಸುತ್ತಿರುವ,ಆಶುಕಮುನಿಯನ್ನು ಕಂಡಕೂಡಲೇ ಗೂಢವಾದ ಮಹಿಮೆಯುಳ್ಳವನಾಗಿ ದ್ದರೂ, ಆತನ ಪ್ರಭಾವವನ್ನು ಬಲ್ಲವರಾದುದರಿಂದ ಅಲ್ಲಿದ್ದವರೆಲ್ಲರೂ ತಟ್ಟನೆದ್ದು ತಂ ತಮ್ಮ ಪೀಠಗಳನ್ನುಳಿದು ನಿಂತುಕೊಂಡರು ॥ ೨೫-೨೮ ॥ ಬಳಿಕ ಆಪರೀಕ್ಷಿದ್ರಾಜನು ತನ್ನಲ್ಲಿಗೆ ಅತಿಥಿಯಾಗಿ ಬಂದಿರುವ ಆ ಶುಕಮುನೀಂದ್ರನಿಗೆ ಪ್ರಣಾಮವನ್ನಾಚರಿಸಿದನು. ಕೂಡಲೇ ಆತನನ್ನು ಹಿಂಬಾಲಿಸಿದ್ದ ಅಜ್ಞರಾದಸ್ತ್ರೀಬಾಲರೆಲ್ಲರೂ ಹಿಂದಕ್ಕೆ ತೆರಳಿದರು,

ಕಾ ಮಹಾಸನೇ ಸೋ*ಪವಿವೇಶ ಪೂಜಿತಃ ॥೨೯॥ ಸ ಸಂವೃತ ಸ್ತತ್ರ ಮಹಾನ್ ಮಹೀಯಸಾಂ ಬ್ರಹ್ಮರ್ಷಿ ರಾಜರ್ಷಿ ಸುರರ್ಷಿ ಸಂಘೈಃ । ವ್ಯರೋಚತಾಽಲಂ ಭಗವಾನ್ ಯಥೇಂದುಃ ಗ್ರಹರ್ಕ್ಷತಾರಾ ನಿಕರೈಃ ಪರೀತಃ ॥ ೩೦ ॥ ಪ್ರಶಾಂತ ಮಾಸೀನ ಮಕುಂಠ ಮೇಧಸಂ ಮುನಿಂ ನೃಪೋ ಭಾಗವತೋಽಭ್ಯುಪೇತ್ಯ । ಪ್ರಣಮ್ಯ ಮೂರ್ಧ್ನಾಽವಹಿತಃ ಕೃತಾಂಜಲಿ ರ್ನತ್ವಾ ಗಿರಾ ಸೂನೃತಯಾಽನ್ವಪೃಚ್ಛತ್ ॥೩೧॥ ರಾಜಾ ॥ ಅಹೋ ! ಅದ್ಯ ವಯಂ ಬ್ರಹ್ಮನ್ ! ಸತ್ಸೇವ್ಯಾಃ ಬ್ರಹ್ಮಬಂಧವಃ । ಕೃಪಯಾಽತಿಥಿ

ಅಬುಧಾಃ-ಅಜ್ಞಾನಿಗಳಾದ, ಸ್ತ್ರಿಯಃ-ಸ್ತ್ರೀಯರು, ಅರ್ಭಕಾಶ್ಚ-ಬಾಲಕರು, ನಿವೃತ್ತಾಃ - ಹಿಂದಿರುಗಿದರು, ಸಃ-ಆತನು, ಪೂಜಿತಃ - ಪೂಜಿಸಲ್ಪಟ್ಟವನಾಗಿ, ಆಸನೇ - ಪೀಠದಲ್ಲಿ, ಉಪವಿವೇಶ - ಕುಳಿತುಕೊಂಡನು, ॥ ೨೯ ॥ ತತ್ರ-ಅಲ್ಲಿ, ಮಹೀಯಸಾಂ - ಮಹಾತ್ಮರಲ್ಲಿ, ಮಹಾನ್ - ದೊಡ್ಡವನಾದ, ಸಃ - ಆರಾಜನು, ಬ್ರಹ್ಮರ್ಷಿ...ಘೈಃ, ಬ್ರಹ್ಮರ್ಷಿಗಳು, ರಾಜರ್ಷಿಗಳು, ದೇವರ್ಷಿಗಳು ಇವರ, ಸಂಘೈಃ-ಸಮೂಹಗಳಿಂದ, ಸಂವೃತಃ-ಪರಿವೃತನಾಗಿ, ಗ್ರಹ...ರೈಃ, ಗ್ರಹ - ಶುಕ್ರಾದಿ ಗ್ರಹಗಳು, ಋಕ್ಷ-ಅಶ್ವಿನ್ಯಾದಿ ನಕ್ಷತ್ರಗಳು, ತಾರಾ - ಇತರ ನಕ್ಷತ್ರಗಳು ಇವುಗಳ, ನಿಕರೈಃ - ಸಮೂಹಗಳಿಂದ, ಭಗವಾನ್-ಭಗವಂತನಾದ, ಇಂದುರಿವ-ಚಂದ್ರನಂತೆ, ಅಲಂ-ಅಧಿಕವಾಗಿ, ವ್ಯರೋಚತ-ಪ್ರಕಾಶಿಸಿದನು. ॥

ಪ್ರಶಾಂತಂ-ನಿಶ್ಚಲಚಿತ್ತನಾದ, ಆಸೀನಂ-ಕುಳಿತಿರುವ, ಅಕುಂಠಮೇಧಸಂ - ತಡೆಯಿಲ್ಲದ ಬುದ್ಧಿಯುಳ್ಳ, ಮುನಿಂ-ಶುಕನನ್ನು, ಭಾಗವತಃ - ಭಗವದ್ಭಕ್ತನಾದ, ನೃಪಃ-ಪರೀಕ್ಷಿತನು, ಅಭ್ಯುಪೇತ್ಯ-ಹೊಂದಿ, ಮೂರ್ಧ್ನಾ-ತಲೆಯಿಂದ, ಪ್ರಣಮ್ಯ-ನಮಸ್ಕರಿಸಿ, ಕೃತಾಂಜಲಿಃ - ಕೈಜೋಡಿಸಿ, ಅವಹಿತಃ-ಸಿದ್ಧನಾಗಿ, ನತ್ವಾ-ಮರಳಿನಮಸ್ಕರಿಸಿ, ಸೂನೃತಯಾ-ಸತ್ಯವಾದ, ಗಿರಾ-ಮಾತಿನಿಂದ, ಅನ್ವಪೃಚ್ಛತ್-ಕೇಳಿಕೊಂಡನು ॥ ೩೧ ॥ ಹೇಬ್ರಹ್ಮನ್-ಎಲೈಬ್ರಾಹ್ಮಣನೆ ? ಭವದ್ಭಿಃ-ನಿಮ್ಮಿಂದ, ಕೃಪಯಾ-ದಯೆಯಿಂದ, ಅತಿಥಿರೂಪೇಣ - ಅತಿಥಿರೂಪದಿಂದ, ತೀರ್ಥಕಾಃ-ಪವಿತ್ರರಾಗಿ, ಕೃತಾಃ - ಮಾಡಲ್ಪಟ್ಟವರಾದುದರಿಂದ, ಅದ್ಯ-ಈಗ, ಬ್ರಹ್ಮಬಂಧವಃ-ಕ್ಷತ್ರಿಯಾಧಮರಾದ, ವಯಂ-ನಾವು, ಸತ್ಸೇವ್ಯಾಃ-ಸತ್ಪುರುಷರಿಂದ ಸೇವಿ

ಆಶುಕಮುನಿಯು ಮರ್ಯಾದೆಯನ್ನು ಪಡೆದು ಪೀಠದಲ್ಲಿ ಕುಳಿತುಕೊಂಡನು ॥೨೯॥

ಇಂತು ನೆರೆದಿರುವ ರಾಜರ್ಷಿಗಳಿಂದಲೂ, ಬ್ರಹ್ಮರ್ಷಿಗಳಿಂದಲೂ, ದೇವರ್ಷಿಗಳಿಂದಲೂ, ಪರಿವೃತನಾಗಿ, ಆಭಾಗವತ ಶಿಖಾಮಣಿಯಾದ ಪರೀಕ್ಷಿತನು, ಶುಕ್ರಾದಿ ಗ್ರಹಗಳಿಂದಲೂ, ಅಶ್ವಿನ್ಯಾದಿ ನಕ್ಷತ್ರಗಳಿಂದಲೂ, ಇತರ ತಾರೆಗಳಿಂದಲೂ ಒಪ್ಪುತ್ತಿರುವ ಪೂರ್ಣಚಂದ್ರನಂತೆ ಮೆರೆಯುತ್ತಿದ್ದನು ॥ ೩೦ ॥ ಬಳಿಕ ಭಕ್ತಾಗ್ರೇಸರನಾದ ವಿಷ್ಣುರಾತನು, ಪ್ರಶಾಂತನಾಗಿ ಕುಳಿತಿರುವ ಸರ್ವಜ್ಞನಾದ ಶುಕಮುನಿಯ ಬಳಿಗೆ ಬಂದು, ಸಾಷ್ಟಾಂಗವೆರಗಿ, ಕೈಜೋಡಿಸಿ, ವಿನಯ ವಿಧೇಯನಾಗಿ, ಸತ್ಯವಾದ ನವಿನುಡಿಯಿಂದ, ಕೇಳಿಕೊಂಡನು ॥ ೩೧ ॥ ಅಯ್ಯಾ ಬ್ರಾಹ್ಮಣೋತ್ತಮನೆ ! ಮಹಾಮಹಿಮನಾದ ನೀನುದಯೆಯಿಂದ ಅತಿಥಿರೂಪವಾಗಿ ಬಿಜಯಮಾಡಿ ಅನುಗ್ರಹಿಸಿದುದರಿಂದ, ಕ್ಷತ್ರಿಯಾಧಮರೆನಿಸಿರುವ ನಾವೂ, ಈಗ ಸತ್ಪುರುಷರ ಸೇವೆಗರ್ಹರಾದೆವು ॥ ೩೨ ॥ ಯಾವ

ರೂಪೇಣ ಭವದ್ಭಿಸ್ತೀರ್ಥಕಾಃ ಕೃತಾಃ ॥೩೨॥ ಯೇಷಾಂ ಸಂಸ್ಮರಣಾತ್ಪುಂಸಾಂ ಸದ್ಯಶ್ಶುಧ್ಯಂತಿ ವೈಗೃಹಾಃ। ಕಿಂ ಪುನ ರ್ದರ್ಶನ ಸ್ಪರ್ಶಪಾದಶೌಚಾ ಸನಾದಿಭಿಃ ॥ ೩೩ ॥ ಸಾನ್ನಿಧ್ಯಾತ್ತೇ ಮಹಾಯೋಗಿನ್ ! ಪಾತಕಾನಿ ಮಹಾಂತ್ಯಪಿ । ಸದ್ಯೋ ನಶ್ಯಂತಿ ವೈಪುಂಸಾಂ ವಿಷ್ಣೋರಿವ ಸುರೇತರಾಃ॥೩೪॥ ಅಪಿ ಮೇ ಭಗವಾನ್ ಪ್ರೀತಃ ಕೃಷ್ಣಃ ಪಾಂಡುಸುತಪ್ರಿಯಃ । ಪೈತೃಷ್ವಸೇಯಪ್ರೀತ್ಯರ್ಥಂ ತದ್ಗೋತ್ರಸ್ಯಾತ್ತಬಾಂಧವಃ ॥ ೩೫ ॥ ಅನ್ಯಥಾ ತೇಽವ್ಯಕ್ತಗತೇ ರ್ದರ್ಶನಂ ನಃ ಕಥಂ ನೃಣಾಂ।

ಸಲ್ಪಡತಕ್ಕವರಾದೆವು, ಅಹೋ-ಆಶ್ಚರ್ಯವು ॥ ೩೨ ॥ ಯೇಷಾಂ-ಯಾರ, ಸಂಸ್ಮರಣಾತ್-ಸ್ಮರಣಮಾತ್ರದಿಂದಲೆ, ಪುಂಸಾಂ-ಪುರುಷರ, ಗೃಹಾಃ-ಮನೆಗಳು, ಸದ್ಯಃ - ತತ್ಕ್ಷಣದಲ್ಲಿಯೇ, ಶುಧ್ಯಂತಿ-ಪರಿಶುದ್ಧವಾಗುವುವೋ ಅವರ, ದರ್ಶನ...ಭಿಃ, ದರ್ಶನ-ನೋಟವು, ಸ್ಪರ್ಶ - ಸಂಬಂಧವು, ಪಾದಶೌಚ-ಪಾದಪ್ರಕ್ಷಾಳನವು, ಆಸನ-ಪೀಠಪ್ರದಾನವು ಇವುಗಳೇ, ಆದಿಭಿಃ-ಮೊದಲಾದವುಗಳಿಂದ, ಕಿಂಪುನಃ-ಹೇಳತಕ್ಕುದೇನು ? ॥ ೩೩ ॥ ಹೇಮಹಾಯೋಗಿನ್ - ಎಲೈ ಯೋಗೀಶ್ವರನೆ! ವಿಷ್ಣೋಃ-ವಿಷ್ಣುವಿನಿಂದ ಸುರೇತರಾಃಇವ-ರಾಕ್ಷಸರಂತೆ, ತೇ-ನಿನ್ನ, ಸಾನ್ನಿಧ್ಯಾತ್ ಸನ್ನಿಧಿಮಾತ್ರದಿಂದಲೇ, ಪುಂಸಾಂ-ಪುರುಷರ, ಮಹಾಂತಿ- ಅತ್ಯಧಿಕಗಳಾದ, ಪಾತಕಾನ್ಯಪಿ-ಪಾಪಗಳೂ, ಸದ್ಯಃ-ಆಗಲೇ, ನಶ್ಯಂತಿವೈ - ನಾಶವಾಗುತ್ತವೆ ॥೩೪॥ ಪಾಂಡುಸುತಪ್ರಿಯಃ-ಪಾಂಡವರಿಗೆ ಪ್ರಿಯನಾದ, ಭಗವಾನ್-ಭಗವಂತನಾದ, ಕೃಷ್ಣಃ-ಶ್ರೀಕೃಷ್ಣಮೂರ್ತಿಯು, ಪೈತೃ...ರ್ಥಂ, ಪೈತೃಷ್ವಸೇಯ - ಸೋದರತ್ತೆಯ ಮಕ್ಕಳಾದಪಾಂಡವರ, ಪ್ರೀತ್ಯರ್ಥಂ-ಪ್ರೀತಿಗಾಗಿ, ತದ್ಗೋತ್ರಸ್ಯ-ಆವಂಶಸ್ಥನಾದ ನನ್ನಲ್ಲಿ, ಆತ್ತಬಾಂಧವಃ, ಆತ್ತ - ತೋರಿಸಲ್ಪಟ್ಟ, ಬಾಂಧವಃ-ಬಂಧುಕೃತ್ಯವುಳ್ಳವನಾಗಿ, ಮೇ-ನನ್ನಲ್ಲಿ, ಅಪಿಪ್ರೀತಃ-ಪ್ರಸನ್ನನಾದನೆ? ॥ ೩೫ ॥ ಅನ್ಯಥಾ-ಇಲ್ಲವಾದರೆ, ನೃಣಾಂ-ಪಾಮರರೂ, ನಿತರಾಂ-ಅದರಲ್ಲಿಯೂ, ಮ್ರಿಯಮಾಣಾನಾಂ-ಮರಣವನ್ನು ಪಡೆಯುವವರೂ ಆಗಿರುವ, ನಃ-ನಮಗೆ, ಅವ್ಯಕ್ತಗತೇಃ-ತಿಳಿಯಲ್ಪಡದಿರುವ ಗಮನವುಳ್ಳ, ಸಂಸಿದ್ಧಸ್ಯ-ಜ್ಞಾನಸಿದ್ಧ

ಮಹಾತ್ಮರ ಸ್ಮರಣೆಯನ್ನುಮಾಡಿದ ಮಾತ್ರದಿಂದಲೇ ಸಂಸಾರಿಗಳ ಗೃಹಗಳು ಪವಿತ್ರಗಳಾಗುವುವೋ, ಅಂತಹ ತಮ್ಮ ದರ್ಶನವು, ಸ್ಪರ್ಶನವು, ಪಾದಪ್ರಕ್ಷಾಳನವು, ಪೀಠಪ್ರದಾನವು, ಇವುಗಳಿಂದುಂಟಾಗುವ ಶ್ರೇಯಸ್ಸನ್ನು ಹೇಳಲೇಕೆ ? ॥ ೩೩ ॥ ಅಯ್ಯಾ ಯೋಗಿಕುಲಾವತಂಸನೆ! ಶ್ರೀಮಹಾವಿಷ್ಣುವಿನಿಂದ ದೇವಶತ್ರುಗಳಾದ ರಾಕ್ಷಸರು ನಶಿಸುವಂತೆ ನಿನ್ನ ಸಾನ್ನಿಧ್ಯಮಾತ್ರದಿಂದಲೇ ಪುರುಷರಬ್ರಹ್ಮಹತ್ಯಾದಿ ಮಹಾಪಾಪಗಳೂನಶಿಸುವುವು ॥ ೩೪ ॥ ಅಲ್ಲದೆ, ಪಾಂಡವ ಪ್ರಿಯನೂ, ಭಕ್ತಾನುಗ್ರಹ ಪಕ್ಷಪಾತಿಯೂ ಆದ ಶ್ರೀಕೃಷ್ಣಮೂರ್ತಿಯೇ ತನ್ನ ಸೋದರತ್ತೆಯಮಕ್ಕಳಾದ ಪಾಂಡವರಪ್ರೀತಿಗಾಗಿ ಅವರ ಮೊಮ್ಮಗನಾದ ನನ್ನಲ್ಲಿ ಸಂಪೂರ್ಣವಾದನುಗ್ರಹವನ್ನು ಮಾಡಿರಬಹುದಲ್ಲವೆ ? ॥೩೫॥

ಇಲ್ಲವಾದರೆ ಜೀವನ್ಮುಕ್ತ ಪದವಿಯಲಿದ್ದುಕೊಂಡು, ಯಾರಿಗೂ ದಾರಿದೋರದಂತೆ ಸಂಚರಿಸುತ್ತಾ, ಆತ್ಮಾರಾಮನಾಗಿ ಮರಿಸಲ್ಪಡುವವರಲ್ಲಿ ಅತ್ಯಂತ ಶ್ರೇಷ್ಠನಾದ ನೀನು, ಪಾಮರನಾಗಿಯೂ,ಅದರಲ್ಲಿಯೂ ಸಾಯತಕ್ಕವನಾಗಿಯೂಇರುವ ನನ್ನಬಳಿಗೆ ದಯೆಮಾಡಿ

ನಿತರಾಂ ಮ್ರಿಯಮಾಣಾನಾಂ ಸಂಸಿದ್ಧಸ್ಯ ವನೀಯಸಃ॥ ೩೬ ॥ ಅತಃ ಪೃಚ್ಛಾಮಿ ಸಂಸಿದ್ಧಿಂ ಯೋಗಿನಾಂ ಪರಮಂ ಗುರುಂ । ಪುರುಷ ಸ್ಯೇಹ ಯತ್ಕಾರ್ಯಂ ಮ್ರಿಯ ಮಾಣಸ್ಯ ಸರ್ವದಾ ॥ ೩೭ ॥ ಯ ಚ್ಛ್ರೋತವ್ಯ ಮಥೋ ಜಪ್ಯಂ ಯತ್ಕರ್ತವ್ಯಂ ನೃಭಿಃ ಪ್ರಭೋ ! । ಸ್ಮರ್ತವ್ಯಂ ಭಜ ನೀಯಂ ವಾ ಬ್ರೂಹಿ ಯದ್ವಾ ವಿಪರ್ಯಯಂ ॥ ೩೮ ॥ ನೂನಂ ಭಗ ವತೋ ಬ್ರಹ್ಮನ್! ಗೃಹೇಷು ಗೃಹಮೇಧಿನಾಂ । ನ ಲಕ್ಷ್ಯತೇ ಹ್ಯವ ಸ್ಥಾನ ಮಪಿ ಗೋದೋಹನಂ ಕ್ವಚಿತ್ ॥ ೩೯ ॥ ಶ್ರೀಸೂತಃ ॥ ಏವ

ಯನ್ನು ಪಡೆದ, ವನೀಯಸಃ-ಬಯಸಲ್ಪಡತಕ್ಕವರಲ್ಲಿ ಶ್ರೇಷ್ಠನಾದ, ತೇ-ನಿನ್ನ, ದರ್ಶನಂ-ದರ್ಶನವು, ಕಥಂ-ಹೇಗಾಗುತ್ತಿತ್ತು? ॥ ೩೬ ॥ ಅತಃ-ಆದುದರಿಂದ, ಯೋಗಿನಾಂ-ಯೋಗಿಗಳಿಗೆ, ಪರಮಂ-ಉತ್ತಮ ನಾದ, ಗುರುಂ-ಗುರುವಾದ, ಸಂಸಿದ್ಧಿಂ-ಜ್ಞಾನ ಸಿದ್ಧಿಯನ್ನುಂಟುಮಾಡುವ ನಿನ್ನನ್ನು, ಪೃಚ್ಛಾಮಿ-ಕೇ ಳುತ್ತೇನೆ, ಇಹ-ಈಲೋಕದಲ್ಲಿ, ಸದಾ-ಯಾವಾಗಲೂ,ಪುರುಷಸ್ಯ-ಪುರುಷನ, ಕಾರ್ಯಂ-ಕೆಲಸವು,ಯತ್- ಯಾವದೋ ಅದರಲ್ಲಿಯೂ, ಮ್ರಿಯಮಾಣಸ್ಯ-ಮರಣವನ್ನು ಪಡೆಯತಕ್ಕವನ ಕಾರ್ಯವಾವುದೋ ॥೩೭॥ ಪ್ರಭೋ-ಎಲೈ ಸ್ವಾಮಿಯೆ? ನೃಭಿಃ-ಪುರುಷರಿಂದ,ಶ್ರೋತವ್ಯಂಯತ್-ಕೇಳತಕ್ಕುದಾವುದೋ,ಜಪ್ಯಂಯತ್- ಜಪಿಸತಕ್ಕುದಾವುದೋ,ಕರ್ತವ್ಯಂ ಯತ್-ಮಾಡತಕ್ಕುದಾವುದೋ,ಸ್ಮರ್ತವ್ಯಂ-ಸ್ಮರಿಸತಕ್ಕುದಾವುದೋ, ಭಜನೀಯಂವಾ-ಧ್ಯಾನಿಸತಕ್ಕುದಾವುದೋ, ಅನ್ಯದ್ವಾ-ಇನ್ನೂ ಬೇರೆಯಾವುದುಂಟೋ ಅದನ್ನೂ, ವಿಪರ್ಯ ಯಂ-ಇವುಗಳಿಗೆ ವಿರುದ್ಧಗಳಾದವುಗಳನ್ನೂ ಕೂಡ, ಬ್ರೂಹಿ-ಹೇಳು ॥ ೩೮ ॥

ಹೇ ಬ್ರಹ್ಮನ್-ಎಲೈಬ್ರಾಹ್ಮಣನೆ ! ಗೃಹಮೇಧಿನಾಂ-ಸಂಸಾರಿಗಳ, ಗೃಹೇಷು-ಮನೆಗಳಲ್ಲಿ, ಕ್ವಚಿತ್-ಒಮ್ಮೆ ಯೂ, ಗೋದೋಹನಮಪಿ-ಆಕಳ ಹಾಲನ್ನು ಕರೆಯುವಷ್ಟು ಹೊತ್ತು ಕೂಡ, ಭವತಃ-ನಿನ್ನ, ಅವಸ್ಥಾ ನಂ-ಸ್ಥಿತಿಯು, ನಲಕ್ಷ್ಯತೇ-ಕಾಣಲ್ಪಡುವುದಿಲ್ಲ ॥ ೩೯ ॥ ಶ್ರೀಸೂತಃ-ಸೂತನು ಹೇಳುತ್ತಾನೆ. ಏವಂ-ಹೀಗೆ, ರಾಜ್ಞಾ-ರಾಜನಿಂದ,ಅಭಾಷಿತಃ-ಮಾತನಾಡಿಸಲ್ಪಟ್ಟು,ಶ್ಲಕ್ಷ್ಣಯಾ-ಮೃದುವಾದ,ಗಿರಾ-ಮಾತಿನಿಂದ,ಪೃಷ್ಟಃ-

ದರ್ಶನವನ್ನು ಕೊಡುವುದಂದರೇನು? ॥೩೬॥ ಇಂತು ನೀನು ಅವ್ಯಾಜಕೃಪೆಯಿಂದ ಬಂದಿ ರುವುದರಿಂದ, ಯೋಗಿಗಳಿಗೆ ಪರಮ ಗುರುವಾದನಿನ್ನನ್ನು ಬೆಸಗೊಳ್ಳುವೆನು,ಅಯ್ಯಾ ಮಹ ನೀಯನೆ ! ಮರಣವನ್ನು ಪಡೆಯುವ ಪುರುಷನು ಮಾಡತಕ್ಕ ಕಾರ್ಯವಾವುದು ? ಶ್ರವ ಣಮಾಡತಕ್ಕುದಾವುದು ? ಜಪಿಸತಕ್ಕುದಾವುದು? ಸ್ಮರಿಸತಕ್ಕುದಾವುದು? ಧ್ಯಾನಿಸತಕ್ಕು ದಾವುದು? ಇವುಗಳನ್ನೂ, ಇವುಗಳಿಗೆ ವಿರುದ್ಧಗಳಾದ ಅಕಾರ್ಯಾದಿಗಳಾವುವು ? ಅವು ಗಳನ್ನೂ ನಹ ನನಗುಪದೇಶಿಸಬೇಕು ॥ ೩೮ ॥ ಅಯ್ಯಾ ಬ್ರಾಹ್ಮಣೋತ್ತಮನೆ! ಭಗ ವಂತನಾದ ನೀನು ಒಂದೊಂದುವೇಳೆ ಭಿಕ್ಷಾರ್ಥಿಯಾಗಿ ಸಂಸಾರಿಗಳ ಮನೆಗಳಿಗೆ ಬಂದ ರೂ, ಅಲ್ಲಿ ಗೋದೋಹನದಷ್ಟು ಕಾಲವುಕೂಡಾ ನಿಲ್ಲತಕ್ಕವನಲ್ಲವಾದುದರಿಂದ ಮರಳಿ ನಿನ್ನ ದರ್ಶನವು ದೊರೆಯಲಾರದು. ಈಗಲೇ ದಯೆಮಾಡಿ ನನಗಿದನ್ನು ತಿಳುಹಬೇಕೆಂದು ಬೇಡಿ ಕೊಂಡನು ॥ ೩೯ ॥ ಇಂತುರಾಜನು ವಿನಯೋಕ್ತಿಗಳಿಂದ ಬೇಡಿಕೊಳ್ಳಲು, ಧರ್ಮಜ್ಞ ನೂ, ಪರಾವರ ವಿದನೂ ವ್ಯಾಸಪುತ್ರನೂ ಆದ ಆಶುಕಮುನಿಯು ಪ್ರತ್ಯುತ್ತರವನ್ನು ಹೇಳ

ಮಾಭಾಷಿತಃ ಪೃಷ್ಟಸ್ಸರಾಜ್ಞಾ ಶ್ಲಕ್ಷ್ಣಯಾ ಗಿರಾ । ಪ್ರತ್ಯಭಾಷತ ಧರ್ಮಜ್ಞೋ ಭಗವಾನ್ ಬಾದರಾಯಣಿಃ ॥ ೪೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಅಷ್ಟಾದಶ ಸಹಸ್ರಿಕಾಯಾಂ ಸಂಹಿತಾಯಾಂ ಪಾರಮಹಂಸ್ಯಾಂ ವೈಯಾಸಿಕ್ಯಾಂ ಶ್ರೀ ಹಯಗ್ರೀವ ಬ್ರಹ್ಮ ವಿದ್ಯಾಯಾಂ ಪ್ರಥಮಸ್ಕಂಧೇ ಏಕೋನವಿಂಶೋಧ್ಯಾಯಃ

ಪ್ರಥಮಸ್ಕಂಧ ಸ್ಸಮಾಪ್ತಃ

ಪ್ರಶ್ನೆಮಾಡಲ್ಪಟ್ಟ, ಧರ್ಮಜ್ಞಃ-ಧರ್ಮಗಳನ್ನು ಬಲ್ಲ, ಭಗವಾನ್-ಭಗವಂತನಾದ, ಬಾದರಾಯಣಿಃ-ವ್ಯಾಸಪುತ್ರನಾದ, ಸಃ-ಆ ಶುಕಮುನಿಯು, ಪ್ರತ್ಯಭಾಷತ-ಪ್ರತ್ಯುತ್ತರವನ್ನು ಹೇಳಿದನು ॥ ೪೦ ॥

ಏಕೋನವಿಂಶಾಧ್ಯಾಯಂ ಸಮಾಪ್ತಂ

ಆರಂಭಿಸಿದನೆಂದು ಸೂತಪೌರಾಣಿಕನು ಶೌನಕಾದಿ ಮಹರ್ಷಿಗಳನ್ನು ಕುರಿತು ಹೇಳಿದನೆಂಬಲ್ಲಿಗೆ ಸಕಲಸುರಾಸುರ ಮಸ್ತಕನ್ಯಸ್ತ ಮಕುಟಮಣಿಕಿರಣ ಮಂಜರೀ ಪುಂಜ ಪಿಂಜರೀಭೂತ ಪಾದಾಂಬುಜ ಶ್ರೀ ಮಹಾತ್ರಿಪುರಸುಂದರೀ ವರಪ್ರಸಾದ ಸಮಾಸಾದಿತ ಸಕಲವಿದ್ಯಾ ವೈಶದ್ಯ ವಿದ್ಯೋತಮಾನ,ನವಕಾಳಿದಾಸಾದಿ ವಿದ್ವನ್ಮಣಿವ್ರಾತ ವಿಖ್ಯಾತ ವೆಲ್ಲಾಲ ಕುಲಕಲಶ ಜಲಧಿ ಸುಧಾಕರಾಯಮಾಣ ಶ್ರೀಸಾಂಬಸೂರಿ ತನೂಜಾತ ರಾಮಶೇಷಕವಿ ವಿರಚಿತ ಶ್ರೀ ಭಾಗವತ ಚಕೋರ ಚಂದ್ರಿಕೆಯೊಳ್ ಹತ್ತೊಂಬತ್ತನೆಯ ಅಧ್ಯಾಯಂ ಮುಗಿದುದು.

ಪಿರಿದಹ ಭಾಗವತಾಮರ ।
ತರುವಿನೊಳೆಸೆದಿರ್ಪ ಭಕ್ತಿಫಲವಿಳುಹುತೆ ಬೇ ।
ಳ್ಪರಿಗೀಯಲ್ ಯತ್ನಿಸಿ ನಾಂ ।
ಗುರುಕೃಪೆಯಿಂ ಸ್ಕಂಧ ವೊಂದನೇರಿದೆನೊಲವಿಂ ॥

ಒಂದನೆಯ ಸ್ಕಂಧಂ ಸಂಪೂರ್ಣಂ.

ಶ್ರೀಃ.

ಶ್ರೀಕೃಷ್ಣಪರಬ್ರಹ್ಮಣೇನಮಃ.

ಶ್ರೀ ಭಾಗವತಮಹಾಪುರಾಣ.

ಕನ್ನಡಟೀಕಾತಾತ್ಪರ್ಯಸಹಿತ

ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ

ಪ್ರಕಟಿತವಾಯಿತು.

ಪ್ರಥಮಸ್ಕಂಧ.

ಬೆಂಗಳೂರು:

ಕೆ. ಎಸ್. ಕೃಷ್ಣಯ್ಯರ್ ಬಿ. ಎ,. ಯವರ

"ಐರಿಷ್" ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

೧೯೧೧.

ಶ್ರೀ ಕೃಷ್ಣಪರಬ್ರಹ್ಮಣೇನಮಃ.

—:ದ್ವಿತೀಯ ಸ್ಕಂಧಃ:—

ಅಥಪ್ರಥಮೋಧ್ಯಾಯಃ.

ಯನ್ನಾಮಕೀರ್ತನಂ ದಾನತಪೋಯೋಗಾದಿ ಸತ್ಫಲಂ ।
ತಂ ನಿತ್ಯಂ ಪರಮಾನಂದಂ ಹರಿಂ ನರ ಮಹಂ ಭಜೇ ॥

ಮೂ॥ ಶ್ರೀಶುಕಃ। ವರೀಯಾ ನೇಷ ತೇ ಪ್ರಶ್ನಃ ಕೃತೋ ಲೋಕಹಿತೋ ನೃಪ ! ।
ಆತ್ಮವಿತ್ಸಂಮತಃ ಪುಂಸಾಂ ಶ್ರೋತವ್ಯಾದಿಷು ಯಃ ಪರಃ ॥೧॥ ಶ್ರೋತ

ಪ್ರಥಮಾಧ್ಯಾಯಂ

ಕಂ॥ ಶ್ರವಣ ಸ್ಮರಣಾದಿಗಳಿಂ । ದವಧರಿಸುತೆ ಹೃದಯಪೀಠದೋಳ್ ಭಗವದ್ರೂ ।
ಪವ ನಿಲಿಸಿ ಮನವ ನೇಕಾಂ । ತವ ನೆಸಗುವ ಪರಿಯದಿಲ್ಲಿ ಪೇಳಲ್ಪಡುಗುಂ ।

ಶ್ರೀಶುಕಃ-ಶುಕಮುನಿಯು ಹೇಳುತ್ತಾನೆ, ಹೇನೃಪ-ಎಲೈ ಪರೀಕ್ಷಿದ್ರಾಜನೆ? ಯಃ-ಯಾವ ಪ್ರಶ್ನೆಯು ಲೋಕಹಿತಃ-ಜಗತ್ತಿಗೆ ಹಿತಕರವೋ, ಆತ್ಮವಿತ್ಸಂಮತಃ-ಜ್ಞಾನಿಗಳಿಗೆ ಇಷ್ಟವಾದುದೋ, ಪುಂಸಾಂ-ಪುರುಷರಿಗೆ, ಶ್ರೋತವ್ಯಾದಿಷು-ಕೇಳಲ್ಪಡಬೇಕಾದುದೇ ಮೊದಲಾದುವುಗಳಲ್ಲಿ, ಪರಃ-ಅತ್ಯುತ್ತಮವಾದುದೋ, ಅಂತಹ, ತೇ-ನಿನ್ನಿಂದ, ಕೃತಃ-ಮಾಡಲ್ಪಟ್ಟ, ಏಷಃ-ಈ, ಪ್ರಶ್ನಃ-ಪ್ರಶ್ನೆಯು, ವರೀಯಾನ್-ಬಹಳ ಉತ್ತಮವಾದುದು ॥೧॥ ಹೇ ರಾಜೇಂದ್ರ-ಎಲೈ ರಾಜಶ್ರೇಷ್ಠನೆ? ಆತ್ಮತತ್ವಂ-ಆತ್ಮಸ್ವರೂಪವನ್ನು, ಅಪಶ್ಯತಾಂ-ಕಾಣದಿರುವ, ಗೃಹೇಷು ಮನೆಗಳಲ್ಲಿ, ಮೇಧಿನಾಂ-ಆ ಸಕ್ತರಾದ ಅಥವಾ,ಗೃಹಮೇಧಿನಾಂ-‡ಪಾಚ

—ಒಂದನೆಯ ಅಧ್ಯಾಯ—

ಪೀಠಿಕಾ ಪ್ರಸ್ತಾವನೆ.

ಅನಂತರದಲ್ಲಿ ಸೂತ ಪೌರಾಣಿಕನು ಶೌನಕಾದಿ ಮಹಾಮುನಿಗಳನ್ನು ಕುರಿತು, ಅಯ್ಯಾ ಮುನೀಂದ್ರರಿರಾ? (ಪೂರ್ವಸ್ಕಂಧದ ಕಡೆಯಲ್ಲಿ)ಪರೀಕ್ಷಿದ್ರಾಜನು ಮಾಡಿದ ಪ್ರಶ್ನೆಗಳನ್ನು ಕೇಳಿ, ಶುಕಮುನಿಯು ಹೇಳುತ್ತಾನೆ:—ಅಯ್ಯಾ ಪರೀಕ್ಷಿನ್ಮಹೀಪಾಲನೆ ! ನೀನು ಮಾಡಿದಪ್ರಶ್ನೆಯು ಅತ್ಯುತ್ತಮವಾದುದು. ಏಕೆಂದರೆ—ಇದುನಿನಗೆ ಮಾತ್ರವೇಅಲ್ಲ, ಲೋಕಕ್ಕೇ ಹಿತಕರವಾದುದು. ಆತ್ಮಜ್ಞಾನಿಗಳಿಗಿಷ್ಟವಾದುದು ಅಲ್ಲದೆ ಮನುಷ್ಯರಾದವರು, ಕೇಳಿ ತಿಳಿದು ನಡೆವಳಿಯಲ್ಲಿ ತರಬೇಕಾದ ವಿಷಯಗಳು ಯಾವವುಂಟೋ, ಅವುಗಳಲ್ಲಿ ಅತಿಶ್ರೇಷ್ಠವಾದುದು ॥ ೧ ॥ ಅಯ್ಯಾ ರಾಜೇಂದ್ರನೆ! ಆತ್ಮಸ್ವರೂಪವನ್ನರಿಯದೆ ವರ್ಣಾ

---

* ಶ್ರೀಭಾಗವತಕ್ಕೆ ಆರಂಭದಲ್ಲಿರುವ ಮೂರುಮಂಗಳ ಶ್ಲೋಕಗಳೇ ಸೂತ್ರಗಳು. ಅವುಗಳ ಅರ್ಥವನ್ನು ವ್ಯಾಖ್ಯಾನಿಸುವುದೇ ಪ್ರಥಮಸ್ಕಂಧವು. ವಿವರಣೆಗೆ ಮೂಲರೂಪವಾದುದು ದ್ವಿತೀಯಸ್ಕಂಧವು. ಉಳಿದ ಹತ್ತುಸ್ಕಂಧಗಳು ಇದರರ್ಥವನ್ನೇ ವಿಸ್ತರಿಸಿ ನಿರೂಪಿಸುವುವೆಂದು ಭಾವವು.

ವ್ಯಾದೀನಿ ! ರಾಜೇಂದ್ರ ನೃಣಾಂ ಸಂತಿ ಸಹಸ್ರಶಃ । ಅಪಶ್ಯತಾ ಮಾತ್ಮತ ತ್ವಂ ಗೃಹೇಷು ಗೃಹಮೇಧಿನಾಂ ॥ ೨ ॥ ನಿದ್ರಯಾ ಹ್ರಿಯತೇ ನಕ್ತಂ ವ್ಯವಾಯೇನ ನವಂ ವಯಃ । ದಿವಾ ಚಾರ್ಥೇಹಯಾ ರಾಜನ್! ಕುಟುಂಬ ಭರಣೇನಚ ॥ ೩ ॥ ದೇಹಾಪತ್ಯಕಳತ್ರಾದಿ ಷ್ವಾತ್ಮಸೈನ್ಯೇ ಷ್ವಸತ್ಸ್ವ ಪಿ । ತೇಷಾಂ ಪ್ರಮತ್ತೋ ನಿಧನಂ ಪಶ್ಯನ್ನಪಿ ನಪಶ್ಯತಿ ॥ ೪ ॥ ತಸ್ಮಾ ದ್ಭಾರತ ! ಸರ್ವಾತ್ಮಾ ಭಗವಾ ನೀಶ್ವರೋ ಹರಿಃ । ಶ್ರೋತವ್ಯಃ ಕೀರ್ತಿ

ಸೂನಗಳಲ್ಲಿನಿರತರಾದ, ನೃಣಾಂ-ಮನುಷ್ಯರಿಗೆ, ಶ್ರೋತವ್ಯಾದೀನಿ-ಕೇಳಲ್ಪಡಬೇಕಾದುದೇ ಮೊದಲಾದುವು, ಸಹಸ್ರಶಃ-ಸಾವಿರಾರು, ಸಂತಿ-ಇವೆ ॥ ೨ ॥ ಹೇರಾಜನ್-ಎಲೈ ರಾಜನೆ ? ನವಂ-ಅಪೂರ್ವವಾದ, ಯದ್ವ ಯಃ-ಯಾವ ವಯಸ್ಸುಂಟೋ, ತತ್-ಅದು, ನಕ್ತಂ-ರಾತ್ರಿಯಲ್ಲಿ, ನಿದ್ರಯಾ-ನಿದ್ದೆಯಿಂದಾಗಲಿ, ವ್ಯವಾ ಯೇನ-ರತಿಕ್ರೀಡೆಯಿಂದಾಗಲಿ, ದಿವಾ-ಹಗಲು, ಅರ್ಥೇಹಯಾ-ಧನವನ್ನು ಸಂಪಾದಿಸುವ ಪ್ರಯತ್ನದಿಂದಾ ಗಲಿ, ಕುಟುಂಬ ಭರಣೇನ-ಕುಟುಂಬವನ್ನು ಪೋಷಿಸುವ ಕಾರ್ಯದಿಂದಾಗಲಿ, ಚ-ಇತರ ಕಾರ್ಯಗ ಳಿಂದಾಗಲಿ, ಹ್ರಿಯತೇ-ಅಪಹರಿಸಲ್ಪಡುವುದು ॥ ೩ ॥

ಆತ್ಮಸೈನ್ಯೇಷು-ತನಗೆ ಪರಿವಾರವಾದ, ದೇಹಾ...ಷು, ದೇಹ-ಶರೀರ, ಅಪತ್ಯ-ಮಕ್ಕಳು, ಕಳತ್ರ-ಹೆಂಡ ತಿ, ಆದಿಷು-ಮೊದಲಾದವರು, ಅಸತ್ಸ್ವಪಿ-ಸತ್ಯವಲ್ಲದಿದ್ದರೂ, ನಿಧನಂ-ಇತರರು ಸಾಯುವುದನ್ನು, ಪಶ್ಯನ್ನಪಿ-ನೋಡುತ್ತಿದ್ದರೂ, ಪ್ರಮತ್ತಃ-ಮದಾಂಧನಾದುದರಿಂದ, ತೇಷಾಂ-ತನ್ನ ಶರೀರಾದಿಗಳಲ್ಲಿ, ನಪಶ್ಯತಿ-ನೋಡುವು ದಿಲ್ಲ॥೪॥ಹೇ ಭಾರತ-ಎಲೈ ಭರತವಂಶೋತ್ಪನ್ನನೆ ? ತಸ್ಮಾತ್-ಆದುದರಿಂದ ಅಭಯಂ-ಮೋಕ್ಷವನ್ನು, ಇಚ್ಛ ತಾ-ಬಯಸುವವನಿಂದ, ಸರ್ವಾತ್ಮಾ-ಎಲ್ಲರಿಗೂ ಆತ್ಮನಾಗಿರುವ, ಭಗವಾನ್-ಭಗವಂತನಾದ, ಹರಿಃ-ವಿಷ್ಣು

ಶ್ರಮವಿಹಿತಗಳಾದ ಕಾಮ್ಯಕರ್ಮಗಳನ್ನು ಮಾಡುತ್ತಾ, ಹಿಂಸಾಪರರಾಗಿ ಗೃಹಸ್ಥರೆನಿಸಿ ರುವ ಜನರಿಗೆ ಕೇಳಿ ತಿಳಿದುಕೊಳ್ಳಬೇಕಾದ ಸಂಗತಿಗಳು ಸಾವಿರಾರಿರುವುವು. ಅವುಗ ಳಿಂದ ಅವರ ಆಯುಷ್ಯವು ವ್ಯರ್ಥವಾಗಿ ಕಳೆದುಹೋಗುವುದು ॥ ೨ ॥ ರಾತ್ರಿಕಾಲ ದಲ್ಲಿ ಜನರ ಉತ್ತಮವಾದ ಆಯುಷ್ಯವು ನಿದ್ದೆಯಿಂದಲೂ, ಕಾಮಕ್ರೀಡೆಯಿಂದಲೂ ಕಳೆ ಯುವುದು. ಹಗಲಿನಲ್ಲಿ ದ್ರವ್ಯಾರ್ಜನೆಯನ್ನು ಮಾಡುವ ಪ್ರಯತ್ನದಿಂದಲೂ, ಪತ್ನೀಪು ತ್ರಾದಿಗಳನ್ನು ಸಲಹುವ ವ್ಯಾಸಂಗದಿಂದಲೂ ವ್ಯರ್ಥವಾಗುವುದು ॥ ೩ ॥ ಮತ್ತು ತನ್ನ ವರೆನಿಸಿಕೊಂಡಿರುವ ಶರೀರ, ಪತ್ನೀ, ಪುತ್ರ, ಮೊದಲಾದ ಪರಿವಾರಗಳು ಮಿಥ್ಯಾಭೂತಗಳಾ ಗಿರುವುವು. ತಮಗೆ ಹಿರಿಯರಾದ ತಂದೆ, ತಾತ, ಮೊದಲಾದವರು ಸತ್ತುದನ್ನೂ ಕಣ್ಣಾರ ಕಂಡಿರುವರು. ಇಂತಿದ್ದರೂ, ಪತ್ನೀಪುತ್ರಾದಿಗಳಲ್ಲಿರುವ ದುರಭಿಮಾನದಿಂದ ಮತ್ತರಾಗಿ ಆ ಮರಣವು ತಮಗುಂಟಾಗುವುದೆಂದೆಣಿಸುವುದಿಲ್ಲ ॥ ೪ ॥ ಎಲೈ ಭರತಕುಲತಿಲಕನೆ ! ಆದುದರಿಂದ ಸಂಸಾರಭಯವಿಲ್ಲದ ಮೋಕ್ಷಸುಖವನ್ನು ಬಯಸುವ ಪುರುಷನು ವ್ಯರ್ಥಗ

* ಕಂಡಿನೀ ಪೇಷಿಣೀ ಚುಲ್ಲೀ ಉದಕುಂಭೀಚ ಮಾರ್ಜನೀ। ಪಂಚಸೂನಾ ಗೃಹಸ್ಥಸ್ಯ ತಾಭಿಸ್ಸ್ವ ರ್ಗಂ ನವಿಂದತಿ ॥ ವೈಶ್ವದೇವಂತು ಕುರ್ವೀತ ಪಂಚಸೂನಾಪನುತ್ತಯೇ । ಗುಡಿಸುವುದು, ಅರೆಯು ವುದು, ನೀರುತುಂಬುವುದು, ಕುಟ್ಟುವುದು, ಒಲೇ ಉರಿಸುವುದು, ಈ ಐದರಿಂಲೂ ಸಂಸಾರಿಗೆ ಹಿಂಸಾದೋ ಷವುಂಟಾಗುವುದು. ಆ ದೋಷವನ್ನು ಕಳೆದುಕೊಳ್ಳುವುದಕ್ಕಾಗಿ ವೈಶ್ವದೇವವನ್ನು ಮಾಡಬೇಕು.

ತವ್ಯಶ್ಚ ಸ್ಮರ್ತವ್ಯಶ್ಚೇಚ್ಛತಾಽಭಯಂ ॥ ೫ ॥ ಏತಾವಾನ್ ಸಾಂಖ್ಯ ಯೋಗಾಭ್ಯಾಂ ಸ್ವಧರ್ಮಪರಿನಿಷ್ಠಯಾ । ಜನ್ಮಲಾಭಃ ಪರಃ ಪುಂಸಾ ಮಂತೇ ನಾರಾಯಣಸ್ಮೃತಿಃ ॥ ೬ ॥ ಪ್ರಾಯೇಣ ಮುನಯೋ ರಾಜನ್ ! ನಿವೃತ್ತಾ ವಿಧಿ * ಷೇಧತಃ। ‡ನೈರ್ಗುಣ್ಯಸ್ಥಾ ರಮಂತೇಸ್ಮ ಗುಣಾಽನುಕಥ ನೇ ಹರೇಃ ॥ ೭ ॥ ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಂ ।

ವ್ಯ, ಶ್ರೋತವ್ಯಃ-ಕೇಳಲ್ಪಡಬೇಕು, ಕೀರ್ತಿ-ತವ್ಯಶ್ಚ-ಹೊಗಳಲ್ಪಡಬೇಕು, ಸ್ಮರ್ತವ್ಯಶ್ಚ-ಸ್ಮರಿಸಲೂ ಬೇಕು ॥೫॥ ಸಾಂಖ್ಯಯೋಗಾಭ್ಯಾಂ, ಸಾಂಖ್ಯ-ತತ್ವಜ್ಞಾನ, ಯೋಗ-ಅಷ್ಟಾಂಗಯೋಗ, ಇವುಗಳಿಂದಲೂ, ಸ್ವಧರ್ಮ... ಯಾ, ಸ್ವ-ತನ್ನ, ಧರ್ಮ-ಧರ್ಮಗಳ, ಪರಿನಿಷ್ಠಯಾ-ಆಚರಣೆಯಿಂದಲೂ, ಪುಂಸಾಂ-ಪುರುಷರಿಗೆ, ಅಂತೇ-ಮರಣಕಾಲದಲ್ಲಿ, ಯಾ-ಯಾವ, ನಾರಾಯಣಸ್ಮೃತಿಃ-ನಾರಾಯಣ ಸ್ಮರಣೆಯುಂಟೋ, ಏತಾವಾನೇವ-ಇದೇ, ಪರಃ-ಸರ್ವೋತ್ತಮವಾದ, ಜನ್ಮಲಾಭಃ-ಜನ್ಮಕ್ಕೆ ಫಲವು ॥ ೬ ॥ ಹೇರಾಜನ್-ಎಲೈ ರಾಜನೆ ! ಪ್ರಾಯೇಣ-ಬಹಳವಾಗಿ, ಮುನಯಃ-ಮುನಿಗಳು, ವಿಧಿ (ನಿ) ಷೇಧತಃ-ವಿಧಿನಿಷೇಧಗಳಿಂದ, ನಿವೃತ್ತಾಃ-ಬಿಡಲ್ಪಟ್ಟವರಾಗಿ, ನೈರ್ಗುಣ್ಯಸ್ಥಾಅಪಿ-ಬ್ರಹ್ಮಸ್ವರೂಪದಲ್ಲಿರುವವರಾದರೂ, ಹರೇಃ-ವಿಷ್ಣುವಿನ, ಗುಣಾನುಕಥನೇ-ಗುಣಗಳನ್ನು ಬಣ್ಣಿಸುವುದರಲ್ಲಿ, ರಮಂತೇಸ್ಮ-ಆನಂದಿಸುವರಷ್ಟೆ ॥ ೭ ॥ ಅಹಂ ನಾನು ಭಾಗವತಂನಾಮ-ಭಾಗವತವೆಂದು ಹೆಸರುಗೊಂಡ, ಇದಂ-ನನ್ನಬುದ್ಧಿಸ್ಥವಾದ, ಬ್ರಹ್ಮಸಮ್ಮಿತಂ-ವೇದಕ್ಕೆ ಸಮಾನವಾದ, ಪುರಾಣಂ-ಪುರಾಣವನ್ನು, ದ್ವಾಪರಾದೌ-ದ್ವಾಪರಯುಗದ ಕಡೆಯಲ್ಲಿ, ಪಿತುಃ-ತಂದೆಯಾದ

ಳಾದ ಇತರ ವಿಷಯಗಳನ್ನು ಕೇಳುತ್ತಾ ಆಯುಷ್ಯವನ್ನು ಅನ್ಯಾಯಮಾಡದೆ, ಸರ್ವಾತ್ಮಕನೂ, ನಿತ್ಯೈಶ್ವರ್ಯಸಂಪನ್ನನೂ ಆದ ವಾಸುದೇವಮೂರ್ತಿಯ ಮಹಿಮೆಯನ್ನು ಕೇಳುತ್ತಲೂ, ಹೊಗಳುತ್ತಲೂ, ಸ್ಮರಿಸುತ್ತಲೂ ಇರಬೇಕು ॥ ೫ ॥ ಆತ್ಮಾನಾತ್ಮವಿವೇಕವನ್ನು ತಿಳಿಸುವ ಸಾಂಖ್ಯಶಾಸ್ತ್ರವನ್ನು ಕಲಿಯುವುದಕ್ಕೂ, ಅಷ್ಟಾಂಗಗಳಿಂದ ಕೂಡಿದ ಯೋಗವನ್ನು ಅಭ್ಯಾಸಮಾಡುವುದಕ್ಕೂ, ವರ್ಣಾಶ್ರಮವಿಹಿತಗಳಾದ ಧರ್ಮಗಳನ್ನಾಚರಿಸುವುದಕ್ಕೂಸಹ, ಮರಣಕಾಲದಲ್ಲಿ ನಾರಾಯಣಮೂರ್ತಿಯ ಸ್ಮರಣೆಯುಂಟಾಗುವುದೇ ಉತ್ತಮಫಲವು. ಈ ಫಲವನ್ನು ಪಡೆದವನ ಜನ್ಮವೇ ಸಾರ್ಥಕವು. ಆದುದರಿಂದ ಇದಕ್ಕಿಂತ ಬೇರೆಯಾವುದೂ ಕೇಳತಕ್ಕುದಿಲ್ಲ ॥ ೬ ॥ ಅಯ್ಯಾ ರಾಜನೆ ! ಈ ಕಾರಣದಿಂದಲೇ ಲೋಕದಲ್ಲಿ ಬಹಳಮಟ್ಟಿಗೆ ವಿಧಿನಿಷೇಧಗಳಿಲ್ಲದೆ ನಿರ್ಗುಣ ಬ್ರಹ್ಮನಿಷ್ಠರಾಗಿರುವ ಮಹರ್ಷಿಗಳು ಕೂಡ, ಭಗವಂತನ ಗುಣವರ್ಣನೆಯಲ್ಲಿ ಆನಂದಿಸುವರು ॥ ೭ ॥ ಲೋಕೋಪಕಾರಕ್ಕಾಗಿ ಭಗವಂತನಿಂದಲೇ ನಿರ್ಮಿತವಾದುದರಿಂದ ಭಾಗವತವೆಂದು ಹೆಸರನ್ನು ಪಡೆದು ವೇದಗಳಿಗೆ ಸಮಾನವೆನಿಸಿರುವ ಈ ಮಹಾಪುರಾಣವನ್ನು ನಾನು ದ್ವಾಪರಯುಗದ

---

‡ (೧) ಪಿ. ಮಿಶ್ರಗಳಾದ ಸತ್ವರಜಸ್ತಮಸ್ಸುಗಳಿಗೊಳಗಾಗದೆ ಶುದ್ಧಸತ್ವಗುಣಪ್ರಧಾನರಾದವರು

(೨) ಪಿ, ನಿರ್ಗುಣ-ಭಗವಂತನು, ಭಗವಂತನಿಂದ ಕೊಡಲ್ಪಡುವ ಮೋಕ್ಷಕ್ಕೆ ನೈರ್ಗುಣ್ಯವೆಂದು ಹೆಸರು, ಅದನ್ನು ಪಡೆದವರು-ಮುಕ್ತರು,

(೩) ಪಿ, ಪ್ರಕೃತಿಯ ಗುಣಗಳಿಗೊಳಗಾಗದ ಬ್ರಹ್ಮನಲ್ಲಿ ನಿಷ್ಠರಾದವರು,

ಅಧೀತವಾನ್ § ದ್ವಾಪರಾದೌ ಪಿತುರ್ದ್ವೈಪಾಯನಾದಹಂ ॥ ೮ ॥ ಪರಿನಿಷ್ಠಿತೋಽಪಿ ನೈರ್ಗುಣ್ಯೇ ಉತ್ತಮಶ್ಲೋಕಲೀಲಯಾ। ಗೃಹೀತಚೇತಾ ರಾಜರ್ಷೇ! ಆಖ್ಯಾನಂ ಯದಧೀತವಾನ್ ॥೯॥ ತದಹಂ ತೇಽಭಿಧಾಸ್ಯಾಮಿ ಮಹಾಪೌರುಷಿಕೋ ಭವಾನ್ । ಯಸ್ಯ ಶ್ರದ್ದಧತಾಮಾಶು ಸ್ಯಾನ್ಮುಕುಂದೇ ಮತಿಸ್ಸತೀ ॥೧೦॥ ಏತನ್ನಿರ್ವಿದ್ಯಮಾನಾನಾಮಿಚ್ಛತಾಮಕುತೋಭಯಂ

ದ್ವೈಪಾಯನಾತ್-ವ್ಯಾಸಮುನಿಯಿಂದ, ಅಧೀತವಾನ್-ಕಲಿತೆನು ॥ ೮ ॥

ಹೇರಾಜರ್ಷೇ-ಎಲೈ ರಾಜಋಷಿಯೆ! ಅಹಂ-ನಾನು, ನೈರ್ಗುಣ್ಯೇ-ನಿರ್ಗುಣಬ್ರಹ್ಮನಲ್ಲಿ, ಪರಿನಿಷ್ಠಿತೋಽಪಿ-ನೆಲೆಗೊಂಡವನಾದರೂ, ಉತ್ತಮ...ಯಾ, ಉತ್ತಮಶ್ಲೋಕ-ಭಗವಂತನ, ಲೀಲಯಾ-ಅವತಾರಚರಿತ್ರೆಗಳಿಂದ, ಗೃಹೀತಚೇತಾಃ-ಸೆಳೆಯಲ್ಪಟ್ಟ ಮನಸ್ಸುಳ್ಳವನಾಗಿ, ಯತ್-ಯಾವ, ಆಖ್ಯಾನಂ-ಪುರಾಣವನ್ನು, ಅಧೀತವಾನ್ - ಕಲಿತೆನೋ ॥೯॥ ಭವಾನ್-ನೀನು, ಮಹಾಪೌರುಷಿಕಃ - ಪುರುಷೋತ್ತಮನಾದ ವಿಷ್ಣುವಿನಲ್ಲಿ ಭಕ್ತಿಯುಳ್ಳವನು, ಆದುದರಿಂದ, ಯತ್ರ-ಯಾವಪುರಾಣದಲ್ಲಿ, ಶ್ರದ್ದಧತಾಂ-ನಂಬಿಕೆಯನ್ನಿಡುವವರಿಗೆ, ಆಶು ಬೇಗನೆ, ಮುಕುಂದೇ - ವಿಷ್ಣುವಿನಲ್ಲಿ, ಸತೀ-ನಿರ್ವ್ಯಾಜವಾದ, ಮತಿಃ- ಭಕ್ತಿಯು, ಸ್ಯಾತ್-ಉಂಟಾಗುವುದೋ, ತತ್-ಅಂತಹ ಪುರಾಣವನ್ನು, ಅಹಂ-ನಾನು, ತೇ-ನಿನಗೆ, ಅಭಿಧಾಸ್ಯಾಮಿ-ಹೇಳುವೆನು ॥೧೦॥ ಹೇನೃಪ-ಎಲೈರಾಜನೆ ! ಏತತ್-ಈ, ಹರೇಃ-ವಿಷ್ಣುವಿನ, ನಾಮಾನುಕೀರ್ತನಂ-ನಾಮಸ್ಮರಣರೂಪವಾದಪುರಾಣವು ಇಚ್ಛತಾಂ - ಸಕಾಮರಾದವರಿಗೆ ಫಲಸಾಧನವಾಗಿಯೂ, ನಿರ್ವಿದ್ಯಮಾನಾನಾಂ - ವಿರಕ್ತರಾದ ಮುಮುಕ್ಷುಗಳಿಗೆ ಮೋಕ್ಷಸಾಧನವಾಗಿಯೂ, ಯೋಗಿನಾಂ-ಜ್ಞಾನಿಗಳಿಗೆ, ಅಕು

ಕಡೆಯಲ್ಲಿ ನನ್ನ ತಂದೆಯಾದ ದ್ವೈಪಾಯನಮುನಿಯಿಂದ ಅಧ್ಯಯನಮಾಡಿದೆನು ॥೮॥

ಅಯ್ಯಾ ರಾಜರ್ಷಿಯೆ! ನಾನು ನಿರ್ಗುಣಬ್ರಹ್ಮಸಾಕ್ಷಾತ್ಕಾರವನ್ನು ಪಡೆದವನಾದರೂ ಆ ಭಗವಂತನ ಪವಿತ್ರವಾದ ಚರಿತ್ರೆಯಿಂದ ಮನಸೋತು ಈ ಪುರಾಣವನ್ನು ಅಧ್ಯಯನ ಮಾಡಿರುವೆನು ॥೯॥ ನೀನು ಪುರುಷೋತ್ತಮನಾದ ನಾರಾಯಣಮೂರ್ತಿಯಲ್ಲಿ ಭಕ್ತಿಯುಳ್ಳವನಾದುದರಿಂದ ಗುರುಶುಶ್ರೂಷಾದಿಗಳನ್ನು ಮಾಡದಿದ್ದರೂ ನಿಮ್ಮಂತವರಿಗೆ ತತ್ವೋಪದೇಶವನ್ನು ಮಾಡಬಹುದು. ಆದಕಾರಣ ಯಾವ ಪುರಾಣದಲ್ಲಿ ನಂಬಿಕೆಯನ್ನಿಟ್ಟ ಪುರುಷನಿಗೆ ಬೇಗನೆ ನಿರತಿಶಯವಾದ ಭಗವದ್ಭಕ್ತಿಯೆಂಬುದು ಕೈಗೂಡುವುದೋ, ಅಂತಹ ಈ ಭಾಗವತಪುರಾಣವನ್ನು ನಿನಗೆ ಹೇಳುತ್ತೇನೆ ಕೇಳು ॥ ೧೦ ॥ ಭಗವನ್ನಾಮಕೀರ್ತನರೂಪವಾದ ಈ ಪುರಾಣವು ಕಾಮ್ಯಫಲಗಳನ್ನು ಬಯಸಿ ಕೇಳುವವರಿಗೆ ಅವುಗಳನ್ನುಕೊಡುವು

§ (೧) ವೀ, ದ್ವಾಪರವೇ ಆದಿಯಲ್ಲಿ ಉಳ್ಳದ್ದು-ಕಲಿಯುಗಪ್ರಾರಂಭ,

(೨) ವಿ, "ವ್ಯಾಸ ಷಷ್ಟ್ಯತವರ್ಷೀಯೋ ಧೃತರಾಷ್ಟ್ರಮಜೀಜನತ್" ವ್ಯಾಸಮುನಿಯು ತನಗೆ ಆರುನೂರು ವರ್ಷಗಳಾದಮೇಲೆ ಧೃತರಾಷ್ಟ್ರನನ್ನು ಹುಟ್ಟಿಸಿದನೆಂದು ಹೇಳಿರುವುದರಿಂದಲೂ, ದ್ವಾಪರದಕಡೆಯಲ್ಲಿ ಭಾರತಕಥೆಯು ನಡೆಯಿತೆಂದು ಹೇಳಿರುವುದರಿಂದಲೂ, ಕೃಷ್ಣನು ಹುಟ್ಟುವುದಕ್ಕೆ ಸ್ವಲ ಮೊದಲು ವ್ಯಾಸಮುನಿಯು ಅವತಾರವಾದುದರಿಂದಲೂ, ದ್ವಾಪರಾದಿಯೆಂಬುದಕ್ಕೆ ದ್ವಾಪರಯುಗದಲ್ಲಿ ಕೃಷ್ಣನು ಹುಟ್ಟುವುದಕ್ಕೆ ಮುಂಚೆ ಎಂದಭಿಪ್ರಾಯವು,

(೩) ವಿಶ್ವ, ದ್ವಾಪರ-ದ್ವಾಪರಾಂತ, ದ್ವಾಪರಾಂತದ ಆದಿ-ದ್ವಾಪರಯುಗವು ಮುಗಿವುದಕ್ಕೆ ಮೊದಲು

ಯೋಗಿನಾಂ ನೃಪ ! ನಿರ್ಣೀತಂ ಹರೇ ರ್ನಾಮಾನುಕೀರ್ತನಂ ॥೧೧॥
ಕಿಂ ಪ್ರಮತ್ತಸ್ಯ ಬಹುಭಿಃ ಪರೋಕ್ಷೈ ರ್ಹಾಯನೈ ರಿಹ। ವರಂ ಮುಹೂ
ರ್ತಂ ವಿದಿತಂ ಘಟೇತ ಶ್ರೇಯಸೇ ಯತಃ ॥ ೧೨ ॥ ಖಟ್ವಾಂಗೋನಾಮ
ರಾಜರ್ಷಿ ರ್ಜ್ಞಾತ್ವೇಯತ್ತಾ ಮಿಹಾಯುಷಃ । † ಮುಹೂರ್ತಾ ತ್ಸರ್ವ ಮು
ತ್ಸೃಜ್ಯ ಗತವಾ ನಭಯಂ ಹರಿಂ ॥ ೧೩ ॥ ತವಾ ಪ್ಯೇತರ್ಹಿ ಕೌರವ್ಯ !

ತೋಽಭಯಂ-ಯಾವಭಯವೂ ಇಲ್ಲದ ಫಲವಾಗಿಯೂ, ನಿರ್ಣೀತಂ-ನಿಶ್ಚಯಿಸಲ್ಪಟ್ಟಿರುವುದು ॥೧೧॥ ಇಹ-ಈ ಲೋಕದಲ್ಲಿ, ಪ್ರಮತ್ತಸ್ಯ-ತನ್ನಕ್ಷೇಮವನ್ನೇ ಅರಿಯದವನಿಗೆ, ಪರೋಕ್ಷೈಃ-ತಿಳಿಯದಂತೆ ಕಳೆದುಹೋದ, ಬಹುಭಿಃ-ಬಹಳವಾದ, ಹಾಯನೈಃ-ವರ್ಷಗಳಿಂದ, ಕಿಂ-ಏನುಪ್ರಯೋಜನ ? ಯತಃ-ಯಾವುದರಿಂದ, ಶ್ರೇಯಸೇ-ತಾನು ಕಡೆಹಾಯುವುದಕ್ಕಾಗಿ, ಯತೇತ-ಯತ್ನಮಾಡುವನೋ, ಅಂತಹ, ವಿದಿತಂ-ವ್ಯರ್ಥವಾಗಿ ಕಳೆಯಿತೆಂದು ತಿಳಿದ, ಮುಹೂರ್ತಮಪಿ-ಮುಹೂರ್ತಕಾಲವೂ, ವರಂ-ಶ್ರೇಷ್ಠವು ॥೧೨॥ ಖಟ್ವಾಂಗೋನಾಮ-ಖಟ್ವಾಂಗನೆಂಬ, ರಾಜರ್ಷಿಃ-ರಾಜಋಷಿಯು, ಇಹ-ಈ ಲೋಕದಲ್ಲಿ, ಆಯುಷಃ-ತನ್ನ ಆಯುಸ್ಸಿನ, ಇಯತ್ತಾಂ-ಪ್ರಮಾಣವನ್ನು, ಜ್ಞಾತ್ವಾ-ತಿಳಿದು, ಸರ್ವಂ-ಎಲ್ಲವನ್ನೂ, ಉತ್ಸೃಜ್ಯ-ಬಿಟ್ಟು, ಮುಹೂರ್ತಾತ್-ಮುಹೂರ್ತದಿಂದಲೇ, ಅಭಯಂ-ಭಯರಹಿತನಾದ, ಹರಿಂ-ವಿಷ್ಣುವನ್ನು, ಗತವಾನ್-ಹೊಂದಿದನು ॥೧೩॥

ದಾಗಿಯೂ, ನಿಷ್ಕಾಮರಾಗಿ ಮೋಕ್ಷವನ್ನು ಹಾರೈಸುವವರಿಗೆ ಮೋಕ್ಷಸಾಧನವಾಗಿಯೂ, ಆತ್ಮವೇತ್ತೃಗಳಾದ ಯೋಗಿಗಳಿಗೆ ಯೋಗಫಲರೂಪವಾಗಿಯೂ ಇರುವುದೆಂದು ನಿಶ್ಚಯಿಸಲ್ಪಟ್ಟಿದೆ. ಆದುದರಿಂದ ಸಂಸಾರಿಗಳಿಗಾಗಲಿ, ಸನ್ಯಾಸಿಗಳಿಗಾಗಲಿ, ಇದನ್ನು ಮೀರಿದ ಶ್ರೇಯಸ್ಸಾಧನವಾವುದೂ ಇಲ್ಲ ॥ ೧೧ ॥ "ಆಯುಶ್ಶೇಷವೆಂಬುದು ಅತ್ಯಲ್ಪವಾಗಿರುವುದರಿಂದೇನುಮಾಡಲಿ"? ಎಂದು ಚಿಂತಿಸಬೇಡ. ತನ್ನನ್ನೇ ತಾನು ರಕ್ಷಿಸಿಕೊಳ್ಳಲಾರದ ಮದಾಂಧನಿಗೆ ಕಣ್ಣಿಗೆ ಕಾಣದಂತೆಯೇ ಎಷ್ಟೋವರ್ಷಗಳು ಕಳೆದುಹೋಗುವುವು. ಅದರಿಂದೇನುಪ್ರಯೋಜನ ? " ಅನ್ಯಾಯವಾಗಿ ಆಯುಸ್ಸುಕಳೆದುದಲ್ಲಾ ? " ಎಂದು ತಿಳಿದು ಯಾವಕಾಲದಲ್ಲಿ ಪುರುಷನು ತನ್ನ ಶ್ರೇಯಸ್ಸಿಗಾಗಿ ಪ್ರಯತ್ನಿಸುವನೋ, ತಾನು ಕಡೆಹಾಯುವುದಕ್ಕೆ ಅಂತಹ ಒಂದು ಮುಹೂರ್ತವು ಸಾಲದೆ ? ॥ ೧೨ ॥ ಈ ವಿಷಯದಲ್ಲಿ ನಿನಗೊಂದು ದೃಷ್ಟಾಂತವನ್ನು ಹೇಳುವೆನು ಕೇಳು, ಪೂರ್ವದಲ್ಲಿ ಖಟ್ವಾಂಗನೆಂಬ ರಾಜನು ದೇವತೆಗಳಕಡೆ ನಿಂತು ಯುದ್ಧಮಾಡಿ ರಾಕ್ಷಸರನ್ನು ಗೆಲ್ಲಲು, ಅವರು ಸಂತೋಷಪಟ್ಟು "ನಿನಗಾವವರವು ಬೇಕೋ ಕೇಳು" ಎಂದು ಬೆಸಗೊಂಡರು. ಆತನು "ಮೊದಲು ಆಯುಃಪ್ರಮಾಣವನ್ನು ತಿಳಿಸಿರಿ" ಎಂದು ಕೇಳಿದನು. ಆಗ ದೇವತೆಗಳು "ನಿನಗೆ ಒಂದುಮುಹೂರ್ತಮಾತ್ರ ಆಯುಸ್ಸು ಉಳಿದಿರುವುದು" ಎಂದು ಹೇಳಿದರು. ಖಟ್ವಾಂಗನು ಆಮಾತನ್ನು ಕೇಳಿದಕೂಡಲೆ ವಿಮಾನವನ್ನೇರಿ ತಟ್ಟನೆ ಭೂಲೋಕಕ್ಕೆಬಂದು ಭಗವದ್ಧ್ಯಾನಪರಾಯಣನಾಗಿ ಮುಹೂರ್ತಮಾತ್ರದಲ್ಲಿ ವಿಷ್ಣುಸಾಯುಜ್ಯವನ್ನು ಪಡೆದನು ॥ ೧೩ ॥

† ವಿಃ ಮುಹೂರ್ತ-ಎರಡುಗಳಿಗೆ ಹೊತ್ತು

ಸಪ್ತಾಹಂ ಜೀವಿತಾವಧಿಃ। ಉಪಕಲ್ಪಯ ತತ್ಸರ್ವಂ ತಾವ ದ್ಯತ್ಸಾಂಪರಾಯಿಕಂ ॥ ೧೪ ॥ ಅಂತಕಾಲೇತು ಪುರುಷ ಆಗತೇ ಗತಸಾಧ್ವಸಃ । ಛಿಂದ್ಯಾ ದಸಂಗಶಸ್ತ್ರೇಣ ಸ್ಪೃಹಾಂ ದೇಹೇಽನು ಯೇಚ ತಂ ॥ ೧೫ ॥ ಗೃಹಾತ್ಪ್ರವ್ರಜಿತೋ ಧೀರಃ ಪುಣ್ಯತೀರ್ಥಜಲಾಪ್ಲುತಃ । ಶುಚೌ ವಿವಿಕ್ತ ಆಸೀ

ಹೇ ಕೌರವ್ಯ-ಎಲೈ ಕುರುವಂಶಜನೆ ! ಏತರ್ಹಿ-ಈಗಲೂ, ತವ-ನಿನಗೆ, ಸಪ್ತಾಹಂ-ಏಳುದಿನಗಳು, ಜೀವಿತಾವಧಿಃ-ಜೀವಿಸಿರುವುದಕ್ಕೆ ಅವಧಿಯುಂಟು, ತಾವತ್-ಅಷ್ಟರೊಳಗೆ, ಯತ್-ಯಾವುದು, ಸಾಂಪರಾಯಿಕಂ - ಪರಲೋಕಸಾಧನವಿರುವುದೋ, ತತ್ಸರ್ವಂ-ಅದೆಲ್ಲವನ್ನೂ, ಉಪಕಲ್ಪಯ-ಸರಿಪಡಿಸಿಕೊ ॥೧೪॥ ಪುರುಷಃ-ಪುರುಷನು, ಅಂತಕಾಲೇ-ಮರಣಕಾಲವು, ಆಗತೇ-ಬಂದಾಗ, ಗತಸಾಧ್ವಸಃ-ಮೃತ್ಯುವಿಗೆ ಹೆದರದೆ, ಅಸಂಗಶಸ್ತ್ರೇಣ, ಅಸಂಗ-ವೈರಾಗ್ಯವೆಂಬ, ಶಸ್ತ್ರೇಣ-ಕತ್ತಿಯಿಂದ, ದೇಹೇ-ಶರೀರದಲ್ಲಿಯೂ, ತಂ-ಆ ಶರೀರವನ್ನು, ಅನು - ಅನುಸರಿಸಿರುವ, ಯೇಚ-ಯಾವ ಪತ್ನೀಪುತ್ರಾದಿಗಳುಂಟೋ ಅವರಲ್ಲಿಯೂ, ಸ್ಪೃಹಾಂ - ಅಭಿಮಾನವನ್ನು, ಛಿಂದ್ಯಾತ್-ಕತ್ತರಿಸಬೇಕು, ॥೧೫॥ ಗೃಹಾತ್-ಮನೆಯಿಂದ, ಪ್ರವ್ರಜಿತಃ-ಹೊರಟು, ಧೀರಃ-ಬ್ರಹ್ಮಚರ್ಯಾದಿಗಳಿಂದ ಧೀರನಾಗಿ, ಪುಣ್ಯ...ತಃ, ಪುಣ್ಯ-ಪವಿತ್ರವಾದ, ತೀರ್ಥಜಲ-ಗಂಗಾದಿ ನದೀಜಲದಲ್ಲಿ, ಆಪ್ಲುತಃ- ಸ್ನಾನಮಾಡಿ, ಶುಚೌ-ಪರಿಶುದ್ಧವಾದ, ವಿವಿಕ್ತೇ-ಏಕಾಂತಸ್ಥಲದಲ್ಲಿ, ವಿಧಿವತ್-ಯಥಾಶಾಸ್ತ್ರವಾಗಿ, ಕಲ್ಪಿತಾಸನೇ-ಸಿದ್ಧಮಾಡಿಕೊಂಡ ಆಸನದಲ್ಲಿ, ಆಸೀನಃ-ಕುಳಿತು

ನಿನಗಾದರೋ ಇನ್ನೂ ಏಳುದಿನಗಳವರೆಗೂ ಆಯುಸ್ಸಿರುವುದು. ಅಷ್ಟರೊಳಗೆ ನೀನು ಬೇಕಾದಷ್ಟು ಪರಲೋಕಸಾಧನಗಳನ್ನು ಸಂಪಾದಿಸಿಕೊಳ್ಳಬಹುದು ॥ ೧೪ ॥ ಅವುಗಳಲ್ಲಿಯೂ ಮುಖ್ಯವಾದುದನ್ನು ಹೇಳುವೆನು ಕೇಳು. ಪುರುಷನಾದವನು ತನಗೆ ಮರಣಕಾಲವು ಸಮೀಪಿಸಿದೊಡನೆಯೇ, ಮೃತ್ಯುಭಯವನ್ನು ತೊರೆದು ಧೈರ್ಯದಿಂದ ವೈರಾಗ್ಯವೆಂಬ ಹರಿತವಾದ ಕತ್ತಿಯನ್ನು ಹಿಡಿದು, ತನ್ನ ದೇಹದಲ್ಲಿಯೂ, ಆ ದೇಹಾನುಬಂಧಿಗಳಾದ ಹೆಂಡಿರು,ಮಕ್ಕಳು ಮೊದಲಾದವರಲ್ಲಿಯೂ, ಇರುವ ಅಭಿಮಾನವೆಂಬ ಪಾಶವನ್ನು ಕತ್ತರಿಸಿ ಬಿಸುಡಬೇಕು ॥೧೫॥ ಮರಳಿ ಆಪಾಶಕ್ಕೆ ಸಿಕ್ಕದಂತೆ ತತ್‌ಕ್ಷಣದಲ್ಲಿಯೇ ಗೃಹಾರಾಮಾದಿ ಸರ್ವಸ್ವವನ್ನೂ ಬಿಟ್ಟು ಹೊರಟು ಹೋಗಬೇಕು. ಇದಕ್ಕೆ ಸನ್ಯಾಸವೆಂದು ಹೆಸರು. ಬಳಿಕ ಭೂತದ್ರೋಹವನ್ನು ಮಾಡದೆ, ತಟವಟವನ್ನು ಹೇಳದೆ, ಕದಿಯದೆ, ಸ್ತ್ರೀಯರನ್ನು ರಮಿಸದೆ, ಪರಿಗ್ರಹಪರಾಙ್ಮುಖನಾಗಿರಬೇಕು. ಇದನ್ನೇ ಯಮ (೧) ವೆಂದು ಕರೆಯುವರು. ಅಲ್ಲದೆ ಗಂಗಾದಿ ಪುಣ್ಯತೀರ್ಥಗಳಲ್ಲಿ ಸ್ನಾನವನ್ನು ಮಾಡುತ್ತಾ, ಸಂತೋಷದಿಂದ ತಪಸ್ಸು, ವೇದಾಧ್ಯಯನ, ಭಗವದಾರಾಧನ, ಇವುಗಳನ್ನಾಚರಿಸಬೇಕು (೨) ಇದೇ ನಿಯಮವು. ಬಳಿಕ ಪರಿಶುದ್ಧವಾದ ಏಕಾಂತಸ್ಥಲದಲ್ಲಿ ಕುಶ, ಅಜಿನ, ಚೇಲಗಳಿಂದ ಕಲ್ಪಿತವಾದ ಆಸನದಲ್ಲಿಸ್ಥಿರವಾಗಿ ಕುಳಿತುಕೊಳ್ಳಬೇಕು (೩) ಇದೇ ಆಸನವೆಂಬ

(೧) ಅಹಿಂಸಾಸ್ತೇಯ ಬ್ರಹ್ಮಚರ್ಯಾಪರಿಗ್ರಹಾ "ಯಮಾಃ" (೨) ಶೌಚಸಂತೋಷ ತಪಸ್ಸ್ವಾಧ್ಯಾಯೇಶ್ವರ ಪ್ರಣಿಧಾನಾನಿ "ನಿಯಮಾಃ" (೩) ಸ್ಥಿರಸುಖ "ಮಾಸನಂ"

ನೋ ವಿಧಿವ ತ್ಕಲ್ಪಿತಾಸನೇ ॥ ೧೬ ॥ ಅಭ್ಯಸೇ ನ್ಮನಸಾ ಶುದ್ಧಂ ತ್ರಿವೃ
ತ್ ಬ್ರಹ್ಮಾಕ್ಷರಂ ಪರಂ। ಮನೋ ಯಚ್ಛೇ ಜ್ಜಿತಶ್ವಾಸೋ ಬ್ರಹ್ಮಬೀಜ
ಮವಿಸ್ಮರನ್॥ ೧೭ ॥ ನಿಯಚ್ಛೇ ದ್ವಿಷಯೇಭ್ಯೋಽಕ್ಷಾ ನ್ಮನಸಾ ‡ ಬುದ್ಧಿ
ಸಾರಥಿಃ। ಮನಃ ಕರ್ಮಭಿ ರಾಕ್ಷಿಪ್ತಂ†ಶುಭಾರ್ಥೇ ಧಾರಯೇ ದ್ಧಿಯಾ॥೧೮॥

ಕೊಂಡು ॥೧೬॥ ಶುದ್ಧಂ-ಪರಿಶುದ್ಧವಾದ, ತ್ರಿವೃತ್, ತ್ರಿ-"ಅ + ಉ + ಮ್" ಎಂಬ ಮೂರಕ್ಷರಗಳಿಂದ ವೃತ್-ಕೂಡಿರುವ, ಪರಂ-ನಿರತಿಶಯವಾದ, ಬ್ರಹ್ಮಾಕ್ಷರಂ-ಓಂಕಾರವನ್ನು, ಮನಸಾ-ಮನಸ್ಸಿನಿಂದ, ಅಭ್ಯಸೇತ್-ಜಪಿಸಬೇಕು, ಬ್ರಹ್ಮಬೀಜಂ-ಪ್ರಣವವನ್ನು, (ಓಂಕಾರ) ಅವಿಸ್ಮರನ್-ಮರೆಯದೆ, ಜಿತಶ್ವಾಸಃ-ಪ್ರಾಣವಾಯುಗಳನ್ನು ತಡೆದು, ಮನಃ-ಮನಸ್ಸನ್ನು, ಯಚ್ಛೇತ್-ನಿಗ್ರಹಿಸಬೇಕು ॥೧೭॥

ಬುದ್ಧಿಸಾರಥಿಃ, ಬುದ್ಧಿ-ನಿಶ್ಚಯರೂಪವಾದ ಬುದ್ಧಿಯೇ, ಸಾರಥಿಃ-ಸಹಾಯವಾಗುಳ್ಳವನಾಗಿ, ಮನಸಾ-ಮನಸ್ಸಿನಿಂದ, ವಿಷಯೇಭ್ಯಃ-ಶಬ್ದಸ್ಪರ್ಶಾದಿ ವಿಷಯಗಳಿಂದ, ಅಕ್ಷಾನ್-ಚಕ್ಷುರಾದಿ ಇಂದ್ರಿಯಗಳನ್ನು ನಿಯಚ್ಛೇತ್-ನಿಗ್ರಹಿಸಬೇಕು, ಕರ್ಮಭಿಃ-ಕರ್ಮವಾಸನೆಗಳಿಂದ, ಆಕ್ಷಿಪ್ತಂ-ಸೆಳೆಯಲ್ಪಟ್ಟ, ಮನಃ-ಮನಸ್ಸನ್ನು, ಧಿಯಾ-ಬುದ್ಧಿಯಿಂದ, ಶುಭಾರ್ಥೇ-ಭಗವದ್ರೂಪದಲ್ಲಿ, ಧಾರಯೇತ್-ನಿಲ್ಲಿಸಬೇಕು ॥ ೧೮ ॥

ಯೋಗವು. ॥ ೧೬ ॥ ಅಲ್ಲಿ ನಿಶ್ಚಲವಾಗಿ ಕುಳಿತುಕೊಂಡು, ಉಚ್ಛ್ವಾಸ ನಿಶ್ವಾಸಗಳನ್ನು ನಿರೋಧಿಸಿ ಅಕಾರಾದಿ ಅಕ್ಷರತ್ರಯದಿಂದಕೂಡಿ, ನಿರತಿಶಯ ವೆನಿಸಿರುವ ಓಂಕಾರವನ್ನು ಮನಸ್ಸಿನಲ್ಲಿಯೇ ಜಪಿಸಬೇಕು. (೪) ಇದನ್ನು ಪ್ರಾಣಾಯಾಮವೆನ್ನುವರು. ಇಂತು ಶ್ವಾಸಧಾರಣೆಯು ಸಿದ್ಧಿಸಲು ಪ್ರಣವ ಜಪವನ್ನು ಮರೆಯದೆ, ಮನಸ್ಸನ್ನು ಅಲೆದಾಡದಂತೆ ನೆಲೆಗೆ ನಿಲ್ಲಿಸಿಕೊಳ್ಳಬೇಕು. ॥ ೧೭ ॥

ಅನಂತರದಲ್ಲಿ ಜೀವನೆಂಬ ರಥಿಕನು ಬುದ್ಧಿಯೆಂಬ ಸಾರಥಿಯ, ಸಹಾಯವನ್ನು ಪಡೆದು, ಶರೀರವೆಂಬ ರಥಕ್ಕೆ ಹೂಡಿರುವ ಜ್ಞಾನಕರ್ಮೇಂದ್ರಿಯಗಳೆಂಬ ತುಂಟಕುದುರೆಗಳನ್ನು ಶಬ್ದಾದಿ ವಿಷಯಗಳೆಂಬ ಹಳ್ಳತಿಟ್ಟುಗಳಲ್ಲಿ ಸ್ವೇಚ್ಛೆಯಾಗಿ ಓಡದಂತೆ ಹಿಡಿದು ನಿಲ್ಲಿಸಬೇಕು. (೫) ಇದು ಪ್ರತ್ಯಾಹಾರವೆನ್ನಲ್ಪಡುವುದು. ಆಮೇಲೆ ಮನಸ್ಸನ್ನು ಕರ್ಮವಾಸನೆಗಳಿಲ್ಲದಂತೆ ಮಾಡಿ, ಪರಮ ಮಂಗಳವಾದ ಮೋಕ್ಷವನ್ನು ಕೊಡುವ ಭಗವಂತನ ರೂಪದಲ್ಲಿ ನೆಲೆಗೊಳಿಸಬೇಕು. (೬) ಇದೇ ಧಾರಣೆಯು ॥ ೧೮ ॥ ಅನಂತರದಲ್ಲಿ ಸಮಗ್ರರೂಪಧ್ಯಾನವನ್ನು ಬಿಡದಂತೆ ಪಾದ ಮೊದಲಾದ ಒಂದೊಂದೇ ಅವಯವವನ್ನು ಏಕಾಗ್ರವಾಗಿ ಧ್ಯಾನಿಸಬೇಕು. (೭) ಇದೇ ಧ್ಯಾನವೆಂಬ ಯೋಗಾಂಗವು. ಇಂತು ಧ್ಯಾನಬಲ

‡ ಶ್ರು-ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವತು । ಬುದ್ಧಿಂತುಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವಚ । ಇಂದ್ರಿಯಾಣಿ ಹಯಾನಾಹು ರ್ವಿಷಯಾಂ ಸ್ತೇಷುಗೋಚರಾನ್ ।

† ವೀ. ಪಾ. ಶುಭಾರ್ಥೀ

(೪) ಶ್ವಾಸಪ್ರಶ್ವಾಸಯೋರ್ಗತಿವಿಚ್ಛೇದಃ "ಪ್ರಾಣಾಯಾಮಃ" (೫) ಸ್ವವಿಷಯಾಸಂಪ್ರಯೋಗೇ ಚಿತ್ತಸ್ವರೂಪಾನುಕಾರ ಇಂದ್ರಿಯಾಣಾಂ "ಪ್ರತ್ಯಾಹಾರಃ" (೬) ದೇಶಬಂಧಶ್ಚಿತ್ತಸ್ಯ "ಧಾರಣಾ" (೭) ಪ್ರತ್ಯಯೈಕತಾನತಾ "ಧ್ಯಾನಂ"

ತತ್ರೈಕಾವಯವಂ ಧ್ಯಾಯೇದವ್ಯುಚ್ಛಿನ್ನೇನ ಚೇತಸಾ । ಮನೋ ನಿರ್ವಿಷಯಂ ಯುಕ್ತ್ವಾ ತತಃ ಕಿಂಚನ ನಸ್ಮರೇತ್ ॥ ೧೯ ॥ ಪದಂ ತತ್ ಪರಮಂ ವಿಷ್ಣೋರ್ಮನೋ ಯತ್ರ ಪ್ರಸೀದತಿ । ರಜಸ್ತಮೋಭ್ಯಾಮಾಕ್ಷಿಪ್ತಂ ವಿಮೂಢಂ ಮನ ಆತ್ಮನಃ ॥ ೨೦ ॥ ಯಚ್ಛೇದ್ಧಾರಣಯಾ ಧೀರೋ ಹಂತಿ ಯಾ ತತ್ಕೃತಂ ಮಲಂ । ಯಸ್ಯಾಂ ಸಂಧಾರ್ಯಮಾಣಾಯಾಂ ಯೋಗಿನೋ ಭಕ್ತಿಲಕ್ಷಣಃ । ಆಶು ಸಂಪದ್ಯತೇ ಯೋಗ ಆಶ್ರಯಂ ಭದ್ರ ಮೀಕ್ಷತಃ ॥ ೨೧ ॥ ರಾಜೋವಾಚ। ಯಥಾ ಸಂಧಾರ್ಯತೇ ಬ್ರಹ್ಮನ್!

ತತ್ರ-ಆ ಭಗವದ್ರೂಪದಲ್ಲಿ, ಅವ್ಯುಚ್ಛಿನ್ನೇನ-ಸಮಗ್ರರೂಪಧ್ಯಾನವನ್ನು ಬಿಡದಿರುವ, ಚೇತಸಾ-ಮನಸ್ಸಿನಿಂದ, ಏಕಾವಯವಂ-ಒಂದೊಂದಂಗವನ್ನು, ಧ್ಯಾಯೇತ್-ಧ್ಯಾನಿಸಬೇಕು. ನಿರ್ವಿಷಯಂ-ವಿಷಯಗಳನ್ನಳಿದ, ಮನಃ-ಮನಸ್ಸನ್ನು, ಯುಕ್ತ್ವಾ-ಸ್ಥಿರಗೊಳಿಸಿ, ತತಃ-ಆ ಮೇಲೆ, ಕಿಂಚನ-ಏನನ್ನೂ, ನಸ್ಮರೇತ್-ಸ್ಮರಿಸಬಾರದು ॥ ೧೯ ॥ ಯತ್ರ-ಎಲ್ಲಿ, ಮನಃ-ಮನಸ್ಸು, ಪ್ರಸೀದತಿ-ಪ್ರಸನ್ನವಾಗುವುದೋ; ತತ್-ಅದು, ಪರಮಂ-ಸರ್ವೋತ್ತಮವಾದ, ವಿಷ್ಣೋಃ-ವಿಷ್ಣುವಿನ, ಪದಂ-ಸ್ಥಾನವು, ಯಾ-ಯಾವುದು, ತತ್ಕೃತಂ-ಆ ರಜಸ್ತಮಸ್ಸುಗಳಿಂದುಂಟಾದ, ಮಲಂ - ಕಾಮಕ್ರೋಧಾದಿಕಶ್ಮಲವನ್ನು, ಹರತಿ-ಹೋಗಲಾಡಿಸುವುದೋ, ಯಸ್ಯಾಂ-ಯಾವಧಾರಣೆಯು, ಸಂಧಾರ್ಯಮಾಣಾಯಾಂ-ಮಾಡಲ್ಪಟ್ಟಲ್ಲಿ, ಭದ್ರಂ-ಸುಖಾತ್ಮಕವಾದ, ಆಶ್ರಯಂ-ಆಧಾರವನ್ನು, ಈಕ್ಷತಃ-ನೋಡುವ, ಯೋಗಿನಃ-ಯೋಗಿಗೆ, ಭಕ್ತಿಲಕ್ಷಣಃ-ಭಕ್ತಿಸ್ವರೂಪವಾದ, ಯೋಗಃ-ಯೋಗವು, ಆಶು-ಬೇಗನೆ, ಸಂಪದ್ಯತೇ-ಉಂಟಾಗುವುದೋ, ಧಾರಣಯಾ-ಅಂತಹಧಾರಣೆಯಿಂದ, ಧೀರಃ-ಧೀರನಾದವನು ರಜಸ್ತಮೋಭ್ಯಾಂ-ರಜಸ್ಸು ಮತ್ತು ತಮಸ್ಸು ಇವುಗಳಿಂದ, ಆಕ್ಷಿಪ್ತಂ-ಕಲಕಲ್ಪಡುವ, ವಿಮೂಢಂ-ಸ್ತಬ್ಧವಾಗುವ, ಆತ್ಮನಃ-ತನ್ನ, ಮನಃ-ಮನಸ್ಸನ್ನು, ಯಚ್ಛೇತ್-ತಡೆಯಬೇಕು, ॥ ೨೦-೨೧ ॥

ದಿಂದ ನಿರ್ವಿಷಯವಾಗಿ ಧ್ಯೇಯವಸ್ತುವಿನಲ್ಲಿ ಸೇರಿಸಿ ಸಮಾಧಾನಪಡೆದು, ಪರಮಾನಂದಸ್ವರೂಪವನ್ನು ಪಡೆಯಲು, ಬಳಿಕ ಏನನ್ನೂ ಸ್ಮರಿಸಕೂಡದು. (೪) ಇದೇ ಸಮಾಧಿ ಎನಿಸುವುದು ॥ ೧೯ ॥ ಇಂತು ಅಷ್ಟಾಂಗಸಿದ್ಧಿಯಿಂದ ಮನಸ್ಸೆಲ್ಲಿ ಪ್ರಸನ್ನವಾಗುವುದೋ, ಅದೇ ನಿರತಿಶಯವಾದ ವಿಷ್ಣುಪದವೆಂದರಿಯಬೇಕು. ಇಷ್ಟಾದರೂ ಮರಳಿಮರಳಿ ಗುಣಕ್ಷೋಭೆಯಿಂದ ಮನಸ್ಸು ಚಂಚಲವಾದಹಾಗೆಲ್ಲಾ, ಪದೇಪದೇ ಆಮನಸ್ಸನ್ನು ಬಿಗಿಹಿಡಿದು ರಜೋಗುಣದಿಂದ ಓಡದಂತೆಯೂ, ತಮಸ್ಸಿನಿಂದ ಮೊಂಕಾಗದಂತೆಯೂ ಎಚ್ಚರಗೊಳಿಸಿ, ರಜಸ್ತಮೋದೋಷಗಳಿಗೊಳಗಾಗದಂತೆ ಭಗವದ್ರೂಪದಲ್ಲಿ ನೆಲೆಗೊಳಿಸುತ್ತಿರಬೇಕು. ಈ ರೀತಿಯಾಗಿ ಧಾರಣೆಯನ್ನು ದೃಢಪಡಿಸಿಕೊಂಡು ಪರಮಮಂಗಳಕರವಾದ ಪರಮಾತ್ಮಸ್ವರೂಪವನ್ನು ಕಾಣುವ ಯೋಗಿಗೆ ಭಕ್ತಿಯೋಗವೆಂಬುದು ಬೇಗನೆ ಕೈಸೇರುವುದು, ಎಂದು ಶುಕಮುನಿಯು ಹೇಳಲು ಪರೀಕ್ಷಿತನು ಬೆಸಗೊಳ್ಳುತ್ತಾನೆ ॥ ೨೧ ॥ ಅಯ್ಯಾ ಬ್ರಹ್ಮಜ್ಞನಾದ ಶುಕಮುನಿಯೆ! ನೀನು ಹೇಳಿದ ಧಾರಣೆಯನ್ನು ಬೆಳೆಯಿಸುವುದೆಂತು?

(೪) ತದೇವಾರ್ಥಮಾತ್ರನಿರ್ಭಾಸಂ ಸ್ವರೂಪಶೂನ್ಯಮಿವ "ಸಮಾಧಿಃ" (ಯೋಗಶಾಸ್ತ್ರ)

ಧಾರಣಾ ಯತ್ರ ಸಮ್ಮತಾ। ಯಾದೃಶೀ ವಾ ಹರೇ ದಾಶು ಪುರುಷಸ್ಯ ಮನೋ ಮಲಂ ॥ ೨೨ ॥ ಶ್ರೀಶುಕಃ ॥ ಜಿತಾಸನೋ ಜಿತಶ್ವಾಸೋ ಜಿತಸಂಗೋ ಜಿತೇಂದ್ರಿಯಃ । ಸ್ಥೂಲೇ ಭಗವತೋ ರೂಪೇ ಮನ ಸ್ಸಂಧಾರಯೇ ದ್ಧಿಯಾ ॥ ೨೩ ॥ ವಿಶೇಷ ಸ್ತಸ್ಯ ದೇಹೋಯಂ ಸ್ಥವಿಷ್ಠಶ್ಚ ಸ್ಥವೀಯಸಾಂ। ಯತ್ರೇದಂ ದೃಶ್ಯತೇ ವಿಶ್ವಂ ಭೂತಂ ಭವ್ಯಂ ಭವಚ್ಚ ಯತ್ ॥ ೨೪ ॥ ಅಂಡಕೋಶೇ ಶರೀರೇಽಸ್ಮಿನ್ ಸಪ್ತಾವರಣಸಂಯುತೇ । ವೈರಾಜಃ ಪುರುಷೋ ಯೋಸೌ ಭಗವಾನ್ ಧಾರಣಾಶ್ರಯಃ ॥ ೨೫ ॥ ಪಾತಾಳ ಮೇತಸ್ಯಹಿ ಪಾದಮೂಲಂ ಪಠಂತಿ ಪಾರ್ಷ್ಣಿಪ್ರಪದೇ ರಸಾತಲಂ । ಮಹಾತಲಂ

ರಾಜಾ-ಪರೀಕ್ಷಿತನು, ಉವಾಚ-ಹೇಳಿದನು, ಹೇ ಬ್ರಹ್ಮನ್-ಎಲೈ ಬ್ರಾಹ್ಮಣೋತ್ತಮನೆ ? ಧಾರಣಾ-ಧಾರಣೆಯೆಂಬುದು, ಯಥಾ-ಹೇಗೆ, ಸಂವರ್ಧ್ಯತೇ - ವೃದ್ಧಿಗೊಳಿಸಲ್ಪಡುತ್ತದೆ ? ಯತ್ರ-ಎಲ್ಲಿ, ಸಮ್ಮತಾ-ಇಷ್ಟವಾಗುತ್ತದೆ ? ಯಾದೃಶೀ-ಎಂಥಾದ್ದಾಗಿ, ಪುರುಷಸ್ಯ-ಪುರುಷನ, ಮನೋಮಲಂ-ಮನಸ್ಸಿನ ದೋಷವನ್ನು, ಆಶು-ಬೇಗನೆ, ಹರೇತ್-ಕಳೆಯುವುದು ॥ ೨೨ ॥

ಶ್ರೀಶುಕಃ-ಶುಕನು ಹೇಳುತ್ತಾನೆ, ಜಿತಾಸನಃ-ಆಸನಸಿದ್ಧಿಯನ್ನು ಪಡೆದು, ಜಿತಶ್ವಾಸಃ-ಪ್ರಾಣವಾಯುಗಳನ್ನು ನಿಗ್ರಹಿಸಿ, ಜಿತಸಂಗಃ-ಸಂಗವನ್ನು ಬಿಟ್ಟು, ಜಿತೇಂದ್ರಿಯಃ-ಇಂದ್ರಿಯಗಳನ್ನುಗೆದ್ದು, ಭಗವತಃ-ಭಗವಂತನ, ಸ್ಥೂಲೇ-ಸ್ಥೂಲವಾದ, ರೂಪೇ-ರೂಪದಲ್ಲಿ, ಧಿಯಾ-ಬುದ್ಧಿಯಿಂದ, ಮನಃ-ಮನಸ್ಸನ್ನು, ಧಾರಯೇತ್-ಇಡಬೇಕು ॥ ೨೩ ॥ ಯತ್ರ-ಎಲ್ಲಿ, ;. ಭೂತಂ-ಕಳೆದುಹೋದ, ಭವ್ಯಂ-ಮುಂದಾಗುವ, ಭವತ್-ಈಗಾಗುತ್ತಿರುವ, ವಿಶ್ವಂ-ಸಮಸ್ತವಾದ, ಇದಂ-ಈ ಜಗತ್ತು, ದೃಶ್ಯತೇ-ಕಾಣಲ್ಪಡುವುದೋ, ಸ್ಥವೀಯಸಾಂ-ಅತಿಸ್ಥೂಲವಸ್ತುಗಳಲ್ಲಿ, ಸ್ಥವಿಷ್ಠಃ-ಅತ್ಯಂತಸ್ಥೂಲವಾದ, ಅಯಂ-ಈ ಪ್ರಪಂಚವು, ತಸ್ಯ-ಆ ಪರಮಾತ್ಮನಿಗೆ, ವಿಶೇಷಃ-ಕರಚರಣಾದ್ಯಾತ್ಮಕವಾದ, ದೇಹಃ-ಶರೀರವಾಗಿರುವುದು ॥ ೨೪ ॥ ಸಪ್ತಾ... ತೇ, ಸಪ್ತ-ಏಳಾದ, ಆವರಣ-ಮುಚ್ಚಳಗಳಿಂದ, ಸಂಯುತೇ-ಕೂಡಿರುವ, ಅಂಡಕೋಶೇ-ಬ್ರಹ್ಮಾಂಡರೂಪವಾದ, ಅಸ್ಮಿನ್- ಈ, ಶರೀರೇ-ವಿರಾಡ್ದೇಹದಲ್ಲಿ, ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ, ಯೋಸೌ-ಯಾವ, ವೈರಾಜಃ-ವೈರಾಜನೆಂದು ಹೆಸರುಳ್ಳ, ಪುರುಷಃ-ಪುರುಷನಿರುವನೋ, ಸಃ-ಅವನು, ಧಾರಣಾಶ್ರಯಃ-ಧಾರಣೆಗೆ ವಿಷಯನು ॥ ೨೫ ॥ ಏತಸ್ಯ-ಇವನಿಗೆ, ಪಾತಾಳಂ-ಪಾತಾಳಲೋಕವನ್ನು, ಪಾದಮೂಲಂ - ಅಂಗಾ

ಎಂತುಮಾಡಿದಲ್ಲಿ ಪುರುಷನ ಮನೋದೋಷಗಳನ್ನು ಕಳೆಯುವುದು ? ಅದನ್ನು ಮಾಡುವುದೆಲ್ಲಿ ? ಅದರ ಕ್ರಮವೆಂತು ? ಎಂದು ಬೆಸಗೊಳಲು ಶುಕಮುನಿಯು ಹೇಳುತ್ತಾನೆ ॥ ೨೨ ॥

ಎಲೈ ರಾಜೇಂದ್ರನೆ ! ಕೇಳು, ಸ್ಥಿರವಾಗಿ ಆಸನದಲ್ಲಿ ಕುಳಿತು, ಶ್ವಾಸಧಾರಣೆಯನ್ನುಮಾಡಿ, ಸಂಗವನ್ನುಳಿದು ಇಂದ್ರಿಯಗಳನ್ನುಗೆದ್ದು, ಸ್ಥಾವರಜಂಗಮಾತ್ಮಕವಾದ ಜಗತ್ತೆಲ್ಲವು ಎಲ್ಲಿ ಅಡಗಿರುವುದೋ ಆತಹ, ಸ್ಥೂಲಪದಾರ್ಥಗಳಲ್ಲಿ ಅತ್ಯಂತ ಸ್ಥೂಲವೆನಿಸಿರುವ ಭಗವಂತನ ವಿರಾಡ್ದೇಹದಲ್ಲಿ ಮನಸ್ಸನ್ನು ನಿಲ್ಲಿಸಬೇಕು ॥ ೨೩ ॥ ೨೪ ॥ ಬ್ರಹ್ಮಾಂಡಕೋಶದಲ್ಲಿರುವ ಆ ವಿರಾಟ್ಛರೀರಕ್ಕೆ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಅಹಂಕಾರ ಮಹತ್ತುಗಳೆಂಬ ಏಳಾವರಣಗಳಿರುವುವು. ಇಂತಹ ಶರೀರದಲ್ಲಿ ಅಡಗಿರುವ ಸಿತ್ಯೈಶ್ವರ್ಯ ಸಂಪನ್ನನಾದ ವೈರಾಜನೆಂಬ ಯಾವಪುರುಷನುಂಟೋ, ಆತನೇ ಈ ಧ್ಯಾನಕ್ಕೆ ವಿಷಯ

ವಿಶ್ವಸೃಜೋಽಥ ಗುಲ್ಫೌ ತಲಾತಲಂ ವೈ ಪುರುಷಸ್ಯ ಜಂಘೇ ॥ ೨೬ ॥
ದ್ವೇಜಾನುನೀ ಸುತಲಂ ವಿಶ್ವಮೂರ್ತೇ ರೂರುದ್ವಯಂ ವಿತಲಂ ಚಾತಲಂ
ಚ । ಮಹೀತಲಂ ತಜ್ಜಘನಂ ಮಹೀಪತೇ ! ನಭಸ್ಥಲಂ ನಾಭಿಸರೋ ಗೃ
ಣಂತಿ ॥ ೨೭ ॥ ಉರಸ್ಥಲಂ ಜ್ಯೋತಿರನೀಕ ಮಸ್ಯ ಗ್ರೀವಾ ಮಹ ದ್ವದ
ನಂ ವೈ ಜನೋಽಸ್ಯ।ತಪೋ ಲಲಾಟಂ ವಿದು ರಾದಿಪುಂಸ ಸ್ಸತ್ಯಂತು ಶೀರ್ಷಾ
ಣಿ ಸಹಸ್ರಶೀರ್ಷ್ಣಃ ॥ ೨೮ ॥ ಇಂದ್ರಾದಯೋ ಬಾಹವ ಆಹು ರುಸ್ರಾಃ
ಕರ್ಣೌ ದಿಶ ಶ್ರೋತ್ರ ಮಮುಷ್ಯಶಬ್ದಃ।ನಾಸತ್ಯದಸ್ರೌ ಪರಮಸ್ಯ ನಾಸೇ

ಲನ್ನಾಗಿಯೂ, ರಸಾತಲಂ-ರಸಾತಲವನ್ನು, ಪಾರ್ಷ್ಣಿಪ್ರಪದೇ-ಹಿಮ್ಮಡಿಮುಂಗಾಲುಗಳನ್ನಾಗಿಯೂ, ಅಥ, ಬಳಿಕ, ವಿಶ್ವಸೃಜಃ-ವಿರಾಟ್ಪುರುಷನಿಗೆ, ಮಹಾತಲಂ-ಮಹಾತಲವನ್ನು, ಗುಲ್ಫೌ-ಹರಡುಗಳನ್ನಾಗಿಯೂ, ಪುರುಷಸ್ಯ-ಆ ಪುರುಷನಿಗೆ, ತಲಾತಲಂ-ತಲಾತಲವೆಂಬ ಲೋಕವನ್ನು, ಜಂಘೇ-ಮೊಣಕಾಲುಗಳನ್ನಾಗಿಯೂ, ವಿಶ್ವಮೂರ್ತೇಃ-ವಿರಾಟ್ಪುರುಷನಿಗೆ, ಸುತಲಂ-ಸುತಲಲೋಕವನ್ನು, ದ್ವೇಜಾನನೀ-ಮೊಣಕಾಲಗಂಟುಗಳನ್ನಾಗಿಯೂ, ವಿತಲಂಚ-ವಿತಲವನ್ನೂ, ಅತಲಂಚ-ಅತಲಲೋಕವನ್ನೂ, ಊರುದ್ವಯಂ-ಎರಡು ತೊಡೆಗಳನ್ನಾಗಿಯೂ, ಮಹೀಪತೇ-ಎಲೈ ರಾಜನೆ ! ಮಹೀತಲಂ-ಭೂಲೋಕವನ್ನು ತಜ್ಜಘನಂ-ಆತನ ಕಟಿಪುರೋಭಾಗವನ್ನಾಗಿಯೂ, ನಭಸ್ಥಲಂ-ಭುವರ್ಲೋಕವನ್ನು, ನಾಭಿಸರಃ-ಹೊಕ್ಕಳನ್ನಾಗಿಯೂ, ಗೃಣಂತಿ-ಹೊಗಳುವರು ॥ ೨೭ ॥ ಅಸ್ಯ-ಇವನಿಗೆ, ಜ್ಯೋತಿರನೀಕಂ-ಜ್ಯೋತಿಸ್ಸ್ವರೂಪವಾದ ಸ್ವರ್ಗವನ್ನು, ಉರಸ್ಥಲಂ-ಎದೆಯನ್ನಾಗಿಯೂ, ಮಹತ್-ಮಹರ್ಲೋಕವನ್ನು, ಗ್ರೀವಾ-ಕೊರಳನ್ನಾಗಿಯೂ, ಜನಃ-ಜನೋಲೋಕವನ್ನು, ವದನಂ-ಮುಖವನ್ನಾಗಿಯೂ, ಅಸ್ಯ-ಈ, ಆದಿಪುಂಸಃ-ಪುರಾಣಪುರುಷನಿಗೆ, ತಪಃ-ತಪೋಲೋಕವನ್ನು, ಲಲಾಟಂ-ಹಣೆಯನ್ನಾಗಿಯೂ, ವಿದುಃ-ತಿಳಿಯುವರ್ು ಸಹಸ್ರಶೀರ್ಷ್ಣಃ-ಸಾವಿರಾರು ತಲೆಗಳುಳ್ಳ ಇವನಿಗೆ, ಸತ್ಯಂತು-ಸತ್ಯಲೋಕವನ್ನಾದರೇ, ಶೀರ್ಷಾಣಿ-ತಲೆಗಳನ್ನಾಗಿ, ವಿದುಃ-ತಿಳಿಯುವರು ॥ ೨೮ ॥ ಇಂದ್ರಾದಯಃ-ಇಂದ್ರನೇ ಮೊದಲಾದ, ಉಸ್ರಾಃ-ದೇವತೆಗಳು, ಬಾಹವಃ-ಭುಜಗಳೆಂದು, ಆಹುಃ-ಹೇಳುತ್ತಾರೆ, ದಿಶಃ-ನಮ್ಮ ಕಿವಿಗಳಲ್ಲಿರುವ ದಿಕ್ಕುಗಳೇ, ಕರ್ಣೌ-ಕಿವಿಗಳು, ಶಬ್ದಃ-ಶಬ್ದವು, ಅಮುಷ್ಯ-ಇವನಿಗೆ, ಶ್ರೋತ್ರಂ-ಶ್ರೋತ್ರೇಂದ್ರಿಯವು, ಪರಮಸ್ಯ-ಪರಮಪುರುಷನಿಗೆ, ನಾಸತ್ಯದಸ್ರೌ-ಅಶ್ವಿನೀದೇವತೆಗಳು, ನಾಸೇ-ಮೂಗಿನಹೊಳ್ಳೆಗಳು, ಗಂಧಃ-ಗಂಧವು, ಘ್ರಾಣಃ-

ನು॥೨೫॥ಆದುದರಿಂದ ಆ ವಿರಾಟ್ಶರೀರಕ್ಕೂ ಅದಕ್ಕಭಿಮಾನಿಯಾದ ವಿರಾಟ್ಜೀವನಿಗೂ ಅವನಲ್ಲಿರುವ ವಿರಾಡಂತರ್ಯಾಮಿಗೂ ಭೇದವಿಲ್ಲವೆಂದು ತಿಳಿದು ಉಪಾಸನೆಯನ್ನು ಮಾಡಬೇಕು. ಆ ವಿರಾಟ್ಶರೀರಕ್ಕೆ ಪಾತಾಳವೇ ಅಂಗಾಲುಗಳು, ರಸಾತಲವೇ ಹಿಮ್ಮಡಿಮುಂಗಾಲುಗಳು, ಮಹಾತಲವೇ ಹರಡುಗಳು, ತಲಾತಲವೇ ಮೊಣಕಾಲುಗಳು ॥ ೨೬ ॥ ಸುತಲವೇ ಮೊಣಕಾಲುಗಂಟುಗಳು, ವಿತಲವು, ಅತಲವು ಇವು ತೊಡೆಗಳು, ಭೂತಲವೇ ಜಘನವು, ಭುವರ್ಲೋಕವೇ ಹೊಕ್ಕಳು, ಸ್ವರ್ಗಲೋಕವೇ ಎದೆಯು, ಮಹರ್ಲೋಕವೇ ಕೊರಳು, ಜನೋಲೋಕವೇ ಮುಖವು, ತಪೋಲೋಕವೇ ಹಣೆಯು, ಸತ್ಯಲೋಕವೇ ತಲೆಯು ॥ ೨೮ ॥

ಇಂದ್ರಾದಿ ದೇವತೆಗಳೇ ತೋಳುಗಳು, ನಮ್ಮ ಶ್ರೋತ್ರಾಭಿಮಾನಿ ದೇವತೆಗಳಾದ ದಿಕ್ಕುಗಳೇ ಕಿವಿಗಳು, ಶಬ್ದವೇ ಶ್ರೋತ್ರೇಂದ್ರಿಯವು, ಅಶ್ವಿನೀದೇವತೆಗಳೇ ಮೂಗಿನಹೊ

ಘ್ರಾಣೋಽಸ್ಯ ಗಂಧೋ ಮುಖಮಗ್ನಿರಿದ್ಧಃ ॥೨೯॥ ದ್ಯೌರಕ್ಷಿಣೀ * ಚಕ್ಷುರಭೂತ್ಪತಂಗಃ ಪಕ್ಷ್ಮಾಣಿ ವಿಷ್ಣೋ ರಹನೀ ಉಭೇಽಸ್ಯ । ತದ್ಭ್ರೂವಿಜೃಂಭಃ ಪರಮೇಷ್ಠಿಧಿಷ್ಣ್ಯಮಾಪೋಽಸ್ಯ ತಾಲೂ ರಸ ಏವ ಜಿಹ್ವಾ ॥ ೩೦ ॥ ಛಂದಾಂಸ್ಯನಂತಸ್ಯ ಶಿರೋ ಗೃಣಂತಿ ದಂಷ್ಟ್ರಾ ಯಮಸ್ಸ್ನೇಹಕಳಾ ದ್ವಿಜಾನಿ । ಹಾಸೋ † ಜನೋನ್ಮಾದಕರೀ ಚ ಮಾಯಾ ದುರಂತಸರ್ಗೋ ಯದಪಾಂಗಮೋಕ್ಷಃ ॥೩೧॥ ವ್ರೀಡೋತ್ತರೋಷ್ಠೋಽಧರ ಏವ ಲೋಭೋ ಧರ್ಮಸ್ಸ್ತನೋಽಧರ್ಮಪಥಶ್ಚ ಪೃಷ್ಠಃ । ಕಸ್ತಸ್ಯ

ಘ್ರಾಣೇಂದ್ರಿಯವು, ಇದ್ಧಃ-ಉರಿಸಲ್ಪಟ್ಟ, ಅಗ್ನಿಃ-ಅಗ್ನಿಯು, ಮುಖಂ-ಮುಖವು ॥ ೨೯ ॥

ದ್ಯೌಃ-ಆಕಾಶವು, ಅಕ್ಷಿಣೀ-ಕಣ್ಣುಗಳು, ಪತಂಗಃ-ಸೂರ್ಯನು, ಚಕ್ಷುಃ-ನೇತ್ರೇಂದ್ರಿಯವು, ವಿಷ್ಣೋಃ-ವಿಷ್ಣುವಿಗೆ, ಉಭೇಅಹನೀ- ರಾತ್ರಿಹಗಲುಗಳು, ಪಕ್ಷ್ಮಾಣಿ-ರೆಪ್ಪೆಗಳು, ಪರಮೇಷ್ಠಿಧಿಷ್ಣ್ಯಂ - ಬ್ರಹ್ಮಲೋಕವು, ತದ್ಭ್ರೂವಿಜೃಂಭಃ-ಆತನ ಭ್ರೂವಿಲಾಸವು, ಅಸ್ಯ-ಇವನಿಗೆ, ಆಪಃ-ಜಲವು, ತಾಲೂ-ದವಡೆಗಳು ರಸಏವ-ರಸವೇ, ಜಿಹ್ವಾ, ನಾಲಿಗೆಯು, ॥೩೦॥ ಅನಂತಸ್ಯ-ವೈರಾಜನಿಗೆ, ಛಂದಾಂಸಿ-ವೇದಗಳನ್ನು, ಶಿರಃ ತಲೆಯೆಂದು, ಗೃಣಂತಿ-ಹೇಳುವರು, ಯಮಃ-ಯಮನು, ದಂಷ್ಟ್ರಾ-ಕೋರೆದಾಡೆಯು, ಸ್ನೇಹಕಲಾಃ, ಪತ್ನೀಪುತ್ರಾದಿಗಳಲ್ಲಿರುವ ಸ್ನೇಹಗಳು, ದ್ವಿಜಾನಿ-ಹಲ್ಲುಗಳು, ಹಾಸಃ-ನಗೆಯು, ಜನೋನ್ಮಾದಕರೀ-ಜನರನ್ನು ಮರುಳುಮಾಡುವ, ಮಾಯಾ-ಮಾಯೆಯು, ಯದ...ಕ್ಷಃ, ಯತ್ ಯಾವವೈರಾಜನ, ಅಪಾಂಗ-ಕಡೆಗಣ್ಣೋಟದ, ಮೋಕ್ಷಃ-ಬಿಡುವಿಕೆಯೇ, ದುರಂತಸರ್ಗಃ - ಅಪಾರವಾದಸೃಷ್ಟಿಯೋ, ॥೩೧॥ ವ್ರೀಡಾ-ನಾಚಿಕೆಯೇ, ಉತ್ತರೋಷ್ಠಃ-ಮೇಲಣತುಟಿಯು, ಅಧರಏವ - ಕೆಳತುಟಿಯೇ, ಲೋಭಃ-ದುರಾಸೆಯು, ಸ್ತನಃ-ಸ್ತನಭಾಗವೇ, ಧರ್ಮಃ - ಧರ್ಮಮಾರ್ಗವು, ಪೃಷ್ಠಃ-ಬೆನ್ನು, ಅಧರ್ಮಪಥಃ-ಅಧರ್ಮಮಾರ್ಗವು, ತಸ್ಯ-ಆತನಿಗೆ, ಕಃ-ಚತುರ್ಮುಖನು, ಮೇಢ್ರಂ - ಪುರುಷಚಿಹ್ನವು, ಮಿತ್ರೌ-ಮಿತ್ರಾವರುಣರು, ವೃಷಣೌ-ಬೀಜಗಳು, ಸಮುದ್ರಾಃ-ಸಮುದ್ರಗಳು, ಕುಕ್ಷಿಃ-ಹೊಟ್ಟೆಯು, ಗಿರಯಃ-ಬೆಟ್ಟಗಳೇ,

ಳೆಗಳು, ಗಂಧವೇ ಘ್ರಾಣೇಂದ್ರಿಯವು, ಪ್ರಜ್ವಲಿಸುವ ಅಗ್ನಿಯೇ ಮುಖವು ॥೨೯॥ ಅಂತರಿಕ್ಷವೇ ಕಣ್ಣುಗಳು, ಸೂರ್ಯನೇ ಚಕ್ಷುರಿಂದ್ರಿಯವು, ಹಗಲಿರುಳುಗಳೇ ರೆಪ್ಪೆಗಳು, ಬ್ರಹ್ಮಲೋಕವೇ ಭ್ರೂವಿಲಾಸವು, ಜಲವೇ ದವಡೆಗಳು, ರಸವೇ ರಸನೇಂದ್ರಿಯವು ॥ ೩೦ ॥ ವೇದಗಳೇ ತಲೆಯು, ಮೃತ್ಯುವೇ ಕೋರೆದಾಡೆಯು, ಪತ್ನೀಪುತ್ರಾದಿಗಳಲ್ಲಿರುವ ಸ್ನೇಹಲೇಶಗಳೇ ದಂತಗಳು, ಲೋಕವನ್ನು ಮರುಳುಮಾಡುವ ಮಾಯೆಯೇ ನಗೆಯು, ಕಟಾಕ್ಷವೀಕ್ಷಣವೇ ಅಪಾರವಾದ ಸೃಷ್ಟಿಯು ॥ ೩೧ ॥

ನಾಚಿಕೆಯೇ ಮೇಲಣ ತುಟಿಯು, ಲೋಭವೇ ಕೆಳತುಟಿಯು, ಧರ್ಮಮಾರ್ಗವೇ ಸ್ತನವು, ಅಧರ್ಮಮಾರ್ಗವೇ ಬೆನ್ನು, ಚತುರ್ಮುಖಬ್ರಹ್ಮನೇ ಮೇಢ್ರವು, ಮಿತ್ರಾವರುಣರೆಂಬ ದೇವತೆಗಳೇ ವೃಷಣಗಳು, ಸಮುದ್ರಗಳೇ ಹೊಟ್ಟೆಯು, ಬೆಟ್ಟಗಳೇ ಎಲುಬು

* ಶ್ರು-ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ † ಮಾಯಾಂತು ಪ್ರಕೃತಿಂ ವಿಂದ್ಯಾನ್ಮಾಯಿನಂತು ಮಹೇಶ್ವರಂ ।

ಮೇಢ್ರಂ ವೃಷಣೌಚ ಮಿತ್ರೌ ಕುಕ್ಷಿಸ್ಸಮುದ್ರಾ ಗಿರಯೋಽಸ್ಥಿಸಂಘಾಃ॥
ನದ್ಯೋಽಸ್ಯ ನಾಡ್ಯೋಽಥ ತನೂರುಹಾಣಿ ಮಹೀರುಹಾ ವಿಶ್ವತನೋ ರ್ನೃಪೇಂದ್ರ! । ಅನಂತವೀರ್ಯಶ್ಶ್ವಸಿತಂ ಮಾತರಿಶ್ವಾ ಗತಿ ರ್ವಯಃ ಕರ್ಮಗುಣ ಪ್ರವಾಹಃ ॥ ೩೩ ॥ ಈಶಸ್ಯ ಕೇಶಾ ನ್ವಿದು ರಂಬುವಾಹಾ ನ್ವಾಸಸ್ತು ಸಂಧ್ಯಾಂ ಕುರುವರ್ಯ! ಭೂಮ್ನಃ । ಅವ್ಯಕ್ತ ಮಾಹು ರ್ಹೃದಯಂ ಮನಶ್ಚ ಸಚಂದ್ರಮಾ ಸ್ಸರ್ವವಿಕಾರಕೋಶಃ ॥ ೩೪ ॥ ವಿಜ್ಞಾನಶಕ್ತಿಂ ಮಹಿಮಾಮನಂತಿ ಸರ್ವಾತ್ಮನೋಽಂತಃ ಕರಣಂ ಗಿರಿತ್ರಂ। ಅಶ್ವಾಶ್ವತರ್ಯುಷ್ಟ್ರಗಜಾ ನಖಾನಿ ಸರ್ವೇ ಮೃಗಾಃ ಪಶವ ಶ್ಶ್ರೋಣಿದೇಶೇ ॥ ೩೫ ॥ ವಯಾಂ

ಅಸ್ಥಿಸಂಘಾಃ-ಎಲುಬುಗಳ ಸಮೂಹವು ॥ ೩೨ ॥ ವಿಶ್ವತನೋಃ -ಪ್ರಪಂಚಸ್ವರೂಪನಾದ, ಅಸ್ಯ-ಇವನಿಗೆ, ನದ್ಯಃ-ನದಿಗಳು, ನಾಡ್ಯಃ-ನರಗಳು, ವೃಕ್ಷಾಃ-ಗಿಡಗಳು, ತನೂರು ಹಾಣಿ-ರೋಮಗಳು, ಹೇನೃಪೇಂದ್ರ-ಎಲೈ ರಾಜೇಂದ್ರನೆ! ಅನಂತ ವೀರ್ಯಃ - ಅಪಾರಶಕ್ತಿಯುಳ್ಳ ಮಾತರಿಶ್ವಾ-ವಾಯುವೇ, ಶ್ವಸಿತಂ - ಉಸಿರು, ವಯಃ - ವಯಸ್ಸೇ, (ಕಾಲವು,) ಗತಿಃ - ಗಮನವು, ಕರ್ಮ - ಕಾರ್ಯವೇ, ಗುಣಪ್ರವಾಹಃ - ಗುಣಗಳ ಪ್ರವಾಹರೂಪವಾದ ಸಂಸಾರವು ॥ ೩೩ ॥ ಹೇ ಕುರುವರ್ಯ - ಎಲೈ ಕುರುಶ್ರೇಷ್ಠನೆ! ಭೂಮ್ನಃ - ಪ್ರಭುವಾದ, ಈಶಸ್ಯ - ವೈರಾಜನಿಗೆ, ಅಂಬುವಾಹಾ-ಮೇಘಗಳನ್ನು, ಕೇಶಾ-ಕೂದಲನ್ನಾಗಿ, ವಿದುಃ-ತಿಳಿಯುವರು, ಸಂಧ್ಯಾಂ-ಸಂಧಿಕಾಲವನ್ನು, ವಾಸಃ-ವಸ್ತ್ರವನ್ನಾಗಿಯೂ, ಆಹುಃ, ಹೇಳುತ್ತಾರೆ, ಸರ್ವವಿಕಾರಕೋಶಃ-ಎಲ್ಲ ವಿಕಾರಗಳಿಗೂ ಆಶ್ರಯನಾದ, ಸಃಚಂದ್ರಮಾಃ-ಚಂದ್ರನು, ಮನಶ್ಚ-ಮನಸ್ಸಾಗಿರುವನು, ॥ ೩೪ ॥ ವಿಜ್ಞಾನಶಕ್ತಿಂ-ಜ್ಞಾನರೂಪವಾದ ಭಗವಚ್ಛಕ್ತಿಯನ್ನು, (ಬುದ್ಧಿ) ಮಹಿಂ-ಮಹತ್ತತ್ವವನ್ನಾಗಿ, ಆಮನಂತಿ-ಹೇಳುವರು. ಸರ್ವಾತ್ಮನಃ-ವೈರಾಜನಿಗೆ, ಗಿರಿತ್ರಂ-ರುದ್ರನನ್ನು, ಅಂತಃಕರಣಂ-ಅಹಂಕಾರವನ್ನಾಗಿ ಹೇಳುವರು. ಅಶ್ವಾ...ಜಾಃ, ಅಶ್ವ-ಕುದುರೆಗಳು, ಅಶ್ವತರೀ-ಹೇಸರಕತ್ತೆಗಳು, ಉಷ್ಟ್ರ-ಒಂಟೆಗಳು, ಗಜಾಃ-ಆನೆಗಳು ಇವುಗಳು, ನಖಾನಿ-ಉಗುರುಗಳು, ಸರ್ವೇ-ಎಲ್ಲಾ, ಪಶವಃ-ಪಶುಗಳು, ಮೃಗಾಃ-ಮೃಗಗಳು, ಶ್ರೋಣಿದೇಶೇ-ನಡುವಾಗಿರುವುವು ॥ ೩೫ ॥ ವಯಾಂಸಿ-ಹಕ್ಕಿಗಳು, ವಿಚಿತ್ರಂ-ಆಶ್ಚರ್ಯಕರವಾದ, ತದ್ವ್ಯಾಕರಣಂ-ಆತನ ಶಿಲ್ಪಚಾತುರ್ಯವು. ಮನುಃ-ಸ್ವಾಯಂಭುವ ಮನುವು, ಮನೀಷಾ-ಬುದ್ಧಿಯು, ಮನುಜಃ-ಮನುಷ್ಯನು, ನಿವಾಸಃ-ವಾಸಸ್ಥಾನವು,

ಗಳು, ॥ ೩೨ ॥ ನದಿಗಳೇ ನರಗಳು, ಗಿಡಗಳೇ ರೋಮಗಳು, ಅದ್ಭುತಶಕ್ತಿಯುಳ್ಳ ವಾಯುವೇ ನಿಟ್ಟುಸಿರು, ಕಲಾಕಾಷ್ಠಾದಿರೂಪವಾದ ಕಾಲವೇ ವಯಸ್ಸು, ಜೀವರ ಕರ್ಮಗುಣಗಳ ಪ್ರವಾಹರೂಪವಾದ ಸಂಸಾರವೇ ನಡಿಗೆಯು ॥ ೩೩ ॥ ಮೇಘಗಳೇ ಕೂದಲು, ಸಂಧಿಕಾಲಗಳೇ ವಸ್ತ್ರವು, ಪ್ರಧಾನವೇ ಹೃದಯವು, ಧೂಮಾದಿಮಾರ್ಗವೆನಿಸಿ ಸಕಲವಿಕಾರಗಳನ್ನುಂಟುಮಾಡುವ ಚಂದ್ರನೇ ಮನಸ್ಸು ॥ ೩೪ ॥ ಮಹತ್ತತ್ವವೇ ಬುದ್ಧಿಯು, ರುದ್ರನೇ ಅಹಂಕಾರವು, ಕುದುರೆ, ಹೇಸರಕತ್ತೆ, ಒಂಟೆ, ಆನೆ, ಇವುಗಳೇ ಉಗುರುಗಳು, ಪಶುಗಳು, ಮೃಗಗಳು ಇವೆಲ್ಲವೂ ಸೊಂಟವು ॥ ೩೫ ॥ ಹಲವುಬಗೆಗಳಾದ ಹಕ್ಕಿಗಳೇ ಆತನ ಶಿಲ್ಪಚಾತುರ್ಯವು, ಸ್ವಾಯಂಭುವಮನುವೇ ಬುದ್ಧಿಯು, ಮನುಷ್ಯನೇ ವಾಸಸ್ಥಾನವು. ಗಂಧರ್ವರು, ವಿದ್ಯಾಧರರು, ಚಾರಣರು, ಅಪ್ಸರಸ್ತ್ರೀಯರು ಇವರು ಷಡ್ಜಾದಿಸ್ವರಗಳು,

ಸಿ † ತದ್ವ್ಯಾಕರಣಂ ವಿಚಿತ್ರಂ ‡ ಮನು ರ್ಮಸೀಷಾ * ಮನುಜೋ ನಿವಾಸಃ। ಗಂಧರ್ವವಿದ್ಯಾಧರಚಾರಣಾಪ್ಸರ ಸ್ಸ್ವರಸ್ಮೃತೀ ರ್ಹ್ಯಸುರಾನೀಕವೀರ್ಯಃ ॥ ೩೬ ॥ ಬ್ರಹ್ಮಾನನಂ ಕ್ಷತ್ರಭುಜೋ ಮಹಾತ್ಮಾ ವಿಡೂರು ರಂಘ್ರಿ ಶ್ರಿತಕೃಷ್ಣವರ್ಣಃ। ನಾನಾಭಿಧಾಭೀಜ್ಯಗಣೋಪಪನ್ನೋ ದ್ರವ್ಯಾತ್ಮಕಃ ಕರ್ಮ ವಿತಾನಯೋಗಃ ॥ ೩೭ ॥ ಇಯಾ ನಸಾ ವೀಶ್ವರವಿಗ್ರಹಸ್ಯ ಯ ಸ್ಸನ್ನಿವೇಶಃ ಕಥಿತೋ ಮಯಾ ತೇ। ಸಂಧಾರ್ಯತೇಽಸ್ಮಿನ್ ಪುರುಷೇ

ಗಂಧರ್ವ...ರಃ, ಗಂಧರ್ವರು, ವಿದ್ಯಾಧರರು, ಚಾರಣರು, ಅಪ್ಸರಸ್ತ್ರೀಯರು ಇವರು, ಸ್ವರಸ್ಮೃತೀಃ-ಷಡ್ಜಮೊದಲಾದ ಸ್ವರಶ್ರುತಿಗಳು, ಅಸುರಾನೀಕ-ರಾಕ್ಷಸರ ಸಮೂಹವೇ, ವೀರ್ಯಃ-ಪರಾಕ್ರಮ ಸ್ಥಾನವಾಗುಳ್ಳವನು. ಅಥವಾ ಅಸುರಾನೀಕ - ರಾಕ್ಷಸಕೂಟದಲ್ಲಿ, ವರ್ಯಃ-ಶ್ರೇಷ್ಠನಾದ, ಪ್ರಹ್ಲಾದನೇ, ಸ್ಮೃತೀಃ-ಸ್ಮರಣೆಯು ॥ ೩೬ ॥ ಬ್ರಹ್ಮ-ಬ್ರಾಹ್ಮಣನು-ಆನನಂ-ಮುಖವು, ಮಹಾತ್ಮಾ-ಮಹಾತ್ಮನಾದ, ವೈರಾಜನು, ಕ್ಷತ್ರಭುಜಃ-ಕ್ಷತ್ರಿಯರೇ ಭುಜವಾಗುಳ್ಳವನು. ವಿಟ್-ವೈಶ್ಯನು, ಊರುಃ-ತೊಡೆಯು, ಶ್ರಿತಕೃಷ್ಣವರ್ಣಃ-ಕೃಷ್ಣವರ್ಣವನ್ನು ಪಡೆದ ಶೂದ್ರನು ಅಂಘ್ರಿಃ-ಪಾದವು, ನಾನಾ...ನ್ನಃ, ನಾನಾಹಲವುಬಗೆಗಳಾದ, ಅಭಿಧಾ-ಹೆಸರುಳ್ಳ, ಅಭೀಜ್ಯ-ದೇವತೆಗಳ, ಗಣ-ವಸುರುದ್ರಾದಿ ಗಣಗಳಿಂದ, ಉಪಪನ್ನಃ-ಕೂಡಿರುವ, ದ್ರವ್ಯಾತ್ಮಕಃ-ಹವಿಸ್ಸುಮೊದಲಾದವುಗಳಿಂದ ಸಾಧ್ಯವಾದ, ವಿತಾನಯೋಗಃ-ಯಜ್ಞಗಳು ತಸ್ಯ-ಆವೈರಾಜನಿಗೆ, ಕರ್ಮ-ಅವಶ್ಯವಾದ ಕಾರ್ಯವು ॥ ೩೭ ॥

ಮಯಾ-ನನ್ನಿಂದ, ತೇ-ನಿನಗೆ, ಯಃ-ಯಾವ, ಸನ್ನಿವೇಶಃ-ಅವಯವ ಸನ್ನಿವೇಶವು, ಕಥಿತಃ-ಹೇಳಲ್ಪಟ್ಟತೋ, ಈಶ್ವರ ವಿಗ್ರಹಸ್ಯ-ವಿರಾಟ್ಛರೀರದ, ಅಸೌ-ಆಸನ್ನಿವೇಶವು, ಇಯಾನೇವ-ಇಷ್ಟೇ, ಸ್ಥವಿಷ್ಠೇ-ಸ್ಥಿರತರನಾದ, ಅಸ್ಮಿನ್-ಈ, ಪುರುಷೇ-ವೈರಾಜನಲ್ಲಿ, ಸ್ವಬುಧ್ಯಾ-ತನ್ನ ಬುದ್ಧಿಯಿಂದ, ಮನಃ-ಮನಸ್ಸು, ಸಂಧಾರ್ಯತೇ-ಇಡ

ರಾಕ್ಷಸಶ್ರೇಷ್ಠನಾದ ಪ್ರಹ್ಲಾದನೇ ಸ್ಮೃತಿಯು ॥ ೩೬ ॥ ಬ್ರಾಹ್ಮಣನೇ ಮುಖವು, ಕ್ಷತ್ರಿಯರೇ ಭುಜಗಳು, ವೈಶ್ಯರೇ ತೊಡೆಗಳು, ಶೂದ್ರರೇ ಪಾದಗಳು, ನಾನಾನಾಮಗಳುಳ್ಳ ವಸುರುದ್ರಾದಿದೇವತೆಗಳಂದೊಡಗೂಡಿ ಚರುಪುರೋಡಾಶಾದಿ ಹವಿಸ್ಸುಗಳಿಂದ ಸಾಧ್ಯವಾಗಿರುವ ಯಜ್ಞಗಳೇ ಆತನಿಗಿಷ್ಟವಾದ ಕಾರ್ಯವು. ಅಥವಾ ಆತನ ಆರಾಧನವು ॥ ೩೭ ॥ ಅಯ್ಯಾ ಪರೀಕ್ಷಿನ್ಮಹೀವಲ್ಲಭನೆ ! ಮಹಾತ್ಮನಾದ ವಿರಾಟ್ಪುರುಷನ ಶರೀರದಲ್ಲಿರುವ ಅವಯವಗಳನ್ನು ನಿನಗೆ ತಿಳಿಸಿರುವೆನು. ಇದಕ್ಕಿಂತಬೇರೆಯಾವುದೂ ಇಲ್ಲವಾದುದರಿಂದ ಮುಮು

† ಯೇನ ಶುಕ್ಲೀಕೃತಾ ಹಂಸಾ ಶುಕಾಶ್ಚ ಹರಿತೀಕೃತಾಃ। ಮಯೂರಾ ಶ್ಚಿತ್ರಿತಾ ಯೇನ ಸತೇ ವೃತ್ತಿಂ ವಿಧಾಸ್ಯತಿ । ಹಂಸಪಕ್ಷಿಗಳನ್ನು ಬಿಳಿದಾಗಿಯೂ, ಗಿಳಿಗಳನ್ನು ಹಸುರಾಗಿಯೂ, ನವಿಲುಗಳನ್ನು ಹಲವುಬಣ್ಣವಾಗಿಯೂ ನಿರ್ಮಿಸಿದ ಜಾಣ್ಮೆಯು ಭಗವಂತನದು ‡ ಶ್ರು. ಮನುರ್ವೈ ಯತ್ಕಿಂಚಿ ದವದತ್ತದ್ಭೇಷಜಂ-ಬುದ್ಧಿಮಂತರಲ್ಲಿ ಮನುವೇ ಅಗ್ರಗಣ್ಯನು * ತಿರ್ಯಗ್ಜನ್ಮದಲ್ಲಾಗಲಿ, ದೇವಾದಿಜನ್ಮಗಳಲ್ಲಾಗಲಿ ಕರ್ಮಾಧಿಕಾರವಿಲ್ಲದಿರುವುದರಿಂದ ಯಜ್ಞಾದಿಕರ್ಮಸಾಪೇಕ್ಷನಾದ ಜ್ಞಾನವನ್ನು ಪಡೆಯುವುದಕ್ಕೆ ಕರ್ಮಾಧಿಕಾರಿಯಾದ ಮನುಷ್ಯನೇ ಯೋಗ್ಯನು ಆದುದರಿಂದ ಭಕ್ತಿಜ್ಞಾನವೈರಾಗ್ಯಗಳನ್ನು ಪಡೆಯುವುದಕ್ಕೆ ಮನುಷ್ಯ ಜನ್ಮವನ್ನೇಹೊಂದಬೇಕು.

ಷ್ಠವಿಷ್ಟೋ ಮನ ಸ್ಸ್ವಬುಧ್ಯಾ ನಯತೋಽಸ್ತಿ ಕಿಂಚಿತ್ ॥೩೮॥ ಸ ‡ ಸರ್ವಧೀ ವೃತ್ತ್ಯನು ಭೂತಸರ್ವ ಆತ್ಮಾ ಯಥಾ ಸ್ವಪ್ನಜನೇಕ್ಷಿತೈಕಃ। ತಂ ಸತ್ಯ ಮಾನಂದನಿಧಿಂ ಭಜೇತ ನಾನ್ಯತ್ರ ಸಜ್ಜೇ ದ್ಯತ ಆತ್ಮಪಾತಃ ॥ ೩೯ ॥

ಇತಿ ಪ್ರಥಮೋಽಧ್ಯಾಯಃ

ಲ್ಪಡುತ್ತದೆ. ॥ ೩೮ ॥ ಯತಃ-ಯಾವುದಕ್ಕಿಂತಲೂ ಬೇರೆ, ಕಿಂಚಿತ್-ಕೊಂಚವೂ, ನ-ಇಲ್ಲವೋ, ಸ್ವಪ್ನ...ತಾ, ಸ್ವಪ್ನ-ಕನಸಿನಲ್ಲಿ, ಜನ-ಜನರನ್ನು, ಈಕ್ಷಿತಾ-ನೋಡುವ, ಆತ್ಮಾಯಥಾ-ಜೀವನಂತೆ, ಸರ್ವ...ಸರ್ವಃ, ಸರ್ವ-ಎಲ್ಲರ, ಧೀವೃತ್ತಿ-ಬುದ್ಧಿವೃತ್ತಿಗಳಿಂದ, ಅನುಭೂತ-ಅನುಭವಿಸಲ್ಪಟ್ಟ, ಸರ್ವಃ-ಎಲ್ಲವೂ ಉಳ್ಳ, ಸಃ-ಆ ಈಶ್ವರನು, ಏಕಃ-ಒಬ್ಬನೇ, ಆದುದರಿಂದ, ಸತ್ಯಂ-ನಾಶರಹಿತನಾದ, ಆನಂದನಿಧಿಂ-ಆನಂದಕ್ಕೆ ಗಣಿಯಾದ, ತಮೇವ-ಆತನನ್ನೇ, ಭಜೇತ-ಭಜಿಸಬೇಕು, ಯತಃ-ಯಾವುದರಸಂಗದಿಂದ, ಆತ್ಮ-ತನಗೆ, ಪಾತಃ-ಸಂಸಾರವುಂಟಾಗುವುದೋ, ಅಂತಹ, ಅನ್ಯತ್ರ-ಬೇರೇಕಡೆಯಲ್ಲಿ, ನಸಜ್ಜೇತ್-ಸಂಗಮಾಡಬಾರದು,

ಪ್ರಥಮಾಧ್ಯಾಯಂ ಸಮಾಪ್ತಂ

ಕ್ಷುವಾದವನು ಬುದ್ಧಿಪೂರ್ವಕವಾಗಿ ತನ್ನ ಮನಸ್ಸನ್ನು ಈ ಪುರುಷನಲ್ಲಿ ನಿಲ್ಲಿಸಬೇಕು॥೩೮ ಎಲೈ ಧರಾವಲ್ಲಭನೆ! ಮುಮುಕ್ಷುವಾದವನು ಮನಸ್ಸನ್ನು ಸ್ಥಿರಗೊಳಿಸುವುದಕ್ಕಾಗಿ ಇಂತು ವಿರಾಡ್ದೇಹ ಜೀವಾಂತರ್ಯಾಮಿಗಳಲ್ಲಿ ಅಭೇದೋಪಾಸನೆಯನ್ನು ಮಾಡಿ ಬಳಿಕ ಆ ವಿರಾಡ್ದೇಹಜೀವರನ್ನು ವಿರಾಜನ ಅಂತರ್ಯಾಮಿಯಲ್ಲಿ ಲಯಗೊಳಿಸಬೇಕು. ಸ್ವಪ್ನವನ್ನು ಕಾಣುವ ಪುರುಷನು ಅನೇಕಜೀವರನ್ನು ಕಲ್ಪಿಸಿ, ಆಯಾ ಜೀವರ ಇಂದ್ರಿಯಗಳಿಂದ ಎಲ್ಲವನ್ನೂ ನೋಡುವಂತೆ ಸರ್ವಪ್ರಾಣಿಗಳ ಬುದ್ಧಿವೃತ್ತಿಗಳಿಂದೆಲ್ಲ ವಿಷಯಗಳನ್ನೂ ತಿಳಿಯುತ್ತಿರುವ ಸರ್ವಾತ್ಮಕನಾದ ಭಗವಂತನು ಒಬ್ಬನೇ ಆಗಿರುವುದರಿಂದ ಆನಂದನಿಧಿಯೂ,ಸತ್ಯಸ್ವರೂಪನೂ ಆದ ಆವಿರಾಡಂತರ್ಯಾಮಿಯನ್ನೇ ಭಜಿಸಬೇಕಲ್ಲದೆ ಸಂಸಾರವನ್ನುಂಟುಮಾಡುವ ಇತರ ವಿಷಯಗಳನ್ನು ಭಜಿಸಬಾರದು. ಎಂದುಶುಕಮುನಿಯುಪದೇಶಿಸುತ್ತಿದ್ದನೆಂಬಲ್ಲಿಗೆ ಭಾಗವತಚಕೋರಚಂದ್ರಿಕೆಯೊಳ್ ಒಂದನೆಯಅಧ್ಯಾಯಂ ಮುಗಿದುದು.

‡ ವಿ. ಸ್ವಪ್ನವನ್ನು ಕಾಣುವ ಜೀವನು, ತನ್ನ ಪುಣ್ಯಪಾಪಾನುಸಾರವಾಗಿ ಭಗವಂತನಿಂದ ನಿರ್ಮಿಸಲ್ಪಟ್ಟು, ತಾನೇ ಅನುಭವಿಸತಕ್ಕವುಗಳಾಗಿ ತತ್ಕಾಲದಲ್ಲಿಮಾತ್ರ ತೋರುವ ಶರೀರಾದಿಗಳನ್ನು ಪಡೆದು, ರಾಜ್ಯಾಭಿಷೇಕ, ಶಿರಃಖಂಡನ ಮೊದಲಾದ ಸುಖದುಃಖಗಳನ್ನನುಭವಿಸುವಂತೆ, ಪ್ರತ್ಯಕ್ಷ, ಅನುಮಾನ, ಮೊದಲಾದ ಎಲ್ಲಾ ಬುದ್ಧಿ ವೃತ್ತಿಗಳಿಂದಲೂ ತಿಳಿಯಲ್ಪಡುವ ಸಕಲ ಪದಾರ್ಥಗಳಿಗೂ ಆಧಾರವಾಗಿರುವ, ಜಗಚ್ಛರೀರಕನಾದ ಭಗವಂತನನ್ನು ಧ್ಯಾನಿಸಬೇಕು.

ಓಂ ನಮಃ ಪರಮಾತ್ಮನೇ

ದ್ವಿತೀಯೋಧ್ಯಾಯಃ

ಶ್ರೀಶುಕಃ। ಏವಂ ಪುರಾ ಧಾರಣಯಾತ್ಮಯೋನಿ ರ್ನಷ್ಟಾಂ ಸ್ಮೃತಿಂ ಪ್ರತ್ಯವರುಧ್ಯ ತುಷ್ಟಾತ್ । ತಥಾ ಸಸರ್ಜೇದ ಮಮೋಘದೃಷ್ಟಿ ರ್ಯಥಾಪ್ಯಯಾ ತ್ಪ್ರಾಗ್ವ್ಯವಸಾಯ ಬುದ್ಧಿಃ॥ ೧ ॥ ಶಾಬ್ದಸ್ಯಹಿ ಬ್ರಹ್ಮಣ ಏಷ ಪಂಥಾ ಯನ್ನಾಮಭಿ ರ್ಧ್ಯಾಯತಿ ಧೀ ರಪಾರ್ಥೈಃ। ಪರಿಭ್ರಮಂ ಸ್ತತ್ರ ನವಿಂ

ದ್ವಿತೀಯಾಧ್ಯಾಯಂ

ಕಂ॥ ಜಗದಾಕಾರಶರೀರವ । ನೊಗುಮಿಗೆಯಿಂ ಬಗೆದು ನೆಲೆಗೆ ನಿಂದಿಹ ಮನಮಂ ।
ಜಗದಂತರ್ಯಾಮಿ ಯೆನಿಪ । ಭಗವಂತನೊಳಿರಿಸಿ ಜಾನಿಸುವಪರಿಯೊಲೆಗುಂ ॥

ಆತ್ಮಯೋನಿಃ-ಚತುರ್ಮುಖಬ್ರಹ್ಮನು, ಏವಂ-ಈ ರೀತಿಯಾದ, ಧಾರಣಯಾ-ಧ್ಯಾನವಿಶೇಷದಿಂದ, ತುಷ್ಟಾತ್-ಸಂತೋಷಗೊಂಡ, ಹರಿಯಿಂದ, ನಷ್ಟಾಂ-ಅಳಿದುಹೋಗಿದ್ದ, ಸ್ಮೃತಿಂ-ಸೃಷ್ಟಿವಿಷಯಕವಾದ ಸ್ಮರಣೆಯನ್ನು, ಪ್ರತ್ಯವರುಧ್ಯ-ಪಡೆದು, ವ್ಯವಸಾಯಬುದ್ಧಿಃ-ನಿಶ್ಚಯಬುದ್ಧಿಯುಳ್ಳವನಾಗಿ, ಅಪ್ಯಯಾತ್-ಪ್ರಳಯಕ್ಕಿಂತ, ಪ್ರಾಕ್-ಮೊದಲು, ಯಥಾ-ಹೇಗಿದ್ದುದೋ, ತಥಾ-ಆ ರೀತಿಯಾಗಿಯೇ, ಅಮೋಘದೃಷ್ಟಿಃ-ಸಫಲವಾದ ಜ್ಞಾನವುಳ್ಳವನಾಗಿ, ಇದಂ-ಈ ಪ್ರಪಂಚವನ್ನು, ಸಸರ್ಜ-ಸೃಷ್ಟಿಸಿದನು ॥೧॥ ಧೀಃ-ಬುದ್ಧಿಯು, ಅಪಾರ್ಥೈಃ-ಪ್ರಯೋಜನವಿಲ್ಲದ, ನಾಮಭಿಃ-ಸ್ವರ್ಗಮೊದಲಾದ ಹೆಸರುಗಳಿಂದ, ಧ್ಯಾಯತಿಯತ್-ಧ್ಯಾನಿಸುವುದಾವುದುಂಟೋ, ಏಷಃ-ಇದೇ, ಶಾಬ್ದಸ್ಯ-ಶಬ್ದಸ್ವರೂಪವಾದ, ಬ್ರಹ್ಮಣಃ-ವೇದದ, ಪಂಥಾಃ-ಮಾರ್ಗವು, ಮಾಯಾಮಯೇ-ಮಾಯಾವಿಕಾರವಾದ, ತತ್ರ-ಆ ಮಾರ್ಗದಲ್ಲಿ, ವಾಸನಯಾ-

---

ಎರಡನೆಯ ಅಧ್ಯಾಯ.

ಅಂತರ್ಯಾಮಿ ಧ್ಯಾನಕ್ರಮವು.

ಅಯ್ಯಾ ಪರೀಕ್ಷಿನ್ಮಹೀಮಹೇಂದ್ರನೆ ! ಪೂರ್ವಾಧ್ಯಾಯದಲ್ಲಿ ಜಗದಾಕಾರವಾದ ವಿರಾಡ್ದೇಹವನ್ನೂ, ಆ ದೇಹದ ಜೀವಾಂತರ್ಯಾಮಿಗಳನ್ನೂ ಅಭೇದದಿಂದುಪಾಸನಮಾಡಿ, ಬಳಿಕ ಆದೇಹ ಜೀವರನ್ನು ಅಂತರ್ಯಾಮಿಯಲ್ಲಿ ಲಯಗೊಳಿಸಿ, ಧ್ಯಾನಿಸಬೇಕೆಂದು ಹೇಳಿದೆನಷ್ಟೆ. ಆಧಾರಣೆಯನ್ನು ಮಾಡುವುದರಿಂದುಂಟಾಗುವ ಆಂತರಾಳಿಕಫಲವನ್ನು ಮೊದಲು ನಿರೂಪಿಸುವೆನು ಕೇಳು. ಪೂರ್ವದಲ್ಲಿ ನಾರಾಯಣಮೂರ್ತಿಯ ನಾಭೀಕಮಲದಿಂದ ಜನಿಸಿದ ಬ್ರಹ್ಮನು ಪೂರ್ವೋಕ್ತವಾದ ಧಾರಣೆಯನ್ನು ಮಾಡಿ, ಅದರಿಂದ ಸಂತುಷ್ಟನಾದ ನಾರಾಯಣನಿಂದ ನಷ್ಟವಾಗಿದ್ದ ಸೃಷ್ಟಿಸ್ಮರಣೆಯನ್ನು ಪಡೆದು ನಿಶ್ಚಯಜ್ಞಾನದಿಂದೊಡಗೂಡಿ, ಪ್ರಳಯಕ್ಕೆ ಮೊದಲುಯಿದ್ದಂತೆಯೇ ಈ ಜಗತ್ತನ್ನು ಮರಳಿ ಸೃಷ್ಟಿಸಿದನು. ಆದುದರಿಂದ ಈ ಧಾರಣೆಯಿಂದ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯವುಂಟಾಗುವುದು ॥೧॥ ಈ ರೀತಿಯಾಗಿರುವ ಧಾರಣಾಫಲದಲ್ಲಿಯೂ ವಿರಕ್ತನಾದವನೇ ಪರಿಶುದ್ಧವಾದ ಪರಮಾತ್ಮಧಾರಣೆಗೆ ಅಧಿಕಾರಿಯಾಗುವನು. ಮಾಯಾಮಯವಾದ ಸಂಸಾರದಲ್ಲಿ ಕರ್ಮಸಂಸ್ಕಾರ

ದತೇಽರ್ಥಾನ್ ಮಾಯಾಮಯೇ ವಾಸನಯಾ ಶಯಾನಃ ॥೨॥ ಅತಃ ಕವಿರ್ನಾಮಸು ಯಾವದರ್ಥಃ ಸ್ಯಾದಪ್ರಮತ್ತೋ ವ್ಯವಸಾಯಬುದ್ಧಿಃ। ಸಿದ್ಧೇಽನ್ಯಥಾರ್ಥೇ ನಯತೇತ ತತ್ರ ಪರಿಶ್ರಮಂ ತತ್ರ ಸಮೀಕ್ಷಮಾಣಃ ॥೩॥ ಸತ್ಯಾಂ ಕ್ಷಿತೌ ಕಿಂ? ಕಶಿಪೋಃ ಪ್ರಯಾಸೈರ್ಬಾಹೌ ಸ್ವಸಿದ್ಧೇ ಹ್ಯುಪಬರ್ಹಣೈಃ ಕಿಂ? । ಸತ್ಯಂಜಲೌ ಕಿಂ? ಪುರುಧಾನ್ನಪಾತ್ರ್ಯಾ ದಿಗ್ವಲ್ಕಲಾದೌ ಸತಿ ಕಿಂ? ದುಕೂಲೈಃ ॥ ೪ ॥ ಚೀರಾಣಿ ಕಿಂ? ಪಥಿ ನಸಂತಿ ದಿಶಂತಿ ಭಿಕ್ಷಾಂ

ಕರ್ಮಗಳ ಸಂಸ್ಕಾರದಿಂದ, ಶಯಾನಃ-ನೆಲಸಿದವನಾಗಿ, ಪರಿಭ್ರಮನ್-ಅಲೆದಾಡುತ್ತಾ, ಅರ್ಥಾನ್-ಪುರುಷಾರ್ಥಗಳನ್ನು, ನವಿಂದತೇ-ಹೊಂದುವುದಿಲ್ಲ ॥ ೨ ॥ ಅತಃ-ಆದುದರಿಂದ, ಕವಿಃ-ಜ್ಞಾನಿಯಾದವನು, ನಾಮಸು-ನಾಮಮಾತ್ರವೆನಿಸುವ ಭೋಗ್ಯವಸ್ತುಗಳಲ್ಲಿ, ಯಾವತ್-ಎಷ್ಟುಮಾತ್ರದಿಂದ, ಅರ್ಥಃ-ದೇಹಯಾತ್ರೆಯುಳ್ಳವನು, ಸ್ಯಾತ್-ಆಗುವನೋ, ಅಂತವನಾಗಿ, ಅಪ್ರಮತ್ತಃ-ಅದರಲ್ಲಿಯೂ ಆಸಕ್ತನಾಗದೆ ವ್ಯವಸಾಯ ಬುದ್ಧಿಃ-(ಇದುಸುಖವಲ್ಲವೆಂದು) ನಿಶ್ಚಯಬುದ್ಧಿಯುಳ್ಳವನಾಗಿ, ತತ್ರ-ಆ ಪದಾರ್ಥವು, ಅನ್ಯಥಾ-ಬೇರೇವಿಧವಾಗಿ, ಸಿದ್ಧೇ-ಸಿದ್ಧಿಸುತ್ತಿರಲು, ತತ್ರ-ಆ ಪದಾರ್ಥದಲ್ಲಿ, ಪರಿಶ್ರಮಂ-ಮನಃಕ್ಲೇಶವನ್ನು, ಸಮೀಕ್ಷಮಾಣಃ-ನೋಡುತ್ತಾ, ನಯತೇತ-ಯತ್ನಿಸಬಾರದು ॥ ೩ ॥ ಕ್ಷಿತೌ-ನೆಲವು, ಸತ್ಯಾಂ-ಇರುವಾಗ, ಕಶಿಪೋಃ-ಹಾಸಿಗೆಯ, ಪ್ರಯಾಸೈಃ-ತೊಂದರೆಗಳಿಂದ, ಕಿಂ-ಏನುಪ್ರಯೋಜನ ? ಸ್ವಸಿದ್ಧೇ-ತಾನಾಗಿರುವ, ಬಾಹೌ-ತೋಳು, ಸತಿ-ಇರುವಾಗ, ಉಪಬರ್ಹಣೈಃ-ತಲೆದಿಂಬುಗಳಿಂದ, ಕಿಂ-ಏನು ? ಅಂಜಲೌ-ಬೊಗಸೆಯು, ಸತಿ-ಇರುವಾಗ, ಪುರುಧಾ-ಹಲವು ಬಗೆಗಳಾದ, ಅನ್ನಪಾತ್ರ್ಯಾ-ಭೋಜನಪಾತ್ರೆಗಳಿಂದ ಕಿಂ-ಏನು ? ದಿಗ್ವ...ದೌ, ದಿಕ್-ದಿಕ್ಕುಗಳು, ವಲ್ಕಲ-ನಾರುಮಡಿಗಳು, ಆದೌ-ಮೊದಲಾದುವಿರುವಾಗ, ದುಕೂಲೈಃ-ಚೀನಾಂಬರಗಳಿಂದ, ಕಿಂ-ಏನುಪ್ರಯೋಜನವು ? ॥ ೪ ॥

ಗಳಿಂದ ಬದ್ಧನಾಗಿ ಅಲೆದಾಡುತ್ತಾ ಪರಮಪುರುಷಾರ್ಥವಿಲ್ಲವೆ ನಶ್ವರಫಲಗಳನ್ನು ಕೊಡತಕ್ಕವುಗಳಾದುದರಿಂದ ನಾಮಮಾತ್ರಗಳೆನಿಸಿರುವ ಸ್ವರ್ಗಾದಿಲೋಕಗಳನ್ನು ಆಶಿಸುತ್ತಾ ಇರುವುದೇ ಶಬ್ದಬ್ರಹ್ಮಸ್ವರೂಪವಾದ ವೇದಮಾರ್ಗವು. ಆದುದರಿಂದ ವಿವೇಕಿಯಾದವನು ತುಚ್ಛಗಳಾದ ಆ ಕರ್ಮಫಲಗಳನ್ನು ಬಯಸದೆ ವೈರಾಗ್ಯವನ್ನು ಪಡೆಯಬೇಕು ॥ ೨ ॥

ಆದರೆ ಕರ್ಮಫಲಗಳನ್ನು ಸಂಪೂರ್ಣವಾಗಿ ತ್ಯಾಗಮಾಡಿದಲ್ಲಿ ಶರೀರವೂ ನಿಲ್ಲಲಾರದು. ಆದುದರಿಂದ ವಿರಕ್ತನಾದವನು ನಾಮಮಾತ್ರಗಳೆನಿಸಿರುವ ಭೋಗ್ಯವಸ್ತುಗಳಲ್ಲಿ ದೇಹಧಾರಣೆಗೆ ತಕ್ಕಷ್ಟುಮಾತ್ರವನ್ನೇ ಅನುಭವಿಸುತ್ತಾ ಅದರಲ್ಲಿಯೂ ಆಸಕ್ತನಾಗದೆ "ಇದೊಂದೂ ಸುಖವಲ್ಲ" ಎಂದು ನಿಶ್ಚಯಿಸಿಕೊಂಡು ಶರೀರಯಾತ್ರಾಮಾತ್ರಕ್ಕೆ ತಕ್ಕ ಆ ವಸ್ತುಗಳೂಕೂಡ ತಮಗೆ ತಾವೇ ಅಪ್ರಯತ್ನವಾಗಿ ದೊರೆಯುವುವೆಂದು ನಂಬಿ, ಆವಿಷಯದಲ್ಲಿಯೂ ಮನಸ್ಸನ್ನು ನೋಯಿಸಿಕೊಂಡು ಪ್ರಯತ್ನವನ್ನು ಮಾಡುವುದಿಲ್ಲ ॥೩॥ ಅಯ್ಯಾ ರಾಜನೆ ! ರಮಣೀಯವಾದ ನೆಲವು ಸಿದ್ಧವಾಗಿರುವಾಗ ಬೇರೆ ಹಾಸಿಗೆಯನು ಸಂಪಾದಿಸುವ ಪ್ರಯತ್ನವೇಕೆ ? ಮೃದುವಾದ ಬಾಹುವಿರುವಾಗ ತಲೆದಿಂಬುಗಳನ್ನರಸುವುದೇಕೆ ? ಕೈಬೊಗಸೆಯು ಅಧೀನವಾಗಿರುವಲ್ಲಿ ಬಗೆಬಗೆಗಳಾದ ಭೋಜನಪಾತ್ರೆಗಳೇಕೆ ? ದಿಕ್ಕುಗಳು, ನಾರುಮಡಿಗಳು ಮೊದಲಾದುವು ಸುಲಭವಾಗಿರುವಾಗ ಚೀನಾಂಬರಗಳ

ನೈವಾಂಘ್ರಿಪಾಃ ಪರಭೃತಃ ಸರಿತೋಽಪ್ಯಶುಷ್ಯನ್। ರುದ್ಧಾ ಗುಹಾಃ* ಕಿಮ ಜಿತೋಽವತಿ ನೋಽಪಸನ್ನಾನ್ ಕಸ್ಮಾದ್ಭಜಂತಿ ಕವಯೋ ಧನದುರ್ಮದಾಂಧಾನ್ ॥೫॥ ಏವಂ ಸ್ವಚಿತ್ತೇ ಸ್ವತಏವ ಸಿದ್ಧಆತ್ಮಾ ಪ್ರಿಯಾರ್ಥೋ ಭಗವಾನನಂತಃ । ತಂ ನಿರ್ವೃತಸ್ಸನ್ನಿಯತಾರ್ಥೋ ಭಜೇತ ಸಂಸಾರಹೇತೂಪರಮಶ್ಚ ಯತ್ರ ॥ ೬ ॥ ಕಸ್ತಾಂ ತ್ವನಾದೃತ್ಯ ಪರಾನುಚಿಂತಾ ಮೃ

ಪಥಿ-ದಾರಿಯಲ್ಲಿ, ಚೀರಾಣಿ - ಹರಕು ಬಟ್ಟೆಗಳು, ನಸಂತಿಕಿಂ - ಇಲ್ಲವೆ ಏನು ? ಗುಹಾಃ-ಗವಿಗಳು, ರುದ್ಧಾಃಕಿಂ-ತಡೆಯಲ್ಪಟ್ಟವೇ ಏನು ? ಅಜಿತಃ-ಶ್ರೀ ಹರಿಯು, ಉಪಸನ್ನಾನ್-ಮರೆಹೊಕ್ಕವರನ್ನು, ನಾವತಿಕಿಂ-ಸಲಹುವುದಿಲ್ಲವೇ ಏನು ? ಇಂತಿರುವಾಗ, ಕವಯಃ-ಜ್ಞಾನಿಗಳಾದವರು, ಧನ...ಧಾನ್, ಧನ-ಸಂಪತ್ತಿನ, ದುರ್ಮದ-ದುರಹಂಕಾರದಿಂದ, ಅಂಧಾನ್-ಕಣ್ಣುಕಾಣದಿರುವವರನ್ನು, ಕಸ್ಮಾತ್-ಏತಕ್ಕಾಗಿ, ಭಜಂತಿ-ಸೇವಿಸುತ್ತಾರೆ? ॥ ೫ ॥ ಏವಂ-ಇಂತು ವಿರಕ್ತನಾದವನು, ಯಃ-ಯಾವ ಪರಮಾತ್ಮನು, ಸ್ವಚಿತ್ತೇ-ತನ್ನಮನಸ್ಸಿನಲ್ಲಿ, ಸ್ವತಏವ-ತನಗೆತಾನೇ, ಸಿದ್ಧಃ-ನೆಲಸಿರುವನೋ, ಪ್ರಿಯಾರ್ಥಃ, ಪ್ರಿಯ-ನಿರತಿಶಯಪ್ರೀತಿವಿಷಯನಾಗಿಯೂ, ಅರ್ಥಃ - ಪರಮಪುರುಷಾರ್ಥ ಸ್ವರೂಪನಾಗಿಯೂ ಇರುವನೋ, ಭಗವಾನ್ ಷಡ್ಗುಣೈಶ್ವರ್ಯಸಂಪನ್ನನೋ, ಅನಂತಃ-ನಾಶರಹಿತನೋ, ಯತ್ರ-ಯಾವನನ್ನು ಭಜಿಸಿದಲ್ಲಿ, ಸಂ...ಶ್ಚ, ಸಂಸಾರ-ಸಂಸಾರಕ್ಕೆ, ಹೇತು- ಕಾರಣವಾದ ಅವಿದ್ಯೆಯು, ಉಪರಮಶ್ಚ-ನಾಶವೂ ಆಗುವುದೋ, ಅಂತಹ, ತಂ-ಆ ಭಗವಂತನನ್ನು, ನಿಯತಾರ್ಥಃ - ಭಗವತ್ಸ್ವರೂಪವನ್ನು ಅಥವಾ ತನ್ನನೆಲೆಯನ್ನು ನಿಶ್ಚಯಿಸಿಕೊಂಡು, ನಿರ್ವೃತಸ್ಸನ್-ಆನಂದಿಸುವವನಾಗಿ, ಭಜೇತ-ಧ್ಯಾನಿಸಬೇಕು ॥ ೬ ॥

ಗೊಡವೆಯೇಕೆ ? ॥ ೪ ॥ ಬೀದಿಗಳಲ್ಲಿ ಹರಕುಬಟ್ಟೆಗಳು ಬಿದ್ದಿರುವುದಿಲ್ಲವೆ ? ಸಹಜವಾಗಿ ಪರೋಪಕಾರಿಗಳಾದ ಗಿಡಮರಗಳು ಫಲ, ಪರ್ಣ,ಮೊದಲಾದವುಗಳ ಭಿಕ್ಷೆಯನ್ನು ಕೊಡಲಾರವೆ ? ಪಾವನಗಳಾದ ಜೀವನದಿಗಳು ಬತ್ತಿಹೋದವೆ ? ನಿರಾತಂಕಗಳಾದ ಗವಿಗಳು ಮುಚ್ಚಿಹೋದವೆ? ಇವು ಯಾವುವಿಲ್ಲದಿದ್ದರೂ ಭಗವಂತನಾದ ಶ್ರೀಕಾಂತನು ಶರಣಾಗತರನ್ನು ಪೊರೆಯಲಾರನೆ ? ಇಂತಿರುವಾಗ ವಿವೇಕಿಯಾದವನು ಧನಮದದಿಂದ ಕೊಬ್ಬಿರುವ ದುರಾತ್ಮರನ್ನು ಸೇವಿಸುವುದೇಕೆ ? ॥ ೫ ॥

ಎಂದು ಪರವೈರಾಗ್ಯಸಂಪನ್ನನಾದ ಪುರುಷನು ತನ್ನ ಹೃದಯಪೀಠದಲ್ಲಿ ತನಗೆ ತಾನೇ ಸಿದ್ಧನಾಗಿಯೂ, ಪರಮಪ್ರಿಯನಾಗಿಯೂ, ಮೋಕ್ಷಸ್ವರೂಪನಾಗಿಯೂ, ಆದ್ಯಂತರಹಿತನಾಗಿಯೂ, ಕಲ್ಯಾಣಗುಣಪೂರ್ಣನಾಗಿಯೂ, ಧ್ಯಾನಮಾತ್ರದಿಂದಲೇ ಜನನ ಮರಣರೂಪವಾದ ಸಂಸಾರಕ್ಕೆ ಮೂಲವೆನಿಸಿರುವ ಅವಿದ್ಯೆಯನ್ನು ನಾಶಗೊಳಿಸುವವನಾಗಿಯೂ,ಇರುವ ಪರಮಾತ್ಮನಸ್ವರೂಪವನ್ನು ತಿಳಿದು ನಿಶ್ಚಯಜ್ಞಾನವನ್ನು ಪಡೆದು,ಪರಮಾನಂದಭರಿತನಾಗಿ ಧ್ಯಾನಿಸುತ್ತಿರುವನು ॥ ೬ ॥ ಅಯ್ಯಾ ಭೂಪಾಲನೆ ! ಭಗವಂತನನ್ನು

* ಭೋಜನಾಚ್ಛಾದನೇ ಚಿಂತಾಂ ವೃಥಾಕುರ್ವಂತಿ ವೈಷ್ಣವಾಃ । ಯೋಸೌ ವಿಶ್ವಂಭರೋ ದೇವಃ ಕಥಂ ಭಕ್ತಾನುಪೇಕ್ಷತೇ ॥ ಭಕ್ತರಾದವರು ಅನ್ನವಸ್ತ್ರಗಳಿಗಾಗಿ ವ್ಯರ್ಥವಾಗಿ ಚಿಂತಿಸುತ್ತಾರೆ, ಜಗದ್ರಕ್ಷಕನಾದ ಭಗವಂತನು ಅವರನ್ನು ಅಲಕ್ಷ್ಯಮಾಡುವುದಿಲ್ಲ.

ತೇ § ಪಶೂನಪತೀಂ ನಾಮ ಕುರ್ಯಾತ್ । ಪಶ್ಯನ್ ಜನಂ ಪತಿತಂ † ವೈತರಣ್ಯಾಂ ಸ್ವಕರ್ಮಜಾನ್ ಪರಿತಾಪಾನ್ ಜುಷಾಣಂ ॥ ೭ ॥ ಕೇಚಿತ್ಸ್ವದೇಹಾಂತ*ರ್ಹೃದಯಾವಕಾಶೇ ಪ್ರಾದೇಶಮಾತ್ರಂ ಪುರುಷಂ ವಸಂತಂ । ಚತುರ್ಭುಜಂ ಕಂಜ ರಥಾಂಗಶಂಖ ಗದಾಧರಂ ಧಾರಣಯಾ ಸ್ಮರಂತಿ ॥ ೮ ॥ ಪ್ರಸನ್ನವಕ್ತ್ರಂ ನಳಿನಾಯತೇಕ್ಷಣಂ ಕದಂಬ ಕಿಂಜಲ್ಕ ಪಿಶಂಗ ವಾಸಸಂ । ಲಸ

ತಯಾ-ಆ ವಿಷಯಚಿಂತನೆಯಿಂದ, ವೈತರಣ್ಯಾಂ - ವೈತರಣೀನದಿಗೆ ಸಮಾನವಾದ ಸಂಸಾರದಲ್ಲಿ, ಪತಿತಂ-ಬಿದ್ದು, ಸ್ವಕರ್ಮಜಾನ್-ತನ್ನ ಕರ್ಮಗಳಿಂದುಂಟಾದ, ಪರಿತಾಪಾನ್-ಆಧ್ಯಾತ್ಮಿಕಾದಿಗಳಾದ ತಾಪಗಳನ್ನು, ಜುಷಾಣಂ-ಅನುಭವಿಸುತ್ತಿರುವ, ಜನಂ-ಜನರನ್ನು, ಪಶ್ಯನ್-ನೋಡುತ್ತಾ, ಪಶೂನಿವತೇ-ಪಶುಗಳಂತಿರುವ ಕರ್ಮಜಡರನ್ನುಳಿದು, ಕೋವಾ - ಯಾವನುತಾನೇ, ತಾಂ-ಮೇಲೆಹೇಳಿದ, ಪರಾನುಚಿಂತಾಂ-ಭಗವಂತನಧ್ಯಾನವನ್ನು, ಅನಾದೃತ್ಯ - ಅಸಡ್ಡೆಮಾಡಿ, ಅಸತೀಂ-ಅಯೋಗ್ಯವಾದ, ಚಿಂತಾಂ-ವಿಷಯಚಿಂತೆಯನ್ನು, ಕುರ್ಯಾತ್‌ನಾಮ-ಮಾಡಿಯಾನು ? ॥ ೭ ॥ ಕೇಚಿತ್-ಕೆಲವರು, ಸ್ವದೇ...ಶೇ ಸ್ವ-ತಮ್ಮ, ದೇಹ-ಶರೀರದ, ಅಂತಃ-ಒಳಗಿರುವ, ಹೃದಯ-ಹೃದಯಕಮಲದ, ಅವಕಾಶೇ-ಪ್ರದೇಶದಲ್ಲಿ, ವಸಂತಂ-ನೆಲಸುತ್ತಿರುವ, ಪ್ರಾದೇಶಮಾತ್ರಂ - ಗೇಣುಪ್ರಮಾಣವುಳ್ಳ, ಚತುರ್ಭುಜಂ - ನಾಲ್ಕುತೋಳುಳ್ಳ, ಕಂಜ ..ರಂ, ಕಂಜ-ಪದ್ಮವು, ರಥಾಂಗ-ಚಕ್ರವು, ಶಂಖ-ಶಂಖವು, ಗದಾ-ಗದೆಯು, ಇವುಗಳನ್ನು, ಧರಂ-ಧರಿಸಿರುವ, ಪುರುಷಂ - ವಿಷ್ಣುವನ್ನು, ಧಾರಣಯಾ - ಧಾರಣೆಯಿಂದ, ಸ್ಮರಂತಿ-ಧ್ಯಾನಿಸುತ್ತಾರೆ ॥ ೮ ॥ ಪ್ರಸನ್ನವಕ್ತ್ರಂ - ನಗೆಮೊಗವುಳ್ಳ, ನಳಿ...ಣಂ, ನಳಿನ - ಕಮಲಪತ್ರದಂತೆ, ಆಯತ-ಅಗಲವಾದ, ಈಕ್ಷಣಂ - ಕಣ್ಣುಗಳುಳ್ಳ, ಕದಂಬ...ಸಂ, ಕದಂಬ - ಕದಂಬಪುಷ್ಪದ, ಕಿಂಜಲ್ಕ-ಕೇಸರದಂತೆ, ಪಿಶಂಗ-ಹೊಂಬಣ್ಣವಾದ, ವಾಸಸಂ-ಪೀತಾಂಬರವುಳ್ಳ, ಲಸ...ದಂ, ಲಸತ್-ಹೊಳೆಯುತ್ತಿ

ಧ್ಯಾನಿಸದೆ, ಪ್ರಪಂಚವಿಷಯಗಳನ್ನು ಚಿಂತಿಸುವುದರಿಂದ ವೈತರಣಿಯಂತೆ ಭಯಂಕರವಾದ ಜನನ ಮರಣ ಪ್ರವಾಹದಲ್ಲಿ ಮುಳುಗಿ, ತಮ್ಮ ಕರ್ಮಗಳಿಂದುಂಟಾದ ತಾಪತ್ರಯದಿಂದ ಬಳಲಿ ಬೆಂಡಾಗಿ ಕಂಗೆಟ್ಟಿರುವ ಜನರನ್ನು ನೋಡುತ್ತಿದ್ದರೂ, ನಶ್ವರಫಲಾಸಕ್ತರಾಗಿ ಪಶುಗಳಂತಿರುವ ಕರ್ಮಜಡರುಹೊರತು, ವಿವೇಕಿ ಯಾವನುತಾನೇ ಸಂಸಾರತಾರಕವಾದ ಪರಮಾತ್ಮಧ್ಯಾನವನ್ನುಳಿದು ಅಯೋಗ್ಯವಾದ ವಿಷಯಚಿಂತೆಯನ್ನು ಮಾಡುವನು? ॥ ೭ ॥ ಇಂತಿರುವುದರಿಂದ ಸರ್ವಪ್ರಕಾರದಿಂದಲೂ ಭಗವದ್ಧಾರಣೆಯನ್ನೇ ಮಾಡುವುದು ಶ್ರೇಯಸ್ಕರವೆಂದುತಿಳಿದು ಮಹಾತ್ಮರು ತಮ್ಮ ಹೃದಯಾಕಾಶದಲ್ಲಿ ಪ್ರಾದೇಶಪ್ರಮಾಣದಿಂದ ವಾಸಿಸುತ್ತಾ, ಚತುರ್ಭುಜನಾಗಿ, ಶಂಖ, ಚಕ್ರ, ಗದಾ, ಪದ್ಮಗಳನ್ನುಧರಿಸಿ, ದೇದೀಪ್ಯಮಾನನಾದ ಪರಮಪುರುಷನನ್ನುಧ್ಯಾನಿಸುವರು ॥ ೮ ॥

ಇಂತು ಧಾರಣಾತತ್ಪರನಾದವನು, ತಾವರೆಯೆಸಳಿನಂತೆ ವಿಶಾಲವಾದ ಕಣ್ಣುಗಳಿಂದ

---

§ ಶ್ರು. ಯಥಾಪಶುರೇವಂ ಸದೇವಾನಾಂ-ಕರ್ಮಜಡರಾದವರು ಪಶುಗಳಂತೆ ದೇವತೆಗಳಿಗೆ ಉಪಕಾರಿಗಳಾಗಿ ಸ್ವಾರ್ಥವನ್ನು ಕಳೆದುಕೊಳ್ಳುವುದರಿಂದ ಇವರಿಗೆ ಪಶುಸಾಮ್ಯವು ಹೇಳಲ್ಪಟ್ಟಿರುವುದು.

† ಯಮಪುರಿಯ ಬಾಗಿಲಲ್ಲಿರುವನದಿ

ನ್ಮಹಾರತ್ನ ಹಿರಣ್ಮಯಾಂಗದಂ ಸ್ಫುರನ್ಮಹಾರತ್ನ ಕಿರೀಟಕುಂಡಲಂ॥೯॥ಉ
ನ್ನಿದ್ರಹೃತ್ಪಂಕಜಕರ್ಣಿಕಾಲಯೇ ಯೋಗೇಶ್ವರಾಸ್ಥಾಪಿತಪಾದಪಲ್ಲವಂ ।
ಶ್ರೀಲಕ್ಷ್ಮಣಂ ಕೌಸ್ತುಭರತ್ನಕಂಧರ ಮಮ್ಲಾನಲಕ್ಷ್ಮ್ಯಾ ವನಮಾಲಯಾ
ಚಿತಂ ॥ ೧೦ ॥ ವಿಭೂಷಿತಂ ಮೇಖಲಯಾಂಗುಲೀಯಕೈ ರ್ಮಹಾಧನೈ
ರ್ನೂಪುರ ಕಂಕಣಾದಿಭಿಃ । ಸ್ನಿಗ್ಧಾಮಲಾಕುಂಚಿತ ನೀಲಕುಂತಲೈ ರ್ವಿ
ರೋಚಮಾನಾನನ ಹಾಸಪೇಶಲಂ ॥ ೧೧ ॥ ಅದೀನಲೀಲಾಹಸಿತೇಕ್ಷಣೋ
ಲ್ಲಸ ದ್ಭ್ರೂಭಂಗಸಂಸೂಚಿತಭೂರ್ಯನುಗ್ರಹಂ । ಈಕ್ಷೇತ ಚಿಂತಾಮ

ರುವ, ಹಿರಣ್ಮಯ-ಚಿನ್ನದ, ಅಂಗದಂ-ಭುಜಕೀರ್ತಿಗಳುಳ್ಳ, ಸ್ಫುರ....ಲಂ, ಸ್ಫುರತ್ - ಪ್ರಕಾಶಮಾನವಾದ, ಮಹಾರತ್ನ-ಉತ್ತಮರತ್ನಗಳನ್ನು ಕೆತ್ತಿದ, ಕಿರೀಟ-ಕಿರೀಟವು, ಕುಂಡಲಂ-ಕಡಕುಗಳೂ ಉಳ್ಳ ॥

ಉನ್ನಿದ್ರ...ಯೇ, ಉನ್ನಿದ್ರ - ಅರಳಿದ, ಹೃತ್ಪಂಕಜ - ಹೃದಯಕಮಲದ, ಕರ್ಣಿಕಾ-ಗಂಟೆಂಬ, ಆಲಯೇ-ಮನೆಯಲ್ಲಿ, ಯೋಗೇಶ್ವರ - ಮಹಾಯೋಗಿಗಳಿಂದ, ಆಸ್ಥಾಪಿತ-ನೆಲೆಗೊಳಿಸಲ್ಪಟ್ಟ, ಪಾದಪಲ್ಲವಂ-ಚಿಗುರಿನಂತಿರುವ ಪಾದಗಳುಳ್ಳ, ಶ್ರೀಲಕ್ಷ್ಮಣಂ-ಲಕ್ಷ್ಮೀದೇವಿಯೆಂಬ ಗುರುತುಳ್ಳ, ಕೌಸ್ತುಭರತ್ನಕಂಧರಂ-ಕಂಠದಲ್ಲಿ ಕೌಸ್ತುಭವನ್ನು ಧರಿಸಿರುವ, ಅಮ್ಲಾನಲಕ್ಷ್ಮ್ಯಾ- ಕಾಂತಿಗೆಡದಿರುವ, ವನಮಾಲಯಾ-ವನಮಾಲೆಯಿಂದ, ಆಚಿತಂ-ವ್ಯಾಪ್ತನಾದ ॥ ೧೦ ॥ ಮೇಖಲಯಾ-ಉಡುದಾರದಿಂದಲೂ, ಮಹಾಧನೈಃ-ಬಹಳಬೆಲೆಯುಳ್ಳ, ಅಂಗುಲೀಯಕೈಃ-ಉಂಗುರಗಳಿಂದಲೂ, ನೂಪುರಕಂಕಣಾದಿಭಿಃ-ನೂಪುರ-ಕಾಲಂದುಗೆ, ಕಂಕಣ-ಕೈಕಡಗ, ಆದಿಭಿಃ-ಮೊದಲಾದವುಗಳಿಂದ, ವಿಭೂಷಿತಂ-ಅಲಂಕರಿಸಲ್ಪಟ್ಟ ಸ್ನಿಗ್ಧಾ...ಲೈಃ, ಸ್ನಿಗ್ಧ-ನುಣುಪಾದ, ಅಮಲ-ನಿರ್ಮಲವಾದ, ಆಕುಂಚಿತ-ವಕ್ರಗಳಾದ, ನೀಲ-ಕರಿದಾದ. ಕುಂತಲೈಃ-ಮುಂಗುರುಳಿಂದ, ವಿರೋ...ಲಂ, ವಿರೋಚಮಾನ-ಪ್ರಕಾಶಮಾನವಾದ, ಆನನ-ಮುಖದಲ್ಲಿರುವ,ಹಾಸ-ನಗೆಯಿಂದ,ಪೇಶಲಂ-ಸುಂದರನಾದ ॥೧೧॥ ಅದೀನ...ಹಂ, ಅದೀನ-ಉದಾರವಾದ ಲೀಲಾ-ವಿಲಾಸದಿಂದುಂಟಾದ, ಹಸಿತ-ನಗೆಯಿಂದಕೂಡಿದ, ಈಕ್ಷಣ-ನೋಟದಿಂದ, ಉಲ್ಲಸತ್-ಹೊಳೆಯುತ್ತಿರುವ, ಭ್ರೂಭಂಗ-ಭ್ರೂವಿಕ್ಷೇಪಗಳಿಂದ, ಸಂಸೂಚಿತ - ಸಂಪೂರ್ಣವಾಗಿಸೂಚಿಸಲ್ಪಟ್ಟ, ಭೂರಿ-ಅಧಿಕವಾದ, ಅನುಗ್ರಹಂ-ಅನುಗ್ರಹವುಳ್ಳ, ಚಿಂತಾಮಯಂ-ಧ್ಯಾನವಿಷಯನಾಗಿರುವ, ಏತಂ-ಈ, ಈಶ್ವರಂ-

---

ಕಂಗೊಳಿಸುತ್ತಾ, ಕದಂಬಕೇಸರದಂತೆ ಹೊಂಬಣ್ಣವಾದ ಕನಕಾಂಬರಗಳನ್ನು ಧರಿಸಿ, ಮಣಿಗಣದಿಂದ ಅಣಿಯಾಗಿ ತಣಗುಟ್ಟುತ್ತಿರುವ ಅಂಗದ, ಕಿರೀಟ, ಕುಂಡಲಗಳಿಂದಲಂಕೃತನಾಗಿ, ವಿಕಸಿತಹೃದಯಾರವಿಂದ ಕರ್ಣಿಕಾಮಧ್ಯದಲ್ಲಿ ಮಹಾಯೋಗಿಗಳಿಂದ ನೆಲೆಗೊಳಿಸಿಕೊಂಡ ಪಾದಪಲ್ಲವಗಳಿಂದ ಸಲ್ಲಲಿತನಾಗಿ,ಇಂದಿರಾಮಂದಿರವಾದ ವಕ್ಷಸ್ಥಲದಿಂದಲೂ, ಕೌಸ್ತುಭಕಾಂತಿಯಿಂದ ನಿಸ್ತುಲವಾದ ಕಂಠದಿಂದಲೂ, ಕಳೆಗುಂದದ ವನಮಾಲೆಯಿಂದಲೂ ಶೋಭಾಯಮಾನನಾಗಿ, ಮಣಿಮಯವಾದ ಕಟಿಸೂತ್ರವನ್ನು ಬಿಗಿದು, ತಳತಳಿಸುವ ಉಂಗುರಗಳಂತಳೆದು,ಅಮೂಲ್ಯಗಳಾದ ನೂಪುರ, ಕಂಕಣಾದಿಗಳಿಂದ ರಾರಾಜಮಾನನೆನಿಸಿ, ನುಣುಪಾಗಿಯೂ, ನಿರ್ಮಲಗಳಾಗಿಯೂ, ವಕ್ರಗಳಾಗಿಯೂ, ಇರುವ ಮುಂಗುರುಳಿಂದ ಬೆಳಗುತ್ತಿರುವ ಮುಖಚಂದ್ರನಿಂದ ಮಂದಹಾಸವೆಂಬ ಬೆಳದಿಂಗಳನ್ನು ಬೀರುತ್ತಾ, ಉದಾರಗಳಾದ ವಿಲಾಸಗಳಿಂದ ಹೊರಹೊಮ್ಮಿದ ಕಿರುನಗೆಗೂಡಿದೋರೆನೋಟಗಳಿಂದ

ಯ ಮೀಕ್ಷೇತ ವಿಶ್ವೇಶ್ವರಂ ಯಾವನ್ಮನೋ ಧಾರಣಯಾವತಿಷ್ಠತೇ ॥ ೧೨ ॥ ಏಕೈಕಶೋಂಗಾನಿ ಧಿಯಾನುಭಾವಯೇತ್ ಪಾದಾದಿ ಯಾವದ್ಧಸಿತಂ ಗದಾಭೃತಃ। ಜಿತಂ ಜಿತಂ ಸ್ಥಾನ ಮಪೋಹ್ಯ ಧಾರಯೇತ್ಪರಂ ಪರಂ ಶುಧ್ಯತಿ ಧೀರ್ಯಥಾ ಯಥಾ ॥ ೧೩ ॥ ಯಾವನ್ನಜಾಯೇತ ಪರಾವರೇಽಸ್ಮಿನ್ ವಿಶ್ವೇಶ್ವರೇ ದ್ರಷ್ಟರಿ ಭಕ್ತಿಯೋಗಃ। ತಾವತ್ ಸ್ಥವೀಯಃ ಪುರುಷಸ್ಯರೂಪಂ ಕ್ರಿಯಾವಸಾನೇ ಪ್ರಯತಃ ಸ್ಮರೇತ ॥ ೧೪ ॥ *ಸ್ಥಿರಂ ಸುಖಂ ಚಾಸನ ಮಾಸ್ಥಿ

ಭಗವಂತನನ್ನು, ಮನಃ-ಮನಸಸ್ಸು, ಯಾವತ್ - ಎಲ್ಲಿಯವರೆಗೆ, ಧಾರಣಯಾ - ಧಾರಣೆಯಿಂದ, ಅವತಿಷ್ಠತೇ-ಚೆನ್ನಾಗಿಗ್ರಹಿಸುವುದೋ, ತಾವತ್-ಅಲ್ಲಿಯವರೆಗೂ, ಈಕ್ಷೇತ-ಉಪಾಸನೆಮಾಡಬೇಕು ॥ ೧೨ ॥

ಪಾದಾದಿ-ಪಾದಮೊದಲುಗೊಂಡು, ಯಾವದ್ಧಸಿತಂ-ಮಂದಹಾಸವುಳ್ಳ ಮುಖದವರೆಗೂ, ಗದಾಭೃತಃ-ವಿಷ್ಣುವಿನ, ಅಂಗಾನಿ-ಅಂಗಗಳನ್ನು, ಏಕೈಕಶಃ-ಒಂದೊಂದಾಗಿ, ಧಿಯಾ-ಬುದ್ಧಿಯಿಂದ, ಅನುಭಾವಯೇತ್ - ಧ್ಯಾನಿಸಬೇಕು. ಜಿತಂ - ಧ್ಯಾನದಿಂದಗೆದ್ದ, ಸ್ಥಾನಂ - ಆ ಆ ಅವಯವವನ್ನು, ಅಪೋಹ್ಯ-ಬಿಟ್ಟು, ಧೀಃ-ಬುದ್ಧಿಯು, ಯಥಾಯಥಾ-ಹೇಗೆಹೇಗೆ, ಶುಧ್ಯತಿ-ಸ್ವಚ್ಛವಾಗುವುದೋ, ತಥಾತಥಾ-ಹಾಗೆಹಾಗೆ, ಪರಂಪರಂ-ಮುಂದಮುಂದಣಸ್ಥಾನವನ್ನು, ಧಾರಯೇತ್ - ಧ್ಯಾನಿಸಬೇಕು ॥ ೧೩ ॥ ಪರಾವರೇ-ಸಕಲ ದೇವತೆಗಳಿಗೂ ಉತ್ತಮನಾದ, ವಿಶ್ವೇಶ್ವರೇ-ಜಗನ್ನಾಯಕನಾದ, ದ್ರಷ್ಟರಿ-ಸಾಕ್ಷಿಸ್ವರೂಪನಾದ, ಅಸ್ಮಿನ್-ಈ ವಿಷ್ಣುವಿನಲ್ಲಿ, ಯಾವತ್-ಎಲ್ಲಿಯವರೆಗೂ, ಭಕ್ತಿಯೋಗಃ ಭಕ್ತಿಯೆಂಬುದು, ನಜಾಯೇತ-ಉಂಟಾಗಲಾರದೋ, ತಾವತ್-ಅಲ್ಲಿಯವರೆಗೂ, ಕ್ರಿಯಾವಸಾನೇ, ಕ್ರಿಯಾ-ನಿತ್ಯಕರ್ಮಗಳ, ಅವಸಾನೇ-ಕಡೆಯಲ್ಲಿ, ಪ್ರಯತಃ-ಪ್ರಯತ್ನವುಳ್ಳವನಾಗಿ, ಪುರುಷಸ್ಯ-ಭಗವಂತನ, ಸ್ಥವೀಯಃ-ಅತ್ಯಂತ ಸ್ಥೂಲವಾದ, ರೂಪಂ-ವಿರಾಡ್ರೂಪವನ್ನು, ಸ್ಮರೇತ - ಧ್ಯಾನಿಸಬೇಕು, ॥ ೧೪ ॥ ಹೇ ಅಂಗ-ಎಲೈ ರಾಜನೆ? ಯತಿಃ-ಪ್ರಯತ್ನಶಾಲಿಯಾದಮುನಿಯು, ಯದಾ-ಯಾವಾಗ, ಇಮಂ ಲೋಕಂ - ಈಕಳೇಬರ

ಮೆರೆಯುತ್ತಿರುವ ಭ್ರೂಭಂಗಗಳಿಂದ ಭಕ್ತರನ್ನನುಗ್ರಹಿಸುತ್ತಾ, ದಿವ್ಯಮಂಗಳವಿಗ್ರಹನಾದ ಭಗವಂತನನ್ನು ಧ್ಯಾನಕ್ಕೆ ವಿಷಯನನ್ನಾಗಿ ಮಾಡಿಕೊಂಡು, ತನ್ನ ಮನಸ್ಸುಧಾರಣೆಯಿಂದ ಸ್ತಿಮಿತವಾಗಿ ನಿಲ್ಲುವವರೆಗೂ ಏಕಾಗ್ರತೆಯಿಂದ ಧ್ಯಾನಿಸುತ್ತಿರಬೇಕು॥F॥೧೦-೧೧-೧೨ ॥ ಈವಿಧವಾದ ಸಮಗ್ರರೂಪಧ್ಯಾನದಲ್ಲಿ ಅಸಮರ್ಥನಾದವನು ಗದಾಪಾಣಿಯಾದ ವಾಸುದೇವಮೂರ್ತಿಯ ಅವಯವಗಳಲ್ಲಿ, ಪಾದವು ಮೊದಲು ಮಂದಹಾಸದಿಂದ ಕೂಡಿದ ಮುಖಮಂಡಲದವರೆಗೂ, ಒಂದೊಂದೇ ಅಂಗವನ್ನು ಬುದ್ಧಿಯಿಂದ ಧ್ಯಾನಿಸುತ್ತಾ, ಅಪ್ರಯತ್ನವಾಗಿ ಮನಸ್ಸಿನಲ್ಲಿ ಹೊಳೆದುಜಿತವಾದ ಅಂಗವನ್ನು ಬಿಡುತ್ತಾ, ತನ್ನಬುದ್ಧಿಯು ನಿರ್ಮಲವಾದಹಾಗೆಲ್ಲಾ ಮೇಲಮೇಲಣ ಅಂಗವನ್ನು ಧ್ಯಾನಿಸುತ್ತಾ ಬರಬೇಕು ॥೧೩॥

ಬ್ರಹ್ಮಾದಿಗಳಿಗಿಂತಲೂ ಉತ್ತಮನಾಗಿಯೂ, ಜಗನ್ನಾಯಕನಾಗಿಯೂ, ಸರ್ವಸಾಕ್ಷಿಯಾಗಿಯೂ, ಇರುವ ವಾಸುದೇವಮೂರ್ತಿಯಲ್ಲಿ ಪರಮಪ್ರೇಮರೂಪವಾದ ಭಕ್ತಿಯೋಗವುಂಟಾಗುವವರೆಗೂ, ಮುಮುಕ್ಷುವಾದವನು ಮಾಡಬೇಕಾದ ನಿತ್ಯಕರ್ಮಗಳನ್ನು ಮಾಡುತ್ತಾ, ಕಡೆಯಲ್ಲಿ ಪರಿಶುದ್ಧಮನಸ್ಕನಾಗಿ ಭಗವಂತನ ಅತ್ಯಂತಸ್ಥೂಲವಾದ ವಿರಾಡ್ದೇಹವನ್ನು ಧ್ಯಾನಿಸಬೇಕು ॥ ೧೪ ॥ ಎಲೈ ಪರೀಕ್ಷಿನ್ಮಹೀಂದ್ರನೆ ! ಇಂತು ಧ್ಯಾನನಿಷ್ಠ

ತೋ ಯತಿರ್ಯದಾ ಜಿಹಾಸು*ರಿಮಮಂಗ! ಲೋಕಂ। §ಕಾಲೇ ಚ ದೇಶೇ
ಚ ಮನೋ ನಸಜ್ಜಯೇತ್ ಪ್ರಾಣಾನ್ ನಿಯಚ್ಛೇನ್ಮನಸಾ ಜಿತಾಸುಃ ॥೧೫॥
ಮನ ಸ್ಸ್ವಬುಧ್ಯಾZಮಲಯಾ ನಿಯಮ್ಯ ಕ್ಷೇತ್ರಜ್ಞ ಏತಾಂ ನಿನಯೇ ತ್ತ

ವನ್ನು, ಜಿಹಾಸುಃ-ಬಿಡಲೆಳಸುವವನಾಗುವನೋ, ತದಾ-ಆಗ, ಸ್ಥಿರಂ-ಸ್ಥಿರವಾಗಿಯೂ, ಸುಖಂ-ಸುಖವಾಗಿಯೂ, ಆಸನಂ,ಆಸನದಲ್ಲಿ, ಆಸ್ಥಿತಃ-ಕುಳಿತುಕೊಂಡವನಾಗಿ, ಕಾಲೇ - ಪುಣ್ಯಕಾಲದಲ್ಲಿಯಾಗಲಿ, ದೇಶೇಚ-ಪುಣ್ಯಕ್ಷೇತ್ರದಲ್ಲಿಯಾಗಲಿ, ಮನಃ-ಮನಸ್ಸನ್ನು, ನಸಜ್ಜಯೇತ್-ಇರಿಸಬಾರದು, ಜಿತಾಸುಃ-ಪ್ರಾಣಾಯಾಮವನ್ನುಮಾಡಿ, ಮನಸಾ-ಮನಸ್ಸಿನಿಂದ, ಪ್ರಾಣಾನ್ - ಇಂದ್ರಿಯಗಳನ್ನು, ಯಚ್ಛೇತ್-ನಿಗ್ರಹಿಸಬೇಕು ॥ ೧೫ ॥ ಅಮಲಯಾ-ನಿರ್ಮಲವಾದ, ಸ್ವಬುಧ್ಯಾ - ತನ್ನಬುದ್ಧಿಯಿಂದ, ಮನಃ-

ನೂ, ಪ್ರಯತ್ನಶೀಲನೂ ಆದ ಮಹನೀಯನು ಯಾವಾಗ ಈ ಕಳೇಬರವನ್ನು ತೊರೆಯಲಪೇಕ್ಷಿಸುವನೋ, ಆಗ ಉತ್ತರಾಯಣ ಮೊದಲಾದ ಪುಣ್ಯಕಾಲದಲ್ಲಿಯಾಗಲಿ, ಕಾಶಿ, ಕಾಂಚಿ, ಮೊದಲಾದ ಪುಣ್ಯಕ್ಷೇತ್ರದಲ್ಲಿಯಾಗಲಿ ಮನಸ್ಸನ್ನಿಡದೆ, ಕುಶಾಜಿನಚೇಲಗಳಿಂದ ನಿರ್ಮಿತವಾದ ಆಸನದಲ್ಲಿ ಚಲಿಸದೆ ಸುಖವಾಗಿ ಕುಳಿತುಕೊಂಡು ಇಂದ್ರಿಯಗಳನ್ನು ವಶಗೊಳಿಸಿ, ಪ್ರಾಣಾಯಾಮವನ್ನು ಮಾಡಬೇಕು ॥ ೧೫ ॥ ಬಳಿಕ ನಿರ್ಮಲವಾದ ಬುದ್ಧಿಯಿಂದ ಮನಸ್ಸನ್ನು ಸ್ಥಿರಗೊಳಿಸಿ, † ಆಬುದ್ಧಿಯನ್ನು ಕ್ಷೇತ್ರಜ್ಞನಾದಜೀವನಲ್ಲಿಯೂ,

§ ಯೋಗಿಯು ಕಾಲದೇಶಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಮನಸ್ಸಿಡದೆ ಸ್ಥಿರಗೊಳಿಸಿ, ಇಂದ್ರಿಯಗಳನ್ನು ವಿಷಯಗಳಲ್ಲಿ ಬಿಡದೆ, ಆ ಇಂದ್ರಿಯಗಳಿಗೆ ಪ್ರೇರಕರಾದ ದಿಕ್ಕು ಮೊದಲಾದ ದೇವತೆಗಳನ್ನ ಮನೋಭಿಮಾನಿಯಾದ ಇಂದ್ರನಿಗಧೀನರೆಂದು ಧ್ಯಾನಿಸಬೇಕು.

* ವಿ. ಮನೋಭಿಮಾನಿಯಾದ ಇಂದ್ರನು ಬುದ್ಧ್ಯಭಿಮಾನಿಯಾದ ಉಮಾದೇವಿಗೆ ಅಧೀನನೆಂತಲೂ, ಉಮಾದೇವಿಯು, ಜೀವಾಂತರ್ಯಾಮಿಯಾದ ಹರಿಗೆ ಅಧೀನಳೆಂತಲೂ, ಧ್ಯಾನಿಸಿ, ಆ ಅಂತರ್ಯಾಮಿಯನ್ನು ಹೃದಯದಲ್ಲಿರುವ ಹರಿಯಲ್ಲಿಯೂ, ಆ ಹರಿಯನ್ನು ಸರ್ವಗತನಾದ ಹರಿಪರಮಾತ್ಮನಲ್ಲಿಯೂ ಲಯಗೊಳಿಸಿ ಐಕ್ಯಚಿಂತನೆಯನ್ನು ಮಾಡಬೇಕು.

† ಇಲ್ಲಿ ವಿವರಿಸುವ ಮಾಯಾವಾದಿಗಳ ತಾತ್ಪರ್ಯವೂ, ಮತ್ತು, "ವ್ಯಷ್ಟಿರೂಪವಾದ ಬುದ್ಧಿಯನ್ನು ಸಮಷ್ಟಿರೂಪನಾದ ಹಿರಣ್ಯಗರ್ಭಜೀವನಲ್ಲಿಯೂ, ಆ ಹಿರಣ್ಯಗರ್ಭಜೀವನನ್ನು ಶುದ್ಧ ಬ್ರಹ್ಮನಲ್ಲಿಯೂ ಲಯಗೊಳಿಸಬೇಕು" ಎಂಬ ಅದ್ವೈತಪ್ರಭೇದವೆನಿಸಿದ ಪೌರಾಣಿಕಾಭಿಪ್ರಾಯವೂ ಸಹ, ಪ್ರಮಾಣವಿರುದ್ಧಗಳಾದುದರಿಂದ ಅಂಗೀಕರಿಸತಕ್ಕವುಗಳಲ್ಲ. (ಪ್ರಮಾಣಗಳು)ಶ್ಲೋ॥ ಜೀವಸ್ಥೋ ಭಗವಾನ್ ವಿಷ್ಣುಃ ಕ್ಷೇತ್ರಜ್ಞ ಇತಿಗೀಯತೇ । ಹೃದ್ಗತಸ್ತು ಸಮಾತ್ಮಾಖ್ಯಸ್ತ್ವಿಪ್ಯಾತ್ಮೇತಿ ಭಣ್ಯತೇ । ಪರೌಹರೇ ರ್ಭವೇ ನ್ನೇತಿ ಸ್ತದೇಕತ್ವಸ್ಯ ಚಿಂತನಂ । ಅನ್ಯತ್ರ ತನ್ನಿಯಮ್ಯಾದಿ ಚಿಂತನಂ ನೀತಿರುಚ್ಯತೇ

ವಿಷ್ಣುವು ಜೀವಾಂತರ್ಯಾಮಿಯಾಗಿ "ಕ್ಷೇತ್ರಜ್ಞ" ನೆಂತಲೂ, ಹೃದಯಪುಂಡರೀಕ ಗತನಾಗಿ "ಆತ್ಮ" ನೆಂತಲೂ ಹೇಳಲ್ಪಡುವನು. ಅಂತರ್ಯಾಮಿ, ಹೃದ್ಗತ, ಸರ್ವಗತಾತ್ಮರಿಗೆ ಐಕ್ಯಚಿಂತನವನ್ನು ಮಾಡಬೇಕು. ಇತರರಾದ ಬ್ರಹ್ಮರುದ್ರಾದಿಗಳನ್ನು ವಿಷ್ಣುವಿಗಧೀನರನ್ನಾಗಿ ತಾರತಮ್ಯದಿಂದ ಚಿಂತಿಸಬೇಕೆಂದು ತಾತ್ಪರ್ಯವು.

ಮಾತ್ಮನಿ। ಆತ್ಮಾನ ಮಾತ್ಮನ್ಯವರುಧ್ಯ ಧೀರೋ ಲಬ್ಧೋಪಶಾಂತಿ *ರ್ವಿರ ಮೇತ ಕೃತ್ಯಾತ್ ॥ ೧೬ ॥ ನ ಯತ್ರ ಕಾಲೋಽನಿಮಿಷಾಂ ಪರಃ ಪ್ರಭುಃ ಕುತೋ ನುದೇವಾ ಜಗತಾಂ ಯ ಈಶಿರೇ। ನ ಯತ್ರ ಸತ್ವಂ ನರಜ ಸ್ತಮ ಶ್ಚ ನವೈ ವಿಕಾರೋ ನಮಹಾನ್ ಪ್ರಧಾನಂ ॥೧೭॥ ಪರಂ ಪದಂ ವೈಷ್ಣ ವ ಮಾಮನಂತಿ ತ ದ್ಯನ್ನೇತಿ ನೇತೀತ್ಯತ ದುತ್ಸಿಸೃಕ್ಷವಃ । ವಿಸೃಜ್ಯ ದೌ

ಮನಸ್ಸನ್ನು, ನಿಯಮ್ಯ-ನಿಗ್ರಹಿಸಿ,ಏತಾಂ-ಈ ಬುದ್ಧಿಯನ್ನು,ಕ್ಷೇತ್ರಜ್ಞೇ-ಬುಧ್ಯಾದಿಗಳಿಗೆದ್ರಷ್ಟ್ರವಾದ ಜೀವನಲ್ಲಿಯೂ, ತಂ-ಆಜೀವನನ್ನು, ಆತ್ಮನಿ-ಶುದ್ಧವಾದ ಜೀವಚೈತನ್ಯದಲ್ಲಿಯೂ, ನಿನಯೇತ್-ಸೇರಿಸಬೇಕು, ಆತ್ಮಾನಂ-ಆ ಶುದ್ಧಜೀವವನ್ನು, ಆತ್ಮನಿ-ಪರಮಾತ್ಮನಲ್ಲಿ, ಅವರುಧ್ಯ-ಲಯಗೊಳಿಸಿ, ಲಬ್ಧೋಪಶಾಂತಿಃ-ಉಪಶಾಂತಿಯನ್ನುಪಡೆದು, ಧೀರಃ-ಧೀರನಾಗಿ, ಕೃತ್ಯಾತ್ - ಕರ್ಮಕಲಾಪದಿಂದ, ವಿರಮೇತ್-ಬಿಡುಗಡೆಯನ್ನುಪಡೆಯಬೇಕು ॥ ೧೬ ॥ ಯತ್ರ-ಯಾವಆತ್ಮಸ್ವರೂಪದಲ್ಲಿ, ಸತ್ವಂ-ಸತ್ವಗುಣವು, ರಜಃ-ರಜೋಗುಣವು,ತಮಶ್ಚ-ತಮೋಗುಣವೂ,ನ-ಇಲ್ಲವೋ, ವಿಕಾರಃ-ಅಹಂಕಾರವು, ನ-ಇಲ್ಲವೋ; ಮಹಾನ್-ಮಹತ್ತು, ನ-ಇಲ್ಲವೊ, ಪ್ರಧಾನಂ-ಪ್ರಕೃತಿಯೂ, ನ-ಇಲ್ಲವೊ, ಯತ್ರ - ಎಲ್ಲಿ, ಅನಿಮಿಷಾಂ-ಬ್ರಹ್ಮಾದಿಗಳಿಗೆ, ಪರಃ-ಶ್ರೇಷ್ಠವಾದ, ಕಾಲಃ-ಕಾಲವು, ನಪ್ರಭುಃ - ಸಮರ್ಥವಲ್ಲವೊ, ಅಲ್ಲಿ, ಜಗತಾಂ-ಲೋಕಗಳನ್ನು, ಯೆಈಶಿರೇ-ಆಳುವ ಯಾವ ಬ್ರಹ್ಮಾದಿಗಳುಂಟೋ, ಅಂತಹ ದೇವಾಃ - ದೇವತೆಗಳು, ಕುತೋನು-ಸಮರ್ಥರಲ್ಲವೆಂದು ಹೇಳುವುದೇನು ! ॥ ೧೭ ॥ ಯತ್-ಯಾವಕಾರಣದಿಂದ, ನೇತಿನೇತೀತಿ, 'ಇದಲ್ಲ ಇದಲ್ಲ' ಎಂದು, ಅತತ್-ಆತ್ಮಕ್ಕಿಂತಲೂ ಬೇರೆಯಾದುದನ್ನು, ಉತ್ಸಿಸೃಕ್ಷವಃ - ಬಿಡಲೆಣಿಸುವವರಾಗಿ, ದೌರಾತ್ಮ್ಯಂ-ಶರೀರವೊದಲಾದವುಗಳಲ್ಲಿರುವ ಆತ್ಮಭ್ರಾಂತಿಯನ್ನು, ವಿಸೃಜ್ಯ-ಬಿಟ್ಟು, ಅನನ್ಯಸೌಹೃದಾಃ, ಅನನ್ಯ-ಏಕಾಂತವಾದ, ಸೌಹೃದಾಃ-ಭಕ್ತಿಯುಳ್ಳವರಾಗಿ, ಅರ್ಹಪದಂ-ಪೂಜ್ಯನಾದ

ಆ ಜೀವನನ್ನು †ತ್ವಂಪದಾರ್ಥದಿಂದ ಶೋಧಿತವಾದ ಚಿನ್ಮಾತ್ರದಲ್ಲಿಯೂ, ಆ ಚಿನ್ಮಾತ್ರವನ್ನು ‡ತತ್ಪದಾರ್ಥದಿಂದ ಶೋಧಿತವಾದ ಪರಮಾತ್ಮನಲ್ಲಿಯೂ, ಲಯಗೊಳಿಸಿ, ಉಪಶಾಂತಿಯನ್ನು ಪಡೆದು ಧೀರನಾಗಿ ವಿಧಿನಿಷೇಧಗಳಿಂದ ತುಂಬಿತುಳುಕುತ್ತಿರುವ ಕರ್ಮಕಲಾಪದಿಂದ ನಿವೃತ್ತನಾಗಬೇಕು ॥ ೧೬ ॥ ಯಾವ ಪರಮಾತ್ಮನಲ್ಲಿ ಸಕಲದೇವತೆಗಳಿಗೂ ಪ್ರಭುವಾದ ಕಾಲವಾಗಲಿ, ಲೋಕನಾಯಕರಾದ ದೇವತೆಗಳಾಗಲಿ, ಸತ್ವರಜಸ್ತಮೋಗುಣಗಳಾಗಲಿ, ಅಹಂಕಾರವಾಗಲಿ, ಮಹತ್ತತ್ವವಾಗಲಿ, ಮೂಲಪ್ರಕೃತಿಯಾಗಲಿ, ಯಾರಿಗೂ ಸಾಮರ್ಥ್ಯವಿಲ್ಲವೋ ॥ ೧೭ ॥ ಯಾವಕಾರಣದಿಂದ ನಿಷೇಧಪೂರ್ವಕವಾಗಿ

*"ಆಪ್ರಯಾಣಾತ್ತತ್ರಾಪಿಹಿದೃಷ್ಟಂ" ಎಂಬ ನ್ಯಾಯದಿಂದ ಮರಣಕಾಲದವರೆಗೂ ಭಗವದುಪಾಸನೆಯು ವಿಹಿತವಾಗಿರುವುದರಿಂದ ಅಲ್ಲಿಯವರೆಗೂ ಆ ಉಪಾಸನೆಗೆ ಬೇಕಾದ ಸಕಲ ಕರ್ಮಳನ್ನೂ ಮಾಡಲೇಬೇಕಾಗಿರುವುದು. ಆದಕಾರಣ ಮುಮುಕ್ಷುವಾದವನು ಅಂತಕಾಲದಲ್ಲಿ ಪರಮಾತ್ಮನಲ್ಲಿ ಸ್ವಾತ್ಮಸಮರ್ಪಣವನ್ನು ಮಾಡುವವರೆಗೂ ಕರ್ಮವನ್ನು ಬಿಡಕೂಡದೆಂದು ತಾತ್ಪರ್ಯವು.

† ಅವಿದ್ಯೆಗೆ ವಶನಾಗಿ ಅಲ್ಪಜ್ಞನೆನಿಸಿರುವ ಜೀವನು "ತ್ವಂ ಪದಾರ್ಥವು"

‡ ಮಾಯೆಯನ್ನು ವಶಗೊಳಿಸಿಕೊಂಡು ಸರ್ವಜ್ಞನೆನಿಸಿರುವ ಈಶ್ವರನೇ "ತತ್ಪದಾರ್ಥವು"

ರಾತ್ಮ್ಯ ಮನಸ್ಯ ಸೌಹೃದಾ ಹೃದೋಪಗೂಹ್ಯಾಽರ್ಹಪದಂ ಪದೇಪದೇ॥ ಇತ್ಥಂ ಮುನಿಸ್ತೂಪರಮೇ ದ್ವ್ಯವಸ್ಥಿತೋ ವಿಜ್ಞಾನದೃಗ್ವೀರ್ಯ ಸುರಂಧಿತಾಶಯಃ । ಸ್ವಪಾರ್ಷ್ಣಿನಾ ಪೀಡ್ಯ ಗುದಂ ತತೋಽನಿಲಂ ಸ್ಥಾನೇಷು ಷಟ್ಸೂನ್ನಮಯೇ ಜ್ಜಿತಕ್ಲಮಃ ॥ ೧೯ ॥ ನಾಭ್ಯಾಂ ಸ್ಥಿತಂ ಹೃದ್ಯಧಿರೋಪ್ಯ ತಸ್ಮಾ ದುದಾನ ಗತ್ಯೋರಸಿ ತಂ ನಯೇನ್ಮುನಿಃ । ತತೋನು ಸಂಧಾಯ ಧಿಯಾ ಮನಸ್ವೀ ಸ್ವತಾಲುಮೂಲಂ ಶನಕೈರ್ನಯೇತ ॥ ೨೦ ॥ ತಸ್ಮಾ

ವಿಷ್ಣೋರ್ವಿನಪಾದವನ್ನು, ಪದೇಪದೇ-ಅಡಿಗಡಿಗೂ, ಹೃದಾ-ಮನಸ್ಸಿನಿಂದ, ಉಪಗೂಹ್ಯ-ಆಲಿಂಗಿಸಿ, ವೈಷ್ಣವಂ-ವಿಷ್ಣುಸಂಬಂಧವಾದ, ತತ್ಪದಂ-ಆಸ್ಥಾನವನ್ನು, ಪರಂ - ನಿರತಿಶಯವನ್ನಾಗಿ, ಆಮನಂತಿ- ಹೇಳುವರೋ ॥ ೧೮ ॥ ತತ್-ಆದುದರಿಂದ, ವಿಜ್ಞಾನ...ಯಃ, ವಿಜ್ಞಾನ - ಶಾಸ್ತ್ರದಿಂದುಂಟಾದ, ದೃಕ್-ಜ್ಞಾನದ, ವೀರ್ಯ-ಬಲದಿಂದ, ಸುರಂಧಿತ-ತಡೆಯಲ್ಪಟ್ಟ, ಆಶಯಃ-ವಿಷಯಸಂಸ್ಕಾರಗಳುಳ್ಳ, . ಮುನಿಃ - ಜ್ಞಾನಿಯು, ಇತ್ಥಂ-ಹೀಗೆ, ವ್ಯವಸ್ಥಿತಃ - ಬ್ರಹ್ಮಸ್ವರೂಪನೆಂದು ನಿಶ್ಚಯಿಸಿಕೊಂಡು, ಉಪರಮೇತ್-ಸುಮ್ಮನಾಗಬೇಕು, ಸ್ವಪಾರ್ಷ್ಣಿನಾ-ತನ್ನ ಹಿಮ್ಮಡಿಯಿಂದ, ಗುದಂ-ಗುದಸ್ಥಾನವನ್ನು, ಆಪೀಡ್ಯ-ಪೀಡಿಸಿ, ಜಿತಕ್ಲಮಃ-ನಿರಾಯಾಸವಾಗಿ, ತತಃ-ಅಲ್ಲಿಂದ, ಅನಿಲಂ-ಪ್ರಾಣವಾಯುವನ್ನು, ಷಟ್ಸು-ನಾಭಿಮೊದಲಾದ ಆರು, ಸ್ಥಾನೇಷು-ಸ್ಥಾನಗಳಲ್ಲಿ, ಉನ್ನಮಯೇತ್-ಏರಿಸಬೇಕು ॥ ೧೯ ॥ ಮುನಿಃ-ಯೋಗಿಯು, ನಾಭ್ಯಾಂ-ನಾಭಿಯಲ್ಲಿ, ಸ್ಥಿತಂ-ಇದ್ದ ಪ್ರಾಣವಾಯುವನ್ನು, ಹೃದಿ-ಹೃದಯದಲ್ಲಿ, ಅಧಿರೋಪ್ಯ-ಏರಿಸಿ, ತಸ್ಮಾತ್-ಹೃದಯದಿಂದ, ತಂ-ಆವಾಯುವನ್ನು, ಉದಾನಗತ್ಯಾ-ಉದಾನವಾಯುವಿನ ಗಮನರೀತಿಯಿಂದ, ಉರಸಿ-ಎದೆಯಲ್ಲಿ, ನಯೇತ್-ಸೇರಿಸಬೇಕು, ತತಃ-ಆ ಎದೆಯಿಂದ, ಧಿಯಾ-ಬುದ್ಧಿಯಿಂದ, ಅನುಸಂಧಾಯ-ಯೋಚಿಸಿ, ಮನಸ್ವೀ-ಸ್ವಾಧೀನಮನಸ್ಕನಾದುದರಿಂದ, ಶನಕೈಃ-ಮೆಲ್ಲನೆ, ತಾಲುಮೂಲಂ-ಬಳದವಡೆಯನ್ನು, ನಯೇತ್-ಹೊಂದಿಸಬೇಕು ॥ ೨೦ ॥

ತಸ್ಮಾತ್-ಆ ತಾಲುಮೂಲದಿಂದ, ಭ್ರುವೋಃ-ಹುಬ್ಬುಗಳ, ಅಂತರಂ - ಮಧ್ಯವನ್ನು, ಉನ್ನಯೇತ-ಹೊಂದಿಸಬೇಕು, ನಿರು...ನಃ, ನಿರುದ್ಧ-ತಡೆಯಲ್ಪಟ್ಟ, ಸಪ್ತ-ಏಳಾದ, ಆಯತನ-ಸ್ಥಾನಗಳುಳ್ಳ

ಆತ್ಮವ್ಯತಿರಿಕ್ತವಾದೆಲ್ಲವನ್ನೂ ಬಿಡಲಪೇಕ್ಷಿಸಿ, ಮಹಾತ್ಮರಾದವರು ದೇಹ ಮೊದಲಾದವುಗಳಲ್ಲಿ ಆತ್ಮಭ್ರಾಂತಿಯನ್ನುಳಿದು ಅನನ್ಯಭಕ್ತಿಯಿಂದೊಡಗೂಡಿ ಅಡಿಗಡಿಗೂ ಭಗವಂತನ ಪಾದಕಮಲವನ್ನು ಹೃದಯದಲ್ಲಿ ನೆಲೆಗೊಳಿಸುತ್ತಾ, ಆ ಪರಮಾತ್ಮಸ್ವರೂಪವನ್ನೇ ಸರ್ವೋತ್ತಮವೆಂದು ಹೇಳುವರೋ, ಅಂತಹ ಪರಮಾತ್ಮನನ್ನು ಧ್ಯಾನಿಸಬೇಕು ॥೧೮॥

ಇಂತು ಧ್ಯಾನಯೋಗದಲ್ಲಿ ನಿಂತು, ಶಾಸ್ತ್ರವಿಚಾರದಿಂದುಂಟಾದ ಜ್ಞಾನಬಲದಿಂದ ವಿಷಯವಾಸನೆಗಳನ್ನು ತೊರೆದು ಮನನಶೀಲನಾಗಿ, ಬ್ರಹ್ಮಭಾವದಿಂದ ಕುಳಿತುಕೊಂಡು ಹಿಮ್ಮಡಿಯಿಂದ ಮೂಲಾಧಾರವನ್ನು ನಿರೋಧಿಸಿ, ಅನಾಯಾಸವಾಗಿ ಬ್ರಹ್ಮನಾಡೀನಿಬದ್ಧಗಳಾದ*ಷಟ್ಚಕ್ರಗಳಲ್ಲಿ ಸುಷುಮ್ನಾನಾಡಿಯ ಮಾರ್ಗದಿಂದ ವಾಯುವನ್ನು ಮೇಲಕ್ಕೇರಿಸಬೇಕು. ಅನಂತರದಲ್ಲಿ ನಾಭಿಸ್ಥಾನದ ಮಣಿಪೂರಚಕ್ರದಲ್ಲಿರುವ ಆ ವಾಯುವನ್ನು ಹೃ

* ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ.

ದ್ಭ್ರುವೋ ರಂತರ ಮುನ್ನಯೇತ ನಿರುದ್ಧ ಸಪ್ತಾಯತನೋಽನಪೇಕ್ಷಃ । ಸ್ಥಿತ್ವಾ ಮುಹೂರ್ತಾರ್ಧ ಮಕುಂಠದೃಷ್ಟಿ ರ್ನಿರ್ಭಿದ್ಯ ಮೂರ್ಧನ್*ವಿಸೃಜೇತ್ ಪರಂಗತಃ ॥ ೨೦ ॥ ಯದಿ ಪ್ರಯಾಸ್ಯನ್ ನೃಪ! ಪಾರಮೇಷ್ಠ್ಯಂ ವೈಹಾಯಸಾನಾ ಮುತ ಯದ್ವಿಹಾರಂ । ಅಷ್ಟಾಧಿಪತ್ಯಂ ಗುಣಸನ್ನಿವಾಯೇ ಸಹೈವ ಗಚ್ಛೇ ನ್ಮನಸೇಂದ್ರಿಯೈಶ್ಚ ॥ ೨೧ ॥ †ಯೋಗೇಶ್ವರಾಣಾಂ ಗತಿ

ವನಾಗಿ, ಅನಪೇಕ್ಷಃ-ಯಾವುದರಲ್ಲಿಯೂ ಆಸೆಯಿಲ್ಲದೆ, ಮುಹೂರ್ತಾರ್ಧಂ-ಅರ್ಧಮುಹೂರ್ತದ ವರೆಗೂ ಅಕುಂಠದೃಷ್ಟಿಃ-ನಿಶ್ಚಲವಾದನೋಟವುಳ್ಳವನಾಗಿ, ಮೂರ್ಧನ್-ತಲೆಯಲ್ಲಿ,ನಿರ್ಭಿದ್ಯ-ಭೇದಿಸಿ, ಪರಂ-ಪರಮಾತ್ಮನನ್ನು, ಗತಃ-ಹೊಂದಿದವನಾಗಿ. ವಿಸೃಜೇತ್-ದೇಹೇಂದ್ರಿಯಗಳನ್ನು ಬಿಡಬೇಕು ॥ ೨೧ ॥ ನೃಪ - ಎಲೈರಾಜನೇ ? ಪಾರಮೇಷ್ಠ್ಯಂ-ಬ್ರಹ್ಮಲೋಕವನ್ನಾಗಲಿ, ಉತ - ಅಥವಾ, ವೈಹಾಯಸಾನಾಂ - ಅಂಬರಚರರಾದಸಿದ್ಧಾದಿಗಳ, ಅಷ್ಟಾಧಿಪತ್ಯಂ - ಅಣಿಮಾದ್ಯಷ್ಟೈಶ್ವರ್ಯಗಳುಳ್ಳ, ವಿಹಾರಂಯತ್-ಯಾವ ಕ್ರೀಡಾಸ್ಥಾನವುಂಟೋ ಅದನ್ನಾಗಲಿ, ಗುಣಸನ್ನಿವಾಯೇ - ಗುಣಸಮುದಾಯರೂಪವಾದ ಬ್ರಹ್ಮಾಂಡದಲ್ಲಿಯಾಗಲಿ, ಪ್ರಯಾಸ್ಯನ್-ಹೋಗುವವನು, ಮನಸಾ-ಮನಸ್ಸಿನಿಂದಲೂ, ಇಂದ್ರಿಯೈಶ್ಚಸಹ-ಇಂದ್ರಿಯಗಳಿಂದಲೂ ಕೂಡಿಯೇ, ಗಚ್ಛೇತ್- ಹೋಗಬೇಕು ॥೨೨॥ ಪವ...ನಾಂ, ಪವನ-ವಾಯು

ದಯಸ್ಥಾನದ ಅನಾಹತಚಕ್ರದಲ್ಲೇರಿಸಿ, ಅಲ್ಲಿಂದ ಉದಾನಗತಿಯಿಂದ ಎದೆಯಲ್ಲಿರುವ ವಿಶುದ್ಧಚಕ್ರದಲ್ಲಿ ನಿಲ್ಲಿಸಿ ಮನಸ್ಸನ್ನು ನಿಗ್ರಹಿಸಿ, ತರುವಾಯ ಅದನ್ನು ತಾಲುಮೂಲವೆಂಬ ವಿಶುದ್ಧಚಕ್ರದ ತುದಿಯಲ್ಲಿ ಮೆಲ್ಲನೆ ನಿಲ್ಲಿಸಬೇಕು ॥ ೨೦ ॥ ಆ ತಾಲುಮೂಲದಿಂದ ಭ್ರೂಮಧ್ಯದಲ್ಲಿರುವಆಜ್ಞಾಚಕ್ರಕ್ಕೇರಿಸಿ,ಕಣ್ಣುಗಳು, ಕಿವಿಗಳು,ಮೂಗಿನಹೊಳ್ಳೆಗಳು, ಬಾಯಿಯೆಂಬ ಏಳುದಾರಿಗಳನ್ನೂ ನಿರೋಧಿಸಿ, ಕ್ರಮಮುಕ್ತನು ಆಸಿಸುವಂತೆ ಬ್ರಹ್ಮಲೋಕ ಮೊದಲಾದವುಗಳ ಭೋಗಗಳಿಗೆಆಸಿಸದೆ, ಬ್ರಹ್ಮಾನುಸಂಧಾನದಿಂದನಿಶ್ಚಲವಾದ ದೃಷ್ಟಿಯುಳ್ಳವನಾಗಿ ಅರ್ಧಮುಹೂರ್ತಕಾಲ ಅನುಸಂಧಾನವನ್ನು ಮಾಡುತ್ತಾ ಬ್ರಹ್ಮರಂಧ್ರವನ್ನು ಭೇದಿಸಿ ದೇಹೇಂದ್ರಿಯಗಳನ್ನುಳಿದು ಲಿಂಗಶರೀರವನ್ನು ಭಂಗಗೊಳಿಸಿಕೊಂಡು ಪರಮಪದವನ್ನು ಪಡೆಯುವನು ॥ ೨೧ ॥

ಅಯ್ಯಾ ಭೂಮಿಾಶನೆ ! ಇಲ್ಲಿಯವರೆಗೂ ಸದ್ಯೋಮುಕ್ತಿಯ ಕ್ರಮವನ್ನು ಹೇಳಿ

---

*೨೧ನೆ ಶ್ಲೋ—ವಿಸೃಜೇತ್-ಸ್ಥೂಲದೇಹವನ್ನು ಬಿಡಬೇಕು.

† ಮುಮುಕ್ಷುವಿಗೆ ಅರ್ಚಿರಾದಿ ಮಾರ್ಗವನ್ನು ಉಪದೇಶಿಸುವುದಕ್ಕಾಗಿ ಮೊದಲು, ಧೂಮಾದಿಮಾರ್ಗವು ಹೇಯವೆಂಬುದನ್ನು ತಿಳಿಯಪಡಿಸಬೇಕೆಂದು, ಧೂಮಾದಿ ಮಾರ್ಗದಲ್ಲಿ ಹೋಗುವವರು ಪಡೆಯಬೇಕಾದ ಲೋಕಗಳನ್ನು ವಿವರಿಸುವುದೇ ಈ ೨೨-೨೩ನೆಯ ಶ್ಲೋಕಗಳ ತಾತ್ಪರ್ಯವು. ಕೆಲವರು ,"ನಿರ್ಭಿದ್ಯಮೂರ್ಧನ್ ವಿಸೃಜೇತ್ಪರಂಗತಃ" ಎಂಬುದರಿಂದ ಜ್ಞಾನಿಗೆ ಸದ್ಯೋಮುಕ್ತಿಯು ಹೇಳಲ್ಪಟ್ಟಿತು; ಈ ಶ್ಲೋಕಗಳಿಂದ ಕ್ರಮಮುಕ್ತಿಯು ಹೇಳಲ್ಪಡುವುದೆಂಭಿಪ್ರಾಯಪಡುವರು· ಶಾಸ್ತ್ರಗಳಲ್ಲಿ ಸದ್ಯೋಮುಕ್ತಿಯೆಂಬುದು ಹೇಳಲ್ಪಡುವುದೇ ಇಲ್ಲವಾದುದರಿಂದ ಇದುಸರಿಯಲ್ಲ. ಯೋಗಿಯು ವೈಶ್ವಾನರಾದಿ ಲೋಕಗಳಿಗೆ ಹೋಗಬೇಕಾದರೆ ಲಿಂಗಶರೀರದೊಡನೆಯೇ ತೆರಳಬೇಕು.ಬ್ರಹ್ಮವನ್ನು ಹೊಂದುವವನನ್ನು ಲಿಂಗಶರೀರವು ಕೆಲವುದೂರಮಾತ್ರ ಹಿಂಬಾಲಿಸಿ ಬಳಿಕ ಬಿಟ್ಟುಹೋಗುವುದು, ಇದೇವಿಶೇಷವು.

ಮಾಹು ರಂತರ್ಬಹಿ ಸ್ತ್ರಿಲೋಕ್ಯಾಃ ಪವನಾಂತರಾತ್ಮನಾಂ । ನ ಕರ್ಮಭಿ
ಸ್ತಾಂ ಗತಿ ಮಾಪ್ನುವಂತಿ ವಿದ್ಯಾತಪೋ ಯೋಗ ಸಮಾಧಿಭಾಜಾಂ ॥೨೩॥
†ವೈಶ್ವಾನರಂ ಯಾತಿ ವಿಹಾಯಸಾ ಗತಃ ಸುಷುಮ್ನಯಾ ಬ್ರಹ್ಮಪಥೇನ ಶೋ
ಚಿಷಾ।ವಿಧೂತ ಕಲ್ಕೋಽಥ ಹರೇ ರುದಸ್ತಾತ್ ಪ್ರಯಾತಿ*ಚಕ್ರಂ ನೃಪ!

ಪಿನ, ಅಂತಃ - ಒಳಗಡೆಗಿರುವ, ಆತ್ಮನಾಂ - ಲಿಂಗಶರೀರವುಳ್ಳ, ಯೋಗೀಶ್ವರಾಣಾಂ - ಯೋಗಿಗಳಿಗೆ, ತ್ರಿಲೋಕ್ಯಾಃ- ಮೂರುಲೋಕಗಳ, ಅಂತರ್ಬಹಿಶ್ಚ - ಒಳಗೂ ಹೊರಗೂಸಹ, ಗತಿಂ-ಗಮನವನ್ನು, ಆಹುಃ-ಹೇಳುತ್ತಾರೆ, ವಿದ್ಯಾ...ಜಾಂ-ವಿದ್ಯಾ-ಉಪಾಸನೆಯು, ತಪಃ - ಭಗವದ್ಧರ್ಮವು, ಯೋಗ-ಅಷ್ಟಾಂಗಯೋಗವು, ಸಮಾಧಿ-ಜ್ಞಾನವು, ಇವುಗಳನ್ನು,ಭಾಜಾಂ - ಹೊಂದಿರುವವರಿಗೆ, ಯಾ-ಯಾವಗತಿಯುಂಟೋ, ತಾಂ-ಆ ಗತಿಯನ್ನು, ಕರ್ಮಭಿಃ-ಕರ್ಮಗಳಿಂದ, ನಾಪ್ನುವಂತಿ-ಹೊಂದುವುದಿಲ್ಲ॥೨೩॥ ಹೇನೃಪ-ಎಲೈರಾಜನೆ! ವಿಹಾಯಸಾ-ಆಕಾಶದಲ್ಲಿ, ಬ್ರಹ್ಮಪಥೇನ - ಬ್ರಹ್ಮಲೋಕಮಾರ್ಗದಿಂದ, ಗತಃ-ಹೋದವನಾಗಿ, ಶೋಚಿಷಾ-ತೇಜೋಮಯವಾದ, ಸುಷುಮ್ನಯಾ- ಸುಷುಮ್ನೆಯೆಂಬ ನಾಡಿಯಿಂದ, ವೈಶ್ವಾನರಂ-ಅಗ್ನ್ಯಭಿಮಾನಿದೇವತೆಯನ್ನು, ಯಾತಿ-ಹೊಂದುತ್ತಾನೆ, ಅಥ-ತರುವಾಯ, ವಿಧೂತಕಲ್ಕಃ, ವಿಧೂತ-ಕಳೆಯಲ್ಪಟ್ಟ, ಕಲ್ಕಃ-ಪಾಪವುಳ್ಳವನಾಗಿ.ಉದಸ್ತಾತ್-ಮೇಲ್ಗಡೆಯಲ್ಲಿರುವ, ಹರೇಃ-ವಿಷ್ಣುಸಂಬಂಧಿಯಾದ, ಶೈಂಶು

ದೆನು. ಇನ್ನು ಕ್ರಮಮುಕ್ತಿ ಪ್ರಕಾರವನ್ನು ವಿವರಿಸುವೆನು ಕೇಳು. ಬ್ರಹ್ಮನಿಗಾವಾಸವಾದ ಸತ್ಯಲೋಕವನ್ನಾಗಲಿ, ಅಣಿಮಾದ್ಯಷ್ಟೈಶ್ವರ್ಯಗಳಿಂದ ಕೂಡಿದ, ಗಗನಚಾರಿಗಳಾದ ದೇವಾದಿಗಳ ವಿಹಾರಸ್ಥಾನಗಳನ್ನಾಗಲಿ,ಗುಣಸಮುದಾಯರೂಪವಾದ ಬ್ರಹ್ಮಾಂಡವನ್ನಾಗಲಿ, ಹೊಂದಲಪೇಕ್ಷೆಯುಳ್ಳ ಯೋಗಿಗಳು ದೇಹಾವಸಾನಕಾಲದಲ್ಲಿ ಮನಸ್ಸಿನಿಂದಲೂ, ಇಂದ್ರಿಯಗಳಿಂದಲೂ, ಯುಕ್ತರಾಗಿಯೇ ಕಳೇಬರವನ್ನು ಬಿಡುವರು ॥ ೨೨ ॥ ಆದರೂ ಇವರು ಸಾಮಾನ್ಯರೆಂದರಿಯಬೇಡ. ಭಗವದುಪಾಸನೆಯು, ಭಗವದ್ಧರ್ಮವು, ಅಷ್ಟಾಂಗಯೋಗವು, ಅಪರೋಕ್ಷಜ್ಞಾನವು, ಇವುಗಳನ್ನು ಪಡೆದು, ವಾಯುಮಂಡಲದಲ್ಲಿ ಲಿಂಗಶರೀರವನ್ನು ಅಡಗಿಸಿಕೊಂಡು, ಮೂರುಲೋಕಗಳ ಒಳಗೂ ಹೊರಗೂ ಮತ್ತು ಮಹರ್ಲೋಕಾದಿಗಳಲ್ಲಿಯೂ, ಬ್ರಹ್ಮಾಂಡದಹೊರಗೂ ಒಳಗೂ ಸಂಚರಿಸುವ ಈ ಮಹಾಯೋಗಿಗಳ ಗತಿಯನ್ನು ಜನರು ಕರ್ಮಗಳಿಂದ ಎಂದಿಗೂ ಪಡೆಯಲಾರರು ॥ ೨೩ ॥ ಅನಂತರದಲ್ಲಿ ಆ ಯೋಗಿಯು ಗಗನಮಂಡಲದಲ್ಲಿ ಬ್ರಹ್ಮಲೋಕದ ಮಾರ್ಗದಿಂದ ತೆರಳುತ್ತಾ, ಜ್ಯೋತಿರ್ಮಯವಾದುದರಿಂದ ಶರೀರದ ಹೊರಗಡೆಯಲ್ಲಿಯೂ ವ್ಯಾಪಿಸಿರುವ ಸುಷುಮ್ನಾನಾಡಿಯ ಮೂಲಕವಾಗಿ, ಮೊದಲು ಅಗ್ನ್ಯಭಿಮಾನಿಯಾದ ವೈಶ್ವಾನರನನ್ನು ಹೊಂದಿ, ಸಕಲ ಕಲ್ಮಷಗಳನ್ನೂ ಕಳೆದುಕೊಂಡು, ಮೇಲ್ಗಡೆಯಲ್ಲಿರುವ ಶ್ರೀಹರಿಯ ಸಂಬಂಧಿಯಾದ ಶಿಂಶುಮಾರಾಶ್ರಯವಾದ ಜ್ಯೋತಿಶ್ಚಕ್ರವನ್ನು ಹೊಂದು

† ಪಿ. ಜೀವನು,ಹೃದಯಕಮಲಸ್ಥನಾದ ಪರಮಾತ್ಮನ ಅನುಗ್ರಹದಿಂದ ಪ್ರಕಾಶಿಸುವ ಸುಷುಮ್ನಾನಾಡಿಯ ಮಾರ್ಗವಾಗಿಹೊರಟು, ಬ್ರಹ್ಮರಂಧ್ರವನ್ನು ಭೇದಿಸಿ ಹೊರಗೂ ಆಕಾಶಮಾರ್ಗದಿಂದ ವೈಶ್ವಾನರನೆಂಬ ಆತಿವಾಹಿಕದೇವತೆಯನ್ನೂ, ಅಲ್ಲಿಂದ ಜ್ಯೋತಿರ್ಲೋಕ ಮೊದಲಾದುವನ್ನೂ, ಹೊಂದುವನು. [illegible] ಮೋಕ್ಷಮಾರ್ಗವು. * ಈ ಚಕ್ರಸ್ವರೂಪವು ಐದನೆಯಸ್ಕಂಧದಲ್ಲಿ ವರ್ಣಿಸಲ್ಪಡುವುದು.

ಶೈಂಶುಮಾರಂ ||೨೪|| *ತದ್ವಿಶ್ವನಾಭಿಂ ತ್ವತಿವರ್ತ್ಯ ವಿಷ್ಣೋ ರಣೀಯಸಾ ವಿರಜೇನಾತ್ಮನೈಕಃ | ನಮಸ್ಕೃತಂ ಬ್ರಹ್ಮವಿದಾ ಮುಪೈತಿ ಕಲ್ಪಾಯುಷೋ ಯದ್ವಿಬುಧಾ ರಮಂತೇ ||೨೫|| ಅಥೋ ಅನಂತಸ್ಯ ಮುಖಾZನಲೇನ ದಂದಹ್ಯಮಾನಂ ಸ ನಿರೀಕ್ಷ್ಯ ವಿಶ್ವಂ|ನಿರ್ಯಾತಿ ಸಿದ್ಧೇಶ್ವರಜುಷ್ಟಧಿಷ್ಣ್ಯಂ ಯ-ದ್ವೈತ † ಪರಾರ್ಧ್ಯಂ ತದು ಪಾರಮೇಷ್ಠ್ಯಂ ||೨೬|| ‡ಸಯತ್ರ ಶೋ

ಮಾರಂ-ಶೈಂಶುಮಾರವೆಂಬ, ಚಕ್ರಂ-ಚಕ್ರವನ್ನು, ಪ್ರಯಾತಿ - ಹೊಂದುತ್ತಾನೆ ||೨೪|| ವಿಶ್ವನಾಭಿಂ-ಪ್ರಪಂಚಕ್ಕೆ ಆಶ್ರಯನಾಗಿರುವ, ವಿಷ್ಣೋಃ-ವಿಷ್ಣುವಿನ, ತತ್-ಆ ಚಕ್ರವನ್ನು, ಅತಿವರ್ತ್ಯ - ಅತಿಕ್ರಮಿಸಿ, ಅಣೀಯಸಾ-ಅತಿಸೂಕ್ಷ್ಮವಾದ, ವಿರಜೇನ-ಲಿಂಗಶರೀರವನ್ನುಳಿದ, ಆತ್ಮನಾ-ತನ್ನಿಂದ, ಏಕಃ-ಅದ್ವಿತೀಯನಾಗಿ, ಯತ್-ಎಲ್ಲಿ, ಕಲ್ಪಾಯುಷಃ-ಕಲ್ಪಾಂತರದವರೆಗೂ ಬದುಕುವ, ವಿಬುಧಾಃ-ಭೃಗುಮೊದಲಾದವರು, ರಮಂತೇ-ಕ್ರೀಡಿಸುವರೋ, ಅಂತಹ, ನಮಸ್ಕೃತಂ - ಇತರರಿಂದ ನಮಸ್ಕರಿಸಲ್ಪಡುವ, ಬ್ರಹ್ಮವಿದಾಂ-ಜ್ಞಾನಿಗಳ ಸ್ಥಾನವನ್ನು, ಉಪೈತಿ-ಹೊಂದುತ್ತಾನೆ || ೨೫ ||

ಅಥೊ-ಅನಂತರದಲ್ಲಿ, ಸಃ - ಅವನು, ಅನಂತಸ್ಯ-ಆದಿಶೇಷನ, ಮುಖಾನಲೇನ-ಮುಖಾಗ್ನಿಯಿಂದ, ದಂದಹ್ಯಮಾನಂ-ಸುಡಲ್ಪಡುವ, ವಿಶ್ವಂ-ಜಗತ್ತನ್ನು, ನಿರೀಕ್ಷ್ಯ-ಕಂಡು, ಸಿದ್ಧೇ...ಷ್ಣ್ಯಂ, ಸಿದ್ಧೇಶ್ವರ-ಮ

ವನು || ೨೪ || ತರುವಾಯ ಸೂರ್ಯನೇ ಮೊದಲಾದ ಸಕಲಗ್ರಹಗಳಿಗೂ ಆಶ್ರಯವಾದ ಶಿಂಶುಮಾರಚಕ್ರವನ್ನು ಅತಿಕ್ರಮಿಸಿ, ಮುಂದಕ್ಕೆ ಸ್ವರ್ಗದವರುಕೂಡ ಸಂಚರಿಸಲಾರರಾದುದರಿಂದ ಅತಿಸೂಕ್ಷ್ಮವಾಗಿಯೂ, ನಿರ್ಮಲವಾಗಿಯೂ ಇರುವ ಲಿಂಗಶರೀರದಿಂದೊಡಗೂಡಿ, ಒಂಟಿಯಾಗಿ ತೆರಳುತ್ತಾ,ಮಹಾಕಲ್ಪದವರೆಗೂ ಆಯುಷ್ಯವುಳ್ಳ ಭೃಗುವೇ ಮುಂತಾದ ಮಹಾತ್ಮರಿಗಾವಾಸವೆನಿಸಿ, ಇತರರಿಂದ ನಮಸ್ಕೃತವಾದ ಮಹರ್ಲೋಕವನ್ನು ಹೊಂದುವನು ||೨೫|| ಬಳಿಕ ಆತನು ಆದಿಶೇಷನ ಮುಖದಿಂದುಂಟಾವ ಅಗ್ನಿಜ್ವಾಲೆಗಳಿಂದ

*ವಿ. ಮೂಲ. ಯೋಂತಃ ಪಚತಿ ಭೂತಾನಾಂ ಯಸ್ತು ಪತ್ಯಂಡ ಮಧ್ಯಗಃ | ಸೋಗ್ನಿ ರ್ವೈಶ್ವಾನರೋ ಮಾರ್ಗೋ ದೇವಾನಾಂ ಪಿತೃಣಾಂ ಮುನೇಃ|| ತಾ|| ಭೂತಗಳಲ್ಲಿ ಜಠರಾಗ್ನಿರೂಪದಿಂದ ಆಹಾರವನ್ನು ಜೀರ್ಣಗೊಳಿಸುತ್ತಾ,ಬ್ರಹ್ಮಾಂಡದ ಮಧ್ಯದಲ್ಲಿ ಪ್ರಕಾಶಿಸುವ ಅಗ್ನಿಯೇ ವೈಶ್ವಾನರನು,ಪಿತೃಯಾನ, ದೇವಯಾನ, ಬ್ರಹ್ಮಯಾನವೆಂಬ ಮೂರು ದಾರಿಗಳಿಂದ ತೆರಳುವಜನರಿಗೂ ಇದೇದಾರಿಯು. ದೇವಯಾನದಿಂದ ತೆರಳುವವರು ವೈಶ್ವಾನರನಿಗಿಂತಲೂ ಈಚೆಗಿರುವ ಲೋಕಗಳನ್ನು, ಹೊಂದುವರು. ಬ್ರಹ್ಮ, ದೇವ, ಪಿತೃಲೋಕಗಳಿಗೆ ಹೋಗುವವರೆಲ್ಲರೂ ಈಲೋಕವನ್ನು ಹೊಕ್ಕು ಮುಂದಕ್ಕೆ ತೆರಳುವರು.

† ಸಂಖ್ಯೆಗಳಲ್ಲಿ ಕಡೆಯ ಸಂಖ್ಯೆಗೆ ಪರಾರ್ಧವೆಂದು ಹೆಸರು.

‡ ವಿ. ಮೂಲ|| ದೇವಯಾನಂ ಪಿಂಗಳಾಭಿ ರಹಾನ್ಯೇತಿ ಶತಾಯುಷಾ | ರಾತ್ರೀ ರಿಡಾಭಿಃ ಪಿತೃಣಾಂ ವಿಷುವತ್ತಾಂ ಸುಷುಮ್ನಯಾ || ೨೬ || ತಾ|| ಶರೀರದ ಎಡಗಡೆಯಲ್ಲಿರುವ ನಾಡಿಗೆ ಇಡಾ ಎಂತಲೂ ಬಲಗಡೆಯಲ್ಲಿರುವ ನಾಡಿಗೆ ಪಿಂಗಳಾ ಎಂತಲೂ, ಮಧ್ಯದಲ್ಲಿರುವ ನಾಡಿಗೆ ಸುಷುಮ್ನಾ ಎಂತಲೂ ಹೆಸರು. ಯೋಗಿಯಾದವನು ಇಡಾನಾಡಿಯ ಮೂಲಕವಾಗಿ ಉತ್ಕ್ರಮಣವನ್ನು ಪಡೆದಲ್ಲಿ ಪಿತೃಲೋಕವನ್ನೂ, ಪಿಂಗಳಾನಾಡಿಯಮೂಲಕವಾಗಿ ಕಳೇಬರವನ್ನು ಬಿಟ್ಟಲ್ಲಿ ದೇವಲೋಕವನ್ನೂ, ಸುಷುಮ್ನಾಮಾರ್ಗವಾಗಿ ಶರೀರವನ್ನುಳಿದಲ್ಲಿ ಬ್ರಹ್ಮಲೋಕವನ್ನೂ ಹೊಂದುವನು. (ಪ್ರಮಾಣ) ದೇವಯಾನಸ್ಯ ಮಾರ್ಗಸ್ಥಾ ಅಹಶ್ಶಬ್ದಾಭಿಸಂಜ್ಞಿತಾಃ | ಪಿತೃಯಾನಸ್ಯ ಮಾರ್ಗಸ್ಥಾ ರಾತ್ರಿಶಬ್ದಾ ಹ್ವಯಾ ಮತಾಃ || ವಿಷುವತ್ತಾ ಬ್ರಹ್ಮಯಾನಂ ವಿಶೇಷೇಣ ಸುಖಂ ಯತಃ ||

ಕೋ ನ ಜರಾ ನಮೃತ್ಯುರ್ನಾರ್ತಿರ್ನಚೋದ್ವೇಗ ಋತೇ ಕುತಶ್ಚಿತ್ ।
ಯಚ್ಚಿತ್ತತೋದಃ ಕೃಪಯಾನಿದಂವಿದಾಂ ದುರಂತದುಃಖಪ್ರಭವಾನುದರ್ಶ
ನಾತ್ ॥ ೨೭ ॥ ತತೋ ವಿಶೇಷಂ ಪ್ರತಿಪದ್ಯ ನಿರ್ಭಯಸ್ತೇನಾತ್ಮನಾ

ಹಾಸಿದ್ಧರಿಂದ, ಜುಷ್ಟ-ಹೊಂದಲ್ಪಟ್ಟ, ಧಿಷ್ಣ್ಯಂ-ವಿಮಾನಗಳುಳ್ಳ, ದ್ವೈಪರಾರ್ಧ್ಯಂ - ಎರಡು ಪರಾರ್ಧ ಕಾಲವಿರುವ, ಯತ್-ಯಾವ, ಪಾರಮೇಷ್ಠ್ಯಂ-ಬ್ರಹ್ಮಲೋಕವುಂಟೋ, ತತ್ + ಉ = ತದು-ಅದನ್ನು, ನಿರ್ಯಾತಿ-ಹೊಂದುತ್ತಾನೆ ॥ ೨೬ ॥ ಅನಿದಂವಿದಾಂ-ಭಗವದ್ಧ್ಯಾನವನ್ನರಿಯದವರ, ದುರಂತ...ನಾತ್, ದುರಂತ-ಅಪಾರವಾದ, ದುಃಖ-ದುಃಖಗಳುಳ್ಳ, ಪ್ರಭವ-ಸಂಸಾರದ, ಅನುದರ್ಶನಾತ್-ನೋಟದಿಂದ, ಚಿತ್ತತೋದಃ-ಮನಸ್ಸಿಗುಂಟಾದ, ಯತ್-ಯಾವ ದುಃಖವುಂಟೋ,ಅದೋ ಋತೇ-ಇದನ್ನುಳಿದು, ಅಥವಾ, ಚಿತ್ತತೋದಃ-ಮನೋದುಃಖವೆಂಬುದು, ಯಾವುದುಂಟೋ ಇದನ್ನುಳಿದು, ಯತ್ರ-ಯಾವಲೋಕದಲ್ಲಿ, ಶೋಕೋನ-ದುಃಖವಿಲ್ಲವೋ, ಜರಾನ-ಮುಪ್ಪಿಲ್ಲವೋ,ನಮೃತ್ಯುಃ-ಸಾವಿಲ್ಲವೋ,ಆರ್ತಿಃನ-ವ್ಯಥೆ ಇಲ್ಲವೋ, ಕುತಶ್ಚಿತ್-ಯಾರಿಂದಲೂ, ಉದ್ವೇಗಶ್ಚನ-ಭಯವೂ ಇಲ್ಲವೋ ॥೨೭॥ ತತಃ-ಅಲ್ಲಿಂದ, ವಿಶೇಷಂ-ಪೃಥಿವೀಸ್ವರೂಪವನ್ನು, ಪ್ರತಿಪದ್ಯ-ಹೊಂದಿ, ನಿರ್ಭಯಃ-ಭಯವಿಲ್ಲದವನಾಗಿ, ತೇನ-ಆ, ಆತ್ಮನಾ-ಪೃಥಿವೀರೂಪದಿಂದ, ಅಪಃ-ಜಲಸ್ವರೂಪವನ್ನು, ಪ್ರತಿಪದ್ಯ-ಹೊಂದಿ, ತೇನ-ಅದರಿಂದ, ಅನಲಮೂರ್ತಿಃ - ಅಗ್ನಿಸ್ವ

ಜಗತ್ತೆಲ್ಲವೂ ಸುಡುವುದನ್ನು ಕಂಡು, ಅದರ ಬೇಗೆಯು ಮಹರ್ಲೋಕಕ್ಕೂ ವ್ಯಾಪಿಸಲು, ಅಲ್ಲಿಂದ ಹೊರಟು ಎರಡು ಪರಾರ್ಧಗಳಕಾಲದವರೆಗೂ ಸ್ಥಿರವೆನಿಸಿ,ವಿಮಾನಗಳಲ್ಲಿ ಕುಳಿತು ವಿಹರಿಸುತ್ತಿರುವ ಸಿದ್ಧಪುರುಷರಿಂದ ರಮಣೀಯವಾದ ಬ್ರಹ್ಮಲೋಕವನ್ನೈದುವನು॥೨೬॥ ಆಲೋಕದಲ್ಲಿ ಶೋಕವಿಲ್ಲ, ಮುಪ್ಪಿಲ್ಲ, ಸಾವಿಲ್ಲ, ದುಃಖವಿಲ್ಲ, ಭಯವಿಲ್ಲ,ಅಲ್ಲಿರುವ ಮಹಾತ್ಮರಿಗೆ, ಭಗವದ್ಧ್ಯಾನವನ್ನರಿಯದವರಿಗುಂಟಾಗಿರುವ, ದುರಂತ ದುಃಖಕ್ಕೆ ನೆಲೆಯಾದ ಸಂಸಾರವನ್ನು ಕಂಡು "ಅಕಟಾ ಇಂತು ಚಿಂತೆಗೊಳಗಾದರಲ್ಲಾ!" ಎಂದು ಕನಿಕರಗೊಂಡು ಮರುಗುವ ಮನೋವ್ಯಥೆಯೊಂದಲ್ಲದೆ, ಮತ್ತಾವ ದಂದುಗವೂ ಇಲ್ಲ ॥ ೨೭ ॥ ಇಂತಿರುವ ಬ್ರಹ್ಮಲೋಕವನ್ನು ಹೊಂದಿದ § ಉಪಾಸಕನು ಪರಮಾತ್ಮನಿಗಿರುವ † ಆವರಣಗಳನ್ನು ಭೇದಿಸಲುಪಕ್ರಮಿಸಿ ಲಿಂಗದೇಹದಿಂದ ಮೊದಲನೆಯ ಆವರಣವಾದ ಪೃಥಿವೀಸ್ವರೂಪನಾಗಿ ಅದರ ಕಾರ್ಯವಾದ ದೇಹವನ್ನುಳಿದು, ಇನ್ನುಮುಂದೆ ತನಗೆ ಯಾವಶರೀ

§ ಬ್ರಹ್ಮಲೋಕವನ್ನು ಪಡೆಯುವವರ ಗತಿಯು ಮೂರುವಿಧವು(೧)ಪುಣ್ಯಾತಿಶಯದಿಂದ ಆ ಲೋಕವನ್ನು ಹೊಂದಿದವರು ಕಲ್ಪಾಂತರದಲ್ಲಿ ಪುಣ್ಯಾನುಸಾರವಾಗಿ ಅಧಿಕಾರಿಗಳಾಗುವರು (೨) ಹಿರಣ್ಯಗರ್ಭೋಪಾಸನೆಯಿಂದ ಆಲೋಕವನ್ನು ಹೊಂದಿದವರು ಬ್ರಹ್ಮನೊಡನೆ ಮುಕ್ತರಾಗುವರು (೩) ಭಗವದುಪಾಸಕರಾದವರು ಸ್ವೇಚ್ಛೆಯಿಂದ ಬ್ರಹ್ಮಾಂಡವನ್ನು ಭೇದಿಸಿಕೊಂಡು ವಿಷ್ಣುಪದವನ್ನೇ ಪಡೆಯುವರು.

† ಈಶ್ವರಾಧಿಷ್ಠಿತವಾದ ಪ್ರಕೃತಿಯ ಅಂಶದಿಂದ ಮಹತ್ತತ್ವವೂ, ಅದರಂಶದಿಂದ ಅಹಂಕಾರವು, ಅದರಂಶದಿಂದ ಶಬ್ದತನ್ಮಾತ್ರವಾದ ಆಕಾಶವು, ಅದರಂಶದಿಂದ ಸ್ಪರ್ಶತನ್ಮಾತ್ರವಾದವಾಯುವೂ, ಅದರಂಶದಿಂದ ರೂಪವುಳ್ಳತೇಜಸ್ಸು,ಅದರಿಂದ ರಸವುಳ್ಳಜಲವು,ಅದರಿಂದ ಗಂಧವುಳ್ಳ ಭೂಮಿಯೂ,ಉಂಟಾಗುವುವು. ಆದುದರಿಂದ ಈಎಂಟು ತತ್ವಗಳೂ ಜಗತ್ಸ್ವರೂಪವಾದ ವಿರಾಟ್ಛರೀರವೆನಿಸುವುವು.ಆಂಡಕ್ಕೆ ಐವತ್ತು ಕೋಟಿ ಯೋಜನ ವಿಸ್ತೀರ್ಣವಾದ ಭೂಮಿಯು ಪ್ರಥಮಾವರಣವು. ಇಂತೀ ಎಂಟು ಆವರಣಗಳುಂಟು. ಕಡೆಯ ಆವರಣವೇ ಪ್ರಕೃತಿಯು, ಆ ಆವರಣ ಭೇದನವೇ ಮೋಕ್ಷವು.

ಘೋಽನಲಮೂರ್ತಿ ರತ್ವರ್ಃ। ಜ್ಯೋತಿರ್ಮಯೋ*ವಾಯು ಮುಪೇತ್ಯ ಕಾ
ಲೇ ವಾಯ್ವಾತ್ಮನಾ ಖಂ ಬೃಹದಾತ್ಮಲಿಂಗಂ ॥ ೨೮ ॥ ಘ್ರಾಣೇನ ಗಂ
ಧಂ ರಸನೇನವೈ ರಸಂ ರೂಪಂಚ ದೃಷ್ಟ್ಯಾ ಶ್ವಸನಂ ತ್ವಚೈವ। ಶ್ರೋ
ತ್ರೇಣ ಚೋಪೇತ್ಯ ನಭೋಗುಣತ್ವಂ ಪ್ರಾಣೇನ ಚಾಕೂತಿ ಮುಪೈತಿ

ರೂಪವನ್ನು ಪಡೆದು, ಅತ್ವರ್ಃ-ತ್ವರೆಯಿಲ್ಲದವನಾಗಿ, ಜ್ಯೋತಿರ್ಮಯಃ - ಜ್ಯೋತಿಸ್ಸ್ವರೂಪನೆನಿಸಿ, ವಾಯುಂ-ವಾಯುಸ್ವರೂಪವನ್ನು, ಉಪೇತ್ಯ-ಹೊಂದಿ, ಕಾಲೇ-ಭೋಗಾವಸಾನದಲ್ಲಿ, ಬೃಹದಾತ್ಮಲಿಂಗಂ, ಬೃಹದಾತ್ಮ-ಪರಮಾತ್ಮನಿಗೆ, ಲಿಂಗಂ-ಲಕ್ಷಣವೆನಿಸಿದ, ಅಥವಾ, ಲಿಂಗಂ - ಶಬ್ದರೂಪದಿಂದ ತಿಳಿಯಪಡಿಸುವ, ಖಂ-ಆಕಾಶ ಸ್ವರೂಪವನ್ನು, ಉಪೇತ್ಯ-ಹೊಂದಿ ॥ ೨೮ ॥ ಯೋಗೀ-ಯೋಗಿಯು, ಘ್ರಾಣೇನ-ಘ್ರಾಣೇಂದ್ರಿಯದಿಂದ, ಗಂಧಂ-ಗಂಧವನ್ನು, ರಸನೇನ-ರಸನೇಂದ್ರಿಯದಿಂದ, ರಸಂ-ರಸವನ್ನು, ದೃಷ್ಟ್ಯಾ-ಚಕ್ಷುರಿಂದ್ರಿಯದಿಂದ, ರೂಪಂ-ರೂಪವನ್ನು, ತ್ವಚೈವಚ-ತ್ವಗಿಂದ್ರಿಯದಿಂದ, ಶ್ವಸನಂ - ಸ್ಪರ್ಶವನ್ನು, ಶ್ರೋತ್ರೇಣಚ-ಶ್ರೋತ್ರೇಂದ್ರಿಯದಿಂದ, ನಭೋಗುಣತ್ವಂ - ಆಕಾಶಗುಣವಾದ ಶಬ್ದವನ್ನು, ಪ್ರಾಣೇನ-

ರವೂ ಬರಲಾರದಾದುದರಿಂದ ನಿರ್ಭಯನಾಗಿ, ಆ ಪೃಥ್ವೀತನ್ಮಾತ್ರಕ್ಕೆ ಕಾರಣವಾದ ಜಲಸ್ವರೂಪವನ್ನು ಪಡೆದು, ಅದರಿಂದ ಜಲಕಾರಣವಾದ ತೇಜಸ್ಸ್ವರೂಪವನ್ನು ಹೊಂದಿ, ಬಳಿಕ ಅಗ್ನಿಗೆ ಕಾರಣವಾದ ವಾಯುರೂಪವನ್ನು ಆಶ್ರಯಿಸಿ, ಆ ವಾಯುರೂಪದಿಂದ ಪೃಥಿವ್ಯಾದಿತತ್ವಗಳಗಿಂತ ದೊಡ್ಡದಾಗಿ ಆತ್ಮಜನ್ಯವಾಗಿರುವ ಆಕಾಶರೂಪವನ್ನು ಹೊಂದುವನು॥೨೮॥ ಈಪ್ರಕಾರವಾಗಿ ಪೃಥಿವೀತತ್ವವನ್ನು ಜಲದಲ್ಲಿಯೂ, ಜಲತತ್ವವನ್ನು ಅಗ್ನಿಯಲ್ಲಿಯೂ, ಅಗ್ನಿಯನ್ನು ವಾಯುವಿನಲ್ಲಿಯೂ, ವಾಯುವನ್ನು ಆಕಾಶದಲ್ಲಿಯೂ, ‡ಶ್ರುತಿಯುಲ್ಲಿ ಹೇಳುವಂತೆ ಲಯಗೊಳಿಸಿ, ತರುವಾಯ ಘ್ರಾಣೇಂದ್ರಿಯದಿಂದ ಗಂಧತನ್ಮಾತ್ರವನ್ನೂ, ರಸನೇಂದ್ರಿಯ

* ವಿ. ಇಂತು ದೇವಯಾನದಿಂದ ಸತ್ಯಲೋಕವನ್ನು ಹೊಂದಿದ ಜ್ಞಾನಿಗಳು, ಬ್ರಹ್ಮನಿಗೆ ಪ್ರಳಯವಾಗಲುತಮ್ಮ ಅಂತರ್ಯಾಮಿಯಲ್ಲಿ ಪ್ರವೇಶಿಸಿ(೧) ಗರುಡಮಾರ್ಗ ಶೇಷಮಾರ್ಗಗಳೆಂಬೆರಡುದಾರಿಗಳಿಂದ ವಾಣಿಯನ್ನು ಪ್ರವೇಶಿಸಿ, ಆಕೆಯೊಡನೆ ಭೌತಿಕಶರೀರವುಳ್ಳ ಬ್ರಹ್ಮನಲ್ಲಿ ಸೇರಿ, ಆಬ್ರಹ್ಮನೊಡನೆ ಪೃಥಿವಿಯನ್ನೂ, ಆ ಪೃಥಿವೀರೂಪದಿಂದ ಜಲವನ್ನೂ, ಆ ಜಲರೂಪದಿಂದ ಅಗ್ನಿಯನ್ನೂ, ಅಗ್ನಿರೂಪದಿಂದ ವಾಯುವನ್ನೂ ಹೊಂದಿ, ಮುಕ್ತಿಸಮಯದಲ್ಲಿ ಆ ವಾಯುವಿನೊಡನೆ ಆಕಾಶದಂತೆ ವ್ಯಾಪ್ತನಾದ ಪರಮಾತ್ಮನನ್ನು ಸೇರುವರು. ಎಂದರೆ ಪೃಥಿವಿ ಮೊದಲುಗೊಂಡು ಪಂಚಭೂತಗಳಲ್ಲಿಯೂ ಅಭಿಮಾನಿಯಾಗಿರುವ ಬ್ರಹ್ಮನರೂಪಗಳೆಲ್ಲವೂ ಒಂದೇ ಎಂತಲೂ, ಆ ರೂಪಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನರೂಪಗಳೂ ಒಂದೇ ಎಂತಲೂ, ಧ್ಯಾನಿಸಿ ಪೃಥಿವಿ ಮೊದಲಾಗಿ ಪ್ರಧಾನಾಂತದವರೆಗೂ ಇರುವ ತತ್ವಗಳನ್ನೂ, ಆ ತತ್ವಾಭಿಮಾನಿಗಳಾದದೇವತೆಗಳಶರೀರಗಳನ್ನೂ, ಅವರವರಕಾರಣಗಳಲ್ಲಿ ಲಯಗೊಳಿಸಬೇಕೆಂದು ಭಾವವು.

(೧) ವಿ. ಸ್ವರ್ಗಲೋಕದವರೆಗೂ ಹೋಗುವದಾರಿಯು ಧೂಮಾದಿಮಾರ್ಗವು, ಇದಕ್ಕೆ ಪುನರಾವೃತ್ತಿಯುಂಟು. ಬ್ರಹ್ಮಲೋಕಕ್ಕೆ ಹೋಗುವದಾರಿಯು ಅರ್ಚಿರಾದಿಮಾರ್ಗವು, ಇದಕ್ಕೆ ಪುನರಾವೃತ್ತಿಯಿಲ್ಲ. ಬ್ರಹ್ಮಲೋಕದಿಂದ ಪರಮಾತ್ಮಲೋಕಕ್ಕೆ (ವೈಕುಂಠ) ಹೋಗುವ ದಾರಿಗಳಿಗೆ ಗರುಡಮಾರ್ಗ, ಶೇಷಮಾರ್ಗಗಳೆಂದು ಹೆಸರು.

‡ ಶ್ರು. ಆತ್ಮನ, ಆಕಾಶಸ್ಸಂಭೂತಃ, ಆಕಾಶಾದ್ವಾಯುಃ, ವಾಯೋರಗ್ನಿಃ, ಅಗ್ನೇರಾಪಃ, ಅದ್ಭ್ಯಃ ಪೃಥಿವೀ, (ಸೃಷ್ಟಿಕ್ರಮ) ಶ್ರು. ಪೃಥಿವ್ಯಪ್ಸುಲೀಯತೇ ಇತ್ಯಾದಿ (ಲಯಕ್ರಮ)

ಯೋಗೀ ॥ ೨೯ ॥ ಸಭೂತಸೂಕ್ಷ್ಮೇಂದ್ರಿಯ ಸನ್ನಿಕರ್ಷಂ ಮನೋಮ
ಯಂ ದೇವಮಯಂ ವಿಕಾರ್ಯಂ । ಸಂಸಾದ್ಯ ಗತ್ಯಾ ಸಹತೇನ ಯಾತಿ
ವಿಜ್ಞಾನತತ್ವಂ *ಗುಣಸನ್ನಿರೋಧಂ ॥೩೦॥ ತೇನಾತ್ಮನಾ ತ್ಮಾನ ಮುಪೈ
ತಿ ಶಾಂತ ಮಾನಂದ ಮಾನಂದಮಯೋ § ವಸಾನೇ । ಏತಾಂ† ಗತಿಂ ಭಾಗವ

ಆ ಆ ಕರ್ಮೇಂದ್ರಿಯದಿಂದ, ಆಕೂತಿಂ - ಆ ಆ ಕಾರ್ಯವನ್ನು, ಉಪೈತಿ - ಹೊಂದುತ್ತಾನೆ ॥ ೨೯ ॥ ಸಃ-ಆ ಯೋಗಿಯು, ಭೂತ...ರ್ಷಂ, ಭೂತಸೂಕ್ಷ್ಮ-ಗಂಧ ಮೊದಲಾದ ಪಂಚತನ್ಮಾತ್ರಗಳು, ಇಂದ್ರಿಯ-ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು ಇವುಗಳಿಗೆ, ಸನ್ನಿಕರ್ಷಂ-ಲಯಸ್ಥಾನಗಳಾದ ತಾಮಸ, ರಾಜಸ, ಭೇದಗಳಿಂದಲೂ, ದೇವಮಯಂ-ದೇವತಾಮಯವಾದ, ಮನೋಮಯಂ-ಮನಸ್ಸಿಗೆ ಲಯಸ್ಥಾನವಾದ ಸಾತ್ವಿಕಭೇದದಿಂದಲೂ ಕೂಡಿರುವ, ವಿಕಾರ್ಯಂ-ವಿವಿಧಕಾರ್ಯಗಳುಳ್ಳ ಅಹಂಕಾರತತ್ವವನ್ನು, ಸಂಸಾದ್ಯ-ಹೊಂದಿ, ಗತ್ಯಾ-ಈಗಮನದಿಂದ, ತೇನಸಹ-ಆ ಅಹಂಕಾರದೊಡನೆ, ವಿಜ್ಞಾನತತ್ವಂ-ಮಹತ್ತತ್ವವನ್ನೂ, ತೇನ-ಅದರೊಡನೆ, ಗುಣಸನ್ನಿರೋಧಂ, ಗುಣ-ಸತ್ವ ರಜಸ್ತಮಸ್ಸುಗಳ, ಸನ್ನಿರೋಧಂ-ಲಯವುಳ್ಳ ಮೂಲಪ್ರಕೃತಿಯನ್ನು, ಯಾತಿ-ಹೊಂದುತ್ತಾನೆ ॥ ೩೦ ॥

ಹೇ ಅಂಗ-ಎಲೈಪರೀಕ್ಷಿತನೆ ? ತೇನ-ಆ, ಆತ್ಮನಾ-ಪ್ರಧಾನರೂಪದಿಂದ, ಆನಂದಮಯಃ-ಆನಂದ

ದಿಂದ ರಸತನ್ಮಾತ್ರವನ್ನೂ, ಚಕ್ಷುರಿಂದ್ರಿಯದಿಂದ ರೂಪತನ್ಮಾತ್ರವನ್ನೂ, ತ್ವಗಿಂದ್ರಿಯದಿಂದ ಸ್ಪರ್ಶತನ್ಮಾತ್ರವನ್ನೂ, ಶ್ರೋತ್ರೇಂದ್ರಿಯದಿಂದ ಶಬ್ದತನ್ಮಾತ್ರವನ್ನೂ ಹೊಂದಿ, ಬಳಿಕ ಯೋಗಿಯಾದವನು ಕರ್ಮೇಂದ್ರಿಯಗಳಿಂದ ಆ ಆ ಕರ್ಮಗಳನ್ನು ಹೊಂದುವನು ॥೨೯॥

ಇಂತು ಪೃಥಿವ್ಯಾದಿ ಮಹಾಭೂತಗಳನ್ನು ಅವುಗಳಿಗೆ ಕಾರಣಗಳಾದ ಗಂಧಮೊದಲಾದ ಸೂಕ್ಷ್ಮಭೂತಗಳಲ್ಲಿ ಲಯಗೊಳಿಸಿ, ಆ ತನ್ಮಾತ್ರಗಳೆಂಬ ಭೂತಸೂಕ್ಷ್ಮಗಳನ್ನು ಅವುಗಳಿಗೆ ಕಾರಣವಾದ ‡ ತಾಮಸಾಹಂಕಾರದಲ್ಲಿಯೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ತತ್ಕಾರಣವಾದ ರಾಜಸಾಹಂಕಾರದಲ್ಲಿಯೂ, ಇಂದ್ರಿಯಪ್ರೇರಕವಾದ ಮನಸ್ಸನ್ನು ಸಾತ್ವಿಕಾಹಂಕಾರದಲ್ಲಿಯೂ ಲಯಗೊಳಿಸಿ, ಆ ಅಹಂಕಾರ ತತ್ವವನ್ನು ಮಹತ್ತತ್ವದಲ್ಲಿ ಸೇರಿಸಿ, ಆ ಮಹತ್ತತ್ವವನ್ನು ಸತ್ವರಜಸ್ತಮೋಗುಣಗಳಿಗೆ ಲಯಸ್ಥಾನವಾದ ಮೂಲಪ್ರಕೃತಿಯಲ್ಲಿ ಲಯಗೊಳಿಸುವನು ॥ ೩೦ ॥ ಬಳಿಕ ಆ ಪ್ರಧಾನವೆಂಬ ಮೂ

* ವಿ॰ ಗುಣಗಳ ಸಾಮ್ಯಾವಸ್ಥೆಯುಳ್ಳ ಪ್ರಕೃತಿಯನ್ನು ಹೊಂದುವನು.

§ ವಿ॰ ಅವಸಾನೇ-ಪ್ರಕೃತಿಯು ನಿತ್ಯವಾದುದರಿಂದ ಭೂತಸೂಕ್ಷ್ಮಗಳು ಇಂದ್ರಿಯಗಳು. ಇವುಗಳಿಗೆ ತಮ್ಮ ಕಾರಣಗಳಲ್ಲಿ ಲಯವಾದಬಳಿಕ

† ಘ್ರಾಣಮೊದಲಾದ ಇಂದ್ರಿಯಗಳಲ್ಲಿ ಅಭಿಮಾನಿಯಾದ ವಿರಿಂಚನಲ್ಲಿ ಅಂತರ್ಯಾಮಿಯಾದ ಹರಿಯಿಂದ, ಗಂಧತನ್ಮಾತ್ರ ಮೊದಲಾದ ಭೂತಸೂಕ್ಷ್ಮಾಭಿಮಾನಿ ವಿರಿಂಚನಲ್ಲಿ ಅಂತರ್ಯಾಮಿಯಾದ ಹರಿಯನ್ನ ಹೊಂದುವ ಯೋಗಿಯು ಪುನರಾವೃತ್ತಿಯನ್ನು ಪಡೆಯುವುದಿಲ್ಲ.

‡ ಅಹಂಕಾರವು ಮೂರುವಿಧ. ತಿಳಿಯಬೇಕಾಗಿರುವ ಗಂಧ ಮೊದಲಾದ ಸೂಕ್ಷ್ಮಭೂತಗಳು ತಾಮಸಾಹಂಕಾರದಿಂದುಂಟಾಗುವುವು. ಬಹಿರ್ಮುಖಗಳಾದ ಜ್ಞಾನಕರ್ಮೇಂದ್ರಿಯಗಳು ರಾಜಸಾಹಂಕಾರದಿಂದ ಜನಿಸುವುವು. ಮನಸ್ಸು ದೇವತೆಗಳು ಇವರು ಸಾತ್ವಿಕಾಹಂಕಾರದಿಂದುಂಟಾಗುವರು.

ತೀಂ ಗತೋ ಯಃ ಸವೈ ಪುನರ್ನೇಹ ವಿಷಜ್ಜತೇಽಂಗ! ॥೩೧॥ ಏತೇ ಸೃತೀ ತೇ ನೃಪ ‡ ವೇದಗೀತೇ ತ್ವಯಾಽಭಿಪೃಷ್ಟೇಚ ಸನಾತನೇಚ । ಯೇವೈಪುರಾ ಬ್ರಹ್ಮಣ ಆಹ ಪೃಷ್ಟಃ ಆರಾಧಿತೋ ಭಗವಾನ್ ವಾಸುದೇವಃ॥೩೨॥ †ನಹ್ಯತೋಽನ್ಯಃ ಶಿವಃ ಪಂಥಾ ವಿಶತ ಸ್ಸಂಸೃತಾ ವಿಹ।ವಾಸು

ಸ್ವರೂಪನಾಗಿ, ಅವಸಾನೇ-ಉಪಾಧಿವಿಲಯದಲ್ಲಿ, ಶಾಂತಂ-ನಿರ್ವಿಕಾರನಾದ, ಆನಂದಂ-ಆನಂದಸ್ವರೂಪನಾದ, ಆತ್ಮಾನಂ-ಪರಮಾತ್ಮನನ್ನು, ಉಪೈತಿ-ಹೊಂದುವನು, ಯಃ-ಯಾವಯೋಗಿಯು, ಏತಾಂ-ಈ, ಭಾಗವತೀಂ-ಭಗವತ್ಸಂಬಂಧವಾದ, ಗತಿಂ-ಗಮನವನ್ನು, ಗತಃ-ಹೊಂದುವನೋ, ಸಃ-ಅವನು, ಪುನಃ-ಮರಳಿ, ಇಹ-ಈಸಂಸಾರದಲ್ಲಿ, ನವಿಷಜ್ಜತೇ-ಸೇರುವುದಿಲ್ಲ ॥ ೩೧ ॥ ಹೇನೃಪ-ಎಲೈರಾಜನೆ? ಪುರಾ-ಪೂರ್ವದಲ್ಲಿ, ಆರಾಧಿತಃ-ಪೂಜಿಸಲ್ಪಟ್ಟವನಾಗಿ, ಪೃಷ್ಟಃ-ಪ್ರಶ್ನೆಮಾಡಲ್ಪಟ್ಟ, ವಾಸುದೇವಃ-ವಾಸುದೇವಮೂರ್ತಿಯು, ಬ್ರಹ್ಮಣಃ-ಬ್ರಹ್ಮನಿಗೆ, ಯೇವೈ-ಯಾವುವನ್ನು, ಆಹ-ಹೇಳಿದನೋ, ವೇದಗೀತೇ-ವೇದದಲ್ಲಿ ಹೇಳಲ್ಪಟ್ಟ, ಸನಾತನೇ-ಶಾಶ್ವತಗಳಾದ, ತ್ವಯಾ-ನಿನ್ನಿಂದ, ಪೃಷ್ಟೇ - ಪ್ರಶ್ನೆಮಾಡಲ್ಪಟ್ಟ, ತೇ

ಲಪ್ರಕೃತಿಯಿಂದ ಆನಂದಮಯನಾಗಿ, ಉಪಾಧಿಗಳನ್ನತಿಕ್ರಮಿಸಿ, ಶಾಂತವಾಗಿ ಆನಂದಘನವಾದ ಬ್ರಹ್ಮಸ್ವರೂಪವನ್ನು ಪಡೆಯುವನು. ಅಯ್ಯಾ ಕುರುಕುಲಾವತಂಸನೆ ! ಭಗವತ್ಸಂಬಂಧಿಯಾದ ಈ ದಾರಿಯನ್ನು ಹೊಂದಿದವನೆಂದಿಗೂ, ಮರಳಿ ಈ ಜನನಮರಣರೂಪವಾದ ಸಂಸಾರಕ್ಕೆ ಸಿಕ್ಕುಬೀಳುವುದಿಲ್ಲ ॥ ೩೧ ॥

ಪೂರ್ವಕಾಲದಲ್ಲಿ ಚತುರ್ಮುಖ ಬ್ರಹ್ಮನು ಬಹಳಕಾಲದವರೆಗೂ ಆರಾಧಿಸಿ ಪ್ರಸನ್ನನಾದ ನಾರಾಯಣ ಮೂರ್ತಿಯನ್ನು ಬೆಸಗೊಳಲು, ಆ ಭಗವಂತನಾದ ವಾಸುದೇವಮೂರ್ತಿಯು, ಸಂತುಷ್ಟನಾಗಿ ಸದ್ಯೋಮುಕ್ತಿ, ಕ್ರಮಮುಕ್ತಿಗಳೆಂಬ ಯಾವ ಎರಡು ಮಾರ್ಗಗಳನ್ನು ಬ್ರಹ್ಮನಿಗುಪದೇಶಿಸಿದನೋ, ನೀನು ಪ್ರಶ್ನೆಮಾಡಿದುದನ್ನನುಸರಿಸಿ, ‡ವೇದೋಕ್ತಗಳಾಗಿಯೂ ಶಾಶ್ವತಗಳಾಗಿಯೂ ಇರುವ ಆ ಎರಡುದಾರಿಗಳನ್ನೂ ನಾನೀಗ ನಿನಗುಪದೇಶಿಸಿರುವೆನು ॥ ೩೨ ॥ ಎಲೈ ಪರೀಕ್ಷಿತನೆ ! ಸಂಸಾರಿಯಾದವನಿಗೆ ತಪಸ್ಸು,

‡ ಶ್ರು. ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಸ್ಯ ಹೃದಿ ಸ್ಥಿತಾಃ ।ಅಥ ಮರ್ತ್ಯೋಽಮೃತೋಭವತ್ಯತ್ರ ಬ್ರಹ್ಮಸಮಶ್ನುತೇ,(ಸದ್ಯೋಮುಕ್ತಿ)ತೇರ್ಚಿಷ ಮಭಿಸಂಭವಂತಿ ಇತ್ಯಾದಿ,(ಕ್ರಮಮುಕ್ತಿ)

† ವಿ. ಮೂ॥ ಸಭೂತಸೂಕ್ಷ್ಮೇಂದ್ರಿಯ ಸನ್ನಿಕರ್ಷಾತ್ ಸನಾತನೋಽಸೌ ಭಗವಾನನಾದಿಃ । ಮನೋಮಯಂ ದೇವಮಯಂ ವಿಕಾರ್ಯಂ ಸಂಪಾದ್ಯ ಮತ್ಯಾಸಹ ತೇನ ಯಾತಿ ॥೩೦॥

ತಾ॥ ಆದ್ಯಂತರಹಿತನೂ ಸನಾತನನೂ ಆದ ಆಭಗವಂತನು ಸೂಕ್ಷ್ಮಗಳಾದ ಪಂಚಭೂತಗಳಿಂದಲೂ, ಇಂದ್ರಿಯಗಳಿಂದಲೂ ಅವುಗಳ ಅಭಿಮಾನಿ ದೇವತೆಗಳಿಂದಲೂ,ಕೂಡಿದವನಾಗಿ ಅನೇಕ ಕಾರ್ಯಯುಕ್ತವಾಗಿಯೂ, ದೇವಪ್ರಧಾನವಾಗಿಯೂ ಇರುವ ಮನಸ್ಸಿನಲ್ಲಿ ಅಡಗಿರುವ ಇಂದ್ರಿಯಗಳಲ್ಲಿ ಅಂತರ್ಗತನಾದ ವಿರಿಂಚನಲ್ಲಿ ಅಂತರ್ಯಾಮಿಯಾದ ಪರಮಾತ್ಮನನ್ನು ಹೊಂದುವನೆಂದು ಭಾವವು. ಬಳಿಕ ಉಮಾಂತರ್ಗತ ವಿರಿಂಚಾಂತರ್ಗತವೆನಿಸಿದ ಆರೂಪದಿಂದ ಅಹಂಕಾರಾಖ್ಯಮಾಣ್ಯಂತರ್ಗತವಿರಿಂಚನಲ್ಲಿ ಅಂತರ್ಯಾಮಿಯಾದ ಮತಿಯೆಂಬ ಆತ್ಮರೂಪವನ್ನುಹೊಂದಿ, ಆರೂಪದಿಂದ ವಿಜ್ಞಾನತತ್ವಾಖ್ಯಮಾಣ್ಯಂತರ್ಗತವಿರಿಂಚಾಂತರ್ಗತನೆನಿಸಿದ ವಿಜ್ಞಾನವೆಂಬ ಪರಮಾತ್ಮನನ್ನು ಹೊಂದುವನು.

ದೇವೇ ಭಗವತಿ ಭಕ್ತಿಯೋಗೋ ಯತೋ ಭವೇತ್॥೩೩॥ § ಭಗವಾನ್ ಬ್ರಹ್ಮಕಾತ್ಸ್ನ್ಯೇನ ತ್ರಿ ರನ್ವೀಕ್ಷ್ಯ ಮನೀಷಯಾ । ತದಧ್ಯವಸ್ಯತ್ ಕೂಟಸ್ಥೋ ರತಿ ರಾತ್ಮನ್ *ಯತೋ ಭವೇತ್ ॥೩೪॥ ಭಗವಾನ್ ಸರ್ವಭೂತೇಷು ಲಕ್ಷಿತ ಸ್ಸ್ವಾತ್ಮನಾ ಹರಿಃ। ದೃಶ್ಯೈ ರ್ಬುದ್ಧ್ಯಾದಿಭಿ ರ್ದ್ರಷ್ಟಾ ಲಕ್ಷಣೈ ರ

ಸೃತೀ-ಸದ್ಯೋಮುಕ್ತಿ, ಕ್ರಮಮುಕ್ತಿಗಳೆಂಬ ಆ ಎರಡು ವಿಧಗಳೂ, ಏತೇ-ಇವುಗಳೇ ॥ ೩೦ ॥ ಸಂಸೃತೌ-ಸಂಸಾರದಲ್ಲಿ, ವಿಶತಃ-ಬಿದ್ದಿರುವವನಿಗೆ, ಇಹ-ಈಸಂಸಾರದಲ್ಲಿ, ಯತಃ-ಯಾವುದರಿಂದ, ಭಗವತಿ-ಭಗವಂತನಾದ, ವಾಸುದೇವೇ-ಶ್ರೀ ಹರಿಯಲ್ಲಿ, ಭಕ್ತಿಯೋಗಃ-ಜ್ಞಾನಯೋಗವು, ಭವೇತ್-ಉಂಟಾಗುವುದೋ, ಅತಃ-ಈದಾರಿಗಿಂತಲೂ, ಅನ್ಯಃ-ಬೇರೆಯಾದ, ಶಿವಃ-ಮಂಗಳಕರವಾದ, ಪಂಥಾಃ-ಮಾರ್ಗವು, ನಹಿ-ಇಲ್ಲವಷ್ಟೆ ॥ ೩೩ ॥ ಭಗವಾನ್-ಭಗವಂತನಾದ ಚತುರ್ಮುಖನು, ಕೂಟಸ್ಥಃ-ಏಕಾಗ್ರಚಿತ್ತನಾಗಿ, ತ್ರಿಃ-ಮೂರಾವರ್ತಿ, ಕಾತ್ಸ್ನ್ಯೇನ-ಸಮಗ್ರವಾಗಿ, ಬ್ರಹ್ಮ-ವೇದವನ್ನು, ಅನ್ವೀಕ್ಷ್ಯ-ವಿಚಾರಿಸಿ, ಯತಃ-ಯಾವುದರಿಂದ, ಆತ್ಮನ್-ಶ್ರೀಹರಿಯಲ್ಲಿ, ರತಿಃ - ಭಕ್ತಿಯು, ಭವೇತ್-ಉಂಟಾಗುವುದೋ ತತ್-ಅದನ್ನು, ಮನೀಷಯಾ-ಬುದ್ಧಿಯಿಂದ, ಅಧ್ಯವಸ್ಯತ್-ನಿಶ್ಚಯಿಸಿದನು ॥ ೩೪ ॥

ಭಗವಾನ್-ಭಗವಂತನಾದ, ದ್ರಷ್ಟಾ-ಸಾಕ್ಷಿಯಾದ, ಹರಿಃ-ವಿಷ್ಣುವು, ಲಕ್ಷಣೈಃ - ಜೀವಾಂತರ್ಯಾಮಿಗೆ ಕುರುಹುಗಳಾಗಿಯೂ, ಅನುಮಾಪಕೈಃ - ವ್ಯಾಪ್ತಿಮುಖದಿಂದ ತೋರಿಸುವುವುಗಳಾಗಿಯೂ, ಇರುವ,ದೃಶ್ಯೈಃ-ಜಡಗಳಾದ, ಬುದ್ಧ್ಯಾದಿಭಿಃ-ಬುದ್ಧಿ ಮೊದಲಾದವುಗಳಿಂದ, ಸರ್ವಭೂತೇಷು-ಸಕಲ

ಯೋಗ, ಮೊದಲಾದ ಹಲವು ಮೋಕ್ಷಮಾರ್ಗಗಳಿದ್ದರೂ, ಮತ್ತಾವುದರಿಂದಲೂ ಭಗವಂತನಾದ ವಾಸುದೇವ ಮೂರ್ತಿಯಲ್ಲಿ ನಿರತಿಶಯವಾದ ಭಕ್ತಿಯೋಗವೆಂಬುದು ಉಂಟಾಗಲಾರದು. ಆದುದರಿಂದ, ಜನರನ್ನು ಸಂಸಾರದಿಂದ ಕಡೆಹಾಯಿಸುವುದಕ್ಕೆ ಇದಕ್ಕಿಂತಲೂ ಬೇರೆ ಯಾವದಾರಿಯೂ ಇಲ್ಲ ॥ ೩೩ ॥ ಭಗವಂತನಾದ ಚತುರ್ಮುಖನೂ ಕೂಡ ಏಕಾಗ್ರಚಿತ್ತನಾಗಿ, ಸಕಲವೇದಾರ್ಥಗಳನ್ನೂ ಮೂರು ಬಾರಿ ಪರಿಶೀಲಿಸಿ, "ಯಾವುದರಿಂದ ಪರಮಾತ್ಮನಲ್ಲಿ ಪರಮಪ್ರೇಮರೂಪವಾದ ಭಕ್ತಿಯೋಗವುಂಟಾದೀತು ?" ಎಂದಾಲೋಚಿಸಿ, ಕಡೆಗೆ ಇದೇ ಸರಿಯಾದ ದಾರಿಯೆಂದು ನಿಶ್ಚಯಿಸಿದನು ॥೩೪॥ ಅಯ್ಯಾ ವಿಷ್ಣುರಾತನೆ ! "ಅನುಭೂತವಾದ ವಿಷಯದಲ್ಲಿ ಮನುಸ್ಸೆರಗುವುದೇ ಹೊರತು ಅನುಭವಕ್ಕೆ ಬಾರದವಸ್ತುವಿನಲ್ಲಿ ಮನಸ್ಸು ಸೇರುವುದಿಲ್ಲವಾದುದರಿಂದ ಅಪ್ರತ್ಯಕ್ಷನಾದಭಗವಂತನು

§ ವಿ. ಮೂ॥ ವಿಜ್ಞಾನತತ್ವಂ ಗುಣಸನ್ನಿರೋಧಂ ತೇನಾತ್ಮ ನಾತ್ಮಾನ ಮುಪೈತಿ ಶಾಂತಿಂ। ಆನಂದ ಮಾನಂದ ಮಯೋZವಸಾನೇ ಸರ್ವಾತ್ಮಕೇ ಬ್ರಹ್ಮಣಿ ವಾಸುದೇವೇ ॥ ೩೩ ॥

ತಾ॥ ಆ ವಿಜ್ಞಾನತತ್ವಗತವಾದ ರೂಪದಿಂದ ಸತ್ವಾದಿ ಗುಣರಹಿತನೂ, ಮಹತ್ತತ್ವಾಖ್ಯ ವಿರಿಂಚಾಂತರ್ಗತನೂ ಆದ,ವಿಜ್ಞಾನವೆಂಬ ಹರಿಯನ್ನು ಹೊಂದುವನು. ಇಂತು ಎಲ್ಲತತ್ವಗಳಲ್ಲಿಯೂ ಅಂತರ್ಯಾಮಿಗಳಾದ ರೂಪಗಳಿಂದೈಕ್ಯವನ್ನು ಹೊಂದಿದ ಮಹತ್ತತ್ವಾಂತರ್ಯಾಮಿಯಾದ ಆ ಹರಿಯು, ತನಗೆ ಶರೀರಭೂತನಾದಪಿರಿಂಚನೊಡಗೂಡಿ ಚಿತ್ಪ್ರಕೃತಿಯಲ್ಲಿರುವ ಆನಂದನಾಮ ವೃಳ್ಳ ಹರಿಯನ್ನು ಸೇರುವನು. ಆನಂದಮಯನೂ ಆನಂದಾಖ್ಯನೂ ಆದ ಹರಿಯು,ರಮಾದೇವಿಯಿಂದಾಜ್ಞೆಯನ್ನು ಹೊಂದಿದ ಬ್ರಹ್ಮನನ್ನು ಕರೆದುಕೊಂಡು ಎರಡು ಪರಾರ್ಧವರ್ಷಗಳಕಡೆಯಲ್ಲಿ, ಗುಣಪೂರ್ಣನೂ,ಸರ್ವಾಂತರ್ಯಾಮಿಯೂ, ಆದ ವಾಸುದೇವನಾಮಕನಾದ ಹರಿಯನ್ನು ಹೊಂದಿ ಅಲ್ಲಿಯೇ ಕ್ರೀಡಿಸುವನು. ಇದುದೇವಮುಕ್ತಿಪ್ರಕರಣವು.

ನುಮಾಪಕ್ಯೈಃ॥೩೫॥ತಸ್ಮಾತ್ಸರ್ವಾತ್ಮನಾ ರಾಜನ್! ಹರಿಸ್ಸರ್ವತ್ರ ಸರ್ವದಾ। ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯೋ ಭಗವಾನ್ ನೃಣಾಂ॥೩೬॥ಪಿಬಂತಿ ಯೇ ಭಗವತ ಆತ್ಮನ ಸ್ಸತಾಂ ಕಥಾಮೃತಂ ಶ್ರವಣಪುಟೇಷು ಸಂಭೃತಂ। ಪುನಂತಿ ತೇ ವಿಷಯ ವಿದೂಷಿತಾಶಯಂ ವ್ರಜಂತಿ ತಚ್ಚರಣ ಸರೋರುಹಾಂತಿಕಂ ॥

ಇತಿ ದ್ವಿತೀಯೋಧ್ಯಾಯಃ

ಭೂತಗಳಲ್ಲಿಯೂ, ಲಕ್ಷಿತಃ-ಕಾಣಲ್ಪಡುವನು ॥೩೫॥ ಹೇರಾಜನ್-ಎಲೈರಾಜನೆ? ತಸ್ಮಾತ್-ಆದುದರಿಂದ, ನೃಣಾಂ-ಪುರುಷರಿಗೆ, ಸರ್ವಾತ್ಮನಾ-ಸಕಲವಿಧದಲ್ಲಿಯೂ, ಸರ್ವತ್ರ-ಎಲ್ಲಕಡೆಗಳಲ್ಲಿಯೂ, ಸರ್ವದಾ-ಯಾವಾಗಲೂ,ಭಗವಾನ್-ಭಗವಂತನು,ಶ್ರೋತವ್ಯಃ-ಕೇಳಲ್ಪಡಬೇಕು, ಕೀರ್ತಿತವ್ಯಶ್ಚ-ಹೊಗಳಲ್ಪಡಬೇಕು,ಸ್ಮರ್ತವ್ಯಶ್ಚ-ಧ್ಯಾನಿಸಲ್ಪಡಬೇಕು॥ ಯೇ-ಯಾರು,ಸತಾಂ-ಸಾಧುಗಳಿಗೆ, ಆತ್ಮನಃ-ಆತ್ಮರೂಪನಾಗಿರುವ, ಭಗವತಃ-ಭಗವಂತನ,ಕಥಾಮೃತಂ-ಚರಿತ್ರೆಯೆಂಬ ಅಮೃತವನ್ನು,ಶ್ರವಣಪುಟೇಷು,ಕಿವಿಗಳಲ್ಲಿ, ಸಂಭೃತಂ-ತುಂಬಿಕೊಂಡು,ಪಿಬಂತಿ-ಕುಡಿಯುವರೋ,ತೇ-ಆ ಜ್ಞಾನಿಗಳು, ವಿಷ...ಯಂ, ವಿಷಯ-ಶಬ್ದಾದಿ ವಿಷಯಗಳಿಂದ, ವಿದೂಷಿತ-ಮಲಿನವಾದ, ಆಶಯಂ-ಮನಸ್ಸನ್ನು, ಪುನಾತಿ-ತೊಳೆಯುವರು,ಮತ್ತು ತಚ್ಚ...ಕಂ, ತತ್-ಆ ಭಗವಂತನ,ಚರಣಸರೋರುಹ-ಪಾದಕಮಲದ,ಅಂತಿಕಂ-ಸಾನ್ನಿಧ್ಯವನ್ನು,ವ್ರಜಂತಿ-ಹೊಂದುವರು॥೩೭॥

ದ್ವಿತೀಯಾಧ್ಯಾಯಂ ಸಮಾಪ್ತಂ.

ಮನಸ್ಸಿಗೆ ಗೋಚರನಾಗುವುದೆಂತು''?ಎಂಬೆಯೋನೊ? ಭಗವಂತನು ಕಾಣಬಾರದಂತಿದ್ದರೂ,ಜೀವ,ಅಂತರ್ಯಾಮಿ,ಬುದ್ಧಿ ಮೊದಲಾದವುಗಳ ರೂಪದಿಂದ ಸಕಲಪ್ರಾಣಿಗಳ ಹೃದಯಗಳಲ್ಲಿಯೂ ಪ್ರತ್ಯಕ್ಷನಾಗಿಯೇ ಇರುವನು.ವಿವೇಕಿಯಾದವನು, "ಜಡಗಳಾದ ಬುದ್ಧಿ ಮೊದಲಾದವುಗಳಿಗೆ ದರ್ಶನಾದಿ ವ್ಯಾಪಾರಗಳ ಸಾಮರ್ಥ್ಯವು ಸ್ವಪ್ರಕಾಶನಾದ ಕರ್ತೃವಿಲ್ಲದೆ ಉಂಟಾಗಲಾರದು " ಎಂಬ ಅನುಪಪತ್ತಿಯಿಂದಲೂ, " ಆಯುಧವನ್ನು ಹಿಡಿದು ಕಡಿಯುವ ಪುರುಷನಿಲ್ಲದೇ ಕೊಡಲಿ ಮೊದಲಾದ ಆಯುಧಗಳಿಗೆ ಛೇದನ ಸಾಮರ್ಥ್ಯವುಂಟಾಗಲಾರದು" ಎಂಬ ಅನುಮಾನದಿಂದಲೂ ತಿಳಿಯಬಹುದು ಆದಕಾರಣ ಜಡಗಳಾದುದರಿಂದ ಗ್ರಹಣಾದಿ ಸಾಮರ್ಥ್ಯವಿಲ್ಲದ ಬುಧ್ಯಾದಿಗಳಿಗೆ ಪ್ರೇರಕನಾಗಿಯೂ ಸರ್ವಸಾಕ್ಷಿಯಾಗಿಯೂ ಬಬ್ಬುಸಿರುವನು, ಆತನೇ ಈಶ್ವರನು, ಎಂದು ತಿಳಿಯಬೇಕು. ಎಲೈ ರಾಜನೆ! ಆದುದರಿಂದ ಪುರುಷನು ಸರ್ವಕಾಲ ಸರ್ವದೇಶ, ಸರ್ವಾವಸ್ಥೆಗಳಲ್ಲಿಯೂ, ಶ್ರೀಹರಿಯ ಶ್ರವಣ, ಭಜನ, ಧ್ಯಾನಾದಿಗಳನ್ನು ಮಾಡಬೇಕು. ಯಾವ ಮಹನೀಯ್ಯರಾದರೆ ನಿತ್ಯೈಶ್ವರ್ಯ ಸಂಪನ್ನನೂ, ಸಾಧುಗಳಿಗೆ ಆತ್ಮ ಸ್ವರೂಪನೂ, ಆದ ಶ್ರೀಹರಿಯ ಕಥಾಮೃತವನ್ನು ಶ್ರೋತ್ರಪಾತ್ರೆಗಳಿಂದ ಪಾನಮಾಡುವರೋ, ಅವರು ವಿಷಯಗಳಿಂದ ಮಲಿನವಾದ ತಮ್ಮ ಮನಸ್ಸನ್ನು ನಿರ್ಮಲಗೊಳಿಸಿ, ಶ್ರೀಹರಿಯಪಾದಕಮಲ ಸನ್ನಿಧಿಯನ್ನು ಹೊಂದುವರು, ಎಂದು ಶುಕಮುನಿಯು ಪರೀಕ್ಷಿದ್ರಾಜನಿಗೆ ಹೇಳುತ್ತಿದ್ದ

ನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ಎರಡನೆಯ ಅಧ್ಯಾಯಂ ಮುಗಿದುದು.

ಓಂ ನಮಃಪರಮಾತ್ಮನೇ.

—:ಅಥ ತೃತೀಯೋಧ್ಯಾಯಃ:—

ಶ್ರೀ ಶುಕಃ॥ ಏವ ಮೇತ ನ್ನಿಗದಿತಂ ಪೃಷ್ಟವಾನ್ ಯದ್ಭವಾನ್ ಮಮ ।
ನೃಣಾಂ ಯನ್ಮ್ರಿಯ ಮಾಣಾನಾಂ ಮನುಷ್ಯೇಷು ಮನೀಷಿಣಾಂ ॥೧॥
ಬ್ರಹ್ಮವರ್ಚಸಕಾಮಸ್ತು ಯಜೇತ ಬ್ರಹ್ಮಣಃ ಪತಿಂ। ಇಂದ್ರ ಮಿಂದ್ರಿಯ
ಕಾಮಸ್ತು ಪ್ರಜಾಕಾಮಃ ಪ್ರಜಾಪತೀನ್ ॥೨॥ ದೇವೀಂ ಮಾ

ತೃತೀಯಾಧ್ಯಾಯಂ

ಕಂ॥ ಹರಿಭಕ್ತಿಯೆ ಪರತರವೆಂ। ದೊರೆಯೆ ಶುಕಂ ಪಾಂಡವೇಯ ನವಧರಿಸುತೆ ಶ್ರೀ।
ಹರಿಚರಿತ ಶ್ರವಣದೊಳು। ದರವಂ ಪಡೆದಿರವನಿಲ್ಲಿ ನಿರವಿಪ ನೀಗಳ್॥

ಮನುಷ್ಯೇಷು-ಮನುಷ್ಯಜನ್ಮವನ್ನು ಹೊಂದಿದವರಲ್ಲಿ, ಮನೀಷಿಣಾಂ-ಪಂಡಿತರಾಗಿಯೂ, ಅವರಲ್ಲಿಯೂ, ಮ್ರಿಯಮಾಣಾನಾಂ-ಕಳೇಬರವನ್ನು ಬಿಡುವ, ನೃಣಾಂ-ಜನರಿಗೆ, ಯತ್-ಯಾವುದು ಕರ್ತವ್ಯವೆಂದು, ಭವಾನ್-ನೀನು, ಮಮ-ನನ್ನನ್ನುಕುರಿತು, ಯತ್-ಯಾವುವನ್ನು, ಪೃಷ್ಟವಾನ್-ಕೇಳಿದೆಯೋ, ಏತತ್-ಇದು, ಏವಂ-ಹೀಗೆ, ನಿಗದಿತಂ-ಹೇಳಲ್ಪಟ್ಟಿತು ॥೧॥ ಬ್ರಹ್ಮವರ್ಚಸಕಾಮಸ್ತು-ಬ್ರಹ್ಮತೇಜಸ್ಸನ್ನು ಬಯಸುವವನು, ಬ್ರಹ್ಮಣಃ - ವೇದಕ್ಕೆ, ಪತಿಂ-ಒಡೆಯನಾದ ಬ್ರಹ್ಮನನ್ನೂ, ಇಂದ್ರಿಯ

ಮೂರನೆಯ ಅಧ್ಯಾಯ.

ಭಗವತ್ಕಥಾಶ್ರವಣಾಸಕ್ತಿಯು.

ಅನಂತರದಲ್ಲಿ ಶುಕಮುನಿಯು ಪರೀಕ್ಷಿದ್ರಾಜನನ್ನು ಕುರಿತು ಹೇಳುವುದೆಂತೆಂದರೆ, ಅಯ್ಯಾ ರಾಜೇಂದ್ರನೆ ! ಈ ಸಂಸಾರಪ್ರವಾಹದಲ್ಲುರುಳಿ ತಡಬಡಿಸುತ್ತಿರುವ ಪ್ರಾಣಿಗಳಿಗೆ, ದೈವ ಯೋಗದಿಂದ ಬಿದಾನೊಂದು ಕಾಲದಲ್ಲಿ ಮನುಷ್ಯ ಜನ್ಮವು ಪ್ರಾಪ್ತವಾಗುವುದು. ಇಂತಹ ಮನುಷ್ಯರಲ್ಲಿ ಕೆಲವರು ಮಾತ್ರ ವಿವೇಕಿಗಳಾಗುವರು. ಅವರಲ್ಲಿಯೂ ಮರಣಕಾಲದಲ್ಲಿ ಹರಿನಾಮಸ್ಮರಣೆಯನ್ನು ಮಾಡುವವರು ಇನ್ನೂ ವಿರಳವೇ. ಆದುದರಿಂದ 'ಮರಣಕಾಲದಲ್ಲಿ ಮನುಷ್ಯನು ಅವಶ್ಯವಾಗಿ ಮಾಡಬೇಕಾದ ಕಾರ್ಯವೇನೆಂದು' ಮೊದಲು ನೀನು ನನ್ನನ್ನು ಕುರಿತು ಯಾವ ಪ್ರಶ್ನೆಯನ್ನು ಮಾಡಿದೆಯೋ, ಅದನ್ನು ವಿವರಿಸಿ ಹೇಳಿದೆನು, ಆದರೆ ಅನೇಕದೇವತೆಗಳಿರುವಾಗ ಹರಿನಾಮ ಸ್ಮರಣದಲ್ಲಿ ವಿಶೇಷವೇನೆಂದು ಕೇಳುವೆಯೇನೊ ? ಅನ್ಯದೇವತಾ ಭಜನವೆಂಬುದು ಪತ್ನೀಪುತ್ರಾದಿಗಳ ಭಜನದಂತೆ ಅಲ್ಪಫಲವನ್ನು ಕೊಡುವುದಲ್ಲದೆ ಹರಿಭಜನದಂತೆ ಮಹಾಫಲವನ್ನು ಕೊಡಲಾರದು, ಎಂತೆಂದರೆ:—॥೧॥ ಬ್ರಹ್ಮವರ್ಚಸ್ಸನ್ನು ಬಯಸುವವನು,ವೇದ ಪ್ರಕಾಶಕನಾದ ಬ್ರಹ್ಮನನ್ನೂ, ಇಂದ್ರಿಯಸಾಮರ್ಥ್ಯವನ್ನು ಬಯಸುವವನು ಇಂದ್ರನನ್ನೂ, ಸಂತಾನವನ್ನು ಅಪೇಕ್ಷಿಸುವವನು ದಕ್ಷ ಪ್ರಜಾಪತಿಯನ್ನೂ, ಐಶ್ವರ್ಯ ಕಾಮನು

ಯಾಂತು ಶ್ರೀಕಾಮ ಸ್ತೇಜಸ್ಕಾಮೋ ವಿಭಾವಸುಂ । ವಸುಕಾಮೋ ವಸೂನ್ ರುದ್ರಾನ್ ವೀರ್ಯಕಾಮೋಽಥ ವೀರ್ಯವಾನ್ ॥ ೩ ॥ ಅನ್ನಾದ್ಯಕಾಮ ಸ್ತ್ವದಿತಿಂ ಸ್ವರ್ಗಕಾಮೋಽದಿತೇಸ್ಸುತಾನ್ । ವಿಶ್ವಾನ್ ದೇವಾನ್ ರಾಜ್ಯಕಾಮ ಸ್ಸಾಧ್ಯಾನ್ ಸಂಸಾಧಕೋ ವಿಶಾಂ ॥ ೪ ॥ ಆಯುಷ್ಕಾಮೋಽಶ್ವಿನೌ ದೇವೌ ಪುಷ್ಟಿಕಾಮ ಇಲಾಂ ಯಜೇತ್ । ಪ್ರತಿಷ್ಠಾಕಾಮಃ ಪುರುಷೋ ರೋದಸೀ ಲೋಕಮಾತರೌ ॥ ೫ ॥ ರೂಪಾಭಿಕಾಮೋ ಗಂಧರ್ವಾನ್ ಸ್ತ್ರೀಕಾಮೋಽಪ್ಸರ ಉರ್ವಶೀಂ । ಆಧಿಪತ್ಯ

ಕಾಮಃ-ಇಂದ್ರಿಯಗಳಲ್ಲಿ ಸಾಮರ್ಥ್ಯವಿರಬೇಕೆಂದು ಬಯಸುವವನು, ಇಂದ್ರಂ-ಇಂದ್ರನನ್ನೂ, ಪ್ರಜಾಕಾಮಃ-ಪ್ರಜೆಯನ್ನು ಬಯಸುವವನು, ಪ್ರಜಾಪತೀನ್ - ದಕ್ಷಬ್ರಹ್ಮ ಮೊದಲಾದವರನ್ನೂ, ಯಜೇತ-ಪೂಜಿಸಬೇಕು ॥ ೧ ॥ ಶ್ರೀಕಾಮಃ - ಸಂಪತ್ತನ್ನು ಬಯಸುವವನು, ದೇವೀಂ - ಭಗವತ್ಸಂಬಂಧಿಯಾದ, ಮಾಯಾಂ-ದುರ್ಗಾದೇವಿಯನ್ನೂ, ತೇಜಸ್ಕಾಮಃ-ತೇಜಸ್ಸನ್ನು ಬಯಸುವವನು, ವಿಭಾವಸುಂ-ಅಗ್ನಿಯನ್ನೂ, ವಸುಕಾಮಃ-ಧನವನ್ನು ಬಯಸುವವನು, ವಸೂನ್-ವಸುಗಳನ್ನೂ, ವೀರ್ಯಕಾಮಃ-ಮಹಿಮೆಯನ್ನು ಬಯಸುವವನು, ವೀರ್ಯವಾನ್-ವೀರ್ಯವಂತನಾಗಿ, ರುದ್ರಾನ್-ರುದ್ರರನ್ನೂ, ॥೩॥ ಅನ್ನಾದ್ಯಕಾಮಃ-ಭಕ್ಷ್ಯಭೋಜ್ಯಾದಿಗಳನ್ನು ಬಯಸುವವನು, ಅದಿತಿಂ-ಅದಿತಿದೇವಿಯನ್ನೂ, ಸ್ವರ್ಗಕಾಮಃ-ಸ್ವರ್ಗವನ್ನು ಬಯಸುವವನು, ಅದಿತೇಃ-ಅದಿತಿಯ, ಸುತಾನ್-ಮಕ್ಕಳಾದ ದೇವತೆಗಳನ್ನೂ, ರಾಜ್ಯಕಾಮಃ-ರಾಜ್ಯವನ್ನು ಬಯಸುವವನು, ವಿಶ್ವಾನ್ ದೇವಾನ್-ವಿಶ್ವೇದೇವತೆಗಳನ್ನೂ, ವಿಶಾಂ-ಪ್ರಜೆಗಳನ್ನು ಸಂಸಾಧಕಃ-ವಶಪಡಿಸಲಪೇಕ್ಷೆಯುಳ್ಳವನು, ಸಾಧ್ಯಾನ್-ಸಾಧ್ಯರೆಂಬದೇವತೆಗಳನ್ನೂ, ಯಜೇತ್ - ಪೂಜಿಸಬೇಕು ॥ ೪ ॥ ಆಯುಷ್ಕಾಮಃ-ಆಯುಸ್ಸನ್ನು ಬಯಸುವವನು, ಅಶ್ವಿನೌದೇವೌ - ಅಶ್ವಿನೀದೇವತೆಗಳನ್ನೂ, ಪುಷ್ಟಿಕಾಮಃ-ದೇಹಬಲವನ್ನು ಬಯಸುವವನು, ಇಲಾಂ-ಭೂಮಿಯನ್ನೂ, ಪ್ರತಿಷ್ಠಾಕಾಮಃ-ಪ್ರತಿಷ್ಠೆಯನ್ನು ಬಯಸುವ, ಪುರುಷಃ-ಪುರುಷನು, ಲೋಕಮಾತರೌ-ಲೋಕಕ್ಕೆ ತಾಯಿಯಂತಿರುವ, ರೋದಸೀ-ಭೂಮ್ಯಂತರಿಕ್ಷಗಳನ್ನೂ, ಯಜೇತ್-ಪೂಜಿಸಬೇಕು. ॥ ೫ ॥

ರೂಪಾಭಿಕಾಮಃ-ರೂಪವನ್ನು ಬಯಸುವವನು, ಗಂಧರ್ವಾನ್-ಗಂಧರ್ವರನ್ನೂ, ಸ್ತ್ರೀಕಾಮಃ-ಸ್ತ್ರೀಯರನ್ನು ಬಯಸುವವನು, ಅಪ್ಸರ ಊರ್ವಶೀಂ-ಊರ್ವಶಿಯೆಂಬ ಅಪ್ಸರಸ್ತ್ರೀಯನ್ನೂ, ಸರ್ವೇಷಾಂ ಎಲ್ಲರಮೇಲೂ, ಆಧಿಪತ್ಯಕಾಮಃ-ಅಧಿಕಾರವನ್ನು ಬಯಸುವವನು, ಪರಮೇಷ್ಠಿನಂ-ಬ್ರಹ್ಮನನ್ನೂ, ಯ

ದುರ್ಗಾ ದೇವಿಯನ್ನೂ, ತೇಜಸ್ಕಾಮನು ಅಗ್ನಿಯನ್ನೂ, ಧನಾರ್ಥಿಯು ಅಷ್ಟವಸುಗಳನ್ನೂ, ಪ್ರಭಾವವನ್ನು ಇಚ್ಛಿಸುವವನು ಏಕಾದಶರುದ್ರರನ್ನೂ, ಭಕ್ಷ್ಯಭೋಜ್ಯಾದಿಗಳನ್ನುಬಯಸುವವನು ಅದಿತಿದೇವಿಯನ್ನೂ, ಸ್ವರ್ಗಾದಿಸುಖವನ್ನು ಅಪೇಕ್ಷಿಸುವವನು ದೇವತೆಗಳನ್ನೂ, ರಾಜ್ಯಾಭಿಲಾಷಿಯು ವಿಶ್ವೇದೇವತೆಗಳನ್ನೂ, ಆಧಿಪತ್ಯವನ್ನು ಬಯಸುವವನು ಸಾಧ್ಯರನ್ನೂ, ಆಯುಷ್ಯವನ್ನಪೇಕ್ಷಿಸುವವನು ಅಶ್ವಿನೀದೇವತೆಗಳನ್ನೂ, ದೇಹಶಕ್ತಿಯನ್ನು ಬಯಸುವವನು ಭೂದೇವಿಯನ್ನೂ, ಪ್ರತಿಷ್ಠೆಯನ್ನುಬಯಸುವವನು, ಲೋಕಮಾತೃಗಳಾದ ಭೂಮ್ಯಂತರಿಕ್ಷಗಳನ್ನೂ, ರೂಪವನ್ನು ಬಯಸುವವನು ಗಂಧರ್ವರನ್ನೂ, ಸ್ತ್ರೀಕಾಮನು ಊರ್ವಶಿಯನ್ನೂ, ದೊರೆತನವನ್ನುಬಯಸುವವನು ಬ್ರಹ್ಮ

ಕಾಮ ಸ್ಸರ್ವೇಷಾಂ ಯಜೇತ ಪರಮೇಷ್ಠಿನಂ ॥೬॥ ಯಜ್ಞಂ ಯಜೇ ದ್ಯಶಸ್ಕಾಮಃ ಕೋಶಕಾಮಃ ಪ್ರಚೇತಸಂ । ವಿದ್ಯಾಕಾಮಸ್ತು ಗಿರಿಶಂ ದಾಂಪತ್ಯಾರ್ಥ ಉಮಾಂ ಸತೀಂ ॥ ೭ ॥ ಧರ್ಮಾರ್ಥ ಉತ್ತಮ ಶ್ಲೋಕಂ ತಂತುಂ ತನ್ವ್ವನ್ ಪಿತೄನ್ಯಜೇತ್ । ರಕ್ಷಾಕಾಮಃ ಪುಣ್ಯಜನಾನೋಜಸ್ಕಾಮೋ ಮರುದ್ಗಣಾನ್ ॥ ೮ ॥ ರಾಜ್ಯಕಾಮೋ ಮನೂನ್ ದೇವಾನ್ ನಿರ್ಋತಿಂ ತ್ವಭಿಚರನ್ ಯಜೇತ್ । ಕಾಮಕಾಮೋ ಯಜೇತ್ಸೋಮ ಮಕಾಮಃ ಪುರುಷಂ ಪರಂ ॥೯॥ ಅಕಾಮ ಸ್ಸರ್ವ ಕಾಮೋ ವಾ ಮೋಕ್ಷಕಾಮ ಉದಾರಧೀಃ । ತೀವ್ರೇಣ ಭಕ್ತಿಯೋಗೇನ ಯಜೇತ

ಜೇತ-ಪೂಜಿಸಬೇಕು ॥೬॥ ಯಶಸ್ಕಾಮಃ-ಕೀರ್ತಿಯನ್ನು ಬಯಸುವವನು, ಯಜ್ಞಂ-ಯಜ್ಞನೆಂಬವಿಷ್ಣುವನ್ನೂ ಕೋಶಕಾಮಃ-ಬಂಡಾರವನ್ನು ಬಯಸುವವನು, ಪ್ರಚೇತಸಂ - ವರುಣನನ್ನೂ, ವಿದ್ಯಾಕಾಮಸ್ತು-ವಿದ್ಯೆಯನ್ನು ಬಯಸುವವನು, ಗಿರಿಶಂ-ಶಿವನನ್ನೂ, ದಾಂಪತ್ಯಾರ್ಥಃ-ಗಂಡಹೆಂಡರ ಪ್ರೀತಿಯನ್ನು ಬಯಸುವವನು, ಸತೀಂ-ಪತಿವ್ರತೆಯಾದ, ಉಮಾಂ - ಪಾರ್ವತಿಯನ್ನೂ, ಯಜೇತ್ - ಯಜನಮಾಡಬೇಕು ॥ ೭ ॥ ಧರ್ಮಾರ್ಥಃ-ಧರ್ಮವನ್ನು ಬಯಸುವವನು, ಉತ್ತಮಶ್ಲೋಕಂ-ಉತ್ತಮಶ್ಲೋಕನಾದ ವಿಷ್ಣುವನ್ನೂ, ತಂತುಂ-ಸಂತತಿಯನ್ನು, ತನ್ವನ್-ಬೆಳೆಸುವವನು, ಪಿತೄನ್-ಪಿತೃದೇವತೆಗಳನ್ನೂ, ರಕ್ಷಾಕಾಮಃ-ನೆಮ್ಮದಿಯನ್ನು ಬಯಸುವವನು, ಪುಣ್ಯಜನಾನ್-ಯಕ್ಷರನ್ನೂ, ಓಜಸ್ಕಾಮಃ-ಬಲವನ್ನು ಬಯಸುವವನು, ಮರುದ್ಗಣಾನ್ - ದೇವತೆಗಳನ್ನೂ, ಯಜೇತ್-ಭಜಿಸಬೇಕು ॥ ೮ ॥ ರಾಜ್ಯಕಾಮಃ-ರಾಜ್ಯವನ್ನು ಬಯಸುವವನು, ಮನೂನ್ - ಮನ್ವಂತರಗಳಿಗೊಡೆಯರಾದ ದೇವತೆಗಳನ್ನೂ, ಅಭಿಚರನ್-ಶತ್ರುಮರಣವನ್ನು ಬಯಸುವವನು, ನಿರ್ಋತಿಂ-ರಾಕ್ಷಸನನ್ನೂ, ಕಾಮಕಾಮಃ - ಭೋಗಾಭಿಲಾಷಿಯು, ಸೋಮಂ-ಚಂದ್ರನನ್ನೂ, ಭಜೇತ್-ಭಜಿಸಬೇಕು, ಅಕಾಮಃ-ವೈರಾಗ್ಯವನ್ನು ಬಯಸುವವನು, ಪರಂ-ಮಾಯಾಮುಕ್ತನಾದ, ಪುರುಷಂ-ಈಶ್ವರನನ್ನು, ಭಜೇತ್-ಭಜಿಸಬೇಕು ॥ ೯ ॥ ಅಕಾಮಃ-ಏಕಾಂತಭಕ್ತನಾಗಲಿ, ಸರ್ವಕಾಮೋವಾ-ಸಕಲವನ್ನೂ ಬಯಸುವವನಾಗಲಿ, ಉದಾರಧೀಃ-ಧಾರಾಳವಾದಬುದ್ಧಿಯುಳ್ಳ,

ದೇವನನ್ನೂ, ಕೀರ್ತಿಕಾಮನು ಯಜ್ಞನಾಯಕನಾದ ವಿಷ್ಣುವನ್ನೂ, ಬಂಡಾರವನ್ನು ಬಯಸುವವನು ವರುಣನನ್ನೂ, ವಿದ್ಯಾಭಿಲಾಷಿಯು ಶಿವನನ್ನೂ, ಅನುಕೂಲ ದಾಂಪತ್ಯವನ್ನು ಬಯಸುವವನು ಮಹಾಪತಿವ್ರತೆಯಾದ ಪಾರ್ವತಿಯನ್ನು, ಧರ್ಮಕಾಮನು ಉತ್ತಮಶ್ಲೋಕನಾದ ವಿಷ್ಣುವನ್ನೂ, ಸಂತತಿಯನ್ನು ಬೆಳಸುವವನು ಪಿತೃದೇವತೆಗಳನ್ನೂ, ನೆಮ್ಮದಿಯನ್ನು ಬಯಸುವವನು ಯಕ್ಷರನ್ನೂ, ಓಜಸ್ಕಾಮನು ದೇವತೆಗಳನ್ನೂ, ರಾಜ್ಯವನ್ನು ಬಯಸುವವನು ಮನ್ವಂತರಾಧಿಪತಿಗಳಾದ ದೇವತೆಗಳನ್ನೂ, ಶತ್ರುಮರಣವನ್ನು ಬಯಸುವವನು ನಿರ್ಋತಿಯನ್ನೂ, ಭೋಗಾಭಿಲಾಷಿಯಾದವನು ಚಂದ್ರನನ್ನೂ ಆರಾಧಿಸಬೇಕು. ವೈರಾಗ್ಯವನ್ನು ಬಯಸುವವನು ಮಾಯಾಮುಕ್ತನಾದ ಈಶ್ವರನನ್ನೂ ಭಜಿಸಬೇಕು ॥ ೭-೯ ॥

ಏಕಾಂತಭಕ್ತನಾಗಲಿ, ಸರ್ವಕಾಮನಾಗಲಿ, ನಿರುಪಾಧಿಕನೂ ಪರಿಪೂರ್ಣನೂ

ಪುರುಷಂ ಪರಂ ॥ ೧೦ ॥ ಏತಾವಾನೇವ ಯಜತಾ ಮಿಹ ನಿಶ್ರೇಯ ಸೋದಯಃ । ಭಗವ ತ್ಯಚಲೋ ಭಾವೋ ಯದ್ಭಾಗವತ ಸಂಗತಃ ॥೧೧॥ ಜ್ಞಾನಂ ಯದಾ ಪ್ರತಿನಿವೃತ್ತ ಗುಣೋರ್ಮಿ ಚಕ್ರ ಮಾತ್ಮಪ್ರಸಾದ ಉತ ಯತ್ರ ಗುಣೇಷ್ವಸಂಗಃ।ಕೈವಲ್ಯ ಸಮ್ಮತಪಥ ಸ್ತ್ವಥ ಭಕ್ತಿಯೋಗಃ ಕೋ ನಿರ್ವೃತೋ ! ಹರಿಕಥಾಸು ರತಿಂ ನಕುರ್ಯಾತ್ ! ॥ ೧೨ ॥ ಶ್ರೀಶೌನಕಃ ॥ ಇತ್ಯಭಿವ್ಯಾಹೃತಂ ರಾಜಾ ನಿಶಮ್ಯ ಭರತರ್ಷಭಃ । ಕಿಮನ್ಯ ತ್ಪೃಷ್ಟ ವಾನ್ ? ಭೂಯೋ ವೈಯ್ಯಾಸಕಿ ಮೃಷಿಂ ಕವಿಂ ॥ ೧೩ ॥ ಏತ ಚ್ಛುಶ್ರೂ

ಮೋಕ್ಷಕಾಮಃ-ಮೋಕ್ಷಾಭಿಲಾಷಿಯಾಗಲಿ, ತೀವ್ರೇಣ - ಅಚಂಚಲವಾದ, ಭಕ್ತಿಯೋಗೇನ - ಭಕ್ತಿಯೋಗ ದಿಂದ, ಪರಂ-ನಿರುಪಾಧಿಕನೂ, ಪುರುಷಂ-ಪರಿಪೂರ್ಣನೂ ಆದ ಪರಮೇಶ್ವರನನ್ನು, ಯಜೇತ - ಭಜಿಸ ಬೇಕು ॥ ೧೦ ॥ ಇಹ-ಈ ಲೋಕದಲ್ಲಿ, ಯಜತಾಂ-ಇಂದ್ರಾದಿಗಳನ್ನು ಭಜಿಸುವವರಿಗೆ, ಭಾಗವತ ಸಂಗತಃ-ಭಗವದ್ಭಕ್ತರ ಸಂಗದಿಂದ, ಭಗವತಿ-ಭಗವಂತನಲ್ಲಿ, ಅಚಲಃ-ಏಕಾಂತವಾದ, ಭಾವೋಯತ್-ಭಕ್ತಿಯೋಗವುಂಟಾಗುವುದಾವುದುಂಟೋ, ಏತಾವಾನೇವ-ಇಷ್ಟೇ, ನಿಶ್ರೇಯಸೋದಯಃ, ನಿಶ್ರೇಯಸ-ಪುರುಷಾರ್ಥದ, ಉದಯಃ-ಲಾಭವು ॥ ೧೧ ॥ ಯತ್-ಯಾವ ಹರಿಕಥೆಗಳಲ್ಲಿ, ಆಪ್ರತಿ...ಕ್ರಂ, ಆ-ಸಂಪೂರ್ಣವಾಗಿ, ಪ್ರತಿನಿವೃತ್ತ-ತೊಲಗಿಹೋದ, ಗುಣೋರ್ಮಿ-ರಾಗದ್ವೇಷಾದಿಗಳ, ಚಕ್ರಂ-ಸಮೂಹ ವುಳ್ಳ, ಜ್ಞಾನಂ-ಜ್ಞಾನವು, ಉತ-ಅನಂತರದಲ್ಲಿ, ಆತ್ಮಪ್ರಸಾದಃ-ಚಿತ್ತಶುದ್ಧಿಯೂ, ಯತ್ರ-ಯಾವ ಹರಿಕಥೆ ಯಲ್ಲಿ, ಗುಣೇಷು-ವಿಷಯಗಳಲ್ಲಿ, ಅಸಂಗಃ-ವೈರಾಗ್ಯವು ಅಥವಾ, ಉಭಯತ್ರ-ಇಹಪರಗಳೆರಡರಲ್ಲಿಯೂ, ಗುಣಗಳಲ್ಲಿ ವೈರಾಗ್ಯವೂ, ಅಥ-ಅಬಳಿಕ, ಕೈವ...ಥಃ, ಕೈವಲ್ಯ-ಮೋಕ್ಷಕ್ಕೆ, ಸಮ್ಮತ-ಇಷ್ಟವಾದ, ಪಥಃ-ದಾರಿಯೆನಿಸಿದ, ಭಕ್ತಿಯೋಗಃ - ಭಕ್ತಿಯೋಗವೂ, ವುಂಟಾಗುವುದೋ, ನಿರ್ವೃತಃ - ಸುಖಿತನಾದ ವನು, ಕೋನಾಮ-ಯಾವನುತಾನೇ, ಹರಿಕಥಾಸು-ಭಗವಚ್ಚರಿತ್ರೆಗಳಲ್ಲಿ, ರತಿಂ-ಆಸಕ್ತಿಯನ್ನು, ನಕುರ್ಯಾತ್-ಮಾಡಲಾರನು.? ॥ ೧೨ ॥ ಶೌನಕನು ಪ್ರಶ್ನೆಮಾಡುತ್ತಾನೆ:—ಭರತರ್ಷಭಃ - ಭರತವಂಶದಲ್ಲಿ ಶ್ರೇಷ್ಠನಾದ, ರಾಜಾ - ಪರೀಕ್ಷಿತನು, ಇತಿ-ಹೀಗೆ, ಅಭಿವ್ಯಾಹೃತಂ - ಹೇಳಿದುದನ್ನು, ನಿಶಮ್ಯ-ಕೇಳಿ,

---

ಆದ ಪರಮೇಶ್ವರನನ್ನು ಏಕಾಂತವಾದ ಭಕ್ತಿಯೋಗದಿಂದ ಭಜಿಸಬೇಕು ॥ ೧೦ ॥ ಎಲೈರಾಜನೆ ! ಇಂತು ಪೂರೋಕ್ತವಾದ ನಾನಾ ದೇವತಾ ಭಜನವು ನಶ್ವರ ಫಲವಾದುದರಿಂದ, ಈ ದೇವತೆಗಳನ್ನು ಭಜಿಸಿದವರಿಗೆ, ಭಗವದ್ಭಕ್ತರ ಸಂಗದಿಂದ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯುಂಟಾಗುವುದೇ ಪರಮಲಾಭವಲ್ಲದೆ ಉಳಿದುದೆಲ್ಲವೂ ತುಚ್ಛವೇ ಸರಿ ॥೧೧॥ ಯಾವ ಭಗವತ್ಕಥೆಯನ್ನು ಕೇಳುವವರಿಗೆ ಕಾಮುಕ್ರೋಧಾದಿ ಗುಣಲೇಶವೂ ಸಂಬಂಧಿಸದ ಪವಿತ್ರವಾದ ಜ್ಞಾನವೂ, ಆ ಜ್ಞಾನದಿಂದ ಚಿತ್ತಶುದ್ಧಿಯೂ, ಅದರಿಂದ ಇಹಪರವಿಷಯಗಳೆರಡರಲ್ಲಿಯೂ ವೈರಾಗ್ಯವೂ, ಅದರಿಂದ ಕೈವಲ್ಯಕ್ಕೆ ಸಮ್ಮತವಾದ ಮಾರ್ಗವೆನಿಸಿದ ಭಕ್ತಿಯೋಗವೂ ಉಂಟಾಗುವುದೋ, ಅಂತಹ ಹರಿಕಥಾಮೃತದಲ್ಲಿ ರುಚಿಯನ್ನು ಬಲ್ಲವನಾವನುತಾನೇ ಆಸಕ್ತಿಯನ್ನುಮಾಡಲಾರನು? ಎಂದು ಹೇಳಿದನು ॥ ಅದನ್ನುಕೇಳಿ ಶೌನಕಮುನಿಯು ಬೆಸಗೊಳ್ಳುತ್ತಾನೆ ; ಅಯ್ಯಾ ಪಂಡಿತಾಗ್ರಣಿಯಾ ಸೂತನೆ ! ಭರತಕುಲಾವತಂಸನಾದ ವಿಷ್ಣುರಾತನು ಇಂತುಹೇಳಿದುದನ್ನು ಕೇಳಿ,

ಸತಾಂ ವಿದ್ವನ್! ಸೂತ! ನೋಽರ್ಹಸಿ ಭಾಷಿತುಂ। ಕಥಾ ಹರಿಕಥೋದರ್ಕಾ
ಸ್ಸತಾಂಸ್ಯು ಸ್ಸದಸಿ ಧ್ರುವಂ ॥ ೧೪ ॥ ಸವೈ ಭಾಗವತೋ ರಾಜಾ ಪಾಂ
ಡವೇಯೋಮಹಾರಥಃ । ಬಾಲಃ ಕ್ರಿಡನಕೈಃ ಕ್ರೀಡನ್ ಕೃಷ್ಣಕ್ರೀಡಾಂ
ಯ ಆದದೇ ॥ ೧೫ ॥ ವೈಯ್ಯಾಸಕಿಶ್ಚ*ಭಗವಾನ್ ವಾಸುದೇವ ಪರಾಯ
ಣಃ । ಉರುಗಾಯಗುಣೋದಾರಾಃ ಸತಾಂ ಸ್ಯುರ್ಹಿ ಸಮಾಗಮೇ ॥೧೬॥

ಭೂಯಃ-ಮರಳಿ, ಋಷಿಂ-ಆತ್ಮವೇತ್ತನಾಗಿಯೂ, ಕವಿಂ-ಸಕಲಶಾಸ್ತ್ರವೇತ್ತನಾಗಿಯೂ, ಇರುವ, ವೈಯಾಸಕಿಂ-ವ್ಯಾಸಪುತ್ರನಾದ ಶುಕನನ್ನು ಕುರಿತು, ಕಿಮನ್ಯತ್ - ಬೇರೆಯಾವುದನ್ನು, ಪೃಷ್ಟವಾನ್ - ಕೇಳಿದನು ? ॥ ೧೩ ॥ ಹೇವಿದ್ವನ್-ಎಲೈಪಂಡಿತನಾದ.ಸೂತ-ಸೂತನೆ ? ಸತಾಂ - ಸತ್ಪುರುಷರ, ಸದಸಿ-ಸಭೆಯಲ್ಲಿ, ಹರಿ...ರ್ಕಾಃ, ಹರಿಕಥಾ-ಭಗವತ್ಕಥೆಯೇ, ಉದರ್ಕಾಃ-ಫಲವಾಗುಳ್ಳ, ಕಥಾಃ - ಚರಿತ್ರೆಗಳು ಸ್ಯುಃ-ಉಂಟಾಗುವುವು, ಧ್ರುವಂ-ದಿಟ. ಅದರಿಂದ, ಶುಶ್ರೂಷತಾಂ - ಕೇಳಲಪೇಕ್ಷಿಸುವ. ನಃ-ನಮಗೆ ಏತತ್-ಇದನ್ನು, ಭಾಷಿತುಂ-ಹೇಳುವುದಕ್ಕೆ, ಅರ್ಹಸಿ-ಯೋಗ್ಯನಾಗುತ್ತಿ ॥ ೧೪ ॥

ಯಃ-ಯಾವನು. ಬಾಲಃ-ಬಾಲನಾಗಿ, ಕ್ರೀಡನಕೈಃ-ಆಟದಸಾಮಾನುಗಳಿಂದ, ಕ್ರೀಡನ್ - ಆಡುವಾಗಲೇ, ಕೃಷ್ಣಕ್ರೀಡಾಂ-ಕೃಷ್ಣನ ಪೂಜಾರೂಪವಾದ ಆಟವನ್ನು, ಆದದೇ-ನಡೆಯಿಸುತ್ತಿದ್ದನೋ, ಪಾಂಡವೇಯಃ-ಪಾಂಡವ ವಂಶದಲ್ಲಿಜನಿಸಿದ, ಮಹಾರಥಃ- ಮಹಾಶೂರನಾದ. ಸವೈರಾಜಾ - ಆ ಪರೀಕ್ಷಿದ್ರಾಜನೇ, ಭಾಗವತಃ-ಭಗವದ್ಭಕ್ತನು ॥ ೧೫ ॥ ಭಗವಾನ್-ಭಗವಂತನಾದ,ವೈಯಾಸಕಿಶ್ಚ - ಶುಕಮುನಿಯೂ, ವಾಸುದೇವಪರಾಯಣಃ-ವಾಸುದೇವನನ್ನೇ ನಂಬಿರುವವನು, ಆದುದರಿಂದ, ಸತಾಂ - ಸತ್ಪುರುಷರ, ಸಮಾಗಮೇ - ಸಹವಾಸದಲ್ಲಿ, ಉರು...ರಾಃ-ಉರುಗಾಯ-ಭಗವಂತನ, ಗುಣ - ಗುಣಗಳಿಂದ,

ಸಕಲವೇದ ಶಾಸ್ತ್ರ ಪಾರಂಗತನಾಗಿ, ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿರುವ ವ್ಯಾಸನಂದನನಾದ ಶುಕಮುನಿಯನ್ನು ಕುರಿತು ಮತ್ತಾವಸಂಗತಿಯನ್ನು ಕೇಳಿದನು ? ॥೧೩॥ ಸತ್ಪುರುಷರ ಸಮಾಜದಲ್ಲಿ ನಡೆಯುವ ಕಥೆಗಳು ಮಹಾಫಲಗಳಾದ ಹರಿಕಥೆಗಳಿಂದ ಸೇರಿರುವುವಾದಕಾರಣ, ಅಂತವುಗಳನ್ನು ಕೇಳಬೇಕೆಂದು ತವಕಿಸುತ್ತಿರುವ ನಮಗೆ ಆ ಚರಿತ್ರೆಗಳನ್ನು ತಿಳುಹು ॥ ೧೪ ॥ ಪಾಂಡವರಿಗೆಮೊಮ್ಮಗನೂ, ಮಹಾಶೂರನೂ, ಆದ ಪರೀಕ್ಷಿದ್ರಾಜನು ಚಿಕ್ಕಂದಿನಲ್ಲಿ ಆಟಗಳನ್ನಾಡುವಾಗಲೇ ಹರಿಪೂಜಾರೂಪವಾದ ಆಟವನ್ನಾಡುತ್ತಿದ್ದನಾದುದರಿಂದ ಆತನು ಮಹಾಭಾಗವತನೇ ಸರಿ ॥ ೧೫ ॥ ಮಹಾಮಹಿಮನಾದಶುಕಮುನಿಯೂ, ಯಾವಾಗಲೂ ವಾಸುದೇವನನ್ನೇ ನಂಬಿ ಆತ್ಮಾರಾಮನಾಗಿರುವುದರಿಂದ ಆತನನ್ನು ಹೇಳುವುದೇನು ? ಇಂತು ಈರ್ವರೂ ಭಾಗವತೋತ್ತಮರಾದುದರಿಂದ, ಅವರುಸೇರಿದಾಗ ಆ ಸಮಾಜದಲ್ಲಿ ಭಗವಚ್ಚರಿತ್ರದಿಂದ ಪವಿತ್ರಗಳಾದ ಸತ್ಕಥೆಗಳು ನಡೆಯುವುದೇನಾಶ್ಚರ್ಯವಲ್ಲ ॥ ೧೬ ॥ ಅಲ್ಲದೆ ಯಾವನು ಉತ್ತಮ ಶ್ಲೋಕನಾಗ

* ಉತ್ಪತ್ತಿಂಚ ವಿನಾಶಂಚ ಭೂತಾನಾ ಮಾಗತಿಂ ಗತಿಂ।ವೇತ್ತಿ ವಿದ್ಯಾಮವಿದ್ಯಾಂಚ ಸವಾಚ್ಯೋ ಭಗವಾನಿತಿ। ಪ್ರಾಣಿಗಳ ಹುಟ್ಟು, ಸಾವು, ನೆಲೆ,ವಿದ್ಯೆ, ಇತ್ಯಾದಿಗಳನ್ನು ತಿಳಿದವನು ಭಗವಂತನೆನಿಸುವನು.

ಆಯುರ್ಹರತಿವೈ ಪುಂಸಾ ಮುದ್ಯ ನ್ನಸ್ತಂಚಯ ನ್ನಸೌ॥ ತಸ್ಯರ್ತೇಯತ್ ಕ್ಷಣೋ ನೀತ ಉತ್ತಮಶ್ಲೋಕವಾರ್ತಯಾ ॥ ೧೭ ॥ ತರವಃ ಕಿಂ ನಜೀವಂತಿ ? ಭಸ್ತ್ರಾಃ ಕಿಂ ನಶ್ವಸಂತ್ಯುತ ? ।ನಖಾದಂತಿ? ನಮೇಹಂತಿ?ಕಿಂ ಗ್ರಾಮೇ ಪಶವೋಽಪರೇ ॥ ೧೮ ॥ ಶ್ವವಿಡ್ವರಾಹೋಷ್ಟ್ರಖರೈಃ ಸಂಸ್ತುತಃ ಪುರುಷಃ ಪಶುಃ।ನಯತ್ಕರ್ಣ ಪಥೋಪೇತೋ ಜಾತುನಾಮ ಗದಾಗ್ರಜಃ ॥ ೧೯ ॥ ಬಿಲೇ ಬತೋರುಕ್ರಮ ವಿಕ್ರಮಾನ್ ಯೇ ನಶೃಣ್ವತಃ

ಉದಾರಾಃ - ಉತ್ತಮಗಳಾದ, ಕಥಾಃ-ಕಥೆಗಳು, ಸ್ಯುರ್ಹಿ - ನಡೆಯುವುವಷ್ಟೆ ॥ ೧೬ ॥ ಉತ್ತಮಶ್ಲೋಕವಾರ್ತಯಾ-ಭಗವತ್ಕಥೆಯಿಂದ, ಯತ್‌ಕ್ಷಣಃ-ಯಾವ ಕ್ಷಣಕಾಲವು, ನೀತಃ-ಕಳೆಯಲ್ಪಟ್ಟಿತೋ, ತಸ್ಯಋತೇ-ಅದನ್ನುಳಿದು, ಅಸೌ ಈ ಸೂರ್ಯನು, ಉದ್ಯನ್-ಉದಯಿಸುತ್ತಲೂ, ಅಸ್ತಂ-ಅಸ್ತವನ್ನು, ಯಂಶ್ಚ-ಹೊಂದುತ್ತಲೂ, ಪುಂಸಾಂ-ಪ್ರಾಣಿಗಳ, ಆಯುಃ-ಆಯುಸ್ಸನ್ನು, ಹರತಿವೈ ಕಳೆಯುವನು॥೧೭॥

ತರವಃ-ಗಿಡಗಳು, ನಜೀವಂತಿಕಿಂ-ಬದುಕುವುದಿಲ್ಲವೆ ? ಭಸ್ತ್ರಾಃ-ಚರ್ಮದಚೀಲಗಳು, ನಶ್ವಸಂತಿಕಿಂ-ಗಾಳಿಯನ್ನು ಬಿಡುವುದಿಲ್ಲವೇ ? ಗ್ರಾಮೇ-ಗ್ರಾಮದಲ್ಲಿರುವ, ಅಪರೇ-ಇತರಗಳಾದ, ಪಶವಃ-ಪಶುಗಳು ನಖಾದಂತಿ-ತಿನ್ನುವುದಿಲ್ಲವೆ ? ನಮೇಹಂತಿ - ಮೈಥುನವನ್ನು ಮಾಡುವುದಿಲ್ಲವೆ ? ॥ ೧೮ ॥ ಗದಾಗ್ರಜಃ-ಶ್ರೀಹರಿಯು, ಜಾತು-ಒಮ್ಮೆಯಾದರೂ, ಯ...ತಃ, ಯತ್-ಯಾವನ, ಕರ್ಣಪಥ-ಶ್ರೋತ್ರಮಾರ್ಗವನ್ನು, ಉಪೇತಃ - ಹೊಂದಿದವನು, ನ - ಆಗುವುದಿಲ್ಲವೋ, ಸಪುರುಷಃ - ಆ ಪುರುಷನು, ಶ್ವ...ರೈಃ, ಶ್ವ-ನಾಯಿ, ವಿಡ್ವರಾಹ - ಊರುಹಂದಿ, ಉಷ್ಟ್ರ-ಒಂಟೆ, ಖರೈಃ - ಕತ್ತೆ, ಇವುಗಳಿಂದ, ಸಂಸ್ತುತಃ-ಹೋಲಿಸಲ್ಪಟ್ಟ, ಪಶುಃ-ಪಶುವೇಸರಿ ॥ ೧೯ ॥ ನರಸ್ಯ-ಮನುಷ್ಯನ, ಯೇ-ಯಾವ, ಕರ್ಣಪುಟೇ-ಕಿವಿಗಳು, ಉರು...ಮಾನ್-ಉರುಕ್ರಮ-ವಿಷ್ಣುವಿನ, ವಿಕ್ರಮಾನ್-ಚರಿತ್ರೆಗಳನ್ನು, ನಶೃಣ್ವತಃ-ಕೇಳುವುದಿಲ್ಲವೋ, ತೇ-ಅವು, ಬಿಲೇ-ತೂತುಗಳೇ. ಬತ-ಕಷ್ಟವು, (ಯಾವನಾಲಗೆಯು),ಉರುಗಾಯಗಾಥಾಃ, ಉರುಗಾಯ-ಭಗವಂತನ, ಗಾಥಾಃ-ಕಥೆಗಳನ್ನು, ನಚೋಪಗಾಯತಿ - ಹೊಗಳುವುದಿಲ್ಲವೋ, ಅಸತೀ-ದುಷ್ಟ

ಭಗವಂತನ ಸತ್ಕಥಾಶ್ರವಣದಿಂದ ಒಂದುಕ್ಷಣವಾದರೂ ಕಾಲವನ್ನು ಕಳೆಯುವನೋ, ಅವನ ಆಯುಷ್ಯವುಸಾರ್ಥಕವೇ ಹೊರತು, ಉಳಿದವರ ಜೀವಿತಕಾಲವೆಲ್ಲವೂ ಸೂರ್ಯನ ಉದಯಾಸ್ತಗಳಿಂದಲೇ ವ್ಯರ್ಥವಾಗಿ ಕಳೆದು ಹೋಗುವುದು.ಆದುದರಿಂದ ನಮ್ಮ ಉಳಿದ ಆಯುಷ್ಯವನ್ನಾದರೂ ಹರಿಕಥಾಶ್ರವಣದಿಂದ ಸಾರ್ಥಕಗೊಳಿಸು ॥ ೧೭ ॥

ಪ್ರಾಣಿಗಳ ಆಯುಷ್ಯಕ್ಕೆ ಜೀವನವೇ ಫಲವಲ್ಲ, ಗಿಡಮರಗಳು ಬಹುಕಾಲಬದುಕಿರುವುದಿಲ್ಲವೆ ? ಕೊಲುಮೆಯ ತಿದಿಗಳು ಉಸಿರುಬಿಡುವುದಿಲ್ಲವೆ? ಗ್ರಾಮಗಳಲ್ಲಿರುವ ನಾಯಿ, ಹಂದಿ,ಮೊದಲಾದ ಪಶುಗಳು ಹೊಟ್ಟೆಯನ್ನು ತುಂಬಿಸಿಕೊಳ್ಳುವುದಿಲ್ಲವೆ? ಕಾಮವ್ಯಾಪಾರವನ್ನು ಮಾಡುವುದಿಲ್ಲವೆ ? ॥ ೧೮ ॥ ಆದುದರಿಂದ ಯಾವಪುರುಷನು, ಪವಿತ್ರವಾದ ಭಗವಚ್ಚರಿತ್ರವನ್ನು ಒಮ್ಮೆಯಾದರೂ ಕಿವಿಗಳಿಂದ ಕೇಳುವುದಿಲ್ಲವೋ, ಅವನು ಅಮೇಧ್ಯಾಶಿಯಾದ ಹಂದಿಯಂತೆ ವಿಷಯಾಸಕ್ತನಾಗಿಯೂ, ಮುಳ್ಳುಗಿಡವನ್ನು ಮೆಲ್ಲುವ ಒಂಟೆಯಂತೆ ದುಃಖವಿಷಯಾಭಿಲಾಷಿಯಾಗಿಯೂ, ಕತ್ತೆಯಂತೆ ಭಾರವನ್ನು ಹೊರುವವನಾಗಿಯೂ, ಪಶುವಿಗೆಸಮಾನ ನೆನಿಸುವನು ॥೧೯॥ ಮತ್ತು ಯಾವಪುರುಷನ ಶ್ರೋತ್ರ

ಕರ್ಣಪುಟೇ ನರಸ್ಯ । ಜಿಹ್ವಾಸತೀ ದರ್ದುರಿಕೇವ ಸೂತ ! ನಚೋಪ
ಗಾಯತ್ಯುರುಗಾಯಗಾಥಾಃ ॥ ೨೦ ॥ ಭಾರಃ ಪರಂ ಪಟ್ಟಕಿರೀಟಜುಷ್ಟ
ಮಪ್ಯುತ್ತಮಾಂಗಂ ನನಮೇನ್ಮುಕುಂದಂ । ಶಾವೌ ಕರೌ ನೋ ಕುರುತಃ
ಸಪರ್ಯಾಂ ಹರೇರ್ಲಸತ್ಕಾಂಚನ ಕಂಕಣೌವಾ ॥ ೨೧ ॥ ಬರ್ಹಾಯಿ
ತೇ ತೇ ನಯನೇ ನರಾಣಾಂ ಲಿಂಗಾನಿ ವಿಷ್ಣೋರ್ನನಿರೀಕ್ಷತೋ ಯೇ। ಪಾ
ದೌ ನೃಣಾಂ ತೌ ದ್ರುಮಜನ್ಮಭಾಜೌ ಕ್ಷೇತ್ರಾಣಿ ನಾನುವ್ರಜತೋ ಹರೇ
ರ್ಯೌ ॥ ೨೨ ॥ ಜೀವಚ್ಛವೋ ಭಾಗವತಾಂಘ್ರಿರೇಣುಂ ನಜಾತು ಮ
ರ್ತ್ಯೋಽಭಿಲಷೇತ ಯಸ್ತು। ಶ್ರೀವಿಷ್ಣುಪದ್ಯಾ ಮನುಜ ಸ್ತುಲಸ್ಯಾಃ ಶ್ವ

ವಾದ, ಜಿಹ್ವಾ-ಆ ನಾಲಿಗೆಯು, ದರ್ದುರಿಕೇವ-ಕಪ್ಪೆಯ ನಾಲಿಗೆಯಂತಲ್ಲವೆ ? ॥ ೨೦ ॥

ಯಾವತಲೆಯು, ಮುಕುಂದಂ-ವಿಷ್ಣುವನ್ನು, ನನಮೇತ್-ವಂದಿಸುವುದಿಲ್ಲವೋ, ಉತ್ತಮಾಂಗಂ-ಆ ತಲೆಯು, ಪಟ್ಟ...ಪಿ,ಪಟ್ಟ-ಪಟ್ಟವಸ್ತ್ರದಿಂದಲೂ,ಕಿರೀಟ-ಕಿರೀಟದಿಂದಲೂ, ಜುಷ್ಟಮಪಿ-ಕೂಡಿದ್ದರೂ, ಭಾರಃ ಪರಂ-ಭಾರವೆಂದೇ ಎನಿಸುವುದು, ಯಾವುವು, ಹರೇಃ-ವಿಷ್ಣುವಿನ, ಸಪರ್ಯಾಂ - ಪೂಜೆಯನ್ನು, ನಕುರುತಃ-ಮಾಡುವುದಿಲ್ಲವೋ, ಕರೌ - ಆ ಕೈಗಳು, ಲಸ...ಣೌ, ಲಸತ್-ಹೊಳೆಯುವ, ಕಾಂಚನ-ಚಿನ್ನದ, ಕಂಕಣೌವಾ-ಕಡಗಗಳುಳ್ಳವುಗಳಾದರೂ, ಶಾವೌ-ಹೆಣದಕೈಗಳೇ ಅಲ್ಲವೆ? ॥ ೨೧ ॥ ಯೇ-ಯಾವ, ನಯನೇ-ಕಣ್ಣುಗಳು, ವಿಷ್ಣೋಃ - ವಿಷ್ಣುವಿನ, ಲಿಂಗಾನಿ-ಮೂರ್ತಿಗಳನ್ನು, ನನಿರೀಕ್ಷತಃ-ನೋಡುವುದಿಲ್ಲವೋ, ತೇ-ಅವು, ಬರ್ಹಾಯಿತೇ-ನವಿಲುಗರಿಯ ಕಣ್ಣಿನಂತಲ್ಲವೆ ? ಯೌ-ಯಾವ ಪಾದಗಳು, ಹರೇಃ-ವಿಷ್ಣುವಿನ,ಕ್ಷೇತ್ರಾಣಿ-ಪುಣ್ಯಸ್ಥಳಗಳಿಗೆ, ನಾನುವ್ರಜತಃ-ಹೋಗುವುದಿಲ್ಲವೋ, ನೃಣಾಂ-ಪುರುಷರ, ತೌ-ಆ, ಪಾದೌ-ಪಾದಗಳು, ದ್ರುಮಜನ್ಮಭಾಜೌ-ಗಿಡದಂತೆ ಜನ್ಮವನ್ನು ಪಡೆದವುಗಳೇ ಸರಿ ॥ ೨೨ ॥ ಯಸ್ತು - ಯಾವನಾದರೇ, ಭಾಗ...ಣುಂ, ಭಾಗವತ-ಭಕ್ತರ, ಅಂಘ್ರಿ - ಪಾದಗಳ, ರೇಣುಂ - ಧೂಳಿಗಳನ್ನು, ಜಾತು-ಒಮ್ಮೆಯಾದರೂ, ನಾಭಿಲಷೇತ-ಬಯಸುವುದಿಲ್ಲವೋ, ಸಃ-ಆ, ಮರ್ತ್ಯಃ-ಮನುಷ್ಯನು, ಜೀವಚ್ಛವಃ - ಉಸಿರಾಡುವಹೆಣವೇದಿಟ, ಯಸ್ತು-ಯಾವನಾದರೆ, ಶ್ರೀವಿಷ್ಣುಪದ್ಯಾಃ-ವಿಷ್ಣುವಿನಪಾದದಲ್ಲಿರುವ, ತುಲಸ್ಯಾಃ - ತುಲಸೀದಳದ, ಗಂಧಂ - ವಾಸನೆಯನ್ನು, ನವೇದ, ತಿಳಿಯಲಾರನೋ, ಸಃ-

ಪುಟಗಳು ಹರಿಕಥಾಮೃತವನ್ನು ಪಾವನವಮಾಡುವುದಿಲ್ಲವೋ, ಅವು ಹಾಳು ಬಿಲಗಳೇ ಹೊರತು ಕಿವಿಗಳಲ್ಲ, ವಾಸುದೇವನ ಮಹಿಮೆಯನ್ನು ಹೊಗಳದ ನಾಲಗೆಯು ಕಪ್ಪೆಯ ನಾಲಗೆಯಂತೆ ವ್ಯರ್ಥವೇಸರಿ ॥ ೨೦ ॥ ಶ್ರೀಕೃಷ್ಣಮೂರ್ತಿಯನ್ನು ವಂದಿಸದ ತಲೆಯು ,ಕಿರೀಟ ಪಟ್ಟಗಳಿಂದ ಅಲಂಕೃತವಾಗಿದ್ದರೂ ಭಾರವೇ ಸರಿ. ಹರಿಯನ್ನು ಪೂಜಿಸದ ಕೈಗಳು, ರತ್ನಕಂಕಣಾದಿಗಳಿಂದಲಂಕೃತಗಳಾಗಿದ್ದರೂ ಮರಗೈಗಳೇಸರಿ ॥ ೨೧ ॥ ಶ್ರೀಹರಿಯ ದಿವ್ಯಮೂರ್ತಿಗಳನ್ನು ದರ್ಶನಮಾಡದ ಕಣ್ಣುಗಳು ನವಿಲುಗರಿಯ ಕಣ್ಣುಗಳೇ ಸರಿ. ವಾಸುದೇವ ಮೂರ್ತಿಯ ದಿವ್ಯಕ್ಷೇತ್ರಗಳಿಗೆ ಪ್ರಯಾಣಮಾಡದ ಪಾದಗಳು ಗಿಡದ ಬೇರುಗಳಂತೆ ವ್ಯರ್ಥಗಳೇಸರಿ ॥ ೨೨ ॥ ಭಗವದ್ಭಕ್ತರಾದ ಸಾಧುಗಳ ಪಾದ ಧೂಳಿಯನ್ನು ಒಮ್ಮೆಯಾದರೂ ಶಿರಸ್ಸಿನಲ್ಲಿ ಧರಿಸದ ಮಾನವನು ಬದುಕಿದ್ದರೂ ಸತ್ತವನೇ ಸರಿ. ಕಮಲಾಕ್ಷನ ಪಾದಕಮಲದಲ್ಲಿರುವ ತುಲಸೀದಳದ ಗಂಧವನ್ನಾಘ್ರಾಣಿಸದ ಪುರು

ಸ ಜ್ಞಾವೋ ಯಸ್ತು ನವೇದ ಗಂಧಂ ॥ ೨೩ ॥ ತದಶ್ಮಸಾರಂ ಹೃದಯಂ ಬತೇದಂ! ಯದ್ಗೃಹ್ಯಮಾಣೈರ್ಹರಿನಾಮಧೇಯೈಃ । ನವಿಕ್ರಿಯೇತಾಥ ಯದಾವಿಕಾರೋ ನೇತ್ರೇ ಜಲಂ ಗಾತ್ರರುಹೇಷು ಹರ್ಷಃ ॥ ೨೪ ॥ ಅಥಾಭಿಧೇಹ್ಯಂಗ ! ಮನೋನುಕೂಲಂ ಪ್ರಭಾಷಸೇ ಭಾಗವತಪ್ರಧಾನಃ । ಯದಾಹ ವೈಯಾಸಕಿ ರಾತ್ಮವಿದ್ಯಾವಿಶಾರದೋ ನೃಪತಿಂ ಸಾಧು ಪೃಷ್ಟಃ ॥೨೫॥

ಇತಿ ತೃತೀಯೋಧ್ಯಾಯಃ.

ಅವನು, ಶ್ವಸ-ಉಸಿರುಬಿಡುವ, ಶವಃ-ಹೆಣವೇ ಸರಿ ॥ ೨೩ ॥ ಯತ್-ಯಾವಮನಸ್ಸು, ಗೃಹ್ಯಮಾಣೈಃ-ಶ್ರವಣಾದಿಗಳಿಂದ ತಿಳಿದುಬರುವ, ಹರಿನಾಮಧೇಯೈಃ-ವಿಷ್ಣುನಾಮಗಳಿಂದ, ನವಿಕ್ರಿಯೇತ-ವಿಕಾರವನ್ನು ಪಡೆಯುವುದಿಲ್ಲವೋ, ಅಥ - ಅದರಿಂದ, ನೇತ್ರೇ-ಕಣ್ಣಿನಲ್ಲಿ, ಜಲಂ - ಆನಂದಬಾಷ್ಪವು, ಗಾತ್ರರುಹೇಷು-ರೋಮಗಳಲ್ಲಿ, ಹರ್ಷ-ಉಬ್ಬಿಕೆಯೂ, ಎಂಬ, ವಿಕಾರಃ - ಬದಲಾವಣೆಯು, ಯದಾ-ಯಾವಾಗ, ನ-ಉಂಟಾಗುವುದಿಲ್ಲವೋ, ತದಿದಂ-ಆ ಈ, ಹೃದಯಂ-ಮನಸ್ಸು, ಅಶ್ಮಸಾರಂ - ಕಲ್ಲಿನಂತೆ ಕಠಿನವಲ್ಲವೆ ? ಬತ-ಕಷ್ಟವು ॥ ೨೪ ॥ ಹೇಅಂಗ-ಎಲೈಸೂತನೆ ! ಭಾಗವತಪ್ರಧಾನಃ-ಭಕ್ತಾಗ್ರೇಸರನಾದ ನೀನು, ಮನೋನುಕೂಲಂ - ಮನಸ್ಸಿಗೊಪ್ಪುವಂತೆ, ಪ್ರಭಾಷಸೇ-ಹೇಳುವೆ, ಅಥ-ಆದುದರಿಂದ, ಆತ್ಮವಿದ್ಯಾವಿಶಾರದಃ-ಬ್ರಹ್ಮವಿದ್ಯೆಯಲ್ಲಿ ಪಾರಂಗತನಾದ, ವೈಯಾಸಕಿಃ - ಶುಕಮುನಿಯು, ಸಾಧುಪೃಷ್ಟಃ-ಚೆನ್ನಾಗಿಪ್ರಶ್ನೆಮಾಡಲ್ಪಟ್ಟವನಾಗಿ, ನೃಪತಿಂ-ಪರೀಕ್ಷಿತನನ್ನು ಕುರಿತು, ಯದಾಹ-ಯಾವುದನ್ನು ಹೇಳಿದನೋ, ಅದನ್ನು, ಅಭಿಧೇಹಿ-ವಿವರಿಸು ॥ ೨೫ ॥

ತೃತೀಯಾಧ್ಯಾಯಂ ಸಮಾಪ್ತಂ.

ಷನು ಉಸಿರಾಡುವಹೆಣವೇಸರಿ ॥ ೨೩ ॥ ಸಾಧುಗಳೆಲ್ಲರೂ ನಲಿದು ಕೊಂಡಾಡುತ್ತಿರುವ ಶ್ರೀಹರಿಯ ದಿವ್ಯನಾಮಗಳನ್ನು ಕೇಳಿದರೂ ಯಾವನಿಗೆ ಮನವು ಕರಗುವುದಿಲ್ಲವೋ, ಕಣ್ಣುಗಳಿಂದಾನಂದ ಬಾಷ್ಪಗಳುರುಳುವುದಿಲ್ಲವೋ, ಶರೀರದಲ್ಲಿ ರೋಮಾಂಚವಾಗುವುದಿಲ್ಲವೋ, ಅವನನ್ನು ಪಾಷಾಣವೆಂದುಹೇಳಬೇಕಲ್ಲದೆ ಮನುಷ್ಯನೆಂದು ಕರೆಯಬಹುದೆ॥

ಇಂತು ಭಗವದ್ಭಕ್ತಿಯಿಲ್ಲದ ಪುರುಷನ ಜನ್ಮವು ವ್ಯರ್ಥವೆನಿಸುವುದಾದುದರಿಂದ, ಎಲೈಸೂತನೆ ! ಭಾಗವತ ಚೂಡಾಮಣಿಯಾದನೀನು, ಶ್ರೋತೃಗಳ ಮನಸ್ಸಿಗಿಂಪಾಗಿಯೂ, ಕಿವಿಗಳಿಗೆ ಸೊಂಪಾಗಿಯೂ, ಇರುವಂತೆ ಭಗವದ್ಗುಣಗಳನ್ನು ಬಣ್ಣಿಸುವೆಯಾದಕಾರಣ, ಮಹಾ ಭಾಗವತನೂ ಬ್ರಹ್ಮವಿದ್ಯಾಪಾರಂಗತನೂ, ದ್ವೈಪಾಯನತನೂಜನೂ ಆದ, ಶುಕಮುನಿಯು, ಪ್ರಾರ್ಥಿತನಾಗಿ, ಪರೀಕ್ಷಿನ್ನರೇಂದ್ರನಿಗಾವುದನ್ನುಪದೇಶಿಸಿದನೋ, ಆ ಸಂಗತಿಯನ್ನು ನಮಗೆ ನಿರೂಪಿಸು, ಎಂದು ಶೌನಕಾದಿಗಳು ಸೂತನನ್ನು ಬೆಸಗೊಳ್ಳುತ್ತಿದ್ದರೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್,

—:ಮೂರನೆಯಅಧ್ಯಾಯಂ ಮುಗಿದುದು:—

ಓಂ ನಮಃ ಪರಮಾತ್ಮನೇ.

ಅಥ ಚತುರ್ಥೋಽಧ್ಯಾಯಃ

ಶ್ರೀಸೂತಃ॥ ವೈಯಾಸಕೇ ರಿತಿ ವಚ ಸ್ತತ್ತ್ವನಿಶ್ಚಯ ಮಾತ್ಮನಃ । ಉಪಧಾರ್ಯ ಮತಿಂ ಕೃಷ್ಣೇ ಔತ್ತರೇಯ ಸ್ಸತೀಂ ವ್ಯಧಾತ್ ॥ ೧ ॥ ಆತ್ಮ ಜಾಯಾ ಸುತಾ ಗಾರ ಪಶುದ್ರವಿಣ ಬಂಧುಷು । ರಾಜ್ಯೇ ಚಾಽವಿಕಲೇ ನಿತ್ಯಂ ನಿರೂಢಾಂ ಮಮತಾಂ ಜಹೌ ॥ ೨ ॥ ಪಪ್ರಚ್ಛ ಚೇಮ ಮೇವಾರ್ಥಂ ಯನ್ಮಾಂ ಪೃಚ್ಛಥ ಸತ್ತಮಾಃ! । ಕೃಷ್ಣಾನುಭಾವ ಶ್ರವಣೇ ಶ್ರದ್ಧಧಾನೋ

ಚತುರ್ಥಾಧ್ಯಾಯಂ

ಕಂ ॥ ಹರಿಚರಿತವ ಬೆಸಗೊಂಡಾ। ಪರೀಕ್ಷಿತಂ ಗೊರೆ ವನಿಲ್ಲಿ ಶುಕಮುನಿ ಮುನ್ನಾ ।
ಪರಮೇಷ್ಠಿ ನಾರದಂಗೊರೆ। ದಿರವಿಂ ಸೃಷ್ಟ್ಯಾದಿ ಶೌರಿಚರಿತವ ನೊಲವಿಂ॥

ಶ್ರೀಸೂತಃ-ಸೂತನು ಹೇಳುತ್ತಾನೆ: ಔತ್ತರೇಯಃ-ಉತ್ತರೆಯಮಗನಾದ ಪರೀಕ್ಷಿತನು, ಇತಿ-ಈರೀತಿಯಾಗಿ, ಆತ್ಮನಃ-ಪರಮಾತ್ಮನ, ತತ್ವನಿಶ್ಚಯಂ-ತತ್ವವನ್ನು ನಿಶ್ಚಯಿಸುವ, ವೈಯಾಸಕೇಃ - ಶುಕಮುನಿಯ, ವಚಃ-ಮಾತನ್ನು, ಉಪಧಾರ್ಯ-ಯೋಚಿಸಿ, ಕೃಷ್ಣೇ-ಕೃಷ್ಣನಲ್ಲಿ, ಸತೀಂ-ಶುದ್ಧವಾದ, ಮತಿಂ-ಬುದ್ಧಿಯನ್ನು, ವ್ಯಧಾತ್-ಮಾಡಿದನು ॥೧॥ ಆತ್ಮ...ಷು, ಆತ್ಮ-ಶರೀರ, ಜಾಯಾ-ಹೆಂಡಿರು, ಸುತ - ಮಕ್ಕಳು, ಅಗಾರ-ಮನೆ, ಪಶು-ಆನೆ, ಕುದುರೆ, ಮೊದಲಾದುವು, ದ್ರವಿಣ-ಧನವು, ಬಂಧುಷು-ನಂಟರು ಇವರಲ್ಲಿಯೂ, ಅವಿಕಲೇ - * ಸಪ್ತಾಂಗಗಳಿಂದಕೂಡಿದ, ರಾಜ್ಯೇಚ - ರಾಜ್ಯದಲ್ಲಿಯೂ, ನಿತ್ಯಂ-ಯಾವಾಗಲೂ, ನಿರೂಢಾಂ-ನೆಲೆಗೊಂಡಿರುವ, ಮಮತಾಂ-ಅಭಿಮಾನವನ್ನು, ಜಹೌ-ಬಿಟ್ಟನು ॥

ಹೇ ಸತ್ತಮಾಃ - ಅಯ್ಯಾ ಸಾಧುಗಳಿರಾ ? ಮಾಂ-ನನ್ನನ್ನು ಕುರಿತು, ಯತ್ - ಯಾವುದನ್ನು, ಪೃಚ್ಛಥ - ಬೆಸಗೊಂಡಿರೋ, ಇಮಮೇವ ಅರ್ಥಂ-ಇದೇ ಭಗವಚ್ಚರಿತ್ರೆಯನ್ನೇ, ಕೃಷ್ಣಾ...ನೋ,

ಸೃಷ್ಟಿಮೊದಲಾದುವುಗಳನ್ನು ಪ್ರಶ್ನೆಮಾಡುವುದು

ಅನಂತರದಲ್ಲಿ ಸೂತಪೌರಾಣಿಕನು ಶೌನಕಾದಿಮಹರ್ಷಿಗಳನ್ನು ಕುರಿತು ಹೇಳುತ್ತಾನೆ:-ಅಯ್ಯಾ ತಾಪಸೋತ್ತಮರಿರಾ? ಬಳಿಕಪರೀಕ್ಷಿದ್ರಾಜನು ಶುಕಮುನಿಯಮಾತುಗಳನ್ನು ಕೇಳಿ ಆ ವಾಕ್ಯಗಳೇ ಪರಮಾತ್ಮ ತತ್ವವನ್ನು ನಿಶ್ಚಯಿಸಿ ತಿಳಿಸುವುದೆಂತಲೂ, ಶ್ರೀಕೃಷ್ಣನೊಬ್ಬನೇ ಭಜಿಸಲ್ಪಡತಕ್ಕವನೆಂತಲೂ,ತಿಳಿದು ಶ್ರೀಕೃಷ್ಣನಲ್ಲಿಸಂಪೂರ್ಣವಾದ ಭಕ್ತಿಯನ್ನಿಟ್ಟನು ॥೧॥ ಅಲ್ಲದೆ ಶರೀರ,ಹೆಂಡಿರು, ಮಕ್ಕಳು, ಮನೆ, ಆನೆ,ಕುದುರೆ, ಧನ, ಬಂಧುಗಳು ಇವರೇ ಮೊದಲಾದವರಲ್ಲಿಯೂ, ಸಕಲವಸ್ತುಸಮೃದ್ಧವಾದ ರಾಜ್ಯದಲ್ಲಿಯೂಕೂಡ ಸಂಪೂರ್ಣವಾಗಿದ್ದ ಮಮತೆಯನ್ನುಳಿದನು ॥ ೨ ॥ ಅಯ್ಯಾ ಸಾಧುಗಳಿರಾ ? ಶ್ರೀಕೃಷ್ಣಮೂರ್ತಿಯ ಮಹಿಮೆಯನ್ನು ಕೇಳುವುದರಲ್ಲಿ ಶ್ರದ್ಧೆಯುಳ್ಳ

* ದೊರೆ, ಮಂತ್ರಿ, ಪ್ರಧಾನ,ಬಂಡಾರ, ರಾಷ್ಟ್ರ,ಕೋಟೆ, ಸೇನೆ, ಇವು ಏಳೂ ರಾಜ್ಯಾಂಗಗಳು.

ಮಹಾಮನಾಃ ॥ ೩ ॥ ಸಂಸ್ಥಾಂ ವಿಜ್ಞಾಯ ಸಂನ್ಯಸ್ಯ ಕರ್ಮ ತ್ರೈವ
ರ್ಗಿಕಂಚ ಯತ್ । ವಾಸುದೇವೇ ಭಗವತಿ ಆತ್ಮಭಾವಂ ದೃಢಂಗತಃ ॥೪॥
ರಾಜೋವಾಚ॥ಸಮೀಚೀನಂ ವಚೋ ಬ್ರಹ್ಮನ್!ಸರ್ವಜ್ಞಸ್ಯ ತವಾನಘ! ।
ತಮೋ ವಿಶೀರ್ಯತೇ ಮಹ್ಯಂ ಹರೇಃ ಕಥಯತಃ ಕಥಾಂ ॥೫॥ ಭೂಯ
ಏವ ವಿವಿತ್ಸಾಮಿ ಭಗವಾ ನಾತ್ಮಮಾಯಯಾ ।*ಯಥೇದಂ ಸೃಜತೇ ವಿಶ್ವಂ
ದುರ್ವಿಭಾವ್ಯಂ ಮುನೀಶ್ವರೈಃ ॥ ೬ ॥ ಯಥಾ ಗೋಪಾಯತಿ ವಿಭು

ಕೃಷ್ಣ-ಕೃಷ್ಣನ, ಅನುಭಾವ-ಮಹಿಮೆಯ, ಶ್ರವಣೇ-ಕೇಳಿಕೆಯಲ್ಲಿ, ಶ್ರದ್ಧಧಾನಃ-ಆದರವುಳ್ಳ, ಮಹಾಮನಾಃ-ಉದಾರಮನಸ್ಕನಾದ ಪರೀಕ್ಷಿತನು, ಪಪ್ರಚ್ಛ-ಪ್ರಶ್ನೆಮಾಡಿದನು ॥ ೩ ॥ ಸಂಸ್ಥಾಂ-ಮರಣವನ್ನು, ವಿಜ್ಞಾಯ-ತಿಳಿದು, ತ್ರೈವರ್ಗಿಕಂ - ಧರ್ಮಾರ್ಥಕಾಮಗಳಿಗಾಗಿ ಮಾಡುವ, ಯತ್ ಕರ್ಮ-ಯಾವಕರ್ಮವುಂಟೋ, ತತ್-ಅದನ್ನು. ಸಂನ್ಯಸ್ಯ-ತೊರೆದು, ಭಗವತಿ-ಭಗವಂತನಾದ, ವಾಸುದೇವೇ-ವಿಷ್ಣುವಿನಲ್ಲಿ, ದೃಢಂ-ಅಚಂಚಲವಾಗಿ, ಆತ್ಮಭಾವಂ - ಪರಮಾತ್ಮಸ್ವರೂಪವನ್ನು, ಗತಃ - ಹೊಂದಿ. ಪಪ್ರಚ್ಛ-ಬೆಸಗೊಂಡನು ॥ ೪ ॥ ರಾಜಾ-ಪರೀಕ್ಷಿತನು, ಉವಾಚ-ಹೇಳಿದನು, ಅನಘ - ಪಾಪರಹಿತನಾದ, ಹೇ ಬ್ರಹ್ಮನ್-ಅಯ್ಯಾಬ್ರಾಹ್ಮಣೋತ್ತಮನೆ ? ಸರ್ವಜ್ಞಸ್ಯ-ಎಲ್ಲವನ್ನೂಬಲ್ಲ, ತವ-ನೀನು, ಹರೇಃ-ವಿಷ್ಣುವಿನ, ಕಥಾಂ-ಕಥೆಯನ್ನು, ಕಥಯತಃ-ಹೇಳಲು, ಮಹ್ಯಂ-ನನ್ನ, ತಮಃ - ಅಜ್ಞಾನವು, ವಿಶೀರ್ಯತೇ-ನಾಶವಾಗುತ್ತಿರುವುದು. ಆದುದರಿಂದ, ತವ-ನಿನ್ನ, ವಚಃ-ಮಾತು, ಸಮೀಚೀನಂ-ಶ್ಲಾಘ್ಯವಾದುದು ॥೫॥

ಭೂಯಏವ-ಮರಳಿ, ವಿವಿತ್ಸಾಮಿ-ತಿಳಿಯಲೆಳಸುವೆನು, ಭಗವಾನ್ - ಶ್ರೀಹರಿಯು, ಆತ್ಮಮಾಯಯಾ-ತನ್ನಮಾಯೆಯಿಂದ, ಮುನೀಶ್ವರೈಃ-ಮಹರ್ಷಿಗಳಿಂದ. ದುರ್ವಿಭಾವ್ಯಂ - ಭಾವಿಸುವುದಕ್ಕಾಗದ, ಇದಂ-ಈ, ವಿಶ್ವಂ-ಪ್ರಪಂಚವನ್ನು, ಯಥಾ - ಹೇಗೆ, ಸೃಜತೇ-ಸೃಜಿಸುವನೋ ॥ ೬ ॥ ವಿಭುಃ-

---

ವನಾಗಿಯೂ, ಉದಾರಮನಸ್ಕನಾಗಿಯೂ, ಇರುವ ಆ ರಾಜನು, ತನಗೆ ಮರಣವು ಸಮೀಪಿಸಿದುದನ್ನು ತಿಳಿದು, ಧರ್ಮಾರ್ಥಕಾಮಗಳನ್ನು ಪಡೆಯುವುದಕ್ಕಾಗಿ ಮಾಡಬೇಕಾದ ಕಾಮ್ಯಕರ್ಮಗಳನ್ನುಪರಿತ್ಯಾಗಮಾಡಿ, ಭಗವಂತನಾದ ವಾಸುದೇವಮೂರ್ತಿಯಲ್ಲಿ, ಆತ್ಮಸಮರ್ಪಣವನ್ನಾಚರಿಸಿ, ನೀವೀಗ ನನ್ನನ್ನುಕುರಿತು ಯಾವ ಪ್ರಶ್ನೆಯನ್ನುಮಾಡಿದಿರೋ, ಇದೇ ಅರ್ಥವನ್ನೇ ಆತನು ಶುಕಮುನಿಯನ್ನು ಪ್ರಶ್ನೆಮಾಡಿದನು ॥೩-೪॥ "ಎಲೈಬ್ರಾಹ್ಮಣೋತ್ತಮನಾದ ಶುಕಾಚಾರ್ಯನೆ ? ಪಾಪರಹಿತನೂ ಸರ್ವಜ್ಞನೂ ಆದ ನೀನು ಶ್ರೀಹರಿಯ ಚರಿತ್ರೆಯನ್ನು ಹೇಳುತ್ತಿರಲು, ನನ್ನಅಜ್ಞಾನವೆಂಬುದು ತೊಲಗುತ್ತಿರುವುದು. ಆದುದರಿಂದ ನಿನ್ನ ವಾಕ್ಕು ಬಹಳ ಪವಿತ್ರವಾದುದು ॥

ನಾನೀಗ ಮತ್ತೊಂದು ಸಂಗತಿಯನ್ನು ತಿಳಿಯಬೆಳಸುತ್ತಿರುವೆನು. ಅವುದೆಂದರೆ : ಭಗವಂತನಾದ ನಾರಾಯಣಮೂರ್ತಿಯು ಮಹನೀಯ್ಯರಾದ ಯೋಗಿಗಳಿಗೂ ತಿಳಿಯಲಸಾಧ್ಯವಾದ ಈ ಜಗತ್ತನ್ನು ತನ್ನಮಾಯಾ ಬಲದಿಂದೆಂತು ಸೃಷ್ಟಿಸುವನು? ॥೬॥

---

* ಯಥಾವತೀರ್ಣೋ ಭಗವಾನ್ ಪರಿರಕ್ಷತಿ ಸತ್ಪಥಂ । ಭಗವಂತನವತರಿಸಿ ಧರ್ಮಮಾರ್ಗವನ್ನು ಸಲಹುವುದೆಂತು ? (ಆಂಧ್ರಕೋಶಪಾಠ)

ರ್ಯಥಾ ಸಂಯಚ್ಛತೇ ಪುನಃ । ಯಾಂ ಯಾಂ ಶಕ್ತಿ ಮುಪಾಶ್ರಿತ್ಯ ಪುರು ಶಕ್ತಿಃ ಪರಃ ಪುಮಾನ್ ॥ ಆತ್ಮಾನಂ ಕ್ರೀಡಯನ್ ಕ್ರೀಡನ್ ಕರೋತಿ ವಿಕರೋತಿಚ ॥೭॥ ನೂನಂ ಭಗವತೋ ಬ್ರಹ್ಮನ್! ಹರೇ ರದ್ಭುತ ಕರ್ಮಣಃ । ದುರ್ವಿಭಾವ್ಯ ಮಿವಾಭಾತಿ ಕವಿಭಿ ಶ್ಚಾಪಿ ಚೇಷ್ಟಿತಂ ॥೮॥ ತಥಾ ಗುಣಾಂಸ್ತು ಪ್ರಕೃತೇ ರ್ಯುಗಪತ್ಕ್ರಮಶೋಽಪಿವಾ। ಬಿಭರ್ತಿ ಭೂರಿಶ ಸ್ತ್ವೇಕಃ ಕುರ್ವನ್ ಕರ್ಮಾಣಿ ಜನ್ಮಭಿಃ ॥೯॥ ವಿಚಿಕಿತ್ಸಿತ ಮೇತನ್ಮೇ ಬ್ರವೀತು ಭಗವಾನ್ ಯಥಾ । ಶಾಬ್ದೇ ಬ್ರಹ್ಮಣಿ ನಿಷ್ಣಾತಃ ಪರಸ್ಮಿಂ

ವ್ಯಾಪಕನಾದ ಭಗವಂತನು, ಯಥಾ - ಹೇಗೆ, ಗೋಪಾಯತಿ-ರಕ್ಷಿಸುವನೋ, ಪುನಃ - ಮರಳಿ, ಯಥಾ- ಹೇಗೆ, ಸಂಯಚ್ಛತೇ - ಸಂಹರಿಸುವನೋ, ಪುರುಶಕ್ತಿಃ-ಅನಂತಶಕ್ತಿಗಳುಳ್ಳ, ಪರಃ - ಸರ್ವಶ್ರೇಷ್ಠನಾದ, ಪುಮಾನ್-ಪರಮಾತ್ಮನು, ಯಾಂಯಾಂ-ಯಾವಯಾವ, ಶಕ್ತಿಂ - ಶಕ್ತಿಯನ್ನು, ಉಪಾಶ್ರಿತ್ಯ-ಆಶ್ರಯಿಸಿ, ಕ್ರೀಡನ್ - ಕ್ರೀಡಿಸುತ್ತಲೂ, ಆತ್ಮಾನಂ-ತನ್ನನ್ನು, ಕ್ರೀಡಯನ್-ಬ್ರಹ್ಮಾದಿ ರೂಪದಿಂದ ಆಡಿಸುತ್ತಲೂ, ಯಥಾ - ಹೇಗೆ, ಕರೋತಿ - ಮಾಡುವನೋ, ವಿಕರೋತಿಚ - ಅನೇಕವಾಗಿ ಮಾಡುವನೋ ಅದನ್ನು ಹೇಳು ॥೭॥ ಹೇ ಬ್ರಹ್ಮನ್ - ಎಲೈ ಶುಕಮುನಿಯೆ ? ಅದ್ಭುತಕರ್ಮಣಃ - ಆಶ್ಚರ್ಯಕರಗಳಾದ ವ್ಯಾಪಾರಗಳುಳ್ಳ, ಭಗವತಃ - ಭಗವಂತನಾದ, ಹರೇಃ-ವಿಷ್ಣುವಿನ, ಚೇಷ್ಟಿತಂ - ಚರಿತ್ರೆಯು, ಕವಿಭಿಶ್ಚಾಪಿ - ಪಂಡಿತರಿಗೂ, ದುರ್ವಿಭಾವ್ಯಮಿವ-ತಿಳಿಯಲಶಕ್ಯವಾದಂತೆ, ಆಭಾತಿ - ತೋರುವುದು. ನೂನಂ- ದಿಟವು. ॥೮॥ ತಥಾ-ಹಾಗೆಯೇ, ಏಕಃ-ಒಬ್ಬನೇ, ಜನ್ಮಭಿಃ-ಬ್ರಹ್ಮಾದಿರೂಪಗಳಿಂದ, ಕರ್ಮಾಣಿ- ಆ ಆ ಕಾರ್ಯಗಳನ್ನು, ಕುರ್ವನ್-ಮಾಡುತ್ತಾ, ಯುಗಪತ್ - ಒಮ್ಮೆಯೇ ಆಗಲಿ, ಕ್ರಮಶೋಪಿವಾ- ಕ್ರಮದಿಂದಾಗಲಿ, ಪ್ರಕೃತೇಃ - ಪ್ರಕೃತಿಯ, ಗುಣಾನ್-ಗುಣಗಳನ್ನು, ಯಥಾ - ಹೇಗೆ, ಬಿಭರ್ತಿ- ಹೊಂದುವನೋ ॥೯॥ ಭವಾನ್ ನೀನು, ಶಾಬ್ದೇ ಶಬ್ದಸ್ವರೂಪವಾದ, ಬ್ರಹ್ಮಣಿ-ವೇದಶಾಸ್ತ್ರಾದಿ ಗಳಲ್ಲಿಯೂ, ಪರಸ್ಮಿಂಶ್ಚ - ಪರಮಾತ್ಮನಲ್ಲಿಯೂ, ನಿಷ್ಣಾತಃಖಲು - ಪಾರಂಗತನಷ್ಟೆ ! ಆದುದರಿಂದ, ಭಗವಾನ್-ಪೂಜ್ಯನಾದನೀನು, ಏತತ್-ಪೂರ್ವೋಕ್ತವಾದ, ಮೇ-ನನ್ನ, ವಿಚಿಕಿತ್ಸಿತಂ - ಸಂಶಯವನ್ನು

ಅಚಿಂತ್ಯಮಹಿಮನಾದ ಆ ಪರಮಪುರುಷನು, ಯಾವ ಮಾಯಾ ಶಕ್ತಿಯನ್ನಾಶ್ರಯಿಸಿ,ಈ ಪ್ರಪಂಚವನ್ನು ಪಾಲಿಸುವನು? ಕಡೆಗೆ ಹೇಗೆ ಸಂಹರಿಸುವನು? ಮತ್ತು ಯಾವ ಶಕ್ತಿಯ ಬಲದಿಂದ ತಾನು ನಾನಾರೂಪನಾಗಿ ಕ್ರೀಡಿಸುತ್ತಾ, ಬ್ರಹ್ಮವಿಷ್ಣುರುದ್ರಾದಿಗಳೆಂಬ ನಾಮರೂಪಗಳುಳ್ಳ ತನ್ನ ಮೂರ್ತಿಗಳನ್ನೇ ಆಡಿಸುತ್ತಾ, ಇರುವನು ? ॥ ೭ ॥ ಎಲೈ ಮಹಾತ್ಮನೆ ? ಆಶ್ಚರ್ಯಕರ್ಮಗಳನ್ನು ಮಾಡುವ ಭಗವಂತನ ವ್ಯಾಪಾರವು ಎಂತಹ ಪಂಡಿತರಿಗೂ ತಿಳಿಯಲಸಾಧ್ಯವೆಂದೇ ತೋರುತ್ತಿರುವುದು ॥೮॥ ಅಲ್ಲದೆ ಭಗವಂತನು ತಾನೊಬ್ಬನೇ ಒಂದೇಕಾಲದಲ್ಲಿಯಾಗಲಿ, ಕ್ರಮವಾಗಿ ಯಾಗಲಿ,ಬ್ರಹ್ಮಾದಿರೂಪಗಳಿಂದ ಆ ಆ ಕಾರ್ಯಗಳನ್ನು ಮಾಡುತ್ತಾ ಪ್ರಕೃತಿಯ ಗುಣಗಳನ್ನು ಪಡೆಯುವನೇ? ॥೯॥ ಈ ವಿಷಯದಲ್ಲಿ ನನಗೆ ಬಹಳ ಸಂಶಯವುಂಟಾಗಿರುವುದಾದುದರಿಂದ ಇಂತು ಶಬ್ದಬ್ರಹ್ಮವೆನಿಸಿರುವ ವೇದದಲ್ಲಿಯೂ, ಪರಬ್ರಹ್ಮಾನುಸಂಧಾನದಲ್ಲಿಯೂ ಪಾರಂಗತನಾದ ನೀನು ನನ್ನ ಈ ಸಂಶಯಗಳನ್ನು ಹೋಗಲಾಡಿಸಿ, ಭಗವದ್ಗುಣವರ್ಣನವನ್ನು

ಶ್ಚ ಭವಾನ್ ಖಲು ||೧೦|| ಶ್ರೀಸೂತಃ || ಇತ್ಯುಪಾಮಂತ್ರಿತೋ ರಾಜ್ಞಾ ಗುಣಾ ಽ ನುಕಥನೇ ಹರೇಃ | ಹೃಷೀಕೇಶ ಮನುಸ್ಮೃತ್ಯ ಪ್ರತಿವಕ್ತುಂ ಪ್ರಚಕ್ರಮೇ || ೧೧ || ಶ್ರೀ ಶುಕಃ|| ನಮಃ ಪರಸ್ಮೈ ಪುರುಷಾಯ ಭೂಯಸೇ ಸದುದ್ಭವಸ್ಥಾನ ನಿರೋಧಲೀಲಯಾ | ಗೃಹೀತಶಕ್ತಿತ್ರಿತಯಾಯ ದೇಹಿನಾ ಮಂತರ್ಭವಾಯಾಽನುಪಲಭ್ಯ ವರ್ತ್ಮನೇ ||೧೨|| ಭೂಯೋ ನಮ ಸ್ಸದ್ವೃಜಿನಚ್ಛಿದೇಽಸತಾ ಮಸಂಭವಾಯಾಽಖಿಲ ಸತ್ವಮೂರ್ತಯೇ | ಪುಂಸಾಂ ಪುನಃ ಪಾರಮಹಂಸ್ಯ ಆಶ್ರಮೇ ವ್ಯವಸ್ಥಿತಾನಾ ಮನು

ಯಥಾ-ಸರಿಯಾಗಿತಿಳಿಯುವಂತೆ, ಬ್ರವೀತು-ಹೇಳು, (ಪರಿಹರಿಸು) || ೧೦ ||

ಶ್ರೀಸೂತಃ - ಸೂತನು ಹೇಳುತ್ತಾನೆ, ಇತಿ-ಇಂತು, ಹರೇಃ-ವಿಷ್ಣುವಿನ, ಗುಣಾನುಕಥನೇ-ಗುಣವರ್ಣನೆಯಲ್ಲಿ, ರಾಜ್ಞಾ-ಪರೀಕ್ಷಿತನಿಂದ, ಉಪಾಮಂತ್ರಿತಃ-ಪ್ರಾರ್ಥಿತನಾಗಿ, ಹೃಷೀಕೇಶಂ-ಶ್ರೀಹರಿಯನ್ನು, ಅನುಸ್ಮೃತ್ಯ-ಧ್ಯಾನಿಸಿ, ಪ್ರತಿವಕ್ತುಂ-ಉತ್ತರವನ್ನು ಹೇಳುವುದಕ್ಕೆ, ಪ್ರಚಕ್ರಮೇ-ಪ್ರಾರಂಭಿಸಿದನು || ಶ್ರೀಶುಕಃ-ಶುಕನು ಹೇಳುತ್ತಾನೆ, ಸದು...ಯಾ, ಸತ್ - ಪ್ರಪಂಚದ, ಉದ್ಭವ-ಹುಟ್ಟು, ಸ್ಥಾನ-ಬಾಳು, ನಿರೋಧ-ಸಾವು, ಇವುಗಳಿಗೆ ಕಾರಣವಾದ, ಲೀಲಯಾ-ಲೀಲೆಯಿಂದ, ಗೃಹೀ...ಯ, ಗೃಹೀತ-ಗ್ರಹಿಸಲ್ಪಟ್ಟ, ಶಕ್ತಿ-ಹರಿಹರ ಹಿರಣ್ಯಗರ್ಭರೆಂಬಶಕ್ತಿಗಳ, ತ್ರಿತಯಾಯ-ಮೂರುಳ್ಳ,ದೇಹಿನಾಂ-ಪ್ರಾಣಿಗಳ, ಅಂತರ್ಭವಾಯ-ಅಂತರ್ಯಾಮಿರೂಪನಾದ, ಅನು...ನೇ, ಅನುಪಲಭ್ಯ-ತಿಳಿಯಲ್ಪಡದ, ವರ್ತ್ಮನೇ-ದಾರಿಯುಳ್ಳ, ಭೂಯಸೇ-ಅಪರಿಮಿತಮಹಿಮನಾದ, ಪರಸ್ಮೈ-ಸರ್ವೋತ್ತಮನಾದ, ಪುರುಷಾಯ-ಪುರುಷನಿಗೆ, ನಮಃ - ನಮಸ್ಕಾರವು || ೧೨ || ಸ...ದೇ, ಸತ್-ಸಜ್ಜನರ, ವೃಜಿನ-ಪಾಪವನ್ನು, ಛಿದೇ - ಕಳೆಯುವ, ಅಸತಾಂ-ದುಷ್ಟರನ್ನು, ಅಸಂಭವಾಯ-ನಾಶಗೊಳಿಸುವ, ಅಖಿ...ಯೇ, ಅಖಿಲ - ಸಮಸ್ತರಾದ, ಸತ್ವ-ದೇವತೆಗಳಸ್ವರೂಪವಾದ, ಮೂರ್ತಯೇ-ಆಕೃತಿಯುಳ್ಳ, ಪಾರಮಹಂಸ್ಯೇ - ಆತ್ಮನಲ್ಲಿ ನೆಲೆಯನ್ನುಹೊಂದಿದ, ಆಶ್ರಮೇ-ಪರಮಹಂಸಾಶ್ರಮದಲ್ಲಿ,ವ್ಯವಸ್ಥಿತಾನಾಂ-ಇರುವ,ಪುಂಸಾಂ-ಪುರುಷರಿಗೆ, ಅನುಮೃಗ್ಯ - ಅನಾತ್ಮವಸ್ತುಗಳಿಂದ ವಿಂಗಡಿಸಿ ಹುಡುಕಬೇಕಾದ ಆತ್ಮತತ್ವವನ್ನು, ದಾಶುಷೇ -

---

ಮಾಡಬೇಕೆಂದು'' ಬೇಡಿಕೊಂಡ ಪರೀಕ್ಷಿತನ ಪ್ರಶ್ನೆಗಳನ್ನು ಕೇಳಿ, ಶುಕಮುನಿಯು ಕಥಾಪ್ರಾರಂಭದಲ್ಲಿ ಭಗವಂತನಾದ ಶ್ರೀಹರಿಯನ್ನುಧ್ಯಾನಿಸಿದುದೆಂತೆಂದರೆ. ||೧೦-೧೧|| ಅಪಾರಮಹಿಮನಾಗಿಯೂ, ಪ್ರಪಂಚಲೀಲೆಗಾಗಿ ಸತ್ವರಜಸ್ತಮೋ ಗುಣಗಳಿಂದ, ಹರಿ ಹಿರಣ್ಯಗರ್ಭ, ಹರರೆಂಬ ರೂಪಗಳನ್ನು ಧರಿಸಿದವನಾಗಿಯೂ, ಸಕಲಭೂತಗಳಿಗೂ ಅಂತರ್ಯಾಮಿ ಯಾಗಿಯೂ, ತಿಳಿಯಲಗೋಚರವಾದ ಸ್ವರೂಪ ವುಳ್ಳವನಾಗಿಯೂ, ಇರುವ ಸರ್ವೋತ್ತಮನಾದ ಪರಮಾತ್ಮನಿಗೆ ನಮಸ್ಕಾರವು || ೧೨ ||

ಸಜ್ಜನರ ಪಾಪಗಳನ್ನು ಕಳೆಯುತ್ತಾ, ಭಕ್ತಿಹೀನರಾದ ದುರಾತ್ಮರಿಗೆ ಅಗೋಚರನಾಗಿಯೂ, ನಾಶಕನಾಗಿಯೂ,ಆ ಆ ದೇವತಾರೂಪದಿಂದ ಆ ಆ ಫಲಗಳನ್ನು ಸಲ್ಲಿಸುತ್ತಾ ಸಂಪೂರ್ಣಸತ್ವಸ್ವರೂಪನೆನಿಸಿ, ಆತ್ಮನಿಷ್ಠಾರೂಪವಾದ ಪರಮಹಂಸಾಶ್ರಮವನ್ನಾಶ್ರಯಿಸಿದ ಮಹಾತ್ಮರಿಗೆ, ಶರೀರಾದಿ ಪ್ರಧಾನಾಂತಗಳಾದ ಆ ಅನಾತ್ಮಪದಾರ್ಥಗಳಿಂದ ಹುಡುಕಿವಿಂಗಡಿಸಬೇಕಾದ ಆತ್ಮಸ್ವರೂಪವನ್ನು ಅನುಗ್ರಹಿಸುವ ಪರಮಾತ್ಮನಿಗೆ ಮರ

ಮೃಗ್ಯ ದಾಶುಷೇ ॥ ೧೩ ॥ ನಮೋ ನಮಸ್ತೇಽಸ್ತ್ವೃಷಭಾಯ ಸಾತ್ವ
ತಾಂ ವಿದೂರಕಾಷ್ಠಾಯ ಮುಹುಃ ಕುಯೋಗಿನಾಂ । ನಿರಸ್ತ ಸಾಮ್ಯಾತಿ
ಶಯೇನ ರಾಧಸಾ ಸ್ವಧಾಮನಿ ಬ್ರಹ್ಮಣಿ ರಂಸ್ಯತೇ ನಮಃ ॥೧೪॥ ಯತ್ಕೀ
ರ್ತನಂ ಯತ್ಸ್ಮರಣಂ ಯದೀಕ್ಷಣಂ ಯದ್ವಂದನಂ ಯಚ್ಛ್ರವಣಂ ಯದ
ರ್ಹಣಂ । ಲೋಕಸ್ಯ ಸದ್ಯೋ ವಿಧುನೋತಿ ಕಲ್ಮಷಂ ತಸ್ಮೈ ಸುಭದ್ರ
ಶ್ರವಸೇ ನಮೋನಮಃ ॥ ೧೫ ॥ ವಿಚಕ್ಷಣಾ ಯಚ್ಚರಣೋಪಸಾದನಾ
ತ್ಸಂಗಂ ವ್ಯುದಸ್ಯೋಭಯತೋಽಂತರಾತ್ಮನಃ । ವಿಂದಂತಿಹಿ ಬ್ರಹ್ಮಗತಿಂ

ಕೊಡುವ, ಪರಮಾತ್ಮನಿಗೆ, ಭೂಯಃ-ಮರಳಿ, ನಮಃ-ನಮಸ್ಕಾರವು ॥ ೧೩ ॥ ಸಾತ್ವತಾಂ-ಭಕ್ತರಿಗೆ, ಋಷಭಾಯ-ಅಧಿಪತಿಯಾದ, ಕುಯೋಗಿನಾಂ-ಭಕ್ತಿಯಿಲ್ಲದವರಿಗೆ, ಮುಹುಃ - ಬಾರಿಬಾರಿಗೂ, ವಿದೂರ ಕಾಷ್ಠಾಯ - ದೂರವಾದ ದಿಕ್ಕುಳ್ಳ, ನಿರಸ್ತ...ಯೇನ, ನಿರಸ್ತ - ಹೋಗಲಾಡಿಸಲ್ಪಟ್ಟ, ಸಾಮ್ಯ-ಸಮತೆಯೂ, ಅತಿಶಯೇನ-ಅತಿಶಯವೂಉಳ್ಳ, ರಾಧಸಾ-ಐಶ್ವರ್ಯದಿಂದ, ಸ್ವಧಾಮನಿ - ಸ್ವಸ್ವರೂಪವಾದ, ಬ್ರಹ್ಮಣಿ-ಬ್ರಹ್ಮನಲ್ಲಿ, ರಂಸ್ಯತೇ-ಕ್ರೀಡಿಸುವ, ತೇ-ನಿನಗೆ, ನಮಃ - ಮೂರುಬಾರಿಗೂ ನಮಸ್ಕಾರಗಳು. ಅಸ್ತು-ಆಗಲಿ ॥೧೪॥ ಯತ್ಕೀರ್ತನಂ-ಯಾವನನ್ನು ಸ್ತುತಿಸುವುದು, ಯತ್ಸ್ಮರಣಂ-ಯಾವನನ್ನು ಸ್ಮರಿಸುವುದು, ಯದರ್ಹಣಂ - ಯಾವನಪೂಜೆಯು, ಯದೀಕ್ಷಣಂ - ಯಾವನ ಮೂರ್ತಿಯನ್ನು ದರ್ಶನಮಾಡುವುದು, ಯದ್ವಂದನಂ-ಯಾವನನ್ನು ವಂದಿಸುವುದು, ಯಚ್ಛ್ರವಣಂ-ಯಾವನ ಚರಿತ್ರೆಯನ್ನು ಕೇಳುವುದು, ಯದರ್ಹಣಂ - ಯಾವನನ್ನು ಪೂಜಿಸುವುದು, ಇವುಗಳು, ಸದ್ಯಃ-ತತ್ಕ್ಷಣದಲ್ಲಿಯೇ, ಲೋಕಸ್ಯ-ಜನರು, ಕಲ್ಮಷಂ - ಪಾಪವನ್ನು, ವಿಧುನೋತಿ-ಕಳೆಯುವುವೋ, ತಸ್ಮೈ-ಅಂತಹ, ಸುಭದ್ರಶ್ರವಸೇ, ಸುಭದ್ರ-ಮಂಗಳಕರವಾದ, ಶ್ರವಸೇ-ಕೀರ್ತಿಯುಳ್ಳಪರಮಾತ್ಮನಿಗೆ, ನಮೋನಮಃ-ಅನೇಕನಮಸ್ಕಾರಗಳು ॥೧೫॥ ವಿಚಕ್ಷಣಾಃ-ವಿವೇಕಿಗಳು, ಯಚ್ಚ...ತ್, ಯತ್-ಯಾವಭಗವಂತನ, ಚರಣ-ಪಾದಗಳ, ಉಪಸಾದನಾತ್-ಭಜನದಿಂದ, ಉಭಯತಃ-ಇಹಪರಗಳೆರಡರಲ್ಲಿಯೂ,·ಅಂತರಾತ್ಮನಃ-ಮನಸ್ಸಿನ, ಸಂಗಂ-ಸಂಬಂಧವನ್ನು, ವ್ಯುದಸ್ಯ-ತೊರೆದು, ಗತಕ್ಲಮಾಃ-ನಿರಾಯಾಸವಾಗಿ, ಬ್ರಹ್ಮಗತಿಂ-ಬ್ರಹ್ಮಸ್ವರೂಪವನ್ನು, ವಿಂದಂತಿ, ಪಡೆಯುವರೋ, ತಸ್ಮೈ - ಆ, ಸುಭದ್ರಶ್ರವಸೇ-ಶುಭಕೀರ್ತಿಯುಳ್ಳ

ಳ ನಮಸ್ಕಾರವು ॥ ೧೩ ॥ ಯಾವನು ಭಕ್ತಪಾಲನೋ, ಭಕ್ತಿಹೀನರಾದ ದುರಾತ್ಮರಿಗೆ ಯಾವನಿರುವ ದಿಕ್ಕುಕೂಡಾ ತಿಳಿಯುವುದಿಲ್ಲವೋ, ಸಾಮ್ಯವೂ ಅತಿಶಯವೂ ಇಲ್ಲದ ನಿತ್ಯೈಶ್ವರ್ಯದಿಂದಾವನು ಬ್ರಹ್ಮವೆಂದು ಕರೆಯಲ್ಪಡುವ ಸ್ವಸ್ವರೂಪದಲ್ಲಿ ರಮಿಸುತ್ತಿರುವನೋ, ಅಂತಹ ಪರಮಾತ್ಮನಿಗೆ ಅನೇಕ ನಮಸ್ಕಾರಗಳು ॥ ೧೪ ॥ ಯಾವ ಭಗವಂತನನ್ನು, ಸ್ತುತಿಸುವುದಾಗಲಿ, ಸ್ಮರಿಸುವುದಾಗಲಿ, ದರ್ಶನಗೈವುದಾಗಲಿ, ವಂದಿಸುವುದಾಗಲಿ, ಶ್ರವಣಮಾಡುವುದಾಗಲಿ, ಪೂಜಿಸುವುದಾಗಲಿ, ತತ್ಕ್ಷಣದಲ್ಲಿಯೇ ಜನರ ಪಾಪಗಳನ್ನು ಕಳೆಯುವುದೋ, ಅಂತಹ ಶುಭಕೀರ್ತಿಯುಳ್ಳ ಹರಿಗೆ ನಮಸ್ಕಾರಗಳು॥ ಅಲ್ಲದೆ ವಿವೇಕಿಗಳಾದವರು ಯಾವನ ಪಾದಭಜನದಿಂದ ಇಹ ಪರಗಳೆರಡರವಿಷಯಗಳಲ್ಲಿಯೂ ವೈರಾಗ್ಯವನ್ನುಪಡೆದು, ನಿರಾಯಾಸವಾಗಿ ಬ್ರಹ್ಮಸಾಕ್ಷಾತ್ಕಾರವನ್ನು

ಗತಕ್ಲಮಾ ಸ್ತಸ್ಮೈ ಸುಭದ್ರಶ್ರವಸೇ ನಮೋನಮಃ ॥ ೧೬ ॥ ತಪಸ್ವಿನೋ ದಾನಪರಾ ಯಶಸ್ವಿನೋ ಮನಸ್ವಿನೋ ಮಂತ್ರವಿದಸ್ಸುಮಂಗಲಾಃ। ಕ್ಷೇಮಂ ನವಿಂದಂತಿ ವಿನಾ ಯದರ್ಹಣಂ ತಸ್ಮೈ ಸುಭದ್ರಶ್ರವಸೇ ನಮೋನಮಃ ॥೧೭॥ *ಕಿರಾತ ಹೂಣಾಂಧ್ರ ಪುಳಿಂದಪುಲ್ಕಸಾ ಆಭೀರ

ಭಗತಂತನಿಗೆ, ನಮೋನಮಃ ಅನೇಕನಮಸ್ಕಾರಗಳು ॥ ೧೬ ॥

ತಪಸ್ವಿನಃ - ಋಷಿಗಳು, ದಾನಪರಾಃ-ದಾನದಲ್ಲಿಆಸಕ್ತರಾದವರು, ಯಶಸ್ವಿನಃ - ಕೀರ್ತಿಶಾಲಿಗಳು, ಮಂತ್ರವಿದಃ-ಮಂತ್ರಗಳನ್ನು ಬಲ್ಲವರು,ಸುಮಂಗಲಾಃ-ಸದಾಚಾರವವುಳ್ಳರು, ಇವರು,ಯದರ್ಹಣಂವಿನಾ-ಯಾರಪೂಜೆಯನ್ನುಳಿದು, ಕ್ಷೇಮಂ-ನೆಮ್ಮದಿಯನ್ನು, ನವಿಂದಂತಿ - ಪಡೆಯುವುದಿಲ್ಲವೋ, ತಸ್ಮೈ-ಆ,

---

ಹೊಂದುವರೋ,ಅಂತಹ ಶುಭಚರಿತ್ರೆಯುಳ್ಳ ಪರಮಾತ್ಮನಿಗೆ ಅನೇಕನಮಸ್ಕಾರಗಳು॥

ಕಾಯಕ್ಲೇಶದಿಂದ ತಪಿಸುವ ತಪಸ್ವಿಗಳಾಗಲಿ, ಗೋ,ಭೂ,ಹಿರಣ್ಯಾದಿಸರ್ವೋತ್ತಮ ದಾನಗಳನ್ನು ಮಾಡುವ ದಾತೃಗಳಾಗಲಿ, ಲೋಕೋಪಕಾರಾದಿಗಳಿಂದ ಕೀರ್ತಿಯನ್ನು ಪಡೆದಿರುವ ಕೀರ್ತಿಶಾಲಿಗಳಾಗಲಿ, ಶ್ರೇಷ್ಠವಾದ ಮನಸ್ಸುಳ್ಳ ಯೋಗಿಗಳಾಗಲಿ,

---

* ದೀ. ಬೇಡನಿಂದ ಇಲ್ಲಕ್ತಿಯಲ್ಲಿ ಹುಟ್ಟಿದವರು ಕಿರಾತರೆಂತಲೂ,ವೈದೇಹಕನಿಂದ ಪುಲ್ಕಸ ಸ್ತ್ರೀಯಲ್ಲಿ ಹುಟ್ಟಿದವರು ಹೂಣರೆಂತಲೂ, ವೈಶ್ಯನಿಂದ ಬ್ರಾಹ್ಮಣಸ್ತ್ರೀಯಲ್ಲಿ ಜನಿಸಿದ ವೈದೇಹಕನಿಂದ ಹುಟ್ಟಿದವರು ಆಂಧ್ರರೆಂತಲೂ, ನಿಷ್ಠ್ಯನಿಂದ ಬೇಡಕ್ತಿಯಲ್ಲಿ ಹುಟ್ಟಿದವರು ಪುಳಿಂದರೆಂತಲೂ, ಶೂದ್ರನಿಂದ ಬ್ರಾಹ್ಮಣಿಯಲ್ಲಿ ಜನಿಸಿದ ಚಂಡಾಲನಿಂದ ಹುಟ್ಟಿದವರು ಪುಲ್ಕಸರೆಂತಲೂ, ಬ್ರಾಹ್ಮಣನಿಂದ ವೈಶ್ಯಸ್ತ್ರೀಯಲ್ಲಿ ಜನಿಸಿದ ಅಂಬಷ್ಠಕುಲದಸ್ತ್ರೀಯಲ್ಲಿ ಬ್ರಾಹ್ಮಣನಿಂದಹುಟ್ಟಿದವರು ಆಭೀರರೆಂತಲೂ, ಕಂಕರೆಂತಲೂ, ಕ್ಷತ್ರಿಯನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದವರು ಯವನರೆಂತಲೂ, ತುರುಕರಲ್ಲಿ ಒಂದು ಜಾತಿಯವರು ಶಕರೆಂತಲೂ ಕರೆಯಲ್ಪಡುವರು.

ಶ್ಲೋ॥ ಬ್ರಾಹ್ಮಣಸ್ಯ ತ್ರಯಃ ಪುತ್ರಾ ವರ್ಣಾಸ್ತ್ರಿಷ್ವನುಲೋಮಜಾಃ । ಶೂದ್ರಸ್ಯಚತ್ರಯಃ ಪುತ್ರಾ ಸ್ತೇಷ್ವೇವ ಪ್ರತಿಲೋಮಜಾಃ । ತ್ರಯಸ್ತ್ರಯಃ ಕ್ಷತ್ರವಿಶೋಃ ಪ್ರತಿಲೋಮಾನುಲೋಮಜಾಃ। ಏತೇ ದ್ವಾದಶವರ್ಣಾನಾಂ ಪುತ್ರಾ ಏಕೈಕಶಸ್ತು ತೇ । ಚಾತುರ್ವರ್ಣ್ಯೇ ಪ್ರಸೂಯಂತೇ ಚತುರಶ್ಚತುರಸ್ಸುತಾನ್ । ತೇಚತ್ವಾರಿಂಶದಷ್ಟೌಚ ಪೂರ್ವೈರ್ದ್ವಾದಶಭಿಸ್ಸಹ । ಬ್ರಾಹ್ಮಣಾದ್ಯೈಶ್ಚತುರ್ಭಿಶ್ಚ ಚತುಷ್ಷಷ್ಟಿರ್ಜಾತಯಃ । ತೇ ಸರ್ವೇ ದಸ್ಯವೋ ದೋಷೈಶ್ಚೌರ್ಯಾದ್ಯೈಸ್ಸದ್ಬಹಿಷ್ಕೃತಾಃ ॥

ತಾ ॥ ಆದಿಯಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬ ನಾಲ್ಕು ಶುದ್ಧಜಾತಿಗಳುಂಟಾದುವು. ಬಳಿಕ ಅವರು ಅನುಲೋಮ ವಿಲೋಮದಿಂದ, ಇತರ ಮೂರುವರ್ಣಗಳ ಸ್ತ್ರೀಯರಲ್ಲಿಯೂ, ಪುತ್ರರನ್ನು ಪಡೆಯುತ್ತಾಬಂದರು. ಇಂತು ಜನಿಸಿದ ಜನರು ಹನ್ನೆರಡು ಜಾತಿಗಳಾದರು. ಆಮೇಲೆ ಅವರು ಮೇಲೆಹೇಳಿದ ನಾಲ್ಕು ಶುದ್ಧಜಾತಿಗಳ ಸ್ತ್ರೀಯರಲ್ಲಿಯೂ ಸಂತತಿಯನ್ನು ಪಡೆದರು. ಆ ಸಂತತಿಯವರು ನಲವತ್ತೆಂಟು ಜಾತಿಗಳುಳ್ಳವರಾದರು. ಆದುದರಿಂದ ನಾಲ್ಕು ಶುದ್ಧಜಾತಿಗಳು ಹನ್ನೆರಡು ಮಿಶ್ರಜಾತಿಗಳು ನಲವತ್ತೆಂಟು ಸಂಕರಜಾತಿಗಳೂ ಸೇರಿ ಅರವತ್ತುನಾಲ್ಕು ಜಾತಿಗಳುಂಟೆಂದು "ಜಾತಿವಿವೇಕ"ವೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿರುವುದು. ಇದರಿಂದ ಈಗ್ರಂಥಕರ್ತನಕಾಲದಲ್ಲಿ ಅರವತ್ತುನಾಲ್ಕು ಜಾತಿಗಳು ಮಾತ್ರವೇ ಇದ್ದುವೆಂದು ಸ್ಪಷ್ಟವಾಗುವುದು.

ಕಂಕಾ ಯವನಾ ಶ್ಶಕಾದಯಃ । ಯೇಽನ್ಯೇಚ ಪಾಪಾ ಯದುಪಾಶ್ರಯಾ ಶ್ರಯಾ ಶ್ಶುದ್ಧ್ಯಂತಿ ತಸ್ಮೈ ಪ್ರಭವಿಷ್ಣವೇನಮಃ ॥ ೧೮ ॥ ಸ ಏಷ ಆತ್ಮಾತ್ಮವತಾ ಮಧೀಶ್ವರ ಸ್ತ್ರಯೀಮಯೋ ಧರ್ಮಮಯ ಸ್ತಪೋ ಮಯಃ । ಗತವ್ಯಳೀಕೈ ರಜಶಂಕರಾದಿಭಿ ರ್ವಿತರ್ಕ್ಯ ಲಿಂಗೋ ಭಗವಾ ಪ್ರಸೀದತಾಂ ॥ ೧೯ ॥ ಶ್ರಿಯಃ ಪತಿ ರ್ಯಜ್ಞ ಪತಿಃ ಪ್ರಜಾಪತಿ ರ್ಧಿ

ಸುಭದ್ರಶ್ರವಸೇ-ಶುಭಕೀರ್ತಿಯುಳ್ಳಪರಮಾತ್ಮನಿಗೆ, ನಮೋನಮಃ-ಅನೇಕನಮಸ್ಕಾರಗಳು ॥ ೧೭ ॥ ಕಿರಾತ...ಸಾಃ, ಕಿರಾತ-ಬೇಡರು, ಹೂಣ-ಯವನರು, ಆಂಧ್ರ-ಒಡ್ಡರು, ಪುಳಿಂದ-ಬೆಸ್ತರು, ಪುಲ್ಕಸಾಃ-ಹೊಲೆಯರು ಇವರು, ಆಭೀರ - ಸಂಕರಜಾತಿಯವರು, ಕಂಕರು, ಯವನಾಃ-ತುರುಕರು, ಶಕಾದಯಃ-ಶಕರು ಮೊದಲಾದವರೂ, ಅನ್ಯೇ - ಇತರರಾದ, ಪಾಪಾಃ - ಮಹಾಪಾಪಗಳನ್ನು ಮಾಡಿದವರು, ಯೇ-ಯಾರುಂಟೋ, ಅವರು, ಯದು...ಯಾಃ, ಯತ್ - ಯಾವಭಗವಂತನನ್ನು, ಉಪಾಶ್ರಯ-ಆಶ್ರಯಿಸಿದ ಭಕ್ತರನ್ನು, ಆಶ್ರಯಾಃ-ಆಶ್ರಯಿಸಿದವರಾಗಿ, ಶುಧ್ಯಂತಿ - ಪರಿಶುದ್ಧರಾಗುವರೋ, ತಸ್ಮೈ-ಅಂತಹ-ಪ್ರಭವಿಷ್ಣವೇ-ಲೋಕರಕ್ಷಕನಾದ ಭಗವಂತನಿಗೆ, ನಮಃ-ನಮಸ್ಕಾರವು ॥ ೧೮ ॥ ತ್ರಯೀಮಯಃ-ವೇದಸ್ವರೂಪನೆಂತಲೂ, ಧರ್ಮಮಯಃ-ಧರ್ಮಸ್ವರೂಪನೆಂತಲೂ, ತಪೋಮಯಃ-ತಪಸ್ಸ್ವರೂಪನೆಂತಲೂ ಧ್ಯಾನಿಸಲ್ಪಡುವುದಲ್ಲದೆ, ಆತ್ಮವತಾಂ-ಧೀರರಾದವರಿಗೆ. ಆತ್ಮಾ-ಆತ್ಮಸ್ವರೂಪನೆನಿಸಿ, ಗತವ್ಯಳೀಕೈಃ-ನಿಷ್ಕಪಟರಾದ, ಅಜಶಂಕರಾದಿಭಿಃ-ಬ್ರಹ್ಮ,ರುದ್ರ, ಮೊದಲಾದವರಿಂದ, ವಿತರ್ಕ್ಯಲಿಂಗಃ-ವಿತರ್ಕ್ಯ-ಅತ್ಯಾಶ್ಚರ್ಯದಿಂದ ನೋಡಲ್ಪಡುವ, ಲಿಂಗಃ - ಮೂರ್ತಿಯುಳ್ಳ, ಸಏಷಃ - ಆ ಈ ಭಗವಂತನು. ಪ್ರಸೀದತಾಂ-ಪ್ರಸನ್ನನಾಗಲಿ ॥ ೧೯ ॥ ಶ್ರಿಯಃ-ಲಕ್ಷ್ಮಿಗೆ, ಪತಿಃ-ಒಡೆಯನೂ, ಯಜ್ಞಪತಿಃ - ಯಜ್ಞ

ಮಂತ್ರ ಶಾಸ್ತ್ರವನ್ನುಬಲ್ಲ ಮಂತ್ರಜಪಪಾರಾಯಣಶೀಲರಾಗಲಿ,ಸದಾಚಾರ ಸಂಪನ್ನರಾದ ಕರ್ಮನಿಷ್ಠರಾಗಲಿ, ತಮ್ಮ ತಪಸ್ಸುಮೊದಲಾದುವುಗಳನ್ನು ಯಾವನಿಗೆ ಸಮರ್ಪಣೆ ಮಾಡಿದಲ್ಲದೆ, ಮೋಕ್ಷಪ್ರಾಪ್ತಿ ರೂಪವಾದ ಉತ್ತಮಫಲವನ್ನು ಪಡೆಯಲಾರರೋ,ಅಂತಹ ಮಂಗಳನಾಮನಾದ ಪರಮ ಪುರುಷನಿಗೆ ನಮಸ್ಕಾರವು ॥೧೭॥ ಕಿರಾತರು, ಹೂಣರು, ಆಂಧ್ರರು, ಪುಳಿಂದರು, ಪುಲ್ಕಸರು, ಆಭೀರರು, ಕಂಕರು, ಯವನರು, ಶಕರು, ದೊಂಬರು, ಕುವಿಂದರು, ಇವರೇ ಮೊದಲಾದ ಮಹಾಪಾತಕಿಗಳೆನಿಸಿದ, ಕೀಳುಜಾತಿಯವರು ಕೂಡಾ ಯಾವಭಗವಂತನನ್ನಾಶ್ರಯಿಸಿದ ಭಾಗವತೋತ್ತಮರ ಸೇವಾದಿಗಳಿಂದ ಸಕಲಪಾಪಗಳನ್ನೂಕಳೆದುಕೊಂಡು ಪರಿಶುದ್ಧರಾಗುವರೋ, ಅಂತಹ ಲೋಕಪಾಲಕನಾದ ಭಗವಂತನಿಗೆ ನಮಸ್ಕಾರವು ॥೧೮॥ ವೈದಿಕರು ವೇದಸ್ವರೂಪನನ್ನಾಗಿಯೂ, ಧರ್ಮಜ್ಞರು ಧರ್ಮಸ್ವರೂಪನನ್ನಾಗಿಯೂ,ತಪಸ್ವಿಗಳು ತಪೋರೂಪನನ್ನಾಗಿಯೂ, ಯಾರನ್ನರಿಳಿಯುವರೋ,ಅಕೃತ್ರಿಮವಾದ ಭಕ್ತಿಯುಳ್ಳ ಬ್ರಹ್ಮರುದ್ರಾದಿಗಳೂ ಸಹ, ಅತ್ಯಾಶ್ಚರ್ಯದಿಂದ ಯಾವನ ದಿವ್ಯಮಂಗಳವಿಗ್ರಹಗಳನ್ನು ಕಂಡಾನಂದಿಸುವರೋ, ಯಾವ ಭಗವಂತನು ತತ್ತ್ವಜ್ಞರಾದ ಮಹರ್ಷಿಗಳಿಗೆ ಆತ್ಮಸ್ವರೂಪನಾಗಿರುವನೋ, ಅಂತಹ ಜಗನ್ನಾಯಕನಾದ ಭಗವಂತನು ನನಗೆ ಪ್ರಸನ್ನನಾಗಲಿ ॥ ೧೯ ॥

ಯಾಂ ಪತಿ ರ್ಲೋಕಪತಿ ರ್ಧರಾಪತಿಃ । ಪತಿ ರ್ಗತಿ ಶ್ಚಾಂಧಕವೃಷ್ಣಿಸಾ
ತ್ವತಾಂ ಪ್ರಸೀದತಾಂ ಮೇ ಭಗವಾನ್ ಸತಾಂಪತಿಃ ॥೨೦॥ ಯದಂಘ್ರ್ಯಭಿ
ಧ್ಯಾನ ಸಮಾಧಿಧೌತಯಾ ಧಿಯಾಽನುಪಶ್ಯಂತಿ ಹಿ ತತ್ವ ಮಾತ್ಮನಃ । ವದಂ
ತಿ ಚೈತತ್ಕವಯೋ ಯಥಾರುಚಂ ಸಮೇ ಮುಕುಂದೋ ಭಗವಾನ್ ಪ್ರಸೀ
ದತಾಂ ॥೨೧॥ ಪ್ರಚೋದಿತಾ ಯೇನ ಪುರಾ ಸರಸ್ವತೀ ವಿತನ್ವತಾ ಜಸ್ಯ
ಸತೀಂ ಸ್ಮೃತಿಂ ಹೃದಿ। ಸ್ವಲಕ್ಷಣಾ ಪ್ರಾದುರಭೂತ್ಕಿಲಾಸ್ಯತಃ ಸಮೇಋಷಿ

ಪಾಲಕನೂ, ಪ್ರಜಾಪತಿಃ-ಪ್ರಜಾರಕ್ಷಕನೂ, ಧಿಯಾಂಪತಿಃ-ಬುದ್ಧಿಪ್ರೇರಕನೂ, ಲೋಕಪತಿಃ - ಜಗನ್ನಾಯಕನೂ, ಧರಾಪತಿಃ-ಭೂದೇವಿಗೊಡೆಯನೂ, ಅಂಧಕವೃಷ್ಣಿಸಾತ್ವತಾಂ-ಅಂಧಕರು, ವೃಷ್ಣಿಗಳು, ಯಾದವರು ಇವರಿಗೆ, ಪತಿಃ-ರಕ್ಷಕನೂ, ಗತಿಶ್ಚ-ದಿಕ್ಕೂ, ಸತಾಂ-ಸಾಧುಗಳಿಗೆ, ಪತಿಃ-ಪಾಲಕನೂ ಆದ, ಭಗವಾನ್-ಭಗವಂತನು, ಮೇ-ನನಗೆ, ಪ್ರಸೀದತಾಂ-ಪ್ರಸನ್ನನಾಗಲಿ ॥ ೨೦ ॥ ಯದಂ...ಯಾ, ಯತ್-ಯಾವಭಗವಂತನ, ಅಂಘ್ರಿ-ಪಾದಗಳ, ಅಭಿಧ್ಯಾನ-ಧ್ಯಾನವೆಂಬ, ಸಮಾಧಿ-ಸಮಾಧಿಯಿಂದ, ಧೌತಯಾ-ತೊಳೆಯಲ್ಪಟ್ಟ, ಧಿಯಾ-ಬುದ್ಧಿಯಿಂದ, ಆತ್ಮನಃ-ತಮ್ಮ, ತತ್ವಂ-ಸ್ವರೂಪವನ್ನು, ಅನುಪಶ್ಯಂತಿಹಿ - ತಿಳಿಯುವರೋ, ಏತತ್-ಯಾವ ಈತತ್ವವನ್ನು, ಕವಯಃ-ಪಂಡಿತರು, ಯಥಾರುಚಂ-ಇಷ್ಟಾನುಸಾರವಾಗಿ ಅಥವಾ ಬುದ್ಧಿಗನುಸಾರವಾಗಿ, ವದಂತಿ - ಹೇಳುವರೋ, ಸಃ-ಅ, ಮುಕುಂದಃ - ಶ್ರೀಕೃಷ್ಣಮೂರ್ತಿಯು, ಮೇ - ನನಗೆ, ಪ್ರಸೀದತಾಂ - ಪ್ರಸನ್ನನಾಗಲಿ. ॥ ೨೧ ॥

ಪುರಾ-ಕಲ್ಪಾದಿಯಲ್ಲಿ, ಅಜಸ್ಯ-ಬ್ರಹ್ಮನ, ಹೃದಿ-ಮನಸ್ಸಿನಲ್ಲಿ, ಸತೀಂ-ಇರುವ, ಸ್ಮೃತಿಂ-ಸೃಷ್ಟಿಸ್ಮರಣೆಯನ್ನು, ವಿತನ್ವತಾ - ವಿಸ್ತರಿಸುವ, ಯೇನ-ಯಾವಪರಮಾತ್ಮನಿಂದ, ಪ್ರಚೋದಿತಾ - ಪ್ರೇರಿಸಲ್ಪಟ್ಟ, ಸ್ವಲಕ್ಷಣಾ - ಶಿಕ್ಷೆ, ವ್ಯಾಕರಣ ಮೊದಲಾದ ತನ್ನಲಕ್ಷಣಗಳಿಂದೊಡಗೂಡಿದ, ಅಥವಾ ತನ್ನಲ್ಲಿ

ಅಲ್ಲದೆ, ಲಕ್ಷ್ಮೀಪತಿಯೆಂತಲೂ, ಯಜ್ಞನಾಯಕನೆಂತಲೂ, ಸಕಲಪ್ರಜಾಪಾಲಕನೆಂತಲೂ, ಬುದ್ಧ್ಯಾದಿ ಪ್ರೇರಕನೆಂತಲೂ, ಸಕಲಜಗದ್ರಕ್ಷಕನೆಂತಲೂ, ಭೂಲೋಕಪಾಲಕನೆಂತಲೂ, ಅಂಧಕ, ವೃಷ್ಣಿ, ಯಾದವರಿಗೆ ಪೋಷಕನೆಂತಲೂ, ಸಾಧುಗಳಿಗೆ ಪತಿಯೂ, ಗತಿಯೂ ಎಂತಲೂ, ಯಾವನನ್ನು ಭಕ್ತರು ಉಪಾಸನಾನುಗುಣವಾಗಿ ಹೊಗಳುವರೋ, ಅಂತಹ ಭಗವಂತನಿಗೆ ನಮಸ್ಕಾರವು ॥ ೨೦ ॥ ಯಾವಪರಮಾತ್ಮನ ಪಾದಕಮಲಧ್ಯಾನವೆಂಬ ಸಮಾಧಿಯಿಂದ ಬುದ್ಧಿಯನ್ನು ನಿರ್ಮಲಗೊಳಿಸಿ, ತಂತಮ್ಮ ಇಷ್ಟಾನುಸಾರವಾಗಿ, ಸಗುಣ ನಿರ್ಗುಣಗಳೆಂಬ ಉಪಾಸನಾಭೇದಗಳಿಂದ ಪರಮಾತ್ಮತತ್ವವನ್ನು ಕಾಣುವರೋ, ತತ್ವಜ್ಞರಾದ ಮಹನೀಯ್ಯರೂ ಅಂತೆಯೇಬಣ್ಣಿಸುವರೋ, ಅಂತಹ ಭಗವಂತನಾದ ಮುಕುಂದನು ನನಗೆ ಪ್ರಸನ್ನನಾಗಲಿ ॥ ೨೧ ॥ ಯಾವ ಪರಮಾತ್ಮನು ಸೃಷ್ಟ್ಯಾದಿಯಲ್ಲಿ ಬ್ರಹ್ಮನಹೃದಯದಲ್ಲಿದ್ದ ಸೃಷ್ಟಿಸ್ಮರಣೆಯನ್ನು ಬೆಳೆಯಿಸುವುದಕ್ಕಾಗಿ, ಪ್ರೇರಿಸಿದ ಕೂಡಲೇ ಶಿಕ್ಷಾ, ವ್ಯಾಕರಣ, ಛಂದೋ, ಜ್ಯೌತಿಷ, ನಿರುಕ್ತ, ಕಲ್ಪ, ಗಳೆಂಬ ಷಡಂಗಗಳಿಂದಲೂ, ತನಗೆಮಾತ್ರಸಲ್ಲುವ ಉದಾತ್ತಾದಿ ಸ್ವರವಿಶೇಷಗಳಿಂದಲೂ ಕೂಡಿರುವ ಭಾರತೀದೇವಿಯು, ಬ್ರಹ್ಮನಮುಖದಿಂದ ಹೊರಗೆಬಂದಳೋ, ಅಂತಹ

ಷೀಣಾಂ ವೃಷಭಃ ಪ್ರಸೀದತಾಂ ॥ ೨೨ ॥ ಭೂತೈರ್ಮಹದ್ಭಿರ್ಯ
ಇಮಾಃ ಪುರೋ ವಿಭುರ್ನಿರ್ಮಾಯ ಶೇತೇ ಯದಮೂಷು ಪೂರುಷಃ। ಭು
ಙ್ಕ್ತೇ ಗುಣಾನ್ ಷೋಡಶ ಷೋಡಶಾತ್ಮಕಃ ಸೋಽಲಂ ಕೃಷೀಷ್ಟಾಽಖಿಲ
ವಿದ್ವಚಾಂಸಿ ಮೇ ॥ ೨೩ ॥ ನಮಸ್ತಸ್ಮೈ ಭಗವತೇ ವಾಸುದೇವಾಯ
ವೇಧಸೇ। ಪಪುರ್ಜ್ಞಾನಮಯಂ ಸೌಮ್ಯಾ! ಯನ್ಮುಖಾಂಬುರುಹಾಸವಂ॥

ಮಾತ್ರಾದಿರುವ ಸ್ವರವಿಶೇಷವೇ ಮೊದಲಾದ ಲಕ್ಷಣಗಳಿಂದ ಕೂಡಿದ, ಸರಸ್ವತೀ - ವೇದರೂಪವಾದ ವಾಣಿಯು, ಅಸ್ಯ-ಈ ಬ್ರಹ್ಮನ, ಆಸ್ಯತಃ-ಮುಖದಿಂದ, ಪ್ರಾದುರಭೂತ್ಕಿಲ-ಉಂಟಾಯಿತೋ, ಅಂತಹ ಋಷೀಣಾಂ-ಜ್ಞಾನಪ್ರದರಾದ ಋಷಿಗಳಿಗೆ, ಋಷಭಃ - ಶ್ರೇಷ್ಠನಾದ, ಸಃ - ಆ ಭಗವಂತನು, ಮೇ-ನನಗೆ, ಪ್ರಸೀದತಾಂ-ಪ್ರಸನ್ನನಾಗಲಿ ॥ ೨೨ ॥ ಪ್ರಭುಃ-ವ್ಯಾಪಕನಾದ, ಯಃ-ಯಾವನು, ಮಹದ್ಭಿಃ ಭೂತೈಃ-ಪೃಥಿವ್ಯಾದಿಮಹಾಭೂತಗಳಿಂದ, ಇಮಾಃ-ಈ, ಪುರಃ-ಶರೀರಗಳನ್ನು, ನಿರ್ಮಾಯ-ಸೃಜಿಸಿ, ಅಮೂಷು-ಈಶರೀರಗಳಲ್ಲಿ, ಶೇತೇ - ನೆಲಗೊಂಡಿರುವನೋ, ಆದುದರಿಂದಲೇ, ಪೂರುಷಃ - ಪುರುಷನೆಂದು ಕರೆಯಿಸಿ ಕೊಳ್ಳುವ, ಯಃ-ಯಾವನು, ಷೋಡಶಾತ್ಮಕಃ-ಷೋಡಶಕಲಾಸ್ವರೂಪನಾಗಿ, ಷೋಡಶ-ಹದಿನಾರು, ಗುಣಾನ್ - ಕಲೆಗಳನ್ನು, ಭುಙ್ಕ್ತೇ - ಅನುಭವಿಸುವನೋ, ಅಖಿಲವಿತ್-ಸರ್ವಜ್ಞನಾದ, ಸಃ-ಆಪರಮಾತ್ಮನು, ಮೇ-ನನ್ನ, ವಚಾಂಸಿ-ವಾಕ್ಕುಗಳನ್ನು, ಅಲಂಕೃಷೀಷ್ಟ-ಅಲಂಕರಿಸಲಿ ॥ ೨೩ ॥ ಸೌಮ್ಯಾಃ-ಶಿಷ್ಯರು, ಜ್ಞಾನಮಯಂ - ಜ್ಞಾನಸ್ವರೂಪವಾದ, ಯನ್ಮು...ವಂ, ಯತ್ - ಯಾವವ್ಯಾಸ ಮುನಿಯ, ಮುಖ - ಮುಖವೆಂಬ, ಅಂಬುರುಹ-ಕಮಲದ, ಆಸವಂ-ಮಕರಂದವನ್ನು, ಪಪುಃ-ಪಾನ ಮಾಡಿದರೋ, ಅಂತಹ, ಭಗವತೇ-ಜ್ಞಾನಾದಿಗುಣಸಂಪನ್ನನೂ, ವಾಸುದೇವಾಯ-ವಾಸುದೇವನ ಅವತಾರವೂ, ವೇಧಸೇ-ಸರ್ವಜ್ಞನೂ, ಆದ, ತಸ್ಮೈ-ವ್ಯಾಸಮುನಿಗೆ, ನಮಃ-ನಮಸ್ಕಾರವು ॥ ೨೪ ॥

ಜ್ಞಾನದಾತೃಗಳಲ್ಲಿ ಶ್ರೇಷ್ಠನಾದ ಭಗವಂತನು ನನಗೆ ಪ್ರಸನ್ನನಾಗಲಿ ॥ ೨೨ ॥ ಯಾವ ಭಗವಂತನು ಪೃಥಿವ್ಯಾದಿಪಂಚಮಹಾಭೂತಗಳಿಂದ ಭೂತಶರೀರಗಳೆಂಬ ಪುರಗಳನ್ನು ನಿರ್ಮಾಣಮಾಡಿ, ಆ ಪುರಗಳಲ್ಲಿ ನೆಲೆಗೊಂಡು, ಪುರುಷನೆಂಬ ಸಾರ್ಥಕ ನಾಮವನ್ನು ಪಡೆದಿರುವನೋ, ಅಲ್ಲದೆ, ಯಾವನು ಭೂತೇಂದ್ರಿಯಗಳೆಂಬ ಷೋಡಶ ಕಳೆಗಳ ಸ್ವರೂಪನಾದುದರಿಂದ ಆ ಷೋಡಶ ಕಲೆಗಳನ್ನು ಪ್ರಕಾಶಗೊಳಿಸಿ ಪಾಲಿಸುವನೋ, ಅಂತಹ ಸರ್ವಜ್ಞನಾದ ಪರಮಾತ್ಮನು, ಶ್ರೋತೃಗಳಿಗಾನಂದವಾಗುವಂತೆಯೂ, ಶೃಂಗಾರಾದಿರಸಗಳುಕ್ಕಳಿಸುವಂತೆಯೂ, ನನ್ನ ವಾಕ್ಕುಗಳಿಗಲಂಕಾರವನ್ನು ಕೊಡಲಿ ॥೨೩॥ ಎಂದು ದೇವತಾ ಧ್ಯಾನವನ್ನಾಚರಿಸಿ, ಬಳಿಕ ಗುರುವನ್ನು ಧ್ಯಾನಿಸುತ್ತಾನೆ, ಮುಮುಕ್ಷುಗಳಾದ ಭಕ್ತರು ಯಾವ ಮಹಾತ್ಮನ ಮುಖಾರವಿಂದದಿಂದ ಸ್ರವಿಸುವ ಜ್ಞಾನಮಯವಾದ ಮಕರಂದವನ್ನು ಕುಡಿದು ಧನ್ಯರಾಗುವರೋ, ಅಂತಹ ಜಗದಾಚಾರ್ಯನಾದ ಬಾದರಾಯಣ ಮುನಿಗೆ ನಮಸ್ಕಾರವು ॥ ೨೪ ॥

ಇಂತು ಕಥಾರಂಭದಲ್ಲಿ ಗುರುದೇವತಾ ವಂದನ ರೂಪವಾದ ಮಂಗಳವನ್ನು ಮಾಡಿ, ಶುಕಮುನಿಯು ಪರೀಕ್ಷಿದ್ಧರಾವಲ್ಲಭನನ್ನು ಕುರಿತು ಹೇಳುತ್ತಾನೆ:- ಅವ್ಯಾ

ಏತದೇವಾತ್ಮಭೂ ರಾಜನ್! ನಾರದಾಯ ವಿಪೃಚ್ಛತೇ । ವೇದಗರ್ಭೋಽ
ಭ್ಯಧಾ ತ್ಸಾಕ್ಷಾ ದ್ಯದಾಹ ಹರಿರಾತ್ಮನಃ ॥ ೨೫ ॥

—: ಇತಿ ಚತುರ್ಥೋಽಧ್ಯಾಯಃ:—

ಓಂ ನಮಃಪರಮಾತ್ಮನೇ.

—: ಅಥ ಪಂಚಮೋಽಧ್ಯಾಯಃ:—

ಶ್ರೀನಾರದಃ ॥ ದೇವದೇವ ! ನಮಸ್ತೇಽಸ್ತು ಭೂತಭಾವನ ! ಪೂ
ರ್ವಜ ! । ತದ್ವಿಜಾನೀಹಿ ಯಜ್ಜ್ಞಾನ ಮಾತ್ಮತತ್ತ್ವ ನಿದರ್ಶನಂ ॥ ೧ ॥

ಹೇರಾಜನ್-ಎಲೈ ಪರೀಕ್ಷಿತನೆ ! ಹರಿಃ-ವಿಷ್ಣುವು, ಸಾಕ್ಷಾತ್-ಪ್ರತ್ಯಕ್ಷವಾಗಿ, ಆತ್ಮನಃ-ತನಗೆ, ಯತ್, ಯಾವುದನ್ನು, ಆಹ-ಹೇಳಿದನೋ, ಏತದೇವ-ಇದನ್ನೇ, ವೇದಗರ್ಭಃ-ವೇದಪ್ರಕಾಶಕನಾದ, ಆತ್ಮಭೂಃ-ಬ್ರಹ್ಮನು, ವಿಪೃಚ್ಛತೇ-ಪ್ರಶ್ನೆಮಾಡಿದ, ನಾರದಾಯ-ನಾರದನಿಗೆ, ಅಭ್ಯಧಾತ್-ಹೇಳಿದನು ॥ ೨೫ ॥

ಇತಿ ಚತುರ್ಥಾಧ್ಯಾಯಂ ಸಮಾಪ್ತಂ

—: ಪಂಚಮಾಧ್ಯಾಯಂ. :—

ಕಂ ॥ ನಾರದಮುನಿ ಬೆಸಗೊಳಲಾ । ನಾರಸಭವ ನೊಸೆದು ತತ್ವಸೃಷ್ಟಿಯ ನದರಿಂ ।
ವೈರಾಜಸೃಷ್ಟಿಮೊದಲಹ । ಶೌರಿಯ ಲೀಲೆಗಳ ನೊಲವಿನಿಂ ಬಣ್ಣಿಸುವಂ ॥

ಶ್ರೀನಾರದಃ-ನಾರದಮುನಿಯುಬೆಸಗೊಳುತ್ತಾನೆ, ದೇವದೇವ - ದೇವತೆಗಳಿಗೆ ದೇವನೆ ! ಭೂತಭಾವನ-ಭೂತಗಳನ್ನು ಸೃಷ್ಟಿಸಿದವನೆ ! ಪೂರ್ವಜ-ಎಲ್ಲರಿಗೂ ಮೊದಲು ಹುಟ್ಟಿದವನೆ ! ತೇ-ನಿನಗೆ,

---

ರಾಜನ್ಯಮಾನ್ಯನೆ ! ನೀನೀಗ ನನ್ನನ್ನು ಕುರಿತು ಯಾವ ಪ್ರಶ್ನೆಯನ್ನು ಮಾಡಿದೆಯೋ, ಇದೇ ಅರ್ಥವನ್ನು, ಸೃಷ್ಟ್ಯಾದಿಯಲ್ಲಿ ಶ್ರೀನಾರಾಯಣಮೂರ್ತಿಯು ತನ್ನನ್ನು ಪ್ರಶ್ನೆಮಾಡಿದ ಬ್ರಹ್ಮದೇವನಿಗೂ, ಆಬ್ರಹ್ಮನು ತನ್ನಪುತ್ರನಾದ ನಾರದಮುನಿಗೂ ಉಪದೇಶಿಸಿರುವರಾದುದರಿಂದ ಅವನ್ನು ನಿನಗೆ ವಿವರಿಸುತ್ತೇನೆ ಕೇಳು, ಎಂದು ಹೇಳತೊಡಗಿದನೆಂಬಲ್ಲಿಗೆ-ಭಾಗವತಚಕೋರ ಚಂದ್ರಿಕೆಯೊಳ್'

ನಾಲ್ಕನೆಯ ಅಧ್ಯಾಯಂ ಮುಗಿದುದು

—: ಐದನೆಯ ಅಧ್ಯಾಯ: —

ವಿರಾಟ್ ಸೃಷ್ಟಿ

ಅಯ್ಯಾ ಪರೀಕ್ಷಿನ್ನರೇಂದ್ರನೇ ! ಕೇಳು. ಪೂರ್ವದಲ್ಲಿ ಬಂದಾನೊಂದುದಿನ ನಾರದಮುನಿಯು ತಂದೆಯಾದ ಬ್ರಹ್ಮದೇವನನ್ನು ಕುರಿತು, ಎಲೈ ತಂದೆಯೆ ! ನಿನಗೆ ನಮಸ್ಕಾರವು. ಎಲೈ ದೇವದೇವನೆ ! ಸಕಲಭೂತಗಳನ್ನು, ನಿರ್ಮಿಸಿದವನೆ ! ಆದಿಪುರು

*ಯದ್ರೂಪಂ†ಯದಧಿಷ್ಠಾನಂ ಯತಃ ಸೃಷ್ಟ ಮಿದಂ ಪ್ರಭೋ! ।ಯತ್ಸಂಸ್ಥಂ ಯತ್ಪರಂ‡ ಯಚ್ಚ ತತ್ತ್ವಂ ವದ ತತ್ವತಃ ॥ ೨ ॥ ಸರ್ವಂ ಹ್ಯೇತದ್ಭವಾನ್ ವೇದ ಭೂತಭವ್ಯ ಭವತ್ಪ್ರಭುಃ । ಕರಾಮಲಕವ ದ್ವಿಶ್ವಂ ವಿಜ್ಞಾನಾವಸಿತಂ ತವ ॥ ೩ ॥ ಯದ್ವಿಜ್ಞಾನೋ ಯದಾಧಾರೋ ಯತ್ಪರ

ನಮಃ - ನಮಸ್ಕಾರವು, ಅಸ್ತು-ಆಗಲಿ, ಯತ್-ಯಾವ, ಜ್ಞಾನಂ - ಜ್ಞಾನವು, ಆತ್ಮತತ್ತ್ವನಿದರ್ಶನಂ-ಆತ್ಮತತ್ತ್ವವನ್ನು ಸಂಪೂರ್ಣವಾಗಿ ಪ್ರಕಾಶಗೊಳಿಸುವುದೋ, ತತ್-ಅಂತಹ ಜ್ಞಾನವನ್ನು, ವಿಜಾನೀಹಿ-ತಿಳುಹಿಸು ॥ ೧ ॥ ಹೇಪ್ರಭೋ-ಎಲೈ ಸರ್ವಜ್ಞನಾದ ತಂದೆಯೇ! ಇದಂ-ಈ ಜಗತ್ತು, ಯದ್ರೂಪಂ-ಯಾರಿಂದ ಪ್ರಕಾಶಿಸಲ್ಪಡುವುದೋ, ಯದಧಿಷ್ಠಾನಂ-ಯಾರನ್ನಾಶ್ರಯಿಸಿರುವುದೋ, ಯತಃ-ಯಾರಿಂದ, ಸೃಷ್ಟಂ - ಸೃಜಿಸಲ್ಪಟ್ಟಿತೋ, ಯತ್ಸಂಸ್ಥಂ-ಯಾರಲ್ಲಿ ಅಡಗುವುದೋ, ಯತ್ಪರಂ-ಯಾರಿಗಧೀನವೋ, ಯಚ್ಚ-ಯಾವನ ಸ್ವರೂಪವಾಗಿರುವುದೋ, ತಸ್ಯ - ಆವಸ್ತುವಿನ, ತತ್ತ್ವಂ-ಸ್ವರೂಪವನ್ನು, ತತ್ತ್ವತಃ-ಯಥಾರ್ಥವಾಗಿ, ವದ-ಹೇಳು. ॥ ೨ ॥ ಭೂತ...ಭುಃ, ಭೂತ - ಕಳೆದುಹೋದುದು, ಭವ್ಯ-ಮುಂದಾಗುವುದು, ಭವತ್-ಈಗ ಆಗುತ್ತಿರುವುದು, ಇವುಗಳಿಗೆ, ಪ್ರಭುಃ-ಒಡೆಯನಾದುದರಿಂದ, ಭವಾನ್-ನೀನು, ಏತತ್ಸರ್ವಂ-ನಾನು ಕೇಳಿದುದೆಲ್ಲವನ್ನೂ, ವೇದ-ತಿಳಿದಿರುವೆ. ತವ-ನಿನಗೆ, ವಿಶ್ವಂ-ಜಗತ್ತೆಲ್ಲವೂ, ಕರಾಮಲಕವತ್-ಅಂಗೈಯಲ್ಲಿರುವ ನೆಲ್ಲಿಯ ಕಾಯಂತೆ, ವಿಜ್ಞಾನಾವಸಿತಂ-, ವಿಜ್ಞಾನ-ಜ್ಞಾನದಿಂದ, ಅವಸಿತಂ - ನಿಶ್ಚಯಿಸಲ್ಪಟ್ಟಿರುವುದು ॥ ೩ ॥ ತ್ವಂ-ನೀನು, ಯದ್ವಿಜ್ಞಾನಃ - ಯಾರಿಂದ ಜ್ಞಾನವನ್ನು ಪಡೆದು, ಯದಾಧಾರಃ - ಯಾರನ್ನಾಶ್ರಯಿಸಿ, ಯತ್ಪರಃ-ಯಾರಿಗಧೀನನಾಗಿ, ಯದಾತ್ಮಕಃ-ಯಾವನ ಸ್ವರೂಪನೆನಿಸಿ, ಏಕಃ-ಇತರಸಹಾಯವಿಲ್ಲದೆ, ಆತ್ಮಮಾಯಯಾ-ನಿನ್ನ ಸಂಕಲ್ಪದಿಂದ, ಭೂತೈರೇವ-

ಷನೆ! ಪರಮಾತ್ಮತತ್ತ್ವವನ್ನು ಪ್ರಕಾಶಗೊಳಿಸುವ ಜ್ಞಾನಸಾಧನವಾವುದೋ,ಅದನ್ನು ನನಗನುಗ್ರಹಿಸಿ ತಿಳುಹು. ॥ ೧ ॥ ಪರಮಾತ್ಮತತ್ವವನ್ನು ತಿಳಿದುಕೊಳ್ಳುವುದಕ್ಕೆ ಪ್ರಪಂಚವೇ ಒಳ್ಳೆಯ ಕುರುಹಾಗಿರುವುದರಿಂದ ಮೊದಲು ಈ ಜಗತ್ತನ್ನು ಪ್ರಕಾಶಗೊಳಿಸುವವರಾರು ? ಯಾರಿಗಧೀನವಾಗಿರುವುದು ? ಯಾರನ್ನಾಶ್ರಯಿಸಿರುವುದು ? ಇದನ್ನು ಸೃಜಿಸಿದವರಾರು ? ಕಡೆಗೆ ಇದೆಲ್ಲಿ ಲಯವಾಗುವುದು?ಇದು ಯಾರಸ್ವರೂಪವಾಗಿರುವುದು? ಇಂತಹ ವಸ್ತುವಿನ ತತ್ತ್ವವನ್ನು ಸರಿಯಾಗಿ ನನಗೆ ತಿಳುಹಿಸು ॥ ೨ ॥ ಎಲೈ ಚತುರ್ಮುಖನೆ! ಭೂತಭವಿಷ್ಯದ್ವರ್ತಮಾನಗಳಾದ ಸಕಲವ್ಯಾಪಾರಗಳನ್ನೂ ಬಲ್ಲವನಾದುದರಿಂದ ಈ ಜಗತ್ತೆಲ್ಲವನ್ನೂ ಅಂಗೈಯಲ್ಲಿರುವ ನೆಲ್ಲಿಯಕಾಯಂತೆ ಜ್ಞಾನಾತಿಶಯದಿಂದ ನಿಶ್ಚಯಗೊಳಿಸಿಕೊಂಡಿರುವ ನೀನು ಇದೆಲ್ಲವನ್ನೂ ಬಲ್ಲೆ ॥೩॥ ಇದೂ ಅಂತಿರಲಿ, ಮೊದಲು ನಿನ್ನಸ್ವರೂಪವನ್ನೇ ದಯೆಮಾಡಿ ತಿಳುಹಿಸು. ನಿನಗಿಂತಹ ಜ್ಞಾನಾತಿಶಯವನ್ನಿತ್ತವರಾರು ? ನೀನು

ವಿ. * ಈಜಗತ್ತು ಭಗವತ್ಸ್ವರೂಪದಂತೆ ಕಾಣುವುದೇ ಹೊರತು ಭಗವತ್ಸ್ವರೂಪವಲ್ಲ.

†ಅಧಿಷ್ಠಾನವೆಂದರೆ ಮೂಲಾಧಾರವೆಂದರ್ಥವೇ ಹೊರತು ಆರೋಪಿತವಾದ ಸರ್ಪಕ್ಕೆ ರಜ್ಜುವಿನ ಅಧಿಷ್ಠಾನವಂತಲ್ಲ. ‡ ಯಾವುದರ ಶಕ್ತಿಯು ಯಾವುದಕ್ಕಧೀನವಾಗಿರುವುದೋ ಅದು ಆ ವಸ್ತುವಿಗೆ ಅಧೀನವೆನ್ನಲ್ಪಡುವುದು, ಆದುದರಿಂದ " ಯಚ್ಚ " ಯಾವುದಕ್ಕಧೀನವೆಂದರ್ಥವು.

ಸ್ತ್ವಂ ಯದಾತ್ಮಕಃ । ಏಕ ಸ್ಸೃಜಸಿ ಭೂತಾನಿ ಭೂತೈ ರೇವಾತ್ಮ ಮಾಯಯಾ ॥೪॥ ಆತ್ಮನ್* ಭಾವಯಸೇ ತಾನಿ ನಪರಾಭಾವಯನ್ ಸ್ವಯಂ । ಆತ್ಮಶಕ್ತಿ ಮವಷ್ಟಭ್ಯ ಊರ್ಣನಾಭಿ ರಿವಾಽಕ್ಲಮಃ ॥೫॥ ನಾಹಂ ವೇದ ಪರಂ ತ್ವಸ್ಮಿ ನ್ನಾಪರಂ ನಸಮಂ ವಿಭೋ! । ನಾಮರೂಪಗುಣೈ ರ್ಭಾವ್ಯಂ ಸದಸತ್ಕಿಂಚಿ ದನ್ಯತಃ ॥ ೬ ॥ ಸಭವಾನಚರ ದ್ಘೋರಂ ಯತ್ತಪ ಸ್ಸುಸಮಾಹಿತಃ। ತೇನ ಖೇದಯಸೇ ನಸ್ತ್ವಂ ಪರಾಶಂಕಾಂ ಪ್ರಯಚ್ಛಸಿ ॥

ಪೃಥಿವ್ಯಾದಿಭೂತಗಳಿಂದಲೇ, ಭೂತಾನಿ-ದೇವಮಾನವಾದಿಪ್ರಾಣಿಗಳನ್ನು, ಸೃಜಸಿ-ಸೃಷ್ಟಿಸುವೆ ॥೪॥ ಸ್ವಯಂ-ನೀನು, ನಪರಾಭಾವಯನ್-ಅಡಿಯಾಳಾಗದೆ, ಊರ್ಣನಾಭಿರಿವ - ಜಾಡರಹುಳುವಿನಂತೆ, ಆತ್ಮಶಕ್ತಿಂ-ಸ್ವಸಾಮರ್ಥ್ಯವನ್ನು, ಅವಷ್ಟಭ್ಯ-ಆಶ್ರಯಿಸಿ, ಅಕ್ಲಮಃ - ಆಯಾಸವಿಲ್ಲದೆ, ತಾನಿ - ಆಭೂತಗಳನ್ನು, ಆತ್ಮನ್-ನಿನ್ನಲ್ಲಿಯೇ, ಭಾವಯಸೇ-ಸಲಹುವೆ ॥೫॥ ಹೇವಿಭೋ-ಎಲೈ ಪ್ರಭುವೆ! ಅಸ್ಮಿನ್-ಈ ಎಲ್ಲದರಲ್ಲಿಯೂ, ಪರಂ-(ನಿನಗಿಂತಲೂ)ಉತ್ತಮನನ್ನಾಗಲಿ, ಅಪರಂ-ಅಧಮನನ್ನಾಗಲಿ, ಸಮಂ-ಮಧ್ಯಮನನ್ನಾಗಲಿ, ಅವರಲ್ಲಿಯೂ, ನಾಮ...ಣೈಃ, ನಾಮ-ಮನುಷ್ಯಾದಿನಾಮಗಳಿಂದಾಗಲಿ, ರೂಪ-ದ್ವಿಪಾದಾದಿರೂಪಗಳಿಂದಾಗಲಿ, ಗುಣೈಃ-ಕಪ್ಪು ಬಿಳುಪು ಮೊದಲಾದ ಗುಣಗಳಿಂದಾಗಲಿ, ಭಾವ್ಯಂ-ಸಾಧ್ಯವಾದ, ಸದಸತ್-ಸ್ಥಿರಚರ ರೂಪವಾದ, ಯತ್ಕಿಂಚಿತ್-ಯಾವ ಜಗತ್ತುಂಟೋ ಇದು, ಅನ್ಯತಃ - ಬೇರೆಯವನಿಂದಾದುದೆಂದು, ಅಹಂ-ನಾನು, ನವೇದ-ತಿಳಿಯುವುದಿಲ್ಲ ॥ ೬ ॥ ಸಃ-ಅಂತಹ, ಭವಾನ್-ನೀನು ಸುಸಮಾಹಿತಃ-ಏಕಾಗ್ರಚಿತ್ತನಾಗಿ,ಘೋರಂ-ಭಯಂಕರವಾದ,ತಪಃ-ತಪಸ್ಸನ್ನು, ಅಚರದಿತಿಯತ್-ಮಾಡುವುದಾವುದುಂಟೋ, ತೇನ-ಅದರಿಂದ, ತ್ವಂ-ನೀನು,ಪರಾಶಂಕಾಂ-ಬೇರೊಬ್ಬ ಈಶ್ವರನಿರುವನೆಂಬ ಸಂಶಯವನ್ನು, ಪ್ರಯಚ್ಛಸಿ-ಉಂಟುಮಾಡುವೆ, ನಃ - ನಮ್ಮನ್ನು, ಖೇದಯಸೇಚ - ಮರುಳ್ಗೊಳಿಸುತ್ತಲೂ ಇರುವೆ ॥ ೭ ॥ ಹೇಸರ್ವಜ್ಞ - ಎಲೈಸರ್ವಜ್ಞನೇ ! ಹೇ ಸಕಲೇಶ್ವರ - ಎಲೈ ಸರ್ವೇಶ್ವರನೇ ! ಅಹಂ-

ಯಾರನ್ನಾಶ್ರಯಿಸಿರುವೆ ? ನಿನಗೆ ಬಡೆಯನಾರು ? ನೀನು ಯಾರಸ್ವರೂಪನಾಗಿರುವೆ ? ಯಾರಸಹಾಯವೂ ಇಲ್ಲದೆ ಪೃಥಿವ್ಯಾದಿ ಪಂಚಭೂತಗಳಿಂದಲೇ ಸಕಲ ಪ್ರಾಣಿಗಳನ್ನೂ ಸ್ವಸಾಮರ್ಥ್ಯದಿಂದೆಂತು ಸೃಷ್ಟಿಸುವೆ ? ॥ ೪ ॥ ಜಾಡರಹುಳವೆಂತು ಅನಾಯಾಸವಾಗಿ ಗೂಡನ್ನು ಕಟ್ಟುವುದೋ, ಅಂತೆಯೇ ನೀನು ನಿನ್ನ ಸ್ವಶಕ್ತಿಯಿಂದಲೇ ಆಭೂತಗಳನ್ನೆಲ್ಲಾ ಪರಾಧೀನನಾಗದೆ ನೆಮ್ಮದಿಯಾಗಿ ನಿನ್ನಲ್ಲಿಯೇ ಸಲಹುತ್ತಿರುವೆಯಾ ? ॥ ೫ ॥

ಈಜಗತ್ತಿನಲ್ಲಿ ದೇವತೆಗಳು ಮನುಷ್ಯರು ಮೊದಲಾದ ಹೆಸರಿನಿಂದಲೂ,ದ್ವಿಪಾದಗಳು ಚತುಷ್ಪಾದಗಳು ಮೊದಲಾದವರ ರೂಪದಿಂದಲೂ, ಕಪ್ಪು, ಬಿಳುಪು, ಮೊದಲಾದ ಗುಣಗಳಿಂದಲೂ ಉಂಟಾಗಿ ಸ್ಥಾವರ ಜಂಗಮವೆನಿಸಿರುವ ಸೃಷ್ಟಿಯು ನಿನ್ನಹೊರತು ಮತ್ತಾರಿಂದಲೂ ಆಗಲಿಲ್ಲವಾದುದರಿಂದ ನಿನಗಿಂತಲೂ ಉತ್ತಮವಾಗಲಿ,ಅಧಮವಾಗಲಿ, ನಿನಗೆಸಮಾನವಾಗಲಿ, ಮತ್ತೊಂದು ದೈವವಿಲ್ಲವೆಂದು ನಾನು ತಿಳಿದಿರುವೆನು ॥ ೬ ॥ ಆದರೆ ನೀನು ಇಂತವನಾಗಿದ್ದರೂ ಏಕಾಗ್ರಮನಸ್ಕನಾಗಿ ಭಯಂಕರವಾದ ತಪಸ್ಸನ್ನು ಮಾಡುತ್ತಿರುವುದನ್ನು ಕಂಡರೆ ನನಗಾಶ್ಚರ್ಯವಾಗಿರುವುದಲ್ಲದೆ ನಿನಗಿಂತಲೂ ಉತ್ತಮನಾದ ಮತ್ತೊಬ್ಬ

ಏತನ್ಮೇ ಪೃಚ್ಛತ ಸ್ಸರ್ವಂ ಸರ್ವಜ್ಞ! ಸಕಲೇಶ್ವರ! । ವಿಜಾನೀಹಿ ಯಥೈ ವೇದ ಮಹಂ ಬುಧ್ಯೇಽನುಶಾಸಿತಃ ॥೪॥ ಬ್ರಹ್ಮೋವಾಚ ॥ ಸಮ್ಯಕ್ ಕಾರುಣಿಕಸ್ಯೇದಂ ವತ್ಸ! ತೇ ವಿಚಿಕಿತ್ಸಿತಂ। ಯದಹಂ ಚೋದಿತ ಸ್ಸೌಮ್ಯ! ಭಗವದ್ವೀರ್ಯ ದರ್ಶನೇ ॥೯॥ ನಾನೃತಂ ತವ ತಚ್ಚಾಪಿ ಯಥಾ ಮಾಂ ಪ್ರಬ್ರವೀಷಿ ಭೋಃ! । ಅವಿಜ್ಞಾಯ ಪರಂ ಮತ್ತ ಏತಾವತ್ತ್ವಂ ಯತೋ ಹಿ ಮೇ ॥ ೧೦ ॥ ಯೇನ ಸ್ವರೋಚಿಷಾ ವಿಶ್ವಂ ರೋಚಿತಂ ರೋಚಯಾ

ನಾನು, ಅನುಶಾಸಿತಃ-ಬೋಧಿಸಲ್ಪಟ್ಟವನಾಗಿ, ಇದಂ-ಇದನ್ನು, ಯಥೈವ-ಹೇಗೆ, ಬುಧ್ಯೇ - ತಿಳಿಯುವೆನೋ, ಪೃಚ್ಛತಃ-ಕೇಳುತ್ತಿರುವ, ಮೇ-ನನಗೆ, ಏತತ್ಸರ್ವಂ-ಇದೆಲ್ಲವನ್ನೂ, ವಿಜಾನೀಹಿ-ತಿಳುಹಿಸು ॥೪॥ ಬ್ರಹ್ಮಾ-ಬ್ರಹ್ಮನು, ಉವಾಚ-ಹೇಳಿದನು, ಹೇವತ್ಸ-ಎಲೈ ಮಗುವೆ! ಹೇ ಸೌಮ್ಯ-ಎಲೈ ಸೌಮ್ಯನೆ! ಯತ್-ಯಾವಕಾರಣದಿಂದ, ಅಹಂ-ನಾನು, ಭಗ...ನೇ, ಭಗವತ್-ಭಗವಂತನ, ವೀರ್ಯ - ಮಹಿಮೆಯನ್ನು, ದರ್ಶನೇ-ಪ್ರಕಾಶಗೊಳಿಸುವುದಕ್ಕಾಗಿ, ಚೋದಿತಃ-ಪ್ರೇರಿಸಲ್ಪಟ್ಟೆನೋ, ತತ್ - ಆದುದರಿಂದ, ಕಾರುಣಿಕಸ್ಯ-ದಯಾಶಾಲಿಯಾದ, ತೇ-ನಿನ್ನ, ಇದಂ-ಈ, ವಿಚಿಕಿತ್ಸಿತಂ-ಸಂಶಯವೂ, ಅದರಿಂದ ನೀನು ಮಾಡಿದ ಪ್ರಶ್ನೆಯೂ ಸಹ, ಸಮ್ಯಕ್-ಚೆನ್ನಾಗಿದೆ ॥ ೯ ॥ ಭೋಃ-ಅಯ್ಯಾ! ಮೇ-ನನಗೆ, ಯತಃ-ಯಾವಕಾರಣದಿಂದ, ಏತಾವತ್ತ್ವಂ-ಇಷ್ಟು ಮಹಿಮೆಯುಂಟೋ, ತತಃ-ಆ ಕಾರಣದಿಂದ, ಮತ್ತಃ-ನನಗಿಂತಲೂ, ಪರಂ-ಬೇರೊಬ್ಬನನ್ನು ಅವಿಜ್ಞಾಯ-ತಿಳಿಯದೆ, ಮಾಂ-ನನ್ನನ್ನು ಕುರಿತು, ಯಥಾ-ಹೇಗೆ, ಪ್ರಬ್ರವೀಷಿ-ಹೇಳುತ್ತಿರುವೆಯೋ, ತವ-ನಿನ್ನ, ತಚ್ಚಾಪಿ-ಅದೂಕೂಡ, ಅನೃತಂ-ಸಂಪೂರ್ಣವಾಗಿಸುಳ್ಳು, ನ-ಅಲ್ಲ, ॥ ೧೦ ॥ ಯೇನ-ಯಾವನಿಂದ, ಸ್ವರೋಚಿಷಾ-ತನ್ನತೇಜಸ್ಸಿನಿಂದ, ರೋಚಿತಂ-ಪ್ರಕಾಶಗೊಳಿಸಲ್ಪಟ್ಟ, ವಿಶ್ವಂ-ಈ ಜಗತ್ತನ್ನು, ಯಥಾರ್ಕಃ-ಸೂರ್ಯನಂತೆಯೂ, ಯಥಾಗ್ನಿಃ-ಬೆಂಕಿಯಂತೆಯೂ,

ನಿರಬಹುದೆಂತಲೂ ತೋರುತ್ತಿರುವುದು ॥ ೭ ॥ ಆದುದರಿಂದ ಎಲೈ ಸರ್ವೇಶ್ವರನೇ! ಸರ್ವಜ್ಞನೇ! ನನ್ನಬುದ್ಧಿಗೆ ಹಿಡಿಯುವಂತೆ ಈಸಂಗತಿಯೆಲ್ಲವನ್ನೂ ಅನುಗ್ರಹಿಸಿ ತಿಳುಹು॥ ಎಂದು ನಾರದಮುನಿಯು ಪ್ರಶ್ನೆಮಾಡಲು ಬ್ರಹ್ಮದೇವನು ಆತನನ್ನು ಕುರಿತು, ಎಲೈ ಸೌಮ್ಯನಾದ ಮಗುವೆ! ನಾರದನೆ! ಭಗವಂತನಾದ ಶ್ರೀಹರಿಯ ಗುಣವರ್ಣನೆಯನ್ನು ಮಾಡುವುದಕ್ಕಾಗಿ ನನ್ನನ್ನು ಪ್ರೇರಿಸಿದೆಯಾದುದರಿಂದ ನೀನು ಜಿಜ್ಞಾಸುವಾಗಿದ್ದರೂ, ನನ್ನಲ್ಲಿ ದಯೆಯನ್ನೇ ತೋರಿದಂತಾಯಿತು. ನಿನಗುಂಟಾಗಿರುವ ಸಂಶಯವೂ ನ್ಯಾಯವೇ ಅದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ನೀನುಮಾಡಿದ ಪ್ರಶ್ನೆಯು ಅತ್ಯುತ್ತಮವಾದುದು॥ ಅಯ್ಯಾ ನಾರದನೇ! ನನಗಿಂತಲೂ ಬೇರೆಯಾದ ದೈವವನ್ನು ಅರಿಯದುದರಿಂದ "ನೀನೇ ಲೋಕೇಶ್ವರನು" ಎಂದು ನನ್ನನ್ನು ಕುರಿತು ನೀನು ನುಡಿದುದಾವುದುಂಟೋ, ಅದೂ ಅಷ್ಟು ಸುಳ್ಳಲ್ಲ. ಅಷ್ಟುಸಾಮರ್ಥ್ಯವೂ ನನ್ನಲ್ಲಿರುವುದು. ಅದು ನನ್ನ ಶಕ್ತಿಯಲ್ಲ. ನನಗಿಂತಲೂ ಬೇರೊಬ್ಬ ಭಗವಂತನಿರುವನು ॥೧೦॥ *ಶ್ರುತಿಯಲ್ಲಿ ಹೇಳಿದಂತೆ ಸೂರ್ಯ

* ಶ್ರು. ನತತ್ರ ಸೂರ್ಯೋ ಭಾತಿ ನಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಯ ಮಗ್ನಿಃ। ತಮೇವ ಭಾಂತ ಮನುಭಾತಿ ಸರ್ವಂ ತಸ್ಯ ಭಾಸಾ ಸರ್ವ ಮಿದಂ ವಿಭಾತಿ ।

ಮ್ಯಹಂ । ಯಥಾರ್ಕೋಽಗ್ನಿರ್ಯಥಾಸೋಮೋ ಯಥರ್ಕ್ಷಗ್ರಹತಾರಕಾಃ ॥ ೧೧ ॥ *ತಸ್ಮೈ ನಮೋ ಭಗವತೇ ವಾಸುದೇವಾಯ ಧೀಮಹಿ। ಯನ್ಮಾಯಯಾ ದುರ್ಜಯಯಾ ಮಾಂ ವದಂತಿ ಜಗದ್ಗುರುಂ ॥ ೧೨ ॥ ವಿಲಜ್ಜಮಾನಯಾ ಯಸ್ಯ ಸ್ಥಾತು ಮೀಕ್ಷಾಪಥೇಽಮುಯಾ । ವಿಮೋಹಿತಾ

ಯಥಾಸೋಮಃ-ಚಂದ್ರನಂತೆಯೂ, ಯ...ಕಾಃ, ಯಥರ್ಕ್ಷ-ಅಶ್ವಿನ್ಯಾದಿನಕ್ಷತ್ರಗಳು, ಗ್ರಹ-ಶುಕ್ರಾದಿಗ್ರಹಗಳು, ತಾರಕಾಃ-ಇತರನಕ್ಷತ್ರಗಳು, ಇವುಗಳಂತೆಯೂ, ರೋಚಯಾಮಿ-ಬೆಳಗಿಸುತ್ತೇನೋ ॥೧೧॥

ದುರ್ಜಯಯಾ-ಗೆಲ್ಲುವುದಕ್ಕಾಗದ, ಯನ್ಮಾಯಯಾ-ಯಾವನ ಮಾಯೆಯಿಂದ, ಮಾಂ-ನನ್ನನ್ನು, ಜಗದ್ಗುರುಂ-ಲೋಕ ಕರ್ತನೆಂದು, ವದಂತಿ-ಹೇಳುವರೋ, ಭಗವತೇ - ಭಗವಂತನಾದ, ತಸ್ಮೈ-ಆ, ವಾಸುದೇವಾಯ-ವಾಸುದೇವನಿಗೆ, ನಮಃ-ನಮಸ್ಕಾರವು, ಧೀಮಹಿ-ಆತನನ್ನು ಧ್ಯಾನಿಸುತ್ತೇವೆ ॥ ೧೨ ॥ ಯಸ್ಯ-ಯಾವನ, ಈಕ್ಷಾಪಥೇ-ದೃಷ್ಟಿಮಾರ್ಗದಲ್ಲಿ, ಸ್ಥಾತುಂ-ನಿಲ್ಲುವುದಕ್ಕೆ, ವಿಲಜ್ಜಮಾನಯಾ-ನಾಚುತ್ತಿರುವ, ಅಮುಯಾ-ಈ ಮಾಯೆಯಿಂದ, ವಿಮೋಹಿತಾಃ-ಮರುಳಾದ, ದುರ್ಧಿಯಃ - ಮಂದಮತಿಗಳಾದವರು, ಅಹಂ-ನಾನು, ಮಮ-ನನ್ನದು, ಇತಿ-ಎಂದು, ವಿಕತ್ಥಂತೇ-ಹೊಗಳಿಕೊಳ್ಳುವರೋ ॥೧೩॥ ಹೇ ಬ್ರಹ್ಮನ್-ಎಲೈನಾರದನೇ, ದ್ರವ್ಯಂ - ಪೃಥಿವ್ಯಾದಿಭೂತಗಳು, ಕರ್ಮ ಚ - ಜನ್ಮಕ್ಕೆ ನಿಮಿತ್ತವು, ಕಾಲಶ್ಚ-ಗುಣಗಳನ್ನು ಕ್ಷೋಭೆಗೊಳಿಸುವಕಾಲವು, ಸ್ವಭಾವಃ - ಆಗುಣಗಳ ಬದಲಾವಣೆಗೆ ಕಾರಣವು,

ಚಂದ್ರರೂ, ಅಗ್ನಿಗಳೂ, ಅಶ್ವಿನ್ಯಾದಿ ನಕ್ಷತ್ರಗಳೂ, ಶುಕ್ರಾದಿಗ್ರಹಗಳು, ತಾರೆಗಳೂ, ಇವುಗಳಂತು, ಚೈತನ್ಯದಿಂದ ಪ್ರಕಾಶಗೊಳಿಸಲ್ಪಟ್ಟ ವಸ್ತುಗಳನ್ನೇ ಪ್ರಕಾಶಗೊಳಿಸುವವೋ, ಅಂತೆಯೇ ನಾನು, ಆಭಗವಂತನ ತೇಜಸ್ಸಿನಿಂದ ಪ್ರಕಾಶಗೊಳಿಸಲ್ಪಟ್ಟ ವಸ್ತುಗಳನ್ನೇ, ಸೃಷ್ಟಿಯಿಂದ ಹೊರಪಡಿಸುವೆನು ॥ ೧೧ ॥ ಯಾವ ಭಗವಂತನ ದುರ್ಜಯವಾದ ಮಾಯೆಯಿಂದ ಮರುಳಾಗಿ ಸಕಲರೂ ನನ್ನನ್ನೇ ಸೃಷ್ಟಿಕರ್ತನೆಂತಲೂ, ಲೋಕೇಶ್ವರನೆಂತಲೂ ಹೇಳುವರೋ, ಅಂತಹ ಭಗವಂತನಾದ ವಾಸುದೇವಮೂರ್ತಿಗೆ ನಮಸ್ಕಾರವು ॥ ೧೨ ॥ ಅಯ್ಯಾ ನಾರದನೆ ! ಭಗವಂತನು 'ಮಾಯಾವಿ'ಯೆಂಬುದರಿಂದ ಆತನೂ ಮಾಯೆಗೊಳಗಾಗಿ ಸಂಸಾರಕ್ಕೆ ಸಿಕ್ಕಿರುವನೆಂದರಿಯಬೇಡ. ಯಾವ ಮಾಯೆಯಿಂದ ನಾವೆಲ್ಲರೂ ಮರುಳಾಗಿ 'ನಾನು' 'ನನ್ನದು' ಎಂದು ಅಹಂಕಾರ ಮಮಕಾರಗಳಿಗೆ ಬದ್ಧರಾಗಿ ನರಳುತ್ತಿರುವೆವೋ, ಅಂತಹ ಮಾಯೆಯು, ತನ್ನ ಠಕ್ಕುಠಾಳಿಗಳೆಲ್ಲವನ್ನು ಬಲ್ಲವನಾದ ಆತನೆದಿರಾಗಿ ನಿಲ್ಲುವುದಕ್ಕೆ ಕೂಡ ನಾಚಿ ಮರೆಯಾಗಿ ಸಂಚರಿಸುವಳು. ಆದುದರಿಂದ ಮಾಯೆಗೊಳಪಡದಿರುವುದೇ ಭಗವದ್ರೂಪವು ॥ ೧೩ ॥

ಮತ್ತು ಜಗತ್ತಿಗೆ ಉಪಾದಾನಕಾರಣಗಳಾದ ಪೃಥಿವ್ಯಾದಿ ಪಂಚಭೂತಗಳೂ, ಜನ್ಮನಿಮಿತ್ತವಾದ ಕರ್ಮವೂ, ಗುಣಕ್ಷೋಭಕವಾದ ಕಾಲವೂ, ಸತ್ವರಜಸ್ತಮಸ್ಸುಗಳ

* ವಿ. (೧) ಓಂ ನಮೋ ಭಗವತೇ ವಾಸುದೇವಾಯ. (೨) ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ । ತನ್ನೋ ವಿಷ್ಣುಃ ಪ್ರಚೋದಯಾತ್ ॥ ೧೨ ಮತ್ತು ೨೪ ಅಕ್ಷರಗಳುಳ್ಳ ಈ ಎರಡು ಮಂತ್ರಗಳು ಬ್ರಹ್ಮನಿಂದ ನಿತ್ಯವೂ ಜಪಿಸಲ್ಪಡುವುವು.

ವಿಕತ್ಥಂತೇ ಮಮಾಹ ಮಿತಿ ದುರ್ಧಿಯಃ ॥ ೧೩ ॥ *ದ್ರವ್ಯಂ ಕರ್ಮಚ ಕಾಲಶ್ಚ ಸ್ವಭಾವೋ ಜೀವ ಏವಚ । ವಾಸುದೇವಾ ತ್ಪರೋ ಬ್ರಹ್ಮನ್ ! ನಚಾನ್ಯೋಽರ್ಥೋಽಸ್ತಿ ತತ್ತ್ವತಃ ॥ ೧೪ ॥ ನಾರಾಯಣಪರಾ ವೇದಾ ದೇವಾ ನಾರಾಯಣಾಂಗಜಾಃ । ನಾರಾಯಣಪರಾ ಲೋಕಾ ನಾರಾಯಣಪರಾ ಮಖಾಃ ॥ ೧೫ ॥ ನಾರಾಯಣಪರೋ ಯೋಗೋ ನಾರಾಯಣಪರಂ ತಪಃ। ನಾರಾಯಣಪರಂ ಜ್ಞಾನಂ ನಾರಾಯಣಪರಾ ಗತಿಃ॥೧೬॥

ಜೀವಏವಚ - ಸುಖದುಃಖಗಳನ್ನು ಅನುಭವಿಸುವ ಜೀವನು ಇವರು, ತತ್ವತಃ - ನಿಜವಾಗಿ, ವಾಸುದೇವಾತ್ - ವಾಸುದೇವನಿಗಿಂತಲೂ, ಅನ್ಯಃ-ಬೇರೆಯಾದ, ಪರಃ - ಮತ್ತೊಂದು, ಅರ್ಥಃ-ಪದಾರ್ಥವಾಗಿ, ನಾಸ್ತಿ-ಇಲ್ಲ ॥ ೧೪ ॥ ವೇದಾಃ - ವೇದಗಳು, ನಾರಾಯಣಪರಾಃ - ನಾರಾಯಣನಿಂದ ಹುಟ್ಟಿದವುಗಳು, ದೇವಾಃ-ದೇವತೆಗಳು, ನಾರಾಯಣ-ನಾರಾಯಣನ, ಅಂಗ-ಶರೀರದಿಂದ, ಜಾಃ-ಹುಟ್ಟಿದವರು, ಲೋಕಾಃ-ಲೋಕಗಳು, ನಾರಾಯಣಪರಾಃ-ನಾರಾಯಣನಿಂದ ಜನಿಸಿದವುಗಳು, ಮಖಾಃ - ಯಜ್ಞಗಳು, ನಾರಾಯಣಪರಾಃ-ನಾರಾಯಣನನ್ನುಹೊಂದುವುದಕ್ಕೆ ಸಾಧನಗಳು ॥ ೧೫ ॥

ಯೋಗಃ-ಪ್ರಾಣಾಯಾಮವು, ನಾರಾಯಣಪರವು, ತಪಃ-ತಪಸ್ಸು, ನಾರಾಯಣಪರವು, ಜ್ಞಾನವು,

---

ಬದಲಾವಣೆಗೆ, ಕಾರಣವಾದ ಸ್ವಭಾವವೂ, ಸುಖದುಃಖಗಳನ್ನು ಅನುಭವಿಸುವ ಜೀವನೂ, ಇವರೆಲ್ಲರೂ ಸರ್ವಕಾರಣನಾದ ವಾಸುದೇವಮೂರ್ತಿಯ ಸ್ವರೂಪಗಳೇ ಹೊರತು ಬೇರೇವಸ್ತುಗಳಲ್ಲವಾದಕಾರಣ ಇವೆಲ್ಲಕ್ಕೂ ಸತ್ತಾರೂಪವಾದ ಅಧಿಷ್ಠಾನವು ಭಗವಂತನೇ ಆಗಿರುವನು ॥ ೧೪ ॥ ಎಂತೆಂದರೆ:- ಸಕಲವೇದಗಳೂ ನಾರಾಯಣನನ್ನೇ ಹೊಗಳುವುವು. ಸಕಲದೇವತೆಗಳೂ ನಾರಾಯಣನಿಂದಲೇ ಜನಿಸಿದವರಾದುದರಿಂದ ಆತನಿಗಿಂತಲೂ ಬೇರೆಯಲ್ಲ. ಸ್ವರ್ಗಮೊದಲಾದ ಲೋಕಗಳೆಲ್ಲವೂ ಆ ನಾರಾಯಣನ ಆನಂದಾಂಶಗಳೇ. ಜ್ಯೋತಿಷ್ಟೋಮಾದಿ ಯಾಗಗಳೆಲ್ಲವೂ ಆತನನ್ನುಹೊಂದುವುದಕ್ಕೆ ಸಾಧನಗಳೇ. ॥ ಪ್ರಾಣಾಯಾಮಾದಿಯೋಗವೂ ಚಿತ್ತೈಕಾಗ್ರ್ಯರೂಪವಾದ ತಪಸ್ಸೂ, ಆ ತಪಸ್ಸಿನಿಂದ ಸಂಪಾದಿಸಿದ ಜ್ಞಾನವೂ, ಆಜ್ಞಾನಕ್ಕೆ ಫಲವಾದ, ಮೋಕ್ಷವೂ ಸಹ ನಾರಾಯಣ ಮೂರ್ತಿಯ ಸ್ವರೂಪವೇ ಹೊರತು ಬೇರೆಯಲ್ಲವಾದುದರಿಂದ ನನಗಿಂತಲೂ ಬೇರೆಯಾಗಿರುವ ಪರಮೇಶ್ವರನೇ ಸರ್ವಸ್ವರೂಪನೂ ಸರ್ವಾಧಾರನೂ ಆಗಿರುವನು ॥ ೧೬ ॥ ಸರ್ವಜ್ಞ

---

* (೧) ವಿ. ಭಗವಂತನ ಮಾಯೆಯಿಂದ ಮೋಹಿತರಾದ ಜನರು ದ್ರವ್ಯಾದಿ ಪದಾರ್ಥಗಳೇ ಜಗತ್ಕಾರಣವೆಂದು ವಾದಿಸುವರು. ತತ್ತ್ವವನ್ನು ವಿಚಾರಿಸಿದರೆ ಇವುಗಳಲ್ಲಿ ಪರಮಾತ್ಮನಿಗಿಂತಲೂ ಬೇರೆಯಾದುದೊಂದೂ ಇಲ್ಲ. (೨) ವಿ. ಪುರೋಡಾಶದ್ರವ್ಯವೂ, ಋತ್ವಿಜರುಮಾಡುವ ಕರ್ಮವೂ, ವಸಂತಋತು ಮೊದಲಾದಕಾಲವೂ, ಬ್ರಾಹ್ಮಣತ್ವ ಮೊದಲಾದ ಸ್ವಭಾವವೂ, ಯಜಮಾನನೆಂಬ ಹೆಸರುಳ್ಳಜೀವನೂ, ಇವರಾಗಲಿ, ಅಥವಾ ಮೇಲೆಹೇಳಿದ ದ್ರವ್ಯ, ಕರ್ಮ, ಕಾಲಮೊದಲಾದವುಗಳಾಗಲಿ, ಯಾವುದೂ ವಾಸುದೇವನಿಗಿಂತಲೂ ದೊಡ್ಡದಲ್ಲ.

ತಸ್ಯಾಪಿ ದ್ರಷ್ಟುರೀಶಸ್ಯ ಕೂಟಸ್ಥಸ್ಯಾಽಖಿಲಾತ್ಮನಃ । ಸೃಜ್ಯಂ ಸೃಜಾಮಿ ಸೃಷ್ಟೋಽಹ ಮೀಕ್ಷಯೈವಾಽಭಿಚೋದಿತಃ ॥೧೭॥ ಸತ್ತ್ವಂ ರಜಸ್ತಮ ಇತಿ *ನಿರ್ಗುಣಸ್ಯ ಗುಣಾಸ್ತ್ರಯಃ । ಸ್ಥಿತಿ ಸರ್ಗ ನಿರೋಧೇಷು ಗೃಹೀತಾ ಮಾಯಯಾ ವಿಭೋಃ ॥ ೧೮ ॥ ಕಾರ್ಯಕಾರಣ ಕರ್ತೃತ್ವೇ ದ್ರವ್ಯಜ್ಞಾನ ಕ್ರಿಯಾಶ್ರಯಾಃ । ಬಧ್ನಂತಿ ನಿತ್ಯದಾ ಮುಕ್ತಂ ಮಾಯಿನಂ

ನಾರಾಯಣಪರವು, ಗತಿಃ-ಮೋಕ್ಷವು, ನಾರಾಯಣಪರವು. ॥ ೧೬ ॥ ಸೃಷ್ಟಃ - ಸೃಷ್ಟಿಸಲ್ಪಟ್ಟ, ಅಹಂ-ನಾನು, ದ್ರಷ್ಟುಃ-ಸರ್ವಜ್ಞನೂ, ಈಶಸ್ಯ-ನಿಯಾಮಕನೂ, ಕೂಟಸ್ಥಸ್ಯ-ನಿರ್ವಿಕಾರನೂ ಅಖಿಲಾತ್ಮನಃ ಸಕಲಸ್ವರೂಪನೂ ಆದ, ತಸ್ಯ-ಆ ಪರಮಾತ್ಮನ, ಈಕ್ಷಯೈವ-ಸಂಕಲ್ಪದಿಂದಲೇ, ಅಭಿಚೋದಿತಃ-ಪ್ರೇರಿಸಲ್ಪಟ್ಟವನಾಗಿ, ಸೃಜ್ಯಂ-ಆತನಿಂದಸೃಷ್ಟಿಸಲ್ಪಟ್ಟುದನ್ನೇ, ಸೃಜಾಮಿ-ಸೃಷ್ಟಿಸುತ್ತೇನೆ ॥ ೧೭ ॥ ನಿರ್ಗುಣಸ್ಯ-ಗುಣರಹಿತನಾದ, ವಿಭೋಃ-ನಿಯಾಮಕನಾದ ಭಗವಂತನಿಂದ, ಸ್ಥಿತಿ...ಷು, ಸ್ಥಿತಿ-ಪಾಲನವು, ಸರ್ಗ-ಸೃಷ್ಟಿಯು, ನಿರೋಧೇಷು-ಸಂಹಾರವು, ಇವುಗಳಲ್ಲಿ, ಮಾಯಯಾ-ಮಾಯೆಯಿಂದ, ಸತ್ವಂ-ಸತ್ವವು, ರಜಃ-ರಜೋಗುಣವು, ತಮಃ-ತಮಸ್ಸು, ಇತಿ-ಹೀಗೆಂಬ, ತ್ರಯಃ-ಮೂರು, ಗುಣಾಃ-ಗುಣಗಳು, ಗೃಹೀತಾಃ-ಗ್ರಹಿಸಲ್ಪಟ್ಟವು ॥ ೧೮ ॥ ಗುಣಾಃ-ಸತ್ವಾದಿ ಗುಣಗಳು, ಕಾರ್ಯ...ತ್ವೇ - ಕಾರ್ಯ-ಅಧಿಭೂತಗಳಾದ ಗೋಳಗಳಲ್ಲಿಯೂ, ಕಾರಣ - ಅಧ್ಯಾತ್ಮಗಳೆನಿಸಿದ ಇಂದ್ರಿಯಗಳಲ್ಲಿಯೂ, ಕರ್ತೃತ್ವೇ - ಅಧಿದೈವಗಳೆಂದೆನಿಸಿದ ಇಂದ್ರಿಯಾಭಿಮಾನಿದೇವತೆಗಳಲ್ಲಿಯೂ, ದ್ರವ್ಯ...ಯಾಃ, ದ್ರವ್ಯ-ಮಹಾಭೂತಗಳಿಗೂ, ಜ್ಞಾನ - ಇಂದ್ರಿಯ ದೇವತೆಗಳಿಗೂ, ಕ್ರಿಯಾ-ಇಂದ್ರಿಯಗಳಿಗೂ, ಆಶ್ರಯಾಃ-ಕಾರಣಗಳಾಗಿ, ನಿತ್ಯದಾ-ಯಾವಾಗಲೂ, ಮುಕ್ತಮಪಿ-ನಿರಂಜನನಾಗಿದ್ದರೂ, ಮಾಯಿನಂ-ಮಾಯೆಗೆವಿಷಯನಾದ, ಪುರುಷಂ-ಜೀವನನ್ನು, ಬಧ್ನಂತಿ - ಸೆರೆಗೊಳಿ

ನೂ, ಸರ್ವಸಾಕ್ಷಿಯೂ, ಸರ್ವೇಶ್ವರನೂ, ನಿರ್ವಿಕಾರನೂ, ಸರ್ವಾತ್ಮಕನೂ ಆದ ಶ್ರೀಹರಿಯ ಸಂಕಲ್ಪಮಾತ್ರದಿಂದ ಪ್ರೇರಿತನಾಗಿ, ಆತನಿಂದಲೇ ಜನಿಸಿದವನಾದ ಕಾರಣ ನಾನು ಆತನು ಸೃಜಿಸಿರತಕ್ಕಪದಾರ್ಥಗಳನ್ನೇ ಸೃಜಿಸುವೆನು ॥೧೭॥ ಆದರೆ ಸರ್ವವೂ ವಾಸುದೇವ ಮಯವಾದಲ್ಲಿ ಜೀವೇಶ್ವರವಿಭಾಗವೆತ್ತಣದೆಂಬೆಯೋನೋ ? ಅದಕ್ಕೆ ಕಾರಣವನ್ನು ಹೇಳುವೆನು ಕೇಳು. ಆ ಭಗವಂತನು ನಿರ್ಗುಣನಾದರೂ ಈ ಜಗತ್ತಿನಸೃಷ್ಟಿಸ್ಥಿತಿ ಸಂಹಾರರೂಪವಾದ ಲೀಲೆಗಾಗಿ ಸ್ವತಂತ್ರನಾಗಿಯೇ ಮಾಯೆಯಿಂದ ಸತ್ವ ರಜಸ್ತಮಸ್ಸುಗಳೆಂಬ ಮೂರು ಗುಣಗಳನ್ನು ಪರಿಗ್ರಹಿಸಿದನು. ॥ ೧೮ ॥ ಆ ಗುಣಗಳು ಅಧಿಭೂತವೆಂದು ಕರೆಯಲ್ಪಡುವ ಕಾರ್ಯಗಳೆನಿಸುವ ಇಂದ್ರಿಯ ಗೋಳಗಳೂ, ಅಧ್ಯಾತ್ಮವೆಂಬ ಹೆಸರುಳ್ಳ ಕಾರಣರೂಪಗಳಾದ ಚಕ್ಷುರಾದೀಂದ್ರಿಯಗಳೂ, ಅಧಿದೈವತ ವೆಂಬ ಹೆಸರಿನಿಂದ ಇಂದ್ರಿಯವ್ಯಾಪಾರಗಳನ್ನು, ನಡೆಯಿಸುವ ಇಂದ್ರಿಯಾಧಿದೇವತೆಗಳೂ, ಈ ಮೂವರ ಸೃಷ್ಟಿಯಲ್ಲಿಯೂ,ಪೃಥಿವ್ಯಾದಿ ಮಹಾಭೂತಗಳಿಗೂ, ಆ ಇಂದ್ರಿಯದೇವತೆಗಳಿಗೂ, ಇಂದ್ರಿಯಗಳಿಗೂ ಸಹ ಕಾರಣಗಳೆನಿಸಿಕೊಂಡು, ಮಾಯೋಪಾಧಿಕನಾದ

---

* ಪ್ರೀ. ಪ್ರಾಕೃತ ಗುಣರಹಿತನು. ವಿ. ಸತ್ವಾದಿಗುಣ ವಿಧುರನು.

ಪುರುಷಂ ಗುಣಾಃ ॥ ೧೯ ॥ ಸಏಷ ಭಗವಾನ್ ಲಿಂಗೈ ಸ್ತ್ರಿಭಿ ರೇಭಿ
ರಧೋಕ್ಷಜಃ। ಸ್ವಲಕ್ಷಿತಗತಿ ರ್ಬ್ರಹ್ಮನ್! ಸರ್ವೇಷಾಂಮಮಚೇಶ್ವರಃ ॥೨೦॥
ಕಾಲಂ ಕರ್ಮ ಸ್ವಭಾವಂಚ ಮಾಯೇಶೋ ಮಾಯಯಾ ಸ್ವಯಾ ।
*ಆತ್ಮನ್ *ಯದೃಚ್ಛಯಾ ಪ್ರಾಪ್ತಂ ವಿಬುಭೂಷು ರುಪಾದದೇ ॥ ೨೧ ॥
ಕಾಲಾ ದ್ಗುಣವ್ಯತಿಕರಃ ಪರಿಣಾಮಃ ಸ್ವಭಾವತಃ । ಕರ್ಮಣೋ ಜನ್ಮ
ಮಹತಃ ಪುರುಷಾಧಿಷ್ಠಿತಾ ದಭೂತ್ ॥೨೨॥ ಮಹತಸ್ತು ವಿಕುರ್ವಾಣಾ

ಸುವುವು ॥ ೧೯ ॥ ಹೇ ಬ್ರಹ್ಮನ್-ಎಲೈ ನಾರದನೆ ! ಅಧೋಕ್ಷಜಃ-ಜಿತೇಂದ್ರಿಯನಾದ, ಭಗವಾನ್-ಭಗವಂತನಾದ, ಸಏಷಃ-ಆ ಈ ನಾರಾಯಣಮೂರ್ತಿಯು, ಏಭಿಃ-ಈ, ಸ್ತ್ರಿಭಿಃ-ಮೂರಾದ, ಲಿಂಗೈಃ-ಸತ್ವಾದಿಗುಣಗಳಿಂದಕೂಡಿ, ಸ್ವ...ತಿಃ- ಸು-ಚೆನ್ನಾಗಿ, ಅಲಕ್ಷಿತ-ಕಾಣಲ್ಪಡದ, ಅಥವಾ, ಸ್ವ-ತನ್ನ ಭಕ್ತರಿಂದ, ಲಕ್ಷಿತ-ಕಾಣಲ್ಪಟ್ಟ, ಗತಿಃ-ನೆಲೆಯುಳ್ಳವನಾಗಿ, ಸರ್ವೇಷಾಂ-ಎಲ್ಲರಿಗೂ, ಮಮಚ-ನನಗೂ ಸಹ, ಈಶ್ವರಃ-ನಿಯಾಮಕನಾಗಿರುವನು ॥ ೨೦ ॥ ಮಾಯೇಶಃ-ಮಾಯೆಯನ್ನು ವಶಗೊಳಿಸಿಕೊಂಡಿರುವ ಭಗವಂತನು, ಸ್ವಯಾ-ತನ್ನ, ಮಾಯಯಾ - ಸಂಕಲ್ಪರೂಪವಾದಮಾಯೆಯಿಂದ, ವಿಬುಭೂಷುಃ-ನಾನಾವಿಧವಾಗಬೇಕೆಂದೆಳಸಿ, ಆತ್ಮನ್-ತನ್ನಲ್ಲಿ, ಯದೃಚ್ಛಯಾ - ತನಗಿಚ್ಛೆಯಿಂದ, ಪ್ರಾಪ್ತಂ-ಬದಗಿದ, ಕಾಲಂ-ಕಾಲವನ್ನೂ, ಕರ್ಮ-ಕರ್ಮವನ್ನೂ ಸ್ವಭಾವಂಚ-ಸ್ವಭಾವವನ್ನೂ, ಉಪಾದದೇ-ಸ್ವೀಕರಿಸಿದನು ॥೨೧॥ ಪುರುಷಾಧಿಷ್ಠಿತಾತ್-ಪರಮೇಶ್ವರನಿಂದಾಶ್ರಯಿಸಲ್ಪಟ್ಟ, ಕಾಲಾತ್-ಕಾಲದಿಂದ, ಗುಣವ್ಯತಿಕರಃ-ಗುಣಗಳವ್ಯತ್ಯಾಸವು, ಸ್ವಭಾವತಃ-ಸ್ವಭಾವದಿಂದ, ಪರಿಣಾಮಃ - ಬದಲಾವಣೆಯು, ಕರ್ಮಣಃ-ಕರ್ಮದಿಂದ, ಮಹತಃ-ಮಹತ್ತತ್ವದ, ಜನ್ಮ-ಉತ್ಪತ್ತಿಯು, ಅಭೂತ್-ಆಯಿತು ॥೨೨॥ ವಿಕುರ್ವಾಣಾತ್-ವಿಕಾರವನ್ನು ಪಡೆದ, ರಜ...ತ್, ರಜಃ - ರಜೋಗುಣದಿಂದಲೂ, ಸತ್ವ-ಸತ್ವಗುಣದಿಂದಲೂ, ಉಪಬೃಂಹಿತಾತ್-ಬೆಳೆಯಿಸಲ್ಪಟ್ಟ, ಮಹತಃ-ಮಹತ್ತತ್ವದಿಂದ, ದ್ರವ್ಯ...ಕಃ, ದ್ರವ್ಯ-

---

ಈಶ್ವರನನ್ನು ಸಾಕ್ಷ್ಯವಿಸಿದವು ॥ ೧೯ ॥ ಆದುದರಿಂದ ವಶ್ಯಮಾಯನಾದ ಪರಮಾತ್ಮನು ಜೀವರಿಗೆ ಉಪಾಧಿಭೂತಗಳಾದ ಈ ಮೂರು ಗುಣಗಳಿಂದ, ಯಾರಿಗೂ ತನ್ನ ನೆಲೆಯನ್ನು ತೋರದವನಾದರೂ ಏಕಾಂತಭಕ್ತರಿಗೆ ಮಾತ್ರ ಗೋಚರವಾದ ಸ್ವರೂಪದಿಂದ ಪ್ರಪಂಚದ ಸೃಷ್ಟ್ಯಾದಿ ವ್ಯಾಪಾರಗಳನ್ನು ನಡೆಯಿಸುವನು. ಆತನೇ ಸಕಲರಿಗೂ ನನಗೂ ಸಹ ಪ್ರಭುವಾಗಿರುವನು ॥ ೨೦ ॥ ಎಲೈ ನಾರದನೇ! ಆ ಭಗವಂತನ ಸೃಷ್ಟಿಪ್ರಕಾರವನ್ನು ವಿವರಿಸುವೆನು ಕೇಳು, ಮಾಯಾನಿಯಾಮಕನಾದ ಆ ಪರಮಾತ್ಮನು ತನ್ನ ಸಂಕಲ್ಪರೂಪವಾದ ಮಾಯೆಯಿಂದ ನಾನಾರೂಪನಾಗಲೆಳಸಿದವನಾಗಿ, ಇಚ್ಛಾಮಾತ್ರದಿಂದ ತನ್ನಲ್ಲುಂಟಾದ ಕಾಲ, ಕರ್ಮ, ಸ್ವಭಾವಗಳನ್ನು ಅಂಗೀಕರಿಸಿದನು. ॥ ೨೧ ॥

ಬಳಿಕ ಭಗವಂತನ ಸಂಕಲ್ಪಕ್ಕೊಳಗಾದ, ಕಾಲದಿಂದ ಸತ್ವಾದಿಗುಣಗಳಲ್ಲಿ ತಾರತಮ್ಯವೂ, ಸ್ವಭಾವದಿಂದ ಆ ಗುಣಗಳಲ್ಲಿ ಬದಲಾವಣೆಯೂ ಉಂಟಾಗಿ, ಜೀವಾದೃಷ್ಟದಿಂದ ಈಶ್ವರಾಧಿಷ್ಠಿತವಾದ ಅವ್ಯಕ್ತದಿಂದ ಮಹತ್ತತ್ವವುಂಟಾಯಿತು ॥೨೨॥ ಅನಂತರದಲ್ಲಿ ರಜಸ್ಸತ್ವಗುಣಗಳೇ ಅಧಿಕವಾಗಿರುವ ಆ ಮಹತ್ತತ್ವವು ವಿಕಾರವನ್ನು

ದ್ರಜಸ್ಸತೋಽಪಿ ಬೃಂಹಿತಾತ್ । ತಮಃ ಪ್ರಧಾನ ಸ್ತ್ವಭವ ದ್ದ್ರವ್ಯ ಜ್ಞಾನ ಕ್ರಿಯಾತ್ಮಕಃ ॥೨೩॥ ಸೋಽಹಂಕಾರ ಇತಿ ಪ್ರೋಕ್ತೋ ವಿಕುರ್ವ ಸಮಭೂ ತ್ತ್ರಿಧಾ । ವೈಕಾರಿಕ ಸ್ತೈಜಸಶ್ಚ ತಾಮಸಶ್ಚೇತಿ ಯದ್ಭಿದಾ । ದ್ರವ್ಯಶಕ್ತಿಃ ಕ್ರಿಯಾಶಕ್ತಿ ರ್ಜ್ಞಾನಶಕ್ತಿರಿತಿ ಪ್ರಭೋ ! ॥೨೪॥ ತಾಮಸಾದಪಿ ಭೂತಾದೇ ರ್ವಿಕುರ್ವಾಣಾ ದಭೂ ನ್ನಭಃ । ತಸ್ಯ ಮಾತ್ರಾ ಗುಣ ಶ್ಶಬ್ದೋ*ಲಿಂಗಂ ಯದ್ದ್ರಷ್ಟೃ ದೃಶ್ಯಯೋಃ! ॥೨೫॥

ಮರುಳುಮಾಡುವುದು, ಜ್ಞಾನ-ಪ್ರಕಾಶಗೊಳಿಸುವುದು, ಕ್ರಿಯಾ-ಪ್ರವರ್ತನಗೊಳಿಸುವುದು, ಆತ್ಮಕಃ-ಇವುಗಳಸ್ವರೂಪವಾದ, ತಮಃಪ್ರಧಾನಃ-ತಮಸ್ಸೇ ಅಧಿಕವಾಗಿರುವ ಅಹಂಕಾರ ತತ್ವವು, ಅಭವತ್-ಉಂಟಾಯಿತು. ॥ ೨೩ ॥ ಹೇ ಪ್ರಭೋ - ಎಲೈ ತಿಳಿಯಲರ್ಹನಾದ ನಾರದನೆ ? ಸ ಅಹಂಕಾರಃ-ಆ ಅಹಂಕಾರವು, ವಿಕುರ್ವನ್-ರೂಪಾಂತರವನ್ನು ಪಡೆದು,ತ್ರಿಧಾ-ಮೂರುವಿಧವು, ಸಮಭೂತ್-ಆಯಿತು. ಯದ್ಭಿದಾ-ಯಾವುದರಭೇದವು,ದ್ರವ್ಯಶಕ್ತಿಃ, ದ್ರವ್ಯ-ಪಾಂಚಭೂತಗಳೆಂಬದ್ರವ್ಯಗಳನ್ನುಂಟುಮಾಡುವುದರಲ್ಲಿ, ಶಕ್ತಿಃ-ಸಾಮರ್ಥ್ಯವುಳ್ಳ, ತಾಮಸಃ-ತಾಮಸವೆಂತಲೂ, ಕ್ರಿಯಾಶಕ್ತಿಃ - ಕಾರ್ಯವನ್ನು ಮಾಡಿಸುವುದರಲ್ಲಿಶಕ್ತಿಯುಳ್ಳ, ತೈಜಸಶ್ಚ-ತೈಜಸವೆಂತಲೂ, ಜ್ಞಾನಶಕ್ತಿಃ-ಶಬ್ದಾದಿವಿಷಯಗಳಾದ ಜ್ಞಾನೇಂದ್ರಿಯಗಳನ್ನುಂಟುಮಾಡುವುದರಲ್ಲಿ ಶಕ್ತಿಯುಳ್ಳ, ವೈಕಾರಿಕಃ-ಸಾತ್ವಿಕವೆಂತಲೂ, ಪ್ರೋಕ್ತಃ-ಹೇಳಲ್ಪಟ್ಟಿರುವುದೋ॥೨೪॥ ಭೂತಾದೇಃ-ಭೂತಗಳಿಗೆ ಆದಿಯಾದ ಅಥವಾ ಭೂತಾದಿಯೆಂಬ ಹೆಸರುಳ್ಳ,ವಿಕುರ್ವಾಣಾತ್-ವಿಕಾರವನ್ನುಪಡೆದ, ತಾಮಸಾದಪಿ-ತಾಮಸಾಹಂಕಾರದಿಂದ, ನಭಃ-ಆಕಾಶವು, ಅಭೂತ್-ಉಂಟಾಯಿತು, ತಸ್ಯ-ಆ ಆಕಾಶಕ್ಕೆ,ಮಾತ್ರಾ-ಸೂಕ್ಷ್ಮರೂಪವೂ,ಗುಣಃ-ಭೇದಕವೂ, ದ್ರಷ್ಟೃದೃಶ್ಯಯೋಃ-ದ್ರಷ್ಟೃದೃಶ್ಯಗಳಿಗೆ, ಲಿಂಗಾಚಿಹ್ನವೂ ಆದ, ಶಬ್ದಃ-ಶಬ್ದವು, ಉಂಟಾಯಿತು ॥ ೨೫ ॥

ಪಡೆಯಲು ಅದರಿಂದ, ಮೋಹನ ಪ್ರಕಾಶನ ಪ್ರವರ್ತನ ಸ್ವಭಾವವುಳ್ಳ ತಮಃಪ್ರಧಾನವಾದ ಅಹಂಕಾರ ತತ್ವವು ಜನಿಸಿತು ॥ ೨೩ ॥ ಅಯ್ಯಾ ನಾರದನೆ ! ಆ ಅಹಂಕಾರವು ಬದಲಾವಣೆಯನ್ನು ಪಡೆದು ಪೃಥಿವ್ಯಾದಿ ಭೂತಗಳನ್ನುಂಟುಮಾಡುವ ಶಕ್ತಿಯುಳ್ಳ ತಾಮಸಾಹಂಕಾರವೆಂತಲೂ, ಕಾರ್ಯಗಳಲ್ಲಿ ಪ್ರವರ್ತನವನ್ನುಂಟುಮಾಡುವ ಶಕ್ತಿಯುಳ್ಳ ರಾಜಸಾಹಂಕಾರವೆಂತಲೂ, ಶಬ್ದಾದಿ ವಿಷಯಗಳನ್ನು ಗ್ರಹಿಸುವ ಜ್ಞಾನೇಂದ್ರಿಯಗಳನ್ನುಂಟುಮಾಡುವ ಶಕ್ತಿಯುಳ್ಳ ಸಾತ್ವಿಕಾಹಂಕಾರವೆಂತಲೂ, ಮೂರುವಿಧವಾಯಿತು ॥ ೨೪ ॥ ಅವುಗಳಲ್ಲಿ ತಾಮಸಾಹಂಕಾರದಿಂದ ದ್ರಷ್ಟೃದೃಶ್ಯಗಳನ್ನು ಬೋಧಿಸುವುದಾಗಿಯೂ, ಸೂಕ್ಷ್ಮರೂಪವಾಗಿಯೂ, ಅಸಾಧಾರಣಗುಣವಾಗಿಯೂ ಇರುವ ಶಬ್ದವು ಜನಿಸಿತು, ಆ ಶಬ್ದದಿಂದ ಆಕಾಶವು ಜನಿಸಿತು ॥೨೫॥

---

* (1) ಒಬ್ಬನು ಮರೆಯಾಗಿ ನಿಂತು 'ಆನೆಯು ಬಂತು' ಎಂದು ಹೇಳುವಾಗ, ಆನೆಯೆಂಬಶಬ್ದವು ಆನೆಯೆಂಬ ಪ್ರಾಣಿಯನ್ನೂ, ಅದನ್ನು ಕಂಡ ಪುರುಷನನ್ನೂ ಸಹ,ಬೋಧಿಸುವದು. (2) ವೀ. "ಶಾಸ್ತ್ರಯೋನಿತ್ವಾತ್', ಎಂಬ ಸೂತ್ರಾನುಸಾರವಾಗಿ ಶಾಸ್ತ್ರರೂಪವಾದ, ಶಬ್ದವೇ ಆತ್ಮಾನಾತ್ಮಗಳ ವಿಷಯದಲ್ಲಿ ಪ್ರಮಾಣವು.

ನಭಸೋಽಥ ವಿಕುರ್ವಾಣಾ ದಭೂತ್ಸ್ಪರ್ಶಗುಣೋಽನಿಲಃ । ಪರಾನ್ವ
ಯಾಚ್ಛಬ್ದವಾಂಶ್ಚ ಪ್ರಾಣ ಓಜಃ ಸಹೋ ಬಲಂ ॥ ೨೬ ॥ ವಾಯೋ
ರಪಿ ವಿಕುರ್ವಾಣಾತ್ಕಾಲಕರ್ಮಸ್ವಭಾವತಃ । ಉದಪದ್ಯತ ತೇಜೋ ವೈ
ರೂಪವತ್ಸ್ಪರ್ಶ ಶಬ್ದವತ್ ॥ ೨೭ ॥ ತೇಜಸಸ್ತು ವಿಕುರ್ವಾಣಾ ದಾಸೀ
ದಂಭೋ ರಸಾತ್ಮಕಂ । ರೂಪವತ್ಸ್ಪರ್ಶವಚ್ಚಾಂಭೋ ಘೋಷವಚ್ಚ
ಪರಾನ್ವಯಾತ್ ॥ ೨೮ ॥ ವಿಶೇಷಸ್ತು ವಿಕುರ್ವಾಣಾ ದಂಭಸೋ

ಅಥ-ಆಬಳಿಕ, ವಿಕುರ್ವಾಣಾತ್-ವಿಕಾರವನ್ನು ಪಡೆದ, ನಭಸಃ - ಆಕಾಶದಿಂದ, ಸ್ಪರ್ಶಗುಣಃ-ಸ್ಪರ್ಶವೇ ಗುಣವಾಗಿಉಳ್ಳ, ಅನಿಲಃ - ವಾಯುವು, ಅಭೂತ್ - ಉಂಟಾಯಿತು, ಪರಾನ್ವಯಾತ್, ಪರ-ತನಗೆ ಕಾರಣವಾದ ಆಕಾಶದಲ್ಲಿ, ಅನ್ವಯಾತ್-ಸಂಬಂಧಿಸಿರುವುದರಿಂದ, ಶಬ್ದವಾಂಶ್ಚ - ಶಬ್ದಗುಣವುಳ್ಳದ್ದೂ ಆಯಿತು. ಅದು, ಪ್ರಾಣಃ-ಪ್ರಾಣವಾಯುರೂಪವೂ, ಓಜಃ - ಮನಶ್ಶಕ್ತಿರೂಪವೂ, ಸಹಃ-ವೇಗರೂಪವೂ, ಬಲಂ-ಶರೀರ ಬಲರೂಪವೂ ಆಯಿತು ॥ ೨೬ ॥ ಕಾಲ, ಕರ್ಮ, ಸ್ವಭಾವತಃ - ಕಾಲ, ಕರ್ಮ, ಸ್ವಭಾವಗಳಿಂದ, ವಿಕುರ್ವಾಣಾತ್- ವಿಕಾರವನ್ನು ಪಡೆದ, ವಾಯೋರಪಿ-ವಾಯುವಿನಿಂದಲೂ, ರೂಪವತ್-ರೂಪವುಳ್ಳ, ಸ್ಪರ್ಶಶಬ್ದವತ್-ಸ್ಪರ್ಶವು ಶಬ್ದವೂ ಉಳ್ಳ, ತೇಜಃ-ಅಗ್ನಿಯು, ಉದಪದ್ಯತ-ಉಂಟಾಯಿತು. ॥ ೨೭ ॥ ವಿಕುರ್ವಾಣಾತ್-ವಿಕಾರವನ್ನು ಪಡೆದ, ತೇಜಸಸ್ತು-ಅಗ್ನಿಯಿಂದ, ರಸಾತ್ಮಕಂ-ರಸರೂಪವಾದ, ಅಂಭಃ-ಜಲವು, ಆಸೀತ್-ಉಂಟಾಯಿತು, ಅಂಭಃ - ಆಜಲವು, ಪರಾನ್ವಯಾತ್-ತನಗೆ ಕಾರಣಗಳಾದ ಅಗ್ನಿ, ವಾಯು, ಆಕಾಶಗಳಲ್ಲಿ ಸಂಬಂಧಿಸುವುದರಿಂದ, ರೂಪವತ್-ರೂಪವುಳ್ಳದ್ದೂ, ಸ್ಪರ್ಶವತ್-ಸ್ಪರ್ಶವುಳ್ಳದ್ದೂ, ಘೋಷವಚ್ಚ-ಶಬ್ದವುಳ್ಳದೂ ಸಹ ಆಯಿತು. ॥ ೨೮ ॥

ವಿಕುರ್ವಾಣಾತ್-ವಿಕಾರವನ್ನು ಪಡೆದ, ಅಂಭಸಃ - ಜಲದಿಂದ, ಗಂಧವಾನ್ - ಗಂಧಗುಣವುಳ್ಳ, ವಿಶೇಷಃ-ಪೃಥಿವಿಯು, ಅಭೂತ್-ಉಂಟಾಯಿತು, ಅದು ಪರಾನ್ವಯಾತ್ - ತನಗೆಕಾರಣಗಳಾದ ಜಲ, ವಾಯು, ಆಕಾಶ, ಅಗ್ನಿಗಳ ಸಂಬಂಧದಿಂದ, ರಸ...ತಃ, ರಸ, ಸ್ಪರ್ಶ, ಶಬ್ದ, ರೂಪ, ಗಳೆಂಬ ಗುಣಗ

ಅನಂತರದಲ್ಲಿ ವಿಕಾರವನ್ನು ಪಡೆದ ಆಆಕಾಶತತ್ವದಿಂದ ಸ್ಪರ್ಶಗುಣವುಳ್ಳ ವಾಯುತತ್ವವುಂಟಾಯಿತು.ಅದು ಆಕಾಶದಿಂದ ಜನಿಸಿದಕಾರಣ ಆಕಾಶಗುಣವಾದ ಶಬ್ದವೂ ಅದರಲ್ಲಿ ನೆಲೆಗೊಂಡಿತು.ಬಳಿಕ ಅದು ಪ್ರಾಣರೂಪವಾಗಿಯೂ, ವೇಗರೂಪವಾಗಿಯೂ, ಮನಶಕ್ತಿ ದೇಹಶಕ್ತಿಗಳರೂಪವಾಗಿಯೂ ಭೂತಗಳಲ್ಲಿ ನೆಲಸಿತು ॥೨೬॥ ಆಮೇಲೆ ಕಾಲ, ಕರ್ಮ, ಸ್ವಭಾವಗಳಿಂದ ರೂಪಾಂತರವನ್ನೈದಿದ ಆ ವಾಯುತತ್ವದಿಂದ, ತನ್ನಗುಣವಾದ ರೂಪದಿಂದಲೂ, ಕಾರಣಗುಣಗಳಾದ ಶಬ್ದಸ್ಪರ್ಶಗಳಿಂದಲೂ ಕೂಡಿದ ತೇಜಸ್ತತ್ವವು ಜನಿಸಿತು ॥ ೨೭ ॥ ಆ ತೇಜಸ್ತತ್ವವು ಬದಲಾಯಿಸಿದುದರಿಂದ, ರಸವೆಂಬ ಗುಣವುಳ್ಳ ಜಲತತ್ವವು ಜನಿಸಿತು. ಅದರಲ್ಲಿ ತನ್ನಗುಣವಲ್ಲದೆ, ಕಾರಣಗುಣಗಳಾದ ಶಬ್ದ, ಸ್ಪರ್ಶ, ರೂಪಗಳೂಸೇರಿದುವು ॥೨೮॥ ವಿಕಾರವನ್ನು ಪಡೆದ ಆ ಜಲತತ್ವದಿಂದ ಗಂಧಗುಣವುಳ್ಳ ಪೃಥಿವೀತತ್ವವುದಿಸಿತು. ಆ ಪೃಥಿವಿಯಲ್ಲಿ ಗಂಧಗುಣವೇ ಅಲ್ಲದೆ ತನ್ನ ಕಾರಣಗುಣಗಳಾದ ಶಬ್ದ, ಸ್ಪರ್ಶ, ರೂಪ, ರಸಗಳೂ ನೆಲೆಗೊಂಡವು. ಇದೇ ತಾನು

ಗಂಧವಾ ನಭೂತ್। ಪರಾನ್ವಯಾ ದ್ರಸಸ್ಪರ್ಶಶಬ್ದ ರೂಪ ಗುಣಾನ್ವಿತಃ॥ *ವೈಕಾರಿಕಾ ನ್ಮನೋ ಜಜ್ಞೇ ದೇವಾ ವೈಕಾರಿಕಾ ದಶ । ದಿಗ್ವಾತಾಽರ್ಕ ಪ್ರಚೇತೋಽಶ್ವಿ ವಹ್ನೀಂದ್ರೋಪೇಂದ್ರ ಮಿತ್ರ ಕಾಃ ॥೩೦॥ ತೈಜಸಾತ್ತು ವಿಕುರ್ವಾಣಾ ದಿಂದ್ರಿಯಾಣಿ ದಶಾಽಭವನ್ । ಜ್ಞಾನಶಕ್ತಿಃ ಕ್ರಿಯಾಶಕ್ತಿರ್ಬುದ್ಧಿಃ ಪ್ರಾಣಶ್ಚ ತೈಜಸೌ ॥ ೩೧ ॥ ಶ್ರೋತ್ರ ತ್ವ ಗ್ಘ್ರಾಣ ದೃ ಗ್ಜಿಹ್ವಾ ವಾಗ್ದೋರ್ಮೇ ಢ್ರಾಂಘ್ರಿ ಪಾಯವಃ । ಯದ್ಯೈತೇಽಸಂಗತಾ

ಳಿಂದ ಕೂಡಿದುದೂ ಆಯಿತು ॥ ೨೯ ॥ ವೈಕಾರಿಕಾತ್-ಸಾತ್ವಿಕಾಹಂಕಾರದಿಂದ, ಮನಃ-ಮನಸ್ಸು, ಮನೋಭಿಮಾನಿಯಾದ ಚಂದ್ರನೂ, ಜಜ್ಞೇ-ಹುಟ್ಟಿದರು, ಮತ್ತು, ದಿಗ್ವಾ...ಕಾಃ, ದಿಕ್-ದಿಕ್ಕುಗಳು, ವಾತ-ವಾಯುವೂ, ಅರ್ಕ - ಸೂರ್ಯನು, ಪ್ರಚೇತಃ - ವರುಣನು, ಅಶ್ವಿ-ಅಶ್ವಿನೀದೇವತೆಗಳು, ವಹ್ನಿ-ಅಗ್ನಿಯು, ಇಂದ್ರ-ಇಂದ್ರನು, ಉಪೇಂದ್ರ-ಉಪೇಂದ್ರನು, ಮಿತ್ರ-ಮಿತ್ರನು, ಕ-ಬ್ರಹ್ಮನು, ಈ, ವೈಕಾರಿಕಾಃ-ಸಾತ್ವಿಕರಾದ, ದಶ-ಹತ್ತುಮಂದಿ, ದೇವಾಃ - ದೇವತೆಗಳೂ, ಹುಟ್ಟಿದರು ॥ ೩೦ ॥ ಯತಃ-ಯಾವಕಾರಣದಿಂದ, ಜ್ಞಾನಶಕ್ತಿಃ-ತಿಳಿಯುವ ಸಾಮರ್ಥ್ಯವುಳ್ಳ, ಬುದ್ಧಿಃ - ಬುದ್ಧಿಯು, ಕ್ರಿಯಾಶಕ್ತಿಃ-ಕಾರ್ಯಸಾಮರ್ಥ್ಯವುಳ್ಳ, ಪ್ರಾಣಃ-ಪ್ರಾಣವೂಸಹ, ತೈಜಸೌ - ರಾಜಸಾಹಂಕಾರದಿಂದ ಹುಟ್ಟಿದುವೋ, ಅತಃ-ಈಕಾರಣದಿಂದ, ವಿಕುರ್ವಾಣಾತ್-ವಿಕಾರವನ್ನು ಪಡೆದ, ತೈಜಸಾತ್-ರಾಜಸಾಹಂಕಾರದಿಂದ, ಶ್ರೋತ್ರ-ಕಿವಿ, ತ್ವಕ್-ಚರ್ಮ, ಘ್ರಾಣ-ಮೂಗು, ದೃಕ್-ದೃಷ್ಟಿ, ಜಿಹ್ವಾ-ನಾಲಗೆ, ವಾಕ್-ಮಾತು, ದೋಃ-ಕೈ, ಮೇಢ್ರ-ಶಿಶ್ನ, ಅಂಘ್ರಿ-ಪಾದ, ಪಾಯವಃ-ಗುದ, ಇವುಗಳೆಂಬ, ದಶ-ಹತ್ತು, ಇಂದ್ರಿಯಾಣಿ-ಜ್ಞಾನಕರ್ಮೇಂದ್ರಿಯಗಳು, ಅಭವನ್-ಹುಟ್ಟಿದವು, ಭೂತೇಂ...ಣಾಃ, ಭೂತ-ಪೃಥಿವ್ಯಾದಿ

ಸಾಹಂಕಾರ ಸೃಷ್ಟಿಯು ॥ ೨೯ ॥ ಬಳಿಕ ಸಾತ್ವಿಕಾಹಂಕಾರದಿಂದ ಮನಸ್ಸೂ, ಆ ಮನಸ್ಸಿಗೆ ಅಭಿಮಾನಿಯಾದ ಚಂದ್ರನೂ ಜನಿಸಿದರು. ಅಲ್ಲದೆ ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣಗಳೆಂಬ ಐದು ಜ್ಞಾನೇಂದ್ರಿಯಗಳಿಗೆ, ಅಭಿಮಾನಿಗಳಾದ, ದಿಕ್ಕು, ವಾಯು, ಸೂರ್ಯ, ವರುಣ, ಅಶ್ವಿನೀ ದೇವತೆಗಳೆಂಬ ಅಧಿದೇವತೆಗಳೂ, ಮತ್ತು,ವಾಕ್ಕು, ಪಾಣಿ, ಪಾದ, ಗುದ, ಉಪಸ್ಥಗಳೆಂಬ ಐದು ಕರ್ಮೇಂದ್ರಿಯಗಳಿಗೆ, ಅಭಿಮಾನಿಗಳಾದ, ಅಗ್ನಿ, ಇಂದ್ರ, ಉಪೇಂದ್ರ, ಮಿತ್ರ, ಬ್ರಹ್ಮ ನೆಂಬ ಅಧಿದೇವತೆಗಳೂ ಉಂಟಾದರು ॥ ೩೦ ॥ಅನಂತರದಲ್ಲಿ ರಾಜಸಾಹಂಕಾರದಿಂದ ಜ್ಞಾನಶಕ್ತಿಯುಳ್ಳ ಬುದ್ಧಿಯೂ, ಕ್ರಿಯಾಶಕ್ತಿಯುಳ್ಳಪ್ರಾಣವೂ, ಶ್ರೋತ್ರ, ತ್ವಕ್, ಘ್ರಾಣ, ದೃಕ್, ಜಿಹ್ವೆಗಳೆಂಬ ಜ್ಞಾನೇಂದ್ರಿಯಗಳು, ವಾಕ್ಕು, ಪಾಣಿ, ಉಪಸ್ಥ, ಪಾದ, ಗುದಗಳೆಂಬ ಕರ್ಮೇಂದ್ರಿಯಗಳೂ,ಈಹತ್ತಿಂದ್ರಿಯಗಳೂ, ಜನಿಸಿದವು ॥ ೩೧ ॥ ಬಳಿಕ ಭೂತ

* ಪರಮಾತ್ಮನ ಸಂಕಲ್ಪದಿಂದ ಪ್ರಕೃತಿಯಲ್ಲಿ ಗುಣವೈಷಮ್ಯವುಂಟಾಯಿತು. ಆ ಪ್ರಕೃತಿಯಿಂದ ಮಹತ್ತು ಮಹತ್ತಿನಿಂದ ಅಹಂಕಾರವುಂಟಾದುದು. ಅಹಂಕಾರವು ಮೂರುವಿಧ. ತಾಮಸಾಹಂಕಾರದಿಂದ ಪಂಚತನ್ಮಾತ್ರೆಗಳು ಪಂಚಭೂತಗಳೂ, ಸಾತ್ವಿಕಾಹಂಕಾರದಿಂದ ಮನಸ್ಸು, ಇಂದ್ರಿಯಾಧಿದೇವತೆಗಳು, ರಾಜಸಾಹಂಕಾರದಿಂದ ಜ್ಞಾನಕರ್ಮೇಂದ್ರಿಯಗಳೂ ಜನಿಸಿದುವೆಂದು ಭಾವವು.

ಭಾವಾ ಭೂತೇಂದ್ರಿಯ ಮನೋಗುಣಾಃ ॥ ೩೨ ॥ ಯದಾಯತನ ನಿ
ರ್ಮಾಣೇ ನಶೇಕು ರ್ಬ್ರಹ್ಮವಿತ್ತಮ! । ತದಾ ಸಂಹತ್ಯ ಚಾನ್ಯೋನ್ಯಂ ಭಗ
ವಚ್ಛಕ್ತಿ ಚೋದಿತಾಃ ॥೩೩॥ ಸದಸತ್ತ್ವ ಮುಪಾದಾಯ ಚೋಭಯಂ
ಸಸೃಜು ರ್ಹ್ಯದಃ । ವರ್ಷಾZಯುತ ಸಹಸ್ರಾಂತೇ ತದಂಡ ಮುದಕೇ
ಶಯಂ ॥ ೩೪ ॥ ಕಾಲಕರ್ಮ ಸ್ವಭಾವಸ್ಥೋ ಜೀವೋ ಜೀವ ಮಜೀ
ವಯತ್ । ಸಏವ ಪುರುಷ ಸ್ತಸ್ಮಾ ದಂಡಂ ನಿರ್ಭಿದ್ಯ ನಿರ್ಗತಃ । ಸಹ
ಸ್ರೋರ್ವಂಘ್ರಿ ಬಾಹ್ವಕ್ಷ ಸಹಸ್ರಾನನ ಶೀರ್ಷವಾನ್ ॥ ೩೫ ॥ ಯಸ್ಯೇ

ಗಳ, ಇಂದ್ರಿಯ-ಚಕ್ಷು-ರಾದಿಗಳ, ಮನಃ-ಮನಸ್ಸಿನ, ಗುಣಾಃ-ಗುಣರೂಪಗಳಿಂದ, ಏತೇಭಾವಾಃ - ಈ ಪದಾರ್ಥಗಳು, ಯದಾ-ಯಾವಾಗ, ಅಸಂಗತಾಃ-ಜತೆಗೂಡಲಿಲ್ಲವೋ ॥ ೩೧.೩೨ ॥

ಹೇಬ್ರಹ್ಮವಿತ್ತಮ-ಎಲೈ ಆತ್ಮವೇತ್ತರಲ್ಲಿ ಶ್ರೇಷ್ಠನಾದ ನಾರದನೇ ! ಯದಾ - ಯಾವಾಗ, ಆಯತನ-ಬ್ರಹ್ಮಾಂಡರೂಪವಾದ ಶರೀರದ,ನಿರ್ಮಾಣೇ-ಸೃಷ್ಟಿಯಲ್ಲಿ, ನಶೇಕುಃ-ಸಮರ್ಥಗಳಾಗಲಿಲ್ಲವೋ, ತದಾ-ಆಗ, ಭಗ...ತಾಃ, ಭಗವತ್-ಭಗವಂತನ, ಶಕ್ತಿ-ಸಂಕಲ್ಪದಿಂದ, ಚೋದಿತಾಃ-ಪ್ರೇರಿಸಲ್ಪಟ್ಟವುಗಳಾಗಿ, ಅನ್ಯೋನ್ಯಂ-ಪರಸ್ಪರವಾಗಿ, ಸಂಹತ್ಯ - ಸೇರಿ, ಸದಸತ್ತ್ವಂ-ಸದಸದ್ರೂಪವನ್ನು, ಉಪಾದಾಯ-ಅಂಗೀಕರಿಸಿ, ಉಭಯಂ - ವ್ಯಷ್ಟಿ ಸಮಷ್ಟಿರೂಪವಾದ, ಅದಃ-ಈ ಬ್ರಹ್ಮಾಂಡವೆಂಬ ಶರೀರವನ್ನು, ಸಸೃಜುಃ-ನಿರ್ಮಿಸಿದುವು, ವರ್ಷಾ...ತೇ, ವರ್ಷ-ಸಂವತ್ಸರಗಳ, ಅಯುತ-ಅನೇಕಗಳಾದ, ಸಹಸ್ರ-ಸಾವಿರಗಳ, ಅಂತೇ-ಕಡೆಯಲ್ಲಿ, ಕಾಲ...ಸ್ಥಃ, ಕಾಲ, ಕರ್ಮ, ಸ್ವಭಾವಗಳನ್ನು ಬಳಕೊಂಡ, ಜೀವಃ-ಪರಮಾತ್ಮನು, ಉದಕೇಶಯಂ-ನೀರಿನಲ್ಲಿದ್ದ, ಅಜೀವಂ-ಅಚೇತನವಾದ, ತತ್-ಆ, ಅಂಡಂ-ಬ್ರಹ್ಮಾಂಡವನ್ನು, ಅಜೀವಯತ್-ಚೇತನಗೊಳಿಸಿದನು, ಸಹ...ಕ್ಷಃ, ಸಹಸ್ರ - ಸಾವಿರಾರು, ಊರು-ತೊಡೆಗಳು, ಅಂಘ್ರಿ-ಪಾದಗಳು, ಬಾಹು-ತೋಳುಗಳು, ಅಕ್ಷ-ಕಣ್ಣುಗಳೂ ಉಳ್ಳ, ಸಹ...ವಾನ್, ಸಹಸ್ರ-ಸಾವಿರಾರು, ಆನನ-ಮುಖಗಳು, ಶೀರ್ಷವಾನ್-ತಲೆಗಳೂ ಉಳ್ಳ, ಸಏವಪುರುಷಃ-ಆ ಪರಮಾತ್ಮನೇ, ಅಂಡಂ-ಅಂಡವನ್ನು, ನಿರ್ಭಿದ್ಯ - ಭೇದಿಸಿಕೊಂಡು, ತಸ್ಮಾತ್ - ಆಅಂಡದಿಂದ, ನಿರ್ಗತಃ - ಹೊರಗೆ ಬಂದನು ॥ ೩೩--೩೫ ॥ ಮನೀಷಿಣಃ-ತತ್ವಜ್ಞಾನಿಗಳ, ಯಸ್ಯ-ಯಾವ ಪರಮಾತ್ಮನ, ಕಟ್ಯಾದಿಭಿಃ-

ಗುಣಗಳಾದ ಶಬ್ದಸ್ಪರ್ಶ, ರೂಪ, ರಸ, ಗಂಧಗಳೂ, ಇಂದ್ರಿಯಗುಣಗಳಾದ ದರ್ಶನ, ಶ್ರವಣ ಮೊದಲಾದವುಗಳೂ, ಮನೋಗುಣಗಳಾದ ಕಾಮ ಸಂಕಲ್ಪಾದಿಗಳೂ, ಇವುಗಳು ಬಂದರೊಂದಿಗೊಂದು ಸೇರದೇ ಹೋದುದರಿಂದ ಬ್ರಹ್ಮಾಂಡವನ್ನು ಸೃಷ್ಟಿಸಲಾರದೇ ಹೋದುವು. ಆಯ್ಯಾಬ್ರಹ್ಮಜ್ಞನಾದ ನಾರದನೆ ? ಬಳಿಕ ಭಗವಂತನಸಂಕಲ್ಪರೂಪವಾದ ಶಕ್ತಿಯಿಂದ ಪ್ರೇರಿತಗಳಾಗಿ ಆ ಗುಣಗಳೆಲ್ಲವೂ ಜತೆಗೂಡಿ ಕಾರ್ಯಕಾರಣ ಭಾವವನ್ನು ಹೊಂದಿ ವ್ಯಷ್ಟಿಸಮಷ್ಟಿ ರೂಪವಾದ ಬ್ರಹ್ಮಾಂಡವೆಂಬ ಶರೀರವನ್ನು ನಿರ್ಮಿಸಿದುವು ಆ ಶರೀರವು ಅಚೇತನವೆನಿಸಿ ಮಹಾ ಜಲದಲ್ಲಿ ತೇಲುತ್ತಿತ್ತು. ಇಂತು ಅನೇಕ ಲಕ್ಷವರ್ಷಗಳು ಕಳೆದಮೇಲೆ ಭಗವಂತನು ಅಚೇತನವಾದ ಆಬ್ರಹ್ಮಾಂಡ ಶರೀರವನ್ನು ಚೇತನ ಗೊಳಿಸಿದನು. ಬಳಿಕ ಆ ಪರಮಾತ್ಮನೇ ವ್ಯಷ್ಟಿಸಮಷ್ಟಿರೂಪವಾದ ಬ್ರಹ್ಮಾಂಡವನ್ನು ಭೇದಿಸಿಕೊಂಡು, ಸಾವಿರಾರು ತೊಡೆಗಳೂ, ಕಾಲುಗಳೂ, ತೋಳುಗಳೂ, ಕಣ್ಣುಗಳೂ, ಮುಖಗಳೂ, ತಲೆಗಳೂ, ಇವುಗಳಿಂದೊಡಗೂಡಿ ಆವಿರ್ಭ

ಹಾZವಯುವೈರ್ಲೋಕಾ೯ ಕಲ್ಪಯಂತಿ ಮನೀಷಿಣಃ । ಕಟ್ಯಾದಿಭಿ ರಧ ಸ್ಸಪ್ತ ಸಪ್ತೋರ್ಧ್ವಂ ಜಘನಾದಿಭಿಃ ॥ ೩೬ ॥ ಪುರುಷಸ್ಯ ಮುಖಂ ಬ್ರಹ್ಮ ಕ್ಷತ್ರ ಮೇತಸ್ಯ ಬಾಹವಃ । ಊರ್ವೋ ರ್ವೈಶೋ ಭಗವತಃ ಪದ್ಭ್ಯಾಂ ಶೂದ್ರೋ ವ್ಯಜಾಯತ ॥ ೩೭ ॥ ಭೂರ್ಲೋಕಃ ಕಲ್ಪಿತಃ ಪದ್ಭ್ಯಾಂ ಭುವರ್ಲೋಕಶ್ಚ ನಾಭಿತಃ । ಹೃದಾ ಸ್ವರ್ಲೋಕ ಉರಸಾ ಮಹರ್ಲೋಕೋ ಮಹಾತ್ಮನಃ ॥ ೩೮ ॥ ಗ್ರೀವಾಯಾಂ ಜನಲೋಕಸ್ತು ತಪೋಲೋಕ ಸ್ಸ್ತನದ್ವಯಾತ್ । ಮೂರ್ಧತ ಸ್ಸತ್ಯ ಲೋಕಸ್ತು ಬ್ರಹ್ಮಲೋಕ ಸ್ಸನಾತನಃ ॥ ೩೯ ॥ ತತ್ಕಟ್ಯಾ ಮತಲಂ ಕ್ಲ್ಪಪ್ತ

ಕಟಿಮೊದಲಾದ, ಅವಯವೈಃ-ಅಂಗಗಳಿಂದ, ಅಧಃ-ಕೆಳಗೆ, ಸಪ್ತ-ಏಳು, ಊರ್ಧ್ವಂ - ಮೇಲೆ, ಸಪ್ತ-ಏಳು, ಲೋಕಾ೯-ಲೋಕಗಳನ್ನು, ಕಲ್ಪಯಂತಿ-ಕಲ್ಪಿಸುವರೋ ॥ ೩೬ ॥

ಪುರುಷಸ್ಯ-ಆಪರಮಾತ್ಮನಿಗೆ, ಬ್ರಹ್ಮ-ಬ್ರಾಹ್ಮಣನು ಮುಖಂ-ಮುಖವು, ಏತಸ್ಯ - ಈತನಿಗೆ, ಕ್ಷತ್ರಂ-ಕ್ಷತ್ರಿಯರು, ಬಾಹವಃ-ತೋಳುಗಳು ಭಗವತಃ-ಭಗವಂತನ, ಊರ್ವೋಃ-ತೊಡೆಗಳಿಂದ, ವಿಶಃ-ವೈಶ್ಯನೂ, ಪದ್ಭ್ಯಾಂ-ಪಾದಗಳಿಂದ, ಶೂದ್ರಃ - ಶೂದ್ರನೂ, ವ್ಯಜಾಯತ - ಉಂಟಾದರು ॥ ೩೭ ॥ ಮಹಾತ್ಮನಃ-ವಿರಾಟ್ಪುರುಷನ, ಪದ್ಭ್ಯಾಂ-ಪಾದಗಳಿಂದ, ಭೂಃ-ಭೂಮಿಯೆಂಬ, ಲೋಕಃ-ಲೋಕವೂ, ನಾಭಿತಃ - ಹೊಕ್ಕಳಿಂದ, ಭುವರ್ಲೋಕಃ - ಭುವರ್ಲೋಕವೂ, ಹೃದಾ - ಹೊಕ್ಕುಳಮೇಲ್ಭಾಗದಿಂದ ಸ್ವರ್ಲೋಕಃ - ಸ್ವರ್ಗವೂ, ಉರಸಾ - ಎದೆಯಿಂದ, ಮಹರ್ಲೋಕಃ - ಮಹರ್ಲೋಕವೂ ॥ ೩೮ ॥ ಗ್ರೀವಾಯಾಂ-ಕಂಠದಿಂದ, ಜನಲೋಕಸ್ತು - ಜನಲೋಕವೂ, ಸ್ತನದ್ವಯಾತ್-ಎರಡು ಸ್ತನಗಳಿಂದ, ತಪೋಲೋಕಃ-ತಪೋಲೋಕವೂ, ಮೂರ್ಧತಃ - ತಲೆಯಿಂದ, ಸತ್ಯಲೋಕಃ - ಸತ್ಯಲೋಕವೂ, ಅದರ ಮೇಲೆ, ಸನಾತನಃ-ಶಾಶ್ವತವಾದ, ಬ್ರಹ್ಮಲೋಕಃ-ವೈಕುಂಠವು, ಕಲ್ಪಿತಃ-ನಿರ್ಮಿಸಲ್ಪಟ್ಟಿತು ॥ ೩೯ ॥

ವಿಸದನು ॥ ೩೨-೩೫ ॥ ತತ್ವ ವನ್ನರಿತ ಮಹಾತ್ಮರು ಆ ಭಗವಂತನ ಅವಯವ ಗಳಿಂದಲೇ ಕೆಳಗಡೆ ಏಳು ಲೋಕಗಳೂ, ಮೇಲ್ಗಡೆ ಏಳು ಲೋಕಗಳೂ, ಉಂಟಾದು ವೆಂದು ಹೇಳುವರು ॥ ೩೬ ॥ ಅಯ್ಯಾನಾರದನೆ ! ಬಳಿಕ ಆ ಭಗವಂತನ ಮುಖದಿಂದ ಬ್ರಾಹ್ಮಣವರ್ಣವೂ, ಬಾಹುಗಳಿಂದ ಕ್ಷತ್ರಿಯ ವರ್ಣವೂ, ತೊಡೆಗಳಿಂದ ವೈಶ್ಯ ವರ್ಣವೂ, ಪಾದಗಳಿಂದ ಶೂದ್ರವರ್ಣವೂ ಉತ್ಪನ್ನವಾಯಿತು ॥ ೩೭ ॥

ಜ್ಞಾನಿಗಳು ಉಪಾಸನಾರ್ಥವಾಗಿ ಆ ವೈರಾಜನನ್ನು ಸಪ್ತಲೋಕಸ್ವರೂಪನೆಂತಲೂ, ಚತುರ್ದಶಲೋಕ ಸ್ವರೂಪನೆಂತಲೂ, ತ್ರಿಲೋಕ ಸ್ವರೂಪನೆಂತಲೂ, ಮೂರುಬಗೆಯಾಗಿ ಬಣ್ಣಿಸುವರು, ಅವುಗಳಲ್ಲಿ ಆ ವಿರಾಟ್ಪುರುಷನಿಗೆ ಭೂಲೋಕವು ಪಾದಗಳೆಂತಲೂ, ಭುವರ್ಲೋಕವು ನಾಭಿಯೆಂತಲೂ, ಸ್ವರ್ಗಲೋಕವು ಹೃದಯವೆಂತಲೂ, ಮಹರ್ಲೋಕವು ಎದೆಯೆಂತಸೂ, ಜನೋಲೋಕವು ಕಂಠವೆಂತಲೂ, ತಪೋಲೋಕವು ಸ್ತನದ್ವಯವೆಂತಲೂ, ಸತ್ಯಲೋಕವು ಶಿರಸ್ಸೆಂತಲೂ, ಈ ಸೃಷ್ಟ್ಯಪ್ರಪಂಚಕ್ಕೊಳಗಾಗದೆ ಶಾಶ್ವತವೆನಿಸಿದ ವೈಕುಂಠಲೋಕವೇ ತಲೆಯಮೇಲಣ ಭಾಗವೆಂತಲೂ, ಹೇಳುವುದೇ ಸಪ್ತಲೋಕಸ್ವರೂಪವು ॥ ೩೮-೩೯ ॥ ಆ ಭಗವಂತನ ಕಟಿ

ಮೂರುಭ್ಯಾಂ ವಿತಲಂ ವಿಭೋಃ । ಜಾನುಭ್ಯಾಂ ಸುತಲಂ ಶುದ್ಧಂ ಜಂಘಾಭ್ಯಾಂತು ತಲಾತಲಂ ॥ ೪೦ ॥ ಮಹಾತಲಂತು ಗುಲ್ಫಾಭ್ಯಾಂ ಪ್ರಪದಾಭ್ಯಾಂ ರಸಾತಲಂ । ಪಾತಾಳಂ ಪಾದತಲ ಇತಿ ಲೋಕಮಯಃ ಪುಮಾನ್ ॥ ೪೧ ॥ ಭೂ ರ್ಲೋಕಃ ಕಲ್ಪಿತಃ ಪದ್ಭ್ಯಾಂ ಭುವರ್ಲೋಕಸ್ತು ನಾಭಿತಃ । ಸ್ವರ್ಲೋಕಃ ಕಲ್ಪಿತೋ ಮೂರ್ಧ್ನಾ ಇತಿವಾ ಲೋಕ ಕಲ್ಪನಾ ॥ ೪೨ ॥

—: ಇತಿ ಪಂಚಮೋಧ್ಯಾಯಃ :—

ತತ್ಕಟ್ಯಾಂ-ಆತನ ನಡುವಿನಲ್ಲಿ, ಅತಲಂ-ಅತಲಲೋಕವು, ಕ್ಲೃಪ್ತಂ-ಮಾಡಲ್ಪಟ್ಟಿತು. ವಿಭೋಃ-ಪ್ರಭುವಿನ, ಊರುಭ್ಯಾಂ-ತೊಡೆಗಳಿಂದ, ವಿತಲಂ-ವಿತಲಲೋಕವು, ಜಾನುಭ್ಯಾಂ-ಮೊಣಕಾಲುಗಳಿಂದ, ಶುದ್ಧಂ-ಹರಿಭಕ್ತರಿಗೆ ನಿವಾಸವಾದ, ಸುತಲಂ - ಸುತಲಲೋಕವು, ಜಂಘಾಭ್ಯಾಂ-ಜಂಘೆಗಳಿಂದ, ತಲಾತಲಂ-ತಲಾತಲವೆಂಬಲೋಕವು ॥ ೪೦ ॥ ಗುಲ್ಫಾಭ್ಯಾಂ - ಹರಡುಗಳಿಂದ, ಮಹಾತಲಂ - ಮಹಾತಲ ಲೋಕವು, ಪ್ರಪದಾಭ್ಯಾಂ-ಮೇಗಾಲುಗಳಿಂದ, ರಸಾತಲಂ - ರಸಾತಲವು, ಪಾದತಲೇ - ಅಂಗಾಲಿನಲ್ಲಿ, ಪಾತಾಳಂ-ಪಾತಾಳವು. ಕ್ಲೃಪ್ತಂ-ಮಾಡಲ್ಪಟ್ಟಿತು, ಪುಮಾನ್-ಆ ವಿರಾಟ್ಪುರುಷನು, ಇತಿ-ಈರೀತಿಯಾಗಿ, ಲೋಕಮಯಃ - ಜಗತ್ಸ್ವರೂಪನಾಗಿರುವನು. ॥ ೪೧ ॥ ಪದ್ಭ್ಯಾಂ-ಪಾದಗಳಿಂದ, ಭೂರ್ಲೋಕಃ-ಭೂಲೋಕವು, ಕಲ್ಪಿತಃ-ಮಾಡಲ್ಪಟ್ಟಿತು, ನಾಭಿತಃ-ನಾಭಿಯಿಂದ, ಭುವರ್ಲೋಕಃ - ಭುವರ್ಲೋಕವು, ಮೂರ್ಧ್ನಾ-ತಲೆಯಿಂದ, ಸ್ವರ್ಲೋಕಃ-ಸ್ವರ್ಗಲೋಕವು, ಕಲ್ಪಿತಃ - ಮಾಡಲ್ಪಟ್ಟಿತು, ಲೋಕಕಲ್ಪನಾ-ಜಗತ್ಸೃಷ್ಟಿಯು, ಇತಿವಾ-ಹೀಗೂಉಂಟು. ॥ ೪೨ ॥

ಪಂಚಮಾಧ್ಯಾಯಂ ಸಮಾಪ್ತಂ.

ಪ್ರದೇಶದಲ್ಲಿ ಅತಲಲೋಕ ವಿರುವುದೆಂತಲೂ, ತೊಡೆಗಳಿಂದ ವಿತಲಲೋಕ ವುಂಟಾಯಿತೆಂತಲೂ, ಮೊಣಕಾಲುಗಳಿಂದ ಭಗವದ್ಭಕ್ತರಿಗೆ ವಾಸಸ್ಥಾನವಾದ ಸುತಲಲೋಕವು ಜನಿಸಿತೆಂತಲೂ, ಜಂಘೆಗಳಿಂದ ತಲಾತಲವು ಹುಟ್ಟಿತೆಂತಲೂ, ಹರಡುಗಳಿಂದ ಮಹಾತಲವು ಉತ್ಪನ್ನ ವಾಯಿತೆಂತಲೂ, ಮೇಗಾಲು ಗಳಿಂದ ರಸಾತಲವು ಉದಯಿಸಿತೆಂತಲೂ, ಅಂಗಾಲುಗಳಿಂದ ಪಾತಾಳಲೋಕವು ಆ ವಿರ್ಭವಿಸಿ ತೆಂತಲೂ, ಕಟಿಭಾಗದಿಂದ ಕೆಳಗಿರುವ ಅವಯುವ ಸ್ವರೂಪಗಳಾದ ಏಳು ಅಧೋಲೋಕಗಳನ್ನು ವಿವರಿಸಿ, ಅವುಗಳ ಜತೆಗೆ ಹಿಂದೆ ಬಣ್ಣಿಸಿದ, ಜಘನ ಮೊದಲು ಮುಖದವರೆಗೂ ಇರುವ ಅವಯುವಸ್ವರೂಪಗಳಾದ ಏಳು ಊರ್ಧ್ವಲೋಕಗಳನ್ನು ಸೇರಿಸಿ ಈ ಹದಿನಾಲ್ಕುಲೋಕಗಳೂ ಭಗವಂತನಿಗೆ ಅವಯುವಗಳೆಂದು ಬಣ್ಣಿಸುವರು, ಇದೇ ಭಗವಂತನ ಚತುರ್ದಶ ಲೋಕ ಸ್ವರೂಪವು ॥ ೪೧-೪೧ ॥ ಭಗವಂತನ ಪಾದಗಳಿಂದ ಭೂಲೋಕವು, ನಾಭಿಯಿಂದ ಭುವರ್ಲೋಕವು, ಶಿರಸ್ಸಿನಿಂದ ಸ್ವರ್ಗಲೋಕವೂ, ನಿರ್ಮಿತವಾಯಿತು. ಅದುದರಿಂದ ಭಗವಂತನು ತ್ರಿಲೋಕಸ್ವರೂಪನೆಂದು ಹೇಳುವರು, ಇದೇ ಭಗವಂತನ ಲೋಕತ್ರಯ ಸ್ವರೂಪವು ॥ ೪೨ ॥ ಎಂದು ಬ್ರಹ್ಮದೇವನು ನಾರದಮುನಿಗೆ ಹೇಳುತ್ತಿದ್ದ

ನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

—: ಐದನೆಯ ಅಧ್ಯಾಯಂ ಮುಗಿದುದು. :—

ಓಂ ನಮಃಪರಮಾತ್ಮನೇ.

ಅಥ ಷಷ್ಠೋಽಧ್ಯಾಯಃ

ಬ್ರಹ್ಮಾ ॥ ವಾಚಾಂ ವಹ್ನೇ ರ್ಮುಖಂ ಕ್ಷೇತ್ರಂ ಛಂದಸಾಂ *ಸಪ್ತ
ಧಾತವಃ । ಹವ್ಯಕವ್ಯಾಽ ಮೃತಾನ್ನಾನಾಂ ಜಿಹ್ವಾ ಸರ್ವರಸಸ್ಯಚ ॥೧॥
ಸರ್ವಾಽಸೂನಾಂ ಚ ವಾಯೋಶ್ಚ ತನ್ನಾಸೇ ಪರಮಾಯನೇ। ಅಶ್ವಿನೋ

ಷಷ್ಠಾಧ್ಯಾಯಂ

ಕಂ॥ ವೈರಾಜ ವಿಭೂತಿಯ ವಿ । ಸ್ತಾರದೆ ಬಣ್ಣಿಸುತೆ ಮುನ್ನಪೇಳಿದುದೆಲ್ಲಂ ।
ಸಾರಮೆನುತೆ ತಿರಗೊಳಿಸುವ । ನಾರನೆಯದರಲ್ಲಿ ಪುರುಷಸೂಕ್ತಾನ್ವಯದಿಂ ॥

ಬ್ರಹ್ಮಾ-ಬ್ರಹ್ಮನು ಹೇಳುತ್ತಾನೆ, ವಾಚಾಂ-ನಮ್ಮ ವಾಕ್ಕುಗಳಿಗೂ, ವಹ್ನೇಃ-ವಾಗಭಿಮಾನಿಯಾದ, ಅಗ್ನಿಗೂ, ತಸ್ಯ-ಆ ವೈರಾಜನ, ಮುಖಂ-ಮುಖವು, ಕ್ಷೇತ್ರಂ-ಉತ್ಪತ್ತಿಸ್ಥಾನವು ಛಂದಸಾಂ-ಗಾಯತ್ರಿ, ಮೊದಲಾದ ಛಂದಸ್ಸುಗಳಿಗೆ, ಸಪ್ತಧಾತವಃ . ಆತನ ತ್ವಕ್ಕು ಮೊದಲಾದ ಏಳು ಧಾತುಗಳು, ಸ್ಥಾನವು, ಹವ್ಯ...ನಾಂ, ಹವ್ಯ-ದೇವತೆಗಳಿಗೆ ಕೊಡತಕ್ಕ, ಕವ್ಯ - ಪಿತೃದೇವತೆಗಳಿಗೆ ಕೊಡತಕ್ಕ, ಅಮೃತ-ಹವ್ಯಕವ್ಯಗಳಿಂದ ಮಿಕ್ಕ, ಅನ್ನಾನಾಂ-ಅನ್ನಗಳಿಗೂ, ಸರ್ವರಸಸ್ಯ - ಮಧುರ ಮೊದಲಾದ ಆರುರಸಗಳಿಗೂ, ಚ-ನಮ್ಮ ರಸನೇಂದ್ರಿಯಕ್ಕೂ, ಅದಕ್ಕಭಿಮಾನಿಯಾದ ವರುಣನಿಗೂಸಹ, ಜಿಹ್ವಾ-ಆತನ ನಾಲಗೆಯು, ಉತ್ಪತ್ತಿಸ್ಥಾನವು ॥ ೧ ॥ ಸರ್ವಾಸೂನಾಂ-ಎಲ್ಲರಪ್ರಾಣವಾಯುಗಳಿಗೂ, ವಾಯೋಶ್ಚ-ವಾಯುವಿಗೂ. ತನ್ನಾಸೇ - ಆತನ ಮೂಗಿನ ಹೊಳ್ಳೆಗಳು, ಪರಮಾಯನೇ-ಉತ್ತಮವಾದ ಕ್ಷೇತ್ರವು, ಅಶ್ವಿನೋಃ-ಅಶ್ವಿನೀದೇವತೆಗಳಿಗೂ, ಓಷಧೀನಾಂಚ-ಬಳ್ಳಿಗಳಿಗೂ, ಮೋದಪ್ರಮೋದಯೋಶ್ಚ-ಸಾಮಾನ್ಯ

—: ಆರನೆಯ ಅಧ್ಯಾಯ: —

ಪುರುಷಸೂಕ್ತಾರ್ಥವು.

ಅಯ್ಯಾ ನಾರದನೆ ? ಕೇಳು, ನಾವಾಡುವ ಮಾತುಗಳಿಗೂ, ಆ ವಾಗಭಿಮಾನಿಯಾದ ಅಗ್ನಿಗೂಕೂಡ, ಆ ವಿರಾಟ್ಪುರುಷನ ಮುಖವೇ ಉತ್ಪತ್ತಿಸ್ಥಾನವು. ಗಾಯತ್ರಿ ಮೊದಲಾದ ಏಳುಛಂದಸ್ಸುಗಳೂ ಆ ಭಗವಂತನ ಶರೀರದಲ್ಲಿರುವ ರಕ್ತಮಾಂಸಾದಿ ಸಪ್ತಧಾತುಗಳಿಂದ ಜನಿಸುವುವು, ದೇವತೆಗಳಿಗಾಗಿ ಕೊಡುವ ಹವಿಸ್ಸೆಂಬ ಅನ್ನವೂ, ಪಿತೃಗಳಿಗೆ ಕೊಡತಕ್ಕ ಕವ್ಯವೆಂಬ ಅನ್ನವೂ, ಆ ಹವ್ಯಕವ್ಯಗಳಿಗಾಗಿ ಉಳಿದ ಅಮೃತವೆಂಬ ಅನ್ನವೂ, ಮಧುರ, ಆಮ್ಲ, ಲವಣ, ತಿಕ್ತ, ಕಟು, ಕಷಾಯಗಳೆಂಬ ಷಡ್ರಸಗಳೂ, ನಮ್ಮ ರಸನೇಂದ್ರಿಯವೂ, ಅದಕ್ಕಭಿಮಾನಿಯಾದ ವರುಣನೂ ಸಹ ಆತನ ನಾಲಿಗೆಯಿಂದ ಜನಿಸುವರು ॥ ೧ ॥ ನಮ್ಮ ಪ್ರಾಣವಾಯುಗಳು, ಹೊರಗಣ ವಾಯುವೂ ಸಹ ಆತನ ಮೂಗಿನ ಹೊಳ್ಳೆಗಳಿಂದ ಹುಟ್ಟುವುವು, ಅಶ್ವಿನೀದೇವತೆಗಳು,

* ಚರ್ಮ, ರಕ್ತ, ಮಾಂಸ, ಎಲುಬು, ಮಜ್ಜೆ, ಕೊಬ್ಬು, ಶುಕ್ಲಗಳು,

ರೋಷಧೀನಾಂಚ ಘ್ರಾಣೋ ಮೋದ ಪ್ರಮೋದಯೋಃ ॥ ೨ ॥ ರೂಪಾಣಾಂ ತೇಜಸಾಂ ಚಕ್ಷುಃ ದಿವ ಸೂರ್ಯಸ್ಯ ಚಾಕ್ಷಿಣೀ । ಕರ್ಣೌ ದಿಶಾಂಚ ತೀರ್ಥಾನಾಂ ಶ್ರೋತ್ರ ಮಾಕಾಶ ಶಬ್ದಯೋಃ ॥ ೩ ॥ ತದ್ಗಾತ್ರಂ ವಸ್ತುಸಾರಾಣಾಂ ಸೌಭಾಗ್ಯ ಸ್ಯಚ ಭಾಜನಂ । ತ್ವಗಸ್ಯ ಸ್ಪರ್ಶವಾಯೋರ್ವೀಶ್ಚ ಸರ್ವಮೇಧಸ್ಯ ಚೈವಹಿ ॥ ೪ ॥ ರೋಮಾಣ್ಯುದ್ಭಿಜ್ಯಜಾತೀನಾಂ ಯೈರ್ವಾ ಯಜ್ಞಸ್ತು ಸಂಭೃತಃ । ಕೇಶ ಸ್ಮಶ್ರು ನಖಾನ್ಯಸ್ಯ ಶಿಲಾಲೋಹಾಭ್ರವಿದ್ಯುತಾಂ ॥ ೫ ॥ ಬಾಹವೋ ಲೋಕಪಾ

ವಿಶೇಷ ಗಂಧಗಳಿಗೂ ಸಹ, ಘ್ರಾಣಃ-ಆತನ ಘ್ರಾಣೇಂದ್ರಿಯವು ಉತ್ಪತ್ತಿಸ್ಥಾನವು ॥ ೨ ॥

ರೂಪಾಣಾಂ-ರೂಪಗಳಿಗೂ, ತೇಜಸಾಂ - ರೂಪಪ್ರಕಾಶಕಗಳಾದ ತೇಜಸ್ಸುಗಳಿಗೂ, ಚಕ್ಷುಃ-ಆತನ ಚಕ್ಷುರಿಂದ್ರಿಯವು ಕಾರಣವು, ದಿವಃ-ಸ್ವರ್ಗಾದಿ ಲೋಕಗಳಿಗೂ, ಸೂರ್ಯಸ್ಯಚ-ಅವುಗಳಿಗೆ ಅಭಿಮಾನಿಯಾದ ಸೂರ್ಯನಿಗೂ, ಅಕ್ಷಿಣೀ - ಆತನ ಕಣ್ಣುಗಳೇ ಕಾರಣವು, ದಿಶಾಂ - ದಿಕ್ಕುಗಳಿಗೂ, ತೀರ್ಥಾನಾಂಚ-ಶಾಸ್ತ್ರಗಳಿಗೂ, ಕರ್ಣೌ - ಕಿವಿಗಳುಸ್ಥಾನವು, ಆಕಾಶಶಬ್ದಯೋಃ - ಆಕಾಶಕ್ಕೂ, ಅದರ ಗುಣವಾದ ಶಬ್ದಕ್ಕೂ ಸಹ, ಶ್ರೋತ್ರಂ-ಶ್ರೋತ್ರೇಂದ್ರಿಯವು ಕಾರಣವು ॥ ೩ ॥ ವಸ್ತುಸಾರಾಣಾಂ-ಪದಾರ್ಥಗಳಸಾರಾಂಶಗಳಿಗೂ, ಸೌಭಾಗ್ಯಸ್ಯಚ-ಸೌಭಾಗ್ಯಕ್ಕೂ, ತದ್ಗಾತ್ರಂ-ಆತನ ಶರೀರವು, ಭಾಜನಂ - ಸ್ಥಾನವು, ಸ್ಪರ್ಶವಾಯೋಃ-ತ್ವಕ್ಕಿಗೂ, ಸ್ಪರ್ಶಕ್ಕೂ, ಅದರ ಅಭಿಮಾನಿಯಾದ ವಾಯುವಿಗೂ, ಸರ್ವಮೇಧಸ್ಯಚೈವಹಿ-ಸರ್ವಯಜ್ಞಗಳಿಗೂ ಸಹ, ಅಸ್ಯ-ಆ ಭಗವಂತನ, ತ್ವಕ್-ತ್ವಗಿಂದ್ರಿಯವು, ಉತ್ಪತ್ತಿಸ್ಥಾನವು ॥ ೪ ॥ ಯೈಃ-ಯಾವುಗಳಿಂದ, ಯಜ್ಞಃ-ಯಜ್ಞವು, ಸಂಭೃತಃ-ಸಾಧಿಸಲ್ಪಟ್ಟಿತೋ, ಅಂತಹ, ಉದ್ಭಿಜ್ಯಜಾತೀನಾಂ-ವೃಕ್ಷಜಾತಿಗಳಿಗೆ, ರೋಮಾಣಿ - ಆತನ ಕೂದಲುಗಳೇ ಕಾರಣವು, ಶಿಲಾ...ತಾಂ, ಶಿಲಾ - ಕಲ್ಲುಗಳಿಗೂ, ಲೋಹ-ಲೋಹಗಳಿಗೂ, ಅಭ್ರ - ಮೋಡಗಳಿಗೂ, ವಿದ್ಯುತಾಂ-ಮಿಂಚುಗಳಿಗೂ, ಅಸ್ಯ-ಆವೈರಾಜನ, ಕೇಶ...ನಿ, ಕೇಶ - ಕೂದಲು, ಸ್ಮಶ್ರು-ಗಡ್ಡಮೀಸೆಗಳು, ನಖಾನಿ-ಉಗುರುಗಳು, ಉತ್ಪತ್ತಿಸ್ಥಾನವು ॥ ೫ ॥

ಓಷಧಿಗಳೂ ಸಾಮಾನ್ಯ ವಿಶೇಷ ಗಂಧಗಳೂ ಆತನ ಘ್ರಾಣೇಂದ್ರಿಯದಿಂದುಂಟಾಗುವುವು ॥ ೨ ॥ ರೂಪಗಳೂ, ರೂಪಗಳನ್ನು ಪ್ರಕಾಶಗೊಳಿಸುವತೇಜಸ್ಸುಗಳೂಕೂಡ ಆತನ ಚಕ್ಷುರಿಂದ್ರಿಯದಿಂದ ಉತ್ಪನ್ನವಾಗುವುವು. ಸ್ವರ್ಗಾದಿ ಲೋಕಗಳೂ, ಸೂರ್ಯನು ಆತನ ಕಣ್ಣುಗಳಿಂದ ಉದಯಿಸುವರು. ದಿಕ್ಕುಗಳಿಗೂ, ಶಾಸ್ತ್ರಗಳಿಗೂ ಆತನ ಕಿವಿಗಳೇ ಕಾರಣವು. ಆಕಾಶಕ್ಕೂ ಅದರಗುಣವಾದ ಶಬ್ದಕ್ಕೂ ಆತನ ಶ್ರೋತ್ರೇಂದ್ರಿಯವು ಸ್ಥಾನವು ॥ ೩ ॥ ವಸ್ತುಗಳಲ್ಲಿರುವ ಸಾರಾಂಶಗಳಿಗೂ, ಅವುಗಳ ಸೌಂದರ್ಯಾದಿಗಳಿಗೂ ಆತನಶರೀರವೇ ನೆಲೆಯು. ತ್ವಕ್ಕಿಗೂ, ಸ್ಪರ್ಶಕ್ಕೂ ಅದಕ್ಕಭಿಮಾನಿಯಾದ ವಾಯುವಿಗೂ, ಸರ್ವಯಜ್ಞಗಳಿಗೂಸಹ, ಆತನ ತ್ವಗಿಂದ್ರಿಯವು ಕಾರಣವು ॥ ೪ ॥ ಯಜ್ಞಗಳಿಗೆ ಸಾಧನಗಳಾದ ವೃಕ್ಷಗಳೇ ಆತನಿಗೆ ರೋಮಗಳು. ಮೋಘಗಳೇ ಆತನಿಗೆ ಕೇಶಗಳು. ಮಿಂಚುಗಳೇ ಗಡ್ಡಮೀಸೆಗಳು. ಶಿಲೆಗಳು, ಲೋಹಗಳು, ಇವು

ಲಾನಾಂ ಪ್ರಾಯಶಃ ಕ್ಷೇಮ ಕರ್ಮಣಾಂ ॥೬॥ ವಿಕ್ರಮೋ ಭೂರ್ಭುವ ಸ್ಸ್ವಶ್ಚ ಕ್ಷೇಮಸ್ಯ ಶರಣಸ್ಯಚ । ಸರ್ವಕಾಮ ವರಸ್ಯಾಪಿ ಹರೇಶ್ಚರಣ ಆಸ್ಪದಂ ॥೭॥ ಅಪಾಂ ವೀರ್ಯಸ್ಯ ಸರ್ಗಸ್ಯ ಪರ್ಜನ್ಯಸ್ಯ ಪ್ರಜಾಪತೇಃ । ಪುಂಸಃ ಶಿಶ್ನ ಉಪಸ್ಥಸ್ತು ಪ್ರಜಾತ್ಯಾನಂದ ನಿರ್ವೃತೇಃ ॥೮॥ ಪಾಯು ರ್ಯಮಸ್ಯ ಮಿತ್ರಸ್ಯ ಪರಿಮೋಕ್ಷಸ್ಯ ನಾರದ ! ಹಿಂಸಾಯಾ ನಿರ್ಋತೇ ರ್ಮೃತ್ಯೋ ರ್ನಿರಯಸ್ಯ ಗುದಂ ಸ್ಮೃತಂ ॥೯॥ ಪರಾಭೂತೇ ರಧರ್ಮಸ್ಯ ತಮಸ ಶ್ಚಾಪಿ ಪಶ್ಚಿಮಃ । ನಾ ಡ್ಯೋ*ನದನದೀನಾಂಚ ಗೋ

ಪ್ರಾಯಶಃ-ಬಹಳವಾಗಿ, ಕ್ಷೇಮಕರ್ಮಣಾಂ-ಲೋಕ ರಕ್ಷಣೆಯನ್ನು ಮಾಡುವ, ಲೋಕಪಾಲಾನಾಂ-ಇಂದ್ರಾದಿ ಲೋಕಪಾಲಕರಿಗೆ, ಬಾಹವಃ-ಆತನ ಬಾಹುಗಳೇ ಸ್ಥಾನವು॥೬॥ಭೂರ್ಭುವಸ್ಸ್ವಶ್ಚ, ಭೂ-ಭುವ ಸ್ವರ್ಗಲೋಕಗಳಿಗೆ, ವಿಕ್ರಮಃ-ಆತನ ಪಾದನ್ಯಾಸವು ಸ್ಥಾನವು, ಕ್ಷೇಮಸ್ಯ-ಕ್ಷೇಮಕ್ಕೂ, ಶರಣಸ್ಯಚ-ಅಭಯಕ್ಕೂ, ಸರ್ವ...ಪಿ, ಸರ್ವ-ಎಲ್ಲ, ಕಾಮ-ಇಷ್ಟಾರ್ಥಗಳ, ವರಸ್ಯಾಪಿ - ವರಣಕ್ಕೂ, ಹರೇಃ-ಭಗವಂತನ, ಚರಣಃ-ಪಾದವು, ಆಸ್ಪದಂ-ಸ್ಥಾನವು ॥೭॥ ಅಪಾಂ - ನೀರಿಗೂ, ವೀರ್ಯಸ್ಯ-ಇಂದ್ರಿಯಕ್ಕೂ, ಸರ್ಗಸ್ಯ-ಸೃಷ್ಟಿಗೂ, ಪರ್ಜನ್ಯಸ್ಯ-ಪರ್ಜನ್ಯನಿಗೂ, ಪ್ರಜಾಪತೇಃ-ಬ್ರಹ್ಮನಿಗೂ, ಪುಂಸಃ-ಪರಮಾತ್ಮನ, ಶಿಶ್ನಃ-ಶಿಶ್ನವು, ಪ್ರಜಾ...ತೇಃ-ಪ್ರಜಾತ್ಯಾನಂದ-ಸಂತಾನಕ್ಕಾಗಿಮಾಡುವ ಸ್ತ್ರೀಸಂಭೋಗದಿಂದುಂಟಾದ, ನಿರ್ವೃತೇಃ-ಸುಖಕ್ಕೆ, ಉಪಸ್ಥಃ-ಉಪಸ್ಥವು, ಆಸ್ಪದಂ-ಸ್ಥಾನವು, ॥ ೮ ॥ ಹೇ ನಾರದ-ಎಲೈ ನಾರದನೆ! ಯಮಸ್ಯ-ಯಮನಿಗೂ, ಮಿತ್ರಸ್ಯ-ಸೂರ್ಯನಿಗೂ, ಪರಿಮೋಕ್ಷಸ್ಯ-ಮಲವಿಸರ್ಜನೆಗೂ ಪಾಯುಃ-ಪಾಯುವೆಂಬ ಇಂದ್ರಿಯವು ಸ್ಥಾನವು, ಹಿಂಸಾಯಾಃ-ಹಿಂಸೆಗೂ, ನಿರ್ಋತೇಃ - ಅಲಕ್ಷ್ಮಿಗೂ, ಮೃತ್ಯೋಃ-ಮೃತ್ಯುವಿಗೂ, ನಿರಯಸ್ಯ-ನರಕಕ್ಕೂ, ಗುದಂ - ಗುದಸ್ಥಾನವು, ಉತ್ಪತ್ತಿಸ್ಥಾನನೆಂದು ಸ್ಮೃತಂ-ಹೇಳಲ್ಪಟ್ಟಿತು ॥ ೯ ॥ ಪರಾಭೂತೇಃ-ಪರಾಜಯಕ್ಕೂ, ಅಧರ್ಮಸ್ಯ-ಅಧರ್ಮಕ್ಕೂ, ತಮ

ಗಳೇ ಆತನಿಗೆ ಕೈಕಾಲು ಉಗುರುಗಳು ॥೫॥ ಲೋಕಗಳನ್ನು ಕಾಪಾಡುವ ಇಂದ್ರಾದಿಗಳೇ ಆತನ ತೋಳುಗಳು. ಭೂಲೋಕ, ಭುವರ್ಲೋಕ, ಸ್ವರ್ಲೋಕಗಳೇ ಆತನ ನಡೆಯು. ಕ್ಷೇಮವು, ಅಭಯದಾನವು, ಸರ್ವರ ಕೋರಿಕೆಯನ್ನು ಸಲಿಸುವುದು, ಇವುಗಳೇ ಆತನ ಪಾದಗಳು. ॥ ೬-೭ ॥ ನೀರಿಗೂ, ಶುಕ್ಲಕ್ಕೂ, ಸೃಷ್ಟಿಗೂ, ಪರ್ಜನ್ಯನೆಂಬ ವೃಷ್ಟ್ಯಧಿದೇವತೆಗೂ, ಬ್ರಹ್ಮಾದಿ ಪ್ರಜೇಶರಿಗೂ ಸಹ, ಆ ಪರಮಾತ್ಮನ ಶಿಶ್ನವೇ ಕಾರಣವು. ಸಂತತಿಗಾಗಿ ಸಂಭೋಗಮಾಡುವುದರಿಂದುಂಟಾಗುವ ಆನಂದವೇ ಆತನ ಉಪಸ್ಥೇಂದ್ರಿಯವು ॥ ೮ ॥ ಯಮನು, ಮಿತ್ರನು, ಮಲವಿಸರ್ಜನವು, ಇವುಗಳು ಆತನ ಪಾಯುವೆಂಬಿಂದ್ರಿಯ ದಿಂದುಂಟಾಗುವುವು, ಹಿಂಸೆಗೂ, ದಾರಿದ್ರ್ಯಕ್ಕೂ, ಮೃತ್ಯುವಿಗೂ, ನರಕಕ್ಕೂ ಕೂಡ ಆತನ ಗುದವೇ ಉತ್ಪತ್ತಿಸ್ಥಾನವು॥೯॥

* ಪೂರ್ವದಿಕ್ಕಿಗೆ ಹರಿಯುವುವು ಹೆಣ್ಣು ನದಿಗಳೆಂದೂ, ಪಶ್ಚಿಮ ದಿಕ್ಕಿಗೆ ಹರಿಯುವುವು ಗಂಡುನದಿಗಳೆಂದೂ ಕರೆಯಲ್ಪಡುವುವು

ತ್ರಾಣಾ ಮಸ್ಥಿ ಸಂಹತಿಃ ॥ ೧೦ ॥ ಅವ್ಯಕ್ತರಸ ಸಿಂಧೂನಾಂ ಭೂತಾ
ನಾಂ ನಿಧನಸ್ಯಚ । ಉದರಂ ವಿದಿತಂ ಪುಂಸೋ ಹೃದಯಂ ಮನಸಃ ಪದಂ॥
ಧರ್ಮಸ್ಯ ಮಮ ತುಭ್ಯಂಚ ಕುಮಾರಾಣಾಂ ಭವಸ್ಯಚ । ವಿಜ್ಞಾನಸ್ಯ
ಚ ತತ್ವಸ್ಯ ಪರಸ್ಯಾತ್ಮಾ ಪರಾಯಣಂ ॥ ೧೨ ॥ ಅಹಂ ಭವಾನ್ ಭವ
ಶ್ಚೈವ ತ ಇಮೇ ಮುನಯೋಽಗ್ರಜಾಃ। ಸುರಾಸುರ ನರಾ ನಾಗಾಃ ಖಗಾ
ಮೃಗ ಸರೀಸೃಪಾಃ ॥ ೧೩ ॥ ಗಂಧರ್ವಾಽಪ್ಸರಸೋ ಯಕ್ಷಾ ರಕ್ಷೋ

ನಸ್ಯಾಪಿ-ಅಜ್ಞಾನಕ್ಕೂ, ಪಶ್ಚಿಮಃ-ಹಿಸ್ಸು ಕಾರಣವು. ನದನದೀನಾಂ-ಗಂಡು ಹೆಣ್ಣುನದಿಗಳಿಗೆ, ನಾಡ್ಯಃ-ನರಗಳು ಸ್ಥಾನವು, ಗೋತ್ರಾಣಾಂ - ಪರ್ವತಗಳಿಗೆ, ಅಸ್ಥಿಸಂಹತಿಃ - ಎಲುಬುಗಳ ಸಮೂಹವು, ಸ್ಥಾನವು ॥ ೧೦ ॥ ಅವ್ಯ...ನಾಂ, ಅವ್ಯಕ್ತ-ಪ್ರಧಾನ, ರಸ-ಅನ್ನಾದಿರಸ, ಸಿಂಧೂನಾಂ-ಸಮುದ್ರ ಇವುಗಳಿಗೂ, ಭೂತಾನಾಂ-ಭೂತಗಳಿಗೂ, ನಿಧನಸ್ಯಚ-ಲಯಕ್ಕೂ, ಪುಂಸಃ-ಆಪುರುಷನ, ಉದರಂ-ಹೊಟ್ಟೆಯು, ವಿದಿತಂ-ಕಾರಣವೆಂದು, ತಿಳಿಯಲ್ಪಟ್ಟಿರುವುದು, ಮನಸಃ-ನಮ್ಮ ಲಿಂಗಶರೀರಗಳಿಗೆ, ಹೃದಯಂ-ಆತನ ಹೃದಯವು, ಪದಂ-ಸ್ಥಾನವು ॥ ೧೧ ॥ ಧರ್ಮಸ್ಯ-ಧರ್ಮಕ್ಕೂ, ಮಮ-ನನಗೂ, ತುಭ್ಯಂ-ನಿನಗೂ, ಕುಮಾರಾಣಾಂ - ಸನಕಾದಿಗಳಿಗೂ, ಭವಸ್ಯಚ-ರುದ್ರನಿಗೂ, ವಿಜ್ಞಾನಸ್ಯತತ್ವಸ್ಯ - ಮಹತ್ತತ್ವಕ್ಕೂಸಹ, ಪರಸ್ಯ-ಪರಮಾತ್ಮನ, ಆತ್ಮಾ-ಚಿತ್ತವು, ಪರಾಯಣಂ-ಉತ್ತಮಸ್ಥಾನವು, ॥೧೨॥

ಅಹಂ-ನಾನು, ಭವಾನ್-ನೀನು, ಭವಶ್ಚೈವ-ರುದ್ರನು, ತೇ-ನಿನಗೆ, ಅಗ್ರಜಾಃ-ಅಣ್ಣಂದಿರಾದ, ಇಮೇಮುನಯಃ-ಈಸನಕಾದಿ ಮುನಿಗಳು, ಸುರಾಸುರನರಾಃ-ದೇವತೆಗಳು, ರಾಕ್ಷಸರು, ಮನುಷ್ಯರು, ನಾಗಾಃ-ನಿರ್ವಿಷಸರ್ಪಗಳು ಖಗಾಃ-ಪಕ್ಷಿಗಳು, ಮೃಗಸರೀಸೃಪಾಃ-ಮೃಗಗಳು ಸರ್ಪಗಳು ॥೧೩॥ ಗಂಧ

ಪರಾಜಯವು, ಅಧರ್ಮವು, ಅಜ್ಞಾನವು, ಇವುಗಳಿಗೆ ಆತನ ಪೃಷ್ಠವು ಕಾರಣವೆನಿಸುವುದು ಗಂಡು, ಹೆಣ್ಣು ನದಿಗಳು ಆತನ ನರಗಳೆನಿಸುವುವು, ಬೆಟ್ಟಗಳೇ ಆತನ ಎಲುಬುಗಳಾಗಿರುವುವು ॥೧೦॥ ಮೂಲಪ್ರಕೃತಿಗೂ, ಅನ್ನಾದಿರಸಗಳಿಗೂ, ಸಮುದ್ರಗಳಿಗೂ, ಸಕಲ ಭೂತಗಳಿಗೂ, ಪ್ರಳಯಕ್ಕೂ ಸಹ ಆತನ ಹೊಟ್ಟೆಯೇ ಸ್ಥಾನವು, ಪ್ರಾಣಿಗಳ *ಲಿಂಗಶರೀರಗಳೇ ಆತನ ಹೃದಯವು ॥ ೧೧ ॥

ಧರ್ಮ ಪುರುಷನೂ, ನಾನೂ, ನೀನೂ, ಸನಕಾದಿಮುನಿಗಳೂ. ರುದ್ರನೂ, ಮಹತ್ತತ್ವವು, ಇವರೆಲ್ಲರೂ ಆತನ ಚಿತ್ತದಿಂದ ಜನಿಸಿದವರು ॥೧೨॥ ಅಯ್ಯಾ ನಾರದನೆ! ಆದುದರಿಂದ ಸುವರ್ಣದಿಂದುಂಟಾದ ಕಟಕಮಕುಟಾದಿ ಭೂಷಣಗಳು ಸುವರ್ಣಕ್ಕಿಂತ ಹೇಗೆ ಬೇರೆಯಲ್ಲವೋ, ಹಾಗೆಯೇ ಪರಮಾತ್ಮನಿಂದ ಜನಿಸಿದ ಜಗತ್ತೆಲ್ಲವೂ ಪರಮಾತ್ಮನಿಗಿಂತ ಬೇರೆಯಲ್ಲ. ಆತನು ಸರ್ವನಿಯಾಮಕನೂ, ಸರ್ವಾತ್ಮಕನೂ, ಸರ್ವಪ್ರಕಾಶಕನೂ, ನಿತ್ಯಮುಕ್ತನೂ ಆಗಿರುವನು. ವೇದಭಾಗವಾದ ಪುರುಷಸೂಕ್ತವೂ ಈ ಅರ್ಥವನ್ನೇ ಬೋಧಿಸುವುದು. ಅದರ ಪ್ರಾರಂಭದಲ್ಲಿ "ಸಹಸ್ರ

* ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಪಂಚಭೂತಗಳು, ಮನಸ್ಸು, ಬುದ್ಧಿ, ಇವುಗಳು.

ಭೂತಗಣೋರಗಾಃ । ಪಶವಃ ಪಿತರಃ ಸಿದ್ಧಾ ವಿದ್ಯಾಧ್ರಾಶ್ಚಾರಣಾ ದ್ರುಮಾಃ ॥ ೧೪ ॥ ಅನ್ಯೇಚ ವಿವಿಧಾ ಜೀವಾ ಜಲಸ್ಥಲ ನಭೌಕಸಃ । ಗ್ರಹರ್ಕ್ಷ ಕೇತವ ಸ್ತಾರಾ ಸ್ತಟಿತ ಸ್ತನಯಿತ್ನವಃ ॥ ೧೫ ॥ ಸರ್ವಂ

ರ್ವಾಪ್ಸರಸಃ-ಗಂಧರ್ವರು, ಅಪ್ಸರಸ್ಸುಗಳು, ಯಕ್ಷಾಃ-ಯಕ್ಷರು, ರಕ್ಷೋ...ಗಾಃ, ರಾಕ್ಷಸರು, ಭೂತ ಗಣಗಳು, ಉರಗರು, ಪಶವಃ-ಪಶುಗಳು, ಪಿತರಃ-ಪಿತೃಗಳು, ಸಿದ್ಧಾಃ-ಸಿದ್ಧರು, ವಿದ್ಯಾಧ್ರಾಃ - ವಿದ್ಯಾ ಧರರು, ಚಾರಣಾಃ-ಚಾರಣರು, ದ್ರುಮಾಃ-ವೃಕ್ಷಗಳು ॥ ೧೪ ॥ ಜಲ...ಸಃ, ಜಲ-ನೀರಿನಲ್ಲಿಯೂ, ಸ್ಥಲ-ನೆಲದಲ್ಲಿಯೂ, ನಭಃ-ಆಕಾಶದಲ್ಲಿಯೂ, ಓಕಸಃ-ವಾಸಮಾಡುವ, ವಿವಿಧಾಃ-ಹಲವು ಬಗೆಗಳಾದ, ಅನ್ಯೇ-ಇತರಗಳಾದ, ಜೀವಾಃ-ಪ್ರಾಣಿಗಳೂ, ಗ್ರಹ...ವಃ, ಗ್ರಹ - ಸೂರ್ಯಾದಿಗ್ರಹಗಳು, ಋಕ್ಷ-ಅಶ್ವಿನ್ಯಾದಿ ನಕ್ಷತ್ರಗಳು, ಕೇತವಃ-ಧೂಮಕೇತುಗಳು, ತಾರಾಃ-ನಕ್ಷತ್ರಗಳು, ತಟಿತಃ-ಮಿಂಚುಗಳು, ಸ್ತನ ಯಿತ್ನವಃ-ಮೇಘಗಳು ॥ ೧೫ ॥ ಭೂತಂ-ಹಿಂದೆ ಯಿದ್ದ, ಭವ್ಯಂ-ಮುಂದಾಗುವ, ಭವಚ್ಚ-ಈಗಿರುವ

ಶೀರ್ಷಾ ಪುರುಷಃ'' ಮೊದಲಾದ *ನಾಲ್ಕು ಋಕ್ಕುಗಳ ಅರ್ಥವನ್ನು† ಮೊದಲೇ ನಿನಗೆ ವಿವರಿಸಿರುವೆನು. ಉಳಿದ ಅರ್ಥವನ್ನು ಈಗ ನಿನಗೆ ವಿವರಿಸಿ ಹೇಳುವೆನು ಕೇಳು- ನಾನು, ನೀನು, ರುದ್ರನು, ನಿನ್ನ ಅಣ್ಣಂದಿರಾದ ಈ ಸನಕಾದಿಗಳು, ದೇವತೆಗಳು, ರಾಕ್ಷಸರು, ಮನುಷ್ಯರು, ಪುನ್ನಗರು, ಪಕ್ಷಿಗಳು, ಮೃಗಗಳು, ಸರ್ಪಗಳು, ಗಂಧರ್ವ ರು, ಅಪ್ಸರ ಸ್ತ್ರೀಯರು, ಯಕ್ಷರು, ದಾನವರು, ಭೂತಗಣಗಳು, ಉರಗರು, ಪಶು ಗಳು, ಪಿತೃಗಳು, ಸಿದ್ಧರು, ವಿದ್ಯಾಧರರು, ಚಾರಣರು, ಗಿಡಗಳು, ಇವುಗಳೂ ಮತ್ತು

—: ಈ ಪುರುಷಸೂಕ್ತಾರ್ಥವು ವೇದಭಾಷ್ಯಾನುಸಾರವಾಗಿ ಕನ್ನಡಿಸಲ್ಪಟ್ಟಿರುವುದು :—

* ೧ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್॥ ಸರ್ವಪ್ರಾಣಿಗಳ ಸಮಷ್ಟಿರೂಪನಾಗಿಯೂ, ಬ್ರಹ್ಮಾಂಡಶರೀರನಾಗಿಯೂ, ಇರುವ ವೈರಾಜನೇ ಪುರುಷನೆನಿಸುವನು. ಸಕಲಪ್ರಾಣಿಗಳ ಶಿರಸ್ಸುಗಳೂ, ಕಣ್ಣುಗಳೂ, ಕಾಲುಗಳೂ, ಇವೆಲ್ಲವೂ ಆತನಲ್ಲಿಯೇ ಇರುವುದರಿಂದ ಆತನು ಸಹಸ್ರ ಶೀರ್ಷನು, ಸಹಸ್ರಾಕ್ಷನು, ಸಹಸ್ರಪಾದನೆಂದು ಹೊಗಳಲ್ಪಡುವನು, ಸಹಸ್ರವೆಂದರೆ ಅನಂತವೆಂದರ್ಥವು.

೨ ಬ್ರಾಹ್ಮಣೋಸ್ಯ ಮುಖಮಾಸೀ ದ್ಬಾಹೂ ರಾಜನ್ಯಃ ಕೃತಃ । ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥ ಈ ವಿರಾಟ್ಪುರುಷನ ಮುಖದಿಂದ ಬ್ರಾಹ್ಮಣನೂ, ಬಾಹುಗಳಿಂದ ಕ್ಷತ್ರಿಯನೂ, ತೊಡೆಗಳಿಂದ ವೈಶ್ಯನೂ, ಪಾದಗಳಿಂದ ಶೂದ್ರನೂ, ಜನಿಸಿದರು.

೩ ಚಂದ್ರಮಾ ಮನಸೋಜಾತ ಶ್ಚಕ್ಷೋಃ ಸೂರ್ಯೋ ಅಜಾಯತ । ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾ ದ್ವಾಯು ರಜಾಯತ ॥ ಆತನ ಮನಸ್ಸಿನಿಂದ ಚಂದ್ರನೂ, ಕಣ್ಣಿನಿಂದ ಸೂರ್ಯನೂ, ಮುಖ ದಿಂದ ಇಂದ್ರಾಗ್ನಿಗಳೂ, ಪ್ರಾಣದಿಂದ ವಾಯುವೂ, ಹುಟ್ಟಿದರು.

೪ ನಾಭ್ಯಾ ಆಸೀ ದಂತರಿಕ್ಷಂ ಶೀರ್ಷ್ಣೋ ದ್ಯೌ ಸ್ಸಮವರ್ತತ।ಪದ್ಭ್ಯಾಂ ಭೂಮಿ ರ್ದಿಶ ಶ್ಶ್ರೋತ್ರಾ ತ್ತಥಾ ಲೋಕಾಂ ಅಕಲ್ಪಯನ್ ॥ ಆಭಗವಂತನ ಹೊಕ್ಕುಳಿಂದ ಅಂತರಿಕ್ಷವೂ, ತಲೆಯಿಂದ ಸ್ವರ್ಗ ಲೋಕವೂ, ಪಾದಗಳಿಂದ ಭೂಮಿಯೂ, ಕಿವಿಯಿಂದ ದಿಕ್ಕುಗಳೂ, ಉಂಟಾದುವು. ಹೀಗೆ ಆ ವಿರಾಟ್ಪುರುಷನ ಅವಯವಗಳೇ ಸಕಲಲೋಕಗಳನ್ನೂ ಸೃಷ್ಟಿಸಿದುವೆಂದು ತಾತ್ಪರ್ಯವು.

† ೫ನೆ ಅಧ್ಯಾಯ ೩೫-೩೬-೩೦-೪೦. ಶ್ಲೋಕಗಳು.

ಪುರುಷ ಏವೇದಂ ಭೂತಂ ಭವ್ಯಂ ಭವಚ್ಚ ಯತ್। †ತೇನೇದ ಮಾವೃತಂ ವಿಶ್ವಂ ವಿತಸ್ತಿ ಮಧಿತಿಷ್ಠತಿ ॥೧೬॥ ಸ್ವಧಿಷ್ಣ್ಯಂ ಪ್ರತಪನ್ ಪ್ರಾಣೋ ಬಹಿಶ್ಚ ಪ್ರತಪತ್ಯಸೌ। ಏವಂ ವಿರಾಜಂ ಪ್ರತಪಂ ಸ್ತಪತ್ಯಂತರ್ಬಹಿಃ

ಯತ್-ಯಾವ ಜಗತ್ತುಂಟೋ, ಇದಂಸರ್ವಂ-ಇದೆಲ್ಲವೂ, ಪುರುಷಏವ - ಪರಮಾತ್ಮನೇ, ಇದಂವಿಶ್ವಂ-ಈ ಜಗತ್ತೆಲ್ಲವೂ, ತೇನ-ಆಪರಮಾತ್ಮನಿಂದ, ಆವೃತಂ-ಬಳಸಲ್ಪಟ್ಟಿರುವುದು, ವಿತಸ್ತಿಂ - ಹತ್ತಂಗುಲದಷ್ಟು, ಅಧಿ-ಅಧಿಕವಾಗಿ ವ್ಯಾಪಿಸಿ, ತಿಷ್ಠತಿ-ಇರುತ್ತಾನೆ ॥ ೧೬ ॥ ಅಸೌ-ಈ, ಪ್ರಾಣಃ - ಸೂರ್ಯನು, ಸ್ವಧಿಷ್ಣ್ಯಂ-ತನ್ನ ಮಂಡಲವನ್ನು, ಪ್ರತಪನ್-ಪ್ರಕಾಶಗೊಳಿಸುತ್ತಾ, ಬಹಿಶ್ಚ - ಹೊರಗೂ, ಯಥಾ-ಹೇಗೆ, ಪ್ರತಪತಿ-ಪ್ರಕಾಶಗೊಳಿಸುತ್ತಾನೋ, ಏವಂ-ಹೀಗೆ, ಪುಮಾನ್-ಪರಮಾತ್ಮನು, ವಿರಾಜಂ-ವಿರಾಡ್ದೇಹವನ್ನು, ಪ್ರತಪನ್-ಪ್ರಕಾಶಗೊಳಿಸುತ್ತಾ, ಅಂತರ್ಬಹಿಶ್ಚ-ಬ್ರಹ್ಮಾಂಡದ ಒಳಗೂ ಹೊರಗೂಕೂಡ, ತಪತಿ-ಪ್ರಕಾಶಗೊಳಿಸುತ್ತಾನೆ ॥ ೧೭ ॥ ಯತ್-ಯಾವಕಾರಣದಿಂದ, ‡ಮರ್ತ್ಯಂ-ನಶ್ವರವಾದ, ಅನ್ನಂ-ಭೋಗಕ್ಕೆ ಯೋಗ್ಯವಾದ ಕರ್ಮಫಲವನ್ನು, ಅತ್ಯಗಾತ್ - ಅತಿಕ್ರಮಿಸಿರುವನೋ, ಆದುದರಿಂದ, ಸಃ-ಆ ಪರಮಾತ್ಮನು, ಅಭಯಸ್ಯ-ಭಯರಹಿತವಾದ, ಅಮೃತಸ್ಯ-ಮೋಕ್ಷಕ್ಕೆ, ಈಶಃ-ಸ್ವಾಮಿಯು, ತತಃ-

ನೀರಿನಲ್ಲಿಯೂ, ನೆಲದಲ್ಲಿಯೂ, ಅಂತರಿಕ್ಷದಲ್ಲಿಯೂ ವಾಸಮಾಡುವ, ಹಲವು ಬಗೆಗಳಾದ ಇತರ ಜಂತುಗಳೂ, ಹಿಂದಣಕಲ್ಪದಲ್ಲಿ ಇದ್ದ ಜಗತ್ತೂ, ಮುಂದಣ ಕಲ್ಪದಲ್ಲಿ ಉಂಟಾಗಬಹುದಾದ ಪ್ರಪಂಚವೂ, ಈಗ ಕಾಣಬರುವ ಪ್ರಪಂಚವೂ ಇದೆಲ್ಲವೂ ಭಗವಂತನೇ, ಆತನು ಈ ಜಗತ್ತೆಲ್ಲವನ್ನೂ ವ್ಯಾಪಿಸಿರುವುದಲ್ಲದೆ ಈ ಜಗತ್ತಿಗಿಂತಲೂ ಅಧಿಕನಾಗಿಯೂ ಇರುವನು॥೧೬॥ ಸೂರ್ಯನು ತನ್ನ ಮಂಡಲವನ್ನು ಬೆಳಗಿಸುವುದು ಮಾತ್ರವೇ ಅಲ್ಲದೆ ಹೊರಗಣ ಪ್ರಪಂಚವನ್ನೂ ಎಂತು ಬೆಳಗಿಸುವನೋ, ಅಂತೆಯೇ ಆ ಪರಮಾತ್ಮನು ವಿರಾಡ್ದೇಹವನ್ನು ಪ್ರಕಾಶಗೊಳಿಸುವುದೇ ಅಲ್ಲದೆ ಬ್ರಹ್ಮಾಂಡದ ಒಳಗೂ ಹೊರಗೂ ಸಹ ಪ್ರಕಾಶ ಗೊಳಿಸುತ್ತಾನೆ ॥ ೧೭ ॥

ಆತನು ಶ್ರುತಿಯಲ್ಲಿ ಹೇಳುವಂತೆ ನಶ್ವರಗಳಾದ ಕರ್ಮ ಫಲಗಳಿಗೊಳಗಾಗದೆ, ಸಾಕ್ಷಿರೂಪನಾಗಿರುವುದರಿಂದ ಭಯರಹಿತವಾಗಿ ನಿತ್ಯಾನಂದವೆನಿಸಿದ ಮೋಕ್ಷಪದಕ್ಕೊಡೆಯನಾಗಿರುವನು. ಅಯ್ಯಾ ನಾರದಮುನಿಯೆ ! ಇಂತು ಪ್ರಪಂಚಾತ್ಮಕನಾಗಿದ್ದರೂ ಪ್ರಪಂಚಾತೀತನೆನಿಸಿ, ಮುಕ್ತಿನಾಯಕನಾಗಿರುವುದೇ, ಆತನ ಅಪಾರವಾದ ಮಹಿ

§ ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ ॥ ಹಿಂದಣ ಕಲ್ಪಗಳಲ್ಲಿ ಯಾವ ಜಗತ್ತಿದ್ದದೋ, ಮುಂದಣ ಕಲ್ಪಗಳಲ್ಲಿ ಯಾವುದುಂಟಾಗುವುದೋ, ಈಗ ಯಾವಜಗತ್ತು ಇಂದ್ರಿಯಗೋಚರವಾಗಿರುವುದೋ, ಇದೆಲ್ಲವೂ ಪರಮಾತ್ಮನೇ ಹೊರತು ಬೇರೆಯಲ್ಲ.

† ಸಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠ ದ್ದಶಾಂಗುಲಂ ॥ ಆ ವೈರಾಜನು ಬ್ರಹ್ಮಾಂಡವೆಲ್ಲವನ್ನೂ, ಅತ್ರಮಿಸಿ ಬಳಸಿ ಹೊರಗಡೆಯಲ್ಲಿಯೂ ವ್ಯಾಪಿಸಿರುವನು. ಎಂದರೆ ಬ್ರಹ್ಮಾಂಡವೆಂಬುದು ಆ ಪರಮಾತ್ಮನಲ್ಲಿ ಏಕದೇಶದಲ್ಲಿರುವುದೆಂದು ಭಾವವು.

ಪುರ್ವಾ § ॥ ೧೭ ॥ ಸೋಽಮೃತಸ್ಯಾಽಭಯಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್ । †ಮಹಿಮೈಷ ತತೋ ಬ್ರಹ್ಮನ್ ! ಪುರುಷಸ್ಯ ದುರತ್ಯಯಃ ॥ ೧೮ ॥ ‡ಪಾದೇಷು ಸರ್ವಭೂತಾನಿ ಪುಂಸಃ ಸ್ಥಿತಿಪದೋ

ಆದುದರಿಂದ, ಹೇ ಬ್ರಹ್ಮನ್ - ಎಲೈ ನಾರದನೆ ! ಪುರುಷಸ್ಯ - ಪರಮಾತ್ಮನ, ಏಷಮಹಿಮಾ-ಈ ಮಹಿಮೆಯು, ದುರತ್ಯಯಃ-ಅಪಾರವಾದುದು ॥ ೧೮ ॥ ಸ್ಥಿತಿಪದಃ, ಸ್ಥಿತಿ - ಭೂಲೋಕ ಮೊದಲಾದವುಗಳೇ ಪದಃ-ಪಾದಗಳಾಗಿರುವ, ಪುಂಸಃ-ಪರಮಾತ್ಮನ, ಪಾದೇಷು-ಪಾದಗಳಲ್ಲಿ, ಸರ್ವಭೂತಾನಿ-ಸಕಲಭೂತಗಳನ್ನು, ವಿದುಃ-ಇರುವುವೆಂದು, ತಿಳಿಯುವರು, ಅಥಾಪಿ - ಆದರೂ, ತ್ರಿಮೂರ್ಧ್ನಃ, ತ್ರಿ - ಮೂರು ಲೋಕಗಳ, ಮೂರ್ಧ್ನಃ-ಮೇಲ್ಗಡೆಯಲ್ಲಿರುವ ಮಹರ್ಲೋಕಕ್ಕೆ, ಮೂರ್ಧಸು-ಮೇಲಿರುವ ಲೋಕಗಳಲ್ಲಿ, ಅಭಯಂ-ಭಯರಹಿತವೂ, ಕ್ಷೇಮಂ-ದುಃಖರಹಿತವೂ ಆದ, ಅಮೃತಂ - ನಿತ್ಯಸುಖವು, ಇರು

ಮೆಯು ॥ ೧೮ ॥ ಆ ಭಗವಂತನನ್ನು ಆಶ್ರಯಿಸಿರುವ ಭೂತಗಳಿಗೆ ಉಂಟಾಗುವ ಬಂಧಮೋಕ್ಷಗಳ ವ್ಯವಸ್ಥೆಯನ್ನು ತಿಳುಹುವೆನು ಕೇಳು. ಭೂಲೋಕ ಮೊದಲಾದುವುಗಳೇ ಪಾದಗಳಾಗಿರುವ ಪರಮಾತ್ಮನ ಪಾದಗಳಲ್ಲಿ ಸಕಲಭೂತಗಳೂ ನೆಲಸಿರುವುವು, ಭೂಲೋಕ, ಭುವರ್ಲೋಕ, ಸ್ವರ್ಲೋಕಗಳ ಮೂರಕ್ಕೂ, ಮಹರ್ಲೋಕವು, ಶಿರಸ್ಸೆನಿಸುವುದು, ಅದರ ಮೇಲಣಲೋಕಗಳು ಅದಕ್ಕೆ ಶಿರಸ್ಸೆನಿಸುವುವು, ಆ ಲೋಕಗಳಲ್ಲಿ ಕ್ರಮವಾಗಿ ಅಮೃತವು ಹೆಚ್ಚು ಹೆಚ್ಚಾಗಿ ನೆಲೆಗೊಂಡಿರುವುದು. ಮೇಲೆಹೇಳದ ಮೂರು ಲೋಕಗಳಲ್ಲಿಯೂ ಸುಖವು ನಶ್ವರವು. ಮಹರ್ಲೋಕವೆಂಬುದು ಕ್ರಮಮುಕ್ತಿಯನ್ನು ಪಡೆಯುವವರಿಗೆ ಸ್ಥಾನವೇ ಅಹುದು. ಆದರೂ ಅಲ್ಲಿರುವವರು ಮಹಾ ಪ್ರಳಯದಲ್ಲಿ *ಸಂಕರ್ಷಣ ಮುಖಾಗ್ನಿಯಿಂದ ಸುಡಲ್ಪಡುವ ಇತರ ಲೋಕವಾಸಿಗಳು ತಮ್ಮ ಲೋಕಕ್ಕೆ ಬರುವುದರಿಂದಲೂ, ಅವರ ದುಃಖವನ್ನು ನೋಡುವುದರಿಂದಲೂ, ಆ ಬೇಗೆಯು ಸೋಕುವುದರಿಂದ ಆ ಲೋಕವನ್ನುಳಿದು ಲೋಕಾಂತರಕ್ಕೆ ತೆರಳಬೇಕಾಗುವುದರಿಂದಲೂ, ಅಲ್ಲಿಯೂ ನಿತ್ಯ ಸುಖವಿಲ್ಲ. ತಪೋಲೋಕದಲ್ಲಿ ಅಂತಹ

§ ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ ಪ್ರಾಣಿಗಳು ತಂತಮ್ಮ ಕರ್ಮಫಲಗಳನ್ನು ಅನುಭವಿಸುವುದಕ್ಕಾಗಿ, ಪರಮಾತ್ಮನು ತನ್ನ ಕಾರಣಾವಸ್ಥೆಯನ್ನುಳಿದು ಜಗದ್ರೂಪವನ್ನು ಪಡೆಯುವುದರಿಂದ ಆತನೇಮೋಕ್ಷಸ್ವಾಮಿಯು,

† ಏತಾವಾನಸ್ಯ ಮಹಿಮಾಽತೋಜ್ಯಾಯಾಂಶ್ಚ ಪುರುಷಃ ॥ ಭೂತ ಭವಿಷ್ಯದ್ವರ್ತಮಾನ ಕಲ್ಪಗಳೊಳಗಣ ಜಗತ್ತುಗಳೆಲ್ಲವೂ ಆತನಮಹಿಮೆಯೇ. ಆದರೆ ಇವು ಆತನ ನಿಜಸ್ವರೂಪವಲ್ಲ ಆತನ ನಿಜಸ್ವರೂಪವೆಂಬುದು ಈ ಮಹಿಮೆಗಿಂತಲೂ ಬಹಳ ದೊಡ್ಡದು.

‡ ಪಾದೋಽಸ್ಯವಿಶ್ವಾಭೂತಾನಿ ॥ ಕಾಲತ್ರಯದಲ್ಲಿರುವ ಸಕಲಪ್ರಾಣಿಗಳೂ ಈತನಿಗೆ ಪಾದಾಂಶವೆನಿಸಿರುವುವು.

* ತ್ರಿಲೋಕ್ಯಾಂ ದಹ್ಯಮಾನಾಯಾಂ ಶಕ್ತ್ಯಾ ಸಂಕರ್ಷಣಾಗ್ನಿನಾ । ಯಾಂತ್ಯೂಷ್ಮಣಾ ಮಹರ್ಲೋಕಾಜ್ಜನಂ ಭೃಗ್ವಾದಯೋಽರ್ದಿತಾಃ ॥

ವಿದುಃ । §ಅಮೃತಂ ಕ್ಷೇಮ ಮಭಯಂ ತ್ರಿಮೂರ್ಧ್ನೋಽಧಾಯಿ ಮೂರ್ಧಸು ॥ ೧೯ ॥ * ಪಾದಾ † ಸ್ತ್ರಯೋ ಬಹಿಶ್ಚಾಸ ನ್ನಪ್ರಜಾನಾಂ ಯ ಆಶ್ರಮಾಃ । ಅಂತಸ್ತ್ರಿಲೋಕ್ಯಾ ಸ್ತ್ವಪರೋ ಗೃಹಮೇಧೋ ಬೃಹದ್ವ್ರತಃ

ವ್ರತಃ ॥ ೧೯ ॥ ಅಪ್ರಜಾನಾಂ-ಪ್ರಜೆಗಳಿಲ್ಲದ ಬ್ರಹ್ಮಚಾರಿ, ವಾನಪ್ರಸ್ಥ, ಸನ್ಯಾಸಿಗಳಿಂದ, ಆಶ್ರಮಾಃ, ಹೊಂದಲ್ಪಡಬಹುದಾದ, ಯೇ-ಯಾವಲೋಕಗಳುಂಟೋ, ಆರೂಪಗಳಾದ, ತ್ರಯಃ-ಮೂರು, ಪಾದಾಃ-ಭಗವಂತನಪಾದಗಳು, ತ್ರಿಲೋಕ್ಯಾಃ-ಮೂರುಲೋಕಗಳ, ಬಹಿಃ-ಹೊರಗಡೆಯಲ್ಲಿ, ಆಸನ್-ಇದ್ದವು, ಅಬೃಹ

ದುಃಖ ದರ್ಶನವಿಲ್ಲವಾದುದರಿಂದ ನಿತ್ಯಸುಖವುಂಟು. ಸತ್ಯಲೋಕದಲ್ಲಂತೂ ಅಭಯ ರೂಪವಾದ ಮೋಕ್ಷವು ಸಿದ್ಧವಾಗಿರುವುದು ॥೧೯॥ ಮತ್ತು ‡ನೈಷ್ಠಿಕ ಬ್ರಹ್ಮಚಾರಿಗಳು, ವಾನಪ್ರಸ್ಥರು, ಸನ್ಯಾಸಿಗಳು ಇವರು ಪಡೆಯತಕ್ಕ ಯಾವ ಉತ್ತಮಲೋಕಗಳುಂಟೊ, ಅವುಗಳ ಸ್ವರೂಪ ಗಳಾದ ಭಗವಂತನ ಮೂರುಪಾದಗಳೂ ಭೂಮ್ಯಾದಿ ಮೂರು ಲೋಕಗಳ ಹೊರಗಿರುವುವು. ಬ್ರಹ್ಮಚರ್ಯವಿಲ್ಲದ ಗೃಹಸ್ಥರು, ಪಡೆಯಬಹುದಾದ ಯಾವ ಲೋಕಗಳುಂಟೋ, ಅವುಗಳ ರೂಪವಾದ ಪಾದವು ಮೂರು

---

§ ತ್ರಿಪಾದಸ್ಯಾಽಮೃತಂ ದಿವಿ ॥ ಈ ಭಗವಂತನ ಉಳಿದ ಮೂರುಪಾದಗಳ ಸ್ವರೂಪವು ನಾಶರಹಿತವಾಗಿ ದ್ಯೋತನಾತ್ಮಕವಾದ ಸ್ವ ಪ್ರಕಾಶಸ್ವರೂಪದಲ್ಲಿ ನೆಲಸಿರುವುದು. ಅವಾಙ್ಮನಸಗೋಚರನಾದ ಭಗವಂತನಲ್ಲಿ ಪಾದನಿರ್ಣಯವೆಂಬುದು ಸಾಧ್ಯವಲ್ಲದಿದ್ದರೂ, ಈ ಬ್ರಹ್ಮಾಂಡವೆಂಬುದು ಪರಮಾತ್ಮನಿಗಿಂತಲೂ ಅಲ್ಪವೆಂದು ತಿಳುಹುವುದಕ್ಕಾಗಿ ಪಾದಕಲ್ಪನೆಯು ಮಾಡಲ್ಪಟ್ಟಿರುವುದು.

* ತ್ರಿಪಾದೂರ್ಧ್ವ ಮುದೈತ್ಪುರುಷಃ ಪಾದೋಽಸ್ಯೇಹಾಽಭವತ್ಪುನಃ ॥ ಪಾದತ್ರಯ ಸ್ವರೂಪನಾದ ಯಾವ ಭಗವಂತನುಂಟೋ, ಆತನು ಈ ಅಜ್ಞಾನದಿಂದುಂಟಾಗಿರುವ ಸಂಸಾರಕ್ಕೆ ಹೊರಗಾಗಿ, ಇದರ ಗುಣದೋಷಗಳಿಗೆ ಸಿಕ್ಕದೆ ಸರ್ವೋತ್ತಮನಾಗಿರುವನು. ಪಾದಾಂಶವುಮಾತ್ರ ಮಾಯೆಗೊಳಗಾಗಿ ಈ ಜನನ ಮರಣ ಪ್ರವಾಹದಲ್ಲಿ ಅಲೆದಾಡುತ್ತಿರುವುದು.

† ತ್ರಿಪಾದ್ವಿಭೂತೇರ್ಲೋಕಾಸ್ತು ಅಸಂಖ್ಯಾಃ ಪರಿಕೀರ್ತಿತಾಃ। ಶುದ್ಧಸತ್ವಮಯಾಃ ಸರ್ವೇ ಬ್ರಹ್ಮಾನಂದಸುಖಾತ್ಮಕಾಃ । ಸರ್ವೇ ನಿತ್ಯಾ ನಿರ್ವಿಕಾರಾ ಹೇಯರಾಗ ವಿವರ್ಜಿತಾಃ। ನಾರಾಯಣಪದಾಂಭೋಜ ಭಕ್ತ್ಯೈಕ ರಸಸೇವಿತಾಃ । ನಿರಂತರಂ ಸಾಮಗಾನ ಪರಿಪೂರ್ಣಸುಖಂಶ್ರಿತಾಃ। ಸರ್ವೇ ಪಂಚೋಪನಿಷದ ಸ್ವರೂಪಾ ವೇದವರ್ಚಸಃ ॥ ಭಗವಂತನ ಪಾದತ್ರಯರೂಪಗಳಾದ ಲೋಕಗಳು ಅಸಂಖ್ಯಾಕಗಳಾಗಿರುವುವು. ಅವುಗಳಲ್ಲಿ ರಜಸ್ತಮೋಗುಣಗಳಿಲ್ಲ. ಕಾಮಕ್ರೋಧಗಳಿಲ್ಲ. ಬದಲಾವಣೆಯಿಲ್ಲ. ಬ್ರಹ್ಮಾನಂದವನ್ನು ಕೊಡತಕ್ಕವುಗಳೂ ಶಾಶ್ವತಗಳೂ ವೇದಪೂರ್ಣಗಳೂ, ಭಕ್ತಿರಸದಿಂದ ವ್ಯಾಪ್ತಗಳೂ, ಆಗಿರುವುವು ಈ ಲೋಕಗಳೆಲ್ಲವೂ ಪ್ರಪಂಚಕ್ಕಿಂತ ಹೊರಗಿರುವುವು.

‡ ದ್ವೋಽಥೋತ್ಯ ವಿವಿಧಾನ್ ವೇದಾನ್ ಗೃಹಸ್ಥಾಶ್ರಮ ಮಾವ್ರಜೇತ್। ಉಪಕುರ್ವಾಣಕೋ ಜ್ಞೇಯೋ ನೈಷ್ಠಿಕೋ ಬ್ರಹ್ಮತತ್ಪರಃ ॥ ವೇದಾಧ್ಯಯನವನ್ನು ಮಾಡಿದಮೇಲೆ ಮದುವೆಯಾಗುವವನು ಉಪಕುರ್ವಾಣನೆಂತಲೂ, ಮದುವೆಯಾಗದೆ ಬ್ರಹ್ಮನಿಷ್ಠನಾಗಿರುವವನು ನೈಷ್ಠಿಕನೆಂತಲೂ, ಬ್ರಹ್ಮಚಾರಿಗಳಲ್ಲಿ ಎರಡುವಿಧ. (ಕೂರ್ಮ ಪುರಾಣ)

§ ಸೃತೀ ವಿಚಕ್ರಮೇ ವಿಷ್ವಙ್ ಸಾಶನಾನಶನೇ ಉಭೇ । ಯದವಿದ್ಯಾಚ ವಿದ್ಯಾಚ ಪುರುಷ ಸ್ತೂಭಯಾಶ್ರಯಃ ॥೨೧॥* ಯಸ್ಮಾ ದಂಡಂವಿರಾಟ್

ದ್ವ್ರತಃ-ಬ್ರಹ್ಮಚರ್ಯರಹಿತನಾದ,ಗೃಹಮೇಧಃ-ಗೃಹಸ್ಥನು,ಅಂತಃ-ಒಳಗಡೆಯಲ್ಲಿಯೇ,ಆಸೀತ್-ಇದ್ದನು (ವಿ+ಸು+ಅಂಚ್) ವಿಷ್ವಙ್, ವಿ-ಹಲವುರೂಪಗಳನ್ನು, ಸು-ಚೆನ್ನಾಗಿ, ಅಂಚ್ - ಪಡೆಯ ತಕ್ಕಜೀವನು, ಸಾಶನಾನಶನೇ. ಸಾಶನ, ಫಲಾಭಿಸಂಧಿಯುಳ್ಳ, ಅನಶನೇ - ಫಲಾಪೇಕ್ಷೆಯಿಲ್ಲದ ಉಭೆ-ಎರಡು, ಸೃತೀ - ಮಾರ್ಗಗಳಲ್ಲಿಯೂ, ವಿಚಕ್ರಮೇ, ಸಂಚರಿಸುವನು, ಯತ್ - ಯಾವ ಕಾರಣದಿಂದ ಪುರುಷಃ-ಪುರುಷನು, ಅವಿದ್ಯಾಚ - ಕರ್ಮರೂಪವು, ವಿದ್ಯಾಚ-ಜ್ಞಾನರೂಪವೂ ಆದ, ಉಭಯಾತ್ಮಕಃ-ಎರಡರ ಸ್ವರೂಪನೂ ಆಗಿರುವನೋ ॥ ೨೧ ॥ ಯಸ್ಮಾತ್-ಯಾರದೆಸೆಯಿಂದ, ಅಂಡಂ-ಬ್ರಹ್ಮಾಂಡವು ಜಜ್ಞೇ-ಹುಟ್ಟಿತೋ, ಭೂತೇಂ...ಕಃ. ಭೂತ-ಪಂಚಭೂತಗಳು, ಇಂದ್ರಿಯ - ಏಕಾದಶೇಂದ್ರಿಯಗಳು ಗುಣ - ಸತ್ವರಜಸ್ತಮಸ್ಸುಗಳು, ಇವುಗಳ,।ಆತ್ಮಕಃ - ಸ್ವರೂಪನಾದ, ವಿರಾಟ್-ವಿರಾಟ್ಪುರುಷನು-

ಲೋಕಗಳ ಒಳಗಿರುವುದು ॥ ೨೦ ॥ ಹಲವುವಿಧಗಳಾದ ರೂಪಗಳನ್ನು ಪಡೆದು ಅವಿದ್ಯೆ, ಅವಿದ್ಯೆಯೆಂಬೆರಡಕ್ಕೂ ಆಶ್ರಯನಾದ, ಆ ಮಹಾ ಪುರುಷನು ಕ್ಷೇತ್ರಜ್ಞನಾದ ಜೀವನಿಗಾಗಿ ಕರ್ಮ ರೂಪವಾದ ಅವಿದ್ಯೆಯೆನಿಸಿ, ಸ್ವರ್ಗಾದಿ ಫಲಗಳಿಗೆ ಸಾಧನವಾದ ದಕ್ಷಿಣಾಯನ ಅಥವಾ ಧೂಮಾದಿಮಾರ್ಗವೆಂತಲೂ, ಸಾಧನರೂಪವಾದ ಉಪಾಸನಾವಿದ್ಯೆ ಯೆನಿಸಿ, ಪುನರಾವೃತ್ತಿಯಿಲ್ಲದ ಮೋಕ್ಷ ಸಾಮ್ರಾಜ್ಯಕ್ಕೆ ಹೇತುವೆನಿಸಿದ ಉತ್ತರಾಯಣ ಅಥವಾ ಅರ್ಚಿರಾದಿಮಾರ್ಗವೆಂತಲೂ, ಹೆಸರುಗೊಂಡ ಎರಡು ದಾರಿಗಳನ್ನು ಕಲ್ಪಿಸಿದನು. ಆದುದರಿಂದ ಒಬ್ಬ ಪುರುಷನೇ ಅವಸ್ಥಾಭೇದದಿಂದ ಅಧಿಕಾರ ಭೇದವನ್ನು ಪಡೆಯುವನು ॥ ೨೧ ॥ ಯಾವ ಪರಮಾತ್ಮನಿಂದ ಬ್ರಹ್ಮಾಂಡವೆಂಬುದು ಜನಿಸಿತೋ,ಅದರಲ್ಲಿಯೇ ಪೃಥಿವ್ಯಾದಿ ಭೂತಗಳೂ,ಜ್ಞಾನೇಂದ್ರಿಯ ಕರ್ಮೇಂದ್ರಿಯಮನಸ್ಸುಗಳೂ,ಸತ್ವಾದಿಗುಣಗಳೂ,ಇವುಗಳ ಸ್ವರೂಪನಾದ ವಿರಾಟ್ಪುರುಷನೂ ಜನಿಸಿದವನಾಗಿ, ಮಂಡಲಮಧ್ಯವರ್ತಿಯಾದ ಸೂರ್ಯನು, ಕಿರಣಾವಳಿಯಿಂದ ಮಂಡಲ

§ ತತೋ ವಿಷ್ವಙ್ ವ್ಯಕ್ರಾಮ ತ್ಸಾಶನಾನಶನೇ ಅಭಿ ॥ ಮಾಯೆಗೊಳಗಾದ ಆ ಪಾದಾಂಶವು ಆಲೋಚಿಸಿ,ಚೇತನ, ಅಚೇತನವೆಂದೆರಡು ಬಗೆಯಾಗುವಂತೆ ಹಲವು ರೂಪಗಳಿಂದ ವ್ಯಾಪಿಸಿತು,

* ತಸ್ಮಾ ದ್ವಿರಾಡ ಜಾಯತ ವಿರಾಜೋ ಅಧಿಪುರುಷಃ । ಸಜಾತೋ ಅತ್ಯರಿಚ್ಯತ ಪಶ್ಚಾದ್ಭೂಮಿ ಮಥೋ ಪುರಃ ॥ ಆ ಪಾದಾಂಶವು ಹಲವು ರೂಪಗಳನ್ನು ಪಡೆದುದೆಂತೆಂದರೆ : ಪರಮಾತ್ಮನಿಂದ ಬ್ರಹ್ಮಾಂಡರೂಪನಾದ ವಿರಾಟ್ಪುರುಷನುದಿಸಿದನು. ಆ ಬ್ರಹ್ಮಾಂಡಶರೀರದಿಂದ ಮತ್ತೊಬ್ಬ ಪುರುಷನು ಹುಟ್ಟಿದನು. ಈತನೇ ವೇದಾಂತವೇದ್ಯನಾದ ಪರಮಾತ್ಮನು. ಆತನು ತನ್ನ ಮಾಯೆಯಿಂದ ಜಗದ್ರೂಪನಾದ ವಿರಾಜನನ್ನು ಸೃಜಿಸಿ, ಆ ವಿರಾಡ್ದೇಹದಲ್ಲಿ ಜೀವರೂಪದಿಂದ ಪ್ರವೇಶಿಸಿ, ಬ್ರಹ್ಮಾಂಡಾಭಿಮಾನಿಯಾಗಿ ದೇವತಾರೂಪನಾದ ಜೀವನೆನಿಸಿದನು. ಆವಿರಾಟ್ಪುರುಷನು ದೇವ,ಮಾನವ ತಿರ್ಯಗಾದಿ ರೂಪವನ್ನು ಪಡೆದನು. ಬಳಿಕ ಭೂಮಿಯನ್ನೂ ಅನಂತರದಲ್ಲಿ ಆ ಜೀವರಿಗೆ ಭೋಗಾಧಿಷ್ಠಾನಗಳಾದ ಶರೀರಗಳನ್ನೂ ಸೃಜಿಸಿದನು.

ಜಜ್ಞೇ ಭೂತೇಂದ್ರಿಯ ಗುಣಾತ್ಮಕಃ । ತದ್ದ್ರವ್ಯ ಮತ್ಯಗಾ ದ್ವಿಶ್ವಂ
ಗೋಭಿ ಸ್ಸೂರ್ಯ ಇವಾತಪನ್ ॥ ೨೨ ॥ *ಯದಾಸ್ಯ ನಾಭ್ಯಾ ನ್ನಳಿನಾ

ತತ್ರ-ಅಲ್ಲಿಯೇ, ಜಜ್ಞೇ - ಹುಟ್ಟಿದನು, ಸಃ-ಆ ಈಶ್ವರನು, ಗೋಭಿಃ-ಕಿರಣಗಳಿಂದ, ಸೂರ್ಯಃಇವ ಸೂರ್ಯನಂತೆ, ಆತಪನ್-ಪ್ರಕಾಶಗೊಳಿಸುವವನಾಗಿ, ತತ್-ಆ, ವಿಶ್ವಂ-ವಿರಾಡ್ದೇಹವನ್ನೂ. ದ್ರವ್ಯಂ-

ವನ್ನೂ ಹೊರಗಡೆಯನ್ನೂ ಸಹ ಬೆಳಗಿಸುವಂತೆ ಆ ವಿರಾಡ್ದೇಹವನ್ನೂ, ಬ್ರಹ್ಮಾಂಡವನ್ನೂ ಕೂಡ ಪ್ರಕಾಶಗೊಳಿಸಿ, ಬೇರೆಯಾದನು. ಈತನೇ ಈಶ್ವರನು. ಆದುದರಿಂದ ಬ್ರಹ್ಮಾಂಡದಲ್ಲಿರುವ ಜೀವರು ಕರ್ಮಾನುಗುಣವಾಗಿ ವಿಚಿತ್ರಫಲಗಳನ್ನು ಪಡೆದರೂ,

* (೧) ಯತ್ಪುರುಷೇಣ ಹವಿಷಾ ದೇವಾ ಯಜ್ಞ ಮತನ್ವತ। ವಸಂತೋಽಸ್ಯಾಸೀ ದಾಜ್ಯಂ ಗ್ರೀಷ್ಮ ಇಧ್ಮಶ್ಶರ ದ್ಧವಿಃ ॥ ಇಂತು ಶರೀರಾದಿಗಳು ಉಂಟಾದಬಳಿಕ ದೇವತೆಗಳು ಮುಂದಣ ಸೃಷ್ಟಿ ಸಾಮರ್ಥ್ಯವನ್ನು ಪಡೆಯುವುದಕ್ಕಾಗಿ ಯಜ್ಞವನ್ನುಮಾಡಬೇಕೆಂದು ಸಂಕಲ್ಪಿಸಿ, ಪರಮಾತ್ಮನಿಗಿಂತ ಬೇರೆ ಯಾವ ಯಜ್ಞಸಾಮಗ್ರಿಗಳೂ ಇಲ್ಲದಕಾರಣ, ಆಭಗವಂತನನ್ನೇ, ಹವಿಸ್ಸನ್ನಾಗಿ ಭಾವಿಸಿ, ಮಾನಸ ಯಜ್ಞವನ್ನು ಮಾಡಲಾರಂಭಿಸಿದರು. ಆ ಯಜ್ಞಕ್ಕೆ ವಸಂತಕಾಲವು ಆಜ್ಯವಾಗಿಯೂ, ಗ್ರೀಷ್ಮಕಾಲವು ಇಧ್ಮವಾಗಿಯೂ, ಶರತ್ಕಾಲವು ಹವಿಸ್ಸಾಗಿಯೂ, ಸಂಕಲ್ಪಿಸಲ್ಪಟ್ಟವು. ಇದರಿಂದ ಮೊದಲು ಪುರುಷನು ಮಾತ್ರವೇ ಇದ್ದು ಬಳಿಕ ವಸಂತಾದಿ ಸಾಮಗ್ರಿಗಳುಂಟಾದುವೆಂದು ತಿಳಿಯಬೇಕು.

(೨) ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತ ಮಗ್ರತಃ।ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ ॥ ಬಳಿಕ ಎಲ್ಲರ ಸೃಷ್ಟಿಗೂ ಮೊದಲುಹುಟ್ಟಿದ ಆವಿರಾಟ್ಪುರುಷನನ್ನೇಮಾನಸ ಯಜ್ಞದಲ್ಲಿ ಪಶುವನ್ನಾಗಿಯೂ, ಯೂಪಸ್ತಂಭದಲ್ಲಿ ಕಟ್ಟಲ್ಪಟ್ಟವನನ್ನಾಗಿಯೂ ಭಾವಿಸಿ, ಪ್ರೋಕ್ಷಿಸಿದರು. ದೇವತೆಗಳು, ಮುಂದೆ ಸೃಷ್ಟಿಸುವುದಕ್ಕೆ ಸಮರ್ಥರಾದ ಬ್ರಹ್ಮಾದಿಗಳು, ಮಂತ್ರದ್ರಷ್ಟೃಗಳಾದ ಋಷಿಗಳು, ಇವರೆಲ್ಲರೂ ಆಪುರುಷರೂಪವಾದ ಪಶುವಿನಿಂದ ಮಾನಸಯಜ್ಞವನ್ನು ಮಾಡಿದರು.

(೩) ತಸ್ಮಾದ್ಯಜ್ಞಾ ತ್ಸರ್ವಹುತಃ ಸಂಭೃತಂ ಪೃಷದಾಜ್ಯಂ । ಪಶೂಂ ಸ್ತಾಂ ಶ್ಚಕ್ರೇ ವಾಯವ್ಯಾ ನಾರಣ್ಯಾನ್ ಗ್ರಾಮ್ಯಾಂ ಶ್ಚಯೇ ॥ ಸರ್ವಾತ್ಮಕನಾದ ಪರಮಾತ್ಮನೇ ಹವಿಸ್ಸಾಗಿರುವ ಆ ಮಾನಸ ಯಜ್ಞದಿಂದ, ಮೊಸರಿಂದಕೂಡಿದ ಹಾಲುಮೊದಲಾದ ಭೋಗ್ಯವಸ್ತುಗಳೂ, ವಾಯುದೇವತಾಕಗಳಾದ ಪಶುಗಳೂ, ಕಾಡುಮೃಗಗಳಾದ ಹುಲಿಮೊದಲಾದವುಗಳೂ, ಗ್ರಾಮ್ಯಗಳಾದ ಆಕಳು ಮೊದಲಾದವುಗಳೂಸಹ ಉಂಟಾದುವು.

(೪) ತಸ್ಮಾದ್ಯಜ್ಞಾ ತ್ಸರ್ವಹುತ ಋಚ ಸ್ಸಾಮಾನಿ ಜಜ್ಞಿರೇ। ಛಂದಾಂಸಿ ಜಜ್ಞಿರೇ ತಸ್ಮಾದ್ಯಜು ಸ್ತಸ್ಮಾ ದಜಾಯತ ॥ ಆ ಯಜ್ಞದಿಂದ ಋಕ್ಕುಗಳೂ, ಸಾಮಗಳೂ, ಗಾಯತ್ರಿ ಮೊದಲಾದ ಛಂದಸ್ಸುಗಳೂ, ಯಜುಸ್ಸೂ ಇವುಗಳುಂಟಾದುವು.

(೫) ತಸ್ಮಾ ದಶ್ವಾ ಅಜಾಯಂತ । ಯೇ ಕೇಚೋ ಭಯಾದತಃ । ಗಾವೋಹ ಜಜ್ಞಿರೇ ತಸ್ಮಾ ತ್ತಸ್ಮಾಜ್ಜಾತಾ ಅಜಾವಯಃ॥ ಬಳಿಕ ಕುದುರೆಗಳೂ ಬಾಯಿಯಲ್ಲಿ ಕೆಳಗಡೆ ಮೇಲ್ಗಡೆಗಳೆರಡರಲ್ಲಿಯೂ ಹಲ್ಲುಗಳಿರುವ ಕತ್ತೆ, ಹೇಸರಕತ್ತೆಗಳೂ, ಎತ್ತುಗಳೂ, ಮೇಕೆಗಳೂ, ಕುರಿಗಳೂ, ಇವುಗಳುಂಟಾದುವು.

ದಹ ಮಾಸಂ ಮಹಾತ್ಮನಃ । ನಾವಿದಂ ಯಜ್ಞಸಂಭಾರಾನ್ ಪುರುಷಾ
ವಯವಾ ದೃತೇ ॥ ೨೩ ॥ ತೇಷು ಯಜ್ಞಸ್ಯ ಪಶವ *ಸ್ಸವನ ಸ್ಪತಯಃ
ಕುಶಾಃ । ಇದಂ ಚ ದೇವಯಜನಂ †ಕಾಲಶ್ಚೋರು ಗುಣಾನ್ವಿತಃ ॥೨೪॥
‡ವಸ್ತೂನ್ಯೋಷಧಯ ಸ್ಸ್ನೇಹೋ ರಸಲೋಹಮೃದೋ ಜಲಂ।ಋಚೋ

ಬ್ರಹ್ಮಾಂಡವನ್ನೂ, ಅತ್ಯಗಾತ್-ಅತಿಕ್ರಮಿಸಿದನು ॥ ೨೨ ॥

ಅಹಂ-ನಾನು, ಯದಾ-ಯಾವಾಗ, ಮಹಾತ್ಮನಃ-ಮಹಾತ್ಮನಾದ, ಅಸ್ಯ-ಈ ವಿರಾಟ್ಪುರುಷನ, ನಾಭ್ಯಾತ್-ನಾಭಿಯಲ್ಲಿನ, ನಳಿನಾತ್-ಕಮಲದಿಂದ, ಆಸಂ-ಹುಟ್ಟಿದೆನೋ, ತದಾ-ಆಗ,ಪುರುಷಾವಯವಾ ದೃತೇ-ಆ ಭಗವಂತನ ಅವಯವಗಳು ಹೊರತು, ಯಜ್ಞಸಂಭಾರಾನ್ - ಯಜ್ಞಸಾಮಗ್ರಿಗಳನ್ನು, ನಾವಿದಂ-ತಿಳಿಯಲಿಲ್ಲ ॥ ೨೩ ॥ ತೇಷು-ಆ ಅಂಗಗಳಲ್ಲಿ, ಅಥವಾ ಸಂಭಾರಗಳಲ್ಲಿ, ಯಜ್ಞಸ್ಯ-ಯಜ್ಞದ, ಪಶವಃ-ಪಶುಗಳು, ವನಸ್ಪತಯಃ-ಯೂಪಸ್ತಂಭಗಳು, ಕುಶಾಃ-ಧರ್ಭೆಗಳು, ಇದಂ ದೇವಯಜನಂ-ಈ ಯಜ್ಞಭೂಮಿಯು, ಉರುಗುಣಾನ್ವಿತಃ - ಅಧಿಕ ಗುಣಗಳಿಂದೊಡಗೂಡಿದ, ಕಾಲಶ್ಚ - ವಸಂತಾದಿ ಕಾಲವು ॥ ೨೪ ॥ ವಸ್ತೂನಿ-ಯಜ್ಞಪಾತ್ರೆಗಳೂ, ಓಷಧಯಃ-ಧಾನ್ಯಗಳೂ, ಸ್ನೇಹಃ-ತುಪ್ಪ ಮೊದಲಾದುವು, ರಸ...ದಃ, ರಸ-ಮಧುರಾದಿ ರಸಗಳು, ಲೋಹ - ಸುವರ್ಣಾದಿಗಳು, ಮೃದಃ-ಮೃತ್ತು, ಜಲಂ-ನೀರು, ಋಚಃ - ಛಂದೋರೂಪವಾದ ಋಗ್ವೇದವು, ಯಜೂಂಷಿ-ಯಜುರ್ವೇದವು, ಸಾಮಾನಿ-

ಕಾರಣನೆನಿಸಿದ ಈಶ್ವರನು ಇದಕ್ಕೊಳಪಡುವವನಲ್ಲ. ॥೨೨॥ ಆ ವಿರಾಡಂತರ್ಯಾಮಿಯಾದ ಪುರುಷನ ನಾಭೀ ಕಮಲದಿಂದ ನಾನು ಹುಟ್ಟಿದಾಗ ಆಭಗವಂತನ ಅವಯವಗಳು ಹೊರತು ಮತ್ತಾವ ಯಜ್ಞ ಸಾಮಗ್ರಿಗಳನ್ನೂ ಕಾಣಲಿಲ್ಲ. ॥ ೨೩ ॥ ಆಗ ನಾನು ಯಜ್ಞಕ್ಕೆ ಬೇಕಾದ ಪಶುಗಳನ್ನೂ, ಯೂಪಸ್ತಂಭಗಳನ್ನೂ, ದರ್ಭೆಗಳನ್ನೂ, ಪವಿತ್ರವಾದ ಯಜ್ಞಭೂಮಿಯನ್ನೂ,ಉತ್ತಮ ಗುಣಗಳಿಂದ ಕೂಡಿದ ವಸಂತಾದಿ ಕಾಲವನ್ನೂ, ಯಜ್ಞಪಾತ್ರೆಗಳನ್ನೂ, ಭತ್ತಮೊದಲಾದ ಧಾನ್ಯಗಳನ್ನೂ, ತುಪ್ಪ ಮೊದಲಾದುವುಗಳನ್ನೂ, ಮಧುರಾಮ್ಲಾದಿ ರಸಗಳನ್ನೂ, ಸುವರ್ಣಾದಿ ಲೋಹಗಳನ್ನೂ, ಮೃತ್ತಿಕೆಯನ್ನೂ, ಜಲವನ್ನೂ, ಪಾದವ್ಯವಸ್ಥೆಯುಳ್ಳ ಋಗ್ವೇದವನ್ನೂ, ವಾಕ್ಯರೂಪವಾದ ಯಜುರ್ವೇದವನ್ನೂ, ಗಾನಾತ್ಮಕವಾದ ಸಾಮವೇದವನ್ನೂ, ದರ್ಶಪೂರ್ಣಮಾಸಗಳೆಂಬ ಕರ್ಮಗಳನ್ನೂ, ಜ್ಯೋತಿಷ್ಟೋಮಾದಿನಾಮಗಳನ್ನೂ, ಸ್ವಾಹಾಕಾರಾದಿಗಳನ್ನೂ, ದಕ್ಷಿಣೆಗಳನ್ನೂ, ನಿಯಮಗಳನ್ನೂ, ದೇವತೆಗಳ ಉದ್ದೇಶ್ಯಕ್ರಮವನ್ನೂ,

* ಯಜ್ಞದಲ್ಲಿ ಪಶುವನ್ನು ಬಿಗಿಯುವ ಸ್ತಂಭಕ್ಕೆ ಯೂಪವೆಂದು ಹೆಸರು. ಇದಕ್ಕೆ ಉಪಯೋಗಿಸುವ ಮರಗಳು--ಕಗ್ಗಲಿ, ಅಶ್ವತ್ಥ, ಅತ್ತಿ, ಮುತ್ತುಗ ಮೊದಲಾದುವು

† (೧) ಶ್ರು। ವಸಂತೇ ವಸಂತೇ ಜ್ಯೋತಿಷಾ ಯಜೇತ । ವಸಂತಕಾಲದಲ್ಲಿ ಜ್ಯೋತಿಷ್ಟೋಮವನ್ನು ಮಾಡಬೇಕು. ‡ (೨)ಸ್ಫ್ಯ, ಕಪಾಲ, ಅಗ್ನಿಹೋತ್ರಹವಣಿ, ಶೂರ್ಪ, ಕೃಷ್ಣಾಜಿನ, ಶಮ್ಯ, ಉಲೂಖಲ; ಮೊದಲಾದಪಾತ್ರೆಗಳು.

ಯಜೂಂಷಿ ಸಾಮಾನಿ *ಚಾತುರ್ಹೋತ್ರಂಚ ಸತ್ತಮ ॥ ೨೫ ॥ †ನಾಮ
ಧೇಯಾನಿ ಮಂತ್ರಾಶ್ಚ ದಕ್ಷಿಣಾಶ್ಚ ವ್ರತಾನಿಚ । ದೇವತಾನುಕ್ರಮಃ ಕಲ್ಪಂ
ಸಂಕಲ್ಪ ಸ್ತಂತ್ರ ಮೇವಚ ॥ ೨೬ ॥ ಗತಯೋ ಮತಯಶ್ಚೈವ ಪ್ರಾಯ
ಶ್ಚಿತ್ತಂ ‡ಸಮರ್ಪಣಂ । ಪುರುಷಾವಯವೈ ರೇತೇ ಸಂಭಾರಾಸ್ಸಂಭೃತಾ
ಮಯಾ॥೨೭॥ಇತಿ ಸಂಭೃತ ಸಂಭಾರಃ ಪುರುಷಾವಯವೈ ರಹಂ।§ತಮೇವ

ಗಾನರೂಪವಾದ ಸಾಮವೇದವು, ಚಾತುರ್ಹೋತ್ರಂ - ದರ್ಶಪೂರ್ಣಮಾಸಾದಿಗಳು, ಹೇಸತ್ತಮ-ಎಲೈ ಸಜ್ಜನಶ್ರೇಷ್ಠನೆ? ॥ ೨೫ ॥ ನಾಮಧೇಯಾನಿ-ಜ್ಯೋತಿಷ್ಟೋಮಾದಿ ನಾಮಗಳು, ಮಂತ್ರಾಶ್ಚ-ಸ್ವಾಹಾಕಾರಾದಿಗಳು, ದಕ್ಷಿಣಾಶ್ಚ-ಉತ್ತಮವಾದ ದಕ್ಷಿಣಾದ್ರವ್ಯವು, ವ್ರತಾನಿಚ-ನಿಯಮಗಳು, ದೇವತಾನುಕ್ರಮಃ-ದೇವತೆಗಳ ಉದ್ದೇಶ್ಯಕ್ರಮವು, ಕಲ್ಪಂ-ವಿಧಿಯನ್ನು ಹೇಳುವ ಕಲ್ಪಸೂತ್ರಾದಿಗಳು, ಸಂಕಲ್ಪಃ - ಸಂಕಲ್ಪವು, ತಂತ್ರಮೇವಚ - ಬಹಳ ಉಪಕಾರಕವಾದ ಕರ್ಮವನ್ನುಒಂದೇ ಆವೃತ್ತಿ ಮಾಡುವುದು ॥೨೬॥ ಗತಯಃ-ಸ್ವರ್ಗಾದಿ ಫಲಗಳು, ಮತಯಶ್ಚೈವ-ದೇವತಾಧ್ಯಾನಾದಿಗಳು, ಪ್ರಾಯಶ್ಚಿತ್ತಂ-ಕರ್ಮಲೋಪಕ್ಕಾಗಿ ಮಾಡತಕ್ಕ ಪ್ರಾಯಶ್ಚಿತ್ತವು, ಸಮರ್ಪಣಂ - ಭಗವಂತನಿಗರ್ಪಿಸುವುದು, ಏತೇ-ಈ, ಸಂಭಾರಾಃ-ಸಾಮಗ್ರಿಗಳು, ಮಯಾ-ನನ್ನಿಂದ, ಪುರುಷಾವಯವೈರೇವ-ಆವೈರಾಜನ ಅವ

ಕಲ್ಪಗಳನ್ನೂ, "ಯಜ್ಞವನ್ನುಮಾಡುತ್ತೇನೆ" ಎಂಬ ಸಂಕಲ್ಪವನ್ನೂ, ತಂತ್ರವನ್ನೂ, ಸ್ವರ್ಗಾದಿಫಲಗಳನ್ನೂ, ದೇವತಾಧ್ಯಾನಗಳನ್ನೂ, ಪ್ರಾಯಶ್ಚಿತ್ತವನ್ನೂ, ಕರ್ಮ ಸಮರ್ಪಣವನ್ನೂ ಸಹ, ಈ ಎಲ್ಲಸಂಭಾರಗಳನ್ನೂ ಆ ವಿರಾಟ್ಪುರುಷನ ಅವಯವ ಗಳಿಂದಲೇ ಕಲ್ಪಿಸಿಕೊಂಡೆನು ॥ ೨೪-೨೭ ॥ ಇಂತು ನಾನು ಆಭಗವಂತನ ಅವಯವ ಗಳಿಂದಲೇ ಯಜ್ಞಕ್ಕೆಬೇಕಾದ ಸಲಕರಣೆಗಳೆಲ್ಲವನ್ನೂ ಸಂಪಾದಿಸಿದವನಾಗಿ, ಲೋ

* ಬ್ರಹ್ಮ, ಹೋತೃ ಅಧ್ವರ್ಯು, ಆಗ್ನೀಧ್ರರೆಂಬ ನಾಲ್ವರು ಋತ್ವಿಜರು ಸೇರಿ ಮಾಡುವ ಕರ್ಮ.

† ದರ್ಶ, ಪೂರ್ಣಮಾಸ, ಅಗ್ನಿಹೋತ್ರ ಜ್ಯೋತಿಷ್ಟೋಮ, ಉಕ್ಥ್ಯ, ಷೋಡಶಿ, ಅತಿರಾತ್ರ, ಅಪ್ತೋರ್ಯಾಮ, ವಾಜಪೇಯ, ರಾಜಸೂಯ, ಅಶ್ವಮೇಧ, ಮೊದಲಾದುವು ಯಜ್ಞಗಳ ಹೆಸರುಗಳು.

‡ ಬ್ರಹ್ಮಾರ್ಪಣಂ ಬ್ರಹ್ಮಹವಿ ರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಂ।ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮ ಕರ್ಮ ಸಮಾಧಿನಾ ॥ ಕರ್ತೃ- ಕರ್ಮ ಕ್ರಿಯೆ ಮೊದಲಾದುವೆಲ್ಲವೂ ಬ್ರಹ್ಮವೆಂದುಭಾವವು

§ ಯಜ್ಞೇನ ಯಜ್ಞಮಯಜಂತ ದೇವಾ ಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್, । ತೇಹ ನಾಕಂ ಮಹಿಮಾನ ಸ್ಸಚಂತ ಯತ್ರ ಪೂರ್ವೇ ಸಾಧ್ಯಾ ಸ್ಸಂತಿ ದೇವಾಃ ॥ ಈ ಪ್ರಕಾರವಾಗಿ ಬ್ರಹ್ಮಾದಿ ದೇವತೆಗಳು ಮಾನಸ ಸಂಕಲ್ಪದಿಂದ ಯಜ್ಞರೂಪನಾದ ಭಗವಂತನನ್ನು ಆರಾಧಿಸಿದರು. ಆ ಯಜ್ಞದಿಂದ ಈ ಪ್ರಪಂಚ ಧರ್ಮಗಳೆಲ್ಲವೂ ಉಂಟಾದುವು,ಎಂಬುದೇ ಪುರುಷ ಸೂಕ್ತದ ಮುಖ್ಯತಾತ್ಪರ್ಯವು. ಪೂರ್ವದಲ್ಲಿ ಇಂತಹ ವಿರಾಡುಪಾಸನೆಯನ್ನು ಮಾಡಿದ ದೇವತೆಗಳು ಆ ವಿರಾಜನ ಲೋಕವನ್ನು ಪಡೆದಿರುವರಾದುದರಿಂದ ವಿರಾಡುಪಾಸನೆಯನ್ನು ಮಾಡುವ ಮಹಾತ್ಮರಿಗೆ ಆ ವಿರಾಡ್ರೂಪ್ರಾಪ್ತಿರೂಪವಾದ ಪುಣ್ಯಲೋಕವನ್ನು ಪಡೆಯುವುದೇ ಫಲವು.

ಪುರುಷಂ ಯಜ್ಞಂ ತೇನೈವಾಯಜ ಮೀಶ್ವರಂ ॥ ೨೮ ॥ ತತಸ್ತೇ
ಭ್ರಾತರ ಇಮೇ ಪ್ರಜಾನಾಂ ಪತಯೋ ನವ । ಅಯಜನ್ ವ್ಯಕ್ತ ಮವ್ಯ
ಕ್ತಂ ಪುರುಷಂ ಸುಸಮಾಹಿತಾಃ ॥ ೨೯ ॥ ತತಶ್ಚ ಮನವಃ ಕಾಲ ಈ
ಜಿರೇ ಮುನಯೋ ಪರೇ ! ಪಿತರೋ ವಿಬುಧಾ ದೈತ್ಯಾ ಮನುಷ್ಯಾಃ ಕ್ರ
ತುಭಿ ರ್ವಿಭುಂ ॥ ೩೦ ॥ ನಾರಾಯಣೇ ಭಗವತಿ ತದಿದಂ ವಿಶ್ವ ಮಾಹಿತಂ।
ಗೃಹೀತಮಾಯೋ ರುಗುಣ ಸ್ಸರ್ಗಾದಾ ವಗುಣ ಸ್ಸ್ವತಃ ॥೩೧॥ ಸೃಜಾಮಿ

ಯುವಗಳಿಂದಲೇ, ಸಂಭೃತಾಃ - ಸಂಪಾದಿಸಲ್ಪಟ್ಟವು ॥ ೨೭ ॥ ಇತಿ-ಇಂತು, ಪುರುಷಾವಯವೈಃ-ಭಗ ವಂತನ ಅವಯುವಗಳಿಂದ, ಸಂಭೃತ ಸಂಭಾರಃ - ಸಾಮಗ್ರಿಗಳನ್ನೊದಗಿಸಿಕೊಂಡ, ಅಹಂ - ನಾನು, ಈಶ್ವರಂ-ಜಗನ್ನಾಯಕನಾದ, ಯಜ್ಞಂ-ಯಜ್ಞಸ್ವರೂಪನಾದ, ತಮೇವ ಪುರುಷಂ-ಆ ಭಗವಂತನನ್ನೇ, ತೇನೈವ-ಆ ಭಗವಂತನಿಂದಲೇ, ಅಯಜಂ-ಪೂಜಿಸಿದೆನು ॥ ೨೮ ॥

ತತಃ-ಆಬಳಿಕ, ತೇ-ನಿನ್ನ, ಇಮೇ ಭ್ರಾತರಃ-ಒಡಹುಟ್ಟುಗಳಾದ ಸನಕಾದಿಗಳು, ಪ್ರಜಾನಾಂ-ಪ್ರಜೆಗಳಿಗೆ, ಪತಯಃ-ಒಡೆಯರಾದ, ನವ-ಒಂಬತ್ತುಮಂದಿ ಪ್ರಜೇಶ್ವರರು, ಸುಸಮಾಹಿತಾಃ-ಸಾವಧಾನರಾಗಿ, ವ್ಯಕ್ತಂ-ಇಂದ್ರಾದಿರೂಪದಿಂದ ವ್ಯಕ್ತನಾಗಿಯೂ, ಅವ್ಯಕ್ತಂ - ಸ್ವಭಾವದಿಂದ ಅವ್ಯಕ್ತನಾಗಿಯೂ, ಇರುವ, ಪುರುಷಂ-ಆ ಭಗವಂತನನ್ನು, ಅಯಜನ್-ಆರಾಧಿಸಿದರು ॥ ೨೯ ॥ ತತಃ - ಆಬಳಿಕ, ಮನವಃ-ಸ್ವಾಯಂಭುವ ಮನುಮೊದಲಾದವರು, ಅಪರೇ-ಇತರರಾದ, ಮುನಯಶ್ಚ-ಋಷಿಗಳೂ, ಪಿತರಃ-ಪಿತೃಗಳು, ವಿಬುಧಾಃ-ದೇವತೆಗಳು, ದೈತ್ಯಾಃ-ರಾಕ್ಷಸರು ಮನುಷ್ಯಾಃ-ಮನುಷ್ಯರು ಇವರು, ಕಾಲೇ-ತಂತಮ್ಮ ಕಾಲದಲ್ಲಿ, ಕ್ರತುಭಿಃ-ಯಜ್ಞಗಳಿಂದ, ವಿಭುಂ-ವ್ಯಾಪಕನಾದ ಭಗವಂತನನ್ನು, ಈಜಿರೇ - ಪೂಜಿಸಿದರು ॥ ೩೦ ॥ ಯತಃ - ಯಾವುದರಿಂದ, ಸ್ವತಃ-ತಾನಾಗಿ ಅಗುಣಃ-ನಿರ್ಗುಣನಾದರೂ, ಸರ್ಗಾದೌ-ಸೃಷ್ಟ್ಯಾದಿಯಲ್ಲಿ, ಗೃಹೀ...ಣಃ, ಗೃಹೀತ-ಹೊಂದಲ್ಪಟ್ಟ, ಮಾಯಾ - ಮಾಯೆಯ, ಉರು-ಬಹಳವಾದ, ಗುಣಃ-ಗುಣಗಳುಳ್ಳವನೋ, ತತ್-ಆದುದರಿಂದ,ಇದಂವಿಶ್ವಂ-ಈ ಜಗತ್ತೆಲ್ಲವೂ,ಭಗವತಿ-ಭಗ

ಕೇಶ್ವರನೂ, ಯಜ್ಞರೂಪನೂ, ಆದ ಆ ಭಗವಂತನಿಂದಲೇ ಆತನನ್ನು ಆರಾಧಿಸಿದೆನು ॥ ೨೮ ॥ ಅನಂತರದಲ್ಲಿ ನಿನ್ನ ಸಹೋದರರಾದ ಸನಕಾದಿಗಳೂ, ಕಶ್ಯಪ, ಅತ್ರಿ, ಭೃಗು, ಅಂಗಿರಸ್ಸು ಮೊದಲಾದ ನವಬ್ರಹ್ಮರೂ, ಸಾವಧಾನಮನಸ್ಕರಾಗಿ, ಇಂದ್ರಾದಿರೂಪದಿಂದ ವ್ಯಕ್ತನಾಗಿಯೂ, ಸ್ವಭಾವದಿಂದ ಅವ್ಯಕ್ತನಾಗಿಯೂ ಇರುವ ಆ ಪರಮಪುರುಷನನ್ನು ಪೂಜಿಸಿದರು ॥ ೨೯ ॥

ಆಬಳಿಕ ಸ್ವಾಯಂಭುವಮನುವೇ ಮೊದಲಾದ ಚತುರ್ದಶಮನುಗಳು,ಇತರ ಮಹರ್ಷಿಗಳು, ಪಿತೃದೇವತೆಗಳು, ದೇವತೆಗಳು, ರಾಕ್ಷಸರು, ಮನುಷ್ಯರು ಇವರೆಲ್ಲರೂ, ತಂತಮ್ಮ ಕಾಲದಲ್ಲಿ ಕ್ರಮವಾಗಿ, ಶ್ರೀವಾಸುದೇವಮೂರ್ತಿಯನ್ನು ಯಜ್ಞಗಳಿಂದ ಆರಾಧಿಸಿದರು ॥ ೩೦ ॥ ಅಯ್ಯಾ ನಾರದನೆ ! ಆ ಭಗವಂತನು ಸ್ವಭಾವವಾಗಿ ನಿರ್ಗುಣನಾಗಿದ್ದರೂ, ಸೃಷ್ಟಿಕಾಲದಲ್ಲಿ ಮಾಯಾಗುಣಗಳನ್ನು ವಹಿಸುವನಾದುದರಿಂದ, ಈ

ತನ್ನಿಯುಕ್ತೋಽಹಂ ಹರೋ ಹರತಿ ತದ್ವಶಃ । ವಿಶ್ವಂ ಪುರುಷರೂಪೇಣ ಪರಿಪಾತಿ ತ್ರಿಶಕ್ತಿ ಧೃತ್ ॥ ೩೨ ॥ ಇತಿ ತೇಽಭಿಹಿತಂ ತಾತ ! ಯದೇತ ದನು ಪೃಚ್ಛಸಿ । ನಾನ್ಯ ದ್ಭಗವತಃ ಕಿಂಚಿ ದ್ಭಾವ್ಯಂ ಸದ ಸದಾತ್ಮಕಂ॥ ನಭಾರತೀ ಮೇಽಂಗ ಮೃಷೋಪಲಕ್ಷ್ಯತೇ ನಕರ್ಹಿಚಿನ್ಮೇ ಮನಸೋ ಮೃಷಾಗತಿಃ । ನಮೇ ಹೃಷೀಕಾಣಿ ಪತಂತ್ಯ ಸತ್ಪಥೇ ಯನ್ಮೇ ಹೃದೌ ತ್ಕಂಠ್ಯವತಾ ಧೃತೋ ಹರಿಃ ॥ ೩೪ ॥ ಸೋಽಹಂ ಸಮಾಮ್ನಾಯಮಯ

ವಂತನಾದ, ನಾರಾಯಣೇ - ನಾರಾಯಣಮೂರ್ತಿಯಲ್ಲಿ, ಆಹಿತಂ-ಇಡಲ್ಪಟ್ಟಿತು ॥ ೩೧ ॥ ಅಹಂ-ನಾನು, ತನ್ನಿಯುಕ್ತಃ - ಆತನಿಂದ ಆಜ್ಞಾಪ್ತನಾಗಿ, ಸೃಜಾಮಿ - ಸೃಷ್ಟಿಸುತ್ತೇನೆ, ಹರಃ-ಶಿವನು, ತದ್ವಶಃ-ಆತನಿಗಧೀನನಾಗಿ, ಹರತಿ - ಸಂಹರಿಸುತ್ತಾನೆ, ತ್ರಿಶಕ್ತಿಧೃತ್ - ತ್ರಿಶಕ್ತಿ-ಮಾಯೆಯನ್ನು, ಧೃತ್-ಧರಿಸಿದವನಾಗಿ, ಪುರುಷರೂಪೇಣ - ವಿಷ್ಣುರೂಪದಿಂದ, ವಿಶ್ವಂ - ಜಗತ್ತನ್ನು, ಪರಿಪಾತಿ - ಸಲಹುತ್ತಾನೆ ॥ ೩೨ ॥ ಹೇತಾತ-ಎಲೈ ನಾರದನೆ ! ಯದೇತತ್ - ಯಾವುದನ್ನು, ಅನುಪೃಚ್ಛಸಿ-ಪ್ರಶ್ನೆ ಮಾಡುವೆಯೋ, ತತ್-ಅದು, ಇತಿ-ಹೀಗೆ, ತೇ-ನಿನಗೆ, ಅಭಿಹಿತಂ-ಹೇಳಲ್ಪಟ್ಟಿತು, ಸದಸದಾತ್ಮಕಂ-ಕಾರ್ಯಕಾರಣರೂಪವಾದ, ಭಾವ್ಯಂ-ಮುಂದಾಗುವ, ಕಿಂಚಿದಪಿ-ಕೊಂಚವೂ, ಭಗವತಃ-ಭಗವಂತನಿಗಿಂತ, ಅನ್ಯತ್-ಬೇರೆಯಾದುದು, ನ-ಅಲ್ಲ ॥ ೩೩ ॥

ಹೇಅಂಗ-ಎಲೈ ನಾರದನೆ! ಯತ್-ಯಾವಕಾರಣದಿಂದ, ಮೇ-ನನ್ನ, ಔತ್ಕಂಠ್ಯವತಾ-ಭಕ್ತ್ಯತಿಶಯವುಳ್ಳ, ಹೃದಾ-ಹೃದಯದಿಂದ, ಹರಿಃ-ಹರಿಯು ಧೃತಃ - ಧರಿಸಲ್ಪಟ್ಟನೋ, ತತ್ - ಆಕಾರಣದಿಂದ, ಮೇ-ನನ್ನ, ಭಾರತೀ-ವಾಕ್ಕು, ಮೃಷಾ-ಸುಳ್ಳಾಗಿ, ನೋಪಲಕ್ಷ್ಯತೆ-ಕಾಣಲ್ಪಡುವುದಿಲ್ಲ, ಮೇ - ನನ್ನ, ಮನಸಃ-ಮನಸ್ಸಿಗೆ, ಕರ್ಹಿಚಿತ್-ಯಾವಾಗಲೂ, ಮೃಷಾಗತಿಃ-ಅಸತ್ಯ ಸಂಚಾರವು, ನ-ಇಲ್ಲ, ಮೇ-ನನ್ನ, ಹೃಷೀಕಾಣಿ-ಇಂದ್ರಿಯಗಳು, ಅಸತ್ಪಥೇ-ದುರ್ಮಾರ್ಗದಲ್ಲಿ, ನಪತಂತಿ-ಬೀಳುವುದಿಲ್ಲ ॥ ೩೪ ॥

ಜಗತ್ತೆಲ್ಲವೂ ಆತನಲ್ಲಿಯೇ ನೆಲೆಗೊಂಡಿರುವುದು ॥ ೩೧ ॥ ನಾನು ಆತನಾಜ್ಞಾನುಸಾರವಾಗಿಯೇ ಈ ಜಗತ್ತನ್ನು ಸೃಷ್ಟಿಸುವೆನು. ರುದ್ರನೂ ಆತನ ಅಜ್ಞಾನುಸಾರವಾಗಿಯೇ ಜಗತ್ತನ್ನು ಸಂಹರಿಸುವನು. ಆ ಭಗವಂತನು ಮಾಯೆಯನ್ನು ಧರಿಸಿದವನಾಗಿ, ವಿಷ್ಣುರೂಪದಿಂದ ತಾನೇ ಜಗತ್ತನ್ನು ಸಂರಕ್ಷಿಸುವನು ॥೩೨॥ ಆದುದರಿಂದ ಅಯ್ಯಾ ನಾರದನೆ ! ನೀನು ನನ್ನನ್ನು ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರವನ್ನುಹೇಳಿದೆನು. ಇನ್ನು ಒಂದೇ ಮಾತಿನಿಂದ ಸಂಗ್ರಹವಾಗಿ ಉತ್ತರವನ್ನುಹೇಳುವೆನು ಕೇಳು, ಸ್ಥೂಲಸೂಕ್ಷ್ಮರೂಪವಾದ ಅಥವಾ ಕಾರ್ಯಕಾರಣರೂಪನಾದ ಈ ಜಗತ್ತಾಗಲಿ, ಹಿಂದಿದ್ದ ಜಗತ್ತಾಗಲಿ, ಮುಂದೆ ಉಂಟಾಗುವ ಜಗತ್ತಾಗಲಿ, ಯಾವುದೂ ಭಗವಂತನಿಗಿಂತ ಬೇರೆಯಲ್ಲವೆಂಬುದನ್ನುನಿಶ್ಚಯವಾಗಿ ತಿಳಿ ॥ ೩೩ ॥ ನಾನು ಏಕಾಂತವಾದ ಭಕ್ತಿಯುಳ್ಳ ಮನಸ್ಸಿನಿಂದ ಭಗವಂತನನ್ನು ಭಜಿಸುವ ಕಾರಣ, ನನ್ನಮಾತೆಂದಿಗೂ ಸಟೆಯಾಗುವುದಿಲ್ಲ. ನನ್ನ ಮನಸ್ಸೆಂದೆಂದಿಗೂ ವ್ಯರ್ಥಗಳಾದ ವಿಷಯಗಳಲ್ಲೆರಗುವುದಿಲ್ಲ. ನನ್ನ ಇಂದ್ರಿಯಗಳೂ ದುರ್ಮಾರ್ಗಕ್ಕೆ ಹೋಗುವುದಿಲ್ಲ ॥ ೩೪ ॥ ಇಂತು ನಾನು ವೇದಪ್ರಕಾಶಕ

ಸ್ತಪೋಮಯಃ ಪ್ರಜಾಪತೀನಾ ಮಭಿವಂದಿತಃ ಪತಿಃ। ಆಸ್ಥಾಯ ಯೋಗಂ ನಿಪುಣಂ ಸಮಾಹಿತ ಸ್ತಂ ನಾಧ್ಯ ಗಚ್ಛಂ ಯತ ಆತ್ಮ ಸಂಭವಃ ॥೩೫॥ ತತೋಽಸ್ಮ್ಯಹಂ ತಚ್ಚರಣಂ ಸಮಿಯುಷಾಂ ಭವಚ್ಛಿದಂ ಸ್ವಸ್ತ್ಯಯನಂ ಸುಮಂಗಲಂ। ಯೋಹ್ಯಾತ್ಮಮಾಯಾ ವಿಭವಂ ಸ್ಮ ಪರ್ಯಗಾ ದ್ಯಥಾ ನಭ ಸ್ಸ್ವಾಂತ ಮಥಾಽಪರೇ ಕುತಃ ॥ ೩೬ ॥ ನಾಹಂ ನಯೂಯಂ ಯದೃ ತಾಂ ಗತಿಂ ವಿದು ರ್ನ ವಾಮದೇವಃ ಕಿಮುತಾಽಪರೇ ಸುರಾಃ। ಯನ್ಮಾ

ಸಮಾಮ್ನಾಯಮಯಃ-ವೇದಸ್ವರೂಪನು, ತಪೋಮಯಃ - ತಪೋಮಯನು, ಪ್ರಜಾಪತೀನಾಂ-ಕಶ್ಯಪಾದಿ ನವಬ್ರಹ್ಮರಿಗೆ, ಅಭಿವಂದಿತಃ-ವಂದಿಸಲ್ಪಟ್ಟ, ಪತಿಃ-ಒಡೆಯನೂ ಆದ, ಸೋಹಂ-ನಾನು,ಸಮಾಹಿತಃ-ಏಕಚಿತ್ತನಾಗಿ, ನಿಪುಣಂ- ಸರ್ವವನ್ನು ತಿಳಿಯತಕ್ಕ, ಯೋಗಂ - ಜ್ಞಾನದೃಷ್ಟಿಯನ್ನು, ಆಸ್ಥಾಯಾಪಿ - ಪಡೆದರೂ, ಯತಃ - ಯಾರಿಂದ, ಆತ್ಮಸಂಭವಃ - ನನಗೆ ಜನ್ಮವುಂಟಾಯಿತೋ ಆತನನ್ನು, ನಾಧ್ಯಗಚ್ಛಂ-ತಿಳಿಯಲಿಲ್ಲ ॥ ೩೫ ॥ ಸಮಿಯುಷಾಂ-ಶರಣಾಗತರ, ಭವಚ್ಛಿದಂ-ಸಂಸಾರದುಃಖವನ್ನು ಕಳೆಯುವ, ಸ್ವಸ್ತ್ಯಯನಂ-ಮಂಗಳವನ್ನುಂಟುಮಾಡುವ, ಸುಮಂಗಳಂ-ಮಂಗಳರೂಪವಾದ, ತಚ್ಚರಣಂ-ಆತನ ಪಾದವನ್ನು, ನತೋಸ್ಮಿ-ವಂದಿಸುವೆನು, ನಭಃ-ಆಕಾಶವು, ಸ್ವಾಂತಂಯಥಾ - ತನ್ನ ಗಡಿಯನ್ನೋಪಾದಿಯಲ್ಲಿ, ಯೋಹಿ-ಯಾವ ಭಗವಂತನು, ಆತ್ಮ...ವಂ, ಆತ್ಮ-ತನ್ನ, ಮಾಯಾ-ಮಾಯೆಯ, ವಿಭವಂ-ಮಹಿಮೆಯನ್ನು,*ಪರಿ + ಅಗಾತ್ = ಪರ್ಯಗಾತ್-ಕಾಣಲಿಲ್ಲವೋ, ಅಥ-ಆಗ,ಅಪರೇ-ಇತರರು,ಕುತಃ-ಕಾಣುವುದೆಂತು ? ॥೩೬॥ ಯದೃತಾಂ-ಯಾವನ ಯಥಾರ್ಥವಾದ, ಗತಿಂ-ಸ್ವರೂಪವನ್ನು, ಅಹಂ-ನಾನಾಗಲಿ, ಯೂಯಂ-ನೀವಾಗಲಿ, ವಾಮದೇವಃ - ರುದ್ರನಾಗಲಿ, ನವಿದುಃ - ತಿಳಿಯಲಾರರೋ, ಅದನ್ನು, ಅಪರೇ-ಇತರರಾದ, ಸುರಾಃ-ದೇವತೆಗಳು, ಕಿಮುತ-ಹೇಳಬೇಕಾದುದೇನು ? ಯನ್ಮಾಯಯಾ - ಯಾವನಮಾಯೆಯಿಂದ, ಮೋಹಿತಬುದ್ಧಯಃ-ಮರುಳಾದ ಬುದ್ಧಿಯುಳ್ಳವರಾಗಿ, ನಿರ್ಮಿತಂ - ಆತನ ಮಾಯೆ

ನಾಗಿಯೂ, ತಪೋಮಯನಾಗಿಯೂ, ಕಶ್ಯಪಾದಿನವಬ್ರಹ್ಮರಿಗೂ ಅಧೀಶ್ವರನಾಗಿಯೂ, ಸರ್ವವಸ್ತುಸಾಕ್ಷಾತ್ಕಾರವನ್ನುಪಡೆಯುವ ಯೋಗದಲ್ಲಿ ನಿಪುಣನಾಗಿಯೂ ಇದ್ದರೂ, ನಾನು ಜನಿಸುವುದಕ್ಕೆ ಕಾರಣನಾವನೋ ಆತನನ್ನು ನಾನೇ ತಿಳಿಯಲಿಲ್ಲ ॥೩೫॥

ಅನಂತರದಲ್ಲಿ ನಾನು, ಮರೆಹೊಕ್ಕವರ ಸಂಸಾರದುಃಖಗಳನ್ನು ಕಳೆದು, ಪರಮಮಂಗಳಕರವಾದ ಮೋಕ್ಷವನ್ನಿತ್ತು ಸಲಹುವ ಭಗವಂತನ ಮಂಗಳರೂಪವಾದ ಪಾದಕಮಲವನ್ನು ಧ್ಯಾನಿಸಿದೆನು. ತನ್ನ ಆದ್ಯಂತಗಳನ್ನರಿಯಲಾರದ ಗಗನಮಂಡಲದಂತೆ, ಯಾವ ಭಗವಂತನೇ ತನ್ನ ಅಪಾರವಾದ ಮಾಯಾಮಹಿಮೆಯನ್ನು ತಿಳಿಯಲಾರನೋ, ಅದನ್ನು ಇತರರರಿಯುವುದೆಂತು ? ॥ ೩೬ ॥ ಯಾವಪರಮಾತ್ಮನ ಮಾಯೆಯಿಂದ ಮರುಳಾದ ಬುದ್ಧಿಯುಳ್ಳವರಾಗಿ ನಾವು, ಆತನ ಮಾಯೆಯಿಂದ ನಿರ್ಮಿತವಾದ ಈ ಜಗತ್ತನ್ನು ಮಾತ್ರ, ನಮ್ಮ ಜ್ಞಾನಾನುಸಾರವಾಗಿ ತಿಳಿಯುವೆವೋ, ಅಂತಹ ವಾಸುದೇವಮೂರ್ತಿಯ ನಿಜಸ್ವರೂಪವನ್ನು, ನಾನಾಗಲಿ, ನೀವಾಗಲಿ, ಮಹೇಶ್ವರನಾಗಲಿ,ಯಾರೂ

* ಇಲ್ಲಿ ಪರಿ ಯೆಂಬ ಉಪಸರ್ಗಕ್ಕೆ ನಿಷೇಧಾರ್ಥವನ್ನು ಹೇಳಬೇಕು.

ಯಯಾ ಮೋಹಿತ ಬುದ್ಧಯಃ ಸ್ತ್ವಿದಂ ವಿನಿರ್ಮಿತಂ ಸ್ವಾತ್ಮಸಮಂ ವಿಚಕ್ಷ್ಮಹೇ ॥ ೩೭ ॥ ಯಸ್ಯಾವತಾರ ಕರ್ಮಾಣಿ ಗಾಯಂತಿ ಹ್ಯಸ್ಮದಾದಯಃ । ನ ಯಂ ವಿಂದಂತಿ ತತ್ವೇನ ತಸ್ಮೈ ಭಗವತೇ ನಮಃ ॥ ೩೮ ॥ ಸ ಏಷ ಆದ್ಯಃ ಪುರುಷಃ ಕಲ್ಪೇ ಕಲ್ಪೇ ಸೃಜತ್ಯಜಃ । ಆತ್ಮನ್ಯೇವಾತ್ಮನಾತ್ಮಾನಂ *ಸಂ ಯಚ್ಛತಿ ಚ ಪಾತಿ ಚ ॥ ೩೯ ॥ ವಿಶುದ್ಧಂ ಕೇವಲಂ ಜ್ಞಾನಂ

ಯಿಂದ ನಿರ್ಮಿಸಲ್ಪಟ್ಟ, ಇದಂ-ಈಜಗತ್ತನ್ನು, ಸ್ವಾತ್ಮಸಮಂ-ತಮ್ಮಜ್ಞಾನಾನುಗುಣವಾಗಿಯೇ, ವಿಚಕ್ಷ್ಮಹೇ-ತಿಳಿಯುವೆವೋ ॥ ೩೭ ॥ ಯಸ್ಯ-ಯಾವ ಪರಮಾತ್ಮನ, ಅವತಾರಕರ್ಮಾಣಿ-ಅವತಾರಚರಿತ್ರೆಗಳನ್ನು, ಅಸ್ಮದಾದಯಃ-ನಾನು ಮೊದಲಾದವರು, ಗಾಯಂತಿಹಿ-ಗಾನಮಾಡುವರೋ, ಆದರೂ, ಯಂ-ಯಾರನ್ನು, ತತ್ವೇನ-ಯಥಾರ್ಥವಾಗಿ, ನವಿಂದಂತಿ-ತಿಳಿಯಲಾರರೋ, ತಸ್ಮೈ - ಅಂತಹ, ಭಗವತೇ-ಪರಮಾತ್ಮನಿಗೆ, ನಮಃ-ನಮಸ್ಕಾರವು ॥ ೩೮ ॥ ಆದ್ಯಃ - ಪುರಾಣನೆನಿಸಿದ, ಅಜಃ-ಜನ್ಮರಹಿತನಾದ, ಯಃ-ಯಾವ ಭಗವಂತನು, ಪುರುಷಃ-ಪುರುಷಾವತಾರವನ್ನು ಧರಿಸಿ,ಕಲ್ಪೇ ಕಲ್ಪೇ-ಪ್ರತಿಕಲ್ಪದಲ್ಲಿಯೂ ಆತ್ಮನಾ-ತನ್ನಿಂದ, ಆತ್ಮಾನಂ-ನನ್ನನ್ನು, ಆತ್ಮನ್ಯೇವ-ತನ್ನಲ್ಲಿಯೇ, ಸೃಜತಿ-ಸೃಷ್ಟಿಸುವನೋ, ಸಂಯಚ್ಛತಿ-ಸಂಹರಿಸುವನೋ, ಪಾತಿಚ-ಕಾಪಾಡುವನೋ, ಸಃ-ಆತನೇ, ಏಷಃ-ಈ ಪರಮಾತ್ಮನು ॥

ವಿಶುದ್ಧಂ-ವಿಷಯಾಕಾರಶೂನ್ಯವೂ, ಕೇವಲಂ-ಸತ್ಯವೂ, ಪ್ರತ್ಯಕ್-ಎಲ್ಲಕ್ಕಿಂತಲೂಒಳಗಿರುವುದೂ, ಸಮ್ಯಕ್-ಸಂಶಯಾದಿರಹಿತವೂ, ಅವಸ್ಥಿತಂ - ಸ್ಥಿರವೂ, ಸತ್ಯಂ-ವಿಕಾರಶೂನ್ಯವೂ, ಪೂರ್ಣಂ-ವೃದ್ಧಿಕ್ಷಯಾದಿರಹಿತವೂ, ಅನಾದ್ಯಂತಂ - ಹುಟ್ಟು ಬಾಳು ಸಾವುಗಳಿಲ್ಲದುದೂ, ನಿರ್ಗುಣಂ - ಗುಣಗಳಿಲ್ಲದುದೂ, ನಿತ್ಯಂ-ಯಾವಾಗಲೂ, ಅದ್ವಯಂ-ಭೇದವಿಲ್ಲದುದೂ, ಆದ,ಜಾನಂ-ಜ್ಞಾನವೇ ಆ ತತ್ವವು ॥೪೦॥ ಹೇಋಷೇ-ಎಲೈ ನಾರದಮುನಿಯೆ ! ಪ್ರಶಾಂ...ಯಾಃ,·ಪ್ರಶಾಂತ - ಶಾಂತಿಯನ್ನು ಪಡೆದ, ಆತ್ಮ-

ತಿಳಿಯಲಾರರು. ಇಂತಿರುವಾಗ ಇತರರರಿಯಲಾರರೆಂದು ಹೇಳುವುದೇಕೆ ॥೩೭॥ ಯಾವ ಭಗವಂತನು ಮತ್ಸ್ಯಕೂರ್ಮಾದ್ಯವತಾರಗಳಲ್ಲಿ ನಡೆಯಿಸಿದ ಚರಿತ್ರೆಗಳನ್ನುಹಗಲಿರುಳೂ ಗಾನಮಾಡುತ್ತಿರುವ ನಮ್ಮಂತವರೂ ನಿಜಸ್ವರೂಪವನ್ನರಿಯಲಾರೆವೋ, ಅಂತಹ ಪರಮಾತ್ಮನಿಗೆ ನಮಸ್ಕಾರವು ॥ ೩೮ ॥ ಆದ್ಯಂತರಹಿತನಾದ ಆ ಪರಮಾತ್ಮನೇ ಪ್ರತಿಕಲ್ಪದಲ್ಲಿಯೂ ತನ್ನಿಂದಲೇ ತನ್ನನ್ನು ತನ್ನಲ್ಲಿಯೇ ಸೃಷ್ಟಿಸಿ, ಬೆಳೆಯಿಸಿ, ಲಯಗೊಳಿಸುವನು ॥ ೩೯ ॥ ನಿರ್ವಿಷಯವೂ, ನಿರ್ವಿಕಾರವೂ, ಸತ್ಯವೂ, ಸರ್ವಾಂತರವೂ, ಸಂಶಯಾದಿರಹಿತವೂ, ಸ್ಥಿರವೂ, ನಿರಾಕಾರವೂ, ಸಂಪೂರ್ಣವೂ, ಆದ್ಯಂತಶೂನ್ಯವೂ, ನಿರ್ಗುಣವೂ ಆಗಿ,ದ್ವೈತಪ್ರಪಂಚವು ತೋರುವಾಗಲೂ ಸ್ವಭಾವವಾಗಿ ಅದ್ವೈತವಾಗಿರುವ ಜ್ಞಾನವೇ ಆ ಪರಮಾತ್ಮನಸ್ವರೂಪವು ॥೪೦॥ ಅಯ್ಯಾ ನಾರದಮುನಿಯೆ! ಜ್ಞಾನಿ

* ವಿ. ಈ ಚಕಾರದಿಂದ ಭಗವಂತನುವ್ಯಾಸಾದ್ಯವತಾರವನ್ನು ಮಾಡಿ ಮಣಿಮಂತಮೊದಲಾದ ದೈತ್ಯರಿಂದ ಮರೆಮಾಚಲ್ಪಟ್ಟ ನಿಜಸ್ವರೂಪವನ್ನು ಶಾಸ್ತ್ರ ಪ್ರವರ್ತನದಿಂದ ಪ್ರಕಾಶಗೊಳಿಸಿದನೆಂದು ತೋರುವುದು

ಪ್ರತ್ಯ ಕ್ಸನ್ಯು ಗವಸ್ಥಿತಂ । ಸತ್ಯಂ ಪೂರ್ಣ ಮನಾದ್ಯಂತಂ ನಿರ್ಗುಣಂ ನಿತ್ಯ ಮದ್ವಯಂ ॥ ೪೦ ॥ ಋಷೇ!ವಿಂದಂತಿ ಮುನಯಃ ಪ್ರಶಾಂತಾತ್ಮೇಂದ್ರಿಯಾ ಶಯಾಃ । ಯದಾ ತದೇವಾZಸ ತ್ತರ್ಕೈ ಸ್ತಿರೋ ಧೀಯೇತ ವಿಪ್ಲುತಂ ॥ ೪೧ ॥ ಆದ್ಯೋಽವತಾರಃ ಪುರುಷಃ ಪರಸ್ಯ ಕಾಲ ಸ್ಸ್ವಭಾವ ಸ್ಸದಸ ನ್ಮನಶ್ಚ । ದ್ರವ್ಯಂ ವಿಕಾರೋ ಗುಣ ಇಂದ್ರಿಯಾಣಿ ವಿರಾಟ್ ಸ್ವರಾಟ್ ಸ್ಥಾಸ್ನು ಚರಿಷ್ಣು ಭೂಮ್ನಃ ॥ ೪೨ ॥ ಅಹಂ ಭವೋ ಯಜ್ಞ ಇಮೇ ಪ್ರಜೇಶಾ ದಕ್ಷಾದಯೋ ಯೇ ಭವದಾದ ಯಶ್ಚ । ಸ್ವರ್ಲೋಕ

ದೇಹವೂ, ಇಂದ್ರಿಯ - ಇಂದ್ರಿಯಗಳು, ಆಶಯಾಃ - ಮನಸ್ಸೂ ಉಳ್ಳ, ಮುನಯಃ-ಮಹಾತ್ಮರು, ವಿಂದಂತಿ-ತಿಳಿಯುತ್ತಾರೆ, ತದೇವ-ಅದೇತತ್ವವು, ಯದಾ-ಯಾವಾಗ, ಅಸತ್ತರ್ಕೈಃ-ದುರ್ಜನರ ಕುಯುಕ್ತಿಗಳಿಂದ, ವಿಪ್ಲುತಂ-ಕೆಡಿಸಲ್ಪಡುವುದೋ, ತದಾ-ಆಗ, ತಿರೋಧೀಯೇತ-ಮರೆಯಾಗುವುದು ॥ ೪೧ ॥ ಭೂಮ್ನಃ-ಅಪರಿಚ್ಛಿನ್ನನಾದ, ಪರಸ್ಯ - ಪರಮಾತ್ಮನಿಗೆ, ಪುರುಷಃ - ವಿರಾಟ್ಪುರುಷನೇ, ಆದ್ಯಃ-ಮೊದಲನೆಯ, ಅವತಾರಃ - ಅವತಾರವು, ಕಾಲಃ-ಕಾಲವು, ಸ್ವಭಾವಃ-ಸ್ವಭಾವವು, ಸದಸತ್ - ಕಾರಣಾತ್ಮಕವಾದ ಪ್ರಕೃತಿಯು, ಎಂಬೀ ಮೂರುಶಕ್ತಿಗಳು, ಮನಃ-ಮನಸ್ಸು ಮೊದಲಾದಕಾರ್ಯಗಳು, ದ್ರವ್ಯಂ-ಪಂಚಭೂತಗಳು, ವಿಕಾರಃ - ಅಹಂಕಾರವು, ಗುಣಃ - ಸತ್ವಾದಿಗುಣಗಳು, ಇಂದ್ರಿಯಾಣಿ-ಇಂದ್ರಿಯಗಳು, ವಿರಾಟ್ - ಸಮಷ್ಟಿಶರೀರವು, ಸ್ವರಾಟ್-ವೈರಾಜನು, ಸ್ಥಾಸ್ನು - ಸ್ಥಾವರಗಳು ಚರಿಷ್ಣು-ಚರಗಳು, ಇವೆಲ್ಲವೂ ಆತನ ಸ್ವರೂಪವು ॥ ೪೨ ॥

ಅಹಂ-ನಾನು, ಭವಃ-ರುದ್ರನು, ಯಜ್ಞಃ-ವಿಷ್ಣುವು, ಈಮೇ-ಈ, ದಕ್ಷಾದಯಃ-ದಕ್ಷನೇ ಮೊದಲಾದ, ಪ್ರಜೇಶಾಃ-ಪ್ರಜೇಶ್ವರರು, ಭವದಾದಯಶ್ಚ-ನೀನು ಮೊದಲಾದವರು, ಸ್ವರ್ಲೋಕಪಾಲಾಃ-ಸ್ವರ್ಗವನ್ನುಪಾಲಿಸುವ ಇಂದ್ರಾದಿಗಳು, ಖಗಲೋಕಪಾಲಾಃ-ಪಕ್ಷಿಕುಲನಾಯಕರಾದ ಗರುಡಾದಿಗಳು, ನೃಲೋಕಪಾಲಾಃ-ಮನುಮಾಂಧಾತ್ರಾದಿಗಳು, ತಲಲೋಕಪಾಲಾಃ-ಪಾತಾಳಾಧಿಪತಿಗಳಾದ ಅನಂತಾದಿ

ಗಳಾದವರು, ಶರೀರವನ್ನೂ, ಇಂದ್ರಿಯಗಳನ್ನೂ, ಮನಸ್ಸನ್ನೂ ಸಹ ಯಾವಾಗ ಶಾಂತಗೊಳಿಸಿಕೊಳ್ಳುವರೋ, ಆಗ ಆ ತತ್ವವನ್ನು ತಿಳಿಯುವರು. ಹಾಗಿಲ್ಲದೆ ನಾಸ್ತಿಕಾದಿಗಳ ಕುಯುಕ್ತಿಗಳಿಗೆ ಕಿವಿಗೊಟ್ಟಲ್ಲಿ, ಸ್ವಪ್ರಕಾಶವಾಗಿ ಹೊಳೆಯುವ ಆವಸ್ತುವು ಮತ್ತಷ್ಟು ಮರೆಯಾಗುವುದು ॥ ೪೧ ॥ ಆ ಪರಮಾತ್ಮನು ಯಾರಾರನ್ನು ಸೃಜಿಸಿದನೆಂಬುದನ್ನು ಹೇಳುವೆನು ಕೇಳು. ಸರ್ವಾಧಿಕನಾದ ಭವಂತನಿಗೆ ಪ್ರಕೃತಿ ಪ್ರವರ್ತಕನಾದ ವಿರಾಟ್ಪುರುಷನೇ ಮೊದಲನೆಯಅವತಾರವು. ಕಾಲ, ಸ್ವಭಾವ, ಪ್ರಕೃತಿ,ಯೆಂಬ ಶಕ್ತಿಗಳೂ, ಮನಸ್ಸು ಮೊದಲಾದಕಾರ್ಯಗಳು, ಪಂಚಭೂತಗಳು, ಅಹಂಕಾರವು, ಸತ್ವರಜಸ್ತಮಸ್ಸುಗಳು, ಸ್ಥಾವರ ಜಂಗಮವಸ್ತುಗಳು ಸಮಷ್ಟಿವ್ಯಷ್ಟಿಶರೀರಗಳು, ಇವೆಲ್ಲವೂ ಆ ವಿರಾಟ್ಪುರುಷನ ಸ್ವರೂಪವೇ ॥ ೪೨ ॥

ಬಹಳಮಾತೇಕೆ ? ನಾನು, ರುದ್ರನು, ವಿಷ್ಣುವು, ದಕ್ಷನೇಮೊದಲಾದ ಈ ನವ

ಪಾಲಾಃ ಖಗಲೋಕಪಾಲಾ ನೃಲೋಕಪಾಲಾ ಸ್ತಲಲೋಕ ಪಾಲಾಃ ॥೪೩॥ ಗಂಧರ್ವ ವಿದ್ಯಾಧರ ಚಾರಣೇಶಾ ಯೇ ಯಕ್ಷ ರಕ್ಷೋ *ರಗ ನಾಗ ನಾಥಾಃ । ಯೇವಾ ಋಷೀಣಾ ಮೃಷಭಾಃ ಪಿತೄಣಾಂ ದೈತ್ಯೇಂದ್ರ ಸಿದ್ಧೇಶ್ವರ ದಾನವೇಂದ್ರಾಃ ॥ ೪೪ ॥ ಅನ್ಯೇಚ ಯೇ ಪ್ರೇತಪಿಶಾಚ ಭೂತ ಕೂಶ್ಮಾಂಡ ಯಾದೋಮೃಗ ಪಕ್ಷ್ಯಧೀಶಾಃ । ಯತ್ಕಿಂಚ ಲೋಕೇ ಭಗವ ನ್ಮಹಸ್ವ ದೋಜ ಸ್ಸಹಸ್ವ ದ್ಬಲ ವತ್ ಕ್ಷಮಾವತ್ ॥ ೪೫ ॥ ಶ್ರೀ ಹ್ರೀ ವಿಭೂತ್ಯಾತ್ಮವ ದದ್ಭುತಾರ್ಣಂ ತತ್ತ್ವಂ ಪರಂ ರೂಪವ ದಸ್ವ

ಗಳು ॥೪೩॥ ಗಂಧರ್ವ...ಶಾಃ, ಗಂಧರ್ವರು, ವಿದ್ಯಾಧರರು, ಚಾರಣರು, ಯೇವ-ಯಾವ, ಯಕ್ಷ... ಥಾಃ, ಯಕ್ಷರು, ರಾಕ್ಷಸರು, ಉರಗರು, ನಾಗಪತಿಗಳೂ, ಯೇವಾ - ಯಾವ, ಋಷೀಣಾಂ - ಋಷಿಗಳಿಗೆ, ಋಷಭಾಃ-ನಾಯಕರೋ, ಪಿತೄಣಾಂ-ಪಿತೃಗಳಿಗೆ, ಋಷಭಾಃ-ಅಧಿಪತಿಗಳೋ, ಅವರೂ, ದೈತ್ಯೇಂದ್ರ... ದ್ರಾಃ, ದೈತ್ಯಶ್ರೇಷ್ಠರು, ಸಿದ್ಧೇಶ್ವರರ., ದಾನವಾಧಿಪತಿಗಳೂ ॥ ೪೪ ॥

ಅನ್ಯೇ-ಇತರರಾದ, ಯೇ-ಯಾವ, ಪ್ರೇತ...ಶಾಃ-ಪ್ರೇತಗಳು, ಪಿಶಾಚಗಳು, ಭೂತಗಳು, ಕೂಶ್ಮಾಂಡ ಗಳು, ಜಲಜಂತುಗಳು, ಮೃಗಗಳು, ಪಶುಗಳು, ಇವುಗಳೂ, ಲೋಕೇ - ಲೋಕದಲ್ಲಿ, ಭಗವತ್- ಭಾಗ್ಯವುಳ್ಳದ್ದು, ಮಹಸ್ವತ್-ತೇಜಸ್ಸುಳ್ಳದ್ದು, ಓಜಸ್ಸಹಸ್ವತ್-ಇಂದ್ರಿಯಶಕ್ತಿ, ಮನಶ್ಶಕ್ತಿಗಳುಳ್ಳದ್ದು, ಬಲವತ್-ಶರೀರಶಕ್ತಿಯುಳ್ಳದ್ದು, ಕ್ಷಮಾವತ್-ತಾಳ್ಮೆಯುಳ್ಳದ್ದು, ಯತ್ಕಿಂಚ-ಯಾವ ಕೆಲಂಚವುಂಟೋ, ಇವೆಲ್ಲವು ಭಗದ್ವಿಭೂತಿಯು ॥ ೪೫ ॥ ಹೇ ಋಷೇ-ಎಲೈ ನಾರದನೇ ! ಶ್ರೀ-ಸಂಪತ್ತು, ಹ್ರೀ-ದುಷ್ಕಾ ರ್ಯದಲ್ಲಿ ನಾಚಿಕೆಯು, ವಿಭೂತಿ-ಐಶ್ವರ್ಯವು, ಅತ್ಮ-ಬುದ್ಧಿಯು, ಇವುಗಳುಳ್ಳದ್ದು, ಅದ್ಭುತಾರ್ಣಂ- ವಿಚಿತ್ರವಾದ ವರ್ಣವುಳ್ಳದ್ದು, ರೂಪವತ್-ರೂಪವುಳ್ಳದ್ದು, ಅಸ್ವರೂಪಂ - ರೂಪವಿಲ್ಲದ್ದು ಇದೆಲ್ಲವೂ, ಪರಂತತ್ತ್ವಂ-ಪರತತ್ವವೇ, ಭೂಮ್ನಃ ಸರ್ವವ್ಯಾಪಕನಾದ, ಪುರುಷಸ್ಯ - ಪರಮಾತ್ಮನ, ಯಾ- ಯಾವ, ಲೀಲಾವತಾರಾ-ಲೀಲಾವತಾರಗಳನ್ನು, ಪ್ರಾಧಾನ್ಯತಃ-ಮುಖ್ಯವಾಗಿ, ಆಮನಂತಿ - ಹೇಳು

ಬ್ರಹ್ಮರು, ನೀನು ಮೊದಲಾದವರೂ, ಸ್ವರ್ಗಾಧಿಪತಿಗಳಾದ ಇಂದ್ರಾದಿಗಳೂ, ಪಕ್ಷಿ ಲೋಕಪಾಲಕರಾದ ಗರುಡಾದಿಗಳು,ಮನು,ಮಾಂಧಾತ,ಮೊದಲಾದ ಭೂಲೋಕಪಾಲರು, ಪಾತಾಳಾಧಿಪತಿಗಳಾದ ಅನಂತ, ವಾಸುಕಿ,ಮೊದಲಾದವರು, ಗಂಧರ್ವರು, ವಿದ್ಯಾಧರರು, ಚಾರಣರು, ಯಕ್ಷರು, ರಾಕ್ಷಸರು, ಉರಗರು, ಪನ್ನಗರು, ಮಹರ್ಷಿಗಳು, ಪಿತೃಗಳು, ದೈತ್ಯರು, ಸಿದ್ಧರು, ದಾನವರು, ಮತ್ತು ಭೂತ, ಪ್ರೇತ, ಪಿಶಾಚ, ಕೂಶ್ಮಾಂಡ ಗಳು, ಜಲಚರಜಂತುಗಳು, ಮೃಗಗಳು, ಇವುಗಳೂ, ಇನ್ನು ಲೋಕದಲ್ಲಿ ಐಶ್ವರ್ಯ, ತೇಜಸ್ಸು, ಇಂದ್ರಿಯಶಕ್ತಿ,ಮನಶ್ಶಕ್ತಿ,ಶರೀರಶಕ್ತಿ,ಕ್ಷಮಾಗುಣ, ಮೊದಲಾದುವುಗಳುಳ್ಳ ಯಾವಯಾವ ಉತ್ತಮಭೂತಗಳುಂಟೋ, ಅವೆಲ್ಲವೂ ಪರಮಾತ್ಮನ ತತ್ವವೆಂದೇ ತಿಳಿಯ ಬೇಕು. ಅಲ್ಲದೆ ಸಂಪತ್ತು, ಕೆಟ್ಟಕೆಲಸಗಳಲ್ಲಿ ಜುಗುಪ್ಸೆಯು, ವಿಚಿತ್ರವರ್ಣವು, ರೂಪ ಮೊದಲಾದವೂಸಹ, ಆ ಭಗವಂತನ ವಿಭೂತಿಯೆಂದೇ ತಿಳಿ. ಆದುದರಿಂದ ಎಲೈ ನಾರದ ಮುನಿಯೆ ? ಮಹಾತ್ಮರು ಇಂತಿರುವ ಪರಮಾತ್ಮನ ಅವತಾರಗಳಲ್ಲಿ ಯಾವುವನ್ನು

ರೂಪಂ । ಪ್ರಾಧಾನ್ಯತೋ ಯಾನೃಷ ಆಮನಂತಿ ಲೀಲಾವತಾರಾನ್ ಪುರುಷಸ್ಯ ಭೂಮ್ನಃ ॥ ೪೬ ॥ ಆಪೀಯತಾಂ ಕರ್ಣ ಕಷಾಯ ಶೋಷಾನನು ಕ್ರಮಿಷ್ಯೇ ತ ಇಮಾನ್ ಸುಪೇಶಾನ್॥

ಇತಿ ಷಷ್ಠೋಽಧ್ಯಾಯಃ

ಓಂ ನಮಃಪರಮಾತ್ಮನೇ.

ಅಥ ಸಪ್ತಮೋಽಧ್ಯಾಯಃ

ಬ್ರಹ್ಮೋವಾಚ ॥ *ಯತ್ರೋದಿತಃ ಕ್ಷಿತಿತಲೋದ್ಧರಣಾಯ ಬಿಭ್ರತ್ ಕ್ರೌಡೀಂ ತನುಂ ಸಕಲಯಜ್ಞಮಯೀಮನಂತಃ । ಅಂತರ್ಮಹಾರ್ಣವ

ವರೋ ॥ ೪೬ ॥ ಕರ್ಣ...ಷಾನ್, ಕರ್ಣ-ಕಿವಿಗಳ, ಕಷಾಯ-ಕಶ್ಮಲಗಳನ್ನು, ಶೋಷಾನ್ - ಕಳೆಯುವ, ಸುಪೇಶಾನ್-ರಮಣೀಯಗಳಾದ, ಇಮಾನ್-ಈ ಚರಿತ್ರೆಗಳನ್ನು, ತೇ-ನಿನಗೆ, ಅನುಕ್ರಮಿಷ್ಯೇ-ಹೇಳಲಾರಂಭಿಸುವೆನು, ಆಪೀಯತಾಂ-ಪಾನಮಾಡಲ್ಪಡಲಿ ॥ ೪೬ ॥

ಷಷ್ಠಾಧ್ಯಾಯಂ ಸಮಾಪ್ತಂ.

ಸಪ್ತಮಾಧ್ಯಾಯಂ.

ಕಂ॥ ನಾಳೀಕಸಂಭವಂ ನಲಿ । ದೇಳನೆಯಧ್ಯಾಯದೋಳ್ ಹೃಷೀಕೇಶನ ಸ ॥
ಲ್ಲೀಲಾವತಾರ ಗುಣಚರಿ । ತಾಳಿಯ ನಾದೇವ ಮೌನಿಮೌಳಿಗೆ ಪೇಳ್ದಂ॥

ಬ್ರಹ್ಮನು ಹೇಳಿದನು॥ ಯತ್ರ - ಯಾವಕಾಲದಲ್ಲಿ, ಅನಂತಃ - ಪರಮಾತ್ಮನು, ಸಕಲಯಜ್ಞಮಯೀಂ-ಸಕಲಯಜ್ಞಗಳಸ್ವರೂಪವಾದ, ಕ್ರೌಡೀಂ-ಆದಿವರಾಹದ, ತನುಂ-ಶರೀರವನ್ನು, ಬಿಭ್ರತ್-

---

ಮುಖ್ಯವಾಗಿ ಬಣ್ಣಿಸುವರೋ, ಕೇಳುವವರ ಪಾಪಗಳನ್ನು ಕಳೆಯುವ ಕರ್ಣಾಮೃತವಾದ ಆ ಅವತಾರಗಳನ್ನು ವರ್ಣಿಸಲಾರಂಭಿಸುವೆನು. ಸಾವಧಾನವಾಗಿ ಕೇಳು. ಎಂದು ಬ್ರಹ್ಮದೇವನು ನಾರದಮುನಿಗೆಹೇಳುತ್ತಿದ್ದನೆಂಬಲ್ಲಿಗೆ

ಆರನೆಯ ಅಧ್ಯಾಯಂ ಮುಗಿದುದು.

ಏಳನೆಯ ಅಧ್ಯಾಯ.

ಭಗವಂತನ ಲೀಲಾವತಾರಗಳು.

ಅನಂತರದಲ್ಲಿ ಬ್ರಹ್ಮದೇವನು ನಾರದಮುನೀಂದ್ರನನ್ನು ಕುರಿತು:--ಅಯ್ಯಾ ದೇವರ್ಷಿಯೇ! ಆದ್ಯಂತರಹಿತನಾದ ಆ ಪರಮಪುರುಷನು ಏಕಾರ್ಣವವಾದ ಜಲರಾಶಿಯಲ್ಲಿ

---

* ಭಗವಂತನು ವರಾಹಾವತಾರವನ್ನು ಮಾಡಿ, ಹಿರಣ್ಯಾಕ್ಷನನ್ನು ಸಂಹರಿಸಿದ ಚರಿತ್ರೆಯು ಆರನೆಯ ಮನ್ವಂತರದಲ್ಲಿ, ನಡೆಯಿತೆಂದು ಪದ್ಮಪುರಾಣದಲ್ಲಿ ಹೇಳಲ್ಪಟ್ಟಿರುವುದು.

ಉಪಾಗತ ಮಾದಿದೈತ್ಯಂ ತಂ ದಂಷ್ಟ್ರಯಾದ್ರಿಮಿವ ವಜ್ರಧರೋ
ದದಾರ ॥ ೧ ॥ ಜಾತೋ ರುಚೇ ರಜನಯ ತ್ಸುಯಮಾನ್ ಸುಯಜ್ಞ
ಆಕೂತಿಸೂನು ರಮರಾ ನಥ ದಕ್ಷಿಣಾಯಾಂ । ಲೋಕತ್ರಯಸ್ಯ ಮಹತೀ
ಮಹರ ದ್ಯದಾರ್ತಿಂ ಸ್ವಾಯಂಭುವೇನ ಮನುನಾ ಹರಿರಿತ್ಯ ನೂಕ್ತಃ ॥೨॥
ಯಜ್ಞೇಚ ಕರ್ದಮ ಗೃಹೇ ದ್ವಿಜ ! ದೇವಹೂತ್ಯಾಂ ಸ್ತ್ರೀಭಿ ಸ್ಸಮಂ

ಧರಿಸಿದವನಾಗಿ, ಉದಿತಃ-ಹುಟ್ಟಿದನೋ, ತದಾ-ಆಗ, ವಜ್ರಧರಃ-ಇಂದ್ರನು, ಅದ್ರಿಮಿವ - ಪರ್ವತವ ನ್ನೇಪಾದಿಯಲ್ಲಿ, ಅಂತರ್ಮಹಾರ್ಣವೇ-ಸಮುದ್ರ ಮಧ್ಯದಲ್ಲಿ, ಉಪಾಗತಂ-ಬಂದ, ತಂ-ಆ, ಆದಿ ದೈತ್ಯಂ-ಆದಿರಾಕ್ಷಸನಾದ ಹಿರಣ್ಯಾಕ್ಷನನ್ನು, ದಂಷ್ಟ್ರಯಾ-ಕೋರೆದಾಡೆಯಿಂದ, ದದಾರ-ಸೀಳಿದನು॥

ಆಕೂತಿಸೂನುಃ-ಆಕೂತಿಯಮಗನಾದ, ಸುಯಜ್ಞಃ - ಸುಯಜ್ಞನು, ರುಚೇಃ - ರುಚಿಯೆಂಬ ಋಷಿಯಿಂದ, ಜಾತಃ-ಹುಟ್ಟಿ, ಅಥ-ಬಳಿಕ, ದಕ್ಷಿಣಾಯಾಂ-ದಕ್ಷಿಣೆಯೆಂಬ ತನ್ನಹೆಂಡತಿಯಲ್ಲಿ, ಸುಯಮಾನ್-ಸುಯಮರೆಂಬ, ಅಮರಾನ್-ದೇವತೆಗಳನ್ನು, ಅಜನಯತ್-ಜನಿಯಿಸಿದನು, ಆತನು, ಯದಾ-ಯಾವಾಗ, ಲೋಕತ್ರಯಸ್ಯ-ಮೂರುಲೋಕಗಳ, ಮಹತೀಂ-ಅಧಿಕವಾದ, ಆರ್ತಿಂ - ಪೀಡೆಯನ್ನು, ಅಹರತ್-ಕಳೆದನೋ, ತದಾ-ಆಗ, ಸ್ವಾಯಂಭುವೇನ-ಸ್ವಾಯಂಭುವನೆಂಬ, ಮನುನಾ-ಮನುವಿನಿಂದ, ಹರಿರಿತಿ-ಹರಿಯೆಂದು, ಅನೂಕ್ತಃ-ಕರೆಯಲ್ಪಟ್ಟನು ॥ ೨ ॥ ಹೇ ದ್ವಿಜ-ಎಲೈ ನಾರದನೇ ! ಕರ್ದಮ ಗೃಹೇ-ಕರ್ದಮ ಪ್ರಜಾಪತಿಯ ಮನೆಯಲ್ಲಿ, ದೇವಹೂತ್ಯಾಂ-ದೇವಹೂತಿಯಲ್ಲಿ, ನವಭಿಃ - ಒಂಬತ್ತು ಮಂದಿ, ಸ್ತ್ರೀಭಿಸ್ಸಮಂ-ಅಕ್ಕತಂಗಿಯರೊಡನೆ, ಜಜ್ಞೇ-ಹುಟ್ಟಿದನು, ಯಯಾ - ಯಾವಬ್ರಹ್ಮವಿದ್ಯೆ ಯಿಂದ, ಆತ್ಮಶಮಲಂ-ಮನಸ್ಸನ್ನು ಮಲಿನಗೊಳಿಸುವ, ಗುಣಸಂಗಪಂಕಂ-ಗುಣಸಂಬಂಧವೆಂಬ ಕೊಳೆ ಯನ್ನು, ಅಸ್ಮಿನ್-ಈಜನ್ಮದಲ್ಲಿಯೇ, ವಿಧೂಯ-ಕಳೆದುಕೊಂಡು, ಕಪಿಲಸ್ಯ-ಕಪಿಲನ, ಗತಿಂ-ಸ್ಥಾನ ವನ್ನು, ಪ್ರಪೇದೇ-ಹೊಂದಿದಳೋ ಅಂತಹ, ಆತ್ಮಗತಿಂ-ಬ್ರಹ್ಮವಿದ್ಯೆಯನ್ನು, ಸ್ವಮಾತ್ರೇ-ತನ್ನತಾಯಿಗೆ,

ಮುಳುಗಿದ ಭೂಮಂಡಲವನ್ನು ಉದ್ಧರಿಸಬೇಕೆಂದೆಣಿಸಿ, ಯಜ್ಞಸ್ವರೂಪವಾದ ವರಾಹಾವತಾರವನ್ನು ಧರಿಸಿ, ವಜ್ರಪಾಣಿಯಾದ ದೇವೇಂದ್ರನು ಕುಲಾಚಲಗಳನ್ನು ಭೇದಿಸುವಂತೆ ಸಮುದ್ರಮಧ್ಯದಲ್ಲಿ ಸಿರಾಟವನ್ನಾಡುತ್ತಾ ತನಗೆ ಪ್ರತಿಭಟಿಸಿದ ಹಿರಣ್ಯಾಕ್ಷನೆಂಬ ಆದಿರಾಕ್ಷಸನನ್ನು ತನ್ನ ಕೋರೆದಾಡೆಯಿಂದಲೇ ಸೀಳಿ ಸಂಹರಿಸಿದನು. ಇದೇ ವರಾಹಾವತಾರವು ॥ ೧ ॥ ಬಳಿಕ ಆಭಗವಂತನು ರುಚಿಯೆಂಬವನಿಂದ ಆತನ ಮಡದಿಯಾದ ಆಕೂತಿದೇವಿಯಲ್ಲಿ ಸುಯಜ್ಞನೆಂಬ ಹೆಸರಿನಿಂದ ಜನಿಸಿ, ತನ್ನ ಪತ್ನಿಯಾದ ದಕ್ಷಿಣೆಯಲ್ಲಿ ಸುಯಾಮರೆಂಬ ದೇವತೆಗಳನ್ನು ಜನಿಯಿಸಿ, ತಾನೇ ಇಂದ್ರನಾಗಿ ಮೂರುಲೋಕಗಳಿಗೂ ಉಂಟಾಗಿದ್ದ ಬಾಧೆಯನ್ನು ಪರಿಹರಿಸಿದನು. ಇದಕ್ಕಾಗಿ ಇವನ ಮಾತಾಮಹನಾಗಿದ್ದ ಸ್ವಾಯಂಭುವ ಮನುವು, ಈತನಿಗೆ ಮೊದಲಿದ್ದ ಸುಯಜ್ಞನೆಂಬ ಹೆಸರಿನ ಜತೆಗೆ ಹರಿಯೆಂಬ ಹೆಸರನ್ನೂ ಕೊಟ್ಟನು. ಇದನ್ನು ಯಜ್ಞಾವತಾರವೆನ್ನುವರು ॥ ೨ ॥ ಎಲೈ ನಾರದನೆ ! ಆಮೇಲೆ ಕರ್ದಮ ಪ್ರಜಾಪತಿಯಿಂದ ಆತನ ಪತ್ನಿಯಾದ ದೇವಹೂತಿಯಲ್ಲಿ ಒಂಬತ್ತುಮಂದಿ ಅಕ್ಕತಂಗಿಯರೊಡನೆ ಜನಿಸಿ, ಯಾವ ಬ್ರಹ್ಮವಿದ್ಯೆಯನ್ನು ಒಮ್ಮೆ ಉಪದೇಶಿಸಿದ ಮಾತ್ರದಿಂದಲೇ ಮನಸ್ಸನ್ನು ಆವರಿಸಿರುವ ಕಾಮಕ್ರೋಧಾದಿ ಕಲ್ಮಷ

ನವಭಿ ರಾತ್ಮಗತಿಂ ಸ್ವಮಾತ್ರೇ । ಊಚೇ ಯಯಾತ್ಮ ಶಮಲಂ ಗುಣಸಂಗ ಪಂಕ ಮಸ್ಮಿನ್ ವಿಧೂಯ ಕಪಿಲಸ್ಯ ಗತಿಂ ಪ್ರಪೇದೇ ॥ ೩ ॥ ಅತ್ರೇ ರಪತ್ಯ ಮಭಿಕಾಂಕ್ಷತ ಆಹ ತುಷ್ಟೋ ದತ್ತೋ ಮಯಾಹಮಿತಿ ಯದ್ಭಗವಾನ್ ಸದತ್ತಃ । ಯತ್ಪಾದ ಪಂಕಜ ಪರಾಗ ಪವಿತ್ರದೇಹಾ ಯೋಗರ್ಧಿ ಮಾಪು ರುಭಯೀಂ ಯದು ಹೈಹಯಾದ್ಯಾಃ ॥ ೪ ॥ ತಪ್ತಂ ತಪೋ ವಿವಿಧ ಲೋಕ ಸಿಸೃಕ್ಷಯಾ ಮೇ ಆದೌ ಸನಾತ್ ಸ್ವತಪಸಃ ಸಚತುಸ್ಸನೋ ಭೂತ್ । ಪ್ರಾಕ್ಕಲ್ಪ ಸಂಪ್ಲವ ವಿನಷ್ಟ ಮಿಹಾತ್ಮ ತತ್ತ್ವಂ ಸಮ್ಯ ಗ್ಜಗಾದ

ಊಚೇ-ಹೇಳಿದನು ॥ ೩ ॥ ಅಪತ್ಯಂ-ಮಕ್ಕಳನ್ನು, ಅಭಿಕಾಂಕ್ಷತಃ-ಬಯಸುವ, ಅತ್ರೇಃ-ಅತ್ರಿಯಿಂದ, ತುಷ್ಟಃ-ಸಂತೋಷಗೊಂಡವನಾಗಿ, ಮಯಾ-ನನ್ನಿಂದ, ಅಹಂ-ನಾನು, ದತ್ತಃ-ಕೊಡಲ್ಪಟ್ಟೆನು, ಇತಿ-ಹೀಗೆ, ಭಗವಾನ್-ಭಗವಂತನು, ಯತ್-ಯಾವಕಾರಣದಿಂದ, ಆಹ-ಹೇಳಿದನೋ, ತತ್-ಆದುದರಿಂದ ಯತ್ಪಾ...ಹಾಃ, ಯತ್-ಯಾವನು, ಪಾದಪಂಕಜ-ಪಾದಕಮಲದ, ಪರಾಗ - ಧೂಳಿಯಿಂದ, ಪವಿತ್ರ-ಪರಿಶುದ್ಧವಾದ, ದೇಹಾಃ-ಶರೀರವುಳ್ಳ, ಯದುಹೈಹಯಾದ್ಯಾಃ-ಯದು, ಕಾರ್ತವೀರ್ಯರೇ ಮೊದಲಾದವರು, ಉಭಯೀಂ-ಎರಡುವಿಧವಾದ,ಯೋಗರ್ಧಿಂ-ಯೋಗಸಿದ್ಧಿಯನ್ನೂ, ಆಪುಃ-ಹೊಂದಿದರೋ ಅಂತಹ, ದತ್ತಃ-ದತ್ತನೆಂಬ ಹೆಸರಿನಿಂದ, ಜಾತಃ-ಹುಟ್ಟಿದನು, ॥೪॥ ಆದೌ-ಸೃಷ್ಟ್ಯಾದಿಯಲ್ಲಿ, ವಿವಿ...ಯಾ, ವಿವಿಧ-ಹಲವು ಬಗೆಯಾದ, ಲೋಕ-ಜಗತ್ತಿನ, ಸಿಸೃಕ್ಷಯಾ-ಸೃಷ್ಟಿಯ ಕೋರಿಕೆಯಿಂದ, ಮೇ - ನನ್ನಿಂದ, ತಪಃ-ತಪಸ್ಸು, ತಪ್ತಂ-ಮಾಡಲ್ಪಟ್ಟಿತು, ಸನಾತ್ - ಅಖಂಡಿತವಾದ, ಸ್ವತಪಸಃ - ನನ್ನ ತಪಸ್ಸಿನಿಂದ, ಸಃ - ಆ ಭಗವಂತನು, ಚತುಸ್ಸನಃ - ಸನಶಬ್ದ ಪೂರ್ವರಾದ ನಾಲ್ವರಾಗಿ, ಅಭೂತ್-ಆದನು, ಯತ್ ಯಾವುದನ್ನು, ಮುನಯಃ-ಮುನಿಗಳು, ಆತ್ಮನ್-ತಮ್ಮ ಮನಸ್ಸಿನಲ್ಲಿ, ಅಚಕ್ಷತ-ಕಂಡರೋ, ಪ್ರಾ...

ಗಳನ್ನು ತೊಳೆದು ಪುನರ್ಭವವಿಲ್ಲದಂತೆ ನಿರ್ವಾಣವನ್ನು ಪಡೆವರೋ, ಅಂತಹ ಬ್ರಹ್ಮ ವಿದ್ಯೆಯನ್ನು ತಾಯಿಯಾದ ದೇವಹೂತಿಗೆ ತಿಳಿಸಿದನು. ಇದೇ ಕಪಿಲಾವತಾರವು ॥ ೩ ॥ ಮತ್ತು ಆ ಪರಮಾತ್ಮನು, ಮಕ್ಕಳಾಗಬೇಕೆಂದು ತಪಸ್ಸುಮಾಡುತ್ತಿದ್ದ, ಪವಿತ್ರನಾದಅತ್ರಿಯನ್ನು ಕುರಿತು "ಎಲೈ ಮುನೀಂದ್ರನೆ ! ನಿನ್ನ ತಪಸ್ಸಿಗೆ ನಾನು ಮೆಚ್ಚಿರುವುದರಿಂದ ನಾನೇ ನಿನಗೆ ಪುತ್ರನಾಗುವೆನು" ಎಂದು ವರವನ್ನಿತ್ತು 'ದತ್ತಾತ್ರೇಯ' ನೆಂಬ ನಾಮದಿಂದಾತನಿಗೆ ಮಗನಾಗಿ ಜನಿಸಿ, ತನ್ನ ಪಾದಕಮಲ ಪರಾಗದಿಂದ ಪವಿತ್ರಮೂರ್ತಿಗಳಾದ ಕಾರ್ತವೀರ್ಯನೇ ಮುಂತಾದ ಹೈಹಯರಿಗೂ,ಯಾದವರಿಗೂ ಸಹ ತನ್ನ ಯೋಗಮಹಿಮೆಯಿಂದ ಐಹಿಕಾಮುಷ್ಮಿಕಫಲಗಳೆನಿಸಿದಭುಕ್ತಿ ಮುಕ್ತಿಗಳನ್ನಿತ್ತು ಸಲಹಿದನು.ಇದನ್ನು ದತ್ತಾತ್ರೇಯಾವತಾರವೆಂದು ಹೇಳುವರು॥೪॥ಪೂರ್ವದಲ್ಲಿ ನಾನುಹಲವು ಬಗೆಗಳಾದ ಲೋಕಗಳನ್ನು ಸೃಜಿಸಬೇಕೆಂದೆಣಿಸಿ,ತೀವ್ರತಪಸ್ಸನ್ನು ಗೈಯುತ್ತಿರಲು, ಅದರಿಂದ ಪ್ರಸನ್ನನಾದ ಭಗವಂತನು,ಸನಕ,ಸನಂದನ,ಸನತ್ಕುಮಾರ,ಸನತ್ಸುಜಾತರೆಂಬ ನಾಲ್ಕುರೂಪಗಳಿಂದ ನನಗೆಪುತ್ರರಾಗಿಜನಿಸಿ,ಯಾವತತ್ವವನ್ನು ಒಮ್ಮೆ ಉಪದೇಶಿಸಿದಮಾತ್ರದಿಂದಲೇ ಮುನಿಗಳಾದವರು ಆತ್ಮಸಾಕ್ಷಾತ್ಕಾರವನ್ನುಪಡೆದರೋ, ಪೂರ್ವಕಲ್ಪಾಂತದಲ್ಲಿ

ಮುನಯೋ ಯದಚಕ್ಷ ತಾತ್ಮನ್* ॥೫॥ ಧರ್ಮಸ್ಯ ದಕ್ಷದುಹಿತರ್ಯಜ
ನಿಷ್ಟ ಮೂರ್ತ್ಯಾಂ ನಾರಾಯಣೋ ನರಇತಿ ಸ್ವತಪಃ ಪ್ರಭಾವಃ।ದೃಷ್ಟ್ವಾ
ತ್ಮನೋ ಭಗವತೋ ನಿಯಮಾವಲೋಪಂ ದೇವ್ಯ ಸ್ತ್ವನಂಗ ಪೃತನಾ ಘಟಿ
ತುಂ ನಶೇಕುಃ ॥ ೬ ॥ ಕಾಮಂ ದಹಂತಿ ಕೃತಿನೋ ನನು ರೋಷ
ದೃಷ್ಟ್ಯಾ †ರೋಷಂ ದಹಂತ ಮುತ ತೇ ನ ದಹಂತ್ಯ ಸಹ್ಯಂ । ಸೋಯಂ
ಯದಂತ ರಮಲಂ ಪ್ರವಿಶನ್ ಭಬೇತಿ ಕಾಮಃ ಕಥಂ ನು ಪುನರಸ್ಯ ಮನ

ಷ್ಟಂ, ಪ್ರಾಕ್ಕಲ್ಪ-ಪೂರ್ವಕಲ್ಪದ, ಸಂಪ್ಲವ-ಪ್ರಳಯದಿಂದ, ವಿನಷ್ಟಂ-ಅಳಿದುಹೋದ, ಆತ್ಮತತ್ವಂ-ಆತ್ಮಸ್ವರೂಪವನ್ನು, ಸಃ-ಆತನು, ಇಹ-ಇಲ್ಲಿ, ಸಮ್ಯಕ್-ಚೆನ್ನಾಗಿ, ಜಗಾದ-ಹೇಳಿದನು, ॥ ೫ ॥

ಅನಂಗಪೃತನಾಃ-ಮನ್ಮಥನಿಗೆ ಸೈನ್ಯದಂತಿರುವ, ದೇವ್ಯಃ-ಅಪ್ಸರಸ್ತ್ರೀಯರು, ಯಸ್ಯಭಗವತಃ-ಯಾವಭಗವಂತನಿಂದ, ಆತ್ಮನಃ-ತಮಗಿಂತಲೂ ಸುಂದರಿಯರಾದ ಸ್ತ್ರೀಯರನ್ನು, ದೃಷ್ಟ್ವಾ-ಕಂಡು, ಅಥವಾ ಅತ್ಮನಃ-ತಮ್ಮ, ನಿಯಮಾವಲೋಪಂ-ವ್ರತಭಂಗವನ್ನು ಕಂಡು, ಘಟಿತುಂ - ಆತನವ್ರತಕ್ಕೆ, ಭಂಗವನ್ನುಂಟುಮಾಡುವುದಕ್ಕೆ, ನಶೇಕುಃ-ಸಮರ್ಥರಾಗದೇಹೋದರೋ, ಅಂತಹ, ಸ್ವತಪಃಪ್ರಭಾವಃ-ಅಸದಶಮಹಿಮೆಯುಳ್ಳ ಭಗವಂತನು, ದಕ್ಷದುಹಿತರಿ-ದಕ್ಷನಿಗೆ ಪುತ್ರಿಯಾದ, ಧರ್ಮಸ್ಯ-ಧರ್ಮಪತ್ನಿಯಾದ, ಮೂರ್ತ್ಯಾಂ-ಮೂರ್ತಿದೇವಿಯಲ್ಲಿ, ನಾರಾಯಣಃ-ನಾರಾಯಣನೆಂದೂ, ನರಇತಿ-ನರನೆಂದೂ, ಜಾತಃ-ಉಂಟಾದನು ॥ ೬ ॥ ಕೃತಿನಃ-ಧನ್ಯರಾದ ರುದ್ರಾದಿಗಳು, ರೋಷದೃಷ್ಟ್ಯಾ-ಕೋಪದ ನೋಟದಿಂದ, ಕಾಮಂ-ಕಾಮನನ್ನು, ದಹಂತಿನನು-ಸುಡುವರಷ್ಟೆ, ಉತ-ಆದರೆ, ತೇ - ಅವರು, ದಹಂತಂ-ತಮ್ಮನ್ನೇ ಸುಡುತ್ತಿರುವ, ಅಸಹ್ಯಂ-ತಡೆಯಲಾಗದ, ಯಂರೋಷಂ-ಯಾವಕ್ರೋಧವನ್ನು, ನದಹಂತಿ-

ನಷ್ಟವಾಗಿದ್ದ ಅಂತಹ ಆತ್ಮತತ್ವ ಸಂಪ್ರದಾಯವನ್ನು ನನಗೆ ಉಪದೇಶಿಸಿದನು. ಇದೇ ಕುಮಾರಾವತಾರವು ॥ ೫ ॥ ಅಲ್ಲದೆ ಪರಮಾತ್ಮನು ದಕ್ಷನಿಗೆ ಪುತ್ರಿಯೂ, ಧರ್ಮನಿಗೆ ಪತ್ನಿಯೂ ಆದ ಮೂರ್ತಿದೇವಿಯಲ್ಲಿ ನರನಾರಾಯಣರೆಂಬ ಹೆಸರಿನಿಂದ ಹುಟ್ಟಿದನು. ಅವರ ಮಹಿಮೆಯನ್ನೇನೆಂದು ಬಣ್ಣಿಸಲಿ ? ಆ ನರನಾರಾಯಣರು ಬದರಿಕಾಶ್ರಮದಲ್ಲಿ ತಪಸ್ಸನ್ನು ಗೈಯ್ಯುತ್ತಿರುವಾಗ ಅವರ ತಪಸ್ಸನ್ನು ಭಂಗಗೊಳಿಸಬೇಕೆಂದು ಬಂದ ಅಪ್ಸರಸ್ತ್ರೀಯರು, ತಮಗಿಂತಲೂ ಸುಂದರಿಯರಾದ ಊರ್ವಶಿ ಮೊದಲಾದ ಅಪ್ಸರಸ್ತ್ರೀಯರು ಅವರ ತೊಡೆಯಿಂದ ಜನಿಸಿದುದಂ ಕಂಡು ಅವರ ತಪೋಭಂಗವನ್ನು ಮಾಡಲಾರದೆ 'ಮುನಿಗಳ ತಪೋಭಂಗವನ್ನು ಮಾಡಬೇಕು' ಎಂಬ ತಮ್ಮ ವ್ರತವೇ ಭಂಗವಾದುದರಿಂದ ನಾಚಿಕೆಗೊಂಡು ಹಿಂದಿರುಗಿದರು॥೬॥ ಅಯ್ಯಾ ನಾರದಮುನಿಯೆ! ಲೋಕದಲ್ಲಿ ರುದ್ರನೇ ಮೊದಲಾದ ಅನೇಕಮಂದಿ ಮಹಾತ್ಮರು ಕೋಪದಿಂದ ನೋಡಿದ ಮಾತ್ರದಲ್ಲಿಯೇ ಕಾಮ

† ಶ್ಲೋ॥ ಅಪಕಾರಿಣಿ ಕೋಪಶ್ಚೇ ತ್ಕೋಪೇ ಕೋಪಃ ಕಥಂ ನಹಿ । ಧರ್ಮಾರ್ಥಕಾಮ ಮೋಕ್ಷಾಣಾಂ ಪ್ರತ್ಯಕ್ಷ ಪರಿಪಂಥಿನಿ ॥ ಅಯ್ಯಾ ಪುರುಷನೆ! ಅಪಕಾರಮಾಡಿದವರಲ್ಲಿ ನೀನುಕೋಪಿಸುವುದೇ ದಿಟವಾದರೆ ಧರ್ಮಾರ್ಥಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ನಾಶಗೊಳಿಸುವ ಮಹಾಪಕಾರಿಯಾದ ಕೋಪದಲ್ಲಿ ನೀನೇಕೆ ಕೋಪಿಸುವುದಿಲ್ಲ? ಎಂದರೆ ಕೋಪವನ್ನು ಬಿಡಬೇಕೆಂದು ಭಾವವು.

ಶ್ರಯೇತ ? ॥೭॥ ವಿದ್ಧಃ ಸಪತ್ನ್ಯುದಿತಪತ್ರಿಭಿರಂತಿ ರಾಜ್ಞೋ
ಬಾಲೋಽಪಿ ಸನ್ನುಪಗತಸ್ತಪಸೇ ವನಾನಿ । ತಸ್ಮಾ ಅದಾದ್ಧ್ರುವ
ಗತಿಂ ಗೃಣತೇ ಪ್ರಸನ್ನೋ ದಿವ್ಯಾಃ ಸ್ತುವಂತಿ ಮುನಯೋ ಯದುಪ
ರ್ಯಧಸ್ತಾತ್ ॥ ೮ ॥ ಯದ್ವೇನಮುತ್ಪಥಗತಂ ದ್ವಿಜವಾಕ್ಯ
ವಜ್ರವಿಪ್ಲುಷ್ಟಪೌರುಷಭಗಂ ನಿರಯೇ ಪತಂತಂ । ತ್ರಾತ್ವಾಽರ್ಥಿ
ತೋ ಜಗತಿ *ಪುತ್ರಪದಂ ಚ ಲೇಭೇ ದುಗ್ಧಾ ವಸೂನಿ ವಸುಧಾ ಸಕಲಾನಿ

ಸುಡುವುದಿಲ್ಲವೋ, ಸೋಯಂ-ಆ ರೋಷವು, ಯದಂತರಂ-ಯಾವನೊಳಗಡೆಯನ್ನು, ಪ್ರವಿಶ್ಯ - ಹೊಗುತ್ತಾ, ಅಥವಾ ಅಮಲಂ-ನಿರ್ಮಲವಾದ, ಯದಂತಃ - ಯಾವನಮನಸ್ಸನ್ನು, ಪ್ರವಿಶ್ಯ-ಹೊಗುತ್ತಾ, ಬಿಭೇತಿ-ಹೆದರುವುದೋ, ಅಸ್ಯ-ಅಂತಹ ಮಹರ್ಷಿಯ, ಮನಃ-ಮನಸ್ಸನ್ನು, ಕಾಮಃಪುನಃ-ಕಾಮವೆಂಬುದು, ಕಥಂ-ಹೇಗೆ, ಶ್ರಯೇತ - ಆಶ್ರಯಿಸೀತು ? ॥ ೭ ॥ ರಾಜ್ಞಃ - ತಂದೆಯಾದ ಉತ್ತಾನಪಾದನ, ಅಂತಿ-ಸಮೀಪದಲ್ಲಿ, ಸಪ...ಭಿಃ, ಸಪತ್ನೀ-ಮಲತಾಯಿಯಾದ ಸುರುಚಿಯಿಂದ, ಉದಿತ - ಉಂಟಾದ ಮಾತುಗಳೆಂಬ, ಪತ್ರಿಭಿಃ-ಬಾಣಗಳಿಂದ, ವಿದ್ಧಃ-ಹೊಡೆಯಲ್ಪಟ್ಟ, ಯಃ-ಯಾವಧ್ರುವನು, ಬಾಲೋಪಿಸನ್-ಹಸುಳೆಯಾದರೂ, ತಪಸೇ-ತಪಸ್ಸಿಗಾಗಿ, ವನಾನಿ - ಕಾಡುಗಳನ್ನು, ಉಪಗತಃ-ಹೊಂದಿದನೋ, ಗೃಣತೇ-ಹೊಗಳುವ, ತಸ್ಮೈ-ಆಧ್ರುವನಿಗೆ, ಪ್ರಸನ್ನಃ-ಪ್ರಸನ್ನನಾಗಿ, ಯತ್-ಯಾವುದನ್ನು, ಉಪರಿ-ಮೇಲೆಯೂ, ಅಧಸ್ತಾತ್-ಕೆಳಗೂ, ದಿವ್ಯಾಃ-ದೇವಲೋಕವಾಸಿಗಳಾದ, ಮುನಯಃ - ಸಪ್ತರ್ಷಿಗಳು ಮೊದಲಾದವರು, ಸ್ತುವಂತಿ-ಹೊಗಳುವರೋ ಅಂತಹ, ಧ್ರುವಪದಂ-ಸ್ಥಿರವಾದ ಗತಿಯನ್ನು, ಅದಾತ್-ಕೊಟ್ಟನು ॥ ೮ ॥ ಯೇನ-ಯಾವನಿಂದ, ವಸುಧಾ-ಭೂಮಿಯು, ಸಕಲಾನಿ-ಸಮಸ್ತಗಳಾದ, ವಸೂನಿ-ಧಾನ್ಯಾದಿಗಳನ್ನು, ದುಗ್ಧಾ-ಕರೆಯಲ್ಪಟ್ಟಿತೋ ಅಂತಹ, ಜಗತಿ-ಲೋಕದಲ್ಲಿ, ಅರ್ಥಿತಃ - ಅವತರಿಸಬೇಕೆಂದು ಪ್ರಾರ್ಥಿಸಲ್ಪಟ್ಟವನಾಗಿ, ಉತ್ಪಥಗತಂ-ದುರ್ಮಾರ್ಗವನ್ನು ಹೊಂದಿದುದರಿಂದಲೇ, ದ್ವಿ...ಗಂ

ನನ್ನು ಗೆದ್ದಿದ್ದುವರು, ಆದರೆ ಅವರು ಆ ಕಾಲದಲ್ಲಿ, ತಮ್ಮನ್ನೇ ಸುಡುತ್ತಾ ತಡೆಯಲಾಗದಂತಿರುವ ಕೋಪವನ್ನು ಮಾತ್ರ ಸುಡಲಾರದೇ ಹೋದರು. ಇಂತಹ ಕೋಪವೂ ಕಹ ಯಾರಬಳಿಗೆ ಹೋಗುವುದಕ್ಕೆ ಹೆದರಿಕೊಂಡಿತೋ, ಅಂತಹ ನರನಾರಾಯಣರು ಕಾಮವನ್ನು ಗೆದ್ದುದೇನಾಶ್ಚರ್ಯವೆ ? ॥ ೭ ॥

ಆ ಭಗವಂತನು ಮತ್ತೊಂದವೆ್ಮ, ಉತ್ತಾನಪಾದರಾಜನ ಹಿರೀಹೆಂಡತಿಯ ಮಗನಾದ ಧ್ರುವನು, ತನ್ನ ಮಲತಾಯಿಯಾದ ಸುರುಚಿಯ ಕುಹಕೋಕ್ತಿಗಳೆಂಬಬಾಣಗಳಿಂದ ನೊಂದು, ಚಿಕ್ಕಂದಿನಲ್ಲಿಯೇ ತಪಸ್ಸನ್ನು ಮಾಡುವುದಕ್ಕಾಗಿ ಕಾಡಿಗೆ ಹೋಗಲು, ಆ ಧ್ರುವನಿಗೆ ಪ್ರಸನ್ನನಾಗಿ, ಸಕಲರಿಂದಲೂ ಕೊಂಡಾಡಲ್ಪಡುವ ಸರ್ವೋನ್ನತವಾದ ಧ್ರುವಪದವನ್ನಿತ್ತನು. ಇದು ಮತ್ತೊಂದವತಾರವು ॥೮॥ ವೇನನೆಂಬರಾಜನು ದುರ್ಮಾರ್ಗಗತ

* ಸ್ಮೃತಿ: ಪುನ್ನಾಮ್ನೋ ನರಕಾದ್ಯಸ್ಮಾತ್ಪಿತರಂ ತ್ರಾಯತೇ ಸುತಃ। ತಸ್ಮಾತ್ಪುತ್ರ ಇತಿ ಪ್ರೋಕ್ತಃ ಸ್ವಯಮೇವ ಸ್ವಯಂಭುವಾ॥ 'ಪುತ್' ಎಂಬ ನರಕದಿಂದ ತಂದೆಯನ್ನು ಕಾಪಾಡುವನಾದುದರಿಂದ ಮಗನಿಗೆ ಪುತ್ರನೆಂದು ಹೆಸರು.

ಯೇನ ॥೯॥ ನಾಭೇರಸಾ ವೃಷಭ ಆಸ ಸುದೇವಿ ಸೂನು ರ್ಯೋ ವೈ ಚ
ಚಾರ ಸಮದೃ ಗ್ಜಡಯೋಗ ಚರ್ಯಾಂ । ಯತ್ಪಾರ *ಮಹಂಸ್ಯಮೃ
ಷಯಃ ಪದ ಮಾಮನಂತಿ ಸ್ವಸ್ಥಃ ಪ್ರಶಾಂತ ಕರಣಃ ಪರಿಮುಕ್ತ
ಸಂಗಃ ॥೧೦॥ ಸತ್ರೇ ಮಮಾಸ ಭಗವಾನ್ ಹಯ*ಶೀರಷಾಽಥೋ ಸಾಕ್ಷಾ
ತ್ಸಯಜ್ಞಪುರುಷ ಸ್ತಪನೀಯ ವರ್ಣಃ । ಛಂದೋಮಯೋ ಮಖಮ
ಯೋಽಖಿಲ ದೇವತಾತ್ಮಾ ವಾಚೋ ಬಭೂವು ರುಶತೀ ಶ್ಶ್ವಸ ತೋಽಸ್ಯ

ದ್ವಿಜ-ಬ್ರಾಹ್ಮಣರ, ವಾಕ್ಯ - ವಾಕ್ಯವೆಂಬ, ವಜ್ರ-ವಜ್ರಾಯುಧದಿಂದ, ವಿಪ್ಲುಷ್ಟ - ಸುಡಲ್ಪಟ್ಟ, ಪೌರುಷ-ಪರಾಕ್ರಮವು, ಭಗಂ-ಐಶ್ವರ್ಯವೂ ಉಳ್ಳವನಾಗಿ, ನಿರಯೇ-ನರಕದಲ್ಲಿ, ಪತಂತಂ ಬಿದ್ದಿರುವ, ವೇನಂ-ತಂದೆಯಾದ ವೇನರಾಜನನ್ನು, ತ್ರಾತ್ವಾ - ಸಂರಕ್ಷಿಸಿ, ಪುತ್ರಪದಂಚ - ಸಾರ್ಥಕವಾದ ಪುತ್ರತ್ವವನ್ನು, ಪ್ರಪೇದೇ-ಹೊಂದಿದನು ॥ ೯ ॥ ಸಮದೃಕ್-ಭೇದಬುದ್ಧಿಯಿಲ್ಲದ, ಸ್ವಸ್ಥಃ-ಸ್ವಸ್ವರೂಪದಲ್ಲಿರುವ, ಪ್ರಶಾಂತಕರಣಃ-ಜಿತೇಂದ್ರಿಯನಾದ, ಪರಿಮುಕ್ತಸಂಗಃ - ನಿಸ್ಸಂಗನಾದ, ಯಃ-ಯಾವನು, ಜಡ...ಚರ್ಯಾಂ, ಜಡ-ಮರುಳನಂತೆ, ಯೋಗ-ಯೋಗದಿಂದ, ಚರ್ಯಾಂ-ನಡವಳಿಯನ್ನು, ಚಕಾರ-ಮಾಡಿದನೋ, ಋಷಯಃ--ಋಷಿಗಳು, ಯತ್ - ಯಾವನ ನಡವಳಿಯನ್ನು, ಪಾರಮಹಂಸ್ಯಂ - ಪರಮಹಂಸರಿಂದ ಹೊಂದಲ್ಪಡಬೇಕಾದ, ಪದಂ-ಸ್ಥಾನವನ್ನಾಗಿ, ಆಮನಂತಿ - ತಿಳಿಯುವರೋ, ಅಸೌ-ಅಂತಹ ಭಗವಂತನು, ನಾಭೇಃ-ನಾಭಿರಾಜನಿಂದ, ಸುದೇವಿಸೂನುಃ-ಸುದೇವಿಗೆ ಪುತ್ರನಾಗಿ, ಋಷಭಃ-ಋಷಭನೆಂಬದಾಗಿ, ಆಸ-ಅವತರಿಸಿದನು ॥ ೧೦ ॥ ಶ್ವಸತಃ-ಉಸಿರು ಬಿಡುವ, ಯಸ್ಯ-ಯಾವ ಭಗವಂತನ ನಸ್ತಃ-ಮೂಗಿನ ಹೊಳ್ಳೆಯಿಂದ, ಉಶತೀಃ-ಕಮನೀಯ್ಯಗಳಾದ, ವಾಚಃ-ವೇದವಾಕ್ಯಗಳು, ಬಭೂವುಃ-ಉಂಟಾದುವೋ, ಅಂತಹ, ತಪನೀಯವರ್ಣಃ-ಚಿನ್ನದ ಬಣ್ಣವುಳ್ಳ, ಛಂದೋಮಯಃ-ವೇದಸ್ವರೂಪನೂ, ಮಖಮಯಃ-ಯಜ್ಞಸ್ವರೂಪನೂ, ಅಖಿಲದೇವತಾತ್ಮಾ-ಸಕಲದೇವತಾ ಸ್ವರೂಪನೂ, ಭಗವಾನ್-ಭಗವಂತನೂ, ಆದ, ಸಃ-ಆ, ಯಜ್ಞಪುರುಷಃ-ಯಜ್ಞಪುರುಷನು, ಅಥೋ-ಮತ್ತೊಮ್ಮೆ, ಮಮ ನನ್ನ, ಸತ್ರೇ - ಯಜ್ಞದಲ್ಲಿ, ಸಾಕ್ಷಾತ್ - ಪ್ರತ್ಯಕ್ಷವಾಗಿ, ಹಯಶೀರಷಾ - ಹಯಗ್ರೀವನು, ಆಸ-

---

ನಾಗಿ, ಲೋಕವನ್ನೆಲ್ಲಾ ಕೋಟಲೆಗೊಳಿಸುತ್ತಾ, ಬ್ರಾಹ್ಮಣರ ಶಾಪದಿಂದ ಐಶ್ವರ್ಯವನ್ನು ಕಳೆದುಕೊಂಡು, ಪರಾಕ್ರಮ ಹೀನನಾದನು. ಇದರಿಂದ ಲೋಕವೂ ನಾಶವಾಗುತ್ತಾ ಬಂದುದಲ್ಲದೆ ಅವನೂ ನರಕಕ್ಕೆ ಬಿದ್ದನು. ಆಗ ಮಹರ್ಷಿಗಳ ಪ್ರಾರ್ಥನಾನುಸಾರವಾಗಿ ಭಗವಂತನು, ಪೃಥುವೆಂಬ ಹೆಸರಿನಿಂದ ಅವನಿಗೆ ಮಗನಾಗಿ ಜನಿಸಿ, ಭೂದೇವಿಗೆ ಗೋರೂಪವನ್ನಿತ್ತು, ಅದರಿಂದ ಧನ,ಧಾನ್ಯ,ರತ್ನಾದಿ ಸಕಲವಸ್ತುಗಳನ್ನೂ ಕರೆದು ಲೋಕವನ್ನು ಸಲಹಿದುದಲ್ಲದೆ ತಂದೆಗೂ ದುರ್ಗತಿಯನ್ನು ತಪ್ಪಿಸಿದನು. ಇದೇ ಪೃಥುವಿನ ಅವತಾರವು ॥ ೯ ॥ ಇನ್ನೊಮ್ಮೆ ಆ ಪರಮಾತ್ಮನು ಆಗ್ನೀಧ್ರನ ಮಗನಾದ ನಾಭಿರಾಜನಿಂದ ಸುದೇವಿಯೆಂಬ ನಾಮಾಂತರವುಳ್ಳ ಮೇರುದೇವಿಯಲ್ಲಿ ಋಷಭನೆಂಬ ಹೆಸರಿನಿಂದ ಜನಿಸಿ, ಸರ್ವಸಂಗ ಪರಿತ್ಯಾಗವನ್ನು ಮಾಡಿ, ಇಂದ್ರಿಯಗಳನ್ನು ಗೆದ್ದು, ಸರ್ವಸಮನೆನಿಸಿ, ಸರ್ವದಾ ಸಮಾಧಿ ನಿಷ್ಠನಾಗಿ ಜಡನಂತೆ ಸಂಚರಿಸುತ್ತಿದ್ದನು. ಮಹ

ನಸ್ತಃ ॥ ೧೧ ॥ ಮತ್ಸ್ಯೋ ಯುಗಾಂತ ಸಮಯೇ ಮನುನೋಪ
ಲಬ್ಧಃ ಕ್ಷೋಣೀಮಯೋ ನಿಖಿಲ ಜೀವ ನಿಕಾಯ ಕೇತಃ । ವಿಸ್ರಂಸಿ
ತಾ ನುರುಭಯೇ ಸಲಿಲೇ ಮುಖಾ ನ್ಮೇ ಆದಾಯ ತತ್ರ ವಿಜಹಾರ ಹ ವೇದ
ಮಾರ್ಗಾನ್ ॥ ೧೨ ॥ ಕ್ಷೀರೋದಧಾ ವಮರದಾನವ ಯೂಥಪಾನಾ
ಮುನ್ಮಥ್ನತಾ ಮಮೃತಲಬ್ಧಯ ಆದಿ ದೇವಃ। ಪೃಷ್ಠೇನ ಕಚ್ಛಪ ವಪು
ರ್ವಿದಧಾರ ಗೋತ್ರಂ ನಿದ್ರಾಕ್ಷಣೋಽದ್ರಿಪರಿವರ್ತ ಕಷಾಣಕಂಡೂಃ ॥

ಆದನು ॥ ೧೧ ॥ ಉರುಭಯೇ-ಅತಿಭಯಂಕರವಾದ, ಸಲಿಲೇ - ಜಲದಲ್ಲಿ, ಮೇ-ನನ್ನ, ಮುಖಾತ್-ಮುಖದಿಂದ, ವಿಸ್ರಂಸಿತಾನ್-ಜಾರಿಬಿದ್ದ, ವೇದಮಾರ್ಗಾನ್-ವೇದಗಳನ್ನು, ಆದಾಯ-ತೆಗೆದುಕೊಂಡು, ಯಃ-ಯಾವನು ತತ್ರ-ಆ ಜಲದಲ್ಲಿ, ವಿಜಹಾರ-ಕ್ರೀಡಿಸಿದನೋ, ಆಭಗವಂತನು, ಯುಗಾಂತಸಮಯೇ-ಪ್ರಳಯಕಾಲದಲ್ಲಿ, ಕ್ಷೋಣೀಮಯಃ-ಭೂಮಿಗಾಶ್ರಯನೂ, ನಿಖಿ...ತಃ, ನಿಖಿಲ-ಸಕಲ,ಜೀವ-ಪ್ರಾಣಿಗಳ, ನಿಕಾಯ-ಸಮೂಹಕ್ಕೆ, ಕೇತಃ-ಸ್ಥಾನವೂ ಆದ, ಮತ್ಸ್ಯಃ-ಮತ್ಸ್ಯವಾಗಿ, ಮನುನಾ-ವೈವಸ್ವತ ಮನುವಿನಿಂದ, ಉಪಲಬ್ಧಃ-ಹೊಂದಲ್ಪಟ್ಟನು ॥೧೨॥ ಕ್ಷೀರೋದಧೌ-ಕ್ಷೀರಸಮುದ್ರದಲ್ಲಿ, ಅಮರ ದಾನವಯೂಥಪಾನಾಂ - ದೇವದಾನವಶೂರರು, ಅಮೃತಲಬ್ಧಯೇ - ಅಮೃತವನ್ನು ಪಡೆಯುವು ದಕ್ಕಾಗಿ, ಉನ್ಮಥ್ನತಾಂ-ಕಡೆಯುತ್ತಿರಲು, ಆದಿದೇವಃ-ಆನಾರಾಯಣಮೂರ್ತಿಯು, ನಿದ್ರಾಕ್ಷಣಃ-ನಿದ್ರಾರೂಪವಾದ ಉತ್ಸವವುಳ್ಳವನಾಗಿ, ಅದ್ರಿ...ಡೂಃ, ಅದ್ರಿ - ಮಂದರದ, ಪರಿವರ್ತ - ಸುತ್ತುವಿಕೆಯ, ಕಷಾಣ-ಕೆರೆಯುವಿಕೆಯುಳ್ಳ, ಕಂಡೂಃ - ನವೆಯುಳ್ಳವನೂ ಆಗಿ, ಕಚ್ಛಪವಪುಃ - ಆಮೆಯ ಶರೀರವನ್ನು ಪಡೆದು, ಪೃಷ್ಠೇನ-ಬೆನ್ನಿನಿಂದ, ಗೋತ್ರಂ - ಮಂದರಪರ್ವತವನ್ನು, ವಿದಧಾರ-ಧರಿ

ರ್ಷಿಗಳೆಲ್ಲರೂ ಆತನ ಪರಮಹಂಸಾಶ್ರಮವನ್ನು ಕೊಂಡಾಡುತ್ತಿದ್ದರು. ಇದು ಋಷ ಭಾವತಾರವು ॥ ೧೦ ॥ ಮತ್ತೊಮ್ಮೆ ನಾನು ಯಜ್ಞಮಾಡುತ್ತಿರಲು, ಚಿನ್ನದಂತೆ ಮೈಬಣ್ಣವುಳ್ಳವನೂ, ವೇದಸ್ವರೂಪನೂ, ಯಜ್ಞಸ್ವರೂಪನೂ, ಸಕಲ ದೇವತಾ ಸ್ವರೂಪನೂ, ನಿಶ್ವಾಸರೂಪವಾಗಿ ವೇದಗಳನ್ನು ಪ್ರಕಾಶಗೊಳಿಸಿದವನೂ, ಯಜ್ಞಪುರುಷನೂ ಆದಆಪರಮಾತ್ಮನು ಹಯಗ್ರೀವರೂಪದಿಂದ, ನನ್ನಯಜ್ಞದಲ್ಲಿ ಅವ ತರಿಸಿದನು. ಇದು ಹಯಗ್ರೀವಾವತಾರವು ॥ ೧೧ ॥ ಪ್ರಳಯಕಾಲದಲ್ಲಿ ಸಕಲಜೀವರಿಗೆ ಅಧಿಷ್ಠಾನವಾಗಿಯೂ, ಭೂಮಿಗೆ ಆಶ್ರಯನಾಗಿಯೂ ಇರುವ ಭಗವಂತನು, ಮತ್ಸ್ಯರೂಪವನ್ನು ಪಡೆದು ವೈವಸ್ವತ ಮನುವಿಗೆ ಪ್ರಸನ್ನನಾಗಿ, ನನ್ನಬಾಯಿಂದ ಜಾರಿಬಿದ್ದಿದ್ದ ವೇದಗಳನ್ನು ಉದ್ಧರಿಸಿ ನನಗಿತ್ತು, ಆ ಅಗಾಧವಾದ ಮಹಾ ಜಲದಲ್ಲಿ ವಿಹರಿಸಿದನು. ಇದು ಮತ್ಸ್ಯಾವತಾರವು ॥ ೧೨ ॥ ಅಮೃತವನ್ನು ಸಂಪಾದಿಸುವುದಕ್ಕಾಗಿ ದೇವದಾನವರು ಕ್ಷೀರಸಮುದ್ರವನ್ನು ಕಡೆಯುತ್ತಿರುವಾಗ ಮಂದರವು ಮುಳುಗಿ ಹೋಗಲು, ಭಗವಂತನು ದೇವಕಾರ್ಯಾರ್ಥವಾಗಿ ಆಮೆಯರೂಪವನ್ನು ಪಡೆದು, ಮುಳುಗಿದ್ದ ಮಂದರವನ್ನೆತ್ತಿ, ಅದರ ಭ್ರಮಣದಿಂದ ಬೆನ್ನಿನ ತಿನಿಸನ್ನು ಕಳೆದುಕೊಳ್ಳುವಂತೆಯೂ, ನಿದ್ರಾಸುಖವನ್ನು ಅನುಭವಿಸುವಂತೆಯೂ, ನಡುಗಡಲಲ್ಲಿ ವಿಹರಿಸಿದನು.

*ತ್ರೈವಿಷ್ಟಪೋರುಭಯಹಾ ಸ ನೃಸಿಂಹ ರೂಪಂ ಕೃತ್ವಾ ಭ್ರಮ ದ್ಭ್ರುಕುಟಿ ದಂಷ್ಟ್ರ ಕರಾಳ ವಕ್ತ್ರಂ । ದೈತ್ಯೇಂದ್ರ ಮಾಶು ಗದ ಯಾ Z ಭಿ ಪತಂತ ಮಾರಾ ದೂರೌ ನಿಪಾತ್ಯ ವಿದದಾರ ನಖೈ ಸ್ಸ್ಫುರಂತಂ ॥ ೧೪ ॥ ಅಂತಸ್ಸರ ಸ್ಯುರುಬಲೇನ ಪದೇ ಗೃಹೀತೋ ಗ್ರಾಹೇಣ ಯೂಥಪತಿ ರಂಬುಜಹಸ್ತ ಆರ್ತಃ । ಆಹೇದ ಮಾದಿಪುರುಷಾZ ಖಿಲ ಲೋಕನಾಥ! ತೀರ್ಥಶ್ರವಃ! ಶ್ರವಣಮಂಗಳ ನಾಮಧೇಯ! ॥೧೫॥

ಸಿದನು ॥ ೧೩ ॥ ತ್ರೈವಿಷ್ಟ...ಹಾ, ತ್ರೈವಿಷ್ಟಪ-ದೇವತೆಗಳ, ಉರು - ಅಧಿಕವಾದ, ಭಯ-ಭಯವನ್ನು, ಹಾ-ಹೋಗಲಾಡಿಸುವ, ಸಃ - ಆ ಭಗವಂತನು, ಸ್ಫುರಂತಂ-ಪ್ರಕಾಶಮಾನವಾದ, ನೃಸಿಂಹ ರೂಪಂ-ನೃಸಿಂಹಾವತಾರವನ್ನು, ಕೃತ್ವಾ-ಮಾಡಿ, ಭ್ರಮ...ಕ್ತ್ರಂ, ಭ್ರಮತ್-ಚಲಿಸುತ್ತಿರುವ, ಭ್ರುಕುಟಿ-ಹುಬ್ಬುಗಳಿಂದ ಕೂಡಿದ, ದಂಷ್ಟ್ರ-ಕೋರೆಹಲ್ಲುಗಳಿಂದ, ಕರಾಳ - ಭಯಂಕರವಾದ, ವಕ್ತ್ರಂ-ಮುಖವುಳ್ಳ, ಗದಯಾ-ಗದೆಯಿಂದ, ಅಭಿಪತಂತಂ-ಎದುರಾಂತ, ದೈತ್ಯೇಂದ್ರಂ-ಹಿರಣ್ಯಕಶಿಪುವನ್ನು, ಆಶು-ಬೇಗನೆ, ಆರಾತ್-ಸಮೀಪದಲ್ಲಿಯೇ, ಊರೌ-ತೊಡೆಯಲ್ಲಿ, ನಿಪಾತ್ಯ - ಕೆಡಹಿಕೊಂಡು, ನಖೈಃ-ಉಗುರುಗಳಿಂದ, ವಿದದಾರ-ಸೀಳಿದನು ॥ ೧೪ ॥ ಅಂತಸ್ಸರಸಿ - ಸರೋವರಮಧ್ಯದಲ್ಲಿ, ಉರುಬಲೇನ-ಅಧಿಕಶಕ್ತಿಯುಳ್ಳ, ಗ್ರಾಹೇಣ-ಮೊಸಳೆ (ನೆಗಳು) ಯಿಂದ, ಗೃಹೀತಃ - ಹಿಡಿಯಲ್ಪಟ್ಟ, ಯೂಥಪತಿಃ-ಆನೆಯ ಸಲಗನು, ಆರ್ತಃ-ಬಳಲಿ, ಅಂಬುಜ ಹಸ್ತಃ - ಸೊಂಡಲಿಂದ ಕಮಲವನ್ನು ಹಿಡಿದು, ಆದಿಪುರುಷ-ಪುರಾಣಪುರುಷನೆ ! ಅಖಿಲಲೋಕನಾಥ - ಸರ್ವಜಗದೀಶ್ವರನೆ ! ತೀರ್ಥಶ್ರವಃ - ಪವಿತ್ರಕೀರ್ತಿಯೆ! ಶ್ರವಣ...ಯ, ಶ್ರವಣ - ಕೇಳಿದ ಮಾತ್ರದಿಂದಲೇ, ಮಂಗಳ - ಶುಭಗಳನ್ನುಂಟುಮಾಡುವ, ನಾಮಧೇಯ-ಹೆಸರುಳ್ಳವನೆ ? ಕಾಪಾಡು, ಇದಂ-ಎಂಬಿದನ್ನು, ಆಹ-ಹೇಳಿತು ॥ ೧೫ ॥

ಇದು ಕಚ್ಛಪಾವತಾರವು ॥ ೧೩ ॥ ಸಕಲದೇವತೆಗಳ ಭಯವನ್ನೂ ಹೋಗಲಾಡಿಸುವ ಆ ಭಗವಂತನು,ಅಟ್ಟಹಾಸಮಾತ್ರದಿಂದಲೇ ರಾಕ್ಷಸರಿಗೆ ಭಯವನ್ನುಂಟುಮಾಡುವ ನೃಸಿಂಹರೂಪವನ್ನು ಧರಿಸಿ,ಕೋಪದಿಂದ ನಡುಗುತ್ತಿರುವ ಹುಬ್ಬುಗಳಿಂದಲೂ,ಭಯಂಕರಗಳಾದ ಕೋರೆಹಲ್ಲುಗಳಿಂದಲೂ,ಕರಾಳವಾದ ಮುಖದಿಂದಲೂಕೂಡಿ, ಗದಾಯುಧವನ್ನು ಧರಿಸಿ, ಯುದ್ಧಕ್ಕೆ ಸನ್ನದ್ಧನಾಗಿರುವ ಹಿರಣ್ಯಕಶಿಪುವೆಂಬ ದಾನವೇಂದ್ರನನ್ನು ತತ್ಕ್ಷಣದಲ್ಲಿಯೇ ತನ್ನ ತೊಡೆಯಮೇಲೆ ಕೆಡಹಿಕೊಂಡು ಉಗುರುಗಳಿಂದೆದೆಯನ್ನು ಬಗೆದು ಸಂಹರಿಸಿ, ಭಕ್ತನಾದ ಪ್ರಹಲ್ಲಾದನನ್ನು ರಕ್ಷಿಸಿದನು. ಇದು ನೃಸಿಂಹಾವತಾರವು ॥ ೧೪ ॥ ಮತ್ತೊಮ್ಮೆ, ಮಹಾ ಸರೋವರದ ಮಧ್ಯದಲ್ಲಿ, ನೀರುಕುಡಿಯುವುದಕ್ಕಾಗಿಬಂದು,ಮೊಸಳೆಯಿಂದ ಕಾಲಿನಲ್ಲಿ ಹಿಡಿಯಲ್ಪಟ್ಟ ಗಜರಾಜನು,ಬಳಲಿ ಬೆಂಡಾಗಿ ಕಮಲವನ್ನು ಕೈಯಲ್ಲಿ ಹಿಡಿದು, "ಎಲೈ ಪುರಾಣಪುರುಷನೆ ! ಲೋಕೇಶ್ವರನೆ ! ಪುಣ್ಯ

* ಈ ಶ್ಲೋಕದಲ್ಲಿ, ತ್ರೈವಿ...ಸ, ಎಂಬುದನ್ನೂ, ಭ್ರಮ...ಕ್ತ್ರಂ, ಎಂಬುದನ್ನೂ, ಸಹ ನೃಸಿಂಹರೂಪಂ ಎಂಬುದರಲ್ಲಿಯೂ ಅನ್ವಯಿಸಬಹುದು.

ಶ್ರುತ್ವಾ ಹರಿಸ್ತು ಶರಣಾರ್ಥಿನ ಮಪ್ರಮೇಯ ಶ್ಚಕ್ರಾಯುಧಃ ಪತಗ ರಾಜ ಭುಜಾಧಿ ರೂಢಃ । ಚಕ್ರೇಣ ನಕ್ರವದನಂ ವಿನಿಪಾಟ್ಯ ತಸ್ಮಾ ದ್ಧಸ್ತೇ ಪ್ರಗೃಹ್ಯ ಭಗವಾನ್ ಕೃಪಯೋಜ್ಜ ಹಾರ॥೧೬॥ಜ್ಯಾಯಾನ್ ಗುಣೈ ರವರ ಜೋಪ್ಯದಿತೇಃ ಸ್ಸುತಾನಾಂ ಲೋಕಾನ್ ವಿಚಕ್ರಮ ಇಮಾ ನ್ಯದಥಾ ಧಿಯಜ್ಞಃ । ಕ್ಷ್ಮಾಂ ವಾಮನೇನ ಜಗೃಹೇ ತ್ರಿಪದಚ್ಛಲೇನ ಯಾಚ್ಞಾ ಮೃತೇ ಪಥಿ ಚರನ್ ಪ್ರಭುಭಿ ರ್ನಚಾಲ್ಯಃ ॥೧೭॥ ನಾರ್ಥೋ ಬಲೇ ರಯ ಮುರು ಕ್ರಮಪಾದಶೌಚ ಮಾಪ ಶ್ಶಿಖಾ ಧೃತವತೋ ವಿಬುಧಾಧಿ

ಅಪ್ರಮೇಯಃ-ಅದ್ಭುತಮಹಿಮನಾದ, ಭಗವಾನ್ - ಭಗವಂತನಾದ, ಹರಿಃ-ವಿಷ್ಣುವು, ಶ್ರುತ್ವಾ-ಆ ಮಾತನ್ನುಕೇಳಿ, ಚಕ್ರಾಯುಧಃ-ಚಕ್ರವನ್ನು ಧರಿಸಿ, ಪತ...ಢಃ, ಪತಗರಾಜ - ಗರುಡನ, ಭುಜ-ಹೆಗಲಿನಮೇಲೆ, ಅಧಿರೂಢಃ-ಕುಳಿತುಕೊಂಡು, ಚಕ್ರೇಣ-ಚಕ್ರಾಯುಧದಿಂದ, ನಕ್ರವದನಂ - ನೆಗಳಿನ ಬಾಯನ್ನು. ವಿನಿಪಾಟ್ಯ-ಸೀಳಿ, ಶರಣಾರ್ಥಿನಂ-ಮರೆಯನ್ನು ಬೇಡುವ ಆ ಗಜರಾಜನನ್ನು, ಹಸ್ತೇ-ಸೊಂಡಿಲಿನಲ್ಲಿ, ಪ್ರಗೃಹ್ಯ-ಹಿಡಿದು, ಕೃಪಯಾ-ದಯೆಯಿಂದ, ತಸ್ಮಾತ್-ಆಸರೋವರದಿಂದ, ಉಜ್ಜ ಹಾರ - ಎತ್ತಿದನು ॥ ೧೬ ॥ ಅಧಿಯಜ್ಞಃ - ಯಜ್ಞಪತಿಯಾದ ಭಗವಂತನು, ಅದಿತೇಃ - ಅದಿತಿಯ, ಸುತಾನಾಂ-ಮಕ್ಕಳಲ್ಲಿ, ಅವರಜೋಽಪಿ - ಕಡೆಯವನಾದರೂ, ಗುಣೈಃ - ಗುಣಗಳಿಂದ, ಜ್ಯಾಯಾನ್-ದೊಡ್ಡವನು, ಯತ್-ಏಕೆಂದರೆ, ವಾಮನೇನ - ಕುಳ್ಳಾದರೂಪದಿಂದ, ತ್ರಿಪದಛಲೇನ - ಮೂರುಹೆಜ್ಜೆಗಳನೆವದಿಂದ, ಕ್ಷ್ಮಾಂ - ಭೂಮಿಯನ್ನು, ಜಗೃಹೇ - ಗ್ರಹಿಸಿದನು, ಅಥ - ಮತ್ತು, ಇಮಾನ್-ಈ, ಲೋಕಾನ್ - ಲೋಕಗಳನ್ನು, ವಿಚಕ್ರಮೇ-ಆಕ್ರಮಿಸಿದನು, ಏಕೆಂದರೆ, ಪ್ರಭುಭಿಃ - ಪ್ರಭುಗಳಿಂದ, ಪಥಿ-ಸನ್ಮಾರ್ಗದಲ್ಲಿ, ಚರನ್-ಸಂಚರಿಸುವವನು, ಯಾಚ್ಞಾಮೃತೇ-ಬೇಡುವುದನ್ನುಳಿದು, ನಚಾಲ್ಯಃ-ಹೊರಡಿಸಲ್ಪಡಬಾರದು ॥ ೧೭ ॥ ಯೋವೈ-ಯಾವನು, ಪ್ರತಿಶ್ರುತಮೃತೇ-ತನ್ನಪ್ರತಿಜ್ಞೆಯನ್ನುಳಿದು, ಅನ್ಯತ್-ಬೇರೇಕಾರ್ಯವನ್ನು, ನಚಿಕೀರ್ಷತ್-ಮಾಡಲಿಲ್ಲವೋ, ಹೇ ಅಂಗ-ಎಲೈ ನಾರದನೆ! ಅರಯೋ

ಕೀರ್ತಿಯೆ ! ನಾಮಶ್ರವಣಮಾತ್ರದಿಂದ ಮಂಗಳದಾಯಕನೇ ! ನನ್ನನ್ನು ಕಾಪಾಡು" ಎಂದು ಮೊರೆಯಿಡಲು, ಆ ಭಗವಂತನು ದೀನದಯಾಳುವಾದುದರಿಂದ, ಚಕ್ರವನ್ನು ಹಿಡಿದು, ಗರುಡಾರೂಢನಾಗಿ ತಟ್ಟನೆಬಂದು ಚಕ್ರಾಯುಧದಿಂದ ನಕ್ರವನ್ನು ಸೀಳಿ, ಗಜರಾಜನನ್ನು ಉದ್ಧರಿಸಿದನು. ಇದು ಹರಿಯವತಾರವು ॥ ೧೫ - ೧೬ ॥

ಯಜ್ಞಪತಿಯಾದ ವಾಸುದೇವಮೂರ್ತಿಯು, ಅದಿತಿ ಪುತ್ರರಾದ ದ್ವಾದಶಾದಿತ್ಯರಲ್ಲಿ ಕಿರಿಯವನಾದರೂ, ವಾಮನರೂಪದಿಂದ ಬಲಿಯನ್ನು ಬೇಡಿ ಮೂರು ಹೆಜ್ಜೆಗಳಿಂದ ಲೋಕತ್ರಯವನ್ನು ಅಳೆದಕಾರಣದಿಂದ ಹಿರಿಯವನೆನಿಸಿ ಕೊಂಡನು. ಪ್ರಭುವಾದವನು ನ್ಯಾಯಮಾರ್ಗದಲ್ಲಿರುವವರನ್ನು ಸಮ್ಮತಿಗೊಳಿಸಿದಲ್ಲದೆ ಅವರ ರಾಜ್ಯಾದಿಗಳನ್ನು ಅಪಹರಿಸ ಬಾರದಾದುದರಿಂದ ಭಗವಂತನು ಬಲಿಯನ್ನು ಬೇಡಿದುದು ನ್ಯಾಯವೇ ಸರಿ ॥ ೧೭ ॥ ಯಾಚಕನಾಗಿ ಬಂದ ಸಾಕ್ಷಾದ್ಭಗವಂತನ ಪಾದಗಳನ್ನು ತೊಳೆದು ಆ ಉದಕವನ್ನು ತಲೆಯಲ್ಲಿಧರಿಸಿ, ತನ್ನ ಸರ್ವಸ್ವವನ್ನೂ ಕೊಡಲೆಳಸಿ, ಗುರುವಾದ

ಪತ್ಯಂ । ಯೋವೈ ಪ್ರತಿಶ್ರು ವ್ಯೃತೇ ನ*ಚಿಕೀರ್ಷ ದನ್ಯ ದಾತ್ಮಾನ ಮಂಗ
ಶಿರಸಾ ಹ್ಯರಯೇಽಭಿಮೇನೇ ॥ ೧೮ ॥ ತುಭ್ಯಂ ಚ ನಾರದ ಭೃಶಂ
ಭಗವಾನ್ ವಿವೃದ್ಧಭಾವೇನ ಸಾಧು ಪರಿತುಷ್ಟ ಉವಾಚ ಯೋಗಂ ।
ಜ್ಞಾನಂಚ ಭಾಗವತ ಮಾತ್ಮಸುತತ್ವದೀಪಂ ಯದ್ವಾಸುದೇವ ಶರಣಾ
ವಿದು ರಂ ಜಸೈವ ॥೧೯॥ ಚಕ್ರಂ ಚ ದಿಕ್ಷ್ವವಹಿತಂ ದಶಸು ಸ್ವತೇಜೋ
ಮನ್ವಂತರೇಷು ಮನು ವಂಶಧರೋ ಬಿಭರ್ತಿ । ದುಷ್ಟೇಷು ರಾಜಸು

ಶತ್ರುವಿಗೆ, ಆತ್ಮಾನಮಪಿ-ತನ್ನ ದೇಹಸಮರ್ಪಣವನ್ನೂ, ಶಿರಸಾ-ತಲೆಯಿಂದ, ಅಭಿಮೇನೇ - ಅಂಗೀಕರಿಸಿದನೋ, ಅಂತಹ, ಉರು...ಚಂ, ಉರುಕ್ರಮ - ಭಗವಂತನ, ಪಾದಶೌಚಂ - ಪಾದಪ್ರಕ್ಷಾಳನರೂಪವಾದ, ಅಪಃ-ಜಲವನ್ನು, ಶಿರಾಧೃತವತಃ-ತಲೆಯಲ್ಲಿ ಧರಿಸಿದ, ಬಲೇಃ - ಬಲಿಚಕ್ರವರ್ತಿಗೆ, ವಿಬುಧಾಧಿಪತ್ಯಂ-ಸ್ವರ್ಗಸಾಮ್ರಾಜ್ಯವಾವುದೋ, ಅಯಂ-ಇದು, ಅರ್ಥಃ-ಪ್ರಯೋಜನವು, ನ-ಅಲ್ಲ ॥ ೧೮ ॥

ಹೇನಾರದ-ಎಲೈ ನಾರದನೆ! ವಿವೃದ್ಧಭಾವೇನ-ಅಧಿಕ ಭಕ್ತಿಯಿಂದ, ಭೃಶಂ-ಬಹಳವಾಗಿ, ಸಾಧು-ಚೆನ್ನಾಗಿ, ಪರಿತುಷ್ಟಃ-ಸಂತುಷ್ಟನಾದ, ಭಗವಾನ್-ಭಗವಂತನು, ಯೋಗಂ - ಯೋಗಶಾಸ್ತ್ರವನ್ನೂ, ಮತ್ತು ಯತ್-ಯಾವುದನ್ನು,ವಾಸುದೇವಶರಣಾಃ-ವಿಷ್ಣುಭಕ್ತರು, ಅಂಜಸೈವ-ಬೇಗನೇ, ವಿದುಃ-ತಿಳಿಯುವರೋ; ಅಂತಹ, ಆತ್ಮ...ಪಂ, ಆತ್ಮಸುತತ್ವ-ಪರತತ್ವವನ್ನು, ದೀಪಂ-ಪ್ರಕಾಶಗೊಳಿಸುವ, ಜ್ಞಾನಂ ಜ್ಞಾನಸಾಧನವಾದ, ಭಾಗವತಂ-ಭಾಗವತಶಾಸ್ತ್ರವನ್ನೂ, ತುಭ್ಯಂ-ನಿನಗೆ, ಉವಾಚ-ಹೇಳಿದನು ॥೧೯॥

ಮನ್ವಂತರೇಷು-ಮನ್ವಂತರಗಳಲ್ಲಿ, ಮನುವಂಶಧರಃ-ಮನುಶ್ರೇಷ್ಠನೆನಿಸಿ, ದಶಸು-ಹತ್ತು, ದಿಕ್ಷು-ದಿಕ್ಕುಗಳಲ್ಲಿ, ಅವಹಿತಂ - ಇಡಲ್ಪಟ್ಟ, ಸ್ವತೇಜಃ-ತನ್ನಪ್ರಭಾವವೆಂಬ, ಚಕ್ರಂ-ಆಜ್ಞಾಚಕ್ರವನ್ನು, ಬಿಭರ್ತಿ-ಧರಿಸುವನು, ಬಳಿಕ, ತ್ರಿಪೃಷ್ಠೇ-ಮೂರುಲೋಕಗಳಮೇಲಿರುವ, ಸತ್ಯೇ - ಸತ್ಯಲೋಕದಲ್ಲಿ, ಚರಿತ್ರೈಃ-ಚರಿತ್ರಗಳಿಂದ, ಉಶತೀಂ-ರಮಣೀಯವಾದ, ಸ್ವಕೀರ್ತಿಂ-ತನ್ನ ಕೀರ್ತಿಯನ್ನು, ಪ್ರಥಯನ್-

ಶುಕ್ರಾಚಾರ್ಯನು ಬೇಡವೆಂದುತಡೆದರೂ,ಮತ್ತು ಕ್ರುದ್ಧನಾಗಿ ಶಾಪವನ್ನಿತ್ತರೂ,ತನ್ನ ಪ್ರತಿಜ್ಞೆಯನ್ನು ಹೊರತು ಮತ್ತೊಂದನ್ನೆಣಿಸದೆ,ಮೂರಡಿಗಳ ಅಳತೆಗಾಗಿ ತನ್ನ ದೇಹವನ್ನು ಕೂಡ ಸಂತೋಷದಿಂದ ಸಮರ್ಪಿಸಿದ ದಾನಶೌಂಡನೂ,ಭಕ್ತಾಗ್ರಗಣ್ಯನೂಆದ ಬಲಿಚಕ್ರೇಶ್ವರನಿಗೆ ಈ ಅಲ್ಪವಾದ ತ್ರಿಲೋಕಾಧಿಪತ್ಯವು ಉಚಿತವಲ್ಲವಾದುದರಿಂದ ಇದಕ್ಕಿಂತಲೂ ಉತ್ತಮವಾದ ತನ್ನ ಸಾಲೋಕ್ಯಪದವಿಯನ್ನು ದಯಪಾಲಿಸಬೇಕೆಂದೆಣಿಸಿದುದರಿಂದ, ಭಗವಂತನು ಭೂಮಿಯನ್ನು ಬೇಡುವ ನೆವದಿಂದ ರಾಜ್ಯವನ್ನಪಹರಿಸಿ, ಬಲಿಗೆ ಉತ್ತಮಲೋಕವನ್ನಿತ್ತು ಅನುಗ್ರಹಿಸಿದನು. ಇದು ವಾಮನಾವತಾರವು ॥೧೮॥

ಎಲೈ ನಾರದನೆ! ನೀನು ಅತ್ಯಧಿಕವಾದ ಭಕ್ತಿಯಿಂದ ಹೊಗಳಲು, ಸಂತುಷ್ಟನಾದ ಆ ಪರಮಾತ್ಮನು ಪ್ರಸನ್ನನಾಗಿ, ಯೋಗಸ್ವರೂಪವನ್ನು, ವೈಷ್ಣವಾಗ್ರೇಸರರು ನಿರಾಯಾಸವಾಗಿ ತಿಳಿದುಕೊಳ್ಳುವ ಸರ್ವೋತ್ತಮವಾದ ಜ್ಞಾನವನ್ನು ಪ್ರತಿಪಾದಿಸುವ ಭಾಗವತ ಶಾಸ್ತ್ರವನ್ನು, ಸಹ ನಿನಗೆ ಉಪದೇಶಿಸಿದನು. ಇದು ಹಂಸಾವತಾರವು ॥೧೯॥

ಆ ಭಗವಂತನು, ಮನ್ವಂತರಗಳಲ್ಲಿ ಮನುವಾಗಿ ಅವತರಿಸಿ, ದಶದಿಕ್ಕುಗಳಲ್ಲಿಯೂ, ತನ್ನ

ದಮಂ ವ್ಯದಧಾ ತ್ಸ್ವಕೀರ್ತಿಂ ಸತ್ಯೇ ತ್ರಿಪೃಷ್ಠ ಉಶತೀಂ ಪ್ರಥಯಂ ಶ್ಚರಿತ್ರೈಃ ॥ ೨೦ ॥ ಧನ್ವಂತರಿಶ್ಚ ಭಗವಾನ್ ಸ್ವಯ ಮೇವ ಕೀರ್ತಿ ರ್ನಾಮ್ನಾ ನೃಣಾಂ ಪುರುರುಜಾಂ ರುಜ ಆಶು ಹಂತಿ । ಯಜ್ಞೇಚ ಭಾಗ ಮಮೃತಾಯು ರವಾವರುಂಧೇ ಆಯುಶ್ಚ ವೇದ ಮನುಶಾಸ್ತ್ಯವತೀರ್ಯ ಲೋಕೇ ॥ ೨೧ ॥ ಕ್ಷತ್ರಂ ಕ್ಷಯಾಯ ವಿಧಿನೋಪಭೃತಂ ಮಹಾತ್ಮಾ ಬ್ರಹ್ಮಧ್ರು ಗುಜ್ಝಿತ ಪಥಂ ನರಕಾರ್ತಿ ಲಿಪ್ಸು । ಉದ್ಧಂತ್ಯಸಾ ವವನಿ ಕಂಟಕ ಮುಗ್ರವೀರ್ಯಂ ತ್ರಿಸ್ಸಪ್ತ ಕೃತ್ವ ಉರುಧಾರ ಪರಶ್ವಧೇನ॥೨೨॥

ಹರಡಿದವನಾಗಿ, ದುಷ್ಟೇಷು-ಅಧರ್ಮಿಷ್ಠರಾದ, ರಾಜಸು-ರಾಜರಲ್ಲಿ, ದಮಂ-ದಂಡವನ್ನು, ವ್ಯದಧಾತ್-ಮಾಡಿದನು ॥ ೨೦ ॥ ಲೋಕೇ-ಲೋಕದಲ್ಲಿ, ಧನ್ವಂತರಿಃ-ಧನ್ವಂತರಿಯಾಗಿ, ಅವತೀರ್ಯ-ಅವತಾರವನ್ನುಮಾಡಿ, ಅಸೌಭಗವಾನ್-ಈ ಭಗವಂತನು, ಸ್ವಯಮೇವ-ತಾನೇ, ಕೀರ್ತಿಃ-ಕೀರ್ತಿರೂಪನಾಗಿ, ನಾಮ್ನಾ-ಹೆಸರಿನಿಂದಲೇ, ಪುರುರುಜಾಂ-ಮಹಾರೋಗಗಳುಳ್ಳ, ನೃಣಾಂ-ಮನುಷ್ಯರ, ರುಜಃ-ರೋಗಗಳನ್ನು, ಆಶು-ಬೇಗನೆ, ಹಂತಿ-ಕಳೆಯುತ್ತಾನೆ, ಅಮೃತಾಯುಸ್ಸನ್-ಚಿರಜೀವಿಯೆನಿಸಿ, ಯಜ್ಞೇ-ಯಜ್ಞದಲ್ಲಿ, ಅವ-ತಪ್ಪಿಹೋಗಿದ್ದ, ಭಾಗಂಚ-ಹವಿರ್ಭಾಗವನ್ನೂ, ಅವರುಂಧೇ-ಹೊಂದುತ್ತಾನೆ, ಆಯುಃ-ಆಯುಸ್ಸನ್ನು ತಿಳಿಸುವ, ವೇದಂಚ-ವೇದವನ್ನೂ, ಅನುಶಾಸ್ತಿ-ಪ್ರಚುರಪಡಿಸುವನು ॥ ೨೧ ॥

ಮಹಾತ್ಮಾ-ಭಗವಂತನು, ಕ್ಷಯಾಯ-ಲೋಕನಾಶಕ್ಕಾಗಿ, ವಿಧಿನಾ - ದೈವದಿಂದ, ಉಪಭೃತಂ-ಮೃತ್ಯುವಿಗೆ ವಶಗೊಳಿಸಲ್ಪಟ್ಟ, ಅಥವಾ ಬೆಳೆಯಿಸಲ್ಪಟ್ಟ, ಬ್ರಹ್ಮಧ್ರುಕ್ - ಬ್ರಾಹ್ಮಣರಿಗೂ ದ್ರೋಹವನ್ನೆಣಿಸಿದ, ಉಜ್ಝಿತಪಥಂ-ವೇದಮಾರ್ಗವನ್ನುಲ್ಲಂಘಿಸಿದ, ನರಕಾರ್ತಿಲಿಪ್ಸುಂ-ನರಕಯಾತನೆಯನ್ನು ಬಯಸುವ, ಅವನಿಕಂಟಕಂ-ಭೂಮಿಗೆ ಮುಳ್ಳಿನಂತಿರುವ, ಉಗ್ರವೀರ್ಯಂ-ಅಧಿಕ ಪರಾಕ್ರಮವುಳ್ಳ, ಕ್ಷತ್ರಂ-ಕ್ಷತ್ರಿಯಕುಲವನ್ನು, ತ್ರಿಸ್ಸಪ್ತಕೃತ್ವಃ-ಇಪ್ಪತ್ತೊಂದುಸಲ, ಉರು...ನ, ಉರು-ಮನುಚಾದ, ಧಾರ-ಬರೆಯುಳ್ಳ, ಪರಶ್ವಧೇನ-ಗಂಡುಗೊಡಲಿಯಿಂದ, ಉದ್ಧಂತಿ-ಸಂಹರಿಸುವನು ॥ ೨೨ ॥ ಅಸ್ಮ...ಖಃ,

---

ಪ್ರಭಾವರೂಪವಾದ ಚಕ್ರವನ್ನು ಸ್ಥಾಪಿಸಿ, ಭೂಸ್ವರ್ಗ ಪಾತಾಳಗಳಲ್ಲಿ ಮಾತ್ರವೇ ಅಲ್ಲದೆ, ಇವೆಲ್ಲಕ್ಕೂ ಮೇಲಿರುವ ಸತ್ಯಲೋಕದಲ್ಲಿಯೂ, ತನ್ನ ಕಮನೀಯ್ಯವಾದ ಕೀರ್ತಿಲತೆಯನ್ನು ಹಬ್ಬಿಸಿ, ದುಷ್ಟರಾದ ರಾಜರನ್ನು ದಂಡಿಸಿದನು. ಇದು ಮನ್ವಂತರಾವತಾರವು ॥ ೨೦ ॥ ಭೂಲೋಕದಲ್ಲಿ ಧನ್ವಂತರಿಯಾಗಿ ಅವತರಿಸಿ, ಕೀರ್ತಿಮಯನೆನಿಸಿದ ಆ ಭಗವಂತನು, ಪ್ರಾಣಿಗಳಿಗುಂಟಾಗುವ ಹಲವು ಬಗೆಯ ಮಹಾರೋಗಗಳೆಲ್ಲವನ್ನೂ ಹೋಗಲಾಡಿಸಿ, ಚಿರಾಯುವನ್ನು ಪಡೆದು, ರಾಕ್ಷಸರ ಕೋಟಲೆಯಿಂದ ತಪ್ಪಿಹೊಗಿದ್ದ ಯಜ್ಞಭಾಗವನ್ನು ಸಂಪಾದಿಸಿ, ಆಯುರಾರೋಗ್ಯವನ್ನುಂಟುಮಾಡುವ ಆಯುರ್ವೇದವನ್ನು ಪ್ರಕಟಗೊಳಿಸಿದನು. ಇದು ಧನ್ವಂತರ್ಯವತಾರವು ॥ ೨೧ ॥

ಲೋಕಕ್ಷಯಕ್ಕಾಗಿ ಬೆಳೆದು, ದುರದೃಷ್ಟದಿಂದ ಮೃತ್ಯು ವಶರಾಗಿಯೂ, ಬ್ರಾಹ್ಮಣದ್ರೋಹಿಗಳಾಗಿಯೂ, ವೇದಮಾರ್ಗವನ್ನುಳಿದು ನರಕಯಾತನೆಗೆ ಸಿದ್ಧರಾಗಿಯೂ, ಲೋಕಕಂಟಕರಾಗಿಯೂ, ಮಹಾಶೂರರಾಗಿಯೂ ಇರುವ ಕ್ಷತ್ರಿಯರನ್ನು

ಅಸ್ಮತ್ಪ್ರಸಾದ ಸುಮುಖಃ ಕಲಯಾ ಕಲೇಶ ಇಕ್ಷ್ವಾಕುವಂಶ ಅವ
ತೀರ್ಯ ಗುರೋರ್ನಿದೇಶೇ । ತಿಷ್ಠನ್ ವನಂ ಸದಯಿತಾನುಜ ಆವಿವೇಶ
ಯಸ್ಮಿನ್ ವಿರುಧ್ಯ ದಶಕಂಧರ ಆರ್ತಿ ಮಾರ್ಛತ್ ॥ ೨೩ ॥ ಯಸ್ಮಾ
ಅದಾ ದುದಧಿ ರೂಢ ಭಯಾಂಗ ವೇಪೋ ಮಾರ್ಗಂ ಸಪದ್ಯರಿಪುರಂ ಹರವ
ದ್ದಿಧಕ್ಷೋಃ । ದೂರೇ ಸುಹೃನ್ಮಥಿತರೋಷಸುಶೋಣದೃಷ್ಟ್ಯಾ ತಾತ
ಪ್ಯಮಾನ ಮಕರೋರಗ ನಕ್ರಚಕ್ರಃ ॥೨೪॥ ವಕ್ಷಸ್ಥಲಸ್ಪರ್ಶ *ರುಗ್ಣ
ಮಹೇಂದ್ರವಾಹ ದಂತೈರ್ವಿಡಂಬಿತ ಕಕುಬ್ಜುಷ†ಊಢಹಾಸಂ । ಸದ್ಯೋ

ಅಸ್ಮತ್-ನಮ್ಮ, ಪ್ರಸಾದ-ಅನುಗ್ರಹದಲ್ಲಿ, ಸುಮುಖಃ-ಅಭಿಮುಖನಾದ, ಕಲೇಶಃ-ಮಾಯಾಪತಿಯಾದ ಭಗವಂತನು, ಕಲಯಾ-ಭರತಾದಿ ಕಲೆಗಳಿಂದ, ಇಕ್ಷ್ವಾಕುವಂಶೇ - ಇಕ್ಷ್ವಾಕುರಾಜನ ವಂಶದಲ್ಲಿ, ಅವತೀರ್ಯ-ಅವತರಿಸಿ, ಗುರೋಃ-ತಂದೆಯ, ನಿದೇಶೇ - ಆಜ್ಞೆಯಲ್ಲಿ, ತಿಷ್ಠನ್ - ಇರುತ್ತಾ, ಸದಯಿತಾನುಜಃ-ಸೀತಾಲಕ್ಷ್ಮಣರಿಂದ ಕೂಡಿ, ವನಂ-ದಂಡಕಾರಣ್ಯವನ್ನು, ಆವಿವೇಶ-ಹೊಕ್ಕನು, ಯಸ್ಮಿನ್-ಯಾವನಲ್ಲಿ, ವಿರುಧ್ಯ-ವಿರೋಧವನ್ನು ಬೆಳೆಯಿಸಿ, ದಶಕಂಧರಃ - ರಾವಣನು, ಆರ್ತಿಂ - ನಾಶವನ್ನು, ಆರ್ಛತ್-ಪಡೆದನೋ ॥ ೨೩ ॥ ದೂರೇ...ಷ್ಟ್ಯಾ, ದೂರೇ-ದೂರದಲ್ಲಿರುವ, ಸುಹೃತ್-ಪ್ರಿಯಳಾದ, ಸೀತೆಯಿಂದ, ಮಥಿತ-ಕಲಕಲ್ಪಟ್ಟ, ರೋಷ-ಕೋಪದಿಂದ, ಸುಶೋಣ - ಕಡುಗೆಂಪಾದ, ದೃಷ್ಟ್ಯಾ-ನೋಟದಿಂದ, ತಾತ...ಕ್ರಃ, ತಾತಪ್ಯಮಾನ-ಬಹಳವಾಗಿತಪಿಸುತ್ತಿರುವ, ಮಕರ-ಆಮೆ, ಉರಗ-ಹಾವು, ನಕ್ರ - ಮೊಸಳೆ ಇವುಗಳ, ಚಕ್ರಃ - ಸಮೂಹವುಳ್ಳ, ಉದಧಿಃ-ಸಮುದ್ರರಾಜನು, ಅರಿಪುರಂ-ಶತ್ರುವಾದ ರಾವಣನಪಟ್ಟಣವನ್ನು, ಹರವತ್ - ರುದ್ರನಂತೆ, ದಿಧಕ್ಷೋಃ - ಸುಡಲೆಣಿಸಿದ ರಾಮನಿಂದ, ಊಢ...ಪಃ, ಊಢ-ನೆಲೆಗೊಂಡ, ಭಯ-ಭಯದಿಂದ, ಅಂಗ-ಶರೀರದಲ್ಲಿ, ವೇಪಃ-ನಡುಕವುಳ್ಳವನಾಗಿ, ಯಸ್ಮೈ-ಯಾರಿಗೆ, ಸಪದಿ-ತತ್‌ಕ್ಷಣದಲ್ಲಿಯೇ, ಮಾರ್ಗಂ-ದಾರಿಯನ್ನು, ಅದಾತ್-ಕೊಟ್ಟನೋ ॥೨೪॥

ಇಪ್ಪತ್ತೊಂದಾವರ್ತಿ, ಕಠೋರವಾದ ಕುಠಾರಧಾರೆಯಿಂದ ತರಿದು ಮಡುಹಿದನು. ಇದು ಪರುಶರಾಮಾವತಾರವು ॥ ೨೨ ॥ ಅಯ್ಯಾ ನಾರದನೆ ! ಆ ಭಗವಂತನು, ತಾನು (ಬ್ರಹ್ಮ) ಮುಂತಾದ ದೇವತೆಗಳನ್ನು ಅನುಗ್ರಹಿಸುವುದಕ್ಕಾಗಿ, ಭರತಾದಿ ಪರಿವಾರದಿಂದ ಇಕ್ಷ್ವಾಕುವಂಶದಲ್ಲಿ ರಾಮರೂಪದಿಂದವತರಿಸಿ, ತಂದೆಯ ಆಣತಿಯಮೇರೆ ಸೀತಾಲಕ್ಷ್ಮಣರಿಂದೊಡಗೂಡಿ ಕಾಡಿಗೆನಡೆದು, ತನ್ನ ಮಡದಿಯನ್ನು ಅಪಹರಿಸಿದ ರಾವಣನನ್ನು ತರಿದು, ಲೋಕಕ್ಷೇಮವನ್ನೆಸಗಿದನು ॥ ೨೩ ॥ ಆ ರಾಮಮೂರ್ತಿಯು, ದ್ವೀಪಾಂತರದಲ್ಲಿರುವ ಪ್ರಾಣಪ್ರಿಯಳಾದ ಸೀತೆಯ ನಿಮಿತ್ತದಿಂದುಂಟಾದ ರೋಷದಿಂದ ಕೆಂಪೇರಿದ ಕಣ್ಣುಗಳಿಂದ ಕಂಡಮಾತ್ರದಿಂದಲೇ, ತಳಮಳಗುಟ್ಟುತ್ತಿರುವ ತಿಮಿಂಗಲಾದಿ ಜಲಜಂತುಕುಲದಿಂದ ವಿಕಲನಾಗಿ ಸಮುದ್ರರಾಜನು, ಭಯದಿಂದ ಗಡಗಡನೆ ನಡುಗುತ್ತಾ, ಶರಣಾಗತನಾಗಿ, ಕೂಡಲೇ, ಶತ್ರುನಗರಿಗೆ ದಾರಿಯನ್ನಿತ್ತನು ॥೨೪॥

† ಕಕುಬ್ಜುಷಯರೂಢಹಾಸಂ॥ ದಿಗ್ವಿಜಯದಿಂದ ಗರ್ವವನ್ನು ಪಡೆದವನು.

ಽಸುಭಿಸ್ಸಹ *ವಿನೇಷ್ಯತಿ ದಾರಹರ್ತುರ್ವಿಸ್ಫೂರ್ಜಿತೈರ್ಧನುಷ ಉಚ್ಚರತೋಽಧಿಸೈನ್ಯೇ ॥ ೨೪ ॥ ಭೂಮೇಸ್ಸುರೇತರವರೂಥವಿಮರ್ದಿತಾಯಾಃ ಕ್ಲೇಶವ್ಯಯಾಯ ಕಲಯಾ ‡ಸಿತಕೃಷ್ಣಕೇಶಃ। ಜಾತಃ ಕರಿ

ವಕ್ಷ...ತ್ಯೈಃ, ವಕ್ಷಸ್ಥಲ-ಎದೆಯು, ಸ್ಪರ್ಶ-ಹೊಡೆತದಿಂದ, ರುಗ್ಣ-ಮುರಿದ, ಮಹೇಂದ್ರವಾಹ - ಐರಾವತದ, ದಂತೈಃ-ದಂತಗಳಿಂದ, ವಿಡಂ...ಷಃ, ವಿಡಂಬಿತ - ಅಣಕಿಸಲ್ಪಟ್ಟ, ಕಕುಪ್ - ದಿಕ್ಕುಗಳನ್ನು ಜುಷಃ-ಗೆದ್ದಿರುವ, ಅಧಿಸೈನ್ಯೇ, ಸೇನಾಮಧ್ಯದಲ್ಲಿ, ವಿಚರತಃ-ಓಡಾಡುವ, ದಾರಹರ್ತುಃ-ಹೆಂಡಿರನ್ನು, ಕದ್ದ ರಾವಣನ, ಊಢಹಾಸಂ-ದುರಹಂಕಾರವನ್ನು, ಅಸುಭಿಸ್ಸಹ - ಪ್ರಾಣಗಳೊಡನೆ, ಧನುಷಃ - ಧನುಸ್ಸಿನ, ವಿಸ್ಫೂರ್ಜಿತೈಃ-ಟಂಕಾರಗಳಿಂದಲೇ, ವಿನೇಷ್ಯತಿ-ಕಳೆಯುತ್ತಾನೆ ॥ ೨೪ ॥ ಸುರೇ...ಯಾಃ, ಸುರೇತರ-ರಾಕ್ಷಸರ, ವರೂಥ-ಸೈನ್ಯದಿಂದ, ವಿಮರ್ದಿತಾಯಾಃ - ಪೀಡಿಸಲ್ಪಟ್ಟ, ಭೂಮೇಃ-ಭೂಮಿಯ, ಕ್ಲೇಶವ್ಯಯಾಯ-ಕಷ್ಟವನ್ನು ಕಳೆಯುವುದಕ್ಕಾಗಿ, ಕಲಯಾ-ಬಲರಾಮನೊಡನೆ, ಸಿತ...ಶಃ, ಸಿತ-

ಅನಂತರದಲ್ಲಿ ಆ ವೀರರಾಘವನು, ಸೈನ್ಯಮಧ್ಯದಲ್ಲಿನಿಂತು, ಭಯಂಕರವಾಗಿ ಯುದ್ಧ ಮಾಡುತ್ತಾ ಎದೆಯನ್ನು ಸೋಕಿಸಿದಮಾತ್ರದಿಂದಲೇ ಇಂದ್ರನ ಪಟ್ಟದಾನೆಯಾದ ಐರಾವತದ ದಂತಕುಂತಗಳನ್ನು ಮುರಿದು, ದಿಗಂತವಿಶ್ರಾಂತ ಕೀರ್ತಿಯನ್ನು ಪಡೆದ ತನಗೆ ಸಮಾನರಾರೆಂದು ಹೆಮ್ಮೆಯಿಂದ ಮೆರೆಯುತ್ತಿದ್ದ ದಾರಚೋರನಾದ ರಾವಣನನ್ನು ಧನುಷ್ಟಂಕಾರದಿಂದಲೇ ಸಂಹರಿಸಿದನು. ಇದು ರಾಮಾವತಾರವು ॥ ೨೪ ॥

ಬಳಿಕ ರಾಕ್ಷಸಾಂಶದಿಂದ ಜನಿಸಿದ ರಾಜರ ಸೇನಾಭಾರದಿಂದ ಪೀಡಿತಳಾದ ಭೂದೇವಿಯ ಕಷ್ಟವನ್ನು ನಷ್ಟಗೊಳಿಸುವುದಕ್ಕಾಗಿ, ಸಿತಕೃಷ್ಣಕೇಶನಾದ ಪರಮಾತ್ಮನು ತನ್ನ ಅಂಶವಾದ ಬಲರಾಮನಿಂದೊಡಗೂಡಿ ಶ್ರೀಕೃಷ್ಣರೂಪದಿಂದವತರಿಸಿ, ತನ್ನ

* ಬ್ರಹ್ಮನು ನಾರದಮುನಿಗೆ ಉಪದೇಶಿಸಿದ ಬಳಿಕ ರಾಮಾಯಣವುಂಟಾದುದರಿಂದ, ಭವಿಷ್ಯತ್ಕಾಲ ಕ್ರಿಯಾಪದವು ಪ್ರಯೋಗಿಸಲ್ಪಟ್ಟಿದೆ,

‡ ಶ್ಲೋ॥ ಉಜ್ಜಹಾರಾತ್ಮನಃ ಕೇಶೌ ಸಿತಕೃಷ್ಣೌ ಮಹಾಮುನೇ(ವಿಷ್ಣುಪುರಾಣ) ಶ್ಲೋ॥ ಸಚಾಪಿಕೇಶೌ ಹರಿರುಜ್ಜಹಾರ ಶುಕ್ಲಮೇಕಮಪರಂ ಚಾಪಿಕೃಷ್ಣಂ । ತೌಚಾಪಿ ಕೇಶೌ ವಿಶತಾಂ ಯದೂನಾಂ ಕುಲೇ ಸ್ತ್ರಿಯೌ ರೋಹಿಣೀಂ ದೇವಕೀಂಚ।ತಯೋ ರೇಕೋ ಬಲಭದ್ರೋ ಬಭೂವ ಯೋಸೌ ಶ್ವೇತಸ್ತಸ್ಯ ದೇವಸ್ಯ ಕೇಶಃ। ಕೃಷ್ಣೋದ್ವಿತೀಯಃ ಕೇಶವ ಸ್ಸಂಬಭೂವ ಕೇಶೋ ಯೋಸೌ ವರ್ಣಿತಃ ಕೃಷ್ಣವರ್ಣಃ॥ (ಭಾರತ) ತಾ॥ ಪರಮಾತ್ಮನು ತನ್ನ ಕರಿಕೂದಲೊಂದನ್ನೂ ಬಿಳಿಕೂದಲೊಂದನ್ನೂ ಕಿತ್ತು ಬಿಸುಟನು. ಅವು ಯದುಕುಲದ ರೋಹಿಣೀ ದೇವಕಿಯರಲ್ಲಿ ಸೇರಿ ರೋಹಿಣೀದೇವಿಯಲ್ಲಿ ಬಿಳಿಕೂದಲು ಬಲರಾಮನಾಗಿಯೂ, ದೇವಕಿಯಲ್ಲಿ ಕರಿಕೂದಲು ಕೃಷ್ಣನಾಗಿಯೂ, ಅವತರಿಸಿದುವೆಂದು ಭಾವವು. ಭಗವಂತನೇ ಕೃಷ್ಣಾವತಾರವೆಂದು ಅನೇಕಸ್ಥಲಗಳಲ್ಲಿ ಹೇಳಲ್ಪಟ್ಟಿರುವುದರಿಂದ, ಈ ಭೂಭಾರ ಹರಣವೆಂಬ ಕಾರ್ಯವನ್ನು ಭಗವಂತನಕೇಶಗಳೂ ಸಹ ಮಾಡಬಲ್ಲವೆಂದುಸೂಚಿಸುವುದಲ್ಲದೆ, ಶ್ರೀಕೃಷ್ಣ ಬಲರಾಮರ ಶರೀರಗಳ ವರ್ಣಗಳು ಕಪ್ಪು, ಬಿಳುಪು, ಎಂದು ತಿಳುಹಿಸುವದೇ ಈ ವಾಕ್ಯಗಳಿಗ ಮುಖ್ಯತಾತ್ಪರ್ಯವೆಂದರಿಯಬೇಕು.

ಷ್ಯತಿ ಜನಾನು ಪಲಕ್ಷ್ಯಮಾರ್ಗಃ ಕರ್ಮಾಣಿ ಚಾತ್ಮಮಹಿ ಮೋಪ ನಿಬಂಧನಾನಿ ॥ ೨೬ ॥ ತೋಕೇನ ಜೀವಹರಣಂ ಯದುಲೂಕಿಕಾಯಾ ಸ್ತ್ರೈಮಾಸಿಕಸ್ಯಚ ಪದಾ ಶಕಟೋ ವಿವೃತ್ತಃ । ಯದ್ರಿಂಗತಾಂZ ತರ ಗತೇನ ದಿವಿಸ್ಪೃಶೋ ರ್ವಾ ಉನ್ಮೂಲನಂ ತ್ವಿತರಥಾ ರ್ಜುನಯೋ ರ್ನ ಭಾವ್ಯಂ ॥ ೨೭ ॥ ಯದ್ವೈ ವ್ರಜೇ ವ್ರಜಪಶೂನ್ ವಿಷತೋಯ ಪೀತಾನ್ ಪಾಲಾಂ ಸ್ತ್ವಜೀವಯ ದನುಗ್ರಹ ದೃಷ್ಟಿವೃಷ್ಟ್ಯಾ । ತಚ್ಛುದ್ಧಯೇZತಿ

ಬಿಳಿದಾಗಿಯೂ, ಕೃಷ್ಣ-ಕರಿದಾಗಿಯೂ, ಕೇಶಃ-ಕೂದಲುಳ್ಳಭಗವಂತನು, ಜಾತಃ-ಅವತರಿಸಿ, ಜನಾ... ರ್ಗಃ, ಜನ-ಜನರಿಂದ, ಅನುಪಲಕ್ಷ್ಯ-ತಿಳಿಯಲ್ಪಡದಿರುವ, ಮಾರ್ಗಃ-ದಾರಿಯುಳ್ಳವನಾಗಿ, ಆತ್ಮ...ನಿ, ಆತ್ಮ-ತನ್ನ, ಮಹಿಮ-ಪ್ರಭಾವಕ್ಕೆ, ಉಪನಿಬಂಧನಾನಿ-ಅನುಸಾರಿಗಳಾದ, ಕರ್ಮಾಣಿ-ಕರ್ಮಗಳನ್ನು, ಕರಿಷ್ಯತಿ-ಮಾಡುವನು ॥ ೨೬ ॥ ತೋಕೇನ-ಹಸುಳೆಯಿಂದಲೇ, ಉಲೂಕಿಕಾಯಾಃ-ಪೂತನೆ ಯೆಂಬ ರಾಕ್ಷಸಿಯ, ಜೀವಹರಣಂಯತ್ - ಜೀವವನ್ನು ಕಳೆದುದಾವದುಂಟೋ, ತ್ರೈಮಾಸಿಕಸ್ಯ - ಮೂರು ತಿಂಗಳು ಮಗುವಿನ, ಪದಾ-ಕಾಲಿನಿಂದ, ಶಕಟಃ-ಶಕಟನೆಂಬ ರಾಕ್ಷಸನು, ವಿವೃತ್ತಃಯತ್-ಸತ್ತುದಾವು ದುಂಟೋ, ರಿಂಗತಾ-ಅಂಬೆಗಾಲಿಡುತ್ತಾ, ಅಂತರಗತೇನ-ನಡುವೆಹೋದವನಿಂದ, ದಿವಿಸ್ಪೃಶೋಃ-ಮು ಗಿಲನ್ನುಮುಟ್ಟುವ. ಅರ್ಜುನಯೋಃ - ಅರ್ಜುನವೃಕ್ಷಗಳ, ಉನ್ಮೂಲನಂಯತ್ - ನಾಶವಾವುದುಂಟೋ, ಈಕಾರ್ಯಗಳು, ಇತರಥಾ-ಭಗವಂತನಾಗದಿದ್ದಲ್ಲಿ, ನಭಾವ್ಯಂ-ಆಗತಕ್ಕವುಗಳಲ್ಲ ॥ ೨೭ ॥

ವ್ರಜೇ-ಗೋಕುಲದಲ್ಲಿ, ವಿಷ....ತಾನ್, ವಿಷತೋಯ-ವಿಷದನೀರನ್ನು, ಪೀತಾನ್-ಕುಡಿದ, ವ್ರಜ ಪಶೂನ್-ಆಕಳುಗಳನ್ನೂ, ಪಾಲಾಂಶ್ಚ-ಗೋಪಾಲಕರನ್ನೂ, ಅನು...ಷ್ಟ್ಯಾ, ಅನುಗ್ರಹದೃಷ್ಟಿ - ಕರು ಣಾಕಟಾಕ್ಷಗಳ, ವೃಷ್ಟ್ಯಾ-ವರ್ಷದಿಂದ, ಅಜೀವಯದ್ಯತ್-ಬದುಕಿಸಿದುದಾವುದುಂಟೋ, ತಚ್ಛುದ್ಧಯೇ-ಆ ಜಲವನ್ನು ಶುದ್ಧಿಗೊಳಿಸುವುದಕ್ಕಾಗಿ, ಹ್ರದಿನ್ಯಾಂ-ಮಡುವಿನಲ್ಲಿ, ವಿಹರನ್ - ಕ್ರೀಡಿಸುತ್ತಾ, ಅತಿ... ಹ್ವಾಂ, ಅತಿವಿಷ-ತೀವ್ರವಿಷದ, ವೀರ್ಯ-ಶಕ್ತಿಯಿಂದ, ವಿಲೋಲ-ಚಂಚಲವಾದ, ಜಿಹ್ವಂ-ನಾಲಗೆಯುಳ್ಳ, ಉರಗಂ-ಕಾಳಿಯನೆಂಬ ಸರ್ಪರಾಜನನ್ನು, ಉಚ್ಚಾಟಯಿಷ್ಯತ್-ಹೊರಡಿಸುವುದಾವುದುಂಟೋ, ಇದೂ

ದಾರಿಯನ್ನು ಜನರಿಗೆ ತಿಳುಹದೆಯೇ, ತನ್ನಮಹಿಮೆಗಳಿಗೆ ಅನುಗುಣಗಳಾದ ಅದ್ಭುತ ಕರ್ಮಗಳನ್ನು ನಡೆಯಿಸುವನು ॥೨೬॥ ಅವುಯಾವುವೆಂದರೆ:—ಹಸುಳೆಯಾಗಿರುವಾಗಲೇ ಮಲೆಗುಡಿವನೆವದಿಂದ ಪೂತನೆಯೆಂಬ ರಕ್ಕಸಿಯನ್ನು ಮಡುಹಿದುದೂ, ಮೂರುತಿಂಗಳ ಮಗುವಾಗಿರುವಾಗಲೇ ಶಕಟನೆಂಬ ರಾಕ್ಷಸನನ್ನು ಕಾಲಿಂದೊದೆದು ಕೆಡಹಿದುದೂ, ಅಂಬೆಗಾಲಿಡುವಾಗಲೇ ಗಗನಚುಂಬಿಗಳಾದ ಯಮಳಾರ್ಜುನ ವೃಕ್ಷಗಳ ನಡುವೆ ತೂರಿ, ಬೇರುಕಳಚಿ ಬೀಳುವಂತವುಗಳನ್ನುರುಳಿಸಿದುದೂ, ಈ ಕಾರ್ಯಗಳು ಭಗವಂತನಿಂದ ಲ್ಲದೆ ಪೆರವರುಮಾಡಲಾಪರೆ ? ॥ ೨೭ ॥ ವಿಷಜಲವನ್ನು ಕುಡಿದು ಮೂರ್ಛೆಪಡೆದ ಗೋಕುಲದ ಪಶುಗಳನ್ನೂ, ಗೋವಳರನ್ನೂ ಅನುಗ್ರಹ ದೃಷ್ಟಿಯಿಂದಲೇ ಬದುಕಿಸಿ, ಆ ಜಲದಲ್ಲಿರುವ ವಿಷವನ್ನು ಕಳೆಯುವುದಕ್ಕಾಗಿ ಮಡುವಿನಲ್ಲಿ ಈಜಾಡುತ್ತಾ, ದುರ್ಭ ರವಿಷಜ್ವಾಲೆಯನ್ನು ಕಾರುತ್ತಾ, ಎದುರಾಂತ ಕಾಳಿಯನೆಂಬ ಉರಗರಾಜನ ಗರ್ವವನ್ನು

ವಿಷವೀರ್ಯ ವಿಲೋಲಜಿಹ್ವ ಮುಚ್ಚಾಟ*ಯಿಷ್ಯ ದುರಗಂ ವಿಹರ್ನ್
ಹೃದಿನ್ಯಾಂ ॥೨೮॥ ತತ್ಕರ್ಮ ದಿವ್ಯಮಿವ ಯನ್ನಿಶಿ ನಿಶ್ಶಯಾನಂ ದಾವಾ
ಗ್ನಿನಾ§ಶುಚಿ ವನೇ ಪರಿದಹ್ಯ ಮಾನೇ । ಉನ್ನೇಷ್ಯತಿ ವ್ರಜ ಮತೋಽವಸಿ
ತಾಂತಕಾಲಂ ನೇತ್ರೇ ಪಿಧಾಯ್ಯ ಸಬಲೋಽನಧಿಗಮ್ಯ ವೀರ್ಯಃ ॥೨೯॥
*ಗೃಹ್ಣೀತ ಯದ್ಯದುಪಬಂಧ ಮಮುಷ್ಯಮಾತಾ ಶುಲ್ಬಂ ಸುತಸ್ಯ ನತು
ತತ್ತದ ಮುಷ್ಯಮಾತಿ।ಯಜ್ಜೃಂಭತೋಽಸ್ಯ ವದನೇ ಭುವನಾನಿ ಗೋಪೀ

ಮನುಷ್ಯಕೃತ್ಯವಲ್ಲ ॥ ೨೮ ॥ ಶುಚಿವನೇ-ಬೇಸಗೆಯಲ್ಲಿ ಮುಂಜಾಟವಿಯು, ದಾವಾಗ್ನಿನಾ-ಕಾಳ್ಗಿಚ್ಚಿನಿಂದ, ಪರಿದಹ್ಯಮಾನೇಸತಿ-ಸುಡಲ್ಪಡುತ್ತಿರಲು, ಅವ....ಲಂ, ಅವಸಿತ-ನಿಶ್ಚಯಿಸಲ್ಪಟ್ಟ, ಅಂತಕಾಲಂ-ವಿನಾಶಕಾಲವುಳ್ಳದ್ದು, ಅತಃ-ಆದುದರಿಂದಲೇ, ನಿಶಿ - ರಾತ್ರಿಯಲ್ಲಿ. ನಿಶ್ಶಯಾನಂ - ನಿದ್ದೆಮಾಡುತ್ತಿದ್ದ, ವ್ರಜಂ-ಗೋಕುಲದವರನ್ನು. ಅನಧಿಗಮ್ಯವೀರ್ಯಃ, ಅನಧಿಗಮ್ಯ-ತಿಳಿಯಲಾಗದ, ವೀರ್ಯಃ - ಪರಾಕ್ರಮವುಳ್ಳ ಕೃಷ್ಣನು, ಸಬಲಃ - ಬಲರಾಮನಿಂದೊಡಗೂಡಿ, ನೇತ್ರೇ - ಕಣ್ಣುಗಳನ್ನು, ಪಿಧಾಯ್ಯ-ಮುಚ್ಚಿಸಿ, ಉನ್ನೇಷ್ಯತೀತಿಯತ್-ಕಡೆಹಾಯಿಸುವುದಾವುದುಂಟೋ, ತತ್ಕರ್ಮ-ಆಕಾರ್ಯವು, ದಿವ್ಯಮೇವ-ದೇವತಾಕಾರ್ಯವೇಸರಿ ॥ ೨೯ ॥ ಅಮುಷ್ಯ-ಈ ಕೃಷ್ಣನ, ಮಾತಾ-ತಾಯಿಯು, ಸುತಸ್ಯ-ಮಗನನ್ನು, ಉಪಬಂಧನಂ-ಕಟ್ಟಿಹಾಕುವುದಕ್ಕಾಗಿ, ಯದ್ಯತ್-ಯಾವಯಾವ, ಶುಲ್ಬಂ - ಹಗ್ಗವನ್ನು, ಗೃಹ್ಣೀತ-ತೆಗೆದುಕೊಂಡಳೋ, ತತ್ತತ್-ಆಆ ಹಗ್ಗವು, ಅಮುಷ್ಯ-ಇವನ, ಉದರೇ - ಹೊಟ್ಟೆಯಲ್ಲಿ, ನಮಾತಿ-ಹಿಡಿಸುವುದಿಲ್ಲ, ಜೃಂಭತಃ-ಆಕಳಿಸುವ, ಅಸ್ಯ-ಇವನ, ವದನೇ – ಮುಖದಲ್ಲಿ, ಭುವನಾನಿ-ಲೋಕಗಳನ್ನು, ಸಂಪೀಕ್ಷ್ಯ-ಕಂಡು, ಗೋಪೀ - ಯಶೋದೆಯು, ಶಂಕಿತಮನಾಃ – ಸಂಶಯಗೊಂಡು,

ಭಂಗಿಸಿ ಅಲ್ಲಿಂದ ಅದನ್ನು ಹೊರಡಿಸಿದುದೇನು ಅಮಾನುಷಕಾರ್ಯವಲ್ಲವೆ? ॥ ೨೮ ॥

ಒಂದಾನೊಂದು ಬೇಸಗೆಯಲ್ಲಿ ಮುಂಜಾಟವಿಯು ಕಾಳ್ಕಿಚ್ಚಿನಿಂದ ಸುಡುತ್ತಿರುವಾಗ, ವಿನಾಶಕಾಲ ಸಮೀಪಿಸಿದುದರಿಂದಲೇ, ಇರುಳಲ್ಲಿ ಅರಿವಿಲ್ಲದೇ ಮಲಗಿರುವ ಗೋಕುಲದವರೆಲ್ಲರನ್ನೂ, ಕಂಡು ಮರುಕಗೊಂಡು, ಭಕ್ತವತ್ಸಲನಾದ ಶ್ರೀಕೃಷ್ಣಮೂರ್ತಿಯು ಬಲರಾಮನಿಂದೊಡಗೂಡಿ, ಎಲ್ಲರೂ ಕಣ್ಣುಗಳನ್ನು ಮುಚ್ಚಿಕೊಳ್ಳುವಂತೆ ಮಾಡಿ ಎಲ್ಲರನ್ನೂ ಆ ಮಹಾ ವಿಪತ್ತಿನಿಂದ ಕಡೆಹಾಯಿಸಿದನು. ಇದುಭಗವದ್ವಿಲಾಸವಲ್ಲವೆ? ॥೨೯॥ ದಧಿಭಾಂಡವನ್ನೊಡೆಯಲು ಮಗನಾದ ಕೃಷ್ಣನ ತುಂಟತನವನ್ನು ಕಂಡು, ಯಶೋದೆಯು ಕೋಪಗೊಂಡು ಅವನನ್ನು ಕಟ್ಟಿಹಾಕುವುದಕ್ಕಾಗಿ ಯಾವ ಹಗ್ಗವನ್ನು ತಂದರೂ ಅವನ ಸೊಂಟಕ್ಕೆ ಸಾಲದೇ ಹೋಗಲು, ಶಾಂತಳಾಗಿ ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡಾಗ, ಆಕಳಿಸಿದ ಆ ಮಗುವಿನ ಬಾಯೊಳಗಿನಿಂದ ಉದರದಲ್ಲಿ ಹದಿನಾಲ್ಕು ಲೋಕಗಳನ್ನೂ ಕಂಡು ಗಾಬರಿಗೊಳ್ಳುತ್ತಾ, ಆತನಿಂದ ತತ್ವವನ್ನು ತಿಳಿದುಕೊಂಡು ಆಶ್ಚರ್ಯಭರಿತೆಯಾದುದು ಭಗವತ್ಕಾರ್ಯವಲ್ಲವೆ? ॥ ೩೦ ॥

§ ಶ್ರು. ಶುಕ್ರಶ್ಚ ಶುಚಿಶ್ಚ ಗ್ರೀಷ್ಮಾ ವೃತೂ॥ ಶುಕ್ರ, ಶುಚಿ, ಎಂದರೆ ಗ್ರೀಷ್ಮ ಋತುವೆಂದರ್ಥವು.

ಸಂವೀಕ್ಷ್ಯ ಶಂಕಿತಮನಾಃ ಪ್ರತಿಬೋಧಿತಾಸೀತ್ ॥೩೦॥ ನಂದಂ ಚ ಮೋಕ್ಷ್ಯತಿ ಭಯಾ *ದ್ವರುಣಸ್ಯ ಪಾಶಾ ದ್ಗೋಪಾನ್ ಬಿಲೇಷು ಪಿಹಿತಾನ್ ಮಯಸೂನುನಾಚ । ಅಹ್ನ್ಯಾಪೃತಂ ನಿಶಿ ಶಯಾನ ಮತಿಶ್ರಮೇಣ ಲೋಕಂ ವಿಕುಂಠ ಮುಪನೇಷ್ಯತಿ ಗೋಕುಲಂ ಸ್ಮ ॥ ೩೧ ॥ ಗೋಪೈರ್ಮಖೇ ಪ್ರತಿಹತೇ ವ್ರಜವಿಪ್ಲವಾಯ ದೇವೇಽಭಿವರ್ಷತಿ ಪಶೂನ್ ಕೃಪಯಾ ರಿರಕ್ಷುಃ । ಧರ್ತೋಚ್ಛಿಲೀಂಧ್ರಮಿವ ಸಪ್ತದಿನಾನಿ ಸಪ್ತವರ್ಷೋ

ಪ್ರತಿಬೋಧಿತಾ-ಮಹಿಮೆಯನ್ನು ತಿಳಿಸಲ್ಪಟ್ಟವಳು, ಆಸೀತ್-ಆದಳು ॥ ೩೦ ॥ ವರುಣಸ್ಯ-ವರುಣನ, ಪಾಶಾತ್-ಪಾಶದಿಂದುಂಟಾದ, ಭಯಾತ್-ಭಯದಿಂದ, ನಂದಂಚ-ನಂದನನ್ನು, ಮೋಕ್ಷ್ಯತಿ - ಬಿಡಿಸುವನು, ಮಯಸೂನುನಾ - ಮಯಪುತ್ರನಿಂದ, ಬಿಲೇಷು-ಗವಿಗಳಲ್ಲಿ, ಪಿಹಿತಾನ್ - ಮರೆಗೊಳಿಸಲ್ಪಟ್ಟ, ಗೋಪಾನ್ - ಗೋಪಾಲಕರನ್ನೂ, ಮೋಕ್ಷ್ಯತಿ - ಬಿಡಿಸುವನು, ಅಹ್ನಿ-ಹಗಲಿನಲ್ಲಿ ಕೆಲಸಮಾಡಿ, ಅತಿಶ್ರಮೇಣ-ಅತ್ಯಾಯಾಸದಿಂದ, ನಿಶಿ-ರಾತ್ರಿಯಲ್ಲಿ, ಶಯಾನಂ-ಮಲಗಿರುವ. ಗೋಕುಲಂ-ಗೋಕುಲದವರನ್ನು, ವಿಕುಂಠಂ-ವೈಕುಂಠಲೋಕವನ್ನು, ಉಪನೇಷ್ಯತಿಸ್ಮ-ಹೊಂದಿಸುವನು ॥ ೩೧ ॥

ಹೇ ಅನಘ-ಎಲೈನಾರದನೆ ! ಗೋಪೈಃ-ಗೋಪರಿಂದ, ಮಖೇ - ಇಂದ್ರಯಾಗವು, ಪ್ರತಿಹತೇ - ನಿಲ್ಲಿಸಲ್ಪಡಲು, ವ್ರಜವಿಪ್ಲವಾಯ-ಗೋಕುಲವನ್ನು ನಾಶಗೊಳಿಸುವುದಕ್ಕಾಗಿ, ದೇವೇ - ದೇವೇಂದ್ರನು, ಅಭಿವರ್ಷತಿ-ಮಳೆಗರೆಯಲು, ಸಪ್ತವರ್ಷಃ-ಏಳುವರ್ಷಗಳುಳ್ಳ ಕೃಷ್ಣಮೂರ್ತಿಯು, ಕೃಪಯಾ-ಕನಿಕರದಿಂದ, ಪಶೂನ್ - ಪಶುಗಳನ್ನು, ರಿರಕ್ಷುಃ - ಕಾಪಾಡಲೆಳಸಿದವನಾಗಿ, ಸಪ್ತದಿನಾನಿ - ಏಳುದಿನಗಳು, ಮಹೀಧ್ರಂ-ಗೋವರ್ಧನಗಿರಿಯನ್ನು, ಏಕಕರೇ-ಒಂದೇಕೈಯಲ್ಲಿ, ಸಲೀಲಂ-ವಿಲಾಸದಿಂದ,ಉಚ್ಛಿಲೀಂಧ್ರ

ವರುಣಪಾಶದಿಂದ, ತಂದೆಯಾದ ನಂದಗೋಪನನ್ನು ಬಿಡಿಸುವನು. ಮಯಪುತ್ರನಾದ ವ್ಯೋಮಾಸುರನು ಬಿಲಗಳಲ್ಲಿರಿಸಿ ಮುಚ್ಚಿದ್ದ ಗೋಪಾಲಕರನ್ನು, ಅದರಿಂದ ಬಿಡಿಸಿದುದಲ್ಲದೆ, ಹಗಲು ಕೆಲಸಗಳನ್ನು ಮಾಡಿ ಆಯಾಸಗೊಂಡು ರಾತ್ರಿಯಲ್ಲಿ ನಿದ್ರೆಮಾಡುತ್ತಿದ್ದ ಆ ಗೋಕುಲದವರನ್ನು ತನ್ನ ವೈಕುಂಠ ಲೋಕಕ್ಕೆ ಕರೆದುಕೊಂಡು ಹೋಗುವನು. ಇದೇನು ಅಸಾಧಾರಣವಲ್ಲವೆ ? ॥ ೩೧ ॥ ಕೃಷ್ಣಮೂರ್ತಿಯ ಮಾತಿನಂತೆ ನಂದಾದಿ ಗೋಪರು ಇಂದ್ರಯಾಗವನ್ನು ನಿಲ್ಲಿಸಲು, ದೇವೇಂದ್ರನು ಕೋಪಗೊಂಡು ಆ ಗೋಕುಲವನ್ನೇ ಹಾಳುಮಾಡಬೇಕೆಂದು ಅದ್ಭುತವಾಗಿ ಮಳೆಗರೆಯುತ್ತಾ ಬರಲು, ಶ್ರೀಕೃಷ್ಣನು ಪಶುಗಳನ್ನು ಕಾಪಾಡಲೆಳಸಿ, ಏಳು ವಯಸ್ಸಿನ ಬಾಲನಾದರೂ, ಒಂದೇ ಕೈಯಿಂದ ಏಳು ದಿನಗಳವರೆಗೂ ಗೋವರ್ಧನ ಗಿರಿಯನ್ನು ನಾಯಿಗೊಡೆಯಂತೆ ಲೀಲೆ

* ಒಂದು ದ್ವಾದಶಿಯದಿನ ನಂದನು ಸ್ನಾನಕ್ಕಾಗಿ, ಕಾಳಿಂದೀ ನದಿಗೆ ಹೋಗಲು, ಕೃಷ್ಣನ ಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕಾಗಿ, ವರುಣನಭೃತ್ಯರು ವರುಣಪಾಶಗಳಿಂದ ಕಟ್ಟಿ ಅವನನ್ನು ವರುಣಲೋಕಕ್ಕೆ ತೆಗೆದುಕೊಂಡುಹೋಗಲು, ಶ್ರೀಕೃಷ್ಣನು ವರುಣಲೋಕಕ್ಕೆಹೋಗಿ, ವರುಣನಿಂದ ಪೂಜಿತನಾಗಿ ತಂದೆಯನ್ನು ಬಿಡಿಸಿಕೊಂಡು ಬಂದನು.

13

ಮಹೀಧ್ರ ಮನಘೈಕ ಕರೇ ಸಲೀಲಂ ॥ ೩೨ ॥ ಕ್ರೀಡನ್ ವನೇ ನಿಶಿ ನಿಶಾಕರರಶ್ಮಿಗೌರ್ಯಾಂ *ರಾಸೋನ್ಮುಖಃ ಕಲಪದಾ ಯತ ಮೂರ್ಛಿತೇನ । ಉದ್ದೀಪಿತ ಸ್ಮರ ರುಜಾಂ ವ್ರಜ ಭೃದ್ವಧೂನಾಂ ಹರ್ತುರ್ಹರಿಷ್ಯತಿ ಶಿರೋ ಧನದಾಽನುಗಸ್ಯ ॥ ೩೩ ॥ ಯೇ ಚ ಪ್ರಲಂಬ ಖರ ದರ್ದುರ ಕೇಶ್ಯರಿಷ್ಟ ಮಲ್ಲೇಭ ಕಂಸ ಯವನಾಃ ಕುಜ ಪೌಂಡ್ರಕಾದ್ಯಾಃ। ಅನ್ಯೇ ಚ ಸಾಲ್ವ ಕಪಿ ಬಲ್ವಲ ದಂತವಕ್ರ ಸಪ್ತೋಕ್ಷ ಶಂಬರ ವಿಡೂರಥ ರುಕ್ಮಿ ಮುಖ್ಯಾಃ ॥ ೩೪ ॥ ಯೇ ವಾ ಮೃಧೇ ಸಮಿತಿಶಾಲಿನ ಆತ್ತ

ಮಿವ-ನಾಯಿಕೊಡೆಯಂತೆ, ಧರ್ತಾ-ಧರಿಸುವನು ॥ ೩೧ ॥ ನಿಶಾ...ರ್ಯಾಂ, ನಿಶಾಕರ-ಚಂದ್ರನ, ರಶ್ಮಿ-ಕಿರಣಗಳಿಂದ, ಗೌರ್ಯಾಂ-ಬಿಳಿದಾದ, ನಿಶಿ-ರಾತ್ರಿಯಲ್ಲಿ, ರಾಸೋನ್ಮುಖಃ-ರಾಸಕ್ರೀಡೆಯಲ್ಲಿ ಆಸಕ್ತನಾಗಿ, ಕ್ರೀಡನ್-ವಿಹರಿಸುತ್ತಾ, ಕಲ...ನ, ಕಲಪದ-ಸವಿನುಡಿಗಳುಳ್ಳ, ಆಯತ-ದೀರ್ಘವಾದ, ಮೂರ್ಛಿತೇನ-ಆಲಾಪನೆಗಳುಳ್ಳ ಸಂಗೀತದಿಂದ, ಉದ್ದೀ...ಜಾಂ, ಉದ್ದೀಪಿತ-ಎಬ್ಬಿಸಲ್ಪಟ್ಟ, ಸ್ಮರರುಜಾಂ - ಮನ್ಮಥ ತಾಪವುಳ್ಳ, ವ್ರಜಭೃತ್-ಗೋಪಾಲಕರ, ವಧೂನಾಂ-ಸ್ತ್ರೀಯರನ್ನು, ಹರ್ತುಃ-ಅಪಹರಿಸಿದ, ಧನದಾನುಗಸ್ಯ-ಕುಬೇರನಿಗೆ ಭೃತ್ಯನಾದ ಶಂಖಚೂಡನ, ಶಿರಃ-ತಲೆಯನ್ನು, ಹರಿಷ್ಯತಿ - ತರಿಯುವನು ॥೩೩॥

ಪ್ರಲಂಬನು, ಖರ-ಧೇನುಕನು, ದರ್ದುರ-ಬಕನು, ಕೇಶಿಯು, ಅರಿಷ್ಟನು, ಮಲ್ಲನು, ಇಭ-ಕುವಲಯಾಪೀಡನು, ಕಂಸನು, ಯವನನು; ಕುಜ-ನರಕಾಸುರನು, ಪೌಂಡ್ರನು, ಇವರೇ, ಮುಖ್ಯಾಃ-ಪ್ರಮುಖರಾದ, ಯೇ ಚ-ಯಾರುಂಟೋ, ಅವರೂ, ಸಾಲ್ವನು, ಕಪಿ-ದ್ವಿವಿದನು, ಬಲ್ವಲನು, ದಂತವಕ್ರನು, ಸಪ್ತೋಕ್ಷ-ಏಳುಗೂಳಿಗಳು, ಶಂಬರನು, ವಿಡೂರಥನು, ರುಕ್ಮಿಯು, ಮುಖ್ಯಾಃ-ಇವರೇ ಮೊದಲಾದ ಅನ್ಯೇ ಚ-ಇತರರೂ ॥೩೪॥ ಮೃಧೇ-ಯುದ್ಧದಲ್ಲಿ, ಆತ್ತಚಾಪಾಃ-ಬಿಲ್ಲುಗಾರರಾದ, ಸಮಿತಿಶಾಲಿನಃ - ಯುದ್ಧದಲ್ಲಿ ಹೊಗಳಿಸಿಕೊಳ್ಳುವ, ಕಾಂಭೋ...ದ್ಯಾಃ, ಕಾಂಭೋಜರಾಜನು, ಮತ್ಸ್ಯರಾ

ಯಿಂದೆತ್ತುವನು. ಇಂತಹ ಕಾರ್ಯವನ್ನು ಮನುಷ್ಯನು ಮಾಡಲಾಪನೆ ? ॥ ೩೨ ॥ ಆ ಕೃಷ್ಣಮೂರ್ತಿಯು,ಶರಚ್ಚಂದ್ರಚಂದ್ರಿಕೆಯಿಂದ ಧವಳವಾದ ಒಂದು ರಾತ್ರಿಯಲ್ಲಿ ಉದ್ಯಾನವನದಲ್ಲಿ ರಾಸಕ್ರೀಡೆಯನ್ನಾಡಲುಜ್ಜುಗಿಸಿ, ಸೊಂಪಾದ ಸವಿನುಡಿಗಳಿಂದಿಂಪಾಗಿ ಗಾನಮಾಡುತ್ತಿರಲು, ಅದರಿಂದ ಮದವೇರಿ ತಾಪವಿರಿ ಕಾಮಾತುರೆಯರಾದ ಗೋಪಾಂಗನೆಯರನ್ನು ಅಪಹರಿಸಿದ, ಕುಬೇರಕಿಂಕರನಾದ ಶಂಖಚೂಡನ ತಲೆಯನ್ನು ತರಿಯುವನು ॥ ೩೩ ॥ ಪ್ರಲಂಬ, ಧೇನುಕ, ಬಕ, ಕೇಶಿ, ಅರಿಷ್ಟ, ಮಲ್ಲರನ್ನೂ, ಕುವಲಯಾಪೀಡವೆಂಬ ಮದಗಜವನ್ನೂ, ಕಂಸ, ಯವನ, ನರಕಾಸುರ, ಪೌಂಡ್ರಕರನ್ನೂ, ಸಾಲ್ವ, ದ್ವಿವಿದ, ಬಲ್ವಲ, ದಂತವಕ್ರರನ್ನೂ, ಏಳು ಗೂಳಿಗಳನ್ನೂ, ಶಂಬರ, ವಿಡೂರಥ, ರುಕ್ಮಿಗಳನ್ನೂ, ಯುದ್ಧದಲ್ಲಿ ಧನುರ್ಧಾರಿಗಳಾಗಿ ಶತ್ರುಗಳಿಂದ ಹೊಗಳಿಸಿಕೊಳ್ಳುವ, ಕಾಂಭೋಜ, ಮತ್ಸ್ಯ, ಸೃಂಜಯ, ಕೇಕಯ, ಮೊದಲಾದ ರಾಜ

* ಅನೇಕಮಂದಿ ನರ್ತಕಿಯರಿಂದೊಡಗೂಡಿ ಮಾಡುವ ನಾಟ್ಯಕ್ಕೆ ರಾಸವೆಂದು ಹೆಸರು.

ಭೂಪಾಃ ಕಾಂಭೋಜ ಮತ್ಸ್ಯ ಕುರು ಸೃಂಜಯು ಕೇಕಯಾದ್ಯಾಃ ।
ಯಾಸ್ಯಂತ್ಯ ದರ್ಶನ ಮಲಂ ಬಲ ಭೀಮ ಪಾರ್ಥ ವ್ಯಾಜಾಹ್ವಯೇನ ಹರಿಣಾ
ನಿಲಯಂ ತದೀಯಂ ॥ ೨೫ ॥ ಕಾಲೇನ ಮೀಲಿತಧಿಯಾ ಮವಮೃಶ್ಯ
ನೄಣಾಂ ಸ್ತೋಕಾಯುಷಾಂ ಸ್ವನಿಗಮೋ ಬತ! ದೂರಪಾರಃ। ಆವಿರ್ಹಿತ
ಸ್ತ್ವನುಯುಗಂ ಸಹಿ ಸತ್ಯವತ್ಯಾಂ ವೇದದ್ರುಮಂ ವಿಟಪಶೋ ವಿಭಜಿ
ಷ್ಯತಿಸ್ಮ ॥ ೨೬ ॥ ದೇವದ್ವಿಷಾಂ ನಿಗಮವರ್ತ್ಮನಿ ನಿಷ್ಠಿತಾನಾಂ
ಪೂರ್ಭಿರ್ಮಯೇನ ವಿಹಿತಾಭಿ ರದೃಶ್ಯ ತೂರ್ಭಿಃ । ಲೋಕಾನ್ ಘ್ನತಾಂ

ಜನು, ಸೃಂಜಯನು, ಕೇಕಯನು, ಆದ್ಯಾಃ-ಮೊದಲಾದ, ಯೇವಾ - ಯಾರುಂಟೋ, ಅವರೆಲ್ಲರೂ, ಬಲ...ನ, ಬಲ-ಬಲರಾಮನು, ಭೀಮ-ಭೀಮನು, ಪಾರ್ಥ-ಅರ್ಜುನನು, ಇವರೆಂಬ, ವ್ಯಾಜ - ಕಪಟವಾದ, ಆಹ್ವಯೇನ-ಹೆಸರುಳ್ಳ, ಹರಿಣಾ-ಶ್ರೀಹರಿಯಿಂದ, ಅಲಂ-ಅತ್ಯಂತವಾಗಿ, ಅದರ್ಶನಂ - ಇಂದ್ರಿಯಗಳಿಗೆ ಗೋಚರವಲ್ಲದ, ತದೀಯಂ - ಆಭಗವತ್ಸಂಬಂಧಿಯಾದ, ನಿಲಯಂ - ವೈಕುಂಠಲೋಕವನ್ನು, ಯಾಸ್ಯಂತಿ-ಹೊಂದುವರು ॥ ೨೫ ॥ ಕಾಲೇನ-ಕಾಲದಿಂದ, ಮೀಲಿತಧಿಯಾಂ - ಮತಿಗೆಟ್ಟ, ಸ್ತೋಕಾಯುಷಾಂ-ಅಲ್ಪಾಯುಗಳಾದ, ನೄಣಾಂ-ಮನುಷ್ಯರಿಗೆ, ಸ್ವನಿಗಮಃ - ತನ್ನಿಂದಮಾಡಲ್ಪಟ್ಟ ವೇದವು, ದೂರಪಾರಃ-ಅಸಾಧ್ಯವು, ಬತ-ಅಕಟಾ ! ಇತಿ-ಎಂದು, ಅವಮೃಶ್ಯ-ಯೋಚಿಸಿ, ಅನುಯುಗಂ- ಪ್ರತಿಯುಗದಲ್ಲಿಯೂ, ಸತ್ಯವತ್ಯಾಂ-ಸತ್ಯವತಿಯಲ್ಲಿ, ಆವಿರ್ಹಿತಃ-ಅವತರಿಸಿ, ವೇದದ್ರುಮಂ - ವೇದವೆಂಬ ವೃಕ್ಷವನ್ನು ವಿಟಪಶಃ-ಹಲವುಶಾಖೆಗಳಾಗಿ, ವಿಭಜಿಷ್ಯತಿಸ್ಮ-ವಿಂಗಡಿಸುವನು ॥ ೨೬ ॥

ನಿಗಮವರ್ತ್ಮನಿ-ವೇದಮಾರ್ಗದಲ್ಲಿ, ನಿಷ್ಠಿತಾನಾಂ-ನೆಲೆಗೊಂಡಿರುವವರ, ಲೋಕಾನ್ - ಲೋಕಗಳನ್ನು, ಮಯೇನ-ಮಯನಿಂದ, ವಿಹಿತಾಭಿಃ-ಮಾಡಲ್ಪಟ್ಟ, ಅದೃಶ್ಯತೂರ್ಭಿಃ-ಕಾಣಲಾರದಷ್ಟು ವೇಗವುಳ್ಳ, ಪೂರ್ಭಿಃ-ಪಟ್ಟಣಗಳಿಂದ, ಘ್ನತಾಂ-ನಾಶಗೊಳಿಸುವ, ದೇವದ್ವಿಷಾಂ-ರಾಕ್ಷಸರ, ಮತಿವಿಮೋಹಂ-

---

ರನ್ನೂ ಸಹ, ಬಲರಾಮ, ಭೀಮ, ಅರ್ಜುನರೆಂಬ ಕಪಟನಾಮಗಳುಳ್ಳವನಾಗಿ, ಆ ಭಗವಂತನು ಈ ಪ್ರಾಕೃತೇಂದ್ರಿಯಗಳಿಗೆ ಅಗೋಚರವಾದ ತನ್ನ ವೈಕುಂಠಲೋಕಕ್ಕೆ ಕರೆದುಕೊಂಡು ಹೋಗುವನು, ಇದು ಮನುಜನಿಗೆ ಸಾಧ್ಯವೆ ? ಇದು ಕೃಷ್ಣಾವತಾರವು ॥ ೨೪ - ೨೫ ॥ ಕಾಲಕ್ರಮದಿಂದ ಬುದ್ಧಿಹೀನರಾಗಿ ಅಲ್ಪಾಯುಗಳಾಗಿರುವ ಜನರಿಗೆ ತಾನು ಮಾಡಿರುವ ವೇದವು ಸಾಧ್ಯವಾಗಲಾರದೆಂದಾಲೋಚಿಸಿ, ಆ ಪರಮಾತ್ಮನು ಪ್ರತಿಯುಗದಲ್ಲಿಯೂ, ಸತ್ಯವತೀದೇವಿಯ ಗರ್ಭದಲ್ಲಿ ವ್ಯಾಸರೂಪದಿಂದವತರಿಸಿ, ಅಪಾರವಾದ ವೇದವೃಕ್ಷವನ್ನು ಹಲವು ಶಾಖೆಗಳಾಗಿ ವಿಂಗಡಿಸಿ ಲೋಕೋಪಕಾರವನ್ನು ಮಾಡುವನು. ಇದು ವ್ಯಾಸಾವತಾರವು ॥ ೨೬ ॥

ಮಯಾಸುರನಿಂದ ನಿರ್ಮಿತಗಳಾಗಿ, ಕಣ್ಣಿಗೆ ಕಾಣಿಸದಷ್ಟು ವೇಗದಿಂದೊಡಗೂಡಿ ಗಗನಮಂಡಲದಲ್ಲಿ ಸಂಚರಿಸುತ್ತಿರುವ ಪಟ್ಟಣಗಳಲ್ಲಿ ಕುಳಿತು, ವೇದಮಾರ್ಗನಿಷ್ಣಾತರಾದ ವೈದಿಕರನ್ನು ಕೊಲೆಗೊಳಿಸುತ್ತಿರುವ ದೇವಶತ್ರುಗಳಾದ ರಾಕ್ಷಸರು ಮರುಳಾಗುವಂತೆಯೂ, ದುರಾಸೆ ಹೆಚ್ಚುವಂತೆಯೂ, ಬುದ್ಧವೇಷವನ್ನು ಧರಿಸಿದ

ಮತಿವಿಮೋಹ ಮತಿಪ್ರಲೋಭಂ ವೇಷಂ ವಿಧಾಯ ಬಹುಭಾಷ್ಯತ ಔಪ
ಧರ್ಮ್ಯಂ ॥೩೭॥ ಯರ್ಹ್ಯಾಲಯೇಷ್ವಪಿ ಸತಾಂ ನಕಥಾ ಹರೇಃ ಸ್ಯುಃ
*ಪಾಷಂಡಿನೋ ದ್ವಿಜ ಜನಾ ವೃಷಲಾ ನೃದೇವಾಃ । †ಸ್ವಾಹಾ ಸ್ವಧಾ ವಷ
ಡಿತಿಸ್ಮ ಗಿರೋ ನಯತ್ರ ಶಾಸ್ತಾ ಭವಿಷ್ಯತಿ ಕಲೇ ರ್ಭಗವಾನ್ಯು
ಗಾಂತೇ ॥ ೩೮ ॥ ‡ ಸರ್ಗೇ ತಪೋಹ ಋಷಯೋ ನವ ಯೇ ಪ್ರಜೇಶಾ

ಬುದ್ಧಿಯನ್ನು ಮರುಳುಮಾಡುವ, ಅತಿಪ್ರಲೋಭಂ-ಬಹಳ ದುರಾಶೆಯನ್ನುಂಟುಮಾಡುವ, ವೇಷಂ-ಪಾಷಂಡವೇಷವನ್ನು, ವಿಧಾಯ-ಧರಿಸಿ, ಔಪಧರ್ಮ್ಯಂ - ಪಾಷಂಡಧರ್ಮವನ್ನು, ಬಹುಭಾಷ್ಯತೇ - ಬಹಳವಾಗಿ ಹೇಳುವನು ॥೩೭॥ ಯರ್ಹಿ-ಯಾವಾಗ, ಸತಾಂ-ಸಜ್ಜನರ, ಆಲಯೇಷ್ವಪಿ-ಮನೆಗಳಲ್ಲಿಯೂ, ಹರೇಃ-ವಿಷ್ಣುವಿನ, ಕಥಾಃ-ಕಥೆಗಳು, ನಸ್ಯುಃ-ನಡಿಯುವುದಿಲ್ಲವೋ, ದ್ವಿಜಜನಾಃ-ಬ್ರಹ್ಮ, ಕ್ಷತ್ರಿಯ, ವೈಶ್ಯರು, ಪಾಷಂಡಿನಃ-ನಾಸ್ತಿಕರಾಗುವರೋ, ವೃಷಲಾಃ-ಶೂದ್ರರು, ನೃದೇವಾಃ - ರಾಜರಾಗುವರೋ, ಯತ್ರ-ಎಲ್ಲಿ, ಸ್ವಾಹಾ, ಸ್ವಧಾ, ವಷಟ್, ಇತಿ - ಹೀಗೆಂಬ, ಗಿರಃ - ಮಾತುಗಳು, ನ-ಉಂಟಾಗುವುದಿಲ್ಲವೋ, ತದಾ-ಆಗ, ಭಗವಾನ್-ಭಗವಂತನು, ಯುಗಾಂತೇ - ಕಲಿಯುಗದ ಕಡೆಯಲ್ಲಿ, ಕಲೇಃ - ಕಲಿಪುರುಷನನ್ನು, ಶಾಸ್ತಾ-ಶಿಕ್ಷಿಸತಕ್ಕವನು, ಭವಿಷ್ಯತಿ-ಆಗುವನು ॥ ೩೮ ॥ ಸರ್ಗೇ-ಸೃಷ್ಟಿಯಲ್ಲಿ,

ವನಾಗಿ, ಪಾಷಂಡಧರ್ಮಗಳನ್ನು ಉಪದೇಶಿಸುವನು. ಇದೇ ಬುದ್ಧಾವತಾರವು ॥೩೭॥
ಯಾವಾಗ ಸತ್ಪುರುಷರ ಮನೆಗಳಲ್ಲಿಯೂ, ಭಗವಚ್ಚರಿತ್ರೆಗಳು ಕೇಳಬರುವದಿಲ್ಲವೋ, ಬ್ರಹ್ಮ ಕ್ಷತ್ರಿಯ ವೈಶ್ಯರು ವೇದಗಳನ್ನು ದೂಷಿಸುತ್ತಾ ಬರುವರೋ, ಶೂದ್ರರು ರಾಜರಾಗುವರೋ, 'ಸ್ವಾಹಾ' 'ಸ್ವಧಾ' 'ವಷಟ್' ಎಂಬ ಶಬ್ದಗಳು ಎಲ್ಲಿಯೂ ಕೇಳಬರುವುದಿಲ್ಲವೋ, ಅಂತಹ ಕಾಲದಲ್ಲಿ ಭಗವಂತನು ಕಲ್ಕಿರೂಪದಿಂದವತರಿಸಿ,

* ವೇದಮಾರ್ಗವಿರೋಧೇನ ಯೇಷಾಂಕರಣ ಮಣ್ವಪಿ । ತೇಹಿ ಪಾಷಂಡಿನೋ ಜ್ಞೇಯಾ ವೇದಾರ್ಥಸ್ಯ ವಿನಿಂದಕಾಃ ॥ ವೇದಗಳನ್ನು ದೂಷಿಸಿ, ವೇದ ವಿರುದ್ಧವಾದ ಆಚರಣೆಯನ್ನು ನಡೆಯಿಸುವವರು ಪಾಷಂಡರೆನಿಸುವರು. †ದೇವತೆಗಳಿಗೆ ಕೊಡುವ ಅನ್ನಕ್ಕೆ 'ಸ್ವಾಹಾ' 'ವಷಟ್' ಎಂತಲೂ, ಪಿತೃಗಳಿಗೆಕೊಡುವ ಅನ್ನಕ್ಕೆ 'ಸ್ವಧಾ' ಎಂತಲೂ ಹೆಸರು.

‡ ವಿ. ಈ ಅವತಾರಪ್ರಕರಣದಲ್ಲಿ;ಬ್ರಹ್ಮನಾರದ ಸಂವಾದಕ್ಕಿಂತ ಮೊದಲೇ ವರಾಹಾದ್ಯವತಾರಗಳು ಆಗಿದ್ದುವು. ಮನ್ವಂತರಾವತಾರಗಳು ಹಿಂದೆಯೂ ಈಚೆಗೂ ಆದುವು. ಧನ್ವಂತರಿ ಪರಶುರಾಮಾವತಾರಗಳು ಆ ಕಾಲದಲ್ಲಿ ನಡೆದುವು. ಶ್ರೀ ರಾಮಾದ್ಯವತಾರಗಳು ಈಚೆಗಾದುವು. ಇಲ್ಲಿ ತಿಳಿಯಬೇಕಾದ ತತ್ವವೇನಂದರೆ:—ರೂಪಾವತಾರಗಳೆಂತಲೂ, ಅನುಪ್ರವೇಶಾವತಾರಗಳೆಂತಲೂ ಭಗವಂತನ ಅವತಾರಗಳು ೨ವಿಧ. ಷೋಡಶ ಕಲೆಗಳಿಂದ ಶುದ್ಧಸತ್ವಮಯವಾಗಿ ಜನಿಸಿದ ವರಾಹ, ನಾರಾಯಣ, ಹರಿ, ಹಯಗ್ರೀವ, ಮತ್ಸ್ಯ, ಕೂರ್ಮ, ನೃಸಿಂಹ, ವಾಮನ, ಹಂಸ, ವೈಕುಂಠ, ಅಜಿತ, ರಾಮ, ಕೃಷ್ಣ, ಕಲ್ಕಿ. ಇವು ರೂಪಾವತಾರಗಳು. ಭಗವಂತನು ಜೀವರಲ್ಲಿ ತನ್ನ ಜ್ಞಾನ, ಶಕ್ತಿ, ಮೊದಲಾದವುಗಳನ್ನು ಹೊರಪಡಿಸುವ ಪೃಥು ಮೊದಲಾದವರ ಅವತಾರಗಳೇ ಅನುಪ್ರವೇಶಾವತಾರಗಳೆನಿಸುವುವು. ಇಂತಹ ಅವತಾರಗಳ ಮಹಿಮೆಯನ್ನು ಹೊರಪಡಿಸುವದೇ ಈ ಶ್ಲೋಕತಾತ್ಪರ್ಯವು.

ಸ್ಥಾನೇಽಥ ಧರ್ಮ ಮಖ ಮನ್ವಮರಾವನೀಶಾಃ। ಅಂತೇ ತ್ವಧರ್ಮಹರ ಮನ್ಯುವ ಶಾಽಸುರಾದ್ಯಾ ಮಾಯಾ ವಿಭೂತಯ ಇಮಾಃ ಪುರುಶಕ್ತಿಭಾಜಃ॥ ವಿಷ್ಣೋರ್ನು ವೀರ್ಯಗಣನಾಂ ಕತಮೋಽರ್ಹತೀಹ ಯಃ ಪಾರ್ಥಿವಾನ್ಯಪಿ ಕವಿ ರ್ವಿಮಮೇ ರಜಾಂಸಿ। ಚಸ್ಕಂಭ ಯಃ ಸ್ವರಂಹಸಾಽಸ್ಖಲತಾ ತ್ರಿಪೃಷ್ಠಂ ಯಸ್ಮಾತ್ ತ್ರಿಸಾಮ್ಯಸದನಾ ದುರು ಕಂಪಯಾನಂ ॥ ೪೦ ॥ ನಾಂತಂ ವಿದಾ ಮ್ಯಹ ಮಮೀ ಮುನಯೋಽಗ್ರಜಾ ಸ್ತೇ ಮಾಯಾಬಲಸ್ಯ ಪುರುಷಸ್ಯ ಕುತೋಽಪರೇ ಯೇ । ಗಾಯನ್ ಗುಣಾನ್ ದಶ ಶತಾನನ ಆದಿ

ತಪಃ-ಸೃಷ್ಟ್ಯಾಲೋಚನೆಯು, ಅಹಂ-ನಾನು, ಪ್ರಜೇಶಾಃ-ಪ್ರಜಾನಾಯಕರಾದ, ನವ ಒಂಬತ್ತು ಮಂದಿ, ಯೇ-ಯಾವ, ಋಷಯಃ-ಋಷಿಗಳುಂಟೋ ಅವರೂ, ಅಥ-ಅನಂತರ ಸ್ಥಾನೇ-ಸ್ಥಿತಿಯಲ್ಲಿ, ಧರ್ಮ-ಧರ್ಮರಾಜನು, ಮಖ-ವಿಷ್ಣುವು, ಅಮರ-ಇಂದ್ರಾದಿಗಳು, ಅವನೀಶಾಃ - ರಾಜರೂ, ಅಂತೇ - ಪ್ರಳಯದಲ್ಲಿ ಯಾದರೆ, ಅಧರ್ಮ-ಅಧರ್ಮವು, ಹರ-ರುದ್ರನು, ಮನ್ಯುವಶ-ಸರ್ಪಗಳು, ಅಸುರ-ರಾಕ್ಷಸರು, ಆದ್ಯಾಃ-ಇವರೇ ಮೊದಲಾದ, ಇಮಾಃ - ಇವುಗಳು, ಪುರುಶಕ್ತಿಭಾಜಃ - ಅನಂತಶಕ್ತಿಗಳುಳ್ಳ ಭಗವಂತನ, ಮಾಯಾ ವಿಭೂತಯಃ-ಆಶ್ಚರ್ಯಕರಗಳಾದ ಮಹಿಮೆಗಳು ॥ ೩೯ ॥ ಯಃ-ಯಾವಪರಮಾತ್ಮನು, ಯಸ್ಮಾತ್-ಯಾವಕಾರಣದಿಂದ, ಅಸ್ಖಲತಾ-ತಡೆಯಿಲ್ಲದ, ಸ್ವರಂಹಸಾ-ತನ್ನ ಪಾದವೇಗದಿಂದ, ತ್ರಿ...ತ್, ತ್ರಿ-ಮೂರು ಗುಣಗಳ, ಸಾಮ್ಯ - ಸಮತಾರೂಪವಾದ ಪ್ರಕೃತಿಯೆಂಬ, ಸದನಾತ್ - ಅಧಿಷ್ಠಾನಮೊದಲುಗೊಂಡು, ಉರು-ಅಧಿಕವಾಗಿ, ಕಂಪಯಾನಂ-ನಡುಗುತ್ತಿರುವ, ಅಥವಾ ನಡುಗುತ್ತಿರುವ ಯಾನಗಳುಳ್ಳ, ತ್ರಿಪೃಷ್ಠಂ-ಸತ್ಯಲೋಕವನ್ನು, ಅಥವಾ ಆತ್ರಿಪೃಷ್ಠಂ-ಸತ್ಯಲೋಕದವರೆಗೂ ಇರುವದೆಲ್ಲವನ್ನೂ, ಚಸ್ಕಂಭ-ವಿಕ್ರಮಿಸಿದನೋ, ಆದುದರಿಂದ, ಯಃ-ಯಾವನು, ಪಾರ್ಥಿವಾನಿ-ಭೂಮಿಯ, ರಜಾಂಸ್ಯಪಿ-ಧೂಳಿಗಳನ್ನೂ. ವಿಮಮೇ-ಎಣಿಸಿದನೋ, ಅಂತವನಾದರೂ, ವಿಷ್ಣೋಃ-ಆ ವಿಷ್ಣುವಿನ, ವೀರ್ಯಗಣನಾಂ-ಮಹಿಮೆಗಳನ್ನೆಣಿಸಲು, ಇಹ-ಈ ಲೋಕದಲ್ಲಿ, ಕತಮಃ-ಯಾವನು, ಅರ್ಹತಿ - ಸಮರ್ಥನಾಗುವನು॥ ಪುರುಷಸ್ಯ-ಪರಮಾತ್ಮನ, ಮಾಯಾಬಲಸ್ಯ-ಮಾಯಾಶಕ್ತಿಯ, ಅಂತಂ-ಕಡೆಯನ್ನು, ಅಹಂ-ನಾನು,

---

ಯುಗಾಂತದಲ್ಲಿ ಕಲಿಯನ್ನು ನಿಗ್ರಹಿಸುವನು. ಇದೇ ಕಲ್ಕ್ಯವತಾರವು॥೩೮॥ ಎಲೈ ನಾರದನೆ! ಆದಿಯಲ್ಲಿ ಸೃಷ್ಟಿ ಸಂಕಲ್ಪವು, ನಾನು, ಮರೀಚಿ ಮೊದಲಾದ ನವಬ್ರಹ್ಮರು, ಇವರೂ ಪಾಲನಕಾಲದಲ್ಲಿ, ಧರ್ಮರಾಜನು, ವಿಷ್ಣುವು, ಮನುಗಳು. ದೇವತೆಗಳು, ರಾಜರು ಇವರುಗಳೂ, ಸಂಹಾರದಲ್ಲಿ ಅಧರ್ಮವು, ರುದ್ರನು, ಸರ್ಪಗಳು, ರಾಕ್ಷಸರು, ಇವರೇ ಮೊದಲಾದವರು, ಇವರೆಲ್ಲರೂ ಅಪಾರಮಹಿಮನಾದ ಆ ಭಗವಂತನ ಮಹಿಮೆಯೆಂದೇ ತಿಳಿ ॥ ೩೯ ॥ ಯಾವ ಭಗವಂತನು ತ್ರಿವಿಕ್ರಮಾವತಾರವನ್ನು ಮಾಡಿ ಪಾದನ್ಯಾಸದಿಂದಲೇ ಪೃಥಿವಿಮೊದಲು ಪ್ರಧಾನಾಂತವಾಗಿ ಕಡೆಯದಾದ ಸತ್ಯಮೊದಲಾದ ಸಕಲ ಲೋಕಗಳನ್ನೂ ವ್ಯಾಪಿಸಿದನೋ, ಅಂತಹ ಅಚಿಂತ್ಯ ಶಕ್ತಿಯುಳ್ಳ ಭಗವಂತನ ಮಹಿಮೆಗಳನ್ನು, ಯಾವನು ತಾನೇ ಎಣಿಸಬಲ್ಲನು? ಭೂಮಿಯ ಪರಮಾಣುಗಳನ್ನಾದರೂ ಎಣಿಸಬಹುದು. ಭಗವಂತನ ಮಹಿಮೆಗಳನ್ನು ಎಣಿಸಲಾಪರೆ? ॥ ೪೦ ॥

ದೇವೋ ಶೇಷೋಽಧುನಾಪಿ ಸಮವಸ್ಯತಿ ನಾಸ್ಯಪಾರಂ ॥ ೪೧ ॥ ಯೇಷಾಂ ಸಏವ ಭಗವಾನ್ ದಯಯೇ ದನಂತ ಸ್ಸರ್ವಾತ್ಮನಾ ಶ್ರಿತ ಪದೋ ಯದಿ ನಿರ್ವ್ಯಳೀಕಂ । ತೇ ದುಸ್ತರಾ ಮತಿತರಂತಿಚ ದೇವ ಮಾಯಾಂ ನೈಷಾಂ ಮಮಾಹ ಮಿತಿ ಧೀಃ ಶ್ವಸೃಗಾಲಭಕ್ಷ್ಯೇ॥೪೨॥ ವೇದಾಹ ಮಂಗ! ಪರಮಸ್ಯಹಿ ಯೋಗಮಾಯಾಂ ಯೂಯಂ ಭವಶ್ಚ ಭಗವಾ ನಥ ದೈತ್ಯವರ್ಯಃ । ಪತ್ನೀ ಮನೋ ಸ್ಸಚ ಮನುಶ್ಚ ತದಾತ್ಮಜಾ ಶ್ಚ ಪ್ರಾಚೀನಬರ್ಹಿ ಋಭುರಂಗ ಉತ ಧ್ರುವಶ್ಚ ॥ ೪೩ ॥ ಇಕ್ಷ್ವಾಕು

ನವಿದಾಮಿ-ತಿಳಿಯಲಿಲ್ಲ, ತೇ-ನಿನಗೆ, ಅಗ್ರಜಾಃ-ಅಣ್ಣಂದಿರಾದ, ಅಮೀ-ಈ, ಮುನಯಃ-ಸನಕಾದಿಗಳು, ನವಿದುಃ-ತಿಳಿಯಲಿಲ್ಲ, ಅಪರೇ-ಇತರರು, ಕುತಃ-ಹೇಳುವುದೇನು ? ದಶ ಶತಾನನಃ - (ಹತ್ತುನೂರು) ಸಾವಿರಮುಖಗಳುಳ್ಳ, ಆದಿದೇವಃ-ದೇವತೆಗಳಲ್ಲಿ ಆದಿಯೆನಿಸಿದ, ಶೇಷಃ-ಶೇಷನು, ಅಸ್ಯ-ಈಭಗವಂತನ, ಗುಣಾನ್-ಗುಣಗಳನ್ನು, ಗಾಯನ್-ಹೊಗಳುತ್ತಾ, ಅಧುನಾಪಿ - ಈಗಲೂ, ಪಾರಂ - ಕೊನೆಯನ್ನು, ನಸಮವಸ್ಯತಿ-ಹೊಂದುವುದಿಲ್ಲ ॥ ೪೧ ॥ ನಿರ್ವ್ಯಳೀಕಂ-ನಿಷ್ಕಪಟವಾದ, ಸರ್ವಾತ್ಮನಾ - ಏಕಚಿತ್ತದಿಂದ, ಶ್ರಿತಪದೋಯದಿ-ಪಾದಗಳನ್ನು ನಂಬಿದಲ್ಲಿ, ಯೇಷಾಂ - ಯಾರಿಗೆ, ಭಗವಾನ್ - ಭಗವಂತನಾದ, ಸಏವ ಅನಂತಃ-ಆವಿಷ್ಣುವೇ,! ದಯಯೇತ್-ದಯೆಮಾಡುತ್ತಾನೋ, ತೇ-ಅವರು, ದುಸ್ತರಾಂ - ದಾಟಲಶಕ್ಯವಾದ, ದೇವಮಾಯಾಂ - ಭಗವಂತನ ಮಾಯೆಯನ್ನು, ಅತಿತರಂತಿಚ - ದಾಟುವರು, ಏಷಾಂ-ಇಂತವರಿಗೆ, ಶ್ವ...ಕ್ಷ್ಯೇ, ಶ್ವ-ನಾಯಿಗಳಿಗೂ, ಸೃಗಾಲ - ನರಿಗಳಿಗೂ, ಭಕ್ಷ್ಯೇ - ಆಹಾರವಾಗಿರುವ, ಶರೀರದಲ್ಲಿ, ಮಮ-ನನ್ನದು, ಅಹಂ-ನಾನು, ಇತಿ-ಹೀಗೆಂದು, ಧೀಃ-ಬುದ್ಧಿಯು, ನ-ಇರುವುದಿಲ್ಲ॥೪೨॥ ಹೇ ಅಂಗ-ಎಲೈನಾರದನೇ ! ಪರಸ್ಯ-ಪರಮಾತ್ಮನ, ಯೋಗಮಾಯಾಂ-ಮಾಯಾಶಕ್ತಿಯನ್ನು, ಅಹಂ-ನಾನು, ಯೂಯಂ-ನೀವು, ಭಗವಾನ್-ಭಗವಂತನಾದ, ಭವಶ್ಚ - ರುದ್ರನು, ಅಥ-ಮತ್ತು, ದೈತ್ಯವರ್ಯಃ-ದೈತ್ಯಶ್ರೇಷ್ಠನಾದ ಪ್ರಹ್ಲಾದನು, ಸಚಮನುಃ-ಸ್ವಾಯಂಭುವಮನುವು, ಮನೋಃ - ಮನುವಿನ, ಪತ್ನೀ-ಹೆಂಡಿರು, ತದಾತ್ಮಜಾಶ್ಚ-ಆತನ ಮಕ್ಕಳು, ಪ್ರಾಚೀನಬರ್ಹಿಃ - ಇಂದ್ರನು, ಋಭುವು, ಅಂಗಃ-ವೇನನ ತಂದೆಯಾದ ಅಂಗನು, ಉತ-ಮತ್ತು, ಧ್ರುವಶ್ಚ-ಧ್ರುವನು ॥ ೪೩ ॥

ಅಯ್ಯಾ ನಾರದಮುನಿಯೆ ! ಮಾಯಾತೀತನಾದರೂ ಮಾಯೆಯಿಂದ ಕ್ರೀಡಿಸುತ್ತಿರುವ ಶ್ರೀಹರಿಯ ಮಾಯಾಮಹಿಮೆಯನ್ನು, ನಾನಾಗಲಿ, ನಿನ್ನ ಅಣ್ಣಂದಿರಾದ ಸನಕಾದಿಮುನಿಗಳಾಗಲಿ, ಯಾರೂ ಅರಿಯರು. ಆದಿದೇವನೆನಿಸಿಕೊಂಡು ಸಹಸ್ರ ಮುಖನಾಗಿರುವ ಆದಿಶೇಷನು ಎಷ್ಟುಕಾಲದಿಂದ ಆ ವಿಷ್ಣುವಿನ ಗುಣಗಳನ್ನು ಬಣ್ಣಿಸುತ್ತಿದ್ದರೂ ಇನ್ನೂಕೊನೆಗಾಣಲಿಲ್ಲ ॥ ೪೧ ॥ ಎಲೈ ನಾರದನೆ ! ಯಾರು ನಿಷ್ಕಪಟವಾದ ಭಕ್ತಿಯಿಂದ ಭಗವಂತನ ಪಾದಕಮಲಗಳನ್ನು ಮರೆಹೊಗುವರೊ, ಅವರಿಗೆ ಭಗವಂತನೇ ದಯೆಮಾಡಿ ದಾರಿದೋರುವನು. ಬಳಿಕ ಅವರು ದಾಟಲಶಕ್ಯವಾದ ಆಭಗವನ್ಮಾಯೆಯನ್ನು ಕಡೆಹಾಯುವರು ಅವರಿಗೆ ನಾಯಿನರಿಗಳ ಪಾಲಾಗತಕ್ಕ ಈದೇಹದಲ್ಲಿ "ನಾನು ನನ್ನದು" ಎಂಬ ದುರಭಿಮಾನ ವಿರುವುದಿಲ್ಲ ॥ ೪೨ ॥ ಅಯ್ಯಾ ಪುತ್ರನೆ?

ರೈಲ ಮುಚುಕುಂದ ವಿದೇಹ ಗಾಧಿ ರಘ್ವಂಬರೀಷ ಸಗರಾ ಗಯನಾಹುಷಾದ್ಯಾಃ । ಮಾಂಧಾತ್ರಲರ್ಕ ಶತಧನ್ವನು ರಂತಿದೇವಾಃ ದೇವವ್ರತೋ ಬಲಿ ರಮೂರ್ತರಯೋ ದಿಲೀಪಃ ॥ ೪೪ ॥ ಸೌಭರ್ಯುತಂಕ ಶಿಬಿ ದೇವಲ ಪಿಪ್ಪಲಾದ ಸಾರಸ್ವತೋದ್ಧವ ಪರಾಶರ ಭೂರಿಷೇಣಾಃ । ಯೇಽನ್ಯೇ ವಿಭೀಷಣ ಹನೂಮ ದುಪೇಂದ್ರದತ್ತ ಪಾರ್ಥಾರ್ಷ್ಟಿಷೇಣ ವಿದುರ ಶ್ರುತದೇವ ವರ್ಯಾಃ ॥ ೪೫ ॥ ತೇವೈ ವಿದಂತ್ಯತಿತರಂತಿಚ ದೇವ ಮಾಯಾಂ ಸ್ತ್ರೀಶೂದ್ರ ಹೂಣ ಶಬರಾ ಅಪಿ ಪಾಪ ಜೀವಾಃ।ಯದ್ಯದ್ಭುತ

ಇಕ್ಷ್ವಾಕುವು, ಐಲ-ಪುರೂರವನು, ಮುಚುಕುಂದನು, ವಿದೇಹ-ಜನಕನು, ಗಾಧಿ-ವಿಶ್ವಾಮಿತ್ರನ ತಂದೆಯು, ರಘುವು, ಅಂಬರೀಷನು, ಸಗರನು, ಗಯನು, ನಾಹುಷ-ಯಯಾತಿಯು, ಮಾಂಧಾತನು, ಅಲರ್ಕನು, ಶತಧನ್ವನು, ಅನುವು, ರಂತಿದೇವನು, ದೇವವ್ರತ -ಭೀಷ್ಮನು, ಬಲಿಯು, ಅಮೂರ್ತರಯನು, ದಿಲೀಪನು ॥ ೪೪ ॥ ಸೌಭರಿ, ಉತಂಕ, ಶಿಬಿ, ದೇವಲ, ಪಿಪ್ಪಲಾದ, ಸಾರಸ್ವತ, ಉದ್ಧವ, ಪರಾಶರ, ಭೂರಿಷೇಣ ಇವರುಗಳೂ, ಅನ್ಯೇ-ಇತರರಾದ, ವಿಭೀ...ರ್ಯಾಃ, ವಿಭೀಷಣನು, ಹನುಮಂತನು, ಉಪೇಂದ್ರದತ್ತ-ಶುಕನು, ಪಾರ್ಥ-ಅರ್ಜುನನು, ಆರ್ಷ್ಟಿಷೇಣನು, ವಿದುರನು, ಶ್ರುತದೇವನು, ಇವರೇ ಮೊದಲಾದ ಮಹಾತ್ಮರು ॥ ೪೫ ॥ ತೇವೈ-ಅವರು, ವಿದಂತಿ-ತಿಳಿಯುವರು, ದೇವಮಾಯಾಂ - ಜಗನ್ಮಾಯೆಯನ್ನು, ಅತಿತರಂತಿಚ-ದಾಟುತ್ತಾರೆ, ಪಾಪಜೀವಾಃ-ಪಾಪಕರ್ಮದಿಂದ ಜೀವಿಸುವ, ಸ್ತ್ರೀ...ರಾಃ ಸ್ತ್ರೀಯರು, ಶೂದ್ರರು, ಹೂಣರು, ಬೇಡರು, ತಿರ್ಯಗ್ಜನಾಅಪಿ - ತಿರ್ಯಗ್ಜಂತುಗಳೂಕೂಡ, ಅದ್ಭು...ಶಿಕ್ಷಯದಿ, ಅದ್ಭುತ - ಆಶ್ಚರ್ಯಕರಗಳಾದ, ಕ್ರಮ - ಪಾದನ್ಯಾಸಗಳುಳ್ಳ ಭಗವಂತನ,

ತತ್ವಜ್ಞಾನವಿಲ್ಲದಿದ್ದರೂ, ಅನೇಕಮಂದಿ ಮಹಸೀಯರು ಆ ಭಗವತ್ಕೃಪೆಗೆ ಪಾತ್ರರಾಗಿ "ಇದು ಮಾಯೆ" ಎಂಬುದನ್ನು ಮಾತ್ರ ಬಲ್ಲರು. ಅವರು ಯಾರೆಂದರೆ:—ನಾನು, ಸನಕಾದಿಗಳು, ನೀನು, ಭಗವಂತನಾದ ಪರಶಿವನು, ಪ್ರಹ್ಲಾದನು, ಸ್ವಾಯಂಭುವ ಮನುವು, ಆತನ ಹೆಂಡತಿಯಾದ ಶತರೂಪೆಯು, ಆತನ ಗಂಡುಮಕ್ಕಳಾದ ಪ್ರಿಯವ್ರತ, ಉತ್ತಾನಪಾದರು, ಹೆಣ್ಣುಮಕ್ಕಳಾದ ಆ ಕೂತಿ ಮೊದಲಾದವರು, ಇಂದ್ರನು, ಋಭುವು, ಅಂಗರಾಯನು, ಧ್ರುವನು, ಇಕ್ಷ್ವಾಕುವು, ಐಲನು, ಮುಚುಕುಂದನು, ಜನಕರಾಜನು, ಗಾಧಿರಾಜನು, ರಘುರಾಜನು, ಅಂಬರೀಷಮಹಾರಾಜನು, ಸಗರನು, ಗಯನು, ಮಾಂಧಾತನು, ಅಲರ್ಕನು, ಶತಧನ್ವನು, ಅನುವು, ರಂತಿದೇವನು, ಭೀಷ್ಮಾಚಾರ್ಯನು, ಬಲಿಚಕ್ರವರ್ತಿಯು, ಅಮೂರ್ತರಯನು, ದಿಲೀಪರಾಜನು ॥ ೪೪ ॥

ಸೌಭರಿ, ಉತಂಕ, ಶಿಬಿ, ದೇವಲ, ಪಿಪ್ಪಲಾದ, ಸಾರಸ್ವತ, ಉದ್ಧವ, ಪರಾಶರ, ಭೂರಿಷೇಣ, ಇವರೂ, ಇನ್ನೂ ವಿಭೀಷಣ, ಹನುಮಂತ, ಶುಕ, ಅರ್ಜುನ, ಆರ್ಷ್ಟಿಷೇಣ, ವಿದುರ, ಶ್ರುತದೇವ,ಮೊದಲಾದ ಭಕ್ತರೂ ಬಲ್ಲರು ॥೪೫॥ ಬಹಳ ಮಾತೇಕೆ? ಸ್ತ್ರೀಯರು, ಶೂದ್ರರು, ಹೂಣರು, ಶಬರರು, ಮೊದಲಾದ ಪಾಪಜೀವಿಗಳಾಗಲಿ,

ಕ್ರಮ ಪರಾಯಣ ಶೀಲ ಶಿಕ್ಷಾಃ ಸ್ತ್ರಿಯರ್ಗಜ್ಜನಾ ಅಪಿ ಕಿಮು ? ಶ್ರುತಧಾರಣಾ ಯೇ ॥ ೪೬ ॥ ಶಶ್ವತ್ಪ್ರಶಾಂತ ಮಭಯಂ ಪ್ರತಿಬೋಧ ಮಾತ್ರಂ ಶುದ್ಧಂ ಸಮಂ ಸದಸತಃ ಪರಮಾತ್ಮತತ್ತ್ವಂ । ಶಬ್ದೋ ನಯತ್ರ ಪುರುಕಾರಕವಾನ್ ಕ್ರಿಯಾರ್ಥೋ ಮಾಯಾ ಪರೈತ್ಯಭಿಮುಖೇಚ ವಿಲಜ್ಜಮಾನಾ ॥ ೪೭ ॥ ತದ್ವೈ ಪದಂ ಭಗವತಃ ಪರಮಸ್ಯ ಪುಂಸೋ ಬ್ರಹ್ಮೇತಿ ಯದ್ವಿದು ರಜಸ್ರಸುಖಂ ವಿಶೋಕಂ । ಸಧ್ರ್ಯಙ್ ನಿಯಮ್ಯ ಯತಯೋ ಯಮ*ಕರ್ತಹೇತಿಂ ಜಹ್ಯುಃ ಸ್ವರಾಡಿವ ನಿಪಾನ ಖನಿತ್ರ

ಪರಾಯಣ-ಭಕ್ತರ, ಶೀಲ-ನಡವಳಿಕೆಯಲ್ಲಿ, ಶಿಕ್ಷಾಯದಿ-ಶಿಕ್ಷೆಯುಳ್ಳವರಾದರೆ, ಅತಿತರಂತಿ-ದಾಟುತ್ತಾರೆ, ಯೇ-ಯಾರು, ಶ್ರುತಧಾರಣಾಃ-ಧಾರಣಾಸ್ವರೂಪವನ್ನು ಬಲ್ಲವರೋ, ಕಿಮು-ಅವರು ಮಾಯೆಯನ್ನು ದಾಟುವರೆಂದು ಹೇಳುವುದೇನು ? ॥ ೪೬ ॥ ಅಜಸ್ರಸುಖಂ - ನಿತ್ಯವೂ, ಸುಖರೂಪವೂ ಆದ, ವಿಶೋಕಂ-ದುಃಖರಹಿತವಾದ, ಯತ್ - ಯಾವುದನ್ನು, ಬ್ರಹ್ಮೇತಿ-ಬ್ರಹ್ಮವೆಂದು, ವಿದುಃ-ತಿಳಿಯುವರೋ, ಶಶ್ವತ್-ಯಾವಾಗಲೂ, ಪ್ರಶಾಂತಂ-ಶಾಂತವಾದ, ಅಭಯಂ-ಭಯರಹಿತವಾದ, ಪ್ರತಿಬೋಧಮಾತ್ರಂ-ಕೇವಲ ಜ್ಞಾನರೂಪವಾದ, ಶುದ್ಧಂ - ನಿರ್ಮಲವಾದ, ಸಮಂ-ಭೇದರಹಿತವಾದ, ಸದಸತಃ-ಚಿದಚಿತ್ತುಗಳಿಗಿಂತ, ಪರಂ-ಶ್ರೇಷ್ಠವಾದ, ಆತ್ಮತತ್ತ್ವಂ - ಸಾಕ್ಷಿಸ್ವರೂಪವಾದ, ತದ್ವೈ-ಅದು, ಭಗವತಃ-ಭಗವಂತನಾದ, ಪರಮಸ್ಯ-ಶ್ರೇಷ್ಠನಾದ, ಪುಂಸಃ-ಪರಮಾತ್ಮನ, ಪದಂ-ಸ್ವರೂಪವು, ಯತ್ರ-ಎಲ್ಲಿ, ಶಬ್ದಃ-ವೇದವಾಗಲಿ, ಪುರುಕಾರಕವಾನ್ - ಅನೇಕ ಕರ್ತೃಕವಾದ, ಕ್ರಿಯಾರ್ಥಃ - ಕರ್ಮ ಫಲವಾಗಲಿ, ನ-ಇಲ್ಲವೋ, ಮಾಯಾಪಿ - ಮಾಯೆಯೂ, ಅಭಿಮುಖೇ-ಎದುರಾಗಿ, ವಿಲಜ್ಜಮಾನಾ-ನಾಚಿಕೆಗೊಂಡು, ಪರೈತಿ-ಮರೆಯಾಗುವಳೋ ॥ ೪೭ ॥ ಯತಯಃ-ಯತ್ನಶೀಲರಾದ ಮಹಾತ್ಮರು, ಯಂ-ಯಾವ ಭಗವಂತನನ್ನು ಕುರಿತು, ಸಧ್ರ್ಯಙ್-ಜಡನಾಡಿಯಾದ ಮನಸ್ಸನ್ನು, ನಿಯಮ್ಯ-ಸ್ಥಿರಗೊಳಿಸಿ,

ತಿರ್ಯಗ್ಜಂತುಗಳಾಗಲಿ, ಅದ್ಭುತವಿಕ್ರಮನಾದ ಭಗವಂತನ ಭಕ್ತರನಡವಳಿಕೆಯನ್ನು ಕಲಿತರೇ, ಅವರುಕೂಡ ಭಗವಂತನ ಕೃಪೆಗೆ ಪಾತ್ರರಾಗಿ ಆತನ ಮಾಯೆಯನ್ನು ಕಡೆಹಾಯುವರು. ಇಂತಿರುವಾಗ, ಶ್ರವಣಮನನಾದಿಗಳಿಂದ ಭಗವನ್ಮಹಿಮೆಯನ್ನು ಮನದಲ್ಲಿ ನೆಲೆಗೊಳಿಸಿಕೊಂಡು, ಧ್ಯಾನಿಸುವ ಭಾಗವತೋತ್ತಮರು ಆಮಾಯೆಯನ್ನು ದಾಟುವರೆಂದು ಹೇಳುವುದೇನು ? ॥ ೪೬ ॥ ಅಯ್ಯಾ ನಾರದನೆ ! ಯಾವರೂಪವನ್ನು ಮನಸ್ಸಿನಲ್ಲಿ ಧಾರಣೆಮಾಡಿ ಭಕ್ತರು ಮಾಯೆಯನ್ನುದಾಂಟುವರೋ, ಆ ಸ್ವರೂಪವನ್ನು ವಿವರಿಸುವೆನು ಕೇಳು. ಯಾವ ವಸ್ತುವು ಯಾವಾಗಲೂ ಶಾಂತವೂ, ನಿರ್ಭಯವೂ, ಜ್ಞಾನಸ್ವರೂಪವೂ, ನಿರ್ಮಲವೂ, ಭೇದರಹಿತವೂ, ಸದಸದ್ವಿಲಕ್ಷಣವೂ, ಆತ್ಮಸ್ವರೂಪವೂ

* (೧) ವೀ. ಸಂಶಯಗಳನ್ನು ಹೋಗಲಾಡಿಸುವ ನಿಶ್ಚಯಜ್ಞಾನವು ಕರ್ತವೆನಿಸುವದು. ಅದಕ್ಕಿಂತ ಬೇರೆಯಾದುದು ಅಕರ್ತವು ಎಂದರೆ ಕರ್ಮವು ಆದುದರಿಂದಕರ್ಮಸಾಧನಗಳನ್ನು ಬಿಡುವರೆಂದುಭಾವವು.

(೨) ವಿ. ಯಮನ ಅಧಿಕಾರಕ್ಕೊಳಪಟ್ಟ ನರಕಕ್ಕೆ ಹೇತುವಾದ ಸಂಸಾರವನ್ನು ಬಿಡುವರು.

ಮಿಂದ್ರಃ ॥೪೮॥ ಸ ಶ್ರೇಯಸಾ ಮಪಿ ವಿಭು ರ್ಭಗವಾ ನ್ಯತೋಽಸ್ಯ ಭಾವಸ್ವಭಾವ ವಿಹಿತಸ್ಯ ಸತಃ ಪ್ರಸಿದ್ಧಿಃ॥ ದೇಹೇ ಸ್ವಧಾತು ವಿಗಮೇಽನು ವಿಶೀರ್ಯಮಾಣೇ ವ್ಯೋಮೇವ ತತ್ರಪುರುಷೋ ನವಿಶೀರ್ಯ ತೇಽಜಃ॥ ಸೋಽಯಂ ತೇಽಭಿಹಿತ ಸ್ತಾತ! ಭಗವಾ ನ್ವಿಶ್ವಭಾವನಃ। ಸಮಾಸೇನ *ಹರೇ ರ್ನಾನ್ಯ ದನ್ಯಸ್ಮಾ ತ್ಸದಸಚ್ಚ ಯತ್ ॥೫೦॥ ಇದಂ ಭಾಗ

ಸ್ವರಾಟ್-ಸ್ವಪ್ರಕಾಶನಾದ, ಇಂದ್ರಃ-ಇಂದ್ರನು, ನಿಪಾ...ವ, ನಿಪಾನ-ಭಾವಿಯನ್ನು ಅಗೆಯುವುದಕ್ಕೆ ಖನಿತ್ರಮಿವ-ಗುದ್ದಲಿಯಂತೆ, ಅಥವಾ ಸ್ವರಾಟ್-ತನಗೆತಾನೇ ಇರುವ ಬಡವನು, ಇಂದ್ರಃ - ಭಾಗ್ಯವಂತನಾದಾಗ, ನಿಪಾನಖನಿತ್ರಮಿವ-ಬಾವಿಯನ್ನು ಅಗೆಯುವ ಗುದ್ದಲಿಯನ್ನೋಪಾದಿಯಲ್ಲಿ, ಅಕರ್ತಹೇತಿಂ-ಅಜ್ಞಾನನಾಶಕ್ಕೆ ಕಾರಣವನ್ನು, ಜಹ್ಯುಃ-ಬಿಡುವರೋ ॥ ೪೮ ॥ ಭಾವ...ಸ್ಯ, ಭಾವ - ಬ್ರಾಹ್ಮಣಾದಿಗಳ, ಅಥವಾ ಮಹದಾದಿಗಳ, ಸ್ವಭಾವ - ಶಮದಮಾದಿ ಗುಣಗಳಿಂದ, ಅಥವಾ ಪರಿಣಾಮದಿಂದ, ವಿಹಿತಸ್ಯ-ಮಾಡಲ್ಪಟ್ಟ, ಅಸ್ಯ-ಈ, ಸತಃ-ಸತ್ಕರ್ಮಗಳ, ಅಥವಾ ಈ ಪ್ರಪಂಚದ, ಪ್ರಸಿದ್ಧಿಃ - ಪ್ರಸಿದ್ಧಿಯು, ಯತಃ-ಯಾರಿಂದಲೋ, ದೇಹೇ-ಶರೀರದಲ್ಲಿ, ಸ್ವಧಾತುವಿಗಮೇ-ವಾತ ಪಿತ್ತ ಮೊದಲಾದ ಧಾತುಗಳ ವಿಯೋಗವಾದರೂ, ವಿಶೀರ್ಯಮಾಣೇಪಿ-ನಾಶವಾದರೂ, ಅಜಃ-ಜನ್ಮವಿಲ್ಲದವನಾದುದರಿಂದ, ತತ್ರ-ಆದೇಹದಲ್ಲಿ, ವ್ಯೋಮೇವ-ಆಕಾಶದಂತೆ, ಯಃಪುರುಷಃ - ಯಾವಪುರುಷನು, ನವಿಶೀರ್ಯತೇ-ನಾಶವಾಗುವುದಿಲ್ಲವೋ, ಸಃ-ಆ, ಭಗವಾನ್-ಭಗವಂತನೇ, ಶ್ರೇಯಸಾಮಪಿ-ಕರ್ಮ ಫಲಗಳಿಗೂ. ವಿಭುಃ-ದಾತೃವು॥

ಆಗಿರುವುದೋ, ಪ್ರಯತ್ನ ಶೀಲರಾದ ಮಹನೀಯರು ಯಾವಪರಮಾತ್ಮನಲ್ಲಿ ಮನಸ್ಸನ್ನು ಏಕಾಗ್ರವಾಗಿ ನಿಲ್ಲಿಸಿ, ವೃಷ್ಟಿನಿಯಾಮಕನಾದಇಂದ್ರನು, ಬಾವಿಯನ್ನು ಅಗೆಯುವುದಕ್ಕೆ ಸಾಧನಗಳಾದ ಗುದ್ದಲಿ ಮೊದಲಾದವುಗಳನ್ನು ಬಿಸಾಡುವಂತೆಯೂ, ಬಡವನಾಗಿದ್ದು ಭಾಗ್ಯವಂತನಾದವನು ತನ್ನ ಕೂಲಿಗೆ ಬೇಕಾಗಿದ್ದ ಆಯುಧಗಳನ್ನು ತೊರೆಯುವಂತೆಯೂ, ಅಭೇದಸಾಧನವಾದ ಜ್ಞಾನವನ್ನೂ ಸಹ ಆದರಿಸಲಾರರೊ, ಆತನೇ ಭಗವಂತನು ॥೪೮॥ ಅಲ್ಲದೆ ಬ್ರಾಹ್ಮಣಾದಿಗಳು ಶಮದಮಾದಿಗುಣಗಳಿಂದ ನಡೆಯಿಸುವ ಸತ್ಕರ್ಮಗಳಿಗೂ, ಮಹತ್ತು ಮೊದಲಾದ ತತ್ವಗಳ ಪರಿಣಾಮದಿಂದುಂಟಾಗಿರುವ ಈ ಜಗತ್ತಿಗೂ ಸಹ ಯಾವನು ಕಾರಣನಾಗಿರುವನೋ, ಭೌತಿಕ ಶರೀರದಲ್ಲಿ ವಾತ ಪಿತ್ತಾದಿ ಧಾತುಗಳು ಸಡಲಿದರೂ, ನಾಶವಾದರೂ ಕೂಡ ಯಾವನು ನಿರ್ವಿಕಾರನಾಗಿ ಆಕಾಶದಂತೆ ಏಕರೂಪವಾಗಿರುವನೋ, ಆ ಭಗವಂತನೇ ಕರ್ಮಫಲಗಳಿಗೂ ದಾತೃವಾಗಿರುವನು ॥ ೪೯ ॥ ಅಯ್ಯಾ ನಾರದಮುನಿಯೆ! ಜಗತ್ಕಾರಣನಾದ ಆ ಭಗವಂತನ ಸ್ವರೂಪವನ್ನು ನಿನಗೆ ಸಂಕ್ಷೇಪವಾಗಿ ಹೇಳಿದೆನು. ಬಹಳ ಮಾತೇಕೆ? ಈ ಜಗತ್ತಿನಲ್ಲಿ ಕಾಣಬರುವ ಸದಸದ್ರೂಪಗಳಾದ ವಸ್ತುಗಳೆಲ್ಲವೂ ಭಗವತ್ಸ್ವರೂಪವೇ ಹೊರತು ಆತನಿಗಿಂತಲೂ ಬೇರೆಯಲ್ಲ ॥ ೫೦ ॥

* ಪಾ. ಹರೇ ರ್ನಾನ್ಯ ದನ್ಯ ತ್ತತ್ಸದ ಸಚ್ಚ ಯತ್

ವತಂ ನಾಮ ಯನ್ಮೇ ಭಗವತೋದಿತಂ। ಸಂಗ್ರಹೋಽಯಂ ವಿಭೂತೀನಾಂ ತ್ವಮೇತ ದ್ವಿಪುಲೀಕುರು ॥ ೫೧ ॥ ಯಥಾ ಹರೌ ಭಗವತಿ ನೃಣಾಂ ಭಕ್ತಿ ರ್ಭವಿಷ್ಯತಿ । ಸರ್ವಾತ್ಮನ್ಯ ಖಿಲಾಧಾರೇ ಇತಿ ಸಂಕಲ್ಪ್ಯ ವರ್ಣಯ ॥ ೫೨ ॥ ನೃಜನ್ಮನಿ ನತುಷ್ಯೇತ ಕೃತೇನ ಭಗವಾನ್ ಯದಿ । ಧರ್ಮಾರ್ಥಕಾಮೈಃ ಕಿಂತರ್ಹಿ ಕಾರ್ಯಂ ಸಿದ್ಧ್ಯತಿ ನಶ್ವರೈಃ ॥ ೫೩ ॥ ಕೃಷ್ಣೇನ ಚೋತ್ತಮ ಶ್ಲೋಕೇ ಚೇದ್ಭಕ್ತಿರನಪಾಯಿನೀ । ಕಿಂ ಸ್ಯಾ ದ್ವರ್ಣಾಶ್ರಮಾಚಾರ ದಾನ ಹೋಮಾದಿ ಭಿಃ ಕೃತೈಃ ॥೫೪॥ ಮಾಯಾಂ

ಹೇತಾತ-ಅಯ್ಯಾ ನಾರದನೆ ! ವಿಶ್ವಭಾವನಃ - ಪ್ರಪಂಚಕಾರಣನಾದ, ಸೋಯಂಭಗವಾನ್ - ಆ ಭಗವಂತನು, ತೇ-ನಿನಗೆ, ಸಮಾಸೇನ - ಸಂಕ್ಷೇಪದಿಂದ, ಅಭಿಹಿತಃ-ಹೇಳಲ್ಪಟ್ಟನು, ಸದಸತ್ - ಕಾರ್ಯಕಾರಣರೂಪವಾದ, ಯಚ್ಚ-ಯಾವುದುಂಟೋ, ಅದು, ಅನ್ಯಸ್ಮಾತ್ - ಸದಸದ್ವಿಲಕ್ಷಣನಾದ, ಹರೇಃ-ಹರಿಗಿಂತಲೂ, ಅನ್ಯತ್-ಬೇರೆ, ನ-ಅಲ್ಲ ॥ ೫೦ ॥ ವಿಭೂತೀನಾಂ-ಮಹಿಮೆಗಳ, ಅಯಂ-ಈ, ಸಂಗ್ರಹಃಇತಿಯತ್ - ಸಂಕ್ಷೇಪವಾವುದುಂಟೋ, ಇದಂ-ಆ ಈ, ಭಾಗವತಂನಾಮ - ಭಾಗವತವೆಂಬುದು, ಮೇ-ನನಗೆ, ಭಗವತಾ-ಭಗವಂತನಿಂದ, ಉದಿತಂ-ಹೇಳಲ್ಪಟ್ಟಿತು, ಏತತ್-ಇದನ್ನು ತ್ವಂ-ನೀನು, ವಿಪುಲೀಕುರು-ವಿಸ್ತರಿಸು ॥ ೫೧ ॥ ಸರ್ವಾತ್ಮನಿ - ಸರ್ವರಿಗೂ ಆತ್ಮನಾದುದರಿಂದಲೇ, ಅಖಿಲಾಧಾರೇ - ಸರ್ವರಿಗೂ ಆಧಾರವೆನಿಸಿದ, ಭಗವತಿ-ಭಗವಂತನಾದ, ಹರೌ-ಹರಿಯಲ್ಲಿ, ನೃಣಾಂ-ಮನುಷ್ಯರಿಗೆ, ಯಥಾ-ಹೇಗೆ, ಭಕ್ತಿಃ-ಭಕ್ತಿಯು, ಭವಿಷ್ಯತಿ - ಉಂಟಾಗುವುದೋ, ತಥಾ-ಹಾಗೆ, ಸಂಕಲ್ಪ್ಯ-ಯೋಚಿಸಿ, ವರ್ಣಯ-ವರ್ಣಿಸು ॥ ೫೨ ॥ ನೃಜನ್ಮನಿ-ಮನುಷ್ಯಜನ್ಮದಲ್ಲಿ, ಕೃತೇನ - ಮಾಡಲ್ಪಟ್ಟ ಸಾಧನಗಳಿಂದ, ಭಗವಾನ್-ಭಗವಂತನು, ನತುಷ್ಯೇತಯದಿ-ಪ್ರೀತನಾಗದಿದ್ದರೆ, ತರ್ಹಿ-ಆಗ, ನಶ್ವರೈಃ - ಅಸ್ಥಿರಗಳಾದ, ಧರ್ಮಾರ್ಥಕಾಮೈಃ - ಧರ್ಮ, ಅರ್ಥ, ಕಾಮ, ಇವುಗಳಿಂದ, ಕಿಂ - ಏನು, ಕಾರ್ಯಂ - ಕೆಲಸವು, ಸಿದ್ಧ್ಯತಿ-ಫಲಿಸುತ್ತದೆ. ॥ ೫೩ ॥ ಉತ್ತಮಶ್ಲೋಕೇ - ಉತ್ತಮಕೀರ್ತಿಯುಳ್ಳ, ಕೃಷ್ಣೇ - ಕೃಷ್ಣನಲ್ಲಿ, ಅನಪಾಯಿನೀ-ಅಪಾಯವಿಲ್ಲದ ಭಕ್ತಿಃ-ಭಕ್ತಿಯು, ನಚೇತ್-ಇಲ್ಲದೇಹೋದರೆ, ಕೃತೈಃ - ಮಾಡಲ್ಪಟ್ಟ, ವರ್ಣಾ...ಭಿಃ, ವರ್ಣ-ಬ್ರಾಹ್ಮಣಾದಿ ವರ್ಣಗಳು, ಆಶ್ರಮ-ಬ್ರಹ್ಮಚರ್ಯಾದಿಗಳು, ಆಚಾರ-ಸದಾಚಾರ, ದಾನ, ಹೋಮ, ಆದಿಭಿಃ-ಇವು ಮೊದಲಾದವುಗಳಿಂದ, ಕಿಂಸ್ಯಾತ್-ಏನು ಫಲ ॥೫೪॥

ಈಭಾಗವತ ಸಹಸ್ರಾರ್ಥವನ್ನು ಶ್ರೀನಾರಾಯಣಮೂರ್ತಿಯು ನನಗುಪದೇಶಿಸಿದನು. ನಾನಿದನ್ನು ಸಂಗ್ರಹವಾಗಿ ನಿನಗೆ ತಿಳುಹಿದೆನು. ನೀನೀಭಾಗವತವನ್ನು ವಿಸ್ತರಿಸಿ ಪ್ರಕಾಶಗೊಳಿಸು ॥ ೫೧ ॥ ಸರ್ವಾತ್ಮಕನಾದುದರಿಂದಲೇ ಸರ್ವಾಶ್ರಯನೆನಿಸಿರುವ ಭಗವಂತನಾದ ವಾಸುದೇವಮೂರ್ತಿಯಲ್ಲಿ ಜನರಿಗೆ ಯಾವುದರಿಂದ ಭಕ್ತಿಯುಂಟಾಗುವುದೋ, ಅದನ್ನಾಲೋಚಿಸಿ ಭಗವನ್ಮಹಿಮೆಯನ್ನು ಬಣ್ಣಿಸು ॥ ೫೨ ॥

ಮನುಷ್ಯಜನ್ಮವನ್ನು ಪಡೆದವನು ಶ್ರವಣ ಮನನಾದಿಗಳಿಂದ ಭಗವಂತನನ್ನು ಪ್ರೀತಿಗೊಳಿಸದೇಹೋದಲ್ಲಿ,ಅವನು ನಶ್ವರಗಳಾದ ಧರ್ಮಾರ್ಥಕಾಮಗಳನ್ನು ಸಂಪಾದಿಸಿದರೂ ಪ್ರಯೋಜನವಿಲ್ಲ॥೫೩॥ಉತ್ತಮಶ್ಲೋಕನಾದಶ್ರೀಕೃಷ್ಣಮೂರ್ತಿಯಲ್ಲಿ ಯಾವನಿಗೆ ಏಕಾಂತವಾದ ಭಕ್ತಿಯುಂಟಾಗುವುದಿಲ್ಲವೋ, ಅವನಿಗೆ ಬ್ರಾಹ್ಮಣಾದಿ ವರ್ಣಗಳೇಕೆ ?

ವರ್ಣಯತೋಽನುಷ್ಯ ಈಶ್ವರಸ್ಯಾನುಮೋದತಃ। ಶೃಣ್ವತ ಶ್ರದ್ಧಯಾ ನಿತ್ಯಂ ಮಾಯಯಾತ್ಮಾ ನಮುಹ್ಯತಿ ॥ ೫೫ ॥

ಇತಿ ಸಪ್ತಮೋಽಧ್ಯಾಯಃ

ಓಂ ನಮಃ ಪರಮಾತ್ಮನೇ.

ಅಥಾಷ್ಟಮೋಽಧ್ಯಾಯಃ

ರಾಜೋವಾಚ। ಬ್ರಹ್ಮಣಾ ಚೋದಿತೋ ಬ್ರಹ್ಮನ್ ! ಗುಣಾಖ್ಯಾನೇಽಗುಣಸ್ಯಚ ॥ ಯಸ್ಮೈ ಯಸ್ಮೈ ಯಥಾ ಪ್ರಾಹ ನಾರದೋ ದೇವದರ್ಶನಃ॥

ಅನುಷ್ಯ-ಈ, ಈಶ್ವರಸ್ಯ-ಭಗವಂತನ, ಮಾಯಾಂ-ಜಗತ್ಸೃಷ್ಟ್ಯಾದಿಗಳನ್ನು, ವರ್ಣಯತಃ-ವರ್ಣಿಸುವವನ, ಅನುಮೋದತಃ-ಸಮ್ಮತಿಸುವವನ, ಶ್ರದ್ಧಯಾ-ಆದರದಿಂದ, ನಿತ್ಯಂ - ಯಾವಾಗಲೂ, ಶೃಣ್ವತಶ್ಚ-ಕೇಳುವವನ, ಆತ್ಮಾ - ಅಂತಃಕರಣವು, ಮಾಯಯಾ - ಮಾಯಾಗುಣಗಳಾದ ತಮಸ್ಸು ಮೊದಲಾದವುಗಳಿಂದ, ನಮುಹ್ಯತಿ-ಮರುಳಾಗುವುದಿಲ್ಲ ॥ ೫೫ ॥

—ಸಪ್ತಮಾಧ್ಯಾಯಂ ಸಮಾಪ್ತಂ.—

—ಅಷ್ಟಮಾಧ್ಯಾಯಂ—

ಕಂದಂ॥ ಕೃಷ್ಣಸುತ ತನಯನಾ ಶ್ರೀ। ಕೃಷ್ಣಕಥಾಶ್ರವಣ ಕುತುಕಮಂ ಪ್ರಕಟಿಸುತಂ ॥
ಕೃಷ್ಣಮುನಿತನಯನಂ ಭ್ರಾ। ಜಿಷ್ಣುವ ಬೆಸಗೊಂಡನಾ ಪುರಾಣಾರ್ಥಗಳಂ ॥

ರಾಜಾ-ಪರೀಕ್ಷಿತನು, ಉವಾಚ-ಹೇಳಿದನು. ತತ್ವವಿದಾಂ-ತತ್ವವನ್ನು ಬಲ್ಲವರಲ್ಲಿ, ವರ-ಶ್ರೇಷ್ಠನಾದ, ಹೇಬ್ರಹ್ಮನ್-ಎಲೈಶುಕಮುನಿಯೆ ! ಅಗುಣಸ್ಯಚ-ಗುಣಾತೀತನಾಗಿದ್ದರೂ, ಭಗವಂತನ, ಗು

ಬ್ರಹ್ಮಚರ್ಯಾದ್ಯಾಶ್ರಮಗಳೇಕೆ? ಸದಾಚಾರವೇಕೆ? ದಾನಧರ್ಮಗಳೇಕೆ? ಜಪಹೋಮಗಳೇಕೆ? ಎಲ್ಲವೂ ವ್ಯರ್ಥವೇ. ॥ ೪ ॥ ಅಯ್ಯಾ ನಾರದನೆ ! ಯಾವನು ಈ ಭಗವಂತನ ಮಾಯೆಯನ್ನು ಬಣ್ಣಿಸುವನೋ, ಯಾವನು ನಿತ್ಯವೂ ಶ್ರದ್ಧೆಯಿಂದ ಕೇಳುವನೋ, ಯಾವನು ಸಂತೋಷಿಸುವನೋ, ಅಂತವರ ಮನಸ್ಸು ಮಾಯೆಗೊಳಗಾಗುವುದಿಲ್ಲ, ಎಂದು ಬ್ರಹ್ಮನು ನಾರದಮುನಿಗೆ ಹೇಳಿದನೆಂದು ಸೂತಪೌರಾಣಿಕನು ಶೌನಕಾದಿ ಮಹಾಮುನಿಗಳಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆ

—:ಯೊಳ್ ಏಳನೆಯ ಅಧ್ಯಾಯಂ ಮುಗಿದುದು.:—

ಎಂಟನೆಯ ಅಧ್ಯಾಯ.

ಪರೀಕ್ಷಿದ್ರಾಜನ ಪ್ರಶ್ನೆಗಳು.

ಸೂತನು ಶೌನಕಾದಿಗಳಿಗೆ ಹೇಳುವುದೆಂತೆಂದರೆ, ಅನಂತರದಲ್ಲಿ ಪರೀಕ್ಷಿನ್ಮಹೀಪಾಲನು ಶುಕಮುನೀಂದ್ರನನ್ನು ಕುರಿತು:— ಅಯ್ಯಾ ಜ್ಞಾನಿಶಿರೋಮಣಿಯಾದ ಶುಕಮಹರ್ಷಿ

ಏತದ್ವೇದಿತು ಮಿಚ್ಛಾಮಿ ತತ್ತ್ವಂ ತತ್ತ್ವವಿದಾಂ ವರ॥೧॥ಹರೇ ರದ್ಭುತವೀರ್ಯಸ್ಯ ಕಥಾ ಲೋಕ ಸುಮಂಗಲಾಃ । ಕಥಯಸ್ವ ಮಹಾಭಾಗ ! ಯಥಾಹ ಮಖಿಲಾತ್ಮನಿ । ಕೃಷ್ಣೇ ನಿವೇಶ್ಯ ನಿಸ್ಸಂಗಂ ಮನಸ್ತ್ಯಕ್ಷ್ಯೇ ಕಳೇಬರಂ॥೨॥ ಶೃಣ್ವತಶ್ಶ್ರದ್ಧಯಾ ನಿತ್ಯಂ ಗೃಣತಶ್ಚ ಸ್ವಚೇಷ್ಟಿತಂ।ನಾತಿದೀರ್ಘೇಣ ಕಾಲೇನ ಭಗವಾನ್ ವಿಶತೇ ಹೃದಿ ॥೩॥ ಪ್ರವಿಷ್ಟಃ ಕರ್ಣರಂಧ್ರೇಣ ಸ್ವಾನಾಂ ಭಾವಸರೋರುಹಂ । ಧುನೋತಿ ಶಮಲಂ ಕೃಷ್ಣಃ *ಸಲಿ

ಕಾಖ್ಯಾನೇ-ಗುಣಗಳನ್ನು ಬಣ್ಣಿಸುವುದರಲ್ಲಿ, ಬ್ರಹ್ಮಣಾ-ಬ್ರಹ್ಮನಿಂದ, ಚೋದಿತಃ-ಪ್ರೇರಿಸಲ್ಪಟ್ಟ, ದೇವದರ್ಶನಃ-ಆತ್ಮದರ್ಶನವುಳ್ಳ, ನಾರದಃ-ನಾರದಮುನಿಯು, ಯಸ್ಮೈ ಯಸ್ಮೈ ಯಾರಾರಿಗೆ, ಯಥಾ-ಹೇಗೆ, ಪ್ರಾಹ-ಹೇಳಿದನೋ, ಏತತ್-ಈ, ತತ್ತ್ವಂ-ನೆಲೆಯನ್ನು, ವೇದಿತುಂ-ತಿಳಿಯುವುದಕ್ಕೆ, ಇಚ್ಛಾಮಿ-ಬಯಸುತ್ತೇನೆ ॥ ೧ ॥ ಹೇಮಹಾಭಾಗ-ಎಲೈ ಮಹಾತ್ಮನೆ! ಅಹಂ-ನಾನು, ಅಖಿಲಾತ್ಮನಿ-ಸರ್ವಾತ್ಮಕನಾದ, ಕೃಷ್ಣೇ-ಕೃಷ್ಣಮೂರ್ತಿಯಲ್ಲಿ, ನಿಸ್ಸಂಗಂ - ಏಕಾಂತವಾದ, ಮನಃ-ಮನಸ್ಸನ್ನು, ನಿವೇಶ್ಯ-ಇರಿಸಿ, ಯಥಾ-ಹೇಗೆ, ಕಳೇಬರಂ-ಶರೀರವನ್ನು, ತ್ಯಕ್ಷ್ಯೇ-ಬಿಡುವೆನೋ, ತಥಾ-ಹಾಗೆ, ಅದ್ಭುತವೀರ್ಯಸ್ಯ-ಆಶ್ಚರ್ಯಕರವಾದ ಶಕ್ತಿಯುಳ್ಳ, ಹರೇಃ-ಹರಿಯ, ಲೋಕಸುಮಂಗಳಾಃ-ಜಗತ್ಕಲ್ಯಾಣಗಳಾದ, ಕಥಾಃ-ಕಥೆಗಳನ್ನು, ಕಥಯಸ್ವ-ಹೇಳು ॥ ೨ ॥ ಭಗವಾನ್-ಭಗವಂತನು, ನಿತ್ಯಂ-ಯಾವಾಗಲೂ, ಸ್ವಚೇಷ್ಟಿತಂ-ತನ್ನ ಚರಿತ್ರೆಗಳನ್ನು, ಶ್ರದ್ಧಯಾ-ಭಕ್ತಿಯಿಂದ, ಶೃಣ್ವತಃ-ಕೇಳುವವನ, ಹೃದಿ-ಹೃದಯದಲ್ಲಿ, ನಾತಿದೀರ್ಘೇಣ-ಅಲ್ಪವಾದ, ಕಾಲೇನ-ಕಾಲದಿಂದಲೇ, ವಿಶತೇ-ಹೊಗುವನು ॥ ೩ ॥ ಕೃಷ್ಣಃ-ಶ್ರೀಕೃಷ್ಣನು, ಕರ್ಣರಂಧ್ರೇಣ-ಕಿವಿಯಮಾರ್ಗದಿಂದ, ಸ್ವಾನಾಂ-ತನ್ನ ಭಕ್ತರ, ಭಾವಸರೋರುಹಂ, ಭಾವ-

ಯ ! ಇಂತು ಬ್ರಹ್ಮದೇವನು, ಗುಣಾತೀತನಾಗಿದ್ದರೂ ಅನಂತಕಲ್ಯಾಣಪೂರ್ಣನೆನಿಸಿರುವ ಭಗವಂತನ ಗುಣಗಳನ್ನು ಬಣ್ಣಿಸಬೇಕೆಂದು ನಾರದಮುನಿಗೆ ಆಜ್ಞಾಪಿಸಿದ ಬಳಿಕ ಬ್ರಹ್ಮಜ್ಞನಾದ ಆ ದೇವಮುನಿಯು ಯಾರಾರಿಗೆ ಯಾವಯಾವ ತೆರದಿಂದ ಅರುಹಿದನೋ, ಅದನ್ನು ತಿಳಿಯಪೇಳಸುವೆನು ॥ ೧ ॥ ಅಯ್ಯಾ ಮಹಾತ್ಮನೆ ! ನಾನು ಯಾವ ದಿವ್ಯಚರಿತ್ರೆಯನ್ನು ಕೇಳದರೆ ಸರ್ವಾತ್ಮಕನಾದ ಶ್ರೀ ಕೃಷ್ಣಭಗವಂತನಲ್ಲಿ ಅನನ್ಯವಾದ ಮನಸ್ಸನ್ನಿಟ್ಟು ಈ ಕಳೇಬರವನ್ನು ಳಿಯುವೆನೋ,ಆರೀತಿಯಾದಅದ್ಭುತಮಹಿಮೆಯುಳ್ಳ ಭಗವಂತನ,ಜಗತ್ಪವಿತ್ರಗಳಾದ ಚರಿತ್ರೆಗಳನ್ನು ನಿರೂಪಿಸು ॥ ೨ ॥ ಭಗವಂತನಾದ ವಾಸುದೇವಮೂರ್ತಿಯು, ನಿತ್ಯವೂ ಶ್ರದ್ಧೆಯಿಂದ ತನ್ನ ಚರಿತ್ರೆಯನ್ನು ಕೇಳುವವರ ಮನಸ್ಸಿನಲ್ಲಿ ಶೀಘ್ರವಾಗಿ ನೆಲೆಗೊಳ್ಳುವನು ॥ ೩ ॥ ಮತ್ತು ಆತನು ಕರ್ಣಪಥದಿಂದ ತನ್ನ ಭಕ್ತರ ಹೃದಯಕಮಲದಲ್ಲಿ ನೆಲೆ

* ಗಡಿಗೆಯ ನೀರಿನಲ್ಲಿ ಚಿಲ್ಲದ ಗಂಧವನ್ನು ಬೆರಸಿದರೆ ಕೊಳೆಯು ತಳದಲ್ಲಿ ನಿಂತು,ಮೇಲೆ ನೀರು ತಿಳಿಯಾಗಿ ಕಾಣುವುದೇ ಹೊರತು, ಕೊಳೆಯಿಲ್ಲದೆಯೇ ಹೋಗುವುದಿಲ್ಲ. ಗಡಿಗೆಯಲ್ಲಾಡಿದಕೂಡಲೇ ಕೊಳೆಯೇಳುವುದು. ಶರತ್ಕಾಲದಿಂದ ನಿರ್ಮಲವಾದ ಕೆರೆ, ನದಿ. ಮೊದಲಾದವುಗಳ ನೀರಿನಲ್ಲಿ ಕೊಳೆಯಿರುವುದೇಇಲ್ಲ. ಈ ರೀತಿಯಾಗಿ ತಪಸ್ಸು, ದಾನ, ಮೊದಲಾದುವು ಯಾವುವೂ ಪಾಪವನ್ನು ನಿಶ್ಶೇಷವಾಗಿ ಕಳೆಯಲಾರವು. ಭಗವಂತನು ಹೃದಯ ಕಮಲದಲ್ಲಿ ನೆಲೆಗೊಂಡರೆ ಪಾಪಲೇಶವೂ ನಿಲ್ಲಲಾರದು, ಆದುದರಿಂದ ಕರ್ಮಗಳಿಗಿಂತ ಭಕ್ತಿಯೇಶ್ರೇಷ್ಠವೆಂದು ಭಾವವು.

ಲಸ್ಯ ಯಥಾ ಶರತ್ ॥೪॥ ಧೌತಾತ್ಮಾ ಪುರುಷಃ ಕೃಷ್ಣಪಾದ ಮೂಲಂ ನ
ಮುಂಚತಿ । ಮುಕ್ತಸರ್ವಪರಿಕ್ಲೇಶಃ ಪಾಂಥಃ ಸ್ವಶರಣಂ ಯಥಾ॥೫॥ ಯದ
ಧಾತುಮತೋ ಬ್ರಹ್ಮನ್? ದೇಹಾರಂಭೋಽಸ್ಯ ಧಾತುಭಿಃ। ಯದೃಚ್ಛಯಾ
ಹೇತುನಾವಾ ಭವಂತೋ ಜಾನತೇ ಯಥಾ ॥೬॥ ಆಸೀದ್ಯದುದರಾತ್ಪದ್ಮಂ
ಲೋಕಸಂಸ್ಥಾನ ಲಕ್ಷಣಂ । ಯಾವಾನಯಂ ವೈಪುರುಷ ಇಯತ್ತಾವಯ
ವೈಃ ಪೃಥಕ್। ತಾವಾನಸಾವಿತಿ ಪ್ರೋಕ್ತಃ ಸಂಸ್ಥಾವಯವವಾನಿವ ॥೭॥

ಹೃದಯವೆಂಬ, ಸರೋರುಹಂ - ಕಮಲವನ್ನು, ಪ್ರವಿಷ್ಟಃ - ಹೊಕ್ಕು, ಸಲಿಲಸ್ಯ - ನೀರಿನ, ಶಮಲಂ-ಕೊಳೆಯನ್ನು, ಶರದ್ಯಥಾ-ಶರತ್ಕಾಲದಂತೆ,ಶಮಲಂ-ಮನಃಕಲ್ಮಷಗಳನ್ನು, ಧುನೋತಿ-ಕಳೆಯುತ್ತಾನೆ॥೪॥ ಧೌತಾತ್ಮಾ-ಪಾಪಗಳನ್ನು ಕಳೆದುಕೊಂಡ, ಪುರುಷಃ-ಪುರುಷನು, ಮುಕ್ತಾ-ಶಃ, ಮುಕ್ತ-ಬಿಡಲ್ಪಟ್ಟ, ಸರ್ವ-ಎಲ್ಲಾ, ಪರಿಕ್ಲೇಶಃ-ರಾಗದ್ವೇಷಾದಿಗಳುಳ್ಳವನಾಗಿ, ಪಾಂಥಃ-ದಾರಿನಡೆದುಬಂದವನು, ಸ್ವಶರಣಂ ಯಥಾ-ತನ್ನಮನೆಯನ್ನೋಪಾದಿಯಲ್ಲಿ, ಕೃಷ್ಣಪಾದಮೂಲಂ-ಶ್ರೀಕೃಷ್ಣನಪಾದಸನ್ನಿಧಿಯನ್ನು, ನಮುಂಚತಿ-ಬಿಡುವುದಿಲ್ಲ॥ಹೇಬ್ರಹ್ಮನ್-ಎಲೈಬ್ರಾಹ್ಮಣನೆ! ಅಧಾತುಮತಃ-ಪೃಥಿವ್ಯಾದಿಭೂತಗಳ ಸಂಬಂಧವಿಲ್ಲದ, ಅಸ್ಯ-ಈಭಗವಂತನಿಗೆ, ಧಾತುಭಿಃ-ಭೂತಗಳಿಂದ, ದೇಹಾರಂಭಃಯತ್-ಶರೀರವುಂಟಾಗುವುದಾವುದುಂಟೋ ಇದು, ಯದೃಚ್ಛಯಾವಾ-ನಿಷ್ಕಾರಣದಿಂದಲೆ ? ವಾ-ಅಥವಾ, ಹೇತುನಾ - ಕರ್ಮಾದಿಕಾರಣದಿಂದಲೇ ? ಭವಂತಃ-ನೀವು, ಯಥಾ-ಸರಿಯಾಗಿ, ಜಾನತೇ-ತಿಳಿಯುತ್ತೀರಿ॥ ೬ ॥ ಯದುದರಾತ್-ಯಾವನನಾಭಿಯಿಂದ, ಲೋಕ...ಣಂ, ಲೋಕ-ಜಗತ್ತಿನ, ಸಂಸ್ಥಾನ-ರಚನೆಯ, ಲಕ್ಷಣಂ-ಕುರುಹುಳ್ಳ,ಪದ್ಮಂ-ಕಮಲವು, ಆಸೀತ್-ಉಂಟಾಯಿತೋ, ಪೃಥಕ್-ಬೇರೆಯಾದ, ಇಯತ್ತಾವಯವೈಃ - ಪರಿಮಿತಗಳಾದಅವಯವಗಳಿಂದ, ಅಸೌ-ಈಭಗವಂತನು, ಅಯಂಪುರುಷಃ-ಲೌಕಿಕಪುರುಷನು, ಯಾವಾನ್ - ಎಂತವನೋ, ತಾವಾನ್-ಅಂತವನೆಂತಲೂ, ಸಂಸ್ಥಾವಯವವಾನಿವಚ-ಸಂಸ್ಥಾನವು ಅವಯವಗಳುಳ್ಳವನೆಂತಲೂ, ಪ್ರೋಕ್ತಃ-ಹೇಳಲ್ಪ

ಗೊಂಡು, ಶರತ್ಕಾಲವು ನೀರಿನ ಕೊಳೆಯನ್ನು ನಿಶ್ಶೇಷವಾಗಿ ನಾಶಗೊಳಿಸುವಂತೆ ಅವರ ಪಾಪಗಳನ್ನು ಸಂಪೂರ್ಣವಾಗಿ ಕಳೆಯುವನು ॥ ೪ ॥ ಇಂತು ಪಾಪಗಳನ್ನು ಕಳೆದುಕೊಂಡ ಪುರುಷನು, ಕಾಮ, ಕ್ರೋಧ ಮೊದಲಾದ ಸಕಲ ಕ್ಲೇಶಗಳಿಂದಲೂ ಮುಕ್ತನಾಗಿ, ದೂರ ದೇಶದಿಂದ ಬಂದ ದಾರಿಗನು, ಬಿಡದೆ ಮನೆಯಲ್ಲಿಯೇ ನೆಲಸುವಂತೆ, ತೊರೆಯದೆ ಶ್ರೀ ಕೃಷ್ಣನಪಾದಗಳನ್ನು ಆಶ್ರಯಿಸುವನು ॥ ೫ ॥ ಅಯ್ಯಾ ಬ್ರಾಹ್ಮಣೋತ್ತಮನೆ ! ಇಂತಹ ಪವಿತ್ರವಾದ ಭಗವಚ್ಚರಿತ್ರೆಯನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವಿರುವುದು ಆದುದರಿಂದ ಈ ವಿಷಯದಲ್ಲಿ ನನಗುಂಟಾಗಿರುವ ಸಂಶಯಗಳನ್ನು ಪರಿಹರಿಸಬೇಕು. ಪ್ರಕೃತಿ ಜನ್ಯಗಳಾದ ಭೂತಗಳ ಸಂಬಂಧವೇ ಇಲ್ಲದ ಮಾಯಾತೀತನಾದ ಭಗವಂತನಿಗೆ ಭೌತಿಕವಾದ ಶರೀರವುಂಟಾದುದು ಹೇಗೆ ? ಇದಕ್ಕಾವುದಾದರೂ ಕಾರಣವುಂಟೆ? ಇಲ್ಲವೆ? ನೀನು ಇದನ್ನು ಸರಿಯಾಗಿ ಬಲ್ಲವನಾದುದರಿಂದ ನಿನಗರುಹ ಬೇಡುವೆನು ॥ ೬ ॥ ಈ ಜಗತ್ಸ್ವರೂಪವಾದ ಕಮಲವು ಆಭಗವಂತನ ನಾಭಿಯಿಂದ ಜನಿಸಿತೆಂದು ಹೇಳುವುದರಿಂದ, ಲೋಕದ ಜನರಿಗಿರುವಂತೆಯೇ ಆತನಿಗೂ ಪರಿಮಿತಗಳಾದ ಕರ, ಚರಣಾದ್ಯವಯವಗಳಿರುವುವೆಂದು ಹೇಳದಂತಾಯಿತು, ಹೀಗಾದಲ್ಲಿ ಮನುಷ್ಯರಿಗೂ ಭಗವಂತನಿಗೂ ವ್ಯತ್ಯಾಸವೇನು? ॥ ೭ ॥

ಅಜ ಸ್ಸೃಜತಿ ಭೂತಾನಿ ಭೂತಾತ್ಮಾ ಯದನುಗ್ರಹಾತ್। ದದೃಶೇ ಯೇನ
ತದ್ರೂಪಂ ನಾಭಿಪದ್ಮಸಮುದ್ಭವಃ ॥೮॥ ಸಚಾಪಿ ಯತ್ರ ಪುರುಷೋ ವಿಶ್ವ
ಸ್ಥಿತ್ಯುದ್ಭವಾಪ್ಯಯಃ । ಮುಕ್ತ್ವಾತ್ಮಮಾಯಾಂ ಮಾಯೇಶಃ ಶೇತೇ ಸರ್ವ
ಗುಹಾಶಯಃ ॥ ೯ ॥ ಪುರುಷಾऽವಯವೈ ರ್ಲೋಕಾಃ ಸಪಾಲಾಃ ಪೂರ್ವ
ಕಲ್ಪಿತಾಃ।ಲೋಕೈ ರಮುಷ್ಯಾऽವಯವಾ ಸ್ಸಪಾಲೈರಿತಿ ಶುಶ್ರುಮ॥೧೦॥ಯಾ
ವಾನ್ ಕಲ್ಪೋ ವಿಕಲ್ಪೋವಾ ಯಥಾಕಾಲೋऽನುಮೀಯತೇ । ಭೂತಭ

ಟ್ಟನು ॥ ೭ ॥ ಭೂತಾತ್ಮಾ-ಲೋಕನಿಯಾಮಕನಾದ; ಅಥವಾ ಭೌತಿಕ ಶರೀರವುಳ್ಳ, ನಾಭಿ...ವಃ, ನಾಭಿಪದ್ಮ-ನಾಭೀಕಮಲದಿಂದ. ಸಮುದ್ಭವಃ-ಹುಟ್ಟಿದ, ಅಜಃ-ಬ್ರಹ್ಮನು, ಯದನುಗ್ರಹಾತ್-ಯಾರಅನುಗ್ರಹದಿಂದ, ಭೂತಾನಿ-ಭೂತಗಳನ್ನು, ಸೃಜತಿ-ಸೃಷ್ಟಿಸುವನೋ, ಯೇನ-ಯಾರಿಂದ, ತದ್ರೂಪಂ-ಆಭಗವಂತನ ರೂಪವನ್ನು, ದದೃಶೇ-ಕಂಡನೋ ॥೮॥ ವಿಶ್ವ...ಯಃ, ವಿಶ್ವ-ಪ್ರಪಂಚದ, ಸ್ಥಿತಿ-ನೆಲೆ, ಉದ್ಭವ-ಹುಟ್ಟು, ಅಪ್ಯಯ-ನಾಶ ಇವುಗಳುಳ್ಳ, ಮಾಯೇಶಃ-ಮಾಯಾನಿಯಾಮಕನಾದ, ಸಚಪುರುಷೋಪಿ - ಆಪುರುಷನೂ, ಆತ್ಮಮಾಯಾಂ-ತನ್ನಮಾಯೆಯನ್ನು, ಮುಕ್ತ್ವಾ-ಬಿಟ್ಟು, ಸರ್ವಗುಹಾಶಯಃ, ಸರ್ವ-ಎಲ್ಲರ, ಗುಹಾ-ಹೃದಯಗಳಲ್ಲಿ, ಆಶಯಃ ನೆಲಸುವವನಾಗಿ, ಕುತ್ರ-ಎಲ್ಲಿ, ಶೇತೇ-ವಾಸಿಸುವನು ? ॥ ೯ ॥

ಪುರುಷಾವಯವೈಃ-ಭಗವಂತನಅವಯವಗಳಿಂದ, ಸಪಾಲಾಃ-ಪಾಲಕರಿಂದೊಡಗೂಡಿದ, ಲೋಕಾಃ-ಲೋಕಗಳು, ಪೂರ್ವಕಲ್ಪಿತಾಃ-ಪೂರ್ವದಲ್ಲಿ ಕಲ್ಪಿತಗಳಾದುವು, ಈಗ, ಅಮುಷ್ಯ-ಈತನ, ಅವಯವಾಃ-ಅವಯವಗಳು, ಸಪಾಲೈಃ - ರಕ್ಷಕರಿಂದಕೂಡಿದ ಲೋಕಗಳಿಂದ, ಕಲ್ಪಿತಾಃ-ಕಲ್ಪಿತಗಳಾದುವು, ಇತಿ-ಹೀಗೆಂದು, ಶುಶ್ರುಮ ಕೇಳಿದೆವು ॥ ೧೦ ॥ ಕಲ್ಪಃ-ಮಹಾಕಲ್ಪವು, ಯಾವಾನ್-ಯಾವಪ್ರಮಾಣವುಳ್ಳದ್ದು? ವಿಕಲ್ಪಃ-ಅವಾಂತರಕಲ್ಪವು, ಯಾವಾನ್-ಎಷ್ಟುಪ್ರಮಾಣವುಳ್ಳದ್ದು? ಭೂತ...ಬ್ಧಃ,ಭೂತ,ಭವ್ಯ, ಭವತ್, ಎಂಬಶಬ್ದಗಳಿಂದತಿಳಿಸಲ್ಪಡುವ, ಕಾಲಃ-ಕಾಲವು, ಯಥಾ-ಹೇಗೆ, ಅನುಮೀಯತೆ - ತಿಳಿಯಲ್ಪಡುವುದು? ಸತಃ-ಪ್ರಾಣಿಗಳಾದ ಮನುಷ್ಯಪಿತೃದೇವಾದಿಗಳ,? ಆಯುರ್ಮಾನಂಚ - ಆಯುಃ ಪ್ರಮಾಣವು, ಯತ್-

ಸಕಲಲೋಕಪಿತಾಮಹನೂ, ನಾಭೀಕಮಲೋದ್ಭವನೂ, ಆದ ಬ್ರಹ್ಮದೇವನು, ಯಾರ ಅನುಗ್ರಹದಿಂದ ಜಗತ್ತನ್ನು ಸೃಷ್ಟಿಸುವನು ? ಯಾರಪ್ರಸಾದದಿಂದ ಆರೂಪವನ್ನು ಕಂಡನು ? ॥ ೮ ॥ ಈ ಜಗತ್ತಿನ ಜನ್ಮಸ್ಥಿತಿಲಯಗಳಿಗೆ ಕಾರಣನೂ, ಮಾಯಾತೀತನೂ, ಸರ್ವಾಂತರ್ಯಾಮಿಯೂ ಆದ ಆಭಗವಂತನು,ತನ್ನಮಾಯೆಯನ್ನುಳಿದಾಗ ಎಲ್ಲಿರುವನು ?॥ ಪೂರ್ವಕಲ್ಪದಲ್ಲಿ ಭಗವಂತನ ಅವಯವಗಳಿಂದಲೇ ಲೋಕಪಾಲಕರಿಂದೊಡಗೂಡಿದ ಸಕಲಲೋಕಗಳೂ ಸೃಷ್ಟಿಸಲ್ಪಟ್ಟವೆಂತಲೂ, ಈಗ ಲೋಕಪಾಲಕರಿಂದ ಕೂಡಿದ ಲೋಕಗಳಿಂದಲೇ ಭಗವಂತನ ಅವಯವಗಳುಂಟಾದುವೆಂತಲೂ ಕೇಳಿರುವೆವು. ಹೀಗಾದಲ್ಲಿ*ಶ್ರುತಿವಿರೋಧವಾಗುವುದಿಲ್ಲವೆ? ॥ ೧೦ ॥ ಮತ್ತು ಮಹಾಕಲ್ಪ, ಅವಾಂತರಕಲ್ಪಗಳೆಂದರೇನು! ಅವುಗಳ ಪ್ರಮಾಣವೆಷ್ಟು ? ಭೂತ, ಭವಿಷ್ಯತ್, ವರ್ತಮಾನಗಳೆಂಬ ಕಾಲಗಳ ಸ್ವರೂಪವನ್ನು ತಿಳಿಯುವುದೆಂತು ? ಈ ಜಗತ್ತಿನಲ್ಲಿರುವ ದೇವತಿರ್ಯಙ್ಮನುಷ್ಯಾದಿಗಳ ಆಯುಃ

* ಶ್ರು-ಧಾತಾ ಯಥಾಪೂರ್ವ ಮಕಲ್ಪಯತ್, ಬ್ರಹ್ಮನು ಪೂರ್ವಕಲ್ಪದಂತೆಯೇ ಸೃಷ್ಟಿಸಿದನು

ವ್ಯ ಭವಚ್ಛಬ್ದ ಆಯು ರ್ಮಾನಂಚ ಯತ್ಸತಃ ॥೧೧॥ ಕಾಲಸ್ಯಾಽನುಗತಿ
ರ್ಯಾತು ಲಕ್ಷ್ಯತೇಽಣ್ವೀ ಬೃಹತ್ಯಪಿ । ಯಾವತ್ಯಃ ಕರ್ಮಗತಯೋ ಯಾ
ದೃಶೀ ರ್ದ್ವಿಜ ಸತ್ತಮ ! ॥೧೨॥ ಯಸ್ಮಿನ್ ಕರ್ಮಸ*ಮವಾಯೋ ಯ
ಥಾ ಯೇನೋಪಗೃಹ್ಯತೇ । ಗುಣಾನಾಂ ಗುಣಿನಾಂಚೈವ ಪರಿಣಾಮ ಮ
ಭೀಪ್ಸತಾಂ ॥೧೩॥ ಭೂಪಾತಾಲ ಕಕುಬ್ವ್ಯೋಮ ಗ್ರಹ ನಕ್ಷತ್ರ ಭೂ
ಭೃತಾಂ । ಸರಿತ್ಸಮುದ್ರ ದ್ವೀಪಾನಾಂ ಸಂಭವ ಶ್ಚೈತ ದೋಕ
ಸಾಂ ॥೧೪॥ ಪ್ರಮಾಣ ಮಂಡಕೋಶಸ್ಯ ಬಾಹ್ಯಾಭ್ಯಂತರ ಭೇದತಃ।

ಯಾವುದು? ॥ ೧೧ ॥ ಕಾಲಸ್ಯ-ಕಾಲದ, ಅನುಗತಿಃ-ಪ್ರವೃತ್ತಿಯು, ಯಾ-ಯಾವುದು ? ಅಣ್ವೀ-ಸ್ವಲ್ಪವೆಂತಲೂ, ಬೃಹತ್ಯಪಿ-ಅಧಿಕವೆಂತಲೂ, ಕಥಂಲಕ್ಷ್ಯತೇ ?-ಹೇಗೆತಿಳಿಯಲ್ಪಡುವುದು ? ಹೇದ್ವಿಜಸತ್ತಮ-ಎಲೆ ಬ್ರಾಹ್ಮಣೋತ್ತಮನೆ ! ಕರ್ಮಗತಯಃ-ಕರ್ಮದಿಂದ ಹೊಂದಲ್ಪಡುವ ಸ್ಥಾನಗಳು, ಯಾವತ್ಯಃ-ಎಷ್ಟಿರುವುವು ? ಯಾದೃಶೀಃ-ಎಂತವುಗಳು ? ॥ ೧೨ ॥ ಗುಣಾನಾಂ-ಸತ್ವಾದಿಗುಣಗಳ, ಪರಿಣಾಮಂ-ಫಲರೂಪವಾದ ದೇವಾದಿರೂಪವನ್ನು, ಅಭೀಪ್ಸತಾಂ-ಬಯಸುವ, ಗುಣಿನಾಂ-ಪ್ರಾಣಿಗಳಲ್ಲಿ, ಯಸ್ಮಿನ್-ಯಾವ ಗುಣಪರಿಣಾಮದಲ್ಲಿ, ಕರ್ಮಸಮವಾಯಃ - ಪುಣ್ಯಪಾಪಗಳ ಸಮೂಹವು, ಯಥಾ-ಹೇಗೆ, ಯೇನ-ಯಾರಿಂದ, ಉಪಗೃಹ್ಯತೇ-ಹೊಂದಲ್ಪಡುವುದು ॥ ೧೩ ॥ ಭೂ...ತಾಂ, ಭೂಮಿ, ಪಾತಾಲ, ಕಕುಪ್-ದಿಕ್ಕುಗಳು, ವ್ಯೋಮ-ಆಕಾಶ, ಗ್ರಹ-ಸೂರ್ಯಾದಿಗಳು, ನಕ್ಷತ್ರ-ಅಶ್ವಿನ್ಯಾದಿಗಳು, ಭೂ ಭೃತಾಂ-ಬೆಟ್ಟಗಳು, ಇವುಗಳ, ಸರಿ...ನಾಂ, ಸರಿತ್-ನದಿಗಳು, ಸಮುದ್ರಗಳು, ದ್ವೀಪಗಳು, ಇವುಗಳ, ಮತ್ತು ಏತದೋಕಸಾಂ - ಇವುಗಳಲ್ಲಿವಾಸಮಾಡುವ ಪ್ರಾಣಿಗಳ, ಸಂಭವಃ - ಉತ್ಪತ್ತಿಯು ಹೇಗೆ ? ॥ ೧೪ ॥ ಅಂಡಕೋಶಸ್ಯ-ಈ ಬ್ರಹ್ಮಾಂಡದ, ಬಾಹ್ಯಾ..ತಃ, ಬಾಹ್ಯ-ಹೊರಗಣ, ಅಭ್ಯಂತರ-ಒಳಗಣ. ಭೇದತಃ-ಭೇದದಿಂದ, ಪ್ರಮಾಣಂ - ಪರಿಮಾಣವು, ಮಹತಾಂ - ಭಗವದ್ಭಕ್ತರ. ಅನುಚರಿತಂ - ಚರಿತ್ರೆಯು,

ಪ್ರಮಾಣವೆಷ್ಟು ? ॥ ೧೧ ॥ ಎಲೈ ಭೂಸುರಾಗ್ರಣಿಯೆ ! ನಿಮೇಷ ಕ್ಷಣಾದಿರೂಪವಾದ ಅಲ್ಪಕಾಲವಾಗಲಿ, ಸಂವತ್ಸರಾದಿರೂಪವಾದ ದೀರ್ಘಕಾಲವಾಗಲಿ, ನಡೆಯುವುದನ್ನು ತಿಳಿಯುವುದೆಂತು ? ಕರ್ಮಗಳನ್ನು ಮಾಡಿದವರು ಹೊಂದುವ ಫಲಗಳಾವುವು ? ಅವರು ಪಡೆಯತಕ್ಕ ಲೋಕಗಳಾವುವು? ಅವುಗಳ ಸ್ವರೂಪವೇನು ? ॥ ೧೨ ॥ ಸತ್ವರಜಸ್ತಮೋಗುಣಗಳ ಪರಿಣಾಮ ರೂಪವಾದ ದೇವಾದಿಜನ್ಮಗಳನ್ನು ಪಡೆಯಲೆಳಸಿದ ಪ್ರಾಣಿಗಳಲ್ಲಿ ಯಾವ ಕರ್ಮಪರಿಣಾಮದಿಂದ ಪುಣ್ಯಪಾಪ ಸಮುದಾಯವುಂಟಾಗುವುದು ? ಯಾವ ಕರ್ಮವನ್ನು ಯಾವರೀತಿಯಿಂದ ನಡೆಯಿಸಿ ಎಂತಹ ಅಧಿಕಾರಿಯು ದೇವಾದಿ ಭಾವವನ್ನು ಹೊಂದುವನು ? ॥ ೧೩ ॥ ಭೂಮಿಯು, ಪಾತಾಳವು, ದಿಕ್ಕುಗಳು, ಆಕಾಶವು, ಸೂರ್ಯಾದಿ ಗ್ರಹಗಳು, ನಕ್ಷತ್ರಗಳು, ನದಿಗಳು, ಸಮುದ್ರಗಳು, ದ್ವೀಪಗಳು ಇವುಗಳ ಮತ್ತು ಇವುಗಳಲ್ಲಿ ವಾಸಿಸುವ ಪ್ರಾಣಿಗಳ ಉತ್ಪತ್ತಿಯು ಹೇಗೆ ? ॥ ೧೪ ॥ ಈ ಬ್ರಹ್ಮಾಂಡದ ಪರಿಮಾ

* ವೈದ್ಯಶಾಸ್ತ್ರ, ಧನುರ್ವಿದ್ಯೆ, ಸಂಗೀತ ಶಾಸ್ತ್ರ,

ಮಹತಾಂಚಾನು ಚರಿತಂ ವರ್ಣಾಶ್ರಮ ವಿನಿಶ್ಚಯಃ ॥೧೫॥ ಯು
ಗಾನಿ ಯುಗಮಾನಂಚ ಧರ್ಮೋ ಯಶ್ಚ ಯುಗೇ ಯುಗೇ । ಅವತಾ
ರಾನುಚರಿತಂ ಯದಾಶ್ಚರ್ಯ ತಮಂ ಹರೇಃ ॥೧೬॥ ನೃಣಾಂ ಸಾಧಾ
ರಣೋ ಧರ್ಮ ಸ್ಸವಿಶೇಷಶ್ಚ ಯಾದೃಶಃ । ಶ್ರೇಣೀನಾಂ ರಾಜರ್ಷೀ
ಣಾಂಚ ಧರ್ಮಃ ಕೃಚ್ಛ್ರೇಷು ಜೀವಿನಾಂ ॥ ೧೭ ॥ ತತ್ವಾನಾಂ ಪರಿ
ಸಂಖ್ಯಾನಂ ಲಕ್ಷಣಂ ಹೇತುಲಕ್ಷಣಂ । ಪುರುಷಾರಾಧನವಿಧಿ ರ್ಯೋಗ
ಸ್ಯಾಧ್ಯಾತ್ಮಿಕಸ್ಯಚ ॥ ೧೮ ॥ ಯೋಗೇಶ್ವರೈಶ್ವರ್ಯಗತಿ ರ್ಲಿಂಗ

ವರ್ಣಾ...ಯಃ, ವರ್ಣ-ಬ್ರಾಹ್ಮಣಾದಿವರ್ಣಗಳ, ಆಶ್ರಮ-ಬ್ರಹ್ಮಚರ್ಯಾದ್ಯಾಶ್ರಮಗಳ, ವಿನಿಶ್ಚಯಃ-ಸ್ವರೂಪನಿರ್ಣಯವು, ಹೇಗೆ ? ॥ ೧೫ ॥ ಯುಗಾನಿ-ಯುಗಗಳು, ಯುಗಮಾನಂಚ-ಯುಗಪ್ರಮಾಣವು, ಯುಗೇಯುಗೇ-ಪ್ರತಿಯುಗದಲ್ಲಿಯೂ, ಯಶ್ಚ ಧರ್ಮಃ-ಧರ್ಮವಾವುದೋ ಅದು, ಹರೇಃ-ಶ್ರೀಹರಿಯ, ಆಶ್ಚರ್ಯತಮಂ-ಅತ್ಯಂತಾಶ್ಚರ್ಯಕರವಾದ, ಯತ್-ಯಾವ, ಅವತಾರಾನುಚರಿತಂ-ಅವತಾರಗಳ ಚರಿತ್ರೆಯುಂಟೊ ಅದೂ, ಹೇಗೆ ? ॥ ೧೬ ॥ ನೃಣಾಂ-ಮನುಷ್ಯರ, ಸಾಧಾರಣಃ-ಸಾಮಾನ್ಯವಾದ ಮತ್ತು ಸವಿಶೇಷಃ-ವರ್ಣಾಶ್ರಮಗಳಿಗೊಳಪಟ್ಟ, ಧರ್ಮಃ-ಧರ್ಮವು, ಯಾದೃಶಃ-ಎಂಥಾದ್ದು? ಶ್ರೇಣೀನಾಂ-ಆ ಆಕಸಬಿನಿಂದ ಜೀವಿಸುವವರ, ರಾಜರ್ಷೀಣಾಂ-ರಾಜಶ್ರೇಷ್ಠರ, ಕೃಚ್ಛ್ರೇಷು-ಆಪತ್ಕಾಲದಲ್ಲಿ. ಜೀವಿನಾಂ-ಜೀವನಮಾಡುವವರ, ಧರ್ಮಃ-ಧರ್ಮವು, ಯಾದೃಶಃ-ಎಂಥಾದ್ದು ? ॥ ೧೭ ॥ ತತ್ವಾನಾಂ-ಪ್ರಕೃತಿಮೊದಲಾದ ತತ್ವಗಳ, ಪರಿಸಂಖ್ಯಾನಂ-ಎಣಿಕೆಯು, ಲಕ್ಷಣಂ-ಅವುಗಳ ಲಕ್ಷಣವು, ಹೇತುಲಕ್ಷಣಂ-ಅವುಗಳಕಾರಣಗಳ ಲಕ್ಷಣವೂ, ಪುರು...ಧಿಃ, ಪುರುಷ-ಪರಮೇಶ್ವರನ, ಆರಾಧನ-ಪೂಜೆಯ, ವಿಧಿಃ-ಕ್ರಮವು, ಅಧ್ಯಾತ್ಮಿಕಸ್ಯ-ಪ್ರಕೃತಿ ವಿವಿಕ್ತವಾದ ಪರಮಾತ್ಮ ಸ್ವರೂಪವನ್ನು ಸಾಕ್ಷಾತ್ಕರಿಸುವ, ಯೋಗಸ್ಯ-ಜ್ಞಾನಯೋಗದ, ವಿಧಿಃ-ಕ್ರಮವು ॥ ೧೮ ॥ ಯೋಗೇ...ತಿಃ, ಯೋಗೇಶ್ವರ-ಯೋಗಿವರ್ಯರ, ಐಶ್ವರ್ಯ-ಅಣಿಮಾದಿಮಹಿಮೆಗಳ, ಗತಿಃ-ಸ್ವರೂಪವು, ಯೋಗಿನಾಂ-ಯೋಗಿಗಳ. ಲಿಂಗಭಂಗಃ-ಲಿಂಗಶರೀರಭಂಗವು.

ಣವೆಷ್ಟು ? ಇದರ ಒಳಗೂ ಹೊರಗೂ ಇರುವ ಭೇದವೇನು? ಇಲ್ಲಿಯ ಮಹಾತ್ಮರ ಚರಿತ್ರೆಗಳಾವುವು ? ವರ್ಣಾಶ್ರಮಧರ್ಮಗಳ ಸ್ವರೂಪವೇನು ? ॥ ೧೫ ॥

ಯುಗಗಳಾವುವು ? ಯುಗಗಳ ಪ್ರಮಾಣವೆಷ್ಟು ? ಪ್ರತಿಯುಗದಲ್ಲಿಯೂ ಧರ್ಮವಾವುದು? ಅತ್ಯಂತಾಶ್ಚರ್ಯವನ್ನುಂಟುಮಾಡುವಶ್ರೀಹರಿಯ ಅವತಾರಚರಿತ್ರೆಗಳಾವುವು? ॥೧೬ ಮನುಷ್ಯರಿಗೆ ಸಾಮಾನ್ಯಗಳಾದ ಧರ್ಮಗಳಾವುವು ? ವರ್ಣಾಶ್ರಮಗಳ ನಿಯಮಕ್ಕೊಳಪಟ್ಟವಿಶೇಷ ಧರ್ಮಗಳಾವುವು ? ಆ ಆ ವ್ಯವಸಾಯದಿಂದ ಜೀವಿಸುವ ವೈಶ್ಯಾದಿಗಳ ಧರ್ಮವಾವುದು ? ಪ್ರಜಾಪಾಲನೆಯನ್ನು ಮಾಡುವ ರಾಜರಧರ್ಮಗಳಾವುವು ? ಆಪದ್ಧರ್ಮಗಳಾವುವು ? ॥ ೧೭ ॥ ಮೂಲಪ್ರಕೃತಿ ಮೊದಲಾದ ತತ್ವಗಳ ಸಂಖ್ಯೆಯೆಷ್ಟು ? ಅವುಗಳ ಸ್ವರೂಪವಾವುದು? ಅವುಯಾವಯಾವವಸ್ತುಗಳಿಗೆ ಕಾರಣಗಳು? ಆಕಾರಣಲಕ್ಷಣವೇನು? ಭಗವಂತನನ್ನು ಪೂಜಿಸುವ ಬಗೆಯೆಂತು ? ಮಾಯಾತೀತವಾದ ಪರಮಾತ್ಮಸ್ವರೂಪದಸಾಕ್ಷಾತ್ಕಾರವನ್ನುಂಟು ಮಾಡುವ ಅಷ್ಟಾಂಗ ಯೋಗ ಅಥವಾ ಜ್ಞಾನಯೋಗಕ್ರಮವೇನು ? ॥ ಯೋಗೀಶ್ವರರು ಹೊಂದುವ ಅಣಿಮಾದಿಸಿದ್ಧಿಗಳಸ್ವರೂಪವೆಂತು ? ಯೋಗಿಗಳು ಲಿಂಗ

ಭಂಗಸ್ತು ಯೋಗಿನಾಂ। ವೇದೋಪ ವೇದ ಧರ್ಮಾಣಾ ಮಿತಿಹಾಸ ಪುರಾಣಯೋಃ ॥ ೧೯ ॥ ಸಂಪ್ಲವ ಸ್ಸರ್ವಭೂತಾನಾಂ ವಿಕ್ರಮಃ ಪ್ರತಿಸಂಕ್ರಮಃ । *ಇಷ್ಟಾಪೂರ್ತಸ್ಯ ಕಾಮ್ಯಾನಾಂ ತ್ರಿವರ್ಗಸ್ಯಚ ಯೋವಿಧಿಃ ॥ ೨೦ ॥ ಯಶ್ಚಾ † ನು ಶಾಯಿನಾಂ ಸರ್ಗಃ ಪಾಷಂಡಸ್ಯಚ ಸಂಭವಃ। ಆತ್ಮನೋ ಬಂಧಮೋಕ್ಷೌಚ ವ್ಯವಸ್ಥಾನಂ ಸ್ವರೂಪತಃ ॥೨೧॥ ಯಥಾತ್ಮತಂತ್ರೋ ಭಗವಾನ್ ವಿಕ್ರೀಡ ತ್ಯಾತ್ಮಮಾಯಯಾ । ವಿಸೃಜ್ಯವಾ ಯಥಾಮಾಯಾ ಮುದಾಸ್ತೇ ಸಾಕ್ಷಿವ ದ್ವಿಭುಃ ॥ ೨೨ ॥ ಸರ್ವ

ವೇದೋ...ಣಾಂ, ವೇದ-ಋಗಾದಿಗಳ, ಉಪವೇದ-ಆಯುರ್ವೇದಾದಿಗಳ, ಧರ್ಮಾಣಾಂ-ಧರ್ಮಶಾಸ್ತ್ರಗಳ, ಇತಿಹಾಸ-ಭಾರತಾದಿಗಳ, ಪುರಾಣಯೋಃ-ಪುರಾಣಗಳ, ವಿಧಿಃ-ವಿಧಿಯು ॥ ೧೯ ॥

ಸರ್ವಭೂತಾನಾಂ-ಎಲ್ಲಾಪ್ರಾಣಿಗಳ, ಸಂಪ್ಲವಃ-ನಾಶವುಅಥವಾಉತ್ಪತ್ತಿಯು, ವಿಕ್ರಮಃ-ಸ್ಥಿತಿಯು ಪ್ರತಿಸಂಕ್ರಮಃ- ಲಯವು, ಇಷ್ಟಾಪೂರ್ತಸ್ಯ, ಇಷ್ಟ-ವೈದಿಕಕರ್ಮಗಳ, ಪೂರ್ತಸ್ಯ-ಸ್ಮಾರ್ತಕರ್ಮಗಳ, ಕಾಮ್ಯಾನಾಂ-ಕಾಮ್ಯಕರ್ಮಗಳ, ತ್ರಿವರ್ಗಸ್ಯಚ-ಧರ್ಮ, ಅರ್ಥ, ಕಾಮ, ಇವುಗಳ, ವಿಧಿಃ-ವಿಧಾನವು, ಯಃ-ಯಾವುದು ? ॥ ೨೦ ॥ ಅನುಶಾಯಿನಾಂ-ಲೀನೋಪಾಧಿಗಳಾದಜೀವರ, ಸರ್ಗಃ-ಉತ್ಪತ್ತಿಯು, ಯಃ-ಯಾವುದು ? ಪಾಷಂಡಸ್ಯ-ಪಾಷಂಡಧರ್ಮದ, ಸಂಭವಃ-ಉತ್ಪತ್ತಿಯು, ಯಾವುದು ? ಆತ್ಮನಃ-ಜೀವನಿಗೆ, ಬಂಧಮೋಕ್ಷೌಚ-ಬಂಧಮೋಕ್ಷಗಳುಹೇಗೆ ?ಸ್ವರೂಪತಃ-ಸ್ವರೂಪದಿಂದ,ವ್ಯವಸ್ಥಾನಂ-ಸ್ಥಿತಿಯುಹೇಗೆ?॥೨೧॥

ಆತ್ಮತಂತ್ರಃ-ಸ್ವತಂತ್ರನಾದ, ಭಗವಾನ್-ಭಗವಂತನು, ಆತ್ಮಮಾಯಯಾ-ತನ್ನಮಾಯೆಯಿಂದ, ಯಥಾವಿಕ್ರೀಡತಿ-ಹೇಗೆಕ್ರೀಡಿಸುತ್ತಾನೆ ? ವಿಭುಃ-ಆಭಗವಂತನು, ಮಾಯಾಂ-ಪ್ರಕೃತಿಯನ್ನು, ವಿಸೃಜ್ಯ-ಬಿಟ್ಟು, ಸಾಕ್ಷಿವತ್-ನೋಟಕನಂತೆ,ಯಥಾ-ಹೇಗೆ. ಉದಾಸ್ತೇ-ಸುಮ್ಮನಿರುತ್ತಾನೆ ॥೨೨॥ ಭಗವನ್-ಷಡ್ಗುಣೈಶ್ವರ್ಯಯುಕ್ತನಾದ, ಹೇಮಹಾಮುನೇ-ಎಲೈಮಹರ್ಷಿಯೆ ! ಏತತ್ಸರ್ವಂ-ಇದೆಲ್ಲವನ್ನೂ, ಪೃಚ್ಛತೇ-

---

ಶರೀರವನ್ನು ಕಳೆದು ಕೊಳ್ಳುವ ಪರಿಯೆಂತು? ವೇದ,ಉಪವೇದ,ಧರ್ಮಶಾಸ್ತ್ರ ಇತಿಹಾಸ, ಪುರಾಣಗಳಲಕ್ಷಣವೇನು ? ॥ ೧೯ ॥ ಸಕಲ ಪ್ರಾಣಿಗಳ ಉತ್ಪತ್ತಿ, ಸ್ಥಿತಿ, ಲಯಗಳೆಂತು? ಇಷ್ಟ, ಪೂರ್ತ, ಕಾಮ್ಯ, ತ್ರಿವರ್ಗ, ಇವುಗಳ ವಿಧಾನವೆಂತು ? ॥ ೨೦ ॥ ಉಪಾಧಿಲಯವನ್ನು ಪಡೆದಪ್ರಾಣಿಗಳ ಉತ್ಪತ್ತಿಯು ಹೇಗೆ? ಪಾಷಂಡಧರ್ಮವು ಜನಿಸಿದುದೆಂತು? ॥ ಆತ್ಮನಿಗೆ ಬಂಧಮೋಕ್ಷಗಳು ಯಾವವು ? ಆತ್ಮನು ಸ್ವಸ್ವರೂಪದಿಂದ ಇರುವುದೆಂತು?॥ ಸ್ವತಂತ್ರನಾದ ಭಗವಂತನು ತನ್ನ ಮಾಯೆಯಿಂದ ಕ್ರೀಡಿಸುವುದೇಕೆ ? ಆ ಪರಮಾತ್ಮನು ತನ್ನಮಾಯೆಯನ್ನುಳಿದು ಸಾಕ್ಷಿಯಂತೆ ಉದಾಸೀನನಾಗಿರುವುದುಹೇಗೆ ? ॥ ೨೨ ॥

---

* ಶ್ಲೋ-ವಾಪೀಕೂಪ ತಟಾಕಾದಿ ದೇವತಾಯತನಾನಿಚ । ಅನ್ನಪ್ರದಾನ ಮಾರಾಮಃ ಪೂರ್ತಮಿತ್ಯಭಿಧೀಯತೇ॥ ಬಾವಿ, ಕೊಳ, ಕೆರೆ, ದೇವಸ್ಥಾನ, ಅನ್ನಸತ್ರ, ತೋಟ ಈ ಕಾರ್ಯಗಳು ಪೂರ್ವಕರ್ಮವೆನಿಸುವುದು. ಯಜ್ಞ, ಯಾಗ, ಮೊದಲಾದವುಗಳಿಗೆ ಇಷ್ಟವೆಂದುಹೆಸರು.

† ಶಯಿ-ಅನುಭವಿಸಿ ಮಿಕ್ಕ ಕರ್ಮಫಲದೊಡನೆ ಮಲಗಿಕೊಂಡಿರುವ ಜೀವರು. ವಿ.-ಪ್ರಕೃತಿಗೆ ಬದ್ಧರಾಗಿ ಸಂಸಾರಿಗಳಾಗಿರುವ ಜೀವರು.

ಮೇ ತಚ್ಛ ಭಗವನ್! ಪೃಚ್ಛತೇ ಮೇಽನುಪೂರ್ವಶಃ । ತತ್ತ್ವತೋಽರ್ಹ
ಸ್ಯುದಾಹರ್ತುಂ ಪ್ರಪನ್ನಾಯ ಮಹಾಮುನೇ ! ॥ ೨೩ ॥ ಅತ್ರ ಪ್ರ
ಮಾಣಂ ಹಿ ಭವಾನ್ ಪರಮೇಷ್ಠೀ ಯಥಾತ್ಮಭೂಃ । ಪರೇ ಚೇಹಾನು
ತಿಷ್ಠಂತಿ ಪೂರ್ವೇಷಾಂ ಪೂರ್ವಜೈಃ ಕೃತಂ ॥ ೨೪ ॥ ನಮೇಽಸ
ವಃ ಪರಾಯಂತಿ ಬ್ರಹ್ಮನ್! ಅನಶನಾದಮೀ । ಪಿಬತೋಽಚ್ಯುತಪೀಯೂಷ
ಮನ್ಯತ್ರ ಕುಪಿತಾದ್ದ್ವಿಜಾತ್ ॥ ೨೫ ॥ ಸ ಉಪಾಮಂತ್ರಿತೋ

ಬೆಸಗೊಳ್ಳುವ, ಪ್ರಪನ್ನಾಯ-ಶರಣಾಗತನಾದ, ಮೇ-ನನಗೆ, ಅನುಪೂರ್ವಶಃ-ಕ್ರಮವಾಗಿ, ತತ್ತ್ವತಃ-ತತ್ತ್ವವನ್ನು, ಉದಾಹರ್ತುಂ-ಹೇಳುವುದಕ್ಕೆ. ಅರ್ಹಸಿ-ಯೋಗ್ಯನಾಗುತ್ತಿ ॥ ೨೩ ॥ ಅತ್ರ-ಈವಿಷಯದಲ್ಲಿ ಆತ್ಮಭೂಃ-ನಾರಾಯಣನಿಂದಜನಿಸಿದ, ಪರಮೇಷ್ಠೀಯಥಾ-ಬ್ರಹ್ಮದೇವನಂತೆ, ಭವಾನ್-ನೀನು, ಪ್ರಮಾಣಂ-ಎಲ್ಲವನ್ನೂ ಬಲ್ಲವನಾಗಿರುವೆ, ಪೂರ್ವೇಷಾಂ-ಪೂರ್ವಿಕರಿಗೆ,ಪೂರ್ವಜೈಃ-ಪೂರ್ವಿಕರಾದ,ಮಹಾತ್ಮರಿಂದ ಕೃತಂ-ಮಾಲ್ಪಟ್ಟದನ್ನು, ಪರೇ-ಈಚಿನವರು,ಅನುತಿಷ್ಠಂತಿ-ಅನುಸರಿಸುತ್ತಾರೆ ॥ ೨೪ ॥ ಹೇಬ್ರಹ್ಮನ್-ಎಲೈಬ್ರಾಹ್ಮಣನೆ ! ಅಚ್ಯುತಪೀಯೂಷಂ-ಕೃಷ್ಣಕಥೆಯೆಂಬ ಅಮೃತವನ್ನು, ಪಿಬತಃ-ಪಾನಮಾಡುವ, ಮೇ-ನನ್ನ. ।ಅಮೀ ಅಸವಃ-ಈಪ್ರಾಣಗಳು, ಅನಶನಾತ್-ಉಪವಾಸದಿಂದಲೂ, ಕುಪಿತಾತ್ - ಕೋಪಗೊಂಡ, ದ್ವಿಜಾದಪಿ-ಬ್ರಾಹ್ಮಣನಿಂದಲೂ ಕೂಡ, ಅನ್ಯತ್ರ-ಬೇರೇಕಡೆಯಲ್ಲಿ, ನಪರಾಯಂತಿ-ತೆರಳುವುದಿಲ್ಲ॥ ಸತ್ಪತೇಃ - ಸತ್ಪುರುಷರಿಗೆ ನಾಯಕನಾದ ಭಗವಂತನ, ಕಥಾಯಾಂ-ಕಥೆಯಲ್ಲಿ, ವಿಷ್ಣುರಾತೇನ-ವಿಷ್ಣುವಿನಿಂದ ರಕ್ಷಿಸಲ್ಪಟ್ಟ, ರಾಜ್ಞಾ-ಪರೀಕ್ಷಿತನಿಂದ, ಸಂಸದಿ-ಸಭೆಯಲ್ಲಿ,ಇತಿ-ಈ ಪ್ರಕಾರವಾಗಿ, ಉಪಾಮಂತ್ರಿತಃ-ಬೆಸಗೊಳಲ್ಪಟ್ಟ, ಬ್ರಹ್ಮರಾತಃ-ಬ್ರಹ್ಮಜ್ಞಾನವುಳ್ಳಶುಕಮುನಿಯು, ಭೃಶಂ-ಬಹಳವಾಗಿ। ಪ್ರೀತಃ-ಸಂತೋಷ

ಅಯ್ಯಾ ಷಡ್ಗುಣೈಶ್ವರ್ಯಸಂಪನ್ನನಾದ ಶುಕಾಚಾರ್ಯನೆ ! ಈ ವಿಷಯಗಳನ್ನು ತಿಳಿಯಲೆಳಸುವೆನಾದುದರಿಂದ ಶರಣಾಗತನಾಗಿ ಬೇಡುತ್ತಿರುವ ನನಗೆ ಕ್ರಮವಾಗಿ ನಿಜಸ್ಥಿತಿಯನ್ನು ತಿಳುಹಬೇಕು ॥೨೩॥ ಇಂತಹವಿಷಯಗಳಲ್ಲಿ ನೀನು, ಶ್ರೀನಾರಾಯಣಮೂರ್ತಿಯ ನಾಭೀಕಮಲದಿಂದ ಜನಿಸಿದ ಚತುರ್ಮುಖನಂತೆ ಸರ್ವವನ್ನೂ ಬಲ್ಲವನಾಗಿರುವೆ. ಅಲ್ಲದೆ ಬ್ರಹ್ಮ, ನಾರದ, ವ್ಯಾಸರ ಪರಂಪರೆಯಿಂದ ಕೇಳಿರುವೆಯಾದುದರಿಂದ ಚೆನ್ನಾಗಿ ಸಂಪ್ರದಾಯವನ್ನು ತಿಳಿದಿರುವೆ; ಲೋಕದಲ್ಲಿ ಪೂರ್ವಿಕರಾದ ಹಿರಿಯರು ನಡೆಯಿಸಿದಕ್ರಮವನ್ನು ಕಿರಿಯವರು ಅನುಸರಿಸುವರು. ಆದುದರಿಂದ ಇದೆಲ್ಲವನ್ನೂ ನೀನೇ ಕ್ರಮವಾಗಿ ಅರುಹಬೇಕು ॥೨೪॥ಆದರೆ ,,ಹಸಿವುಬಾಯಾರಿಕೆಗಳಿಂದ ಪೀಡಿತನಾದ ನಿನಗೆ ನಾನು ತಿಳುಹುವುದು ಅರಣ್ಯರೋದನಕ್ಕೆ ಸಮವೆನಿಸುವುದು " ಎಂಬೆಯೇನೋ, ಶ್ರೀಕೃಷ್ಣಚರಿತ್ರೆಯೆಂಬ ಅಮೃತರಸವನ್ನುಪಾನಮಾಡುತ್ತಿರುವ ನನ್ನಪ್ರಾಣಗಳು, ಉಪವಾಸದಿಂದಾಗಲಿ, ಬ್ರಾಹ್ಮಣಶಾಪದಿಂದಾಗಲಿ ಹೆದರಿ ಕಳವಳಿಸುವುದಿಲ್ಲ. ಆದುದರಿಂದ ಎಲೈ ಮಹಾತ್ಮನೆ! ನನ್ನ ಮನಸ್ಸಂಶಯಗಳು ತೊಲಗುವಂತೆ ಸಂಗತಿಯನ್ನು ತಿಳುಹಿ ನನ್ನನ್ನು ಕಾಪಾಡು ॥೨೫॥ ಎಂದು ಭಗವಂತನಿಂದಲೇ ರಕ್ಷಿತನಾಗಿ ಆತನ ಅನುಗ್ರಹಕ್ಕೆ ಪಾತ್ರನಾಗಿರುವ ಪರೀಕ್ಷಿನ್ಮಹೀವಲ್ಲ

ರಾಜ್ಞಾ ಕಥಾಯಾಮಿತಿ ಸತ್ಪತೇಃ । ಬ್ರಹ್ಮರಾತೋ ಭೃಶಂ ಪ್ರೀತೋ
ವಿಷ್ಣುರಾತೇನ ಸಂಸದಿ ॥ ೨೬ ॥ ಪ್ರಾಹ ಭಾಗವತಂ ನಾಮ ಪುರಾಣಂ
ಬ್ರಹ್ಮಸಮ್ಮಿತಂ । ಬ್ರಹ್ಮಣೇ ಭಗವತ್ಪ್ರೋಕ್ತಂ ಬ್ರಹ್ಮಕಲ್ಪ ಉಪಾಗ
ತೇ ॥೨೭॥ ಯದ್ಯತ್ಪರೀಕ್ಷಿದೃಷಭಃ ಪಾಂಡೂನಾಮನುಪೃಚ್ಛತಿ । ಆ
ನುಪೂರ್ವ್ಯೇಣ ತತ್ಸರ್ವ ಮಾಖ್ಯಾತು ಮುಪಚಕ್ರಮೇ ॥ ೨೮ ॥

ಇತ್ಯಷ್ಟಮೋಽಧ್ಯಾಯಃ.

ಗೊಂಡು ॥ ೨೬ ॥ ಬ್ರಹ್ಮಕಲ್ಪೇ-ಸೃಷ್ಟಿಪ್ರಾರಂಭವು. ಉಪಾಗತೇ-ಪ್ರಾಪ್ತವಾಗಲು, ಬ್ರಹ್ಮಣೇ-ಬ್ರಹ್ಮ ದೇವರಿಗಾಗಿ, ಭಗವತ್ಪ್ರೋಕ್ತಂ-ಭಗವಂತನಿಂದ ಹೇಳಲ್ಪಟ್ಟ, ಬ್ರಹ್ಮಸಮ್ಮಿತಂ-ವೇದಕ್ಕೆ ಸಮಾನವಾದ, ಭಾಗವತಂನಾಮ-ಭಾಗವತವೆಂದು ಪ್ರಸಿದ್ಧವಾದ, ಪುರಾಣಂ-ಪುರಾಣವನ್ನು, ಪ್ರಾಹ-ಹೇಳುತ್ತಾನೆ ॥ ೨೭ ॥ ಪಾಂಡೂನಾಂ-ಪಾಂಡುರಾಜನವಂಶದಲ್ಲಿ, ಋಷಭಃ-ಶ್ರೇಷ್ಠನಾದ, ಪರೀಕ್ಷಿತ್-ಪರೀಕ್ಷಿದ್ರಾಜನು, ಯದ್ಯತ್-ಯಾವಯಾವುದನ್ನು, ಅನುಪೃಚ್ಛತಿ - ಬೆಸಗೊಳ್ಳುವನೋ, ಆನುಪೂರ್ವ್ಯೇಣ-ಪ್ರಸ್ತಾವಕ್ರಮವಾಗಿ, ತತ್ಸರ್ವಂ-ಅದೆಲ್ಲವನ್ನು, ಆಖ್ಯಾತುಂ-ಹೇಳುವುದಕ್ಕೆ, ಉಪಚಕ್ರಮೇ-ಪ್ರಾರಂಭಿಸಿದನು ॥ ೨೮ ॥

ಅಷ್ಟಮಾಧ್ಯಾಯಂ ಸಮಾಪ್ತಂ. 21

ಭನು, ಸಾಧುರಕ್ಷಕನಾದ ಭಗವಂತನ ಚರಿತ್ರೆಯನ್ನರುಹಬೇಕೆಂದು ಬೇಡಿಕೊಳ್ಳಲು, ಬ್ರಹ್ಮಜ್ಞಶಿರೋಮಣಿಯಾದ ಶುಕಾಚಾರ್ಯನು,ಆನುಡಿಯನ್ನು ಕೇಳಿ ಅತ್ಯಂತಸಂತುಷ್ಟನಾಗಿ, ಸೃಷ್ಟ್ಯಾದಿಯಲ್ಲಿ ಶ್ರೀಮನ್ನಾರಾಯಣಮೂರ್ತಿಯು, ಚತುರ್ಮುಖಬ್ರಹ್ಮನಿಗುಪದೇಶಿಸಿದ, ವೇದಕ್ಕೆ ಸಮಾನವೆನಿಸಿ ಸುಪ್ರಸಿದ್ಧವಾದ ಭಾಗವತಪುರಾಣವನ್ನು ವಿವರಿಸಿದನು ॥೨೭॥ ಆಸಭೆಯಲ್ಲಿ, ಪಾಂಡುವಂಶವರ್ಧನನಾದ ಪರೀಕ್ಷಿತನು ಯಾವಯಾವಸಂಗತಿಗಳನ್ನು ಬೆಸಗೊಂಡನೋ, ಅವುಗಳೆಲ್ಲಕ್ಕೂ ಶುಕಮುನಿಯು ಪ್ರಸ್ತಾವಕ್ರಮದಿಂದ ಚರಿತ್ರರೂಪವಾಗಿ ಉತ್ತರವನ್ನು ಹೇಳಲಾರಂಭಿಸಿದನೆಂದು ಸೂತನು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ ಶ್ರೀಭಾಗವತ ಚಕೋರಚಂದ್ರಿಕೆಯೊಳ್

—: ಎಂಟನೆಯ ಅಧ್ಯಾಯಂ ಮುಗಿದುದು. :—

ಓಂ ನಮಃಪರಮಾತ್ಮನೇ.

ಅಥ ನವಮೋಽಧ್ಯಾಯಃ

ಆತ್ಮಮಾಯಾ ಮೃತೇ ರಾಜನ್ ! ಪರಸ್ಯಾಽನುಭವಾತ್ಮನಃ । ನಘಟೇತಾಽರ್ಥಸಂಬಂಧ ಸ್ಸ್ವಪ್ನದ್ರಷ್ಟುರಿವಾಂಽಜಸಾ ॥ ೧ ॥ ಬಹುರೂಪ ಇವಾಭಾತಿ ಮಾಯಯಾ ಬಹುರೂಪಯಾ । ರಮಮಾಣೋ ಗುಣೇಷ್ವಸ್ಯಾ ಮಮಾಹ ಮಿತಿ ಮನ್ಯತೇ ॥ ೨ ॥ ಯರ್ಹಿ ವಾವ ಮಹಿಮ್ನಿಸ್ವೇ ಪರಸ್ಮಿನ್ ಕಾಲ ಮಾಯಯೋಃ । ರಮೇತ ಗತ ಸಮ್ಮೋಹ ಸ್ತ್ಯ

ನವಮಾಧ್ಯಾಯಂ

ಕಂ॥ ಉತ್ತರೆಯ ಸುತನ ನುಡಿಗಳಿ। ಗುತ್ತರಗೊಡಲೆಳಸಿ ಮುನ್ನು ಹರಿ ಬೊಮ್ಮಗಣಂ॥
ಬಿತ್ತರಿಸಿದ ಭಾಗವತವ । ನುತ್ತಮಮತಿ ಶುಕಮುನೀಂದ್ರ ನೊರೆದಪ ನೀಗಳ್ ॥

ಹೇರಾಜನ್-ಎಲೈರಾಜನೆ : ಪರಸ್ಯ-ದೇಹಾದಿಗಳಿಗಿಂತಲೂ ವಿಲಕ್ಷಣನಾದುದರಿಂದಲೇ, ಅನುಭವಾತ್ಮನಃ - ಅನುಭವಸ್ವರೂಪನಾದ ಪರಮಾತ್ಮನಿಗೆ, ಆತ್ಮಮಾಯಾಮೃತೇ - ತನ್ನ ಮಾಯೆಯನ್ನುಳಿದು, ಸ್ವಪ್ನದ್ರಷ್ಟುರಿವ - ಕನಸನ್ನು ಕಾಣುವವನೋಪಾದಿಯಲ್ಲಿ, ಅಂಜಸಾ - ನಿಜವಾಗಿ, ಅರ್ಥಸಂಬಂಧಃ- ದೇಹಾದಿಗಳೊಡನೆ ಸಂಬಂಧವು, ನಘಟೇತ-ಉಂಟಾಗಲಾರದು ॥ ೧ ॥ ಬಹುರೂಪಯಾ - ಹಲವುಬಗೆಯಾದ ಪರಿಣಾಮವುಳ್ಳ, ಮಾಯಯಾ - ಮಾಯೆಯಿಂದ, ಬಹುರೂಪಇವ - ಹಲವುರೂಪಗಳುಳ್ಳವನಂತೆ, ಆಭಾತಿ-ಕಾಣುವನು, ಅಸ್ಯಾಃ-ಈಮಾಯೆಯ, ಗುಣೇಷು-ಸತ್ವಾದಿಗುಣಗಳಲ್ಲಿ,ರಮಮಾಣಃ-ಕ್ರೀಡಿಸುತ್ತಾ, ಮಮ-ನನ್ನನ್ನು, ಅಹಂ-ನಾನು, ಇತಿ-ಎಂಬು, ಮನ್ಯತೇ-ತಿಳಿಯುತ್ತಾನೆ ॥ ೨ ॥ ಯರ್ಹಿ - ಯಾ

ಒಂಬತ್ತನೆಯ ಅಧ್ಯಾಯ:

ಶ್ರೀಹರಿಯು ಬ್ರಹ್ಮನಿಗುಪದೇಶಿಸಿದ ಭಾಗವತವು

ಅನಂತರದಲ್ಲಿ ಶುಕಾಚಾರ್ಯನು ಪರೀಕ್ಷಿದ್ರಾಜನನ್ನು ಕುರಿತು ; ಅಯ್ಯಾ ರಾಜೇಂದ್ರನೆ ! ನಿದ್ರಿಸುವ ಪುರುಷನಿಗೆ ಕನಸಿನಲ್ಲಿ ಕಂಡ ಶರೀರಾದಿಗಳೊಡನೆ ಎಂತು ಸಂಬಂಧವಿಲ್ಲವೋ, ಅಂತೆಯೇ ದೇಹವೊದಲಾದ ಜಡಪದಾರ್ಥಗಳಿಗಿಂತ ವಿಲಕ್ಷಣನಾಗಿ ಅನುಭವಸ್ವರೂಪನಾಗಿರುವ ಆತ್ಮನು ತನ್ನ ಮಾಯೆಗೊಳಪಟ್ಟ ಹೊರತು ಎಂದಿಗೂ ಶರೀರಾದಿಗಳನ್ನು ಪಡೆಯುವುದಿಲ್ಲ ॥ ೧ ॥ ಆದುದರಿಂದ ಆತ್ಮನು ಹಲವು ವಿಕಾರಗಳನ್ನು ಹೊಂದುವ ಮಾಯೆಗೊಳಗಾಗಿ, ಬಾಲ್ಯ, ಯೌವನ ಮೊದಲಾದ ಅವಸ್ಥೆಗಳನ್ನು ಹೊಂದಿ ಹಲವು ಪರಿಯಾಗಿ ಕಾಣುವುದೂ ಅಲ್ಲದೆ, ಆ ಮಾಯಾಗುಣಗಳಾದ ಸತ್ವಾದಿಗಳಿಂದುಂಟಾಗುವ ದೇಹಾದಿಗಳಲ್ಲಿ "ನಾನು" "ನನ್ನದು" ಎಂಬ ಅಹಂಕಾರಮಮಕಾರಗಳನ್ನೂ ಸಹ ಪಡೆಯುವನು ॥ ೨ ॥ ಆ ಪರಮಾತ್ಮನು ಪ್ರಕೃತಿ ಪುರುಷರಿ

ಕ್ತ್ವೋದಾಸ್ತೇ ತದೋಭಯಂ ॥ ೩ ॥ ಆತ್ಮತತ್ತ್ವ ವಿಶುದ್ಧ್ಯರ್ಥಂ
ಯದಾಹ ಭಗವಾ ನೃತಂ। ಬ್ರಹ್ಮಣೋ ದರ್ಶಯನ್ ರೂಪ ಮವ್ಯಳೀಕ
ವ್ರತಾದೃತಃ ‡ ॥ ೪ ॥ ಸ ಆದಿದೇವೋ ಜಗತಾಂ ಪರೋ ಗುರು ಸ್ಸ್ವಧಿ
ಷ್ಣ್ಯ ಮಾಸ್ಥಾಯ ಸಿಸೃಕ್ಷಯೈಕ್ಷತ। ತಾಂ ನಾಧ್ಯ ಗಚ್ಛ ದ್ದೃಶ ಮತ್ರ

ವಾಗ, ಕಾಲಮಾಯಯೋಃ-ಪ್ರಕೃತಿ ಪುರುಷರಿಗಿಂತ, ಪರಸ್ಮಿನ್ - ಅತೀತವಾದ, ಸ್ವೇ - ತನ್ನ, ಮಹಿ ಮ್ನ್ಯೇವ-ಸ್ವರೂಪದಲ್ಲಿಯೇ, ರಮೇತ - ಕ್ರೀಡಿಸುವನೋ, ತದಾ-ಆಗ, ಗತಸಂಮೋಹಃ-ಮೋಹವನ್ನು ಕಳೆದುಕೊಂಡು, ಉಭಯಂ-ಅಹಂಕಾರ ಮಮಕಾರಗಳೆರಡನ್ನೂ, ತ್ಯಕ್ತ್ವಾ-ಬಿಟ್ಟು, ಉದಾಸ್ತೇ-ಉದಾ ಸೀನನಾಗಿರುತ್ತಾನೆ ॥೩॥ ಅವ್ಯ...ತಃ, ಅವ್ಯಳೀಕ-ನಿಷ್ಕಪಟವಾದ, ವ್ರತ-ನಿಯಮದಿಂದ, ಆದೃತಃ-ಸೇವಿಸಲ್ಪಟ್ಟವನಾಗಿ, ಆತ್ಮ...ರ್ಥಂ, ಆತ್ಮ-ಜೀವನ, ತತ್ತ್ವವಿಶುದ್ಧ್ಯರ್ಥಂ - ತತ್ತ್ವಜ್ಞಾನಕ್ಕಾಗಿ, ಯ ದಾಹ-ಯಾವುದನ್ನು ಹೇಳಿದನೋ, ಋತಂ-ಸತ್ಯವಾದ,ರೂಪಂ-ಯಾವನಿಜಸ್ವರೂಪವನ್ನು,ಬ್ರಹ್ಮಣಃ-ಬ್ರಹ್ಮ ನಿಗೆ, ಅದರ್ಶಯತ್-ತೋರಿದನೋ ॥ ೪ ॥ ಜಗತಾಂ-ಜಗತ್ತುಗಳಿಗೆ, ಪರಃ-ಶ್ರೇಷ್ಠನಾದ, ಗುರುಃ-ಭಕ್ತಿರಹಸ್ಯವನ್ನುಪದೇಶಿಸಿದ, ಸಃ-ಆ, ಆದಿದೇವಃ-ಚತುರ್ಮುಖಬ್ರಹ್ಮನು, ಸ್ವಧಿಷ್ಣ್ಯಂ-ತನ್ನಸ್ಥಾನ ವಾದ ನಾಭೀಕಮಲದಲ್ಲಿ, ಆಸ್ಥಾಯ-ಕುಳಿತುಕೊಂಡು, ಸಿಸೃಕ್ಷಯಾ - ಸೃಷ್ಟಿಸಬೇಕೆಂದು, ಐಕ್ಷತ-ಆಲೋಚಿಸಿದನು, ಯಯಾ-ಯಾವುದರಿಂದ, ಪ್ರಪಂಚ...ಧಿಃ, ಪ್ರಪಂಚ - ಜಗತ್ತಿನ, ನಿರ್ಮಾಣವಿಧಿಃ-ಸೃಷ್ಟಿಕ್ರಮವು, ಭವೇತ್-ಆದೀತೋ, ಅತ್ರ-ಈಸೃಷ್ಟಿಕಾಲದಲ್ಲಿ, ಸಮ್ಮತಾಂ-ಸರಿಯಾದ, ತಾಂ ದೃಶಂ-

ಗಿಂತ ವಿವಿಕ್ತವಾದ ಸ್ವಸ್ವರೂಪದಲ್ಲಿ ಯಾವಾಗ ರಮಿಸುವನೋ, ಆಗ ಮೋಹರಹಿತ ನಾಗಿ ಅಹಂಕಾರಮಮಕಾರಗಳನ್ನುಳಿದು ಅಖಂಡಸ್ವರೂಪನಾಗುವನು ॥ ೩ ॥

ಅಯ್ಯಾ ರಾಜನೆ! ಭಗವತ್ಸ್ವರೂಪವಿಂತಿರುವಕಾರಣ, ನಿಷ್ಕಪಟವಾದ ತಪಸ್ಸು, ವ್ರತ, ಮೊದಲಾದುವುಗಳಿಂದ ಸೇವಿತನಾದ ಆ ಭಗವಂತನು ಚತುರ್ಮುಖಬ್ರಹ್ಮನನ್ನು ಕುರಿತು, ಜೀವರಿಗೆ ತತ್ವಜ್ಞಾನ ವುಂಟಾಗುವುದಕ್ಕಾಗಿ ಯಾವುದನ್ನು ಹೇಳಿದನೋ, ಯಾವ ನಿಜಸ್ವರೂಪವನ್ನು ತೋರಿದನೋ, ಅದನ್ನು ಹೇಳುವೆನು ಕೇಳು ॥೪॥ ಸಕಲ ಲೋಕಗಳಿಗೂ ಪರಮಗುರುವಾಗಿಯೂ, ದೇವರಲ್ಲಿ ಆದಿದೇವನಾಗಿಯೂ, ಇರುವ ಕಮ ಲಾಸನನು, ತನಗೆ ನೆಲೆಮನೆಯಾದ ಭಗವಂತನ ನಾಭೀಕಮಲದಲ್ಲಿ ಕುಳಿತುಕೊಂಡು, ಜಗತ್ತನ್ನು ಸೃಷ್ಟಿಸಬೇಕೆಂದಾಲೋಚಿಸಿದನು. ಎಂತು ಜಗತ್ತನ್ನು ಸೃಷ್ಟಿಸಬೇಕೋ, ಆ ಸೃಷ್ಟಿಗೆ ಎಂತಹ ಪ್ರಜ್ಞಾವಿಶೇಷವಿರಬೇಕೋ, ಅದೊಂದೂ ಆತನಿಗೆ ಹೊಳೆಯ

‡ ೧ ಭೂತ ಸಂಬಂಧವಿಲ್ಲದ ಜೀವನಿಗೆ, ಭೌತಿಕಶರೀರಪ್ರಾಪ್ತಿಯೆಂತು ? ೨ ಜೀವನಂತೆಯೇ ಈಶ್ವರನಿಗೂ, ದೇಹಸಂಬಂಧವಿರುವುದರಿಂದ ಆತನ ಧ್ಯಾನದಿಂದ ಮೋಕ್ಷವೆಂತು ? ಎಂಬ ಪ್ರಶ್ನೆಗಳಿಗೆ 'ಜೀವನಿಗೆ' ಅವಿದ್ಯೆಯಿಂದ ಮಿಥ್ಯಾರೂಪಗಳಾದ ದೇಹಾದಿಗಳ ಸಂಬಂಧವುಂಟಾಗುವುದು. ಈಶ್ವರನಿಗೆ ಯೋಗಮಾಯೆಯಿಂದ ಲೀಲಾವಿಗ್ರಹಪ್ರಾಪ್ತಿಯಾಗುವುದು. ಆದುದರಿಂದ ಆತನನ್ನು ಭಜಿಸಿದವರಿಗೆ, ಮೋಕ್ಷವುಂಟು. ಜೀವೇಶ್ವರರಿಗಿದೇ ಭೇದವು ಎಂದುತ್ತರವು.

೧ ಯದಧಾತುಮತ. ಅ. ೮, ಶ್ಲೋ. ೬. 2 ಆಸೀದ್ಯದುದರಾತ್ಪದ್ಮಂ. ಅ. ೮, ಶ್ಲೋ. ೭.

ಸಮ್ಮತಾಂ ಪ್ರಪಂಚ ನಿರ್ಮಾಣವಿಧಿ ರ್ಯಯಾ ಭವೇತ್ ॥ ೫ ॥ ಸ ಚಿಂತಯನ್ ದ್ವ್ಯಕ್ಷರ ಮೇಕದಾಽಂಭಸ್ಯುಪಾಶೃಣೋದ್ದ್ವಿರ್ಗದಿತಂ ವಚೋ ವಿಭುಃ । ಸ್ಪರ್ಶೇಷು ಯತ್ ಷೋಡಶ ಮೇಕವಿಂಶಂ ನಿಷ್ಕಿಂಚನಾನಾಂ ನೃಪ! ಯದ್ಧನಂ ವಿದುಃ ॥೬॥ ನಿಶಮ್ಯ ತದ್ವಕ್ತೃದಿದೃಕ್ಷಯಾ ದಿಶೋ ವಿಲೋಕ್ಯ ತತ್ರಾಽನ್ಯ ದಪಶ್ಯಮಾನಃ। ಸ್ವಧಿಷ್ಣ್ಯ ಮಾಸ್ಥಾಯ ವಿಮೃಶ್ಯ ತದ್ಧಿತಂ ತಪಸ್ಯುಪಾದಿಷ್ಟ ಇವಾದಧೇ ಮನಃ ॥ ೭ ॥ ದಿವ್ಯಂ ಸಹಸ್ರಾಬ್ದ ಮಮೋಘ ದರ್ಶನೋ ಜಿತಾಽನಿಲಾತ್ಮಾ ವಿಜಿತೋಭಯೇಂ

ಜ್ಞಾನವನ್ನು, ನಾಭ್ಯಗಚ್ಛತ್-ಹೊಂದಲಿಲ್ಲ ॥ ೫ ॥ ಹೇನೃಪ-ಎಲೈರಾಜನೆ! ಸವಿಭುಃ-ಆಬ್ರಹ್ಮನು, ಚಿಂತಯನ್-ಆಲೋಚಿಸುತ್ತಾ, ಏಕದಾ-ಒಮ್ಮೆ, ಸ್ಪರ್ಶೇಷು-ಸ್ಪರ್ಶಾಕ್ಷರಗಳಲ್ಲಿ, ಯತ್-ಯಾವುದು, ಷೋಡಶಂ - ಹದಿನಾರನೆಯದೋ, ಏಕವಿಂಶಂ - ಇಪ್ಪತ್ತೊಂದನೆಯದೋ, ನಿಷ್ಕಿಂಚನಾನಾಂ - ಬಡವರಿಗೆ, ಯತ್-ಯಾವುದನ್ನು, ಧನಂ-ಧನವನ್ನಾಗಿ, ವಿದುಃ - ತಿಳಿಯುವರೋ, ಅಂತಹ, ದ್ವಿಃ-ಎರಡಾವೃತ್ತಿ, ಗದಿತಂ-ಹೇಳಲ್ಪಟ್ಟ, ದ್ವ್ಯಕ್ಷರಂ-ಎರಡಕ್ಷರವುಳ್ಳ, ವಚಃ-ಮಾತನ್ನು, ಅಂಭಸಿ-ನೀರಿನಲ್ಲಿ, ಉಪಾಶೃಣೋತ್-ಕೇಳಿದನು ॥ ೬ ॥ ನಿಶಮ್ಯ-ಕೇಳಿ, ತದ್ವ...ಯಾ, ತತ್-ಆ ಶಬ್ದವನ್ನು, ವಕ್ತೃ-ಹೇಳಿದವನನ್ನು, ದಿದೃಕ್ಷಯಾ-ನೋಡಲಪೇಕ್ಷೆಯಿಂದ, ದಿಶಃ-ದಿಕ್ಕುಗಳನ್ನು, ವಿಲೋಕ್ಯ - ನೋಡಿ, ತತ್ರ-ಅಲ್ಲಿ, ಅನ್ಯತ್-ಮತ್ತಾವುದನ್ನೂ, ಅಪಶ್ಯಮಾನಃ-ಕಾಣದೆ, ಸ್ವಧಿಷ್ಣ್ಯಂ-ತನ್ನನೆಲೆಯಲ್ಲಿ, ಆಸ್ಥಾಯ-ಕುಳಿತುಕೊಂಡು, ತತ್-ಅದು, ಹಿತಂ-ತನಗೆ ಹಿತವಾದುದನ್ನಾಗಿ, ವಿಮೃಶ್ಯ-ಯೋಚಿಸಿ, ಉಪಾದಿಷ್ಟಇವ-ಪ್ರೇರಿಸಲ್ಪಟ್ಟವನಂತೆ, ತಪಸಿ-ತಪಸ್ಸಿನಲ್ಲಿ, ಮನಃ-ಮನಸ್ಸನ್ನು, ಆದಧೇ-ಇಟ್ಟನು ॥ ೭ ॥ ತಪತಾಂ - ತಪಸ್ವಿಗಳಲ್ಲಿ, ತಪೀಯಾನ್ - ಉತ್ತಮತಪಸ್ವಿಯಾದ ಪಿತಾಮಹನು, ಅಮೋಘದರ್ಶನಃ-ಸಫಲಜ್ಞಾನವುಳ್ಳವನಾದುದರಿಂದಲೇ, ಸಮಾಹಿತಃ-ಏಕಾಗ್ರಚಿತ್ತನಾಗಿಯೂ, ಜಿತಾ...ತ್ಮಾ, ಜಿತ-ಜಯಿಸಲ್ಪಟ್ಟ, ಅಸಲ-ಪ್ರಾಣವಾಯುಗಳೂ, ಆತ್ಮ-ಮನಸ್ಸೂ ಉಳ್ಳವನಾಗಿಯೂ, ವಿಜಿ...ಯಃ, ವಿಜಿತ-

---

ಲಿಲ್ಲ ॥೫॥ ಬಳಿಕ ಆತನು ಚಿಂತಿಸುತ್ತಿರುವಾಗ, ಆಮಹಾಜಲದಮಧ್ಯದಲ್ಲಿ, ಕಕಾರ ಮೊದಲು ಮಕಾರವೇ ಕೊನೆಯಾಗುಳ್ಳ ಸ್ಪರ್ಶಗಳೆಂದು ಹೆಸರುಗೊಂಡ ಇಪ್ಪತ್ತೈದು ಅಕ್ಷರಗಳೊಳಗೆ ಹದಿನಾರನೆಯ ತಕಾರವೂ, ಇಪ್ಪತ್ತೊಂದನೆಯ ಪಕಾರವೂ, ಈ ಎರಡು ಅಕ್ಷರಗಳರೂಪವಾಗಿ, ನಿರ್ಧನರಾದವರಿಗೆ ಧನವೆನಿಸಿದ, 'ತಪ' ಎಂಬ ಶಬ್ದವು ಎರಡಾವೃತ್ತಿ ಕೇಳಿಬಂದುದು ॥ ೬ ॥ ಅದನ್ನು ಕೇಳಿದ ಕೂಡಲೇ ಆ ನುಡಿಯನ್ನು ನುಡಿದವರಾರು? ಎಂದು ಗಕ್ಕನೆದ್ದು ದಿಕ್ಕುದಿಕ್ಕುಗಳಲ್ಲಿಯೂ ನೋಡಿ ಯಾರನ್ನೂ ಕಾಣದೇ, ಮರಳಿ ತನ್ನ ಸ್ಥಲದಲ್ಲಿಯೇ ಕುಳಿತುಕೊಂಡು, ತನ್ನ ಹಿತಾರ್ಥವಾಗಿ ಯಾರೋ ಹೇಳಿರುವರೆಂದು ನಿಶ್ಚಯಿಸಿ, ಅದರಂತೆಯೇ ಒಂದೇ ಮನಸ್ಸಿನಿಂದ ತಪಸ್ಸನ್ನು ಮಾಡಲಾರಂಭಿಸಿದನು ॥ ೭ ॥ ಇಂತು 'ತಪ' ಎಂಬ ಅಶರೀರವಾಣಿಯ ಅರ್ಥವನ್ನು ತಿಳಿದ ಜಾಣನಾದುದರಿಂದಲೇ ಸಮಾಧಿನಿಷ್ಠನೂ ತಪಸ್ವಿಗಳಲ್ಲಿ ಅಗ್ರಗಣ್ಯನೂ ಆದ ಆ ಬ್ರಹ್ಮನು ಪ್ರಾಣವಾಯುಗಳನ್ನೂ ಮನಸ್ಸನ್ನೂ ಸಹ ನಿಗ್ರಹಿಸಿ, ಜ್ಞಾನಕರ್ಮಗಳೆಂಬ

ದ್ರಿಯಃ । ಅತಪ್ಯತ ಸ್ಮಾಽಖಿಲಲೋಕತಾಪನಂ ತಪ ಸ್ತಪೀಯಾಂ ಸ್ತಪ ತಾಂ ಸಮಾಹಿತಃ ॥ ೮ ॥ ತಸ್ಮೈ ಸ್ವಲೋಕಂ ಭಗವಾನ್ ಸಭಾಜಿತಃ ಸಂದರ್ಶಯಾಮಾಸ ಪರಂ ನ ಯತ್ಪರಂ । ವ್ಯಪೇತ ಸಂಕ್ಲೇಶ ವಿಮೋಹ ಸಾಧ್ವಸಂ ಸ್ವದೃಷ್ಟವದ್ಭಿ ರ್ವಿಬುಧೈ ರಭಿಷ್ಟುತಂ ॥ ೯ ॥ ಪ್ರವ ರ್ತತೇ ಯತ್ರ ರಜ ಸ್ತಮ ಸ್ತಯೋಃ ಸತ್ವಂಚ ಮಿಶ್ರಂ ನಚ ಕಾಲವಿಕ್ರ ಮಃ । ನಯತ್ರ ಮಾಯಾ ಕಿಮುತಾಽಪರೇ ಹರೇ ರನು ವ್ರತಾ ಯತ್ರ ಸುರಾಽಸುರಾಽರ್ಚಿತಾಃ ॥೧೦॥ ಶ್ಯಾಮಾಽವದಾ ತಾ ಶ್ಶತಪತ್ರ ಲೋ

ಗೆಲ್ಲಲ್ಪಟ್ಟ, ಉಭಯ-ಜ್ಞಾನಕರ್ಮಗಳೆಂಬ, ಇಂದ್ರಿಯಃ - ಇಂದ್ರಿಯಗಳುಳ್ಳವನಾಗಿಯೂ, ದಿವ್ಯಂ-ದೇವ ಮಾನದ ಸಹಸ್ರಾಬ್ದಂ-ಸಾವಿರ ವರ್ಷಗಳು, ಅತಪ್ಯತ - ತಪಸ್ಸುಮಾಡಿದನು ॥ ೮ ॥ ಸಭಾಜಿತಃ-ಧ್ಯಾನಿಸಲ್ಪಟ್ಟ, ಭಗವಾನ್-ಭಗವಂತನು, ವ್ಯಪೇ...ಸಂ, ವ್ಯಪೇತ - ತಪ್ಪಿಹೋದ, ಸಂಕ್ಲೇಶ - ಕ್ಲೇಶ ಗಳೂ, ವಿಮೋಹ-ಅಜ್ಞಾನವು, ಸಾಧ್ವಸಂ-ಭಯವೂ ಉಳ್ಳ, ಸ್ವದೃಷ್ಟವದ್ಭಿಃ - ಅದೃಷ್ಟಶಾಲಿಗಳಾದ, ಅಥವಾ ಆತ್ಮದರ್ಶನವುಳ್ಳ, ವಿಬುಧೈಃ-ಜ್ಞಾನಿಗಳಿಂದ, ಅಭಿಷ್ಟುತಂ-ಹೊಗಳಲ್ಪಟ್ಟ, ಯತ್-ಯಾವುದಕ್ಕಿಂ ತಲೂ, ಪರಂ-ಉತ್ತಮವು, ನ-ಇಲ್ಲವೋ ಅಂತಹ, ಪರಂ-ಸರ್ವೋತ್ತಮವಾದ, ಸ್ವಲೋಕಂ - ತನ್ನ ಲೋಕ (ವೈಕುಂಠ) ವನ್ನು, ಸಂದರ್ಶಯಾಮಾಸ-ತೋರಿಸಿದನು ॥ ೯ ॥ ಯತ್ರ - ಎಲ್ಲಿ, ರಜಃ-ರಜ ಸ್ಸು, ತಮಃ-ತಮಸ್ಸು, ತಯೋಃ-ಅವುಗಳಿಂದ, ಮಿಶ್ರಂ-ಬೆರತ, ಸತ್ವಂಚ-ಸತ್ವವೂ, ಕಾಲವಿಕ್ರಮಃ-ನಾಶವೂ, ನ-ಇಲ್ಲವೋ, ಯತ್ರ-ಎಲ್ಲಿ, ಮಾಯಾ - ಮಾಯೆಯು, ನ-ಇಲ್ಲವೋ, ಅಪರೇ - ಇತರಗಳಾದ, ಕಾಮಾದಿಗಳನ್ನು, ಕಿಮುತ-ಹೇಳುವದೇನು ? ಯತ್ರ-ಎಲ್ಲಿ, ಹರೇಃ - ಹರಿಯ, ಅನುವ್ರತಾಃ - ಪಾರ್ಷ ದರು, ಸುರಾ...ತಾಃ ಸುರ-ದೇವತೆಗಳಿಂದಲೂ, ಅಸುರ ರಾಕ್ಷಸರಿಂದಲೂ, ಅರ್ಚಿತಾಃ-ಪೂಜಿಸಲ್ಪಡು ವರೋ ॥೧೦॥ ಆ ಪಾರ್ಷದರು, ಶ್ಯಾಮಾವದಾತಾಃ-ನೀಲವರ್ಣದಿಂದ ಪ್ರಕಾಶಮಾನರು, ಶತ...ನಾಃ

ಎರಡುವಿಧಗಳಾದ ಇಂದ್ರಿಯಗಳನ್ನೂ ಗೆದ್ದು, ಸಕಲಲೋಕಗಳೂ ತಲ್ಲಣಿಸುವಂತೆ ದೇವಮಾನದ ಒಂದು ಸಾವಿರ ವರ್ಷಗಳವರೆಗೂ ಅತ್ಯದ್ಭುತವಾದ ತಪಸ್ಸನ್ನುಮಾಡಿ ದನು ॥ ೮ ॥ ಅದರಿಂದ ಸಂತುಷ್ಟನಾದ ಹರಿಪರಮಾತ್ಮನು, ಆತ್ಮದರ್ಶನವನ್ನು ಪಡೆದ ಅದೃಷ್ಟಶಾಲಿಗಳಿಗೆ ಮಾತ್ರ ಲಭ್ಯವಾಗತಕ್ಕುದಾಗಿಯೂ, ದುಃಖ, ಅಜ್ಞಾನ, ಮರಣ ಭಯಗಳಿಲ್ಲದುದಾಗಿಯೂ, ಸರ್ವೋತ್ತಮವಾಗಿಯೂ, ಇರುವ ವೈಕುಂಠವೆಂಬ ತನ್ನ ಲೋಕವನ್ನು ಆ ಬ್ರಹ್ಮನಿಗೆ ಪ್ರತ್ಯಕ್ಷಗೊಳಿಸಿದನು ॥ ೯ ॥

ಅಯ್ಯಾ ರಾಜನೆ! ಆ ಲೋಕದ ಸೊಬಗನ್ನು ಏನೆಂದು ಬಣ್ಣಿಸಲಿ ? ಆ ವೈಕುಂಠ ದಲ್ಲಿ ಶುದ್ಧಸತ್ವವೆಂಬುದು ತುಂಬಿ ತುಳುಕುತ್ತಿರುವುದಲ್ಲದೆ, ರಜಸ್ತಮಸ್ಸುಗಳಾಗಲಿ ಅವುಗಳಿಂದ ಮಿಶ್ರವಾದ ಸತ್ವವಾಗಲಿ ಇಲ್ಲ. ಕಾಲಶಕ್ತಿಗೊಳಪಟ್ಟ ನಾಶವೆಂಬುದಿಲ್ಲ. ಇವೆ ಲ್ಲಕ್ಕೂ ಮೂಲಕಾರಣವೆನಿಸಿದ ಮಾಯೆಯೇ ಇಲ್ಲದಿರುವಾಗ ತತ್ಕಾರ್ಯಗಳಾದ ಕಾಮ ಕ್ರೋಧಾದಿಗಳಿಲ್ಲವೆಂದು ಹೇಳುವುದೇಕೆ? ಅಲ್ಲಿಯ ಪಾರ್ಷದರು (ಭಕ್ತರು) ಕೂಡ ದೇವ ದಾನವಾದಿಗಳಿಂದ ಪೂಜಿತರಾಗಿರುವರು ॥ ೧೦ ॥ ಅಲ್ಲದೆ ಅವರೆಲ್ಲರೂ ನೀಲಮೇಘ

ಚನಾಃ ಪಿಶಂಗ ವಸ್ತ್ರಾಃ ಸುರುಚಃ ಸುಪೇಶಸಃ । ಸರ್ವೇ ಚತುರ್ಬಾ
ಹವ ಉನ್ಮಿಷನ್ಮಣಿ ಪ್ರವೇಕ ನಿಷ್ಕಾಭರಣಾಃ ಸುವರ್ಚಸಃ । ಪ್ರವಾಳ ವೈ
ಡೂರ್ಯ ಮೃಣಾಳ ವರ್ಚಸಃ ಪರಿಸ್ಫುರತ್ಕುಂಡಲ ಮೌಳಿಮಾಲಿನಃ ॥೧೧॥
ಭ್ರಾಜಿಷ್ಣುಭಿ ರ್ಯಃ ಪರಿತೋ ವಿರಾಜತೇ ಲಸದ್ವಿಮಾನಾ ವಳಿಭಿ ರ್ಮ
ಹಾತ್ಮನಾಂ । ವಿದ್ಯೋತಮಾನಃ ಪ್ರಮದೋತ್ತಮಾ ದ್ಯುಭಿ ಸ್ಸವಿದ್ಯು
ದಭ್ರಾವಳಿಭಿ ರ್ಯಥಾ ನಭಃ ॥೧೨॥ ಶ್ರೀ ರ್ಯತ್ರ ರೂಪಿಣ್ಯುರುಗಾಯ
ಪಾದಯೋಃ ಕರೋತಿ ಮಾನಂ ಬಹುಧಾ ವಿಭೂತಿಭಿಃ । ಪ್ರೇಂಖಂ ಶ್ರಿತಾ

ಶತಪತ್ರ-ಕಮಲಗಳಂತೆ, ಲೋಚನಾಃ-ಕಣ್ಣುಳ್ಳವರು, ಪಿಶಂಗವಸ್ತ್ರಾಃ-ಪೀತಾಂಬರವುಳ್ಳವರು, ಸುರುಚಃ-ಬಳ್ಳಿಯ ಕಾಂತಿಯುಳ್ಳವರು, ಸುಪೇಶಸಃ - ಅತಿಸುಕುಮಾರರು, ಸರ್ವೇ-ಎಲ್ಲರೂ, ಚತುರ್ಬಾಹವಃ-ನಾಲ್ಕು ತೋಳುಳ್ಳವರು, ಉನ್ಮಿ...ಣಾಃ, ಉನ್ಮಿಷತ್-ಹೊಳೆಯುವ, ಮಣಿಪ್ರವೇಕ-ಉತ್ತಮರತ್ನಗಳಿಂದ ಕೂಡಿದ, ನಿಷ್ಕ-ನಾಣ್ಯಗಳ, ಆಭರಣಾಃ-ಒಡವೆಗಳುಳ್ಳವರು, ಸುವರ್ಚಸಃ - ವರ್ಚಸ್ವಿಗಳು, ಪ್ರವಾ...ಸಃ - ಪ್ರವಾಳ-ಹವಳ, ವೈಡೂರ್ಯ; ಮೃಣಾಳ - ತಾವರೆದಂಟು ಇವುಗಳಂತೆ, ವರ್ಚಸಃ-ವರ್ಣವುಳ್ಳವರು, ಪರಿ...ಸಃ, ಪರಿಸ್ಫುರತ್-ಪ್ರಕಾಶವಾದ, ಕುಂಡಲ-ಕಡಕು, ಮೌಳಿ-ಕಿರೀಟ, ಮಾಲಿನಃ-ಮಾಲೆಗಳೂಉಳ್ಳವರುಆಗಿರುವರು ॥ ೧೧ ॥ ಯಃ-ಯಾವಲೋಕವು, ಮಹಾತ್ಮನಾಂ-ಮಹಾತ್ಮರ, ಭ್ರಾಜಿಷ್ಣುಭಿಃ-ಪ್ರಕಾಶಮಾನಗಳಾದ, ಪ್ರಮ...ಭಿಃ,ಪ್ರಮದೋತ್ತಮಾ - ಉತ್ತಮಸ್ತ್ರೀಯರ, ದ್ಯುಭಿಃ-ಕಾಂತಿಗಳುಳ್ಳ, ವಿಮಾನಾವಳಿಭಿಃ - ವಿಮಾನಪಙ್ಕ್ತಿಗಳಿಂದ, ಸವಿ...ಭಿಃ, ಸವಿದ್ಯುತ್-ಮಿಂಚುಗಳಿಂದ ಕೂಡಿದ, ಅಭ್ರ-ಮೋಡಗಳ, ಆವಳಿಭಿಃ-ಶ್ರೇಣಿಗಳಿಂದ, ನಭೋಯಥಾ-ಆಕಾಶದಂತೆ, ಪರಿತಃ-ಎಲ್ಲೆಡೆಗಳಲ್ಲಿಯೂ, ವಿರಾಜತೇ-ಹೊಳೆಯುವುದೋ ॥ ೧೨ ॥ ಯಾ-ಯಾವ ಲಕ್ಷ್ಮೀದೇವಿಯು, ಪ್ರೇಂಖಂ-ಉಯ್ಯಾಲೆಯನ್ನು, ಶ್ರಿತಾ-ಏರಿ, ಕುಸು...ಗ್ಯೈಃ, ಕುಸುಮಾಕರ-ವಸಂತನಿಗೆ, ಅನುಗ್ಯೈಃ-ಅನು

ಶ್ಯಾಮಲವಾದ ಶರೀರವರ್ಣದಿಂದ ಮನೋಜ್ಞರಾಗಿಯೂ, ಕಮಲದೆಸಳನಂತೆ ವಿಶಾಲಗಳಾದ ಕಣ್ಣುಳ್ಳವರಾಗಿಯೂ, ಹೊಂಬಣ್ಣದುಡಿಗೆಗಳುಳ್ಳವರಾಗಿಯೂ, ತೇಜಸ್ವಿಗಳಾಗಿಯೂ, ಸುಕುಮಾರರಾಗಿಯೂ, ಚತುರ್ಭುಜರಾಗಿಯೂ, ಮಿಣುಗುತ್ತಿರುವ ಮಣಿಗಣದಿಂದ ಅಣಿಯಾದ ಸ್ವರ್ಣಹಾರಗಳಿಂದಲಂಕೃತರಾಗಿಯೂ, ವರ್ಚಸ್ವಿಗಳಾಗಿಯೂ, ಹವಳದಂತೆಯೂ, ವೈಡೂರ್ಯಮಣಿಯಂತೆಯೂ, ತಾವರೇದಂಟನಂತೆಯೂ ದೇಹಕಾಂತಿಯುಳ್ಳವರಾಗಿಯೂ, ತಳತಳಿಸುತ್ತಿರುವ, ಕಿರೀಟ, ಕುಂಡಲ, ಮಾಲೆಗಳಿಂದ ದೇದೀಪ್ಯಮಾನರಾಗಿಯೂ ಇರುವರು ॥ ೧೧ ॥ ಮತ್ತು ಆ ವೈಕುಂಠವು, ಯಾವನೋನ್ಮತ್ತೆಯರಾದ ಮತ್ತಕಾಶಿನಿಯರ ಮೊತ್ತದೊಡನೆ ಬಿತ್ತರಿಸುತ್ತಿರುವ ಉತ್ತಮ ಪುರುಷರ ವಿಮಾನ ಪಂಙ್ತಿಗಳಿಂದೊತ್ತರಿಸುತ್ತಾ, ಮಿಂಚು ಬಳ್ಳಿಗಳಿಂದ ಚಂಚಲವಾದ ಮೇಘಸಂಚಯದಿಂದೊಪ್ಪುವ ಗಗನಾಂಚಲದಂತೆ ವಿರಾಜಿಸುತ್ತಿರುವುದು ॥ ೧೨ ॥

ಆ ಲೋಕದಲ್ಲಿ ಐಶ್ವರ್ಯಾಧಿದೇವತೆಯಾದ ಶ್ರೀದೇವಿಯು ನಿಜರೂಪದಿಂದೊಡಗೂಡಿ,ಅದ್ಭುತಮಹಿಮನಾದ ಭಗವಂತನ ಪಾದಗಳನ್ನು, ಅನೇಕ ವಿಭವಗಳಿಂದ ಪೂಜಿ

ಯಾ ಕುಸುಮಾಕರಾನುಗೈರ್ವಿಗೀಯಮಾನಾ ಪ್ರಿಯಕರ್ಮ ಗಾಯತೀ॥
ದದರ್ಶ ತತ್ರಾಽಖಿಲ ಸಾತ್ವತಾಂ ಪತಿಂ ಶ್ರಿಯಃ ಪತಿಂ ಯಜ್ಞಪತಿಂ ಜಗ
ತ್ಪತಿಂ। ಸುನಂದ ನಂದ ಪ್ರಬಲಾಽರ್ಹಣಾದಿಭಿ ಸ್ಸ್ವಪಾರ್ಷ*ದಮುಖ್ಯೈಃ
ಪರಿಸೇವಿತಂ ವಿಭುಂ ॥೧೪॥ ಭೃತ್ಯಪ್ರಸಾದಾಽಭಿಮುಖಂ ದೃಗಾಸವಂ
ಪ್ರಸನ್ನ ಹಾಸಾಽರುಣ ಲೋಚನಾನನಂ । ಕಿರೀಟಿನಂ ಕುಂಡಲಿನಂ ಚತು
ರ್ಭುಜಂ ಪೀತಾಂಽಶುಕಂ ವಕ್ಷಸಿ ಲಕ್ಷಿತಂ ಶ್ರಿಯಾ ॥ ೧೫ ॥ ಅಭ್ಯರ್ಹ
ಣೀಯಾಸನ ಮಾಸ್ಥಿತಂ ಪರಂ ವೃತಂ ಚತುಷ್ಷೋಡಶ ಪಂಚ ಶಕ್ತಿಭಿಃ ।

ಚಾರಿಗಳಾದ ಭ್ರಮರಗಳಿಂದ, ವಿಗೀಯಮಾನಾ-ಹೊಗಳಲ್ಪಟ್ಟವಳಾಗಿ, ಪ್ರಿಯ...ತೀ, ಪ್ರಿಯ-ಕಾಂತನಾದಶ್ರೀಹರಿಯ, ಕರ್ಮ - ಚರಿತ್ರೆಯನ್ನು, ಗಾಯತೀ - ಹೊಗಳುತ್ತಿರುವಳೋ, ಅಂತಹ, ಶ್ರೀ-ಶ್ರೀದೇವಿಯು, ಯತ್ರ-ಯಾವಲೋಕದಲ್ಲಿ, ರೂಪಿಣೀ-ನಿಜರೂಪದಿಂದೊಡಗೂಡಿ, ಉರು...ಯೋಃ, ಉರುಗಾಯ-ಭಗವಂತನ, ಪಾದಯೋಃ-ಅಡಿಗಳಲ್ಲಿ, ಬಹುಧಾ-ಹಲವುಬಗೆಗಳಾದ, ವಿಭೂತಿಭಿಃ-ವಿಭವಗಳಿಂದ-ಮಾನಂ-ಪೂಜೆಯನ್ನು, ಕರೋತಿ-ಮಾಡುವಳೋ ॥ ೧೩ ॥

ತತ್ರ - ಅಲ್ಲಿ, ಅಖಿಲಸಾತ್ವತಾಂ - ಸಕಲಭಕ್ತರಿಗೂ, ಪತಿಂ-ಒಡೆಯನು, ಶ್ರಿಯಃಪತಿಂ-ಲಕ್ಷ್ಮೀಪತಿಯೂ, ಯಜ್ಞಪತಿಂ-ಯಜ್ಞನಾಯಕನೂ, ಜಗತ್ಪತಿಂ-ಲೋಕೇಶ್ವರನೂ ಆದ, ಸುನಂದ...ಭಿಃ, ಸುನಂದ, ನಂದ, ಪ್ರಬಲ, ಅರ್ಹಣ, ಇವರೇ ಆದಿಭಿಃ-ಮೊದಲಾದ, ಸ್ವ...ಖ್ಯೈಃ, ಸ್ವ-ತನ್ನ, ಪಾರ್ಷದಮುಖ್ಯೈಃ-ಭಕ್ತಾಗ್ರೇಸರರಿಂದ, ಪರಿಸೇವಿತಂ-ಸೇವಿಸಲ್ಪಟ್ಟ, ವಿಭುಂ-ವ್ಯಾಪಕನಾದ ಭಗವಂತನನ್ನು ದದರ್ಶ-ಕಂಡನು ॥ ೧೪ ॥ ಭೃತ್ಯ...ಖಂ, ಭೃತ್ಯ-ಭಕ್ತರ, ಪ್ರಸಾದ-ಅನುಗ್ರಹದಲ್ಲಿ, ಅಭಿಮುಖಂ-ಅಭಿಮುಖನಾದ, ದೃಗಾಸವಂ - ದೃಷ್ಟಿಯನ್ನು ಆಸವ (ಮದ್ಯ) ದಂತೆ ಆಕರ್ಷಿಸುವ, ಪ್ರಸ...ನಂ, ಪ್ರಸನ್ನ-ನಿಷ್ಕಪಟವಾದ, ಹಾಸ-ಕಿರುನಗೆಯು, ಅರುಣಲೋಚನ-ಕೆಂಪಾದ ಕಣ್ಣುಗಳು, ಇವುಗಳಿಂದಕೂಡಿದ, ಆನನಂ - ಮುಖವುಳ್ಳ, ಕಿರೀಟಿನಂ - ಕಿರೀಟವುಳ್ಳ, ಕುಂಡಲಿನಂ-ಕುಂಡಲಗಳುಳ್ಳ, ಚತುರ್ಭುಜಂ-ನಾಲ್ಕು ತೋಳುಳ್ಳ, ಪೀತಾಂಶುಕಂ-ಪೀತಾಂಬರವುಳ್ಳ, ವಕ್ಷಸಿ-ಎದೆಯಲ್ಲಿ, ಶ್ರಿಯಾ-ಲಕ್ಷ್ಮಿಯಿಂದ, ಶ್ರಿತಂ-ಆಶ್ರಯಿಸಲ್ಪಟ್ಟ ॥ ೧೫ ॥ ಅಭ್ಯ...ನಂ, ಅಭ್ಯರ್ಹಣೀಯ - ಪೂಜಾಯೋಗ್ಯವಾದ, ಆಸನಂ-ಸಿಂಹಾಸನದಲ್ಲಿ, ಆಸ್ಥಿತಂ - ಕುಳಿತಿರುವ, ಪರಂ - ಸರ್ವೋತ್ತಮನಾದ, ಚತು...ಭಿಃ, ಚತುಃ-ನಾಲ್ಕು,

---

ಸುತ್ತಿರುವುದಲ್ಲದೆ, ಸುಂದರವಾದ ಮಂದಿರೋದ್ಯಾನದಲ್ಲಿ ಉಯ್ಯಾಲೆಯನ್ನೇರಿತೂಗುತ್ತಾ, ವಸಂತನನ್ನು ಹಿಂಬಾಲಿಸಿದ ದುಂಬಿವಿಂಡಿನಿಂದ ಹೊಗಳಲ್ಪಡುತ್ತಾ, ತನ್ನ ಪ್ರಾಣಕಾಂತನಾದ ಭಗವಂತನ ಮಹಿಮೆಯನ್ನು ಕೊಂಡಾಡುತ್ತಿರುವಳು ॥ ೧೩ ॥ ಅನಂತರದಲ್ಲಿ ಆ ಬ್ರಹ್ಮದೇವನು ಇಂತಹ ಅಕುಂಠವಿಭವವುಳ್ಳವೈಕುಂಠಲೋಕದಲ್ಲಿಭಕ್ತಪಾಲಕನೂ, ರಮಾವಲ್ಲಭನೂ, ಯಜ್ಞನಾಯಕನೂ, ಜಗದೀಶ್ವರನೂ, ಸುನಂದ, ನಂದ, ಪ್ರಬಲ, ಅರ್ಹಣ, ಮೊದಲಾದ ಭಕ್ತಾಗ್ರೇಸರರಿಂದ ಸೇವಿತನೂ ಆಗಿ, ಭಕ್ತಾನುಗ್ರಹದಲ್ಲಿ ಆದರವನ್ನು ತೋರುತ್ತಾ, ನೋಟಕರ ಕಣ್ಣಿಗಾನಂದವನ್ನು ಬೀರುತ್ತಾ, ಪ್ರಸನ್ನವಾದ ಕಿರುನಗೆಯಿಂದಲೂ, ನಸುಗೆಂಪಡರಿದ ಕಣ್ಣುಗಳಿಂದಲೂ, ಸುಂದರವಾದ ಮುಖದಿಂದ ರಾರಾಜಮಾನನಾಗಿ, ಮಣಿಮಯಗಳಾದ ಕಿರೀಟ ಕುಂಡಲಗಳನ್ನು

ಯುಕ್ತಂ ಭಗೈಸ್ಸ್ವೈರಿತರತ್ರ ಚಾಽಧ್ರುವೈಸ್ಸ್ವ ಏವ ಧಾಮನ್*ರಮಮಾಣ
ಮೀಶ್ವರಂ ॥ ೧೬ ॥ ತದ್ದರ್ಶನಾಹ್ಲಾದ ಪರಿಪ್ಲುತಾಂಽತರೋ ಹೃಷ್ಯತ್ತ
ನುಃ ಪ್ರೇಮಭರಾಽಶ್ರುಲೋಚನಃ । ನನಾಮ ಪಾದಾಂಬುಜ ಮಸ್ಯ
ವಿಶ್ವಸೃಗ್ಯತ್ಪಾರ *ಮಹಂಸ್ಯೇನ ಪಥಾಽಧಿಗಮ್ಯತೇ ॥ ೧೭ ॥ ತಂ
ಪ್ರೀಯಮಾಣಂ ಸಮುಪಸ್ಥಿತಂ ತದಾ ಪ್ರಜಾವಿಸರ್ಗೇ ನಿಜಶಾಸನಾಽ
ರ್ಹಣಂ । ಬಭಾಷ ಈಷತ್ಸ್ಮಿತಶೋಚಿಷಾ ಗಿರಾ ಪ್ರಿಯಃ ಪ್ರಿಯಂ

ಷೋಡಶ-ಹದಿನಾರು, ಪಂಚ-ಐದು, ಶಕ್ತಿಭಿಃ-ಶಕ್ತಿಗಳಿಂದ, ವೃತಂ-ಕೂಡಿದ, ಇತರತ್ರ-ಬೇರೇಕಡೆಯಲ್ಲಿ ಅಧ್ರುವೈಃ-ಅಸ್ಥಿರಗಳಾದ, ಸ್ವೈಃ-ತನ್ನ, ಭಗೈಃ-ನಿತ್ಯೈಶ್ವರ್ಯಾದಿಗಳಿಂದ, ಸ್ವೇ-ತನ್ನ, ಧಾಮನ್ನೇವ-ಸ್ವರೂಪದಲ್ಲಿಯೇ, ರಮಮಾಣಂ - ಕ್ರೀಡಿಸುತ್ತಿರುವ, ಈಶ್ವರಂ-ಪ್ರಭುವಾದ ನಾರಾಯಣಮೂರ್ತಿಯನ್ನು ಕಂಡನು ॥೧೬॥ ತದ್ದ...ರಃ, ತತ್-ಆ ಭಗವಂತನ, ದರ್ಶನ-ನೋಟದಿಂದುಂಟಾದ, ಆಹ್ಲಾದ-ಸಂತೋಷದಿಂದ, ಪರಿಪ್ಲುತ-ವ್ಯಾಪ್ತವಾದ, ಅಂತರಃ-ಅಂತಃಕರಣವುಳ್ಳ, ಹೃಷ್ಯತ್ತನುಃ - ಸಂತೋಷದಿಂದ ಮೈಯುಬ್ಬಿದ, ಪ್ರೇಮ...ನಃ, ಪ್ರೇಮಭರ-ಅತ್ಯಂತ ಪ್ರೀತಿಯಿಂದುಂಟಾದ, ಅಶ್ರು-ಆನಂದಬಾಷ್ಪಗಳಿಂದ ಕೂಡಿದ, ಲೋಚನಃ-ಕಣ್ಣುಳ್ಳ, ವಿಶ್ವಸೃಕ್-ಬ್ರಹ್ಮನು, ಯತ್ - ಯಾವುದು, ಪಾರಮಹಂಸ್ಯೇನ-ಜ್ಞಾನರೂಪವಾದ, ಪಥಾ-ಮಾರ್ಗದಿಂದ, ಅಧಿಗಮ್ಯತೇ-ಹೊಂದಲ್ಪಡುವುದೋ, ಅಂತಹ ಅಸ್ಯ-ಈಭಗವಂತನ, ಪಾದಾಂಬುಜಂ-ಪಾದಕಮಲವನ್ನು ನನಾಮ-ನಮಸ್ಕರಿಸಿದನು ॥ ೧೭ ॥

ಪ್ರಿಯಃ-ಪ್ರಿಯನಾದ, ಪ್ರೀತಮನಾಃ-ಸಂತುಷ್ಟವಾದ ಮನಸ್ಸುಳ್ಳಭಗವಂತನು, ಪ್ರೀಯಮಾಣಂ, ಪ್ರೀತಿಸುತ್ತಿರುವ, ಸಮುಪಸ್ಥಿತಂ - ಪ್ರಾಪ್ತನಾದ, ಪ್ರಜಾವಿಸರ್ಗೇ - ಪ್ರಜಾ ಸೃಷ್ಟಿಯಲ್ಲಿ, ನಿಜ...ಣಂ-ನಿಜ-ತನ್ನ, ಶಾಸನ-ಆಜ್ಞೆಗೆ, ಅರ್ಹಣಂ - ಯೋಗ್ಯನಾದ, ತಂ - ಆಬ್ರಹ್ಮನ ಕರೇ-ಕೈಯನ್ನು, ಸ್ಪೃಶ್ಯ-ಹಿಡಿದುಕೊಂಡು, ಈಷ...ಷಾ, ಈಷತ್-ಕೊಂಚವಾದ, ಸ್ಮಿತ-ಮುಗುಳ್ನಗೆಯಿಂದ, ಶೋ

ತಳೆದು ಪೀತಾಂಬರಧಾರಿಯಾಗಿ, ಚತುರ್ಭುಜಗಳಿಂದೊಪ್ಪುತ್ತಾ, ಇಂದಿರಾಮಂದಿರವಾದ ವಕ್ಷಸ್ಸ್ಥಲದಿಂದ ಸುಂದರನಾಗಿ, ಜಗತ್ಪೂಜ್ಯವಾದ ರತ್ನಸಿಂಹಾಸನವನ್ನಲಂಕರಿಸಿ ಪ್ರಕೃತಿ, ಪುರುಷ, ಮಹತ್ತು, ಅಹಂಕಾರ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನಸ್ಸು, ಪಂಚಭೂತ, ಪಂಚತನ್ಮಾತ್ರೆಗಳೆಂಬ ಇಪ್ಪತ್ತೈದು ತತ್ವಶಕ್ತಿಗಳಿಂದ ಪರಿವೃತನಾಗಿ, ಇತರರಿಗೆ ಅಲಭ್ಯಗಳಾಗಿರುವ ತನ್ನ ನಿತ್ಯೈಶ್ವರ್ಯಾದಿಗಳಿಂದ, ಯುಕ್ತನಾಗಿ ಸ್ವರೂಪಾನಂದದಲ್ಲಿ ರಮಿಸುತ್ತಿರುವ ಜಗತ್ಪತಿಯಾದ ಶ್ರೀನಾರಾಯಣಮೂರ್ತಿಯನ್ನು ಕಂಡನು ॥ ೧೬ ॥ ಕೂಡಲೇ ಆ ಭಗವದ್ದರ್ಶನದಿಂದುಂಟಾದ ಸಂತೋಷಸಾಗರದಲ್ಲಿ ಓಲಾಡುತ್ತಾ, ಶರೀರವೆಲ್ಲವೂ ರೋಮಾಂಚವಾಗಿ, ಕಣ್ಣುಗಳಿಂದಾನಂದಬಾಷ್ಪಗಳನ್ನು ತುಳಿಕಿಸುತ್ತಾ, ಜ್ಞಾನಮಾರ್ಗದಿಂದ ಪಡೆಯತಕ್ಕ ಆವಾಸುದೇವಮೂರ್ತಿಯ ಪಾದಕಮಲಗಳಿಗೆ ಭಕ್ತಿಯಿಂದೆರಗಿದನು ॥ ೧೭ ॥

ಬಳಿಕ ಸರ್ವಲೋಕಪ್ರಿಯನಾದ ಶ್ರೀಹರಿಯು ಸಂತುಷ್ಟನಾಗಿ, ಸಮೀಪದಲ್ಲಿಯೇ ಭಕ್ತಿಯಿಂದೆರಗಿ, ಸಂತುಷ್ಟಾಂತರಂಗನಾಗಿ ನಿಂತಿರುವ ಬ್ರಹ್ಮನನ್ನು ಕಂಡು,

ಪ್ರೀತಮನಾಃ ಕರೇ ಸ್ಪೃಶನ್* ॥ ೧೮ ॥ ಶ್ರೀ ಭಗವಾನ್ ॥ ತ್ವಯಾಽಹಂ ತೋಷಿತಃ ಸಮ್ಯಗ್ವೇದಗರ್ಭ ! ಸಿಸೃಕ್ಷಯಾ । ಚಿರಂ ಭೃತೇನ ತಪಸಾ ದುಸ್ತೋಷಃ ಕೂಟಯೋಗಿನಾಂ ॥೧೯॥ ವರಂ ವರಯ ಭದ್ರಂ ತೇ ವರೇಶಂ ಮಾಽಭಿವಾಂಛಿತಂ । ಬ್ರಹ್ಮನ್ ! ಶ್ರೇಯಃ ಪರಿಶ್ರಾಮಃ ಪುಂಸಾಂ ಮದ್ದರ್ಶನಾಽವಧಿಃ ॥ ೨೦ ॥ ಮನೀಷಿತಾಽನುಭಾವೋಽಯಂ ಮಮ ಲೋಕಾಽವಲೋಕನಂ । ಯದುಪಶ್ರುತ್ಯ ರಹಸಿ ಚಕರ್ಥ ಪರಮಂ ತಪಃ ॥ ೨೧ ॥ ಪ್ರತ್ಯಾದಿಷ್ಟಂ ಮಯಾ ತತ್ರ ತ್ವಯಿ ಕರ್ಮ ವಿಮೋ

ಚಿಷಾ-ಪ್ರಕಾಶಿಸುವ, ಗಿರಾ-ಮಾತಿನಿಂದ, ಬಭಾಷೇ-ಹೇಳಿದನು ॥೧೮॥ ಭಗವಾನ್-ಭಗವಂತನು ಹೇಳುತ್ತಾನೆ, ಹೇವೇದಗರ್ಭ-ಎಲೈವೇದಪ್ರಚಾರಕನಾದ ಬ್ರಹ್ಮನೇ ! ಸಿಸೃಕ್ಷಯಾ-ಸೃಜಿಸಲಪೇಕ್ಷೆಯಿಂದ, ಚಿರಂ-ಬಹುಕಾಲ, ಭೃತೇನ-ನಡೆಯಿಸಿದ, ತಪಸಾ-ತಪಸ್ಸಿನಿಂದ, ಕೂಟಯೋಗಿನಾಂ-ಡಾಂಭಿಕರಾದ ಯೋಗಿಗಳಿಂದ, ದುಸ್ತೋಷಃ-ಸಂತೋಷಗೊಳಿಸಲಶಕ್ಯನಾದ, ಅಹಂ-ನಾನು, ತ್ವಯಾ - ನಿನ್ನಿಂದ, ತೋಷಿತಃ-ಸಂತೋಷಗೊಳಿಸಲ್ಪಟ್ಟೆನು ॥ ೧೯ ॥ ಹೇ ಬ್ರಹ್ಮನ್-ಎಲೈ ಬ್ರಹ್ಮನೆ ! ಪುಂಸಾಂ - ಪುರುಷರಿಗೆ, ಶ್ರೇಯಃ ಪರಿಶ್ರಾಮಃ-ಶ್ರೇಯಸ್ಸಿಗಾಗಿ ಪ್ರಯಾಸವು, ಮದ್ದರ್ಶನಾವಧಿಃ-ನನ್ನನ್ನು ಕಾಣುವವರೆಗೇ ಸರಿ. ಆದುದರಿಂದ ವರೇಶಂ-ವರಗಳನ್ನು ಕೊಡುವ, ಮಾಂ-ನನ್ನನ್ನು ಕುರಿತು, ಅಭಿವಾಂಛಿತಂ-ನಿನಗಿಷ್ಟವಾದ, ವರಂ-ವರವನ್ನು, ವರಯ-ಬೇಡು, ತೇ-ನಿನಗೆ, ಭದ್ರಂ - ಮಂಗಳವಾಗುವುದು ॥ ೨೦ ॥ ಯತ್-ಯಾವ, ನನ್ನ ಮಾತನ್ನು, ಉಪಶ್ರುತ್ಯ-ಕೇಳಿ, ಪರಮಂ-ಉತ್ತಮವಾದ, ತಪಃ-ತಪಸ್ಸನ್ನು, ಚಕರ್ಥ-ಮಾಡಿದೆಯೋ, ಆದುದರಿಂದ, ಮಮ-ನನ್ನ, ಲೋಕಾವಲೋಕನಂ-ಲೋಕವನ್ನ ಕಂಡುದು, ಮನೀಷಿತಂ-ನನ್ನ ಇಚ್ಛೆಯು,

ಪ್ರಜಾಸೃಷ್ಟಿರೂಪವಾದ ಕಾರ್ಯದಲ್ಲಿ ತನ್ನಾಜ್ಞೆಯನ್ನು ನೆರವೇರಿಸಲರ್ಹನೆಂದು ತಿಳಿದು, ಆತನ ಕೈಯನ್ನು ಹಿಡಿದು ಕೊಂಡು, ಮಂದಹಾಸವನ್ನು ಬೀರುತ್ತಾ, ಆತನನ್ನು ಕುರಿತು ಹೇಳಿದನು ॥ ೧೮ ॥ ಅಯ್ಯಾ ವೇದ ಪ್ರಚಾರಕನಾದಕಮಲಾಸನನೆ! ಡಾಂಭಿಕರಾದವರ ಕಪಟಯೋಗಕ್ಕೆಂದಿಗೂ ವಶನಾಗದ ನಾನು, ಜಗತ್ಸೃಷ್ಟಿಯನ್ನು ಮಾಡಲೆಳಸಿ, ಬಹುಕಾಲದವರೆಗೂ ಅಮೋಘತಪಸ್ಸನ್ನು ಮಾಡಿದ ನಿನಗೆ ಪ್ರಸನ್ನನಾದೆನು॥೧೯॥ ಎಲೈ ಪರಮೇಷ್ಠಿಯೆ ! ಲೋಕದಲ್ಲಿ ಪುರುಷರು ಶ್ರೇಯಸ್ಸಂಪಾದನೆಗಾಗಿ ಪಡುವ ಪ್ರಯಾಸಕ್ಕೆ ನನ್ನ ದರ್ಶನವೇ ಅವಧಿಯು, ಆದುದರಿಂದ ನಿನಗೆ ಮಂಗಳವಾಗುವುದರಲ್ಲಿ ಸಂಶಯವಿಲ್ಲ. ವರಪ್ರದನಾದ ನನ್ನನ್ನುಕುರಿತು ನಿನಗೆ ಬೇಕಾದವರವನ್ನು ಬೇಡು ॥ ೨೦ ॥ 'ತಪ' ಎಂದು ನುಡಿದ ನನ್ನ ಅಶರೀರವಾಕ್ಕನ್ನು ಕೇಳಿ ದುಶ್ಚರವಾದ ತಪಸ್ಸನ್ನು ತಪಿಸಿದೆಯಾದುದರಿಂದ, ನೀನೀವೈಕುಂಠಲೋಕವನ್ನು ಕಂಡುದು ಕೂಡ,

* ಶ್ಲೋ ॥ ಕೃತಾಂಜಲಿಂ ಪ್ರಶ್ರಯ ನಮ್ರಕಂಧರಂ ವಿಲೋಕಯನ್ ಪ್ರೇಮದೃಶಾ ಸಮೇಧಯನ್ । ವಿನಯದಿಂದ ಕೈಗಳನ್ನು ಜೋಡಿಸಿ ತಲೆಯನ್ನುಬಾಗಿಸಿ ನಿಂದಿರುವ ಬ್ರಹ್ಮನನ್ನು ಪ್ರೇಮ ದೃಷ್ಟಿಯಿಂದ ವೀಕ್ಷಿಸಿ ಹೇಳಿದನು. (ಇದು ಅಧಿಕಪಾಠ)

ಹಿತೇ! ತಪೋ ಮೇ ಹೃದಯಂ ಸಾಕ್ಷಾ ದಾತ್ಮಾಽಹಂ ತಪಸೋಽನಘ! ॥
ಸೃಜಾಮಿ ತಪಸೈ ವೇದಂ ಗ್ರಸಾಮಿ ತಪಸಾ ಪುನಃ । ಬಿಭರ್ಮಿ ತಪಸಾ
ವಿಶ್ವಂ ವೀರ್ಯಂ ಮೇ ದುಶ್ಚರಂ ತಪಃ ॥ ೨೩ ॥ ಬ್ರಹ್ಮಾ॥ ಭಗವನ್!
ಸರ್ವಭೂತಾನಾ ಮಧ್ಯಕ್ಷೋ ಽ ವಸ್ಥಿತೋ ಗುಹಾಂ । ವೇದಹ್ಯ
ಪ್ರತಿ ರುದ್ಧೇನ ಪ್ರಜ್ಞಾನೇನ ಚಿಕೀರ್ಷಿತಂ ॥ ೨೪ ॥ ತಥಾಪಿ ನಾಥ
ಮಾನಸ್ಯ ನಾಥ! ನಾಥಯ ನಾಥಿತಂ । ಪರಾವರೇ ಯಥಾ ರೂಪೇ ಜಾ
ನೀಯಾಂ ತೇ ತ್ವರೂಪಿಣಃ ॥ ೨೫ ॥ ಯಥಾತ್ಮ ಮಾಯಾ ಯೋ
ಗೇನ ನಾನಾ ಶಕ್ತ್ಯು ಪ ಬೃಂಹಿತಂ । ವಿಲುಂಪನ್ ವಿಸೃಜನ್ ಗೃಹ್ಣನ್

ಅನುಭಾವೋಽಯಂ-ಮಹಿಮೆಯು ॥ ೨೧ ॥ ತ್ವಯಿ - ನೀನು, ಕರ್ಮವಿಮೋಹಿತೇ-ಸೃಷ್ಟಿಕಾರ್ಯದಲ್ಲಿ, ಮರುಳಾಗಲು, ತತ್ರ-ಆಗ, ಮಯಾ-ನನ್ನಿಂದ, ಪ್ರತ್ಯಾದಿಷ್ಟಂ - ಪ್ರೇರಿಸಲ್ಪಟ್ಟಿತು, ತಪಃ - ತಪಸ್ಸು, ಮೇ-ನನಗೆ, ಹೃದಯಂ-ಅಂತಶ್ಶಕ್ತಿಯು, ಹೇ ಅನಘ-ಎಲೈ ಬ್ರಹ್ಮನೆ! ಅಹಂ-ನಾನು, ತಪಸಃ-ತಪಸ್ಸಿನ, ಆತ್ಮಾ-ಸ್ವರೂಪನು, ॥ ೨೨ ॥ ಇದಂ - ಈ ಜಗತ್ತನ್ನು, ತಪಸೈವ - ತಪಸ್ಸಿನಿಂದಲೇ, ಸೃಜಾಮಿ-ಸೃಷ್ಟಿಗೊಳಿಸುವೆನು, ತಪಸಾ-ತಪಸ್ಸಿನಿಂದಲೇ,ಪುನಃ-ಮರಳಿ, ಗ್ರಸಾಮಿ-ಸಂಹರಿಸುತ್ತೇನೆ, ತಪಸಾ-ತಪಸ್ಸಿನಿಂದ, ವಿಶ್ವಂ-ಎಲ್ಲವನ್ನೂ, ಬಿಭರ್ಮಿ-ಧರಿಸುತ್ತೇನೆ, ದುಶ್ಚರಂ-ಅದ್ಭುತವಾದ ತಪಸ್ಸೇ, ಮೇ-ನನ್ನ, ವೀರ್ಯಂ-ಶಕ್ತಿಯು ॥ ೨೩ ॥ ಬ್ರಹ್ಮಾ - ಬ್ರಹ್ಮನುಹೇಳುತ್ತಾನೆ, ಭಗವನ್ - ಎಲೈ ಭಗವಂತನೆ! ಸರ್ವಭೂತಾನಾಂ-ಸಕಲ ಪ್ರಾಣಿಗಳ, ಗುಹಾಂ-ಬುದ್ಧಿಯಲ್ಲಿ, ಅವಸ್ಥಿತಃ - ನೆಲೆಗೊಂಡಿರುವುದರಿಂದಲೇ, ಅಧ್ಯಕ್ಷಃ-ಸರ್ವೇಶ್ವರ ನೆನಿಸಿರುವೆ, ಮತ್ತು, ಅಪ್ರತಿರುದ್ಧೇನ-ತಡೆಯಿಲ್ಲದ ಪ್ರಜ್ಞಾನೇನ-ಜ್ಞಾನದಿಂದ, ಚಿಕೀರ್ಷಿತಂ-ಸಂಕಲ್ಪ ಮತ್ತು ಕಾರ್ಯಗಳನ್ನೂ, ವೇದ-ಬಲ್ಲೆ ॥೨೪॥ ಹೇನಾಥ-ಎಲೈ ಪ್ರಭುವೆ! ತಥಾಪಿ-ಆದರೂ, ಅರೂಪೇಣ-ನಿರೂಪನಾದ, ತೇ-ನಿನ್ನ,ಪರಾವರೇ-ಸೂಕ್ಷ್ಮ ಸ್ಥೂಲಗಳೆನಿಸಿರುವ, ರೂಪೇ-ರೂಪಗಳನ್ನು, ಯಥಾ-ಹೇಗೆ, ಜಾನೀಯಾಂ-ತಿಳಿದೇನೋ ತಥಾ-ಹಾಗೆ, ನಾಥಮಾನಸ್ಯ-ಬೇಡುತ್ತಿರುವ ನನ್ನ, ನಾಥಿತಂ-ಕೋರಿಕೆಯನ್ನು, ನಾಥಯ-ನೆರವೇರಿಸು ॥ ೨೫ ॥ ಹೇ ಅಮೋಘಸಂಕಲ್ಪ-ಸತ್ಯಸಂಕಲ್ಪವುಳ್ಳ, ಮಾಧವ-ಲಕ್ಷ್ಮೀಪತಿಯೇ! ಆತ್ಮ...ನ, ಆತ್ಮ-ನಿನ್ನ, ಮಾಯಾ - ಮಾಯೆಯ, ಯೋಗೇನ-

ನನ್ನ ಸಂಕಲ್ಪ ಮಹಿಮೆಯೆಂದೇ ತಿಳಿ ॥ ೨೧ ॥ ಎಲೈ ಪಾಪರಹಿತನಾದ ಹಿರಣ್ಯಗರ್ಭನೆ! ನಾನು ತಪಸ್ಸಿನಿಂದಲೇ ಈ ಜಗತ್ತನ್ನುಸೃಷ್ಟಿಗೊಳಿಸುವೆನು. ತಪಸ್ಸಿನಿಂದಲೇಪಾಲಿಸುವೆನು. ತಪಸ್ಸಿನಿಂದಲೇ ಲಯಗೊಳಿಸುವೆನು. ನಿಜವಾದ ತಪಸ್ಸೇ ನನ್ನ ಅಂತರಂಗ ಬಹಿರಂಗ ಶಕ್ತಿಗಳಾಗಿರುವುವು. ನನ್ನ ಸ್ವರೂಪವೇ ತಪಸ್ಸು. ಆದುದರಿಂದ ಜಗತ್ಸೃಷ್ಟಿವ್ಯಾಪಾರದಲ್ಲಿ ಹಿಂದುಮುಂದು ತೋರದೆ ಮರುಳಾಗಿದ್ದುದರಿಂದ ಆಗನಿನಗೆ ಪ್ರೇರಿಸಿದೆನು ॥ ೨೨-೨೩ ॥ ಎಂದು ನುಡಿಯಲು ಬ್ರಹ್ಮದೇವನು ವಿನಯವಿಧೇಯನಾಗಿ, ಎಲೈ ತಂದೆಯಾದ ಭಗವಂತನೆ! ಸರ್ವಪ್ರಾಣಿಗಳ ಹೃದಯಗಳಲ್ಲಿಯೂ ಸಾಕ್ಷಿಯಾಗಿ ನೆಲಸಿರುವುದರಿಂದ ನೀನು ಸರ್ವೇಶ್ವರನೆನಿಸಿರುವೆ. ಮತ್ತು ನಿರರ್ಗಳವಾದ ಜ್ಞಾನಶಕ್ತಿಯಿಂದ ಸರ್ವರಸಂಕಲ್ಪಗಳನ್ನೂ ತಿಳಿದಿರುವೆ ॥ ೨೪ ॥

ಆದರೂ ನಾನೀಗ, ನೀರೂಪನೆನಿಸಿರುವ ನಿನ್ನ ಸ್ಥೂಲಸೂಕ್ಷ್ಮ ರೂಪಗಳನ್ನು ಸರಿಯಾಗಿ ತಿಳಿಯುವಂತೆ,ಬೇಡುತ್ತಿರುವೆನಾದುದರಿಂದ ನನ್ನಕೋರಿಕೆಯನ್ನು ನೆರವೇರಿಸಿ ಸಲ

ಬಿಭ್ರದಾತ್ಮಾನ ಮಾತ್ಮನಾ ॥ ೨೬ ॥ ಕ್ರೀಡಸ್ಯ ಮೋಘ ಸಂಕಲ್ಪ !
ಊರ್ಣನಾಭಿ ರ್ಯಥೋರ್ಣುತೇ । ತಥಾ ತದ್ವಿಷಯಾಂ ಧೇಹಿ ಮನೀಷಾಂ
ಮಯಿ ಮಾಧವ ॥೨೭॥ ಭಗವಚ್ಛಿಕ್ಷಿತ ಮಹಂ ಕರವಾಣಿ ಹ್ಯತಂದ್ರಿತಃ।
ನೇಹಮಾನಃ ಪ್ರಜಾಸರ್ಗಂ ಬಧ್ಯೇಯಂ ಯದನುಗ್ರಹಾತ್ ॥ ೨೮ ॥
ಯಾವತ್ಸಖಾ ಸಖ್ಯುರಿವೇಶ ! ತೇ ಕೃತಃ ಪ್ರಜಾವಿಸರ್ಗೇ ವಿಭಜಾಮಿ
ಭೋ ! ಜನಂ । ಅವಿಕ್ಲಬ ಸ್ತೇ ಪರಿಕರ್ಮಣಿ ಸ್ಥಿತೋ ಮಾ ಮೇ ಸಮು

ಸಂಬಂಧದಿಂದ, ನಾನಾ...ತಂ, ನಾನಾ - ಅನೇಕಗಳಾದ, ಶಕ್ತಿ-ಶಕ್ತಿಗಳಿಂದ, ಉಪಬೃಂಹಿತಂ-ಕೂಡಿದ ಜಗತ್ತನ್ನು, ವಿಲುಂಪನ್-ಲಯಗೊಳಿಸುತ್ತಾ, ವಿಸೃಜನ್ - ನಾನಾವಿಧವಾಗಿ ಸೃಜಿಸುತ್ತಾ, ಬಿಭ್ರತ್-ಸಲಹುತ್ತಾ,ಆತ್ಮನಾ-ನಿನ್ನಿಂದಲೇ, ಆತ್ಮಾನಂ - ಬ್ರಹ್ಮಾದಿರೂಪವನ್ನು, ಗೃಹ್ಣನ್-ಅನುಗ್ರಹಿಸುತ್ತಾ, ಊರ್ಣನಾಭಿಃ - ಜಾಡರಹುಳು, ಯಥೋರ್ಣುತೆ - ಗೂಡನ್ನುಕಟ್ಟುವಂತೆ, ಯಥಾ-ಹೇಗೆ, ಕ್ರೀಡಸಿ-ಕ್ರೀಡಿಸುವೆಯೋ, ತಥಾ-ಹಾಗೆಯೇ, ತದ್ವಿಷಯಾಂ-ನಿನ್ನ ಕ್ರೀಡಾವಿಷಯವಾದ, ಮನೀಷಾಂ-ಬುದ್ಧಿಯನ್ನು, ಮಯಿ-ನನ್ನಲ್ಲಿ, ಧೇಹಿ-ದಯಪಾಲಿಸು ॥ ೨೬--೨೭ ॥

ಅಹಂ-ನಾನು, ಭಗವಚ್ಛಿಕ್ಷಿತಂ-ಭಗವಂತನ ಆಜ್ಞೆಯಂತೆ, ಅತಂದ್ರಿತಃ-ಎಚ್ಚರದಿಂದ, ಕರವಾಣಿ-ಸೃಷ್ಟಿಯನ್ನು ಮಾಡುವೆನು, ಆದರೆ,ಪ್ರಜಾಸರ್ಗಂ-ಪ್ರಜಾಸೃಷ್ಟಿಯನ್ನು,ಈಹಮಾನೋಪಿ-ಮಾಡಿದರೂ, ಯದನುಗ್ರಹಾತ್-ಯಾರಪ್ರಸಾದದಿಂದ,ನಬಧ್ಯೇಯಂ-ಬದ್ಧನಾಗುವುದಿಲ್ಲವೋ,ಅಂತಹನೀನುಅನುಗ್ರಹಿಸು॥ ಭೋಈಶ-ಎಲೈ ಪರಮೇಶ್ವರನೆ ! ಸಖ್ಯುಃ-ಮಿತ್ರನಿಂದ, ಸಖೇವ - ಮಿತ್ರನಂತೆ, ತೇ-ನಿನ್ನಿಂದ, ಕೃತಃ-ಮರ್ಯಾದೆಗೊಳಿಸಲ್ಪಟ್ಟನಾನು, ತೇ-ನಿನ್ನ, ಪರಿಕರ್ಮಣಿ-ಸೇವೆಯಲ್ಲಿ, ಅವಿಕ್ಲಬಃ-ಧೀರನಾಗಿ, ಸ್ಥಿತಃ-ನಿಂತು, ಯಾವತ್-ಎಲ್ಲಿಯವರೆಗೆ, ಜನಂ - ಪ್ರಜೆಗಳನ್ನು, ವಿಭಜಾಮಿ-ಉತ್ತಮಾಧಮ ಭೇಧದಿಂದ, ಸೃಜಿಸುವೆನೋ, ಅಲ್ಲಿಯವರೆಗೂ, ಅಜಮಾನಿನಃ-ಸೃಷ್ಟಿಕರ್ತನೆಂದು ತಿಳಿಯುವ, ಮೇ-ನನಗೆ, ಸಮು

ಹಬೇಕು ॥ ೨೫ ॥ ಮಾಯಾರೂಪಗಳಾದ ನಾನಾಶಕ್ತಿಗಳಿಂದ ಹಬ್ಬಿರುವ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ನಡೆಯಿಸುವುದಕ್ಕಾಗಿ, ಬ್ರಹ್ಮಾದಿರೂಪಗಳನ್ನು ತಳೆದು ನೀನೇ ಕ್ರೀಡಿಸುತ್ತಿರುವೆ ॥ ೨೬ ॥ ಜಾಡರಹುಳು ಗೂಡನ್ನು ಕಟ್ಟಿ ಅದರ ಮಧ್ಯದಲ್ಲಿ ನೆಲೆಗೊಳ್ಳುವಂತೆ ಸತ್ಯಸಂಕಲ್ಪನಾದ ನೀನು ನಿನ್ನ ಲೀಲೆಯಿಂದಲೇ ನಿರ್ಮಿತವಾದ ಜಗತ್ತಿನಲ್ಲಿ ನೀನೇ ರಮಿಸುತ್ತಿರುವೆ. ಎಲೈ ರಮಾಕಾಂತನೆ ! ಅದೇ ರೀತಿಯಾಗಿ ನನ್ನಲ್ಲಿ ಸೃಷ್ಟಿವಿಷಯಕರವಾದ ಬುದ್ಧಿಯನ್ನು ದಯಪಾಲಿಸು॥೨೭॥ ಎಲೈತಂದೆಯೇ ! ನೀನಾಜ್ಞಾಪಿಸಿದಂತೆ ಎಚ್ಚರದಿಂದ ಕಾರ್ಯಗಳನ್ನು ಮಾಡುತ್ತೇನೆ. ಆದರೆ, ನಿನ್ನಾಜ್ಞಾನುಸಾರವಾಗಿ ಉತ್ತಮ, ಮಧ್ಯಮ, ಅಧಮ ಭೇದದಿಂದ ಪ್ರಜಾಸೃಷ್ಟಿಯನ್ನು ಮಾಡುವವರೆಗಾದರೂ 'ನಾನೇಲೋಕಕರ್ತನು' ಎಂಬದುರಹಂಕಾರ ಕೊಳ್ಳಗಾಗದಂತೆ ನನ್ನನ್ನನುಗ್ರಹಿಸು ॥ ೨೮ ॥ ಎಲೈ ಸ್ವಾಮಿಯೆ ? ಲೌಕಿಕನಾದ ಸಖನು ತನ್ನ ಗೆಳೆಯನನ್ನು ಸಮ್ಮಾನಿಸುವಂತೆ, ನಿನ್ನಕರಗ್ರಹಣ ಮೊದಲಾದುವುಗಳಿಂದ ಬಹುಮಾನಗೊಂಡ ನಾನು ಪ್ರಜಾಸೃಷ್ಟಿರೂಪವಾದ ನಿನ್ನ ಊಳಿಗವನ್ನು

ನ್ನದ್ಧ ಮದೋಽಜ ಮಾನಿನಃ ॥೨೯॥ ಶ್ರೀ ಭಗವಾನ್॥ ಜ್ಞಾನಂ ಪರಮ
ಗುಹ್ಯಂ ಮೇ ಯದ್ವಿಜ್ಞಾನ ಸಮನ್ವಿತಂ । ಸರಹಸ್ಯಂ ತದಂಗಂಚ ಗೃಹಾಣ
ಗದಿತಂ ಮಯಾ ॥ ೩೦ ॥ ಯಾವಾನಹಂ ಯಥಾಭಾವೋ ಯದ್ರೂಪಗುಣ
ಕರ್ಮಕಃ । ತಥೈವ ತತ್ವ ವಿಜ್ಞಾನ ಮಸ್ತುತೇ ಮದನುಗ್ರಹಾತ್ ॥ ೩೧ ॥

ನ್ನದ್ಧಮದಃ-ಅಧಿಕವಾದ ಮದವು, ಮಾ-ಉಂಟಾಗ ಬೇಡ ॥ ೨೯ ॥ ಭಗವಂತನು ಹೇಳುತ್ತಾನೆ:— ಪರಮಗುಹ್ಯಂ - ಅತ್ಯಂತ ರಹಸ್ಯವಾದ, ವಿಜ್ಞಾನಸಮನ್ವಿತಂ - ಅನುಭವದಿಂದ ಕೂಡಿದ, ಸರಹಸ್ಯಂ-ಭಕ್ತಿಯಿಂದೊಡಗೂಡಿದ,।ಮೇ-ನನ್ನ, ಯದ್‌ಜ್ಞಾನಂ-ಯಾವಜ್ಞಾನವುಂಟೋ, ಅದೂ, ತದಂಗಂಚ-ಆಜ್ಞಾನಕ್ಕೆ ಅಂಗಗಳು ಯಾವವುಂಟೋ, ಅವು, ಮಯಾ - ನನ್ನಿಂದ, ಗದಿತಂ - ಹೇಳಲ್ಪಟ್ಟ, ಇವುಗಳನ್ನು ಗೃಹಾಣ-ಗ್ರಹಿಸು ॥ ೩೦ ॥ ಅಹಂ-ನಾನು, ಯಾವಾನ್-ಎಷ್ಟರವನೋ, ಯಥಾಭಾವಃ-ಎಂತಹ ಶಕ್ತಿಯುಳ್ಳವನೋ, ಯದ್ರೂ...ಕಃ, ಯದ್ರೂಪ - ಯಾವರೂಪಗಳು, ಗುಣಗಳು, ಕರ್ಮಗಳೂ ಉಳ್ಳವನೋ, ತಥೈವ-ಹಾಗೆಯೇ, ಮದನುಗ್ರಹಾತ್-ನನ್ನ ಅನುಗ್ರಹದಿಂದ, ತೇ - ನಿನಗೆ, ತತ್ವವಿಜ್ಞಾನಂ-ತತ್ವಜ್ಞಾನವು, ಅಸ್ತು-ಉಂಟಾಗಲಿ ॥ ೩೧ ॥ ಅಗ್ರೇ-ಸೃಷ್ಟಿಗಿಂತ ಮೊದಲು, ಅಹಮೇವ - ನಾನೇ, ಆಸಂ-ಇದ್ದೆನು, ಅನ್ಯತ್-ಬೇರೆಯಾದ, ಸತ್-ಸ್ಥೂಲವು, ಅಸತ್-ಸೂಕ್ಷ್ಮವು, ಪರಂ-ಇವುಗಳಿಗೆ ಕಾರಣವಾದ ಪ್ರಧಾನವು, ಯಾವುದೂ, ನ-ಇರಲಿಲ್ಲ, ಪಶ್ಚಾತ್-ಬಳಿಕ ಸೃಷ್ಟಿಯಾದಮೇಲೆ, ಯಚ್ಚ-ಯಾವುದುಂಟೋ, ಏತತ್-ಈಜಗತ್ತು, ಅಹಂ-ನಾನೇ, ಲಯವಾದಬಳಿಕ, ಯಃ-ಯಾವುದು, ಅವಶಿಷ್ಯತೇ-ನಿಲ್ಲುವುದೋ ಸಃ-ಅದು, ಹಅಮೇವ-ನಾನೇ, ಅಸ್ಮಿ - ಆಗಿರುವೆನು ॥ ೩೨ ॥ ಆಭಾಸೋಯಥಾ-ಎರಡು ಚಂದ್ರ ಬಿಂಬಗಳಂತೆಯೂ, ತಮೋಯಥಾ-ಕತ್ತಲೆಯಂತೆಯೂ, ಅರ್ಥಮೃತೇ-ನಿಜವಾದ ಪದಾ

ಬೇಸರಗೊಳ್ಳದೆ ಆದರದಿಂದ ನಡೆಯಿಸುವಂತೆಯೂ, 'ನಾನೇಲೋಕೇಶ್ವರನು' 'ನಾನೇ ಸ್ವತಂತ್ರನು' ಎಂದು ಹೆಮ್ಮೆಗೊಳ್ಳದಂತೆಯೂ ದಯೆಪಾಲಿಸು ॥ ೨೯ ॥

ಎಂದು ಬೇಡುತ್ತಿರುವ ಚತುರಾನನನನ್ನು ಕುರಿತು ಭಗವಂತನು ಹೇಳುತ್ತಾನೆ:- ಎಲೈವಿರಿಂಚನೆ ! ಪರಮರಹಸ್ಯವೂ, ಶಾಸ್ತ್ರಜ್ಞಾನಸಹಿತವೂ, ಅನುಭವದಿಂದೊಡಗೂಡಿದ ಭಕ್ತಿಯೋಗ ಯುಕ್ತವೂ ಆದ ಜ್ಞಾನಸ್ವರೂಪವನ್ನೂ, ಅದನ್ನು ಸಂಪಾದಿಸುವುದಕ್ಕೆತಕ್ಕ ಸಾಧನಗಳನ್ನೂ ಹೇಳುವೆನು ಕೇಳು ॥ ೩೦ ॥ 'ನಿನ್ನನ್ನು ಕಾಣುವುದಕ್ಕೇ ಅಸಮರ್ಥನಾದ ನಾನು ಜ್ಞಾನಕ್ಕೆಂತು ಅಧಿಕಾರಿಯಾಗುವೆನು?' ಎಂಬೆಯೇನೋ, ಆದರೆ ಮೊದಲು, ನನ್ನ ಸ್ವರೂಪವೆಂಥಾದ್ದೋ, ನನ್ನ ರೂಪಗಳು ಯಾವುವೋ, ಗುಣಗಳು ಯಾವುವೋ, ಕರ್ಮಗಳಾವುವೋ, ಇವುಗಳ ನಿಜತತ್ವವೆಲ್ಲವೂ, ನನ್ನ ಅನುಗ್ರಹದಿಂದ ನಿನಗೆ ಹೊಳೆಯಲಿ ॥೩೧॥ ಇನ್ನು ನನ್ನ ಸ್ವರೂಪವೆಂಥಾದ್ದೆಂಬುದನ್ನು ವಿವರಿಸುವೆನು ಕೇಳು, ಜಗತ್ಸೃಷ್ಟಿಗೆ ಮೊದಲೂ ನಾನೇ ಇದ್ದೆನು, ಸ್ಥೂಲಸೂಕ್ಷ್ಮರೂಪವಾದ ಪ್ರಪಂಚವೂ, ಅದಕ್ಕಿಂತ ಬೇರೆಯಾದ ಪ್ರಧಾನವೂ, ಸಹ ನನ್ನಲ್ಲಿಯೇ ಅಡಗಿದ್ದುದರಿಂದ ಆಗ ನನಗಿಂತಲೂ ಬೇರೆಯಾವುದೂ ಇರಲಿಲ್ಲ. ಸೃಷ್ಟಿಯಾದ ಬಳಿಕ ತೋರುವ ಪ್ರಪಂಚವೂ ನಾನೇ ಆಗಿರುವೆನು. ಪ್ರಳಯವಾದ ಬಳಿಕ ಉಳಿಯುವ ವಸ್ತುವೂ

ಮೂಲ ಭಾಗವತಂ.

*ಅಹ ಮೇವಾಸ ಮೇವಾಗ್ರೇ ನಾನ್ಯದ್ಯತ್ ಸದಸತ್ ಪರಂ । ಪಶ್ಚಾ

ರ್ಥವಿಲ್ಲದೆಯೇ, ಆತ್ಮನಿ-ಅಧಿಷ್ಠಾನವಾದ ಪರಮಾತ್ಮನಲ್ಲಿ ಯತ್ - ಯಾವುದು, ಪ್ರತೀಯೇತ - ತೋರುವುದೋ, ಸದಪಿ-ಇರುವುದಾದರೂ, ಯತ್-ಯಾವುದು, ನಪ್ರತೀಯೇತ-ತೋರುವುದಿಲ್ಲವೋ, ತತ್ - ಅದನ್ನು, ಆತ್ಮನಃ-ನನ್ನ ಮಾಯಾಂ-ಮಾಯೆಯನ್ನಾಗಿ, ವಿದ್ಯಾತ್-ತಿಳಿಯತಕ್ಕುದು ॥ ೩೩ ॥ ಮಹಾಂತಿ-ದೊಡ್ಡವುಗಳಾದ, ಭೂತಾನಿ-ಪೃಥಿವ್ಯಾದಿಭೂತಗಳು ಉಚ್ಚಾವಚೇಷು-ಹಲವು ಬಗೆಗಳಾದ, ಭೂತೇಷು-

---

ನಾನೇ. ಇಂತು ಆದ್ಯಂತಗಳಿಲ್ಲದೆ ಅದ್ವಿತೀಯನಾದುದರಿಂದ ಪರಿಪೂರ್ಣನಾಗಿರುವೆನು ॥ ೩೨ ॥ ನಾನು ಪ್ರಪಂಚರೂಪನಾಗುವುದಕ್ಕೆ ನಿಮಿತ್ತವಾದ ಮಾಯೆಯ ಸ್ವರೂಪವನ್ನು ಹೇಳುವೆನು ಕೇಳು. ಚಂದ್ರಮಂಡಲವು ಒಂದೇ ಆಗಿದ್ದರೂ ಬುದ್ಧಿಭ್ರಂಶದಿಂದಲೋ, ಅಥವಾ ದೃಷ್ಟಿದೋಷದಿಂದಲೋ, ಅದು ಎರಡಾಗಿ ಕಾಣುವಂತೆ, ಯಾವುದರಿಂದ ಮಿಥ್ಯಾ ಭೂತಗಳಾದದೇಹಾದಿಗಳು ಸತ್ಯವೆನಿಸಿದ ಪರಮಾತ್ಮನ ರೂಪವಾಗಿ ಕಾಣಬರುವುವೋ, ಅಲ್ಲದೆ ಕಗ್ಗತ್ತಲೆಯು ತುಂಬಿರುವ ಮನೆಯಲ್ಲಿ ಘಟ,ಪಟ, ಮೊದಲಾದ ಪದಾರ್ಥಗಳಿದ್ದರೂ ಕಾಣದೇ ಕತ್ತಲೆಯು ಮಾತ್ರವೇ ಕಾಣಬರುವಂತೆ, ಯಾವುದರಿಂದ ನಿತ್ಯ

---

* (೧) ಶ್ರೀನಾರಾಯಣಮೂರ್ತಿಯು ಬ್ರಹ್ಮನಿಗುಪದೇಶಿಸಿದ ೩೨, ೩೩, ೩೪, ೩೫, ಈ ನಾಲ್ಕು ಶ್ಲೋಕಗಳಿಗೂ ಮೂಲಭಾಗವತವೆಂದು ಹೆಸರು.

ವಿ. (೨) ಸೃಷ್ಟಿಗಿಂತಮೊದಲು ಚೇತನಾಚೇತನ ವಿಲಕ್ಷಣನಾಗಿಯೂ, ಸೃಷ್ಟಿಕಾಲದಲ್ಲಿ, ಜಗದ್ರೂಪನಾಗಿಯೂ, ಸಂಹಾರದಲ್ಲಿ ಉಳಿಯತಕ್ಕ ವಸ್ತುವಾಗಿಯೂ ಇರುವವನು ನಾನೇ. ಎಂದರೆ ಪರಮಾತ್ಮನು ಕಾರಣಾವಸ್ಥೆಯಲ್ಲಿರುವಾಗ ನಾಮರೂಪ ವಿಭಾಗವುಳ್ಳ ಪ್ರಕೃತಿಯು ಆತನಿಗೆ ಶರೀರವೆನಿಸಿರುವುದು. ಆತನು ಕಾರ್ಯಾವಸ್ಥೆಯಲ್ಲಿರುವಾಗ ನಾಮರೂಪ ವಿಭಾಗವುಳ್ಳ ಪ್ರಕೃತಿಪುರುಷರು ಶರೀರವೆನಿಸಿರುವರು. ಇಂತಿದ್ದರೂ, ಶರೀರಗತಗಳಾದ ಬಾಲ್ಯ, ಯೌವನ ಮೊದಲಾದ ವಿಕಾರಗಳಿಗೆ ಜೀವನುಸಂಬಂಧಿಸದಿರುವಂತೆಯೇ, ಆ ಪರಮಾತ್ಮನು ತನಗೆ ಶರೀರವೆನಿಸಿರುವ ಚೇತನಾಚೇತನಗಳಲ್ಲುಂಟಾದ, ಅಜ್ಞಾನ, ದುಃಖ, ಪರಿಣಾಮ, ಜಡತ್ವ, ಕರ್ಮವಶತ್ವ, ಮೊದಲಾದ ವಿಕಾರಗಳಿಗೆ, ಒಳಪಡುವುದಿಲ್ಲವಾದುದರಿಂದ ಭಗವಂತನು ಸದಸದ್ವಿಲಕ್ಷಣನೆಂಬುದರಲ್ಲಿ ಸಂಶಯವಿಲ್ಲ. ಈಮತಾನುಸಾರವಾಗಿ ಆತ್ಮ, ಜೀವ, ಪ್ರಕೃತಿಗಳೆಂಬ ಮೂರು ತತ್ವಗಳೂ ನಿತ್ಯಗಳೆಂದು ಸಿದ್ಧಾಂತವು.

ವಿ. (೩) ಸೃಷ್ಟ್ಯಾದಿಯಲ್ಲಿಯೂ, ಪ್ರಳಯದಲ್ಲಿಯೂ ಕೂಡ, ನಾನು, ಮತ್ತು ಕಾಲ,ಪ್ರಕೃತಿ ಮೊದಲಾದುವೂ ಇದ್ದುವು. ಆದರೆ ಪ್ರಳಯದಲ್ಲಿ ಕಾಲ, ಪ್ರಕೃತಿಮುಂತಾದುವು ನನಗಿಂತಲೂ ಬೇರೆಯಾಗಿದ್ದುವು. ಆದರೂ ಅವು ಮಾಯಾವೃತವಾಗಿ ನನಗಧೀನಗಳಾಗಿದ್ದುವೇ ಹೊರತು ಸ್ವತಂತ್ರಗಳಾಗಿರಲಿಲ್ಲ. ಬಳಿಕ ಸ್ಥಿತಿಕಾಲದಲ್ಲಂತೂ ಈ ಜಗತ್ತು ನಾನೇ ಆಗಿರುವೆನು, ಅದುದರಿಂದ ಕಾಲತ್ರಯದಲ್ಲಿಯೂ ನಾನೇ ಸ್ವತಂತ್ರನು, ನೀನು ಮೊದಲಾಗಿ ಎಲ್ಲರೂ ನನಗಧೀನರು, ಎಂದು ಭಾವವು. ಈಮತಾನುಸಾರ ಈಶ್ವರನು ಸ್ವತಂತ್ರತತ್ವವು. ಜೀವ, ಪ್ರಕೃತಿ, ಮೊದಲಾದವು ಅಸ್ವತಂತ್ರತತ್ವಗಳು.

ದರ್ಶಂ ಯದೇತಚ್ಚ ಯೋಽವಶಿಷ್ಯೇತ ಸೋಽಸ್ಮ್ಯಹಂ ॥೩೨॥ *ಋತೇ
ಽರ್ಥಂ ಯತ್ಪ್ರತೀಯೇತ ನಪ್ರತೀಯೇತ ಚಾತ್ಮನಿ।ತದ್ವಿದ್ಯಾ ದಾತ್ಮನೋ
ಮಾಯಾಂ ಯಥಾ ಭಾಸೋ ಯಥಾತಮಃ ॥ ೩೩ ॥ †ಯಥಾ ಮಹಾಂತಿ
ಭೂತಾನಿ ಭೂತೇಷೂಚ್ಚಾವ ಚೇಷ್ವನು ! ಪ್ರವಿಷ್ಟಾನ್ಯ ಪ್ರವಿಷ್ಟಾನಿ ತಥಾ

ಪ್ರಾಣಿಗಳಲ್ಲಿ, ಅನು-ಸೃಷ್ಟ್ಯನಂತರದಲ್ಲಿ, ಯಥಾ-ಹೇಗೆ, ಪ್ರವಿಷ್ಟಾನಿ-ಪ್ರವೇಶಿಸಿದವುಗಳು, ಅಪ್ರವಿಷ್ಟಾನಿ ನಿಜ-ಪ್ರವೇಶಿಸದೆ ಇರುವುವೂ ಆಗಿರುವುವೋ, ತಥಾ-ಹಾಗೆ, ಅಹಂ-ನಾನು, ಭೂತೇಷು - ಆಪ್ರಾಣಿಗಳಲ್ಲಿ,

---

ಪ್ರಕಾಶವಾದ ಪರಮಾತ್ಮ ವಸ್ತುವು ಹೊಳೆಯುತ್ತಿದ್ದರೂ, ಗೋಚರವಾಗದೆ, ದೇಹಾದಿಗಳಿಗಿಂತಭಿನ್ನವಾದ ಆತ್ಮನೇ ಇಲ್ಲವೆಂದು ತೋರುತ್ತಿರುವುದೋ, ಅದೇ ನನ್ನಮಾಯೆಯು.

---

* (೧)ಭಾ. ಮಾಯೆಯಲ್ಲಿ ಆವರಣ, ವಿಕ್ಷೇಪಗಳೆಂಬ ಎರಡು ಶಕ್ತಿಗಳುಂಟು.ಅವುಗಳಲ್ಲಿ ಸ್ವರೂಪವನ್ನು ಮರೆಮಾಡುವುದು ಆವರಣಶಕ್ತಿಯು.ಶರೀರದಲ್ಲಿಆತ್ಮಾಭಿಮಾನವನ್ನುಂಟುಮಾಡುವುದು ವಿಕ್ಷೇಪಶಕ್ತಿಯು.

(೨) ವೀ. ಬೆಳಕಿನಲ್ಲಿ ಕತ್ತಲೆಯೂ, ಕತ್ತಲೆಯಲ್ಲಿ ಬೆಳಕೂ, ಕಾಣದಿರುವಂತೆ ಪರಸ್ಪರ ವಿರುದ್ಧಗಳಾಗಿ ಪ್ರಕೃತ್ಯನು ಸಂಧಾನಕಾಲದಲ್ಲಿ ಆತ್ಮಸ್ವರೂಪವೂ, ಆತ್ಮಾನು ಸಂಧಾನಕಾಲದಲ್ಲಿ ಪ್ರಕೃತಿಸ್ವರೂಪವೂ ತೋರದಿರುವುದೇ ಮಾಯೆಯು.

(೩) ವಿ. ಈಶ್ಲೋಕದಲ್ಲಿ ಅಸ್ವತಂತ್ರತತ್ವವೆನಿಸಿದಮಾಯೆಯಸ್ವರೂಪವುತಿಳಿಸಲ್ಪಡುವುದು.ಪರಮಾತ್ಮನಿಗೆ ಪ್ರತಿಬಿಂಬವೆನಿಸಿದ ಜೀವನೂ, ತಮಸ್ಸು, ಗ್ಲಾನಿ, ಮೋಹ ಇವುಗಳಿಗೆ ಕಾರಣವಾದ ಮೂಲಪ್ರಕೃತಿಯೂ, ಇವುಗಳಿಗೆ ಮಾಯೆಯೆಂದು ಹೆಸರೇ ಹೊರತು ಮಾಯೆಯೆಂಬುದು ಇಂದ್ರಜಾಲವಲ್ಲ. ಛತ್ರಚಾಮರಾದಿಗಳನ್ನು ಹಿಡಿಯುವವರು ರಥದಲ್ಲಿದ್ದರೂ ಎಂತು ರಥಿಕರೆನಿಸಿಕೊಳ್ಳಲಾರರೋ,ಅಂತೆಯೇ ಜೀವ, ಪ್ರಕೃತಿ, ಕರ್ಮ, ಕಾಲಾದಿಗಳು ಭಗವಂತನಲ್ಲಿಯೇ ಇದ್ದರೂ, ತಮ್ಮ ಶಕ್ತಿಗಳಿಗೆ ಆತನು ಒಳಪಡುವುದಿಲ್ಲವಾದುದರಿಂದ ಭಗವಂತನಲ್ಲಿರುವುವೆಂದು ಹೇಳಿಸಿಕೊಳ್ಳಲಾರವು. ಆದುದರಿಂದ ಪೂರ್ಣಕಾಮನಾದ ಭಗವಂತನ ಪ್ರಯೋಜನಕ್ಕಲ್ಲದೆಯೇ ಎಲ್ಲೆಲ್ಲಿಯೂ ಕಾಣಬರುವ ಪ್ರಕೃತ್ಯಾದಿಗಳಿಗೆ ಮಾಯೆಯೆಂದುಹೆಸರು. ಪ್ರ.ಶ್ಲೋ. ಮುಖ್ಯತೋವಿಷ್ಣು ಶಕ್ತಿರ್ಹಿ ಮಾಯಾಶಬ್ದೇನ ಭಣ್ಯತೇ।ಉಪಚಾರತಸ್ತು ಪ್ರಕೃತಿ ಜೀವಶ್ಚೈವಹಿ ಭಣ್ಯತೇ. ಮತ್ತು ಸರ್ವಂ ಪರೇಸ್ಥಿತಮಪಿ ನೈವ ತತ್ರೇತಿ ಭಣ್ಯತೇ॥

† ವೀ. ಪಂಚಮಹಾಭೂತಗಳು ಭೌತಿಕವಸ್ತುಗಳಲ್ಲಿ ವ್ಯಾಪಿಸಿದ್ದರೂ,ಹೊರಗೂ ತುಂಬಿರುವಂತೆ ನಾನು ಎಲ್ಲೆಲ್ಲಿಯೂ ವ್ಯಾಪಿಸಿರುವುದರಿಂದ ಅಪರಿಚ್ಛಿನ್ನನಾಗಿರುವೆನು. ಎಂಬುದರಿಂದ ಭಗವತ್ಸ್ವರೂಪವು ಅಪರಿಚ್ಛಿನ್ನವೆಂದುಹೇಳಿದಂತಾಯಿತು,ಶ್ಲೋ॥'ಅಹಮೇವ'ಎಂಬುದರಿಂದಭಗವಂತನು ಸದಸದ್ವಿಲಕ್ಷಣನು,ಸರ್ವಜ್ಞನು, ಸರ್ವಶಕ್ತಿಯು ಎಂದು ಸೂಚಿಸಿದಂತಾಯಿತು ೩೩ ‹ಋತೇರ್ಥಂ› ಎಂಬುದರಿಂದ ಪರಮಾತ್ಮನಿಗೆ ಪರಸ್ಪರ ವಿಲಕ್ಷಣಗಳಾದ ಚೇತನಾಚೇತನಗಳೇ ಶರೀರವೆಂದು ಬೋಧಿಸಿದಂತಾಯಿತು, (೩೪) ತಥಾತೇಷು॥ ಶರೀರಗತಗಳಾದ ಬಾಲ್ಯಯೌವ್ವನಾದಿಗಳು ಜೀವಗುಣಗಳೆನಿಸುವಂತೆ ನನಗೆ ಶರೀರವೆನಿಸಿದ ಚೇತನಾಚೇತನ ಗುಣಗಳು ನನ್ನ ಗುಣಗಳೇ ಆಗಿರುವುವು ಎಂಬುದರಿಂದ ಸಗುಣನೆಂದು ರೂಪಿಸಿದಂತಾಯಿತು. ಮತ್ತು ‹ಅಹಮೇವಾಸಂ› ಎಂಬುದರಿಂದ ಜಗತ್ಸೃಷ್ಟಿ, ಪಾಲನ, ಸಂಹಾರ, ಮೊದಲಾದುವು ಭಗವತ್ಕರ್ಮಗಳೆಂದೂ ವಿವರಿಸಿದಂತಾಯಿತು.

ತೇಷು ನತೇಷ್ವಹಂ ॥ ೩೪ ॥ *ಏತಾವದೇವ ಜಿಜ್ಞಾಸ್ಯಂ ತತ್ವಜಿಜ್ಞಾಸು
ನಾತ್ಮನಃ । ಅನ್ವಯ ವ್ಯತಿರೇಕಾಭ್ಯಾಂ ಯತ್ಸ್ಯಾತ್ ಸರ್ವತ್ರ ಸರ್ವದಾ॥
ಏತ ನ್ಮತಂ ಸಮಾತಿಷ್ಠ ಪರಮೇಣ ಸಮಾಧಿನಾ । ಭವಾನ್ ಕಲ್ಪವಿಕ
ಲ್ಪೇಷು ನವಿಮುಹ್ಯತಿ ಕರ್ಹಿಚಿತ್‡ ॥೩೬॥ ಶ್ರೀ ಶುಕಃ॥ ಸಂಪ್ರದಿಶ್ಯೈವ

ಪ್ರವೇಶಿಸಿರುವೆನು, ತೇಷು-ಅವುಗಳಲ್ಲಿ ನ-ಪ್ರವೇಶಿಸಿಯೂ ಇಲ್ಲ ॥ ೩೪ ।
ಅನ್ವ...ಭ್ಯಾಂ, ಅನ್ವಯ-ಅನ್ವಯವೆಂಬ, ವ್ಯತಿರೇಕ-ವ್ಯತಿರೇಕವೆಂಬ ವ್ಯಾಪ್ತಿಗಳಿಂದ, ಯತ್-ಯಾವುದು ಸರ್ವತ್ರ-ಎಲ್ಲೆಲ್ಲಿಯೂ, ಸರ್ವದಾ-ಯಾವಾಗಲೂ, ಸ್ಯಾತ್-ಇರುವುದೋ ತತ್-ಅದೇ ಆತ್ಮವು,

ಎಂದು ತಿಳಿ ॥ ೩೩ ॥ ಪೃಥಿವ್ಯಾದಿ ಮಹಾ ಭೂತಗಳು, ತಮ್ಮಿಂದ ಜನಿಸಿದ ಶರೀರಾದಿಗಳಿಗೆ ಕಾರಣಗಳೆನಿಸಿಕೊಂಡಿದ್ದರೂ, ತನ್ಮಯಗಳಾಗಿ ಪ್ರವೇಶಿಸಿರುವಂತೆ, ನಾನು ಆ ಮಾಯಾಜನ್ಯಗಳಾದ ಸಕಲಭೂತಗಳಲ್ಲಿಯೂ ತನ್ಮಯನಾಗಿ ಪ್ರವೇಶಿಸಿರುವಹಾಗೆ, ಕಂಡು ಬರುವೆನೇ ಹೊರತು ಅವುಗಳಿಗೆ ಕಾರಣರೂಪನಾಗಿ ಮೊದಲೇ ಇರುವೆನು ॥ ೩೪ ॥

ಬಂಗಾರವು ಕುಂಡಲಾದಿಗಳಲ್ಲಿ ಕಾರಣರೂಪವಾಗಿರುವಂತೆ, ಸಕಲ ಜಗತ್ತಿನಲ್ಲಿಯೂ ಪರಮಾತ್ಮನು ಉಪಾದಾನಕಾರಣರೂಪವಾಗಿರುವುದೇ ಅನ್ವಯವ್ಯಾಪ್ತಿಯು. ಕಾರ್ಯ ಪ್ರಪಂಚವಿಲ್ಲದಿರುವಾಗ, ನಿರ್ವಿಕಾರನಾಗಿ ಅವಿಕೃತಸುವರ್ಣದಂತೆ ಸ್ವ

* ವೀ॰ ಪರಸ್ಪರವಾಗಿ ಬೇರೆಯಾಗಿರುವ ಸ್ವಭಾವವುಳ್ಳ ಚಿದಚಿತ್ತುಗಳಿಗೆ ಅಂತರಾತ್ಮಭೂತವಾದ ಭಗವತ್ಸ್ವರೂಪವನ್ನೇ ವಿಚಾರಿಸಿ ತಿಳಿಯಬೇಕೆಂದು ಭಾವವು

ವಿ. ಸರ್ವಜ್ಞವೆನಿಸಿದ ಯಾವವಸ್ತುವು ಸರ್ವದೇಶ, ಸರ್ವಕಾಲಗಳಲ್ಲಿಯೂ ವ್ಯಾಪಿಸಿಕೊಂಡು ಏಕಪ್ರಕಾರವಾಗಿ ಗುಣಕ್ರಿಯಗಳಿಂದ ವ್ಯಾಪ್ತವಾಗಿರುವುದೋ, ಅದೇ ಪರಮಾತ್ಮ ತತ್ವವೆಂದು ತಿಳಿಯಬೇಕು

‡ ದೀ. 'ಶ್ರೇಯಸ್ಕಾಮರಾದವರು ಸ್ವಪ್ರಕಾಶರೂಪವೂ, ಜಗತ್ಕಾರಣವೂ, ನಿತ್ಯಸಿದ್ಧವೂ, ಆದ ತತ್ವವನ್ನು ವಿಚಾರಿಸಿ ತಿಳಿಯಬೇಕು' ಎಂಬುದೇ ಈ ಚತುಶ್ಶ್ಲೋಕೀ ಭಾಗವತದಮುಖ್ಯತಾತ್ಪರ್ಯವು. ಈಶ್ಲೋಕಚತುಷ್ಟಯದಿಂದ ಭಾಗವತಾರ್ಥವೆಲ್ಲವೂ ಸಂಗ್ರಹವಾಗಿ ಸೂಚಿಸಲ್ಪಟ್ಟಿರುವುದು. ಎಂತೆಂದರೆ:—(ಶ್ಲೋ, ೩೨) 'ಅಹಮೇವಾ ಸಮೇವಾಗ್ರೇ', ಎಂಬುದರಿಂದ ಭಾಗವತಪ್ರತಿಪಾದ್ಯವಾದ ತತ್ವವು ಸರ್ವಕ್ಕೂ ಕಾರಣವೆಂಬುದನ್ನು ಮಾತ್ರವೇ ಅಲ್ಲದೆ, ೧ನೆಯಸ್ಕಂಧದ ಅರ್ಥವನ್ನೂ ಸೂಚಿಸಿದಂತಾಗುವುದು 'ಪಶ್ಚಾದಹಂ' ಎಂಬುದರಿಂದ ೨-೩ನೆಯಸ್ಕಂಧಗಳಲ್ಲಿ ವಿವರಿಸುವ ಪುರುಷಪ್ರಧಾನಾದಿಗಳನ್ನು ಸೂಚಿಸಿದಂತಾಗುವುದು. 'ಯದೇತಚ್ಚ' ಎಂಬುದರಿಂದ, ೪-೫-೬-೭-೮ನೆಯಸ್ಕಂಧಗಳಲ್ಲಿ ವಿವರಿಸುವ, ಸೃಷ್ಟಿ, ಸ್ಥಿತಿ, ಭಗವಲ್ಲೀಲೆ, ಮನ್ವಂತರಾದಿಕಥೆ, ಇವುಗಳನ್ನು ತಿಳಿಸಿದಂತಾಗುವುದು. 'ಯೋವಶಿಷ್ಯೇತ ಸೋಸ್ಮ್ಯಹಂ' ಎಂಬುದರಿಂದ ೧೦ ನೆಯ ಸ್ಕಂಧದಲ್ಲಿ ಹೇಳುವ ನಿರೋಧವನ್ನು ಬೋಧಿಸಿದಂತಾಗುವುದು, (ಶ್ಲೋ, ೩೩) 'ಋತೇರ್ಥಂ' ಎಂಬುದರಿಂದ ಭಾಗವತದ ಆ ಆ ಸಂದರ್ಭಗಳಲ್ಲಿಯೂ ಪ್ರಥಮಸ್ಕಂಧದಲ್ಲಿಯೂ ಪ್ರತಿಪಾದಿಸುವಂತೆ ಮಾಯೆಯಿಂದ ಜಗತ್ಸೃಷ್ಟಿ, ಜೀವರಿಗೆ ಸಂಸಾರಪ್ರಾಪ್ತಿ, ಜೀವೇಶ್ವರ ವಿಭಾಗ, ಈ ಸಂಗತಿಗಳನ್ನು ತಿಳುಹಿದಂತಾಗುವುದು. (ಶ್ಲೋ, ೩೪) 'ಯಥಾಮಹಾಂತಿ' ಎಂಬುದರಿಂದ ೬ನೆಯಸ್ಕಂಧದಲ್ಲಿಹೇಳುವ ಪೋಷಣವನ್ನು ಸೂಚಿಸಿದಂತಾಗುವುದು. (ಶ್ಲೋ, ೩೫) 'ಏತಾವದೇವ' ಎಂಬುದರಿಂದ ೧೧ ನೆಯಸ್ಕಂಧದಲ್ಲಿ ನಿರೂಪಿಸುವಮುಕ್ತಿಯನ್ನು ವಿವರಿಸಿದಂತಾಗುವುದು. ಆದುದರಿಂದ ಇದೇ ಮೂಲಭಾಗವತವು

ಮಜನೋ ಜನಾನಾಂ ಪರಮೇಷ್ಠಿನಂ । ಪಶ್ಯತ ಸ್ತಸ್ಯ ತದ್ರೂಪ ಮಾತ್ಮನೋ ನ್ಯರುಣ ದ್ಧರಿಃ ॥ ೩೭ ॥ ಅಂತರ್ಹಿತೇಂದ್ರಿಯಾರ್ಥಾಯ ಹರಯೇ ವಿಹಿತಾಂಜಲಿಃ । ಸರ್ವಭೂತಮಯೋ ವಿಶ್ವಂ ಸಸರ್ಜೇದಂ ಸಪೂರ್ವವತ್ ॥೩೮॥ ಪ್ರಜಾಪತಿ ರ್ಧರ್ಮಪತಿ ರೇಕದಾ ನಿಯಮಾನ್ ಯಮಾನ್।

ಆತ್ಮನಃ-ಆತ್ಮನ, ತತ್ವಜಿಜ್ಞಾಸುನಾ-ತತ್ವವನ್ನು ತಿಳಿಯಲೆಳಸುವವನಿಂದ,ಏತಾವದೇವ,ಇಷ್ಟೇ ಜಿಜ್ಞಾಸ್ಯಂ-ವಿಚಾರಿಸಲ್ಪಡತಕ್ಕುದು॥೩೫॥ಪರಮೇಣ-ಉತ್ತಮವಾದ, ಸಮಾಧಿನಾ-ಚಿತ್ತೈಕಾಗ್ರ್ಯದಿಂದ, ಏತತ್-ಈ ಮತಂ-ಉಪದೇಶವನ್ನು. ಸಮಾತಿಷ್ಠ-ಆಚರಿಸು, ಭವಾನ್ - ನೀನು, ಕಲ್ಪ...ಷು, ಕಲ್ಪ - ಕಲ್ಪಗಳ, ವಿಕಲ್ಪೇಷು-ವಿವಿಧ ಸೃಷ್ಟಿಗಳಲ್ಲಿ, ಅಥವಾ ಸೃಷ್ಟಿ ಸಂಹಾರಗಳಲ್ಲಿ, ಕರ್ಹಿಚಿತ್-ಯಾವಾಗಲೂ, ನವಿಮುಹ್ಯತಿ-ಮರುಳಾಗುವುದಿಲ್ಲ ॥ ೩೬ ॥ ಶುಕನು ಹೇಳುತ್ತಾನೆ:—ಅಜಃ-ಜನ್ಮವಿಲ್ಲದ ಭಗವಂತನು, ಜನಾನಾಂ-ಜನರಲ್ಲಿ, ಪರಮೇಷ್ಠಿನಂ-ಉತ್ತಮಾಧಿಪತ್ಯವನ್ನು ಪಡೆದ ಬ್ರಹ್ಮನನ್ನು ಕುರಿತು, ಏವಂ - ಇಂತು, ಸಂಪ್ರದಿಶ್ಯ - ಉಪದೇಶಿಸಿ, ತಸ್ಯ - ಆಬ್ರಹ್ಮನು, ಪಶ್ಯತಃ - ನೋಡುತ್ತಿರುವಾಗಲೇ, ಹರಿಃ-ಆಹರಿಯು, ಆತ್ಮನಃ-ತನ್ನ, ತತ್-ಆ, ರೂಪಂ-ರೂಪವನ್ನು, ನ್ಯರುಣತ್-ಮರೆಗೊಳಿಸಿದನು ॥ ೩೭ ॥

ಸರ್ವಭೂತಮಯಃ-ಸಕಲಭೂತಗಳಲ್ಲಿಯೂ ಉತ್ತಮನಾದ, ಸಃ-ಆಬ್ರಹ್ಮನು, ಅಂತ...ಯ, ಅಂತರ್ಹಿತ-ಮಾಯವಾದ, ಇಂದ್ರಿಯಾರ್ಥಾಯ-ರೂಪವುಳ್ಳ, ಹರಯೇ-ಭಗವಂತನಿಗೆ, ವಿಹಿತಾಂಜಲಿಃ-ಕೈಮುಗಿದು, ಪೂರ್ವವತ್ - ಹಿಂದಣ ಕಲ್ಪದಂತೆಯೇ, ಇದಂವಿಶ್ವಂ-ಈ ಜಗತ್ತನ್ನು ಸಸರ್ಜ - ಸೃಜಿಸಿದನು ॥ ೩೮ ॥ ಧರ್ಮಪತಿಃ-ಭಾಗವತಧರ್ಮಗಳನ್ನು ಪ್ರಚಾರಗೊಳಿಸಿ ಕಾಪಾಡುವ, ಪ್ರಜಾಪತಿಃ-ಬ್ರಹ್ಮನು, ಏಕದಾ-ಒಮ್ಮೆ, ಪ್ರಜಾನಾಂ-ಪ್ರಜೆಗಳ, ಭದ್ರಂ-ಕ್ಷೇಮವನ್ನು, ಅನ್ವಿಚ್ಛನ್ - ಆಲೋಚಿ

ಸ್ವರೂಪದಿಂದಿರುವುದೇ ವ್ಯತಿರೇಕ ವ್ಯಾಪ್ತಿಯು. ಇಂತು ಅನ್ವಯವ್ಯತಿರೇಕಗಳಿಂದ ಜಾಗ್ರದಾದ್ಯವಸ್ಥೆಗಳಲ್ಲಿ ಸಾಕ್ಷಿಯಾಗಿಯೂ, ಸಮಾಧಿ ಮೊದಲಾದವುಗಳಲ್ಲಿ ವಿವಿಕ್ತವಾಗಿಯೂ,ಸರ್ವದೇಶಸರ್ವಕಾಲಗಳಲ್ಲಿಯೂ ಇರುವ ತತ್ವವೇ ಆತ್ಮವೆಂದರಿಯಬೇಕು. ಆತ್ಮಸ್ವರೂಪವನ್ನು ತಿಳಿಯಲೆಳಸುವವನು ವಿಚಾರಿಸಬೇಕಾದುದಿಷ್ಟೇ. ॥ ೩೫ ॥ ಅಯ್ಯಾ ಪುತ್ರನೆ ! ಸಾವಧಾನ ಮನಸ್ಕನಾಗಿ ನಾನು ಹೇಳಿದಂತೆ ನಡೆಯಿಸು. ಯಾವ ಕಲ್ಪದಲ್ಲಿಯಾಗಲಿ,ಎಂತಹ ವಿಚಿತ್ರಸೃಷ್ಟಿಯಲ್ಲಾಗಲಿ, ಎಂದಿಗೂ ನೀನು ಮರುಳಾಗುವುದಿಲ್ಲ॥೩೬॥ ಶುಕಮುನಿಯು ಹೇಳುತ್ತಾನೆ:—ಅಯ್ಯಾ ಪರೀಕ್ಷಿನ್ಮಹೀಪತಿಯೆ ? ಇಂತು ಆ ನಾರಾಯಣಮೂರ್ತಿಯು, ಸಕಲ ಭೂತ ಪಿತಾಮಹನಾದ ಬ್ರಹ್ಮದೇವನಿಗೆ ಉಪದೇಶವನ್ನು ಮಾಡಿ, ಬಳಿಕ ಆತನು ನೋಡುತ್ತಿರುವಾಗಲೇ, ತನ್ನ ರೂಪವನ್ನು ಮರೆಗೊಳಿಸಿದನು ॥ ೩೭ ॥ ಆಗ ಬ್ರಹ್ಮದೇವನು ತನಗೆ ಪ್ರತ್ಯಕ್ಷವಾಗಿದ್ದ ರೂಪವನ್ನು ಅಂತರ್ಧಾನಗೊಳಿಸಿದ ಪರಮಾತ್ಮನನ್ನು ಬದ್ಧಾಂಜಲಿಯಾಗಿ ನಮಿಸಿ, ಆತನ ಅನುಗ್ರಹದಿಂದ ಪೂರ್ವಕಲ್ಪದಂತೆಯೇ ಮರಳಿ ಈ ಜಗತ್ತನ್ನು ಸೃಷ್ಟಿಸಿದನು ॥ ೩೮ ॥

ಅನಂತರದಲ್ಲಿ ಭಾಗವತ ಧರ್ಮಗಳನ್ನು ಪ್ರಚಾರಗೊಳಿಸಿ ಪಾಲಿಸುವ ಆ ಚತುರ್ಮುಖನು, ಒಂದಾನೊಂದು ಕಾಲದಲ್ಲಿ ತನ್ನಿಂದ ಸೃಷ್ಟರಾದ ಪ್ರಜೆಗಳು ನೆಮ್ಮದಿ

ಭದ್ರಂ ಪ್ರಜಾನಾ ಮನ್ವಿಚ್ಛನ್ನಾತಿಷ್ಠ ತ್ಸ್ವಾರ್ಥಕಾಮ್ಯಯಾ ॥೩೯॥ ತಂ ನಾರದಃ ಪ್ರಿಯತಮೋ ರಿಕ್ಥಾದಾನಾ ಮನುವ್ರತಃ । ಶುಶ್ರೂಷಮಾಣ ಶ್ಶೀಲೇನ ಪ್ರಶ್ರಯೇಣ ದಮೇನಚ ॥ ೪೦ ॥ ಮಾಯಾಂ ವಿವಿದಿಷ ನ್ವಿಷ್ಣೋ ರ್ಮಾಯೇಶಸ್ಯ ಮಹಾಮುನಿಃ । ಮಹಾಭಾಗವತೋ ರಾಜನ್! ಪಿತರಂ ಪರ್ಯತೋಷಯತ್ ॥ ೪೧ ॥ ತುಷ್ಟಂ ನಿಶಾಮ್ಯ ಪಿತರಂ ಲೋಕಾನಾಂ ಪ್ರಪಿತಾಮಹಂ । ದೇವರ್ಷಿಃ ಪರಿಪಪ್ರಚ್ಛ ಭವಾನ್ ಯನ್ಮಾ ಽನುಪೃಚ್ಛತಿ ॥ ೪೨ ॥ ತಸ್ಮಾ ಇದಂ ಭಾಗವತಂ ಪುರಾಣಂ *ದಶ

ಸುತ್ತಾ, ಸ್ವಾರ್ಥಕಾಮ್ಯಯಾ - ಸ್ವಪ್ರಯೋಜನೇಚ್ಛೆಯಿಂದ, ಯಮಗಳನ್ನು, ನಿಯಮಾನ್ - ನಿಯಮಗಳನ್ನು, ಆತಿಷ್ಠತ್ - ಅವಲಂಬಿಸಿದನು ॥ ೩೯ ॥ ರಿಕ್ಥಾದಾನಾಂ, ರಿಕ್ಥ-ಧನವನ್ನು, ಅದಾನಾಂ-ಅನುಭವಿಸುವ ಮಕ್ಕಳಲ್ಲಿ, ಪ್ರಿಯತಮಃ-ಅತ್ಯಂತಪ್ರಿಯನಾದ, ನಾರದಃ-ನಾರದಮುನಿಯು, ಶುಶ್ರೂಷಮಾಣಃ-ಕೇಳಲೆಳಸಿ,, ಶೀಲೇನ-ಒಳ್ಳೆಯನಡವಳಿಯಿಂದಲೂ, ಪ್ರಶ್ರಯೇಣ-ವಿನಯದಿಂದಲೂ, ದಮೇನ-ಬಹಿರಿಂದ್ರಿಯ ನಿಗ್ರಹದಿಂದಲೂ, ಚ-ಅಂತರಿಂದ್ರಿಯನಿಗ್ರಹದಿಂದಲೂ, ಅನುವ್ರತಃ-ಸೇವಿಸಿದನು ॥೪೦॥

ಹೇರಾಜನ್-ಎಲೈ ಪರೀಕ್ಷಿತನೇ.! ಮಹಾಭಾಗವತಃ-ಭಕ್ತಾಗ್ರಣಿಯಾದ, ಮಹಾಮುನಿಃ - ನಾರದಮುನಿಯು, ಮಾಯೇಶಸ್ಯ-ಮಾಯಾನಿಯಾಮಕನಾದ, ವಿಷ್ಣೋಃ-ವಿಷ್ಣುವಿನ, ಮಾಯಾಂ - ಮಾಯೆಯನ್ನು, ವಿವಿದಿಷನ್ - ತಿಳಿಯಬೇಕೆಂದು, ಪಿತರಂ - ತಂದೆಯಾದ ಪಿತಾಮಹನನ್ನು, ಪರ್ಯತೋಷಯತ್ - ಮೆಚ್ಚಿಸಿದನು, ॥ ೪೧ ॥ ದೇವರ್ಷಿಃ - ನಾರದಮುನಿಯು, ಲೋಕಾನಾಂ - ಲೋಕಗಳಿಗೆ, ಪ್ರಪಿತಾಮಹಂ-ಮುತ್ತಾತನಾದ, ಪಿತರಂ - ತಂದೆಯಾದ ಬ್ರಹ್ಮನನ್ನು, ತುಷ್ಟಂ - ಸಂತೋಷಪಟ್ಟವನನ್ನಾಗಿ, ನಿಶಾಮ್ಯ-ಕಂಡು, ಭವಾನ್-ನೀನು, ಮಾಂ-ನನ್ನನ್ನುಕುರಿತು, ಯತ್-ಯಾವುದನ್ನು, ಅನುಪೃಚ್ಛತಿ-ಪ್ರಶ್ನೆಮಾಡುತ್ತಿರುವೆಯೋ, ಅದನ್ನು, ಪರಿಪಪ್ರಚ್ಛ-ಬೆಸಗೊಂಡನು ॥ ೪೨ ॥

ಗೊಳ್ಳುವದೇ ತನಗೆ ಪರಮಲಾಭವೆಂದೆಣಿಸಿ,ಅದಕ್ಕಾಗಿ ಯಮನಿಯಮಗಳನ್ನು ಅವಲಂಬಿಸಿದನು ॥ ೩೯ ॥ ಇಂತು ಆ ಪಿತಾಮಹನು ನಿಯಮದಿಂದಿರುವಾಗ ಮರೀಚಿ ಮೊದಲಾದ ತನ್ನ ಪುತ್ರರಲ್ಲಿ ಪರಮಪ್ರೀತಿ ಪಾತ್ರನಾದ ನಾರದಮಹಾಮುನಿಯು ತತ್ವವನ್ನು ತಿಳಿಯಲೆಳಸಿ, ತಂದೆಯ ಬಳಿಗೆ ಬಂದು, ಅಂತರಿಂದ್ರಿಯ ಬಹಿರಿಂದ್ರಿಯಗಳನ್ನು ಗೆದ್ದು, ಸದಾಚಾರಸಂಪನ್ನನಾಗಿ ಆತನನ್ನು ಸೇವಿಸುತ್ತಿದ್ದನು ॥ ೪೦ ॥ ಅಯ್ಯಾ ಭರತಕುಲಲಲಾಮನೆ ! ಮಹಾ ಭಾಗವತನೆನಿಸಿದ ನಾರದಮುನಿಯು ಇಂತು ಬಹುಕಾಲ ಸೇವಿಸುತ್ತಾ, ಮಾಯೇಶನಾದ ಮಹಾ ವಿಷ್ಣುವಿನ ಮಾಯಾಮಹಿಮೆಯನ್ನು ತಿಳಿಯಲುಜ್ಜುಗಿಸಿ, ತನ್ನ ಸಚ್ಚರಿತ್ರದಿಂದ ತಂದೆಯನ್ನು ಸಂತೋಷಗೊಳಿಸಿದನು ॥ ೪೧ ॥ ಆ ದೇವಮುನಿಯು ಇಂತು ತಂದೆಯನ್ನು ಸೇವಿಸುತ್ತಾ, ಲೋಕ ಪಿತಾಮಹನಾದ ಆತನು ತನಗೆ ಪ್ರಸನ್ನ ನಾದುದನ್ನು ಕಂಡು, ನೀನೀಗ ನನ್ನನ್ನು ಕುರಿತು ಯಾವ ಪ್ರಶ್ನೆಯನ್ನು

* ಈ ಹತ್ತು ಲಕ್ಷಣಗಳು ಮುಂದಣ ಅಧ್ಯಾಯದಲ್ಲಿ ವಿವರಿಸಲ್ಪಡುವುವು.

ಲಕ್ಷಣಂ। ಪ್ರೋಕ್ತಂ ಭಗವತಾ ಪ್ರಾಹ ಪ್ರೀತಃ ಪುತ್ರಸ್ಯ ಭೂತಕೃತ್॥ ನಾರದಃ ಪ್ರಾಹ ಮುನಯೇ ಸರಸ್ವತ್ಯಾ ಸ್ತಟೇ ನೃಪ! ।ಧ್ಯಾಯತೇ ಬ್ರಹ್ಮ ಪರಮಂ ವ್ಯಾಸಾಯಾಽಮಿತ ತೇಜಸೇ ॥ ೪೪ ॥ ಯದುತಾಹಂ ತ್ವಯಾ ಪೃಷ್ಟೋ ವೈರಾಜಾ ತ್ಪುರುಷಾ ದಿದಂ । ಯಥಾಸೀ ತ್ತದು ಪಾಖ್ಯಾಸ್ಯೇ ಪ್ರಶ್ನಾ ನನ್ಯಾಂಶ್ಚ ಕೃತ್ಸ್ನಶಃ ॥ ೪೫ ॥

ಇತಿ ನವಮೋಧ್ಯಾಯಃ

ಭೂತಕೃತ್-ಸೃಷ್ಟಿಕರ್ತನಾದ ಬ್ರಹ್ಮನು, ಪುತ್ರಸ್ಯ-ಮಗನವಿಷಯದಲ್ಲಿ, ಪ್ರೀತಃ - ಸಂತುಷ್ಟನಾಗಿ, ಭಗವತಾ-ಭಗವಂತನಿಂದ, ಪ್ರೋಕ್ತಂ-ಹೇಳಲ್ಪಟ್ಟ, ದಶಲಕ್ಷಣಂ-ಹತ್ತುಲಕ್ಷಣಗಳುಳ್ಳ, ಇದಂ-ಈ, ಭಾಗವತಂ-ಭಾಗವತವೆಂಬ, ಪುರಾಣವನ್ನು, ತಸ್ಮೈ - ಆನಾರದಮುನಿಗೆ, ಪ್ರಾಹ - ಹೇಳಿದನು॥ ಹೇನೃಪ-ಎಲೈರಾಜನೆ! ಸರಸ್ವತ್ಯಾಃ-ಸರಸ್ವತೀ ನದಿಯ, ತಟೇ-ದಡದಲ್ಲಿ, ಪರಮಂ - ಉತ್ತಮವಾದ, ಬ್ರಹ್ಮ - ಆತ್ಮತತ್ವವನ್ನು, ಧ್ಯಾಯತೇ - ಧ್ಯಾನಿಸುತ್ತಿರುವ, ಅಮಿತತೇಜಸೇ - ಅಪಾರ ತೇಜಸ್ಸುಳ್ಳ, ವ್ಯಾಸಾಯ-ವ್ಯಾಸನೆಂಬ, ಮುನಯೇ-ಮುನಿಗೆ, ನಾರದಃ-ನಾರದಮುನಿಯು, ಪ್ರಾಹ-ಹೇಳಿದನು॥೪೪॥

ಉತ-ಮತ್ತು, ತ್ವಯಾ-ನಿನ್ನಿಂದ, ಅಹಂ-ನಾನು, ಯತ್-ಯಾವುದನ್ನು, ಪೃಷ್ಟಃ - ಪ್ರಶ್ನೆಮಾಡಲ್ಪಟ್ಟೆನೋ, ಇದಂ-ಈ ಜಗತ್ತು ವೈರಾಜಾತ್ - ಬ್ರಹ್ಮಾಂಡರೂಪನಾದ, ಪುರುಷಾತ್ - ವಿರಾಟ್ಪುರುಷನಿಂದ ಯಥಾ-ಹೇಗೆ, ಆಸೀತ್-ಉಂಟಾಯಿತೋ, ತತ್-ಅದನ್ನೂ, ಅನ್ಯಾನ್-ಇತರಗಳಾದ, ಪ್ರಶ್ನಾಂಶ್ಚ-ಪ್ರಶ್ನೆಗಳನ್ನೂ, ಕೃತ್ಸ್ನಶಃ-ಸಂಪೂರ್ಣವಾಗಿ, ಉಪಾಖ್ಯಾಸ್ಯೇ-ಹೇಳುವೆನು ॥ ೪೫ ॥

ಃ ನವಮಾಧ್ಯಾಯಂ ಸಮಾಪ್ತಂ ಃ

ಮಾಡಿದೆಯೋ, ಇದೇ ಅರ್ಥವನ್ನು ಬೆಸಗೊಂಡನು ॥ ೪೨ ॥ ಬಳಿಕ ಲೋಕ ಕರ್ತನಾದ ಆ ಬ್ರಹ್ಮನು ಸಂತುಷ್ಟನಾಗಿ, ಪೂರ್ವದಲ್ಲಿ ಶ್ರೀನಾರಾಯಣಮೂರ್ತಿಯು ತನಗೆ ತಿಳುಹಿದನೋರಗೆ ಹತ್ತು ಲಕ್ಷಣಗಳಿಂದ ಕೂಡಿದ ಭಾಗವತವೆಂಬ ಈಪುರಾಣವನ್ನು ತನ್ನ ಪುತ್ರನಾದ ನಾರದ ಮುನಿಗೆ ಉಪದೇಶಿಸಿದನು ॥೪೩॥ ಅನಂತರದಲ್ಲಿ ನಾರದಮುನಿಯು ಸರಸ್ವತೀ ನದಿಯ ದಡದಲ್ಲಿ ಕುಳಿತು ಬ್ರಹ್ಮಾನುಸಂಧಾನವನ್ನು ಮಾಡುತ್ತಾ ಮನಶ್ಶುದ್ಧಿಯಿಲ್ಲದೇ ಚಿಂತಾಕ್ರಾಂತನಾಗಿರುವ ಪರಮ ತೇಜಸ್ವಿಯಾದ ದ್ವೈಪಾಯನ ಮುನಿಗೆ ಉಪದೇಶಿಸಿದನು ॥ ೪೪ ॥ ಅಯ್ಯಾ ಪಾಂಡುಕುಲ ಮಂಡನನೆ! ಆ ಬಾದರಾಯಣ ಮುನಿಯು ಪುತ್ರನಾದ ನನಗೆ ಉಪದೇಶಿಸಿದನು. ಇಂತು ಸಂಪ್ರದಾಯಾಗತವಾದ ಈ ಪುರಾಣದಲ್ಲಿ ನೀನು ಪ್ರಶ್ನೆಮಾಡಿದಂತೆಯೇ ವಿರಾಟ್ಪುರುಷನಿಂದ ಈ ಜಗತ್ತು ಎಂತುಂಟಾಯಿತು? ಎಂಬುದೇ ಮೊದಲಾದ ಎಲ್ಲಾ ಪ್ರಶ್ನೆಗಳಿಗೂ ಕ್ರಮವಾಗಿ ಉತ್ತರಗಳನ್ನು ಹೇಳುವೆನು ಕೇಳು. ಎಂದು ಶುಕಮುನಿಯು ಪರೀಕ್ಷಿತನಿಗೆ ಹೇಳಿದನೆಂದು ಸೂತನು ಶೌನಕಾದಿಗಳಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

—: ಒಂಬತ್ತನೆಯ ಅಧ್ಯಾಯಂ ಮುಗಿದುದು. :—

ಓಂ ನಮಃಪರಮಾತ್ಮನೇ.

ಅಥ ದಶಮೋಽಧ್ಯಾಯಃ

ಶ್ರೀ ಶುಕಃ॥ ಅತ್ರ ಸರ್ಗೋ ವಿಸರ್ಗಶ್ಚ ಸ್ಥಾನಂ ಪೋಷಣ ಮೂತಯಃ ।
ಮನ್ವಂತರೇಶಾದಿಕಥಾ ನಿರೋಧೋ ಮುಕ್ತಿ ರಾಶ್ರಯಃ ॥೧॥ ದಶಮಸ್ಯ
ವಿಶುದ್ಧ್ಯರ್ಥಂ ನವಾನಾ ಮಿಹ ಲಕ್ಷಣಂ । ವರ್ಣಯಂತಿ ಮಹಾತ್ಮಾನ ಶ್ರು
ತೇನಾರ್ಥೇನ ಚಾಂಜಸಾ ॥ ೨ ॥ ಭೂತ ಮಾತ್ರೇಂದ್ರಿಯ ಧಿಯಾಂ
ಜನ್ಮ ಸರ್ಗ ಉದಾಹೃತಃ । ಬ್ರಹ್ಮಣೋ ಗುಣವೈಷಮ್ಯಾತ್ ವಿಸರ್ಗಃ

ದಶಮಾಧ್ಯಾಯಂ

ಕಂ॥ ಯೋಗಿವರೇಣ್ಯಂ ಶುಕಮುನಿ । ಭಾಗವತಮನ್ನೆನೂರೆವ ನೆವದೊಳಿಂದು ಪರೀಕ್ಷಿ ।
ದ್ಭಾಗವತ ಪ್ರಶ್ನಂಗಳಿ । ಗಾಗಮ ಸಮ್ಮತಿಯೊ ಳುತ್ತರಂಗಳ ನೀವಂ ॥

ಶುಕಮುನಿಯು ಹೇಳುತ್ತಾನೆ:—ಅತ್ರ - ಈ ಪುರಾಣದಲ್ಲಿ, ಸರ್ಗ, ವಿಸರ್ಗ, ಸ್ಥಾನ, ಪೋಷಣ, ಊತಯಃ-ಮಹಿಮೆಗಳು, ಮನ್ವಂತರಗಳು, ಭಗವಚ್ಚರಿತ್ರೆಗಳು, ನಿರೋಧವು, ಮುಕ್ತಿಯು, ಆಶ್ರಯವೆಂಬ ಹತ್ತು ವಿಷಯಗಳು, ಹೇಳಲ್ಪಡುವುವು, ॥ ೧ ॥ ಇಹ-ಈ ಪುರಾಣದಲ್ಲಿ, ದಶಮಸ್ಯ-ಹತ್ತನೆಯ ಆಶ್ರಯರೂಪವಾದ ಆತ್ಮತತ್ವದ, ವಿಶುದ್ಧ್ಯರ್ಥಂ-ಶೋಧನೆಗಾಗಿ, ಮಹಾತ್ಮಾನಃ-ಜ್ಞಾನಿಗಳು, ಶ್ರುತೇನ-ಶ್ರುತಿಯಿಂದ, ಅಂಜಸಾ-ಸಾಕ್ಷಾತ್ತಾಗಿಯೂ, ಅರ್ಥೇನ-ತಾತ್ಪರ್ಯಕ್ರಮದಿಂದಲೂ, ನವಾನಾಂ - ಸರ್ಗ ಮೊದಲಾದ ಒಂಬತ್ತಕ್ಕೂ, ಲಕ್ಷಣಂ-ಕುರುಹುಗಳನ್ನು ವರ್ಣಯಂತಿ - ವಿವರಿಸುವರು ॥ ೨ ॥

ಹತ್ತನೆಯ ಅಧ್ಯಾಯ.

ಶ್ರೀ ಭಾಗವತವಿವರಣೆ

ಶುಕಮುನಿಯು ಹೇಳುತ್ತಾನೆ:—ಅಯ್ಯಾ ಭೂಪತಿಯೆ! ಪೂರ್ವದಲ್ಲಿ ಬ್ರಹ್ಮದೇವನು ನಾರದಮುನಿಗೆ ಹತ್ತುಲಕ್ಷಣಗಳುಳ್ಳ ಭಾಗವತವನ್ನು ಹೇಳಿದನೆಂದು ತಿಳುಹಿದೆನಷ್ಟೆ. ಆ ಹತ್ತು ಲಕ್ಷಣಗಳನ್ನು ವಿವರಿಸುವೆನುಕೇಳು. ಈ ಪುರಾಣದಲ್ಲಿ ಸರ್ಗ, ವಿಸರ್ಗ, ಸ್ಥಾನ, ಪೋಷಣ,ಊತಿ, ಮನ್ವಂತರ, ಈಶ್ವರಕಥೆ, ನಿರೋಧ, ಮುಕ್ತಿ, ಆಶ್ರಯಗಳೆಂದು ಹತ್ತು ಲಕ್ಷಣಗಳುಂಟು ॥೧॥ ಮಹಾತ್ಮರಾದ ಜ್ಞಾನಿಗಳು, ಆಶ್ರಯವೆಂಬ ಹತ್ತನೆಯ ತತ್ವದ ಜ್ಞಾನವನ್ನು ಪಡೆಯುವುದಕ್ಕಾಗಿಯೇ ಉಳಿದ ಒಂಬತ್ತರ ಸ್ವರೂಪಗಳನ್ನೂ ವೇದಶಾಸ್ತ್ರಾನುಸಾರವಾಗಿ ವರ್ಣಿಸುವರು ॥ ೨ ॥ ಅವುಗಳಲ್ಲಿ ಆಕಾಶಾದಿ ಭೂತಗಳು, ಶಬ್ದಾದಿ ತನ್ಮಾತ್ರೆಗಳು, ಜ್ಞಾನ ಕರ್ಮೇಂದ್ರಿಯಗಳು, ಮಹದಹಂಕಾರಗಳು, ಎಂಬಿವುಗಳು ಗುಣಗಳಲ್ಲಿ ಬದಲಾವಣೆಯುಂಟಾಗಿ, ಬ್ರಹ್ಮನಿಂದ ವಿರಾಡ್ರೂಪವಾಗಿಯೂ, ಸ್ವಸ್ವರೂಪವಾ

ಪೌರುಷಃ ಸ್ಮೃತಃ ॥ ೩ ॥ ಸ್ಥಿತಿರ್ವೈಕುಂಠವಿಜಯಃ ಪೋಷಣಂ ತದನುಗ್ರಹಃ । ಮನ್ವಂತರಾಣಿ ಸದ್ಧರ್ಮ ಊತಯಃ ಕರ್ಮವಾಸನಾಃ॥ ಅವತಾರಾಽನುಚರಿತಂ ಹರೇಶ್ಚಾಽಸ್ಯಾಽನುವರ್ತಿನಾಂ। ಪುಂಸಾಮೀಶಕಥಾಃ ಪ್ರೋಕ್ತಾ ನಾನಾಖ್ಯಾನೋಪಬೃಂಹಿತಾಃ ॥ ೫ ॥ *ನಿರೋಧೋಽಸ್ಯಾಽ

ಗುಣವೈಷಮ್ಯಾತ್-ಗುಣಗಳ ವ್ಯತ್ಯಾಸದಿಂದ, ಬ್ರಹ್ಮಣಃ-ಬ್ರಹ್ಮನಿಂದ, ಭೂತ...ಯಾಂ, ಭೂತ-ಪೃಥಿವ್ಯಾದಿ ಭೂತಗಳು, ಮಾತ್ರ-ಶಬ್ದ, ಸ್ಪರ್ಶ, ರೂಪ, ರಸ,ಗಂಧಗಳು, ಇಂದ್ರಿಯ-ಜ್ಞಾನ ಕರ್ಮೇಂದ್ರಿಯಗಳು, ಧಿಯಾಂ-ಮಹತ್ತು, ಅಹಂಕಾರ, ಇವುಗಳ, ಜನ್ಮ-ಉತ್ಪತ್ತಿಯು, ಸರ್ಗಃ-ಸರ್ಗವೆಂದು, ಉದಾಹೃತಃ-ಹೇಳಲ್ಪಟ್ಟಿತು, ಪೌರುಷಃ-ವಿರಾಟ್ಪುರುಷನಿಂದುಂಟಾದ, ಚರಾಚರಸೃಷ್ಟಿಯು, ವಿಸರ್ಗಃ-ವಿಸರ್ಗವೆನ್ನಲ್ಪಡುವುದು ॥ ೩ ॥ ವೈಕುಂಠವಿಜಯಃ, ವೈಕುಂಠ-ಭಗವಂತನ, ವಿಜಯಃ-ಉತ್ತಮತ್ವವು, ಸ್ಥಿತಿಃ-ಸ್ಥಿತಿಯೆನಿಸುವುದು, ತದನುಗ್ರಹಃ-ಆ ಭಗವಂತನ ಅನುಗ್ರಹವೇ, ಪೋಷಣಂ - ಪೋಷಣವೆನಿಸುವುದು, ಸದ್ಧರ್ಮಃ ಮನ್ವಂತರಾಧಿಪತಿಗಳ ಧರ್ಮವು, ಮನ್ವಂತರಾಣಿ-ಮನ್ವಂತರಗಳೆನಿಸಿಕೊಳ್ಳುವುವು, ಕರ್ಮವಾಸನಾಃ-ಕರ್ಮಸಂಸ್ಕಾರಗಳು, ಊತಯಃ-ಊತಿಗಳೆನಿಸುವುವು ॥ ೪ ॥

ಹರೇಃ-ವಿಷ್ಣುವಿನ, ಅವತಾರಾನುಚರಿತಂ-ಅವತಾರಚರಿತ್ರೆಯೂ, ಅಸ್ಯ - ಆ ಭಗವಂತನ, ಅನುವರ್ತಿನಾಂ-ಭಕ್ತರಾದ, ಪುಂಸಾಂ-ಪುರುಷರ, ನಾನಾ...ತಾಃ, ನಾನಾ-ಅನೇಕಗಳಾದ, ಆಖ್ಯಾನ - ಇತಿಹಾಸಗಳಿಂದ, ಉಪಬೃಂಹಿತಾಃ-ಕೂಡಿರುವ ಚರಿತ್ರೆಗಳು, ಈಶಕಥಾಃ - ಭಗವತ್ಕಥೆಗಳೆಂದು, ಪ್ರೋಕ್ತಾಃ-ಹೇಳಲ್ಪಡುವುವು ॥ ೫ ॥ ಅಸ್ಯ-ಈ, ಆತ್ಮನಃ ಜೀವನ, ಶಕ್ತಿಭಿಸ್ಸಹ - ತನ್ನ ಉಪಾಧಿ

ಗಿಯೂ ಜನಿಸುವುದಕ್ಕೆ 'ಸರ್ಗ' ವೆಂದು ಹೆಸರು. ಆ ವಿರಾಟ್ಪುರುಷನಿಂದುಂಟಾದ ಚರಾಚರಸೃಷ್ಟಿಗೆ 'ವಿಸರ್ಗವೆಂದು' ಹೆಸರು ॥ ೩ ॥ ವೈಕುಂಠ ಪತಿಯಾದ ಭಗವಂತನು ಅವರವರ ಮರ್ಯಾದಾನುಗುಣವಾಗಿ ಕಾಪಾಡುವುದು 'ಸ್ಥಿತಿ' ಯೆನಿಸುವುದು. ಭಕ್ತರಾದವರನ್ನು ಭಗವಂತನು ಅನುಗ್ರಹಿಸುವುದೇ ಪೋಷಣವೆನಿಸುವುದು. ಭಗವದನುಗ್ರಹಕ್ಕೆ ಪಾತ್ರರಾದ ಮನ್ವಂತರಾಧಿ ಪತಿಗಳ ಸಚ್ಚರಿತ್ರೆಯು, ಮನ್ವಂತರವೆನಿಸುವುದು. ಕರ್ಮಸಂಸ್ಕಾರಗಳು 'ಊತಿ' ಗಳೆನಿಸುವುವು ॥೪॥ ನಾನಾ ವಿಧಗಳಾದ ಉಪಾಖ್ಯಾನಗಳಿಂದ ಕೂಡಿದ ಭಗವಂತನ ಮತ್ತು ಭಗವದ್ಭಕ್ತರ ಚರಿತ್ರೆಗಳೇ 'ಈಶಾನು ಕಥೆ' ಯೆನ್ನಲ್ಪಡುವುದು ॥ ೫ ॥ ಪರಮಾತ್ಮನು ಯೋಗನಿದ್ರೆಯನ್ನು ಮಾಡುವಾಗ ಈ ಜೀವನು

* (1) ವೀ. ಜೀವನು ತನ್ನ ಕರ್ಮ ಸಂಸ್ಕಾರಗಳಿಂದೊಡಗೂಡಿ ಸೂಕ್ಷ್ಮಾವಸ್ಥೆಯುಳ್ಳ ಪ್ರಕೃತಿಯಲ್ಲಿ ಸೇರುವುದೇ 'ನಿರೋಧವು', ದೇವಾದಿರೂಪವನ್ನುಳಿದು ಪಾಪರಹಿತವಾದ ಸ್ವರೂಪದಿಂದಿರುವುದೇ 'ಮುಕ್ತಿಯು' (2) ವಿ. ಜೀವಸಮುದಾಯವು ಹೊರಪಡದಿರುವ ಸ್ವರೂಪ, ಇಚ್ಛೆ ಮೊದಲಾದ ಶಕ್ತಿಗಳಿಂದೊಡಗೂಡಿ ವಿಷ್ಣುವಿನಲ್ಲಿ ಸೇರುವುದೇ 'ನಿರೋಧವು'. ಪ್ರಾಕೃತ, ವೈಕೃತ, ಸೂಕ್ಷ್ಮ, ಸ್ಥೂಲೇಂದ್ರಿಯಾದಿಗಳನ್ನುಳಿದು, ಕೇವಲ ಜ್ಞಾನಾನಂದಾತ್ಮಕವಾದ ಸ್ವರೂಪದಿಂದಿರುವುದೇ 'ಮುಕ್ತಿ' ಯೆನಿಸುವುದು.

ನುಶಯನ ಮಾತ್ಮನ ಸ್ಸಹ ಶಕ್ತಿಭಿಃ । ಮುಕ್ತಿರ್ಹಿತ್ವಾಽನ್ಯಥಾರೂಪಂ ಸ್ವ
ರೂಪೇಣ ವ್ಯವಸ್ಥಿತಿಃ ॥ ೬ ॥ ಆಭಾಸಶ್ಚ ನಿರೋಧಶ್ಚ ಯತ ಅಧ್ಯವ
ಸೀಯತೇ । ಸ ಆಶ್ರಯಃ ಪರಂ ಬ್ರಹ್ಮ ಪರಮಾತ್ಮೇತಿ ಶಬ್ದ್ಯತೇ ॥ ೭ ॥
* ಯೋಽಧ್ಯಾತ್ಮಿಕೋಽಯಂ ಪುರುಷ ಸ್ಸೋಽಸಾವೇವಾಽಧಿದೈವಿಕಃ ।

ಗಳೊಡನೆ, ಅನು-ಪರಮಾತ್ಮನ ಯೋಗನಿದ್ರಾನಂತರದಲ್ಲಿ, ಶಯನಂ-ಲಯವು, ನಿರೋಧಃ-ನಿರೋಧವೆನಿಸುವುದು, ಅನ್ಯಥಾರೂಪಂ-ಔಪಾಧಿಕಗಳಾದ ಕರ್ತೃತ್ವಾದಿಗಳನ್ನು, ಹಿತ್ವಾ-ತೊರೆದು, ಸ್ವರೂಪೇಣ-ಬ್ರಹ್ಮಭಾವದಿಂದ, ವ್ಯವಸ್ಥಿತಿಃ-ಇರುವಿಕೆಯೇ, ಮುಕ್ತಿಃ-ಮುಕ್ತಿಯು ॥ ೬ ॥ ಆಭಾಸಃ-ಸೃಷ್ಟಿಯು, ನಿರೋಧಶ್ಚ-ಲಯವು, ಯತಃ-ಯಾವುದರಿಂದ, ಆಗುವುದೋ, ಅಧ್ಯವಸೀಯತೇ-ಪ್ರಕಾಶಗೊಳ್ಳುವುದೋ, ಸಃ-ಅದು, ಪರಂಬ್ರಹ್ಮ-ಪರಬ್ರಹ್ಮವೆಂತಲೂ, ಪರಮಾತ್ಮೇತಿ-ಪರಮಾತ್ಮವೆಂತಲೂ, ಪ್ರಸಿದ್ಧವಾದ, ಆಶ್ರಯಃ-ಆಶ್ರಯವೆಂದು, ಶಬ್ದ್ಯತೇ-ಹೇಳಲ್ಪಡುವುದು ॥ ೭ ॥

ಯೋಽಯಂ-ಯಾವ ಪುರುಷನು, [ಜೀವನು] ಆಧ್ಯಾತ್ಮಿಕಃ-ಚಕ್ಷುರಾದಿ ಇಂದ್ರಿಯಗಳಲ್ಲಿ ಅಭಿಮಾನವುಳ್ಳಸಾಕ್ಷಿಯೋ, ಸೋಽಸಾವೇವ-ಆತನೇ ಆಧಿದೈವಿಕಃ-ಆ ಇಂದ್ರಿಯಾಧಿಷ್ಠಾತೃಗಳಾದ ಸೂರ್ಯನೇ ಮೊದ

ತನ್ನ ಉಪಾಧಿಗಳಿಂದೊಡಗೂಡಿ ಲಯವನ್ನು ಪಡೆವುದೇ 'ನಿರೋಧವು'. ಅವಿದ್ಯೆಯಿಂದಾರೋಪಿತವಾದ ಕರ್ತೃತ್ವಾದಿ ರೂಪಾಂತರವನ್ನುಳಿದು ಬ್ರಹ್ಮೀಭಾವವನ್ನು ಪಡೆವುದೇ 'ಮುಕ್ತಿಯು'. ॥೬॥ ಯಾವ ವಸ್ತುವಿನಿಂದೀಜಗತ್ತುಂಟಾಗುವುದೋ, ಬಾಳುವುದೋ, ಲಯವನ್ನು ಹೊಂದುವುದೋ, ಆ ವಸ್ತುವೇ ಪರಬ್ರಹ್ಮವೆಂತಲೂ, ಪರಮಾತ್ಮವೆಂತಲೂ ಪ್ರಸಿದ್ಧಿಯನ್ನು ಪಡೆದ ಆಶ್ರಯ ವೆನಿಸುವುದು ॥ ೭ ॥

ಈ ಆಶ್ರಯಸ್ವರೂಪವನ್ನು ಪ್ರತ್ಯಕ್ಷಗೊಳಿಸಿ ಅನುಭವದಿಂದ ತಿಳಿಯಪಡಿಸುವುದಕ್ಕಾಗಿಯೇ ಅಧ್ಯಾತ್ಮಾದಿ ವಿಭಾಗವನ್ನು ಹೇಳುವರು. ಚಕ್ಷುರಾದೀಂದ್ರಿಯಗಳಿಗೆ ಅಭಿಮಾನಿಯಾಗಿ ಅವುಗಳಿಂದ ನೋಡತಕ್ಕ ಜೀವನೇ ಅಧ್ಯಾತ್ಮಿಕ ಪುರುಷನು. ಆ ಇಂದ್ರಿಯಗಳಲ್ಲಿ ನೆಲೆಗೊಂಡಿರುವ ಸೂರ್ಯನೇ ಮೊದಲಾದ ದೇವತೆಗಳು 'ಆಧಿದೈವಿಕ' ವೆನಿಸಿಕೊಳ್ಳುವರು. ಈ ಎರಡು ಭೇದಗಳಿಗೂ ಆಶ್ರಯವೆನಿಸಿ, ಚಕ್ಷುರಾದಿಗೋಳಗಳಿಂದ ಯುಕ್ತವಾಗಿಯೂ, ಜೀವನಿಗುಪಾಧಿಯಾಗಿಯೂ ದೃಶ್ಯವಾಗಿರುವ ಶರೀರವೇ 'ಆಧಿಭೌತಿಕವೆನಿಸುವುದು' ಈ ಮೂರೂ ಅನ್ಯೋನ್ಯಾಶ್ರಯವನ್ನು ಪಡೆದಿರುವ ಕಾರಣ,

* (1) ಪೀ. ಭಗವಂತನು ಜೀವನಲ್ಲಿ ನಿಯಾಮಕನಾಗಿ, ಅಧ್ಯಾತ್ಮಕನೆಂತಲೂ, ಇಂದ್ರಿಯಾಭಿಮಾನಿ ದೇವತೆಗಳಲ್ಲಿದ್ದುಕೊಂಡು 'ಆಧಿದೈವಿಕನೆಂತಲೂ' ಶಬ್ದಾದಿ ವಿಷಯಗಳಲ್ಲಿ ಅಂತರ್ಯಾಮಿಯಾಗಿ 'ಅಧಿಭೌತಿಕನೆಂತಲೂ' ಕರೆಯಲ್ಪಡುವನು. ಆದುದರಿಂದ ಜ್ಞಾತೃ, ಜ್ಞಾನ, ಜ್ಞೇಯಗಳೆಲ್ಲವೂ ಭಗವತ್ಸ್ವರೂಪವೆಂದು ಭಾವವು. (2) ವಿ. ವಿಷ್ಣುವು ಇಂದ್ರಿಯಪ್ರೇರಕನಾಗಿ ಅಧ್ಯಾತ್ಮಿಕನೆಂತಲೂ, ಇಂದ್ರಿಯಾಭಿಮಾನಿದೇವತೆಗಳಲ್ಲಿದ್ದುಕೊಂಡು ಆಧಿದೈವಿಕನೆಂತಲೂ, ಘಟಾದಿವಸ್ತುಗಳಲ್ಲಿ ನೆಲಸಿ, ಅಧ್ಯಾತ್ಮಿಕಾಧಿಭೌತಿಕಗಳಾದ ಚಕ್ಷುಃಪ್ರಕಾಶಗಳನ್ನ ಸೃಷ್ಟಿಯು ಗೊಳಿಸುವ ಆಧಿಭೌತಿಕನೆಂತಲೂ ಕರೆಯಲ್ಪಡುವನು. ಆದುದರಿಂದ ಅಧ್ಯಾತ್ಮಿಕಾದಿ ಭಗವದ್ರೂಪಗಳಿಗೈಕ್ಯವೆಂದು ಭಾವವು.

ಯಸ್ತತ್ರೋ ಭಯವಿಚ್ಛೇದಃ ಪುರುಷೋ ಹ್ಯಾಧಿ ಭೌತಿಕಃ ॥೮॥ ಏಕ
ಮೇಕತರಾಽಭಾವೇ ಯದಾನೋಪಲಭಾಮಹೇ । ತ್ರಿತಯಂ ತತ್ರಯೋ
ವೇದ ಸ ಆತ್ಮಾ ಸ್ವಾಶ್ರಯಾ ಶ್ರಯಃ ॥೯॥ಪುರುಷೋಽಂಡಂ ವಿನಿರ್ಭಿದ್ಯ

ಲಾದವರು, ಆಗಿರುವನು, ತತ್ರ-ಆ ಒಂದರಲ್ಲಿಯೇ, ಉಭಯವಿಚ್ಛೇದಃ-ಎರಡು ಭೇದಗಳು ಯಾವುದರಿಂ ದುಂಟಾಗಿರುವುವೋ ಸಪುರುಷಃ-ಆ ಪುರುಷನು, ಆಧಿಭೌತಿಕಃ-ಕಣ್ಣು ಮೊದಲಾದ ಇಂದ್ರಿಯ ಗೋಳಗ ಳಿಂದ ಕೂಡಿ, ಜೀವನಿಗುಪಾಧಿಯೆನಿಸಿದ,ದೃಶ್ಯವಾದ ಶರೀರವಾಗಿರುವನು ॥ ೮ ॥ ಯದಾ - ಯಾವಾಗ ಏಕತರಾಭಾವೇ-ಒಂದು ವಸ್ತು ವಿಲ್ಲದಿದ್ದರೆ, ಏಕಂ-ಒಂದು ವಸ್ತುವನ್ನು, ನೋಪಲಭಾಮಹೇ - ತಿಳಿಯ ಲಾರೆವೋ,ತತ್ರ-ಆಗ, ಯಃ-ಯಾವನು,ತ್ರಿತಯಂ-ಮೂರನ್ನೂ,ವೇದ-ತಿಳಿಯುತ್ತಾನೋ, ಸಆತ್ಮಾ-ಆಪರ ಮಾತ್ಮನು, ಸ್ವಾಶ್ರ...ಯಃ-ಸ್ವಾಶ್ರಯ-ಇತರಾಶ್ರಯವನ್ನು ಪಡೆಯದೆ, ಆಶ್ರಯಃ-ಅನ್ಯರಿಗಾಶ್ರಯ ನಾಗಿರುವನು ॥ ೯ ॥ ಸಃಪುರುಷಃ-ಆವಿರಾಟ್ಪುರುಷನು,ಯದಾ-ಯಾವಾಗ,ಅಂಡಂ-ಬ್ರಹ್ಮಾಂಡವನ್ನು, ವಿನಿರ್ಭಿದ್ಯ-ಭೇದಿಸಿಕೊಂಡು, ವಿನಿರ್ಗತಃ-ಹೊರಗೆಬಂದನೋ, ತದಾ-ಆಗ, ಆತ್ಮನಃ-ತನಗೆ, ಅಯನಂ-

ಇವುಗಳಲ್ಲಾವುದೂ ಆಶ್ರಯವೆನಿಸಿಕೊಳ್ಳಲಾರದು ॥ ೮ ॥ ಎಂತೆಂದರೆ:—ದೃಶ್ಯ ಗಳಾದ ಘಟ, ಪಟ, ಮೊದಲಾದ ಪದಾರ್ಥಗಳಿಲ್ಲದೆ, ಅವುಗಳನ್ನು ಗ್ರಹಿಸುವ ಇಂದ್ರಿ ಯಗಳಾಗಲಿ, ದ್ರಷ್ಟೃವಾಗಲಿ ಸಿದ್ಧಿಸಲಾರರು. ಆ ಇಂದ್ರಿಯಗಳಿಲ್ಲದೆ ಅವುಗಳಲ್ಲಿ ನೆಲೆಗೊಂಡಿರುವ ಸೂರ್ಯಾದಿ ದೇವತೆಗಳಿರುವರೆಂದು ಹೇಳಲಾಗುವುದಿಲ್ಲ. ಆ ಅಧಿಷ್ಠಾ ತೃಗಳಿಲ್ಲದೆ ಇಂದ್ರಿಯಗಳು ತಮ್ಮ ಕಾರ್ಯಗಳನ್ನು ಮಾಡಲಾರವು. ಆ ಇಂದ್ರಿಯ ಗಳಿಲ್ಲದೇ ಪದಾರ್ಥಗಳು ಪ್ರತ್ಯಕ್ಷವಾಗಲಾರವು. ಇಂತು ಒಂದಿಲ್ಲದೆ ಮತ್ತೊಂದನ್ನು ತಿಳಿಯಲಾರೆವಾದುದರಿಂದ, ಅಧ್ಯಾತ್ಮಿಕ ಮೊದಲಾದ ಮೂರು ವಸ್ತುಗಳೂ ಆತ್ಮನಿ ಗಿಂತಲೂ ಭಿನ್ನಗಳೇ ಆಗಿರುವುವು. ಈ ಮೂರನ್ನೂ ಆಲೋಚನೆಯೆಂಬ ಜ್ಞಾನವಿಶೇಷ ದಿಂದ ಸಾಕ್ಷಿಯಾಗಿ ತಿಳಿಯುವ ಪರಮಾತ್ಮನೇ ಸ್ವಾಶ್ರಯನೂ,ಸರ್ವಾಶ್ರಯನೂ ಆಗಿರು ವನೆಂದು ತಿಳಿಯಬೇಕು ॥೯॥ ಇಂತು ಸರ್ವಾಶ್ರಯನೆನಿಸಿದ ಪರಮಾತ್ಮನ ಸ್ವರೂಪ ವನ್ನು ತಿಳಿಯುವುದಕ್ಕಾಗಿ, ಉಳಿದ ಸರ್ಗ ಮೊದಲಾದ ಒಂಬತ್ತು ಲಕ್ಷಣಗಳು ಹೇಳ ಲ್ಪಟ್ಟಿರುವುವು. ನೀನು *ಮೊದಲು ನನ್ನನ್ನು ಕುರಿತು 'ವಿರಾಟ್ಪುರುಷನಿಂದೀಜಗತ್ತು

§ (1) ವಿ· ಅಧ್ಯಾತ್ಮಿಕಾದಿಗಳಲ್ಲಿ ಒಂದನ್ನುಳಿದು ಮತ್ತೊಂದನ್ನು ತಿಳಿಯಲಾರೆವಾದುದರಿಂದ ಜೀವರ ಜ್ಞಾನವೆಂಬುದು ಇಂದ್ರಿಯಾಧೀನವಾಗಿರುವುದು. ಪರಮಾತ್ಮನು ಜ್ಞಾತೃ, ಜ್ಞೇಯ, ಕರಣ ಗಳೆಂಬ ಮೂರನ್ನೂ ಬಲ್ಲವನಾದುದರಿಂದ ಆತನೇ ಅವಿದ್ಯೆಗೂ, ಜೀವನಿಗೂ, ತನಗೂ ಸಹ ಆಶ್ರಯ ನೆನಿಸುವನು. ಆದುದರಿಂದ ಜೀವನು,ಅಲ್ಪಜ್ಞನು, ಪರಮಾತ್ಮನು ಸರ್ವಜ್ಞನು, ಎಂದು ಭಾವವು.

(2) ವಿ. ಆಧ್ಯಾತ್ಮಿಕ ಮೊದಲಾದ ಮೂರರಲ್ಲಿ ಇಂದ್ರಿಯಗಳಾಗಲಿ, ಪ್ರಕಾಶವಾಗಲಿ, ಪದಾರ್ಥ ಗಳಾಗಲಿ, ಯಾವುದೊಂದಿಲ್ಲದಿದ್ದರೂ, ಪದಾರ್ಥಗಳನ್ನು ಕಾಣಲಾರೆವಾದುದರಿಂದ ನಾವೆಲ್ಲರೂ ಅಸ್ವ ತಂತ್ರರೇ. ಆ ಮೂರನ್ನುತಿಳಿಯತಕ್ಕ ಪರಮಾತ್ಮನೇ ಸರ್ವಾಶ್ರಯನು.ಆದುದರಿಂದ ಜೀವರು ವಿಷ್ಣು ವಿಗಧೀನರೆಂದು ಭಾವವು. * ಅ. ೯. ಶ್ಲೋ. ೪೫.

ಯದಾಸೌ ಸ ವಿನಿರ್ಗತಃ । ಆತ್ಮನೋಽಯನ ಮನ್ವಿಚ್ಛ ನ್ನಪೋ
ಽಸ್ರಾಕ್ಷೀ ಚ್ಛುಚಿ ಶ್ಶುಚೀಃ ॥ ೧೦ ॥ ತಾಸ್ವವಾತ್ಸೀತ್ ಸ್ವಸೃಷ್ಟಾಸು
ಸಹಸ್ರ ಪರಿವತ್ಸರಾನ್ । ತೇನ ನಾರಾಯಣೋ ನಾಮ ಯದಾಪಃ ಪುರು
ಷೋದ್ಭವಾಃ ॥ ೧೧ ॥ ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ
ಏವ ಚ । ಯದನುಗ್ರಹತ ಸ್ಸಂತಿ ನಸಂತಿ ಯದುಪೇಕ್ಷಯಾ ॥ ೧೨ ॥

ಸ್ಥಾನವನ್ನು, ಅನ್ವಿಚ್ಛನ್-ಹುಡುಕುತ್ತಾ, ಶುಚಿಃ - ಪರಿಶುದ್ಧನಾದುದರಿಂದ, ಶುಚೀಃ-ನಿರ್ಮಲಗಳಾದ, ಅಪಃ-ನೀರನ್ನು, ಅಸ್ರಾಕ್ಷೀತ್-ಸೃಜಿಸಿದನು ॥೧೦॥ ಸ್ವಸೃಷ್ಟಾಸು-ತನ್ನಿಂದ ಸೃಷ್ಟಿಸಲ್ಪಟ್ಟ, ತಾಸು-ಆ ಉದಕಗಳಲ್ಲಿ, ಸಹಸ್ರಪರಿವತ್ಸರಾನ್-ಸಾವಿರಾರುವರ್ಷಗಳು, ಅವಾತ್ಸೀತ್-ವಾಸಮಾಡಿದನು, ಯತ್-ಯಾವಕಾರಣದಿಂದ, ಪುರುಷೋದ್ಭವಾಃ-ಪುರುಷನಿಂದುಂಟಾದ, ಆಪಃ-ಜಲವು, ಅಯನಂ - ಸ್ಥಾನವೋ, ತೇನ-ಅದರಿಂದ, ನಾರಾಯಣಃ-ನಾರಾಯಣನೆಂದು, ನಾಮ-ಹೆಸರಾಯಿತು ॥ ೧೧ ॥

ದ್ರವ್ಯಂ-ಪೃಥಿವಿ ಮೊದಲಾದ ಪದಾರ್ಥಗಳು, ಕರ್ಮ-ಜೀವಾದೃಷ್ಟಗಳು, ಕಾಲಶ್ಚ-ಗುಣಗಳ ಬದಲಾವಣೆಗೆ ಕಾರಣವಾದ ಕಾಲವು, ಸ್ವಭಾವಃ-ಪ್ರಕೃತಿಯ ಪರಿಣಾಮಸ್ವಭಾವವು, ಜೀವಶ್ಚ - ಭೋಕ್ತ್ರನಾದಜೀವನು, ಇವರು, ಯದನುಗ್ರಹತಃ-ಯಾರ ಅನುಗ್ರಹದಿಂದ, ಸಂತಿ-ಇರುವರೋ, ಯದುಪೇಕ್ಷಯಾ-ಯಾರ ಅಸಡ್ಡೆಯಿಂದ, ನಸಂತಿ-ಇರುವುದಿಲ್ಲವೋ, ಆತನೇ ನಾರಾಯಣಮೂರ್ತಿಯು, ॥ ೧೨ ॥ ಏಕಃ-ಅದ್ವಿತೀಯನಾದ ನಾರಾಯಣಮೂರ್ತಿಯು,ನಾನಾತ್ವಂ-ಹಲವುರೂಪವನ್ನು. ಅನ್ವಿಚ್ಛನ್-ಗೊಂದಲೆಳಸಿ,

---

ಎಂತು ಜನಿಸಿತು ?' ಎಂದು ಪ್ರಶ್ನೆಮಾಡಿದೆಯಷ್ಟೆ, ಇನ್ನು ಆ ಸಂಗತಿಯನ್ನು ವಿವರಿಸುವೆನು ಕೇಳು.ಸೃಷ್ಟ್ಯಾದಿಯಲ್ಲಿ ಪರಮಪುರುಷನಾದ ಶ್ರೀನಾರಾಯಣಮೂರ್ತಿಯು ತನ್ನಿಂದ ಸೃಷ್ಟವಾದ ಅಂಡವನ್ನು ಭೇದಿಸಿಕೊಂಡು ಹೊರಗೆ ಬಂದು ತಾನು ನೆಲಸುವುದಕ್ಕೆ ಒಂದು ಸ್ಥಾನವಿರಬೇಕೆಂದೆಳಸಿ, ಮೊದಲುಪರಿಶುದ್ಧವಾದ ಜಲವನ್ನು ನಿರ್ಮಾಣಮಾಡಿದನು ॥ ೧೦ ॥ ಬಳಿಕ ತನ್ನಿಂದ ನಿರ್ಮಿತವಾದ ಜಲದಲ್ಲಿ ಸಾವಿರಾರು ವರ್ಷಗಳವರೆಗೂ ವಾಸಮಾಡುತ್ತಿದ್ದನು.ಇಂತು ಜಲದಲ್ಲಿ ನೆಲಸಿದ್ದನಾದುದರಿಂದ ಭಗವಂತನಿಗೆ *'ನಾರಾಯಣನೆಂದು' ಹೆಸರಾಯಿತು ॥೧೧॥ ಆ ನಾರಾಯಣಮೂರ್ತಿಯಮಹಿಮೆಯು ಸಾಧಾರಣವಲ್ಲ. ಮಹದಾದಿ ಪೃಥಿವ್ಯಂತಗಳಾದ ವಸ್ತುಗಳು,ಪ್ರಾಣಿಗಳ ಜನ್ಮನಿಮಿತ್ತವಾದ ಕರ್ಮವು, ಸತ್ವಾದಿ ಗುಣಗಳ ಬದಲಾವಣೆಗೆ ಕಾರಣವಾದ ಕಾಲವು, ಪ್ರಕೃತಿಯ ಪರಿಣಾಮ ಸ್ವಭಾವವು, ಸುಖದುಃಖಗಳನ್ನು ಅನುಭವಿಸುವ ಜೀವನು, ಇವರೆಲ್ಲರೂ ಆತನ ಅನುಗ್ರಹದಿಂದಲೇ ತಂತಮ್ಮ ಕಾರ್ಯಗಳನ್ನು ನಡೆಯಿಸುವರು. ಆತನು ಉಪೇಕ್ಷೆಮಾಡಿದಲ್ಲಿ ಇವರು ಇರುವುದೇ ಇಲ್ಲ. ಇಂಥಾ ಭಗವಂತನು ತನ್ನ ಸಂಕಲ್ಪಮಾತ್ರದಿಂದಲೇ ಸಕಲ ಜಗತ್ತನ್ನು ಹುಟ್ಟಿಸಿ, ಬೆಳೆಯಿಸಿ, ಲಯಗೊಳಿಸುತ್ತಿರುವನು ॥ ೧೨ ॥

---

* ಅಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ । ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ ॥ (ಮನುಸ್ಮೃತಿ)

ಏಕೋ ನಾನಾತ್ವ ಮನ್ವಿಚ್ಛನ್ ಯೋಗತಲ್ಪಾ ತ್ಸಮುತ್ಥಿತಃ । *ವೀರ್ಯಂ ಹಿರಣ್ಮಯಂ ದೇಹಂ ಮಾಯಯಾ ವ್ಯಸೃಜ ತ್ತ್ರಿಧಾ ॥ ೧೩ ॥ ಅಧಿದೈವ ಮಥಾಽಧ್ಯಾತ್ಮ ಮಧಿಭೂತ ಮಿತಿ ಪ್ರಭುಃ । ಅಥೈಕಂ ಪೌರುಷಂ ವೀರ್ಯಂ ತ್ರಿಧಾಽಭಿದ್ಯತ ತಚ್ಛೃಣು ॥ ೧೪ ॥ ಅಂತಶ್ಶರೀರ ಆಕಾಶಾ ತ್ಪುರುಷಸ್ಯ ವಿಚೇಷ್ಟತಃ । ಓಜ ಸ್ಸಹೋ ಬಲಂ ಜಜ್ಞೇ ತತಃ ಪ್ರಾಣೋ

ಯೋಗತಲ್ಪಾತ್-ಆತ್ಮಾನುಭವವೆಂಬ ಹಾಸಿಗೆಯಿಂದ, ಸಮುತ್ಥಿತಃ-ಎದ್ದು, ಹಿರಣ್ಮಯಂ-ಚಿನ್ನದಂತೆ ಹೊಳೆಯುವ, ವೀರ್ಯಂ - ಬ್ರಹ್ಮಾಂಡರೂಪವಾದ, ದೇಹಂ - ಸಮಷ್ಟಿಶರೀರವನ್ನು, ಮಾಯಯಾ-ಮಾಯೆಯಿಂದ, ತ್ರಿಧಾ - ಆಧ್ಯಾತ್ಮಿಕ ಮೊದಲಾದ ಮೂರು ರೂಪವಾಗಿ. ವ್ಯಸಜತ್ - ಸೃಜಿಸಿದನು ॥ ೧೩ ॥ ಪ್ರಭುಃ-ಭಗವಂತನು, ಅಧಿದೈವಂ-ಅಧಿದೈವವೆಂತಲು, ಅಥ-ಬಳಿಕ, ಅಧ್ಯಾತ್ಮಂ-ಅಧ್ಯಾತ್ಮವೆಂತಲೂ, ಅಧಿಭೂತಂ-ಅಧಿಭೂತವೆಂತಲೂ, ಸೃಜಿಸಿದನು, ಅಥ-ಆಮೇಲೆ, ಪುರುಷಾಧಿಷ್ಠಿತವಾದ, ವೀರ್ಯಂ-ಸಮಷ್ಟಿಶರೀರವು, ತ್ರಿಧಾ-ಮೂರುವಿಧವಾಗಿ, ಅಭಿದ್ಯತಯಥಾ-ಹೇಗೆ ಉಂಟಾಯಿತೋ ತತ್-ಅದನ್ನು, ಶೃಣು-ಕೇಳು ॥ ೧೪ ॥ ಪುರುಷಸ್ಯ-ಆವಿರಾಟ್ಪುರುಷನು, ವಿಚೇಷ್ಟತಃ - ಹಲವು ಬಗೆಯಾಗಿ ಚೇಷ್ಟೆಯನ್ನು ಮಾಡುತ್ತಿರಲು, ಅಂತಶ್ಶರೀರೇ-ಶರೀರದೊಳಗಿರುವ, ಆಕಾಶಾತ್ - ಆಕಾಶದಿಂದ, ಓಜಃ-ಇಂದ್ರಿಯಶಕ್ತಿಯು, ಸಹಃ-ಮನಶ್ಶಕ್ತಿಯು, ಬಲಂ-ದೇಹಶಕ್ತಿಯು, ಜಜ್ಞೇ - ಉಂಟಾ

ಇಂತಹ ಅದ್ವಿತೀಯನಾದ ಆ ನಾರಾಯಣಮೂರ್ತಿಯು ದೇವಮನುಷ್ಯಾದಿರೂಪಗಳಿಂದ ಹಲವು ಬಗೆಯಾಗಲೆಣಿಸಿದವನಾಗಿ, ಆತ್ಮಾನುಸಂಧಾನವೆಂಬ ಹಾಸಿಗೆಯಿಂದೆದ್ದು, ಸುವರ್ಣದಂತೆ ಹೊಳೆಯುತ್ತಿರುವ ಬ್ರಹ್ಮಾಂಡರೂಪವಾದ ತನ್ನ ಸಮಷ್ಟಿಶರೀರವನ್ನು, ಮಾಯೆಯಿಂದ ಮೂರು ಬಗೆಯಾಗಿ ಸೃಜಿಸಿದನು ॥ ೧೩ ॥ ಅವುಗಳಲ್ಲಿ ದಿಕ್ಕು ಮೊದಲಾದ ಅಭಿಮಾನಿ ದೇವತೆಗಳಿಂದ ಕೂಡಿದ ಏಕಾದಶೇಂದ್ರಿಯಗಳು ಅಧಿದೈವವೆಂತಲೂ, ಜೀವನು ಅಧ್ಯಾತ್ಮವೆಂತಲೂ, ಪೃಥಿವ್ಯಾದಿಭೂತಗಳಲ್ಲಿರುವ ಗಂಧಾದಿಗುಣಗಳು ಅಧಿಭೂತವೆಂತಲೂ ಕರೆಯಲ್ಪಡುವುವು. ಅಯ್ಯಾ ಭೂಮೀಶನೆ ! ಪುರುಷಾಧಿಷ್ಠಿತವಾಗಿ ಚತುರ್ದಶಭುವನಾತ್ಮಕವೆನಿಸಿದ ಆ ಸಮಷ್ಟಿ ಶರೀರವು ದೇವ ಮನುಷ್ಯಾದಿ ವ್ಯಷ್ಟಿ ಶರೀರಗಳಲ್ಲಿ ಜೀವೇಂದ್ರಿಯ ವಿಷಯ ರೂಪದಿಂದೆಂತು ವಿಭಕ್ತವಾಯಿತೋ, ಆಸಂಗತಿಯನ್ನು ವಿವರಿಸುವೆನು ಕೇಳು ॥ ೧೪ ॥ ಬ್ರಹ್ಮಾಂಡರೂಪನಾದ ಆ ವಿರಾಜನು ಕ್ರಿಯಾಶಕ್ತಿಯಿಂದ ನಾನಾಪರಿಯಾಗಿ ಚೇಷ್ಟೆಮಾಡುತ್ತಿರಲು, ಆತನ ಶರೀರದೊಳಗಿರುವ ಅಕಾಶ ಜನ್ಯವಾದ ಪ್ರಾಣವೆಂಬ ವಾಯು ವಿಶೇಷದಿಂದ, ಇಂದ್ರಿಯಶಕ್ತಿಯು, ಮನಶ್ಶಕ್ತಿಯು, ದೇಹಶಕ್ತಿಯು ಉಂಟಾದುವು. ಬಳಿಕ ಶಕ್ತ್ಯಾತ್ಮಕವಾದ ಆ ಸೂಕ್ಷ್ಮರೂಪದಿಂದ ಸಕಲರಿಗೂ ಪ್ರಾಣವಾಗಿರುವ ಸೂತ್ರಾತ್ಮನೆಂಬ ಮಹಾ

* ಅಪ ಏವ ಸಸರ್ಜಾದೌ ತಾಸು ವೀರ್ಯ ಮಪಾಸೃಜತ್ । ತದಂಡ ಮಭವ ದ್ಧೈವಮಂ ಸಹಸ್ರಾರ್ಕಸಮದ್ಯುತಿ ॥ (ಮನುಸ್ಮೃತಿ)

ಮಹಾನಸುಃ ॥ ೧೫ ॥ ಅಸುಪ್ರಾಣಂತಿ ಯಂ ಪ್ರಾಣಾಃ ಪ್ರಾಣಂತಂ
ಸರ್ವಜಂತುಷು । ಅಪಾನಂತ ಮಪಾನಂತಿ ನರದೇವ ಮಿವಾಽನುಗಾಃ॥೧೬॥
ಪ್ರಾಣೇನ ಕ್ಷಿಪತಾ ಕ್ಷುತ್ತೃಡಂತರಾ ಜಾಯತೇ ಪ್ರಭೋಃ । ಪಿಪಾಸತೋ
ಜಕ್ಷತಶ್ಚ ಪ್ರಾಙ್ಮುಖಂ ನಿರಭಿದ್ಯತ ॥ ೧೭ ॥ ಮುಖತ ಸ್ತಾಲು
ನಿರ್ಭಿನ್ನಂ ಜಿಹ್ವಾ ತತ್ರೋಪಜಾಯತೇ । ತತೋ ನಾನಾರಸೋ ಜಜ್ಞೇ
ಜಿಹ್ವಯಾ ಯೋಽಧಿಗಮ್ಯತೇ ॥ ೧೮ ॥ ವಿವಕ್ಷೋ ರ್ಮುಖತೋ

ದುವು, ತತಃ-ಆ ಶಕ್ತ್ಯಾತ್ಮಕವಾದ ಸೂಕ್ಷ್ಮರೂಪದಿಂದ, ಪ್ರಾಣಃ-ಸೂತ್ರಾತ್ಮನೆಂಬ, ಮಹಾನ್-ಮುಖ್ಯವಾದ, ಅಸುಃ-ಮಹಾಪ್ರಾಣವು, ಜಜ್ಞೇ-ಉಂಟಾಯಿತು ॥೧೫॥ ಸರ್ವಜಂತುಷು-ಸಕಲಪ್ರಾಣಿಗಳಲ್ಲಿಯೂ, ಅನುಗಾಃ - ಊಳಿಗದವರು, ನರದೇವಮಿವ - ರಾಜನನ್ನೋಪಾದಿಯಲ್ಲಿ, ಪ್ರಾಣಂತಂ-ಚೇಷ್ಟೆಮಾಡುವ, ಯಂ-ಯಾವುದನ್ನು, ಅನು-ಅನುಸರಿಸಿ, ಪ್ರಾಣಂತಿ-ಚೇಷ್ಟೆಮಾಡುವುವೋ, ಅಪಾನಂತಂ-ಚೇಷ್ಟೆಯನ್ನು ಬಿಟ್ಟ, ಯಮನು, ಯಾವುದನ್ನನುಸರಿಸಿ, ಅಪಾನಂತಿ-ಚೇಷ್ಟೆಯನ್ನು ಬಿಡುವುವೋ ॥ ೧೬ ॥ ಕ್ಷಿಪತಾ-ವ್ಯಾಪಿಸಿದ, ಪ್ರಾಣೇನ-ಪ್ರಾಣದಿಂದ, ಪ್ರಭೋಃ-ಆ ಪುರುಷನ, ಅಂತರಾ-ಜಠರಾಗ್ನಿಯು ಪ್ರಜ್ವಲಿಸಲು, ಕ್ಷುತ್-ಹಸಿವು, ತೃಟ್-ನೀರಡಕೆಯು, ಜಾಯತೇಸ್ಮ-ಉಂಟಾಯಿತು, ಪಿಪಾಸತಃ-ನೀರಡಕೆಯುಳ್ಳ, ಜಕ್ಷತಃ - ತಿನ್ನಲೆಳಸಿದ ಆ ಪುರುಷನಿಗೆ, ಪ್ರಾಕ್ - ಮೊದಲು, ಮುಖಂ-ಮುಖವು, ನಿರಭಿದ್ಯತ-ಬೇರೆಯಾಯಿತು ॥ ೧೭ ॥ ಮುಖತಃ - ಮುಖದಿಂದ, ತಾಲು-ದವಡೆಯು, ನಿರ್ಭಿನ್ನಂ-ಬೇರೆಯಾಯಿತು, ತತ್ರ-ಅಲ್ಲಿ, ಜಿಹ್ವಾ-ನಾಲಗೆಯು, ಉಪಜಾಯತೇ-ಉಂಟಾಯಿತು, ತತಃ-ಬಳಿಕ, ಜಿಹ್ವಯಾ-ನಾಲಗೆಯಿಂದ, ಯಃ-ಯಾವುದು, ಅಧಿಗಮ್ಯತೇ-ಹೊಂದಲ್ಪಡುವುದೋ ಅಂತಹ, ನಾನಾರಸಃ-ಮಧುರಾಮ್ಲಾದಿ ರಸಗಳು, ತತಃ-ಆ ನಾಲಗೆಯಿಂದ, ಜಜ್ಞೇ-ಉಂಟಾದವು ॥೧೮॥

ವಿವಕ್ಷೋಃ-ಮಾತನಾಡಲೆಳಸಿದ, ಭೂಮ್ನಃ-ಪರಮಾತ್ಮನ, ಮುಖತಃ - ಮುಖದಿಂದ, ವಹ್ನಿಃ-ವಾಗಭಿಮಾನಿಯಾದ ಅಗ್ನಿಯು, ವಾಕ್-ವಾಗಿಂದ್ರಿಯವು, ತಯೋಃ-ಅವುಗಳಿಗೆ ಅಧೀನವಾದ, ವ್ಯಾಹೃ

ಪ್ರಾಣವು ಉತ್ಪನ್ನವಾಯಿತು ॥೧೬॥ ಭೃತ್ಯರಾದವರು ಒಡೆಯರನ್ನು ಅನುಸರಿಸುವಂತೆ, ಸಕಲೇಂದ್ರಿಯಗಳೂ ಆ ಪ್ರಾಣವ್ಯಾಪಾರವನ್ನನುಸರಿಸಿ ತಂತಮ್ಮ ಕಾರ್ಯಗಳನ್ನು ಮಾಡುವುವು. ಆ ಪ್ರಾಣ ವ್ಯಾಪಾರವು ನಿಂತ ಕೂಡಲೇ ಇಂದ್ರಿಯ ವ್ಯಾಪಾರಗಳೆಲ್ಲವೂ ನಿಂತು ಹೋಗುವುವು. ಆದುದರಿಂದ ಇದಕ್ಕೆ ಮಹಾ ಪ್ರಾಣವೆಂದು ಹೆಸರು ॥

ಆ ಪ್ರಾಣವಾಯುವು ಕಲಕುತ್ತಾ ಬರಲು ವಿರಾಟ್ಪುರುಷನ ಜಠರಾಗ್ನಿಯು ಪ್ರಜ್ವಲಿಸಿ, ಹಸಿವು ನೀರಡಿಕೆಗಳುಂಟಾದುವು. ಬಳಿಕ ಅನ್ನಪಾನಗಳಿಂದ ಅವುಗಳನ್ನು ಶಾಂತಿಗೊಳಿಸುವುದಕ್ಕಾಗಿ ಮೊದಲು ಮುಖವು ಹೊರಪಟ್ಟಿತು ॥ ೧೭ ॥ ಅದರಿಂದ ನಾಲಗೆಗೆ ನೆಲೆಯಾದ ದವಡೆಗಳುಂಟಾದುವು. ಆ ದವಡೆಗಳ ನಡುವೆ ಸರ್ವ ರಸಗಳ ಸಾರವನ್ನು ಗ್ರಹಿಸುವ ನಾಲಗೆಯೆಂಬ ಇಂದ್ರಿಯವು ವ್ಯಕ್ತವಾಯಿತು. ಅದರಿಂದ ಮಧುರಾಮ್ಲಾದಿ ರಸಗಳೆಂಬ ವಿಷಯಗಳೂ, ಆ ಜಿಹ್ವೇಂದ್ರಿಯಕ್ಕೆ ಅಭಿಮಾನಿಯಾದ ವರುಣನು ಉಂಟಾದರು ॥ ೧೮ ॥ ಅನಂತರದಲ್ಲಿ ಆ ಪುರುಷನಿಗೆ ನುಡಿಯಬೇಕೆಂಬಿಚ್ಛೆ

ಭೂನ್ನೋ ವಹ್ನಿ ರ್ವಾಗ್ವ್ಯಾಹೃತಂ ತಯೋಃ । ಜಲೇವೈ ತಸ್ಯ ಸುಚಿರಂ ನಿರೋಧ ಸ್ಸಮಜಾಯತ ॥೧೯॥ ನಾಸಿಕೇ ನಿರಭಿದ್ಯೇತಾಂ ದೋಧೂಯತಿ ನಭಸ್ವತಿ। ತತ್ರವಾಯು ರ್ಗಂಧವಹೋ ಘ್ರಾಣೋ ನಸಿ ಜಿಘೃಕ್ಷತಃ ಯದಾತ್ಮನಿ ನಿರಾಲೋಕ ಮಾತ್ಮಾನಂಚ ದಿದೃಕ್ಷತಃ ॥ ನಿರ್ಭಿನ್ನೇ ಹ್ಯಕ್ಷಿಣೀ ತಸ್ಯ ಜ್ಯೋತಿ ಶ್ಚಕ್ಷುರ್ಗುಣಗ್ರಹಃ ॥೨೦॥ ಬೋಧ್ಯಮಾನಸ್ಯ

ತಂ-ಭಾಷಣವು ಉಂಟಾಯಿತು, ತಸ್ಯ-ಆಪ್ರಾಣವಾಯುವಿಗೆ, ಜಲೇ-ವಾಯುವಿನಲ್ಲಿ, ಅಥವಾ - ಗಲೇ-ಕಂಠದಲ್ಲಿ, ನಿರೋಧಃ-ತಡೆಯು, ಸಮಜಾಯತ-ಉಂಟಾಯಿತು ॥ ೧೯ ॥ ನಭಸ್ವತಿ - ವಾಯುವು, ದೋಧೂಯತಿ-ಬಲವಾಗಿ ಬೀಸಲು, ನಾಸಿಕೇ-ಮೂಗಿನಹೊಳ್ಳೆಗಳು, ನಿರಭಿದ್ಯೇತಾಂ-ಹೊರಪಟ್ಟವು, ಜಿಘೃಕ್ಷತಃ-ಮೂಸಿನೋಡಲೆಳಸಿದ ಪುರುಷನ, ತತ್ರನಸಿ-ಆಮೂಗಿನಲ್ಲಿ, ಗಂಧವಹಃ-ಗಂಧವನ್ನು ಗ್ರಹಿಸುವ, ವಾಯುಃ - ವಾಯುವು, ಘ್ರಾಣಃ - ಘ್ರಾಣೇಂದ್ರಿಯವು, ಉಂಟಾಯಿತು ॥ ೨೦ ॥ ಯದಾ-ಯಾವಾಗ, ಆತ್ಮನಿ-ದೇಹದಲ್ಲಿ, ನಿರಾಲೋಕಂ-ಬೆಳಕಿಲ್ಲದಾಯಿತೋ, ಆಗ,ಆತ್ಮಾನಂ-ತನ್ನದೇಹವನ್ನೂ, ಚ-ಇತರವಸ್ತುಗಳನ್ನೂ, ದಿದೃಕ್ಷತಃ-ನೋಡಲೆಳಸಿದ, ತಸ್ಯ-ಆಪುರುಷನಿಗೆ, ಅಕ್ಷಿಣೀ-ಇಂದ್ರಿಯಸ್ಥಾನಗಳಾದ ಕಣ್ಣುಗಳು, ನಿರ್ಭಿನ್ನೇ-ಹೊರಪಟ್ಟವು, ಜ್ಯೋತಿಃ-ಆ ಕಣ್ಣಿಗೆ ಅಭಿಮಾನಿಯಾದ ಸೂರ್ಯನು, ಗುಣಗ್ರಹಃ-ರೂಪವನ್ನು ಗ್ರಹಿಸುವ, ಚಕ್ಷುಃ-ಚಕ್ಷುರಿಂದ್ರಿಯವೂ ಉಂಟಾದುವು ॥ ೨೧ ॥

ಋಷಿಭಿಃ-ವೇದಗಳಿಂದ, ಬೋಧ್ಯಮಾನಸ್ಯ - ಎಚ್ಚರಿಸಲ್ಪಡುವ, ಆತ್ಮನಃ - ತನ್ನ, ತತ್ - ಆ ಪ್ರಬೋಧವನ್ನು, ಜಿಘೃಕ್ಷತಃ-ಪಡೆಯಲಪೇಕ್ಷಿಸಿದ ಪುರುಷನಿಗೆ, ಕರ್ಣೌ-ಕಿವಿಗಳು, ನಿರಭಿದ್ಯೇತಾಂ-

ಯುಂಟಾಗಲು, ಆತನ ಮುಖದಿಂದ ವಾಗಭಿಮಾನಿಯಾದ ಅಗ್ನಿಯು, ವಾಗಿಂದ್ರಿಯವು, ಅವುಗಳಿಗೆ ಅಧೀನವಾದ ಸಂಭಾಷಣ ವ್ಯಾಪಾರವು, ಅವುಗಳೆಲ್ಲಕ್ಕೂ ಆಶ್ರಯವೆನಿಸಿದ ಕಂಠವು ಉಂಟಾದುವು. ಬಳಿಕ ಆ ಪ್ರಾಣವಾಯುವಿಗೆ ಕಂಠದಲ್ಲಿಯೇ ಬಹು ಕಾಲದವರೆಗೂ ತಡೆಯುಂಟಾಯಿತು ॥ ೧೯ ॥ ಕಂಠದಲ್ಲಿ ನಿರುದ್ಧವಾದ ಪ್ರಾಣವಾಯುವು ಬಹಳವಾಗಿ ಕ್ಷೋಭೆಗೊಳಿಸಲು, ಆ ವಾಯುಪ್ರಚಾರಕ್ಕೆ ಅನುಕೂಲವಾಗಿ ಘ್ರಾಣೇಂದ್ರಿಯಕ್ಕೆ ಸ್ಥಾನವೆನಿಸಿದ ಮೂಗಿನ ಹೊಳ್ಳೆಗಳು ಹೊರಪಟ್ಟವು. ಅವುಗಳ ಮೂಲಕವಾಗಿ ಗಂಧವನ್ನು ಗ್ರಹಿಸಬೇಕೆಂಬಾಸೆಯುಂಟಾದ ಕೂಡಲೇ, ಘ್ರಾಣೇಂದ್ರಿಯವು, ಆದಕ್ಕಭಿಮಾನಿಯಾದ ವಾಯುವು, ಅವುಗಳಿಗೆ ಅಧೀನವಾದ ಗಂಧವೆಂಬ ವಿಷಯವೂ, ಜನಿಸಿದುವು ॥ ೨೦ ॥ ಬಳಿಕ ತನ್ನ ದೇಹವೆನಿಸಿದ ಬ್ರಹ್ಮಾಂಡದಲ್ಲಿ ಬೆಳಕಿಲ್ಲದೆ ಕಗ್ಗತ್ತಲೆಯು ತುಂಬಿ, ತನ್ನ ದೇಹವು ಇತರ ವಸ್ತುಗಳೂ ಸಹ ಕಾಣದಿರಲು, ಆತನಿಗೆ ಅವುಗಳನ್ನು ನೋಡಬೇಕೆಂಬಿಚ್ಛೆಯುಂಟಾಯಿತು. ಕೂಡಲೇ ಚಕ್ಷುರಿಂದ್ರಿಯಸ್ಥಾನವೆನಿಸಿದ ಕಣ್ಣಿನ ಗೋಳಗಳು, ಅದಕ್ಕಭಿಮಾನಿಯಾದ ಸೂರ್ಯನು, ರೂಪವನ್ನು ಗ್ರಹಿಸುವ ಚಕ್ಷುರಿಂದ್ರಿಯವು, ಅವುಗಳಗಧೀನವಾದ ರೂಪವೆಂಬ ವಿಷಯವೂ ಸಹ ಉಂಟಾದುವು ॥ ೨೧ ॥ ಆಮೇಲೆ ತನ್ನ ನಿಶ್ವಸಿತ ರೂಪಗಳಾದ ವೇದಗಳು ಹೊಗಳುತ್ತಾ ಬರಲು, ಆ ವೈರಾಜನಿಗೆ ಅವುಗಳನ್ನು ಕೇಳಬೇಕೆಂಬ ಕೋರಿಕೆ

ಋಷಿಭಿ ರಾತ್ಮನ ಸ್ತಜ್ಜಿಘೃಕ್ಷತಃ। ಕರ್ಣೌ ಚ ನಿರಭಿದ್ಯೇತಾಂ ದಿಶ ಶ್ಶ್ರೋ
ತ್ರಂ ಗುಣಗ್ರಹಃ ॥೨೨॥ ವಸ್ತುನೋ ಮೃದು ಕಾಠಿನ್ಯ ಲಘು ಗುರ್ವೋ
ಷ್ಣ ಶೀತತಾಂ । ಜಿಘೃಕ್ಷತ ಸ್ತ್ವಜ್ ನಿರ್ಭಿನ್ನಾ ‡ತಸ್ಯಾಂ ರೋಮ
ಮಹೀರುಹಾಃ॥ತತ್ರ ಚಾಂತರ್ಬಹಿರ್ವಾತ ಸ್ತ್ವಚಾ ಲಬ್ಧಗುಣೋ ವೃತಃ॥

ವಿಂಗಡವಾದವು, ದಿಶಃ-ಶ್ರೋತ್ರಾಭಿಮಾನಿಗಳಾದ ದಿಕ್ಕುಗಳು, ಗುಣಗ್ರಹಃ-ಶಬ್ದವನ್ನು ಗ್ರಹಿಸುವ, ಶ್ರೋತ್ರಂ-ಶ್ರೋತ್ರೇಂದ್ರಿಯವು ಉಂಟಾದುವು ॥ ೨೨ ॥ ವಸ್ತುನಃ - ಪದಾರ್ಥದ, ಮೃದು...ತಾಂ, ಮೃದು-ಮೃದುತ್ವವು, ಕಾಠಿನ್ಯ-ಕಠಿನತ್ವವು, ಲಘು-ಲಘುತ್ವವು, ಗುರು-ಗರುತ್ವವು, ಆ+ಉಷ್ಣ = ಓಷ್ಣ-ಕೊಂಚಉಷ್ಣತ್ವವು,ಶೀತತಾಂ-ಶೈತ್ಯವು ಈಗುಣಗಳನ್ನು,ಜಿಘೃಕ್ಷತಃ-ಗ್ರಹಿಸಲಪೇಕ್ಷೆಯುಳ್ಳ ವಿರಾ ಜನಿಗೆ, ತ್ವಕ್-ತ್ವಗಿಂದ್ರಿಯಸ್ಥಾನವಾದಚರ್ಮವು, ನಿರ್ಭಿನ್ನಾ-ಹೊರಪಟ್ಟಿತು, ತಸ್ಯಾಂ-ಚರ್ಮದಲ್ಲಿ, ರೋಮ...ಹಾಃ, ರೋಮ-ರೋಮಗಳೆಂಬ ಇಂದ್ರಿಯವು, ಮಹೀರುಹಾಃ-ವನಸ್ಪತಿಗಳೆಂಬ ದೇವತೆಗಳು ಉಂಟಾದುವು, ತತ್ರ-ಆ ಚರ್ಮದಲ್ಲಿ, ತ್ವಚಾ-ತ್ವಗಿಂದ್ರಿಯದಿಂದ, ಲಬ್ಧಗುಣಃ-ಸ್ಪರ್ಶಗುಣವನ್ನು ಹೊಂದಿದ, ವಾತಃ-ವಾಯುವು, ಅಂತರ್ಬಹಿಃ-ಒಳಗೂ ಹೊರಗೂ ಕೂಡ, ವೃತಃ-ವ್ಯಾಪಿಸಿತು ॥೨೩॥

ಯುಂಟಾಯಿತು. ಒಡನೆಯೇ ಶ್ರೋತ್ರಾಧಿಷ್ಠಾನಗಳಾದ ಕರ್ಣಗೋಳಗಳು, ಶಬ್ದವನ್ನು ಗ್ರಹಿಸುವ ಕರ್ಣೇಂದ್ರಿಯವು, ಅದಕ್ಕಭಿಮಾನಿಗಳಾದ ದಿಕ್ಕುಗಳು, ಅವುಗಳಿಗಧೀನವಾದ ಶಬ್ದವೆಂಬ ವಿಷಯವು ಉಂಟಾದುವು ॥ ೨೨ ॥

ಅನಂತರದಲ್ಲಿ ಪದಾರ್ಥಗಳಲ್ಲಿರುವ ಮೃದುತ್ವ, ಕಠಿನತ್ವ, ಲಘುತ್ವ, ಗುರುತ್ವ, ಉಷ್ಣತ್ವ, ಶೈತ್ಯ, ಮೊದಲಾದ ಗುಣಗಳನ್ನು ತಿಳಿಯಬೇಕೆಂಬಾಸೆಯುಂಟಾಯಿತು. ಆಗ ಆ ಪುರುಷನಿಗೆ ತ್ವಗಿಂದ್ರಿಯಕ್ಕೆ ಅಧಿಷ್ಠಾನವಾದ ಚರ್ಮವು, ಆ ಚರ್ಮದಲ್ಲಿ ರೋಮಗಳೆಂಬ ಇಂದ್ರಿಯವು, ವನಸ್ಪತಿ (ವೃಕ್ಷ) ಗಳೆಂಬ ದೇವತೆಗಳೂ ಉಂಟಾದುವು, ಬಳಿಕ ಸ್ಪರ್ಶವೆಂಬ ಗುಣವುಳ್ಳ ತ್ವಗಿಂದ್ರಿಯಾಧಿದೇವತೆಯಾದ ವಾಯುವು, ಆ ಚರ್ಮದ ಒಳಗೂ ಹೊರಗೂ ಸಹ ವ್ಯಾಪಿಸಿತು ॥ ೨೩ ॥ ತರುವಾಯ ಆ ಪುರುಷನಿಗೆ ನಾನಾವಿಧಗಳಾದ ಕರ್ಮಗಳನ್ನು ಮಾಡಬೇಕೆಂಬ ಸಂಕಲ್ಪವುಂಟಾಗಲು, ಆ ಇಂದ್ರಿಯಕ್ಕೆ ನೆಲೆಯಾದ ಕೈಗಳೂ, ಬಲವೆಂಬ ಇಂದ್ರಿಯವೂ, ಆ ಇಂದ್ರಿಯಾಭಿಮಾನಿ

‡ (1) ವಿ. ಚರ್ಮದ ಮೇಲಣ ತೆಳುವಾದ ಪೊರೆಯು, ಒಳಗಣ ದಪ್ಪವಾದ ಚರ್ಮವು ಇವೆರಡೂ ತ್ವಗಿಂದ್ರಿಯಕ್ಕೆ ಸ್ಥಾನಗಳು. ಆ ಭೇದದಿಂದ ಮೇಲಣ ಪೊರೆಗೆ ತಿನಿಸು (ನವೆ) ವಿಷಯವೂ, ಓಷಧಿಗಳು ದೇವತೆಗಳೂ ಆಗಿರುವುವು. ಒಳಗಣ ಚರ್ಮಕ್ಕೆ ಸ್ಪರ್ಶವು ವಿಷಯವು, ವಾಯುವು ದೇವತೆಯೂ ಆಗಿರುವುವು. ಆದುದರಿಂದ ತ್ವಗಿಂದ್ರಿಯವೊಂದೇ ಮೇಲಣ ಪೊರೆಯಲ್ಲಿದ್ದು ರೋಮಗಳಲ್ಲಿ ವ್ಯಾಪಿಸಿಕೊಂಡು, ವನಸ್ಪತಿದೇವತಾ ಕವಾಗಿ ತಿನಿಸನ್ನುಗ್ರಹಿಸುವುದು. ಅದೇ ಇಂದ್ರಿಯವು ವಾಯು ದೇವತಾಕವೆನಿಸಿ ಒಳಗೂ ಹೊರಗೂ ಸಹ ಸ್ಪರ್ಶವನ್ನು ಗ್ರಹಿಸುವುದೆಂದು ಭಾವವು.

(2) ಭಾ. ಹೊರಗಣ ತಿನಿಸಿನಿಂದೊಡಗೂಡಿದ ಸ್ಪರ್ಶವನ್ನು ಗ್ರಹಿಸುವ ತ್ವಗಿಂದ್ರಿಯಕ್ಕೆ 'ರೋಮ' ವೆಂದು ಹೆಸರು.

ಹಸ್ತೌ ರುರುಹತು ಸ್ತಸ್ಯ ನಾನಾಕರ್ಮ ಚಿಕೀರ್ಷಯಾ । ತಯೋಸ್ತು
ಬಲವಾ ನಿಂದ್ರ ಆದಾನ ಮುಭಯಾಶ್ರಯಂ ॥ ೨೪ ॥ ಗತಿಂ ಜಿಗೀಷತಃ
ಪಾದೌ ರುರುಹಾತೇಽಭಿಕಾಮಿಕಾಂ । ಪದ್ಭ್ಯಾಂ ಯಜ್ಞ ಸ್ಸ್ವಯಂ
ಹವ್ಯಂ ಕರ್ಮಭಿಃ ಕ್ರಿಯತೇ ನೃಭಿಃ ॥ ೨೫ ॥ ನಿರಭಿದ್ಯತ ಶಿಶ್ನೋ ವೈ
ಪ್ರಜಾನಂದಾಽಮೃತಾಽರ್ಥಿನಃ । ಉಪಸ್ಥ ಆಸೀ ತ್ಕಾಮಾನಾಂ ಪ್ರಿಯಂ
ತದುಭಯಾಶ್ರಯಂ ॥ ೨೬ ॥ ಉತ್ಸಿಸೃಕ್ಷೋ ರ್ಧಾತುಮಲಂ ನಿರಭಿ
ದ್ಯತ ವೈಗುದಂ । ತತಃಪಾಯು ಸ್ತತೋ ಮಿತ್ರ ಉತ್ಸರ್ಗ ಉಭಯಾ

ತಸ್ಯ-ಆ ಪುರುಷನಿಗೆ, ನಾನಾ...ಯಾ, ನಾನಾಕರ್ಮ - ಅನೇಕವಿಧಗಳಾದ ಕಾರ್ಯಗಳನ್ನು, ಚಿಕೀರ್ಷಯಾ-ಮಾಡಬೇಕೆಂಬಿಚ್ಛೆಯಿಂದ, ಹಸ್ತೌ-ಕೈಗಳು, ರುರುಹತುಃ-ವ್ಯಕ್ತಗಳಾದುವು, ತಯೋಃ-ಆ ಕೈಗಳಿಗೆ, ಬಲವಾನ್ - ಬಲಿಷ್ಠನಾದ, ಇಂದ್ರಃ - ಇಂದ್ರನು, ಅಭಿಮಾನಿಯು, ಉಭಯಾಶ್ರಯಂ-ಅವೆರಡನ್ನೂ ಆಶ್ರಯಿಸಿದವಿಷಯವು, ಆದಾನಂ - ತೆಗೆದುಕೊಳ್ಳುವ ಕೆಲಸವು ॥ ೨೪ ॥ ಅಭಿಕಾಮಿಕಾಂ-ಇಚ್ಛಾನುಸಾರವಾದ, ಗತಿಂ - ಸಂಚಾರವನ್ನು, ಜಿಗೀಷತಃ - ಮಾಡಲೆಳಸಿದ, ಆಪುರುಷನಿಗೆ, ಪಾದೌ-ಕಾಲುಗಳು, ರುರುಹಾತೇ-ಅಭಿವ್ಯಕ್ತಗಳಾದುವು, ಯಜ್ಞಃ-ವಿಷ್ಣುವು, ಪದ್ಭ್ಯಾಂ-ಗತಿಸಾಮರ್ಥ್ಯವನ್ನುಂಟುಮಾಡುವ, ಪಾದೇಂದ್ರಿಯದೊಡನೆ, ಸ್ವಯಂ-ತಾನೇ ಪಾದಗಳಲ್ಲಿ ನಿಂತನು, ನೃಭಿಃ-ಜನರಿಂದ, ಕರ್ಮಭಿಃ - ಗಮನಾಗಮನಾದಿ ಕಾರ್ಯಗಳಿಂದ, ಹವ್ಯಂ-ಯಜ್ಞಾರ್ಥವಾದ ವಸ್ತುಗಳು, ಕ್ರಿಯತೇ-ಸಂಪಾದಿಸಲ್ಪಡುವುವು ॥ ೨೫ ॥ ಪ್ರಜಾ...ನಃ, ಪ್ರಜಾ-ಸಂತತಿಯಿಂದುಂಟಾಗುವ, ಆನಂದ-ಸಂತೋಷವನ್ನೂ, ಅಮೃತ-ಸ್ವರ್ಗಾದಿ ಲೋಕಗಳನ್ನೂ, ಅರ್ಥಿನಃ-ಬಯಸುವ, ಆ ಪುರುಷನಿಗೆ, ಶಿಶ್ನಃ-ಉಪಸ್ಥೇಂದ್ರಿಯಕ್ಕೆ ಸ್ಥಾನವಾದ ಶಿಶ್ನವೂ, ಉಪಸ್ಥಃ-ಇಂದ್ರಿಯವೂ, ತದು...ಯಂ, ತತ್ - ಆ, ಉಭಯ-ಶಿಶ್ನೋಪಸ್ಥಗಳನ್ನು, ಆಶ್ರಯಂ-ಆಶ್ರಯಿಸಿರುವ, ಕಾಮಾನಾಂ - ಸ್ತ್ರೀಸಂಭೋಗ ಸಂಬಂಧವಾದ, ಪ್ರಿಯಂ-ಸುಖವೂ, ಆಸೀತ್-ಉಂಟಾಯಿತು ॥ ೨೬ ॥ ಧಾತುಮಲಂ - ಭುಜಿಸಿದ ಪದಾರ್ಥಗಳಲ್ಲಿ ಉಳಿದ ನಿಸ್ಸಾರಾಂಶವನ್ನು, ಉತ್ಸಿಸೃಕ್ಷೋಃ-ಬಿಡಲೆಳಸಿದ ಆ ಪುರುಷನಿಗೆ, ಗುದಂ-ಗುದಸ್ಥಾನವು,

ಯಾದ ಇಂದ್ರನೂ, ಅವುಗಳಿಗಧೀನವಾದ ಆದಾನ (ತೆಗೆದುಕೊಳ್ಳುವುದು) ವೆಂಬ ವಿಷಯವೂ ಸಹ ಉಂಟಾದುವು ॥ ೨೪ ॥ ಬಳಿಕ ಆ ಪುರುಷನಿಗೆ ಇಚ್ಛಾನುಸಾರವಾಗಿ ಸಂಚರಿಸಬೇಕೆಂದು ಸಂಕಲ್ಪವುಂಟಾಗಲು, ಕಾಲುಗಳೆಂಬ ಇಂದ್ರಿಯ ಸ್ಥಾನವೂ, ಗತಿಸಾಮರ್ಥ್ಯವೆಂಬಿಂದ್ರಿಯವೂ, ಆ ಇಂದ್ರಿಯಾಭಿಮಾನಿಯಾದ ವಿಷ್ಣುವೂ, ಗಮನವೆಂಬ ವಿಷಯವೂ, ಗಮನ ಫಲವಾದ ಹವಿಸ್ಸು ಮೊದಲಾದ ದ್ರವ್ಯಗಳೂ ಉಂಟಾದುವು ॥ ೨೫ ॥ ಅನಂತರದಲ್ಲಿ ಆ ವಿರಾಟ್ಪುರುಷನಿಗೆ, ಸಂತಾನವನ್ನೂ, ಅದರಿಂದುಂಟಾಗುವ ಆನಂದವನ್ನೂ, ಆ ಸಂತತಿಯಿಂದುಂಟಾಗುವ ಸ್ವರ್ಗಾದಿ ಭೋಗಗಳನ್ನೂ ಪಡೆಯ ಬೇಕೆಂಬ ಬಯಕೆ ಯುಂಟಾಗಲು, ಶಿಶ್ನವೆಂಬ ಇಂದ್ರಿಯ ಸ್ಥಾನವೂ, ಉಪಸ್ಥವೆಂಬ ಇಂದ್ರಿಯವೂ, ಆ ಇಂದ್ರಿಯಾಭಿಮಾನಿಯಾದ ಪ್ರಜಾಪತಿಯೂ, ಅವರಿಗಧೀನವಾದ ಸ್ತ್ರೀಸಂಭೋಗ ಸುಖವೆಂಬ ವಿಷಯವೂ ಸಹ ಉಂಟಾದುವು ॥ ೨೬ ॥ ತರುವಾಯ ಭೋಜನಮಾಡಿದ ಪದಾರ್ಥಗಳಲ್ಲಿ ಅವಶಿಷ್ಟವಾಗಿ ನಿಲ್ಲುವ ಆಸಾರವಾದ

ಶ್ರಯಃ ॥ ೨೭ ॥ ಆಸಿಸೃಪ್ಸೋಃ ಪುರಃ ಪುರ್ಯಾ ನಾಭಿದ್ವಾರ ಮಪಾ
ನತಃ । ತತ್ರಾಽಪಾನ ಸ್ತತೋ ಮೃತ್ಯು ಪೃಥಕ್ತ್ವ ಮುಭಯಾಶ್ರಯಂ ॥
ಆದಿತ್ಸೋ ರನ್ನಪಾನಾನಾ ಮಾಸನ್ ಕುಕ್ಷ್ಯಂತ್ರನಾಡಯಃ । ನದ್ಯ ಸ್ಸಮು
ದ್ರಾಶ್ಚ ತಯೋ ಸ್ತುಷ್ಟಿಃ ಪುಷ್ಟಿ ಸ್ತದಾಶ್ರಯೇ ॥೨೯॥ ನಿದಿಧ್ಯಾಸೋ
ರಾತ್ಮಮಾಯಾಂ ಹೃದಯಂ ನಿರಭಿದ್ಯತ । ತತೋ ಮನ ಸ್ತತ ಶ್ಚಂದ್ರಃ
ಸಂಕಲ್ಪಃ ಕಾಮಏವಚ ॥೩೦॥ ತ್ವಕ್ಚರ್ಮ ಮಾಂಸ ರುಧಿರ ಮೇದೋ

ತತಃ-ಅದರಿಂದ, ಪಾಯುಃ-ಪಾಯುವೆಂಬಿಂದ್ರಿಯವೂ, ತತಃ-ಅದರಿಂದ, ಮಿತ್ರಃ - ಸೂರ್ಯನೂ, ಉಭಯಾಶ್ರಯಃ-ಆ ಎರಡನ್ನೂ ಆಶ್ರಯಿಸಿರುವ, ಉತ್ಸರ್ಗಃ-ಮಲವಿಸರ್ಜನವೂ ಸಹ, ನಿರಭಿದ್ಯತ-ಬೇರ್ಪಟ್ಟಿತು ॥ ೨೭ ॥ ಪುರ್ಯಾಃ-ಶರೀರದಿಂದ, ಪುರಃ-ಶರೀರಾಂತರಗಳನ್ನು, ಆಸಿಸೃಪ್ಸೋಃ - ಹೊಂದಲೆಳಸಿದ ವಿರಾಜನಿಗೆ, ನಾಭಿದ್ವಾರಂ-ಹೊಕ್ಕುಳದ್ವಾರವು, ತತ್ರ-ಅಲ್ಲಿ, ಅಪಾನಃ-ಅಪಾನವೆಂಬ ಇಂದ್ರಿಯವು, ತತಃ ಅಪಾನತಃ-ಆ ಅಪಾನದಿಂದ, ಮೃತ್ಯುಃ-ಮೃತ್ಯುವೆಂಬ ಅಭಿಮಾನಿದೇವತೆಯೂ, ಉಭಯಾಶ್ರಯಂ-ಆ ಎರಡನ್ನೂ ಆಶ್ರಯಿಸಿದ, ಪೃಥಕ್ತ್ವಂಚ-ಶರೀರತ್ಯಾಗರೂಪವಾದ ಮರಣವೂ, ಆಸೀತ್-ಉಂಟಾಯಿತು॥೨೮॥

ಅನ್ನಪಾನಾನಾಂ-ಅನ್ನೋದಕಗಳನ್ನು, ಆದಿತ್ಸೋಃ-ಗ್ರಹಿಸಲೆಳಸಿದ ವಿರಾಜನಿಗೆ, ಕುಕ್ಷ್ಯಂ...ಯಃ, ಕುಕ್ಷಿ-ಹೊಟ್ಟೆಯೆಂಬ ಸ್ಥಾನವು, ಅಂತ್ರ-ಕರುಳುಗಳೆಂಬ ಇಂದ್ರಿಯವೂ, ನಾಡಯಃ-ನರಗಳು ತಯೋಃ-ಅವುಗಳಲ್ಲಿ, ನದ್ಯಃ-ಕರುಳಿಗೆ ಅಭಿಮಾನಿಗಳಾದ ನದಿಗಳು, ಸಮುದ್ರಾಶ್ಚ-ನರಗಳಿಗೆ ಅಭಿಮಾನಿಗಳಾದ ಸಮುದ್ರಗಳೂ, ತದಾಶ್ರಯೇ - ಅವುಗಳನ್ನಾಶ್ರಯಿಸಿರುವ, ತುಷ್ಟಿಃ - ತೃಪ್ತಿಯು, ಪುಷ್ಟಿಃ-ಪೋಷಣವೂ, ಆಸನ್-ಉಂಟಾದುವು ॥ ೨೯ ॥ ಆತ್ಮಮಾಯಾಂ-ತನ್ನಮಾಯೆಯನ್ನು, ನಿದಿಧ್ಯಾಸೋಃ-ಧ್ಯಾನಮಾಡಲೆಳಸಿದ, ಆ ವೈರಾಜನಿಗೆ, ಹೃದಯಂ-ಹೃದಯಸ್ಥಾನವೂ, ತತಃ-ಅದರಿಂದ, ಮನಃ - ಮನಸ್ಸೆಂಬ ಇಂದ್ರಿಯವೂ, ತತಃ-ಅದರಿಂದ, ಚಂದ್ರಃ-ಚಂದ್ರನೆಂಬ ಅಭಿಮಾನಿಯೂ, ಸಂಕಲ್ಪಃ-ಇಚ್ಛೆಯು, ಕಾಮಏವಚ-ಕೋರಿಕೆಗಳೂ ಸಹ, ನಿರಭಿದ್ಯತ-ಉಂಟಾದುವು ॥ ೩೦ ॥ ತ್ವಕ್-ಮೇಲಣ ಪೊರೆಯು

ಧಾತು ಮಲವನ್ನು ತ್ಯಜಿಸಬೇಕೆಂಬ ಸಂಕಲ್ಪವುಂಟಾಗಲು, ಗುದವೆಂಬ ಇಂದ್ರಿಯ ಸ್ಥಾನವೂ, ಪಾಯುವೆಂಬ ಇಂದ್ರಿಯವೂ, ಮಿತ್ರನೆಂಬ ಅಧಿದೇವತೆಯೂ, ಮಲವಿಸರ್ಜನವೆಂಬ ವಿಷಯವೂ ಉಂಟಾದುವು ॥ ೨೭ ॥ ಆಮೇಲೆ ಆ ವಿರಾಜನಿಗೆ ತಾನಿದ್ದ ಶರೀರವನ್ನುಳಿದು ಬೇರೇ ಶರೀರವನ್ನು ಹೊಂದಬೇಕೆಂಬಾಸೆಯುಂಟಾಗಲು, ಹೊಕ್ಕುಳೆಂಬ ಇಂದ್ರಿಯ ಸ್ಥಾನವು, ಅಪಾನವೆಂಬ ಇಂದ್ರಿಯವೂ, ಮೃತ್ಯುವೆಂಬ ಅಧಿದೇವತೆಯೂ, ದೇಹತ್ಯಾಗವೆಂಬ ವಿಷಯವೂ, ಉಂಟಾದುವು ॥ ೨೮ ॥

ಅನಂತರದಲ್ಲಿ ಭಗವಂತನಿಗೆ ಅನ್ನ ಪಾನಗಳನ್ನು ತೆಗೆದುಕೊಳ್ಳಬೇಕೆಂಬ ಕೋರಿಕೆಯುಂಟಾಗಲು, ಹೊಟ್ಟೆಯೆಂಬ ಇಂದ್ರಿಯ ಸ್ಥಾನವು, ಕರುಳು, ನರಗಳೆಂಬ ಇಂದ್ರಿಯಗಳು, ನದಿಗಳು, ಸಮುದ್ರಗಳೆಂಬ ಅಭಿಮಾನಿ ದೇವತೆಗಳು, ತೃಪ್ತಿ, ಶರೀರಪುಷ್ಟಿಗಳೆಂಬ ವಿಷಯಗಳೂ ಉಂಟಾದುವು ॥೨೯॥ ಬಳಿಕ ಆವಿರಾಜನು ತನ್ನ ಮಾಯಾಸ್ವರೂಪವನ್ನು ತಿಳಿಯಬೇಕೆಂದಾಲೋಚಿಸಲು ಹೃದಯವೆಂಬ ಇಂದ್ರಿಯ ಸ್ಥಾನವು, ಮನಸ್ಸೆಂಬ ಇಂದ್ರಿಯವು, ಚಂದ್ರನೆಂಬ ಅಭಿಮಾನಿ ದೇವತೆಯೂ, ಸಂಕಲ್ಪ

ಮಜ್ಜಾಽಸ್ಥಿ ಧಾತವಃ । ಭೂಮ್ಯಪ್ತೇಜೋ ಮಯಾ ಸ್ಸಪ್ತ ಪ್ರಾಣೋ ವ್ಯೋಮಾಂಬು ವಾಯುಭಿಃ ॥ ೩೧ ॥ ಗುಣಾತ್ಮಕಾ ನೀಂದ್ರಿಯಾಣಿ ಭೂತಾದಿ ಪ್ರಭವಾ ಗುಣಾಃ । ಮನ ಸ್ಸರ್ವವಿಕಾರಾತ್ಮಾ ಬುದ್ಧಿ ರ್ವಿಜ್ಞಾನ ಕಾರಿಣೀ ॥ ೩೨ ॥ ಏತ ದ್ಭಗವತೋ ರೂಪಂ ಸ್ಥೂಲಂ ತೇ ವ್ಯಾಹೃತಂ ಮಯಾ । ಮಹ್ಯಾದಿಭಿ ಶ್ಚಾವರಣೈ ರಷ್ಟಭಿ ರ್ಬಹಿರಾ ವೃತಂ ॥ ೩೩ ॥

ಚರ್ಮ - ಒಳಗಣ ಚರ್ಮವು, ಮಾಂಸ-ಮಾಂಸವು, ರುಧಿರ-ರಕ್ತವು, ಮೇದಃ-ಕೊಬ್ಬು, ಮಜ್ಜಾ-ಮಜ್ಜೆಯು, ಅಸ್ಥಿ-ಮೂಳೆಯು, ಇವೆಂಬ, ಸಪ್ತಧಾತವಃ - ಏಳುಧಾತುಗಳು, ಭೂ...ಯಾಃ, ಭೂಮಿ-ಭೂಮಿಯು, ಅಪ್-ಜಲವು, ತೇಜಃ-ಅಗ್ನಿಯು, ಇವುಗಳ, ಮಯ - ಸ್ವರೂಪವಾದವುಗಳು, ಪ್ರಾಣಃ-ಪ್ರಾಣವು, ವ್ಯೋ...ಭಿಃ, ವ್ಯೋಮ-ಆಕಾಶ, ಅಂಬು - ಜಲ, ವಾಯುಭಿಃ - ಗಾಳಿ ಇವುಗಳಿಂದುಂಟಾಗಿರುವುದು ॥ ೩೧ ॥ ಇಂದ್ರಿಯಾಣಿ-ಇಂದ್ರಿಯಗಳು, ಗುಣಾತ್ಮಕಾನಿ, ಗುಣ-ಶಬ್ದಾದಿ ವಿಷಯಗಳಲ್ಲಿ, ಆತ್ಮಕಾನಿ-ಪ್ರವೃತ್ತಿಯುಳ್ಳವುಗಳು, ಗುಣಾಃ - ಶಬ್ದಾದಿವಿಷಯಗಳು, ಭೂ...ವಾಃ, ಭೂತಾದಿ - ಅಹಂಕಾರದಿಂದ, ಪ್ರಭವಾಃ-ಉಂಟಾದವುಗಳು, ಮನಃ-ಮನಸ್ಸು, ಸರ್ವ...ತ್ಮಾ, ಸರ್ವ-ಎಲ್ಲಾ, ವಿಕಾರ-ಬದಲಾವಣೆಗಳ, ಆತ್ಮಾ-ಸ್ವರೂಪವಾದದ್ದು, ಬುದ್ಧಿಃ - ಬುದ್ಧಿಯು, ವಿಜ್ಞಾನಕಾರಿಣೀ - ಇದ್ದಹಾಗೆಯೇ ಗ್ರಹಿಸುವ ಸ್ವಭಾವವುಳ್ಳದ್ದು ॥ ೩೦ ॥ ಮಹ್ಯಾದಿಭಿಃ-ಭೂಮಿ ಮೊದಲಾದ, ಅಷ್ಟಭಿಃ-ಎಂಟು, ಆವರಣೈಃ-ಆವರಣಗಳಿಂದ, ಬಹಿಃ-ಹೊರಗೆ, ಆವೃತಂ-ಬಳಪಡಿಸಲ್ಪಟ್ಟ, ಭಗವತಃ - ಭಗವಂತನ, ಏತತ್ - ಈ, ಸ್ಥೂಲಂ-ಪ್ರಸಿದ್ಧವಾದ, ರೂಪಂ-ರೂಪವು, ಮಯಾ-ನನ್ನಿಂದ, ತೇ-ನಿನಗೆ, ವ್ಯಾಹೃತಂ-ಹೇಳಲ್ಪಟ್ಟಿತು ॥ ಅತಃಪರಂ-ಇದಕ್ಕಿಂತ ಶ್ರೇಷ್ಠವಾದ ರೂಪವು, ಸೂಕ್ಷ್ಮತಮಂ-ಅತ್ಯಂತಸೂಕ್ಷ್ಮವಾಗಿಯೂ,ಅವ್ಯಕ್ತಂ-

ಕಾಮ, ಮೊದಲಾದ ವಿಷಯಗಳೂ ಉಂಟಾದುವು ॥ ೩೦ ॥ ಇಂತು ಸಮಷ್ಟಿ ಶರೀರನಾದ ಭಗವಂತನಿಂದ ಅಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ ಭೇದದಿಂದ ವ್ಯಷ್ಟಿರೂಪವಾಗಿ ಅವಯವಗಳುತ್ಪತ್ತಿಯಾದುದನ್ನು ವಿವರಿಸಿದೆನು. ಇನ್ನು ಅವುಗಳ ಅಂಶಭೂತಗಳಾದ ಧಾತುಗಳ ಸ್ವರೂಪವನ್ನು ಹೇಳುವೆನು ಕೇಳು. ತ್ವಕ್ಕು, ಚರ್ಮ, ಮಾಂಸ, ರಕ್ತ, ಕೊಬ್ಬು, ಮಜ್ಜೆ, ಮೂಳೆ ಇವುಗಳು ಏಳು ಧಾತುಗಳೂ ಪೃಥಿವಿ, ಜಲ ತೇಜಸ್ಸುಗಳಿಂದ ಉಂಟಾದುವು, ಪ್ರಾಣವು ಆಕಾಶ, ಜಲ, ವಾಯುಗಳಿಂದುಂಟಾಯಿತು ॥ ೩೧ ॥ ಚಕ್ಷುಸ್ಸು ಮೊದಲಾದ ಇಂದ್ರಿಯಗಳು ಶಬ್ದಮೊದಲಾದ ವಿಷಯಗಳನ್ನು ಗ್ರಹಿಸುವ ಸ್ವಭಾವ ವುಳ್ಳವುಗಳಾದುವು. ಆ ಇಂದ್ರಿಯಗಳು, ವಿಷಯಗಳೂ ಸಹ ಭೂತಾದಿಯಾದ ಅಹಂಕಾರದಿಂದುಂಟಾದುವು. ಮನಸ್ಸು, ಕಾಮ, ಸಂಕಲ್ಪ ಮೊದಲಾದ ಸಕಲ ವಿಕಾರಗಳಿಗೂ ಆಧಾರವಾಯಿತು. ಬುದ್ಧಿಯೆಂಬುದು, ಇದ್ದಹಾಗೆಯೇ ವಸ್ತು ಸ್ಥಿತಿಯನ್ನು ಗ್ರಹಿಸಿತು. ಬುದ್ಧಿಗೂ ಮನಸ್ಸಿಗೂ ಇದೇವ್ಯತ್ಯಾಸವು ॥ ೩೨ ॥ ಅಯ್ಯಾ ಸಾಧುಶಿಖಾಮಣಿಯೆ ! ಪೃಥಿವಿ ಮೊದಲಾದ ಎಂಟು ವರಣಗಳಿಂದ ಹೊರಗೆ ಮುಚ್ಚಲ್ಪಟ್ಟಿರುವ ಭಗವಂತನ ಈ ಸ್ಥೂಲರೂಪವನ್ನು ನಿನಗೆ ನಾನು ತಿಳುಹಿದೆನು ॥೩೩॥ ಆದಿಮಧ್ಯಾಂತ ರಹಿತವೂ, ಅವ್ಯಕ್ತವೂ, ಅವಾಙ್ಮಾನಸ

*ಅತಃ ಪರಂ ಸೂಕ್ಷ್ಮತಮ ಮವ್ಯಕ್ತಂ ನಿರ್ವಿಶೇಷಣಂ । ಅನಾದಿ ಮಧ್ಯ
ನಿಧನಂ ನಿತ್ಯಂ ವಾಙ್ಮನಸಃ ಪರಂ ॥ ೩೪ ॥ ‡ಅಮುನೀ ಭಗವದ್ರೂಪೇ
ಮಯಾ ತೇ ಹ್ಯನು ವರ್ಣಿತೇ। ಉಭೇ ಅಪಿ ನಗೃಹ್ಣಂತಿ ಮಾಯಾ ಸೃಷ್ಟೇ

ಅಗೋಚರವಾಗಿಯೂ, ನಿರ್ವಿಶೇಷಣಂ - ಅನಿರ್ವಚನೀಯವಾಗಿಯೂ, ಅನಾದಿಮಧ್ಯನಿಧನಂ - ಆದಿ ಮಧ್ಯಾಂತಗಳಿಲ್ಲದ್ದಾಗಿಯೂ, ನಿತ್ಯಂ-ನಾಶರಹಿತವಾಗಿಯೂ. ವಾಙ್ಮನಸಃ-ಮಾತುಗಳಿಗೂ, ಮನಸ್ಸಿಗೂ, ಪರಂ-ದೂರವಾಗಿಯೂ, ಇರುವುದು ॥ ೩೪ ॥ ಮಯಾ-ನನ್ನಿಂದ, ತೇ-ನಿನಗೆ, ಅನುವರ್ಣಿತೇ-ವಿವರಿಸಲ್ಪಟ್ಟ, ಮಾಯಾಸೃಷ್ಟೇ - ಮಾಯೆಯಿಂದ ನಿರ್ಮಿತಗಳಾದ ಅಮುನೀ-ಈ, ಉಭೇ - ಎರಡು, ಭಗವದ್ರೂಪೇ ಅಪಿ-ಭಗವಂತನ ರೂಪಗಳನ್ನೂ, ವಿಪಶ್ಚಿತಃ-ತತ್ವಜ್ಞರು, ನಗೃಹ್ಣಂತಿ-ಅಂಗೀಕರಿಸು

ಗೋಚರವೂ, ನಿರ್ವಿಶೇಷವೂ, ಎನಿಸಿದ ಭಗವಂತನ ಸೂಕ್ಷ್ಮರೂಪವು ಅಥವಾ ಲಿಂಗಶರೀರವು ಇದಕ್ಕಿಂತಲೂ ಉತ್ತಮವಾದುದು ॥ ೩೪ ॥

ಈಗ ನಾನು ನಿನಗೆ ತಿಳುಹಿದ ಸ್ಥೂಲಸೂಕ್ಷ್ಮಗಳೆಂಬೆರಡು ರೂಪಗಳೂ ಉಪಾಸನಾರ್ಥವಾಗಿ ಭಗವಂತನಲ್ಲಿ ಮಾಯೆಯಿಂದ ಆರೋಪಿಸಲ್ಪಟ್ಟವುಗಳೇ ಹೊರತು ವಾಸ್ತವಗಳಲ್ಲವಾದುದರಿಂದ ತತ್ವಜ್ಞರಾದ ಜ್ಞಾನಿಗಳು ಈ ಎರಡು ರೂಪಗಳನ್ನೂ ಸತ್ಯವೆಂದು ಅಂಗೀಕರಿಸುವುದಿಲ್ಲ. ॥ ೩೫ ॥ ಇನ್ನು ಪೂರ್ವದಲ್ಲಿ ಹೇಳಿದಂತೆ ಆ ಭಗ

* (1) ವಿ. ಈ ಶ್ಲೋಕವು ಜೀವಪರವು. ಪರಮಾತ್ಮನಿಗೆ ಈ ಜಗದ್ರೂಪವಾದ ಸ್ಥೂಲ ದೇಹದಂತೆಯೇ ಇದಕ್ಕಿಂತಲೂ ಉತ್ತಮವೆನಿಸಿದ, ಮುಕ್ತರಾದವರ ಜೀವರೂಪವೂ ಒಂದುಂಟು. ಅದು ಇಂದ್ರಿಯ ಗೋಚರವಲ್ಲ. ಶಬ್ದಾದಿಗುಣಗಳಿಂದ ಕೂಡಿಲ್ಲ. ಅದಕ್ಕೆ ಹುಟ್ಟುಬಾಳು ಸಾವುಗಳಿಲ್ಲ ಅದು ಮನಸ್ಸಿನಿಂದಾಗಲಿ, ಮಾತುಗಳಿಂದಾಗಲಿ ತಿಳಿಯತಕ್ಕುದಲ್ಲ.

(2) ವಿ. ಈವರೆಗೆ ವಿವರಿಸಿದ ವಿರಾಡ್ರೂಪವು ಭಗವಂತನಿಗೆ ಪ್ರತಿಮಾಸ್ಥಾನವೆಂತಲೂ, ಈ ಶ್ಲೋಕದಲ್ಲಿ ವಿವರಿಸುವ ರೂಪವು ನಿಜರೂಪವೆಂತಲೂ ತಿಳಿಯಬೇಕು.

‡ (೧) ವಿ. ಬಂಧಮೋಕ್ಷಗಳೆರಡೂ ಭಗವಂತನ ಸಂಕಲ್ಪಾಧೀನಗಳಾದುದರಿಂದ, ಮುಕ್ತಜೀವರಲ್ಲಿಯೂ ಸ್ವತಃ ಪಾರಿಶುಧ್ಯವಿರುವುದಿಲ್ಲ. ಉಪಾಸನಾವಿಷಯವಾದ ಭಗವದ್ರೂಪವು ಹೇಯ ಪ್ರತಿಭಟ (ಶುಭ) ವಾಗಿಯೂ, ಕಲ್ಯಾಣಗುಣ ಪೂರ್ಣವಾಗಿಯೂ ಇರಬೇಕು. ಈ ಮುಕ್ತಜೀವರಲ್ಲಿ, ಶುಭವಿದ್ದರೂ ಕಲ್ಯಾಣ ಗುಣಾಶ್ರಯತ್ವವಿಲ್ಲದುದರಿಂದ, ಹಿಂದೆ ವಿವರಿಸಿದಸಂಸಾರಿಯಾದ ಸ್ಥೂಲರೂಪವಾಗಲಿ, ಸ್ವತಃಶುದ್ಧವಲ್ಲದ ಸೂಕ್ಷ್ಮರೂಪ (ಮುಕ್ತರೂಪ) ವಾಗಲಿ, ಈ ಎರಡೂ ಜ್ಞಾನಿಗಳ ಉಪಾಸನೆಗೆ ತಕ್ಕವುಗಳಲ್ಲ. ‡ ಶ್ರುತಿಯಲ್ಲಿ ಹೇಳಿದಂತೆ ತೇಜೋಮಯವಾದ ಪರಮಾತ್ಮನ ಮೂರ್ತ ರೂಪವನ್ನೇ ಧ್ಯಾನಿಸಬೇಕು　　‡ ಶ್ರು. ಆದಿತ್ಯವರ್ಣಂ, ತಮಸಃ ಪರಸ್ತಾತ್.

(೨) ವಿ. ಅಯ್ಯಾ ಸಾಧುವೆ! ನಾನು ಈ ವರೆಗೂ ನಿನಗೆ ವಿವರಿಸಿದ ಮತ್ತು ಭಗವಂತನ ಸಂಕಲ್ಪರೂಪವಾದ ಇಚ್ಛೆಯಿಂದಲೂ, ಮಾಯೆಯಿಂದಲೂಸೃಜಿಸಲ್ಪಟ್ಟ, ಈ ಸ್ಥೂಲಸೂಕ್ಷ್ಮರೂಪಗಳೆರಡನ್ನೂ ಅಜ್ಞಾನಿಗಳು ಅರಿಯಲಾರರು. ಜ್ಞಾನಿಗಳು ಎರಡು ರೂಪಗಳನ್ನೂ ತಿಳಿದು ಉಪಾಸನೆಮಾಡುವರೆಂದು ಭಾವವು. ಇಲ್ಲಿ 'ಅಪಿಪಶ್ಚಿತಃ' ಎಂದು ಪದಚ್ಛೇದವನ್ನು ಮಾಡಿ ಅನ್ವಯಿಸಬೇಕು.

ವಿಪಶ್ಚಿತಃ ॥ ೩೫ ॥ ಸ ವಾಚ್ಯ ವಾಚಕ ತಯಾ ಭಗವಾನ್ ಬ್ರಹ್ಮ
ರೂಪಧೃಕ್। ನಾಮರೂಪ ಕ್ರಿಯಾ ಧತ್ತೇ ಸಕರ್ಮಾಽಕರ್ಮಕಃ ಪರಃ ॥
*ಪ್ರಜಾಪತೀನ್ ಮನೂನ್ ದೇವಾನ್ ಋಷೀನ್ ಪಿತೃಗಣಾನ್ ಪೃಥಕ್ ।
ಸಿದ್ಧ ಚಾರಣ ಗಂಧರ್ವಾನ್ ವಿದ್ಯಾಧ್ರಾಽಸುರಗುಹ್ಯ ಕಾನ್ ॥ ೩೭ ॥
ಕಿನ್ನರಾಪ್ಸರಸೋ ನಾಗಾನ್ ಸರ್ಪಾನ್ ಕಿಂಪುರುಷಾ ನ್ನರಾನ್ । ಮಾತೃ

ವುದಿಲ್ಲ ॥ ೩೫ ॥ ಅಕರ್ಮಕಃ-ನಿಷ್ಕ್ರಿಯನಾಗಿದ್ದರೂ, ಸಕರ್ಮಾ-ಮಾಯೆಯಿಂದ ಕಾರ್ಯಗಳನ್ನು ನಡೆಯಿಸುವ, ಪರಃ-ಮಾಯಾತೀತನಾದ, ಸಭಗವಾನ್-ಆಭಗವಂತನು; ಬ್ರಹ್ಮರೂಪಧೃಕ್ - ಬ್ರಹ್ಮನೆಂಬರೂಪವನ್ನು ಧರಿಸಿ, ವಾಚ್ಯವಾಚಕತಯಾ-ಪದಾರ್ಥ, ಶಬ್ದ, ಇವುಗಳರೂಪದಿಂದ, ನಾಮ... ಯಾಃ, ನಾಮ, ರೂಪ, ಕಾರ್ಯಗಳನ್ನು, ಧತ್ತೇ-ಧರಿಸುತ್ತಾನೆ ॥ ೩೬ ॥

ಪ್ರಜಾಪತೀನ್-ನವಬ್ರಹ್ಮರನ್ನು, ಮನೂನ್-ಚತುರ್ದಶಮನುಗಳನ್ನೂ, ; ದೇವಾನ್-ದೇವತೆಗಳನ್ನೂ, ಋಷೀನ್-ಸಪ್ತಋಷಿಗಳನ್ನು, ಪಿತೃಗಣಾನ್-ಪಿತೃ ದೇವತೆಗಳನ್ನು, ಪೃಥಕ್ - ಪ್ರತ್ಯೇಕವಾಗಿ ,ಸಿದ್ಧ... ವಾನ್, ಸಿದ್ಧರು ಚಾರಣರು, ಗಂಧರ್ವರು ಇವರನ್ನು ವಿದ್ಯಾ... ಕಾನ್, ವಿದ್ಯಾಧರರು, ರಾಕ್ಷಸರು, ಯಕ್ಷರು, ಇವರನ್ನು ॥ ೩೭ ॥ ಕಿನ್ನರಾಪ್ಸರಸಃ - ಕಿನ್ನರರನ್ನು ಅಪ್ಸರಸ್ತ್ರೀಯರನ್ನು, ನಾಗಾನ್ - ಸರ್ಪವಿಶೇಷಗಳನ್ನು, ಸರ್ಪಾನ್-ಹಾವುಗಳನ್ನೂ, ಕಿಂಪುರುಷಾನ್-ಕಿಂಪುರುಷರನ್ನು, ನರಾನ್-ಮನುಷ್ಯರನ್ನು, ಮಾತೃ...ಚಾಂಶ್ಚ, ಸಪ್ತಮಾತೃಗಳು, ರಾಕ್ಷಸರು, ರಾಕ್ಷಸರು, ಪಿಶಾಚರು ಇವರನ್ನು, ಪ್ರೇತ...ಕಾನ್,

---

ವಂತನ ಗುಣಕರ್ಮಾದಿಗಳನ್ನು ವಿವರಿಸುವೆನು ಕೇಳು. ಆ ಭಗವಂತನು ಮಾಯಾತೀತನಾದುದರಿಂದ ಸ್ವತಃ ನಿಷ್ಕ್ರಿಯನಾದರೂ, ಮಾಯೆಯಿಂದ ಸ್ಥೂಲಸೂಕ್ಷ್ಮಗಳೆಂಬ ರೂಪಗಳನ್ನು ಧರಿಸಿ ಸೃಷ್ಟ್ಯಾದಿ ಲೀಲೆಗಳನ್ನು ನಡೆಯಿಸುತ್ತಾ, ಬ್ರಹ್ಮನೆಂಬ ಹೆಸರನ್ನು ಪಡೆದು, ಪೃಥಿವ್ಯಾದಿ ಪ್ರಧಾನಾಂತಗಳಾದ ವಾಚ್ಯ 'ವಸ್ತು' ಗಳನ್ನೂ, ಆ ವಸ್ತುಗಳ ಹೆಸರುಗಳೆಂಬ ವಾಚಕಗಳನ್ನೂ, ಆ ಆ ಕಾರ್ಯಗಳನ್ನೂ ಸಹ ಸೃಜಿಸುವನು ॥೩೬॥ ಎಂತೆಂದರೆ:—ಆ ಭಗವಂತನು, ಮರೀಚಿಮೊದಲಾದ ನವಬ್ರಹ್ಮರು, ಚತುರ್ದಶಮನುಗಳು, ಇಂದ್ರಾದಿದೇವತೆಗಳು, ಕಶ್ಯಪಾದಿ ಋಷಿಗಳು, ಪಿತೃದೇವತೆಗಳು, ಸಿದ್ಧರು, ಚಾರಣರು, ಗಂಧರ್ವರು, ವಿದ್ಯಾಧರರು, ರಾಕ್ಷಸರು, ಯಕ್ಷರು, ಕಿನ್ನರರು, ಅಪ್ಸರಸ್ಸುಗಳು, ನಾಗರು, ಸರ್ಪಗಳು, ಕಿಂಪುರುಷರು, ಮನುಷ್ಯರು, ಬ್ರಾಹ್ಮಿ ಮೊದಲಾದ ಏಳು ಮಂದಿ ಮಾತೃಗಳು, ಪಿಶಾಚರು, ಪ್ರೇತಗಣಗಳು, ಭೂತಗಳು, ವಿಘ್ನದೇವತೆಗಳು, ರುಕ್ಮಾಂಡು ಮೊದಲಾದ ಕೂಶ್ಮಾಂಡ ದೇವತೆಗಳು, ಕಾಲಕರ್ಣನೇ ಮೊದಲಾದ ಉನ್ಮಾದ ದೇವತೆಗಳು, ಬೇತಾಳಗಳು, ಯಾತುಧಾನರು, ನವಗ್ರಹಗಳು, ಪಶುಗಳು, ವೃಕ್ಷಗಳು, ಬೆಟ್ಟಗಳು, ಸರ್ಪಗಳು, ಮತ್ತು ಸ್ಥಾವರ ಜಂಗಮಭೇದದಿಂದೆರಡು ವಿಧವಾಗಿಯೂ, ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಯರೂಪದಿಂದ ನಾಲ್ಕು ಬಗೆಯಾಗಿಯೂ, ಆಕಾಶ ನೀರು, ನೆಲಗಳಲ್ಲಿ ಹುಟ್ಟಿ ಬೆಳೆವ ಯಾವ ಇತರ ಭೂತಗಳುಂಟೋ, ಆ ವಸ್ತುಗಳೆಂಬ ರೂಪಗಳನ್ನು ಅವುಗಳ ಹೆಸರುಗಳೆಂಬ ನಾಮಗಳನ್ನೂ ಅವುಗಳ

ರಕ್ಷಃ ಪಿಶಾಚಾಂಶ್ಚ ಪ್ರೇತಭೂತ ವಿನಾಯಕಾನ್ ॥ ೩೮ ॥ ಕೂಶ್ಮಾಂಡೋನ್ಮಾದ ಬೇತಾಳಾನ್ ಯಾತುಧಾನಾನ್ ಗ್ರಹಾನಪಿ । ಖಗಾನ್ ಮೃಗಾನ್ ಪಶೂನ್ ವೃಕ್ಷಾನ್ ಗಿರೀನ್ ನೃಪ ! ಸರೀಸೃಪಾನ್ ॥ ೩೯ ॥ ದ್ವಿವಿಧಾಶ್ಚತುರ್ವಿಧಾ ಯೇಽನ್ಯೇ ಜಲಸ್ಥಲ *ನಭೌಕಸಃ। ಕುಶಲಾಽಕುಶಲಾ ಮಿಶ್ರಾಃ ಕರ್ಮಣಾಂ ಗತಯ ಸ್ತ್ವಿಮಾಃ ॥ ೪೦ ॥ ಸತ್ತ್ವಂ ರಜ ಸ್ತಮ ಇತಿ ತಿಸ್ರ ಸ್ಸುರ ನೃ ನಾರಕಾಃ । ತತ್ರಾಪ್ಯೇಕೈಕಶೋ ರಾಜನ್ ! ಭಿದ್ಯಂತೇ ಗತಯ ಸ್ತ್ರಿಧಾ। ಯದೇಕೈಕ ತರೋಽನ್ಯಾಭ್ಯಾಂ ಸ್ವಭಾವ ಉಪ

ಪ್ರೇತ-ಪ್ರೇತಗಳನ್ನು, ಭೂತ-ಭೂತಗಳನ್ನು, ವಿನಾಯಕಾನ್-ವಿಘ್ನದೇವತೆಗಳನ್ನು ॥೩೮॥ ಕೂಶ್ಮಾಂ...ಲಾನ್, ಕೂಶ್ಮಾಂಡ, ಉನ್ಮಾದ, ಬೇತಾಳ ಇವುಗಳನ್ನು ಯಾತುಧಾನಾನ್-ರಾಕ್ಷಸವಿಶೇಷವನ್ನು, ಗ್ರಹಾನಪಿ-ಗ್ರಹಗಳನ್ನು, ಖಗಾನ್-ಪಕ್ಷಿಗಳನ್ನು, ಮೃಗಾನ್-ಮೃಗಗಳನ್ನು, ಪಶೂನ್-ಪಶುಗಳನ್ನು,ವೃಕ್ಷಾನ್-ಗಿಡಮರಗಳನ್ನು, ಗಿರೀನ್-ಬೆಟ್ಟಗಳನ್ನು, ಸರೀಸೃಪಾನ್-ಸರ್ಪಗಳನ್ನು ॥ ೩೯ ॥

ದ್ವಿವಿಧಾ-ಸ್ಥಿರಚರಗಳೆಂಬೆರಡು ಭೇದಗಳು, ಚತುರ್ವಿಧಾಃ-ಜರಾಯುಜಾದಿ ನಾಲ್ಕು ಬಗೆಗಳುಳ್ಳ ಜಲ...ಸಃ,ಜಲ-ನೀರು,ಸ್ಥಲ-ನೆಲ,ನಭ-ಆಕಾಶ ಇವುಗಳಲ್ಲಿ ಓಕಸಃ-ವಾಸವಾಗಿ ಇರುವ, ಅನ್ಯೇ-ಇತರಗಳಾದ,ಯೇ-ಯಾವ ವಸ್ತುಗಳುಂಟೋ ಅವುಗಳನ್ನೂ ಸೃಷ್ಟಿಸಿದನು,ಕರ್ಮಣಾಂ-ಕರ್ಮಗಳಿಗೆ, ಕುಶಲಾಕುಶಲಾಃ-ಉತ್ತಮ ಮಧ್ಯಮಗಳೆಂತಲೂ, ಮಿಶ್ರಾಃ-ಮಿಶ್ರಗಳೆಂತಲೂ, ಇಮಾಗತಯಃ-ಈ ಗತಿಗಳು ಮೂರು ॥ ೪೦ ॥ ಹೇ ರಾಜನ್-ಎಲೈ ರಾಜನೆ! ಸತ್ವಂ-ಸತ್ವವು, ರಜಃ-ರಜೋಗುಣವು, ತಮ ಇತಿ-ತಮೋಗುಣವು ಎಂದು, ಸುರ...ಕಾಃ, ಸುರ-ದೇವತೆಗಳ, ನೃ-ಮನುಷ್ಯರ, ನಾರಕಾಃ-ಸ್ಥಾವರಾದಿಗಳ, ಗತಯಃ-ಗತಿಗಳು, ತಿಸ್ರಃ-ಮೂರು, ತತ್ರಾಪಿ-ಅವುಗಳಲ್ಲಿಯೂ, ಯದಾ-ಯಾವಾಗ, ಏಕೈಕತರಃ-ಸಾತ್ವಿಕವೊದಲಾದ ಒಂದೊಂದು, ಸ್ವಭಾವಃ-ಸ್ವಭಾವವು, ಅನ್ಯಾಭ್ಯಾಂ-ಇತರ ಗುಣಗಳ ಸ್ವಭಾವಗಳಿಂದ, ಉಪಹನ್ಯತೇ-ತಿರಸ್ಕರಿಸಲ್ಪಡುವುದೋ, ತದಾ-ಆಗ, ಏಕೈಕಶಃ - ಒಂದೊಂದರಲ್ಲಿಯೂ,ತ್ರಿಧಾ-ಮೂರು ಬಗೆಯಾಗಿ, ಗತಯಃ-ಗತಿಗಳು, ಭಿದ್ಯಂತೇ-ಭೇದಿಸುತ್ತವೆ ॥೪೧॥

ನಡವಳಿಗಳೆಂಬ ಕರ್ಮಗಳನ್ನೂ ನಿರ್ಮಾಣಮಾಡಿದನು. ಅಯ್ಯಾ ಧರಾವರನೆ! ಇನ್ನು †ನೀನು ಬೆಸಗೊಂಡಮೇರೆಗೆ ಕರ್ಮಗಳನ್ನುಸುರುವೆನು ಲಾಲಿಸು. ಪುಣ್ಯ, ಅಪುಣ್ಯ, ಮಿಶ್ರವೆಂದು ಮೂರು ಬಗೆಯಾಗಿರುವ ಕರ್ಮಗಳಿಗೆ ಉತ್ತಮ, ಮಧ್ಯಮ, ಮಿಶ್ರಗಳೆಂಬ ಮೂರು ಬಗೆಯ ಗತಿಗಳುಂಟು ॥ ೪೦ ॥ ಆ ಮೂರು ಗತಿಗಳನ್ನು ವಿವರಿಸುವೆನು ಕೇಳು. ಸತ್ವಗುಣದಿಂದ ಉತ್ತಮ ಕರ್ಮವು,ಅದರಿಂದ ದೇವಾದ್ಯುತ್ತಮ ಜನ್ಮವೂ ಉಂಟಾಗುವುದು. ರಜೋಗುಣದಿಂದ ಮಧ್ಯಮ ಕರ್ಮವು, ಅದರಿಂದ ಮನುಷ್ಯಜನ್ಮವು ಬರುವುದು. ತಮೋಗುಣದಿಂದ ಅಧಮ ಕರ್ಮವು, ಅದರಿಂದ ಸ್ಥಾವರ ತಿರ್ಯಗಾದಿ ಜನ್ಮವೂ ಪ್ರಾಪ್ತವಾಗುವುವು. ಅವುಗಳಲ್ಲಿ ಸ್ವಭಾವ ವ್ಯತ್ಯಾಸದಿಂದ ಪ್ರತಿಯೊಂದರಲ್ಲಿಯೂ ಸತ್ವಾದಿ

---

† (ಅ. ೯. ಶ್ಲೋ. ೧೭.) ಸ್ಕಂಧ ಸಂಖ್ಯೆಯನ್ನು ತೋರಿಸುವಲ್ಲಿ ಅನೇಕ ಸ್ಕಂಧವೆಂದು ತಿಳಿಯಬೇಕು.

ಹಸ್ಯತೇ ॥ ೪೧ ॥ ಸ ಏವೇದಂ ಜಗದ್ಧಾತಾ ಭಗವಾನ್ ಧರ್ಮರೂಪ
ಧೃಕ್ । ಪುಷ್ಣಾತಿ ಸ್ಥಾಪಯನ್ ವಿಶ್ವಂ ತಿರ್ಯಙ್ನರ ಸುರಾತ್ಮಭಿಃ ॥೪೨॥
ತತಃ ಕಾಲಾಗ್ನಿ ರುದ್ರಾತ್ಮಾ ಯತ್ಸೃಷ್ಟ ಮಿದ ಮಾತ್ಮನಃ । ಸಂನಿ
ಯಚ್ಛತಿ ತತ್ಕಾಲೇ ಘನಾನೀಕ ಮಿವಾನಿಲಃ ॥ ೪೩ ॥ ಇತ್ಥಂ ಭಾ
ವೇನ ಕಥಿತೋ ಭಗವಾನ್ ಭಗವತ್ತಮಃ । ನೇತ್ಥಂ ಭಾವೇನ ಹಿ ಪರಂ

ಜಗದ್ಧಾತಾ - ಲೋಕಕರ್ತನಾದ, ಸಏವಭಗವಾನ್ - ಆ ಭಗವಂತನೇ, ಧರ್ಮರೂಪಧೃಕ್-ಧರ್ಮಸ್ವರೂಪವನ್ನು ಪಡೆದು, ತಿರ್ಯಕ್-ಮತ್ಸ್ಯ ಮೊದಲಾದ ಜಂತುಗಳ, ನರ-ರಾಮಾದಿಪುರುಷರ, ಸುರ-ವಾಮನಾದಿದೇವತೆಗಳ, ಆತ್ಮಭಿಃ-ಅವತಾರಗಳಿಂದ, ವಿಶ್ವಂ-ಜಗತ್ತನ್ನು, ಸ್ಥಾಪಯನ್-ಕಾಪಾಡುತ್ತಾ, ಪುಷ್ಣಾತಿ - ಬೆಳೆಯಿಸುತ್ತಾನೆ ॥ ೪೨ ॥ ತತ್-ಆಬಳಿಕ, ಕಾಲಾ...ತ್ಮಾ, ಕಾಲ-ಪ್ರಳಯಕಾಲದ, ಅಗ್ನಿ-ಬೆಂಕಿಯು, ರುದ್ರ-ರುದ್ರನ, ಆತ್ಮಾಸ್ವರೂಪನಾಗಿ, ಆತ್ಮನಃ - ತನ್ನಿಂದ, ಯತ್ - ಯಾವುದು, ಸೃಷ್ಟಂ - ಸೃಷ್ಟಿಸಲ್ಪಟ್ಟಿತೋ, ಇದಂ-ಈ ಜಗತ್ತನ್ನು, ತತ್ಕಾಲೆ - ಆ ಪ್ರಳಯಕಾಲದಲ್ಲಿ, ಘನಾನೀಕಂ - ಮೋಡಗಳಗುಂಪನ್ನು, ಅನಿಲ ಇವ - ಬಿರುಗಾಳಿಯಂತೆ, ಸಂನಿಯಚ್ಛತಿ-ಲಯಗೊಳಿಸುತ್ತಾನೆ ॥ ೪೩ ॥ ಭಗವತ್ತಮಃ-ಜ್ಞಾನಾದಿಗಳಿಂದ ಪರಿಪೂರ್ಣನಾದ, ಭಗವಾನ್-ಭಗವಂತನು, ಇತ್ಥಂಭಾವೇನ-ಈ ರೀತಿಯಾಗಿ, ಕಥಿತಃ-ಹೇಳಲ್ಪಟ್ಟನು, ಸೂರಯಸ್ತು - ಜ್ಞಾನಿಗಳಾದರೋ, ಪರಂ - ಪರಮಾತ್ಮನನ್ನು, ಇತ್ಥಂಭಾವೇನ-ಈ ವಿಧದಿಂದಲೆ, ದ್ರಷ್ಟುಂ-ನೋಡುವುದಕ್ಕೆ,

ಭೇದವನ್ನನುಸರಿಸಿ ಮೂರು ಬಗೆಯಿರುವುದು ॥ ೪೧ ॥ ಇಂತು ಭಗವಂತನು ಬ್ರಹ್ಮರೂಪದಿಂದ ಜಗತ್ತನ್ನು ಸೃಜಿಸಿ, ತಾನೇ ವಿಷ್ಣುರೂಪದಿಂದಲೂ, ಮತ್ಸ್ಯ ಕೂರ್ಮಾದಿ ತಿರ್ಯಗ್ಜಂತುಗಳ, ಶ್ರೀರಾಮ ಪರಶುರಾಮಾದಿ ಮನುಷ್ಯರ,ಮತ್ತು ವಾಮನಾದಿದೇವತೆಗಳ ಅವತಾರಗಳಿಂದಲೂ, ಧರ್ಮಸ್ವರೂಪನಾಗಿ ಈ ಜಗತ್ತನ್ನುಪಾಲಿಸುವನು ॥ ೪೨ ॥ ಬಳಿಕ ಆತನೇ ಪ್ರಳಯಕಾಲದಲ್ಲಿ ಕಾಲಾಗ್ನಿರುದ್ರರರೂಪವನ್ನುಪಡೆದು ಮೇಘಗಳ ತಂಡವನ್ನು ಈಡಾಡುವ ಬಿರುಗಾಳಿಯಂತೆ ತನ್ನಿಂದ ಸೃಷ್ಟವಾದ ಜಗತ್ತನ್ನೆಲ್ಲಾ, ಲಯಗೊಳಿಸುವನು ॥೪೩॥ ಅಯ್ಯಾ ಭೂನಾಥನೆ ! *ಇಂತು ಶ್ರುತಿಯಲ್ಲಿ ಹೇಳಿದಂತೆ, ಜಗತ್ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದವನು ಪರಮಾತ್ಮನೆಂದು, ಪ್ರಾಕೃತರ ತಿಳಿವಳಿಕೆಗಾಗಿ ಸ್ಥೂಲಮಾರ್ಗದಿಂದ ಆ ಸ್ವರೂಪವನ್ನು ತಿಳುಹಿದೆನು. ಆದರೆ ತತ್ತ್ವವನ್ನರಿತ ಜ್ಞಾನಿಗಳು ಈ ತಟಸ್ಥಲಕ್ಷಣದಿಂದಲೇ ಪರಮಾತ್ಮನನ್ನು ಕಾಣಲಿಚ್ಛಿಸುವುದಿಲ್ಲ ॥೪೪॥ ಏಕೆಂದರೆ:—ಭಗವಂತನಿಗೆ ಈ ಜಗತ್ತಿನ ಸೃಷ್ಟಿ ಮೊದಲಾದ ಕಾರ್ಯಗಳಲ್ಲಿ ಸ್ವಭಾವವಾಗಿ ಕರ್ತೃತ್ವಾದಿಗಳಿಲ್ಲ. ತಟಸ್ಥ ಲಕ್ಷಣದಿಂದ ಹೇಳಲ್ಪಡುವ ಕರ್ತೃತ್ವಾದಿಗಳೂ ಪರಮಾತ್ಮನಲ್ಲಿ ಮಾಯೆಯಿಂದ ಆರೋಪಿಸಲ್ಪಟ್ಟಿರುವುವು. ಆದುದರಿಂ

* ಶ್ರು. ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ । ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯೇತಿ॥

ದ್ರಷ್ಟು ಮರ್ಹಂತಿ ಸೂರಯಃ ॥ ೪೪ ॥ *ನಾಸ್ಯ ಕರ್ಮಾಣಿ ಜನ್ಮಾದೌ
ಪರಸ್ಯಾನು ವಿಧೀಯತೇ । ಕರ್ತೃತ್ವ ಪ್ರತಿಷೇಧಾರ್ಥಂ ಮಾಯಯಾ
ರೋಪಿತಂ ಹಿ ತತ್ ॥ ೪೫ ॥ $ ಅಯಂ ತು ಬ್ರಹ್ಮಣಃ ಕಲ್ಪಃ ಸವಿ

ನಾರ್ಹಂತಿಹಿ - ಸಮರ್ಥರಾಗುವುದಿಲ್ಲವಷ್ಟೆ ॥ ೪೪ ॥ ಅಸ್ಯ-ಈ ಜಗತ್ತಿನ, ಜನ್ಮಾದೌ - ಸೃಷ್ಟಿ ಮೊದಲಾದ ಕಾರ್ಯಗಳಲ್ಲಿ. ಪರಸ್ಯ - ಪರಮಾತ್ಮನಿಗೆ, ಕರ್ತೃತ್ವವು, ಕರ್ತೃತ್ವಪ್ರತಿಷೇಧಾರ್ಥಂ-

---

ದಲೇ *ಶ್ರುತಿಯೂ ಸಹ, ಅಪ್ರಸಕ್ತವಾದ ವಿಷಯವನ್ನು ನಿಷೇಧಿಸುವುದಕ್ಕಾಗುವುದಿಲ್ಲ ವಾದ ಕಾರಣ, ಪರಮಾತ್ಮನಲ್ಲಿ ಕರ್ತೃತ್ವಾದಿಗಳನ್ನು ನಿಷೇಧಮಾಡುವುದಕ್ಕಾಗಿ ಯೇ

---

* ೧ ವಿ. ಜನರು ತಂತಮ್ಮ ಕರ್ಮಾನುಸಾರವಾಗಿ ಜನ್ಮಾದಿಗಳನ್ನು ಪಡೆಯುವರು. §ಗೀತೆಯಲ್ಲಿ ಹೇಳಿದಮೇರೆ ಭಗವಂತನು ಜೀವರಂತೆ ತನ್ನ ಜನ್ಮಾದಿಗಳು, ಕರ್ಮಾಧೀನಗಳಲ್ಲವೆಂದು ನಿಷೇಧಿಸುವುದಕ್ಕಾಗಿಯೇ ತನ್ನ ಸಂಕಲ್ಪಾನುಸಾರವಾಗಿ, ದೈವ ಮಾನವಾದಿ ಜನ್ಮಗಳನ್ನು, ಅಂಗೀಕರಿಸುವನೆಂದು ತಾತ್ಪರ್ಯವು. §ಗೀತಾ-ಶ್ಲೋಕ॥ ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್। ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ.

೨ ವಿ. ಪರಮಾತ್ಮನು ಜೀವರ ಅಜ್ಞಾನವನ್ನು ಕಳೆಯುವುದಕ್ಕಾಗಿ ತನ್ನ ಸಂಕಲ್ಪದಿಂದಲೇ ಚಿತ್ಸ್ವರೂಪವಾದ ಜಗತ್ಕರ್ತೃತ್ವಾದಿಗಳನ್ನು ಪಡೆದಿರುವನು. ಶ್ಲೋ॥ ಪ್ರತಿಷೇಧಾಯಬಂಧಸ್ಯ ಜೀವಾನಾಂ ಪರಮೇಶಿತುಃ । ಸ್ವೇಚ್ಛಯೈವತು ಕರ್ತೃತ್ವಂ ನಿತ್ಯರೂಪಂ ಚಿದಾತ್ಮಕಂ ॥

$ ಕ್ರ. ಬ್ರಹ್ಮದೇವನ ಒಂದು ದಿನಕ್ಕೆ ಕಲ್ಪವೆಂದು ಹೆಸರು. ಅವು ಯಾವುವೆಂದರೆ:— ಶ್ಲೋ॥ (1) ಪ್ರಥಮ ಶ್ವೇತ ಕಲ್ಪಸ್ತು 2) ದ್ವಿತೀಯೋ ನೀಲಲೋಹಿತಃ । (3) ವಾಮದೇವಸ್ತೃತೀಯಸ್ತು (4) ತತೋಗಾಥಾಂತರೋಽಪರಃ ॥ (5) ರೌರವಃಪಂಚಮಃಪ್ರೋಕ್ತಃ (6) ಷಷ್ಠಃಪ್ರಾಣ ಇತಿ ಸ್ಮೃತಃ । (7) ಸಪ್ತಮೋಽಥ ಬೃಹತ್ಕಲ್ಪಃ (8) ಕಂದರ್ಪೋಽಷ್ಟಮ ಉಚ್ಯತೇ ॥ (9) ಸತ್ಯೋಽಥ ನವಮಃಪ್ರೋಕ್ತಃ (10) ಈಶಾನೋ ದಶಮ ಸ್ಮೃತಃ (11) ಧ್ಯಾನ ಏಕಾದಶಃ ಪ್ರೋಕ್ತ (12) ಸ್ತಥಾ ಸಾರಸ್ವತೋಽಪರಃ । (13) ತ್ರಯೋದಶ ಉದಾನಸ್ತು (14) ಗರುಡೋಽಥ ಚತುರ್ದಶಃ ॥ (15) ಕೌರ್ಮಃ ಪಂಚದಶೋ ಜ್ಞೇಯಃ ಪೌರ್ಣಮಾಸೀ ಪ್ರಜಾಪತೇಃ (16) ॥ ಷೋಡಶೋ ನಾರಸಿಂಹಸ್ತು (17) ಸಮಾಧಿಸ್ತು ತತೋಽಪರಃ । (18) ಆಗ್ನೇಯೋ (19) ವಿಷ್ಣುಜ (20) ಸ್ಸೌರ (21) ಸೋಮಕಲ್ಪಸ್ತತೋ ಪರಃ (22) ದ್ವಾವಿಂಶೋ ಭಾವನಃಪ್ರೋಕ್ತಃ (23) ಸುಪುಮಾನಿತಿ ಚಾಪರಃ ॥ (24) ವೈಕುಂಠ (25) ಶ್ಚಾರ್ಚಿಷಸ್ತದ್ವತ್ (26) ವಲ್ಮೀಕಕಲ್ಪಸ್ತತೋಽಪರಃ । (27) ಸಪ್ತವಿಂಶೋಽಥ ವೈರಾಜೋ (28) ಗೌರೀಕಲ್ಪಸ್ತಥಾಪರಃ । (29) ಮಾಹೇಶ್ವರಸ್ತಥಾ ಪ್ರೋಕ್ತ ಸ್ತ್ರಿಪುರೋಯತ್ರಘಾತಿತಃ॥ (30) ಪಿತೃಕಲ್ಪ ಸ್ತಥಾ ಚಾಂತೇ ಯಃಕುಹೂ ಬ್ರಾಹ್ಮಣಸ್ಸ್ಮೃತಃ ॥ ತ್ರಿಂಶತ್ಕಲ್ಪಾಸ್ಸಮಾಖ್ಯಾತಾಃ ಬ್ರಹ್ಮಣೋಽದಿವಸ್ಯೈಸ್ಸದಾ । ಅತೀತಾಶ್ಚ ಭವಿಷ್ಯಾಶ್ಚ ವರಾಹೋಽವರ್ತತೇ ಧುನಾ।ಪ್ರತಿಪದ್ಬ್ರಹ್ಮಣಃ ಪ್ರೋಕ್ತಾ ದ್ವಿತೀಯಾರ್ಧಸ್ಯ ಸಾಂಪ್ರತಂ ॥ (ಸ್ಕಂದ ಪ್ರಭಾಸಖಂಡ) ಶ್ವೇತವರಾಹ ಕಲ್ಪಮೊದಲು ಪಿತೃಕಲ್ಪದ ವರೆಗೂ ಇರುವ ಮುವತ್ತು ಕಲ್ಪಗಳು ಬ್ರಹ್ಮನಿಗೆ ಮುವತ್ತು ದಿನಗಳೆನಿಸುವುವು. ಅವುಗಳಲ್ಲಿ ಕೌರ್ಮಕಲ್ಪವು ಹುಣ್ಣಿಮೆ. ಪಿತೃಕಲ್ಪವೇ ಅಮಾವಾಸ್ಯೆಯು. ಈಗ ನಡೆಯುತ್ತಿರುವ ವರಾಹ ಕಲ್ಪವು ಬ್ರಹ್ಮನಿಗೆ ಪ್ರತಿಪತ್ತೆನಿಸುವುದು. ಅದರಲ್ಲಿಯೂ ಈಗ ಎರಡನೆಯ ಜಾವವು ನಡೆಯುತ್ತಿರುವುದು.

ಕಲ್ಪ ಉದಾಹೃತಃ । ವಿಧಿ ಸ್ಸಾಧಾರಣೋ ಯತ್ರ ಸರ್ಗಾಃ ಪ್ರಾಕೃತ
ವೈಕೃತಾಃ ॥ ೪೬ ॥ ಪರಿಮಾಣಂಚ ಕಾಲಸ್ಯ ಕಲ್ಪಲಕ್ಷಣ ವಿಗ್ರ
ಹಂ। ಯಥಾ ಪುರಸ್ತಾ ದ್ವ್ಯಾಖ್ಯಾಸ್ಯೇ ಪಾದ್ಮಂ ಕಲ್ಪ ಮಥೋ ಶೃಣು ॥
ಶ್ರೀ ಶೌನಕಃ ॥ ಯದಾಹ ನೋ ಭವಾನ್ ಸೂತ ! ಕ್ಷತ್ತಾ ಭಾಗವತೋ
ತ್ತಮಃ । ಚಚಾರ ತೀರ್ಥಾನಿ ಭುವ ಸ್ತ್ಯಕ್ತ್ವಾ ಬಂಧೂನ್ ಸುದುಸ್ತ್ಯ

ಕರ್ತೃತ್ವವನ್ನು ನಿಷೇಧಿಸುವುದಕ್ಕಾಗಿ, ಅನುವಿಧೀಯತೇ-ಅನುವಾದಮಾಡಲ್ಪಟ್ಟಿರುತ್ತದೆ, ತತ್- ಆ ಕರ್ತೃತ್ವವು, ಮಾಯಯಾ-ಮಾಯೆಯಿಂದ, ಆರೋಪಿತಂಹಿ-ಆರೋಪಿತವಾದುದಷ್ಟೆ ॥ ೪೫ ॥

ಯತ್ರ-ಯಾವ ಮಹಾಕಲ್ಪದಲ್ಲಿ, ಪ್ರಾಕೃತವೈಕೃತಾಃ-ಪ್ರಾಕೃತ-ಪ್ರಕೃತಿ ಜನ್ಯಗಳಾದ ಮಹದಾದಿಗಳು, ವೈಕೃತ-ಅವಾಂತರ ಕಲ್ಪದ ಸ್ಥಾವರ ಜಂಗಮ ವಸ್ತುಗಳು, ಇವುಗಳ ಸೃಷ್ಟಿಯು, ಸಾಧಾರಣಃ-ಸಾಮಾನ್ಯವಾದ, ವಿಧಿಃ-ನಿಯಮವೋ, ಅಂತಹ, ಸವಿಕಲ್ಪಃ-ಅವಾಂತರಕಲ್ಪದಿಂದ ಕೂಡಿದ, ಅಯಂ-ಈ, ಬ್ರಹ್ಮಣಃ-ಬ್ರಹ್ಮನ, ಕಲ್ಪಃ-ಕಲ್ಪವು, ಉದಾಹೃತಃ-ತಿಳುಹಿಸಲ್ಪಟ್ಟಿತು ॥ ಕಾಲಸ್ಯ-ಕಾಲದ. ಪರಿಮಾಣಂಚ - ಪ್ರಮಾಣವನ್ನೂ, ಕಲ್ಪ...ಹಂ, ಕಲ್ಪ-ಕಲ್ಪಗಳ, ಲಕ್ಷಣ - ಲಕ್ಷಣವನ್ನೂ, ವಿಗ್ರಹಂ - ಅವಾಂತರಕಲ್ಪವನ್ನೂ, ಪುರಸ್ತಾತ್-ಮುಂದಣ ಸ್ಕಂಧದಲ್ಲಿ. ಯಥಾ- ಹೇಗೆ, ವ್ಯಾಖ್ಯಾಸ್ಯೇ-ವಿವರಿಸುವೆನೋ, ಅವುಗಳಲ್ಲಿ, ಅಥೋ-ಸಂಪೂರ್ಣವಾಗಿ, ಪಾದ್ಮಂ - ಪಾದ್ಮವೆಂಬ, ಕಲ್ಪಂ-ಕಲ್ಪಸ್ವರೂಪವನ್ನು, ಶೃಣು-ಕೇಳು ॥೪೭॥ ಶೌನಕನು ಕೇಳುತ್ತಾನೆ, ಸೂತ-ಎಲೈಸೂತನೆ ! ಭಾಗವತೋತ್ತಮಃ-ಭಕ್ತಾಗ್ರಣಿಯಾದ, ಕ್ಷತ್ತಾ-ವಿದುರನು, ಸುದುಸ್ತ್ಯಜಾನ್ - ಬಿಡಲಶಕ್ಯರೆನಿಸಿದ, ಬಂಧೂನ್-ಬಂಧುಗಳನ್ನು, ತ್ಯಕ್ತ್ವಾ-ತೊರೆದು, ಭುವಃ-ಭೂಮಿಯಲ್ಲಿರುವ, ತೀರ್ಥಾನಿ-ತೀರ್ಥಗಳನ್ನು, ಚಚಾರ-ಸಂಚರಿಸಿದನು, ಇತಿ-ಎಂದು, ನಃ-ನಮ್ಮನ್ನು ಕುರಿತು, ಭವಾನ್-ನೀನು, ಯದಾಹ - ಯಾವುದನ್ನು ಹೇಳಿದೆಯೋ ? ॥ ೪೮ ॥ ಕೌಷಾರವೇಃ-ಮೈತ್ರೇಯನಿಗೂ, ತಸ್ಯ-ಅವನಿಗೂ, ಕುತ್ರ-ಎಲ್ಲಿ, ಅಧ್ಯಾತ್ಮಸಂಶ್ರಿತಃ-ಆತ್ಮಜ್ಞಾನ ವಿಷಯಕವಾದ, ಸಂವಾದಃ-ಪ್ರಸಂಗವು, ನಡೆಯಿತೊ, ಪೃಷ್ಟಃ-ಬೆಸಗೊಳಲ್ಪಟ್ಟ, ಸಭಗವಾನ್-ಆ ಮೈತ್ರೇಯನು, ತಸ್ಮೈ-ಆವಿದುರನಿಗೆ, ಯತ್ತತ್ವಂ - ಯಾವತತ್ವವನ್ನು

ಅದನ್ನು ಅನುವಾದ ಮಾಡುತ್ತದೆ ॥೪೫॥ ಅಯ್ಯಾ ರಾಜನೆ ! ಯಾವ ಕಲ್ಪದಲ್ಲಿ ಪ್ರಕೃತಿ ಜನ್ಯಗಳಾದಮಹದಾದಿಗಳ ಸೃಷ್ಟಿಯುಂಟಾಗುವುದೋ, ಅಂತಹ, ಮಹಾಕಲ್ಪಸ್ವರೂಪ, ವನ್ನೂ, ಸ್ಥಾವರ ಜಂಗಮಾದಿ ಸೃಷ್ಟಿಯುಳ್ಳ ಅವಾಂತರ ಕಲ್ಪವನ್ನೂ ನಿನಗೆ ತಿಳುಹಿದೆನು. ಇದಕ್ಕೇ ಬ್ರಹ್ಮ ಕಲ್ಪವೆಂದು ಹೆಸರು ॥ ೪೬ ॥

ಮುಂದೆ ವಿವರಿಸುವ ಕಾಲಪ್ರಮಾಣ, ಕಲ್ಪಲಕ್ಷಣ, ಅವಾಂತರ ಕಲ್ಪಸ್ವರೂಪ, ಮೊದಲಾದವುಗಳನ್ನು ವಿಶದವಾಗಿ ವಿವರಿಸುತ್ತೇನೆ. ಅವುಗಳಲ್ಲಿ ಪಾದ್ಮವೆಂಬ ಕಲ್ಪ ಸ್ವರೂಪವನ್ನು ಚೆನ್ನಾಗಿ ಕೇಳು ಎಂದು ಹೇಳಿದನು ॥೪೭॥ ಅನಂತರದಲ್ಲಿ ಶೌನಕ ಮಹಾ ಮುನಿಯು ಸೂತಪೌರಾಣಿಕನನ್ನು ಕುರಿತು:—ಅಯ್ಯಾ ಸೂತನೆ! ಮಹಾ ಭಕ್ತಾಗ್ರೇಸರನಾದ ವಿದುರನು, ಬಿಡಲಾಗದ ಬಂಧುಗಳನ್ನೂ ಬಿಟ್ಟು, ತೀರ್ಥಯಾತ್ರೆಯನ್ನು ಮಾಡುತ್ತಿದ್ದನೆಂದು ಮೊದಲು ನನಗೆ ಹೇಳಿದೆಯಷ್ಟೆ ॥೪೮॥ ಆವಿದುರನಿಗೂ ಕುಶಾರವಕುಲದಲ್ಲಿ ಜನಿಸಿದಮಹಾತ್ಮನಾದ ಮೈತ್ರೇಯನಿಗೂ, ಅಧ್ಯಾತ್ಮವಿಷಯಕವಾದ ಪ್ರಸಂಗ

ಜಾರ್ ॥ ೪೮ ॥ ಕುತ್ರ ಕೌಷಾರವೇ ಸ್ತಸ್ಯ ಸಂವಾದೋಽಧ್ಯಾತ್ಮ ಸಂಶ್ರಿತಃ । ಯದ್ವಾ ಸ ಭಗವಾಂ ಸ್ತಸ್ಮೈ ಪೃಷ್ಟ ಸ್ತತ್ವ ಮುವಾಚಹ ॥ ಬ್ರೂಹಿ ನ ಸ್ತದಿದಂ ಸೌಮ್ಯ ! ವಿದುರಸ್ಯ ವಿಚೇಷ್ಟಿತಂ । ಬಂಧು ತ್ಯಾಗ ನಿಮಿತ್ತಂಚ ಯಥೈವಾ ಗತವಾರ್ ಪುನಃ ॥ ೫೦ ॥ ಶ್ರೀಸೂತಃ ॥ ರಾಜ್ಞಾ

ಉವಾಚ-ಹೇಳಿದನೋ ಅದನ್ನೂ॥೪೯॥ಸೌಮ್ಯ-ಎಲೈಸೂತನೆ!ವಿದುರಸ್ಯ-ವಿದುರನ, ತದಿದಂ-ಆಈ,ವಿಚೇಷ್ಟಿತಂ-ನಡವಳಿಯನ್ನು, ಬಂಧು...ಕ್ತಂಚ, ಬಂಧು - ಬಂಧುಗಳನ್ನು, ತ್ಯಾಗ - ತೊರೆಯುವುದಕ್ಕೆ ನಿಮಿತ್ತಂಚ-ಕಾರಣವನ್ನೂ, ಪುನಃ-ಮರಳಿ, ಯಥೈವ - ಹೇಗೆ, ಆಗತವಾರ್ - ಬಂದನೋ ಅದನ್ನೂ, ನಃ-ನಮಗೆ, ಬ್ರೂಹಿ-ಹೇಳು ॥ ೫೦ ॥

ಸೂತನು ಹೇಳುತ್ತಾನೆ, ರಾಜ್ಞಾ - ರಾಜನಾದ, ಪರೀಕ್ಷಿತಾ - ಪರೀಕ್ಷಿತ್ತಿನಿಂದ, ಪೃಷ್ಟಃ - ಬೆಸಗೊಳಲ್ಪಟ್ಟ, ಮಹಾಮುನಿಃ - ಶುಕಮುನಿಯು, ಯತ್ - ಯಾವುದನ್ನು, ಅವೋಚತ್-ಹೇಳಿದನೋ,

---

ವೆಲ್ಲಿ ನಡೆಯಿತು ? ವಿದುರನಿಂದ ಪ್ರಶ್ನೆಮಾಡಲ್ಪಟ್ಟ ಭಗವಂತನಾದ ಮೈತ್ರೇಯನು ಆತನಿಗೆಯಾವತತ್ವವನ್ನುಪದೇಶಿಸಿದನು ॥ ೪೯ ॥

ಎಲೈ ಸೌಮ್ಯನಾದ ಸೂತನೆ ! ಮಹಾಮಹಿಮನಾದ ವಿದುರನಚರಿತ್ರೆಯನ್ನೂ, ಆತನು ಬಂಧುಗಳನ್ನುಳಿದು ತೀರ್ಥಯಾತ್ರೆಗಾಗಿ ತೆರಳುವುದಕ್ಕೆ ಕಾರಣವನ್ನೂ, ಮರಳಿ ಆತನು ಹೇಗೆ ಹಿಂದಿರುಗಿ ಬಂದನೆಂಬುದನ್ನೂ ಸಹ ನಮಗೆ ತಿಳುಹಿಸು ಎಂದು ಬೆಸಗೊಂಡನು ॥೫೧॥ ಅಯ್ಯಾ ! ಧರ್ಮ ಶರಣ್ಯರಾದ ಶ್ರೋತೃ ವರೇಣ್ಯರಿರಾ ! ನೀವು ನನ್ನನ್ನು ಕುರಿತು ಯಾವುದನ್ನು ಬೆಸಗೊಂಡಿರೋ, ಇದೇ ಅರ್ಥವನ್ನೇ ಪೂರ್ವದಲ್ಲಿ ಮಹಾಭಾಗವತನಾದ ಪರೀಕ್ಷಿದ್ರಾಜನು ಶುಕಮುನಿಯನ್ನು ಬೆಸಗೊಂಡನು. ಆಗ ಶುಕಯೋಗೀಂದ್ರನು ಪರೀಕ್ಷಿದ್ರಾಜನ ಪ್ರಶ್ನೆಗಳನ್ನು ಕೇಳಿ ಪೂರ್ವಕಾಲದಲ್ಲಿ ವಿದುರನಿಗೂ, ಮೈತ್ರೇಯನಿಗೂ ನಡೆದ ಸಂವಾದವನ್ನಧಿಕರಿಸಿ ಆ ಪರೀಕ್ಷಿತನ ಪ್ರಶ್ನಾನುಸಾರವಾಗಿ ಯಾವ ಸಕಲ ಪುರಾಣಾರ್ಥವನ್ನು ವಿವರಿಸಿದನೋ, ಅದೇ ಅರ್ಥವನ್ನೇ ನಾನೂ ನಿಮಗೆ ನಿರೂಪಿಸುವೆನು. ಏಕಾಗ್ರ ಮನಸ್ಕರಾಗಿ ಲಾಲಿಸಿರಿ. ಎಂದು ಸೂತ ಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಬ್ರಾಹ್ಮಣೋತ್ತಮರಿಗೆ ಹೇಳತೊಡಗಿದ ನೆಂಬಲ್ಲಿಗೆ ಸಕಲ ಸುರಾಸುರ ಮಸ್ತಕಸ್ಯಸ್ತ ಮಕುಟಮಣಿ ಕಿರಣ ಮಂಜರೀ ಪುಂಜ ಪಿಂಜರೀಭೂತ ಪಾದಾಂಬುಜ ಶ್ರೀಮಹಾ ತ್ರಿಪುರಸುಂದರೀ ವರಪ್ರಸಾದ ಸಮಾಸಾದಿತ ಸಕಲ ವಿದ್ಯಾವೈಶದ್ಯ ವಿದ್ಯೋತಮಾನ ನವಕಾಳಿದಾಸಾದಿ ವಿದ್ವನ್ಮಣಿವ್ರಾತ ವಿಖ್ಯಾತವೆಲ್ಲಾಲ ಕುಲ

ಪರೀಕ್ಷಿತಾ ಪೃಷ್ಟೋ ಯದವೋಚನ್ಮಹಾಮುನಿಃ। ತದ್ವೋಽಭಿಧಾಸ್ಯೇ
ಶೃಣುತ ರಾಜ್ಞಃ ಪ್ರಶ್ನಾನುಸಾರತಃ ॥೫೧॥

ಇತಿ ಶ್ರೀ ಭಾಗವತ ಮಹಾ ಪುರಾಣೇ ಪಾರಮಹಂಸ್ಯಾಂ ಸಂಹಿತಾ
ಯಾಂ ವೈಯ್ಯಾಸಕ್ಯಾಂ ದ್ವಿತೀಯಸ್ಕಂಧೇ ದಶಮೋಽಧ್ಯಾಯಃ

:ಸಮಾಪ್ತಶ್ಚಾಯಂ ದ್ವಿತೀಯ ಸ್ಕಂಧಃ:

ರಾಜ್ಞಃ-ಪರೀಕ್ಷಿತನ, ಪ್ರಶ್ನಾನುಸಾರತಃ-ಪ್ರಶ್ನಾನುಸಾರವಾಗಿ, ತತ್ - ಅದನ್ನು, ವಃ-ನಿಮಗೆ, ಅಭಿಧಾಸ್ಯೇ-ಹೇಳುವೆನು, ಶೃಣುತ-ಕೇಳಿರಿ ॥ ೫೧ ॥

ಶ್ಲೋ॥ ಈಕ್ಷಂತಾಂ ವಿಚ್ಛಯಾ ಸಂತಃ ಕ್ಷಮಂತಾಂ ಮಮಸಾಹಸಂ ।
ಮಯಾಹಿ ಸ್ವೀಯ ! ಬೋಧಾಯ ಕೃತಮೇತನ್ನಸರ್ವತಃ ॥

ದಶಮಾಧ್ಯಾಯಂ ಸಮಾಪ್ತಂ

ಕಲಶ ಜಲಧಿ ಸುಧಾಕರಾಯಮಾಣ ಶ್ರೀಸಾಂಬಸೂರಿ ತನೂಜಾತ ರಾಮಶೇಷಕವಿ ವಿರಚಿತ ಶ್ರೀಭಾಗವತಚಕೋರ ಚಂದ್ರಿಕೆಯೊಳ್

—: ಹತ್ತನೆಯ ಅಧ್ಯಾಯಂ ಮುಗಿದುದು. :—

ಕಂ॥ ಪಿರಿದಪ ಭಾಗವತಾಮರ । ತರುವಿನೊಳೆಸೆದಿರ್ಪ ಭಕ್ತಿಫಲವಿಳುಹತೆಜೇ ॥
ಳ್ಪರಿಗೀಯುರ್ ಯತ್ನಿಸಿನಾಂ ! ಗುರುಕೃಪೆಯಿಂ ಸ್ಕಂಧವೆರಡ ನೇರಿದೆನೊಲವಿಂ ॥

ದ್ವಿತೀಯಸ್ಕಂಧಂ ಸಮಾಪ್ತಂ.

ಶ್ರೀ ಕೃಷ್ಣಾರ್ಪಣಮಸ್ತು.